

# ಪ್ರೀತಿ, ಬದುಕು ಮತ್ತು ಘನತೆ

**ನವತೇಜ್ ಸಿಂಘ್ ಜೋಹರ್ ಮತ್ತು ಇತರರು v. ಭಾರತ ಸರ್ಕಾರ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಕನ್ನಡಾನುವಾದ**

ಒಡನಾಡಿ
ಘನತೆ–ಧ್ವನಿ–ಲೈಂಗಿಕತೆ



## ಪ್ರಕಟನೆಯ ಇತಿಹಾಸ


| | |
|---|---|
| ಆವೃತ್ತಿ: | ಡಿಸೆಂಬರ್ 2018 |
| ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದ: | ಕಾರ್ತಿಕ್ ಆರ್. |
| ಪ್ರಕಾಶಕರು: | ಒಂದೆಡೆ, ಬೆಂಗಳೂರು |
| ಮುಖಪುಟ: | ಸುಮನ್ ಎಂ. |


## ಅನುವಾದಕರ ಕುರಿತು

ಕಾರ್ತಿಕ್ ಆರ್.

ಚಿಕ್ಕಮಗಳೂರಿನ ಮೂಡಿಗೆರೆ ಮೂಲದ ನಮ್ಮ ಸಮುದಾಯದವರೇ ಆದ ಕಾರ್ತಿಕ್ ಪ್ರಸ್ತುತ ಬೆಂಗಳೂರು ವಾಸಿ. ಶಿವಮೊಗ್ಗದ ಕೃಷಿ ಮಹಾವಿದ್ಯಾಲಯ ಮತ್ತು ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಕೆಲ ಕಾಲ ಕರ್ಣಾಟಕ ಬ್ಯಾಂಕಿನಲ್ಲಿ ಉದ್ಯೋಗದಲ್ಲಿದ್ದ ಇವರು, ಪ್ರಸ್ತುತ  ಖಾಸಗೀ ಸಂಸ್ಥೆಯೊಂದರಲ್ಲಿ ಕಂಟೆಂಟ್ ರೈಟರ್ ಮತ್ತು ಕಾಪಿ ಎಡಿಟರ್ ಆಗಿದ್ದಾರೆ. ಓದು ಇವರ ಹವ್ಯಾಸ, ಕನ್ನಡ ಮತ್ತು ಇಂಗ್ಲೀಶ್ ಸಾಹಿತ್ಯದಲ್ಲಿ ಆಸಕ್ತಿ.

## 'ಒಂದೆಡೆ' ಕುರಿತು

ಒಂದೆಡೆ ಬೆಂಗಳೂರಿನಲ್ಲಿ ಸ್ಥಾಪನೆಯಾಗಿದ್ದು 2014ರ ನವೆಂಬರ್ 20ರಂದು. ದೇಶದಲ್ಲಿ ಮಕ್ಕಳ ಹಕ್ಕುಗಳು, ಮಹಿಳೆಯರ ಹಕ್ಕುಗಳು ಮತ್ತು ಲೈಂಗಿಕ ಅಲ್ಪ ಸಂಖ್ಯಾತರ ಹಕ್ಕುಗಳ ಆಂದೋಲನಗಳು ತಮ್ಮ ತಮ್ಮ ಹಾದಿಯಲ್ಲಿ ನಡೆಯುತ್ತಿದ್ದವು; ಈ ಮೂರನ್ನೂ ಒಂದೇ ಹೆದ್ದಾರಿಗೆ ತರುವ, ಮೂರನ್ನೂ ಒಂದೆಡೆ ತರುವ ಅಗತ್ಯದ ಅರಿವು ನಮಗಾದದ್ದು ಒಂದು ವಿಶಿಷ್ಟ ಗುಂಪು ಚರ್ಚೆಯ ಸಂದರ್ಭದಲ್ಲಿ; ಈ ಪರಿಕಲ್ಪನೆ ಸಾಕಾರಗೊಂಡಿದ್ದು 2015ರಲ್ಲಿ.

ಈಗಾಗಲೇ ಇರುವ ಈ ಆಂದೋಲನಗಳನ್ನು ಗುರುತಿಸುವ ಮತ್ತು ಮಾನ್ಯ ಮಾಡುವ ಮೂಲಕ, ಒಂದೆಡೆ, ಈ ಬೇರೆಬೇರೆಯಾದ ಆದರೂ ಪರಸ್ಪರ ಸಂಬಂಧವುಳ್ಳ ಸಮೂಹಗಳನ್ನು, ಸಮುದಾಯದಲ್ಲಿ ಫಲಕಾರಿಯಾದ ಸಂವಾದವನ್ನು ಉತ್ತೇಜಿಸಲು, ಸಂಶೋಧನೆಯನ್ನು ನಡೆಸಲು ಮತ್ತು ಘನಗೆ–ಧ್ವನಿ–ಲೈಂಗಿಕತೆ ಕುರಿತು ಕ್ರಿಯೆಯನ್ನು ಪ್ರಚೋದಿಸಲು  ವಿವಿಧ ಮಾಧ್ಯಮ ವೇದಿಕೆಗಳಿಗೆ ಪರಿಚಯಿಸುವ ಪ್ರಯತ್ನವನ್ನು ಮಾಡುತ್ತದೆ.

ವ್ಯಕ್ತಿಗಳ ನಡುವೆ ಯಾವುದೇ ತಾರತಮ್ಯ ಬಗೆಯದೇ, ಲಿಂಗ–ನ್ಯಾಯ ರೀತಿಯಲ್ಲಿ ಎಲ್ಲರಿಗೂ ಹಕ್ಕುಗಳನ್ನು ಸಮಾನವಾಗಿ ನೀಡುವ ಸಮಾಜವನ್ನು ನಾವು ಪರಿಕಲ್ಪಿಸಿಕೊಳ್ಳುತ್ತೇವೆ. ಕಾರ್ಯನೀತಿ ಮತ್ತು ಆಚರಣೆಯಲ್ಲಿ ಸಾಕ್ಷ್ಯಾಧಾರಿತ ಹಕ್ಕೊತ್ತಾಯವನ್ನು ಹೆಚ್ಚಿಸುವ ಸಲುವಾಗಿ ಮತ್ತು ಜನ ಮತ್ತು ಆಂದೋಲನಗಳು ಒಂದೆಡೆ ಸೇರುವ ಸಲುವಾಗಿ ಒಂದು ವೇದಿಕೆಯನ್ನು ಕಲ್ಪಿಸುವುದಕ್ಕೆ ಬೇರೆ ಬೇರೆ ಸಾಮಾಜಿಕ ಚಳುವಳಿಗಳ ನಡುವೆ ಸಂಪರ್ಕಗಳನ್ನು ಸ್ಥಾಪಿಸುವ ಎಡೆಗೆ ನಾವು ಪರಿಶ್ರಮ ಪಡುತ್ತಿದ್ದೇವೆ.

ಒಂದೆಡೆ, ಕಳೆದ 5 ವರ್ಷಗಳಿಂದ ಒಂದೆಡೆ ಭಾರತೀಯ ದಂಡ ಸಂಹಿತೆಯ ಪರಿಚ್ಛೇದ 377, ಪೊಲೀಸ್ ಕಾಯ್ದೆಯ 36 ಎ, ಕರ್ನಾಟಕ ರಾಜ್ಯ ಟ್ರಾನ್ಸ್‌ಜೆಂಡರ್‌ಗಳ ಕಾರ್ಯನೀತಿ, ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ (ಹಕ್ಕುಗಳ ರಕ್ಷಣೆ) ಮಸೂದೆ, 2016 ಮತ್ತು ಲೈಂಗಿಕ ಅಲ್ಪಸಂಖ್ಯಾತರು ಮತ್ತು ಲಿಂಗತ್ವ ಬದಲಾಯಿಸಿದ ವ್ಯಕ್ತಿಗಳ ವಿರುದ್ಧ ಎಗ್ಗಿಲ್ಲದೆ ನಡೆಯುತ್ತಿರುವ ದೌರ್ಜನ್ಯದಲ್ಲಿ ಹೆಚ್ಚಳ ಇತ್ಯಾದಿ ಲೈಂಗಿಕ ಅಲ್ಪಸಂಖ್ಯಾತರ ಸಮಸ್ಯೆಗಳ ಮೇಲೆ ಪ್ರಭಾವ ಬೀರುವಂಥ ಹಕ್ಕೊತ್ತಾಯದ ಮುಂಚೂಣಿಯಲ್ಲಿದೆ.

ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿ

ಕ್ರಿಮಿನಲ್/ಸಿವಿಲ್ ಮೂಲ ಅಧಿಕಾರ ವ್ಯಾಪ್ತಿ

**ರಿಟ್ ಅರ್ಜಿ (ಕ್ರಿಮಿನಲ್) ಸಂಖ್ಯೆ .76, 2016**

ನವತೇಜ್ ಸಿಂಘ್ ಜೋಹರ್ ಮತ್ತು ಇತರರು ...ಅರ್ಜಿದಾರರು

ಎದುರು

ಭಾರತ ಸರ್ಕಾರ

ಕಾರ್ಯದರ್ಶಿ,

ಕಾನೂನು ಮತ್ತು ನ್ಯಾಯ ಸಚಿವಾಲಯದ ಮುಖೇನ .... ಪ್ರತಿವಾದಿಗಳು

**ಜೊತೆಗೆ**

**ರಿಟ್ ಅರ್ಜಿ (ಕ್ರಿಮಿನಲ್) ಸಂಖ್ಯೆ .572, 2016**

**ಜೊತೆಗೆ**

**ರಿಟ್ ಅರ್ಜಿ (ಕ್ರಿಮಿನಲ್) ಸಂಖ್ಯೆ .88, 2018**

**ಜೊತೆಗೆ**

**ರಿಟ್ ಅರ್ಜಿ (ಕ್ರಿಮಿನಲ್) ಸಂಖ್ಯೆ .100, 2018**

**ಜೊತೆಗೆ**

**ರಿಟ್ ಅರ್ಜಿ (ಕ್ರಿಮಿನಲ್) ಸಂಖ್ಯೆ .101, 2018**

**ಜೊತೆಗೆ**

**ರಿಟ್ ಅರ್ಜಿ (ಕ್ರಿಮಿನಲ್) ಸಂಖ್ಯೆ .121, 2018**

# ತೀರ್ಪು

**ದೀಪಕ್ ಮಿಶ್ರಾ, ಭಾರತದ ಮುಖ್ಯ ನ್ಯಾಯಮೂರ್ತಿಗಳು**

**(ತಮ್ಮ ಮತ್ತು ನ್ಯಾ. ಎ.ಎಮ್. ಖಾನ್ವಿಲ್ಕರ್, ಪರವಾಗಿ)**

## A. ಮುನ್ನೋಟ

ಜರ್ಮನಿಯ ಮಹಾನ್ ಚಿಂತಕ ಜೋಹಾನ್ ವೋಲ್ಫ್ಯಾಂಗ್ ಗೋಥೆಯ "ನಾನು ನಾನೇ, ನನ್ನನ್ನು ನಾನಿದ್ದಂತೆಯೇ ಸ್ವೀಕರಿಸಿ" ಎಂಬ ಮಾತು, ಮತ್ತು ಆರ್ಥರ್ ಷೋಪೆನ್ಹಾಯೆರನ "ಯಾರೂ ಕೂಡ 'ತಮ್ಮತನ'ದಿಂದ ತಪ್ಪಿಸಿಕೊಳ್ಳಲಾರರು" ಎಂಬ ಸಾಲುಗಳು ವಿನಾಕಾರಣ ನೀಡಿದ ಹೇಳಿಕೆಗಳಾಗಿರಲಿಲ್ಲ. ಈ ಹಿನ್ನೆಲೆಯಲ್ಲಿ, ಜಾನ್ ಸ್ಟುವರ್ಟ್ ಮಿಲ್ ನ ಕೆಲ ಸಾಲುಗಳು ಉಪಯುಕ್ತವಾದಾವು

> "ಈಗಿನ ಸಮಾಜವು, ವ್ಯಕ್ತಿಗತ ಅನನ್ಯತೆಯನ್ನು ಹತ್ತಿಕ್ಕಿಬಿಟ್ಟಿದೆ ಮತ್ತು ಖಾಸಗೀ ತುಡಿತ ಮತ್ತು ಆದ್ಯತೆಗಳು ಅತಿಯಾಗಿರುವುದಕ್ಕಿಂತ, ಅವುಗಳ ಕೊರತೆಯೇ ಮಾನವ ಪ್ರಕೃತಿಗಿರುವ ಅತಿ ದೊಡ್ಡ ಅಪಾಯ"

ವ್ಯಕ್ತಿಗತ ವಿಶಿಷ್ಟತೆಗಿರುವ ಪ್ರಾಮುಖ್ಯವು, ವ್ಯಕ್ತಿಗಳ ಬದುಕಿನ ಮೂಲ ಸತ್ವವಾಗಿದ್ದು, ಸ್ವಾಭಿವ್ಯಕ್ತಿಗೆ ತಡೆಯೊಡ್ಡುವುದು, ಸಾವನ್ನುಂಟುಮಾಡುವುದಕ್ಕೆ ಸಮ. ವ್ಯಕ್ತಿಯೊಬ್ಬರು ತಮ್ಮನ್ನು ತಾವು ಗೌರವಿಸಿಕೊಳ್ಳಲು, ಅವರಿಗೆ ತಮ್ಮ ಸ್ವಂತಿಕೆ ಮತ್ತು ಅಸ್ಮಿತೆಗಳ ಅರಿವಿರಬೇಕಾದದ್ದು ಬಹುಮುಖ್ಯವಾಗುತ್ತದೆ ಮತ್ತು ಹಾಗಾದಾಗ ಮಾತ್ರ ಅವರು ಧೈರ್ಯವಾಗಿ ಬದುಕಬಲ್ಲರು. ಸದರಿ ವಿಷಯದ ಕೇಂದ್ರ ಕೂಡ ಮೇಲ್ಕಂಡ ತತ್ವವೇ ಆಗಿದ್ದು, ಹಲವು ಕೋನಗಳಿಂದ ಅದನ್ನು ಪರಾಂಬರಿಸಲಾಗಿದೆ.

2. ಷೇಕ್ಸ್ಪಿಯರನು ತನ್ನ ನಾಟಕವೊಂದರ ಪಾತ್ರದ ಮೂಲಕ, "ಹೆಸರಿನಲ್ಲೇನಿದೆ? ಗುಲಾಬಿಹೂವನ್ನು ಬೇರೊಂದು ಹೆಸರಿನಲ್ಲಿ ಕರೆದರೂ ಅದರ ಘಮವೂ ಅಷ್ಟೇ ಸಿಹಿಯಾಗಿರುತ್ತದೆ" ಎಂದು ಹೇಳುತ್ತಾನೆ. ಈ ಸಾಲು, ವಸ್ತು ಅಥವಾ ವ್ಯಕ್ತಿಯ ಅಂತಃಸತ್ವ ಮತ್ತು ಮೂಲಭೂತ ಗುಣಲಕ್ಷಣಗಳು ಮುಖ್ಯವಾಗುತ್ತವೆಯೇ ಹೊರತು ಅವರನ್ನು ಯಾವ

ಹೆಸರಿನಿಂದ ಕರೆಯುತ್ತೇವೆ ಎಂಬುದಲ್ಲ ಎಂಬುದನ್ನು ಸಾರುತ್ತದೆ. ಈ ವಿಷಯದ ತುಸು ಆಳಕ್ಕಿಳಿದು ನೋಡುವುದಾದರೇ, ಹೆಸರು ಎಂಬುದು ವ್ಯಕ್ತಿಯನ್ನು ಸರಾಗವಾಗಿ ಗುರುತಿಸಲು ಅನುವಾಗಬಹುದಾದರೂ, ಅವರ ಅಸ್ತಿತ್ವದ ಮೂಲ, ಅವರೊಳಗಿನ ಸತ್ವವೇ ಆಗಿರುತ್ತದೆ. ಅಸ್ತಿತ್ವವನ್ನು ಹೊರತುಪಡಿಸಿದರೇ, ಹೆಸರೆಂಬುದು ಬರಿಯ ಗುರುತುಹಿಡಿಯುವ ವಿಷಯವಯಾಗಿಯೇ ಉಳಿಯುತ್ತದೆ. ಹಾಗಾಗಿ, ಅಸ್ತಿತ್ವವೆಂಬುದು ಒಬ್ಬರ ಬದುಕಿನ ತಳಪಾಯ. ವ್ಯಕ್ತಿಯ ಅಸ್ತಿತ್ವವು ಅವರಿಗೆ ಘನತೆ ಮತ್ತು ಬದುಕುವ ಸ್ವಾತ್ರಂತ್ರ್ಯವನ್ನು ಕೊಡಮಾಡುವುದರಿಂದ, ತಮ್ಮ ಅಸ್ತಿತ್ವವನ್ನು ತಮ್ಮ ಬದುಕಿನ ಭಾಗವೇ ಎಂಬಂತೆ ತೋರ್ಪಡಿಸಿಕೊಳ್ಳುವ ಹಂಬಲ, ಸಹಜವಾಗಿಯೇ ಎಲ್ಲರಲ್ಲೂ ಇರುತ್ತದೆ. ಈ ಬಗ್ಗೆ ವಿಚಾರ ಮಾಡಲಾಗಿ, ಇಂತಹ ಹಂಬಲವನ್ನು ಸಂವಿಧಾನದ ನೆಲೆಗಟ್ಟಿನಲ್ಲಿ ಗುರುತಿಸಿ ಈಡೇರಿಸುವ ಸಾಧ್ಯತೆ ಇರುವುದರಿಂದ, ಸಾಂವಿಧಾನಿಕವಾಗಿ ಗುರುತಿಸಲ್ಪಟ್ಟಿರುವ ವೈಯಕ್ತಿಕ ಅಸ್ಮಿತೆಗೆ ಮಹತ್ವ ನೀಡಲಾಗುತ್ತದೆ. ತಮ್ಮತನವನ್ನು ಉಳಿಸಿಕೊಳ್ಳುವುದು ವ್ಯಕ್ತಿಗಳ ಬದುಕಿನ ಮೂಲ ಎಳೆಯಾಗಿದ್ದು, ಅದು ಅವರಿಗೆ ತಮ್ಮ ಬದುಕನ್ನು ತಾವೇ ರೂಪಿಸಿಕೊಳ್ಳುವ ಮತ್ತು ಸ್ವಾತಂತ್ರ್ಯದ ನೆಲೆಗಳನ್ನು ನಿತ್ಯವೂ ಹಿಗ್ಗಿಸಿಕೊಳ್ಳುವ ಅವಕಾಶ ನೀಡುತ್ತದೆ. ಈ ಹಿನ್ನೆಲೆಯಲ್ಲಿ, ಅಸ್ಮಿತೆಯು ದೈವಿಕತೆಗೆ ಸಮನಾಗಿರುವುದಾಗಿದೆ.

3. ವೈಯಕ್ತಿಕ ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ, ಎಲ್ಲ ಬಗೆಯ ಶೋಷಣೆಯನ್ನು ಮೀರಿದ ಸಮಾನತೆ, ಅಸ್ಮಿತೆಯ ಗೌರವಯುತ ಗುರುತಿಸುವಿಕೆ ಮತ್ತು ಮನುಷ್ಯರ ಖಾಸಗೀತನ, ಎಂಬ ಈ ನಾಲ್ಕು ತತ್ವಗಳೇ ನಮ್ಮ ಘನತೆವೆತ್ತ ಸಂವಿಧಾನದ ಚೌಕಟ್ಟುಗಳಾಗಿದ್ದು, ನಮ್ಮ ಮೂಲಭೂತ ಹಕ್ಕುಗಳ ನೆಲೆಗಟ್ಟು ಕೂಡ ಇವುಗಳೇ ಆಗಿವೆ. ಆದಾಗ್ಯೂ ಹಕ್ಕುಗಳು ಸಮಾಜದ ಕೆಲ ವರ್ಗದ ಜನಗಳಿಗೆ ದಕ್ಕದೇ ಹೋಗಿದ್ದು, ಅವರುಗಳು ಇಂದಿಗೂ ಕೂಡ, ತಾತ್ವಿಕವಾದ ಸಮಾಜಿಕ ನಿಯಮಗಳು, ಪೂರ್ವಾಗ್ರಹ ಪೀಡಿತ ಕಲ್ಪನೆಗಳು, ಕಟುವಾದ ಪರಿಕಲ್ಪನೆಗಳು, ಪಿತೃಪ್ರಧಾನ ಮಾನಸಿಕತೆ ಮತ್ತು ಮೂಲಭೂತವಾದೀ ಗ್ರಹಿಕೆಗಳು ಸರಪಳಿಗಳಲ್ಲಿಯೇ ಜೀವನ ಸಾಗಿಸುತ್ತಿದ್ದಾರೆ. ನಮ್ಮ ನಡುವಿನ ಹಲವರು, ಸಾಮಾಜಿಕ ಮುಖ್ಯವಾಹಿನಿಯಿಂದ ಹೊರಗುಳಿದಿದ್ದು, ಸಮಾಜಿಕ ಬಹಿಷ್ಕಾರ, ಅಸ್ಮಿತೆಯ ಮುಚ್ಚಿಡುವಿಕೆ ಮತ್ತು ಪ್ರತ್ಯೇಕತೆಯೇ ಮೊದಲಾದ ಸಮಸ್ಯೆಗಳನ್ನು ಎದುರಿಸುತ್ತಿರುವುದು ಇಂದಿನ ಕಟುವಾಸ್ತವ. ಇಂತಹ ಪ್ರತಿಯೊಬ್ಬ ವ್ಯಕ್ತಿಯನ್ನು ಸಾಮಾಜಿಕ ಅನಿಷ್ಟಗಳ ಸಂಕೋಲೆಯಿಂದ ಪಾರುಮಾಡಿದಾಗಲಷ್ಟೇ, ನಮ್ಮ ಸಮಾಜ ನಿಜವಾದ ಅರ್ಥದಲ್ಲಿ ಸ್ವತಂತ್ರವೆನಿಸಿಕೊಳ್ಳುತ್ತದೆ. ನಿಸರ್ಗ ನಿರ್ಮಿತವಾದ ವಿವಿಧತೆ ಮತ್ತು ಬಹುತ್ವವನ್ನು ಸ್ವೀಕರಿಸುವ ಸುದೀರ್ಘ

ಪಯಣದ ಮೊದಲನೇ ಹೆಜ್ಜೆಯನ್ನಿರಿಸುವ ಕಾಲ ಬಂದಿದ್ದು, ಪೂರ್ವಾಗ್ರಹ ಮತ್ತು ಅನ್ಯಾಯವೆಂಬ ಶತ್ರುಗಳನ್ನು, ಇಲ್ಲಿವರೆಗೆ ನಡೆದ ತಪ್ಪುಗಳನ್ನು ಸರಿಪಡಿಸುವ ಮೂಲಕ ಸೋಲಿಸಬೇಕಿದೆ, ಮತ್ತು ಹಾಗಾದಾಗ ಮಾತ್ರ ಸಾಮಾಜಿಕ ಮತ್ತು ಆರ್ಥಿಕ ಹಕ್ಕುಗಳು ಪ್ರಗತಿಪರವಾಗಿರಲು ಮತ್ತು ಎಲ್ಲರನ್ನು ಒಳಗೊಳ್ಳಲು ಸಾಧ್ಯ. ಈ ನಿಟ್ಟಿನಲ್ಲಿ ಸಾಮಾಜಿಕ ಅಸಮಾನತೆಯನ್ನು ಎದುರಿಸುತ್ತಿರುವ ವರ್ಗಗಳಿಗೆ ಸಮನಾದ ಹಕ್ಕು ಮತ್ತು ಅವಕಾಶಗಳನ್ನು ಖಾತ್ರಿಪಡಿಸುವುದರರ ಬಗ್ಗೆ ಮಾತನಾಡಲು ಮೊದಲುಮಾಡಬೇಕಿದೆ. ಸಮಾಜದ ಎಲ್ಲಾ ಸ್ಥರದ ನಾಗರಿಕರನ್ನು ಸಮಾನವಾಗಿ ಬಲಪಡಿಸಿ, ಎಲ್ಲ ಬಗೆಯ ಶೋಷಣೆ ಮತ್ತು ಪರಕೀಯತೆಗಳನ್ನೂ ಮೀರಿನಿಂತು, ಎಲ್ಲರ ಒಳಗೊಳ್ಳುವಿಕೆಗೆ ನಾಂದಿ ಹಾಡಬೇಕಿದ್ದಲ್ಲಿ, ನಮ್ಮಲ್ಲಿ ಆಳವಾಗಿ ಬೇರೂರಿರುವ ಪೂರ್ವಾಗ್ರಹ ಪೀಡಿತ ಮತ್ತು ರೂಢಿಗತ ಗ್ರಹಿಕೆಗಳಿಗೆ ವಿದಾಯ ಹೇಳುವ ಅಗತ್ಯವಿದೆ.

4. ವ್ಯಕ್ತಿಯೊಬ್ಬರ ನೈಸರ್ಗಿಕ ಅಸ್ಮಿತೆಯನ್ನು ಅವರ ಅಸ್ತಿತ್ವದ ಅತ್ಯಗತ್ಯ ಭಾಗವೆಂದೇ ಪರಿಗಣಿಸಬೇಕು, ಏಕೆಂದರೆ, ನಿಸರ್ಗ ಕೊಡಮಾಡಿರುವುದೆಲ್ಲವೂ, ನೈಸರ್ಗಿಕವಾದುದೇ ಅಗ್ಗಿರುತ್ತದೆ ಮತ್ತು ಅದನ್ನೇ ವ್ಯಕ್ತಿಯೊಬ್ಬರ ಪ್ರಕೃತಿ ಎಂದು ಕರೆಯಲಾಗುತ್ತದೆ. ಹಾಗಾಗಿ, ವ್ಯಕ್ತಿಯ ವ್ಯಕ್ತಿತ್ವದ ಭಾಗವೊಂದನ್ನು ಗೌರವಿಸಬೇಕೇ ಹೊರತು, ಅದನ್ನು ಅವಮಾನ ಪಡಿಸುವುದಾಗಲೀ, ಕೀಳಾಗಿಕಾಣುವುದನ್ನಾಗಲಿ ಮಾಡಕೂಡದು. ಸದರಿ ಮೂಲ ಪ್ರಕೃತಿ ಮತ್ತು ಅದಕ್ಕೆ ಸಂಬಂಧಿಸಿದ ಸಂವೇದನೆಗಳನ್ನು ಕೂಡ ಒಪ್ಪತಕ್ಕದ್ದು. ಈ ಬಗೆಯ ಸಂವೇದನೆಗಳನ್ನು ಸಾಮಾಜಿಕ ಕಟ್ಟಳೆಯ ನೆಪದಲ್ಲಿ ಒಪ್ಪದಿರುವುದು ಮತ್ತು ಅಡಗೂಲಜ್ಜಿ ಕಾಲದ ಕಲ್ಪನೆ ಮತ್ತು ಸಿದ್ಧಾಂತಗಳಿಗೆ ಕಟ್ಟುಬಿದ್ದ ಕಾನೂನಿಡಿಯಲ್ಲಿ ಶಿಕ್ಷಿಸುವುದು ವ್ಯಕ್ತಿಗಳ ಅಸ್ತಿತ್ವದ ತಿರುಳನ್ನು ಘಾಸಿಗೊಳಿಸುತ್ತದೆ. ಒಬ್ಬರ ಅಸ್ಮಿತೆಯನ್ನು ಘಾಸಿಗೊಳಿಸುವುದೆಂದರೆ, ಅವರ ಖಾಸಗೀತನದ, ಆಯ್ಕೆಯ, ಮಾತಿನ ಮತ್ತು ಇತರ ಅಭಿವ್ಯಕ್ತಿಗಳ ಸ್ವಾತಂತ್ರಗಳನ್ನೊಳಗೊಳ್ಳುವ ಅವರೊಳಗಿನ ಹಿರಿಮೆಯನ್ನು ಹೊಸಕಿಹಾಕುವುದಕ್ಕೆ ಸಮ. ಇದನ್ನು ಮತ್ತೊಂದು ಬಗೆಯಲ್ಲಿ ನೋಡುವುದಾದರೆ, ತನ್ನ ಆಯ್ಕೆಯ ಹಕ್ಕನ್ನು ಚಲಾಯಿಸುತ್ತಿರುವ ವ್ಯಕ್ತಿಯೊಬ್ಬರು ತಮ್ಮನ್ನು ತಮ್ಮ ಪಾಡಿಗೆ ಬಿಟ್ಟಬಿಡಬೇಕೆಂದು ಬಯಸಬಹುದೇ ಹೊರತು, ಯಾರೆಂದರೆ ಯಾರು ಕೂಡ ಅವರನ್ನು ಅವರ ಆಯ್ಕೆಯ ನೆಪದಲ್ಲಿ ಬಲವಂತವಾಗಿ ಹೊರಗಿಡುವಂತಿಲ್ಲ.

5. ಲಿಂಗ ಪರಿವರ್ತಿತರ ಅಸ್ಮಿತೆಗೆ ಸಂಬಂಧಿಸಿದ, **ನಾಲ್ಸಾ (NALSA) ಪ್ರಕರಣ** ಎಂದೇ ಪ್ರಚಲಿತವಾಗಿರುವ **ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ Vs. ಭಾರತ ಸರ್ಕಾರ**[1] ಪ್ರಕರಣದಲ್ಲಿ ನ್ಯಾಯಾಲಯವು ಅಸ್ಮಿತೆಯ ಶ್ರೇಷತೆಯನ್ನು ನಿಚ್ಚಳವಾಗಿ ತಿಳಿಯಪಡಿಸಿದೆ. ಈ ಸಂದರ್ಭದಲ್ಲಿ ಹಲವು ಬಗೆಯ ತೀರ್ಪುಗಳು ಮತ್ತು ಅಂತಾರಾಷ್ಟ್ರೀಯ ಒಡಂಬಡಿಕೆಗಳ ಸರಣಿಗಳನ್ನು ಪರಾಂಬರಿಸಿದ ರಾಧಾಕೃಷ್ಣನ್, ಜೆ. ರವರು, ಲಿಂಗಾಧಾರಿತ ಅಸ್ಮಿತೆಯು ಬದುಕಿನ ಅತ್ಯಂತ ಮೂಲಭೂತ ಅಂಶಗಳಲ್ಲಿ ಒಂದಾಗಿದ್ದು, ಅದು ವ್ಯಕ್ತಿಯೊಬ್ಬರೊಳಗಿರುವ ಗಂಡು, ಹೆಣ್ಣು, ಲಿಂಗ ಪರಿವರ್ತಿತ ಅಥವಾ ಬದಲೀ-ಲೈಂಗಿಕತೆಯವರು ಎಂಬ ಅರಿವನ್ನು ಸೂಚಿಸುತ್ತದೆ ಎಂದು ಅಭಿಪ್ರಾಯಪಟ್ಟಿದ್ದರು. ವ್ಯಕ್ತಿಯೊಬ್ಬರ ಲಿಂಗವು ಅವರ ಹುಟ್ಟಿನಿಂದಲೇ ನಿಗದಿಯಾಗಿರುತ್ತದೆ. ಆದಾಗ್ಯೂ ಕೆಲವು ವ್ಯಕ್ತಿಗಳು ಗಂಡು ಮತ್ತು ಹೆಣ್ಣು ಅಂಶಗಳುಳ್ಳ ದೇಹದೊಂದಿಗೆ ಹುಟ್ಟಿರುತ್ತಾರೆ. ವಿದ್ವಾಂಸರಾದ ಸದರಿ ನ್ಯಾಯಮೂರ್ತಿಗಳು ಗಮನಿಸಿದಂತೆ, ಕೆಲವೊಮ್ಮೆ ಜನನಾಂಗಗಳ ರಚನೆಯ ಸಮಸ್ಯೆಯಿಂದಾಗಿ ಕೆಲ ವ್ಯಕ್ತಿಗಳ ತಮ್ಮ ಬಗೆಗಿನ ಆಂತರ್ಯದ ಗ್ರಹಿಕೆಗಳು ಅವರಿಗೆ ಹುಟ್ಟಿನಿಂದ ಲಭಿಸಿದ ಲಿಂಗಕ್ಕೆ ಭಿನ್ನವಾಗಿರುತ್ತವೆ. ಈ ರೀತಿಯ ಅನುಭವಗಳು ಲಿಂಗಪರಿವರ್ತನಾ ಶಸ್ತ್ರಕ್ರಿಯೆಯ ಮುಂಚಿನ ಮತ್ತು ನಂತರದ ಘಟ್ಟದಲ್ಲಿರುವ ಬದಲೀ-ಲೈಂಗಿಕತೆಯ ವ್ಯಕ್ತಿಗಳಲ್ಲಿ ಮಾತ್ರವಲ್ಲದೇ, ಶಸ್ತ್ರಕ್ರಿಯೆಗೆ ಒಳಗಾಗದಿರಲು ನಿರ್ಧರಿಸಿದ, ಶಸ್ತ್ರಚಿಕಿತ್ಸೆ ಪಡೆಯಲು ಸಾಧ್ಯವಾಗದ ಮತ್ತು ಚಿಕಿತ್ಸೆ ವಿಫಲಗೊಂಡ ವ್ಯಕ್ತಿಗಳೆಲ್ಲರಿಗೂ ಆಗುತ್ತವೆ. ಇದನ್ನು ಅವರೇ ಇನ್ನಷ್ಟು ವಿವರಿಸುವಂತೆ,:-

> "ಲೈಂಗಿಕ ಅಸ್ಮಿತೆ ಎಂದರೆ ಪ್ರತಿ ವ್ಯಕ್ತಿಯೂ ಆಳವಾಗಿ ಮತ್ತು ಆಂತರಿಕವಾಗಿ ಅನುಭವಿಸುವ ವಿಶೇಷವಾದ ಲೈಂಗಿಕ ಅನುಭವ, ಅಲ್ಲದೇ, ಈ ಅನುಭವವು ಅವರಿಗೆ ಹುಟ್ಟಿನಿಂದ ನಿಗದಿಯಾದ ಲಿಂಗದೊಟ್ಟಿಗೆ ತಾಳೆ ಆಗಬಹುದು, ಆಗದೆಯೂ ಇರಬಹುದು. ತಮ್ಮ ದೇಹದ ಬಗೆಗಿನ ಈ ವೈಯಕ್ತಿಕ ಪರಿಕಲ್ಪನೆಯಲ್ಲಿ, ವ್ಯಕ್ತಿಗಳು

[1] (2014) 5 SCC 438

ತಾವಾಗಿಯೇ ಮಾಡಿಸಿಕೊಂಡ ವೈದ್ಯಕೀಯ, ಶಸ್ತ್ರಚಿಕಿತ್ಸಕ ಅಥವಾ ಇನ್ನಾವುದೇ ಬಗೆಯ ದೈಹಿಕ ಅಂಶಗಳ ಅಥವಾ ಕ್ರಿಯೆಗಳ ಮಾರ್ಪಾಡುಗಳು, ಹಾಗೂ ಉಡುಪು, ಮಾತು ಮತ್ತು ನಡವಳಿಕೆಗಳ ಮೂಲಕ ವ್ಯಕ್ತಪಡಿಸುವ ಹಲಬಗೆಯ ಲೈಂಗಿಕ ಅಭಿವ್ಯಕ್ತಿಗಗಳು ಕೂಡ ಸೇರಿರುತ್ತವೆ. ಆದುದರಿಂದ, ಲೈಂಗಿಕ ಅಸ್ಮಿತೆ ಎಂಬುದು ಒಬ್ಬ ವ್ಯಕ್ತಿಯು ತಮ್ಮನ್ನು ಗಂಡು, ಹೆಣ್ಣು, ಲಿಂಗ-ಪರಿವರ್ತಿತ ಅಥವಾ ಇತರ ವರ್ಗಗಳೊಂದಿಗೆ ಗುರುತಿಸಿಕೊಳ್ಳುವುದನ್ನು ಸೂಚಿಸುತ್ತದೆ."

6. ಶೋಷಣೆಯ ಪರಿಕಲ್ಪನೆಯ ಪ್ರಸ್ತಾಪ ಮಾಡುತ್ತಾ ಅವರು ಹೀಗೆ ನುಡಿಯುತ್ತಾರೆ: -

> "ಹೀಗಾಗಿ, 15 ಮತ್ತು 16 ನೇ ಕಲಮುಗಳಡಿಯ "ಲಿಂಗಾಧಾರಿತ ಶೋಷಣೆ"ಯಲ್ಲಿ, ಲೈಂಗಿಕ ಅಸ್ಮಿತೆಯನ್ನಾಧರಿಸಿದ ಶೋಷಣೆಯೂ ಸೇರಿದೆ. 15 ಮತ್ತು 16 ನೇ ಕಲಮಿನಲ್ಲಿ ಬಳಕೆಯಾಗಿರುವ "ಲಿಂಗ" ಎಂಬ ಭಾವವು, ಕೇವಲ ಹುಟ್ಟಿನಿಂದ ಬಂದ ಗಂಡು ಮತ್ತು ಹೆಣ್ಣುಗಳೆಂಬ ಲಿಂಗಗಳಿಗೆ ಸೀಮಿತವಾಗಿರದೆ, ತಮ್ಮನ್ನು ತಾವು ಗಂಡು ಅಥವಾ ಹೆಣ್ಣು ಎಂದು ಗುರಿತಿಸಿಕೊಳ್ಳದ ಮಂದಿಯನ್ನು ಒಳಗೊಳ್ಳುವ ಉದ್ದೇಶವನ್ನು ಹೊಂದಿರುತ್ತದೆ"

7. ಲಿಂಗ ಪರಿವರ್ತಿತರ ಗುರುತಿನ ಬಗೆಗೆ ನ್ಯಾ. ರಾಧಾಕೃಷ್ಣನ್ ಈ ರೀತಿಯಾಗಿ ತೀರ್ಪಿತ್ತರು.

-ವ್ಯಕ್ತಿಗಳು ತಮ್ಮನ್ನು ತಾವು ಗಂಡು, ಹೆಣ್ಣು ಮತ್ತು ಮೂರನೇ ಲಿಂಗದವರೆಂದು ಗುರುತಿಸಿಕೊಳ್ಳಬಹುದು. ಹಿಜರಾಗಳನ್ನು ಗಂಡು ಅಥವಾ ಹೆಣ್ಣು ಎಂದು ಗುರುತಿಸದೇ, ಮೂರನೇ ಲಿಂಗವೆಂದು ಗುರುತಿಸಲಾಗುತ್ತದೆ. ಲೈಂಗಿಕ ಗುರುತು ಎಂಬುದು, ಈಗಾಗಲೇ ತಿಳಿಸಿರುವಂತೆ ವ್ಯಕ್ತಿಯೊಬ್ಬರೊಳಗಿರುವ, ತಾವು ಗಂಡು, ಹೆಣ್ಣು ಅಥವಾ ಬದಲಿ-ಲೈಂಗಿಕತೆಯವರು ಎಂಬ ಅರಿವು, ಉದಾಹರಣೆಗೆ, ಹಿಜರಾಗಳಲ್ಲಿ ಹೆಣ್ಣಿನ ಜನನೇಂದ್ರಿಯಗಳಿಲ್ಲದಿರುವುದರಿಂದ ಮತ್ತು ಮಕ್ಕಳನ್ನು ಪಡೆಯಲು ಆಗದೆ ಇರುವುದರಿಂದ, ಅವರು ತಮ್ಮನ್ನು ಹೆಣ್ಣು ಎಂದು ಗುರುತಿಸಿಕೊಳ್ಳುವುದಿಲ್ಲ. ಈ ವ್ಯತ್ಯಾಸವು, ಅವರುಗಳನ್ನು ಗಂಡು ಮತ್ತು ಹೆಣ್ಣು ಲಿಂಗಳಿಂದ ಬೇರ್ಪಡಿಸುತ್ತದೆ ಹಾಗು ಅವರುಗಳು ತಮ್ಮನ್ನು ಗಂಡು ಅಥವಾ ಹೆಣ್ಣು ಎಂದು ಪರಿಗಣಿಸದೇ, ಮೂರನೇ ಲಿಂಗವೆಂದು ಗುರುತಿಸಿಕೊಳ್ಳುತ್ತಾರೆ

8. ಮೇಲಿನದಕ್ಕೆ ಪೂರಕವಾದ ಅಭಿಪ್ರಾಯವನ್ನು ಮಂಡಿಸಿದ ಸಿಕ್ರಿ, ಜೆ, ರವರು, ಲಿಂಗಪರಿವರ್ತಿತರ ಹಕ್ಕುಗಳಬಗೆಗೆ ಮಾತನಾಡುತ್ತ, ಲೈಂಗಿಕವಾಗಿ ಗುರುತಿಸಿಕೊಳ್ಳುವಿಕೆ ಎಂಬುದು ಸಮುದಾಯವೊಂದು ನಾಗರಿಕ ಸವಲತ್ತುಗಳನ್ನು ಅನುಭವಿಸಲು ಬೇಕೇಬೇಕಾಗಿರುವ ಅಂಶವೆಂದು ನುಡಿದರು. ಹೀಗೆ ಗುರುತಿಸಿದಾಗ ಮಾತ್ರ, ಮೂರನೇ ಲಿಂಗವೆಂದು ಗುರುತಿಸಿಕೊಳ್ಳುವ ಸಮುದಾಯಕ್ಕೆ ಮತದಾನ, ಆಸ್ತಿ ಖರೀದಿ, ಮದುವೆ, ಪಾಸ್ಪೋರ್ಟ್ ಮತ್ತು ರೇಷನ್ ಕಾರ್ಡುಗಳ ಮೂಲಕ ದೊರೆಯುವ ಔಪಕಾರಿಕ ಅಸ್ಮಿತೆ, ವಾಹನ ಓಡಿಸುವ ಪರವಾನಗಿ, ಓದು, ಕೆಲಸ, ಆರೋಗ್ಯ ಮೊದಲಾದವಕ್ಕೆ ಸಂಬಂಧಿಸಿದ ಹಕ್ಕುಗಳು ಅರ್ಥಪೂರ್ಣವಾಗಿ ದೊರೆಯಬಲ್ಲವು. ಮಾನವ ಹಕ್ಕುಗಳಿಗೆ ಒತ್ತುಕೊಡುತ್ತ ಅವರು ಹೇಗೆ ಹೇಳುತ್ತಾರೆ,

> ಲಿಂಗಪರಿವರ್ತಿತರಿಗೆ ಮೂಲಭೂತ ಮಾನವ ಹಕ್ಕುಗಳಾದ, ಸ್ವತಂತ್ರವಾಗಿ ಮತ್ತು ಘನತೆಯಿಂದ ಬದುಕುವ ಹಕ್ಕು, ಖಾಸಗೀತನ ಮತ್ತು ಸ್ವತಂತ್ರ ಅಭಿವ್ಯಕ್ತಿಯ ಹಕ್ಕು, ಓದು ಮತ್ತು ಸಬಲೀಕರಣದ ಹಕ್ಕು, ಹಿಂಸೆ, ಶೋಷಣೆ ಮತ್ತು ಮೇಲುಕೀಳಿನ ವಿರುದ್ಧದ ಹಕ್ಕುಗಳು ಏಕೆ ದೊರೆಯಬಾರದು ಎಂಬುದಕ್ಕೆ ಕಾರಣಗಳಿಲ್ಲ. ಸಂವಿಧಾನವು ಲಿಂಗಪರಿವರ್ತಿತರಿಗೆ ಹಕ್ಕುಗಳನ್ನು ಕೊಡಮಾಡುವ ಕೆಲಸವನ್ನು ಈಗಾಗಲೇ ಮಾಡಿದ್ದು, ಅದನ್ನು ಒಪ್ಪಿಕೊಂಡು, ಲಿಂಗಪರಿವರ್ತಿತರು ಘನತೆಯಿಂದ ಬಾಳಲು ಸಾಧ್ಯವಾಗುವ ರೀತಿಯಲ್ಲಿ ಸಂವಿಧಾನವನ್ನು ವ್ಯಾಖ್ಯಾನಿಸುವ ಸಮಯ ಈಗ ಬಂದಿದೆ. ಇದೆಲ್ಲದರ, ನೆರವೇರಿಕೆಯ ಆರಂಭವನ್ನು ಲಿಂಗಪರಿವರ್ತಿತರನ್ನು ಮೂರನೇ ಲಿಂಗವೆಂದು ಗುರುತಿಸುವ ಮೂಲಕ ಮಾಡಬೇಕಿದೆ.

ಮೇಲ್ಕಂಡ ತೀರ್ಪಿನಲ್ಲಿ ವ್ಯಕ್ತಿತ್ವದಿಂದ ಬೇರ್ಪಡಿಸಲಾಗದ ಲೈಂಗಿಕ ಗುರುತನ್ನು ಗಮನದಲ್ಲಿರಿಸಿಕೊಂಡು, ಅದನ್ನು ಮಾನವ ಹಕ್ಕುಗಳು ಮತ್ತು ಸಂವಿಧಾನ ಖಾತ್ರಿಪಡಿಸುವ ಘನತೆಯಿಂದ ಸ್ವತಂತ್ರವಾಗಿ ಬದುಕುವ ಹಕ್ಕಿನೊಂದಿಗೆ ತಳುಕು ಹಾಕಿರುವುದು ನಿಚ್ಚಳವಾಗಿದ್ದು, ಈ ಕ್ರಮ ಸರಿಯಾದುದಾಗಿದೆ. ಸದರಿ ಹಕ್ಕುಗಳನ್ನು ಸಂವಿಧಾನದ 21ನೇ ಕಲಮಿನ ಅವಿಚ್ಛಿನ್ನ ಭಾಗವಾಗಿ ಕಾನೂನಿನಡಿಯಲ್ಲಿ ಗುರುತಿಸುವುದರ ಬಗ್ಗೆ ಒತ್ತು ಕೊಟ್ಟಿರುವ ಈ ತೀರ್ಪು, ನಮ್ಮ ಸಂವಿಧಾನದ ಮೂಲ ಸೆಲೆಯಾಗಿರುವ 14 ನೇ ಕಲಮನ್ನು ಉಲ್ಲಂಘಿಸುವ, ಲೈಂಗಿಕ ಅಸ್ಮಿತೆಯ ಆಧಾರದ ಮೇಲೆ ನಡೆಯುವ ಎಲ್ಲ ಬಗೆಯ ತಾರಾತಮ್ಯವನ್ನು ಖಂಡಿಸುತ್ತದೆ.

9. ಅಸ್ತಿತ್ವವೆಂಬ ಮೂಲಭೂತ ಮಾನವೀಯ ಮೌಲ್ಯದ ಹುಡುಕಾಟವು, ತಮ್ಮ ತಮ್ಮ ಕ್ಷೇತ್ರಗಳಲ್ಲಿ ಯಶಸ್ಸು, ಕೀರ್ತಿ, ಆರ್ಥಿಕ ಶಕ್ತಿ, ರಾಜನೈತಿಕ ಬಲ, ಪ್ರಸಿದ್ಧಿ ಮತ್ತು ಸಾಮಾಜಿಕ ಶ್ರೇಷ್ಠತೆ ಮುಂತಾದವನ್ನು ಗಳಿಸಿರುವ ವ್ಯಕ್ತಿಗಳ ಮನಸ್ಸನ್ನು ಹಿಂದಿನಿಂದಲೂ ಆಳುತ್ತಾ ಬಂದಿರುವುದನ್ನು ನೆನಪಿನಲ್ಲಿಡಬೇಕು. ಆದರೆ, ಕಾನೂನಿನ ನೆಲೆಗಟ್ಟಿನಲ್ಲಿ ಕಳಂಕ ಮತ್ತು ಹೆದರಿಕೆಗಳಿಂದ ಮುಕ್ತವಾದ ಅಸ್ತಿತ್ವವನ್ನು ಹುಡುಕುವಾಗ, ವ್ಯಕ್ತಿಗಳಿಗೆ ತಮ್ಮತನವನ್ನು ಅಭಿವ್ಯಕ್ತಪಡಿಸುವ ಸ್ವಾತಂತ್ರ್ಯದ ಅಗತ್ಯವಿರುತ್ತದೆ, ಮತ್ತು ಸ್ವಾತಂತ್ರವು, "ಘನತೆಯುಳ್ಳ ಅಸ್ಮಿತೆ" ಎಂಬ ಸಾಂವಿಧಾನಿಕ ತತ್ವದೊಂದಿಗೆ ಗಾಢವಾಗಿ ಬೆಸೆದುಕೊಂಡಿದೆ. ಸಂವಿಧಾನದ ನೆಲೆಯಲ್ಲಿ ಮಾತನಾಡುವಾಗ, ವ್ಯಕ್ತಿಯ ಅಸ್ಮಿತೆಯನ್ನು ಅವರಿಗೆ ಹುಟ್ಟಿನಿಂದ ಬಂದ ಅಥವಾ ಬೆಳೆಯುತ್ತಾ ರೂಢಿಯಾದ ಪ್ರವೃತ್ತಿಗಷ್ಟೇ ಸೀಮಿತಗೊಳಿಸಲು ಬರುವುದಿಲ್ಲ. ಇಂತಹ ಸಂಕುಚಿತ ಗ್ರಹಿಕೆಯ ಹಿಂದೆ, ಮೇಲ್ನೋಟಕ್ಕೆ ನ್ಯಾಯದಾನವನ್ನು ಉತ್ತೇಜಿಸುವ ಉದ್ದೇಶವಿರುವಂತೆ ಕಂಡುಬಂದರೂ, ಆಳವಾಗಿ ಪರಿಶೀಲಿಸಿದಾಗ, ಈ ಬಗೆಯ ಗುರುತಿಸುವಿಕೆಯು ವ್ಯಕ್ತಿಗತ ಆಯ್ಕೆಯ ಅವಕಾಶವನ್ನು ಮೊಟಕುಗೊಳಿಸುತ್ತದೆ ಎಂದು ಬಹುಬೇಗ ತಿಳಿದುಬರುತ್ತದೆ. ಇಲ್ಲಿ, ವ್ಯಕ್ತಿಗಳ ಲೈಂಗಿಕ ನಿಲುವುಗಳನ್ನಷ್ಟೇ ಮಾನ್ಯಮಾಡಬೇಕೋ, ಅಥವಾ ವ್ಯಕ್ತಿಯೊಬ್ಬರು, ಮತ್ತೊಬ್ಬರ ಆಯ್ಕೆಯನ್ನು ಬಾಧಿಸದೆ ಅಥವಾ ಇನ್ನೊಬ್ಬರ ಒಪ್ಪಿಗೆಯಿಂದ, ಘನತೆಯೊಂದಿಗೆ ಮತ್ತು 21ನೆ ಕಲಮಿನ ಅತಿಮುಖ್ಯ ಭಾಗವಾದ ಖಾಸಗೀತನಕ್ಕೆ ಘಾಸಿಮಾಡದಂತೆ ಚಲಾಯಿಸುವ ಲೈಂಗಿಕ ನಿಲುವು ಮತ್ತು ಆಯ್ಕೆಯ ಹಕ್ಕುಗಳೆರಡನ್ನೂ ಒಪ್ಪಿಕೊಳ್ಳಬೇಕೋ ಎಂಬ ಪ್ರಶ್ನೆಯನ್ನು ಎತ್ತಬೇಕಿದೆ. ಅಸ್ಮಿತೆಯ ಮೂಲದಲ್ಲಿರುವುದು, ಸಂವಿಧಾನದ ನಿಯಮ, ಮೌಲ್ಯ ಮತ್ತು ಆದರ್ಶಗಳಿಗೆ ಅನುಸಾರವಾದ, ಅಥವಾ "ಸಾಂವಿಧಾನಿಕ ಒಪ್ಪಿಗೆ" ಇರುವ, ಸ್ವಯಂನಿರ್ಧಾರ, ಅವಕಾಶಗಳ ಹಿನ್ನೆಲೆಯಲ್ಲಿ ತಮ್ಮ ಸಾಮರ್ಥ್ಯವನ್ನು ಅರಿಯುವುದು ಮತ್ತು ಬಾಹ್ಯ ಅನಿಸಿಕೆಗಳನ್ನು ನಿಚ್ಚಳವಾದ ಮನಸ್ಸಾಕ್ಷಿಯೊಂದಿಗೆ ನಿರಾಕರಿಸುವುದು, ಎಂಬ ತತ್ವಗಳು. ವ್ಯಕ್ತಿಗಳು ಕಾನೂನು ಸಮ್ಮತವಾಗಿ ನಡೆದುಕೊಳ್ಳುವವರೆಗೆ, ಅವರು ತಮ್ಮ ಬದುಕನ್ನು ತಾವಾಗಿಯೇ ನಿರ್ಧರಿಸಿಕೊಂಡು ತಮ್ಮ ರೀತಿಯಲ್ಲಿ ಬದುಕುವ ಹಕ್ಕನ್ನು ಹೊಂದಿರುತ್ತಾರೆ. ಈ ಹಿನ್ನೆಲೆಯಲ್ಲಿ ಸಾಂವಿಧಾನಿಕ ಸಭ್ಯತೆ ಮತ್ತು ಸಾಮಾಜಿಕ ಸಭ್ಯತೆ ಅಥವಾ ನೈತಿಕತೆಯ ನಡುವೆಯಿರುವ ವ್ಯತ್ಯಾಸಕ್ಕೆ ವಿಶೇಷವಾದ ನೆಲೆಗಟ್ಟು ಮತ್ತು ಬೇರೆಯದೇ ಬಗೆಯ ಉದ್ದೇಶ ಒದಗಿಬರುತ್ತದೆ. ವ್ಯಕ್ತಿಗಳ ಅಸ್ಮಿತೆಯನ್ನು ಸಂಪೂರ್ಣವಾಗಿ ಗುರುತಿಸದಿರುವ ಮತ್ತು ಅವರಿಗೆ ತಮ್ಮ ಆಯ್ಕೆಯನ್ನು ಅಭಿವ್ಯಕ್ತಪಡಿಸಲು ಅವಕಾಶ ನೀಡದ ದಂಡನಾ ಕಾಯ್ದೆಯಾದ ಭಾರತೀಯ ದಂಡ ಸಂಹಿತೆಯ 377ನೇ ಪರಿಚ್ಛೇದವನ್ನು ಅನುಮೋದಿಸಿರುವ ಈ ನ್ಯಾಯಾಲಯದ ದ್ವಿಸದಸ್ಯ

ಪೀಠವೊಂದು, ಸುರೇಶ್ ಕುಮಾರ್ ಕೌಶಲ್ ಮತ್ತೊಬ್ಬರು v. ನಾಜ್ ಪ್ರತಿಷ್ಠಾನ ಮತ್ತು ಇತರರು2 ಮೊಕದ್ದಮೆಯ ತೀರ್ಪಿನಲ್ಲಿ ನಾಜ್ ಪ್ರತಿಷ್ಠಾನ v. ದೆಹಲಿ ಏನ್.ಸಿ.ಟಿ ಸರ್ಕಾರ3 ಮೊಕದ್ದಮೆಯ ದೆಹಲಿ ಉಚ್ಛನ್ಯಾಯಾಲಯಾದ ತೀರ್ಪನ್ನು ತಳ್ಳಿಹಾಕಿರುವುದು ಸದ್ಯದ ವಿವಾದದ ಕೇಂದ್ರ ವಿಚಾರವಾಗಿದೆ.

## B. ಉಲ್ಲೇಖ

10. ರಿಟ್ ಅರ್ಜಿ (ಕ್ರಿಮಿನಲ್) ಸಂ. 79, 2016ನ್ನು - ಲೈಂಗಿಕತೆಯ ಹಕ್ಕು, ಲೈಂಗಿಕ ಸ್ವಾಯತ್ತತೆಯ ಹಕ್ಕು, ಮತ್ತು ಲೈಂಗಿಕ ಸಂಗಾತಿಯನ್ನು ಆರಿಸಿಕೊಳ್ಳುವ ಹಕ್ಕುಗಳನ್ನು 21ನೇ ಕಲಮಿನಡಿ ಖಾತ್ರಿಗೊಳಿಸಲಾಗಿರುವ ಬದುಕಿನ ಹಕ್ಕಿನ ಭಾಗಗಳೆಂದು ಘೋಷಿಸುವ ಮತ್ತು ಭಾರತೀಯ ದಂಡ ಸಂಹಿತೆಯ (ಐ.ಪಿ.ಸಿ.) 377 ನೇ ಪರಿಚ್ಛೇದವನ್ನು ಅಸಾಂವಿಧಾನಿಕವೆಂದು ಘೋಷಿಸುವ ಸಲುವಾಗಿ ಸಲ್ಲಿಸಲಾಗಿದೆ. ಸದರಿ ರಿಟ್ ಅರ್ಜಿಯನ್ನು 08.01.2018ರಲ್ಲಿ ತ್ರಿ-ಸದಸ್ಯ ಪೀಠವೊಂದರ ಎದುರು ಹಾಜರುಪಡಿಸಿದಾಗ ನ್ಯಾಯಾಲಯವು, ಸುರೇಶ್ ಕೌಶಲ್ (ಮೇಲ್ಕಂಡ) ಮೊಕದ್ದಮೆಯಲ್ಲಿ ಇದೇ ನ್ಯಾಯಾಲಯದ ದ್ವಿಸದಸ್ಯ ಪೀಠ ದೆಹಲಿ ಉಚ್ಛನ್ಯಾಯಾಲಯ ವಿಭಾಗೀಯ ಪೀಠ ನಾಝ್ ಪ್ರತಿಷ್ಠಾನ (ಮೇಲ್ಕಂಡ) ಪ್ರಕರಣದಲ್ಲಿ ನೀಡಿದ್ದ ತೀರ್ಪನ್ನು ವಜಾಗೊಳಿಸಿದ್ದನ್ನು ಉಲ್ಲೇಖಿಸಿತ್ತು. ಈ ಸಂದರ್ಭದಲ್ಲಿ ರಿಟ್ ಅರ್ಜಿದಾರರ ಪರವಾಗಿ ಹಿರಿಯ ವಿದ್ವಾಂಸ ವಕೀಲರಾದ ಶ್ರೀ ಅರವಿಂದ ದಾತಾರ್ ರವರು, ಸುರೇಶ್ ಕೌಶಲ್ (ಮೇಲ್ಕಂಡ) ಮೊಕ್ಕದಮೆಯ ಸಂದರ್ಭದಲ್ಲಿ, ದ್ವಿಸದಸ್ಯ ಪೀಠವು ಸಾಂವಿಧಾನಿಕ ನೈತಿಕತೆಯ ಹಿನ್ನೆಲೆಯಲ್ಲಿ ಚರ್ಚೆಮಾಡಬೇಕಿದ್ದ ವಿಷಯದಲ್ಲಿ, ಬಹುಸಂಖ್ಯಾತರ ಗ್ರಹಿಕೆಗಳಿಂದ ಪ್ರೇರಿತವಾದ ಸಾಮಾಜಿಕ ನೈತಿಕತೆಯಿಂದ ಪ್ರಭಾವಿತಗೊಂಡಿರುವುದಾಗಿ ಅರಿಕೆ ಮಾಡಿಕೊಂಡರು. ಸುರೇಶ್ ಕೌಶಲ್ (ಮೇಲ್ಕಂಡಂತೆ) ಮೊಕದ್ದಮೆಯಲ್ಲಿ ಮಾಡಿರುವ ಸಂವಿಧಾನದ 21ನೇ ಕಲಮಿನ ವ್ಯಾಖ್ಯಾನವು ಅತ್ಯಂತ ಸಂಕುಚಿತವಾಗಿದ್ದು, ನ್ಯಾಯಾಲಯವು ಮೂಲತಃ ಸಂವಿಧಾನದ 14ನೇ ಕಲಮಿನಿಂದ ಪ್ರಭಾವಗೊಂಡಿರುವುದಾಗಿ ಆಕ್ಷೇಪಣೆಯನ್ನು ಮುಂದಿಟ್ಟು, "ಲೈಂಗಿಕ ಅಸ್ಮಿತೆ ಮತ್ತು ಲೈಂಗಿಕ ನಿಲುವಿನ" ಮಹತ್ವವನ್ನು ಸಾರಿದ್ದ ನಾಲ್ಸಾ ಪ್ರಕರಣದ ತೀರ್ಪನ್ನು ಉಲ್ಲೇಖಿಸಲಾಯಿತು. ಅಲ್ಲದೇ

[2] (2014) 1 SCC 1

[3](2009) 111 DRJ 1.

ನ್ಯಾಯಾಲಯದ ಗಮನವನ್ನು ಕೆ.ಎಸ್.ಪುಟ್ಟಸ್ವಾಮಿ ಮತ್ತೊಬ್ಬರು v. ಭಾರತ ಸರ್ಕಾರ ಮತ್ತು ಇತರರು[4] ಪ್ರಕರಣದಲ್ಲಿ ಒಂಭತ್ತು ಸದಸ್ಯರ ಪೀಠದ ಬಹುತೇಕರು, ನ್ಯಾ. ಚಂದ್ರಚೂಡ್ ರವರ ಮೂಲಕ ಲೈಂಗಿಕ ನಿಲುವು ಎಂಬುದು ಸಂವಿಧಾನ ಕೊಡಮಾಡುವ ಹಕ್ಕುಗಳ ಮುಖ್ಯವಾದ ಭಾಗ ಮತ್ತು ಈ ಹಕ್ಕುಗಳು ಬಹುಜನರ ಒಪ್ಪಿಗೆ ಹಾಗೂ ಉಪಕಾರದ ಮೇಲೆ ನಿರ್ಧಾರವಾಗುವುದಿಲ್ಲ ಎಂದು ಅಭಿಪ್ರಾಯ ಪಟ್ಟುದರೆಡೆಗೆ ಸೆಳೆಯಲಾಯಿತು. ಇದಕ್ಕೆ ಪೂರಕವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದ ನ್ಯಾ. ಕೌಲ್ ರವರು, ಮಾಸ್ಲೆ v. ನ್ಯೂಸ್ ಗ್ರೂಪ್ ನ್ಯೂಸ್ ಪೇಪರ್ಸ್ ಲಿ.[5] ತೀರ್ಪನ್ನು ಉಲ್ಲೇಖಿಸುತ್ತಾ, ಕೆಲ ಸಂದರ್ಭಗಳನ್ನು ಹೊರತುಪಡಿಸಿ, ವ್ಯಕ್ತಿಗಳು ತಮಗಿಷ್ಟವಾಗುವಂತೆ ಲೈಂಗಿಕ ಜೀವನ ನಡೆಸುವ ಮತ್ತು ಖಾಸಗೀ ಸಂಬಂಧಗಳನ್ನು ಹೊಂದುವ ಸ್ವಾತಂತ್ರ್ಯಕ್ಕಿರುವ ಮಹತ್ವವು, ಸಾರ್ವಜನಿಕ ಆಸಕ್ತಿಗೆ ವಿರುದ್ಧವಾಗಿರುತ್ತದೆ ಎಂಬ ಅಂಶಕ್ಕೆ ಒತ್ತುಕೊಟ್ಟರು.

11. ಶ್ರೀಯುತ ದಾತಾರ್ ರವರು ಮುಂದುವರೆಯುತ್ತಾ, ವ್ಯಕ್ತಿಗಳ ಖಾಸಗೀತನಕ್ಕೆ ಅತಿಎತ್ತರದ ಸ್ಥಾನವನ್ನು ನೀಡಿ, ನಾಲ್ಸಾ ಪ್ರಕರಣದಲ್ಲಿ ಲೈಂಗಿಕ ನಿಲುವಿಗೆ ಪ್ರಾಮುಖ್ಯ ಕೊಟ್ಟಿರುವ ಹಿನ್ನೆಲೆಯಲ್ಲಿ, ವ್ಯಕ್ತಿಗತ ಸ್ವಾಯುತ್ತತೆ ಮತ್ತು ಲೈಂಗಿಕ ನಿಲುವುಗಳನ್ನು ನಾಶಪಡಿಸಬಲ್ಲ 377ನೇ ಪರಿಚ್ಛೇದವನ್ನು ಸಮಂಜಸವಾದ ನಿರ್ಬಂಧವೆಂದು ಪರಿಗಣಿಸಲು ಆಗುವುದಿಲ್ಲವೆಂದು ಅರಿಕೆ ಮಾಡಿಕೊಂಡರು. ನಿಯಮವೊಂದರ ದುರುಪಯೋಗ ನಡೆಯಬಹುದು ಎಂದ ಮಾತ್ರಕ್ಕೆ, ಅದು ಸಂವಿಧಾನಬಾಹಿರವಾಗುವುದಿಲ್ಲ, ಎಂಬುದು, ಕಾಯಿದೆಗಳ ವ್ಯಾಖ್ಯಾನ ಮಾಡುವ ಸಂದರ್ಭದಲ್ಲಿ ಪಾಲಿಸಲಾಗುವ ಸಿದ್ಧಾಂತ. ಹಾಗೆಯೇ, ಶಾಸನ ಪುಸ್ತಕದಲ್ಲಿರುವ ನಿಯಮವೊಂದು ಹಲವು ಬಾರಿ ಬಳಕೆಯಾಗುವುದಿಲ್ಲವೆಂದ ಮಾತ್ರಕ್ಕೆ, ಅದು "ನಿರುಪಯೋಗ ಸಿದ್ಧಾಂತ"ದ ವ್ಯಾಪ್ತಿಗೊಳಪಡುವುದಿಲ್ಲ. ಆದರೆ ಸುರೇಶ್ ಕೌಶಲ್ ಪ್ರಕರಣವು ಈ ನಿರುಪಯೋಗ ಸಿದ್ಧಾಂತದ ಪ್ರಭಾವಕ್ಕೊಳಪಟ್ಟಿದೆ.

12. ಮೇಲ್ಕಂಡ ಅರಿಕೆಗಳನ್ನು ಮನ್ನಿಸಿದ ತ್ರಿಸದಸ್ಯ ಪೀಠವು, ಕೆಳಕಂಡಂತೆ ನುಡಿಯಿತು.

> ಇಲ್ಲಿ ಕೆಲ ಅಂಶಗಳನ್ನು ಗಮನಿಸಬೇಕಾಗಿದೆ. ಐ.ಪಿ.ಸಿ. 377ನೇ ಪರಿಚ್ಛೇದವು "ನಿಸರ್ಗದ ನಿಯಮಕ್ಕೆ ವಿರುದ್ಧವಾದ ಶಾರೀರಿಕ ಸಂಭೋಗ" ಎಂಬ ನುಡಿಗಟ್ಟನ್ನು ಬಳಸುತ್ತದೆ.

[4] (2017) 10 SCC 1

[5] [2008] EWHC 1777 (QB)

ಆದರೆ, ನಿಸರ್ಗದ ನಿಯಮದ ನಿರ್ಧಾರವೆಂಬುದು ಅಚಲಾವಾದ ವಿದ್ಯಮಾನವಲ್ಲ ಹಾಗೂ ಸಮಾಜಿಕ ನೈತಿಕತೆಯು ಕಾಲಕಾಲಕ್ಕೆ ಬದಲಾಗುತ್ತಿರುತ್ತದೆ. ಸಾರ್ವಜನಿಕರು ಕಲ್ಪಿಸಿಕೊಳ್ಳುವ ನೈತಿಕತೆಯನ್ನು ಸಂವಿಧಾನ ಒಪ್ಪದೇ ಇರಬಹುದು. ವ್ಯಕ್ತಿಗಳ ಸ್ವಾಯುತ್ತೆ ಹಾಗೂ ನಿಲುವುಗಳನ್ನು ಸಾಂವಿಧಾನಿಕ ನೈತಿಕತೆಗೆ ಒಗ್ಗಿಸಿಕೊಳ್ಳುವ ಅಗತ್ಯವಿಲ್ಲದಿರುವ ಸಂದರ್ಭಗಳಲ್ಲಿ ಕಸಿದುಕೊಳ್ಳಲು ಬರುವುದಿಲ್ಲ. ಒಬ್ಬರ ಪಾಲಿಗೆ ನೈಸರ್ಗಿಕವಾಗಿರುವಾದದ್ದು, ಮತ್ತೊಬ್ಬರಿಗೆ ಅನೈಸರ್ಗಿಕವಾಗಿರಬಹುದು, ಆದರೆ, ಸದರೀ ನೈಸರ್ಗಿಕ ನಿಲುವು ಮತ್ತು ಆಯ್ಕೆಗಳು ಕಾನೂನಿನ ಚೌಕಟ್ಟನ್ನು ಮೀರಬಾರದು ಹಾಗೂ ಸಂವಿಧಾನದ 21ನೇ ಕಲಮು ವ್ಯಕ್ತಿಯೊಬ್ಬರಿಗೆ ಕೊಡಮಾಡಿರುವ ಹಕ್ಕಿನೊಂದಿಗೆ ಚೆಲ್ಲಾಟ ಮಾಡುವುದನ್ನಾಗಲೀ, ಅದನ್ನು ಘಾಸಿಗೊಳಿಸುವುದನ್ನಾಗಲೀ ಮಾಡಬಾರದು. ತಮಗೆ ಬೇಕಾದ ಆಯ್ಕೆಯನ್ನು ಮಾಡುವ ಒಂದು ವರ್ಗದ ಜನರು ಅಥವಾ ವ್ಯಕ್ತಿಗಳು ಯಾವುದೇ ಕಾರಣಕ್ಕೂ ಭಯದ ಪರಿಸ್ಥಿತಿಯಲ್ಲಿ ಇರಬಾರದು. ನಮ್ಮಗಳ ಈ ಹೇಳಿಕೆಯನ್ನು ಕಾನೂನಿನ ಭಯವಿರಬಾರದು ಎಂದು ಅರ್ಥಮಾಡಿಕೊಳ್ಳಬಾರದು, ನಾಗರಿಕ ಸಮಾಜವನ್ನು ಕಟ್ಟಲು ಕಾನೂನಿನ ಭಯದ ಅಗತ್ಯ ಇದ್ದೇ ಇರುತ್ತದೆ. ಆದರೆ ಅಂತಹ ಕಾನೂನು, ಸಾಂವಿಧಾನಿಕ

ಮಾನದಂಡಗಳಡಿಯಲ್ಲಿ ಒಪ್ಪತಕ್ಕದ್ದಾಗಿರಬೇಕು, ಇದುವೇ ಕಾನೂನಿನ ಸತ್ವ ಪರೀಕ್ಷೆ.

ಈ ವಿಚಾರಣೆಯ ಸಂದರ್ಭದಲ್ಲಿ ಎದ್ದ ಪ್ರಶ್ನೆಯೊಂದರ ಹಿನ್ನೆಲೆಯಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ, ಶ್ರೀಯುತ ದಾತಾರ್ ರವರು ಅತ್ಯಂತ ನ್ಯಾಯೋಚಿತವಾಗಿ ನುಡಿದಂತೆ, ಅವರುಗಳು 377ನೇ ಪರಿಚ್ಛೇದದ ಪ್ರಾಣಿಗಳೊಂದಿಗೆ ನಡೆಸುವ ಲೈಂಗಿಕ ಸಂಭೋಗಕ್ಕೆ ಸಂಬಂಧಪಟ್ಟ ಭಾಗವನ್ನು ಪ್ರಶ್ನಿಸುತ್ತಿಲ್ಲ ಮತ್ತು ಅವರ ವಾದವು ಇಬ್ಬರು ವಯಸ್ಕರ ನಡುವಿನ ಒಪ್ಪಿಗೆಯ ಕ್ರಿಯೆಗೆ ಮಾತ್ರ ಸೀಮಿತಗೊಂಡಿರುತ್ತದೆ. ಮೇಲಿನ ವಾಕ್ಯದ ಮೊದಲ ಭಾಗದ ಬಗೆಗೆ ಯಾವುದೇ ತಕರಾರುಗಳಿಲ್ಲ, ಆದರೆ, ಎರಡನೇ ಭಾಗದ ಬಗೆಗೆ ಚರ್ಚಿಸುವ ಅಗತ್ಯವಿದೆ. ಈ ವಿಷಯದಲ್ಲಿ, ಇಬ್ಬರೂ ವ್ಯಕ್ತಿಗಳು ವಯಸ್ಕರಾಗಿದ್ದು ಅವರ ನಡುವೆ ಒಪ್ಪಿಗೆಯಿರುವುದು ಪ್ರಾಥಮಿಕ ಅಗತ್ಯ. ಇಲ್ಲದಿದ್ದರೆ ಮಕ್ಕಳು ಬಲಿಪಶುಗಳಾಗುವ ಸಾಧ್ಯತೆಯಿದ್ದು, ಎಲ್ಲಾ ಕ್ಷೇತ್ರಗಳಲ್ಲಿ ಮಕ್ಕಳ ಸುರಕ್ಷತೆಗೆ ಆದ್ಯತೆ ಕೊಡಬೇಕಿದೆ. ಈ ಎಲ್ಲಾ ವಿಚಾರಗಳನ್ನು ಒಟ್ಟರೆಯಾಗಿ ಪರಿಗಣಿಸಿದ ನಂತರ, ಸುರೇಶ್ ಕುಮಾರ್ ಕೌಶಲ್ (ಮೇಲ್ಕಂಡಂತೆ) ಪ್ರಕರಣದ ತೀರ್ಪನ್ನು ಮರುಪರಿಶೀಲಿಸುವ ಅಗತ್ಯವಿದೆಯೆಂಬುದು ನಮ್ಮಗಳ ಅಭಿಪ್ರಾಯವಾಗಿದೆ.

ತ್ರಿಸದಸ್ಯ ಪೀಠವು, ಮೇಲೆ ಪ್ರಸ್ತಾಪಿಸಿದ ಸಮಸ್ಯೆಗಳನ್ನು ಇನ್ನಷ್ಟು ಹಿರಿದಾದ ನ್ಯಾಯಪೀಠ ಪರಿಹರಿಸಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿ, ಆ ನಿಟ್ಟಿನಲ್ಲಿ ಸದರಿ ಪ್ರಕರಣವನ್ನು ದೊಡ್ಡ ಪೀಠವೊಂದಕ್ಕೆ ವರ್ಗಾಯಿಸಿದೆ. ಹಾಗಾಗಿ ಈ ವಿಷಯವನ್ನು ನಮ್ಮಗಳೆದುರು ಇರಿಸಲಾಗಿದೆ.

## C. ಅರ್ಜಿದಾರರ ಪರವಾದ ಸಲ್ಲಿಕೆಗಳು

13. ನಾವುಗಳು, 2016ರ ರಿಟ್ ಅರ್ಜಿ (ಕ್ರಿಮಿನಲ್) ಸಂಖ್ಯೆ 76 ರ ಅರ್ಜಿದಾರರನ್ನು ಅರ್ಹ ವಕೀಲರಾದ ಶ್ರೀಯುತ ಸೌರಭ್ ಕಿರಪಾಲ್ ರವರ ಸಹಾಯದೊಂದಿಗೆ ಪ್ರತಿನಿಧಿಸುತ್ತಿರುವ, ಪ್ರತಿಭಾನ್ವಿತ ಹಿರಿಯ ವಕೀಲ ಶ್ರೀಯುತ ಮುಕುಲ್ ರೋಹಾತ್ಗಿಯವರ ವಾದವನ್ನೂ; 2016 ರ ರಿಟ್ ಅರ್ಜಿ (ಕ್ರಿಮಿನಲ್) ಸಂಖ್ಯೆ 572 ರ ಅರ್ಜಿದಾರರನ್ನು ಪ್ರತಿನಿರ್ಧಿಸುತ್ತಿರುವ ಪ್ರತಿಭಾನ್ವಿತ ವಕೀಲೆ ಶ್ರೀ ಜಯ್ನಾ ಕೊಠಾರಿಯವರ ವಾದವನ್ನೂ; 2018 ರ ರಿಟ್ ಅರ್ಜಿ (ಕ್ರಿಮಿನಲ್) ಸಂಖ್ಯೆ 88 ರ ಅರ್ಜಿದಾರರನ್ನು ಪ್ರತಿನಿರ್ಧಿಸುತ್ತಿರುವ ಪ್ರತಿಭಾನ್ವಿತ ಹಿರಿಯ ವಕೀಲ ಶ್ರೀಯುತ ಅರವಿಂದ್ ಪಿ. ದಾತಾರ್ ರವರ ವಾದವನ್ನೂ; 2018 ರ ರಿಟ್ ಅರ್ಜಿ (ಕ್ರಿಮಿನಲ್) ಸಂಖ್ಯೆ 100 ಮತ್ತು 101 ರ ಅರ್ಜಿದಾರರನ್ನು ಪ್ರತಿನಿರ್ಧಿಸುತ್ತಿರುವ ಪ್ರತಿಭಾನ್ವಿತ ಹಿರಿಯ ವಕೀಲ ಶ್ರೀಯುತ ಆನಂದ್ ಗ್ರೋವರ್ ರವರ ವಾದವನ್ನು; ಮತ್ತು 2018 ರ ರಿಟ್ ಅರ್ಜಿ (ಕ್ರಿಮಿನಲ್) ಸಂಖ್ಯೆ 121, ರ ಅರ್ಜಿದಾರರನ್ನು ಪ್ರತಿನಿರ್ಧಿಸುತ್ತಿರುವ ಪ್ರತಿಭಾನ್ವಿತ ವಕೀಲೆ ಡಾ. ಮೇನಕಾ ಗುರುಸ್ವಾಮಿಯವರ ವಾದವನ್ನೂ ಆಲಿಸಿದ್ದೇವೆ. ಇದರ ಜೊತೆಗೆ, ಹಲವು ಈ ವಿಷಯದಲ್ಲಿ ಹಲವು ಮಂದಿ ಮಧ್ಯಸ್ಥಿಕೆದಾರನ್ನು ಪ್ರತಿನಿಧಿಸುತ್ತಿರುವ, ಪ್ರತಿಭಾನ್ವಿತ ಹಿರಿಯ ವಕೀಲರುಗಳಾದ, ಶ್ರೀಯುತ ಅಶೋಕ್ ದೇಸಾಯಿ, ಶ್ರೀಯುತ ಚಂದರ್ ಉದಯ್ ಸಿಂಗ್, ಶ್ರೀಯುತ ಶ್ಯಾಮ್ ದಿವಾನ್ ಹಾಗೂ ಶ್ರೀಯುತ ಕೃಷ್ಣನ್ ವೇಣುಗೋಪಾಲರ ವಾದಗಳನ್ನು ಆಲಿಸಲಾಗಿದೆ. ಅರ್ಜಿದಾರರು ಮತ್ತು ಮಧ್ಯಸ್ಥಿಕೆದಾರರು ಬರೆದಿರುವ ಕೋರಿಕೆಗಳನ್ನು ಸಂಗ್ರಹಿಸಿ ನ್ಯಾಯಾಲಕ್ಕೆ ಸಲ್ಲಿಸಲಾಗಿದೆ.

14. ನಾವುಗಳು ಭಾರತ ಸರ್ಕಾರದ ಹೆಚ್ಚುವರಿ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾರವರ ವಾದವನ್ನೂ, 2016ರ ರಿಟ್ ಅರ್ಜಿ (ಕ್ರಿಮಿನಲ್) ಸಂಖ್ಯೆ 76ರ 2018ನೇ ಇಸವಿಯ ಸಂವಾದೀ ಅರ್ಜಿ ಸಂಖ್ಯೆ 94284ನ್ನು ಪ್ರತಿನಿಧಿಸುತ್ತಿರುವ ಪ್ರತಿಭಾನ್ವಿತ ಹಿರಿಯ ವಕೀಲ ಶ್ರೀಯುತ ಕೆ. ರಾಧಾಕೃಷ್ಣನ್ ರವರ ವಾದವನ್ನೂ; 2016ರ ರಿಟ್ ಅರ್ಜಿ (ಕ್ರಿಮಿನಲ್) ಸಂಖ್ಯೆ 76ರ ಸಂವಾದೀ ಅರ್ಜಿ ಸಂಖ್ಯೆ 91147ನ್ನು ಪ್ರತಿನಿಧಿಸುತ್ತಿರುವ ಪ್ರತಿಭಾನ್ವಿತ ಹಿರಿಯ ವಕೀಲ ಶ್ರೀಯುತ

ಮಹೇಶ್ ಜೇಟ್ಮಲಾನಿರವರ ವಾದವನ್ನೂ; 2016 ರ ರಿಟ್ ಅರ್ಜಿ (ಕ್ರಿಮಿನಲ್) ಸಂಖ್ಯೆ 76ರ 2018ನೇ ಇಸವಿಯ ಸಂವಾದೀ ಅರ್ಜಿ ಸಂಖ್ಯೆ 94348ನ್ನು ಪ್ರತಿನಿಧಿಸುತ್ತಿರುವ ಪ್ರತಿಭಾನ್ವಿತ ಹಿರಿಯ ವಕೀಲ ಶ್ರೀಯುತ ಸೌಮ್ಯ ಚಕ್ರಬರ್ತಿರವರ ವಾದವನ್ನೂ; ಅಪೊಸ್ಟಲಿಕ್ ಚರ್ಚುಗಳ ಒಕ್ಕೂಟ ಹಾಗು ಉತ್ಕಲ್ ಕ್ರೈಸ್ತ ಸಭೆಯನ್ನು ಪ್ರತಿನಿಧಿಸುತ್ತಿರುವ ಪ್ರತಿಭಾನ್ವಿತ ವಕೀಲ ಮನೋಜ್ ವಿ. ಜಾರ್ಜ್ ರವರ ವಾದವನ್ನೂ; ಮತ್ತು 2016 ರ ರಿಟ್ ಅರ್ಜಿ (ಕ್ರಿಮಿನಲ್) ಸಂಖ್ಯೆ 76ರ 2018ನೇ ಇಸವಿಯ ಸಂವಾದೀ ಅರ್ಜಿ ಸಂಖ್ಯೆ 93411ನ್ನು ಪ್ರತಿನಿಧಿಸುತ್ತಿರುವ ಪ್ರತಿಭಾನ್ವಿತ ಹಿರಿಯ ವಕೀಲ ಡಾ. ಹರ್ಷ್ವೀರ್ ಪ್ರತಾಪ್ ಶರ್ಮಾರವರ ವಾದವನ್ನು ಕೂಡ ಆಲಿಸಿದ್ದೇವೆ.

15. ಅರ್ಜಿದಾರು ಮತ್ತು ಮಧ್ಯಸ್ತಿಕೆದಾರರ ಕಡೆಯಿಂದ ಬಂದಿರುವ ಬಿನ್ನಹವೇನೆಂದರೆ, ಸಮಲೈಂಗಿಕತೆ, ಉಭಯಲೈಂಗಿಕತೆ ಮತ್ತು ಇತರ ಲೈಂಗಿಕ ನಿಲುವುಗಳು ಸಮಾನವಾಗಿ ನೈಸರ್ಗಿಕವಾಗಿದ್ದು, ಇಬ್ಬರು ಸಹಮತಿ ಸೂಚಿಸಲು ಅರ್ಹತೆಯಿರುವ ವ್ಯಕ್ತಿಗಳು ಪರಸ್ಪರ ಒಪ್ಪಿಗೆಯ ಮೇರೆಗೆ ತಮ್ಮ ಆಯ್ಕೆ ಮತ್ತು ಒಲವುಗಳನ್ನು ಅಭಿವ್ಯಕ್ತಿಪಡಿಸುವುದನ್ನು ಬಿಂಬಿಸುತ್ತವೆ. ಅಲ್ಲದೇ ಈ ನಿಲುವುಗಳು ದೈಹಿಕ ಅಥವಾ ಮಾನಸಿಕ ಖಾಯಿಲೆಗಳಾಗಿರದೇ, ಅಭಿವ್ಯಕ್ತಿ ಮತ್ತು ಮುಕ್ತ ಆಲೋಚನಾ ಪ್ರಕ್ರಿಯೆಗಳಲ್ಲಿರುವ ನೈಸರ್ಗಿಕವಾದ ಭಿನ್ನತೆಗಳಾಗಿವೆ. ಇವುಗಳನ್ನು ಅಪರಾಧಗಳೆಂದು ಬಗೆಯುವುದು ವ್ಯಕ್ತಿಯೊಬ್ಬರೊಳಗಿನ ವ್ಯಕ್ತಿಗತ ಘನತೆ ಮತ್ತು ನಿರ್ಧಾರ ತೆಗೆದುಕೊಳ್ಳುವ ಸ್ವಾತಂತ್ರ್ಯವನ್ನು ಘಾಸಿಗೊಳಿಸಿ, ಅವರ ಲೈಂಗಿಕ ಅಸ್ಮಿತೆಗೆ ಅನಾನುಕೂಲಗಳನ್ನುಂಟುಮಾಡಿ ಸಂವಿಧಾನದ 21ನೇ ಕಲಮಿನ ಕೇಂದ್ರ ಭಾಗವಾಗಿರುವ ಖಾಸಗೀತನದ ಹಕ್ಕನ್ನು ನಾಶಪಡಿಸಿ, ಸ್ವಾತಂತ್ರ್ಯವೆಂಬ ಅತ್ಯಂತ ಮಹತ್ವದ ಮೌಲ್ಯಕ್ಕೆ ಅಹಿತಕರವಾಗಿರುತ್ತದೆಯಲ್ಲದೇ, ವ್ಯಕ್ತಿಗಳ ಅಸ್ಮಿತೆಯ ವಿವಿಧ ನೈಜ ರೂಪಗಳನ್ನು ಪ್ರತಿನಿಧಿಸುವ ತತ್ವವಾದ ಜೈವಿಕ ಬಯಕೆಗಳ ಅಭಿವ್ಯಕ್ತಿಗೆ ಮಾರಕವಾಗಿ ಪರಿಣಮಿಸುತ್ತದೆ. ಇದರ ಹೊರತಾಗಿ, "ನಿಸರ್ಗದ ನಿಯಮ" ಎಂಬ ನುಡಿಗಟ್ಟು, ವ್ಯವಸ್ಥಿತ ಸಂಪ್ರದಾಯಗಳ ನೆಲೆಯಲ್ಲಿ ನೈಸರ್ಗಿಕವೆಂದು ಪರಿಗಣಿಸಲಾಗುವ ಸಂತಾನೋತ್ಪತ್ತಿ ಕ್ರಿಯೆಗೆ ಸೀಮಿತವಾಗಿದ್ದು, ಅದು ಹುಟ್ಟಿನಿಂದ ಬರುವ ಗುಣಗಳು ಅಥವಾ ಬೆಳವಣಿಗೆಯೊಂದಿಗೆ ಬಂದ ನಿಲುವುಗಳು ಮಾತ್ರವಲ್ಲದೇ, ವ್ಯಕ್ತಿಗಳು ತಮ್ಮ ದೇಹದಮೇಲೆ ತಮಗಿರುವ ಹಕ್ಕನ್ನು ಮುಕ್ತವಾಗಿ ಮತ್ತು ಬಗೆಬಗೆಯಾಗಿ ಚಲಾಯಿಸುವಾಗ ನಡೆಸುವ ಪರಸ್ಪರ ಒಪ್ಪಿಗೆಯ ಕ್ರಿಯೆಗಳನ್ನೂ ಗಣನೆಗೆ ತೆಗೆದುಕೊಳ್ಳುವುದಿಲ್ಲ. ಅಲ್ಲದೇ, ಇದರಿಂದ ವ್ಯಕ್ತಿತ್ವದ ಬೆಳವಣಿಗೆಗೆ, ಕೂಡಿಬಾಳುವ ಸಂಬಂಧಗಳ ಬೆಸೆಯುವಿಕೆಗೆ ಮತ್ತು ಸಮಾನಮನಸ್ಕರ ಜತೆಗೂಡುವಿಕೆಗೆ ಅವಕಾಶಗಳು ಮರೀಚಿಕೆಯಂತಾಗಿ, ಅತ್ಯಗತ್ಯವಾದ ಬಯಕೆಗಳನ್ನು ಹತ್ತಿಕ್ಕಿದಂತಾಗಿದ್ದು, ಇದು

ಸಂವಿಧಾನದ 19 ((1)(ಎ) ಕಲಮನ್ನು ಉಲ್ಲಂಘಿಸುತ್ತದೆ. ಜೊತೆಗೆ, ಅಮೇರಿಕೆಯ ಮನಃಶಾಸ್ತ್ರೀಯ ಸಂಘಟನೆಯು ಲೈಂಗಿಕ ನಿಲುವು ಎಂಬುದು ನೈಸರ್ಗಿಕ ಅವಸ್ಥೆ, ಒಂದೇ ಲಿಂಗದವರು ಮತ್ತು ಬೇರೆ ಲಿಂಗದವರೆಡೆಗೆ ಉಂಟಾಗುವ ಸೆಳೆತಗಳೆರಡೂ ನೈಸರ್ಗಿಕವಾಗಿ ಸಮಾನವಾಗಿದ್ದು, ಸಮಾನ ಲಿಂಗದವರೆಡೆಗಿನ ಸೆಳೆತ ಕಡಿಮೆ ಜನರಲ್ಲಿರುತ್ತದೆಯಷ್ಟೇ ಎಂದು ಅಭಿಪ್ರಾಯಪಟ್ಟಿರುವುದಾಗಿ ವಾದ ಮಾಡಲಾಗಿದೆ.

16. ಅರ್ಜಿದಾರರು, ಲೈಂಗಿಕ ನಿಲುವು ಎಂಬುದು ಪ್ರತೀ ವ್ಯಕ್ತಿಯ ಅಸ್ಮಿತೆಯೊಳಗಿನ ಅವಿಭಾಜ್ಯ ಅಂಗವಾಗಿರುವುದರಿಂದ, ಭಾರತದ ಜನಸಂಖ್ಯೆಯ 7 ರಿಂದ 8%ನಷ್ಟಿರುವ, ಸಮಾನಲಿಂಗಾಸಕ್ತ ಸ್ತ್ರೀ (ಲೆಸ್ಬಿಯನ್) ಪುರುಷರು (ಗೇ), ಉಭಯಲಿಂಗಾಸಕ್ತರು (ಬೈಸೆಕ್ಷುವಲ್) ಮತ್ತು ಲಿಂಗಪರಿವರ್ತಿತರು (ಟ್ರಾನ್ಸ್ ಜೆಂಡರ್), (ಎಲ್.ಜಿ.ಬಿ.ಟಿ) ಸಮುದಾಯದ ವ್ಯಕ್ತಿಗಳ ಹಕ್ಕುಗಳನ್ನು ಗುರುತಿಸಿ ಸಂರಕ್ಷಿಸಬೇಕೆಂದು ಒತ್ತಾಯಪಡಿಸಿದ್ದಾರೆ. ಈ ಸಮುದಾಯದ ಸದಸ್ಯರು "ವ್ಯಕ್ತಿ" ಎಂಬ ತತ್ವಕ್ಕೆ ಹೊರತಾಗಿಲ್ಲ ಮತ್ತು ಅವರ ವ್ಯಕ್ತಿತ್ವವನ್ನು ಕಳಂಕವೆಂದು ಕರೆಯಲು ಬರುವುದಿಲ್ಲ. ವ್ಯಕ್ತಿಗಳ ಲೈಂಗಿಕ ನಿಲುವುಗಳು ಅವರ ಖಾಸಗೀ ಬದುಕನ್ನು ಮಾತ್ರವಲ್ಲದೆ, ಅವರ ಸಾಂಸಾರಿಕ, ಔದ್ಯೋಗಿಕ ಮತ್ತು ಶೈಕ್ಷಣಿಕ ಬದುಕನ್ನು ಕೂಡ ಪ್ರಭಾವಿಸುತ್ತವೆ. ಅರ್ಜಿದಾರರ ಪ್ರಕಾರ, ಲೈಂಗಿಕ ಅಲ್ಪಸಂಖ್ಯಾತರಿಗೆ ಇತರರಿಗಿಂತ ಹೆಚ್ಚಿನ ಭದ್ರತೆಯ ಅಗತ್ಯವಿದ್ದು, ಅದರಿಂದ ಅವರು ತಮ್ಮ ಸಾಮರ್ಥ್ಯವನ್ನು ಸಂಪೂರ್ಣವಾಗಿ ಉಪಯೋಗಿಸಿಕೊಂಡು, ಹೆದರಿಕೆ, ಆತಂಕ ಮತ್ತು ಕಳವಳಗಳಿಲ್ಲದೆ ಬದುಕಲು ಸಾಧ್ಯವಾಗುತ್ತದೆ. ಅಲ್ಲದೆ, ಉದ್ಯೋಗ, ಸಂಗಾತಿಯ ಆಯ್ಕೆ, ಸಾಕ್ಷಿ ನುಡಿಯುವ ಹಕ್ಕು, ವಿಮೆ, ಚಿಕಿತ್ಸೆ ಮತ್ತು ಕೂಡಿಬಾಳುವಿಕೆಗೆ ಸಂಬಂಧಿಸಿದ ಹಕ್ಕುಗಳ ವಿಚಾರದಲ್ಲಿ ಸಮಾಜ ಮತ್ತು ಸರಕಾರದ ಕಡೆಯಿಂದ ನಡೆಯಬಹುದಾದ ಜಾಹೀರಾದ ಅಥವಾ ಗುಪ್ತವಾದ ಭೇದಭಾವದ ವಿರುದ್ಧ ರಕ್ಷಣೆ ದೊರಕುತ್ತದೆ. ಈ ನಿಟ್ಟಿನಲ್ಲಿ, ಇಂದಿರಾ ಸರ್ಮ v. v.ಕೆ.ವಿ ಸರ್ಮ[6] ಮೊಕದ್ದಮೆಯಲ್ಲಿ ಹಲಬಗೆಯ ಕೂಡಿಬಾಳುವ ಸಂಬಂಧಗಳಿಗೆ "ಗೃಹ ಹಿಂಸೆಯಿಂದ ಮಹಿಳೆಯರ ರಕ್ಷಣೆ ಕಾಯ್ದೆ, 2005"ರ ಅಡಿಯಲ್ಲಿ ದೊರೆತ ರಕ್ಷಣೆ ಸಮಲೈಂಗಿಕ ಸಂಬಂಧಗಳಿಗೂ ದೊರೆಯಬೇಕು.

17. ಅರ್ಹರಾದ ವಕೀಲರ ವಾದದ ಪ್ರಕಾರ 377ನೇ ಪರಿಚ್ಛೇದದಿಂದಾಗಿ, ಎಲ್.ಜಿ.ಬಿ.ಟಿ. ಗುಂಪಿನ ವ್ಯಕ್ತಿಗಳು ತಮ್ಮ ಬದುಕಿನುದ್ದಕ್ಕೂ ಮೇಲುಕೀಳು ಮತ್ತು ನಿಂದನೆಯನ್ನು ಅನುಭವಿಸುತ್ತಾರೆ. ಸದರಿ ಪರಿಚ್ಛೇದವು, ವಿಕ್ಟೋರಿಯನ್ ಯುಗದಲ್ಲಿ ಪ್ರಚಲಿತವಾಗಿದ್ದ ಲೈಂಗಿಕ ಚಟುವಟಿಕೆಗಳು ಸಂತಾನೋತ್ಪತ್ತಿಗಷ್ಟೇ ನಡೆಯಬೇಕು ಎಂಬ ಸಾಮಾಜಿಕ

[6] (2013) 15 SCC 755

ಮೌಲ್ಯದ ಪ್ರತಿನಿಧಿಯಾಗಿದೆ. ಸದರಿ ಸಮುದಾಯದವರು, ಸದಾಕಾಲ ಹೆದರಿಕೆಯಲ್ಲಿ ಬದುಕಬೇಕಾಗಿದ್ದು, ಅದು ಅವರ ಬೆಳವಣಿಗೆ ಪೂರಕವಾದುದಲ್ಲ. ಅವರುಗಳು ಕಾನೂನಿನಡಿಯಲ್ಲಿ ನರಳುವುದಷ್ಟೇ ಅಲ್ಲದೆ, ಸಂವಿಧಾನ ಕೊಡಮಾಡುವ ನಾಗರಿಕ ಹಕ್ಕುಗಳಿಂದಲೂ ವಂಚಿತರಾಗುತ್ತಾರೆ. ಕಾನೂನು ಅವರುಗಳನ್ನು ನೈಸರ್ಗಿಕ ಸಂತ್ರಸ್ತರಂತೆ ನಡೆಸಿಕೊಂಡು, ಸಮಾಜಕ್ಕೆ ಅವರುಗಳ ಪರಿಸ್ಥಿತಿ ಮತ್ತು ಅವರಿಗಾಗುವ ಹಿಂಸೆಯ ಅರಿವು ಮೂಡಿಸದೆ ಇರುವುದರಿಂದ, ಎಲ್.ಜಿ.ಬಿ.ಟಿ. ಸಮುದಾಯದವರಲ್ಲಿ ಪರಕೀಯತೆ ಮತ್ತು ಯಾರಿಗೂ ಬೇಡವಾದ ಭಾವನೆ ಮನೆಮಾಡಿದೆ. ಸಾಮಾಜಿಕ ಕಳಂಕ ಮತ್ತು ಬೆದರಿಕೆಯ ಭಯದಿಂದ ಉದ್ಭವಿಸುವ ಕಡ್ಡಾಯವಾದ ಪರಕೀಯತೆಯು ಸ್ವಾತಂತ್ರ್ಯವೆಂಬ ಮೂಲಭೂತ ಆದರ್ಶದ ಆಶಯಕ್ಕೆ ವಿರುದ್ಧವಾಗಿದೆ.

18. ಲಿಂಗಪರಿವರ್ತಿತರನ್ನು ಗಂಡು ಮತ್ತು ಹೆಣ್ಣಿಗೆ ಹೊರತಾದ ಮೂರನೇ ಲಿಂಗವಾಗಿ ಗುರುತಿಸಿ ಅವರುಗಳಿಗೆ ಕೆಲವು ಹಕ್ಕುಗಳನ್ನು ನೀಡಿದ ನಾಲ್ಸಾ ಪ್ರಕರಣದಲ್ಲಿ ಈ ನ್ಯಾಯಾಲಯ ನೀಡಿರುವ ತೀರ್ಪನ್ನು ಅರ್ಜಿದಾರರು ಉಲ್ಲೇಖಿಸಿರುತ್ತಾರೆ. ಈ ತೀರ್ಪಿನ ಹೊರತಾಗಿಯೂ, 377ನೇ ಪರಿಚ್ಛೇದದ ಮುಂದುವರಿಕೆಯಿಂದಾಗಿ, ಲಿಂಗಪರಿವರ್ತಿತರ ನಡುವೆ ನಡೆಯುವ ಒಪ್ಪಿಗೆಯ ಕ್ರಿಯೆಗಳು ಅಪರಾಧವಾಗಿಯೇ ಮುಂದುವರೆಯುತ್ತವೆ. ನಾಲ್ಸಾ ಪ್ರಕರಣದಿಂದ ಪ್ರೇರಿತರಾದ ಅರ್ಜಿದಾರರು, ಎಲ್.ಜಿ.ಬಿ.ಟಿ. ವ್ಯಕ್ತಿಗಳ ನಡುವಿನ ಲೈಂಗಿಕ ಕ್ರಿಯೆಗಳನ್ನು ಅಪರಾಧವೆಂದು ಪರಿಗಣಿಸುವುದರಿಂದ, ಆ ಸಮುದಾಯದ ವ್ಯಕ್ತಿಗಳು ತಮ್ಮ ಲೈಂಗಿಕತೆಯನ್ನು ಮುಕ್ತವಾಗಿ ವ್ಯಕ್ತಪಡಿಸಲು ಸಾಧ್ಯವಾಗದೇ, ಅವರು ತಮ್ಮ ಹಕ್ಕುಗಳನ್ನು ಸಂಪೂರ್ಣವಾಗಿ ಅನುಭವಿಸಲು ಸಾಧ್ಯವಾಗುವುದಿಲ್ಲ ಮತ್ತು ಅವರು ಅಪೂರ್ಣ ನಾಗರಿಕರಾಗಿ ಉಳಿಯುತ್ತಾರೆ. ಹೀಗಾಗಿ ಇಂತಹ ಅಪರಾಧೀಕರಣಕ್ಕೆ ವಿದಾಯ ಹೇಳಿ, ಎಲ್.ಜಿ.ಬಿ.ಟಿ. ಸಮುದಾಯದ ಹಕ್ಕುಗಳಿಗೂ, ಇತರರ ಹಕ್ಕುಗಳಿಗೆ ಸಿಕ್ಕಷ್ಟೇ ಸಾಂವಿಧಾನಿಕ ರಕ್ಷಣೆ ದೊರೆಯಬೇಕು ಎಂದು ಕೋರಿಕೊಂಡರು. ಈ ಪ್ರಕಾರವಾಗಿ ಅರ್ಜಿದಾರರು, ಐ.ಪಿ.ಸಿ ಯ 377ನೇ ಪರಿಚ್ಛೇದದ ವ್ಯಾಪ್ತಿಯಿಂದ ಎಲ್.ಜಿ.ಬಿ.ಟಿ ಸಮುದಾಯವನ್ನು ಮುಕ್ತಗೊಳಿಸಿ, ಸದರಿ ಪರಿಚ್ಛೇದವನ್ನು ಪ್ರಾಣಿಸಂಭೋಗ ಮತ್ತು ಒಪ್ಪಿಗೆಯಿಲ್ಲದ ಕ್ರಿಯೆಗಳಿಗಷ್ಟೇ ಸೀಮಿತಗೊಳಿಸಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಅಲ್ಲದೇ, ಅಪರಾಧ ಕಾಯ್ದೆ 2013 ಹಾಗು ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (ಪೋಕ್ಸೋ) ಕಾಯ್ದೆ, 2012 ರ ಜಾರಿಯಿಂದ ಲೈಂಗಿಕ ಅಪರಾಧಗಳ ವ್ಯಾಪ್ತಿಯೊಳಗೆ, ಲಿಂಗ-ಯೋನಿಯೊಳಗೊಂಡ ಲೈಂಗಿಕ ಹಲ್ಲೆಗಳು, ಮತ್ತು ಮಕ್ಕಳ ನಡುವೆ ನಡೆಯುವ ಒಪ್ಪಿಗೆಯಿರದ

ಲೈಂಗಿಕ ಕ್ರಿಯೆಗಳನ್ನು ಸೇರಿಸಿ, ಭಾರತದಲ್ಲಿನ ಲೈಂಗಿಕ ಹಿಂಸೆಯನ್ನು ತಡೆಗಟ್ಟುವ ಕಾನೂನಿನಲ್ಲಿದ್ದ ಕೊರತೆಗಳನ್ನು ನೀಗಿಸಿರುವ ಹಿನ್ನೆಯಲ್ಲಿ ತಮ್ಮ ಅಹವಾಲನ್ನು ಮನ್ನಿಸಬೇಕಾಗಿ ಕೋರಿಕೊಂಡರು.

19. ಅರ್ಜಿದಾರರು ಬಿನ್ನಹಮಾಡಿಕೊಂಡಿರುವಂತೆ, 377ನೇ ಪರಿಚ್ಛೇದವು ಪರಿಚ್ಛೇದವು ಸಂವಿಧಾನಪೂರ್ವ ಕಾಯ್ದೆ ಆಗಿದ್ದಾಗ್ಯೂ ಅದನ್ನು ಸಂವಿಧಾನ ಜಾರಿಯಾದ ನಂತರವೂ 372ನೇ ಕಲಮಿನ ದೆಸೆಯಿಂದ ಉಳಿಸಿಕೊಳ್ಳಲಾಯಿತು. ಇಲ್ಲಿ ಗಮನಿಸಬೇಕಿರುವ ವಿಷಯವೆಂದರೆ, ಸಂವಿಧಾತ್ಮಕತೆಯ ಪರಿಕಲ್ಪನೆಯ ಉದೇಶ, ಶಾಸನಗಳನ್ನು ವಿರೋಧಿಸುವ ಪ್ರಯತ್ನವನ್ನು ಮೊದಲ ಹಂತದಲ್ಲಿ ತಡೆಯುವುದಷ್ಟೇ ಆಗಿದ್ದು, ಅದರಿಂದ ಮೂಲಭೂತ ಹಕ್ಕುಗಳಿಗೆ ಚ್ಯುತಿಯುಂಟಾದಾಲ್ಲಿ ಅಥವಾ ಆ ಬಗ್ಗೆ ಸ್ಪಷ್ಟ ಅನುಮಾನವಿದ್ದಲ್ಲಿ, ಅಂತಹ ಪರಿಕಲ್ಪನೆಯ ಅಗತ್ಯವೇ ಇರುವುದಿಲ್ಲ. ಸದ್ಯದ ಪ್ರಕರಣದಲ್ಲಿ, ಅರ್ಜಿದಾರರು ತಮ್ಮ ಮೂಲಭೂತ ಹಕ್ಕುಗಳ ಹತ್ತಿಕ್ಕುವಿಕೆಯ ಸಮಸ್ಯೆ ಎದುರಿಸುತ್ತಿದ್ದು, ಈ ಉಲ್ಲಂಘನೆಯು ಅವರ ಇರುವಿಕೆಯ ಮೂಲಕ್ಕೇ ಕೊಡಲಿಪೆಟ್ಟಾಗಿ ಪರಿಣಮಿಸುತ್ತಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ. ಈ ಹಿನ್ನೆಲೆಯಲ್ಲಿ ಅವರುಗಳು ಬಹುಜನರ ಕಡೆಯಿಂದ ಅನುಭವಿಸಿದ ಮೇಲುಕೀಳು, ಅವರ ಘನತೆಯ ಮೇಲಾದ ಅತ್ಯಾಚಾರ ಮತ್ತು ಅವರ ಖಾಸಗೀತನದ ಹಕ್ಕಿನ ಅತಿಕ್ರಮಣಗಳು ಸಮಾಜದ ಪ್ರತಿ ಮೂಲೆಯಲ್ಲೂ ನಡೆಯುತ್ತಿರುವುದು ನಿಚ್ಚಳವಾಗಿ ಕಾಣಿಸುತ್ತಿದೆ.

20. ಅರ್ಜಿದಾರರು ವಾದಿಸುವಂತೆ, 377ನೇ ಪರಿಚ್ಛೇದವನ್ನು ಸದ್ಯದ ರೂಪದಲ್ಲಿ ಉಳಿಸಿಕೊಂಡರೆ, ಎಲ್.ಜಿ.ಬಿ.ಟಿ. ಸಮುದಾಯದವರಿಗೆ ಸಂಬಂಧಿಸಿದಂತೆ, ಒಂದೆರೆಡಲ್ಲದೆ, ಖಾಸಗೀತನ, ಘನತೆ, ಸಮಾನತೆ, ಸ್ವಾತಂತ್ರ್ಯ ಮತ್ತು ಮುಕ್ತ ಅಭಿವ್ಯಕ್ತಿಯ ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗುತ್ತದೆ. ಲೈಂಗಿಕ ಅಸ್ಮಿತೆಯ ಸಹಜವಾದ ಮುಂದುವರಿಕೆಯಾದ ಲೈಂಗಿಕ ನಿಲುವನ್ನು ಸಂವಿಧಾನದ 21ನೇ ಕಲಮಿನಡಿಯಲ್ಲಿ ರಕ್ಷಿಸಲಾಗಿದ್ದು, ಲೈಂಗಿಕ ನಿಲುವಿನ ನೆಪದಲ್ಲಿ, ಎಲ್.ಜಿ.ಬಿ.ಟಿ. ಸಮುದಾಯದ ಮೇಲೆ ನಡೆಯುವ ಯಾವುದೇ ಬಗೆಯ ತಾರತಮ್ಯವು, ಸಂವಿಧಾನದ ಕಟ್ಟಳೆಗಳಿಗೆ ವಿರುದ್ಧವಾಗಿರುತ್ತದೆ, ಹಾಗೆಯೇ, ಈ ಅಭಿಪ್ರಾಯಕ್ಕೆ ಇದೇ ನ್ಯಾಯಾಲಯವು ನಾಲ್ಸಾ ಪ್ರಕರಣದಲ್ಲಿ ಸಹಮತವನ್ನೂ ವ್ಯಕ್ತಪಡಿಸಿದೆ ಎಂದು ಅರ್ಜಿದಾರರು ವಾದಮಾಡಿರುತ್ತಾರೆ.

21. ಅರ್ಜಿದಾರರು, ಕೆ.ಎಸ್. ಪುಟ್ಟಸ್ವಾಮಿ (ಮೇಲ್ಕಂಡ) ಪ್ರಕರಣದಲ್ಲಿ ವ್ಯಕ್ತವಾದ ನಿಲುವಿನ ಆಧಾರದಲ್ಲಿ, ಲೈಂಗಿಕ ನಿಲುವು ಕೂಡ ಖಾಸಗೀತನದ ಮುಖ್ಯವಾದ ಲಕ್ಷಣ ಎಂದು ವಾದಿಸುತ್ತಾರೆ. ಹೀಗಾಗಿ ವ್ಯಕ್ತಿಯೊಬ್ಬರ ಲೈಂಗಿಕ ನಿಲುವು ಮತ್ತು

ಖಾಸಗೀತನದ ಹಕ್ಕುಗಳೆರೆಡನ್ನೂ ಕಾಪಾಡುವುದು ಜರೂರಾದ ವಿಷಯವಾಗಿದ್ದು, ಈ ಮೂಲಭುತ ಹಕ್ಕುಗಳಿಲ್ಲದಿರುವ ಪಕ್ಷದಲ್ಲಿ, ವ್ಯಕ್ತಿಗಳ ಅಸ್ಮಿತೆಯು ಬೆಲೆ ಕಳೆದುಕೊಂಡು, ಅವರ ಬದುಕಿನಲ್ಲಿ ಆತಂಕದ ನೆರಳಾವರಿಸಿ, ಅವರ ಇರುವಿಕೆಯು ಬದುಕಿರುವುದಕ್ಕೆ ಮಾತ್ರ ಸೀಮಿತವಾಗಿ ಬಿಡಬಹುದು. ಮುಂದುವರೆಯುತ್ತಾ, ಲೈಂಗಿಕ ನಿಲುವು ಹಾಗೂ ಹಾಗೂ ಖಾಸಗೀತನಗಳು ಸಂವಿಧಾನದ 14, 19 ಮತ್ತು 21ನೇ ಕಲಮಿನಡಿಯಲ್ಲಿ ಕೊಡಮಾಡಿರುವ ಮೂಲಭೂತ ಹಕ್ಕುಗಳ ಕೇಂದ್ರದಲ್ಲಿ ನೆಲೆಸಿದ್ದು, ಪುಟ್ಟಸ್ವಾಮಿ (ಮೇಲ್ಕಂಡ) ತೀರ್ಪಿನ ನೆಲೆಯಲ್ಲಿ 377ನೇ ಪರಿಚ್ಛೇದವನ್ನು ತೆಗೆದು ಹಾಕುವುದು ಅನಿವಾರ್ಯವಾಗಿದೆ ಎಂದು ವಾದ ಮಾಡಲಾಗಿದೆ. ಇದಲ್ಲದೇ, ಖಾಸಗೀತನದ ವ್ಯಾಪ್ತಿಯಲ್ಲಿ, ಎಲ್.ಜಿ.ಬಿ.ಟಿ. ವ್ಯಕ್ತಿಗಳೂ ಸೇರಿದಂತೆ ಎಲ್ಲ ಜನರೂ, ತಾವು ಮಾಡುವ ಆಯ್ಕೆಗಳು ಅಥವಾ ಬದುಕುವ ರೀತಿಗೆ ಸಾಮಾಜದ ನಿಂದನೆ ಮತ್ತು ಬಹಿಷ್ಕಾರಗಳಿಗೆ ಒಳಗಾಗುವ ಭಯವಿಲ್ಲದೆ ತಮಗೆ ಸರಿಯೆನಿಸಿದ ನಿರ್ಧಾರಗಳನ್ನು ಕೈಗೊಳ್ಳುವ ಹಕ್ಕನ್ನೂ ಒಳಗೊಳ್ಳಬೇಕು ಎಂದು ವಾದಿಸಲಾಗಿದೆ.

22. ಲೈಂಗಿಕ ನಿಲುವೆಂಬುದು, ಅತ್ಯಮೂಲ್ಯ ಅಧಿಕಾರವೆಂದು ಕರೆಯಲ್ಪಡುವ ಖಾಸಗೀತನದ ಹಕ್ಕಿನ ಮುಖ್ಯವಾದ ಭಾಗವೆಂದು ಅರ್ಜಿದಾರರ ಪರವಾಗಿ ಉಗ್ರವಾಗಿ ಪ್ರತಿಪಾದಿಸಿರುವ ಪ್ರತಿಭಾನ್ವಿತರಾದ ವಕೀಲರು, ಲೈಂಗಿಕ ಸ್ವಾಯತ್ತತೆ ಮತ್ತು ತಮಗಿಷ್ಟವಾದ ಸಂಗಾತಿಯನ್ನು ಆರಿಸಿಕೊಳ್ಳುವ ಹಕ್ಕುಗಳು, ಬದುಕಿನ ಹಕ್ಕು ಮತ್ತು ಸ್ವಾಯುತ್ತೆಯ ಹಕ್ಕಿನ ಅವಿಭಾಜ್ಯ ಅಂಗವೆಂದು ಧೃಡವಾಗಿ ಪ್ರತಿಪಾದಿಸಿರುತ್ತಾರೆ. ತಮ್ಮ ಅಭಿಪ್ರಾಯವನ್ನು ಬಲಪಡಿಸಲು ಅರ್ಜಿದಾರರು, ವ್ಯಕ್ತಿಯೊಬ್ಬರು ಸಂಗಾತಿಯನ್ನು ಆರಿಸಿಕೊಳ್ಳುವಾಗ ತಮ್ಮ ಆಯ್ಕೆಯ ಹಕ್ಕನ್ನು ಚಲಾಯಿಸುವುದು ಅವರ ಘನತೆಯ ಲಕ್ಷಣ, ಹಾಗಾಗಿ, ಆ ಆಯ್ಕೆಗೆ ಸಂವಿಧಾನದ 19 ಮತ್ತು 21ನೇ ಕಲಮುಗಳ ರಕ್ಷೆಯಿದೆ ಎಂದು ಸ್ಪಷ್ಟವಾಗಿ ಸಾರಲಾಗಿರುವ ಶಕ್ತಿ ವಾಹಿನಿ v. ಭಾರತ ಸರ್ಕಾರ[7] ಮತ್ತು ಇತರರು, ಹಾಗೂ, ಶಫೀನ್ ಜಹಾನ್ v. ಅಶೋಕನ್ ಕೆ.ಎಂ.[8] ತೀರ್ಪುಗಳನ್ನು ಆಧಾರವಾಗಿಟ್ಟುಕೊಂಡಿದ್ದಾರೆ.

23. ಅರ್ಜಿದಾರರ ಪ್ರಕಾರ ಅಂತರ್ಧರ್ಮೀಯ ಮತ್ತು ಅಂತರ್ಜಾತೀಯ ವಿವಾಹವಾಗಿ ಸಾಮಾಜಿಕ ಕಟ್ಟುಪಾಡುಗಳನ್ನು ಮುರಿಯುವವರಿಗೂ,  ತಮ್ಮದೇ ಲಿಂಗದ ಸಂಗಾತಿಯನ್ನು ಆಯ್ದುಕೊಳ್ಳುವವರಿಗೂ ಯಾವುದೇ ವ್ಯತ್ಯಾಸವಿಲ್ಲ. ಒಂದೊಮ್ಮೆ ಸಮಾಜ  ಅಂತರ್ಧರ್ಮೀಯ ಮತ್ತು ಅಂತರ್ಜಾತೀಯ ವಿವಾಹಗಳನ್ನು ಒಪ್ಪಿಕೊಳ್ಳದಿದ್ದರೂ ಈ

---

[7] (2018) 7 SCC 192

[8] AIR 2018 SC 1933 : 2018 (5) SCALE 422

ನ್ಯಾಯಾಲಯ ಸಾಂವಿಧಾನಿಕ ಹಕ್ಕುಗಳನ್ನು ಜಾರಿಗೊಳಿಸುತ್ತದೆ. ಇದೇ ಪ್ರಕಾರ, ಅರ್ಜಿದಾರರು ಹೇಳುವಂತೆ, ಬಹುಸಂಖ್ಯಾತರು ಎಲ್.ಜಿ.ಬಿ.ಟಿ. ವ್ಯಕ್ತಿಗಳ ಲೈಂಗಿಕ ನಿಲುವು ಮತ್ತು ಆಯ್ಕೆಗಳನ್ನು ಒಪ್ಪಿಕೊಳ್ಳದಿದ್ದರೂ ಸಾಂವಿಧಾನಿಕ ಹಕ್ಕುಗಳ ವಿಚಾರದಲ್ಲಿ ಕೊನೆಯ ನಿರ್ಧಾರದ ಅಧಿಕಾರವಿರುವ ನ್ಯಾಯಾಲಯವು, ಸಾಮಾಜಿಕ ನೈತಿಕತೆಯನ್ನು ಗಣನೆಗೆ ತೆಗೆದುಕೊಳ್ಳದೇ, ಸಾಂವಿಧಾನಿಕ ನೈತಿಕತೆಯನ್ನು ಎತ್ತಿಹಿಡಿಯಬೇಕು. ಈ ಮೂಲ ನಿಯಮದ ವಿಚಾರವನ್ನು ಈ ನ್ಯಾಯಾಲಯವು ಹಲವು ಪ್ರಕರಣಗಳಲ್ಲಿ ಪ್ರಸ್ತಾಪಿಸಿದ್ದು, ಅದರಲ್ಲಿ ಮನೋಜ್ ನರೂಲ v. ಭಾರತ ಸರ್ಕಾರ[9] ಪ್ರಕರಣವೂ ಸೇರಿಕೊಂಡಿದೆ. ನಾಜ್ ಪ್ರತಿಷ್ಠಾನ (ಮೇಲ್ಕಂಡ) ಪ್ರಕರಣದಲ್ಲಿ ದೆಹಲಿ ಉಚ್ಚನ್ಯಾಯಾಲಯವು ಸಾಂವಿಧಾನಿಕ ನೈತಿಕತೆಯ ಪರಿಕಲ್ಪನೆಯನ್ನು ಉಲ್ಲೇಖಿಸಿ, ವಿಶ್ಲೇಷಿಸಿ ಕಡೆಯದಾಗಿ 377ನೇ ಪರಿಚ್ಛೇದವನ್ನು ರದ್ದುಪಡಿಸಿ, ಸಮಲೈಂಗಿಕ ಮತ್ತು ಭಿನ್ನಲೈಂಗಿಕ ವ್ಯಕ್ತಿಗಳು ನಡೆಸುವ ಒಪ್ಪಿಗೆಯ ಶಾರೀರಿಕ ಸಂಭೋಗ ಅಪರಾಧವಲ್ಲವೆಂದು ಸ್ಪಷ್ಟವಾಗಿ ನುಡಿದಿತ್ತು.

24. ಅರ್ಜಿದಾರರ ಪ್ರಕಾರ, ತಮ್ಮದೇ ಲಿಂಗದ ಸಂಗಾತಿಯನ್ನು ಆರಿಸಿಕೊಂಡ ಮಾತ್ರಕ್ಕೆ ಎಲ್.ಜಿ.ಬಿ.ಟಿ.ಗಳಿಗೆ ಸಜೆ ನೀಡಲು ಬರುವುದಿಲ್ಲ, ಏಕೆಂದರೆ ಸಂವಿಧಾನ ಕೊಡಮಾಡುವ ಸಂಗಾತಿಯ ಆಯ್ಕೆಯ ಅಧಿಕಾರ ಎಲ್.ಜಿ.ಬಿ.ಟಿ. ವ್ಯಕ್ತಿಗಳಿಗೂ ಅನ್ವಯಿಸುತ್ತದೆ. ಅರ್ಜಿದಾರರೂ ಮತ್ತು ಅವರನ್ನು ಬೆಂಬಲಿಸುವ ಮಧ್ಯಸ್ಥಿಕೆದಾರರನ್ನು ಪ್ರತಿನಿಧಿಸುತ್ತಿರುವ ಪ್ರತಿಭಾನ್ವಿತ ವಕೀಲರು ವ್ಯಕ್ತಿಗತ ಅಸ್ಮಿತೆಯ ಅವಿಭಾಜ್ಯ ಅಂಗವಾಗಿರುವ ಲೈಂಗಿಕ ನಿಲುವನ್ನು ಘನತೆಯ ಹಕ್ಕಿನಡಿಯಲ್ಲಿ ರಕ್ಷಿಸಲಾಗಿದೆ ಎಂದು ಆರಿಕೆ ಮಾಡಿಕೊಂಡಿರುತ್ತಾರೆ. ತಮ್ಮ ವಾದವನ್ನು ಪುಷ್ಟೀಕರಿಸುವ ಸಲುವಾಗಿ ಅವರುಗಳು ಫ್ರಾನ್ಸಿಸ್ ಕೊರಾಲೀ ಮಲ್ಲಿನ್ v. ಆಡಳಿತಗಾರ, ದೆಹಲಿ ಕೇಂದ್ರಾಡಳಿತ ಪ್ರದೇಶ ಮತ್ತು ಇತರರು[10] ಪ್ರಕರಣ ಮತ್ತು ಕಾಮನ್ ಕಾಸ್ (ಏ ರಿಜಿಸ್ಟರ್ಡ್ ಸೊಸೈಟಿ) v. ಭಾರತ ಸರ್ಕಾರ ಮತ್ತೊಬ್ಬರು[11] ಪ್ರಕರಣವನ್ನು ಅವಲಂಬಿಸುತ್ತಾರೆ. ಈ ಪ್ರಕರಣಗಳಲ್ಲಿ, 21ನೇ ಕಲಮಿನಡಿಯಲ್ಲಿ ಪ್ರತಿಪಾದಿಸಲಾಗಿರುವ ಬದುಕಿನ ಮತ್ತು ಸ್ವಾತಂತ್ರ್ಯದ ಹಕ್ಕುಗಳು, ತಮ್ಮ ವಲಯದಲ್ಲಿ ವೈಯಕ್ತಿಕ ಘನತೆಯನ್ನು ಒಳಗೊಂಡು, ಘನತೆಯ ಹಕ್ಕು, ತನ್ನೊಳಗೆ, ಮಾನವೀಯ ಮುಖದ ಅರ್ಥಪೂರ್ಣ ಅಭಿವ್ಯಕ್ತಿಗೆ ಅನುವುಮಾಡಿಕೊಡುವ, ಚಟುವಟಿಕೆಗಳು ಮತ್ತು

[9] (2014) 9 SCC 1

[10] (1981) 1 SCC 608

[11] (2018) 5 SCC 1

ಕಾರ್ಯಕ್ರಮಗಳನ್ನು ನಡೆಸುವ ಹಕ್ಕನ್ನು ಒಳಗೊಂಡಿರದಿದ್ದರೆ ಆ ಹಕ್ಕುಗಳು ಅರ್ಥಕಳೆದುಕೊಳ್ಳುತ್ತವೆ ಎಂದು ಮನಗಾಣಲಾಗಿತ್ತು,

25. 377ನೇ ಪರಿಚ್ಛೇದವು, ನಮ್ಮ ಸಂವಿಧಾನದ ಪ್ರಸ್ತಾವನೆಯಲ್ಲಿ ಅಡಕಗೊಳಿಸಲಾಗಿರುವ ಭ್ರಾತೃತ್ವದ ಪರಿಕಲ್ಪನೆಗೆ ವಿರುದ್ಧವಾಗಿದ್ದು, ಭಾರತೀಯ ಸಂವಿಧಾನವು, ನಾಗರಿಕರ ನಡುವೆ ನಾವು ಸೋದರತ್ವವನ್ನು ಉತ್ತೇಜಿಸಬೇಕೆಂಬುದನ್ನು ಕಡ್ಡಾಯಗೊಳಿಸಿದೆ, ಏಕೆಂದರೆ, ಭ್ರಾತೃತ್ವವಿಲ್ಲದೇ ಹೋದರೇ, ಒಳಗೊಳ್ಳುವಿಕೆ ದೂರದ ಕನಸಾಗಿರುತ್ತದೆ.

26. ನಿಸರ್ಗದ ನಿಯಮದ ವಿರುದ್ಧ ದೈಹಿಕ ಸಂಭೋಗವನ್ನು ಪರಿಚ್ಛೇದವಾಗಲೀ, ಐ.ಪಿ.ಸಿ.ಯಾಗಲೀ ಅಥವಾ ಹಾಗೆ ನೋಡಿದರೆ, ಬೇರಾವುದೇ ಕಾನೂನಾಗಲೀ ವ್ಯಾಖ್ಯಾನಿಸಿಲ್ಲದಿರುವ ಹಿನ್ನೆಲೆಯಲ್ಲಿ ಅಸ್ಪಷ್ಟವಾಗಿರುವ 377ನೇ ಪರಿಚ್ಛೇದವು ಸಂವಿಧಾನದ 14ನೆ ಕಲಮನ್ನು ಉಲ್ಲಂಘಿಸಿದೆ ಎಂದು ಅರ್ಜಿದಾರರು ವಾದಿಸುತ್ತಾರೆ. ಅರ್ಜಿದಾರರ ಪ್ರಕಾರ, ಕೃತ್ಯವೊಂದು ಒಪ್ಪಿಗೆಯ ಮೇರೆಗೆ ನಡೆದಾಗ, ನೈಸರ್ಗಿಕ ಮತ್ತು ಅನೈಸರ್ಗಿಕ ಲೈಂಗಿಕತೆಯ ನಡುವೆ ಯಾವುದೇ ಬಗೆಯ ಅರ್ಥವಾಗಬಲ್ಲ ಭಿನ್ನತೆ ಅಥವಾ ಸಮಂಜಸವಾದ ವರ್ಗೀಕರಣವಿರುವುದಿಲ್ಲ ಮತ್ತು ಇದಕ್ಕೆ ಜಾರಿಯಾಗುವ ಸಮಯದಲ್ಲಿ ಸಮಂಜಸವೆನಿಸಿರಬಹುದಾದ ವರ್ಗೀಕರಣವು, ಬದಲಾಗುತ್ತಿರುವ ಸಮಾಜಿಕ ನಿಲುವುಗಳ ಹಿನ್ನೆಲೆಯಲ್ಲಿ ಮಾನ್ಯವಾಗದಿರಬಹುದು ಎಂಬ ಸಿಧ್ಧಾಂತವನ್ನು ರೂಪಿಸಿದ ಅನುಜ್ ಗರ್ಗ್ ಮತ್ತು ಇತರರು v. ಹೋಟೆಲ್ ಅಸೋಸಿಯೇಷನ್ ಆಫ್ ಇಂಡಿಯಾ ಮತ್ತು ಇತರರು[12] ಪ್ರಕರಣದಲ್ಲಿ ಈ ನ್ಯಾಯಾಲಯದ ಮಂಡಿಸಿದ ತೀರ್ಪೇ ಆಧಾರವಾಗಿದೆ.

27. ಅರ್ಜಿದಾರರು ವಾದಿಸಿರುವಂತೆ, 377ನೇ ಪರಿಚ್ಛೇದವು, ಸ್ಪಷ್ಟವಾಗಿ ನಿರಂಕುಶ ಮತ್ತು ಅತಿರೇಕದ್ದಾಗಿದೆ. ಈ ವಿಚಾರವನ್ನು ವಿಷದಪಡಿಸುವ ಸಲುವಾಗಿ, ಶಾಯರಾ ಬಾನೋ v. ಭಾರತ ಸರ್ಕಾರ ಮತ್ತು ಇತರರು[13] ಪ್ರಕರಣದ ಸಿಧ್ಧಾಂತಗಳಿಂದ ಅಪಾರವಾದ ಸ್ಫೂರ್ತಿಯನ್ನು ಪಡೆಯಲಾಗಿದೆ. ಈ ಮೂಲಕ, ಒಪ್ಪಿಗೆಯ ಸಂಬಂಧವನ್ನು ಅದು ನಿಸರ್ಗದ ನಿಯಮಕ್ಕೆ ವಿರುದ್ಧವಾಗಿದೆ ಎಂದು ಅಪರಾಧೀಕರಿಸುವುದು ಸ್ಪಷ್ಟವಾದ ನಿರಂಕುಶತ್ವದಿಂದ ನರಳುತ್ತಿದೆ ಎಂದು ವಾದಿಸಲಾಯಿತು.

---

[12] (2008) 3 SCC 1

[13] (2017) 9 SCC 1

28. 377ನೇ ಪರಿಚ್ಛೇದದೊಳಗೆ, ವ್ಯಕ್ತಿಯ ಲೈಂಗಿಕ ಸಂಗಾತಿಯ ಲಿಂಗವನ್ನಾಧರಿಸಿದ ತಾರತಮ್ಯ ಅಡಕವಾಗಿರುವುದರಿಂದ ಅದು ಸಂವಿಧಾನದ 15ನೇ ಕಲಮನ್ನು ಉಲ್ಲಂಘಿಸುತ್ತದೆ ಎಂಬುದು ಅರ್ಜಿದಾರರ ವಿಚಾರವಾಗಿದೆ ಏಕೆಂದರೆ, 376ನೇ(ಸಿ) ರಿಂದ (ಇ) ಪರಿಚ್ಛೇದದಡಿಯಲ್ಲಿ ಒಬ್ಬ ವ್ಯಕ್ತಿ ವಿರುದ್ಧ ಲೈಂಗಿಕ ಸಂಗಾತಿಯೊಂದಿಗೆ ಆಕೆಯ ಒಪ್ಪಿಗೆಯಿಲ್ಲದೆ ಮಾಡಿದ ಕೃತ್ಯಗಳಿಗಾಗಿ ಕಾನೂನು ಕ್ರಮಕ್ಕೊಳಗಾಗಬಹುದು, ಆದರೆ, ಅದೇ ಕೃತ್ಯವನ್ನು ತನ್ನದೇ ಲಿಂಗದ ಸಂಗಾತಿಯೊಂದಿಗೆ ಒಪ್ಪಿಗೇ ಪಡೆದೇ ಮಾಡಿದರೆ ಅದನ್ನು ಅಪರಾಧೀಕರಿಸಲಾಗುತ್ತದೆ. ಅರ್ಜಿದಾರರು 15ನೇ ಕಲಮಿನಲ್ಲಿ ಕಾಣಸಿಗುವ "ಲೈಂಗಿಕ" ಎಂಬ ಪದವು, ಲೈಂಗಿಕ ನಿಲುವನ್ನು ಕೂಡಾ ಒಳಗೊಂಡದೆ ಎಂದು ಗಮನಿಸಿದ ಕ್ರಿಮಿನಲ್ ಕಾನೂನಿನ ತಿದ್ದುಪಡಿಗಳ ಬಗೆಗಿನ ನ್ಯಾಯಮೂರ್ತಿ ಜೆಎಸ್ ವರ್ಮಾ ಸಮಿತಿಯ ವರದಿಯತ್ತ ಈ ನ್ಯಾಯಾಲಯದ ಗಮನ ಸೆಳೆಯುತ್ತಾರೆ. ಈ ಹಿನ್ನೆಲೆಯಲ್ಲಿ, ಅರ್ಜಿದಾರರ ಪ್ರಕಾರ, 377ನೇ ಪರಿಚ್ಛೇದವು ಸಂವಿಧಾನದ 15ನೇ ಕಲಮನ್ನು ಕೂಡಾ ಉಲ್ಲಂಘಿಸುತ್ತದ.

29. 377ನೇ ಪರಿಚ್ಛೇದವು, ಇತರರು ಮತ್ತು ಎಲ್.ಜಿ.ಬಿ.ಟಿ ವ್ಯಕ್ತಿಗಳು ತಮ್ಮ ಲೈಂಗಿಕ ಗುರುತನ್ನು ಮತ್ತು ದೃಷ್ಟಿಕೋನವನ್ನು ಮಾತು, ಪ್ರಣಯ/ಲೈಂಗಿಕ ಸಂಗಾತಿಯ ಆಯ್ಕೆ, ಪ್ರಣಯ/ಲೈಂಗಿಕ ಬಯಕೆಯ ಅಭಿವ್ಯಕ್ತಿ, ಸಂಬಂಧಗಳ ಅಂಗೀಕಾರ ಅಥವಾ ಯಾವುದೇ ಇತರ ವಿಧಾನಗಳ ಮೂಲಕ ವ್ಯಕ್ತವಾಗುವ ಮುಕ್ತ ಅಭಿವ್ಯಕ್ತಿಯ ಮೂಲಭೂತ ಹಕ್ಕನ್ನು ರಕ್ಷಿಸುವ ಸಂವಿಧಾನದ ರಕ್ಷಿಸುವ 19ನೇ(1)(ಎ) ಕಲಮಿನ ಮೇಲೆ ಪ್ರತಿಕೂಲ ಪರಿಣಾಮಬೀರುತ್ತದೆ , ಮತ್ತು ಒಂದು ಬಗೆಯ ಅಸಮಂಜಸವಾದ ವಿನಾಯಿತಿಯನ್ನು ರೂಪಿಸುವ 377ನೇ ಪರಿಚ್ಛೇದವನ್ನು, ಆ ಕಾರಣ ಸಂವಿಧಾನದ ಕಲಮು 19 (2) ರಲ್ಲಿ ಒಳಗೊಳ್ಳಲಾಗುವುದಿಲ್ಲ ಎಂದು ಧೃಡವಾಗಿ ವಾದಿಸಲಾಯಿತು. ಈ ನಿಲುವನ್ನು ಬೆಂಬಲಿಸಲು, ಎಸ್. ಖುಷ್ಬೂ v. ಕಣ್ಣಿಯಮ್ಮಾಳ್ ಮತ್ತು ಇನ್ನಿತರರು[14] ಪ್ರಕರಣದ ತೀರ್ಪನ್ನು ಅವಲಂಬಿಸಲಾಯಿತು. ಈ ಪ್ರಕರಣದಲ್ಲಿ, ಕಾನೂನೊಂದನ್ನು ಮಾತು ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಪ್ರತಿಕೂಲ ಪರಿಣಾಮವ ಉಂಟುಮಾಡುವ ರೀತಿಯಲ್ಲಿ ಬಳಸಬಾರದು ಎಂದು ನಿರ್ಧರಿಸಲಾಗಿತ್ತು. ಹೆಚ್ಚುವರಿಯಾಗಿ, ನಾಲ್ಸಾ ಪ್ರಕರಣದಲ್ಲಿ ವ್ಯಕ್ತವಾದ ದೃಷ್ಟಿಕೋನವನ್ನು ಕೂಡಾ ಸಮರ್ಥವಾಗಿ ಬಳಸಿಕೊಂಡು, ಆ ನಿರ್ಧಾರವು, ಸ್ಪಷ್ಟವಾಗಿ 19(1)(ಎ) ಕಲಮಿನಡಿಯಲ್ಲಿರುವ ಹಕ್ಕು ಅವನ/ಅವಳ ತಾವೇ-

[14] (2010) 5 SCC 600

ಗುರುತಿಸಲ್ಪಟ್ಟ ಲೈಂಗಿಕತೆಯನ್ನು ಪದಗಳು, ಕ್ರಿಯೆ, ವರ್ತನೆ ಅಥವಾ ಇತರ ಯಾವುದೇ ಬಗೆಯಲ್ಲಿ ವ್ಯಕ್ತಪಡಿಸುವ ಹಕ್ಕನ್ನೂ ಒಳಗೊಂಡಿದೆ ಎಂದು ಸ್ಪಷ್ಟಪಡಿಸಲಾಯಿತು.

30. 377ನೇ ಪರಿಚ್ಛೇದವು, 197(1)(ಸಿ) ಕಲಮಿನಡಿಯಲ್ಲಿರುವ ಎಲ್.ಜಿ.ಬಿ.ಟಿ ವ್ಯಕ್ತಿಗಳ ಹಕ್ಕುಗಳನ್ನು ಉಲ್ಲಂಘಿಸುತ್ತದೆ ಮತ್ತು ಅವರು ಸಂಘಟನೆಗಳನ್ನು ರೂಪಿಸುವ ಹಕ್ಕನ್ನೂ ನಿರಾಕರಿಸುತ್ತದೆ ಎಂದು ಅರ್ಜಿದಾರರು ವಾದಿಸಿದ್ದಾರೆ. ಅಂತೆಯೇ, ಅಂತಹ ವ್ಯಕ್ತಿಗಳು ಕಾನೂನು ಕ್ರಮ ಮತ್ತು ಸಾಮಾಜಿಕ ಕಳಂಕದ ಭೀತಿಯಿಂದಾಗಿ ಲೈಂಗಿಕ ಅಲ್ಪಸಂಖ್ಯಾತರಿಗೆ ಲಾಭಗಳನ್ನು ಒದಗಿಸುವ ಸಲುವಾಗಿ ಕಂಪನಿಗಳನ್ನು ನೋಂದಾಯಿಸಲು ಹಿಂಜರಿಯುತ್ತಾರೆ. ಇದಲ್ಲದೆ, ಸೆಕ್ಷನ್ 377 ರ ಅಡಿಯಲ್ಲಿ ಒಮ್ಮೆ ಶಿಕ್ಷೆಗೊಳಗಾದರೆ, ಅಂತಹ ವ್ಯಕ್ತಿಗಳು ಕಂಪೆನಿಯ ನಿರ್ದೇಶಕರಾಗಿ ನೇಮಕಗೊಳ್ಳಲು ಅನರ್ಹರಾಗುತ್ತಾರೆ.

31. ಐ.ಪಿ.ಸಿ. 377ನೇ ಪರಿಚ್ಛೇದ, ಕ್ರಿಮಿನಲ್ ಅಪರಾಧದ ಕಳಂಕವನ್ನು ಸೃಷ್ಟಿಸುವ ಮೂಲಕ, ಎಲ್.ಜಿ.ಬಿ.ಟಿ ವ್ಯಕ್ತಿಗಳ ಮರ್ಯಾದೆಯ ಹಕ್ಕನ್ನು ಕಸಿದುಕೊಳ್ಳುತ್ತದೆ ಮತ್ತು ಅದು ಈ ಮೂಲಕ ಗಮನಿಸಿದಂತೆ ಸಂವಿಧಾನದ 21 ನೇ ಕಲಮಿನ ಅಡಿಯಲ್ಲಿ ನಾಗರಿಕನ ಜೀವನ ಮತ್ತು ಸ್ವಾತಂತ್ರ್ಯದ ಹಕ್ಕಿನ ಭಾಗವಾಗಿದೆ ಎಂಬುದನ್ನು **ಕಿಶೋರ್ ಸಮ್ರೈಟ್ v. ಉತ್ತರ ಪ್ರದೇಶ ಸರ್ಕಾರ**[15] ಮತ್ತು **ಉಮೇಶ್ ಕುಮಾರ್ v. ಆಂಧ್ರಪ್ರದೇಶದ ರಾಜ್ಯ ಮತ್ತು ಇತರರು**[16] ಪ್ರಕರಣಗಳಲ್ಲಿ ಈ ನ್ಯಾಯಾಲಯವು ಗಮನಿಸಿತು. ಅಲ್ಲದೆ ಅವೇ ಪ್ರಕರಣಗಳಲ್ಲಿ, ಮರ್ಯಾದೆ ಎಂಬುದು ವೈಯಕ್ತಿಕ ಭದ್ರತೆಯ ಒಂದು ಅಂಶವಾಗಿದ್ದೂ ಅದನ್ನು ಮತ್ತು ಜೀವನ ಮತ್ತು ಸ್ವಾತಂತ್ರ್ಯವನ್ನು ಆನಂದಿಸುವ ಹಕ್ಕಿನೊಂದಿಗೆ ಸಂವಿಧಾನ ರಕ್ಷಿಸುತ್ತದೆ ಎಂದು ಗಮನಿಸಲಾಯಿತು. ಅರ್ಜಿದಾರರ ಪ್ರಕಾರ, ಐ.ಪಿ.ಸಿ.ಯ 377ನೇ ಪರಿಚ್ಛೇದವು, ಎಲ್.ಜಿ.ಬಿ.ಟಿ ವ್ಯಕ್ತಿಗಳು ತಮ್ಮ ಲೈಂಗಿಕ ನಿಲುವಿನ ಬಗ್ಗೆ ಬಹಿರಂಗವಾಗಿ ಮಾತನಾಡುವಾಗ ಆತಂಕವನ್ನುಂಟುಮಾಡುತ್ತದೆ ಮತ್ತು ಅವರನ್ನು ಸುಲಿಗೆ, ಬೆದರಿಕೆ ಮತ್ತು ಅವರಿಗೆ ದಕ್ಕಬೇಕಾದ ಇತರ ಹಕ್ಕುಗಳನ್ನು ರಕ್ಷಿಸಲು ಸರ್ಕಾರಿ ವ್ಯವಸ್ಥೆಗಳ ಸಹಾಯಗಳ ನಿರಾಕರಣೆಯಂತಹ ಅಪಾಯಗಳಿಗೆ ಒಡ್ಡುತ್ತದೆ ಮತ್ತು ಕೆಲವು ಸಂದರ್ಭಗಳಲ್ಲಿ, ಇತರ ಸಹಕಾರೀ ಹಕ್ಕುಗಳು ಕೂಡ ಬಾಧಿಸಲ್ಪಡುತ್ತವೆಯಾದ್ದರಿಂದ, ಎಲ್.ಜಿ.ಬಿ.ಟಿ ವ್ಯಕ್ತಿಗಳ ಮೇಲ್ಕಂಡ ಹಕ್ಕನ್ನು ಕಸಿದುಕೊಳ್ಳುತ್ತದೆ.

---

[15] (2013) 2 SCC 398

[16] (2013) 10 SCC 591

32. ಅರ್ಜಿದಾರರು ತಮ್ಮ ವಾದವನ್ನು ಮುಂದುವರೆಸುತ್ತಾ, ಐ.ಪಿ.ಸಿ.ಯ 377ನೇ ಪರಿಚ್ಛೇದವು, ಎಲ್.ಜಿ.ಬಿ.ಟಿಗಳು ಆಶ್ರಯ ಪಡೆಯುವ ತಮ್ಮ ಸಾಂವಿಧಾನಿಕವಾಗಿ ಖಚಿತಗೊಳಿಸಲ್ಪಟ್ಟಿರುವ ಹಕ್ಕನ್ನು ಅನುಭವಿಸಲು ಸಾಧ್ಯವಾಗುವುದನ್ನು ತಡೆಗಟ್ಟುತ್ತದೆ ಎಂದು ವಾದಿಸಿದರು. ಅದನ್ನು ವಿವರಿಸಲು, ಎಲ್ಜಿಬಿಟಿ ವ್ಯಕ್ತಿಗಳು ಸುರಕ್ಷಿತ ಮತ್ತು ಸೂಕ್ತವಾದ ಆಶ್ರಯವನ್ನು ಪಡೆಯುವ ಸಲುವಾಗಿ ಗೇ ಹೌಸಿಂಗ್ ಅಸಿಸ್ಟೆನ್ಸ್ ರೀಸೋರ್ಸಸ್ ನಂತಹ (ಜಿ.ಹೆಚ್.ಎ.ಆರ್) ನಂತಹ ಖಾಸಗೀ ಸಂಪನ್ಮೂಲಗಳ ಸಹಾಯವನ್ನು ಪಡೆಯುತ್ತಾರೆ ಮತ್ತು ಇದು ಈ ಸಮುದಾಯಕ್ಕೆ ತಕ್ಷಣದ ಕಾಳಜಿ ಮತ್ತು ಸರ್ಕಾರದ ರಕ್ಷಣೆಯ ಅಗತ್ಯವಿದೆ ಎಂಬುದನ್ನು ಸೂಚಿಸುತ್ತದೆ ಎಂಬುದರೆಡೆಗೆ ಅರ್ಜಿದಾರರು ನ್ಯಾಯಾಲಯದ ಗಮನವನ್ನು ಸೆಳೆಯುತ್ತಾರೆ.

33. ಅರ್ಜಿದಾರರ ಪ್ರಕಾರ, ಸುರೇಶ್ ಕೌಶಲ್ (ಮೇಲ್ಕಂಡ) ತೀರ್ಪನ್ನು ಕಾನೂನನ್ನು ಗಣನೆಗೆ ತೆಗೆದುಕೊಳ್ಳದೇ ನೀಡಲಾಗಿದೆ, ಏಕೆಂದರೆ ಅದು ಪುರುಷ ಮತ್ತು ಮಹಿಳೆಯ ನಡುವಿನ ನಿಸರ್ಗದ ನಿಯಮಕ್ಕೆ ವಿರುದ್ಧವಾದ ಲೈಂಗಿಕ ಸಂಭೋಗವನ್ನು ಒಪ್ಪಿಕೊಂಡಿರುವ ಐ.ಪಿ.ಸಿ. 375ನೇ ಪರಿಚ್ಛೇದವನ್ನು ಪರಿಗಣಿಸಿಲ್ಲ. ಮತ್ತೊಂದೆಡೆ, 377ನೇ ಪರಿಚ್ಛೇದವು, ಒಂದೇಲಿಂಗದವರ ನಡುವಿನ ಲೈಂಗಿಕ ಸಂಭೋಗವನ್ನು, ಅದಕ್ಕೆ ಅವರಲ್ಲಿ ಒಪ್ಪಿಗೆಯಿದ್ದರೂ, ಅಪರಾಧವೆಂದು ಪರಿಗಣಿಸುತ್ತದೆ. ಅಲ್ಲದೆ, ಅರ್ಜಿದಾರರು **ಸುರೇಶ್ ಕೌಶಲ್** ಪ್ರಕರಣದಲ್ಲಿ ಹೊರಬಿದ್ದ ನ್ಯಾಯಾಲಯದ ತೀರ್ಪನ್ನು ವಿರೋಧಿಸುತ್ತಾ, ಸದರಿ ತೀರ್ಪಿನಲ್ಲಿ, ವರ್ಗೀಕರಣದ ಬಗೆಗಿನ ತೀರ್ಮಾನವು ಪ್ರಭಾವ ಅಥವಾ ಪರಿಣಾಮದ ಪರೀಕ್ಷೆಗೆ ವಿರುದ್ಧವಾಗಿದೆ, ಏಕೆಂದರೆ ಅದರ ಪರಿಣಾಮದಿಂದ, ತಾರತಮ್ಯ ಉಂಟಾಗುತ್ತದೆ ಎಂದು ಪ್ರತಿಪಾದಿಸಿದ್ದಾರೆ. ಹಾಗಾಗಿ, **ಅರ್ಜಿದಾರರು ಪುಟ್ಟಸ್ವಾಮಿ (ಮೇಲ್ಕಂಡ)** ಪ್ರಕರಣದಲ್ಲಿ ಹೊರಬಿದ್ದ ಈ ನ್ಯಾಯಾಲಯದ ತೀರ್ಪಿನ ನಂತರ, **ಸುರೇಶ್ ಕೌಶಲ್ (ಮೇಲ್ಕಂಡ)** ಪ್ರಕರಣದಲ್ಲಿನ ಅಭಿಪ್ರಾಯವನ್ನು ತಳ್ಳಿಹಾಕಬೇಕಿದೆ ಮತ್ತು **ನಾಲ್ಸಾ (ಮೇಲ್ಕಂಡ)** ಮತ್ತು **ಪುಟ್ಟಸ್ವಾಮಿ (ಮೇಲ್ಕಂಡ)** ಮತ್ತು ಇತರ ಪ್ರಕರಣಗಳಲ್ಲಿ, ಈ ನ್ಯಾಯಾಲಯ ವೈಯಕ್ತಿಕ ಆಯ್ಕೆಯ ಮೇಲೆ ಅಪಾರವಾದ ಒತ್ತು ನೀಡಿ ಮಂಡಿಸಿದ ತೀರ್ಪುಗಳು ಹೊರಬಿದ್ದ ನಂತರ, 377ನೇ ಪರಿಚ್ಛೇದ ಐ.ಪಿ.ಸಿ.ಯನ್ನು ಈ ದಿನ ಸಂಸತ್ತಿನಲ್ಲಿ ಜಾರಿಗೊಳಿಸಬಹುದೆ ಎಂಬುದನ್ನು ಪರಾಂಬರಿಸುವುದೇ ಸರಿಯಾದ ಪರೀಕ್ಷೆ ಎಂದು ವಾದಿಸಿದ್ದಾರೆ.

34. ಎಲ್.ಜಿ.ಬಿ.ಟಿ ವ್ಯಕ್ತಿಗಳು, 377ನೇ ಪರಿಚ್ಛೇದದ ಉಪಸ್ಥಿತಿಯಿಂದ, ತಮ್ಮ ಲೈಂಗಿಕ ಹಕ್ಕುಗಳನ್ನು ಬಹಿರಂಗಪಡಿಸಿದರೆ ಕಾನೂನು ಕ್ರಮ ಮತ್ತು ಶೋಷಣೆಗೆ ಒಳಗಾಗುವ ಭಯದಿಂದಾಗಿ ತಮ್ಮ ಹಕ್ಕುಗಲಿಂದ ವಂಚಿತರಾಗಿದ್ದಾರೆ, ಮತ್ತು ಆದೇ ಕಾರಣದಿಂದ, ಈ ವರ್ಗದ ವ್ಯಕ್ತಿಗಳು ಈ ನ್ಯಾಯಾಲಯಕ್ಕೆ ಅರ್ಜಿದಾರರ ಸ್ಥಾನದಲ್ಲಿ ನಿಂತು ಮನವಿ ಮಾಡಲಿಲ್ಲ, ಬದಲಿಗೆ ಅವರು ತಮ್ಮ ಪರವಾಗಿ ಮಾತನಾಡಲು ತಮ್ಮ ಶಿಕ್ಷಕರು, ಪೋಷಕರು, ಮಾನಸಿಕ ಆರೋಗ್ಯ ವೃತ್ತಿಪರರು ಸರ್ಕಾರೇತರ ಸಂಸ್ಥೆಗಳ ಮೇಲೆ ಅವಲಂಬಿತರಾಗಿದ್ದರು ಎಂದು ಕೂಡಾ ವಾದಿಸಲಾಗಿದೆ. **ಸುರೇಶ್ ಕೌಶಲ್ (ಮೇಲ್ಕಂಡ)** ಪ್ರಕರಣದದ ಅರ್ಜಿದಾರರು ಎಲ್.ಜಿ.ಬಿ.ಟಿ ವ್ಯಕ್ತಿಗಳು ಅತಿ ಸಣ್ಣ ಸಂಖ್ಯೆಯಲ್ಲಿದ್ದಾರೆಂದು ಈ ನ್ಯಾಯಾಲಯ ಊಹಿಸಿಕೊಳ್ಳುವಂತೆ ಮಾಡಿದ್ದರು ಆದರೆ ವಾಸ್ತವದಲ್ಲಿ ಹೆಚ್ಚಿನ ಅಧ್ಯಯನಗಳು ಅವರು ಜನಸಂಖ್ಯೆಯ ಕನಿಷ್ಠ 7-8% ರಷ್ಟಿದ್ದಾರೆಂದೂ ಮತ್ತು ಅದೂ ಅಲ್ಲದೆ, ಹಕ್ಕುಗಳು ಜನಸಂಖ್ಯೆಯಲ್ಲಿನ ಶೇಕಡಾವಾರು ಪ್ರಮಾಣದ ಆಧಾರದಲ್ಲಿ ನಿರ್ಧರಿಸಲ್ಪಡದೇ, ಹಕ್ಕುಗಳ ಇರುವಿಕೆ ಮತ್ತು ಅವುಗಳ ನಿರಾಕರಣೆಯ ಸರಿಯಾದ ಪರಿಶೀಲನೆಯ ಆಧಾರದಲ್ಲಿ ನಿರ್ಧರಿಸಲಾಗುತ್ತವೆ ಎಂದು ವಾದಿಸಲಾಯಿತು. ಒಂದು ಕಾಯ್ದೆಯ ಸಾಂವಿಧಾನಿಕತೆಯನ್ನು ಉಳಿಸಿಕೊಳ್ಳಲು ಅಥವಾ ಆ ಕಾಯ್ದೆ ಸಂವಿಧಾನಬಾಹಿರ ಎಂದು ಘೋಷಿಸಲು, ಬಹುಸಂಖ್ಯಾತರ ಗ್ರಹಿಕೆ ಅಥವಾ ದೃಷ್ಟಿಕೋನವನ್ನು ಮಾರ್ಗದರ್ಶಿ ಅಂಶವಾಗಿ ಬಳಸಬಾರದು ಎಂಬುದು ಅರ್ಜಿದಾರರ ನಿಲುವು.

## D. ಪ್ರತಿವಾದಿಗಳು ಮತ್ತು ಇತರ ಮಧ್ಯಸ್ಥಿಕೆದಾರರ ಪರವಾದ ಸಲ್ಲಿಕೆಗಳು

35. ಈ ಪ್ರಕರಣದ ಪ್ರತಿವಾದಿಗಳಾಗಿರುವ ಭಾರತ ಸರಕಾರವು, 11 ಜುಲೈ 2018 ತಾರೀಖಿನಂದು, ಅಫಿಡವಿಟ್ಟೊಂದರ ಮೂಲಕ, ಸದರಿ ವಿಷಯವನ್ನು ಸಾಂವಿಧಾನಿಕ ಪೀಠವೊಂದರೆದುರು, **ಸುರೇಶ್ ಕೌಶಲ್ (ಮೇಲ್ಕಂಡ)** ಪ್ರಕರಣದ ತೀರ್ಪು ಸರಿಯಾಗಿದೇಯೇ ಇಲ್ಲವೇ ಎಂಬುದನ್ನು ನಿರ್ಧರಿಸುವ ಸಲುವಾಗಿ ಹಾಜರು ಪಡಿಸಲಾಗಿದ್ದು, ಈ ಪೀಠಕ್ಕೆ ವರ್ಗಾಯಿಸಲಾಗಿರುವ ಪ್ರಶ್ನೆ 377ನೇ ಪರಿಚ್ಛೇದಡಿಯಲ್ಲಿನ ವಯಸ್ಕರ ಒಪ್ಪಿಗೆಯ ಖಾಸಗೀ ಲೈಂಗಿಕ ಕೃತ್ಯಗಳನ್ನು ಅಪರಾಧೀಕರಿಸುವುದರ ಸಾಂವಿಧಾನಿಕ ಮಾನ್ಯತೆಯ ಬಗೆಗಿನದಾಗಿದ್ದು ಮಾತ್ರ ಎಂದು ತಿಳಿಯಪಡಿಸಿದೆ.

36. ಮುಂದುವರಿಯುತ್ತಾ, ಕೇಂದ್ರ ಸರ್ಕಾರವು, "ವಯಸ್ಕರ ನಡುವಿನ ಖಾಸಗೀ ಒಪ್ಪಿಗೆಯ ಕ್ರಿಯೆಗಳಿಗೆ ಅನ್ವಯವಾಗುವ ಐ.ಪಿ.ಸಿ.ಯ 377ನೇ ಪರಿಚ್ಛೇದದ ಸಾಂವಿಧಾನಿಕ ಮಾನ್ಯತೆಯ ವಿಚಾರದಲ್ಲಿ, ಪ್ರತಿವಾದಿಗಳು ನಿರ್ಧಾರವನ್ನು ಈ ನ್ಯಾಯಾಲಯದ ವಿವೇಚನೆಗೆ ಬಿಡುತ್ತಾರೆ ಎಂದು ಆರಿಕೆ ಮಾಡಿಕೊಳ್ಳಲಾಗಿದೆ.

37. ಪ್ರತಿವಾದಿಗಳು ತಿಳಿಯಪಡಿಸುವಂತೆ, "ವಯಸ್ಕರ ನಡುವಿನ ಖಾಸಗೀ ಕೃತ್ಯಗಳಿಗೆ ಸಂಬಂಧಿಸಿದಂತೆ ಐ.ಪಿ.ಸಿ.ಯ 377ನೇ ಪರಿಚ್ಛೇದವನ್ನು ಅಸಂವಿಧಾನಿಕ ಎಂದು ಘೋಷಿಸಲಾಗುವ ಸಂದರ್ಭದಲ್ಲಿ, ಪೀಠದೆದುರು ನಿರ್ಧಾರಕ್ಕಾಗಿ ಉಲ್ಲೇಖಿಸಲಾಗಿರುವ ಇತರ ಪೂರಕ ಸಮಸ್ಯೆಗಳು ಅಥವಾ ಹಕ್ಕುಗಳನ್ನು ಪರಿಶೀಲಿಸುವಂತಿಲ್ಲ, ಮತ್ತು ಹಾಗೇನಾದರೂ ಮಾಡುವ ಪಕ್ಷದಲ್ಲಿ ಭಾರತ ಸರ್ಕಾರವು ವಿವರವಾದ ಅಫಿಡವಿಟ್ಟೊಂದರ ಮೂಲಕ ಉತ್ತರಿಸಬಯಸುತ್ತದೆ, ಏಕೆಂದರೆ, ಇತರ ವಿಷಯಗಳು ಮತ್ತು ಹಕ್ಕುಗಳನ್ನು ಪರಿಗಣನೆಗೆ ತೆಗೆದುಕೊಂಡರೆ, ಅದು ವಿವಿಧ ಇತರ ಕಾನೂನುಗಳ ಅಡಿಯಲ್ಲಿ ದೂರದ ಮತ್ತು ವಿಸ್ತಾರವಾದ ಪರಿಣಾಮ ಬೀರುತ್ತದೆ ಮತ್ತು ಆ ವಿಚಾರವನ್ನು ಈ ಪ್ರಕರಣದಲ್ಲಿ ಉಲ್ಲೇಖಿಸಿಯೂ ಇಲ್ಲವಾದ್ದರಿಂದ ಈ ಗೌರವಾನ್ವಿತ ಪೀಠವು ಅವುಗಳನ್ನು ಪರಿಶೀಲಿಸುವ ಅಗತ್ಯವಿಲ್ಲ ಎಂದು ಆರಿಕೆ ಮಾಡಿಕೊಂಡಿದೆ.

38. ಭಾರತ ಸರ್ಕಾರಕ್ಕೆ ಪ್ರತಿ-ಅಫಿಡವಿಟ್ಟನ್ನು ಸಲ್ಲಿಸುವ ಅವಕಾಶ ನೀಡದೇ, ಇತರ ಯಾವುದೇ ವಿಷಯದ ಕುರಿತು (377ನೇ ಪರಿಚ್ಛೇದದ ಸಾಂವಿಧಾನಿಕ ಮಾನ್ಯತೆಯೊಂದನ್ನು ಹೊರತುಪಡಿಸಿ), ವಾದಮಾಡುವ ಅವಕಾಶ ನೀಡಿದರೆ ಅಥವಾ ಆ ಕುರಿತು ನಿರ್ಧಾರ ತೆಗೆದುಕೊಂಡರೆ, ಅದು ನ್ಯಾಯಾಂಗದ ಹಿತದಲ್ಲಿರುವುದಿಲ್ಲ ಮತ್ತು ಅದು ಸ್ವಾಭಾವಿಕ ನ್ಯಾಯದ ಉಲ್ಲಂಘನೆಯೂ ಆಗುತ್ತದೆ ಎಂದು ಪ್ರತಿವಾದಿಗಳು ಮನವಿಮಾಡಿಕೊಂಡಿದ್ದಾರೆ.

39. ಮತ್ತೊಂದು ಬರೆಹ ರೂಪದ ಮನವಿಗಳ ಸರಣಿಯನ್ನು, ಹಿರಿಯ ವಕೀಲರಾದ ಕೆ ರಾಧಾಕೃಷ್ಣನ್ ರವರು ಮಧ್ಯಸ್ತಿಕೆದಾರ ಎಂ.ಜಿ.ಓ., ಟ್ರಸ್ಟ್ ಆಫ್ ಗಾಡ್ ಮಿನಿಸ್ಟ್ರೀಸ್, ಪರವಾಗಿ ಸಲ್ಲಿಸಿದ್ದಾರೆ. ಸದರಿ ಮಧ್ಯಸ್ತಿಕೆದಾರರು, ಪುಟ್ಟಸ್ವಾಮಿ ಪ್ರಕರಣದಲ್ಲಿನ ಈ ನ್ಯಾಯಾಲಯದ ಟಿಪ್ಪಣಿಗಳು, ಮೇಲ್ಪಂಡ ಎಂ.ಜಿ.ಓ, ಖಾಸಗೀತನದ ಮೇಲೆ ಸಂಪೂರ್ಣವಾದ ಮತ್ತು ತಡೆಯಿಲ್ಲದ ಹಕ್ಕಿಲ್ಲ ಮತ್ತು ಸದರಿ ಹಕ್ಕನ್ನು ದುರುಪಯೋಗ

ಪಡಿಸಿಕೊಳ್ಳುವಂತಿಲ್ಲ ಎಂಬುದರ ಬಗಗೆ ಸಮರ್ಥವಾದ ತಕರಾರುಗಳನ್ನು ಎತ್ತುವುದಕ್ಕೆ ತಡೆಯೊಡ್ಡುತ್ತವೆ ಎಂದು ತಿಳಿಯಪಡಿಸುತ್ತಾರೆ. ಹಾಗೆಯೇ ಮಧ್ಯಸ್ತಿಕೆದಾರರು, ವ್ಯಕ್ತಿಗೆ ತನ್ನ ಅಂಗಗಳನ್ನು ದುರುಪಾಯೋಗಪಡಿಸಿಕೊಳ್ಳುವ ವೈಯಕ್ತಿಕ ಸ್ವಾತಂತ್ರ್ಯವಿಲ್ಲ ಮತ್ತು 377ನೇ ಪರಿಚ್ಛೇದ ಐ.ಪಿ.ಸಿ.ಯು ನಿರ್ಬಂಧಿಸಿರುವ ಅಪರಾಧ ಕೃತ್ಯಗಳು ಆ ಅಂಗಳ ದುರ್ಬಳಕೆ ಮಾಡುತ್ತವೆ ಎಂದು ತಕರಾರು ಸಲ್ಲಿಸಿದ್ದಾರೆ. ಮಧ್ಯಸ್ತಿಕೆದಾರರ ಪ್ರಕಾರ ಇಂತಹ ಕೃತ್ಯಗಳು ಸಾಂವಿಧಾನಿಕ ಪರಿಕಲ್ಪನೆಗೆ ಅವಮಾನಕರ ಮತ್ತು ಅವಹೇಳನಕಾರಿ ಮತ್ತು ಘನತೆಯ ಪರಿಕಲ್ಪನೆಗೆ ಯಾವುದೇ ಬಗೆಯ ಘಾಸಿಯುಂಟಾದರೆ, ಅದು ಸಾಂವಿಧಾನಿಕ ತಪ್ಪು ಮತ್ತು ಸಾಂವಿಧಾನಿಕ ಅನೈತಿಕತೆಗೆ ಎಡೆಮಾಡಿಕೊಡುತ್ತದೆ.

40. ಸಂವಿಧಾನದ ವಿವಿಧ ನಿಯಮಗಳ ಬೆಳಕಿನಲ್ಲಿ ಲಿಂಗ ಪರಿವರ್ತಿತ ಸಮುದಾಯದ ಲಿಂಗಾಧಾರಿತ ಅಸ್ಮಿತೆ ಮತ್ತು ಲೈಂಗಿಕ ನಿಲುವುಗಳ ಕುರಿತಾದ ಸಂವಿಧಾನಾತ್ಮಕ ಮತ್ತು ಇತರ ಕಾನೂನುಬದ್ಧ ಹಕ್ಕುಗಳಿಗೆ ಸಂಬಂಧಿಸಿದ ವಿಷಯಗಳನ್ನು ಸಂವಿಧಾನದ ವಿವಿಧ ನಿಬಂಧನೆಗಳ ಹಿನ್ನೆಲೆಯಲ್ಲಿ ಸಾಕಷ್ಟು ಪರಿಗಣಿಸಲಾಗಿದೆ, ಮತ್ತು ಅವರಿಗೆ ನ್ಯಾಯಾಲಯವು **ನಾಲ್ಸಾ (ಮೇಲ್ಕಂಡ)** ಪ್ರಕರಣದಲ್ಲಿ ಸೂಕ್ತವಾದ ಪರಿಹಾರೋಪಾಯಗಳನ್ನು ಕೂಡ ನೀಡಿದೆ, ಎಂಬುದು ಮಧ್ಯಸ್ತಿಕೆದಾರರ ಮತ್ತೊಂದು ವಾದ. ಮಧ್ಯಸ್ಥಿಕೆದಾರರ ತಕರಾರಿನ ಪ್ರಕಾರ ಅವರಗೆ ಇನ್ನೂ ಹೆಚ್ಚಿನ ಪರಿಹಾರಗಳನ್ನು ನೀಡಲು ಆಗುವುದಿಲ್ಲ ಮತ್ತು ಅವರ ಮಾಡಿಕೊಂಡಿರುವ ಮನವಿಗಳು ಘನತೆ ಮತ್ತು ಸಾರ್ವಜನಿಕ ನೈತಿಕತೆಯ ಪರಿಕಲ್ಪನೆಗಳನ್ನು ಉಲ್ಲಂಘಿಸಿ ಖಾಸಗೀತನ ಮತ್ತು ವೈಯಕ್ತಿಕ ಸ್ವಾತಂತ್ರ್ಯವನ್ನು ದುರುಪಯೋಗಪಡಿಸುವ ಉದ್ದೇಶವನ್ನಷ್ಟೇ ಹೊಂದಿವೆ.

41. ಮಧ್ಯಸ್ತಿಕೆದಾರರ ಪ್ರಕಾರ, 377ನೇ ಪರಿಚ್ಛೇದವು ಆದರಡಿಯಲ್ಲಿ ಉಲ್ಲೇಖಿಸಲಾಗಿರುವ ಕೃತ್ಯಗಳನ್ನು ದಂಡನಾರ್ಹಗೊಳಿಸಿರುವುದು ಸೂಕ್ತವೇ ಆಗಿದೆ, ಏಕೆಂದರೆ 377ನೇ ಪರಿಚ್ಛೇದವನ್ನು ಪ್ರಾಚೀನ ಭಾರತದಲ್ಲಿ ಪ್ರಚಲಿತವಾಗಿದ್ದ ನ್ಯಾಯ ವ್ಯವಸ್ಥೆ ಮತ್ತು ಸಿಧ್ಧಾಂತಗಳನ್ನು ಗಣನೆಗೆ ತೆಗೆದುಕೊಂಡೇ ರಚಿಸಲಾಗಿದ್ದು, ಪ್ರಸ್ತುತ 2018ರಲ್ಲಿ ಸದರಿ ಕಾಯ್ದೆ ಕಾನೂನಾತ್ಮಕವಾಗಿ, ವೈದ್ಯಕೀಯವಾಗಿ, ನೈತಿಕವಾಗಿ ಮತ್ತು ಸಾಂವಿಧಾನಿಕವಾಗಿ ಹೆಚ್ಚು ಸಮಂಜಸವಾಗಿದೆ.

42. ಈ ವಿಚಾರವನ್ನು ವಿವರಿಸಲು, ಮಧ್ಯಸ್ತಿಕೆದಾರರು ಈ ನ್ಯಾಯಾಲಯದ ಗಮನವನ್ನು ಡಬ್ಲ್ಯೂ. ಫ್ರೀಡ್ಮನ್ ಅವರು 'ಲಾ ಇನ್ ಎ ಚೇಂಜಿಗ್ ಸೊಸೈಟಿ'ನಲ್ಲಿ, ಸಮಾಜವೊಂದು ಖಂಡನಾರ್ಹವೆಂದು ಪರಿಗಣಿಸುವ ಒಂದು ಬಗೆಯ ಕೃತ್ಯವನ್ನು ಕ್ರಿಮಿನಲ್ ನಿರ್ಬಂಧಗಳ ಮೂಲಕ ಖಂಡಿಸಿ ನಿಷೇಧಿಸುವುದು, ಆ ಸಮಾಜವನ್ನು ನಿರ್ದೇಶಿಸುವ ಮೌಲ್ಯಗಳ ಆಳವಾದ ಪ್ರಭಾವಕ್ಕೆ ಒಳಗಾಗಿರುತ್ತದೆ ಮತ್ತು ಹೀಗಾಗಿ, ಅದು ಒಂದು ದೇಶದಿಂದ ಮತ್ತೊಂದಕ್ಕೆ, ಇತಿಹಾಸಕ್ಕೆ ಒಂದು ಅವಧಿಯಿಂದ ಮತ್ತೊಂದಕ್ಕೆ ಬದಲಾಗುತ್ತದೆ ಎಂದು ನುಡಿದಿರುವುದರೆಡೆಗೆ ಸೆಳೆಯುತಾರೆ.

43. ಐ.ಪಿ.ಸಿ. 377ನೇ ಪರಿಚ್ಛೇದದಡಿಯಲ್ಲಿ ಶಿಕ್ಷಾರ್ಹಗೊಳಿಸಲಾಗಿರುವ ಅನೈಸರ್ಗಿಕ ಲೈಂಗಿಕ ಕ್ರಿಯೆಗಳಲ್ಲಿ ತೊಡಗುವ ವ್ಯಕ್ತಿಗಳು ಎಚ್‌ಐವಿ/ಏಡ್ಸ್ ಗೆ ಒಳಗಾಗುವ ಹೆಚ್ಚಿನ ಸಾಧ್ಯತೆಯಿದೆ ಮತ್ತು ಸಮಲೈಂಗಿಕರಲ್ಲಿ ಏಡ್ಸ್ ಹರಡುವಿಕೆಯ ಶೇಕಡಾವಾರು ಪ್ರಮಾಣವು ಭಿನ್ನಲಿಂಗೀಯರಿಗಿಂತ ಹೆಚ್ಚು ಅಲ್ಲದೇ, ಖಾಸಗೀತನದ ಹಕ್ಕನ್ನು ಜನರು ಅನೈಸರ್ಗಿಕ ಅಪರಾಧಗಳಲ್ಲಿ ಪಾಲ್ಗೊಂಡು, ಆ ಮೂಲಕ ಏಡ್ಸಿಗೆ ಒಳಗಾಗುವ ರೀತಿಯಲ್ಲಿ ವಿಸ್ತರಿಸಲು ಬರುವುದಿಲ್ಲ ಎಂದು ಮಧ್ಯಸ್ತಿಕೆದಾರರು ತಕರಾರು ಸಲ್ಲಿಸಿರುತ್ತಾರೆ.

44. 377ನೇ ಪರಿಚ್ಛೇದವನ್ನು ಅಸಂವಿಧಾನಿಕ ಎಂದು ಘೋಷಿಸಿದರೆ, ಸಾಮಾಜಿಕ ಸಂಸ್ಕೃತಿಯ ಗುಮ್ಮಟವಾದ ಕುಟುಂಬ ವ್ಯವಸ್ಥೆಯು ನಾಶವಾಗುತ್ತದೆ, ಮದುವೆ ಎಂಬ ಸಂಸ್ಥೆಯ ಮೇಲೆ ವಿನಾಶಕಾರಿ ಪರಿಣಾಮವವುಂಟಾಗುತ್ತದೆ ಮತ್ತು ಹಣಕ್ಕಾಗಿ ಪ್ರಚಲಿತಗೊಳ್ಳುವ ಸಮಲೈಂಗಿಕ ಚಟುವಟಿಕೆಗಳು, ಯುವ ಭಾರತೀಯರು ಇಂತಹ ಧಂಧೆಯಲ್ಲಿ ತೊಡಗುವಂತೆ ಪ್ರಚೋದಿಸುತ್ತವೆ ಎಂಬುದು ಸಹ ಮಧ್ಯಸ್ಥಿಕೆದಾರರ ವಾದವಾಗಿದೆ.

45. ಮಧ್ಯಸ್ತಿಕೆದಾರರಾದ ಶ್ರೀಯುತ ಸುರೇಶ್ ಕುಮಾರ್ ಕೌಶಲ್ ಪರವಾಗಿ ಕೂಡಾ ಲಿಖಿತ ಮನವಿಗಳನ್ನು ಸಲ್ಲಿಸಲಾಗಿದ್ದು, ಖಾಸಗೀತನದಲ್ಲಿ ವಯಸ್ಕರ ನಡುವಿನಲ್ಲಿ ಜರುಗುವ ಒಪ್ಪಿಗೆಯ ಕ್ರಿಯೆಗಳನ್ನು ವಿಶ್ವದಾದ್ಯಂತ ಅನೇಕ ಕಡೆಗಳಲ್ಲಿ ಕಾನೂನುಬದ್ಧಗೊಳಿಸಲಾಗಿದೆಯಾದ್ದರಿಂದ ಅದನ್ನು ಭಾರತದಲ್ಲೂ ನಿರಪರಾಧೀಕರಿಸಲ್ಪಡಬೇಕೆಂಬ ಅರ್ಜಿದಾರರು ವಾದ ಆ ರಾಷ್ಟ್ರಗಳ ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಪರಂಪರೆಗಳಿಗೂ, ಬಹುಸಂಸ್ಕೃತಿಯ ಮತ್ತು ಬಹು-ಭಾಷೆಯ ರಾಷ್ಟ್ರವಾದ ಭಾರತದ್ದಕ್ಕೂ

ಬಹಳ ಭಿನ್ನತೆಯಿದೆ ಎಂಬ ನೆಲೆಯಲ್ಲಿ ಭಾರತಲ್ಲಿ ಅನ್ವಯಿಸುವುದಿಲ್ಲ ಎಂದು ಅವರು ಅರಿಕೆ ಮಾಡಿಕೊಂಡಿರುತ್ತಾರೆ.

46. ಮೂಲಭೂತ ಹಕ್ಕುಗಳು ಪರಿಪೂರ್ಣವಲ್ಲದ ಕಾರಣ, ಐ.ಪಿ.ಸಿ., 377ನೇ ಪರಿಚ್ಛೇದದಲ್ಲಿ ಅಸಮಂಜಸತೆ ಇಲ್ಲ ಮತ್ತು ಆದನ್ನು ನಿರಪರಾಧೀಕರಿಸಿದರೆ, ಅದು ಈ ರಾಷ್ಟ್ರದಲ್ಲಿ ಪಾಲಿಸಲಾಗುವ ಎಲ್ಲ ಧರ್ಮಗಳ ವಿರುದ್ಧ ಹೋಗುತ್ತದೆ ಮತ್ತು ಸಂವಿಧಾನಾತ್ಮಕ ನೈತಿಕತೆಯ ವ್ಯಾಪ್ತಿ ಮತ್ತು ವಿಸ್ತಾರವನ್ನು ನಿರ್ಧರಿಸುವಾಗ, 25ನೇ ಕಲಮನ್ನು ಸಹ ಪರಿಗಣನೆಗೆ ತೆಗೆದುಕೊಳ್ಳಬೇಕು  ಎಂದು ಮಧ್ಯಸ್ಥಿಕೆದಾರರು ಪ್ರತಿಪಾದಿಸಿದ್ದಾರೆ.

47. 2018 ರಲ್ಲಿ ಐ.ಎ. 91250 ಹೆಸರಿನ ಮತ್ತೊಂದು ಹಸ್ತಕ್ಷೇಪದ ಅರ್ಜಿಯನ್ನು ಸಲ್ಲಿಸಲಾಯಿತು ಮತ್ತು ಅದನ್ನು ಅನುಮತಿಸಲಾಯಿತು. ಸದರಿ ಮಧ್ಯಸ್ತಿಕೆದಾರರು ತಕರಾರು ಸಲ್ಲಿಸುವಂತೆ, 377ನೇ ಪರಿಚ್ಛೇದವನ್ನು ತಳ್ಳಿಹಾಕಿದರೆ, ಸದರಿ ಪರಿಚ್ಛೇದದಲ್ಲಿ ಒಳಗೊಳ್ಳಲಾಗಿರುವ ಬಲವಂತದ ಕ್ರಿಯೆಗಳ ವಿರುದ್ಧ ಸಂತ್ರಸ್ತರು ಕ್ರಮ ಕೋರುವುದಕ್ಕೆ ಆಸ್ಪದವಿಲ್ಲದಂತಾಗುತ್ತದೆ., ಏಕೆಂದರೆ ಸದರಿ ಪರಿಚ್ಛೇದವು, ಇಬ್ಬರು ಒಪ್ಪಿಗೆಯಿರುವ ವಯಸ್ಕರ ನಡುವಿನ ನೈಸರ್ಗಿಕವಾದ ನಿಯಮಕ್ಕೆ ವಿರುದ್ಧವಾದ ಶಾರೀರಿಕ ಸಂಭೋಗಕ್ಕಷ್ಟೇ ಅಲ್ಲದೆ, ಬಲವಂತದ ಶಿಶ್ನಯೋನಿ ಸಮಾಗಮವನ್ನು ಒಳಗೊಳ್ಳದ ಕ್ರಿಯೆಗಳಿಗೂ ಅನ್ವಯವಾಗುತ್ತದೆ ಎಂದು ತಕರಾರು ಸಲ್ಲಿಸಿದ್ದಾರೆ. ಮಧ್ಯಸ್ತಿಕೆದಾರರ ಪ್ರಕಾರ, ಹಾಗೆ ಮಾಡುವುದು **ಇಕ್ಬಾಲ್ ಸಿಂಗ್ ಮರ್ವಾ ಮತ್ತು ಇನ್ನೊಬ್ಬರು v. ಮೀನಾಕ್ಷಿ ಮರ್ವಾ ಮತ್ತು ಇನ್ನೊಬ್ಬರು**[17] ಪ್ರಕರಣದಲ್ಲಿ ಈ ನ್ಯಾಯಾಲಯ ತೆಗೆದುಕೊಂಡ ನಿರ್ಧಾರಕ್ಕೆ ವಿರುದ್ಧವಾಗುತ್ತದೆ.

48. ಐ.ಪಿ.ಸಿ.ಯ 377ನೇ ಪರಿಚ್ಛೇದದ ವ್ಯಾಪ್ತಿಯಿಂದ ಇಬ್ಬರು ಒಂದೇ ಲಿಂಗದ ವಯಸ್ಕರ ನಡುವಿನ ಒಪ್ಪಿಗೆಯ ಕ್ರಿಯೆಗಳನ್ನು ಮುಕ್ತಗೊಳಿಸಿದರೆ, ವಿವಾಹಿತ ಮಹಿಳೆಯೊಬ್ಬಳು ತನ್ನ ಉಭಯಲಿಂಗಾಸಕ್ತ ಗಂಡ ಮತ್ತು ಅವನ ಒಪ್ಪಿಗೆಯ ಪುರುಷ ಸಂಗಾತಿ ಲೈಂಗಿಕ ಚಟಿವಟಿಕೆಗಳಲ್ಲಿ ತೊಡಗುವುದರ ವಿರುದ್ಧ ಐ.ಪಿ.ಸಿ. ಅಡಿಯಲ್ಲಿ ಪರಿಹಾರವನ್ನು ಪಡೆಯುವುದು ಸಧ್ಯವಾಗುವುದಿಲ್ಲ ಎಂದು ಅರ್ಜಿದಾರರು ಸಲ್ಲಿಸಿದ್ದಾರೆ.

[17] (2005) 4 SCC 370

49. ಸದರಿ ಪರಿಚ್ಛೇದದೊಳಗೆ, "ಸಂತ್ರಸ್ತ ವ್ಯಕ್ತಿ"ಯನ್ನು ವ್ಯಾಖ್ಯಾನಿಸುವ ವಿವರಾಣೆಯನ್ನು ಸೇರಿಸಿ ಆ ವ್ಯಾಖ್ಯಾನದೊಳಗೆ, ಒಪ್ಪಿಗೆಯಿಲ್ಲದ ಸಂಗಾತಿ ಅಥವಾ ಸಂತ್ರಸ್ತರಾದ ವ್ಯಕ್ತಿ ಅಥವಾ ಗಂಡ ಅಥವಾ ಹೆಂಡತಿ ಅಥವಾ ಅವರ ಪರವಾದ ಯಾವುದೇ ವ್ಯಕ್ತಿಗಳನ್ನು 1973ರ ಅಪರಾಧ ಪ್ರಕ್ರಿಯಾ ಸಂಹಿತೆಯ 198(1)ರ ನಿಯಮಗಳ ಪ್ರಕಾರ ಸೇರಿಸಿ ಅರ್ಜಿದಾರರು ಹೇಳಿರುವಂತಹ 377ನೇ ಪರಿಚ್ಛೇದದ ದುರ್ಬಳಕೆಯಾಗುವುದನ್ನು ತಡೆಗಟ್ಟಬಹುದು ಎಂದು ಮಧ್ಯಸ್ಥಿಕೆದಾರರು ಸೂಚಿಸಿದ್ದಾರೆ. ಅರ್ಜಿದಾರರ ಪ್ರಕಾರ, ಹೀಗೆ ಮಾಡುವುದರಿಂದ, ಅಧಿಕಾರಿಗಳು ಆಥವಾ ಕಿರುಕುಳ ನೀಡುವ ವ್ಯಕ್ತಿಗಳು 'ಒಪ್ಪಿಗೆಯ ಕ್ರಿಯೆಗಳ" ಕುರಿತು ದಾಖಲಿಸುವ ಯಾವುದೇ ಬಗೆಯ ದುರುದ್ದೇಶಪೂರ್ವಕವಾದ ದೂರುಗಳಿಗೆ ಕಡಿವಾಣ ಬೀಳುತ್ತದೆ. ಅದಕ್ಕಿಂತ ಹೆಚ್ಚಾಗಿ, ಮೇಲಿನಂತೆ ಮಾಡಿದಾಗ, ಸಂತ್ರಸ್ತಾನಾದ ವ್ಯಕ್ತಿ ಖುದ್ದಾಗಿ ದೂರು ದಾಖಲಿಸಿದಾಗ ಮಾತ್ರ ನ್ಯಾಯಾಲಯಗಳು 377ನೇ ಪರಿಚ್ಛೇದದ ಅಡಿಯಲ್ಲಿ ಅಂತಹ ಅಪರಾಧಗಳನ್ನು ಪರಿಗಣಿಸುವಂತಾಗುತ್ತದೆ ಎಂಬ ವಿಚಾರವೂ ನ್ಯಾಯಾಲಯಕ್ಕೆ ಸಂತೋಷವನ್ನುಂಟು ಮಾಡಬಹುದು ಎಂದು ಅರ್ಜಿದಾರರು ತಿಳಿಸಿರುತಾರೆ. ಅರ್ಜಿದಾರರ ಪ್ರಕಾರ, ಅಂತಹ ವಿಧಾನವು, ಮೂಲಭೂತವಾಗಿ ಒಪ್ಪಿಗೆಯನ್ನು ಗೌರವಿಸುತ್ತದೆ ಮತ್ತು ಸಂವಿಧಾನದ 21 ನೇ ಕಲಮಿನ ಅಡಿಯಲ್ಲಿ ವ್ಯಕ್ತಿಯ ಖಾಸಗೀತನ ಮತ್ತು ಘನತೆಯನ್ನು ಹಸ್ತಕ್ಷೇಪದಿಂದ ರಕ್ಷಿಸುತ್ತದೆ.

50. ಅರ್ಜಿದಾರರು ಯಾವುದೇ ಕಾನೂನಿನ ಸಂವಿಧಾನಬದ್ಧತೆಯನ್ನು ಯಾವಾಗಲೂ ಊಹಿಸಬೇಕಾಗುತ್ತದೆ ಮತ್ತು ಯಾವುದೇ ಪರಿಚ್ಛೇದದ ವ್ಯಾಖ್ಯಾನದಲ್ಲಿ ಯಾವುದೇ ಬಗೆಯ ಅಸ್ಪಷ್ಟತೆ ಇದ್ದಲ್ಲಿ, ನ್ಯಾಯಾಲಯಗಳು ಆ ಶಾಸನದ ಉದ್ದೇಶವನ್ನು ಈಡೇರಿಸುವಂತಹ ವ್ಯಾಖ್ಯಾನವನ್ನು ನೀಡಬೇಕು ಅಲ್ಲದೆ ನ್ಯಾಯಾಲಯಗಳು ಶಾಸನವೊಂದರ ಸಾಂವಿಧಾನಿಕತೆಯನ್ನು ಎತ್ತಿಹಿಡಿಯುವ ಸಲುವಾಗಿ ಎಲ್ಲ ಕ್ರಮಗಳನ್ನು ಕೈಗೊಳ್ಳಬೇಕು ಮತ್ತು ಹಾಗೆ ಮಾಡುವಾಗ ಆ ಶಾಸನಕ್ಕೆ ಹೆಚ್ಚುವರಿ ವಿಚಾರಗಳನು ಸೇರಿಸಿದರೂ ಪರವಾಗಿಲ್ಲ ಎಂದು ನುಡಿಯುತ್ತಾರೆ. ಅರ್ಜಿದಾರರು ಇದಕ್ಕೆ, **ಕೆ. ವಿ. ಅಬ್ಬಾಸ್ v. ಭಾರತ ಸರ್ಕಾರ**[18] **ಮತ್ತು ನಿವೃತ್ತ. ರೆವೆರೆಂಡ್**

[18] (1970) 2 SCC 780

**ಮಾರ್ಕ್ ನೆಟ್ಟೊ v. ಕೇರಳ ರಾಜ್ಯ ಮತ್ತು ಇತರರು**[19] ಪ್ರಕರಣಗಳಲ್ಲಿ ಈ ನ್ಯಾಯಾಲಯ ಮಂಡಿಸಿದ ತೀರ್ಪುಗಳನ್ನು ಉಲ್ಲೇಖಿಸುತ್ತದೆ.

51. ಅರ್ಜಿದಾರರು, ತಮ್ಮ ಅರಿವುಳ್ಳ ವಕೀಲರಾದ ಶ್ರೀಯುತ ಹರ್ವಿಂದರ್ ಚೌಧರಿಯವರ ಮೂಲಕ, **ಪುಟ್ಟಸ್ವಾಮಿ (ಮೇಲ್ಕಂಡ)** ಪ್ರಕರಣದಲ್ಲಿ ಗುರುತಿಸಲ್ಪಟ್ಟಂತೆ ಖಾಸಗೀತನದ ಹಕ್ಕು ತನ್ನ ವ್ಯಾಪ್ತಿಯಲ್ಲಿ ಸಂಪೂರ್ಣವಾಗಿ ಚಲಾವಣೆಗೊಳ್ಳಲು ಅನುಮತಿಸಿದರೆ, ಅದು, ಸಮಲೈಂಗಿಕ ಮತ್ತು ಭಿನ್ನಲೈಂಗಿಕ ಜೋಡಿಗಳ ನಡುವಿನ ಒಪ್ಪಿಗೆಯ ಅನೈಸರ್ಗಿಕ ಲೈಂಗಿಕ ಕ್ರಿಯೆಗಳನ್ನು ಒಳಗೊಂಡಿರುವ ಎಲ್ಲಾ ಸಂದರ್ಭಗಳಲ್ಲಿ ಕಾನೂನು ಶಿಕ್ಷೆಯಾಗುವುದನ್ನು ತಪ್ಪಿಸುತ್ತದೆ ಮತ್ತು ಅದಕ್ಕಾಗಿ 377ನೇ ಪರಿಚ್ಛೇದದ ವ್ಯಾಪ್ತಿ ಕುಗ್ಗಿಸುವ ಅಥವಾ ಅದನ್ನು ತಳ್ಳಿಹಾಕುವ ಪ್ರಮೇಯ ಬರುವುದಿಲ್ಲ ಮತ್ತು ಅದನ್ನ ಈಗಿನ ಸ್ವರೂಪದಲ್ಲಿಯೇ ಉಳಿಸಿಕೊಳ್ಳಬಹುದು. ಎಂದು ವಾದಿಸುತ್ತಾರೆ. ಈ ಕಾರಣದಿಂದಾಗಿ ಒಪ್ಪಿಗೆಯ ಲೈಂಗಿಕ ಕ್ರಿಯೆಯಲ್ಲಿ ತೊಡಗಿರುವ ವ್ಯಕ್ತಿಗಳು ಪರಸ್ಪರರ ವಿರುದ್ಧ ಸಾಕ್ಷಿ ನುಡಿಯುವಂತೆ ಸರ್ಕಾರ ಒತ್ತಾಯಿಸಲು ಸಾಧ್ಯವಿಲ್ಲ, ಏಕೆಂದರೆ ಒಪ್ಪಿಗೆಯನ್ನ ಪ್ರಶ್ನಿಸುವ ಸಂದರ್ಭಗಳನ್ನು ಹೊರತುಪಡಿಸಿದರೆ, ಅದು ಖಾಸಗೀತನದ ಉಲ್ಲಂಘನೆಯನ್ನು ಒಳಗೊಂಡಿರುತ್ತದೆ ಅಲ್ಲದೇ ಒಬ್ಬರು ಒಂದು ಅಪರಾಧದಲ್ಲಿ ಒಪ್ಪಿಗೆಯ ಬಲಿಪಶುವಾಗಲು ಆಗುವುದಿಲ್ಲ.

52. ರಾಝಾ ಅಕಾಡೆಮಿಯ ಪರವಾಗಿ, ಅರಿವುಳ್ಳ ವಕೀಲರಾದ ಆರ್.ಆರ್. ಕಿಶೋರ್ ಮೂಲಕ ಕೂಡಾ ಮನವಿಗಳನ್ನು ಸಲ್ಲಿಸಲಾಗಿದ್ದು, ಅವರು, ಸಮಲೈಂಗಿಕತೆಯು ನಿಸರ್ಗದ ನಿಯಮಕ್ಕೆ ವಿರುದ್ಧವಾದುದು ಮತ್ತು 377ನೇ ಪರಿಚ್ಛೇದ ಅದನ್ನು ಸೂಕ್ತವಾಗಿ ನಿಷೇಧಿಸುತ್ತದೆ ಎಂದು ತಕರಾರು ಸಲ್ಲಿಸಿರುತ್ತಾರೆ. ಲೈಂಗಿಕವಲ್ಲದ ಅಂಗಗಳೊಳಗೆ ಶಿಶ್ನದ ತೂಸುವಿರಿಕೆಗಳನ್ನೊಳಗೊಂಡ ಶಾರೀರಿಕ ಸಂಭೋಗದ ಮೇಲಿನ ನಿರ್ಬಂಧವು ತಾರತಮ್ಯವಾಗುವುದಿಲ್ಲ ಏಕೆಂದರೆ ದೈಹಿಕ ವಾಸ್ತವವನ್ನು ಆಧರಿಸಿರುವ ಕಾನೂನುಗಳು ಎಂದಿಗೂ ಅಸಾಂವಿಧಾನಕವಾಗಲು ಸಾಧ್ಯವಿಲ್ಲ, ಪುರುಷನನ್ನು ಪುರುಷನಂತೆ, ಹೆಣ್ಣನ್ನು ಹೆಣ್ಣಿನಂತೆ ಮತ್ತು ಲಿಂಗ ಪರಿವರ್ತಿತರನ್ನು ಲಿಂಗ ಪರಿವರ್ತಿತರಂತೆ ನಡೆಸಿಕೊಂಡರೆ ಅದನ್ನು ತಾರತಮ್ಯವೆಂದು ಪರಿಗಣಿಸಲು ಬರುವುದಿಲ್ಲ ಎಂಬ ವಾದವನ್ನು ಅವರು ಮಂಡಿಸಿರುತ್ತಾರೆ.

[19] (1979) 1 SCC 23

53. ಕ್ರಿಮಿನಲ್ ಕಾನೂನಿನ ಉದ್ದೇಶವು ನಾಗರಿಕರನ್ನು ಹಾನಿಯಿಂದ ರಕ್ಷಿಸುವುದು ಎಂದಿರುವ ಅರ್ಜಿದಾರರು, ಇಬ್ಬರು ಗಂಡಸರ ನಡುವಿನ ಶಾರೀರಿಕ ಸಂಭೋಗ ಆಘಾತಕಾರಿ ಮತ್ತು ಹಾನಿಕಾರಿಯಾಗಿರುವುದರಿಂದ, ಅಂತಹ ವಿಕೃತ ಮನುಷ್ಯ ನಡವಳಿಕೆಯನ್ನು ನಿಷೇಧಿಸಲು, ಶಾಸನದ ಮೂಲಕ ಸೂಕ್ತವಾದ ನಿರ್ಬಂಧಗಳನ್ನು ಹಾಕುವೂದು ಸರ್ಕಾರದ ವ್ಯಾಪ್ತಿಯಲ್ಲೇ ಬರುತ್ತದೆ. ಏಕೆಂದರೆ ಅಸಹಜ ನಡವಳಿಕೆಯನ್ನು ಹೊಂದಿರುವ ಜನರು ಸಮುದಾಯದ ಜೀವನ, ಆರೋಗ್ಯ ಮತ್ತು ಭದ್ರತೆಯನ್ನು ಅಪಾಯಕ್ಕೀಡು ಮಾಡುವುದನ್ನು ನಿಷೇಧಿಸುದು ರಾಜ್ಯದ ಕರ್ತವ್ಯವಾಗಿದೆ. ಅಸಭ್ಯ ಸ್ವರೂಪವಿರುವ ತಡೆಯಿಲ್ಲದ ಆನಂದ, ಒಂದು ನಾಗರಿಕ ಸಮಾಜದ ಬೆಳವಣಿಗೆಗೆ ಪೂರಕವಲ್ಲ, ಮತ್ತು ಅಂತಹ ಅತಿರೇಕದ ಸುಖಗಳನ್ನು ನಿರ್ಬಂಧಿಸಬೇಕಾದ ಅಗತ್ಯವಿದೆ ಮತ್ತು ಹೀಗಾಗಿ, ಐ.ಪಿ.ಸಿ.ಯು 377ನೇ ಪರಿಚ್ಛೇದದಡಿಯಲ್ಲಿ ವಿವರಿಸಲಾಗಿರುವ ಶಾರೀರಿಕ ಸಂಭೋಗದ ಮೇಲೆ ನಿಷೇಧ ವಿಧಿಸುವುದು ವ್ಯಕ್ತಿಗಳ ಸಾಂವಿಧಾನಿಕ ಹಕ್ಕುಗಳನ್ನು ಉಲ್ಲಂಘಿಸುವುದಿಲ್ಲ.

54. 2011 ರಲ್ಲಿ ಈ.ಆ ನಂ. 9341ಏಚ್ ಹೆಸರಿನ ಮತ್ತೊಂದು ಮಧ್ಯಸ್ತಿಕೆಯ ಅರ್ಜಿಯನ್ನು ಸಲ್ಲಿಸಲಾಯಿತು ಮತ್ತು ಅದನ್ನು ಅನುಮತಿಸಲಾಯಿತು. ಅರ್ಜಿದಾರರು, ತಮ್ಮ ಲಿಖಿತ ಸಲ್ಲಿಕೆಗಳಲ್ಲಿ, ಅನೈತಿಕತೆಯ ಪರಿಕಲ್ಪನೆಯನ್ನು ವಿವರಿಸಿದ ನಂತರ, ಸ್ಪಷ್ಟವಾದ ನಿರಂಕುಶತ್ವದ ಸಿದ್ಧಾಂತವು ಪ್ರಸ್ತುತ ಪ್ರಕರಣದಲ್ಲಿ ಯಾವುದೇ ರೀತಿಯಲ್ಲೂ ಅನ್ವಯವಾಗುವುದಿಲ್ಲ, ಏಕೆಂದರೆ ಇಲ್ಲಿ ಕಾನೂನು ಆಸ್ಪಷ್ಟ ಅಥವಾ ನಿರಂಕುಶವಾಗಿಲ್ಲ, ಏಕೆಂದರೆ 377ನೇ ಪರಿಚ್ಛೇದವು ವ್ಯಕ್ತಿಯ ಲಿಂಗ ಮತ್ತು ಲೈಂಗಿಕ ನಿಲುವನ್ನು ಲೆಕ್ಕಿಸದೆಯೇ ಕೃತ್ಯಗಳನ್ನು ಅಪರಾಧೀಕರಿಸುತ್ತದೆ ಎಂದು ವಿವರಿಸುತ್ತಾರೆ. ಸದರಿ ಕಾಯ್ದೆಯು ಯಾವುದೇ ಬಗೆಯ ಲಿಂಗಾಧಾರಿತ ತಾರತಮ್ಯವನ್ನು ಒಳಗೊಳ್ಳದೆ, ಸಾರ್ವತ್ರಿಕವಾಗಿ ಅನ್ವಯವಾಗುವುದು, ಸಂವಿಧಾನದ 3ನೇ ಭಾಗದ ಆಶಯಗಳ ಪ್ರತೀಕವಾಗಿದೆ ಮತ್ತು ಈ ನಿಬಂಧನೆಯಲ್ಲಿ ಉದ್ದೇಶಪೂರ್ವಕ ಅಥವಾ ಅವಿವೇಕದ ತಾರತಮ್ಯವಿಲ್ಲವಾದ ಕಾರಣ ಅದು ನಿರಂಕುಶವಾಗಿಲ್ಲ.

55. ಅರ್ಜಿದಾರರು ಈ ನ್ಯಾಯಾಲಯದ ಗಮನವನ್ನು **ಫಜಲ್ ರಬ್ ಚೌಧರಿ v. ಬಿಹಾರ ರಾಜ್ಯ ಸರ್ಕಾರ**[20] ಪ್ರಕರಣದೆಡೆಗೆ ಸೆಳೆಯುತ್ತಾರೆ. ಈ ಪ್ರಕರಣದಲ್ಲಿ ಈ ನ್ಯಾಯಾಲಯ, 377ನೇ ಪರಿಚ್ಛೇದದಡಿಯಲ್ಲಿನ

[20] (1982) 3 SCC 9

ಅಪರಾಧವು ಲೈಂಗಿಕ ಅಸಭ್ಯತೆಯನ್ನು ಸೂಚಿಸುತ್ತದೆ ಎಂದು ನಿರ್ಧರಿಸಿತ್ತು. ಇದಲ್ಲದೆ, ನಮ್ಮ ದೇಶದಲ್ಲಿ ಪಾಶ್ಚಾತ್ಯ ಸಿದ್ಧಾಂತವನ್ನು ಅನುಕರಿಸುವಂತಹ ಕೆಲಸಗಳಾಗಬಾರದು ಎನ್ನುವ ಅರ್ಜಿದಾರರು, ಅದೇ ವಿಚಾರವನ್ನು ಈ ನ್ಯಾಯಾಲಯವು **ಜಗ್ಮೋಹನ್ ಸಿಂಗ್ v. ಯು.ಪಿ. ರಾಜ್ಯ ಸರ್ಕಾರ**[21] ಪ್ರಕರಣದಲ್ಲಿ ಒಪ್ಪಿಕೊಂಡಿತ್ತು ಎಂದು ವಾದಿಸುತ್ತಾರೆ.

56. **ಗುಜರಾತ್ ಸರ್ಕಾರ v. ಮಿರ್ಜಾಪುರ್ ಮೊತಿ ಕುರೇಶಿ ಕಸಾಬ್ ಜಮಾತ್ ಮತ್ತು ಇತರರು**[22] ಪ್ರಕರಣದ ತೀರ್ಪನ್ನು ಉಲ್ಲೇಖಿಸಿದ ನಂತರ ಅರ್ಜಿದಾರರು, ನಾಗರಿಕತೆ ಅಥವಾ ಸಮಾಜದ ಒಂದು ಭಾಗದ ಹಿತಾಸಕ್ತಿ ಅದೆಷ್ಟೇ ಮುಖ್ಯವಾಗಿದ್ದರೂ, ಅದು ದೇಶ ಅಥವಾ ಸಮುದಾಯದ ಒಟ್ಟಾರೆಯಾದ ಹಿತಾಸಕ್ತಿಯ ವಿಚಾರದಲ್ಲಿ, ಎರಡನೇ ಸ್ಥಾನವನ್ನು ಪಡೆಯುತ್ತದೆ ಎಂಬುದನ್ನು ಒತ್ತಿ ಹೇಳುತ್ತಾರೆ. ಅಲ್ಲದೇ ಮೂಲಭೂತ ಹಕ್ಕುಗಳ ಮೇಲೆ ಹೇರಿರುವ ನಿರ್ಬಂಧಗಳ ಸಮಂಜಸತೆ ನಿರ್ಧರಿಸುವಾಗ, ಸಂವಿಧಾನದ 4ನೇ ಭಾಗದಲ್ಲಿ ಉಲ್ಲೇಖಿಸಲಾಗಿರುವ ನಿರ್ದೇಶಕ ಸಿಧ್ಧಾಂತಗಳನ್ನು ಕೂಡಾ ಪರಿಗಣಿಸಬೇಕು ಎಂದು ವಾದಿಸುತ್ತಾರೆ. ಈ ಮೇಲಿನ ಮನವಿಗಳ ದೃಷ್ಟಿಯಿಂದ, ಅರ್ಜಿದಾರರು ಮೂಲಭೂತ ಹಕ್ಕುಗಳನ್ನು ಅತಿಯಾಗಿ ವಿಸ್ತರಿಸಲು ಆಗುವುದಿಲ್ಲ ಮತ್ತು ದೇಶದ ಆಡಳಿತಕ್ಕೆ ಮೂಲಭೂತವಾಗಿರುವ ಸರ್ಕಾರದ ನಿರ್ದೇಶಕ ತತ್ವಗಳನ್ನು ನಿರ್ಲಕ್ಷಿಸಬಾರದು, ಏಕೆಂದರೆ ಅವುಗಳು ವ್ಯಕ್ತಿಗಳ ಬದುಕಿನ ಮೂಲಭೂತ ಅಗತ್ಯಗಳಿಗಿಂತ ಕಡಿಮೆ ಮಹತ್ವವನ್ನು ಹೊಂದಿಲ್ಲ ಎನ್ನುವ ಅರ್ಜಿದಾರರು, **ಕೇಶವಾನಂದ ಭಾರತಿ v. ಭಾರತ ಸರ್ಕಾರ ಪ್ರಕರಣದ**[23] ತೀರ್ಪಿನಲ್ಲಿ ಇದನ್ನೇ ಹೇಳಲಾಗಿದೆ ಎಂದು ವಾದಿಸುತ್ತಾರೆ.

57. ಮಧ್ಯಸ್ತಿಕೆಯ ಇನ್ನೊಂದು ಅರ್ಜಿ, ಐ.ಎ. ಸಂಖ್ಯೆ.76790, 2018ನ್ನು, ಅಪಾಸ್ಟೊಲಿಕ್ ಅಲಯನ್ಸ್ ಆಫ್ ಚರ್ಚುಗಳು ಮತ್ತು ಉತ್ಕಲ್ ಕ್ರಿಶ್ಚಿಯನ್ ಕೌನ್ಸಿಲ್ನಿಂದ ಸಲ್ಲಿಸಲ್ಪಟ್ಟಿದೆ. ಐ.ಪಿ.ಸಿ.ಯ 377ನೇ ಪರಿಚ್ಛೇದವನ್ನು ವಿವರಿಸುವ ಸಂದರ್ಭದಲ್ಲಿ ನ್ಯಾಯಾಲಯವು, ವ್ಯಕ್ತಿಯನ್ನು ಸಾವಿನ ಅಥವಾ ಹಾನಿಯ ಭಯಕ್ಕೆ ಈಡು ಮಾಡಿ ಒಪ್ಪಿಗೆ ಪಡೆದುಕೊಳ್ಳುವ ಸಂದರ್ಭಗಳೂ ಇರಬಹುದು ಅಥವಾ ಒಪ್ಪಿಗೆಯನ್ನು ತಪ್ಪುಗ್ರಹಿಕೆ, ಮಾನಸಿಕ

[21] (1973) 1 SCC 20

[22] (2005) 8 SCC 534

[23] (1973) 4 SCC 225

ಅಸ್ವಸ್ಥತೆ, ಮಾದಕ ದ್ರವ್ಯ ಸೇವನೆ, ಅಥವಾ ಸದರಿ ಪರಿಚ್ಛೇದದಿಂದ ನಿಷೇಧಿಸಲ್ಪಡುವ ಕೃತ್ಯಗಳ ಪರಿಣಾಮಗಳನ್ನು ಅರ್ಥಮಾಡಿಕೊಳ್ಳಲು ಅಸಮರ್ಥರಾಗಿರುವ ಸಂದರ್ಭರಲ್ಲಿ ಪಡೆಯಬಹುದೆಂಬುದನ್ನು ಪರಿಗಣಿಸಬೇಕೆಂದು ಅರಿಕೆ ಮಾಡಿಕೊಂಡರು.

58. ಅರ್ಜಿದಾರರು ತಮ್ಮ ವಾದವನ್ನು ಮುಂದುವರೆಸುತ್ತ, ಐ.ಪಿ.ಸಿ.ಯ 377ನೇ ಪರಿಚ್ಛೇದ ತನ್ನ ಈಗಿನ ರೂಪದಲ್ಲಿ ಸಂವಿಧಾನದ 14ನೇ ಕಲಮನ್ನು ಉಲ್ಲಂಘಿಸುವುದಿಲ್ಲ, ಏಕೆಂದರೆ ಆದು ಒಂದು ನಿರ್ದಿಷ್ಟ ಅಪರಾಧ ಮತ್ತು ಅದರ ಶಿಕ್ಷೆಯನ್ನು ಮಾತ್ರ ವ್ಯಾಖ್ಯಾನಿಸುತ್ತದೆ ಮತ್ತು ಆ ಶಾಸನಕ್ಕೆ ಯಾವ ವರ್ಗ ಒಳಪಡಬೇಕು ಎಂಬುದನ್ನು ನಿರ್ಧರಿಸಲು ಸರ್ಕಾರಕ್ಕೆ ಅಧಿಕಾರವಿದೆ, ಮತ್ತು ಇದು ಐ.ಪಿ.ಸಿ. 377ನೇ ಪರಿಚ್ಛೇದದ ಸನ್ನಿವೇಶದಲ್ಲಿ ಸಮಂಜಸವಾದ ವರ್ಗೀಕರಣವಾಗಿದೆ ಎಂದು ವಾದಿಸಿದರು.

59. ಅರ್ಜಿದಾರರು ವಾದಿಸುವಂತೆ, ಐ.ಪಿ.ಸಿ.ಯ 377ನೇ ಪರಿಚ್ಛೇದವು, ಸಂವಿಧಾನದ 15ನೇ ಕಲಮನ್ನು ಉಲ್ಲಂಘಿಸುವುದಿಲ್ಲ ಏಕೆಂದರೆ, ಸದರಿ ಕಲಮು, ಧರ್ಮ, ಜನಾಂಗ, ಜಾತಿ, ಲಿಂಗ, ಹುಟ್ಟಿದ ಸ್ಥಳ ಅಥವಾ ಮೇಲಿನ ಯಾವುದನ್ನು ಆಧರಿಸಿರುವ ತಾರತಮ್ಯವನ್ನು ನಿಷೇಧಿಸುತ್ತದೆಯೇ ಹೊರತು, ಲೈಂಗಿಕ ನಿಲುವಿನ ಆಧಾರದ ತಾರತಮ್ಯವನ್ನು ನಿರ್ಬಂಧಿಸುವುದಿಲ್ಲ. ಅರ್ಜಿದಾರರ ಪ್ರಕಾರ, ಲೈಂಗಿಕ ನಿಲುವು ಎಂಬುದು ನಮ್ಮ ಸಂವಿಧಾನದ ಮಟ್ಟಿಗೆ ಹೊರಗಿನ ವಿಚಾರವಾಗಿದ್ದು, ಆದನ್ನು ಒಂದು ಕಾಯ್ದೆ ಅಥವಾ ಶಾಸನದ ಸಾಂವಿಧಾನಿಕ ಸಿಂಧುತ್ವವನ್ನು ಪರಿಶೀಲಿಸಲು ಸಂವಿಧಾನದೊಳಗೆ ತಂದುಕೊಳ್ಳಲು ಆಗುವುದಿಲ್ಲ. ಅರ್ಜಿದಾರರ ಪ್ರಕಾರ, 'ಲೈಂಗಿಕ ಕ್ರಿಯೆ' ಎಂಬ ಪದವನ್ನು 'ಲೈಂಗಿಕ ನಿಲುವು' ಎಂದು ಬದಲಾಯಿಸಬೇಕಾದರೆ, ಅದಕ್ಕೆ ಸಾಂವಿಧಾನಿಕ ತಿದ್ದುಪಡಿಯ ಅಗತ್ಯವಿರುತ್ತದೆ.

60. ತಮ್ಮ ನಿಲುವನ್ನು ಬಲಪಡಿಸಲು ಅರ್ಜಿದಾರರು ಬಹಳವಾಗಿ ಅವಲಂಬಿಸಿರುವ ಯೋಗ್ಯಕಾರ್ತಾ ತತ್ವಗಳು ಸೀಮಿತ ಮಾನ್ಯತೆಯನ್ನು ಹೊಂದಿವೆ ಏಕೆಂದರೆ ಅವುಗಳು ಸರ್ಕಾರಗಳನ್ನು ಪಾಲಿಸಲೇಬೇಕಿರುವ ಅಂತಾರಾಷ್ಟ್ರೀಯ ಒಡಂಬಡಿಕೆಗಳಲ್ಲ ಮತ್ತು ಎಲ್.ಜಿ.ಬಿ.ಟಿ ವ್ಯಕ್ತಿಗಳ ಸಮಸ್ಯೆಗಳ ಕುರಿತು ಸರ್ಕಾರಗಳು ಯಾವುದೇ ಬಗೆಯ ಅಂತಾರಷ್ಟೀಯ ಒಪ್ಪಂದ ಮಾಡಿಕೊಂಡಿಲ್ಲ ಅಥವಾ ಯಾವುದೇ ಬಗೆಯ ಮಾನವ ಹಕ್ಕುಗಳ ಒಡಂಬಡಿಕೆಗಳನ್ನು ಕೂಡಾ ಮಾಡಿಕೊಂಡಿಲ್ಲ, ಎಂದು ಮಧ್ಯಸ್ತಿಕೆದಾರರು ವಾದಿಸುತ್ತಾರೆ,

61. ಅರ್ಜಿದಾರರು ಮುಂದುವರೆಯುತ್ತಾ, **ಸುರೇಶ್ ಕೌಶಲ್** (ಮೇಲ್ಕಂಡ) ಪ್ರಕರಣದಲ್ಲಿನ ಈ ನ್ಯಾಯಾಲಯದ ನಿರ್ಧಾರವನ್ನು ಮರುಪರಿಶೀಲಿಸುವ ಅಗತ್ಯವಿಲ್ಲ ಎಂದು ವಾದಿಸಿದ್ದಾರೆ. ಈ ಪ್ರಕರಣದಲ್ಲಿ, ಶಾಸನಗಳು ಸಂವಿಧಾನಬದ್ಧವಾಗಿರುತ್ತವೆ ಎಂಬ ಒಂದು ನಂಬುಗೆಯಿದ್ದು ನ್ಯಾಯಾಲಯವು ಸ್ವಯಂ-ಸಂಯಮವನ್ನು ಅಳವಡಿಸಿಕೊಂಡು ನ್ಯಾಯಾಂಗ ಶಾಸನವನ್ನು ಹುಟ್ಟುಹಾಕುವ ಕೆಲಸದಿಂದ ದೂರವಿರಬೇಕು ಎಂದು ನಿರ್ಧರಿಸಲಾಗಿತ್ತು. ಅರ್ಜಿದಾರರ ದೃಷ್ಟಿಯಲ್ಲಿ, ಸಂಸತ್ತಿನ ಶಾಸನಬದ್ಧ ಜ್ಞಾನವನ್ನು ಗೌರವಿಸಬೇಕು ಮತ್ತು ಐ.ಪಿ.ಸಿ.ಯ 377ನೇ ಪರಿಚ್ಛೇದದ ತಿದ್ದುಪಡಿಯನ್ನು ಬಯಸಿದಲ್ಲಿ, ಆ ವಿಚಾರವನ್ನು ಸಂಸತ್ತಿಗೆ ಬಿಡಬೇಕು.

62. ಮಧ್ಯಸ್ತಿಕೆದಾರರು, ಈ ಪ್ರಕರಣದಲ್ಲಿ ಅರ್ಜಿದಾರರ ಪ್ರಾರ್ಥನೆಗಳನ್ನು ಮನ್ನಿಸಿದರೆ, ನ್ಯಾಯಾಂಗವೇ ಕಾನೂನುಗಳನ್ನು ರಚಿಸಿದಂತಾಗುತ್ತದೆ ಏಕೆಂದರೆ ನ್ಯಾಯಾಲಯ ಶಾಸನದೊಳಗೆ ಪದಗಳನ್ನು ಸೇರಿಸಲು ಅಥವಾ ಇರುವ ಪದಗಳನ್ನು ಅಳಿಸಲು ಸಾಧ್ಯವಿಲ್ಲ. 'ಒಪ್ಪಿಗೆಯಿರುವ' ಮತ್ತು/ಅಥವಾ ಒಪ್ಪಿಗೆಯಿಲ್ಲದ' ಎಂಬ ಪದಗಳು 377ನೇ ಪರಿಚ್ಛೇದದಲ್ಲಿ ಉಲ್ಲೇಖಿಸಲ್ಪಟ್ಟಿಲ್ಲ ಮತ್ತು ಆದ್ದರಿಂದ ನ್ಯಾಯಾಲಯಗಳು ಅಂತಹ ಕೃತಕ ವ್ಯತ್ಯಾಸವನ್ನು ಸೃಷ್ಟಿಸಲು ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಈ ನಿಲುವನ್ನು ಬಲಪಡಿಸಲು, ಅರ್ಜಿದಾರರು ಈ **ಸಾಕ್ಷಿ v. ಭಾರತ ಸರ್ಕಾರ ಮತ್ತು ಇತರರು**[24] ಪ್ರಕರಣದಲ್ಲಿನ ಈ ನ್ಯಾಯಾಲಯದ ತೀರ್ಪನ್ನು ಅವಲಂಬಿಸಿದ್ದಾರೆ ಈ ಪ್ರಕರಣದಲ್ಲಿ, ಕಾನೂನನ್ನು ವ್ಯಾಖ್ಯಾನಿಸುವಾಗ ನ್ಯಾಯಾಲಯದ ಗಮನ ಏನು ಹೇಳಲಾಗಿದೆ ಎಂಬುದರ ಜೊತೆಗೆ ಏನನ್ನು ಹೇಳಲಾಗಿಲ್ಲ ಎಂಬುದರ ಮೇಲಿರಬೇಕು ಎಂದು ಗಮನಿಸಲಾಗಿತ್ತು ಮತ್ತು ಅಪರಾಧವೊಂದನ್ನು ನಿರ್ಧರಿಸುವ ಅಥವಾ ಶಿಕ್ಷೆಯೊಂದನ್ನು ವಿಧಿಸುತ್ತಿರುವ ಶಾಸನವೊಂದನ್ನು ಗಂಭೀರವಾಗಿ ಪರಿಗಣಿಸಬೇಕು ಎಂಬುದನ್ನು ಒಪ್ಪಿಕೊಂಡಿರುವುದರಿಂದ, ನ್ಯಾಯಾಲಯ ಕೆಲವು ಪದಗಳನ್ನು ಬದಲಿಸಿ ಬೇರೆ ಪದಳಾನ್ನು ಪರಿಚಯಿಸುವುದು ತಪ್ಪಾದುದು ಮತ್ತು ಅಪಾಯಕಾರವಾದುದು ಎಂದು ನಿರ್ಧರಿಸಲಾಗಿತ್ತು.

63. **ಭಾರತ ಸರ್ಕಾರ ಮತ್ತು ಇತರರು v. ದೇವ್ಕೀ ನಂದನ್ ಆಗರ್ವಾಲ್**[25] ಪ್ರಕರಣದ ತೀರ್ಪಿನೆಡೆಗೆ ನ್ಯಾಯಾಯಲಯದ ಗಮನವನ್ನು ಸೆಳೆದಿರುವ ಅರ್ಜಿದಾರರು, ಸದರಿ ಪ್ರಕರಣದಲ್ಲಿ, ಶಾಸನ ರೂಪಿಸುವ

[24] (2004) 5 SCC 518

[25] 1992 Supp. (1) SCC 323

ಅಧಿಕಾರವನ್ನು ನ್ಯಾಯಾಲಯಗಳಿಗೆ ನೀಡಲಾಗಿಲ್ಲವಾದ್ದರಿಂದ ಅವುಗಳಿಗೆ ಹೊಸ ಶಾಸನಗಳನ್ನು ರೂಪಿಸುವ ಅಧಿಕಾರವಿಲ್ಲ ಮತ್ತು ಹಾಗಾಗಿ, ನ್ಯಾಯಲಯಗಳು ಶಾಸನವೊಂದನ್ನು ಪುನಃ ಬರೆಯುವಂತಿಲ್ಲ ಮತ್ತು ಹೊಸ ಶಾಸನವನ್ನು ರೂಪಿಸುವಂತಿಲ್ಲ, ಮತ್ತು ನ್ಯಾಯಾಲಯಗಳು ಶಾಸವೊಂದಕ್ಕೆ ಪದಗಳನ್ನು ಸೇರಿಸುವಂತಿಲ್ಲ ಅಥವಾ ಅದರಲ್ಲಿ ಇಲ್ಲದಿರುವ ಪದಗಳನ್ನು ಊಹಿಸಿಕೊಳ್ಳನ್ತಿಲ್ಲ ಎಂದು ನಿರ್ಧರಿಸಲಾಗಿತ್ತು . ಯಾವುದು ಕಾನೂನು ಯಾವುದು ಅಲ್ಲ ಎಂಬುದನ್ನಷ್ಟೇ ನ್ಯಾಯಾಲಯಗಳು ನಿರ್ಧರಿಸಬೇಕು.

64. ಐ.ಪಿ.ಸಿ.ಯ 377ನೇ ಪರಿಚ್ಛೇದವನ್ನು ನಿರಪರಾಧೀಕರಿಸಿದರೆ, ಶಾಸಕಾಂಗೀಯ ವರ್ಗದ ಮೂಲಕ ಪರಿಹರಿಸಲು ಸಾಧ್ಯವಾಗದಂತಹ ಸಾಮಾಜಿಕ ಸಮಸ್ಯೆಗಳ ಪ್ರವಾಹವನ್ನು ಎದುರಿಸಬೇಕಾಗುತ್ತದೆ, ಏಕೆಂದರೆ ಅಂತಹ ಸಂದರ್ಭದಲ್ಲಿ, ಸಮಾನ-ಲೈಂಗಿಕ ವಿವಾಹಗಳು ಅನಿರೀಕ್ಷಿತ ಫಲಿತಾಂಶಗಳನ್ನು ಪಡೆಯುವ ಸಾಮಾಜಿಕ ಪ್ರಯೋಗಗಳಾಗಿ ಪರಿಣಮಿಸಿಬಿಡುತ್ತವೆ.

65. ಇದಲ್ಲದೆ, ಅರ್ಜಿದಾರರು, 377ನೇ ಪರಿಚ್ಛೇದದ ನಿರಪರಾಧೀಕರಣ, ಪಾರ್ಸಿ ಮದುವೆ ಮತ್ತು ವಿಚ್ಛೇದನ ಕಾಯಿದೆಯ, 1936 ರ 32ನೇ(ಡಿ) ಪರಿಚ್ಛೇದ; ಹೆಂಡತಿಗೆ (ಈ) ತನ್ನ ಗಂಡ ಮದುವೆಯ ವಿಧಿವಿಧಾನಗಳ ನಂತರ, ಅತ್ಯಾಚಾರ, ಗುದಸಂಭೋಗ ಅಥವಾ ಪ್ರಾಣಿಸಂಭೋಗದಂತಹ ತಪ್ಪುಗಳನ್ನು ಮಾಡಿದ್ದನೆಂಬ ಆಧಾರದಲ್ಲಿ  ಜಿಲ್ಲಾ ನ್ಯಾಯಾಲಯಕ್ಕೆ ವಿಚ್ಛೇದನ ನೀಡುವಂತೆ ಮನವಿ ಸಲ್ಲಿಸುವ ಅವಕಾಶ ಒದಗಿಸುವ ವಿಶೇಷ ವಿವಾಹ ಕಾಯಿದೆ 1954 ರ 27 (7) (1ಎ)ಎ ಪರಿಚ್ಛೇದ ; 1869 ರ ಭಾರತೀಯ ವಿಚ್ಛೇದನ ಕಾಯಿದೆಯ 10 (2)ನೇ ಪರಿಚ್ಛೇದ ಮತ್ತು ಹಿಂದೂ ವಿವಾಹ ಕಾಯಿದೆ, 1955ರ 13ನೇ(2) ಪರಿಚ್ಛೇದದಂತಹ ಅಸ್ತಿತ್ವದಲ್ಲಿರುವ ಕಾನೂನುಗಳ ಮೇಲೆ ಸರಣಿ ಪರಿಣಾಮವನ್ನು ಉಂಟುಮಾಡುತ್ತದೆ ಎಂದೂ ವಾದಿಸಿದ್ದಾರೆ

## E. ನಾಜ್ ಪ್ರತಿಷ್ಠಾನ ಮತ್ತು ಸುರೇಶ್ ಕೌಶಲ್  ಪ್ರಕರಣದ ನಿರ್ಧಾರಗಳು

66. ನಾಝ್ ಪ್ರತಿಷ್ಠಾನ ಪ್ರಕರಣದಲ್ಲಿ ದೆಹಲಿ ಉಚ್ಚ ನ್ಯಾಯಾಲಯ ಹೇಳಿದ್ದರೆಡೆಗೆ ಈಗ ನಾವು  ಗಮನಹರಿಸಿ ಅದರ ನಂತರ ಸುರೇಶ್ ಕೌಶಲ್ ಪ್ರಕರಣದ ನಿರ್ಧಾರದತ್ತ ನೋಡೋಣ. ಸಂವಿಧಾನದ 15ನೇ ಕಲಮಿನ ಪ್ರಕಾರ ಲಿಂಗ ಸೇರಿದಂತೆ ಹಲವಾರು ವಿಚಾರಗಳ ಆಧಾರದಲ್ಲಿನ ತಾರತಮ್ಯವನ್ನು ನಿಷೇಧಿಸಲಾಗಿದೆ ಎಂದು ದೆಹಲಿ ಉಚ್ಚ ನ್ಯಾಯಾಲಯ ಅಭಿಪ್ರಾಯಪಟ್ಟಿದೆ. 'ಲಿಂಗ' ಎಂಬುದರ ವಿಸ್ತಾರವಾದ ವ್ಯಾಖ್ಯಾನಕ್ಕೆ

ಆದ್ಯತೆ ನೀಡಿದ ಉಚ್ಚನ್ಯಾಯಾಲಯ, 'ಲೈಂಗಿಕ ನಿಲುವಿನ'ದ ಆಧಾರದ ಮೇಲಿನ ತಾರತಮ್ಯವನ್ನು ನಿಷೇಧಿಸುವಂತೆ ಮಾಡಿತು ಮತ್ತು ಲಿಂಗ-ತಾರತಮ್ಯ ಕೇವಲ ಲಿಂಗಕ್ಕಷ್ಟೇ ಅನ್ವಯಿಸುತ್ತದೆ ಎಂದು ಸರಳವಾಗಿ ತಿಳಿದುಕೊಳ್ಳಲು ಬರುವುದಿಲ್ಲ ಎಂದು ನಿರ್ಧರಿಸಿತ್ತು. ಉಚ್ಚ ನ್ಯಾಯಾಲಯದ ದೃಷ್ಟಿಕೋನದ ಪ್ರಕಾರ, ಲೈಂಗಿಕ ನಿಲುವನ್ನು ಆಧರಿಸಿರುವ ತಾರತಮ್ಯವು ರೂಢಮಾದರಿಗಳಿಗೆ ಸಂಬಂಧಿಸಿದ ನಿರ್ಧಾರಗಳು ಮತ್ತು ಯಾವ ಲಿಂಗದವರು ಹೀಗೆ ನಡೆದುಕೊಳ್ಳಬೇಕೆಂಬುದರ ಕುರಿತಾದ ಸಾಮಾನ್ಯೀಕರಣವನ್ನು ಅವಲಂಬಿಸಿದೆ.

67. ಭಾರತೀಯ ಸಮಾಜದಲ್ಲಿ ಆಳವಾಗಿ ಬೇರೂರಿರುವ ಮತ್ತು ಹಲವಾರು ಶತಮಾನಗಳ ಕಾಲ ಪೋಷಿಸಲಾಗಿರುವ ಒಳಗೊಳ್ಳುವಿಕೆಯ ಮೌಲ್ಯವನ್ನು ಭಾರತೀಯ ಸಂವಿಧಾನ ಸಹ ಪ್ರತಿಬಿಂಬಿಸುತ್ತದೆ ಎಂಬ ವಿಚಾರವನ್ನು ಉಚ್ಚ ನ್ಯಾಯಾಲಯವು ವಿವರಿಸಿತು. ಬಹುಸಂಖ್ಯಾತರಿಂದ ವಿಚಿತ್ರ ಅಥವಾ ವಿಭಿನ್ನರೆಂದು ಗ್ರಹಿಸಲ್ಪಟ್ಟಿರುವವರನ್ನು ಹೊರಗುಳಿಸುವುದು ಅಥವಾ ಅವರನ್ನು ಬಹಿಷ್ಕರಿಸುವುದು ಸಲ್ಲ ಎಂದು ಉಚ್ಚ ನ್ಯಾಯಾಲಯ ಸ್ಪಷ್ಟವಾಗಿ ಹೇಳಿದೆ. ಉಚ್ಚ ನ್ಯಾಯಾಲಯದ ದೃಷ್ಟಿಕೋನದಲ್ಲಿ, ಸಮಾಜವು ಒಳಗೊಳ್ಳುವಿಕೆ ಮತ್ತು ಅರ್ಥಮಾಡಿಕೊಳ್ಳುವಿಕೆಯನ್ನು ಪ್ರದರ್ಶಿಸಿದಾಗ, ಎಲ್.ಜಿ.ಬಿ.ಟಿ ವ್ಯಕ್ತಿಗಳಿಗೆ ಘನತೆ ಮತ್ತು ತಾರತಮ್ಯವಿಲ್ಲದ ಜೀವನದ ಭರವಸೆ ನೀಡಬಹುದು.

68. ಶಾಸನಬದ್ಧವಾದ ಕ್ರಿಮಿನಲ್ ಕಾನೂನೊಂದು, ಎ.ಜಿ.ಬಿ.ಟಿ. ವ್ಯಕ್ತಿಗಳು ಯಾರು ಎಂಬುದರ ಕುರಿತ ಜನಪ್ರಿಯ ತಪ್ಪುಗ್ರಹಿಕೆಗಳಿಗೆ ಒಳಗಾಗುವುದನ್ನು ಸಂವಿಧಾನ ಅನುಮತಿಸುವುದಿಲ್ಲ ಎಂದು ಉಚ್ಚ ನ್ಯಾಯಾಲಯ ಅಭಿಪ್ರಾಯಪಟ್ಟಿದೆ, ತಾರತಮ್ಯವು ಸಮಾನತೆಗೆ ವಿರುದ್ಧವಾದ ತತ್ವವಾಗಿದ್ದು, ಮತ್ತು ಸಮಾನತೆಯನ್ನು ಅದರ ನೈಜವಾದ ಅರ್ಥದಲ್ಲಿ ಗುರುತಿಸಿದಾಗ ಅದು ಪ್ರತಿ ವ್ಯಕ್ತಿಯ ಘನತೆಯನ್ನು ಹೆಚ್ಚಿಸುತ್ತದೆ ಎಂಬುದನ್ನು ಮರೆಯಬಾರದು ಎಂದು ನುಡಿಯಿತು. ಅದಲ್ಲದೆ, ಸಾಮಾಜಿಕ ನೈತಿಕತೆಯು ಸಾಂವಿಧಾನಿಕ ನೈತಿಕತೆಯ ಪರಿಕಲ್ಪನೆಯೆದುರು ಸೋಲೊಪ್ಪಿಕೊಳ್ಳಬೇಕೆಂಬ ನಿಲುವನ್ನು ಉಚ್ಚ ನ್ಯಾಯಾಲಯ ತಾಳಿತ್ತು.

69. ಮೇಲೆ ವಿವರಿಸಿರುವ ಕಾರಣಗಳ ಆಧಾರದಲ್ಲಿ, ಉಚ್ಚ ನ್ಯಾಯಾಲಯವು, ಒಪ್ಪಿಗೆಯಿರುವ ವಯಸ್ಕರು ಖಾಸಗೀಯಾಗಿ ನಡೆಸುವ ಲೈಂಗಿಕ ಕ್ರಿಯೆಗಳನ್ನು ಅಪರಾಧೀಕರಿಸುವ ಐ.ಪಿ.ಸಿ.ಯ 377ನೇ ಪರಿಚ್ಛೇದವು

ಸಂವಿಧಾನದ 14, 15 ಮತ್ತು 21ನೇ ಕಲಮುಗಳನ್ನು ಉಲ್ಲಂಘಿಸುತ್ತದೆ ಎಂದು ಘೋಷಿಸಿತು, ಆದರೆ ಒಪ್ಪಿಗೆಯಿಲ್ಲದ ಶಿಶ್ನ ಮತ್ತು ಯೋನಿ ಸಮಾಗಮವನ್ನು ಒಳಗೊಳ್ಳದ ಲೈಂಗಿಕ ಕ್ರಿಯೆಗಳು ಮತ್ತು ಅಪ್ರಾಪ್ತರೊಂದಿಗೆ ನಡೆಸಲಾಗುವ ಶಿಶ್ನ ಯೋನಿ ಸಮಾಗಮವಿಲ್ಲದ ಲೈಂಗಿಕ ಕ್ರಿಯೆಗಳ ವಿಚಾರದಲ್ಲಿ ಐ.ಪಿ.ಸಿ.ಯ 377ನೇ ಪರಿಚ್ಛೇದ ಮಾನ್ಯವಾಗಿರುತ್ತದೆ ಎಂದು ಉಚ್ಚ ನ್ಯಾಯಾಲಯ ತೀರ್ಪು ನೀಡಿತ್ತು.

70. ಸುರೇಶ ಕೌಶಲ್ ಪ್ರಕರಣದಲ್ಲಿ (ಮೇಲ್ಕಂಡ) ದೆಹಲಿ ಉಚ್ಚ ನ್ಯಾಯಾಲಯದ ತೀರ್ಪನ್ನು ಪ್ರಶ್ನಿಸಲಾಯಿತು ಮತ್ತು ಆ ಸಂದರ್ಭದಲ್ಲಿ ಈ ನ್ಯಾಯಾಲಯವು ಐ.ಪಿ.ಸಿ.ಯ 377ನೇ ಪರಿಚ್ಛೇದದ ವ್ಯಾಪ್ತಿಯ ಅಡಿಯಲ್ಲೇ ಪರಿಗಣಿಸಲಾಗುವ ಕ್ರಿಯೆಗಳನ್ನು ಅಂತಹ ಕ್ರಿಯೆ ಮತ್ತು ಅದು ನಡೆದ ಸಂದರ್ಭಗಳ ಆಧಾರದಲ್ಲಿ ಮಾತ್ರ ನಿರ್ಧರಿಸಬಹುದು ಎಂದು ಅಭಿಪ್ರಾಯಪಟ್ಟಿತು. ಹಾಗೆ ಅಭಿಪ್ರಾಯ ಮಂಡಿಸುವಾಗ ನ್ಯಾಯಾಲಯವು ಐ.ಪಿ.ಸಿ.ಯ 377ನೇ ಪರಿಚ್ಛೇದವು ವಯಸ್ಸು ಮತ್ತು ಒಪ್ಪಿಗೆಯನ್ನು ಮೀರಿ ಅನ್ವಯವಾಗುತ್ತದೆ, ಮತ್ತು ಐ.ಪಿ.ಸಿ.ಯ 377ನೇ ಪರಿಚ್ಛೇದವು ಒಂದು ನಿರ್ದಿಷ್ಟ ಬಗೆಯ ಜನರನ್ನು ಅಥವಾ ಗುರುತನ್ನು ಅಥವಾ ನೀಲುವನ್ನು ಅಪರಾಧೀಕರಿಸುವುದಿಲ್ಲ, ಬದಲಿಗೆ ಅದು ಕೆಲ ಕೃತ್ಯಗಳನ್ನು ಎಸಗಿದಾಗ ಅವನ್ನು ಅಪರಾಧವೆಂದು ಪರಿಗಣಿಸುತ್ತದೆ ಎಂದು ನಿರ್ಧರಿಸಿತು. ಸುರೇಶ್ ಕೌಶಲ್ (ಮೇಲ್ಕಂಡ) ಪ್ರಕರಣದಲ್ಲಿ ನ್ಯಾಯಾಲಯದ ತಾಳಿದ ನಿಲುವಿನ ಪ್ರಕಾರ ಅಂತಹ ನಿಷೇಧ ಲಿಂಗಾಧಾರಿತ ಅಸ್ಮಿತೆ ಮತ್ತು ಮತ್ತು ನಿಲುವುಗಳಾಚೆಗೆ ಲೈಂಗಿಕ ನಡವಳಿಕೆಯನ್ನು ನಿಯಂತ್ರಿಸುತ್ತದೆ.

71. ಸಾಮಾನ್ಯವಾಗಿ ಶಾರೀರಿಕ ಸಂಭೋಗದಲ್ಲಿ ಪಾಲ್ಗೊಳ್ಳುವವರು ಮತ್ತು ನಿಸರ್ಗದ ನಿಯಮಕ್ಕೆ ವಿರುದ್ಧವಾಗಿ ಶಾರೀರಿಕ ಸಂಭೋಗದಲ್ಲಿ ಪಾಲ್ಗೊಳ್ಳುವವರು ವಿವಿಧ ವರ್ಗಗಳಿಗೆ ಸೇರುತ್ತಾರೆ ಮತ್ತು ಎರಡನೇ ವಿಭಾಗಕ್ಕೆ ಸೇರುವ ಜನರು ಐ.ಪಿ.ಸಿ. ಯು 377 ಪರಿಚ್ಛೇದ ನಿರಂಕುಶತ್ವ ಮತ್ತು ಅತಾರ್ಕಿಕ ವರ್ಗೀಕರಣದ ಸಮಸ್ಯೆಯಿಂದ ಬಳಲುತ್ತಿದೆ ಎಂದು ಹೇಳುವಂತಿಲ್ಲ ಎಂದು ನ್ಯಾಯಾಲಯ ಗಮನಿಸಿತು. ಭಾರತೀಯ ದಂಡ ಸಂಹಿತೆಯ 377 ನೇ ಪರಿಚ್ಛೇದದ ವ್ಯಾಪ್ತಿಯನ್ನು ಕುಗ್ಗಿಸುವಾಗ, ದೇಶದ ಜನಸಂಖ್ಯೆಯ ಅತಿ ಸಣ್ಣ ಭಾಗ ಮಾತ್ರ ಸಮಲೈಂಗಿಕ ಸ್ತ್ರೀ ಪುರುಷರು, ಉಭಯಲಿಂಗಿಗಳು ಅಥವಾ ಲಿಂಗ ಪರಿವರ್ತಿತರನ್ನು ಹೊಂದಿದ್ದು, ಕಳೆದ 150 ವರ್ಷಗಳಲ್ಲಿ 200 ಜನರಿಗಿಂತ ಕಡಿಮೆ ಜನರನ್ನು ಭಾರತೀಯ ದಂಡ ಸಂಹಿತೆಯ 377ನೇ

ಪರಿಚ್ಛೇದದಡಿಯಲ್ಲಿ ಶಿಕ್ಷಿಸಲಾಗಿದೆ ಎಂಬುದನ್ನು ನಿರ್ಲಕ್ಷಿಸಲು ಆಗುವುದಿಲ್ಲ ಎಂದು ಗಮನಿಸಿದ ನ್ಯಾಯಾಲಯವು, ಆದ್ದರಿಂದ ಈ ವಿಚಾರವನ್ನು ಭಾರತೀಯ ದಂಡ ಸಂಹಿತೆಯ 377 ನೇ ಪರಿಚ್ಛೇದವು ಸಂವಿಧಾನದ 14, 15 ಮತ್ತು 21ನೇ ಕಲಮುಗಳ ಆಶಯಕ್ಕೆ ವಿರುದ್ಧವಾಗಿದೆ ಎಂಬುದನ್ನು ಘೋಷಿಸಲು ಸೂಕ್ತವಾದ ಆಧಾರವಾಗಿ ಬಳಸಿಕೊಳ್ಳಲು ಬರುವುದಿಲ್ಲ ಎಂದು ನಿರ್ಧರಿಸಿತು.

72. ಸದರಿ ನಿಬಂಧನೆಯು ಎಲ್.ಜಿ.ಬಿ.ಟಿ ಸಮುದಾಯಕ್ಕೆ ಸೇರಿದವರ ಮೇಲೆ ದೌರ್ಜನ್ಯ, ಬೆದರಿಕೆ ಮತ್ತು ಕಿರುಕುಳವನ್ನು ಎಸಗುವ ಸಾಧನವಾಗಿ ಮಾರ್ಪಟ್ಟಿದೆ ಎಂಬ ಅರ್ಜಿದಾರರ ಮನವಿಯನ್ನು, ನ್ಯಾಯಾಯಾಲವು, ಸದರಿ ಪರಿಚ್ಛೇದದವು ಅಂತಹ ನಡವಳಿಕೆಯನ್ನು ಕಡ್ಡಾಯಪಡಿಸಿಲ್ಲ ಅಥವಾ ಅದಕ್ಕೆ ಮನ್ನಣೆ ನೀಡಿಲ್ಲ ಮತ್ತು ಸದರಿ ಪರಿಚ್ಛೇದವನ್ನು ಪೋಲಿಸ್ ಅಧಿಕಾರಿಗಳು ಮತ್ತು ಇತರರು ದುರ್ಬಳಕೆಮಾಡಿಕೊಳ್ಳುತ್ತಿದ್ದಾರೆ ಎಂಬುದು ಆ ಪರಿಚ್ಛೇದದಲ್ಲಿರುವ ತಪ್ಪುಗಳಿಗೆ ಹಿಡಿದ ಕೈಗನ್ನಡಿಯಲ್ಲ ಎಂದು ತಳ್ಳಿಹಾಕಿ, ಆದರೂ ಭಾರತೀಯ ಶಾಸಕಾಂಗವು ಭಾರತೀಯ ದಂಡ ಸಂಹಿತೆಯ 377ನೇ ಪರಿಚ್ಛೇದದ ತಿದ್ದುಪಡಿಯ ಸಾಧಕಬಾಧಕಗಳನ್ನು ನಿರ್ಧರಿಸುವಾಗ, ಈ ವಿಚಾರವನ್ನು ಒಂದು ಪ್ರಮುಖ ಅಂಶವಾಗಿ ಪರಿಗಣಿಸಬಹುದು ಎಂದು ಅಭಿಪ್ರಾಯ ಪಟ್ಟಿತು .

## F. ಐ.ಪಿ.ಸಿ.ಯ 377ನೇ ಪರಿಚ್ಛೇದಕ್ಕೆ ಸಂಬಂಧಿಸಿದ ಇತರ ನ್ಯಾಯಾಂಗ ತೀರ್ಮಾನಗಳು

73. ಈಗ ನಾವುಗಳು ಐ.ಪಿ.ಸಿ.ಯ 377ನೇ ಪರಿಚ್ಛೇದದ ಮೇಲೆ ಈ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯಗಳು ಮಂಡಿಸಿದ ಕೆಲವು ತೀರ್ಪುಗಳು ಮತ್ತು ತೆಗೆದುಕೊಂಡ ಕೆಲ ನಿಲುವುಗಳನ್ನು, ಸಮಗ್ರ ದೃಷ್ಟಿಕೋನವನ್ನು ಪಡೆಯುವ ಉದ್ದೇಶದಿಂದ ಗಮನಿಸಬಹುದು.

74. ಈ ನಿಬಂಧನೆಯನ್ನು ಅರ್ಥೈಸಿಕೊಳ್ಳುವಾಗ ನ್ಯಾಯಾಲಯಗಳು, ಈ ನಿಬಂಧನೆಯು ಕೆಲವು ಕೃತ್ಯಗಳನ್ನು ನಿಗದಿಪಡಿಸುತ್ತದೆ, ಮತ್ತು ಅವುಗಳಲ್ಲಿ ತೊಡಗಿಕೊಂಡರೆ ಅದು ಅಪರಾಧವಾಗುತ್ತದೆ ಎಂಬುದನ್ನು ನಿರ್ಧರಿಸಿವೆ. **ಚಿಲ್ಡ್ರನ್ ಇಂಡಿಯಾ ಫೌಂಡೇಶನ್ ಮತ್ತೊಬ್ಬರು ವಿ. ಅಲನ್ ಜಾನ್ ವಾಟರ್ಸ್ ಮತ್ತು ಇತರರು ಪ್ರಕರಣದಲ್ಲಿ**[26], ನ್ಯಾಯಾಲಯವು ನಿಸರ್ಗದ ನಿಯಮಕ್ಕೆ ವಿರುದ್ಧವಾದ ದೈಹಿಕ ಸಂಭೋಗದ ವಿಷಯವನ್ನು

[26] (2011) 6 SCC 261

ಪರಾಂಬರಿಸುತ್ತಿತ್ತು, ಇಲ್ಲಿ ದಾಖಲಿಸಲಾಗಿದ್ದ ವಸ್ತುವನ್ನು ಆರೋಪಿ ಸಂಖ್ಯೆ 2 ಮತ್ತು 3, ಪ್ರಾಸಿಕ್ಯೂಶನ್ ಸಾಕ್ಷಿ 1 ಮತ್ತು 4 ರ ಜೊತೆ ಲೈಂಗಿಕ ಕ್ರಿಯೆ ಮತ್ತು ಮುಖಮೈಥುನ ನಡೆಸಿದ್ದಾರೆ ಎಂದು ತೋರ್ಪಡಿಸುತ್ತಿತ್ತು. ಐ.ಪಿ.ಸಿ.ಯ 377ನೇ ಪರಿಚ್ಛೇದದ ವಿಚಾರಗಳು ಸಾಬೀತಾದವು ಎಂದು ಅಭಿಪ್ರಾಯ ವ್ಯಕ್ತಪಡಿಸಿದ ನ್ಯಾಯಾಲಯವು, ಆ ಪ್ರಕಾರವಾಗಿ, 6 ವರ್ಷಗಳ ಕಠಿಣ ಸೆರೆವಾಸದ ಶಿಕ್ಷೆಯನ್ನು ಪುನರುಚ್ಚರಿಸಿ, ದಂಡ ವಿಧಿಸಿರುವುದನ್ನು ದೃಢಪಡಿಸಿತು. **ಫಜಲ್ ರಬ್ ಚೌಧರಿ (ಮೇಲ್ಕಂಡ)** ಪ್ರಕರಣದಲ್ಲಿ, ನ್ಯಾಯಾಲಯ ಅಪರಾಧಿಯನ್ನು ಐ.ಪಿ.ಸಿ.ಯ 377ನೇ ಪರಿಚ್ಛೇದದಡಿಯ ಆರೋಪದಲ್ಲಿ ಶಿಕ್ಷೆಗೀಡುಮಾಡಿದರೂ, ಘಟಿಸಿದ ಕ್ರಿಯೆಯೆಯಲ್ಲಿ ಬಲವಂತವೇನೂ ನಡೆದಿರಲಿಲ್ಲ ಎಂಬುದನ್ನು ಗಮನಿಸಿತು. ಇಂತಹ ಕ್ರಿಯೆಗಳಿಗೆ ಅನುಮತಿ ನೀಡುವ ಸಮಾಜಗಳು ಮತ್ತು ಕೆಲವು ರಾಷ್ಟ್ರಗಳಲ್ಲಿ ಸಮಲೈಂಗಿಕತೆಯನ್ನು ಕಾನೂನುಬದ್ಧಗೊಳಿಸಿರುವ ಅಂಶವನ್ನು ನ್ಯಾಯಾಲಯಾ ಗಣನೆಗೆ ತೆಗೆದುಕೊಂಡಿತು. ಅದೇ ಹಿನ್ನೆಲೆಯಲ್ಲಿ, ನ್ಯಾಯಾಲಯವು ಅಪರಾಧಿಗೆ ವಿಧಿಸಲಾಗಿದ್ದ 3 ವರ್ಷಗಳ ಶಿಕ್ಷೆಯನ್ನು 6 ತಿಂಗಳಿಗೆ ತಗ್ಗಿಸಿತು ಮತ್ತು ಅಪರಾಧ ಮತ್ತು ಶಿಕ್ಷೆಯ ತೀವ್ರತೆಯ ಮೇಲೆ ಮೇಲಿನ ವಿಚಾರಗಳು ಪ್ರಭಾವ ಬೀರುತ್ತವೆಯಾದ್ದರಿಂದ, ಆ ಅಂಶಗಳನ್ನು ಸಹ ಗಮನದಲ್ಲಿಟ್ಟುಕೊಳ್ಳಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿತು.

75. **ಸುರೇಶ್ ಕೌಶಲ್** ಪ್ರಕರಣದಲ್ಲಿ ಕೂಡಾ ಉಲ್ಲೇಖಿಸಲಾಗಿರುವ **ಖಾನು v. ಚಕ್ರವರ್ತಿ**[27] ಪ್ರಕರಣದ ಉದಾಹರಣೆಯನ್ನು ಇಲ್ಲಿ ನೀಡಬಹುದು. ಭಾರತದ ನ್ಯಾಯಾಲಯಗಳು ನಿಸರ್ಗದ ನಿಯಮಕ್ಕೆ ವಿರುದ್ಧವಾದ ಶಾರೀರಿಕ ಸಂಭೋಗ ಎಂಬ ಪದಪುಂಜವನ್ನು ಹೀಗೆ ಅರ್ಥೈಸಿಕೊಂಡಿವೆ ಎಂಬುದನ್ನು ಅರ್ಥಮಾಡಿಕೊಳ್ಳಲು **ಖಾನು** ಪ್ರಕರಣದ ತೀರ್ಪಿನ ಒಂದು ಭಾಗವನ್ನು ಉಲ್ಲೇಖಿಸುವುದು ಸೂಕ್ತವೆಂದು ನಮಗನಿಸುತ್ತದೆ. ಸದರಿ ವಾಕ್ಯ ಹೀಗಿದೆ: -

> -ಈ ಪ್ರಕರಣದ ಪ್ರಮುಖ ಅಂಶವೆಂದರೆ: ಆರೋಪಿಗಳು (ಅವರು ಗೊಮ್ಮೊರಾ ಕೊಯಿಟಸ್ ಪರ್ ಆಸ್ (ಮುಖಮೈಥುನ) ಎಂಬ ಪಾಪದ ಅಪರಾಧವನ್ನು

[27] AIR 1925 Sind 286

ಮಾಡಿರೂರೆಂಬುದು ಸ್ಪಷ್ಟವಾಗಿದೆ) ತನ್ನ ಪಾಪ ಕಾರ್ಯದ ಅಮಾಯಕ ಸಹಚರನಾಗಿರುವ ಒಂದು ಪುಟ್ಟ ಮಗುವಿಗೆ, ದಂಡ ಸಂಹಿತೆಯ 377ನೇ ಪರಿಚ್ಛೇದದ ಅಡಿಯಲ್ಲಿ ಅಪರಾಧ ಮಾಡಿದ್ದಾನೆಯೇ ಎಂಬುದು ನಮ್ಮೆದುರಿಗಿರುವ ಮುಖ್ಯ ಪ್ರಶ್ನೆ.

377ನೇ ಪರಿಚ್ಛೇದವು, ಮುಖ್ಯವಾಗಿ ಮನುಷ್ಯರ ಜೊತೆ ನಿಸರ್ಗದ ನಿಯಮಕ್ಕೆ ವಿರುದ್ಧವಾದ ಶಾರೀರಿಕ ಸಂಭೋಗ ನಡೆಸಿರುವ ಕೆಲವು ವ್ಯಕ್ತಿಗಳನ್ನು ಶಿಕ್ಷಿಸುತ್ತದೆ. ಇಲ್ಲಿ ನಡೆದಿರುವ ಕೃತ್ಯವು ಅಂತಹ ಶಾರೀರಿಕ ಸಂಭೋಗಗಳಲ್ಲಿ ಒಂದಾಗಿದೆಯೇ? ಹಾಗಿದ್ದಲ್ಲಿ, ಆದು ಸ್ಪಷ್ಟವಾಗಿ ನಿಸರ್ಗದ ನಿಯಮಕ್ಕೆ ವಿರುದ್ಧವಾಗಿರುತ್ತದೆ, ಏಕೆಂದರೆ ನೈಸರ್ಗಿಕ ಸಂಭೋಗದ ಸ್ವಾಭಾವಿಕ ಉದ್ದೇಶ ಅದರಿಂದ ಮನುಷ್ಯನ್ನು ಗರ್ಭದಲ್ಲಿ ಧರಿಸುವ ಸಾಧ್ಯತೆ ಇರಬೇಕು ಎಂದು ಹೇಳುತ್ತದೆ, ಆದರೆ ಅದು ಮುಖಮೈಥುನದ ವಿಚಾರದಲ್ಲಿ ಅಸಾಧ್ಯ. ಸಂಭೋಗವನ್ನು, ಸ್ವತಂತ ವ್ಯಕ್ತಿಗಳ ನಡುವೆ ಪದೇಪದೇ ಸಂಭವಿಸುವ ಕ್ರಿಯೆಯೆಂದು ವ್ಯಾಖ್ಯಾನಿಸಬಹುದು. ವಾಣಿಜ್ಯಾತ್ಮಕ ಸಂಭೋಗ [ಇದನ್ನು ನಂತರ ಉಲ್ಲೇಖಿಸಲಾಗುತ್ತದೆ; ಪರಸ್ಪರ ವಿನಮಯಕ್ಕೆ ಒತ್ತು ನೀಡಲಾಗಿದೆ).

ರೂಪಕದೊಂದಿಗೆ ಹೇಳುವುದಾದರೆ, ಸಂಭೋಗ ಎಂಬ ಪದವು, ವಾಣಿಜ್ಯ ಎಂಬ ಪದದಂತೆ, ಲಿಂಗಗಳ ನಡುವಿನ

ಸಂಬಂಧಗಳಿಗೆ ಅನ್ವಯಿಸುತ್ತದೆ. ಈ ಸಂದರ್ಭರಲ್ಲಿ, ಇಲ್ಲಿ ಸ್ಪಷ್ಟವಾಗಿ ವ್ಯಾಖ್ಯಾನಿಸಿಲಾಗಿರುವ ಮತ್ತು ಸೀಮಿತವಾದ ವಸ್ತುಗಳ ಸಲುವಾಗಿ ಒಂದು ಸಂಸ್ಥೆಯ ಜೀವಿಯನ್ನು ಮತ್ತೊಂದು ಸಂಸ್ಥೆಯ ಸದಸ್ಯರು ತಾತ್ಕಾಲಿಕವಾಗಿ ಭೇಟಿಯಾಗಿರುತ್ತಾರೆ. ಲೈಂಗಿಕ ತಿಕ್ಕಾಟದ ಪರಿಣಾಮವಾಗಿ ನರಗಳಲ್ಲುಂಟಾಗುವ ಸೆಳೆತದ ಮೂಲಕ ದೊರಕುವ ಆಹ್ಲಾದವನ್ನು ಪಡೆಯುವುದು ಸದರಿ ಭೇಟಿ ನೀಡುವ ವ್ಯಕ್ತಿಯ ಪ್ರಾಥಮಿಕ ಉದ್ದೇಶ. ಆದರೆ ಭೇಟಿ ನೀಡುವ ಸದಸ್ಯ ತಾನು ಭೇಟಿಯಾಗುವ ಸದಸ್ಯರನ್ನು ಕನಿಷ್ಠ ಪಕ್ಷ ಭಾಗಶಃ ಆವರಿಸದ ಹೊರತು ಅಲ್ಲಿ ಯಾವುದೇ ಬಗೆಯ ಸಂಭೋಗದ ಪ್ರಶ್ನೆ ಉದ್ಭವಿಸುವುದಿಲ್ಲ, ಏಕೆಂದರೆ, ಸಂಭೋಗ ಎಂಬುದು ಪರಸ್ಪರ ವಿನಿಮಯವನ್ನು ಸೂಚಿಸುತ್ತದೆ. ಈ ರೀತಿಯಲ್ಲಿ ಈ ಪ್ರಶ್ನೆಯನ್ನು ನೋಡಿದರೆ, ಮುಖಮೈಥುನದ (ಗೊಮ್ಮೋರಾ) ಪಾಪವು, ಗುದಸಂಭೋಗದ (ಸೊಡೋಮಿಯ) ಪಾಪಕ್ಕಿಂತ ಕಡಿಮೆ ತೀವ್ರತೆಯ ಶಾರೀರಿಕ ಸಂಭೋಗವಲ್ಲ ಎಂದು ತೋರುತ್ತದೆ. ...

377ನೇ ಪರಿಚ್ಛೇದವನ್ನು ಹೊರತುಪಡಿಸಿ, ದಂಡ ಸಂಹಿತೆಯು ಅಸಹಜ ಲೈಂಗಿಕ ತಪ್ಪುಗಳನ್ನು ಶಿಕ್ಷೆಗೊಳಪಡಿಸುವುದಿಲ್ಲ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಇಂಗ್ಲೆಂಡಿನಲ್ಲಿ ಅಸಭ್ಯ ಹಲ್ಲೆಗಳು ತೀವ್ರವಾದ ಶಿಕ್ಷೆಗೆ ಒಳಪಡುತ್ತವೆ. ದಂಡ

> ಸಂಹಿತೆಯ ಅಡಿಯಲ್ಲಿ ಅಪರಾಧಿಯನ್ನು ಸರಳವಾದ ಆಕ್ರಮಣಕ್ಕಾಗಿ ಕಾನೂನು ಕ್ರಮಕ್ಕೊಳಪಡಿಸುವ ಮೂಲಕ ಕೆಲವು ಪ್ರಕರಣಗಳನ್ನು ಪರಿಹರಿಸುವ ಸಾಧ್ಯತೆಯಿರುತ್ತದೆ ಆದರೆ, ಇದು ಒಂದು ಬಗೆಯ ಸಂಯುಕ್ತವಾದ ಅಪರಾಧವಾಗಿದ್ದು, ಯಾವುದೇ ಕಾರಣಕ್ಕೂ ರೋಗಿಯನ್ನು ಯಾವುದೇ ರೀತಿಯಲ್ಲಿ ಶಿಕ್ಷಿಸಲು ಸಾಧ್ಯವಿಲ್ಲ. ಟೈಗಾಲಿನಸ್ಸಿನಂಥವನೊಬ್ಬ ತನ್ನ ಆಘಾತಕಾರಿ ಚಟುವಟಿಕೆಗಳನ್ನು ಮುಂದುವರೆಸುತ್ತಾ, ಇಂತಹ ಕೃತ್ಯಗಳಿಂದ ಸಂಪೂರ್ಣವಾಗಿ ಮುಕ್ತರಾಗಿರಬೇಕಾದ ಮಕ್ಕಳ ಹಕ್ಕನ್ನು ಘಾಸಿಗೊಳಿಸಿ ಕಸಿದುಕೊಳ್ಳಬೇಕೆಂಬುದು ಶಾಸಕಾಂಗದ ಉದ್ದೇಶವೆಂಬಂತೆ ತೋರುತ್ತಿದೆ?
>
> ಹಾಗಾಗಿ, ಮುಖಮೈಥುನವು 377 ನೇ ಪರಿಚ್ಛೇದದ ಅಡಿಯಲ್ಲಿ ಶಿಕ್ಷಾರ್ಹ ಎಂಬುದರ ಬಗೆಗೆ ನನಗೆ ಅನುಮಾನವೇ ಇಲ್ಲ.

76. ಸುರೇಶ್ ಕೌಶಲ್ ಪ್ರಕರಣದಲ್ಲಿ ಕೂಡ, ಗುಜರಾತ್ ಉಚ್ಚ ನ್ಯಾಯಾಲಯವು ಲೋಹಾನಾ ವಸಂತಲಾಲ್ ದೇವಚಂದ್ ವಿ. ರಾಜ್ಯ ಸರ್ಕಾರ[28] ಪ್ರಕರಣದ ತೀರ್ಪನ್ನು ಉಲ್ಲೇಖಿಸಲಾಗಿತ್ತು. ಈ ಪ್ರಕರಣದಲ್ಲಿ, ಅಪರಾಧಿಯು ಸಂತ್ರಸ್ತನ ಬಾಯೊಳಗೆ ತನ್ನ ಪುರುಷಾಂಗವನ್ನು ಹಾಕಿರುವ ಸಂದರ್ಭದಲ್ಲಿ, ಆ ಕ್ರಿಯೆಯನ್ನು ಸ್ವ-ಇಚ್ಛೆಯಿಂದ ಎಸಗಿದ್ದಾರಾದ್ದರಿಂದ ಅದು ಐ.ಪಿ.ಸಿ.ಯ 377ನೇ ಪರಿಚ್ಛೇದ ಮತ್ತು 511ನೇ ಪರಿಚ್ಛೇದಗಳಡಿಯ ಅಪರಾಧವಾಗುತ್ತದೆಯೇ ಎಂಬುದು ನ್ಯಾಯಾಲಯದ ಎದುರಿಗಿದ್ದ ವಿಚಾರವಾಗಿತ್ತು. ಈ ಪ್ರಕರಣದಲ್ಲಿ ಯಾವುದೇ ಬಗೆಯ ಒಳತೂರಿಸುವಿಕೆ ಇರಲಿಲ್ಲ ಮತ್ತು, ಹಾಗಾಗಿ,ಅಲ್ಲಿ ಯಾವುದೇ ರೀತಿಯ ಶಾರೀರಿಕ ಸಂಭೋಗ ನಡೆದಿಲ್ಲ ಎಂಬ ತಕರಾರು ಎತ್ತಲಾಯಿತು.

[28] AIR 1968 Guj 252

ಶ್ರೀಯುತ ಹ್ಯಾವ್ಲಾಕ್ ಎಲ್ಲಿಸ್ ರವರ ದಿ ಸೈಕಾಲಜಿ ಆಫ್ ಸೆಕ್ಸ್[29] ಪುಸ್ತಕದ ವಾಕ್ಯವೊಂದನ್ನು ಉಚ್ಚ ನ್ಯಾಯಾಲಯ ಉಲ್ಲೇಖಿಸಿತು. ಆ ಸಾಲುಗಳು ಹೀಗಿವೆ:-

> ಚುಂಬನವನ್ನು, ಆಹ್ಲಾದ ಪಡೆಯುವ ಉದ್ದೇಶದಿಂದ ನಡೆಸಲಾಗುವ ಸಾಮಾನ್ಯ ಮತ್ತು ಸಹಜವಾದ ಕಾಮೋತ್ತೇಜಕ ವಿಧಾನವೆಂದು ಪರಿಗಣಿಸಬಹುದಾದರೂ, ಇತರ ಕಡಿಮೆ ಪ್ರಾಮುಖ್ಯತೆಯ ಕ್ರಿಯೆಗಳು ಕೂಡ ಇವೆ. ವಿರುದ್ಧ ಲಿಂಗದ ವ್ಯಕ್ತಿಗಳ ನಡುವೆ ರಂಧ್ರಗಳ ಮೂಲಕ ನಡೆಯುವ ಯಾವುದೇ ಬಗೆಯ ಸಂಪರ್ಕ ಕೆಲವೊಮ್ಮೆ ಚುಂಬನದಷ್ಟೆ ಪರಿಣಾಮಕಾರಿಯಾದ ಆಹ್ಲಾದವನ್ನು ಉತ್ತೇಜಿಸುತ್ತವೆ; ಇಂತಹ ಎಲ್ಲಾ ಸಂಪರ್ಕಗಳು, ಖಂಡಿತವಾಗಿ ಚುಂಬನದ ಗುಂಪಿಗೇ ಸೇರುತ್ತವೆ, ಮತ್ತು ಅವುಗಳನ್ನು ಕನ್ನಿಲಿಂಕ್ಟಸ್ ಎಂದು ಕರೆಯಲಾಗುತ್ತದೆ (ಹಲವು ಬಾರಿ ಅದನ್ನು ತಪ್ಪಾಗಿ ಕನ್ನಿಲಿಂಗಸ್ ಎಂದು ಕರೆಯಲಾಗುತ್ತದೆ) ಮತ್ತು ಮುಖಮೈಥುನವನ್ನು ಅಸ್ವಾಭಾವಿಕ ಎಂದು ಪರಿಗಣಿಸಲಾಗುವುದಿಲ್ಲ, ಏಕೆಂದರೆ ಇತರ ಪ್ರಾಣಿಗಳಲ್ಲಿ ಕೂಡ ಅಂತಹ ಕ್ರಿಯೆಗಳನ್ನು ಕಾಣಬಹುದು, ಮತ್ತು ಅದೇ ಕ್ರಿಯೆ ವಿವಿಧ ನಾಗರಿಕವಲ್ಲದ ಜನಾಂಗದಲ್ಲಿ ಕಾಣಸಿಗುತ್ತದೆ. ಆಹ್ಲಾದ ಪಡೆಯುಲು ಸಹಾಯ ಮಾಡುವ ವಿಧಾನಗಳಾಗಿರುವ ಈ ಕ್ರಿಯೆಗಳು ಹೀಗಾಗಿ ನೈಸರ್ಗಿಕವಾಗಿವೆ ಮತ್ತು ಕೆಲವೊಮ್ಮೆ ಇವು ಎರಡೂ ಲಿಂಗದವರಿಂದ ಲೈಂಗಿಕ ಆನಂದದ ನೈಜ

[29] 'Psychology of Sex' Twelfth Impression, 1948, London

ಸ್ವರೂಪವೆಂದು ಪರಿಗಣಿಸಲ್ಪಡುತ್ತವೆ, ಆದಾಗ್ಯೂ ಅವುಗಳನ್ನು ಸೌಂದರ್ಯಪ್ರಜ್ಞೆಯುಳ್ಳವು ಪರಿಗಣಿಸಲಾಗುವುದಿಲ್ಲ. ಅವುಗಳು ಲೈಂಗಿಕಕ್ರಿಯೆಯ ಬಯಕೆಯ ಜಾಗವನ್ನು ಆಕ್ರಮಿಸಿಕೊಂಡಾಗ ಅವುಗಳು ಅಡ್ಡದಾರಿಗಳಾಗಿ ಪರಿಣಮಿಸುತ್ತವೆ ಮತ್ತು ಆಗ ಅವನ್ನು "ಅಸಭ್ಯತೆಗಳು" ಎಂದು ಕರೆಯ ಬೇಕಾಗುತ್ತದೆ

77. ಖಾನು (ಮೇಲ್ಕಂಡ) ಪ್ರಕರಣದಲ್ಲಿ, ಸ್ಟ್ರೌಡ್ಸ್ ಜುಡಿಷಿಯಲ್ ಡಿಕ್ಷನರಿ, 3ನೇ ಆವೃತ್ತಿ ಮತ್ತು ವೆಬ್ಸ್ಟರ್ಸ್ ನ್ಯೂ 20 ಸೆಂಚುರಿ ಡಿಕ್ಷನರಿ, ಅನ್ಬ್ರಿಡ್ಜ್ಡ್, 2 ನೇ ಆವೃತ್ತಿಗಳ ಗುದಸಂಭೋಗದ ವ್ಯಾಖ್ಯಾನವನ್ನು ಪರಿಶೀಲಿಸಿದ ಗುಜರಾತ್ ಉಚ್ಚ ನ್ಯಾಯಾಲಯ ಹೀಗೆ ಅಭಿಪ್ರಾಯಪಟ್ಟಿದೆ: -

> -ಪ್ರಸ್ತುತ ಪ್ರಕರಣದಲ್ಲಿ, ಸಂತ್ರಸ್ತಾನ ಬಾಯಿಯ ರಂಧ್ರದಲ್ಲಿ ಪುರುಷನೊಬ್ಬನ ಶಿಶ್ನ ಪ್ರವೇಶಿಸಿತ್ತು. ಇಲ್ಲಿ ಭೇಟಿ ಮಾಡಲ್ಪಟ್ಟ ಜೀವಿಯೂ, ಭೇಟಿ ನೀಡಲು ಬಂದ ಜೀವಿಯನ್ನು ಆವರಿಸಿಕೊಂಡಿತ್ತು. ಹಾಗಾಗಿ ಅಲ್ಲಿ ಪರಸ್ಪರ ವಿನಿಮಯವಿದೆ; ಸಂಭೋಗ ಪರಸ್ಪರ ವಿನಿಮಯವನ್ನು ಸೂಚಿಸುತ್ತದೆ. ಹಾಗಾಗಿ, ನನ್ನ ಮನಸ್ಸಿನಲ್ಲಿ ಯಾವುದೇ ಸಂದೇಹವಿಲ್ಲದೆ, ಸದರಿ ಕೃತ್ಯ ಭಾರತೀಯ ದಂಡ ಸಂಹಿತೆಯ 337ನೇ ಪರಿಚ್ಛೇದ ಅಡಿಯಲ್ಲಿ ಶಿಕ್ಷಾರ್ಹ ಎಂದು ಹೇಳಬಹುದು.

78. ಕೇರಳ ರಾಜ್ಯ v.ಕುಂಡಂಕರ ಗೋವಿಂದನ್ ಮತ್ತೊಬ್ಬರು30 ಪ್ರಕರಣದ ತೀರ್ಪನ್ನು ಕೂಡ ಸುರೇಶ್ ಕೌಶಲ್ ಪ್ರಕರಣದಲ್ಲಿ ಉಲ್ಲೇಖ ಮಾಡಲಾಗಿದೆ. ಕೇರಳದ ಉಚ್ಚ ನ್ಯಾಯಾಲಯ ಹೀಗೆಂದಿತ್ತು: -

[30] 1969 Cri LJ 818 (Ker)

- 18. ಇಲ್ಲಿ ಯೋನಿಯೊಳಗೆ ಯಾವುದೇ ಬಗೆಯ ಒಳತೂರಿಸುವಿಕೆ ನಡೆದಿಲ್ಲ ಮತ್ತು ಲೈಂಗಿಕ ಕ್ರಿಯೆಗಳನ್ನು ತೊಡೆಯ ನಡುವೆ ಮಾತ್ರ ನಡೆಸಲಾಗಿದೆಯೆಂದು ನಾನು ಅಂದುಕೊಂಡರೂ ಸಹ, ಪ್ರತಿವಾದಿಗಳು ದಂಡ ಸಂಹಿತೆಯ 377ನೇ ಪರಿಚ್ಛೇದಡಿಯ ಶಿಕ್ಷೆಯಿಂದ ತಪ್ಪಿಸಿಕೊಳ್ಳಬಹುದೆಂದು ನನಗನಿಸುವುದಿಲ್ಲ. ಪ್ರತಿವಾದಿಗಳ ವಕೀಲರು (ಈ ವಾದವನ್ನು ಸರ್ಕಾರಿ ವಕೀಲರು (ಪಬ್ಲಿಕ್ ಪ್ರಾಸಿಕ್ಯೂಟರ್) ಸಹ ಬೆಂಬಲಿಸುತ್ತಾರೆ ತೊಡೆಯ ನಡುವಿನ ಲೈಂಗಿಕ ಕ್ರಿಯೆಯು ಸಂಭೋಗವಲ್ಲ ಎಂದು ತಕರಾರು ಸಲ್ಲಿಸುತ್ತಾರೆ. ಸಂಭೋಗ ನಡೆಯಲು ಗಂಡು ಅಂಗ ಪ್ರವೇಶಿಸಿದ ಅಂಗ ಅದನ್ನು ಸುತ್ತುವರಿಯ ಬೇಕು ಮತ್ತು ತೊಡೆಯ ನಡುವಿನ ಲೈಂಗಿಕ ಕ್ರಿಯೆಯ ಸಂದರ್ಭದಲ್ಲಿ, ಅಂತಹ ಒಳತೂರಿಸುವಿಕೆಯ ಯಾವುದೇ ಸಾಧ್ಯತೆಗಳಿಲ್ಲ ಎಂಬುದು ಅವರ ವಾದ.

ಸಂಭೋಗ ಎಂಬ ಪದದಕ್ಕೆ 'ಲೈಂಗಿಕ ಸಂಪರ್ಕ ಎಂಬ ಅರ್ಥವಿದೆ (ಸಂಕ್ಷಿಪ್ತ ಆಕ್ಸ್ಫರ್ಡ್ ನಿಘಂಟು). ಖಾನು ವಿ ಸಾಮ್ರಾಟ ಪ್ರಕರಣದಲ್ಲಿ 'ಸಂಭೋಗ" ಎಂಬ ಪದದ ಅರ್ಥವನ್ನು ಪರಿಗಣಿಸಲಾಗಿದೆ: (ಏರ್ ಪೀ.286.) ಸ್ವತಂತ್ರರಾದ ವ್ಯಕ್ತಿಗಳು ಪರಸ್ಪರ ಪದೇ ಪದೇ ನಡೆಸುವ ಕ್ರಿಯೆಯನ್ನು ಸಂಭೋಗ ಎಂದು ವ್ಯಾಖ್ಯಾನಿಸಬಹುದು. ನಂತರ ವಾಣಿಜ್ಯ ಸಂಭೋಗ, ಸಾಮಾಜಿಕ ಸಂಭೋಗ, ಇತ್ಯಾದಿ ವಿಚಾರಗಳನ್ನು. ಪರಿಗಣಿಸಲಾಗಿದೆ; ವಾಣಿಜ್ಯ

ಎಂಬ ಪದದಂತೆ ಸಂಭೋಗ ಎಂಬ ಪದವನ್ನು ಲಿಂಗಗಳ ನಡುವಿನ ಸಂಬಂಧಗಳಿಗೆ ರೂಪಕದಂತೆ ಅನ್ವಯಿಸಲಾಗುತ್ತದೆ. ಈ ಸಂದರ್ಭರಲ್ಲಿ ಕೂಡಾ, ಇಲ್ಲಿ ಸ್ಪಷ್ಟವಾಗಿ ವ್ಯಾಖ್ಯಾನಿಸಿಲಾಗಿರುವ ಮತ್ತು ಸೀಮಿತವಾದ ವಸ್ತುಗಳ ಸಲುವಾಗಿ ಒಂದು ಸಂಸ್ಥೆಯ ಜೀವಿಯನ್ನು ಮತ್ತೊಂದು ಸಂಸ್ಥೆಯ ಸದಸ್ಯರು ತಾತ್ಕಾಲಿಕವಾಗಿ ಭೇಟಿಯಾಗಿರುತ್ತಾರೆ. ಲೈಂಗಿಕ ತಿಕ್ಕಾಟದ ಪರಿಣಾಮವಾಗಿ ನರಗಳಲ್ಲುಂಟಾಗುವ ಸೆಳೆತದ ಮೂಲಕ ದೊರಕುವ ಆಹ್ಲಾದವನ್ನು ಪಡೆಯುವುದು ಸದರಿ ಭೇಟಿ ನೀಡುವ ವ್ಯಕ್ತಿಯ ಪ್ರಾಥಮಿಕ ಉದ್ದೇಶ. ಆದರೆ ಭೇಟಿ ನೀಡುವ ಸದಸ್ಯ ತಾನು ಭೇಟಿಯಾಗುವ ಸದಸ್ಯರನ್ನು ಕನಿಷ್ಠ ಪಕ್ಷ ಭಾಗಶಃ ಆವರಿಸದ ಹೊರತು ಅಲ್ಲಿ ಯಾವುದೇ ಬಗೆಯ ಸಂಭೋಗದ ಪ್ರಶ್ನೆ ಉದ್ಭವಿಸುವುದಿಲ್ಲ, ಏಕೆಂದರೆ, ಸಂಭೋಗ ಎಂಬುದು ಪರಸ್ಪರ ವಿನಿಮಯವನ್ನು ಸೂಚಿಸುತ್ತದೆ. ಹಾಗಾಗಿ, ಸಂಭೋಗ ನಡೆದಿದೆಯೇ ಇಲ್ಲವೇ ಎಂಬುದನ್ನು ನಿರ್ಧರಿಸಲು, ಅಲ್ಲಿ ಭೇಟಿನೀಡುವ ಜೀವಿಯನ್ನು ಭೇಟಿಯಾಗಲ್ಪಟ್ಟ ಜಿವಿಯು ಭಾಗಷಃ ಆವರಿಸಿಕೊಂಡಿದೆಯೇ ಎಂಬುದನ್ನು ಪರಿಗಣಿಸಬೇಕಾಗುತ್ತದೆ.

ತೊಡೆಯ ನಡುವಿನ ಸಂಭೋಗದಲ್ಲಿ, ಭೇಟಿಯಾದ ಪುರುಷ ಅಂಗವನ್ನು ಭೇಟಿ ಮಾಡಲ್ಪಟ್ಟ ಜೀವಿಯು ಕನಿಶ್ಟಪಕ್ಷ,

ಭಾಗಷಃ ಆಆವರಿಸಿಕೊಳ್ಳುತ್ತದೆ: ತೊಡೆಗಳನ್ನು ಒಟ್ಟಿಗೆ ಮತ್ತು ಬಿಗಿಯಾಗಿ ಇರಿಸಲಾಗುತ್ತದೆ.

ನಂತರ ಒಳತೂರಿಸುವಿಕೆಯ ಬಗೆಗೆ ಕನ್ಸೈಸ್ ಆಕ್ಸ್ಫರ್ಡ್ ಡಿಕ್ಷ್ನರಿಯಲ್ಲಿ ಪೆನೆಟ್ರೇಟ್ (ಒಳತೂರಿಸು) ಎಂಬ ಪದಕ್ಕೆ "ಒಳಗೆ ಅಥವಾ ಮೂಲಕ ಪ್ರವೇಶ ಪಡೆ ಅಥವಾ ಹಾದುಹೋಗು" ಎಂಬ ಅರ್ಥವಿದೆ. ಗಂಡು ಅಂಗವನ್ನು ಒಟ್ಟಿಗೆ ಮತ್ತು ಬಿಗಿಯಾಗಿರಿಸಿಕೊಂಡಿರುವ ತೊಡೆಗಳ ನಡುವೆ ಸೇರಿಸಿದಾಗ ಅಲ್ಲಿ, ಯಾವುದೇ ಬಗೆಯ ಒಳತೂರಿಸುವಿಕೆ ನಡೆಯುವುದಿಲ್ಲವೇ? "ಸೇರಿಸು" ಎಂಬ ಪದಕ್ಕೆ ಇಡು, ಹೊಂದಿಸು, ತಳ್ಳು ಎಂಬ ಅರ್ಥಾವಿದೆ'. ಆದ್ದರಿಂದ, ಗಂಡು ಅಂಗವನ್ನು ತೊಡೆಗಳ ನಡುವೆ ಸೇರಿಸಿರೆ ಅಥವಾ ತಳ್ಳಿದರೆ, ಅಲ್ಲಿ ನೈಸರ್ಗಿಕ ಅಪರಾಧವನ್ನು ಉಂಟುಮಾಡುವ 'ಒಳತೂರಿಸುವಿಕೆ' ಇರುತ್ತದೆ.

ಅನೈಸರ್ಗಿಕ ಅಪರಾಧವನ್ನು ದಂಡ ಸಂಹಿತೆಯ 377ನೇ ಪರಿಚ್ಛೇದದಲ್ಲಿ ವ್ಯಾಖ್ಯಾನಿಸಲಾಗಿದೆ; ಯಾವುದೇ ವ್ಯಕ್ತಿ, ಮಹಿಳೆ ಅಥವಾ ಪ್ರಾಣಿಗಳೊಂದಿಗೆ ನಿಸರ್ಗದ ನಿಯಮಕ್ಕೆ ವಿರುದ್ಧವಾಗಿ ಶಾರೀರಿಕ ಸಂಭೋಗವನ್ನು ಸ್ವಯಂಪ್ರೇರಣೆಯಿಂದ ನಡೆಸುತ್ತಾರೋ ಅವರು ಅನೈಸರ್ಗಿಕ ಅಪರಾಧವನ್ನು ಮಾಡುತ್ತಾರೆ. ತೊಡೆಯ ನಡುವಿನ ಸಂಭೋಗ ನಿಸರ್ಗದ ನಿಯಮಕ್ಕೆ ವಿರುದ್ಧವಾದ

ಶಾರೀರಿಕ ಸಂಭೋಗ. ಆದ್ದರಿಂದ ಇನ್ನೊಬ್ಬರ ತೊಡೆಗಳ ನಡುವೆ ಪುರುಷ ಅಂಗವನ್ನು ಸೇರಿಸುವ ಮೂಲಕ ಸಂಭೋಗ ಮಾಡುವುದು ಅನೈಸರ್ಗಿಕ ಅಪರಾಧವಾಗಿದೆ. ಈ ಸಂಬಂಧ, 376ನೇ ಪರಿಚ್ಛೇದದಲ್ಲಿನ ಕ್ರಿಯೆಯನ್ನು "ಲೈಂಗಿಕ ಸಂಭೋಗ" ಎಂದು ಕರೆಯಲಾಗುತ್ತದೆ ಮತ್ತು 377ನೇ ಪರಿಚ್ಛೇದದಡಿಯಲ್ಲಿನ ಕ್ರಿಯೆಯನ್ನು ನಿಸರ್ಗದ ನಿಯಮಕ್ಕೆ ವಿರುದ್ಧವಾದ ದೈಹಿಕ ಸಂಭೋಗ ಎಂದು ಪರಿಅಗಣಿಸಲಾಗುತ್ತದೆ.

ಈ ಪ್ರಶ್ನೆಯ ಬಗ್ಗೆ ಇಂಗ್ಲಿಷ್ ಕಾನೂನಿನ ಅಭಿಪ್ರಾಯವನ್ನು ನನ್ನ ಗಮನಕ್ಕೆ ತರಲಾಗಿದೆ. ಆರ್. ವಿ. ಸ್ಯಾಮ್ಯುಯೆಲ್ ಜೇಕಬ್ಸ್[31] ಪ್ರಕರಣದ ಹಳೆಯ ನಿರ್ಧಾರವೊಂದು ಇಂಗ್ಲಿಷ್ ಕಾನೂನಿನಡಿಯಲ್ಲಿ ಬಾಯಿಯೊಳಗಿನ ಒಳತೂರಿಸುವಿಕೆಯನ್ನು ಗುದಸಂಭೋಗದ ಅಪರಾಧವೆಂದು ಪರಿಗಣಿಸಲಾಗುವುದಿಲ್ಲ ಎಂದು ತಿಳಿಸುತ್ತದೆ. ಆದ್ದರಿಂದ ತೊಡೆಯ ನಡುವಿನ ಲೈಂಗಿಕ ಸಂಭೋಗ ದಂಡ ಸಂಹಿತೆಯ 377 ನೇ ಪರಿಚ್ಛೇದದಡಿಯಲ್ಲಿನ ಅಪರಾಧವವೆಂದು ವಕೀಲರು ವಾದಿಸುತ್ತಾರೆ. **ಸಿರ್ಕಾರ್ v. ಗುಲಾ ಮೈತೀನ್ ಪಿಳ್ಳೈ ಚೈತು ಮಹೋ ಮಾತು**[32] ಪ್ರಕರಣದಲ್ಲಿ ಇರುವಾಂಕೂರು ಉಚ್ಚ ನ್ಯಾಯಾಲಯದ ಪೂರ್ಣ ಪೀಠವು ವ್ಯಕ್ತಿಯೊಬ್ಬರ

[31] 1817 Russ & Ry 331 : 168 ER 830 (CCR)

[32] (1908) 14 TLR Appendix 43 (Ker)

ಬಾಯಿಯೊಂದಿಗೆ ಸಂಪರ್ಕವನ್ನು ಹೊಂದಿದ್ದು ದಂಡ ಸಂಹಿತೆಯ 377ನೇ ಪರಿಚ್ಛೇದದ ಅಡಿಯಲ್ಲಿನ ಅಪರಾಧ ಎಂದು ತೀರ್ಮಾನಿಸಿತು. ಸಣ್ಣದಾದ ಈ ತೀರ್ಪಿನಲ್ಲಿ, ಅರಿವುಳ್ಳ ನ್ಯಾಯಾಧೀಶರು, ಸೊಡೊಮಿ, ಬಗ್ಗರಿ ಮತ್ತು ಬೆಸ್ಟಿಯಾಲಿಟೀ ಎಂಬ ಪದಗಳ ವ್ಯಾಖ್ಯಾನದ ಮೇಲೆ ಅವಲಂಬಿಸುವ ಇಂಗ್ಲಿಷ್ ಶಾಸಾನ ಕಾನೂನು ಮತ್ತು ಇಂಗ್ಲಿಷ್ ಪಠ್ಯ ಪುಸ್ತಕಗಳನ್ನು ಉಲ್ಲೇಖಿಸಿವುದು ಅನಗತ್ಯ ಎಂದು ಹೇಳಿದರು; ಮತ್ತು ದಂಡ ಸಂಹಿತೆಯಲ್ಲಿ ಬಳಸಲಾಗಿರುವ ಪದಗಳು ತುಂಬಾ ಸರಳವಾಗಿದ್ದು, ನಿಸರ್ಗದ ನಿಯಮಕ್ಕೆ ವಿರುದ್ಧವಾದ ಎಲ್ಲಾ ಕಾರ್ಯಗಳನ್ನು ಸೇರಿಸುವಷ್ಟು ವಿಸ್ತಾರವಾಗಿವೆ ಎಂದು ನುಡಿಯಿತು. ಈ ವಿಚಾರದಲ್ಲಿ ನಾನು ಕೂಡ 377ನೇ ಪರಿಚ್ಛೇದದಲ್ಲಿನ ಪದಗಳು ಸರಳವಾಗಿದ್ದು ಮತ್ತು ಅವುಗಳ ವ್ಯಾಪ್ತಿಯೊಳಗೆ ನಿಸರ್ಗದ ನಿಯಮಕ್ಕೆ ವಿರುದ್ಧವಾದ ಯಾವುದೇ ಬಗೆಯ ಶಾರೀರಿಕ ಸಂಭೋಗವನ್ನು ಒಳಗೊಳ್ಳುವಷ್ಟು ವಿಶಾಲವಾಗಿದೆ ಎಂಬ ದೃಷ್ಟಿಕೋನ ಹೊಂದಿದ್ದೀನೆ. ತೊಡೆಗಳ ನಡುವೆ ನಡೆಸುವ ಸಂಭೋಗ ನಿಸರ್ಗದ ನಿಯಮಕ್ಕೆ ವಿರುದ್ಧವಾದ ಶಾರೀರಿಕ ಸಂಭೋಗದ ಮತ್ತೊಂದು ಬಗೆ.

79. ಕ್ಯಾಲ್ವಿನ್ ಫ್ರಾನ್ಸಿಸ್ v. ಒರಿಸ್ಸಾ ರಾಜ್ಯ ಸರ್ಕಾರ33 ಪ್ರಕರಣದಲ್ಲಿ ಒರಿಸ್ಸಾ ಉಚ್ಚನ್ಯಾಯಾಲಯ ಕಾರ್ಪಸ್ ಜ್ಯೂರಿಸ್ ಸೆಕಂಡಮ್, ಸಮ್ಪುಟ 81, ಪುಟ 368-70ರಲ್ಲಿನ್ಸ್ ಕೆಲ ವಾಕ್ಯಗಳನ್ನು ಉಲ್ಲೇಖಿಸಿದೆ. ನಾವು ಅದನ್ನಿಲ್ಲಿ ಉಲ್ಲೇಖ ಮಾಡಬಹುದು: -

> -ಮನುಷ್ಯರು ಅಥವಾ ಪ್ರಾಣಿಗಳೊಂದಿಗೆ ಲೈಂಗಿಕ ಅಸಭ್ಯತೆಯ ಕಾರ್ಯಗಳಲ್ಲಿ ತೊಡಗುವ ಯಾವುದೇ ವ್ಯಕ್ತಿಯನ್ನು, ಆ ಆರೋಪ ಸಾಬೀತಾದರೆ ಶಿಕ್ಷೆ ವಿಧಿಸುವ ಒಂದು ಶಾಸನವನ್ನು, ಶಾರೀರಿಕ ಸಂಭೋಗವನ್ನು ಒಳಗೊಂಡಿರುವ ನಿದರ್ಶನಗಳಿಗಷ್ಟೇ ಸೀಮಿತಗೊಳ್ಳಲು ಆಗುವುದಿಲ್ಲ, ಬದಲಿಗೆ ಅದು ಕನಿಷ್ಟ ಒಬ್ಬ ಸಂಗಾತಿಯ ಲೈಂಗಿಕ ಅಂಗವನ್ನು ಒಳಗೊಂಡಿರುವ ಸಂದರ್ಭಗಳಿಗೂ ಅನ್ವಯಿಸುತ್ತದೆ. ಲೈಂಗಿಕ ಅಶ್ಲೀಲತೆ ಎಂಬ ಪದವು ಲೈಂಗಿಕ ಸಂತೃಪ್ತಿಯನ್ನು ಹೊಂದುವ ಉದ್ದೇಶದಿಂದ ಗಂಡು ದೇಹವೊಂದು ಹೆಣ್ಣಿನ ದೇಹದೊಂದಿಗೆ ನಡೆಸುವ ಎಲ್ಲ ಬಗೆಯ ಸಂಪರ್ಕಕ್ಕೆ ಅನ್ವಯಿಸುವುದಿಲ್ಲ, ಆದರೆ ಶಾಸನದ ಖಂಡನೆಯು ತಮ್ಮ ಅಸಹಜವನ್ನು ಲೈಂಗಿಕ ತೃಪ್ತಿಗಾಗಿ, ನಡೆಯುವ ಅನ್ಯೆಸರ್ಗಿಕ ವರ್ತನೆಗಷ್ಟೇ ಸೀಮಿತವಾಗಿದೆ. ಒಬ್ಬ ವ್ಯಕ್ತಿಯ ಬಾಯಿಯೊಂದಿಗೆ ತನ್ನ ಲೈಂಗಿಕ ಅಂಗದ ಮೂಲಕ ಲೈಂಗಿಕ ಸಂಭೋಗ ನಡೆಸುವ ಕ್ರಿಯೆ ಅಥವಾ ಅದನ್ನು ಮಾಡುವ ವ್ಯಕ್ತಿಯನ್ನು ಅಪರಾಧಿಯೆಂದು ಪರಿಗಣಿಸುವ ಶಾಸನವು, ಅಂತಹ ವ್ಯಕ್ತಿಯು, ಮತ್ತೊಬ್ಬನ ಲೈಂಗಿಕ ಅಂಗದ ಮೇಲೆ ತನ್ನ

[33] 1992 (1) OLR 316

ಬಾಯನ್ನು ಇರಿಸುವ ವ್ಯಕ್ತಿ ಮಾಡಿರುವಂಥದ್ದೇ ಅಪರಾಧವನ್ನು ಎಸಗುತ್ತಾನೆ ಮತ್ತು ಆ ತಪ್ಪನ್ನು ವಿರುದ್ಧ ಲಿಂಗಕ್ಕೆ ಸೇರಿದ ಇಬ್ಬರು ವ್ಯಕ್ತಿಗಳು ನಡೆಸುತ್ತಾರೆ ಎಂದು ಹೇಳುತ್ತದೆ

೮೦. ಸದರಿ ತೀರ್ಪನ್ನು ಉಲ್ಲೇಖಿಸಿದ ಸುರೇಶ ಕೌಶಲ್ ಪ್ರಕರಣದ ದ್ವಿಸದಸ್ಯ ಪೀಠ ಹೀಗೆ ಅಭಿಪ್ರಾಯಪಟ್ಟಿದೆ: -

-೬೦. ಆದಾಗ್ಯೂ, ಈ ಪ್ರಕರಣಗಳಿಂದ, ಕೆಲ ಕ್ರಿಯೆಗಳನ್ನು ನಿಸರ್ಗದ ನಿಯಮಕ್ಕೆ ವಿರುದ್ಧವಾದ ಶಾರೀರಿಕ ಸಂಭೋಗ ಎಂದು ವರ್ಗೀಕರಿಸುವ ಯಾವುದೇ ಬಗೆಯ ಏಕರೂಪದ ಪರೀಕ್ಷೆಯನ್ನು ಕಂಡುಹಿಡಿಯಲು ಸಾಧ್ಯವಿಲ್ಲ. ನಮ್ಮ ಅಭಿಪ್ರಾಯದಲ್ಲಿ, ಐ.ಪಿ.ಸಿ.ಯ 377ನೇ ಪರಿಚ್ಛೇದದ ವ್ಯಾಪ್ತಿಯೊಳಗೆ ಬರುವ ಕೃತ್ಯಗಳನ್ನು, ಆ ಕೃತ್ಯಗಳು ಮತ್ತು ಅವು ನಡೆದ ಸನ್ನಿವೇಶಗಳ ಆಧಾರದಲ್ಲಿ ನಿರ್ಧರಿಸಬಹುದು. ಮೇಲೆ ತಿಳಿಸಲಾದ ಎಲ್ಲಾ ಪ್ರಕರಣಗಳು ಒಪ್ಪಿಗೆಯಿಲ್ಲದ ಮತ್ತು ಗಮನಾರ್ಹವಾದ ಬಲಾತ್ಕಾರದ ಸನ್ನಿವೇಶಗಳನ್ನು ಸೂಚಿಸುತ್ತದೆ, ಮತ್ತು ಪರಿಚ್ಛೇದವನ್ನು ಅರ್ಥೈಸಿಕೊಳ್ಳುವ ಬಗೆಯನ್ನು ವಿಶ್ಲೇಷಿಸುವ ಸಂದರ್ಭದಲ್ಲಿ ಸಂತ್ರಸ್ತರಲ್ಲಿ ಬಹುಪಾಲು ಮಹಿಳೆಯರ ಅಥವಾ ಮಕ್ಕಳೇ ಇದ್ದುದ್ದರಿಂದ ಅವರಿಗೆ ನ್ಯಾಯವನ್ನು ದೊರಕಿಸುವ ಸಲುವಾಗಿ ನ್ಯಾಯಾಲಯ ಹೆಚ್ಚಿನ ಉತ್ಸಾಹಹೊಂದಿತ್ತು ಎಂಬ ವಿಚಾರವನ್ನು ಕೂಡಾ ನಿರ್ಲಕ್ಷಿಸಲಾಗುವುದಿಲ್ಲ. ವಯಸ್ಕರ ನಡುವಿನ ಒಪ್ಪಿಗೆಯ ಸಂಭೋಗ ಸಾಬೀತಾದರೂ

ನ್ಯಾಯಾಲಯವು ಇಂತಹ ನಿರ್ಧಾರವನ್ನೇ ತೆಗೆದುಕೊಳ್ಳುತ್ತದೆಯೇ ಎಂಬುದರ ಬಗ್ಗೆ ನಮಗೆ ಅನುಮಾನಗಳಿವೆ

81. ಮೇಲ್ಕಂಡ ವಿಶ್ಲೇಷಣೆಯಿಂದ, ದ್ವಿಸದಸ್ಯ ಪೀಠವು, ಅಪರಾಧವೆಂದು ಪರಿಗಣಿಸಲಾಗಿರುವ "ಕೃತ್ಯ" ಮತ್ತು ಆದಕ್ಕೆ ಸೇರುವ "ವರ್ಗ"ದ ನಡುವೆ ಭಿನ್ನತೆಯನ್ನು ಗಮನಿಸಿದೆ ಎಂಬುದನ್ನು ಅರ್ಥಮಾಡಿಕೊಳ್ಳಬಹುದು. ಸದರಿ ನಿಯಮವನ್ನು ಸರಳವಾಗಿ ಓದಿದ ನಂತರ, ಕೃತ್ಯ ಎಂಬುದು- ಅಪರಾಧ ಸಂಭವಿಸಿದ್ದರೆ, ಅದಕ್ಕೆ ಸಂಬಂಧಿಸಿದ ಎಲ್ಲಾ ವರ್ಗದ ಜನಗಳಿಗೂ ಅನ್ವಯಿಸುತ್ತದೆ ಎಂಬುದನ್ನು ಗಮನಿಸಬಹುದು. ಆದ್ದರಿಂದ, ಕೃತ್ಯವೊಂದು ಸಂವಿಧಾನದ 19 (1) (ಎ) ಮತ್ತು 21 ನೇ ಕಲಮುಗಳನ್ನು ಉಲ್ಲಂಘಿಸುವಾಗ ಅದನ್ನು ಕ್ರಿಮಿನಲ್ ಅಪರಾಧವೆಂದು ಪರಿಗಣಿಸಬಹುದೇ ಎಂಬುದು ಈ ವಿಚಾರದಲ್ಲಿ ಪರಿಗಣನೆಗೆ ತೆಗೆದುಕೊಳ್ಳಬೇಕಿರುವ ಮೂಲಭೂತ ಸಮಸ್ಯೆ, ಇದೇ ವಿಚಾರವನ್ನು ವಿವಿಧ ನ್ಯಾಯಾಲಯಗಳು ಮತ್ತು ಇದೇ ನ್ಯಾಯಾಲಯ ಈ ರೀತಿಯಲ್ಲಿಯೇ ಅರ್ಥೈಸಿಕೊಂಡಿದೆ. ಹಾಗಾಗಿ ಸದರಿ ನಿಬಂಧನೆಯನ್ನು ಸಂವಿಧಾನದ ನಿಯಮಗಳ ಕಟಕಟೆಯಲ್ಲಿಟ್ಟು ಪರೀಕ್ಷಿಸಬೇಕು. ಹೆಚ್ಚುವರಿಯಾಗಿ, ಅದನ್ನು 14ನೇ ಕಲಮು, ವಿಶೇಷವಾಗಿ ಅದರ ಎರಡನೇ ಭಾಗವಾಗಿರುವ ಸ್ಪಷ್ಟವಾದ ನಿರಂಕುಶತ್ವದ ಒರೆಗಲ್ಲಿಗೆ ಒಡ್ಡಿ ಪರಿಶೀಲಿಸಬೇಕು. ಮೇಲ್ಕಂಡ ವಿಚಾರಗಳನ್ನು ನಿರ್ಧರಿಸುವ ಸಲುವಾಗಿ, ಸಂವಿಧಾನದಡೀಯಲ್ಲಿ ಗುರುತಿಸಲಾಗಿರುವ ಕೆಲ ಅವಿಭಾಜ್ಯವಾದ ನೈಸರ್ಗಿಕ ಹಕ್ಕುಗಳನ್ನು ಅನುಭವಿಸುವ ವ್ಯಕ್ತಿಯ ಪರಿಕಲ್ಪನೆಯೊಂದಿಗೆ ಆಂತರಿಕ ಮತ್ತು ಸಮಗ್ರವಾದ ಸಂಬಂಧ ಹೊಂದಿರುವ ಕೆಲ ಮೂಲಭೂತ ಪರಿಕಲ್ಪನೆಗಳನು ಪರಾಂಬರಿಸಬೇಕು. ಈ ಹಿನ್ನೆಲೆಯಲ್ಲಿ, ವ್ಯಕ್ತಿಯ ಪ್ರತ್ಯೇಕತೆ ಮತ್ತು ಅಸ್ಮಿತೆಯ ಸ್ವೀಕಾರ ಎಂಬ ತತ್ವಗಳನ್ನು ಕೊನೆಯದಾಗಿ ವ್ಯಕ್ತಿಯ ಸಾಂವಿಧಾನಿಕ ಸ್ಥಾನಮಾನವನ್ನು ಗುರುತಿಸಿ ಆ ಮೂಲಕ 'ಕೃತ್ಯ"ಗಳನ್ನು ಪಕ್ಕಕ್ಕೆ ಸರಿಸಿ ವ್ಯಕ್ತಿಯ ಘನತೆ ಮತ್ತು ಆಯ್ಕೆಯನ್ನು ಗೌರವಿಸುವ ಕೆಲ ಪರಿಕಲ್ಪನೆಗಳ ಹಿನ್ನೆಲೆಯೆಳಲ್ಲಿ ನೋಡಬೇಕಿದೆ.

## G. ಸಂವಿಧಾನ - ಪ್ರಗತಿಪರ ಹಕ್ಕುಗಳ ಸಾವಯವ ಸನ್ನದು

82. ನಮ್ಮ ಪ್ರಜಾತಾಂತಿಕ ಸಂವಿಧಾನವು ಸಾವಯವ ಮತ್ತು ಉಸಿರಾಡುತ್ತಿರುವ ದಾಖಲೆಯಾಗಿದ್ದು, ಅದರ ಇಂದ್ರಿಯಗಳು ತನ್ನ ಸುತ್ತಮುತ್ತಲ ಬೆಳವಣಿಗೆಗಳಿಗೆ ಜೀವಂತವಾಗಿವೆ. ಏಕೆಂದರೆ ಸಮಾಜದ ಅಗತ್ಯತೆಗಳು ಮತ್ತು

ಸಮಾಜದಲ್ಲಿ ನಡೆಯುತ್ತಿರುವ ಬೆಳವಣಿಗೆಗಳಿಗೆ ಹೊಂದಿಕೊಳ್ಳುವ ರೀತಿಯಲ್ಲಿ ಅದನ್ನು ರಚಿಸಲ್ಪಟ್ಟಿದೆ. ಈ ವಿಚಾರವನ್ನು ಆಂಧ್ರ ಪ್ರದೇಶ ಮುಖ್ಯ ನ್ಯಾಯಾಧೀಶರ ಮತ್ತು ಇತರರು v. ಎಲ್.ವಿ.ಎ. ದಕ್ಷಿತುಲು ಮತ್ತು ಇತರರು[34] ಪ್ರಕರಣದಲ್ಲಿ ನ್ಯಾಯಾಲಯ ಎತ್ತಿ ಹಿಡಿದಿದ್ದು; ಸಂವಿಧಾನವು ಒಂದು ಜೀವಂತವಾದ, ಆತ್ಮವನ್ನು ಹೊಂದಿರುವ ಸಾರಯುಕ್ತ ಜೀವಿಯಾಗಿದ್ದು, ಅದಕ್ಕೆ ಆದ ಪ್ರಜ್ಞೆ ಇದೆ ಮತ್ತು ಅದರ ಮೂಲಭೂತ ಚೌಕಟ್ಟಿನ ಬೆನ್ನುಹುರಿಯಿಂದ ಹೊರಹೊಮ್ಮುವ ಅದರ ನಾಡಿ ಬಡಿತಗಳನ್ನು, ಅದರ ಕಾಲುಗಳ ತುದಿಯನ್ನು ಒಳಗೊಂಡಂತೆ, ಅದರ ದೇಹಡೆಲ್ಲೆಡೆ ಅನುಭವಿಸಬಹುದು ಎಂದು ತಿಳಿಸಲಾಗಿತ್ತು.

83. ಸೌರಭ್ ಚೌಧರಿ ಮತ್ತು ಇತರರು v. ಭಾರತ ಸರ್ಕಾರ ಮತ್ತು ಇತರರು[35] ಪ್ರಕರಣದಲ್ಲಿ, ಇದನ್ನು ಈ ರೀತಿಯಲ್ಲಿ ಗಮನಿಸಲಾಗಿದೆ: -

> "ನಮ್ಮ ಸಂವಿಧಾನವು ಜೈವಿಕ ಸ್ವಭಾವದ್ದಾಗಿದ್ದು, ಒಂದು ಜೀವಂತ ಅಂಗವಾಗಿದೆ, ಆದು ಕಾಲದೊಂದಿಗೆ ಮುನ್ನಡೆಯುತ್ತಿರುತ್ತದೆ, ಕಾನೂನು ಬದಲಾಗಬೇಕು. ಸಂವಿಧಾನಾತ್ಮಕ ಕಾನೂನಿನ ಎಲ್ಲೆಗಳು ವಿಸ್ತರಿಸುತ್ತಿವೆ."

84. ಹೀಗಾಗಿ, ನಾವುಗಳು, ಸಂವಿಧಾನದಲ್ಲಿ ಅಂತರ್ಗತಗೊಂಡಿರುವ, ಸಂವಿಧಾನದ ಅಸ್ಮಿತೆಯನ್ನು ಕಳೆದುಕೊಳ್ಳದೆ, ಸಾಂವಿಧಾನಿಕ ನ್ಯಾಯಾಲಯಗಳು, ಸದಾ ಬದಲಾಗುತ್ತಿರುವ ಸನ್ನಿವೇಶಗಳಿಗೆ ಹೊಂದಿಕೊಳ್ಳುವಂತೆ ಬೆಳೆಯಬಲ್ಲ ವಿಸ್ತರಣಶೀಲತೆಯನ್ನು ಹೊರಸೂಸುವಂತೆ ಮಾಡಬಲ್ಲ ಅಥವಾ ಆಗ್ರಪಡಿಸಬಲ್ಲ ಚಲನಶೀಲ ತತ್ವಗಳನ್ನು ಗಮನದಲ್ಲಿರಿಸಿಕೊಳ್ಳಬೇಕು ಎಂದು ಅಭಿಪ್ರಾಯ ಪಡುತ್ತೇವೆ. ವ್ಯಕ್ತಿಯ ಅಸ್ಮಿತೆ ಮತ್ತು ಅದರ ಹಿಂದಿನ ಸಾಂವಿಧಾನಿಕ ನ್ಯಾಯಸಮ್ಮತತೆಯ ಕಲ್ಪನೆಯು ಅಪಾರ ಮಹತ್ವದ್ದಾಗಿದೆ. ಆದ್ದರಿಂದ, ಈ ಸಂದರ್ಭದಲ್ಲಿ, ಸಾಂವಿಧಾನಿಕ ನ್ಯಾಯಾಲಯಗಳ ಕರ್ತವ್ಯ ಮಹತ್ವ ಪಡೆದುಕೊಳ್ಳುತ್ತದೆ. ಈ ಜೀವಂತ ಸಾಧನದ ವಿಕಾಸಶೀಲ ಸ್ವರೂಪವನ್ನು ಅರಿತುಕೊಳ್ಳುವಲ್ಲಿ ಸಾಂವಿಧಾನಿಕ ನ್ಯಾಯಾಲಯಗಳ ಪಾತ್ರಕ್ಕೆ ನಾವು ಒತ್ತು ನೀಡುತ್ತೇವೆ. ಅದರ ಚಲನಶೀಲ ಮತ್ತು ಉದ್ದೇಶಪೂರ್ಣ ವಿವರಣಾತ್ಮಕ ವಿಧಾನದ ಮೂಲಕ, ನ್ಯಾಯಾಂಗವು ಸಂವಿಧಾನಕ್ಕೆ ಜೀವತುಂಬಲು ಶ್ರಮಿಸಬೇಕು

[34] (1979) 2 SCC 34

[35] (2003) 11 SCC 146

ಮತ್ತು ಸದರಿ ದಾಖಲೆಯನ್ನು ಕೇವಲ ಸತ್ತ ಅಕ್ಷರಗಳ ಸಂಗ್ರಹವಾಗುಳಿಸಬಾರದು. ಅಶೋಕ್ ಕುಮಾರ್ ಗುಪ್ತಾ ಮತ್ತು ಮತ್ತೊಬ್ಬರು v. ಯು.ಪಿ ರಾಜ್ಯ ಮತ್ತು ಇತರರು36 ಪ್ರಕರಣದಲ್ಲಿ ಮಾಡಲಾದ ಈ ಕೆಳಗಿನ ಅವಲೋಕನಗಳು, ನ್ಯಾಯಾಲಯಗಳ ಈ ಪಾತ್ರದ ಮೇಲೆ ಇನ್ನಷ್ಟು ಬೆಳಕು ಚೆಲ್ಲುತ್ತವೆ -

> "ಆದ್ದರಿಂದ, ತತ್ವಗಳನ್ನು ವಿಶಾಲವಾಗಿ ಮತ್ತು ಉದಾರವಾಗಿ ಅರ್ಥೈಸಿಕೊಂಡು ಸ್ಪರ್ಧಾತ್ಮಕ ಹಕ್ಕುಗಳನ್ನು ಸಮತೋಲನಗೊಳಿಸುವ ಸಲುವಾಗಿ, ಈ ಜೀವಂತ ಮತ್ತು ಸಾವಯವವಾದ ಸಂವಿಧಾನದಲ್ಲಿರುವ ಇರುವ ಭಾಷೆ ಅಥವಾ ಪದಗಳಿಗೆ ಶಕ್ತಿ, ರಕ್ತ ಮತ್ತು ಮಾಂಸವನ್ನು ಸರಬರಾಜು ಮಾಡುವುದು ನ್ಯಾಯಾಲಯದ ಕರ್ತವ್ಯವೇ ಆಗಿದೆ ."

85. ನಮ್ಮ ಸಂವಿಧಾನದಡಿಯಲ್ಲಿ ಖಾತರಿಪಡಿಸಲಾಗಿರುವ ಮೂಲಭೂತ ಹಕ್ಕುಗಳು 'ಸ್ವಾತಂತ್ರ್ಯ' ಮತ್ತು 'ಸಮಾನತೆ'ಯ ಚಲನಶೀಲ ಮತ್ತು ಕಲಾತೀತ ಹಕ್ಕುಗಳು ಮತ್ತು ಅವುಗಳ ಪರಿವರ್ತನೆ ಮತ್ತು ಪರಿವರ್ತಕ ಮತ್ತು ವಿಕಸಶೀಲ ಸ್ವರೂಪವನ್ನು ಗುರುತಿಸದೆ ಅವುಗಳಿಗೆ ಸ್ಥಿರವಾದ ವ್ಯಾಖ್ಯಾನವನ್ನು ನೀಡುವುದು ನಮ್ಮ ಸಂವಿಧಾನದ ತತ್ವಗಳಿಗೆ ವಿರುದ್ಧವಾಗಿರುತ್ತವೆ. ನಮ್ಮ ವಾದವು, ಈ ಹಕ್ಕುಗಳ ಆಧಾರವಾಗಿರುವ ಪರಿಕಲ್ಪನೆಗಳು ಬದಲಾಗುತ್ತಿರುವ ಸಮಯದೊಂದಿಗೆ ಬದಲಾಗುತ್ತವೆ ಎಂಬುದರ ಬದಲಾಗಿ, ಬದಲಾಗುತ್ತಿರುವ ಸಮಯವ ಸದರಿ ಹಕ್ಕುಗಳಲ್ಲಿ ಅಡಕವಾಗಿರುವ ಪರಿಕಲ್ಪನೆಗಳನ್ನು ವಿವರಿಸಿ ಮತ್ತು ಅವುಗಳ ಮೇಲೆ ಬೆಳಕು ಚೆಲ್ಲುತ್ತವೆ ಎಂಬುದಾಗಿದೆ. ಈ ವಿಷಯದಲ್ಲಿ, ವಿಡಿಯೋ ಎಲೆಕ್ಟ್ರಾನಿಕ್ಸ್ ಪ್ರೈ. ಲಿಮಿಟೆಡ್ ಮತ್ತೊಬ್ಬರು v. ಪಂಜಾಬ್ ರಾಜ್ಯ ಮತ್ತು ಇನ್ನೊಬ್ಬರು37 ಪ್ರಕರಣದ ತೀರ್ಪಿನಲ್ಲಿನ ಅವಲೋಕನಗಳು ಸಾಕಷ್ಟು ಬೋಧಪ್ರದವಾಗಿವೆ: -

> "ಸಂವಿಧಾನವು ಜೀವಂತ ಜೀವಿಯಾಗಿದೆ ಮತ್ತು ಅದರಲ್ಲಿ ಬಳಸಲಾಗಿರುವ ಅಭಿವ್ಯಕ್ತಿಗಳಲ್ಲಿನ ಸುಪ್ತ ಅರ್ಥಗಳು

[36] (1997) 5 SCC 201

[37] (1990) 3 SCC 87

ನಿರ್ದಿಷ್ಟ ಸನ್ನಿವೇಶ ಉಂಟಾದಾಗ ಮಾತ್ರವೇ ಪರಿಣಾಮಬೀರಬಹುದು. ಬದಲಾಗುತ್ತಿರುವ ಸಮಯದೊಂದಿಗೆ ಅರ್ಥವೂ ಬದಲಾಗುತ್ತದೆ ಎಂಬುದು ಇದರ ಅರ್ಥವಲ್ಲ, ಆದರೆ ಬದಲಾಗುತ್ತಿರುವ ಸಮಯಗಳು ಇಲ್ಲಿ ಬಳಸಲಾಗಿರುವ ಅಭಿವ್ಯಕ್ತಿಗಳ ಅರ್ಥವನ್ನು ವಿವರಿಸುತ್ತವೆ ಮತ್ತು ಅವನ್ನು ಬೆಳಗಿಸುತ್ತವೆ. ಬಳಸಿದ ಅಭಿವ್ಯಕ್ತಿಗಳ ಅರ್ಥವು ವಿಕಾಸವಾಗುತ್ತಿರುವ ಚಲನಶೀಲ ಸಂದರ್ಭಗಳಲ್ಲಿ ತನ್ನ ಆಕಾರ ಮತ್ತು ಬಣ್ಣವನ್ನು ಪಡೆದುಕೊಳ್ಳುತ್ತದೆ. "

86. ನಮ್ಮ ಸಂವಿಧಾನವು ಸಮಾನತೆಯ ಚೈತನ್ಯವನ್ನು ಪ್ರೋತ್ಸಾಹಿಸುತ್ತದೆ ಮತ್ತು ಬಲಪಡಿಸುತ್ತದೆ ಹಾಗೂ ಪ್ರತಿಯೊಬ್ಬ ವ್ಯಕ್ತಿಯು ಸಮಾನ ಹಕ್ಕುಗಳನ್ನು ಪಡೆದುಕೊಳ್ಳುವ ಮತ್ತು ಅವನು/ ಅವಳು ಒಬ್ಬ ವ್ಯಕ್ತಿಯಾಗಿ ತನ್ನ ಸಾಧ್ಯತೆಗಳನ್ನು ಅರಿತು ಬೆಳೆಸಿಕೊಳ್ಳುವುದನ್ನು ಸಾಧ್ಯವಾಗಿಸುವ ಸಮಾಜವನ್ನು ಕಲ್ಪಿಸಿಕೊಳ್ಳುತ್ತದೆ. ಪ್ರತ್ಯೇಕತೆಯ ಗುರುತಿಸುವಿಕೆಯ ಖಾತರಿಯು ಈ ಚಲನಶೀಲ ಸಂವಿಧಾನದ ಉದ್ದಗಲದಲ್ಲೆಲ್ಲಾ ಹಾದು ಹೋಗಿದೆ. 'ಬದಲಾವಣೆ ಅನಿವಾರ್ಯ' ಎಂಬ ಅಂಶವನ್ನು ಒಪ್ಪಿಕೊಳ್ಳುವ ರೀತಿಯಲ್ಲಿ ಸಂವಿಧಾನವನ್ನು ಕಲ್ಪಿಸಿಕೊಂಡು ವಿನ್ಯಾಸ ಮಾಡಲಾಗಿದೆ. ಸಮಾನ ಹಕ್ಕುಗಳ ಸಾಂವಿಧಾನಿಕ ದೃಷ್ಟಿಕೋನವನ್ನು ಪ್ರಸ್ತುತ ಬೇಡಿಕೆಗಳು ಮತ್ತು ಸನ್ನಿವೇಶಗಳೊಂದಿಗೆ ಹೊಂದಾಣಿಕೆಯಾಗುವಂತೆ ಅರ್ಥಮಾಡಿಕೊಳ್ಳುವುದು ಮತ್ತು ಅದನ್ನು ದಶಕಗಳ ಹಿಂದೆ ಅಸ್ತಿತ್ವದಲ್ಲಿದ್ದ ಸಮಾನತೆಯ ಮಾನದಂಡಗಳಿಗೆ ಅನುಗುಣವಾಗಿ ಓದಿ ವ್ಯಾಖ್ಯಾಸದೇ ಇರುವುದು ನ್ಯಾಯಾಲಯಗಳ ಕರ್ತವ್ಯವಾಗಿದೆ. ನ್ಯಾಯಾಂಗ, ಸಮಾಜವು ನಿರಂತರವಾಗಿ ವಿಕಸನಗೊಳ್ಳುತ್ತಿದೆ ಮತ್ತು ಬದಲಾಗುತ್ತಿರುವ ಸಮಯದೊಂದಿಗೆ ಅನೇಕ ಮಾರ್ಪಾಡುಗಳು ಉಂಟಾಗಬಹುದು ಎಂಬ ಅಂಶವನ್ನು ಮರೆಯುವಂತಿಲ್ಲ. ಮಾನವ ಹಕ್ಕುಗಳ ಗೌರವವನ್ನು ಹೆಚ್ಚಿಸಿ, ಬಹುತ್ವದ ಒಳಗೊಳ್ಳುವಿಕೆಯನ್ನು ಪ್ರತಿಪಾದಿಸಿ, ಸಾಮರಸ್ಯ, ಎಂದರೆ, ವೈವಿಧ್ಯತೆಯ ನಡುವಿನ ಐಕ್ಯತೆಯನ್ನು ಸಾಧಿಸಿ, ಪರಕೀಯತೆ ಅಥವಾ ಮಧ್ಯಕಾಲೀನ ಸ್ವಾಭಿಮಾನದ ಮೇಲೆ ರೂಪಿಸಲಾಗಿರುವ ಕೆಲವು ಸ್ವೀಕಾರಾರ್ಹವಲ್ಲದ ಸಾಮಾಜಿಕ ಕಲ್ಪನೆಗಳನ್ನು ಬಿಟ್ಟುಕೊಟ್ಟು ಹಾಗೂ ವಿಮರ್ಶೆಯನ್ನು ತಾಳಿಕೊಳ್ಳಬಲ್ಲ ತಾರ್ಕಿಕ ಸಿಧ್ಧಾಂತಗಳನ್ನು

ಆಧರಿಸಿರುವ ಸಮತಾವಾದಿ ಉದಾರವಾದದ ಪಂಥವನ್ನು ಸ್ಥಾಪಿಸುವ ಮೂಲಕ ಸಂವಿಧಾನಾತ್ಮಕ ಆದರ್ಶವಾದವನ್ನು ವಾಸ್ತವವಾಗಿ ಪರಿವರ್ತಿಸುವುದು ಅಗತ್ಯ.

87. ಅಶೋಕ್ ಕುಮಾರ್ ಗುಪ್ತ (ಮೇಲ್ಕಂಡ) ಪ್ರಕರಣದ ತೀರ್ಪಿನಲ್ಲಿ, ನ್ಯಾಯಾಲಯ ಸಂಸಾದೀಯ ಪ್ರಜಾತಂತ್ರದಲ್ಲಿನ ಬದಲಾವಣೆಯ ಪ್ರಕ್ರಿಯೆಗೆ ಅತ್ಯಗತ್ಯವಾಗಿರುವ ಬದಲಾವಣೆ ಮತ್ತು ಸಾತತ್ಯಗಳ ಸಮಾಗಮವನ್ನು ಉಳಿಸಿಕೊಳ್ಳುವ ನ್ಯಾಯಾಲಯದ ತಡೆಯಿಲ್ಲದ ಪ್ರಯತ್ನದಲ್ಲಿ ಸಾಮಾನ್ಯ ಜ್ಞಾನವು, ತಾರ್ಕಿಕ ಮಾರ್ಗದರ್ಶಿಯ ಕಾರ್ಯನಿರ್ವಹಿಸಿದೆ ಎಂದು ಗಮನಿಸಿತು. ನ್ಯಾಯಾಲಯವು ಸಾಮಾಜಿಕ ಪ್ರಗತಿಯನ್ನು ಹಿಮ್ಮೆಟ್ಟಿಸುವ ಅಥವಾ ಏಕೀಕರಣವನ್ನು ಪ್ರತಿಬಂಧಿಸುವ ವ್ಯಾಖ್ಯಾನವನ್ನು ಒಪ್ಪಿಕೊಳ್ಳಲು ಬದ್ಧವಾಗಿಲ್ಲ ಎಂದು ತೀರ್ಪು ನೀಡಿತು. ಸಂವಿಧಾನದ ಪ್ರಸ್ತಾವನೆಯು ಸಂವಿಧಾನದ 3ನೇ ಮತ್ತು 4ನೇ ಭಾಗಗಳ ಸಹಾಯದೊಂದಿಗೆ ಹಾಕಿಕೊಟ್ಟಿರುವ ಆದರ್ಶಗಳನ್ನು ಸಮಾಜದ ಎಲ್ಲಾ ವರ್ಗಗಳ ಪಾಲಿಗೆಗೆ ಅರ್ಥಪೂರ್ಣವಾದ ಮತ್ತು ಜೀವಂತ ವಾಸ್ತವಿಕತೆಯನ್ನಾಗಿಸುವುದನ್ನು ಸಾಧ್ಯವಾಗಿಸಬಲ್ಲ ವ್ಯಾಖ್ಯಾನವನ್ನು ನ್ಯಾಯಾಲಯಗಳು ಅಳವಡಿಸಿಕೊಳ್ಳಬೇಕು ಎಂದು ಗಮನಿಸಲಾಯಿತು.

88. ಇಂತಹ ವಿಸ್ತರಣಶೀಲ ಚಲನಶೀಲತೆಯ ಆಯುಧಗಳ ಮೂಲಕವೇ ನಮ್ಮ ನ್ಯಾಯಾಲಯಗಳು ನಮ್ಮ ಸಂವಿಧಾನದ 3ನೇ ಭಾಗದಲ್ಲಿನ ಮೂಲಭೂತ ಹಕ್ಕುಗಳಿಗೆ ಎಲ್ಲರನ್ನು ಒಳಗೊಳ್ಳುವ ವ್ಯಾಖ್ಯಾನವನ್ನು ನೀಡಲು ಸಾಧ್ಯವಾಗಿದೆ. ಮೂಲಭೂತ ಹಕ್ಕುಗಳ ರಕ್ಷಣೆಯನ್ನು, ಅವುಗಳನ್ನು ಅನುಭವಿಸುವ ಅವಕಾಶ ಕಳೆದುಕೊಂಡವರಿಗೂ ವಿಸ್ತರಿಸುವ ದೃಷ್ಟಿಕೋನಗಳನ್ನು ವಿಕಾಸಗೊಳಿಸಿರುವ ಸಾಂವಿಧಾನಿಕ ನ್ಯಾಯಾಲಯಗಳ ತೀರ್ಪುಗಳು ಇದಕ್ಕೆ ಉದಾಹರಣೆಯಾಗಿವೆ. ನ್ಯಾಯಾಲಯಗಳು ಇಂತಹ ವಿಧಾನವನ್ನು ಅಳವಡಿಸಿಕೊಂಡಿರದಿದ್ದರೆ, ನಮ್ಮ ಸಂವಿಧಾನ ಮತ್ತು ಅದರ ಪ್ರಗತಿಪರ ತತ್ವಗಳು ಪರಿಣಾಮಕಾರಿಯಾಗಿರುತ್ತಿರಲಿಲ್ಲ ಮತ್ತು ಈ ಚಲನಶೀಲ ಸನ್ನದು ಯಾವುದೇ ಉದ್ದೇಶ ಅಥವಾ ವಸ್ತುವಿಲ್ಲದ ಬರಿಯ ಅಲಂಕಾರಿಕ ದಸ್ತಾವೇಜಿನ ಮಟ್ಟಕ್ಕಿಳಿದುಬಿಡುತ್ತದೆ.

89. ಸಂವಿಧಾನದ ಕಟ್ಟಕಡೆಯ ತೀರ್ಪುಗಾರನಾಗಿರುವ ನ್ಯಾಯಾಲಯವು, ಸವಲತ್ತುಗಳಿಲ್ಲದಿರುವವರ ಮತ್ತು ದುರ್ಬಲ ವರ್ಗಗಳ ಅಗತ್ಯಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಹಕ್ಕುಗಳನ್ನು ಹೊಂದಿರುವ ಸಮುದಾಯಗಳು, ಕೇವಲ ಸರ್ಕಾರ ಮತ್ತು ಸಮಾಜದಿಂದಷ್ಟೇ ಅಲ್ಲದೇ ತಮ್ಮ ಕುಟುಂಬದ ಸದಸ್ಯರಿಂದಲೂ ಅವಮಾನ, ತಾರತಮ್ಯ, ಪರಕೀಯತೆ ಮತ್ತು ಹಿಂಸೆಗೆ ಒಳಗಾದಾಗ ನ್ಯಾಯಾಲಯದ ಪಾತ್ರವು ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ. ಕಾನೂನಿನ

ಬೆಳವಣಿಗೆಯು, ಸಮಾಜದ ಅಂತಹ ಸದಸ್ಯರ ಹಕ್ಕುಗಳ ಪಡೆದುಕೊಳ್ಳುವಿಕೆ ಮತ್ತು ಈಡೇರಿಕೆಯ ಹೋರಾಟದಲ್ಲಿ ಮೂಕ ಸಾಕ್ಷಿಯಾಗಿರಬಾರದು.

೯೦. ನಾಲ್ಸಾ ಪ್ರಕರಣದಲ್ಲಿ ಲಿಂಗಪರಿವರ್ತಿತರ ಮೂರನೇ ಲಿಂಗದವರಾಗಿರುವ ಹಕ್ಕನ್ನು ಗುರುತಿಸಿ ಆ ಮೂಲಕ ನಮ್ಮಂತಹ ಪ್ರಜಾಪ್ರಭುತ್ವದಲ್ಲಿ ಬಹುಹಿಂದೆಯೇ ನಡೆಯಬೇಕಿದ್ದ ಕಾರ್ಯವನ್ನು ಮಾಡಿದ್ದು ಇಂತಹುದೇ ಒಂದು ನಿದರ್ಶನ. ಆ ಪ್ರಕರಣದಲ್ಲಿ ಈ ನ್ಯಾಯಾಲಯ ಹೀಗೆಂದು ತೀರ್ಪಿತ್ತಿತು: -

> "ಸಂವಿಧಾನವು ಜೀವಂತ ಪಾತ್ರವಾಗಿದ್ದು, ಅದರ ವ್ಯಾಖ್ಯಾನವು ಕ್ರಿಯಾತ್ಮಕವಾಗಿರಬೇಕು ಮತ್ತು ಸಂಕೀರ್ಣವಾದ ಮತ್ತು ಆಧುನಿಕ ವಾಸ್ತವ ಪ್ರತಿಪಾದಿಸುವ ರೀತಿಯಲ್ಲಿ ಅದನ್ನು ಅರ್ಥೈಸಿಕೊಳ್ಳಬೇಕು ಎಂಬುದನ್ನು ಬಹಳ ಚೆನ್ನಾಗಿ ಗುರುತಿಸಲಾಗಿದೆ. ನ್ಯಾಯಾಂಗವು ಸಂವಿಧಾನದ ರಕ್ಷಕ ಮತ್ತು ಟಿಜಿಗಳಿಗೆ ಕಾನೂನುಬದ್ಧವಾಗಿ ದೊರಕಬೇಕಾಗಿದ್ದ ಹಕ್ಕನ್ನು ನೀಡುವುದನ್ನು ಖಾತ್ರಿಪಡಿಸಿಕೊಳ್ಳುವ ಮೂಲಕ ನಾವು ಸಂವಿಧಾನ ಮತ್ತು ಪ್ರಜಾಪ್ರಭುತ್ವವನ್ನು ಕಾಪಾಡುತ್ತಿದ್ದೇವೆ, ಏಕೆಂದರೆ ಸಾಮಾನ್ಯ ನೆಲೆಯಲ್ಲಿ ಪ್ರಜಾಪ್ರಭುತ್ವವನ್ನು, ನಿರ್ಧಿಷ್ಟವಾಗಿ ಮಾನವ ಹಕ್ಕುಗಳಿಗೆ ನ್ಯಾಯಾಂಗದ ರಕ್ಷಣೆಯನ್ನು ಒದಗಿಸುವುದು ನಮ್ಮ ಜೀವಂತ ಪ್ರಜಾಪ್ರಭುತ್ವದ ವಿಶಿಷ್ಟ ಲಕ್ಷಣವಾಗಿದೆ.
>
> ಮೇಲೆ ತಿಳಿಸಿದಂತೆ, ನಮ್ಮ ಸಂವಿಧಾನವು ಕಾನೂನಿನ ಆಳ್ವಿಕೆಯೆಂಬ ಪ್ರಮುಖ ಮತ್ತು ಮೂಲಭೂತವಾದ ಸ್ತಂಬವಿರುವ ಉದಾರ ಮತ್ತು ಪ್ರಾಮಾಣಿಕವಾದ

> ಪ್ರಜಾಪ್ರಭುತ್ವವನ್ನು ಕಾಯ್ದುಕೊಳ್ಳುತ್ತದೆ. ಅದರ ಆಂತರಿಕ ನೈತಿಕತೆಯು, ಎಲ್ಲಾ ಮನುಷ್ಯರ ಘನತೆ ಮತ್ತು ಸಮಾನತೆಯನ್ನು ಆಧರಿಸಿದೆ. ಕಾನೂನಿನ ಆಳ್ವಿಕೆಯು ವೈಯಕ್ತಿಕ ಮಾನವ ಹಕ್ಕುಗಳ ರಕ್ಷಣೆಯನ್ನು ಬಯಸುತ್ತದೆ. ಅಂತಹ ಹಕ್ಕುಗಳನ್ನು ಪ್ರತಿಯೊಬ್ಬ ಮನುಷ್ಯನಿಗೂ ಖಾತರಿಪಡಿಸಬೇಕು. ಈ ಟಿಜಿಗಳು ಸಂಖ್ಯೆಯಲ್ಲಿ ಅತಿ ಕಡಿಮೆಯಿದ್ದರೂ ಕೂಡ ಮನುಷ್ಯರಾಗಿದ್ದು, ಅವರು ತಮ್ಮ ಮಾನವ ಹಕ್ಕುಗಳನ್ನು ಆನಂದಿಸುವ ಎಲ್ಲಾ ಹಕ್ಕನ್ನು ಹೊಂದಿದ್ದಾರೆ. "

ಜೀವಂತ ದಸ್ತಾವೇಜು ಎಂಬ  ಪರಿಕಲ್ಪನೆಯು ಹಲವಾರು ಅಂತಾರಾಷ್ಟ್ರೀಯ ಪ್ರಾಧಿಕಾರಗಳಲ್ಲಿ ಕೂಡ ಸ್ಥಾನ ಪಡೆದಿದೆ. ಇತರ ನ್ಯಾಯವ್ಯಾಪ್ತಿಗಳ ನ್ಯಾಯಾಲಯಗಳು ಸಂವಿಧಾನವು ಶಾಶ್ವತವಾಗಿ ವಿಕಾಸಗೊಳ್ಳುವ ಸ್ವಾಭಾವ ಹೊಂದಿವೆ ಮತ್ತು ಪ್ರಗತಿಶೀಲ ವಿಧಾನವನ್ನು ಸಂವಿಧಾನದಲ್ಲಿ ಅಂತರ್ಗತವಾಗಿರುವ ತತ್ವಗಳು ಕಡ್ಡಾಯಪಡಿಸುತ್ತವೆ ಎಂಬ ಅಭಿಪ್ರಾಯವನ್ನು ಅನುಮೋದಿಸಿವೆ .

91. ಕೆನಡಾದ ಸರ್ವೋಚ್ಚ ನ್ಯಾಯಾಲಯವು, ತನ್ನ ವ್ಯಾಪ್ತಿಯಲ್ಲಿನ ಸಮಲೈಂಗಿಕ ಸಮಾಗಮವನ್ನು ಒಳಗೊಂಡಂತೆ, ಮದುವೆಯ ವಿಸ್ತಾರವಾದ ಅರ್ಥವಿವರಣೆ ನೀಡುವ ಸಂದರ್ಭದಲ್ಲಿ, ಸಮಲೈಂಗಿಕ ಮದುವೆಯ ಬಗ್ಗೆ "ರಿ: ಸೇಮ್ ಸೆಕ್ಸ್ ಮ್ಯಾರೇಜ್38" ನಲ್ಲಿ , ಹೀಗೆ ಗಮನಿಸಿದೆ: -

> "ಹೆಪ್ಪುಗಟ್ಟಿದ ಪರಿಕಲ್ಪನೆಗಳು" ಎಂಬ ತಾರ್ಕಿಕತೆಯು ಕೆನಡಾದ ಸಂವಿಧಾನಾತ್ಮಕ ವ್ಯಾಖ್ಯಾನದ ಬಹುತೇಕ ಮೂಲಭೂತ ತತ್ವಗಳಿಗೆ ವಿರುದ್ಧವಾಗಿದೆ: ನಮ್ಮ ಸಂವಿಧಾನವು ಜೀವಂತ ಮರವಾಗಿದ್ದು, ಅದು ಪ್ರಗತಿಶೀಲ

[38] [2004] 3 S.C.R. 698

> ವ್ಯಾಖ್ಯಾನದ ಮೂಲಕ, ಆಧುನಿಕ ಜೀವನದ ವಾಸ್ತವಗಳಿಗೆ ಜಾಗ ಮಾಡಿಕೊಡುತ್ತದೆ ಮತ್ತು ಅವನ್ನು ಗಣನೆಗೆ ತೆಗೆದುಕೊಳ್ಳುತ್ತದೆ"

92. 1920 ರ ದಶಕದಷ್ಟು ಹಿಂದೆಯೇ ಮಿಸೌರಿ ರಾಜ್ಯ v. ಹಾಲೆಂಡ್39 ಪ್ರಕರಣದಲ್ಲಿ ಯುನೈಟೆಡ್ ಸ್ಟೇಟ್ಸಿನ ಸರ್ವೋಚ್ಛ ನ್ಯಾಯಾಲಯವು ವಿವಾದಾತ್ಮಕ ಸಾಧನ ಮತ್ತು 'ಸಂವಿಧಾನದ' ನಡುವೆ ಹೋಲಿಕೆ ಮಾಡುವಾಗ ಸಂವಿಧಾನದ ಸ್ವರೂಪದ ಬಗೆಗೆ ಈ ಕೆಳಗಿನ ವೀಕ್ಷಣೆಗಳನ್ನು ಮಾಡಿತ್ತು:-

> "ಅಮೆರಿಕ ಸಂಯುಕ್ತ ಸಂಸ್ಥಾನದ ಸಂವಿಧಾನದಲ್ಲಿರುವಂತೆ, ಸಾಂವಿಧಾನಿಕ ಕಾಯ್ದೆಯೂ ಆಗಿರುವ ಪದಗಳ ವಿಚಾರದಲ್ಲಿ ವ್ಯವಹರಿಸುವಾಗ, ಆ ಪದಗಳು, ನಿರ್ಮಾತೃಗಳು ಕೂಡ ಸಂಪೂರ್ಣವಾಗಿ ಉಹಿಸಲು ಸಾಧ್ಯವಾಗದಂತ ಬೆಳವಣಿಗೆಯನ್ನು ಹೊಂದುತ್ತಿರುವ ಜೀವಿಯೊಂದಕ್ಕೆ ಬದುಕನ್ನೀಯುತ್ತವೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು, ಅವರ ಪಾಲಿಗೆ ತಾವು ಜೀವಿಯೊಂದನ್ನು ಸೃಷ್ಟಿಸಿದ್ದೇವೆ ಎಂಬ ಅರಿವು ಅಥವಾ ಭರವಸೆಯಷ್ಟೇ ಸಾಕಾಗಿತ್ತು; ಒಂದಿಡೀ ಶತಮಾನ ಉರುಳಿ, ಅವರುಗಳ ಉತ್ತರಾಧಿಕಾರಿಗಳು ಸಾಕಷ್ಟು ಬೆವರು ಮತ್ತು ರಕ್ತವನ್ನು ಖರ್ಚು ಮಾಡಿದ ನಂತರ, ಅವರು ರಾಷ್ಟ್ರವೊಂದನ್ನು ರಚಿಸಿದ್ದಾರೆ ಎಂಬುದು ಸಾಬೀತಾಗಿದೆ "

93. ತಮ್ಮ ಹೆಸರಾಂತ ಕೃತಿಗಳಲ್ಲಿ ಒಂದರಲ್ಲಿ ಜಡ್ಜ್ ರಿಚರ್ಡ್ ಪೋಸ್ನರ್ ಮಾಡಿರುವ ಅವಲೋಕನಗಳನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತ: -

---

[39] 252 U.S. 416 (1920)

"ಇಂತಹ ಆಕ್ರಮಣಕಾರಿ, ದಬ್ಬಾಳಿಕೆಯ, ಬಹುಶಃ ಪ್ರಜಾಪ್ರಭುತ್ವವಿರೋಧಿಯೂ ಆಗಿರುವ ಮತ್ತು ಪಂಥಗಳನ್ನು ಸೃಷ್ಟಿಸುವ ಕಾನೂನನ್ನು (ಗರ್ಭನಿರೋಧಕಗಳನ್ನು ನಿಷೇಧಿಸುವ ಕನೆಕ್ಟಿಕಟ್ ಕಾನೂನಿನಂತೆ) ಅಮಾನ್ಯಗೊಳಿಸದಿರುವ ಸಂವಿಧಾನವು ಹಲವು ಪ್ರಮುಖ ಕೊರತೆಗಳನ್ನು ಹೊಂದಿರುವುದು ಎದ್ದು ಕಾಣುತ್ತದೆ. ಬಹುಶಃ ಅದು ನಮ್ಮ, ಅಥವಾ ಹಾಗೆ ನೋಡಿದರೆ, ಯಾವುದೇ ಲಿಖಿತ ಸಂವಿಧಾನದ ಸ್ವರೂಪವಾಗಿರಬೇಕು; ಆದರೂ ಬಹುಶಃ ನ್ಯಾಯಾಲಯಗಳು ಕನಿಷ್ಟ ಪಕ್ಷ ಎದ್ದು ಕಾಣುವ ಕೊರತೆಗಳನ್ನು ಸರಿಪಡಿಸುವ ಅಧಿಕಾರ ಹೊಂದಿವೆ. ಯಾರಾದರೂ, ನಿಜವಾಗಿಯೂ ತಮ್ಮ ಹೃದಯದಾಳದಿಂದ, ನಿರ್ದಿಷ್ಟ ಸಾಂವಿಧಾನಿಕ ನಿಬಂಧನೆಯನ್ನು ಉಲ್ಲಂಘಿಸದಿರುವ ಪ್ರತಿಯೊಂದು ಕಲ್ಪಿಸಿಕೊಳ್ಳಬಲ್ಲ ಕಾನೂನನ್ನು ಬೆಂಬಲಿಸುವ ರೀತಿಯಲ್ಲಿ ಸಂವಿಧಾನವನ್ನು ಅರ್ಥೈಸಿಕೊಳ್ಳಬೇಕು ಎಂಬುದನ್ನು ನಂಬುತ್ತಾರೆಯೇ? ಹೀಗಾಗಿಬಿಟ್ಟರೆ ಒಂದು ಸರ್ಕಾರವು ಪ್ರತಿಯೊಬ್ಬರೂ ಮದುವೆಯಾಗಬೇಕೆಂದೂ ಅಥವಾ ಕನಿಷ್ಠ ತಿಂಗಳಿಗೊಮ್ಮೆ ಸಂಭೋಗ ನಡೆಸಬೇಕೆಂದು ಆಜ್ಞಾಪಿಸಬಹುದು ಅಥವಾ ಅದು ಪ್ರತಿ ದಂಪತಿಯ ಎರಡನೆಯ ಮಗುವನ್ನು ಅದನ್ನು ಸಾಕುಮನೆಯಲ್ಲಿ ಇರಿಸಿಕೊಳ್ಳಬಹುದು ಎಂಬ ಅರ್ಥಬಂದೀತು ....ನ್ಯಾಯಾಲಯಗಳು ನಮ್ಮ ಮತ್ತು

> ಸರ್ಕಾರದ ದಬ್ಬಾಳಿಕೆಯ ನಡುವಿನಲ್ಲಿ, ದಬ್ಬಾಳಿಕೆಯ ಅಂತಹ ಸ್ವರೂಪವನ್ನು ನಮ್ಮ ಸಂವಿಧಾನದ ನಿರ್ಮಾತೃಗಳು ಮೊದಲೇ ಊಹಿಸಿರಲಿಲ್ಲ ಮತ್ತು ಅದನ್ನು ನಿರ್ದಿಷ್ಟವಾಗಿ ನಿರ್ಬಂಧಿಸಿರಲಿಲ್ಲ ಎಂಬುದರ ಹೊರತಾಗಿಯೂ ನಿಂತಿವೆ ಎಂಬ ಆಲೋಚನೆಯೇ ನಮಗೆ ಸಮಾಧಾನ ನೀಡುತ್ತದೆ[40]

94. ಹೀಗಾಗಿ, ಸಾಂವಿಧಾನಿಕ ಆದರ್ಶವಾದದ ವಿಸ್ತಾರವಾದ ಬೆಳವಣಿಗೆಯು, ಪ್ರಗತಿಯ ಸಿದ್ಧಾಂತದಲ್ಲಿ, ಯಥಾಸ್ಥಿತಿ ಕಾಯ್ದುಕೊಳ್ಳುವ ವರ್ತನೆಯನ್ನು ಕೈಬಿಡುವುದರಲ್ಲಿ, ಒಳಗೊಳ್ಳುವಿಕೆಯ ಪರಿಕಲ್ಪನೆಯ ವಿಸ್ತರಣೆಯಲ್ಲಿ ಮತ್ತು ಸಾಂವಿಧಾನಿಕ ತತ್ವಜ್ಞಾನದೊಂದಿಗೆ ಬದಲಾವಣೆಯ ರೂಢಿಗೆ ಹೊಂದಿಕೊಳ್ಳುವ ಸಿದ್ಧಾಂತವನ್ನು ಸದಾಕಾಲ ನೆನಪಿಸಿಕೊಳ್ಳುವುದರಲ್ಲಿ ಹುದುಗಿದೆ ಎಂಬುದು ಎದ್ದು ಕಾಣುವ ವಿಚಾರ.

## H. ಪರಿವರ್ತಕ ಸಾಂವಿಧಾನಿಕತೆ ಮತ್ತು ಎಲ್.ಜಿ.ಬಿ.ಟಿ ಸಮುದಾಯದ ಹಕ್ಕುಗಳು

95. ಸಂವಿಧಾನಾತ್ಮಕ ಪ್ರಜಾಪ್ರಭುತ್ವವನ್ನು ಹೊಂದುವ ಅಗತ್ಯವನ್ನು ಅರ್ಥಮಾಡಿಕೊಳ್ಳಲು ಮತ್ತು ನಾವು ಸಂವಿಧಾನವನ್ನು ಏಕೆ ಅಳವಡಿಸಿಕೊಂಡಿದ್ದೇವೆ ಎಂಬ ಮಿಲಿಯನ್ ಡಾಲರ್ ಪ್ರಶ್ನೆಯನ್ನು ಪರಿಹರಿಸಲು, ನಾವು ಬಹುಶಃ ಪರಿವರ್ತಕ ಸಾಂವಿಧಾನಿಕತೆಯ ಪರಿಕಲ್ಪನೆಯನ್ನು ಒಂದು ಮಟ್ಟದ ಸ್ಪಷ್ಟತೆಯೊಂದಿಗೆ ಅರ್ಥಮಾಡಿಕೊಳ್ಳಬೇಕಾಗಿದೆ. ನಮ್ಮ ಈ ಅನ್ವೇಷಣೆಯಲ್ಲಿ, ನಮ್ಮ ಸಂವಿಧಾನದ ಪ್ರಸ್ತಾವನೆಯಲ್ಲಿ ಅಡಕಗೊಳಿಸಲಾಗಿರುವ ಆದರ್ಶಗಳು ನಮ್ಮ ದಾರಿ ದೀವಿಗೆಗಳಾಗಿರುತ್ತವೆ. ಸಂವಿಧಾನವನ್ನು ಅಂಗೀಕರಿಸುವ ಮೊದಲು ಭಾರತೀಯ ಸಮಾಜದಲ್ಲಿ ಅಸ್ತಿತ್ವದಲ್ಲಿದ್ದ ತಪ್ಪುಗಳನ್ನು ಸರಿಪಡಿಸುವುದು ನಮ್ಮ ಭವ್ಯವಾದ ಸಂವಿಧಾನದ ಅಂತಿಮ ಗುರಿ. ಕೇರಳ ರಾಜ್ಯ ಮತ್ತು ಇನ್ನೊಬ್ಬರು v. ಎನ್.ಎಂ. ಥಾಮಸ್ ಮತ್ತು ಇತರರು41 ಪ್ರಕರಣದಲ್ಲಿ ನ್ಯಾಯಾಲಯ ಭಾರತೀಯ ಸಂವಿಧಾನವು ಎಂದು ಮಹಾನ್ ಸಾಮಾಜಿಕ ದಸ್ತಾವೇಜು ಎಂದು ಗಮನಿಸಿ ಮಧ್ಯಕಾಲೀನ, ಕ್ರಮಾನುಗತ ಸಮಾಜವನ್ನು ಒಂದು ಆಧುನಿಕ, ಸಮಾನತಾವಾದಿ ಪ್ರಜಾಪ್ರಭುತ್ವವಾಗಿ

---

[40] Posner, Richard: (1992) Sex and Reason, Harvard University Press, pg. 328. ISBN 0-674- 80280-2

[41] AIR 1976 SC 490

ಮಾರ್ಪಡಿಸುವ ತನ್ನ ಗುರಿಯ ಹಿನ್ನೆಲೆಯಲ್ಲಿ ಬಹುಪಾಲು ಕ್ರಾಂತಿಕಾರಿ ದಾಖಲೆಯಾಗಿದೆ ಮತ್ತು ಅದರ ನಿಬಂಧನೆಗಳನ್ನು ವಿಸ್ತಾರವಾದ, ಸಾಮಾಜ-ವಿಜ್ಞಾನದ ವಿಧಾನದಿಂದ ಮಾತ್ರ ಅರ್ಥೈಸಿಕೊಳ್ಳಬಹುದೇ ಹೊರತು, ನಿಷ್ಠುರವಾದ, ಸಾಂಪ್ರದಾಯಿಕ ನ್ಯಾಯಯವಾದದಿಂದಲ್ಲ ಎಂದು ನುಡಿಯಿತು.  ದೇಶವನ್ನು ಸಮೃದ್ಧವಾದ ಭವಿಷ್ಯದೆಡೆಗೆ ಮುನ್ನಡೆಸುವುದೇ ಸಂವಿಧಾನವನ್ನು ಹೊಂದುವ ಹಿಂದಿರುವ ಸಂಪೂರ್ಣವಾದ ಆಲೋಚನೆ. ಆದ್ದರಿಂದ, ಸಮಾಜವನ್ನು ಒಳ್ಳೆಯದಕ್ಕಾಗಿ ಮಾರ್ಪಡಿಸುವುದೇ ಸಂವಿಧಾನವನ್ನು ಹೊಂದುವ ಉದ್ದೇಶ ಮತ್ತು ಇದೇ ಉದ್ದೇಶವು ಪರಿವರ್ತಕ ಸಾಂವಿಧಾನಿಕತೆಯ ಮೂಲ ಕಂಬವಾಗಿದೆ.

96. ಪರಿವರ್ತನೆಯ ಸಂವಿಧಾನಾತ್ಮಕವಾದ ಪರಿಕಲ್ಪನೆಯ ತಿರುಳಿನಲ್ಲಿ ಭಾರತೀಯ ಸಮಾಜವನ್ನು ಪರಿವರ್ತಿಸಿ , ಆಮೂಲಕ, ಸಂವಿಧಾನದ ಪ್ರಸ್ತಾವನೆಯಲ್ಲಿ ಹಾಕಿಕೊಡಲಾಗಿರುವ ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಆದರ್ಶಗಳನ್ನ, ಪದ ಮತ್ತು ಸ್ಫೂರ್ತಿಯಲ್ಲಿ, ಅಪ್ಪಿಕೊಳ್ಳುವ ಪಣ, ಭರವಸೆ ಮತ್ತು ತಹತಹವಿದೆ. ಈಗಿನ ದಿನದ ವಾಸ್ತವತೆಗಳನ್ನು ಗುರುತಿಸುವಲ್ಲಿ ಸಹಾಯ ಮಾಡುವ ವ್ಯಾವಹಾರಿಕ ದೃಷ್ಟಿಯನ್ನು ಅನ್ನು ಅಳವಡಿಸಿಕೊಳ್ಳುವ ಮೂಲಕ 'ಪರಿವರ್ತಕ ಸಾಂವಿಧಾನಿಕತೆಯ ಅಭಿವ್ಯಕ್ತಿಯನ್ನು ಉತ್ತಮವಾಗಿ ಅರ್ಥೈಸಿಕೊಳ್ಳಬಹುದು. ಪರಿವರ್ತನೆ ಎಂಬ ಪದವು ಚಾಲನೆಯಿಲ್ಲದ ಅಥವಾ ಮತ್ತು ಜಡವಾಗಿರುವ ಯಾವುದೇ ವಿಚಾರಕ್ಕೆ ಅತ್ಯಂತ ವಿರುದ್ಧವಾಗಿದ್ದು, ಇದು ಬದಲಾವಣೆ, ಮಾರ್ಪಾಡು ಮತ್ತು ರೂಪಾಂತರ ಹೊಂದುವ ಸಾಮರ್ಥ್ಯವನ್ನು ಸೂಚಿಸುತ್ತದೆ. ಹಾಗಾಗಿ, ಎಲ್ಲಾ ಸಂವಿಧಾನಗಳ ವಿಚಾರದಲ್ಲಿ ಸತ್ಯವಾಗಿರುವ, ಮತ್ತು ಭಾರತದ ವಿಚಾರದಲ್ಲಿ ಹೆಚ್ಚು ಸತ್ಯವಾಗಿರುವ ಪರಿವರ್ತಕ ಸಾಂವಿಧಾನಿಕತೆಯ ಪರಿಕಲ್ಪನೆಯು ವಾಸ್ತವದಲ್ಲಿ ಕಾಲದ ಬದಲಾಗುತ್ತಿರುವ ಅಗತ್ಯಗಳಿಗೆ ಹೊಂದಿಕೊಳ್ಳುವ ಮತ್ತು ಪರಿವರ್ತನೆಗೊಳ್ಳುವ ಭಾರತೀಯ ಸಂವಿಧಾನದ ಸಾಮರ್ಥ್ಯವನ್ನು ಪ್ರತಿನಿಧಿಸುತ್ತದೆ.

97. ಇಂತಹ ಪರಿವರ್ತನೆಯಾಗಬಲ್ಲ ಸಾಮರ್ಥ್ಯವೇ ಸಂವಿಧಾನಕ್ಕೆ ಜೀವಂತ ಮತ್ತು ಸಾವಯವ ದಾಖಲೆಯ ಸ್ವರೂಪವನ್ನು ಕೊಡಮಾಡುತ್ತದೆ. ಒಂದು ಸಂವಿಧಾನ ನಾಗರಿಕರ ಜೀವನವನ್ನು ನಿರ್ಧಿಷ್ಟವಾಗಿ ಮತ್ತು ಸಮಾಜಗಳನ್ನು ಸಾರ್ವತ್ರಿಕವಾಗಿ ರೂಪಿಸುತ್ತದೆ. ಸಾಂವಿಧಾನಿಕ ನ್ಯಾಯಾಲಯಗಳಿಂದ ಅದಕ್ಕೆ ದೊರಕುವ ಪ್ರತಿಪಾದನೆ ಮತ್ತು ಶಕ್ತಿಯುತ ಬೆಂಬಲವೂ ಪ್ರಗತಿಪರ ಸಮಾಜಗಳ ಜೀವಸತ್ವವನ್ನು ರೂಪಿಸುತ್ತದೆ. ಚಲನಶೀಲವಾದ, ಜೀವಂತಿಕೆಯ ಮತ್ತು ಪ್ರಾಯೋಗಿಕವಾದ ವ್ಯಾಖ್ಯಾನವಿಲ್ಲದಿದ್ದರೆ ಸಂವಿಧಾನವು ಹಳೆಯ ಮತ್ತು

ಜೀವವಿಲ್ಲದ ದಾಖಲೆಯಾಗಿಬಿಡುತ್ತದೆ. ಸಂವಿಧಾನಾತ್ಮಕ ನಿಬಂಧನೆಗಳನ್ನು ಅವುಗಳ ನೈಜ ಉದ್ದೇಶ ಮತ್ತು ಅಸ್ತಿತ್ವವು ಸಮಾಜದ ಎಲ್ಲಾ ವಿಭಾಗಗಳಿಗೆ ಪಸರಿಸುವ ರೀತಿಯಲ್ಲಿ ಅರ್ಥೈಸಿಕೊಂಡು, ಬೆಳೆಸಬೇಕು. ಅದು ಸಂವಿಧಾನದ ಇರುವಿಕೆಯ ಅತಿಮುಖ್ಯ ಉದ್ದೇಶ.

98. ಸರ್ವೋಚ್ಚ ನ್ಯಾಯಾಲಯ ಮತ್ತು ಇತರ ಸಂವಿಧಾನಾತ್ಮಕ ನ್ಯಾಯಾಲಯಗಳು ಕಾಲ ಕಾಲಕ್ಕೆ ವೇಗವಾದ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗೆ ಒಳಗಾಗುತ್ತಿರುವ ಸಮಾಜದಲ್ಲಿ, ಸಂವಿಧಾನವನ್ನು ಚಲನಹೀನವಾದ ನ್ಯಾಯಾಂಗೀಯ ವ್ಯಾಖ್ಯಾನಕ್ಕೆ ಒಳಪಡಿಸುವುದು ಸಂವಿಧಾನದ ಚೈತನ್ಯವನ್ನು ಕುಂಠಿತಗೊಳಿಸುತ್ತದೆ ಅಂತೆಯೇ, ಸಾಂವಿಧಾನಿಕ ನ್ಯಾಯಾಲಯಗಳು ಸಂವಿಧಾನವನ್ನು ಒಂದು ಪರಿವರ್ತಕ ದಸ್ತಾವೇಜೆಂದು ಪರಿಗಣಿಸುತ್ತಾ, ಲೈಂಗಿಕತೆ, ಆಯ್ಕೆ ಮತ್ತು ಲೈಂಗಿಕ ನಿಲುವುಗಳನ್ನು ಪರಿಗಣಿಸದೆ ಎಲ್ಲ ವ್ಯಕ್ತಿಗಳ ಹಕ್ಕುಗಳನ್ನು ಕಾಪಾಡುವ ಉದ್ದೇಶದಿಂದ ಜಾಗೃತ ಕಾವಲುಗಾರನಾಗಿ ವರ್ತಿಸುವ ತಮ್ಮ ಬಾಧ್ಯತೆಯನ್ನು ಉತ್ಕಟವಾಗಿ ಪೂರೈಸಿವೆ .

99. ದಕ್ಷಿಣ ಆಫ್ರಿಕಾದ ಸಂವಿಧಾನದ ಪರಿವರ್ತಕ ಪಾತ್ರದ ವಿಚಾರದಲ್ಲಿ ಮಾತನಾಡುತ್ತಾ, ದಕ್ಷಿಣ ಆಫ್ರಿಕಾದ ಸಂವಿಧಾನಾತ್ಮಕ ನ್ಯಾಯಾಲಯ ಹೀಗೆಂದಿತು ಪರಿವರ್ತಕ ಸಾಂವಿಧಾನಿಕತೆಯ ಉದ್ದೇಶವನ್ನು ರಸ್ತೆ ಅಪಘಾತ ನಿಧಿ ಮತ್ತು ಇನ್ನೊಬ್ಬರು v. ಮ್ಡೆಯಿಡೆ42 ಪ್ರಕರಣದಲ್ಲಿ ಸೂಕ್ತವಾಗಿ ವಿವರಿಸಲಾಗಿದೆ :-

> -ನಮ್ಮ ಸಂವಿಧಾನವನ್ನು ಆಗಾಗ್ಗೆ ಪರಿವರ್ತಕ ಎಂದು ವಿವರಿಸಲಾಗಿದೆ. ಮೂಲಭೂತ ಸಾಮಾಜಿಕ-ಆರ್ಥಿಕ ಹಕ್ಕುಗಳ ಸಾಕ್ಷಾತ್ಕಾರವಾಗಿ, ಆ ಮೂಲಕ ತಮ್ಮ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳ ದೆಸೆಯಿಂದ ಹಿಂದುಳಿದಿರುವ ಜನರು ನಮ್ಮ ಸಾಂವಿಧಾನಿಕ ಪ್ರಜಾಪ್ರಭುತ್ವದ ಹೃದಯದಲ್ಲಿ ನೆಲೆಸಿರುವ ಘನತೆ, ಸ್ವಾತಂತ್ರ್ಯ ಮತ್ತು ಸಮಾನತೆಯ ಜೀವನವನ್ನು

[42] 2008 (1) SA 535 (CC)

ಆನಂದಿಸುವ ಸಾಮರ್ಥ್ಯವನ್ನು ಹೊಂದಬೇಕೆನ್ನುವುದು. ಇಂತಹ ಪರಿವರ್ತನೆಯ ಪ್ರಮುಖ ಉದ್ದೇಶ,

100. ಬಟೊ ಸ್ಟಾರ್ ಫಿಶಿಂಗ್ (ಪಿಟಿವೈ) ಲಿಮಿಟೆಡ್ v. ಪರಿಸರ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಸಚಿವ ಮತ್ತು ಇತರರು[43] ಪ್ರಕರಣದಲ್ಲಿ, ದಕ್ಷಿಣದ ಆಫ್ರಿಕಾದ ಸಾಂವಿಧಾನಿಕ ನ್ಯಾಯಾಲಯ ಹೀಗೆ ಅಭಿಪ್ರಾಯ ವ್ಯಕ್ತಪಡಿಸಿತು: -

> - ಸಮಾನತೆಯ ಸಾಧನೆಯು ನಾವು ಸಂವಿಧಾನದಲ್ಲಿ ನಾವೇ ರೂಪಿಸಿಕೊಂಡಿರುವ ಮೂಲಭೂತ ಗುರಿಯಾಗಿದೆ. ನಮ್ಮ ಸಂವಿಧಾನಾತ್ಮಕ ವ್ಯವಸ್ಥೆಯು ನಮ್ಮ ಸಮಾಜವನ್ನು ಅತ್ಯಂತ ಅಸಮಾನತೆ ಸಮಾಜದಿಂದ "ಪುರುಷರು ಮತ್ತು ಮಹಿಳೆಯರು ಮತ್ತು ಎಲ್ಲಾ ಜನಾಂಗದ ಜನರ ನಡುವೆ ಸಮಾನತೆ ಇರುವ" ಸಾಮಾಜವಾಗಿ ಪರಿವರ್ತಿಸಲು ಬದ್ಧವಾಗಿದೆ. ಈ ಮೂಲಭೂತವಾದ ಬಗೆಯಲ್ಲಿ, ನಮ್ಮ ಸಂವಿಧಾನವು ಎಲ್ಲರ ಸಮಾನರಾಗಿದ್ದಾರೆಂದು ಊಹಿಸುವ ಮತ್ತು ಆ ಮೂಲಕ ಅಸ್ತಿತ್ವದಲ್ಲಿರುವ ಅಸಮಾನತೆಗಳನ್ನು ಉಳಿಸಿಕೊಂಡುಬಿಡುವ ಇತರ ಸಂವಿಧಾನಗಳಿಂದ ಭಿನ್ನವಾಗಿದೆ. ವರ್ಣಭೇದ ಕಾನೂನು ಕ್ರಮದಿಂದ ಉಂಟಾದ ದಶಕಗಳ ವ್ಯವಸ್ಥಿತ ಜನಾಂಗೀಯ ತಾರತಮ್ಯವನ್ನು ಸಕಾರಾತ್ಮಕ ಕ್ರಮಗಳನ್ನು ತೆಗೆದುಕೊಳ್ಳದೇ ತೊಡೆದುಹಾಕಲು ಆಗುವುದಿಲ್ಲ ಎಂಬುದನ್ನು ನಮ್ಮ ಸಂವಿಧಾನವು ಗುರುತಿಸುತ್ತದೆ.

---

[43] [2004] ZACC 15

ಅದಕ್ಕಿಂತಲೂ ಹೆಚ್ಚಿನದನ್ನು ನಾವು ಮಾಡಬೇಕಾಗಿದೆ. ಅಂತ್ಯಗೊಳಿಸುವ ಬದ್ಧತೆಯಿಲ್ಲದಿದ್ದರೆ ತಾರತಮ್ಯದ ಪರಿಣಾಮಗಳು ಅನಿರ್ದಿಷ್ಟ ಅವಧಿಯವರೆಗೆ ಮುಂದುವರಿಯಬಹುದು.

101. ಡೇವಿಸ್44 ಈ ಕೆಳಗಿನಂತೆ ಪರಿವರ್ತನೆಯನ್ನು ಅರ್ಥಮಾಡಿಕೊಳ್ಳುತ್ತಾನೆ: -

> "ಸಂಕೀರ್ಣ ವಸ್ತು ಮತ್ತು ಸೈದ್ಧಾಂತಿಕ ಪರಿಸರದ ಸತತವಾದ ಮೌಲ್ಯಮಾಪನ ಮತ್ತು ಮಾರ್ಪಾಡುಗಳನ್ನು ಆಧಾರಿಸಿರುವ ಪರಿವರ್ತನೆಯನ್ನು ಬದಲಾವಣೆಯ ವೈಜ್ಞಾನಿಕ ಸಿದ್ಧಾಂತದ ಮಟ್ಟಕ್ಕೆ ಇಳಿಸಲು ಆಗುವುದಿಲ್ಲ, ವಿಕಾಸವಾದ ಅಥವಾ ವಿಕಿರಣಶೀಲ ವಸ್ತುಗಳ ಅರೇ-ಜೀವನದ (halflife) ಹಾಗೆ... ಗಂಭೀರ ಆಲೋಚನೆ ಅಭಿಪ್ರಾಯದ ವೈವಿಧ್ಯತೆಯ ವಾತಾವರಣದಲ್ಲಿ ಪ್ರಾಯೋಗಿಕ ಬದಲಾವಣೆ ಸಂಭವಿಸುತ್ತದೆ ಮತ್ತು ನನ್ನ ದೃಷ್ಟಿಯಲ್ಲಿ ಸಿದ್ಧಾಂತವನ್ನು ಪ್ರಚೋದಿಸುವ ಸಲುವಾಗಿ ಇದು ಸಂಪೂರ್ಣವಾಗಿ ಅವಶ್ಯಕವಾಗಿದೆ"

102. 'ಸಂವಿಧಾನಾತ್ಮಕ ಪರಿವರ್ತನೆಯನ್ನು' ಎಜೆ ವ್ಯಾನ್ ಡೆರ್ ವಾಲ್ಟ್45 ರೂಪಕಾತ್ಮಕವಾಗಿ ನರ್ತನಕ್ಕೆ ಹೋಲಿಸುವ ಮೂಲಕ, ಸಾಂವಿಧಾನಿಕ ಪರಿವರ್ತನೆಯ ಕಲೆಯು ನಿರಂತರವಾಗಿ ಪ್ರಗತಿಶೀಲವಾಗಿದ್ದು, ಆದರಡಿಯಲ್ಲಿ ಯಾರು ಕೂಡ ಪರ್ಯಾಯಯಗಳನ್ನು ಕಲ್ಪಿಸ್ಕೊಳ್ಳುವ ಧೈರ್ಯಮಾಡುವುದನ್ನು ನಿಲ್ಲಿಸುವುದಿಲ್ಲ ಮತ್ತು ಪ್ರತಿಯೊಬ್ಬ ವ್ಯಕ್ತಿಯ

[44] Asking the Law Question: The Dissolution of Legal Theory 205 (2002), Margaret Davies

[45] Van der Walt, Dancing with codes - Protecting, developing and deconstructing property rights in a constitutional state, 118 (2) J. S. APR. L. 258 (2001)

ಹಕ್ಕುಗಳಿಗೆ ಸೂಕ್ತ ಮಾನ್ಯತೆ ದೊರೆಯುವ ಸಮಾಜವು ವಿಭಿನ್ನ ಮತ್ತು ಉತ್ತಮ ಸ್ಥಳವಾಗಿರುತ್ತದೇ ಎಂದು ಕಲ್ಪಿಸಿಕೊಳ್ಳುವುದನ್ನು ನಿಲ್ಲಿಸುವುದಿಲ್ಲ ಎಂದು ವಿವರಿಸಿದ್ದಾನೆ: -

> "ಆದಾಗ್ಯೂ, ನೃತ್ಯದ ಹೆಚ್ಚು ಸಂಕೀರ್ಣವಾದ ಚಿತ್ರಣದ ಸಲುವಾಗಿ ನಾವು ನಿಂತಿರುವ ಭಂಗಿಯ ಸ್ಥಿರ ಚಿತ್ರಣವನ್ನು ಪ್ರತಿಪಾದಿಸುವಾಗ, ರೇಖಾತ್ಮಕ ಚಲನೆ ಅಥವಾ ಪ್ರಗತಿಯಾಗಿ ಪರಿವರ್ತನೆ ಹೊಂದುವುದನ್ನು ನೋಡುವ ಬಯಕೆಯನ್ನು ಹತ್ತಿಕ್ಕಿಕೊಳ್ಳಬೇಕಾಗುತ್ತದೆ- ನಿರಂಕುಶಾಧಿಕಾರದಿಂದ ಸಮರ್ಥನೆಗೆ, ಒಂದು ನೃತ್ಯ ಸಂಕೇತದಿಂದ ಮತ್ತೊಂದಕ್ಕೆ, ಅಥವಾ ವೋಕ್ಸ್ಪೆಲ (ನೃತ್ಯದ ಜನಪದೀಯ ಶೈಲಿ) ನ್ಯಾಯಶಾಸ್ತ್ರದಿಂದ ಟೊಯೊಟೊಯಿ (ಆಧುನಿಕ ನೃತ್ಯದ ಪ್ರಾಕಾರ) ನ್ಯಾಯಶಾಸ್ತ್ರಕ್ಕೆ.. ಸದರಿ ಪರಿವರ್ತನೆಯನ್ನು ಚರ್ಚಿಸುವಾಗ ನಾವು ನೃತ್ಯದಂತಹ ಹೆಚ್ಚು ಸಂಕೀರ್ಣವಾದ ರೂಪಕಾತ್ಮಕ ಸಂಕೇತಗಳನ್ನು ಬಳಸುವುದಷ್ಟೆ ಅಲ್ಲದೆ, ನೃತ್ಯ ಮಾಡುವುದರ ಸಂಕೇತಗಳನ್ನು ಸಹ ಒಡೆದುನೋಡಬೇಕು; ನಾವು ಯಾವ ಭಾಷೆಯ ಮೂಲಕ ಸಂವಿಧಾನಾತ್ಮಕತೆಯ ಬಗೆಗೆ, ಹಕ್ಕುಗಳ ಬಗೆಗೆ ಆಲೋಚಿಸುತ್ತಿದ್ದೇವೆ, ಮಾತನಾಡುತ್ತಿದ್ದೇವೆ ಮತ್ತು ಚರ್ಚೆ ಮಾಡುತ್ತಿದ್ದೇವೆ ಎಂಬುದನ್ನು ಯೋಚಿಸಿ, ಭಾಷೆಯು ರೂಪಿಸುವ ಮತ್ತು ರೂಪಿಸುತ್ತಿರುವ ಸಂಕೇತಗಳ ಮುಕ್ತಗೊಳಿಸಬಲ್ಲ ಮತ್ತು ಹಿಡಿದಿಡಬಲ್ಲ ಸಾಮರ್ಥ್ಯವನ್ನು ಗುರುತಿಸಬೇಕು

103. ಮತ್ತೊಮ್ಮೆ, ದಕ್ಷಿಣ ಆಫ್ರಿಕಾ ಗಣರಾಜ್ಯದ ಅಧ್ಯಕ್ಷ v. ಹ್ಯೂಗೋ46 ಪ್ರಕರಣದಲ್ಲಿ ದಕ್ಷಿಣ ಆಫ್ರಿಕಾದ ಸರ್ವೋಚ್ಚ ನ್ಯಾಯಾಲಯವು ಮಧ್ಯಂತರ ಸಂವಿಧಾನದಲ್ಲಿರುವ ಅನ್ಯಾಯದ ತಾರತಮ್ಯದ ಮೇಲಿನ ನಿಷೇಧವು ಹಿಂದುಳಿದ ಗುಂಪುಗಳ ಸದಸ್ಯರ ವಿರುದ್ಧ ನಡೆಯುವ ತಾರತಮ್ಯವನ್ನು ತಪ್ಪಿಸುವುದಷ್ಟೇ ಅಲ್ಲದೆ, ನ್ಯಾಯಸಮ್ಮತವಲ್ಲದ ತಾರತಮ್ಯವನ್ನು ನಿರ್ಬಂಧಿಸುವ ಕ್ರಮದ ಹಿಂದೆ ನಮ್ಮ ಹೊಸ ಸಾಂವಿಧಾನಿಕ ಮತ್ತು ಪ್ರಜಾತಾಂತ್ರಿಕ ವ್ಯವಸ್ಥೆಯು ಎಲ್ಲಾ ಮನುಷ್ಯರಿಗೂ, ಅವರು ಯಾವ ಗುಂಪಿಗೆ ಸೇರಿದ್ದಾರೆ ಎಂಬುದನ್ನು ಪರಿಗಣಿಸದೆ, ಸಮಾನ ಘನತೆ ಮತ್ತು ಮರ್ಯಾದೆಗಳನ್ನು ಒದಗಿಸುವ ಸಮಾಜವನ್ನು ಸ್ಥಾಪಿಸುವ ಉದ್ದೇಶ ಹೊಂದಿದೆ ಎಂಬ ಗುರುತಿಸುವಿಕೆ ಅಡಗಿದೆ.

104. ಸಮಾನತೆಯು ವೈಯಕ್ತಿಕ ಘನತೆಯ ಗುರುತಿಸುವಿಕೆಯನ್ನಷ್ಟೆ ಅಲ್ಲದೆ, ತನ್ನ ವಲಯದಲ್ಲಿ ಮಾನವನ ಸಂಭವನೀಯತೆ ಮತ್ತು ಪ್ರತಿ ವ್ಯಕ್ತಿಯ ಸಾಮಾಜಿಕ, ಆರ್ಥಿಕ ಮತ್ತು ಕಾನೂನು ಹಿತಾಸಕ್ತಿಗಳನ್ನು ಅಭಿವೃದ್ಧಿಪಡಿಸಲು ಸಮಾನವಾದ ಅವಕಾಶವನ್ನು ಖಾತ್ರಿಪಡಿಸುವುದನ್ನು ಒಳಗೊಳ್ಳುತ್ತದೆ ಮತ್ತು ಪರಿವರ್ತನೆಯ ಸಾಂವಿಧಾನಿಕತೆಯ ಪ್ರಕ್ರಿಯೆಯು ಈ ಉದ್ದೇಶಕ್ಕಾಗಿ ಕಟಿಬದ್ಧವಾಗಿದೆ. ಇದನ್ನು ಆಲ್ಬರ್ಟಿನ್ & ಗೋಲ್ಡ್ ಬ್ಲ್ಯಾಟ್47 ಗಮನಿಸಿದ್ದಾರೆ: -

> "ಈ ಪರಿವರ್ತನೆಯ ಯೋಜನೆಯೊಳಗಿನ ಸಮಾನತೆಯನ್ನು ಸಾಧಿಸುವ ಸವಾಲು, ಜನಾಂಗ, ಲಿಂಗ, ವರ್ಗ ಮತ್ತು ಇತರ ಬಗೆಯ ಅಸಮಾನತೆಯ ವ್ಯವಸ್ಥಿತ ಸ್ವರೂಪಗಳಿಂದ ಮುಕ್ತಿಪಡೆಯುವುದನ್ನೂ ಒಳಗೊಂಡಿದೆ. ಇದು ಜನರು ತಮ್ಮ ಸಂಪೂರ್ಣ ಮಾನವ ಸಾಮರ್ಥ್ಯವನ್ನು ಸಕಾರಾತ್ಮಕ ಸಾಮಾಜಿಕ ಸಂಬಂಧಗಳಲ್ಲಿ ಅರಿತುಕೊಳ್ಳುವಂತೆ ಮಾಡುವುದನ್ನು ಒಳಗೊಂಡಿದೆ "

105. ತನಿಖಾ ನಿರ್ದೇಶನಾಲಯ: ಗಂಭೀರ ಆರ್ಥಿಕ ಅಪರಾಧಗಳು ಮತ್ತು ಇತರರು v. ಹುಂಡೈ ಮೋಟಾರ್ ಡಿಸ್ಟ್ರಿಬ್ಯೂಟರ್ಸ್ (ಪಿಟಿವೈ) ಲಿಮಿಟೆಡ್ ಮತ್ತು ಇತರರು: ಹುಂಡೈ ಮೋಟಾರು ವಿತರಕರು (ಪಿಟಿ) ಲಿಮಿಟೆಡ್ ಮತ್ತು

[46] (1997) 6 B.C.L.R. 708 (CC)

[47] Albertyn & Goldblatt, Facing the challenge of transformation: Difficulties in the development of an indigenous jurisprudence of equality, 14 S. AFR. J. HUM. RTS. 248 (1998)

ಇತರರು v. ಸ್ಮಿಟ್ ಎಮ್.ಓ ಮತ್ತು ಇತರರು48 ಪ್ರಕರಣದಲ್ಲಿ, ದಕ್ಷಿಣ ಆಫ್ರಿಕಾದ ಸಾಂವಿಧಾನಿಕ ನ್ಯಾಯಾಲಯವು ಹೀಗೆ ಗಮನಿಸಿದೆ: -

> "ಸಂವಿಧಾನವು ವಿಭಜನೆ, ಅನ್ಯಾಯ ಮತ್ತು ಪ್ರಜಾತಾಂತ್ರಿಕ ಪ್ರಕ್ರಿಯೆಗಳಿಂದ ಹೊರಗಿಡುವಿಕೆಯನ್ನು ಆಧರಿಸಿದ್ದ ಸಮಾಜವೊಂದು ಎಲ್ಲಾ ನಾಗರಿಕರ ಘನತೆಯನ್ನು ಗೌರವಿಸುವ ಮತ್ತು ಆಡಳಿತ ಪ್ರಕ್ರಿಯೆಯಲ್ಲಿ ಎಲ್ಲರನ್ನೂ ಒಳಗೊಳ್ಳುವ ಸಮಾಜವಾಗಿ ಪರಿವರ್ತನೆಯಾದುದನ್ನು ಒಳಗೊಂಡಿರುವ ಇತಿಹಾಸದಲ್ಲಿ ನೆಲೆಸಿದೆ. ಸಂವಿಧಾನವನ್ನು ಅರ್ಥೈಸಿಕೊಳ್ಳುವ ಪ್ರಕ್ರಿಯೆಯು ನಾವು ಈಗಿರುವ ಸನ್ನಿವೇಶ ಮತ್ತು ಪ್ರಜಾತಾಂತ್ರಿಕ ಮೌಲ್ಯಗಳು, ಸಾಮಾಜಿಕ ನ್ಯಾಯ ಮತ್ತು ಮೂಲಭೂತ ಮಾನವ ಹಕ್ಕುಗಳನ್ನು ಆಧರಿಸಿದ ಸಮಾಜವನ್ನು ನಿರ್ಮಿಸುವ ಸಂವಿಧಾನದ ಗುರಿಯನ್ನು ಕೂಡ ಗುರುತಿಸಬೇಕು. ಬದಲಾವಣೆ ಮತ್ತು ಪರಿವರ್ತನೆಯ ಈ ಸ್ಫೂರ್ತಿಯು ಸಾಂವಿಧಾನಿಕ ಚಟುವಟಿಕೆಯನ್ನು ಒಟ್ಟಾರೆಯಾಗಿ ನಿರೂಪಿಸುತ್ತದೆ.
>
> ... ಸಂವಿಧಾನವು ನ್ಯಾಯಾಂಗದ ಅಧಿಕಾರಿಗಳು ಮೂಲಭೂತ ಮೌಲ್ಯಗಳಿಗೆ ಪರಿಣಾಮ ಬೀರುವ ರೀತಿಯಲ್ಲಿ ಶಾಸನವನ್ನು ಓದಬೇಕೆಂದು ಬಯಸುತ್ತದೆ. ಇದಕ್ಕೆ ತಕ್ಕಂತೆ, ಶಾಸನದ ಸಂವಿಧಾನಬದ್ಧತೆಯ ವಿಚಾರ

[48] 2001 (1) SA 545 (CC)

> ಬಂದಾಗ, ಕ್ರಿಯೆಯೊಂದರ ವಸ್ತು ಮತ್ತು ಉದ್ದೇಶಗಳನ್ನು ಪರಿಶೀಲಿಸಿ ಶಾಸನದ ನಿಬಂಧನೆಗಳನ್ನು ಸಾಧ್ಯವಾದಷ್ಟು ಸಂವಿಧಾನಕ್ಕೆ ಅನುಗುಣವಾಗಿ ಓದುವುದು ಅವರ ಕರ್ತವ್ಯ"

106. ಸಮಾಜ ಈಗ ಬದಲಾಗಿದೆ, ಭಾರತೀಯ ದಂಡ ಸಂಹಿತೆಯನ್ನು ಜಾರಿಗೆ ತಂದ 1860 ಇಸವಿಯ ಹೋಲಿಕೆಯಲ್ಲಷ್ಟೇ ಅಲ್ಲದೆ, ಸಮಾಜವು ಸತತ ಪ್ರಗತಿಪರ ಬದಲಾವಣೆಗೂ ಒಳಗಾಗಿದೆ. ಅನೇಕ ಕ್ಷೇತ್ರಗಳಲ್ಲಿ ಲೈಂಗಿಕ ಅಲ್ಪಸಂಖ್ಯಾತರನ್ನು ಸ್ವೀಕರಿಸಲಾಗಿದೆ. ನಾಲ್ಸಾ ತೀರ್ಪಿನ ನಂತರ ಅವರಿಗೆ ಸ್ಥಾನವನ್ನು ನೀಡಲಾಗಿದೆ, ಆದರೆ ಐ.ಪಿ.ಸಿ.ಯ 377ನೇ ಪರಿಚ್ಛೇದದಡಿಯಲ್ಲಿ ಶಿಕ್ಷಾರ್ಹವಾಗಿರುವ ಅಪರಾಧವು, ಸಲ್ಲಿಕೆಗಳ ಪ್ರಕಾರ, ಪ್ರತಿಕೂಲ ಪರಿಣಾಮವನ್ನು ಉಂಟುಮಾಡುತ್ತದೆ. ಲೈಂಗಿಕತೆಯೊಂದಿಗೆ ಲಗತ್ತಿಸಬೇಕಾದ ಸ್ವಾತಂತ್ರ್ಯವು ಈಗಲೂ ನೇಪಥ್ಯದಲ್ಲಿ ಉಳಿದಿದ್ದು, ಮುಂದೆಬರಲು ಅದಕ್ಕೆ ಧೈರ್ಯ ಸಾಲುತ್ತಿಲ್ಲ. ಭಯದಿಂದ ಉಂಟಾಗುವ ನಿಶ್ಚಲತೆಯು ತನ್ನ ಸ್ವಂತ ಲೈಂಗಿಕ ನಿಲುವನ್ನು ವ್ಯಕ್ತಪಡಿಸುವ ಬಯಕೆಯನ್ನು ನಾಶಮಾಡುತ್ತದೆ. ಇದರ ಪರಿಣಾಮವಾಗಿ ಮಾಂಸ ಮತ್ತು ಮೂಳೆಗಳುಳ್ಳ ದೇಹಕ್ಕೆ ಪಂಜರದಲ್ಲಿರುವ ಭಾವನೆಯುಂಟಾಗುತ್ತದೆ ಮತ್ತು ಭಯದ ಭಾವವು ಕ್ರಮೇಣ ಜೀವವಿಲ್ಲದ ಅಸ್ಥಿಪಂಜರವಾಗಿ ಮಾರ್ಪಡುತ್ತದೆ.

107. ಸಂಗಾತಿಯನ್ನು ಆಯ್ಕೆಮಾಡುವ ಸ್ವಾತಂತ್ರ್ಯದ ಪ್ರಶ್ನೆಯನ್ನು ಈ ನ್ಯಾಯಾಲಯದ ಇತ್ತೀಚಿನ ತೀರ್ಪಿನ ಸರಣಿಯಲ್ಲಿ ಉತ್ತರಿಸಲಾಗಿದೆ, ಉದಾಹರಣೆಗೆ ಶಫೀನ್ ಜಹಾನ್ (ಮೇಲ್ಕಂಡ) ಪ್ರಕರಣದಲ್ಲಿ, ನ್ಯಾಯಾಲಯ ವಯಸ್ಸಿಗೆ ಬಂದಿರುವ ಮತ್ತು ತಾನಾಗಿಯೇ ಯೋಚಿಸುವ ಸಾಮರ್ಥ್ಯವಿರುವ ವ್ಯಕ್ತಿಗೆ ತನ್ನ ಜೀವನ ಸಂಗಾತಿಯನ್ನು ಆಯ್ಕೆಮಾಡಿಕೊಳ್ಳುವ ಮಾಡುವ ಹಕ್ಕು ಇರುತ್ತದೆ ಎಂದು ನಿರ್ಧರಿಸಿತ್ತು. ಈ ನ್ಯಾಯಾಲಯ ಗಮನಿಸಿದ ಕೆಲ ವಿಚಾರಗಳು ಕೆಳಗಿನಂತಿವೆ:-

> ಇಲ್ಲಿ, ಕಾನೂನುಬದ್ಧವಾದ ಆಯ್ಕೆಯ ಅಭಿವ್ಯಕ್ತಿಯು ವೈಯಕ್ತಿಕ ಅಸ್ಮಿತೆಯ ಸ್ವೀಕಾರವೆಂದು ಹೇಳುವುದು ಮುಖ್ಯವಾಗುತ್ತದೆ. ಆ ಅಭಿವ್ಯಕ್ತಿಯ ಮೊಟಕುಗೊಳಿಸುವಿಕೆ ಮತ್ತು ಸಮಾಜಿಕ ವಿಧೇಯತೆಯ ತಾತ್ವಿಕ

> ರಚನಾತ್ಮಕತೆಯಿಂದ ಉದ್ಭವಿಸುವ ಕಾಯ್ದೆಯ ಕ್ರಮವು ವ್ಯಕ್ತಿಯ ವೈಯಕ್ತಿಕ ಅಸ್ತಿತ್ವವನ್ನು ನಾಶಗೊಳಿಸುತ್ತದೆ. ಸಾಮಾಜಿಕ ಮೌಲ್ಯಗಳು ಮತ್ತು ನೀತಿಗಳು ತಮ್ಮ ಜಾಗವನ್ನು ಪಡೆದಿವೆ ಆದರೆ ಅವು ಸಾಂವಿಧಾನಿಕವಾಗಿ ಖಾತರಿಯಾಗಿರುವ ಸ್ವಾತಂತ್ರ್ಯಕ್ಕಿಂತ ಹೆಚ್ಚಲ್ಲ. ಸ್ವಾತಂತ್ರ್ಯವು ಸಾಂವಿಧಾನಿಕ ಮತ್ತು ಮಾನವ ಹಕ್ಕಾಗಿದೆ. ನಂಬಿಕೆಯ ಆಯ್ಕೆಯನ್ನು ಆಧರಿಸಿರುವ ಸ್ವಾತಂತ್ರ್ಯದ ನಿರಾಕರಣೆಯು ಒಪ್ಪತಕ್ಕದ್ದಲ್ಲ.

108. ಇತ್ತೀಚೆಗೆ, ಶಕ್ತಿ ವಾಹಿನಿ (ಮೇಲ್ಕಂಡ) ಪ್ರಕರಣದಲ್ಲಿ, ನ್ಯಾಯಾಲಯವು ಸಂಗಾತಿಯನ್ನು ಆಯ್ಕೆ ಮಾಡುವ ಹಕ್ಕು ವೈಯಕ್ತಿಕ ಸ್ವಾತಂತ್ರ್ಯ ಎಂದು ನುಡಿದು, ಮರ್ಯಾದೆಗೇಡು ಹತ್ಯೆಗಳ ಹಾನಿಯನ್ನು ಕಡಿತಗೊಳಿಸಲು, ಅವನ್ನು ತಡೆಗಟ್ಟುವ, ಪರಿಹರಿಸುವ ಮತ್ತು ದಂಡಿಸುವ ಕ್ರಮಗಳನ್ನು ಜಾರಿಗೊಳಿಸಿತು. ನ್ಯಾಯಾಲಯವು ಈ ಕೆಳಗಿನಂತೆ ಗಮನಿಸಿತು: -

> -ಆಯ್ಕೆ ಮಾಡುವ ಸಾಮರ್ಥ್ಯವನ್ನು ವರ್ಗೀಯ ಗೌರವದ ಹೆಸರಿನಲ್ಲಿ ತುಳಿದುಹಾಕಿದಾಗ, ಮತ್ತು ವ್ಯಕ್ತಿಯ ಭೌತಿಕ ಚೌಕಟ್ಟನ್ನು ಸಂಪೂರ್ಣ ಅವಮರ್ಯಾದೆಯಿಂದ ನಡೆಸಿಕೊಂಡಾಗ, ಅದರ ಪರಿಕೂಲ ಪರಿಣಾಮವು, ಸಮಾಜದ ಮಿದುಳು ಮತ್ತು ಮೂಳೆಗಳ ಮೇಲೆ ಪ್ರಭಾವ ಬೀರುತ್ತದೆ.

109. ಸ್ವೀಕಾರಾರ್ಹ ಲೈಂಗಿಕ ಚಟುವಟಿಕೆಯಲ್ಲಿ ತೊಡಗಿರುವ ಇಬ್ಬರು ವಯಸ್ಕರ ನಡುವಿನ ಯಾವುದಕ್ಕೆ ಅನುಮತಿ ನೀಡಬಹುದು ಎಂಬುದು ಒಂದೇ ಲಿಂಗ ಇಬ್ಬರು ವ್ಯಕ್ತಿಗಳ ವಿಚಾರದಲ್ಲಿ, ಸಮಲೈಂಗಿಕ ಸ್ತ್ರೀಯರಿರಲಿ ಪುರುಷರಿರಲಿ, ಭಿನ್ನವಾಗಿರುತ್ತದೆ, ಮತ್ತು ಈ ವ್ಯತ್ಯಾಸ ಸಾಮಾಜಿಕ ಪ್ರಮಾಣೀಕರಣವನ್ನು ಆಧರಿಸಿರುತ್ತದೆ ಎಂಬ ವಾದವನ್ನು

ಕೆಲವೊಮ್ಮೆ ಮುಂದಿಡಲಾಗುತ್ತದೆ. ಅಂತಹ ವಾದವು, ನೈಸರ್ಗಿಕವಾಗಿ ಸ್ವಾಭಾವಿಕವಾಗಿರುವ ವೈಯಕ್ತಿಕ ನಿಲುವನ್ನು ನಿರ್ಲಕ್ಷಿಸುತ್ತದೆ, ಮತ್ತು ವ್ಯಕ್ತಿಯಿಂದ ಅವನ/ಅವಳ ಗುರುತು ಮತ್ತು ಅವನ/ಅವಳ ಆಸ್ತಿತ್ವದ ಅವಿಭಾಜ್ಯ ಅಂಗವಾಗಿರುವ ಅಂತರ್ಗತ ಘನತೆ ಮತ್ತು ಆಯ್ಕೆಯನ್ನು ಕಸಿದುಕೊಳ್ಳುತ್ತದೆ.

110. ಪರಿವರ್ತಕ ಸಾಂವಿಧಾನಿಕತೆಯ ತತ್ವವು ಸರ್ಕಾರದ ನ್ಯಾಯಾಂಗ ಶಾಖೆಯ ಮೇಲೆ ಸಂವಿಧಾನದ ಪ್ರಾಬಲ್ಯವನ್ನು ಖಚಿತಪಡಿಸಿಕೊಳ್ಳುವ ಮತ್ತು ಅದನ್ನು ಎತ್ತಿಹಿಡಿಯುವ, ಮತ್ತು ಅದೇ ವೇಳೆ ಸಂವಿಧಾನ ಮತ್ತು ಅದರೊಂದಿಗೆ ಹೊಂದಾಣಿಕೆಯಾಗುವ ಕಾನೂನಿನ ನಿಬಂಧನೆಗಳನ್ನು ವ್ಯಾಖ್ಯಾನಿಸಿ ಜಾರಿಗೊಳಿಸುವ ಮೂಲಕ ಪರಿವರ್ತನೆಯ ಭಾವವನ್ನು ಸಮಾಜದಲ್ಲಿ ಸತತವಾಗಿ ಮತ್ತು ಕೊನೆಯಿಲ್ಲದಂತೆ ಪ್ರತಿಪಾದಿಸುವ ಕರ್ತವ್ಯವನ್ನೂ ಸಹ ಹೊರಿಸುತ್ತದೆ. ದೇಶ ಮತ್ತು ಅದರ ಸಂಸ್ಥೆಗಳನ್ನು, ಪ್ರಜಾತಾಂತ್ರಿಕ ಸಮಾನತಾವಾದಿ ನಿರ್ದೇಶನಗಳ ಮೂಲಕ ಮೂಲಭೂತ ಹಕ್ಕುಗಳು ಮತ್ತು ಇತರ ಸ್ವಾತಂತ್ರ್ಯಗಳಿಗೆ ಹೆಚ್ಚಿನ ಭದ್ರತೆಯಿರುವೆಡೆಗೆ ಕರೆದೊಯ್ಯುವುದು ಇದರ ಉದ್ದೇಶವಾಗಿದೆ. ಈ ಮೂಲಕ ಪರಿವರ್ತಕ ಸಾಂವಿಧಾನಿಕತೆಯು ಸಾಂವಿಧಾನಿಕತೆಯ ತತ್ವಜ್ಞಾನ ಮತ್ತು ನೀತಿಗಳನ್ನು ಹೀರಿಕೊಳ್ಳುವ ಹಾಗೂ ಮಾನವಾಧಿಕಾರಗಳೆಡೆಗೆ ಹೆಚ್ಚಿನ ಗೌರವವನ್ನು ಪೋಷಿಸುವ ಆದರ್ಶ ಮಾದರಿಯ ಸ್ಥಾನಮಾನ ಪಡೆಯುತ್ತದೆ. ಸಂವಿಧಾನವು ಕೇವಲ ಒಂದು ಕಾಗದವಲ್ಲ, ಅದು ತನ್ನಲ್ಲಿ ಅಡಕಗೊಳಿಸಲಾಗಿರುವ ಆದರ್ಶಗಳು ಮತ್ತು ಮೌಲ್ಯಗಳಿಂದ ಬಲಪಡೆಯುತ್ತದೆ ಎಂಬುದನ್ನು ನೆನಪಿನಲ್ಲಿಡಬೇಕು; ಆದಾಗ್ಯೂ, ನಾವು ಸಾಂವಿಧಾನಿಕತೆಯನ್ನು ಸರ್ವೋಚ್ಛ ನಂಬಿಕೆ ಮತ್ತು ಧರ್ಮವೆಂದು ಅನುಸರಿಸಿದಾಗ ಮತ್ತು ವ್ಯಕ್ತಿಯ ಮೂಲಭೂತ ಹಕ್ಕುಗಳನ್ನು ರಕ್ಷಿಸುವ ಸಾಂವಿಧಾನಿಕ ಸಂಸ್ಕೃತಿಯನ್ನು ಅಭಿವೃದ್ಧಿಪಡಿಸಿದಾಗ ಮಾತ್ರ ನಾವು ನಮ್ಮ ಸಹೃದಯೀ ಸಂವಿಧಾನದ ಮೌಲ್ಯಗಳನ್ನು ಉಳಿಸಲು ಮತ್ತು ಬಲಪಡಿಸಾಲು ಸಾಧ್ಯ.

## I. ಸಾಂವಿಧಾನಿಕ ನೈತಿಕತೆ ಮತ್ತು 377ನೇ ಪರಿಚ್ಛೇದ ಐ.ಪಿ.ಸಿ.

111. ಸಾಂವಿಧಾನಿಕ ನೈತಿಕತೆಯ ಪರಿಕಲ್ಪನೆಯು ಸಂವಿಧಾನಾತ್ಮಕವಾದ ಮೂಲ ತತ್ವಗಳ ಆಚರಣೆಗಷ್ಟೆ ಸೀಮಿತವಾಗಿಲ್ಲ, ಏಕೆಂದರೆ ಸಾಂವಿಧಾನಿಕ ನೈತಿಕತೆಯ ಪರಿಮಾಣ ಮತ್ತು ವ್ಯಾಪ್ತಿಯು ಸಂವಿಧಾನದಲ್ಲಿರುವ ನಿಬಂಧನೆಗಳು ಮತ್ತು ಅಕ್ಷರಶಃ ಪಠ್ಯಕ್ಕೆ ಮಾತ್ರ ಸೀಮಿತವಾಗಿಲ್ಲ, ಬದಲಿಗೆ ಅದು ತನ್ನೊಳಗೆ, ಬಹುತ್ವದ ಮತ್ತು ಒಳಗೊಳ್ಳುವ ಸಮಾಜವನ್ನು ಅಳವಡಿಸಿಕೊಳ್ಳುವುದೇ ಮೊದಲಾದ ವಿಸ್ತಾರ ಗಾತ್ರದ ಸದ್ಗುಣಗಳನ್ನು ಹೊಂದಿದ್ದು, ಅದೇ ವೇಳೆ

ಸಾಂವಿಧಾನಿಕತೆಯ ಇತರ ತತ್ವಗಳಿಗೂ ಬದ್ಧವಾಗಿದೆ. ಸಾಂವಿಧಾನಿಕ ನೈತಿಕತೆಯನ್ನು ಮೈಗೂಡಿಸಿಕೊಂಡಿರುವ ಪರಿಣಾಮವಾಗಿ ಸಾಂವಿಧಾನಿಕತೆಯ ಮೌಲ್ಯಗಳು ಸರ್ಕಾರದ ವ್ಯವಸ್ಥೆಯ ಮೂಲಕ ಹೀರಿಕೊಳ್ಳಲ್ಪಟ್ಟು, ದೇಶದ ಪ್ರತಿಯೊಬ್ಬ ನಾಗರಿಕನ ಸುಧಾರಣೆ ದಾರಿ ಮಾಡಿಕೊಡುತ್ತವೆ.

112. ಸಂವಿಧಾನ ಸಭೆಯ ಚರ್ಚೆಯೊಂದರಲ್ಲಿ, ಡಾ. ಅಂಬೇಡ್ಕರ್ ಅವರು ಗ್ರೀಕ್ ಇತಿಹಾಸಕಾರ ಜಾರ್ಜ್ ಗ್ರೋಟ್ ಅನ್ನು ಉಲ್ಲೇಖಿಸುತ್ತ ಸಂವಿಧಾನಾತ್ಮಕ ನೈತಿಕತೆಯ ಪರಿಕಲ್ಪನೆಯನ್ನು ಹೀಗೆ ವಿವರಿಸಿದರು: -

> ಗ್ರೋಟ್ ಪ್ರಕಾರ "ಸಾಂವಿಧಾನಿಕ ನೈತಿಕತೆ ಎಂಬುದು.. ಸಂವಿಧಾನದ ಸ್ವರೂಪಗಳೆಡೆಗೆ ಅತ್ಯುನ್ನತ ಗೌರವ, ಅಧಿಕಾರದೆಡೆಗಿನ ವಿಧೇಯತೆಯನ್ನು ಜಾರಿಗೆ ತರುವುದು ಮತ್ತು ಈ ಸ್ವರೂಪಗಳಡಿಯಲ್ಲಿ ಮತ್ತು ಅವುಗಳಿಗೆ ಒಳಪಟ್ಟು ಕಾರ್ಯನಿರ್ವಹಿಸುವುದು, ಹಾಗಿದ್ದೂ ಮುಕ್ತ ಮಾತಿನ ಅಭ್ಯಾಸವನ್ನು ಬೆಳೆಸಿಕೊಳ್ಳುವುದನ್ನು ಸೂಚಿಸುತ್ತದೆ. ಅಲ್ಲಿ ಕ್ರಿಯೆಗಳು ಕಾನೂನು ನಿಯಂತ್ರಣಕ್ಕೆ ಮಾತ್ರ ಒಳಗಾಗುತ್ತವೆ, ಮತ್ತು ಅಲ್ಲಿ ಆದೇ ಅಧಿಕಾರಿಗಳನ್ನು ಅವರ ಎಲ್ಲಾ ಸಾರ್ವಜನಿಕ ಚಟುವಟಿಕೆಗಳ ವಿಚಾರದಲ್ಲಿ ತಡೆಯಿಲ್ಲದ ಖಂಡಿಸುವ ಅವಕಾಶವಿರುತ್ತದೆ, ಮತ್ತು ಪಕ್ಷಗಳ ಸ್ಪರ್ಧೆಯ ಕಹಿಯ ನಡುವೆಯೂ, ಪ್ರತಿ ಪ್ರಜೆಯ ಹೃದಯದಲ್ಲಿ, ಸಂವಿಧಾನದ ಸ್ವರೂಪಗಳು ತನ್ನ ಕಣ್ಣುಗಳಿಗೆ ಅದೆಷ್ಟು ಪವಿತ್ರವಾಗಿ ಕಾಣುತ್ತವೆಯೋ, ತನ್ನ ಎದುರಾಳಿಯ ಕಣ್ಣಿಗೂ ಅಷ್ಟೇ

ಪವಿತ್ರವಾಗಿ ಕಾಣುತ್ತವೆ ಎಂಬ ಪರಿಪೂರ್ಣ ವಿಶ್ವಾಸವಿರುತ್ತದೆ[49]

113. ನಮ್ಮ ಸಂವಿಧಾನವನ್ನು ನಮ್ಮ ದೇಶದ ನಾಗರಿಕರಿಗೆ ಬೆಳವಣಿಗೆ ಮತ್ತು ಅಭಿವೃದ್ಧಿಯ ಸ್ಫೂರ್ತಿ ನೀಡಲು ಕಸಿದುಕೊಳ್ಳಲಾಗದ ಹಕ್ಕುಗಳನ್ನು ಸುನಿಶ್ಚಿತತಗೊಳಿಸಲು ಮತ್ತು ಅದೇ ವೇಳೆ ಸಂವಿಧಾನದ ಆಧಿಪತ್ಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮತ್ತು ಸಂವಿಧಾನವೆಂಬ ಆ ಸರ್ವೋಚ್ಚ ದಸ್ತಾವೇಜಿನಿಂದ ಶಕ್ತಿ ಪಡೆದುಕೊಳ್ಳುತ್ತಿರುವ ಸರ್ಕಾರದ ಮೂರು ಅಂಗಗಳು ಸಂವಿಧಾನಾತ್ಮಕ ನೈತಿಕತೆಯನ್ನು ಅನುಸರಿಸುತ್ತಿವೆ ಎಂಬುದನ್ನು ಖಾತರಿಪಡಿಸಿಕೊಳ್ಳುವ ಉದ್ದೇಶದಿಂದ ರೂಪಿಸಲಾಯಿತು. ಕಾರ್ಯಾಂಗ, ರಾಜ್ಯಾಂಗ ಮತ್ತು ನ್ಯಾಯಾಂಗಗಳೆಲ್ಲವೂ ಸಾಂವಿಧಾನಿಕ ನೈತಿಕತೆಯ ಪರಿಕಲ್ಪನೆಗೆ ಜೀವಂತವಾಗಿ ಸ್ಪಂದಿಸಬೇಕಾಗುತ್ತದೆ.

114. ಅದೇ ಭಾಷಣದಲ್ಲಿ[50] ಡಾ. ಅಂಬೇಡ್ಕರ್ ರವರು ಈ ಕೆಳಗಿನಂತೆ ಗಮನಿಸಿ ಜಾರ್ಜ್ ಗ್ರೋಟ್‌ರನ್ನು ಉಲ್ಲೇಖಿಸಿದ್ದಾರೆ : -

> "ಸಾಂವಿಧಾನಿಕ ನೈತಿಕತೆಯ ಪಸರುವಿಕೆಯು ಯಾವುದೇ ಸಂವಿಧಾನದ ಬಹುಜನರಲ್ಲಷ್ಟೆ ಅಲ್ಲದೆ, ಎಲ್ಲರಲ್ಲೂ ಆಗಬೇಕಿರುವುದು ಮುಕ್ತ ಮತ್ತು ಶಾಂತಿಯುತವಾದ ಸರ್ಕಾರ ಅನಿವಾರ್ಯ ಅಗತ್ಯಗಳಲ್ಲೊಂದು; ಯಾವುದೇ ಶಕ್ತಿಯುತ ಮತ್ತು ಅತಿದೊಡ್ಡ ಅಲ್ಪಸಂಖ್ಯಾತ ಸಮುದಾಯಕ್ಕೆ ಕೂಡ, ಮೇಲುಗೈ ಸಾಧಿಸುವಷ್ಟು ಬಲವಿಲ್ಲದಿದ್ದರೆ ಮುಕ್ತ ಸಂಸ್ಥೆಯೊಂದರ ಚಟುವಟಿಕೆಗಳನ್ನು ಅಪ್ರಾಯೋಗಿಕಗೊಳಿಸಬಹುದು"[51]

[49] Constituent Assembly Debates, Vol. 7 (4th November 1948)

[50] Ibid

[51] Grote, A History of Greece. Routledge, London, 2000, p. 93.

ಡಾ. ಅಂಬೇಡ್ಕರ್ ರವರ ಈ ಹೇಳಿಕೆಯು, ನಮ್ಮ ದೇಶವು ವಸಾಹತುಶಾಹಿ ಆಳ್ವಿಕೆಯಿಂದ ದೀರ್ಘಕಾಲದ ನಂತರ ಸ್ವಾತಂತ್ರ್ಯವನ್ನು ಪಡೆಯಿತು ಎಂಬ ಸರಳ ಕಾರಣದಿಂದ ಸಾಂವಿಧಾನಿಕ ನೈತಿಕತೆ ನಮ್ಮ ದೇಶಕ್ಕೆ ನೈಸರ್ಗಿಕ ವ್ಯವಸ್ಥೆಯಲ್ಲ ಮತ್ತು ಹಾಗಾಗಿ ಸಂವಿಧಾನ ಸಭೆ ರಚಿಸಲಾದ ಸಮಯದಲ್ಲಿ ಸಾಂವಿಧಾನಿಕ ನೈತಿಕತೆಯು ಅನ್ಯಲೋಕದ ಕಲ್ಪನೆಯಾಗಿತ್ತು. ಆದಾಗ್ಯೂ, ಸಮಕಾಲೀನ ಭಾರತದ ಸಾಂವಿಧಾನಿಕ ನೈತಿಕತೆಯನ್ನು ಬಲಪಡಿಸುವುದು ನ್ಯಾಯಾಂಗ ಸೇರಿದಂತೆ ಸರ್ಕಾರದ ಇತರ ಅಂಗಗಳ ಕರ್ತವ್ಯವಾಗಿ ಉಳಿದಿದೆ ಎಂಬುದನ್ನು ಸೂಚಿಸುತ್ತದೆ.

115. ಒಟ್ಟಾರೆ ಸಮಾಜದ ಅಥವಾ ಸಮಾಜದ ಒಂದು ಸಣ್ಣ ಭಾಗ ತಮಗಾಗಿ ಬೇರೆಯೇ ವಿಷಯಗಳನ್ನು ಆಶಿಸಬಹುದು ಮತ್ತು ಆದ್ಯತೆ ನೀಡಬಹುದು. ಅಂತಹವರು ವಿಭಿನ್ನವಾದ ಸ್ವಾತಂತ್ರ್ಯವನ್ನು, ಇತರ ವಿಚಾರಗಳು, ಇತ್ಯಾದಿಯನ್ನು ಹೊಂದಲು ಸಂಪೂರ್ಣವಾಗಿ ಅರ್ಹರು, ಆದರೇ ಅವರ ವಿಭಿನ್ನ ಅಭಿರುಚಿಗಳು ಮತ್ತು ಇಷ್ಟಗಳು ಕಾನೂನು ಚೌಕಟ್ಟಿನೊಳಗೆ ಉಳಿಯಬೇಕು ಮತ್ತು ಯಾವುದೇ ಕಾನೂನನ್ನು ಉಲ್ಲಂಘಿಸುವಂತಿಲ್ಲ ಅಥವಾ ಯಾವುದೇ ಇತರ ಪ್ರಜೆಯ ಮೂಲಭೂತ ಹಕ್ಕುಗಳನ್ನು ಪರಿವರ್ತಿಸಬಾರದು. ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಉದಾತ್ತ ಉದ್ದೇಶಗಳನ್ನು ಹೊಂದಿರುವ ನಮ್ಮ ಸಂವಿಧಾನದ ಪ್ರಾಸ್ತಾವಿಕ ಗುರಿಗಳನ್ನು ಸರ್ಕಾರದ ಅಂಗಗಳು ಸಾಂವಿಧಾನಿಕ ನೈತಿಕತೆಯ ತತ್ವಕ್ಕೆ ಬದ್ಧತೆ ಮತ್ತು ನಿಷ್ಠೆ ತೋರಿದಾಗ ಮಾತ್ರ ಸಾಧಿಸಬಹುದು.

116. ಸಂವಿಧಾನಾತ್ಮಕ ನೈತಿಕತೆಯ ಪರಿಕಲ್ಪನೆಯು, ಸಮಾಜದಲ್ಲಿ ವೈವಿಧ್ಯಮಯ ಹಂದರವನ್ನು, ಸೀಮಿತ ಅರ್ಥದಲ್ಲಷ್ಟೆ ಅಲ್ಲದೆ, ಬಹುಮುಖ ರೀತಿಯಲ್ಲಿ ಕೂಡ ಉಳಿಸಿಕೊಳ್ಳಬೇಕೆಂದು ಶ್ರಮಿಸಿ ಸರ್ಕಾರದ ಅಂಗಗಳಿಗೆ ಆ ಕುರಿತು ಆಗ್ರಹಪಡಿಸುತ್ತದೆ. ಜನಪ್ರಿಯ ಭಾವನೆ ಅಥವಾ ಬಹುಸಂಖ್ಯಾವಾದದ ಪರವಾದ ಯಾವುದೇ ಬಗೆಯ ಒಲವು ಅಥವಾ ಆದ್ಯತೆಯನ್ನು ನಿಗ್ರಹಿಸುವುದು ಎಲ್ಲಾ ಮೂರು ಅಂಗಗಳ ಜವಾಬ್ದಾರಿಯಾಗಿದೆ. ಒಮ್ಮುಖವಾದ, ಏಕರೂಪದ, ಸ್ಥಿರವಾದ ಮತ್ತು ಅಳೆಯಲ್ಪಟ್ಟ ತತ್ವವನ್ನು ಸಮಾಜದಾದ್ಯಂತ ಬಲವಂತವಾಗಿ ಹೇರುವ ಯಾವುದೇ ಪ್ರಯತ್ನವು ಸಾಂವಿಧಾನಿಕ ನೈತಿಕತೆಯ ತತ್ವವನ್ನು ಉಲ್ಲಂಘಿಸುತ್ತದೆ. ಸಾಂವಿಧಾನಿಕ ನೈತಿಕತೆಯೆಡೆಗಿನ ಭಕ್ತಿ ಮತ್ತು ನಿಷ್ಠೆಯನ್ನು ಒಂದು ನಿರ್ದಿಷ್ಟ ಕಾಲಘಟ್ಟದಲ್ಲಿ ಪ್ರಚಲಿತವಾಗಿರುವ ಜನಪ್ರಿಯ ಭಾವನೆಯೊಂದಿಗೆ ಸಮೀಕರಿಸಬಾರದು.

117. ಸಮಾಜದಲ್ಲಿ ಇರುವ ಯಾವುದೇ ಅಸಮವಾದ ವರ್ತನೆಯನ್ನು, ಆದು ಕಾನೂನು ಮತ್ತು ಸಾಂವಿಧಾನಿಕ ಚೌಕಟ್ಟಿನೊಳಗೆ ಇರುವವರೆಗೂ, ಪೋಷಿಸದಿದ್ದರೂ, ಅದನ್ನು ಉಳಿಸಿಕೊಳ್ಳಲು ಸಾಧ್ಯವಾಗುವ ಪರಿಸರವನ್ನಾದರೂ ಒದಗಿಸಬೇಕು. ಅಂತಹ ವಿಧಾನವನ್ನು ಅನುಸರಿಸಿದಾಗ ಮಾತ್ರ ಆಯ್ಕೆಯ ಸ್ವಾತಂತ್ರ್ಯವನ್ನೂ ಒಳಗೊಂಡಿರುವ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಸಮೃದ್ಧವಾಗುವ ಮತ್ತು ಪ್ರವರ್ಧಮಾನಕ್ಕೆ ಬರುವ ಅವಕಾಶ ದೊರೆಯುತ್ತದೆ ಮತ್ತು ಅದನ್ನು ಸಾಧಿಸಿದರೆ, ಸಂವಿಧಾನಾತ್ಮಕ ನೈತಿಕತೆಯ ಸರ್ವೋತ್ಕೃಷ್ಟವಾದ ಸತ್ವಗಳಾದ ಸ್ವಾತಂತ್ರ್ಯ ಮತ್ತು ಮುಕ್ತಿಗಳಿಗೆ ಉಳಿಯಲು ಅವಕಾಶ ನೀಡಬಹುದು.

118. **ದೆಹಲಿ ಎನ್.ಸಿ.ಟಿ ಸರ್ಕಾರ v. ಭಾರತ ಸರ್ಕಾರ ಮತ್ತು ಇತರರು**[52] ಪ್ರಕರಣದಲ್ಲಿ, ನಮ್ಮಲ್ಲೊಬ್ಬರು (ದೀಪಕ್ ಮಿಶ್ರಾ, ಮುಖ್ಯ ನ್ಯಾಯ ಮೂರ್ತಿಗಳು.) ಈ ಕೆಳಗಿನಂತೆ ಗಮನಿಸಿದರು: -

> ಸಂವಿಧಾನಾತ್ಮಕ ನೈತಿಕತೆಯನ್ನು ಸರಿಯಾಗಿ ಅರ್ಥಮಾಡಿಕೊಂಡಾಗ, ಅದು ಸಾಂವಿಧಾನಿಕ ರೂಢಿಗಳು ಮತ್ತು ಸಂವಿಧಾನದ ಆತ್ಮಸಾಕ್ಷಿಯಲ್ಲಿ ಅಂತರ್ಗತವಾಗಿರುವ ಅಂಶಗಳನ್ನು ಹೊಂದಿರುವ ನೈತಿಕತೆ ಎಂದು ಅರ್ಥವಾಗುತ್ತದೆ. ಯಾವುದೇ ಕ್ರಮಕ್ಕೆ ಸಮರ್ಥನೆಯನ್ನು ಪಡೆದುಕೊಳ್ಳಬೇಕಿದ್ದಲ್ಲಿ, ಅದು ಸಂವಿಧಾನಾತ್ಮಕ ಮಿಡಿತದೊಂದಿಗೆ ಸಾಮರಸ್ಯದಿಂದಿರುವ ಸಾಮರ್ಥ್ಯವನ್ನು ಹೊಂದಿರಬೇಕು. ನಾವೊಂದು ಉದಾಹರಣೆಯನ್ನು ನೀಡಬಹುದು. ವ್ಯಕ್ತಿಯೊಬ್ಬನು ಔದಾರ್ಯದ ಪರಿಕಲ್ಪನೆಯನ್ನು ವ್ಯಕ್ತಪಡಿಸುತ್ತಿರುವಾಗ, ಅವನು ಪ್ರಾಮಾಣಿಕತೆಯ ಮಾನದಂಡಕ್ಕೆ ತಕ್ಕಂತೆ ಇಲ್ಲದಿರಬಹುದು. ಅಲ್ಲಿ ನಮ್ರತೆಯ ಅಂಶವೊಂದಿರಬಹುದು.

---

[52] 2018 (8) SCALE 72

ಆದರೆ ವ್ಯಕ್ತಿಯೊಬ್ಬರು ಕ್ರಿಯೆಯಲ್ಲಿ ಪ್ರಾಮಾಣಿಕತೆಯನ್ನು ತೋರಿಸುವಾಗ, ಅವರಲ್ಲಿ ಯಾವುದೇ ಬಗೆಯ ದಾನ ಅಥವಾ ಔದಾರ್ಯದ ಭಾವನೆ ಇರುವುದಿಲ್ಲ. ಅದಕ್ಕೆ ರೂಢಿಯೊಂದಕ್ಕಿರುವ ಬೆಲೆಮಾತ್ರ ಇರುತ್ತದೆ. ಇದುವೇ ಸಾಂವಿಧಾನಿಕ ನೈತಿಕತೆಯ ವ್ಯಾಪ್ತಿಯೊಳಗೆ ಬರುವ ಸಾಂವಿಧಾನಿಕ ಪ್ರಾಮಾಣಿಕತೆಯ ಪರೀಕ್ಷೆ. ಇದು ಔದಾರ್ಯದ ವ್ಯಕ್ತಿನಿಷ್ಠ ನಿರೂಪಣೆಯನ್ನೂ ಮೀರಿ, ಸಾಂವಿಧಾನಿಕ ಪ್ರಾಮಾಣಿಕತೆಯ ತತ್ವವನ್ನು ಪ್ರತಿಪಾದಿಸುತ್ತದೆ"

119. ಸುಸ್ಥಾಪಿತ ತತ್ವಗಳಾದ ಶಾಸಕಾಂಗೀಯ ಸಾಮರ್ಥ್ಯ ಅಥವಾ ಮೂಲಭೂತ ಹಕ್ಕುಗಳ ಅಥವಾ ಯಾವುದೇ ಇತರ ಸಾಂವಿಧಾನಿಕ ನಿಬಂಧನೆಗಳ ಉಲ್ಲಂಘನೆಯ ನೆಲೆಗಟ್ಟಿನ ಮೇಲೆ ಕಾನೂನಿನ ಸಿಂಧುತ್ವವನ್ನು ತೀರ್ಮಾನಿಸುವುದು, ಸಾಂವಿಧಾನಿಕ ನ್ಯಾಯಾಲಯಗಳ ಕರ್ತವ್ಯ. ಅದೇ ವೇಳೆ, ಸಂವಿಧಾನದ ಅಂತಿಮ ತೀರ್ಪುಗಾರರಾದ ನ್ಯಾಯಾಲಯಗಳು ಸಂವಿಧಾನದ ಅಮೂಲ್ಯ ತತ್ವಗಳನ್ನು ಎತ್ತಿಹಿಡಿಯುತ್ತವೆ ಮತ್ತು ಯಾವ ರೀತಿಯಿಂದಲೂ ಬಹುಮತೀಯ ದೃಷ್ಟಿಕೋನ ಅಥವಾ ಜನಪ್ರಿಯ ಗ್ರಹಿಕೆಯಿಂದ ಮಾರ್ಗದರ್ಶನಕ್ಕೊಳಗಾಗುವುದಿಲ್ಲ ಎಂದು ನಿರೀಕ್ಷಿಸಲಾಗುತ್ತದೆ. ನ್ಯಾಯಾಲಯವು ಸಾಂವಿಧಾನಿಕ ನೈತಿಕತೆಯ ಕಲ್ಪನೆಯಿಂದ ಮಾರ್ಗದರ್ಶನ ಪಡೆಯಬೇಕೇ ಹೊರತು ಸಾಮಾಜಿಕ ನೈತಿಕತೆಯಿಂದ ಅಲ್ಲ.

120. ಪ್ರಸ್ತುತ ವಿಚಾರಕ್ಕೆ ಸಂಬಂಧಿಸಿದಂತೆ, ದಂಡನಾ ನಿಬಂಧನೆಯೊಂದನ್ನು ಅದು ಸಮಾಜದ ಒಂದು ವರ್ಗದ ಮೂಲಭೂತ ಹಕ್ಕುಗಳ ಉಲ್ಲಂಘಿಸುತ್ತಿದೆ ಎಂಬ ಆಧಾರದಲ್ಲಿ ಪ್ರಶ್ನಿಸಿದಾಗ, ಸಮಾಜದ ಆ ವರ್ಗವು ಅಲ್ಪಸಂಖ್ಯಾತವೋ ಅಥವಾ ಬಹುಸಂಖ್ಯಾತವೋ ಎಂಬುದನ್ನು ಪರಿಗಣಿಸದೆ, ಕಾನೂನಿನ ಆಳ್ವಿಕೆಯಿರುವ ಸಂವಿಧಾನಾತ್ಮಕ ಪ್ರಜಾಪ್ರಭುತ್ವದಲ್ಲಿ, ಸಾಂವಿಧಾನಿಕ ನೈತಿಕತೆಎಂಬ ಗೌರವಾನ್ವಿತ ಮತ್ತು ಪ್ರಶಂಸನೀಯ ತತ್ವ, ಕಾನೂನು ಬಲವಿಲ್ಲದ ಸಾಮಾಜಿಕ ನೈತಿಕತೆಯ ಅಸ್ಪಷ್ಟವಾದ ಕಲ್ಪನೆಯೊಂದರಿಂದ

ತುಳಿತಕ್ಕೊಳಗಾಗಲು ಬಿಡಬಾರದು. ಸಾಂವಿಧಾನಿಕ ನೈತಿಕತೆಯ ಪರಿಕಲ್ಪನೆಯು ನ್ಯಾಯಾಲಯಕ್ಕೆ, ನಾಗರಿಕರ ಸಂವಿಧಾನಾತ್ಮಕ ಹಕ್ಕುಗಳೊಂದಿಗೆ, ಒಮ್ಮತದಲ್ಲಿರುವ ಒಂದು ನ್ಯಾಯಯುತ ತೀರ್ಮಾನಕ್ಕೆ ಬರಲು ಸಹಾಯಮಾಡುತ್ತದೆ, ಮತ್ತು ಇಲ್ಲಿ ಜನಸಂಖ್ಯೆಯ ಆ ಭಾಗ ಎಷ್ಟು ಚಿಕ್ಕದಾಗಿದೆ ಎಂಬುದು ಮುಖ್ಯವಾಗುವುದಿಲ್ಲ. ಈ ಪರಿಕಲ್ಪನೆಯಲ್ಲಿ, ಸಂಖ್ಯೆಯ ಕಲ್ಪನೆಯು, ಯಾವುದೇ ಸಂಖ್ಯೆಯ ಎಡಭಾಗದಲ್ಲಿರುವ ಸೊನ್ನೆಯ ಹಾಗೆ ಅರ್ಥಹೀನವಾಗಿದೆ; .

121. ಈ ನಿಟ್ಟಿನಲ್ಲಿ, ನಾವು ಸಾಮಾಜಿಕ ನೈತಿಕತೆಯನ್ನು ಸಾಂವಿಧಾನಿಕ ನೈತಿಕತೆಯ ಎದುರಿಗಿಟ್ಟು ದೂರಗಾಮಿಯಾಗಿ ವಿಶ್ಲೇಷಿಸಬೇಕಾಗಿದೆ. ಒಂದು ವಿಭಾಗದ ಮೂಲಭೂತ ಮಾನವ ಹಕ್ಕುಗಳೂ ಆಗಿರುವ ಮೂಲಭೂತ ಹಕ್ಕುಗಳ ವಲಯದ ಉಲ್ಲಂಘನೆ ಅಥವಾ ನಿರ್ಲಕ್ಷ್ಯಕ್ಕೊಳಗಾಗುತ್ತಿರುವ ಪರಿಸ್ಥಿತಿಯು ಸಂವಿಧಾನಾತ್ಮಕ ನ್ಯಾಯಾಲಯಗಳ ಎದುರು ಬಂದಾಗಲೆಲ್ಲಾ, ಸಮಾಜದ ಆ ಭಾಗ ಅದೆಷ್ಟೇ ಸಣ್ಣದಾಗಿದ್ದರು, ಸಾಂವಿಧಾನಿಕ ನ್ಯಾಯಾಲಯಗಳು ನ್ಯಾಯಾಂಗೀಯ ಬದ್ಧತೆ ಮತ್ತು ಸೃಜನಶೀಲತೆಯ ಸಹಾಯದಿಂದ ಸಾಂವಿಧಾನಿಕ ನೈತಿಕತೆಯು ಸಾಮಾಜಿಕ ನೈತಿಕತೆಯೆದುರು ಮೇಲುಗೈ ಸಾಧಿಸುವುದನ್ನು ಖಾತರಿಪಡಿಸಿಕೊಳ್ಳಬೇಕು.

122. ಸಾಮಾಜಿಕ ನೈತಿಕತೆಯ ವೇಷದಲ್ಲಿ, ಎಲ್.ಜಿ.ಬಿ.ಟಿ ಸಮುದಾಯದ ಸದಸ್ಯರನ್ನು ಸಮಾಜ ಕಾನೂನುಬಾಹಿರಗೊಳಿಸಬಾರದು ಅಥವಾ ದುಷ್ಕರ್ಮಿಗಳಂತೆ ಬಗೆದು ಮಲತಾಯಿಯಂತೆ ನಡೆಸಿಕೊಳ್ಳಬಾರದು. ಇದು ಸಂಭವಿಸಿದರೇ ಅಥವಾ ಎಲ್.ಜಿ.ಬಿ.ಟಿ ಸಮುದಾಯದೆಡೆಗಿನ ಅಂತಹ ನಡವಳಿಕೆಯನ್ನು ಮುಂದುವರೆಯಲು ಬಿಟ್ಟರೆ, ಮೂಲಭೂತ ಹಕ್ಕುಗಳನ್ನು ಕಾಪಾಡುವ ಬದ್ಧತೆಯಿರುವ ಸಾಂವಿಧಾನಿಕ ನ್ಯಾಯಾಲಯಗಳು ತಮ್ಮ ಕರ್ತವ್ಯದ ಕಾರ್ಯನಿರ್ವಹಣೆಯಲ್ಲಿ ವಿಫಲಗೊಳ್ಳುತ್ತದೆ. ಹಾಗೆ ಮಾಡಲು ವಿಫಲವಾದರೆ ನಾಗರಿಕ ಹಕ್ಕುಗಳನ್ನು ಶೂನ್ಯದ ಮಟ್ಟಕ್ಕೆ ಇಳಿಸಿದಂತಾಗುತ್ತದೆ.

123. ಸಂವಿಧಾನದ ಸಂಸ್ಥಾಪಕ ಪಿತೃಗಳು ಎಲ್ಲರನ್ನೂ ಒಳಗೊಳ್ಳುವ ಸಂವಿಧಾನವನ್ನು ಅಳವಡಿಸಿಕೊಂಡರು ಮತ್ತು ಅದರ ನಿಬಂಧನೆಗಳು ಸಮಾಜದ ಹಿಂದುಳಿದ ವರ್ಗಗಳ ವಿರುದ್ಧದ ವ್ಯವಸ್ಥಿತ ತಾರತಮ್ಯವನ್ನು ನಿರ್ಮೂಲನೆಗೊಳಿಸಲು ಮತ್ತು ಸಂವಿಧಾನ ಸಭೆಯು ಅಸ್ತಿತ್ವಕ್ಕೆ ಬರುವ ಮೊದಲು ಬೃಹತ್ ಪ್ರಮಾಣದಲ್ಲಿ

ಪ್ರಚಲಿತವಾಗಿದ್ದ ಸಮಾಜದ ಮೇಲಿನ ವರ್ಗ/ವಿಭಾಗಗಳು ಅಪಾಯದಲ್ಲಿರುವ ಸಮುದಾಯಗಳಿಗೆ ಮಾಡುವ ಅವಮಾನವನ್ನು ನಿರ್ಮೂಲನೆ ಮಾಡಲು ದೃಢವಾದ ಕ್ರಮವನ್ನು ಕೈಗೊಳ್ಳಲು ಸರ್ಕಾರಕ್ಕೆ ಅನುಮತಿ ನೀಡುತ್ತದೆ ಮತ್ತು ಕೆಲವೊಮ್ಮೆ ನಿರ್ದೇಶಿಸುತ್ತವೆ ಎಂಬುದನ್ನು ನಾವು ಮರೆಯಬಾರದು. ಇವುಗಳು ಭಾರತದ ಸಂವಿಧಾನದ ಜಾರಿಯ ಮೂಲಕ ಸುಧಾರಿಸಲು ಉದ್ದೇಶಿಸಿರುವ ಬಹುಸಂಖ್ಯಾತ ಸಾಮಾಜಿಕ ನೈತಿಕತೆಯ ಅಂಶಗಳು. ಹೀಗಾಗಿ, ಸಂವಿಧಾನದ ಅಳವಡಿಸಿಕೊಳ್ಳುವಿಕೆಯು ಒಂದು ರೀತಿಯಲ್ಲಿ, ಸಾಂವಿಧಾನಿಕ ನೈತಿಕತೆಯನ್ನು ಸಾಧಿಸಲು ಸಹಾಯಮಾಡುವ ಸಲಕರಣೆ ಅಥವಾ ಮಾಧ್ಯಮ, ಮತ್ತು ಆ ಕಾಲದ ಪ್ರಚಲಿತ ಸಾಮಾಜಿಕ ನೈತಿಕತೆಯನ್ನು ನಿರುತ್ಸಾಹಗೊಳಿಸುವ ಮಾರ್ಗ. ಸಾಂವಿಧಾನಿಕ ನೈತಿಕತೆಯನ್ನು ಅಪ್ಪಿಕೊಳ್ಳುವ ಒಂದು ದೇಶ ಅಥವಾ ಒಂದು ಸಮಾಜದ ಮೂಲದಲ್ಲಿ ಒಳಗೊಳ್ಳುವಿಕೆಯೆಂಬ ಸುಸ್ಥಾಪಿತವಾದ ಪರಿಕಲ್ಪನೆಯಿದೆ.

124. ಪ್ರಶ್ನಿಸಲಾಗಿರುವ ನಿಬಂಧನೆಯ ಸಾಂವಿಧಾನಿಕ ಮಾನ್ಯತೆಯನ್ನು ಪರೀಕ್ಷಿಸುವಾಗ, ಸಂವಿಧಾನಾತ್ಮಕ ನ್ಯಾಯಾಲಯವು, ಸದರಿ ಪ್ರಶ್ನಿಸಲ್ಪಟ್ಟಿರುವ ನಿಬಂಧನೆಯು ಸಂವಿಧಾನಾತ್ಮಕ ನೈತಿಕತೆಯ ಆಶಯಕ್ಕೆ ವಿರುದ್ಧವಾಗಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರೆ, ಸಾಂವಿಧಾನಿಕ ನ್ಯಾಯಾಲಯಗಳು ಸಂವಿಧಾನವನ್ನು ಎತ್ತಿಹಿಡಿಯಲು ಅಸ್ತಿತ್ವದಲ್ಲಿವೆ ಎಂಬ ಶುದ್ಧ ಮತ್ತು ಸರಳ ಕಾರಣಕ್ಕಾಗಿ ಸದರಿ ನಿಬಂಧನೆಯನ್ನು ಅಸಂವಿಧಾನಿಕ ಎಂದು ಘೋಷಿಸಬೇಕು.

## J. ಮಾನವ ಘನತೆಯ ದೃಷ್ಟಿಕೋನ

125. ಸಮಲೈಂಗಿಕ ಹಕ್ಕುಗಳಿಗೆ ಸಂಬಂಧಿಸಿದ ನಿರ್ಧಾರ ಮತ್ತು ಶಾಸನದಲ್ಲಿ ಮಾನವ ಘನತೆಯ ಪಾತ್ರವನ್ನು ಕುರಿತು ಚರ್ಚಿಸುವಾಗ, ಮಿಷೆಲೆ ಫಿಂಕ್[53] ಗಮನಿಸುತ್ತಾರೆ: -

> -ನಿಖರವಾದ ಕಾನೂನಾತ್ಮಕ ಅರ್ಥವಿಲ್ಲದಿದ್ದರೂ, ಪರಿಕಲ್ಪನೆಯ ಮಟ್ಟದಲ್ಲಿ ಬಹುವಾಗಿ ಆಕರ್ಷಿಸುವ ಒಂದು

[53] The role of human dignity in gay rights adjudication and legislation: A comparative perspective, Michele Finck, International Journal of Constitutional Law, Volume 14, Jan 2016, page no.26 to 53

ತತ್ವವಾಗಿರುವ, ಘನತೆಯನ್ನು ಹಲವಾರು ಕಾನೂನಾತ್ಮಕ ಸನ್ನಿವೇಶಗಳಿಗೆ ತಕ್ಕಂತೆ ಸುಲಭವಾಗಿ ಕುಶಲತೆಯಿಂದ ಬದಲಾಯಿಸಿಕೊಂಡು

ಬಿಂಬಿಸಿಕೊಳ್ಳಬಹುದು. ಸಮಲೈಂಗಿಕ ಸ್ತ್ರೀ ಮತ್ತು ಪುರುಷರ ಹಕ್ಕುಗಳಿಗೆ ಸಂಬಂಧಪಟ್ಟಂತೆ, ಘನತೆಯು ನಸ್ಬಾಂ ವಿವರಿಸುವ "ಅಸಹ್ಯ" ದಿಂದ "ಮಾನವೀಯತೆ"ಯೆಡೆಗಿನ ಪರಿವರ್ತನೆ ಸಾಧ್ಯವಾಗುತ್ತದೆ. ಒಮ್ಮೆ ಅಸಹ್ಯದಿಂದ ನೋಡಲ್ಪಟ್ಟ ಮತ್ತು ಕೆಲವು ಹಕ್ಕುಗಳನ್ನು ಪಡೆಯಲು ಅನರ್ಹರು ಎಂದು ಪರಿಗಣಿಸಲ್ಪಟ್ಟಿದ್ದ ಸಮಲೈಂಗಿಕರ ಕುರಿತು ಅವರನ್ನು ಲೈಂಗಿಕ ನಿಲುವಿನ ಏಕೈಕ ನೆಲೆಯಲ್ಲಿ, ಭಿನ್ನಲಿಂಗೀಯರಿಗೆ ಲಭ್ಯವಿರುವ ಪೌರತ್ವದ ಮದುವೆಗೆಯಾಗುವ ಸಾಮರ್ಥ್ಯದಂತಹ ಪ್ರಯೋಜನಗಳಿಂದ ವಂಚಿತಗೊಳಿಸಬಾರದು ಎಂಬ ಒಮ್ಮತ ಹೆಚ್ಚುತ್ತಿದೆ. ಸಮಲೈಂಗಿಕರನ್ನು ಸಮಾನ ಹಕ್ಕುಗಳನ್ನು ಹೊಂದಿರುವ "ಪೂರ್ಣ ಮಾನವರು" ಎಂದು ಪರಿಗಣಿಸಲಾಗುತ್ತದೆ ಮತ್ತು ಘನತೆಯು ಅಂತಹ ಸಾಮಾಜಿಕ-ಸಾಂಸ್ಕೃತಿಕ ಬದಲಾವಣೆಯನ್ನು ಕಾನೂನು ಪರಿವರ್ತನೆಗೆ ಅನುವಾದಿಸುವ ಶಬ್ದಕೋಶದಂತೆ ಕಾರ್ಯ ನಿವಹಿಸುತ್ತದೆ.

126. ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆ, (ಯು.ಡಿ.ಹೆಚ್.ಆರ್) 1948 ವಿಶ್ವದೆಲ್ಲೆಡೆಯ ಜನರ ಹಕ್ಕುಗಳ ಸನ್ನದಾಯಿತು. ಯು.ಡಿ.ಹೆಚ್.ಆರ್.ನ ಮೊದಲ ಕಲಮು ತನ್ನ ಸಾರ್ವತ್ರಿಕ ಅನ್ವಯವಾಗುವಿಕೆಯ ಬಗೆಗೆ

ರಾಜಿಮಾಡಿಕೊಳ್ಳಲಿಲ್ಲ: ಎಲ್ಲ ಮಾನವರು ಹುಟ್ಟಿನಿಂದ ಮುಕ್ತರು ಮತ್ತು ಘನತೆ ಮತ್ತು ಹಕ್ಕುಗಳಲ್ಲಿ ಸಮಾನರು. ಜಸ್ಟಿಸ್ ಕಿರ್ಬಿ ಸಂಕ್ಷಿಪ್ತವಾಗಿ ಗಮನಿಸುತ್ತಾರೆ: -

> -ಈ ಭಾಷೆಯು ನಮ್ಮ ಜಗತ್ತಿನಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯನ್ನೂ ಸ್ವೀಕರಿಸಿದೆ. ಇದು ಪ್ರಜೆಗಳಿಗಷ್ಟೇ ಅನ್ವಯಿಸಲಿಲ್ಲ. ಇದು 'ಬಿಳಿ' ಜನರಿಗಷ್ಟೇ ಅನ್ವಯಿಸಲಿಲ್ಲ. ಇದು ಒಳ್ಳೆಯ ಜನರಿಗಷ್ಟೇ ಅನ್ವಯಿಸಲಿಲ್ಲ . ಸೆರೆಯಾಳುಗಳು, ಕೊಲೆಗಾರರು ಮತ್ತು ದ್ರೋಹಿಗಳು ಕೂಡ ಘೋಷಿಸಲ್ಪಟ್ಟ ಸ್ವಾತಂತ್ರ್ಯಗಳಿಗೆ ಅರ್ಹರಾಗಿದ್ದಾರೆ. ಸಮಾನತೆಯ ತತ್ವಗಳಿಗೆ ಯಾವುದೇ ವಿನಾಯಿತಿಗಳಿರಲಿಲ್ಲ[54]

127. ಘನತೆಯೆಂಬ ಮೂಲಭೂತ ಕಲ್ಪನೆಯನ್ನು ಮಾನವ ವ್ಯಕ್ತಿತ್ವದಿಂದ ಬೇರ್ಪಡಿಸಲಾಗದ ಭಾಗವೆಂದು ಪರಿಗಣಿಸಲಾಗಿದೆ. ಸಂವಿಧಾನದ 21 ನೇ ಕಲಮಿನ ಅಡಿಯಲ್ಲಿ ಘನತೆಯನ್ನು ಬದುಕುವ ಹಕ್ಕಿನ ಪ್ರಮುಖ ಅಂಶವೆಂದು ಸರಿಯಾಗಿ ಗುರುತಿಸಲಾಗಿದೆ. ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ, ಘನತೆಯೊಂದಿಗೆ ಬದುಕುವ ಹಕ್ಕನ್ನು ಮಾನವ ಹಕ್ಕೆಂದು ಜಾಗತಿಕ ಮಾನವಾಧಿಕಾರಗಳ ಘೋಷಣೆಯ ಪರಿಚಯದೊಂದಿಗೆ 1948 ರಲ್ಲೇ ಗುರುತಿಸಲಾಗಿದೆ. ನಮ್ಮ ದೇಶದ ಸಾಂವಿಧಾನಿಕ ನ್ಯಾಯಾಲಯಗಳು ಸಂದರ್ಭ ಬಂದಾಗಲೆಲ್ಲಾ ಪ್ರತೀ ವ್ಯಕ್ತಿಯ ಘನತೆಯ ಹಕ್ಕನ್ನು ಖಾತ್ರಿಪಡಿಸುವ ಮತ್ತು ಸಂರಕ್ಷಿಸುವ ಕಾರ್ಯವನ್ನು ಗಂಭೀರವಾಗಿ ನಿರ್ವಹಿಸಿದೆ, ಏಕೆಂದರೆ ಘನತೆಯೊಂದಿಗೆ ಬದುಕುವ ಹಕ್ಕಿಲ್ಲದಿದ್ದರೆ, ಇತರ ಎಲ್ಲಾ ಮೂಲಭೂತ ಹಕ್ಕುಗಳು ತಮ್ಮ ಸಂಪೂರ್ಣ ಅರ್ಥವನ್ನು ಪಡೆದುಕೊಳ್ಳುವುದಿಲ್ಲ.

[54] Human Rights Gay Rights by Michael Kirby, Published in 'Humane Rights' in 2016 by Future Leaders

128. ಒಬ್ಬ ವ್ಯಕ್ತಿಯ ಘನತೆಯನ್ನು ಅರ್ಥಮಾಡಿಕೊಳ್ಳಲು, ಇನ್ನೊಬ್ಬರ ಘನತೆಯನ್ನು ಹೇಗೆ ಗ್ರಹಿಸಬೇಕೆಂದು ಅರಿತುಕೊಳ್ಳಬೇಕು. ಅಲೆಕ್ಸಿಸ್ ಡಿ ಟೋಕ್ವಿವಿಲ್ಲೆ[55] ನಮಗೆ ಹೀಗೆ ಹೇಳುತ್ತಾರೆ :

> -ನಾನು ಇನ್ನೊಬ್ಬ ಮನುಷ್ಯನ ಜೊತೆಯಲ್ಲಿದ್ದಾಗಲೆಲ್ಲಾ, ಅವರು ಯಾವುದೇ ವರ್ಗದವರಿರಲಿ, ನನ್ನಲ್ಲಿ ಅವರ ಸೇವೆ ಮಾಡಬಾರದು ಅವರನ್ನು ಸಂತುಷ್ಟರನ್ನಾಗಿಸಬಾರದು ಎಂಬಷ್ಟೆ, ಅವರ ಘನತೆಯನ್ನು ಘಾಸಿಗೊಳಿಸಬಾರದು ಎಂಬ ಬಲವಾದ ಭಾವನೆಯುಂಟಾಗುತ್ತದೆ.

129. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ನಿರ್ಣಾಯಕ ಗುಣಲಕ್ಷಣಗಳ ಸ್ಥಾನಮಾನವನ್ನು ತಿಳಿಸಿಕೊಡಬಲ್ಲ ಅನೇಕ ಆಸ್ತಿಗಳನ್ನು ಹೊಂದಿರುತ್ತಾರೆ. ಅವುಗಳೆಡೆಗೆ ಅವರಿಗೆ ಯಾವುದೇ ಬಗೆಯ ಗೀಳು ಇಲ್ಲದಿದ್ದರೂ, ತಮ್ಮಿಂದ ಅವುಗಳನ್ನು ಕಸಿದುಕೊಳ್ಳುವುದನ್ನು ಅವರು ಧಿಕ್ಕರಿಸಬಹುದು ಏಕೆಂದರೆ ಆ ಆಸ್ತಿಗಳು ಅವರ ಪಾಲಿಗೆ ಪವಿತ್ರವಾದವು ಮತ್ತು ಅವರು ಅವುಗಳಿಂದ ದೂರವಾಗಲಾರದಷ್ಟು ಅವಿಭಾಜ್ಯವಾಗಿ ಸಂಬಂಧಿಸಿರಬಹುದು. ಅವರು ತಮ್ಮ ಆ ಗುಣಲಕ್ಷಣಗಳನ್ನು ಇತರರು ಪರಸ್ಪರ ಗೌರವವಿರಬೇಕು ಎಂಬ ಏಕೈಕ ಒಪ್ಪಿಗೆಯಾಗಬಲ್ಲ ಷರತ್ತಿನೊಂದಿಗೆ ಗೌರವಿಸಲಿ ಎಂದು ಬಯಸಬಹುದು. ಪರಸ್ಪರ ಗೌರವವು ಹಸ್ತಕ್ಷೇಪವನ್ನು ಹೊರದಬ್ಬುತ್ತದೆ ಮತ್ತು ಯಾವುದೇ ರೀತಿಯ ನಿರ್ಬಂಧವನ್ನು ತಿರಸ್ಕರಿಸುತ್ತದೆ. ಅದು, ಒಬ್ಬ ವ್ಯಕ್ತಿಯ ಪ್ರತ್ಯೇಕತೆಯು ಗುರುತಿಸಲ್ಪಟ್ಟಿದೆ, ಸ್ವೀಕರಿಸಲ್ಪಟ್ಟಿದೆ ಮತ್ತು ಗೌರವಿಸಲ್ಪಟ್ಟಿದೆ ಎಂಬ ಗ್ರಹಿಕೆಯನ್ನು ಆಧರಿಸಿದೆ. ಘನತೆಯೆಡೆಗಿನ ಕಲ್ಪನೆಗೆ ಅಂತಹ ಗೌರವವು ಸಂವಿಧಾನದ 21 ನೇ ಕಲಮಿನ ಅಡಿಯಲ್ಲಿ, ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕನ್ನು ಕರೆತರುವ ಒಂದು ಮೂಲಭೂತ ಹಕ್ಕಾಗಿಬಿಟ್ಟಿದೆ. ಘನತೆ ಮತ್ತು ಸ್ವಾತಂತ್ರ್ಯಗಳು, ಅವರೆಡರ ಕುರಿತೂ ಕಾಳಜಿವಹಿಸುವ ಅವಳಿ-ಪರಿಕಲ್ಪನೆಯುಂತೆ, ಮಾನವ ಸಮಾಜದ ಒಂದು ಮಹೋನ್ನತ ಚಿತ್ರವನ್ನು ಬಿಡಿಸುವುದರ ಜೊತೆಗೆ, ಸಮಾಜದಲ್ಲಿ ಶಾಂತಿಯುತ ಸಹಬಾಳ್ವೆಯನ್ನು ಪ್ರತಿಪಾದಿಸುವ ಮೂಲಕ ವಾತಾವರಣವನ್ನು ಸುಗಮಗೊಳಿಸುತ್ತವೆ ಮತ್ತು ಆ ಮೂಲಕ ನ್ಯಾಯ ವಿತರಣೆಯನ್ನು ಸುಲಭಗೊಳಿಸುತ್ತವೆ.

[55] 56, New York State Bar Journal (No 3. April, 1984), p.50

ಅಂತಹ ಹಕ್ಕುಗಳನ್ನು ಪವಿತ್ರವಾದ ಮತ್ತು ಉಲ್ಲಂಘಿಸಬಾರದ ತತ್ವಗಳೆಂದು ತಿಳಿದು ಪಾಲಿಸಲಾಗುವ; ವೈಯಕ್ತಿಕ ಆಯ್ಕೆಯು ಅಪರೂಪವಾಗಿರದೇ, ಪ್ರತಿಯೊಬ್ಬರಿಗೂ ತಮ್ಮ ಸ್ಥಾನ ದೊರೆಯುವ ಸಮಾಜದಲ್ಲಿ ಎಲ್ಲರೂ ಸಾಮಾಜಿಕ ವಿನ್ಯಾಸಗೊಳಿಸುವಿಕೆಯ ಪ್ರಕ್ರಿಯೆಯ ಭಾಗವಾಗುತ್ತಾರೆ; ಯಾವುದೇ ಗೋಪುರವನ್ನು ನಿರ್ಮಿಸಲಾಗಿಲ್ಲವಾದರೂ, ಶಾಂತಿಯುತ ಸಹಬಾಳ್ವೆಯೊಂದಿಗಿನ ವೈಯಕ್ತಿಕ ಹಕ್ಕುಗಳ ಗೋಪುರವು ಗೋಚರಿಸುತ್ತಿದೆ.

130. **ಕಾಮನ್ ಕಾಸ್ (ಎ ರಿಜಿಸ್ಟರ್ಡ್ ಸೊಸೈಟಿ) ಪ್ರಕರಣದಲ್ಲಿ** (ಮೇಲ್ಕಂಡ), ನಮ್ಮಲ್ಲೊಬ್ಬರು, ಮಾನವ ಘನತೆಯು ವ್ಯಾಖ್ಯಾನದ ಆಚೆಗಿದೆಯೆಂದೂ ಮತ್ತು ಅದು ಕೆಲವೊಮ್ಮೆ, ವ್ಯಾಖ್ಯಾನವನ್ನು ವಿರೋಧಿಸುತ್ತದಯೆಂದೂ ಗಮನಿಸಿದರು. ಕೆಲವರಿಗೆ, ಅದು ಅಮೂರ್ತ ಪ್ರಪಂಚದಲ್ಲಿರುವಂತೆ ಕಾಣುತ್ತದೆ ಮತ್ತು ಕೆಲವರು ಇದನ್ನು ಅಹಂಕಾರ ಅಥವಾ ಅತಿಯಾದ ವಿಲಕ್ಷಣತೆಯ ಗುಣಲಕ್ಷಣವೆಂದು ವಿಕೃತವಾಗಿ ಪರಿಗಣಿಸಬಹುದು. ಈ ಭಾವನೆಯು ಪರಿಪೂರ್ಣ ಸಿನಿಕತೆಯ ಮೂಲಗಳಿಂದ ಬರಬಹುದು, ಆದರೆ ಘನತೆಯಿಲ್ಲದೆ ಬದುಕು ಕೇಳಿಸದೇ ಇರುವಂತಹ ಶಬ್ದದಂತೆ ಎಂಬುದಷ್ಟೇ ಇಲ್ಲಿ ನಿಜವಾಗಿ ಮುಖ್ಯವಾಗುವುದು. ಘನತೆಗೆ ಧ್ವನಿಯಿದೆಯಾದ್ದರಿಂದ, ಅದು ಸ್ವಾಭಾವಿಕ ಮತ್ತು ಮಾನವೀಯವಾಗಿದೆಯಾದ್ದರಿಂದ ಅದು ಮಾತನಾಡುತ್ತದೆ. ಅದು ಚಿಂತನೆ ಮತ್ತು ಭಾವನೆಯ ಸಂಯೋಜನೆಯಾಗಿದೆ.

131. **ಮನೇಕಾ ಗಾಂಧಿ v. ಭಾರತ ಸರ್ಕಾರ ಮತ್ತು ಇನ್ನೊಬ್ಬರು ಪ್ರಕರಣದಲ್ಲಿ**[56] ನ್ಯಾ ಕೃಷ್ಣ ಅಯ್ಯರ್ ರವರು ಜೀವನವು ವ್ಯಕ್ತಿತ್ವದ ಗರಿಬಿಚ್ಚಲು ಇರುವ ಐಹಿಕ ಅವಕಾಶ ಮತ್ತು 21ನೇ ಕಲಮಿನ ಯಾವುದೇ ಅಂಶವನ್ನು ಮೊಟಕುಗೊಳಿಸಿ ಅರ್ಥೈಸಿಕೊಂಡು ನೋಡಿದಾಗ ಹಲವಾರು ಇತರ ಸ್ವಾತಂತ್ರ್ಯಗಳು ತಾನೇತಾನಾಗಿ ಅಳಿಸಿಹೋಗುತ್ತವೆ ಎಂದು ಹೇಳಿದರು. ಎಲ್ಲರ ಘನತೆಯು ಪವಿತ್ರವಾದ ಮಾನವ ಹಕ್ಕು ಮತ್ತು ಘನತೆಯಿಲ್ಲದಿದ್ದರೆ ಮಾನವ ಜೀವನವು ತನ್ನ ಘನವಾದ ಅರ್ಥವನ್ನು ಕಳೆದುಕೊಳ್ಳುತ್ತದೆ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು.

[56] (1978) 1 SCC 248

132. ಒಬ್ಬರಲ್ಲಿ ಘನತೆಯೆಂಬ ಅಂಶವು ಇಲ್ಲದಿದ್ದರೆ ಅವರ ಇರುವಿಕೆಯ ಸಂಪೂರ್ಣ ಪೋಷಣೆಯನ್ನು ಊಹಿಸಿಕೊಳ್ಳಲಾಗುವುದಿಲ್ಲ. ಜೀವನದ ರಂಗಭೂಮಿಯಲ್ಲಿ, ಘನತೆಯ ಅಸ್ಮಿತೆಯೆಂಬ ಗುಣಲಕ್ಷಣವಿಲ್ಲದಿದ್ದರೆ, ಅಂತಹ ಪಾತ್ರವನ್ನು ನಡುರಂಗಕ್ಕೆ ಪ್ರವೇಶಿಸಲು ಅನುಮತಿಸಬಹುದಾದರೂ ಅದು ಬೆನ್ನುಹುರಿಯಿಲ್ಲದ ವಸ್ತುವಿನ ಪಾತ್ರದಂತೆ ಪರಿಗಣಿಸಲ್ಪಡುತ್ತದೆ ಅಥವಾ ಹಾಗೆ ನೋಡಿದರೆ, ರಾಜದಂಡವಿಲ್ಲದ ಆಳುವ ರಾಜನಂತೆ ಬಿಂಬಿಸಲ್ಪಡುತ್ತದೆ. ಹೀಗೆ ಹೇಳುವ ಉದ್ದೇಶವೆಂದರೆ ಪ್ರತಿಯೊಬ್ಬ ವ್ಯಕ್ತಿಯ ಅಸ್ಮಿತೆಯು ಅವನು/ಅವಳಿಗೆ ಘನತೆಯಿದ್ದಾಗ ಮಾತ್ರ "ವೈಯಕ್ತಿಕ ಇರುವಿಕೆ"ಯ ಗುಣಮಟ್ಟವನ್ನು ಪಡೆಯುತ್ತದೆ. ಘನತೆಯು ಆಯ್ಕೆಯನ್ನು ವ್ಯಕ್ತಪಡಿಸುತ್ತದೆಯಾದರೂ ಅದು ಯಾವುದೇ ಬಗೆಯ ಘಾಸಿಯ ಸೃಷ್ಟಿಯನ್ನು ವಿರೋಧಿಸುತ್ತದೆ. ಜೈವಿಕ ಅಭಿವ್ಯಕ್ತಿಯು, ಅದು ನಿಲುವಾಗಿರಲೀ, ಅಥವಾ ಆಯ್ಕೆಯ ಐಚ್ಛಿಕ ಅಭಿವ್ಯಕ್ತಿಯಾಗಿರಲೀ, ಕಾನೂನಿನ ಯಾವುದೇ ಹೇರುವಿಕೆಯ ಸ್ವರೂಪದ ನಿರ್ಬಂಧವನ್ನು ಎದುರಿಸಿದಾಗ, ವ್ಯಕ್ತಿಯ ನೈಸರ್ಗಿಕ ಮತ್ತು ಸಾಂವಿಧಾನಿಕ ಹಕ್ಕು ಘಾಸಿಗೊಳಗಾಗುತ್ತದೆ. ಅಂತಹ ಪರಿಸ್ಥಿತಿಯು ಅಂತಿಮ ಸಾಂವಿಧಾನಿಕ ತೀರ್ಪುಗಾರನ ಮನಸ್ಸಾಕ್ಷಿಯನ್ನು ಅಡಚಣೆಯಲ್ಲಿ ಕೆಡವಲು ಮತ್ತು ವ್ಯಕ್ತಿಗಳ ನೈಸರ್ಗಿಕ ಮತ್ತು ಸಾಂವಿಧಾನಿಕ ಹಕ್ಕುಗಳ ಸಂಪೂರ್ಣ ಅರಳುವಿಕೆಗೆ ಅವಕಾಶ ಮಾಡಿಕೊಡಲು ತಡೆಯನ್ನು ತೆಗೆದುಹಾಕಲು ಪ್ರೇರೇಪಿಸುತ್ತದೆ. ಇದು ಘನತೆಯ ಮೂಲತತ್ವವಾಗಿದೆ ಮತ್ತು ನಾವು ಯಾವುದೇ ಬಗೆಯ ಮುಜುಗರವಿಲ್ಲದೇ, ವ್ಯಕ್ತಿಗೆ ತಾನು ಬಯಸಿದಂತೆ ವರ್ತಿಸಲು ಅನುಮತಿ ನೀಡುವುದು ಮತ್ತು ತನ್ನಿಷ್ಟದಂತೆ ತನ್ನನ್ನು ತಾನೇ ನಡೆಸಿಕೊಳ್ಳಲು ಬಿಡುವುದು ಮತ್ತು ಇತರರ ಒಪ್ಪಿಗೆಯೊಂದಿಗೆ ತನ್ನನ್ನು ತಾನೇ ವ್ಯಕ್ತಪಡಿಸಲು ಅನುವು ಮಾಡಿಕೊಡುವುದು ನಮ್ಮ ಸಾಂವಿಧಾನಿಕ ಕರ್ತವ್ಯ ಎಂದು ಹೇಳುತ್ತೇವೆ. ಅದುವೇ ಭಯವಿಲ್ಲದೆಯೇ ಆಯ್ಕೆ ಮಾಡುವ ಹಕ್ಕು. ಒಪ್ಪಿಗೆಯು ಯಾವುದೇ ಲೈಂಗಿಕ ಸಂಬಂಧದ ನೈಜವಾದ ಆಸರೆ ಎಂಬ ಸತ್ಯವನ್ನು ಮುಖ್ಯಾವಾದ ಅಗತ್ಯವೆಂದು ವ್ಯಕ್ತಿಗಳಲ್ಲಿ ಬಿತ್ತಬೇಕು..

133. ಈ ಸಂದರ್ಭದಲ್ಲಿ, ನಾವು ಕೊಂಚ ವಿದೇಶದೆಡೆಗೆ ಪ್ರಯಾಣಿಸಬಹುದು. **ಲಾ v ಕೆನಡಾ (ಉದ್ಯೋಗ ಮತ್ತು ವಲಸೆ ಸಚಿವ) ಪ್ರಕರಣದಲ್ಲಿ** [57] ಘನತೆಯ ಮೂಲಸತ್ವವನ್ನು ಸೆರೆಹಿಡಿದ, ಕೆನಡಾದ ಸರ್ವೋಚ್ಚ ನ್ಯಾಯಾಲಯವು ಈ ಕೆಳಗಿನಂತೆ ಗಮನಿಸಿತು: -

> "ಮಾನವ ಘನತೆ ಎಂದರೆ ಒಬ್ಬ ವ್ಯಕ್ತಿ ಅಥವಾ ಗುಂಪು ಸ್ವಾಭಿಮಾನ ಮತ್ತು ಆ ಸ್ವಾಭಿಮಾನವನ್ನು ಅನುಭವಿಸುವುದು. ಇದು ದೈಹಿಕ ಮತ್ತು ಮಾನಸಿಕ ಸಮಗ್ರತೆ ಮತ್ತು ಸಬಲೀಕರಣಕ್ಕೆ ಸಂಬಂಧಿಸಿದೆ. ವೈಯಕ್ತಿಕ ಲಕ್ಷಣಗಳು ಅಥವಾ ವೈಯಕ್ತಿಕ ಅಗತ್ಯಗಳು ಸಾಮರ್ಥ್ಯಗಳು, ಅಥವಾ ಅರ್ಹತೆಗಳಿಗೆ ಸಂಬಂಧಿಸದ ಪರಿಸ್ಥಿತಿಗಳನ್ನಾಧರಿಸಿದ ಅನ್ಯಾಯವಾದ ವರ್ತನೆಯಿಂದ ಮಾನವ ಘನತೆಗೆ ಹಾನಿಯಾಗುತ್ತದೆ. ಇದು ವಿವಿಧ ವ್ಯಕ್ತಿಗಳ ಅಗತ್ಯತೆಗಳು, ಸಾಮರ್ಥ್ಯಗಳು ಮತ್ತು ಅರ್ಹತೆಗಳಿಗೆ ಸೂಕ್ಷ್ಮವಾಗಿರುವ, ವ್ಯಕ್ತಿಗಳ ಭಿನ್ನತೆಗಳನ್ನು ಗಣನೆಗೆ ತೆಗೆದುಕೊಳ್ಳುವ ಕಾನೂನುಗಳಿಂದ ಹೆಚ್ಚಿಸಲ್ಪಡುತ್ತದೆ. ಅಲ್ಪಸಂಖ್ಯಾತ ವ್ಯಕ್ತಿಗಳು ಮತ್ತು ಗುಂಪುಗಳನ್ನು ಕಡೆಗಣಿಸಿದಾಗ, ನಿರ್ಲಕ್ಷಿಸಿದಾಗ ಅಥವಾ ಅಪಮೌಲ್ಯಗೊಳಿಸಿದಾಗ ಮಾನವ ಘನತೆಗೆ ಹಾನಿಯಾಗುತ್ತದೆ ಮತ್ತು ಕೆನೆಡಿಯನ್ ಸಮಾಜದೊಳಗೆ ಎಲ್ಲಾ ವ್ಯಕ್ತಿಗಳು ಮತ್ತು ಗುಂಪುಗಳ ಸಂಪೂರ್ಣ ಸ್ಥಾನವನ್ನು ಕಾನೂನುಗಳು ಗುರುತಿಸಿದಾಗ ವರ್ಧಿಸುತ್ತದೆ. "

[57] 1999 1 S.C.R. 497

134. ಘನತೆಯ ಈ ಮೂಲಭೂತ ಹಕ್ಕನ್ನು ರಕ್ಷಿಸುವುದು ಸರ್ಕಾರ ಮತ್ತು ನ್ಯಾಯಾಂಗಗಳ ಕರ್ತವ್ಯವಷ್ಟೇ ಅಲ್ಲ, ಬದಲಿಗೆ ಸಮುದಾಯವೂ ಪರಸ್ಪರರ ಘನತೆಯ ಗೌರವಿಸುವ ಜವಾಬ್ದಾರಿ ಹೊಂದಿದೆ, ಪರಸ್ಪರರ ಘನತೆಯನ್ನು ಗೌರವಿಸುವುದು ಸಾಂವಿಧಾನಿಕ ಕರ್ತವ್ಯ. ಇದು ಸಾಂವಿಧಾನಿಕ ಭ್ರಾತೃತ್ವದ ಅಂಶದ ಅಭಿವ್ಯಕ್ತಿಯಾಗಿದೆ.

135. ಪ್ರಸ್ತುತ ಸನ್ನಿವೇಶದಲ್ಲಿ ಘನತೆಯ ಪರಿಕಲ್ಪನೆಯ ಮಹತ್ವ ಪಡೆದುಕೊಳ್ಳುತ್ತದೆ, ನಮ್ಮ ಸಮಾಜದ ಅತ್ಯಂತ ವಂಚಿತ ವರ್ಗದ ಅವಶ್ಯಕ ಹಕ್ಕನ್ನು ಅತಿಕ್ರಮಿಸುವ ಕಾನೂನಿನ ನಿಬಂಧನೆಯೊಂದಕ್ಕೆ ಸವಾಲು ಹಾಕಲಾಗಿದೆ. ತಮ್ಮ ಖಾಸಗೀ ವಲಯದೊಳಗೆ ಕೆಲವು ಕ್ರಿಯೆಗಳಲ್ಲಿ ತೊಡಗಿಸಿಕೊಳ್ಳುವ ಒಬ್ಬ ವ್ಯಕ್ತಿಯ ಆಯ್ಕೆಯನ್ನು ಹಳೆಯ ಸಾಮಾಜಿಕ ಗ್ರಹಿಕೆಯ ದೆಸೆಯಿಂದ ಅಪರಾಧೀಕರಿಸಿ ನಿರ್ಬಂಧಿಸಲಾಗಿದೆ. ವ್ಯಕ್ತಿಯ ಪ್ರತ್ಯೇಕತೆಯನ್ನು ವ್ಯಾಖ್ಯಾನಿಸುವ ಅಂತಹ ಮಹತ್ವಪೂರ್ಣ ತೀರ್ಮಾನವನ್ನು, ಅಪರಾಧೀಕರಣದ ಮೂಲಕ ಅಂಕೆಗೊಳಪಡಿಸಿದಾಗ, ವ್ಯಕ್ತಿಯ ಘನತೆಯ ಹಕ್ಕಿನ ಉಲ್ಲಂಘನೆಯಾಗಿ ಅದು ಆತ್ಮವಿಲ್ಲದ ಪದಪುಂಜವಾಗಿ ಉಳಿಯುತ್ತದೆ.

136. ಲಿಂಗ ಬದಲಾವಣೆಗೆ ಒಳಗಾಗುವ ಅಥವಾ ಒಳಗಾಗ ಬಯಸುವ ವ್ಯಕ್ತಿಗಳ ಹಕ್ಕುಗಳ ವಿಚಾರದಲ್ಲಿ ***ಪಿ v. ಎಸ್*** [58] ***ಪ್ರಕರಣದಲ್ಲಿ*** ಯುರೋಪಿಯನ್ ಕೋರ್ಟ್ ಆಫ್ ಜಸ್ಟಿಸ್, ವ್ಯಕ್ತಿಯು ಲಿಂಗ ಪರಿವರ್ತನೆಗೆ ಓಳಗಾಗಿದ್ದಾರೆ ಅಥವಾ ಒಳಗಾಗಲು ಉದ್ದೇಶಿಸಿದ್ದಾರೆ ಎಂಬ ನೆಲೆಯಲ್ಲಿ ನೌಕರಿಯಿಂದ ವಜಾಗೊಳಿಸಿದರೆ, ಅವರನ್ನು, ತಾವು ಲಿಂಗ ಬದಲಾವಣೆಗೆ ಒಳಗಾಗುವುದಕ್ಕೆ ಮೊದಲು ಹೊಂದಿದ್ದ ಲಿಂಗದ ವ್ಯಕ್ತಿಗಳೊಂದಿಗೆ ಹೋಲಿಸಿ ಅವರನ್ನು ಅನುಚಿತವಾಗಿ ನಡೆಸಿಕೊಂಡಂತಾಗುತ್ತದೆ. ಅಂತಹ ವ್ಯಕ್ತಿಗಾದ ಇಂತಹ ತಾರತಮ್ಯವನ್ನು ಸಹಿಸಿಕೊಳ್ಳುವುದು, ಅವರಿಗೆ ದೊರಕಬೇಕಿರುವ, ನ್ಯಾಯಾಲಯದ ರಕ್ಷಣೆಯಿರುವ, ಘನತೆ ಮತ್ತು ಸ್ವಾತಂತ್ರ್ಯವನ್ನು, ಗೌರವಿಸಲು ವಿಫಲರಾದಂತೆ.

137. **ಪ್ಲ್ಯಾನ್ಡ್ ಪೇರೆನ್ಟ್ ಹುಡ್ ಆಫ್ ಸೌಥೀಸ್ಟರ್ನ್ ಪಿ.ಎ v. ಕ್ಯಾಸಿ** [59] ಪ್ರಕರಣದಲ್ಲಿ ಯುನೈಟೆಡ್ ಸ್ಟೇಟ್ಸ್ ನ ಸರ್ವೋಚ್ಚ ನ್ಯಾಯಾಲಯವು, ವ್ಯಕ್ತಿಯು ತನ್ನ ಜೀವಮಾನದಲ್ಲೊಮ್ಮೆ ಮಾಡುವ ಅತ್ಯಂತ, ವೈಯಕ್ತಿಕ ಘನತೆ

[58] Judgment of 30 April 1996. P v S and Cornwall County Council Case C-13/94. paras. 21-22.

[59] 505 U.S. 833 (1992)

ಮತ್ತು ಸ್ವಾಯುತ್ತತೆಗೆ ಮುಖ್ಯವಾಗಿರುವ ಆತ್ಮೀಯ ಮತ್ತು ವೈಯಕ್ತಿಕ ಆಯ್ಕೆಯನ್ನು ಒಳಗೊಂಡಿರುವ ವಿಷಯಗಳು ಹದಿನಾಲ್ಕನೇ ತಿದ್ದುಪಡಿಯಿಂದ ರಕ್ಷಿಸಲ್ಪಟ್ಟ ಸ್ವಾತಂತ್ರ್ಯದ ಕೇಂದ್ರವಾಗಿವೆ ಎಂದು ತೀರ್ಪಿತ್ತಿತು.

138. ವಿಭಿನ್ನ ಕ್ಷೇತ್ರಗಳಿಗೆ ಮತ್ತು ಕೆಲವೊಮ್ಮೆ ಲೈಂಗಿಕ ನಿಲುವಿಗೆ ಸಂಬಂಧಿಸಿದ ಮೇಲಿನ ನಿರ್ಧಾರಗಳ ಮೂಲಕ, ಸಂವಿಧಾನಾತ್ಮಕ ನ್ಯಾಯಾಲಯಗಳು ವೈಯಕ್ತಿಕ ಒಲವು, ಇತರರ ಒಪ್ಪಿಗೆಯಿರುವ ಭಾವನಾತ್ಮಕ ಮತ್ತು ದೈಹಿಕ ನಡವಳಿಕೆ ಮತ್ತು ಆಯ್ಕೆಯ ಸ್ವಾತಂತ್ರ್ಯದ ಅಭಿವ್ಯಕ್ತಿಗಳಿಗೆ ಮಹತ್ವ ನೀಡಿವೆ. ಒಂದು ರೆಸ್ಟಾರೆಂಟ್ಗೆ ಹೋಗುವ ಅಥವಾ ಚಲನಚಿತ್ರ ಅಥವಾ ನಾಟಕವನ್ನು ನೋಡಲು ರಂಗಮಂದಿರಕ್ಕೆ ಹೋಗುವುದಕ್ಕೆ ಹೋಲಿಸಿದರೆ, ಒಂದು ಜೈವಿಕ ಸಮನ್ವಯವು ಎರಡೂ ಪಕ್ಷಗಳು ಕ್ರಿಯೆಗೆ ಒಪ್ಪಿಗೆ ನೀಡಿರುವಂತಹ ಸಂಗತ್ಯವನ್ನು ಆಧರಿಸಿದೆ. ಒಲವು ಎಂಬುದು ವ್ಯಕ್ತಿತ್ವವನ್ನು ವ್ಯಾಖ್ಯಾನಿಸಿ ಆ ಮೂಲಕ ಘನತೆಯ ನೆಲೆಗಟ್ಟನ್ನು ನಿರ್ಮಿಸಲು ಅನುವಾಗುವ ಆಯ್ಕೆಯ ಅಭಿವ್ಯಕ್ತಿ. ಆಯ್ಕೆಯ ಅಂತಹ ಅಭಿವ್ಯಕ್ತಿಯು ಘನತೆಯ ಭಾಗವಷ್ಟೇ ಅಲ್ಲದೆ, ಸ್ವಾತಂತ್ರ್ಯದ ಅವಶ್ಯಕ ಅಂಶವೂ ಸಹ ಎಂಬುದನ್ನು ಸ್ಪಷ್ಟಪಡಿಸಬೇಕು. ಸ್ವಾತಂತ್ರ್ಯಕ್ಕೆ, ಒಂದು ಪರಿಕಲ್ಪನೆಯಾಗಿರುವ ಹಿನ್ನೆಲೆಯಲ್ಲಿ, ಘನತೆಯ ವಲಯದಲ್ಲಿ ಅದರ ಸರಿಯಾದ ಸ್ಥಾನವನ್ನು ನೀಡಬೇಕಾಗಿದೆ, ಏಕೆಂದರೆ ಘನತೆ ಮತ್ತು ಸ್ವಾತಂತ್ರ್ಯಗಳೆರಡೂ ವ್ಯಕ್ತಿಯ ಬದುಕು ಮತ್ತು ಬದುಕುವಿಕೆಗೆ ಸಂಬಂಧಿಸಿವೆ.

## K. ಲೈಂಗಿಕ ನಿಲುವು (Sexual Orientation)

139. ಘನತೆಯ ಮೌಲ್ಯದ ಬಗ್ಗೆ ತಿಳಿಸಿದ ನಂತರ, ನಾವು ***ಪುಟ್ಟಸ್ವಾಮಿ*** ಪ್ರಕರಣದಲ್ಲಿ ಇತ್ತೀಚೆಗೆ ಧೃಢವಾದ ಸ್ಪಷ್ಟತೆಯನ್ನು ಪಡೆದ ಖಾಸಗೀತನದ ಸಂಭ್ರಮಿಸಲ್ಪಟ್ಟಿರುವ ಪರಿಕಲ್ಪನೆಯನ್ನು ಪರಾಂಬರಿಸಲು ಮುಂದುವರಿಯುತ್ತಿದ್ದೆವು. ಆದರೆ, ನಮಗೆ ಲೈಂಗಿಕ ನಿಲುವಿಗೆ ಸ್ವಲ್ಪ ಸ್ಥಳವನ್ನು ವಿನಿಯೋಗಿಸಲು ಸಲಹೆ ದೊರೆಯಿತು ಮತ್ತು ಅದಕ್ಕಾಗಿ ಆಸ್ಟ್ರೇಲಿಯಾದ ಉಚ್ಚ ನ್ಯಾಯಾಲಯದ ಮಾಜಿ ನ್ಯಾಯಾಧೀಶ ಮೈಕೆಲ್ ಕಿರ್ಬಿ ಅವರ ಎಲ್.ಜಿ.ಬಿ,ಟೀ ಕುರಿತು ನೀಡಿದ ಬೋಧಪ್ರದ ವ್ಯಾಖ್ಯಾನವನ್ನು ಉದಾಹರಿಸುತಿದ್ದೇವೆ:-

ಸಮಲೈಂಗಿಕ: ಒಂದೇ ಲಿಂಗದ ವ್ಯಕ್ತಿಗಳೆಡೆಗೆ, ಲೈಂಗಿಕ, ಭಾವನಾತ್ಮಕ ಮತ್ತು ಸಂಬಂಧಗಳ ಸೆಳೆತವಿರುವ ಸ್ತ್ರೀ ಪುರುಷ ವ್ಯಕ್ತಿಗಳು.

ಉಭಯಲೈಂಗಿಕ: ಎರಡೂ ಲಿಂಗಗಳೆಡೆಗೆ ಆಕರ್ಷಿತರಾಗುವ ಮಹಿಳೆಯರು; ಎರಡೂ ಲಿಂಗಗಳೆಡೆಗೆ ಆಕರ್ಷಿತರಾಗುವ ಪುರುಷರು.

ಲೆಸ್ಬಿಯನ್: ಮಹಿಳೆಯರೆಡೆಗೆ ಆಕರ್ಷಿತರಾಗುವ ಮಹಿಳೆಯರು.

ಗೇ: ಪುರುಷರೆಡೆಗೆ ಆಕರ್ಷಿತರಾಗಿರುವ ಪುರುಷರು, ಆದಾಗ್ಯೂ ಈ ಪದವನ್ನು ಕೆಲವೊಮ್ಮೆ ಎಲ್ಲಾ ಸಮಲಿಂಗಾಸಕ್ತ ವ್ಯಕ್ತಿಗಳಿಗೂ ಬಳಸಲಾಗುತ್ತದೆ.

ಲೈಂಗಿಕ ಅಸ್ಮಿತೆ: ವ್ಯಕ್ತಿಯು ತಮ್ಮನ್ನು ಗಂಡು ಅಥವಾ ಹೆಣ್ಣು ಎಂದು ಗುರುತಿಸಿಕೊಳ್ಳುತ್ತಾರೆಯೇ ಎಂಬುದಕ್ಕೆ ಸಂಬಂಧಿಸಿದ, ಲೈಂಗಿಕ ನಿಲುವಿಗಿಂತ ಭಿನ್ನವಾಗಿರುವ ವಿದ್ಯಮಾನ. ವ್ಯಕ್ತಿಗಳ ಮಾನಸಿಕ ಮತ್ತು ದೈಹಿಕ ಅಥವಾ ಹುಟ್ಟಿನ ಲಿಂಗದ ನಡುವೆ ಅನುಸರಣೆ ಅಥವಾ ಅನನುಸರಣೆ ಇರುವ ಸಂದರ್ಭಗಳಲ್ಲಿ ಮತ್ತು ವ್ಯಕ್ತಿಯು ಅದನ್ನು ಬಹುತೇಕ ಲಕ್ಷಣಗಳು, ತೋರಿಕೆ ಮತ್ತು ನಡವಳಿಕೆಯ ಮೂಲಕ ವ್ಯಕ್ತಪಡಿಸುವ ಬಗೆಯಲ್ಲಿ ಕೂಡ ಲೈಂಗಿಕ ಅಸ್ಮಿತೆ ಕಾಣಿಸಿಕೊಳ್ಳುತ್ತದೆ. ಭಾರತ ಉಪಖಂಡದಲ್ಲಿ ವ್ಯಕ್ತಿಯು ಹಿಜ್ರಾ, ಕೋತಿ, ಅಥವಾ ಇತರ

ಹೆಸರಿನಿಂದ ಗುರುತಿಸಿಕೊಳ್ಳುತ್ತಾರೆಯೇ ಎಂಬುದಕ್ಕೂ ಅನ್ವಯಿಸುತ್ತದೆ.

ಬದಲಿ ಲಿಂಗೀಯ: ಗಂಡು ಹೆಣ್ಣೆಂಬ ಇಬ್ಬಗೆ ರೇಖೆಯ ಯಾವ ಬದಿಗೂ ಸ್ಪಷ್ಟವಾಗಿ ಸೇರದ ವರ್ಣತನ್ತು (ಕ್ರೋಮೋಸೋಮ್) ಗಳ ವಿನ್ಯಾಸದೊಂದಿಗೆ ಹುಟ್ಟಿರುವ ವ್ಯಕ್ತಿಗಳು

ಎಲ್.ಜಿ.ಬಿ.ಟಿ ಅಥವಾ ಎಲ್.ಜಿ.ಬಿ.ಟಿ.ಐ.ಕ್ಯೂ: ಸಮಲೈಂಗಿಕ ಸ್ತ್ರೀ, ಸಮಲೈಂಗಿಕ ಪುರುಷ, ಉಭಯಲಿಂಗಾಸಕ್ತ, ಲಿಂಗಪರಿವರ್ತಿತ ಮತ್ತು ಬದಲಿ ಲಿಂಗೀಯ ಮತ್ತು ಕ್ವೀರ್ ಅಲ್ಪಸಂಖಾತರು. ಸಾರ್ವತ್ರಿಕ ನೆಲೆಯಲ್ಲಿ ಯುವ ಜನರಿಂದ ಆಗಾಗ್ಗೆ ಬಳಸಪಡುವ ಕ್ವೀರ್ ಎಂಬ ಪದವು ಎಲ್ಲ ಲೈಂಗಿಕ ಅಲ್ಪಸಂಖ್ಯಾತರನ್ನು ಒಳಗೊಳ್ಳುತ್ತದೆ. ಈ ಅಭಿವ್ಯಕ್ತಿಯ ಅರಿವಿಲ್ಲದವರ ನಡುವೆ ಈ ಪದವು ಆತಂಕಕಾರಿಯಾಗಿ ಧ್ವನಿಸಬಹುದಾದ್ದರಿಂದ ನಾನು ಈ ಪದವನ್ನು ಬಳಸುವುದಿಲ್ಲ. ಆದಾಗ್ಯೂ ಈ ಪದದ ಬಳಕೆ ಹೆಚ್ಚಾಗುತ್ತಿದ್ದು, ಯುವ ಜನರು ಇದರ ಬಳಕೆಯನ್ನು ಆತಂಕಕಾರೀ ಪದವೊಂದರ ಭಯವನ್ನು ತೆಗೆಯಲು ಅದನ್ನೇ ಹೆಚ್ಚಾಗಿ ಬಳಸುವ ನಿದರ್ಶನದಂತೆ ಪರಿಗಣಿಸುತ್ತಿದ್ದಾರೆ.

ಎಂ.ಎಸ್.ಎಂ: ಪುರುಷರೊಂದಿಗೆ ಲೈಂಗಿಕ ಕ್ರಿಯೆ ನಡೆಸುವ ಪುರುಷರು. ಈ ಅಭಿವ್ಯಕ್ತಿಯು ಸಂಯುಕ್ತ ರಾಷ್ಟ್ರ ಒಕ್ಕೂಟದ

> ವಲಯಗಳಲ್ಲಿ ಸಾಮಾನ್ಯವಾದುದು. ಇದು ಸಂಪೂರ್ಣವಾಗಿ ಪುರುಷರು ಪುರುಷರೊಂದಿಗೆ ನಡೆಸುವ ದೈಹಿಕ, ಲೈಂಗಿಕ ಚಟುವಟಿಕೆಗೆ ಸಂಬಂಧಿಸಿದೆ. ಭಾರತದಂತಹ ಕೆಲ ದೇಶಗಳಲ್ಲಿ, ಕೆಲ ಪುರುಷರು ಸಮಲೈಂಗಿಕರೆಂದು ಗುರುತಿಸಿಕೊಳ್ಳದಿದ್ದರೂ ಮತ್ತು ಪುರುಷರೊಂದಿಗೆ ಪ್ರಣಯದ ಭಾವನೆ ಅಥವಾ ಸಂಬಂಧವನ್ನು ಬಯಸದಿದ್ದರೂ ತಮ್ಮದೇ ಲಿಂಗದ ವ್ಯಕ್ತಿಗಳೊಂದಿಗೆ ಲೈಂಗಿಕ ಕ್ರಿಯೆಗಳಲ್ಲಿ ತೊಡಗುವ ಹಿನ್ನೆಲೆಯಲ್ಲಿ ಈ ಅಭಿವ್ಯಕ್ತಿಯನ್ನು ಬಳಸಲಾಗುತ್ತದೆ[60].

140. ಈಗ ನಾವು ಲೈಂಗಿಕ ನಿಲುವಿನ ಅಂಶದೆಡೆಗೆ ಗಮನಹರಿಸೋಣ. ಪ್ರತಿ ಮನುಷ್ಯ ಜೀವಿಗೂ ಕೆಲ ಮೂಲಭೂತ ಜೈವಿಕ ಗುಣಲಕ್ಷಣಗಳಿದ್ದು ಅವು ಕೆಲ ಅಂಶಗಳನ್ನು ಕೆಲ ಸನ್ನಿವೇಶಗಳಲ್ಲಿ ಪಡೆದುಕೊಳ್ಳುತ್ತವೆ ಅಥವಾ ಬೆಳೆಸಿಕೊಳ್ಳುತ್ತವೆ. ಮೇಲಿನದ್ದರಲ್ಲಿ ಮೊದಲನೇ ಬಗೆಯದ್ದನ್ನು ಅವರ ಇರುವಿಕೆಗೆ ಸ್ವಾಭಾವಿಕವಾಗಿರುವ ಆಂತರಿಕ ನಿಲುವು ಎಂದು ಕರೆಯಬಹುದು. ಎರಡನೆಯದ್ದನ್ನು ಕಮೇಣ ಅವನ/ಅವಳ ಅಸ್ತಿತ್ವದ ಅವಿಭಾಜ್ಯ ಗುಣವಾಗಿಬಿಡುವ ಅವನ/ಅವಳ ಆಯ್ಕೆಯ ತೋರ್ಪಡಿಕೆ ಎಂದು ಕರೆಯಬಹುದು, ಏಕೆಂದರೆ ಅಂತಹ ಒಲವಿನ ದೆಸೆಯಿಂದ ವ್ಯಕ್ತಿಯು ತೃಪ್ತಿ ಪಡೆಯುವ ಸಲುವಾಗಿ ಭಿನ್ನವಾದ ಅಭಿವ್ಯಕ್ತಿಯೆಡೆಗೆ ಒಲವನ್ನು ತೋರಿಸುತ್ತಾರೆ. ಮೂರನೇ ಬಗೆಯದ್ದು ಅವನು/ಅವಳು ಹಾಗೇ ಉಳಿಸಿಕೊಳ್ಳುವ ಪ್ರವೃತ್ತಿ, ಇಲ್ಲಿ ವ್ಯಕ್ತಿಯು ಬೇರೆ ರೀತಿಯ ಇಚ್ಛೆಯನ್ನು ವ್ಯಕ್ತಪಡಿಸುವುದಿಲ್ಲ. ಮೊದಲನೆಯದ್ದು ಸಮಲೈಂಗಿಕತೆ, ಎರಡನೆಯದ್ದು ಉಭಯಲೈಂಗಿಕತೆ ಮತ್ತು ಮೂರನೆಯದ್ದು ಭಿನ್ನಲೈಂಗಿಕತೆ. ಮೂರನೆಯದ್ದನ್ನು ನಿಸರ್ಗಿಕವೆಂದು ಪರಿಗಣಿಸಲಾಗುತ್ತದೆ ಮತ್ತು ಮೊದಲನೆಯದ್ದನ್ನು, ಅದೇ ಮಾನದಂಡದ ಪ್ರಕಾರ ಅನ್ಯೆಸರ್ಗಿಕವೆಂದು ಪರಿಗಣಿಸಲಾಗುತ್ತದೆ. ಎರಡನೆಯ ವರ್ಗಕ್ಕೆ ಸೇರಿದ ವಕ್ತಿಯು ಅವನ/ಅವಳ ಸಮಲೈಂಗಿಕ ಆಯ್ಕೆಯನ್ನು

[60] Sexual Orientation & Gender Identity – A New Province of Law for India, J. Michael D. Kirby, Tagore Lectures, 2013

ಚಲಾಯಿಸಿ ಅಂತಹ ಕ್ರಿಯೆಯಲ್ಲಿ ತೊಡಗಿದಾಗ, ಅದನ್ನು ಒಪ್ಪಿಕೊಳ್ಳಲಾಗುವುದಿಲ್ಲ. ಒಟ್ಟಾರೆಯಾಗಿ ಸಾಮಾಜಿಕ ಗ್ರಹಿಕೆಯ ಆಧಾರದಲ್ಲಿ ನಿಸರ್ಗದ ನಿಯಮಕ್ಕೆ ವಿರುದ್ಧ ಅಥವಾ ಅದಕ್ಕೆ ಅನುಗುಣವಾಗಿವೆ ಎಂದು "ಕ್ರಿಯೆ" ಯನ್ನು ಪರಿಗಣಿಸಲಾಗುತ್ತದೆ.

141. ಯೋಗ್ಯಕಾರ್ತಾ ತತ್ವಗಳು "ಲೈಂಗಿಕ ನಿಲುವನ್ನು" ಹೀಗೆ ವ್ಯಾಖ್ಯಾನಿಸುತ್ತವೆ: -

> 'ಲೈಂಗಿಕ ನಿಲುವು' ಎಂಬುದನ್ನು, ಪ್ರತಿ ವ್ಯಕ್ತಿಯಲ್ಲಿರುವ, ಬೇರೆ ಲಿಂಗದ, ತಮ್ಮದೇ ಲಿಂಗದ ಅಥವಾ ಒಂದಕ್ಕಿಂತ ಹೆಚ್ಚು ಲಿಂಗದ ವ್ಯಕ್ತಿಗಳೆಡೆಗಿನ ಗಾಢವಾದ ಭಾವನಾತ್ಮಕ, ಆತ್ಮೀಯ ಮತ್ತು ಲೈಂಗಿಕವಾದ ಸೆಳೆತಕ್ಕೊಳಗಾಗುವ ಮತ್ತು ಅವರೊಂದಿಗೆ ಖಾಸಗೀ ಮತ್ತು ಲೈಂಗಿಕ ಸಂಬಂಧ ಬೆಳೆಸುವ ಸಾಮರ್ಥ್ಯ ಎಂದು ಅರ್ಥಮಡಿಕೊಳ್ಳಬಹುದು

142. ತನ್ನ ಅಧ್ಯಯನವೊಂದರಲ್ಲಿ ಅಮೇರಿಕನ್ ಸೈಕಲಾಜಿಕಲ್ ಅಸೋಸಿಯೇಷನ್ (ಅಮೆರಿಕನ್ ಮಾನಸಿಕ ಸಂಘ) ಲೈಂಗಿಕ ನಿಲುವನ್ನು ಈ ಕೆಳಗಿನ ರೀತಿಯಲ್ಲಿ ವ್ಯಾಖ್ಯಾನಿಸಲು ಪ್ರಯತ್ನಿಸಿದೆ:

> ಪುರುಷ ಅಥವಾ ಸ್ತ್ರೀ ಅಥವಾ ಎರಡು ಲಿಂಗಗಳೆಡೆಗಿನ ಭಾವನಾತ್ಮಕ ಮತ್ತು/ಅಥವಾ ಲೈಂಗಿಕ ಸೆಳೆತದ ದೀರ್ಘಕಾಲೀನ ಶೈಲಿಗೆ ಲೈಂಗಿಕ ನಿಲುವು ಎಂದು ಕರೆಯುತ್ತಾರೆ. ಅಂತಹ ಸೆಳೆತಗಳನ್ನು ಆಧರಿಸಿರುವ ವ್ಯಕ್ತಿಯ ಅಸ್ಮಿತೆಯ ಅರಿವು, ಅದಕ್ಕೆ ಸಂಬಂಧಿಸಿದ ನಡವಳಿಕೆ ಮತ್ತು ಅಂತಹವೇ ಸೆಳೆತೆಗಳಿರುವ ಇತರರ ಸಮುದಾಯವೊಂದರ ಸದಸ್ಯತ್ವವನ್ನು ಲೈಂಗಿಕ ನಿಲುವು ಎನ್ನಲಾಗುತ್ತದೆ. ದಶಕಗಳ ಕಾಲ ನಡೆದ ಸಂಶೋಧನೆಗಳು ತೋರ್ಪಡಿಸುವ ಪ್ರಕಾರ, ಭಿನ್ನ ಲಿಂಗಕ್ಕಷ್ಟೇ

ಮೀಸಲಾಗಿರುವ ಸೆಳೆತದಿಂದ ಹಿಡಿದು ಸಮಾನ ಲಿಂಗಕ್ಕಷ್ಟೇ ಮೀಸಲಾಗಿರುವ ಸೆಳೆತದವರೆಗಿನ ನಿರಂತರ ಶ್ರೇಣಿಯುದ್ದಕ್ಕೂ ಹರಡಿಕೊಂಡಿರುತ್ತದೆ[61].

143. ಮೇಲಿನ ವಿಚಾರಗಳ ಆಧಾರದಲ್ಲಿ, ಸಮಲೈಂಗೀಯತೆ ಅಸ್ಮಿತೆಯ ಅರಿವನ್ನು ಅವಲಂಬಿಸಿದೆ ಎಂಬುದನ್ನು ಮನಗಾಣಬೇಕಿದೆ. ಅದು ಉದ್ವೇಗದ ಭಾವನೆ ಮತ್ತು ಅನ್ಯೋನ್ಯತೆಯನ್ನು ಹೊಂದುವ ಕಾತರತೆಯ ಅಭಿವ್ಯಕ್ತಿಯ ಪ್ರತಿಬಿಂಬ. ಅದು ಭಿನ್ನಲಿಂಗಾಸಕ್ತಿಯಂತೆಯೇ ಆಳವಾದ, ಆಂತರಿಕವಾದ ಮತ್ತು ಸಹಜವಾದ ವಿಚಾರ. ಒಂದು ಪರಿಕಲ್ಪನೆಯಾಗಿ, ಲೈಂಗಿಕ ನಿಲುವು, ಮೂಲಭೂತವಾಗಿ ಲೈಂಗಿಕ ಸೆಳೆತದ ಶೈಲಿಯೊಂದನ್ನು ಸೂಚಿಸುತ್ತದೆ. ಇದು ಇತರ ಜೀವವಿಜ್ಞಾನದ ವಿದ್ಯಮಾನಗಳಷ್ಟೇ ನೈಸರ್ಗಿಕ ವಿದ್ಯಮಾನ. ವ್ಯಕ್ತಿಗೆ ತನ್ನದೇ ಲಿಂಗದೆಡೆಗೆ ಸೆಳೆತವನ್ನು ಅನುಭವಿಸುವ ಪ್ರವೃತ್ತಿಯನ್ನು ಹೊಂದಿರುತ್ತಾನೆ, ಏಕೆಂದರೆ ಆ ತೀರ್ಮಾನವು, ನರವೈಜ್ಞಾನಿಕ ಮತ್ತು ಜೀವವಿಜ್ಞಾನದ ಅಂಶಗಳ ನಿಯಂತ್ರಣದಲ್ಲಿದೆ ಎಂಬುದನ್ನು ಲೈಂಗಿಕತೆಯ ವಿಜ್ಞಾನ ನಮಗೆ ತಿಳಿಯಪಡಿಸುತ್ತದೆ. ಹೀಗಾಗಿಯೇ, ಅವನ/ಅವಳ ನೈಸರ್ಗಿಕ ನಿಲುವು ಅವನ/ಅವಳ ಅಸ್ಮಿತೆಯ ಮೂಲವಾಗಿದೆ. ಅದಲ್ಲದೆ, ಕೆಲ ಸಂದರ್ಭದಲ್ಲಿ, ಪರಸ್ಪರ ಭಾವೋದ್ರೇಕದ ಅಭಿವ್ಯಕ್ತಿಯ ದೆಸೆಯಿಂದ, ಇಬ್ಬರು ವಯಸ್ಕರು ತಮ್ಮನ್ನು ತಾವು, ಎರಡು ಲಿಂಗಗಳನ್ನು ಒಳಗೊಳ್ಳಬಹುದಾದ, ವಿಭಿನ್ನ ಲೈಂಗಿಕ ನಡವಳಿಕೆಯ ಮೂಲಕ ವ್ಯಕ್ತಪಡಿಸಿಕೊಳ್ಳಲು ಒಪ್ಪಬಹುದು. ಇದನ್ನು, ಕಠಿಣ ನಿಯಮಗಳನ್ನು ಅನುಸರಿಸದ, ಬದಲಿಗೆ ಹೊಂದಾಣಿಕೆಗೆ ಅವಕಾಶಮಾಡಿಕೊಡುವಂತಹ, ಉಭಯಲೈಂಗಿಕ ನಿಲುವು ಎನ್ನಬಹುದು.

144. ಜೈವಿಕ ಮತ್ತು ಮಾನಸಿಕ ವಿಜ್ಞಾನ ಕ್ಷೇತ್ರಗಳೆರಡರಲ್ಲೂ ನಡೆಸಲಾಗಿರುವ ಹಲವಾರು ಸಂಶೋಧನೆಗಳು ಪದೇ ಪದೇ ಸಾಬೀತುಪಡಿಸಿ ಪುನೂರುಚ್ಚರಿಸಿರುವ ಸಿಧ್ಧಾಂತದೆಡೆಗೆ ಸಮಾಜವು ಅಜ್ಞಾನದಿಂದಿರಬಾರದು. ನಿರ್ದಿಷ್ಟ ಲೈಂಗಿಕ ನಿಲುವನ್ನು ಹೊಂದಿರುವ ವ್ಯಕ್ತಿಯನ್ನು ಮತ್ತೊಂದು ನಿಲುವಿಗೆ ಬದಲಾವಣೆ ಹೊಂದುವಂತೆ ಒತ್ತಾಯಪಡಿಸುವುದು, ದೇಹದ ಆವಯವವೊಂದಕ್ಕೆ, ಅದನ್ನು ವಿನ್ಯಾಸಗೊಳಿಸಲಾಗಿರುವ

[61] American Psychological Association, "Answers to Your Questions for a Better Understanding of Sexual Orientation & Homosexuality," 2008

ಕಾರ್ಯವೊಂದನ್ನು ಬಿಟ್ಟು ಬೇರೊಂದು ಕಾರ್ಯ ಮಾಡುವಂತೆ ಹೇಳುವುದಕ್ಕೆ ಸಮ. ಒಬ್ಬ ವ್ಯಕ್ತಿಯ ಮೆದುಳು ಮತ್ತು ಜನನೇಂದ್ರಿಯಗಳು, ನಿರ್ದಿಷ್ಟ ರೀತಿಯಲ್ಲಿ ಕಾರ್ಯನಿರ್ವಹಿಸುವುದು ಮತ್ತು ಪ್ರತಿಕ್ರಿಯಿಸುವುದು ಶುದ್ಧವಾದ ವಿಜ್ಞಾನ. ಒಬ್ಬರ ಲೈಂಗಿಕ ನಿಲುವನ್ನು ಅನುವಂಶಿಕ, ಹಾರ್ಮೋನುಗಳಿಗೆ ಸಂಬಂಧಿಸಿದ, ಬೆಳವಣಿಗೆಗೆ ಸಂಬಂಧಿಸಿದ, ಸಾಮಾಜಿಕ ಮತ್ತು/ಅಥವಾ ಸಾಂಸ್ಕೃತಿಕ ಪ್ರಭಾವಗಳು (ಅಥವಾ ಅವುಗಳ ಒಟ್ಟುಗೂಡುವಿಕೆ) ನಿರ್ಧರಿಸುತ್ತವೆಯೇ ಎಂಬುದರ ಹೊರತಾಗಿ, ಬಹುಪಾಲು ವಕ್ತಿಗಳು ತಮ್ಮ ಲೈಂಗಿಕ ನಿಲುವಿನ ವಿಚಾರದಲ್ಲಿ ಅನುಭವಿಸುವ ಆಯ್ಕೆಯ ಭಾವನೆ ಬಹಳ ಕಡಿಮೆ ಅಥವಾ ಇಲ್ಲವೇ ಇಲ್ಲ.[62]

145. ಅಮೇರಿಕನ್ ಮನೋವೈಜ್ಞಾನಿಕ ಸಂಸ್ಥೆಯು ಜುಲೈ 1994ರಲ್ಲಿ ಬಿಡುಗಡೆಮಾಡಿದ ಹೇಳಿಕೆಯಲ್ಲೂ, ಈ ಅಭಿಪ್ರಾಯವನ್ನು ಈ ಕೆಳಗಿನ ವಿಚಾರಗಳ ಮೂಲಕ ಪುನರುಚ್ಚರಿಸಿತು:

> " ಸಮಲೈಂಗಿಕತೆಯ ಮೇಲಿನ ಸಂಶೋಧನೆಯು ಅತ್ಯಂತ ಸ್ಪಷ್ಟವಾಗಿದೆ. ಸಮಲೈಂಗಿಕತೆ ಮನೋರೋಗವೂ ಅಲ್ಲ, ನೈತಿಕ ಅಪ್ರಾಮಾಣಿಕತೆಯೂ ಅಲ್ಲ. ಅದು ಕೇವಲ ನಮ್ಮ ಜನಸಂಖ್ಯೆಯೊಳಗಿನ ಅಲ್ಪಸಂಖ್ಯಾತರು ಮನುಷ್ಯ ಪ್ರೀತಿ ಮತ್ತು ಲೈಂಗಿಕತೆಯನ್ನು ವ್ಯಕ್ತಪಡಿಸುವ ಬಗೆ. ಅಧ್ಯಯನಗಳು, ಒಂದರ ಹಿಂದೆ ಮತ್ತೊಂದರಂತೆ ಸಮಲೈಂಗಿಕ ಸ್ತ್ರೀ ಪುರುಷರ ಮಾನಸಿಕ ಆರೋಗ್ಯವನ್ನು ದಾಖಲಿಸಿವೆ. ನಿರ್ಧಾರ, ಸ್ಥಿರತೆ, ವಿಶ್ವಾಸಾರ್ಹತೆ ಮತ್ತು ಸಾಮಾಜಿಕ ಹಾಗೂ ಔದ್ಯೋಗಿಕ ಹೊಂದಿಕೊಳ್ಳುವಿಕೆಯ ಬಗೆಗಿನ ಅಧ್ಯಯನಗಳು, ಸಮಲೈಂಗಿಕ ಸ್ತ್ರೀ ಪುರುಷರು

[62] UNHCR GUIDELINES ON INTERNATIONAL PROTECTION NO. 9: Claims to Refugee Status based on Sexual Orientation and/or Gender Identity within the context of Article 1A(2) of the 1951 Convention and/or its 1967 Protocol relating to the Status of Refugees

ಭಿನ್ನಲಿಂಗಾಸಕ್ತಷ್ಟೇ ಚೆನ್ನೈ ಕಾರ್ಯನಿರ್ವಹಿಸುತ್ತಾರೆ ಎಂದು ತೋರಿಸಿಕೊಟ್ಟಿವೆ. ಸಮಲೈಂಗಿಕತೆ ವೈಯಕ್ತಿಕ ಆಯ್ಕೆಯ ವಿಚಾರವೂ ಅಲ್ಲ. ಸಂಶೋಧನೆಗಳು, ಸಮಲೈಂಗಿಕತೆಯು ಜೀವ ಚಕ್ರದ ಬಹು ಹಿಂದಿನ ಘಟ್ಟದಲ್ಲಿಯೇ, ಬಹುಶಃ ಹುಟ್ಟಿನ ಮುಂಚೆಯೇ ರೂಪುಗೊಳ್ಳುತ್ತದೆ ಎಂದು ಸೂಚಿಸುತ್ತವೆ.

ಅದು ಜನಸಂಖ್ಯೆಯ ಸುಮಾರು ಹತ್ತು ಶೇಕಡಾ ಜನರಲ್ಲಿ ಕಂಡು ಬರುತ್ತದೆ ಮತ್ತು ಈ ಪ್ರಮಾಣವು ಆಶ್ಚರ್ಯಕರವಾಗಿ, ಭಿನ್ನ ನೈತಿಕ ಮೌಲ್ಯಗಳು ಮತ್ತು ನಿರ್ಧಿಷ್ಟ ಸಾಂಸ್ಕೃತಿಕ ಮಾನದಂಡಗಳಿರುವ ಎಲ್ಲಾ ಸಂಸ್ಕೃತಿಗಳಲ್ಲಿ ಸಾಮಾನ್ಯವಾಗಿದೆ. ಕೆಲವರು ಅರ್ಥ ಮಾಡಿಕೊಂಡಿರುವುದಕ್ಕೆ ವಿಪರೀತವಾಗಿ, ಜನಸಂಖ್ಯೆಯಲ್ಲಿನ ಸಮಲೈಂಗಿಕತೆಯು, ಹೊಸ ನೈತಿಕ ಸಂಕೇತಗಳು ಮತ್ತು ಸಾಮಾಜಿಕ ಸಂವೇದನೆಗಳ ಆಗಮನದೊಂದಿಗೆ ಬದಲಾಗುವಂತೆ ಕಂಡು ಬರುವುದಿಲ್ಲ. ಸಂಶೋಧನಾ ಫಲಿತಾಂಶಗಳು, ಸಮಲೈಂಗಿಕರನ್ನು ಸರಿಪಡಿಸುವ ಪ್ರಯತ್ನಗಳು ಮನಃಶಾಸ್ತ್ರದ ಮಾರುವೇಷ ಧರಿಸಿರುವ ಸಾಮಾಜಿಕ ಪೂರ್ವಾಗ್ರಹಗಳಲ್ಲದೇ ಬೇರೇನಲ್ಲ ಎಂಬುನ್ನು ಸೂಚಿಸುತ್ತವೆ (ಒತ್ತು ನಮ್ಮದು)

146. ಈ ಸಂದರ್ಭದಲ್ಲಿ, ಲಿಯೊನಾರ್ಡ್ ಸ್ಯಾಕ್ಸ್ ರವರು ಮಾಡಿದ ಈ ಕೆಳಗಿನ ಅವಲೋಕನಗಳು ಸೂಕ್ತವಾಗಿವೆ:

> -ವೈಜ್ಞಾನಿಕವಾಗಿ, ಸಮಲೈಂಗಿಕ ಮತ್ತು ಭಿನ್ನಲಿಂಗಾಸಕ್ತ ಮನುಷ್ಯರ ನಡುವಿನ ವ್ಯತ್ಯಾಸವು ಎಡಗೈಯನ್ನು ಬಳಸುವ ವ್ಯಕ್ತಿ ಮತ್ತು ಬಲಗೈಯನ್ನು ಬಳಸುವ ವ್ಯಕ್ತಿಯ ನಡುವಿನ ವ್ಯತ್ಯಾಸವನ್ನು ಹೋಲುತ್ತದೆ. ಎಡಚರಾಗಿರುವುದು ಕೇವಲ ಒಂದು ಹಂತವಲ್ಲ. ಒಬ್ಬ ಎಡಚ ವ್ಯಕ್ತಿಯು ಒಂದು ದಿನ ಮಾಯಾಮಂತ್ರದಿಂದ ಬಲಗೈ ಬಳಸುವ ವ್ಯಕ್ತಿಯಾಗಿ ಮಾರ್ಪಡಾಗುವುದಿಲ್ಲ .... ಕೆಲ ಮಕ್ಕಳು ಹುಟ್ಟಿನಿಂದಲೇ, ಎಡಚರಾಗುವ ಭಾಗ್ಯ ಹೊಂದಿರುತ್ತಾರೆ, ಮತ್ತು ಕೆಲವು ಹುಡುಗರು ಸಮಲೈಂಗಿಕರಾಗಿ ಹುಟ್ಟಿ ಬೆಳೆಯುತ್ತಾರೆ.

147. **ಜೇಮ್ಸ್ ಈಗನ್ ಮತ್ತು ಜಾನ್ ನಾರ್ರಿಸ್ ನೆಸ್ಬಿಟ್ v. ಕೆನಡಾದ ಹಕ್ಕಿನ ಘನತೆವೆತ್ತ ಮಹಾರಾಣಿ**[63] ಪ್ರಕರಣದಲ್ಲಿ ಕೆನಡಾದ ಸರ್ವೋಚ್ಚ ನ್ಯಾಯಾಲಯವು, ಲೈಂಗಿಕ ನಿಲುವು 15(1)ನೇ ಪರಿಚ್ಛೇದದಡಿಯಲ್ಲಿ ಪ್ರಯೋಜನವನ್ನು ಪಡೆದುಕೊಳ್ಳುವ ಆಧಾರಗಳಲ್ಲೊಂದು, ಏಕೆಂದರೆ ಅದು 15(1)ನೇ ಪರಿಚ್ಛೇದದಲ್ಲಿ ನೀಡಲಾಗಿರುವ ಪಟ್ಟಿಯಲ್ಲಿ ನೀಡಲಾಗಿರುವ ಆಧಾರಗಳನ್ನು ಹೋಲುತ್ತದೆ ಸದರಿ ಪಟ್ಟಿಗೆ ಪರಿಮಿತಿಯಿಲ್ಲ ಮತ್ತು ಅದು ಸಮಗ್ರವಾಗಿರುವ ಕಾರಣ ಅದನ್ನು ಎಲ್.ಜಿ.ಬಿ.ಟಿ ಜನರಿಗೆ ಅವರು ಅನುಭವಿಸಿದ ಐತಿಹಾಸಿಕ, ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಅನನುಕೂಲತೆಯ ಹಿನ್ನೆಲೆಯಲ್ಲಿ ವಿಸ್ತರಿಸಬಹುದು, ಎಂದು ನಿರ್ಧರಿಸಿತು.

> "ಲೈಂಗಿಕ ದೃಷ್ಟಿಕೋನವು, ಆಳವಾದ ಖಾಸಗೀ ಗುಣಲಕ್ಷಣವಾಗಿರುವುದರಿಂದ ಅದು ಬದಲಾಗಬೇಕಿದ್ದರೆ, ಅಥವಾ ಬದಲಾಗಬಾರದೆಂದರೆ ಅದಕ್ಕೆ ಒಪ್ಪಲಾರದ ವೈಯಕ್ತಿಕ ಬೆಲೆ ತೆರಬೇಕಾಗುತ್ತದೆ, ಮತ್ತು ಹಾಗಾಗಿ ಅದು 15ನೇ ಪರಿಚ್ಛೇದದ ರಕ್ಷಣೆಯ ವಲಯಕ್ಕೆ, ಅದು

[63] 1995] 2 SCR 513

ಪಟ್ಟಿಮಾಡಲಾಗಿರುವ ಆಧಾರಗಳನ್ನು ಹೋಲುತ್ತದೆ ಎಂಬ

ಕಾರಣಕ್ಕೆ ಸೇರುತ್ತದೆ"

148. ವೈಜ್ಞಾನಿಕ ಅಧ್ಯಯನಗಳು, ತೀವ್ರ ವಿಶ್ಲೇಶಣೆಯ ಮೂಲಕ, ವ್ಯಕ್ತಿಯ ಅಂತರ್ಗತ ನಿಲುವಿನ ಬಗೆಗೆ ತೀರ್ಮಾನಕ್ಕೆ ಬಂದರು ಎಂಬುದು ಗಮನಿಸಬೇಕಾದ ವಿಚಾರ. ನಿಲುವನ್ನು ಹೊರತುಪಡಿಸಿ, ಈ ಮೊದಲೇ ಹೇಳಿದಂತೆ, ಒಬ್ಬ ವ್ಯಕ್ತಿಯ ಭಾವನಾತ್ಮಕ ನಡವಳಿಕೆಯ ಮೇಲೆ ಒಂದೇ ಲಿಂಗದವರಲ್ಲಿ ಅನ್ಯೋನ್ಯತೆಯನ್ನು ಬಯಸುವ ರೀತಿಯಲ್ಲಿ ಪ್ರಭಾವ ಬೀರಿ, ಇಬ್ಬರು ವ್ಯಕ್ತಿಗಳನ್ನು ಜೈವಿಕವಾಗಿ ಹತ್ತಿರ ತರಬಲ್ಲ ಸಂದರ್ಭಗಳು ಇರಬಹುದು. ಇದನ್ನು ಒಪ್ಪಿಗೆಯ ಲೈಂಗಿಕ ಚಟುವಟಿಕೆಯಂತೆ ಮತ್ತು ಒಪ್ಪಿಗೆಯ ಆಯ್ಕೆಯನ್ನು ಪ್ರತಿಬಿಂಬಿಸುವಂತೆಯೇ ನಡೆಸಿಕೊಳ್ಳಬೇಕು.

## L. ಖಾಸಗೀತನ ಮತ್ತು ಅದರ ಸಹಕಾರೀ ಅಂಶಗಳು

149. ಐ.ಪಿ.ಸಿ.ಯ 377 ಪರಿಚ್ಛೇದದ ಸಾಂವಿಧಾನಿಕ ಸಿಂಧುತ್ವವನ್ನು ಪರೀಕ್ಷಿಸುವಾಗ, **ಪುಟ್ಟಸ್ವಾಮಿ (ಮೇಲ್ಕಂಡ)** ಪ್ರಕರಣದಲ್ಲಿ ಇತ್ತೀಚೆಗೆ ಘೋಷಿಸಲ್ಪಟ್ಟಂತೆ, ಮಹೋನ್ನತವಾದ ಖಾಸಗೀತನದ ಹಕ್ಕಿಗೆ ಸೂಕ್ತವಾದ ಪ್ರಾಮುಖ್ಯ ನೀಡಬೇಕು. **ಪುಟ್ಟಸ್ವಾಮಿ (ಮೇಲ್ಕಂಡ)** ಪ್ರಕರಣದಲ್ಲಿ ಖಾಸಗೀತನದ ಹಕ್ಕನ್ನು ಬಹುವಾಗಿ ವಿವರಿಸಲಾಗಿದೆಯಾದ್ದರಿಂದ ನಾವು ಆ ತತ್ವದ ಕುರಿತು ವಿವರವಾದ ಚರ್ಚೆ ಮಾಡುವುದಿಲ್ಲ. ಈಗಿನ ಸಂದರ್ಭದಲ್ಲಿ, ನಮ್ಮ ಗಮನ, ಗೌಪ್ಯತೆಯ ಹಕ್ಕನ್ನು ಐ.ಪಿ.ಸಿ.ಯ 377ನೇ ಪರಿಚ್ಛೇದದ ಎದುರಿಟ್ಟು ಪರಿಶೀಲಿಸುವುದು ಮತ್ತು ಆಯ್ಕೆಯ ಹಕ್ಕನ್ನು ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಲೈಂಗಿಕ ನಿಲುವಿನ ಭಾಗದಂತೆ ಪರಾಂಬರಿಸುವುದೇ ಮೊದಲಾದ ವಿಚಾರಗಳಿಗೆ ಸೀಮಿತವಾಗಿರಬೇಕು. ಅದರ ಹೊರತಾಗಿ, ಗೌಪ್ಯತೆಯ ಕ್ಷೇತ್ರದಲ್ಲಿ ವೈಯಕ್ತಿಕ ಸ್ವಾಯತ್ತತೆಗೆ ಗಮನಾರ್ಹ ಸ್ಥಾನವಿದೆ. ಸ್ವಾಯತ್ತತೆ ವ್ಯಕ್ತಿವಾದಿಯಾಗಿದೆ. ಇದು ಸ್ವ-ನಿರ್ಧಾರದದ ಅಭಿವ್ಯಕ್ತಿಯಾಗಿದ್ದೂ ಅಂತಹ ಸ್ವಯಂ-ನಿರ್ಧಾರವು ಲೈಂಗಿಕ ನಿಲುವು ಮತ್ತು ಲೈಂಗಿಕ ಗುರುತಿನ ಘೋಷಣೆಯನ್ನು ಒಳಗೊಂಡಿದೆ. ಒಬ್ಬ ವ್ಯಕ್ತಿಯ ಸ್ವಾಯತ್ತತೆಯನ್ನು ಬಿಂಬಿಸುವ ಅಂತಹ ನಿಲುವು ಅಥವಾ ಆಯ್ಕೆಯು ಅವನ/ಅವಳಲ್ಲಿ ಸಹಜವಾಗಿ ಇರುತ್ತದೆ. ಇದು ಅವನ/ಅವಳ ಗುರುತಿನ ಅವಿಭಾಜ್ಯ ಅಂಗವಾಗಿದೆ. ಸಾಂವಿಧಾನಿಕ ವಿನ್ಯಾಸದಡಿಯಲ್ಲಿ ಅಂತಹ ಅಸ್ಮಿತೆಯು ಅದರ ಅಭಿವ್ಯಕ್ತಿಯು ಸಭ್ಯತೆ ಅಥವಾ

ನೈತಿಕತೆಯ ವಿರುದ್ಧವಾಗಿಲ್ಲದಿರುವವರೆಗೂ ಯಾವುದೇ ಬಗೆಯ ಹಸ್ತಕ್ಷೇಪವನ್ನು ಸಹಿಸುವುದಿಲ್ಲ. ಮತ್ತು ಸಂವಿಧಾನದ ಅಡಿಯಲ್ಲಿ ಹುಟ್ಟಿಕೊಂಡ ಈ ನೈತಿಕತೆಯು ಸಾಂವಿಧಾನಿಕ ನೈತಿಕತೆಯಾಗಿದೆ. ಸ್ವಾಯತ್ತತೆಯ ತತ್ವದ ಅಡಿಯಲ್ಲಿ, ವ್ಯಕ್ತಿಯು ಅವನ/ಅವಳ ದೇಹದ ಮೇಲೆ ಸಾರ್ವಭೌಮತ್ವವನ್ನು ಹೊಂದಿದ್ದಾನೆ. ಅವನು/ಅವಳು ಮತ್ತೊಬ್ಬರಿಗೆ ಅವನ/ಅವಳ ಸ್ವಾಯತ್ತತೆಯನ್ನು ಮನಃಪೂರ್ವಕವಾಗಿ ಸಮರ್ಪಿಸಬಹುದು ಮತ್ತು ಅವರ ಖಾಸಗೀಯಾದ ಅನ್ಯೋನ್ಯತೆಯು ಅವರ ಆಯ್ಕೆಯ ವಿಚಾರವಾಗಿದೆ. ಅಂತಹ ಗುರುತಿನ ಪರಿಕಲ್ಪನೆಯು ಕೇವಲ ಪವಿತ್ರವಷ್ಟೇ ಅಲ್ಲದೇ ಅದು ವ್ಯಕ್ತಿಯ ಸ್ವಭಾವದಲ್ಲಿನ ಮಾನವೀಯತೆಯ ಸರ್ವೋತ್ಕೃಷ್ಟವಾದ ಭಾಗವನ್ನು ಗುರುತಿಸುತ್ತದೆ. ಸ್ವಾಯತ್ತತೆಯು ಗುರುತನ್ನು ಸ್ಥಾಪಿಸುತ್ತದೆ ಮತ್ತು ಆ ಗುರುತು, ಅಂತಿಮವಾಗಿ, ವ್ಯಕ್ತಿಯ ಘನತೆಯ ಭಾಗವೇ ಆಗುತ್ತದೆ. ಸಾಂವಿಧಾನಿಕ ನಿಯಮಗಳ ಪ್ರಕಾರ ಅವನ/ಅವಳ ಜೀವನವನ್ನು ಆನಂದಿಸುವ ಹಕ್ಕನ್ನು ಹೊಂದಿರುವ ಪುರುಷ/ಮಹಿಳೆಯ ಪಾಲಿಗೆ ಈ ಘನತೆ ವಿಶೇಷವಾದುದು ಮತ್ತು ಅದನ್ನು ನಾಯಿಕೊಡೆಯಂತೆ ನಾಶವಾಗಲು ಬಿಡಬಾರದು. ಇದು ಪರಿಕಲ್ಪನಾತ್ಮಕ ಸ್ಥೂಲರೂಪದಿಂದ, ಗ್ರಹಿಸಬಲ್ಲ ಸೂಕ್ಷ್ಮರೂಪದ ದಿಕ್ಕಿನೆಡೆಗಿನ ಪಲ್ಲಟ. ಅಂತಹ ಸಂಸ್ಕೃತಿ ಬೆಳೆಯುವಾಗ, ಹೆಚ್ಚು ಒಳಗೊಳ್ಳುವಿಕೆಯ ಮತ್ತು ಸಮಾನತಾವಾದಿ ಸಮಾಜದೆಡೆಗೆ ಒಂದು ದೃಢವಾದ ಹೆಜ್ಜೆಯಿಡಲಾಗುತ್ತದೆ. ಅದನ್ನು ಒಪ್ಪದಿರುವುದು ಜನರಿಗೆ ಮಾನವ ಹಕ್ಕುಗಳನ್ನು ನಿರಾಕರಿಸುವುದಕ್ಕೆ ಸಮಾನ ಮತ್ತು ನೆಲ್ಸನ್ ಮಂಡೇಲಾ ಹೇಳಿದ - "ಜನರಿಗೆ ಅವರ ಮಾನವ ಹಕ್ಕುಗಳನ್ನು ನಿರಾಕರಿಸುವುದು ಅವರ ಮಾನವೀಯತೆಗೆ ಸವಾಲು ಹಾಕಿದಂತೆ" ಎಂಬ ಮಾತನ್ನು ಅಲಕ್ಷ್ಯ ಮಾಡುವಂತಿಲ್ಲ.

150. ಯುನಿವರ್ಸಲ್ ಡಿಕ್ಲರೇಷನ್ ಆಫ್ ಹ್ಯೂಮನ್ ರೈಟ್ಸ್ (ಮಾನವಾಧಿಕಾರದ ಜಾಗತಿಕ ಘೋಷಣೆ) (1948)ನ 12ನೇ ಕಲಮು, ಖಾಸಗೀತನವನ್ನು ಉಲ್ಲೇಖಿಸುತ್ತಾ ಹೀಗೆಂದಿತು:-

> "ಯಾವುದೇ ವ್ಯಕ್ತಿಯನ್ನು ಅವರ ಖಾಸಗೀತನ, ಕುಟುಂಬ, ಮನೆ ಅಥವಾ ಪತ್ರ ವ್ಯವಹಾರಗಳ ವಿಚಾರದಲ್ಲಿ ನಿರಂಕುಶ ಹಸ್ತಕ್ಷೇಪಕ್ಕೆ ಒಳಪಡಿಸಬಾರದು ಅಥವಾ ಅವರ ಗೌರವ ಮತ್ತು ಖ್ಯಾತಿಯನ್ನು ದಾಳಿಗೀಡು ಮಾಡಬಾರದು. ಅಂತಹ

ಹಸ್ತಕ್ಷೇಪ ಅಥವಾ ದಾಳಿಯ ವಿರುದ್ಧ ಪ್ರತಿಯೊಬ್ಬರಿಗೂ ಕಾನೂನಿನ ರಕ್ಷಣೆಯ ಹಕ್ಕಿದೆ."

151. ಅಂತೆಯೇ, ಭಾರತವು ಬದ್ಧವಾಗಿದ್ದ ನಾಗರಿಕ ಮತ್ತು ರಾಜಕೀಯ ಹಕ್ಕುಗಳ ಅಂತರಾಷ್ಟ್ರೀಯ ಒಪ್ಪಂದದ 17ನೇ ಕಲಮು, ಖಾಸಗೀತನದ ಬಗೆಗೆ ಹೀಗೆ ಮಾತಾಡುತ್ತದೆ: -

"ತಮ್ಮ ಖಾಸಗೀತನ, ಕುಟುಂಬ, ಮನೆ ಮತ್ತು ಪತ್ರ ವ್ಯವಹಾರದ ವಿಚಾರದಲಿ ಯಾರೂ ಅನಿಯಂತ್ರಿತ ಅಥವಾ ಕಾನೂನು ಬಾಹಿರ ಹಸ್ತಕ್ಷೇಪಕ್ಕೆ ಒಳಗಾಗಬರದು, ಅಥವಾ ಅವರ ಗೌರವ ಮತ್ತು ಖ್ಯಾತಿಯನ್ನು ಕಾನೂನುಬಾಹಿರ ದಾಳಿಗೀಡಾಗಿಸಬಾರದು"

152. ಅಂತೆಯೇ, ಮಾನವ ಹಕ್ಕುಗಳ ಕುರಿತಾದ ಐರೋಪ್ಯ ಒಡಂಬಡಿಕೆಯು ಖಾಸಗೀತನದ ಹಕ್ಕನ್ನು ರಕ್ಷಿಸಲು ಪ್ರಯತ್ನಿಸುತ್ತದೆ: -

1. ಪ್ರತಿಯೊಬ್ಬರಿಗೂ ತಮ್ಮ ಖಾಸಗೀ ಮತ್ತು ಕೌಟುಂಬಿಕ ಜೀವನ, ತಮ್ಮ ಮನೆ ಮತ್ತು ತಮ್ಮ ಪತ್ರವ್ಯವಹಾರಗಳ ವಿಚಾರದಲ್ಲಿ ಗೌರವದ ಹಕ್ಕಿದೆ.

2. ಕಾನೂನಿನ ಅಗತ್ಯಗಳಿಗೆ ಅನುಗುಣವಾಗಿರುವ ಮತ್ತು ಪ್ರಜಾಪ್ರಭುತ್ವದ ಸಮಾಜಕ್ಕೆ ಅಗತ್ಯವಾಗಿರುವ ರಾಷ್ಟ್ರೀಯ ಭದ್ರತೆ, ಸಾರ್ವಜನಿಕ ಸುರಕ್ಷತೆ ಅಥವಾ ದೇಶದ ಆರ್ಥಿಕ ಯೋಗಕ್ಷೇಮ, ಆರೋಗ್ಯ ಅಥವಾ ನೈತಿಕತೆಯ ರಕ್ಷಣೆ, ಇತರರ ಹಕ್ಕುಗಳು ಮತ್ತು ಸ್ವಾತಂತ್ರ್ಯಗಳ ರಕ್ಷಣೆಗೆ ಸಂಬಂಧಿಸಿದ ಸಂದರ್ಭಗಳನ್ನು ಹೊರತುಪಡಿಸಿ,

ಸಾರ್ವಜನಿಕ ಪ್ರಾಧಿಕಾರದ ಕಡೆಯಿಂದ ಯಾವುದೇ ಬಗೆಯ ಮಧ್ಯಪ್ರವೇಶವಿರಬಾರದು. "

153. **ಡಡ್ಜಿಯಾನ್ v. ಯುನೈಟೆಡ್ ಕಿಂಗ್ಡಮ್** [64] ಪ್ರಕರಣದಲ್ಲಿ ಖಾಸಗೀತನವನ್ನು ಕೆಳಕಂಡಂತೆ ವ್ಯಾಖ್ಯಾನಿಸಲಾಗಿದೆ:-

> "ಖಾಸಗೀತನದ ಅತ್ಯುತ್ತಮ ಮತ್ತು ಅತ್ಯಂತ ಸಂಕ್ಷಿಪ್ತ ಕಾನೂನಾತ್ಮಕ ವ್ಯಾಖ್ಯಾನವನ್ನು ವಾರೆನ್ ಮತ್ತು ಬ್ರ್ಯಾಂಡಿಸ್ ನೀಡಿದ್ದಾರೆ - ಅದು "ಒಂಟಿಯಾಗಿರುವ ಹಕ್ಕು"

154. **ಆರ್ ರಾಜಗೋಪಾಲ್ v. ತಮಿಳುನಾಡು ರಾಜ್ಯ ಮತ್ತು ಇತರರು**[65] ಪ್ರಕರಣದಲ್ಲಿ ಖಾಸಗೀತನದ ಹಕ್ಕಿನ ಪರಿಕಲ್ಪನೆಯನ್ನು ಚರ್ಚಿಸುವಾಗ, ಈ ದೇಶದ ನಾಗರಿಕರಿಗೆ 21ನೇ ಕಲಮಿನಡಿಯಲ್ಲಿ ಖಾತ್ರಿಪಡಿಸಲಾಗಿರುವ ಬದುಕಿನ ಮತ್ತು ಘನತೆಯ ಹಕ್ಕಿನಲ್ಲಿ ಖಾಸಗೀತನದ ಹಕ್ಕು ಸಹಜವಾಗಿ ಅಡಕವಾಗಿದೆ ಮತ್ತು ಅದು ಒಬ್ಬಂಟಿಯಾಗಿ ಬಿಡಲ್ಪಡುವ ಹಕ್ಕು, ಏಕೆಂದರೆ ಪ್ರಜೆಯೊಬ್ಬನಿಗೆ, ಇತರ ವಿಚಾರಗಳ ಜತೆಗೆ, ಅವನ/ಅವಳ, ಅವನ/ಅವಳ ಕುಟುಂಬ, ಮದುವೆ, ಸಂತಾನೋತ್ಪತ್ತಿ, ತಾಯ್ತನ, ಮಗುವಾಗುವಿಕೆ ಮತ್ತು ಶಿಕ್ಷಣದ ಖಾಸಗೀತನವನ್ನು ಕಾಪಾಡುವ ಹಕ್ಕಿರುತ್ತದೆ ಎಂದು ಗಮನಿಸಲಾಗಿದೆ.

155. ಮೇಲಿನ ಅಧಿಕೃತ ನಿರ್ಧಾರಗಳು ಖಾಸಗೀತನದ ಹಕ್ಕಿನ ಸಾರವನ್ನು ಸೆರೆಹಿಡಿಯುತ್ತವೆ. ಸಂವಿಧಾನದ 21ನೇ ಕಲಮಿನಡಿಯಲ್ಲಿ ಒಬ್ಬ ವ್ಯಕ್ತಿಯು ಸಹ ಸಮಾಗಮದ ಹಕ್ಕನ್ನು ಹೊಂದಿದ್ದಾನೆ ಎಂಬುದರಲ್ಲಿ ಸಂದೇಹವಿಲ್ಲ. ನಾವು ಸಮಾಗಮವೆಂದು ಹೇಳಿದಾಗ, ವಿವಾಹವೆಂಬುದು ಸಮಾಗಮವೇ ಆಗಿದ್ದರೂ, ಅದಕ್ಕೆ ಮದುವೆಯೆಂದೂ ಅರ್ಥವಲ್ಲ. ಒಂದು ಪರಿಕಲ್ಪನೆಯಾಗಿ, ಸಮಾಗಮ ಎಂಬ ಪದವು, ಎಲ್ಲ ರೀತಿಯಲ್ಲೂ, ಒಡನಾಟ ಎಂಬ ಅರ್ಥವನ್ನು ನೀಡುತ್ತದೆ, ಆದು ದೈಹಿಕ, ಮಾನಸಿಕ, ಲೈಂಗಿಕ ಅಥವಾ ಭಾವನಾತ್ಮಕ ಯಾವುದೇ ಬಗೆಯದ್ದಾಗಿರಬಹುದು. ಎಲ್.ಜಿ.ಬಿ.ಟಿ ಸಮುದಾಯವು, ಒಪ್ಪಿಗೆಯ ಮತ್ತು ಮೋಸ, ಬಲವಂತ,

---

[64] [1981] 4 EHRR 149

[65] (1994) 6 SCC 632

ದಬ್ಬಾಳಿಕೆಗಳೆಂಬ ದುರ್ಗುಣಗಳಿಂದ ಮುಕ್ತವಾದ ಹಾಗೂ ಇತರರ ಮೂಲಭೂತ ಹಕ್ಕುಗಳ ಉಲ್ಲಂಘನೆಗೆ ಕಾರಣವಾಗದ ಸಾಂಗತ್ಯದ ತನ್ನ ಮೂಲಭೂತ ಹಕ್ಕನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಿದೆ, .

156. ನ್ಯಾಯಮೂರ್ತಿ ಬ್ಲ್ಯಾಕ್ಮನ್, **ಬೋವರ್ಸ್, ಜಾರ್ಜಿಯಾಡಾ ಅಟಾರ್ನಿ ಜನರಲ್ v. ಹಾರ್ಡ್ವಿಕ್ ಮತ್ತಿತರರು**[66], ಪ್ರಕರಣದ ತನ್ನ ಹುರುಪಿನ ಭಿನ್ನನಿಲುವಿನ ತೀರ್ಪಿನಲ್ಲಿ ಒಬ್ಬಂಟಿಯಾಗಿ ಬಿಡಲ್ಪಡುವ ಹಕ್ಕಿನ ವಿಚಾರದಲ್ಲಿ **ಪ್ಯಾರಿಸ್ ಅಡಲ್ಟ್ ಥಿಯೇಟರ್ v. ಸ್ಲೇಟನ್**[67] ಪ್ರಕರಣವನ್ನು ಉಲ್ಲೇಖಿಸಿದರು. ಈ ಸಂಧರ್ಭದಲ್ಲಿ ಅವರು, ಅತ್ಯಂತ ಉದ್ದೇಶಪೂರ್ವಕ ಕುರುಡು ಮಾತ್ರ, ಲೈಂಗಿಕ ಅನ್ಯೋನ್ಯತೆಯು ಕುಟುಂಬ ಜೀವನ, ಸಮುದಾಯದ ಕ್ಷೇಮ ಮತ್ತು ಮಾನವ ಅಸ್ತಿತ್ವದ ಬೆಳವಣಿಗೆಯ ಕೇಂದ್ರವಾಗಿರುವ, ಮಾನವ ಅಸ್ತಿತ್ವದ ಸೂಕ್ಷ್ಮವಾದ, ಪ್ರಮುಖ ಸಂಬಂಧ ಎಂಬ ಸತ್ಯವನ್ನು ಮರೆಮಾಚಲು ಸಾಧ್ಯ ಎಂದು ಗಮಾನಿಸಿದರು. ನ್ಯಾಯಮೂರ್ತಿ ಬ್ಲ್ಯಾಕ್ಮನ್ ಮುಂದುವರೆಯುತ್ತಾ ಈ ಕೆಳಗಿನಂತೆ ಗಮನಿಸಿದರು:

> ವ್ಯಕ್ತಿಗಳು ತಮ್ಮ ಖಾಸಗೀ ಲೈಂಗಿಕ ಸಂಬಂಧಗಳ ಮೂಲಕ ತಮ್ಮನ್ನು ಗಮನಾರ್ಹ ರೀತಿಯಲ್ಲಿ ವ್ಯಾಖ್ಯಾನಿಸಿಕೊಳ್ಳುತ್ತಾರೆ ಎಂಬ ಅಂಶವು, ನಮ್ಮ ದೇಶದಷ್ಟು ವಿಭಿನ್ನವಾಗಿರುವ ರಾಷ್ಟ್ರದಲ್ಲಿ, ಆ ಸಂಬಂಧಗಳನ್ನು ನಡೆಸುವ ಹಲವು "ಸರಿಯಾದ" ವಿಧಾನಗಳು ಇರಬಹುದು ಎಂಬುದನ್ನು ಸೂಚಿಸುತ್ತದೆ, ಮತ್ತು ಸಂಬಂಧಗಳ ಬಹುಪಾಲು ಶ್ರೀಮಂತಿಕೆಯು, ಆ ತೀವ್ರವಾದ ವೈಯಕ್ತಿಕ ಬೆಸುಗೆಗಳ ರೂಪ ಮತ್ತು ಸ್ವಭಾವವನ್ನು ಆರಿಸಿಕೊಳ್ಳಲು ವ್ಯಕ್ತಿಗಿರುವ ಸ್ವಾತಂತ್ರ್ಯದಿಂದ ಬರುತ್ತದೆ…… ವಿಭಿನ್ನ ಸಂದರ್ಭಗಳಲ್ಲಿ,

---

[66] Bowers v. Hardwick, 478 U.S. 186 (1986)

[67] 413 U.S. 49 (1973)

ವ್ಯಕ್ತಿಗಳಿಗೆ ತಮ್ಮ ಜೀವನವನ್ನು ಹೇಗೆ ನಡೆಸಬೇಕು ಎಂಬುದನ್ನು ಆಯ್ಕೆ ಮಾಡಲು ಬೇಕಾದ ಹಕ್ಕನ್ನು ನೀಡುವುದು, ಸಹಜವಾಗಿ, ವಿವಿಧ ವ್ಯಕ್ತಿಗಳು ವಿಭಿನ್ನ ಆಯ್ಕೆಗಳನ್ನು ಮಾಡುತ್ತಾರೆ ಎಂಬ ಸತ್ಯವನ್ನು ಒಪ್ಪಿಕೊಳ್ಳುವುದಕ್ಕೆ ಸಮ ಎಂಬುದನ್ನು ನಾವು ಗುರುತಿಸಿದ್ದೇವೆ.

157. **ಎ.ಆರ್ ಕೊರೀಎಲ್ ಮತ್ತು ಎಂ.ಎ.ಆರ್ ಔರಿಕ್ v. ನೆದರ್ಲೆಂಡ್ಸ್**[68] ಪ್ರಕರಣದಲ್ಲಿ, ಮಾನವ ಹಕ್ಕುಗಳ ಸಮಿತಿಯು ಖಾಸಗೀತನದ ಕಲ್ಪನೆಯು, ತನ್ನ ಅಸ್ಮಿತೆಯನ್ನು, ಇತರರೊಂದಿಗೆ ಸಂಬಂಧಗಳನ್ನು ಬೆಳೆಸುವ ಮೂಲಕ ಅಥವಾ ಒಬ್ಬರೇ, ಮುಕ್ತವಾಗಿ ವ್ಯಕ್ತಪಡಿಸಲು ಸಾಧ್ಯವಾಗುವ ವ್ಯಕ್ತಿಯ ಬದುಕಿನ ವಲಯಕ್ಕೆ ಸಂಬಧಿಸಿದ್ದು ಎಂಬುದನ್ನು ಮನಗಂಡಿತು. ವ್ಯಕ್ತಿಯ ಮನೆಹೆಸರು ಅವರ ಗುರುತಿನ ಒಂದು ಪ್ರಮುಖ ಅಂಗವಾಗಿದೆ ಮತ್ತು ವ್ಯಕ್ತಿಯ ಖಾಸಗೀತನದಲ್ಲಿ ನಿರಂಕುಶ ಅಥವಾ ಕಾನೂನುಬಾಹಿರ ಹಸ್ತಕ್ಷೇಪದ ವಿರುದ್ಧದ ರಕ್ಷಣೆಯು ವ್ಯಕ್ತಿಯ ತನ್ನ ಹೆಸರನ್ನು ಆಯ್ಕೆಮಾಡುವ ಮತ್ತು ಬದಲಿಸುವ ಹಕ್ಕಿನಲ್ಲಿ ನಿರಂಕುಶ ಅಥವಾ ಕಾನೂನುಬಾಹಿರ ಹಸ್ತಕ್ಷೇಪದ ವಿರುದ್ಧದ ರಕ್ಷಣೆಯನ್ನು ಒಳಗೊಂಡಿದೆ ಎಂದು ಸಮಿತಿಯು ಅಭಿಪ್ರಾಯಪಟ್ಟಿತು.

158. **ಟ್ಯೂನೆನ್ v. ಆಸ್ಟ್ರೇಲಿಯಾ**[69] ಪ್ರಕರಣದಲ್ಲಿ ಮಾನವ ಹಕ್ಕುಗಳ ಸಮಿತಿ ವ್ಯಾತಪಡಿಸಿದ ಅಭಿಪ್ರಾಯಗಳನ್ನು ನಾವಿಲ್ಲಿ ಉಲ್ಲೇಖಿಸಬಹುದು. ಸದರಿ ಪ್ರಕರಣದಲ್ಲಿ ನಿರಂಕುಶತ್ವ ಎಂಬ ತತ್ವವನ್ನು ಪರಿಚಯಿಸುವುದರ ಹಿಂದೆ, ಕಾನೂನಾತ್ಮಕವಾದ ಪ್ರತಿಯೊಂದು ಹಸ್ತಕ್ಷೇಪವು ಒಡಂಬಡಿಕೆಯ ನಿಬಂಧನೆಗಳು, ಗುರಿಗಳು ಮತ್ತು ಉದ್ದೇಶಗಳಿಗೆ ಅನುಗುಣವಾಗಿದೆ ಮತ್ತು ಯಾವುದೇ ಸಂದರ್ಭದಲ್ಲಿ, ಆ ಸನ್ನಿವೇಶಕ್ಕೆ ಸೂಕ್ತವಾಗಿದೆ ಎಂಬುದನ್ನು ಖಾತ್ರಿಪಡಿಸಿಕೊಳ್ಳುವ ಉದ್ದೇಶವಿದೆ ಎಂದು ಸಮಿತಿ ನುಡಿಯಿತು. ಖಾಸಗೀತನದೊಳಗಿನ

[68] Communication No. 453/1991, para. 10.2

[69] Communication No. 488/1992, U.C. Doc CCPR/C/ 50/D 488/ 1992, March 31, 1994, para. 8.3

ಹಸ್ತಕ್ಷೇಪವು ಅದು ಸಾಧಿಸಬಯಸುವ ಧ್ಯೇಯದೊಂದಿಗೆ ತಾಳಮೇಳ ಹೊಂದಿರಬೇಕು ಎಂಬುದನ್ನು ಸೂಕ್ತತೆ ಅಪೇಕ್ಷಿಸುತ್ತದೆ.

159. **ನ್ಯಾಷನಲ್ ಕೊಯಲಿಶನ್ ಫಾರ್ ಗೇ ಅನ್ಡ್ ಲೆಸ್ಬಿಯನ್ ಎಕ್ವಾಲಿಟಿ ಮತ್ತೂಬ್ಬರು v. ನ್ಯಾಯ ಮಂತ್ರಿ ಮತ್ತು ಇತರರು**[70] ಪ್ರಕರಣದಲ್ಲಿ ದಕ್ಷಿಣ ಆಫ್ರಿಕಾದ ಸಾಂವಿಧಾನಿಕ ನ್ಯಾಯಾಲಯವು, ನಿರ್ಧಾರ ಮತ್ತು ಸಂಬಂಧಗಳ ವಿಚಾರಗಳನ್ನು ಒಳಗೊಳ್ಳುವ ಲೈಂಗಿಕತೆಯಲ್ಲಿನ ಖಾಸಗೀತನದ ಸಿದ್ಧಾಂತವೊಂದನ್ನು ರೂಪಿಸಿತು. ಅದರ ಪ್ರಕಾರ, ಖಾಸಗೀತನವು, ವ್ಯಕ್ತಿಗಳಿಗೆ ಹೊರಗಿನ ಸಮಾಜದ ಮೂಗುತೂರಿಸುವಿಕೆಯಿಲ್ಲದೇ, ಮನುಷ್ಯ ಸಂಬಂಧಗಳನ್ನು ಹೊಂದಲು ಮತ್ತು ಪೋಷಿಸಲು ಅನುಮತಿಸುವ ಖಾಸಗೀ ಅನ್ಯೋನ್ಯತೆ ಮತ್ತು ಸ್ವತಂತ್ರ್ಯ ವಲಯಂಡನ್ನು ಹೊಂದುವ ಹಕ್ಕು ಎಲ್ಲರಿಗೂ ಇದೆ ಎಂಬುದನ್ನು ಗುರುತಿಸುತ್ತದೆ. ನಾವು ಯಾವ ರೀತಿಯಲ್ಲಿ ನಮ್ಮ ಲೈಂಗಿಕತೆಯನ್ನು ವ್ಯಕ್ತಪಡಿಸುತ್ತೇವೆ ಎಂಬುದು ಈ ಖಾಸಗೀ ಕ್ಷೇತ್ರ ಕೇಂದ್ರದಲ್ಲಿರುವ ವಿಚಾರ. ನಮ್ಮ ಲೈಂಗಿಕತೆಯನ್ನು ವ್ಯಕಪಡಿಸುವ ಪ್ರಕ್ರಿಯೆಯಲ್ಲಿ ನಾವು ಪರಸ್ಪರ ಒಪ್ಪಿಗೆಯಿಂದ, ಪರಸ್ಪರರಿಗೆ ಹನಿಯಾಗದಂತೆ ನಡೆದುಕೊಂಡರೆ, ಅಂತಹ ವಲಯವನ್ನು ಅತಿಕ್ರಮಿಸುವುದು ನಮ್ಮ ಖಾಸಗೀತನದ ಉಲ್ಲಂಘನೆಯಾಗುತ್ತದೆ. ದಕ್ಷಿಣ ಆಫ್ರಿಕ ಲೈಂಗಿಕ ಅಭಿವ್ಯಕ್ತಿಯನ್ನು ಹತೋಟಿಯಲ್ಲಿಡಲು ಪ್ರಯತ್ನಿಸುವಂತಹ ಕಳಪೆ ದಾಖಲೆ ಹೊಂದಿದೆ ಎಂಬುದನ್ನು ನ್ಯಾಯಾಲಯ ಒಪ್ಪಿಕೊಂಡಿತು. ಸದರಿ ಪ್ರಕರಣದಲ್ಲಿರುವಂತೆ, ಕೆಲ ಪ್ರಕರಣಗಳಲ್ಲಿ ನಿಬಂಧನೆಯ ಕಾರಣವೇ ತಾರತಮ್ಯಪೂರ್ಣವಾಗಿರುತ್ತದೆ, ಎಂದು ಗಮನಿಸಿದ ನ್ಯಾಯಾಲಯ, ಅದಕ್ಕೆ ವಿಭಿನ್ನ ಜನಂಗದ ಜನರ ನಡುವಿನ ಲೈಂಗಿಕ ಸಂಬಂಧಗಳನ್ನು ಕಾನೂನುಬಾಹಿರ ಗೊಳಿಸುವ ಕಾನೂನನ್ನು ಉದಾಹರಿಸಿತು. ಆದರೆ, ಲೈಂಗಿಕ ನಡವಳಿಕೆಯ ರೂಪಗಳನ್ನು ನಿರ್ಬಂಧಿಸುವ ಕಾನೂನು ತರತಮ್ಯ ಪೂರ್ಣವಾಗಿದೆ ಎಂಬ ವಿಚಾಅರವು, ಅದು 14ನೇ ಪರಿಚ್ಛೇದದಡಿಯಲ್ಲಿ ಸಂವಿಧಾನದ ರಕ್ಷಣೇಯೊದಗಿಸಲಾಗಿರುವ ಮಾನವ ಜೀವನದ್ದ ಖಾಸಗೀ ವಲಯವನ್ನು ಅತಿಕ್ರಮಿಸುವುದನ್ನು ತಡೆಗಟ್ಟುವುದಿಲ್ಲ. ಹೊಸ ಸಾಂವಿಧಾನಿಕ ವ್ಯವಸ್ಥೆಯಲ್ಲಿ ಖಾಸಗೀತನದ ಹಕ್ಕಿಗಿರುವ ಮಹತ್ವವನ್ನು, ಸಮಾನತೆಯ ಪ್ರಾಮುಖ್ಯತೆಯನ್ನು ಒಪ್ಪಿಕೊಳ್ಳುವಾಗಲೂ ನಿರಾಕರಿಸಬಾರದು ಎಂಬುದನ್ನು ನ್ಯಾಯಾಲಯ ಒತ್ತಿಹೇಳಿತು. ಹಾಗೆ ನೋಡಿದರೆ, ಸದರಿ ಪ್ರಕರಣದಲ್ಲಿ ಇವೆರೆಡು ಹಕ್ಕುಗಳ ಉಲ್ಲಂಘನೆಗೆ ಒತ್ತು

[70] 1998 (12) BCLR 1517 (CC)

ನೀಡಿರುವುದನ್ನು ಗಮನಿಸಿದರೆ, ಸಮಲೈಂಗಿಕ ವ್ಯಕ್ತಿಗಳ ಸಂವಿಧಾನಿಕ ಹಕ್ಕುಗಳ ಅತಿಕ್ರಮಣ ಅದೆಷ್ಟು ಅತಿರೇಕಪೂರ್ಣವಾಗಿದೆ ಎಂಬುದನ್ನು ಸ್ಪಷ್ಟವಾಗಿ ತಿಳಿಯುತ್ತದೆ. ಈ ಪ್ರಕರಣದಲ್ಲಿನ ತಾರತಮ್ಯದ ಕೇಂದ್ರದಲ್ಲಿರುವ ಅಪರಾಧವು, ಅದೇ ಸಮಯದಲ್ಲಿ ಮತ್ತು ಸ್ವತಂತ್ರವಾಗಿ ಖಾಸಗೀತನ ಮತ್ತು ಘನತೆಯ ಹಕ್ಕುಗಳನ್ನು ಉಲ್ಲಂಘಿಸುತ್ತದೆ ಎಂಬ ವಿಚಾರವೂ ಅನುಮಾನವೇ ಇಲ್ಲದ ಹಾಗೆ, ಸದರಿ ತಾರತಮ್ಯವು ನ್ಯಾಯೋಚಿತವಲ್ಲ ಎಂಬ ತೀರ್ಮಾನವನ್ನು ಬಲಪಡಿಸುತ್ತದೆ.

160. ನಮ್ಮ ಸ್ವದೇಶದಲ್ಲಿ, ಪುಟ್ಟಸ್ವಾಮಿ (ಮೇಲ್ಕಂಡ) ಪ್ರಕರಣದಲ್ಲಿ ಈ ನ್ಯಾಯಾಲಯದ ಒಂಭತ್ತು ಮಂದಿ ನ್ಯಾಯಮೂರ್ತಿಗಳ ಪೀಠ ಖಾಸಗೀ ತಾಣದ ಹಕ್ಕನ್ನು ಸಂವಿಧಾನದ 21ನೇ ಕಲಮಿನಡಿಯ ಮೂಲಭೂತ ಹಕ್ಕಿನ ಎತ್ತರಕ್ಕೆ ಏರಿಸಿದಾಗ ಖಾಸಗೀತನದ ಹಕ್ಕಿನ ಬಗೆಗಿನ ಅಭಿಪ್ರಾಯವೂ ಕಂಡುಕೇಳರಿಯದಷ್ಟು ಬದಲಾಯಿತು. ನಮ್ಮಲ್ಲೊಬ್ಬರಾದ ನ್ಯಾ. ಚಂದ್ರಚೂಡ್, ಬಹುಮತದ ಪರವಾಗಿ ಮಾತನಾಡುತ್ತಾ, **ಸುರೇಶ್ ಕೌಶಲ್** ಪ್ರಕರಣದ ತೀರ್ಪನ್ನು ಅಪಶೃತಿಯ ದಾನಿಯೆಂದು ಪರಿಗಣಿಸಿದರು ಮತ್ತು ಅದರಲ್ಲಿ ನೀಡಲಾಗಿರುವ ಕಾರಣಗಳನ್ನು ಸಂವಿಧಾನದ 21ನೇ ಕಲಮಿನಡಿಯ ಖಾಸಗೀತನವನ್ನು ಅಧರಿಸಿದ ಹಕ್ಕನ್ನು ತಿರಸ್ಕರಿಸಲು ಸಾಂವಿಧಾನಿಕ ಆಧಾರಗಳೆಂದು ಪರಿಗಣಿಸಲು ಆಗುವುದಿಲ್ಲ ಎಂದು ಅಭಿಪ್ರಾಯ ಪಟ್ಟರು. ಅಲ್ಲದೆ, ಸುರೇಶ್ ಕೌಶಲ್ ಪ್ರಕರಣದ ತೀರ್ಪಿನಲ್ಲಿ ಬಳಸಲಾಗಿರುವ - "ಸಮಲೈಂಗಿಕ ಸ್ತ್ರೀ ಪುರುಷರು, ಉಭಯಲಿಂಗಾಸಕ್ತರು ಮತ್ತು ಲಿಂಗಪರಿವರ್ತಿತರು ಈ ದೇಶದ ಜನಸಂಖ್ಯೆಯ ಅತಿಸಣ್ಣ ಭಾಗ ಮಾತ್ರ" ಎಂಬ ತರ್ಕವೂ ಖಾಸಗೀತನದ ಹಕ್ಕನ್ನು ನಿರಾಕರಿಸುವುದಕ್ಕೆ ಸಮರ್ಥನೀಯ ಆಧಾರವಲ್ಲ ಎಂಬುದನ್ನೂ ಅವರು ಗಮನಿಸಿದರು.

161. ಕೆಲ ಹಕ್ಕುಗಳನ್ನು ಖಾತರೀ ಪಡಿಸಲಾಗಿರುವ ಮೂಲಭೂತಹಕ್ಕುಗಳ ಸ್ಥಾನಕ್ಕೆ ಏರಿಸುವುದರ ಹಿಂದೆ ಅವುಗಳ ಚಲಾವಣೆಯನ್ನು ಬಹುಸಂಖ್ಯಾತರ, ಶಾಸಕಾಂಗೀಯ ಅಥವಾ ಜನಪ್ರಿಯ ಅಸಡ್ಡೆಯಿಂದ ರಕ್ಷಿಸುವ ಉದ್ದೇಶವಿರುತ್ತದೆ, ಮತ್ತು ಸಾಂವಿಧಾನಿಕ ಹಕ್ಕುಗಳು, ತಮ್ಮ ಚಲಾವಣೆಗೆ ಬಹುಸಂಖ್ಯಾತ ಅಭಿಪ್ರಾಯದ ಕೃಪಾದೃಷ್ಟಿಯಿದೆಯೇ ಎಂಬುದನ್ನು ಅವಲಂಬಿಸಿರುವುದಿಲ್ಲ ಎಂದು ಕೂಡ ಗಮನಿಸಲಾಯಿತು.

162. ಬಹುಸಂಖ್ಯಾತ ಅಭಿಪ್ರಾಯದ ಹಿನ್ನೆಲೆಯಲ್ಲಿ, ಜನಪ್ರಿಯ ಒಪ್ಪಿಗೆಯ ಪರೀಕ್ಷೆಯು, ಸಂವಿಧಾನಿಕ ರಕ್ಷಣೆಯ ಪಾವಿತ್ರ್ಯ ಒದಗಿಸಲಾಗಿರುವ ಹಕ್ಕುಗಳನ್ನು ಕಡೆಗಣಿಸುವುದಕ್ಕೆ ಸಮಂಜಸವಾದ ಆಧಾರವಾಗಿರಲಿಲ್ಲ. ಗೌಪ್ಯ ಮತ್ತು ಪ್ರತ್ಯೇಕಿಸಲ್ಪಟ್ಟಿರುವ ಅಲ್ಪಸಂಖ್ಯಾತರು, ಅವರ ಅಭಿಪ್ರಾಯಗಳು, ನಂಬಿಕೆಗಳು ಮತ್ತು ಬದುಕಿನ ವಿಧಾನ "ಮುಖ್ಯವಾಹಿನಿ"ಯೊಂದಿಗೆ ಹೊಂದಾಣಿಕೆಯಾಗುವುದಿಲ್ಲ ಎಂಬ ಸಣ್ಣ ಕಾರಣಾಕ್ಕೆ ತಾರತಮ್ಯದ ಘೋರ ಅಪಾಯವನ್ನು ಎದುರಿಸುತ್ತಾರೆ, ಆದರೆ ಕಾನೂನಿನ ಆಳ್ವಿಕೆಯ ನೆಲೆಯಲಿ ಸ್ಥಾಪಿಸಲಾಗಿರುವ ಪ್ರಜಾತಾಂತ್ರಿಕ ಸಂವಿಧಾನದಲ್ಲಿ, ಅವರ ಹಕ್ಕುಗಳು ಇತರ ಪ್ರಜೆಗಳಿಗೆ ಕೊಡಮಾಡಲಾಗಿರುವ ಹಕ್ಕುಗಳಿಗಿಂತ ಕಡಿಮೆ ಪವಿತ್ರವಾದುವು ಎಂಬುದು ಇದರ ಅರ್ಥವಲ್ಲ ಎಂಬುದನ್ನು ನ್ಯಾಯಾಲಯ ಮನಗಂಡಿತು.

163. ಲೈಂಗಿಕ ನಿಲುವಿನ ಅಂಶಕ್ಕೆ ಸಂಬಂಧ ಪಟ್ಟಂತೆ ನ್ಯಾಯಾಲಯವು, ಅದು ಖಾಸಗೀತನದ ಪ್ರಮುಖ ಅಂಶ ಮತ್ತು ಲೈಂಗಿಕ ನಿಲುವಿನ ಆಧಾರದಲ್ಲಿ ವ್ಯಕ್ತಿಯೊಬ್ಬರ ವಿರುದ್ಧ ತಾರತಮ್ಯ ಎಸಗುವುದು ಆ ವ್ಯಕ್ತಿಯ ಘನತೆ ಮತ್ತು ಸ್ವ-ಮೌಲ್ಯದ ಪಾಲಿಗೆ ಅತ್ಯಂತ ವೇದನಾದಾಯಕ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿತು. ಸಮಾನತೆಯು, ಸಮಾಜದ ಪ್ರತಿಯೊಬ್ಬ ವ್ಯಕ್ತಿಯ ಲೈಂಗಿಕ ನಿಲುವನ್ನು ಸಮಾನವಾದ ವೇದಿಕೆಯೊಂದರಲ್ಲಿ ರಕ್ಷಿಸಬೇಕು ಎಂಬುದನ್ನು ಅಪೇಕ್ಷಿಸುತ್ತದೆ, ಏಕೆಂದರೆ ಖಾಸಗೀತನದ ಹಕ್ಕು ಮತ್ತು ಲೈಂಗಿಕ ನಿಲುವಿನ ರಕ್ಷಣೆ ಸಂವಿಧಾನದ 14, 15 ಮತ್ತು 21ನೇ ಕಲಮುಗಳಡಿಯಲ್ಲಿ ಖಾತ್ರಿಪಡಿಸಲಾಗಿರುವ ಮೂಲಭೂತ ಹಕ್ಕುಗಳ ಕೇಂದ್ರದಲ್ಲಿರುವ ವಿಚಾರಗಳು ಎಂಬುದು ನ್ಯಾಯಾಲಯದ ಅಭಿಪ್ರಾಯವಾಗಿತ್ತು.

164. **ನಾಜ್ ಪ್ರತಿಷ್ಠಾನ** ಪ್ರಕರಣದ ತನ್ನ ತೀರ್ಪಿನಲ್ಲಿ ದೆಹಲಿ ಉಚ್ಚ ನ್ಯಾಯಾಲಯವು, ಎಲ್.ಜಿ.ಬಿ.ಟಿ ವ್ಯಕ್ತಿಗಳ "ತಥಾಕಥಿತ" ಹಕ್ಕುಗಳನ್ನು ರಕ್ಷಿಸುವ ತವಕದಲ್ಲಿ, ಅಂತಾರಾಷ್ಟ್ರೀಯ ಪೂರ್ವನಿದರ್ಶಗಳನ್ನು ತಪ್ಪಾಗಿ ನೆಚ್ಚಿಕೊಂಡಿತು ಎಂಬ ಸುರೇಶ್ ಕೌಶಲ್ ಪ್ರಕರಣದ ತೀರ್ಪಿನ ಕುರಿತು, ಒಂಭತ್ತು ಮಂದಿ ನ್ಯಾಯಮೂರ್ತಿಗಳ ಪೀಠವು **ಸುರೇಶ್ ಕೌಶಲ್** (ಮೇಲ್ಕಂಡ) ತೀರ್ಪಿನಲ್ಲಿ ತೆಗೆದುಕೊಳ್ಳಲಾದ ನಿಲುವು ಸಮರ್ಥನೀಯ ಎಂದು ಅಭಿಪ್ರಾಯ ವ್ಯಕ್ತಪಡಿಸಿತು. **ಪುಟ್ಟಸ್ವಾಮಿ (ಮೇಲ್ಕಂಡ)** ಪ್ರಕರಣದ ತೀರ್ಮಾನದ ಪ್ರಕಾರ, ಸಮಲೈಂಗಿಕ ಸ್ತ್ರೀ ಪುರುಷರು, ಉಭಯಲಿಂಗಾಸಕ್ತರು ಮತ್ತು ಲಿಂಗಪರಿವರ್ತಿತ ಜನಸಂಖ್ಯೆಯ ಹಕ್ಕುಗಳನ್ನು "ತಥಾಕಥಿತ"

ಎಂದು ಪರಿಗಣಿಸಲು ಸಾಧ್ಯವಿಲ್ಲ, ಏಕೆಂದರೆ "ತಥಾಕಥಿತ" ಎಂಬ ಅಭಿವ್ಯಕ್ತಿಯು, ಹಕ್ಕಿನ ಹೆಸರಿನಲ್ಲಿ ಸ್ವಾತಂತ್ರಯದ ಚಲಾವಣೆಯನ್ನು ಸೂಚಿಸುತ್ತದೆ, ಆದರೆ ಅದೊಂದು ಭ್ರಮೆಯಾಗಿದೆ.

165. ಎಲ್.ಜಿ.ಬಿ.ಟಿ ವ್ಯಕ್ತಿಗಳ ಹಕ್ಕುಗಳು "ತಥಾಕಥಿತ" ಅಲ್ಲವೇ ಅಲ್ಲ, ಬದಲಿಗೆ, ಅವು ಸಮರ್ಥ ಸಾಂವಿಧಾನಿಕ ಸಿಧ್ಧಾಂತದ ಆಧಾರದಲ್ಲಿ ರೂಪಿಸಲಾಗಿರುವ ನೈಜ ಹಕ್ಕುಗಳಾಗಿರುವುದರಿಂದ, **ಸುರೇಶ್ ಕೌಶಲ್** ಪ್ರಕರಣದಲ್ಲಿ, ಅವರ ಹಕ್ಕುಗಳನ್ನು "ತಥಾಕಥಿತ"ವೆಂದು ಪರಿಗಣಿಸಿರುವುದು ಎಲ್.ಜಿ.ಬಿ.ಟಿ ಜನಸಂಖ್ಯೆಯ ಖಾಸಗೀತನವನ್ನಾಧರಿಸಿದ್ದ ಹಕ್ಕುಗಳ ಪಾಲಿಗೆ ಅಸಾಮಂಜಸವಾದುದು ಎಂದು ನ್ಯಾಯಾಲಯ ನಿರ್ಧರಿಸಿತು. ನ್ಯಾಯಾಲಯ ಮುಂದುವರೆದು, ಎಲ್.ಜಿ.ಬಿ.ಟಿ. ಸಮುದಾಯದ ಹಕ್ಕುಗಳು ಬದುಕಿನ ಹಕ್ಕಿಗೆ ಸ್ವಭಾವಿಕವಾಗಿವೆ, ಖಾಸಗೀತನ ಮತ್ತು ಘನತೆಯಲ್ಲಿ ಅಡಕವಾಗಿವೆ ಮತ್ತು ಅವುಗಳು ಮುಕ್ತಿ ಮತ್ತು ಸ್ವಾತಂತ್ರ್ಯದ ಮೂಲಸತ್ವವಾಗಿವೆ ಎಂದು ಗಮನಿಸಿತು. ಹಾಗೆಯೇ, ಲೈಂಗಿಕ ನಿಲುವು ಅಸ್ಮಿತೆಯ ಮುಖ್ಯವಾದ ಭಾಗವಾಗಿರುವುದರಿಂದ, ಸಮಾನತೆಯು, ಪ್ರತಿ ವ್ಯಕ್ತಿಯ ಅಸ್ಮಿತೆಗೆ ಯಾವುದೇ ತಾರತಮ್ಯವಿಲ್ಲದ ಸಮಾನ ರಕ್ಷಣೆ ಒದಗಿಸುವ ಬೇಡಿಕೆಯನ್ನಿಡುತ್ತದೆ ಎಂಬದನ್ನು ನ್ಯಾಯಾಲಯ ಗಮನಿಸಿತು.

166. ನ್ಯಾ. ಚಂದ್ರಚೂಡ್ ರವರ ಅಭಿಪ್ರಾಯವನ್ನು ಒಪ್ಪಿಕೊಂಡು, ಅದೇ ಬಗೆಯ ಒಲವು ಮತ್ತು ದನಿಯೊಂದಿಗೆ ಮಾತನಾಡಿದ ನ್ಯಾ. ಕೌಲ್, ತೊಂದರೆಗೊಳಗಾಗಿರುವುದು ಜನಸಂಖ್ಯೆಯ ಅತಿಸಣ್ಣ ಭಾಗವಾಗಿದ್ದರೂ, ಅವರ ಖಾಸಗೀತನದ ಹಕ್ಕನ್ನು ನಿರಾಕರಿಸಲು ಆಗುವುದಿಲ್ಲ ಎಂದು ಗಮನಿಸಿದರು. ಸಾಂವಿಧಾನಿಕ ಹಕ್ಕುಗಳಿಗೆ ಬಹುಸಂಖ್ಯಾತ ತತ್ವ ಅನ್ವಯವಾಗುವುದಿಲ್ಲ ಮತ್ತು ಬಹುಸಂಖ್ಯಾತವಲ್ಲದ ಅಭಿಪ್ರಾಯ ಎಂದು ಕರೆಯಬಹುದಾದ ನಿಲುವನ್ನು ತೆಗೆದುಕೊಳ್ಳುವಂತೆ ನ್ಯಾಯಾಲಯಗಳಿಗೆ ಆಗಾಗ್ಗೆ ಅಗ್ರಹಿಸಲಾಗುತ್ತದೆ ಎಂಬ್ದು ಅವರ ಅಭಿಪ್ರಾಯವಾಗಿತ್ತು.

167. ನ್ಯಾ ಕೌಲ್, ಒಬ್ಬ ವ್ಯಕ್ತಿಯ ಲೈಂಗಿಕ ನಿಲುವು ನಿಸ್ಸಂಶಯವಾಗಿ ಖಾಸಗೀತನದ ಗುಣಲಕ್ಷಣ ಎಂದು ಅಭಿಪ್ರಾಯ ಪಟ್ಟರು, ಮತ್ತು ತಮ್ಮ ದೃಷ್ಟಿಕೋನವನ್ನು ಬೆಂಬಲಿಸಿಕೊಳಲು, **ಮೊಸ್ಲಿ (ಮೇಲ್ಕಂಡ)** ಪರಕಾರಣದಲ್ಲಿ ಮಾಡಲಾದ ಅವಲೋಕನಗಳನ್ನು ಹೀಗೆ ಉಲ್ಲೇಖಿಸಿದರು:

"130 ... ಇದು ಕೇವಲ ವೈಯಕ್ತಿಕ ಖಾಸಗೀತನದ ಮತ್ತು ಸಾರ್ವಜನಿಕ ಹಿತಾಸಕ್ತಿಯ ಜಿದ್ದಾಜಿದ್ದಿಯ ವಿಷಯವಲ್ಲ. ವೈಯಕ್ತಿಕ ಖಾಸಗೀತನವನ್ನು ಗೌರವಿಸುವುದರಲ್ಲಿ ಸಾರ್ವಜನಿಕ ಹಿತಾಸಕ್ತಿಯಿದೆ ಎಂಬುದು ಆಧುನಿಕ ಗ್ರಹಿಕೆ. ಹೀಗಾಗಿ, ಇದು ವಿರೋಧಾಭಾಸದ ಸಾರ್ವಜನಿಕ ಹಿತಾಸಕ್ತಿ ಪರಿಗಣನೆಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ಮತ್ತು ಅವುಗಳನ್ನು ಹೆಚ್ಚು ಉತ್ತಮವಾಗಿ ಗುರುತಿಸಲ್ಪಟ್ಟ ಮಾನದಂಡದ ಪ್ರಕಾರ ಮೌಲ್ಯಮಾಪನ ಮಾಡುವ ವಿಚಾರ.

ಒಬ್ಬ ವ್ಯಕ್ತಿಯ 8ನೇ ಕಲಮಿನ ಹಕ್ಕುಗಳ ಉಲ್ಲಂಘನೆಯನ್ನು ನ್ಯಾಯಾಲಯಗಳು ಗುರುತಿಸಿದಾಗ, ಮತ್ತು ನಿರ್ದಿಷ್ಟವಾಗಿ ತಮಗೆ ತೋಚಿದಂತೆ ಲೈಂಗಿಕ ಜೀವನ ಮತ್ತು ವೈಯಕ್ತಿಕ ಸಂಬಂಧಗಳನ್ನು ನಡೆಸುವ ತನ್ನ ಸ್ವಾತಂತ್ರ್ಯ ಉಲ್ಲಂಘನೆಯಾದ ಸಂದರ್ಭದಲ್ಲಿ, ಪರಿಹಾರ ಪಡೆದು ಮತ್ತು ಆ ಹಕ್ಕನ್ನು ಸಮರ್ಥಿಸಿಕೊಳ್ಳುವುದೇ ಸರಿ. ಪ್ರಬಲವಾದ ಸಾರ್ವಜನಿಕ ಹಿತಾಸಕ್ತಿ ಇದ್ದು, ಅದು ಆ ನಿರ್ದಿಷ್ಟ ಸಂದರ್ಭದಲ್ಲಿ ಆ ಹಕ್ಕನ್ನು ಮೀರಿಸುವಂತಿರುವ ಸಂದರ್ಭದಲ್ಲಿ ಮಾತ್ರ ಇದಕ್ಕೆ ವಿನಾಯಿತಿ ನೀಡಬಹುದು; ಏಕೆಂದರೆ ಸ್ಥಾಪಿತವಾದ "ಸೀಮಿತಗೊಳಿಸುವ ತತ್ವಗಳಲ್ಲಿ" ಕನಿಷ್ಠ ಒಂದು ತತ್ವ ಅಲ್ಲಿ ಕೆಲಸಮಾಡುತ್ತದೆ. ಅಕ್ರಮ ಚಟುವಟಿಕೆಯನ್ನು ಬಹಿರಂಗಪಡಿಸುವ ಅಥವಾ ವ್ಯಕ್ತಿಯೊಬ್ಬರು ಇಲ್ಲಿಯವರೆಗೂ ಮಾಡಿದ ಸಾರ್ವಜನಿಕರಿಗೆ

ಹಕ್ಕು ಮಂಡನೆಯಿಂದ ಸಾರ್ವಜನಿಕವಾಗಿ ಬಹುವಾಗಿ ದಾರಿತಪ್ಪುವುದನ್ನು ತಡೆಗಟ್ಟುವ (ಉದಾಹರಣೆಗೆ, ನವೋಮಿ ಕ್ಯಾಂಪ್ಬೆಲ್ ಮಾದಕದ್ರವ್ಯ ಸೇವನೆಮಾಡಿದ್ದನ್ನು ಸಾರ್ವಜನಿಕವಾಗಿ ನಿರಾಕರಿಸಿದಂತೆ) ನಿದರ್ಶನಗಳಿಗಾಗಿ ಹಕ್ಕುಗಳನ್ನು ಅತಿಕ್ರಮಿಸುವುದು ಅಗತ್ಯವೂ ಸೂಕ್ತವೂ ಆಗಿತ್ತೇ? ಅಥವಾ ವಾನ್ ಹ್ಯಾನೋವರ್ನಲ್ಲಿರುವ ಸ್ಟ್ರಾಸ್ಬರ್ಗ್ ನ್ಯಾಯಾಲಯ (60) ಮತ್ತು (76) ರಲ್ಲಿ ಆಡಿದ ಮಾತುಗಳಂತೆ ಸದರಿ ಮಾಹಿತಿ "ಸಾಮಾನ್ಯ ಆಸಕ್ತಿಯ ಚರ್ಚೆ" ಗೆ ಕೊಡುಗೆ ನೀಡುತ್ತಿತ್ತು ಎಂಬಕಾರಣಕ್ಕೆ ಅದು ಮುಖ್ಯವಾಗಿತ್ತೆ? ಇದು ನಿಜಕ್ಕೂ ಬಹಳ ದೊಡ್ಡಮಟ್ಟದ ಪರೀಕ್ಷೆ, ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಛಾಯಾಗ್ರಹಣಕ್ಕೆ ಸಂಬಂಧಿಸಿದ ವಿಚಾರದಲ್ಲಿ, ಈ ವ್ಯಾಪ್ತಿಯ ನ್ಯಾಯಾಲಯಗಳು ಆ ಸಿಧ್ಧಾಂತವನ್ನು ಎಷ್ಟರ ಮಟ್ಟಿಗೆ ಉಪಯೋಗಿಸುತ್ತವೆ ಎಂಬುದನ್ನು ಇನ್ನೂ ನಿರ್ಧರಿಸಬೇಕಿದೆ. ಅಕ್ಷರಶಃ ಪರಿಗಣಿಸಿದರೆ, ಒಪ್ಪಿಗೆ ನೀಡಲಾದ ವಿಚಾರದಲ್ಲಿ ಅದು ಬಹಳ ಮಹತ್ವದ ಬದಲಾವಣೆಯನ್ನು ಸೂಚಿಸುತ್ತದೆ. ಇದು ನಾವು ಇತ್ತೀಚಿನ ವರ್ಷಗಳಲ್ಲಿ ಒಗ್ಗಿಕೊಂಡಿರುವ ಟ್ಯಾಬ್ಲಾಯ್ಡ್ ಮತ್ತು ಸೆಲೆಬ್ರಿಟಿ ಸಂಸ್ಕೃತಿಯ ಮೇಲೆ ಆಳವಾದ ಪರಿಣಾಮವನ್ನು ಬೀರುತ್ತದೆ.

168. **ಪುಟ್ಟಸ್ವಾಮಿ ಪ್ರಕರಣದ** (ಮೇಲ್ಕಂಡ) ಒಂಬತ್ತು ನ್ಯಾಯಮೂರ್ತಿಗಳ ತೀರ್ಪಿನ ನಂತರ, ಐ.ಪಿ.ಸಿ.ಯ 377ನೇ ಪರಿಚ್ಛೇದದ ಸತ್ವಕ್ಕೆ ಎಸೆಯಲಾಗಿರುವ ಸವಾಲು ಎಂದಿಗಿಂತಲೂ ಬಲವಾಗಿದೆ. ಮೇಲಿನ ತೀರ್ಮಾನದಲ್ಲಿ,

ಒಂಬತ್ತು-ನ್ಯಾಯಮೂರ್ತಿಗಳ ಪೀಠ ಲೈಂಗಿಕ ನಿಲುವು ಒಬ್ಬ ವ್ಯಕ್ತಿಯ ಖಾಸಗೀತನದ ಒಂದು ಭಾಗವಾಗಿದೆ ಮತ್ತು ಖಾಸಗೀತನದ ಹಕ್ಕೂ ಭಾರತದ ಸಂವಿಧಾನದಡಿಯಲ್ಲಿನ ಒಂದು ಮೂಲಭೂತ ಹಕ್ಕು ಎಂದು ಹೇಳಿತು ಎಂಬುದನ್ನು ಒತ್ತಿಹೇಳಬೇಕಾಗಿದೆ .

169. ಸಮಲೈಂಗಿಕ ಪುರುಷರು, ಸ್ತ್ರೀಯರು, ಉಭಯಲಿಂಗಾಸಕ್ತರು ಮತ್ತು ಲಿಂಗ ಪರಿವರ್ತಿತರ ಜನಸಂಖ್ಯೆಯ ಅತ್ಯಂತ ಕಿರಿದಾದ ಭಾಗ ಎಂಬ **ಸುರೇಶ್ ಕೌಶಲ್ (ಮೇಲ್ಕಂಡ)** ಪ್ರಕರಣದ ಅವಲೋಕನ ವ್ಯಕ್ತಿರಿಕ್ತವಾಗಿದೆ ಏಕೆಂದರೆ ಅಂತಹ ವಿಧಾನ ಸಂವಿಧಾನದ 14 ನೇ ಕಲಮಿನಡಿಯಲ್ಲಿ ಅಡಕಗೋಳಿಸಲಾಗಿರುವ ಸಮಾನತೆಯ ತತ್ವವನ್ನು ಉಲ್ಲಂಘಿಸುತ್ತದೆ. ಈಗಿನ ರೂಪದ 377ನೇ ಪರಿಚ್ಛೇದದ ಇರುವಿಕೆಯಿಂದ ಖಾಸಗೀತನದ  ಮೂಲಭೂತ ಹಕ್ಕನ್ನು ಕುಗ್ಗಿಸಿಕೊಳ್ಳುತ್ತಿರುವ ಜನಸಂಖ್ಯೆಯ ಶೇಕಡಾವಾರು ಪ್ರಮಾಣ ಕಡಿಮೆಯಿದೆ ಎಂಬಾ ಒಂದೇ ವಿಚಾರವು, ಐ.ಪಿ.ಸಿ. 377ನೇ ಪರಿಚ್ಛೇದದಿಂದ ಹಾಗೆ ಬಾಧೆಗೊಳಗಾಗಿರುವವರ ಮೂಲಭೂತ ಹಕ್ಕುಗಳನ್ನು ರಕ್ಷಿಸುವಲ್ಲಿ ನ್ಯಾಯಾಲಯಕ್ಕೆ ತಡೆಯೊಡ್ಡಲಾರದು.

170. ಮೂಲಭೂತ ಹಕ್ಕುಗಳ ರಕ್ಷಣೆಯು ಬಹುಸಂಖ್ಯಾತ ಜನಸಂಖ್ಯೆಗೆ ಮಾತ್ರ ದೊರೆಯಬೇಕು ಎಂಬುದನ್ನು ಎಂದಿಗೂ ಸಂವಿಧಾನದ ನಿರ್ಮಾತೃಗಳ ಉದ್ದೇಶವಾಗಿರಲಿಲ್ಲ. ಅವರ ಉದ್ದೇಶ ಅದೇ ಆಗಿದ್ದಿದ್ದರೆ, ಸಂವಿಧಾನದ 3ನೇ ಭಾಗದಲ್ಲಿರುವ ಎಲ್ಲಾ ನಿಬಂಧನೆಗಳು 'ಬಹುಸಂಖ್ಯಾತ ವ್ಯಕ್ತಿಗಳು' ಅಥವಾ 'ಬಹುಸಂಖ್ಯಾತ ನಾಗರೀಕರು' ಎಂಬ ಅರ್ಹಗೊಳಿಸುವ ಪದಗಳನ್ನು ಒಳಗೊಂಡಿರುತ್ತಿದ್ದವು. ಅದರ ಬದಲಿಗೆ, ನಿಬಂಧನೆಗಳು 'ಯಾವುದೇ ವ್ಯಕ್ತಿ' ಮತ್ತು 'ಯಾರೇ ನಾಗರಿಕ' ಎಂಬ ಪದಗಳನ್ನು ಬಳಸಿಕೊಂಡಿದ್ದು, ಸಂವಿಧಾನಿಕ ನ್ಯಾಯಾಲಯಗಳು ಪ್ರತಿಯೊಬ್ಬ ನಾಗರೀಕನ ಮೂಲಭೂತ ಹಕ್ಕುಗಳನ್ನು, ಬಹುಪಾಲು ನಾಗರಿಕರ ಮೂಲಭೂತ ಹಕ್ಕುಗಳು ಉಲ್ಲಂಘನೆಯಾಗುವ ದುರಂತ ಪರಿಸ್ಥಿತಿಗೆ ಕಾಯದೆ ರಕ್ಷಿಸಲು ಬದ್ಧವಾಗಿವೆಯೇ ಎಂಬುದನ್ನು ಸ್ಪಷ್ಟಪಡಿಸಲಾಗಿದೆ.

171. ಅಂತಹ ದೃಷ್ಟಿಕೋನವು ಎರಡು ವಿಚಾರಗಳ ಆಧಾರದಲ್ಲಿ ಸುಭದ್ರವಾಗಿದೆ, ಅವುಗಳೆಂದರೆ, ಸಾಂವಿಧಾನಿಕ ನ್ಯಾಯಾಲಯಗಳು ತಮ್ಮ ವಿಧಾನಗಳಲ್ಲಿ ದೂರದರ್ಶಕ ನೋಟವನ್ನು ಮೈಗೂಡಿಸಿಕೊಂಡು, ಆ ಮೂಲಕ ಮೂಲಭೂತ ಹಕ್ಕುಗಳು ಉಲ್ಲಂಘಿಲ್ಪಟ್ಟ ನಾಗರಿಕರ ಸಂಖ್ಯೆ ಅತಿ ಹೆಚ್ಚಾಗುವುದನ್ನು ಕಾಯದೆ, ಭವಿಷ್ಯದ

ಬಗೆಗೆ ಯೋಚಿಸುವ ಸಾಮರ್ಥ್ಯವನ್ನು ಬೆಳೆಸಬೇಕು. ಈಗಿರುವ ಪ್ರಕರಣದಲ್ಲಿ, ಸಮಲೈಂಗಿಕ ಪುರುಷರು, ಸಮಲೈಂಗಿಕ ಸ್ತ್ರೀಯರು, ಉಭಯಲಿಂಗಾಸಕ್ತರು ಮತ್ತು ಲಿಂಗ ಪರಿವರ್ತಿತರ ಶೇಕಡಾವಾರು ಪ್ರಮಾಣ ಏನೇ ಇದ್ದರೂ, ಈ ನ್ಯಾಯಾಲಯಕ್ಕೆ ಎಲ್.ಜಿ.ಬಿ.ಟಿ ಸಮುದಾಯಕ್ಕೆ ಸೇರಿದ ವ್ಯಕ್ತಿಗಳ ಸಂಖ್ಯೆಯ ಪರಿವೆಯಿಲ್ಲ. ಈ ಸಮುದಾಯವು ಕೆಲವು ಮೂಲಭೂತ ಹಕ್ಕುಗಳಿಗೆ ಅರ್ಹವಾಗಿದ್ದು ಶಾಸನ ಪುಸ್ತಕದಲ್ಲಿರುವ ಕಾನೂನೊಂದರಿಂದ ಅಂತಹ ಮೂಲಭೂತ ಹಕ್ಕುಗಳು ಉಲ್ಲಂಘನೆಯಾಗಿತ್ತಿದೆಯೇ ಎಂಬುದಷ್ಟೇ ಮುಖ್ಯ ವಿಚಾರವಾಗಿದೆ. ಈ ಎರಡೂ ಪ್ರಶ್ನೆಗಳಿಗೆ ಉತ್ತರ ಹೌದು ಎಂದಾದರೆ, ಆಗ ಸಂವಿಧಾನಾತ್ಮಕ ನ್ಯಾಯಾಲಯಗಳು ಒಂದಿನಿತೂ ಅನುಮಾನವನ್ನು ತೋರ್ಪಡಿಸಬಾರದು ಮತ್ತು ಕೆಲವು ನಾಗರಿಕರನ್ನು, ಅವರ ಶೇಕಡಾ ಪ್ರಮಾಣ ಅದೆಷ್ಟೇ ಕಡಿಮೆಯಿದ್ದರೂ, ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸುವ ಕಾನೂನಿನ ಅಂತಹ ನಿಬಂಧನೆಯನ್ನು ತೆಗೆದುಹಾಕಲು ಹಿಂಜರಿಯಬಾರದು,

172. **ಸುರೇಶ್ ಕೌಶಲ್ ಪ್ರಕರಣದ** (ಮೇಲ್ಕಂಡ) ತೀರ್ಪಿನ ದೃಷ್ಟಿಕೋನವು ಅತ್ಯಂತ ಅಸಮರ್ಥನೀಯವಾಗುವ ಎರಡನೆಯ ಸಂದರ್ಭವೆಂದರೆ, ಸಂವಿಧಾನದ 32 ಮತ್ತು 226 ನೇ ಕಲಮುಗಳೆರೆಡರ ಭಾಷೆಯೂ ಇಂತಹ ಉದ್ದೇಶವನ್ನು ಸೂಚಿಸುವುದಿಲ್ಲ. ಎರಡು ಕಲಮುಗಳನ್ನು ಸ್ಥೂಲವಾಗಿ ಓದಿದಾಗ, 32 ಮತ್ತು 226ನೇ ಕಲಮುಗಳಡಿಯಲ್ಲಿ ಸರ್ವೋಚ್ಛ ನ್ಯಾಯಾಲಯ ಮತ್ತು ಉಚ್ಛನ್ಯಾಯಾಲಯಗಳ ಮೊರೆಹೋಗುವ ಹಕ್ಕು ಹಲವು ಜನರ ಮೂಲಭೂತಹಕ್ಕುಗಳು ಉಲ್ಲಂಘನೆಯಾದ ಸಂದರ್ಭಕ್ಕೆ ಮಾತ ಸೀಮಿತವಾಗಿಲ್ಲ ಎಂಬುದು ತಿಳಿದುಬರುತ್ತದೆ.

173. ಇಂತಹ ದೃಷ್ಟಿಕೋನವನ್ನು ಸರ್ವೋಚ್ಛ ನ್ಯಾಯಾಲಯದ ಹಲಾವಾರು ಮೈಲುಗಲ್ಲಿನಂತಹ ತೀರ್ಪುಗಳಲ್ಲಿ ಪುನರುಚ್ಚರಿಸಲಾಗಿದ್ದು, ಇದಕ್ಕೆ **ಡಿ.ಕೆ. ಬಸು v. ಪಶ್ಚಿಮ ಬಂಗಾಳ ರಾಜ್ಯ ಸರ್ಕಾರ**[71] ಪ್ರಕರಣ ಒಂದು ಉದಾಹರಣೆ. ಈ ಪ್ರಕರಣದಲ್ಲಿ, ನ್ಯಾಯಾಲಯವು, ಸೆರೆಮನೆಗೆ ತಳ್ಳಲ್ಪಟ್ಟವರ ಮೂಲಭೂತ ಹಕ್ಕುಗಳಲ್ಲಿ ಆಸಕ್ತಿ ಹೊಂದಿತ್ತು ಮತ್ತು ಅಂತಹ ವ್ಯಕ್ತಿಗಳು ಕೂಡ ಇಡೀ ಜನಸಂಖ್ಯೆಯ ಅತಿಸಣ್ಣ ಭಾಗಕ್ಕೆ ಸೇರಿದವರಾಗಿದ್ದರು. **ಕಾಮನ್ ಕಾಸ್ (ಎ ರಿಜಿಸ್ಟರ್ಡ್ ಸೊಸೈಟಿ)** (ಮೇಲ್ಕಂಡ) ಪ್ರಕರಣದವು, ಸರ್ವೋಚ್ಛ

[71] (1997) 1 SCC 416

ನ್ಯಾಯಾಲಯ, ತನ್ನ ಕರ್ತವ್ಯ ನಿರ್ವಹಿಸುವಾಗ ಮೂಲಭೂತ ಹಕ್ಕುಗಳನ್ನು ರಕ್ಷಿಸಲು ಹಿಂದುಮುಂದು ನೋಡದಿರುವ ಇತ್ತೀಚಿನ ಪ್ರಕರಣ. ಈ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಶಾಶ್ವತ ಚಲನಹೀನ ಸ್ಥಿತಿಗೆ ತಲುಪಿರಬಹುದಾದ ವ್ಯಕ್ತಿಗಳ ಮೂಲಭೂತಹಕ್ಕುಗಳನ್ನು ರಕ್ಷಿಸಲು ಮಧ್ಯಪ್ರವೇಶಿಸಿತು, ಮತ್ತು ಅವರು ಕೂಡ ಸಮಾಜದ ಅತಿಸಣ್ಣ ಭಾಗವೇ ಆಗಿದ್ದಾರೆ.

174. ಇಂತಹ ವಿಧಾನವು, "ಅನ್ಯಾಯ ಎಲ್ಲಿಯೇ ನಡೆದರೂ, ಅದು ಎಲ್ಲೆಡೆಯ ನ್ಯಾಯಕ್ಕೆ ಬೆದರಿಕೆಯೊಡ್ಡುತ್ತದೆ" ಎಂಬ ಮಾರ್ಟಿನ್ ಲೂಥರ್ ಕಿಂಗ್, ಜ್ಯೂನಿಯರ್ ರವರ ಪರಿಕಲ್ಪನೆಯನ್ನೇ ಬಿಂಬಿಸುತ್ತದೆ. ಅವರ ದೃಷ್ಟಿಕೋನವನ್ನು ಪ್ರತಿಪಾದಿಸುವಾಗ, ನಮಗೆ ಸಮಂಜಸ ವರ್ಗೀಕರಣದ ತತ್ವ ಮತ್ತು ವರ್ಗೀಕರಣವು ಮೂಲ ಮಾತು ಕಾರ್ಯರೂಪಗಳೆರೆಡರಲ್ಲೂ ಸಮಂಜಸವಾಗಬೇಕೆಂದು ನುಡಿದ **ಚಿರಂಜಿತ್ ಲಾಲ್ ಚೂಧುರಿ v. ಭಾರತ ಸರ್ಕಾರ**[72] ಪ್ರಕರಣದ ತೀರ್ಪಿನಲ್ಲಿ ನಿರ್ಧರಿಸಿರುವಂತೆ, ಏಕವ್ಯಕ್ತಿ ಶಾಸನ ಕೂಡ ಮಾನ್ಯತೆ ಹೊಂದಿದೆ ಎಂಬ ವಿಚರಗಳ ಸಂಪೂರ್ಣ ಅರಿವಿದೆ.

175. ನಿರ್ಧಿಷ್ಟ ಗುಂಪು ಅಥವಾ ವರ್ಗಕ್ಕಷ್ಟೇ ಅನ್ವಯವಾಗಬಲ್ಲ ಕಾನೂನುಗಳನ್ನು ಜಾರಿಗೆ ತರಲು ಶಾಸಕಾಂಗ ಸಮರ್ಥವಾಗಿದೆ ಎಂಬ ಅರಿವು ನಮಗಿದೆ. ಆದರೆ ಅಂತಹ ವರ್ಗೀಕರಣ ಮಾನ್ಯಾವಾಗಬೇಕಿದ್ದಲ್ಲಿ, ಅದು ಅರ್ಥವಾಗಬಲ್ಲ ವ್ಯತ್ಯಾಸಗಳನ್ನು ಆಧರಿಸಿರಬೇಕು ಮತ್ತು ಆ ವ್ಯತ್ಯಾಸವು ಕಾನೂನಿನ ನಿಬಂಧನೆಯೊಂದರ ಮೂಲಕ ಈಡೇರಿಸ ಹೊರಟಿರುವ ಉದ್ದೇಶದೊಂದಿಗೆ ತಾರ್ಕಿಕವಾಗಿ ಹೊಂದಾಣಿಕೆಯಾಗಬೇಕು.

176. ಇದಲ್ಲದೇ, ಐ.ಪಿ.ಸಿ.. 377 ನೇ ಪರಿಚ್ಛೇದ ತನ್ನ ಪ್ರಸ್ತುತ ಸ್ವರೂಪದಲ್ಲಿ, ಸಂವಿಧಾನದ 21ನೇ ಕಲಮು ರಕ್ಷಿಸುವ ಮೂಲಭೂತ ಹಕ್ಕನ್ನು ಉಲ್ಲಂಘಿಸುತ್ತದೆ ಎಂದು ಆರೋಪಿಸಲಾಗಿರುವುದರಿಂದ, ಅದು ಕೇವಲ 21ನೇ ಕಲಮಿನ ಸವಾಲಿನಲ್ಲಿ ಜಯಗಳಿಸಬೇಕಿರುವುದಷ್ಟೆ ಅಲ್ಲದೆ, ಅದು 19ನೇ ಕಲಮಿನ ಪರೀಕ್ಷೆಯಲ್ಲೂ ಉತ್ತೀರ್ಣಗೊಳ್ಳಬೇಕು ಎಂದರೆ, ಅದು ವಿಧಿಸುವ ನಿಷೇಧ ಸಮಂಜಸವಾಗಿರಬೇಕು, ಅಲ್ಲದೆ ಅದು 14ನೇ ಕಲಮಿನ ಸವಾಲಿನಲ್ಲೂ ಗೆಲ್ಲಬೇಕು, ಎಂದರೆ 377ನೇ ಪರಿಚ್ಛೇದ ನಿರಂಕುಶವೂ ಆಗಿರಬಾರದು.

[72] [1950] 1 SCR 869

177. **ಮನೇಕಾ ಗಾಂಧಿ (ಮೇಲ್ಕಂಡ)** ಪ್ರಕರಣದಲ್ಲಿ ಪ್ರತಿಪಾದಿಸಿರುವಂತೆ, 377ನೇ ಪರಿಚ್ಛೇದ 14, 19 ಮತ್ತು 21ನೇ ಕಲಮುಗಳ ಪರೀಕ್ಷಾ-ತ್ರಯಗಳಲ್ಲಿ ಜಯಗಳಿಸುತ್ತದೆಯೇ ಎಂಬುದನ್ನು ಈ ತೀರ್ಪಿನ ಅನಂತರದ ಘಟ್ಟದಲ್ಲಿ, ನಾವು ಐ.ಪಿ.ಸಿ.ಯ 377ನೇ ಪರಿಚ್ಛೇದದ ವ್ಯಾಖ್ಯನಾತ್ಮಕ ಪರಿಶೀಲನೆಯಲ್ಲಿ ತೊಡಗಿದಾಗ ನಿರ್ಧರಿಸಲಾಗುತ್ತದೆ.

## M. ಹಕ್ಕುಗಳ ಪ್ರಗತಿಪರ ಸಾಕ್ಷಾತ್ಕಾರದ ಸಿದ್ಧಾಂತ

178. ಸಂವಿಧಾನದಡಿಯಲ್ಲಿ ಖಾತ್ರಿಪಡಿಸಲಾಗಿರುವ ಹಕ್ಕುಗಳು ಮತ್ತು ಆ ಹಕ್ಕುಗಳ ರಕ್ಷಣೆಯ ಬಗೆಗೆ ನಾವು ಮಾತನಾಡುವಾಗ, ಅಂತಹ ಹಕ್ಕುಗಳ ಸ್ಪಷ್ಟವಾದ ಅಭ್ಯುದಯ ಮತ್ತು ಅವುಗಳ ಗೆಲುವಿನ ನಡಿಗೆಯನ್ನು ಗ್ರಹಿಸುತ್ತೇವೆ, ಇದು ಮುಂದೆ ಸಂವಿಧಾನದಡಿಯಲ್ಲಿ ಹಕ್ಕುಗಳ ಪ್ರಗತಿಶೀಲ ಸಾಕ್ಶಾತ್ಕಾರದ ಸಿಧ್ಧಾಂತಕ್ಕೆ ದಾರಿ ಮಡಿಕೊಡುತ್ತದೆ. ಈ ಸಿಧ್ಧಾಂತ ನಮಗೆ ಸಂವಿಧಾನದ ಜೀವಂತ ಮತ್ತು ಚಲನಶೀಲ ಸ್ವಭಾವದ ಬಗೆಗೆ ತಪ್ಪದೆ ನೆನಪಿಸುತ್ತದೆ. ಸಂವಿಧಾನದ ಪ್ರಗತಿಶೀಲ ಮತ್ತು ಸತತ ಬೆಳವಣಿಗೆಯ ಸ್ವಭಾವವನ್ನು ವಿವರಿಸಿದ ಎಡ್ಮಂಡ್ ಬರ್ಕ್, ಸಂವಿಧಾನವು, ರಾಷ್ಟ್ರವೊಂದರ ಚೈತನ್ಯವನ್ನು ಮೈಗೂಡಿಸಿಕೊಂಡಿರುತ್ತದೆಯಾದ್ದರಿಂದ ಅದು ಸದಾಕಾಲ ಬೆಳೆಯುತ್ತಿರುತ್ತದೆ ಮತ್ತು ಅದು ಶಾಶ್ವತ ನಿರಂತರತೆ ಹೊಂದಿರುತ್ತದೆ ಎಂದು ಹೇಳಿದ್ದರು. ಭೂತಕಾಲದ ಅನುಭವಗಳು ಮತ್ತು ಪ್ರಭಾವಗಳು ಅದನ್ನು ಶ್ರೀಮಂತಗೊಳಿಸುತ್ತವೆ ಮತ್ತು ಆ ಮೂಲಕ ಭವಿಷ್ಯತ್ತು ವರ್ತಮಾನಕ್ಕಿಂತ ಸಮೃದ್ಧವಾಗುತ್ತದೆ.

179. **ಎಂ.ಎಂ ಥಾಮಸ್ (ಮೇಲ್ಕಂಡ)** ಪ್ರಕರಣದ, ತಮ್ಮ ಸಹಮತಿಯ ತೀರ್ಪಿನಲ್ಲಿ, ನ್ಯಾ. ಕೃಷ್ಣ ಅಯ್ಯರ್ ಕೆಳಕಂಡಂತೆ ಗಮನಿಸಿದರು:-

> " ಸಾಂವಿಧಾನಿಕ ಕಾನುನನ್ನೂ ಒಳಗೊಂಡಿರುವ ಕಾನೂನು, ಇನ್ನೆಂದಿಗೂ ಒಬ್ಬಂಟಿಯಾಗಿ ಮುಂದುವರಿಯಲಾರದು, ಬದಲಿಗೆ, ಸಮಾಜಶಾಸ್ತ್ರ ಮತ್ತು ಜ್ಞಾನಕ್ಕೆ ಸಂಬಂಧಿಸಿದ ಕ್ಷೇತ್ರಗಳ ಮೂಲಕ ಆ ಕಾನೂನನ್ನು ವ್ಯಾಖ್ಯಾನಾತ್ಮಕ ಪ್ರಕ್ರಿಯೆಗೊಳಪಡಿಸಿ

ಅದನ್ನು ಬೆಳಗಿಸಬೇಕು. ಸಾಂವಿಧಾನಿಕ ಕಾನೂನು ಎಂಬ ಪದಪುಂಜವು, ಖಂಡಿತವಾಗಿಯೂ ಕಾನೂನು ಮತ್ತು ರಾಜಕೀಯದ ಅಡ್ಡಹಾಯುವಿಕೆಯನ್ನು ಸೂಚಿಸುತ್ತದೆ, ಎಂದರೆ, ಅಲ್ಲಿ ಕಾನೂನಿನ ಪರಂಪರೆಯ ತರಬೇತಿ ಪಡೆದ, ನ್ಯಾಯಾಂಗದ ಸಂಸ್ಥೆಗಳಲ್ಲಿ ಕೆಲಸಮಾಡುತ್ತಿರುವ, ಕಾನೂನಿನ ಪ್ರಕ್ರಿಯೆಗಳನ್ನು ಪಾಲಿಸುತ್ತಿರುವ, ವಕೀಲರು ಯೋಚಿಸುವಂತೆಯೇ ಯೋಚಿಸುವ ವ್ಯಕ್ತಿಗಳು ರಾಜನೈತಿಕ ಅಧಿಕಾರದ ವಿಚಾರಗಳನ್ನು ನಿಭಾಯಿಸುತ್ತಾರೆ. ಹೀಗಾಗಿ, ಸಾಂವಿಧಾನಿಕ ಕಾನೂನಿನ ಸಮಸ್ಯೆಗಳನ್ನು ಪರಿಹರಿಸಲು ವಿಸ್ತಾರವಾದ ದೃಷ್ಟಿಕೋನದ ಅಗತ್ಯವಿದೆ.

ಮತ್ತೊಮ್ಮೆ: -

—ತೀರ್ಮಾನಿಸಲಾದ ಪ್ರಕರಣಗಳನ್ನು ಅವಲೋಕಿಸಿದಾಗ, “ಸಮಾನತೆಯ ಷರತ್ತು”ಗಳ ಚಲನಶೀಲ ತಾತ್ಪರ್ಯವನ್ನು ಮರು-ವ್ಯಾಖ್ಯಾನಿಸುವ, ಸಾವಯವವಾಗಿರುವ ಮತ್ತು ನಮ್ಮ ದೇಶದ ಬೆಳೆಯುತ್ತಿರುವ ಜೀವಂತಿಕೆಯನ್ನು ನಿಯಂತ್ರಿಸುವ ಸರ್ವಶ್ರೇಷ್ಠ ಕಾನೂನು, ತನ್ನ ಹರಹಿನಲ್ಲಿ ನೀತಿತತ್ವಗಳು, ಅರ್ಥಶಾಸ್ತ್ರ, ರಾಜಕೀಯ ಮತ್ತು ಸಮಾಜಶಾಸ್ತ್ರವನ್ನೂ ಒಳಗೊಳ್ಳಬೇಕೆಂಬುದಕ್ಕೆ, ತಾರ್ಕಿಕ ಅನುಮಾನಗಳನ್ನು ಮೀರಿ, ಒತ್ತು ನೀಡುವ ಅಗತ್ಯ ಸ್ಪಷ್ಟವಾಗುತ್ತದೆ.

ಅರಿವುಳ್ಳ ನ್ಯಾಯಾಧೀಶರು, ತಮ್ಮ ಕಾಳಜಿಯ ಎಲ್ಲೆಗೆಳನ್ನು ವಿಸ್ತರಿಸುತ್ತಾ, ಫ್ರೀಡ್ಮನ್ನ ನ ವಿಷಾದವನ್ನು ಮತ್ತೊಮ್ಮೆ ಉಲ್ಲೇಖಿಸಿದರು:-

> ಕಾನೂನು, ಸಮಾಜದಲ್ಲಿನ, ವಿಕಾಸಾತ್ಮಕ ಮತ್ತು ಕ್ರಾಂತಿಕಾರಕ ಬದಲಾವಣೆಗಳ ಕೊನೆಯಿಲ್ಲದ ಸವಾಲಿಗೆ ಪ್ರತಿಕ್ರಿಯಿಸಲು ಸಾಧ್ಯವಿಲ್ಲದಷ್ಟು ಮರಗಟ್ಟಿಹೋದರೆ, ಅದೊಂದು ದುರಂತ"

ಫ್ರೀಡ್ಮನ್ ಮಾಡಿಕೊಂಡ ಊಹೆಗಳು ಹೀಗಿದ್ದವು

> ಮೊದಲನೆಯದಾಗಿ ಕಾನೂನು, ಹೋಂಸ್‌ನ ಸಾಲುಗಳ ಪ್ರಕಾರ, ಆಗಸದಲ್ಲಿರುವ ಆತಂಕಕಾರೀ ಸರ್ವಶಕ್ತತೆಯಲ್ಲ, ಬದಲಿಗೆ ಅದು, ತಾನು ನಿಯಂತ್ರಿಸಲು ಉದ್ದೇಶಿಸುವ ಸಮಾಜದ ರಾಜನೈತಿಕ ಮೂಲ್ಯಗಳನ್ನೇ ಅವಲಂಬಿಸಿರುವ ಸಾಮಾಜಿಕ ವ್ಯವಸ್ಥೆ…."
>
> ಸಮಾನತೆಯ ಖಾತರಿಯು, ಬದಲಾಗುತ್ತಿರುವ ಮೌಲ್ಯಗಳು ಒಡ್ಡುವ ಯಾವ ಸವಾಲುಗಳಿಗೆ ಪ್ರತಿಕ್ರಿಯಿಸಬೇಕು ಮತ್ತು ಹೇಗೆ, ಎಂಬ ವಿಚಾರಣೆ ಸಹಜವಾಗಿಯೇ ಉದ್ಭವಿಸುತ್ತದೆ.

180. ಹಾಗೆಯೇ, ನ್ಯಾ. ಕೃಷ್ಣ ಐಯ್ಯರ್, **ಮ್ಯಕಲ್ಲೋ v. ಮೇರಿಲ್ಯಾಂಡ್**[73] ಪ್ರಕರಣದಲ್ಲಿ ಮುಖ್ಯ ನ್ಯಾಯಮೂರ್ತಿ ಮಾರ್ಷಲ್ ನೀಡಿದ, ಮತ್ತು ನಂತರ **ಕ್ಯಾಜೆನ್ಬಾಕ್ v. ಮಾರ್ಗನ್**[74] ಪ್ರಕರಣದಲ್ಲಿ ನ್ಯಾ. ಬ್ರೆನ್ನನ್ ಕೂಡ ಪುನರುಚ್ಚರಿಸಿದ ಹೇಳಿಕೆಯನ್ನು ಉಲ್ಲೇಖಿಸಿದರು. ಸದರಿ ಅವಲೋಕನ ಹೀಗಿತ್ತು:-

---

[73] (1816) 17 US 316

[74] (1966) 384 US 641

"ಗುರಿ ನ್ಯಾಯಸಮ್ಮತವಾಗಿರಲಿ, ಅದು ಸಂವಿಧಾನದ ವ್ಯಾಪ್ತಿಯೊಳಗಿರಲಿ, ಮತ್ತು ಎಲ್ಲ ಸಮಂಜಸವಾದ ವಿಧಾನಗಳ ವ್ಯಾಪ್ತಿಯೊಳಗಿರಲಿ, ಆ ವಿಧಾನಗಳು ಆ ಗುರಿಯ ಈಡೇರಿಕೆಗಾಗಿಯೇ ಅನುಸರಿಸಲ್ಪಟ್ಟಿರಲಿ, ಅವುಗಳು ನಿಷೇಧಿತವಲ್ಲದಿರಲಿ, ಬದಲಿಗೆ, ಅವುಗಳು ಅಕ್ಷರಶಃವಾಗಿ ಮತ್ತು ಸತ್ವರೂಪದಲ್ಲಿ, ನೆಲೆಗಳಲ್ಲಿ ಸಾಂವಿಧಾನಿಕವಾಗಿರಲಿ"

181. ಮನೋಜ್ ನರೂಲ (ಮೇಲ್ಕಂಡ) ಪ್ರಕಣದಲ್ಲಿ ಸರ್ವೋಚ್ಛ ನ್ಯಾಯಾಲಯ ಭಾರತೀಯ ಸಂವಿಧಾನದ ಚಲನಶೀಲ ಸ್ವಭಾವವನ್ನು ಗುರುತಿಸಿತು ಮತ್ತು ಅದು ಅಪಾರ ಚಲನಶೀಲತೆಯ ಸಾಮರ್ಥ್ಯವಿರುವ ಜೀವಂತ ದಸ್ತಾವೇಜು ಎಂಬುದನ್ನು ಗಮನಿಸಿತು. ಅದು ಪ್ರಗತಿಶೀಲ ಸಮಾಜಕ್ಕಾಗಿ ರಚಿಸಲ್ಪಟ್ಟ ಸಂವಿಧಾನವಾಗಿದ್ದು, ಅಂತಹ ಸಂವಿಧಾನದ ಕಾರ್ಯಕ್ಷಮತೆಯು ಪ್ರಚಲಿತ ವಾತಾವರಣ ಮತ್ತು ಪರಿಸ್ಥಿತಿಗಳನ್ನು ಅವಲಂಬಿಸುತ್ತದೆ.

182. **ನವ ದೆಹಲಿ ಎನ್.ಸಿ.ಟಿ ಸರ್ಕಾರ ಪ್ರಕರಣದಲ್ಲಿ (ಮೇಲ್ಕಂಡ),** ಸಂವಿಧಾನವನ್ನು ಜೀವಂತ ಮತ್ತು ಚಲನಶೀಲ ದಸ್ತಾವೇಜನಾಗಿಸುವ ಸಂಗತಿ ಯಾವುದು ಎಂಬುದನ್ನು ಆಲೋಚಿಸುವಾಗ, ನಿಯಮಗಳು ಮತ್ತು ಪದ್ಧತಿಗಳ ಗುಂಪಾಗಿರುವ, "ಸಾಂವಿಧಾನಿಕ ಸಂಸ್ಕೃತಿ"ಯ ತತ್ವವೇ ಎಂದು ಗಮನಿಸಿದ ನ್ಯಾಯಾಲಯವು, ಅದು ಈ ಮಹೋನ್ನತ ದಸ್ತಾವೇಜಿನ ಪದಗಳಿಗೆ ಜೀವತುಂಬುತ್ತದೆ ಮತ್ತು, ನಿರಂತರವಾಗಿ ಆ ಪದಗಳು ಸಮಾಜದಲ್ಲಿ ನಡೆಯುವ ಬಿರುಸಿನ ಮತ್ತು ತೀವ್ರವಾದ ಬದಲಾವಣೆಗಳಿಗೆ ಸರಿಸಾಟಿಗಿರುವಂತೆ ಮಾಡುತ್ತದೆ ಮತ್ತು ಸಾಂವಿಧಾನಿಕ ಸಂಸ್ಕೃತಿಯನ್ನು ಪೋಷಿಸುವ ಜವಾಬ್ದಾರಿಯೂ ಸರ್ಕಾರದ ಹೆಗಲಿನ ಮೇಲಿರುತ್ತದೆ ಎಂದು ಗಮನಿಸಿತು. ಅನಂತರ, ನ್ಯಾಯಾಲಯ ಹೀಗೆಂದು ಗಮನಿಸಿತು:-

-ಸಂವಿಧಾನಾತ್ಮಕ ನ್ಯಾಯಾಲಯಗಳು, ಸಂವಿಧಾನಾತ್ಮಕ ನಿಬಂಧನೆಗಳನ್ನು ಅರ್ಥೈಸಿಕೊಳ್ಳುವಾಗ,

> ಸಂವಿಧಾನಾತ್ಮಕ ಸಂಸ್ಕೃತಿಯನ್ನು ಗಣನೆಗೆ ತೆಗೆದುಕೊಳ್ಳಬೇಕು, ಅದರ ಮನಸ್ಸಿನಲ್ಲಿ ಅದರ ಹೊಂದಿಕೊಳ್ಳುವ ಮತ್ತು ವಿಕಾಸದ ಸ್ವಭಾವವನ್ನು ಹೊಂದಬೇಕು, ಇದರಿಂದಾಗಿ ಸಂವಿಧಾನದ ವಸ್ತು ಮತ್ತು ಉದ್ದೇಶವನ್ನು ಪ್ರತಿಬಿಂಬಿಸುವ ನಿಬಂಧನೆಗಳ ಅರ್ಥವನ್ನು ನೀಡಲಾಗುತ್ತದೆ.

ಮತ್ತೊಮ್ಮೆ, ನ್ಯಾ. ಬ್ರೆನ್ನನ್ ರವರ ವಿವೇಕಪೂರ್ಣ ಮಾತುಗಳನ್ನು ಪುನರುಚ್ಚರಿಸಲಾಯಿತು

> ಪ್ರಸ್ತುತ ನ್ಯಾಯಮೂರ್ತಿಗಳಾಗಿರುವ ನಾವುಗಳು ಸಂವಿಧಾನವನ್ನು ನಮ್ಮಿಂದ ಸಾಧ್ಯವಾದ ರೀತಿಯಲ್ಲಿ - ಇಪ್ಪತ್ತನೇ ಶತಮಾನದ ಅಮೇರಿಕನ್ನರಂತೆ - ಓದುತ್ತೇವೆ. ನಾವು ಸಂವಿಧಾನ ರಚನೆಗೊಂಡ ಕಾಲದ ಇತಿಹಾಸವನ್ನು ಪರಿಗಣಿಸುತ್ತೆವೆ ಮತ್ತು ನಡುವಿನಲ್ಲಿ ಮಾಡಲಾದ ವ್ಯಾಖ್ಯಾನದ ಇತಿಹಾಸವನ್ನು ಗಮನಿಸುತ್ತೇವೆ. ಆದರೆ ಈ ದಸ್ತಾವೇಜಿನ ಪದಗಳು ನಮ್ಮ ಕಾಲದಲ್ಲಿ ಯಾವ ಅರ್ಥ ಪಡೆದಿವೆ? ಎಂಬುದು ನಮ್ಮ ಕಟ್ಟಕಡೆಯ ಪ್ರಶ್ನೆಯಾಗಿರಬೇಕು. ಏಕೆಂದರೆ ಸಂವಿಧಾನದ ವಿದ್ವತ್ತಿರುವುದು ಅದು ಕಳೆದು ಹೋದ ಜಗತ್ತಿನಲ್ಲಿ ಹೊಂದಿರಬಹುದಾದ ಸ್ಥಾವರ ಅರ್ಥದಲ್ಲಲ್ಲ, ಬದಲಿಗೆ ಅದರ ಮಹಾನ್ ಸಿಧ್ಧಾಂತಗಳಿಗಿರುವ ಪ್ರಸ್ತುತ ಸಮಸ್ಯೆ ಮತ್ತು ಅಗತ್ಯಗಳನ್ನು ನಿಭಾಯಿಸುವ ಸಾಮರ್ಥ್ಯದಲ್ಲಿ ಅದರ ವಿದ್ವತ್ತಿದೆ. ಹಿಂದಿನ ಕಾಲದ ಪ್ರಜ್ಞೆಯೂ ಸಂವಿಧಾನದ

ಮೂಲತತ್ವಗಳಿಗೆ ನೀಡಿದ ಅರ್ಥವೂ, ನಮ್ಮ ಕಾಲದ ದೃಷ್ಟಿಕೋನದ ಅಳತೆಗೋಲಾಗಲು ಸಾಧ್ಯವಿಲ್ಲ. ಅದೇ ರೀತಿಯಲ್ಲಿ, ಆ ನಾವು ಆ ಮೂಲತತ್ವಗಳನ್ನು ಹೇಗೆ ಅರ್ಥಮಾಡಿಕೊಂಡಿದ್ದೇವೆ ಎಂಬುದು ಹಿಂದಿನ ಕಾಲದ ದೃಷ್ಟಿಕೋನವನ್ನು ಅಳೆಯಲು ಆಗುವುದಿಲ್ಲ"

183. ನಾವುಗಳು ಸಂವಿಧಾನದಡಿಯ ಹಕ್ಕುಗಳು ಚಲನಶೀಲ ಮತ್ತು ಪ್ರಗತಿಶೀಲವಾದುವು, ಏಕೆಂದರೆ ಅವು ಸಮಾಜವೊಂದರ ವಿಕಾಸ ಮತ್ತು ಉರುಳುವ ಕಾಲದೊಂದಿಗೆ ವಿಕಸನಗೊಳ್ಳುತ್ತವೆ ಎಂಬುದನ್ನು ಎತ್ತಿಹಿಡಿಯುವ ಸಲುವಾಗಿ ಸಂವಿಧಾನದ ಚಲನಶೀಲ ಮತ್ತು ಪ್ರಗತಿಶೀಲ ಸ್ವಭಾವವನ್ನು ಸಂಕ್ಷಿಪ್ತವಾಗಿ ಚರ್ಚಿಸಿದೆವು. ಯಾವ ಸಂವಿಧಾನದಡಿಯಲ್ಲಿ ಪ್ರಜೆಗಳಿಗೆ ಹಕ್ಕುಗಳನ್ನು ಕೊಡಮಾಡಲಾಗಿದೆಯೋ, ಆ ಸಂವಿಧಾನದ ಚಲನಶೀಲ ಮತ್ತು ಬೆಳೆಯುವ ಸ್ವಭಾವವೇ ಹಕ್ಕುಗಳ ಪ್ರಗತಿಶೀಲ ಸಾಕ್ಷಾತ್ಕಾರದ ಸಿದ್ಧಾಂತದ ಹಿಂದಿರುವ ತರ್ಕ.

184. ಸಾಂವಿಧಾನಿಕ ಹಕ್ಕುಗಳನ್ನು ಚಲನಶೀಲ, ಜೀವಂತ ಮತ್ತು ವ್ಯಾವಹಾರಿಕ ವ್ಯಾಖ್ಯಾನಕ್ಕೊಳಪಡಿಸದಿದ್ದರೆ, ಅವುಗಳು ಸತ್ತ ಅಕ್ಷರಗಳಾಗುಳಿಯುತ್ತವೆ ಎಂಬುದನ್ನು ಸಾಂವಿಧಾನಿಕ ನ್ಯಾಯಾಲಯಗಳು ಮನಗಾಣಬೇಕು. ಹಾಗಾಗಿ, ಸಾಂವಿಧಾನಿಕ ನ್ಯಾಯಾಲಯಗಳು ತಮ್ಮ ನ್ಯಾಯಾಂಗೀಯ ವ್ಯಾಖ್ಯಾನಗಳು ಮತ್ತು ನಿರ್ಧಾರಗಳಲ್ಲಿ, ಒಡಂಬಡಿಕೆಯ ಭಾವ ಮತ್ತು ಸಾಂವಿಧಾನಿಕ ನೈತಿಕತೆಯ ಅರಿವನ್ನು ನೆಲೆಗೊಳಿಸುವ ಅಗತ್ಯವಿದೆ. ಹೀಗೆ ಮಾಡಿದಾಗ, ಅವುಗಳು, ನ್ಯಾಯಾಂಗೀಯ ಕ್ರಿಯಾಶೀಲತೆಯ ಸಹಾಯದೊಂದಿಗೆ, ನಮ್ಮ ದೇಶದ ನಾಗರಿಕರಿಗೆ ಸಂವಿಧಾನ ದಯಪಾಲಿಸಿರುವ ಹಕ್ಕುಗಳನ್ನು ಕಾಪಾಡುವ ತಮ್ಮ ಮೊಟ್ಟಮೊದಲ ಜವಾಬ್ದಾರಿಯನ್ನು ಈಡೇರಿಸಬಹುದು.

185. ಇಲ್ಲಿ, ಲಾರ್ಡ್ ರಾಸ್ಕಿಲ್ ಲಂಡನ್ನಿನ ಯೂನಿವರ್ಸಿಟೀ ಕಾಲೇಜಿನ ಬೆಂಥಮ್ ಸಂಘಕ್ಕೆ "ಕಾನೂನು ಒಡೆಯರು, ಪ್ರತಿಗಾಮಿಗಳೊ ಅಥವಾ ಸುಧಾರಕರೋ?" (ಲಾ ಲಾರ್ಡ್ಸ್, ರಿಯಾಕ್ಶನಿಸ್ಟ್ಸ್ ಆರ್ ರಿಫಾರ್ಮರ್ಸ್[75]) ಎಂಬ

[75] Lord Roskill, "Law Lords, Reactionaries or Reformers", Current Legal Problems (1984)

ವಿಷಯದ ಮೇಲೆ 29 ಫೆಬ್ರವರಿ 1984ರಂದು ನೀಡಿದ ಅಧ್ಯಕ್ಷೀಯ ಭಾಷಣವನ್ನು ಉಲ್ಲೇಖಿಸುವುದು ಸೂಕ್ತ. ಆ ಭಾಷಣ ಹೀಗಿತ್ತು:-

> ಕಾನೂನು ಕಾರ್ಯನೀತಿ ಈಗ ಪಟ್ಟಕ್ಕೇರಿದೆ ಮತ್ತು ಅದು ಸಾಮಾನ್ಯ ಕಾನೂನನ್ನು ನಿಯಂತ್ರಿಸಲು ಹೌಸ್ ಆಫ್ ಲಾರ್ಡ್ಸ್ ಪರಿಗಣಿಸುವ ಮೊಟ್ಟಮೊದಲ ವಿಚಾರವಾಗುಳಿಯಲಿ ಎಂದು ನಾನು ಆಶಿಸುತ್ತೇನೆ. ಈ ಬೆಳವಣಿಗೆ ಈಗ ಯಾವ ದಿಕ್ಕಿನಲ್ಲಿ ಸಾಗಬೇಕು? ನಾವು ನಮ್ಮನ್ನೇ ಈ ಕೆಳಗಿನಂತೆ ಕೇಳಿಕೊಂಡ ಹಲವಾರು ಸನ್ನಿವೇಶಗಳನ್ನು ನಾನು ನೆನಪಿಸಿಕೊಳ್ಳಬಲ್ಲೆ:-
>
> “ಈ ಪ್ರಕರಣಕ್ಕೆ ಕಾರ್ಯನೈತಿಕ ನಿರ್ಧಾರದ ಅಗತ್ಯವಿದೆ, ಸರಿಯಾದ ಕಾರ್ಯನೈತಿಕ ನಿರ್ಧಾರ ಯಾವುದು? ಸಮಾಜದ ಪ್ರಸ್ತುತ ಅಗತ್ಯಗಳಿಗೆ ಅತ್ಯಂತ ಹತ್ತಿರವಾಗಿರುವ, ವಿವೇಚನಾಪೂರ್ಣವೆಂದು ಕರೆಯಲ್ಪಡುವ ಮತ್ತು ಮುಂದಿನ ದಿನಗಳಲ್ಲಿ ಬಳಸಲು ವ್ಯಾವಹರಿಕವಾಗಿ ಸುಲಭವಾಗಿರುವ ದಾರಿಯನ್ನು ಅನುಸರಿಸುವುದು ಈ ಪ್ರಶ್ನೆಗೆ ಉತ್ತರ ಮತ್ತು ಇನ್ನೂ ಮುಂದೆ ಕೂಡಾ ಇದುವೇ ಉತ್ತರವಾಗಿರುತ್ತದೆ ಎಂದು ನಾನು ಆಶಿಸುತ್ತೇನೆ. ಲಾ ಲಾರ್ಡ್‌ಗಳು (ಕಾನೂನು ಒಡೆಯರು) ಅಪೂರ್ಣ ವ್ಯಾವಹಾರಿಕತೆಯ ಬದಲಿಗೆ ಬೌದ್ಧಿಕ ಪರಿಪೂರ್ಣತೆಯನ್ನು ಬಯಸುವ, ಬುದ್ಧಿವಂತ ವಕೀಲರ ವಿಮರ್ಶೆಗೆ ಗುರಿಯಾಗುತ್ತಲೇ ಇರುತ್ತಾರೆ ಎಂಬುದರಲ್ಲಿ

ಅನುಮಾನವಿಲ್ಲ. ಆದರೆ, ನಮಗೆ ಅದೆಷ್ಟೇ ಹೇಸಿಗೆಯೆನಿಸಿದರೂ, ಬಹುಪಾಲು ಕಾನೂನುಗಳು ಮತ್ತು ವಾಸ್ತವದಲ್ಲಿ ಎಲ್ಲ ಕ್ರಿಮಿನಲ್ ಕಾನೂನುಗಳು, ಮನುಷ್ಯರಿಗೆ ಇಷ್ಟವಿದ್ದರೂ, ಇಲ್ಲದಿದ್ದರೂ ಅವರನ್ನು ನಿಯಂತ್ರಿಸಲು ಬಳಕೆಯಾಗುವ, ಮತ್ತು ಅವುಗಳ ಪ್ರಕಾರವೇ ಮನುಷ್ಯರನ್ನು ಬದುಕಲು ಬದ್ಧವಾಗಿಸುವ ಮೊಂಡು ಹತಾರುಗಳು ಎಂಬುದನ್ನು, ಒಪ್ಪಿಕೊಳ್ಳಲೇಬೇಕು. ಮತ್ತು ಮೊನಚಾದ ಹತಾರುಗಳು ಬೌದ್ಧಿಕವಾಗಿ ಅಥವಾ ಇನ್ನಾವುದೇ ರೀತಿಯಲ್ಲೂ ಪರಿಪೂರ್ಣವಾಗಿರುವುದು ಅಪರೂಪ. ಅವುಗಳ ವಿವರಣೆಯೇ ಸೂಚಿಸುವಂತೆ, ಅವು ಮೊಂಡು/ ಒರಟಾಗಿ ಕಾರ್ಯ ನಿರ್ವಹಿಸುತ್ತವೆಯೇ ಹೊರತು, ಚುರುಕಾಗಿಯಲ್ಲ. (ಒತ್ತು ಒದಗಿಸಲಾಗಿದೆ)

186. ಲಾರ್ಡ್ ರಾಸ್ಕಿನ್ನರ ಮಾತುಗಳಲ್ಲಿ ಈ ಸಂವಿಧಾನದ ಚಲನಶೀಲ ಸ್ವಭಾವದಿಂದಾಗಿ, ವ್ಯವಹಾರಿಕವಾಗಿರಬೇಕಿರುವುದು ಸಂವಿಧಾನದ ವ್ಯಾಖ್ಯಾನವಷ್ಟೆ ಅಲ್ಲ, ಬದಲಿಗೆ ನಿರ್ಧಿಷ್ಟ ತತ್ವವೊಂದರ ಕಾನೂನು ನೀತಿಗಳು ಕೂಡಾ ಸಮಾಜದ ಪ್ರಸ್ತುತ ಮತ್ತು ತುರ್ತಿನ ಅಗತ್ಯಗಳಿಗೆ ಅನುಗುಣವಾಗಿರಬೇಕು, ಅಲ್ಲದೆ ಈಗಿನ ಕಾಲದ ಮಟ್ಟಿಗೆ ವಿವೇಚನಾಯುಕ್ತವಾಗಿಯೂ, ಸುಲಭವಾಗಿ ಅನ್ವಯವಾಗುವಂತೆಯೂ ಇರಬೇಕು ಎಂಬುದನ್ನು ಸೂಚಿಸುತ್ತವೆ.

187. ಇದು ಸಂವಿಧಾನಾತ್ಮಕ ಹಕ್ಕುಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವ ಸರ್ಕಾರದ ಒಂದು ಪ್ರಮುಖ ಪಾತ್ರಕ್ಕೆ ಜನ್ಮ ನೀಡುತ್ತದೆ. ಮತ್ತು ಸಹಜವಾಗಿ, ಅದು ಸರ್ಕಾರದ ಮೂರು ಅಂಗಗಳಾದ, ಶಾಸಕಾಂಗ, ಕಾರ್ಯಾಂಗ, ಹಾಗೂ ನ್ಯಾಯಾಂಗಗಳನ್ನು ಒಳಗೊಂಡಿರುತ್ತದೆ. ದಿಟ್ಟವಾದ ಕ್ರಮಗಳಿಗೆ ಕಾರಣವಾಗುವ

ನಿಷ್ಠೆಯ ಬದ್ಧತೆಯನ್ನು ಸರ್ಕಾರ ತೋರಿಸಬೇಕಾಗಿದೆ. ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಕ್ಕುಗಳ ಪ್ರಗತಿಶೀಲ ಸಾಕ್ಷಾತ್ಕಾರಕ್ಕೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವ ಹೊಣೆಗಾರಿಕೆ ಸರ್ಕಾರದ ಮೇಲಿದೆ.

188. ಹಕ್ಕುಗಳ ಪ್ರಗತಿಶೀಲ ಸಾಕ್ಷಾತ್ಕಾರದ ಸಿದ್ಧಾಂತವು ನೈಸರ್ಗಿಕ ಪ್ರಕ್ರಿಯೆಯಂತೆ, ಹಿಮ್ಮೆಟ್ಟುವಿಕೆ-ವಿರೋಧೀ ಸಿದ್ಧಾಂತಕ್ಕೆ ಜನ್ಮ ನೀಡುತ್ತದೆ. ಈ ಸಿದ್ಧಾಂತದ ಪ್ರಕಾರ, ಹಕ್ಕುಗಳ ಯಾವುದೇ ಬಗೆಯ ಹಿಂಪಡೆಯುವಿಕೆ ಆಗಬಾರದು. ಒಂದು ಪ್ರಗತಿಶೀಲ ಮತ್ತು ನಿರಂತರ ಸುಧಾರಣೆ ಹೊಂದುವಲ್ಲಿ ಹಿಮ್ಮೆಟ್ಟುವಿಕೆಗೆ ಯಾವುದೇ ಅವಕಾಶವಿಲ್ಲ. ಸಮಾಜವು ಮುಂದಕ್ಕೆ ಸಾಗಲೆಬೇಕು.

189. ಸಂವಿಧಾನದ ಅಡಿಯಲ್ಲಿನ ಅಥವಾ ಇತರ ಹಕ್ಕುಗಳ ಪ್ರಯೋಜನಗಳ ಉದ್ದೇಶಪೂರ್ವಕ ಹಿಂಪಡೆಯುವಿಕೆ ಕಾರಣವಾಗುವ ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳಬಾರದು ಎಂಬುದು ಹಿಮ್ಮೆಟ್ಟುವಿಕೆ-ವಿರೋಧಿ ಸಿದ್ಧಾಂತದ ಅಪೇಕ್ಷೆ.

190. ಮೇಲಿನ ಎರಡು ಸಿದ್ಧಾಂತಗಳು, ನಾವು ಸುರೇಶ್ ಕೌಶಲ್ ಪ್ರಕರಣದಲ್ಲಿ ಪ್ರತಿಪಾದಿಸಲಾದ ಕಾನೂನನ್ನು ಒಪ್ಪಿಕೊಂಡರೆ, ಅದು ಖಂಡಿತವಾಗಿಯೂ, ಸಂವಿಧಾನದ ಪ್ರಗತಿಶೀಲ ವ್ಯಾಖ್ಯಾನದ ದಿಸೆಯಲ್ಲಿ ಹೆಜ್ಜೆಯನ್ನು ಹಿಂದ್ದಿಟ್ಟಂತಾಗಿ ಹಕ್ಕುಗಳ ಪ್ರಗತಿಪರ ಸಾಕ್ಷಾತ್ಕಾರವನ್ನು ತಿರಸ್ಕರಿಸಿದಂತಾಗುತ್ತದೆ, ಎಂಬ ಅಲ್ಲಗಳೆಯಲಾಗದ ತೀರ್ಮಾನಕ್ಕೆ ಬರುವಂತೆ ಮಾಡುತ್ತವೆ. ಸುರೇಶ್ ಕೌಶಲ್ ಪರಕರಣದ ಅಭಿಪ್ರಾಯವೂ ಜನಸಂಖ್ಯೆಯ ಅತಿಸಣ್ಣ-ಭಾಗವೆಂಬ ಅಂಶವನ್ನು ತಪ್ಪಾಗಿ ಪರಿಗಣಿಸುತ್ತದೆ ಮತ್ತು ಸಾಮಾಜಿಕ ನೈತಿಕತೆಯ ಭಾವನೆಯ ಹಿನ್ನೆಲೆಯಲ್ಲಿ, ಅಪರಾಧಿಕತೆಯನ್ನು ತನ್ನ ಆಧಾರವೆಂದೂ ಊಹಿಸಿಕೊಳ್ಳುತ್ತದೆ. ಆದು ಭಯವಲ್ಲದೇ ಮತ್ತೇನು ಅಲ್ಲದ ಆರೋಗ್ಯದ ಬಗ್ಗೆ ಚರ್ಚಿಸುತ್ತದೆ ಮತ್ತು ಗೌಪ್ಯತೆ, ವೈಯಕ್ತಿಕ ಆಯ್ಕೆ ಮತ್ತು ನಿಲುವನ್ನು ಸಂಪೂರ್ಣವಾಗಿ ಕಡೆಗಣಿಸಿ ಜನಪ್ರಿಯ ನೈತಿಕತೆಯ ಪ್ರಕಾರ ನಡೆದುಕೊಳ್ಳುತ್ತದೆ. ಮತ್ತೊಂದು ಲಿಂಗದವರನ್ನು ನೋಡುವಾಗ, ಒಂದು ರೀತಿಯಲ್ಲಿ, ನರ-ಸಂವೇದನೆಯ ಮೂಲಕ ನಿಲುವು ವ್ಯಕ್ತವಾಗುತ್ತದೆ. ಅದಲ್ಲದೇ, ಮಾಹಿತಿಯ ಹರವಿಗೆ ಸಿಕ್ಕ, ಸುರೇಶ್ ಕೌಶಲ್ ಪ್ರಕರಣದ ತೀರ್ಪು ಮೂಲಭೂತ ಹಕ್ಕುಗಳನ್ನು ಉಳಿಸಿಕೊಳ್ಳಲು ಬಹುಮತದ ಅನುಮೋದನೆಯ ಅಗತ್ಯವಿಲ್ಲ ಎಂಬುದನ್ನು ಅರಿಯುವುದರಲ್ಲಿ ಸೋಲುತ್ತದೆ. ಈ ಪ್ರಕಾರವಾಗಿ ಈ ತೀರ್ಪು ಸೂಕ್ಷ್ಮವಾದ ಪ್ರಭಾವಗಳಿಗೊಳಗಾಗುತ್ತದೆ.

## N. ಅಂತಾರಾಷ್ಟ್ರೀಯ ದೃಷ್ಟಿಕೋನ

## I. ಯುನೈಟೆಡ್ ಸ್ಟೇಟ್ಸ್

191. **ಒಬೆರ್ಜೆಫೆಲ್, ಮತ್ತು ಸಂಗಡಿಗರು v. ಹೊಡ್ಜಸ್, ಒಹಾಯೊ ಆರೋಗ್ಯ ಇಲಾಖೆ ಮತ್ತು ಇತರರು**[76] ಪ್ರಕರಣದಲ್ಲಿ, ಸಮಲೈಂಗಿಕರ ಅವಸ್ಥೆಗೆ ಒತ್ತುನೀಡಿದ ಅಮೇರಿಕೆಯ ಸರ್ವೋಚ್ಚ ನ್ಯಾಯಾಲಯವು, 20ನೇ ಶತಮಾನದ ನಡುವಿನವರೆಗೆ ಬಹುಪಾಲು ಪಾಶ್ಚಿಮಾತ್ಯ ರಾಷ್ಟ್ರಗಳಿಂದ ಸಮಲೈಂಗಿಕ ಅನ್ಯೋನ್ಯತೆಯು ಬಹುಕಾಲದವರೆಗೆ ಅನೈತಿಕವೆಂದು ಸರ್ಕಾರದಿಂದಲೇ ಹಲವು ಖಂಡಿಸಲ್ಪಟ್ಟಿತ್ತು ಮತ್ತು ಕ್ರಿಮಿನಲ್ ಕಾನೂನುಗಳಲ್ಲಿ ಈ ಬಗೆಯ ನಂಬಿಕೆಯನ್ನು ಬಿತ್ತಲಾಗಿತ್ತು ಮತ್ತು ಇದೇ ಕಾರಣದಿಂದ, ಸಮಲೈಂಗಿಕರಿಗೆ, ತಮ್ಮ ವಿಶಿಷ್ಟವಾದ ಗುರುತಿನ ಮೂಲಕ ತಮ್ಮದೇ ಆದ ಘನತೆ ಹೊಂದಲು ಅವಕಾಶವಿರಲಿಲ್ಲ ಎಂದು ಗಮನಿಸಿತು. ತಮ್ಮ ಮನಸ್ಸುಗಳಲ್ಲಿರುವ ನಿಜವಾದ ವಿಚಾರಗಳ ಕುರಿತು ಸಮಲೈಂಗಿಕ ದಂಪತಿಗಳು ಮೌನವಾಗಿರಬೇಕಾಗಿತ್ತು, ಮತ್ತು 2ನೇ ವಿಶ್ವ ಯುಧ್ಧದ ನಂತರದ ಅವಧಿಯಲ್ಲಿ ಮಾನವಿಯತೆ ಮತ್ತು ಪ್ರಾಮಾಣಿಕತೆಯ ಕುರಿತು ಮಹತ್ತರವಾದ ಅರಿವು ಬಂದಿತಾದರೂ, ಸಮಲೈಂಗಿಕ ಪುರುಷರು ಮತ್ತು ಸಮಲೈಂಗಿಕ ಸ್ತ್ರೀಯರು ಘನತೆಯ ಮೇಲೆ ನ್ಯಾಯಸಮ್ಮತವಾದ ಹಕ್ಕನ್ನು ಹೊಂದಿದ್ದಾರೆ ಎಂಬ ವಾದದ ಬಗೆಗೆ ಕಾನೂನು ಮತ್ತು ಪ್ರಚಲಿತ ಸಾಮಾಜಿಕ ಸಂಪ್ರದಾಯಗಳೆರೆಡರಲ್ಲೂ ತಕರಾರುಗಳಿದ್ದುವು ಎಂಬುದನ್ನು ನ್ಯಾಯಾಲಯ ಗಮನಿಸಿತು. ಅನೇಕ ರಾಜ್ಯಗಳಲ್ಲಿ ಸಮಲೈಂಗಿಕ ಅನ್ಯೋನ್ಯತೆಯು ಇನ್ನೂ ಅಪರಾಧವಾಗುಳಿದಿದೆ ಎಂಬುದನ್ನು ಗಮನಿಸಿದ ನ್ಯಾಯಾಲಯ ಸಮಲೈಂಗಿಕರನ್ನು ಬಹುತೇಕ ಸರಕಾರಿ ಉದ್ಯೋಗಗಳಲ್ಲೀ ನಿರ್ಬಂಧಿಸಲಾಗಿದೆ, ಮಿಲಿಟರಿ ಸೇವೆಯಿಂದ ನಿಷೇಧಿಸಲಾಗಿದೆ, ವಲಸೆ ಕಾನೂನುಗಳ ಅಡಿಯಲ್ಲಿ ಹೊರಗುಳಿಸಲಾಗಿದೆ, ಅವರು ಪೊಲೀಸರ ಕಿರುಕುಳಕ್ಕೆ ಗುರಿಯಾಗುತ್ತಿರುತ್ತಾರೆ ಮತ್ತು ಅವರ ಸಂಘಟನೆಯ ಹಕ್ಕುಗಳಿಗೂ ತಡೆಯೊಡ್ಡಲಾಗಿದೆ ಎಂಬುದನ್ನೂ ಗಮನಿಸಿತು.

192. ಸದರಿ ಕಾನೂನುಗಳು ಖಾಸಗೀ ಸಂಬಂಧವೊಂದನ್ನು ನಿಯಂತ್ರಿಸ ಯತ್ನಿಸುತ್ತಿವೆ ಮತ್ತು ಅವು ಕಾನೂನಿನ ಔಪಚಾರಿಕ ಮಾನ್ಯತೆಗೆ ಅರ್ಹ ಅಲ್ಲವೋ ಎಂಬುದರ ಹೊರತಾಗಿ, ಅದು ಪಾತಕಿಗಳೆಂದು ಪರಿಗಣಿಸಲ್ಪಡದೆ ಆಯ್ಕೆ

[76] 576 US (2015)

ಮಾಡುವ ವ್ಯಕ್ತಿಗಳ ಸ್ವಾತಂತ್ರ್ಯದ ವ್ಯಾಪ್ತಿಯಲ್ಲೇ ಬರುತ್ತದೆ ಎಂದು ನ್ಯಾಯಾಲಯ ಅಭಿಪ್ರಾಯ ಪಟ್ಟಿತು. ಹಾಗೆಯೇ, ವಯಸ್ಕರು ತಮ್ಮ ಮನೆಗಳ ಏಕಾಂತದಲ್ಲಿ ಮತ್ತು ತಮ್ಮದೇ ಆದ ಖಾಸಗೀ ಬದುಕುಗಳಲ್ಲಿ ಸಂಬಂಧಗಳನ್ನು ಬೆಳೆಸುವ ನಿರ್ಧಾರ ಮಾಡಿಯೂ ಮುಕ್ತ ವ್ಯಕ್ತಿಗಳಾಗಿ ತಮ್ಮ ಘನತೆಯನ್ನು ಉಳಿಸಿಕೊಳ್ಳಬಹುದು ಎಂಬುದನ್ನು ಒಪ್ಪಿಕೊಂಡ ನ್ಯಾಯಾಲಯ ಮತ್ತು ಲೈಂಗಿಕತೆಯು ಮತ್ತೊಬ್ಬ ವ್ಯಕ್ತಿಯೊಂದಿಗಿನ ಖಾಸಗೀ ನಡವಳಿಕೆಯಲ್ಲಿ ಬಹಿರಂಗವಾಗಿ ವ್ಯಕ್ತಗೊಂಡಾಗ, ಆ ವರ್ತನೆಯು ಶಾಶ್ವತವಾದ ಖಾಸಗೀ ನಂಟೊಂದರ ಹಲವು ಅಂಶಗಳಲ್ಲೊಂದಾಗಿರಬಹುದು ಎಂಬುದನ್ನು ಒಪ್ಪಿಕೊಂಡಿತು. ಸಂವಿಧಾನದಿಂದ ರಕ್ಷಿಸಲ್ಪಟ್ಟ ಅಂತಹ ಸ್ವಾತಂತ್ರ್ಯವು ಸಮಲೈಂಗಿಕ ವ್ಯಕ್ತಿಗಳಿಗೆ ಇಂತಹ ಆಯ್ಕೆ ಮಾಡುವ ಹಕ್ಕನ್ನು ನೀಡುತ್ತದೆ ಎಂದು ನ್ಯಾಯಾಲಯವು ತೀರ್ಮಾನಿಸಿತು.

193. ಪ್ರೈಸ್ ವಾಟರ್ ಹೌಸ್ v. ಹಾಪ್ಕಿನ್ಸ್[77] ಪ್ರಕರಣದಲ್ಲಿ, ಯುನೈಟೆಡ್ ಸ್ಟೇಟ್ಸಿನ ಸರ್ವೋಚ್ಛ ನ್ಯಾಯಾಲಯ, ಲಿಂಗಕ್ಕೆ ಸಂಬಂಧಿಸಿದ ರೂಢಮಾದರಿಗಳನ್ನು ಪ್ರತಿಪಾದಿಸುವುದರ ಕಾನೂನು ಪ್ರಸ್ತುತತೆಯ ಮೌಲ್ಯಮಾಪನ ಮಾಡುವಾಗ, ಹೀಗೆ ಗಮನಿಸಿತು:-

> "... ಉದ್ಯೋಗದಾತರು ತಮ್ಮ ನೌಕರರು ಅವರವರ ಗುಂಪಿನ ಜೊತೆಗೆ ತಳುಕು ಹಾಕಲಾದ ರೂಢಮಾದರಿಗೆ ಸರಿಹೊಂದುತ್ತಾರೆ ಎಂದು ಊಹಿಸಿಕೊಂಡು ಅಥವಾ ಒತ್ತಾಯಪಡಿಸುವ ಮೂಲಕ ನೌಕರರ ಮೌಲ್ಯಮಾಪನ ಮಾಡುವ ದಿನಗಳನ್ನು ನಾವು ಹಿಂದಿಕ್ಕಿದ್ದೇವೆ. ಉದ್ಯೋಗದಾತರು, ಲಿಂಗದ ಆಧಾರದಲ್ಲಿ ವ್ಯಕ್ತಿಗಳ ವಿರುದ್ಧ ತಾರತಮ್ಯ ಮಾಡುವುದನ್ನು ನಿಷೇಧಿಸುವುದರ ಹಿಂದೆ, ಪಾಲಿಕೆಯು ಲಿಂಗಾಧಾರಿತ ರೂಢಮಾದರಿಗಳಿಂದ ಉದ್ಭವಿಸುವ ಸ್ತ್ರೀ ಪುರುಷರೊಂದಿಗಿನ ಸಾಮಾನವಲ್ಲದೆ

[77] 490 U.S. 228 (1989)

ನಡವಳಿಕೆಯ ಇಡೀ ಶ್ರೇಣಿಗೆ ಕೊಡಲಿಯೇಟು ಹಾಕುವ ಉದ್ದೇಶ ಹೊಂದಿದೆ"

194. **ಕಿಂಬರ್ಲಿ ಹಿವೆಲಿ v. ಇಂಡಿಯಾನಾದ ಐವಿ ಟೆಕ್ ಕಮ್ಯುನಿಟಿ ಕಾಲೇಜ್**[78] ಪ್ರಕರಣದಲ್ಲಿ, ಅವರವರ ಲೈಂಗಿಕ ನಿಲುವನ್ನು ಆಧರಿಸಿ ಉದ್ಯೋಗಿಗಳ ನಡುವೆ ಭೇದಭಾವ ಮಾಡುವುದು ಲಿಂಗಾಧಾರಿತ ತಾರತಮ್ಯವೆಂದು ತೀರ್ಮಾನಿಸಿದ ನ್ಯಾಯಾಲಯವು, ಈ ಕೆಳಕಂಡಂತೆ ಗಮನಿಸಿತು:-

"ಲೈಂಗಿಕ ನಿಲುವು ಸ್ವಾಭಾವಿಕವಾಗಿ 'ಲಿಂಗಾಧಾರಿತ ಪರಿಗಣನೆ'ಯಾಗಿದೆ ಮತ್ತು ಮತ್ತು ಲೈಂಗಿಕ ನಿಲುವನ್ನಾಧರಿಸಿದ ತಾರತಮ್ಯದ ಆರೋಪವು ಮುಖ್ಯವಾಗಿ ಶೀರ್ಷಿಕೆ 7ರ ಅಡಿಯಲ್ಲಿನ ಲೈಂಗಿಕ ತಾರತಮ್ಯದ ಆರೋಪವ ಎಂದು ನಿರ್ಧರಿಸಿದ ಈ.ಈ.ಓ.ಸಿ.ಯ ಇತ್ತೀಚಿನ ತೀರ್ಮಾನವನ್ನು ಗಣನೆಗೆ ತೆಗೆದುಕೊಳ್ಳದಿದಾರೆ ಅದು ನಮ್ಮ ಅಜಾಗರೂಕತೆಯಗುತ್ತದೆ . **"ಬಾಲ್ಡ್ವಿನ್ v. ಫಾಕ್ಸ್,** ಇಇಒಸಿ ಅಪೀಲ್ ಸಂಖ್ಯೆ 0120133080, 2015 ವ್ಲ್ 4397641 *5, *10 (ಜುಲೈ 16, 2015) ರಲ್ಲಿ. ಶೀರ್ಷಿಕೆ 7ನ್ನು ಜಾರಿಗೊಳಿಸುವ ಅಧಿಕಾರವಿರುವ ಈ.ಈ.ಓ.ಸಿ.ಯು ಮೂರು ಪ್ರಾಥಮಿಕ ಕಾರಣಗಳಿಂದಾಗಿ ಈ ತೀರ್ಮಾನಕ್ಕೆ ಬಂದಿತು. ಮೊದಲನೆಯದಾಗಿ, ಅದು "ಲೈಂಗಿಕ ನಿಲುವನ್ನಾಧರಿಸಿದ ತಾರತಮ್ಯ ಲಿಂಗಾಧಾರಿತ ತಾರತಮ್ಯವಾಗಿದೆ, ಏಕೆಂದರೆ ಅದು ಮುಖ್ಯವಾಗಿ

[78] 830 F.3d 698 (7th Cir. 2016)

ನೌಕರರ ಲಿಂಗದ ದೆಸೆಯಿಂದ ಅವರಿಗೆ ಕಡಿಮೆ ಅದ್ಯತೆನೀಡಿ ನಡೆಸಿಕೊಳ್ಳುವುದನ್ನು ಒಳಗೊಂಡಿರುತ್ತದೆ" ಎಂದು ನ್ಯಾಯಾಲಯ ತೀರ್ಮಾನಿಸಿತು . *5 ನಲ್ಲಿ. (ತನ್ನ ಮೇಜಿನ ಮೇಲೆ ತನ್ನ ಸ್ತ್ರೀ-ಸಂಗಾತಿಯ ಛಾಯಾಚಿತ್ರವನ್ನು ಇರಿಸಿದ್ದಕ್ಕಾಗಿ ಅಮಾನತುಗೊಂಡ ಮಹಿಳೆಯ, ಮತ್ತು ಪುರುಷನೊಬ್ಬ ಅಂಥದೇ ಕೃತ್ಯವನ್ನು ಮಾಡಿದರೆ ಯಾವುದೇ ಪರಿಣಾಮಗಳನ್ನು ಎದುರಿಸುವುದಿಲ್ಲ ಎಂಬ ಉದಾಹರಣೆ ನೀಡುತ್ತಾ). ಎರಡನೆಯದಾಗಿ, "ಲೈಂಗಿಕ ನಿಲುವನ್ನಾಧರಿಸಿದ ತಾರತಮ್ಯವು ಲಿಂಗಾಧಾರಿತ ತಾರತಮ್ಯ ಕೂಡಾ ಆಗಿದೆ" ಏಕೆಂದರೆ ಅದು ಲಿಂಗವನ್ನಾಧರಿಸಿದ ಸಂಘಟನಾತ್ಮಕ ತಾರತಮ್ಯ" ಎಂದು ನ್ಯಾಯಾಲಯ ವಿವರಿಸಿದೆ, ಇದು ತಮ್ಮ ಸಮಲೈಂಗಿಕ ಸ್ತ್ರೀ, ಸಮಲೈಂಗಿಕ ಪುರುಷ, ಅಥವಾ ಉಭಯಲಿಂಗಾಸಕ್ತ ಉದ್ಯೋಗಿಗಳು ಯಾರನ್ನ ಪ್ರೀತಿಸುತ್ತಾರೆ ಅಥವಾ ಯಾರಣ್ಣು ಮದುವೆಯಾಗುತ್ತಾರೆ ಎಂಬುದನ್ನ ಆಧಾರಿಸಿ ಅವರ ವಿರುದ್ಧ ಉದ್ಯೋಗದಾತರು ತಾರತಮ್ಯ ಮಾಡುವುದಕ್ಕೆ ಸಂಬಂಧಿಸಿದೆ. ಐಡಿ. *6-7ನಲ್ಲಿ. ಕಡಯದಾಗಿ, ಇ.ಇ.ಒ.ಸಿ ಲೈಂಗಿಕ ನಿಲುವನ್ನಾಧರಿಸಿದ ತಾರತಮ್ಯವನ್ನು ಲಿಂಗಾಧಾರಿತ ರೂಢಮಾದರಿಗಳನ್ನಾಧರಿಸಿದ ತಾರತಮ್ಯದ ರೂಪವೆಂದು ವಿವರಿಸಿದ ನ್ಯಾಯಾಲಯವು, ಇದರಡಿಯಲ್ಲಿ ಸೂಕ್ತವಾದ ಗಂಡು ಮತ್ತು ಹೆಣ್ಣು ನಡವಳಿಕೆಗಳು, ಹಾವಭಾವಗಳು

> ಮತ್ತು ಹೊರನೋಟಗಳ ಬಗೆಗಿನ ಸಾಮಾಜಿಕ ನಿಯಮಗಳಿಗೆ ತಕ್ಕಂತೆ ನಡೆದುಕೊಳ್ಳಲು ವಿಫಲರಾಗುವ ಉದ್ಯೋಗಿಗಳಿಗೆ ಕಿರುಕುಳ ನೀಡಲಾಗುತ್ತದೆ. ಐಡಿ. ತನ್ನ ತೀರ್ಮಾನಗಳನ್ನು ತೆಗೆದುಕೊಳ್ಳುವಾಗ, ಇ.ಇ.ಒ.ಸಿ.ಯು ವಿಮರ್ಶಾತ್ಮಕವಾಗಿ ಗಮನಿಸಿದಂತೆ "ನ್ಯಾಯಾಲಯಗಳು, ಸರಹದ್ದುಗಳು [ಲಿಂಗ ಮತ್ತು ಲೈಂಗಿಕ ನಿಲುವನ್ನಾಧರಿಸಿದ ತಾರತಮ್ಯಗಳ ಎರಡು ವರ್ಗಗಳ ನಡುವೆ] ಅಸ್ಪಷ್ಟವಾಗಿವೆ" ಎಂದು ಗುರುತಿಸಿರುವ ಹೊರಗಿತಾಯೂ, ಲೈಂಗಿಕ ನಿಲುವನ್ನಾಧರಿಸಿದ ತಾತರಮ್ಯವನ್ನು ಲಿಂಗಾಧಾರಿತ ತಾರತಮ್ಯದಿಂದ ಬೇರ್ಪಡಿಸಲು ಪ್ರಯತ್ನಿಸಿವೆ. ಐಡಿ. *8ನಲ್ಲಿ (ಸಿಮೊಂಟನ್ ರನ್ನು ಉಲ್ಲೇಖಿಸುತ್ತ, 232 ಎಫ್ .3 ಡಿ 35 ನಲ್ಲಿ). [ಅಡಿರೇಖೆ ನಮ್ಮದು]

195. **ಲಾರೆನ್ಸ್ v. ಟೆಕ್ಸಾಸ್** [79] ಪ್ರಕರಣದಲ್ಲಿ ಸಮಲೈಂಗಿಕಗರ ನಡುವಿನ ಲೈಂಗಿಕ ನಡವಳಿಕೆಯ ನಿರಪರಾಧೀಕರಣದದ ವಿಚಾರವನ್ನು ಪರಾಂಬರಿಸುವಾಗ , ಯು.ಎಸ್. ನ ಸರ್ವೋಚ್ಛ ನ್ಯಾಯಾಲಯವು, ಸದರಿ ಸಮಸ್ಯೆಯ ಅಪ್ರಾಪ್ತ ವಯಸ್ಕರು ಅಥವಾ ಗಾಯಗೊಳಗಾದವರು ಅಥವಾ ಬಲವಂತಕ್ಕೊಳಗಾಗುವ ವ್ಯಕ್ತಿಗಳು ಅಥವಾ ಒಪ್ಪಿಗೆಯನ್ನು ಸುಲಭವಾಗಿ ತಿರಸ್ಕರಿಸುವುದು ಸಾಧ್ಯವಿಲ್ಲ ಸಂಬಂಧಗಳಲ್ಲಿರುವವರನ್ನು ಒಳಗೊಂಡಿಲ್ಲ ಯಾರು ಎಂದು ಗಮನಿಸಿದ್ದಾರೆ. ಸಮ್ಮತಿಯನ್ನು ಸುಲಭವಾಗಿ ತಿರಸ್ಕರಿಸಲಾಗದು ಅಥವಾ ಸಾರ್ವಜನಿಕ ನಡವಳಿಕೆ ಅಥವಾ ವೇಶ್ಯಾವೃತ್ತಿಯನ್ನೂ ಒಳಗೊಂಡಿಲ್ಲ ಅಥವಾ ಇಲ್ಲಿ ಸರಕಾರವು ಸಮಲೈಂಗಿಕರು ಬೆಳೆಸ ಬಯಸುವ ಯಾವುದೇ ಸಂಬಂಧಕ್ಕೆ ಔಪಚಾರಿಕ ಮಾನ್ಯತೆ ನೀಡಬೇಕೆ ಎಂಬ ಪ್ರಶ್ನೆಯೇ ಇಲ್ಲ ಎಂಬುದನ್ನು ಗಮನಿಸಿತು. ಪೂರ್ಣ ಮತ್ತು ಪರಸ್ಪರ ಒಪ್ಪಿಗೆಯೊಂದಿಗೆ ಲೈಂಗಿಕ ಕ್ರಿಯೆಗಳಲ್ಲಿ ತೊಡಗುವ ಇಬ್ಬರು ವಯಸ್ಕರಿಗೆ ಸಂಬಂಧಿಸಿರುವ ವಿಚಾರವು, ಸಮಲೈಂಗಿಕ ಜೀವನಶೈಲಿಯಲ್ಲಿ

[79] 539 U.S. 558 (2003)

ಸಾಮಾನ್ಯವಾದುದು ಎಂದು ಅರ್ಜಿದಾರರು ತಮ್ಮ ಖಾಸಗೀ ಬದುಕಿನೆಡೆಗಿನ ಗೌರವಕ್ಕೆ ಅರ್ಹರಾಗಿದ್ದಾರೆ ಮತ್ತು ಸರ್ಕಾರ ಅವರ ಖಾಸಗೀ ಲೈಂಗಿಕ ನಡವಳಿಕೆಯನ್ನು ಅಪರಾಧೀಕರಿಸುವ ಮೂಲಕ ಅವರ ಅಸ್ತಿತ್ವವನ್ನು ಅವಮಾನಿಸುವಂತಿಲ್ಲ ಅಥವಾ ಅವರ ಹಣೆಬರಹವನ್ನು ನಿಯಂತ್ರಿಸಲಾಗುವುದಿಲ್ಲ, ಏಕೆಂದರೆ, ಡ್ಯೂ ಪ್ರಾಸೆಸ್ ಕ್ಲಾಸಿನ ಅಡಿಯಲ್ಲಿನ ಸ್ವಾತಂತ್ರ್ಯದ ಹಕ್ಕು ಅವರಿಗೆ ಸರ್ಕಾರದ ಹಸ್ತಕ್ಷೇಪವಿಲ್ಲದೆ ತಮ್ಮ ಕ್ರಿಯೆಗಳಲ್ಲಿ ತೊಡಗಿಕೊಳ್ಳುವ ಹಕ್ಕನ್ನು ನೀಡುತ್ತದೆ ಎಂದು ನ್ಯಾಯಾಲಯವು ಘೋಷಿಸಿತು.

196. **ರಾಬರ್ಟ್ಸ್** v. **ಯುನೈಟೆಡ್ ಸ್ಟೇಟ್ಸ್ ಜೇಸೀಸ್**[80] ಪ್ರಕರಣದಲ್ಲಿ , ಯುನೈಟೆಡ್ ಸ್ಟೇಟ್ಸ್ ನ ಸರ್ವೋಚ್ಚ ನ್ಯಾಯಾಲಯ ಹೀಗೆಂದು ಗಮನಿಸಿತು:-

> "ನಮ್ಮ ನಿರ್ಧಾರಗಳು ಸಂವಿಧಾನಾತ್ಮಕವಾಗಿ ಸಂರಕ್ಷಿಸಲ್ಪಟ್ಟ" "ಸಂಘತನೆಯ ಸ್ವಾತಂತ್ರ್ಯವನ್ನು" ಎರಡು ವಿಭಿನ್ನ ಅರ್ಥಗಳಲ್ಲಿ ಉಲ್ಲೇಖಿಸಿವೆ. ನಿರ್ಧಾರದ ಒಂದು ಸಾಲಿನಲ್ಲಿ ಸಾಲಿನಲ್ಲಿ, ಕೆಲವು ನಿಕಟವಾದ ಮಾನವ ಸಂಬಂಧಗಳು ನಮ್ಮ ಸಾಂವಿಧಾನಿಕ ವಿನ್ಯಾಸದ ಕೇಂದ್ರವಾಗಿರುವ ವೈಯಕ್ತಿಕ ಸ್ವಾತಂತ್ರ್ಯವನ್ನು ರಕ್ಷಿಸುವುದರಲ್ಲಿ ವಹಿಸುವ ಪಾತ್ರದ ಹಿನ್ನೆಲೆಯಲ್ಲಿ, ವ್ಯಕ್ತಿಯೊಬ್ಬ ಅಂತಹ ನಿಕಟವಾದ ಮಾನವ ಸಂಬಂಧಗಳನ್ನು ಬೆಳೆಸಲು ಮತ್ತು ನಿರ್ವಹಿಸಲು ಹೊಂದಿರುವ ಆಯ್ಕೆಗಳನ್ನು, ಸರ್ಕಾರವು ಸೂಕ್ತವಲ್ಲದ ಹಸ್ತಕ್ಷೇಪದಿಂದ ಕಾಪಾಡಬೇಕು, ಎಂದು ನ್ಯಾಯಾಲಯ ತೀರ್ಮಾನಿಸಿದೆ. ಈ ವಿಷಯದಲ್ಲಿ, ಸಂಘಟನೆಯ ಸ್ವಾತಂತ್ರ್ಯವು ವೈಯಕ್ತಿಕ ಸ್ವಾತಂತ್ರ್ಯದ ಒಂದು

[80] 468 U.S. 609 (1984)

ಮೂಲಭೂತ ಅಂಶದ ರೂಪದಲ್ಲಿ ರಕ್ಷಣೆ ಪಡೆಯುತ್ತದೆ. ಮತ್ತೊಂದು ತೀರ್ಪಿನಲ್ಲಿ ನ್ಯಾಯಾಲಯವು, ಮೊದಲನೇ ತಿದ್ದುಪಡಿಯಡಿಯಲ್ಲಿ ರಕ್ಷಿಸಲಾಗಿರುವ- ಭಾಷಣ, ಸಭೆಸೇರುವಿಕೆ, ಕುಂದು ಕೊರತೆಗಳ ಪರಿಹಾರಕ್ಕಾಗಿ ಅರ್ಜಿಸಲ್ಲಿಸುವುದು ಮತ್ತು ಧರ್ಮದ ಪಾಲನೆಗಳನ್ನು ಒಳಗೊಂಡಿರುವ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಸಲುವಾಗಿ ಸಂಘಟಿತರಾಗುವ ಹಕ್ಕನ್ನು ಗುರುತಿಸಿದೆ. ಸಂವಿಧಾನವು ಈ ರೀತಿಯ ಸಂಘಟನೆಯ ಸ್ವಾತಂತ್ರ್ಯವನ್ನು ಇತರ ವೈಯಕ್ತಿಕ ಸ್ವಾತಂತ್ರ್ಯಗಳನ್ನು ಸಂರಕ್ಷಿಸುವ ಅನಿವಾರ್ಯ ವಿಧಾನವೆಂದು ಪರಿಗಣಿಸಿ ಖಾತರಿಪಡಿಸುತ್ತದೆ. ಸಾಂವಿಧಾನಿಕವಾಗಿ ರಕ್ಷಿಸಲ್ಪಟ್ಟಿರುವ ಸಂಘಟನೆಯ ಸ್ವಾಭಾವಿಕ ಮತ್ತು ಚಲನಶೀಲ ಲಕ್ಷಣಗಳು ಸಹಜವಾಗಿಯೇ ಒಂದೇ ಬಗೆಯವಾಗಿರುತ್ತವೆ" [ಒತ್ತು ನೀಡಲಾಗಿದೆ]

## II. ಕೆನಡಾ

197. ಕೆನಡಾದ ಸರ್ವೋಚ್ಚ ನ್ಯಾಯಾಲಯ, **ಡೆಲ್ವಿನ್ ವ್ರೈಂಡ್ ಮತ್ತು ಇತರರು ವಿ. ಆಲ್ಬರ್ಟಾಡಾ ಹಕ್ಕಿನ ರಾಣಿ ಮತ್ತು ಇತರರು** [81] ಪ್ರಕರಣದಲ್ಲಿ ಕೆನೆಡದ ಹಕ್ಕು ಮತ್ತು ಸ್ವಾತಂತ್ರ್ಯಗಳ ಸನ್ನದಿನ, 15(1)ನೇ ಪರಿಚ್ಛೇದದ ಉಲ್ಲಂಘನೆಯನ್ನು ವ್ಯಾಖ್ಯಾನಿಸುತ್ತಾ ಲಿಂಗವು ಲೈಂಗಿಕ ನಿಲುವನ್ನು ಒಳಗೊಂಡಿದೆ ಎಂಬ ನಿರ್ಧಾರವನ್ನು ತೆಗೆದುಕೊಂಡಿತು. ಸನ್ನದಿನ 15 (1)ನೇ ಪರಿಚ್ಛೇದ ಹೀಗಿದೆ: -

[81] [1998] 1 SCR 493

"ಪ್ರತಿ ವ್ಯಕ್ತಿಯು ಕಾನೂನಿನ ಎದುರು ಮತ್ತು ಕಾನೂನಿನ ಅಡಿಯಲ್ಲಿ ಸಮಾನವಾಗಿರುತ್ತಾರೆ ಮತ್ತು ಸಮಾನ ರಕ್ಷಣೆ ಮತ್ತು ಕಾನೂನಿನ ಸಮಾನ ಲಾಭದ ಹಕ್ಕನ್ನು ತಾರತಮ್ಯವಿಲ್ಲದ ರೀತಿಯಲ್ಲಿ ಮತ್ತು ಪ್ರಮುಖವಾಗಿ, ಜನಾಂಗ, ರಾಷ್ಟ್ರೀಯ ಅಥವಾ ಜನಾಂಗೀಯ ಮೂಲ, ಬಣ್ಣ, ಧರ್ಮ, ಲಿಂಗ, ವಯಸ್ಸು ಅಥವಾ ವಯಸ್ಸನ್ನಾಧರಿಸಿದ ಭೇದಭಾವವಿಲ್ಲದ ರೀತಿಯಲ್ಲಿ ಹೊಂದಿರುತ್ತಾರೆ"

198. **ಡೆಲ್ವಿನ್ ವ್ರೆಂಡ್** ಪ್ರಕರಣದಲ್ಲಿ, ಕೆನಡಾದ ಸರ್ವೋಚ್ಚ ನ್ಯಾಯಾಲಯವು ತಾನು **ಈಗನ್ v. ಕೆನಡಾ (ಮೇಲ್ಕಂಡ)** ಪ್ರಕರಣದಲ್ಲಿ ಅಳವಡಿಸಿಕೊಂಡಿದ್ದ ತರ್ಕವನ್ನು ಅವಲಂಬಿಸುತ್ತಾ, ಪಠ್ಯ ರೂಪದಲ್ಲಿ ವಿವರಿಸಲಾಗಿರುವಂತಹುದೇ ಆಧಾರಗಳ ಪರೀಕ್ಷೆಯನ್ನು ಅನ್ವಯಿಸಿತು. ಈಗನ್ ಪರೀಕ್ಷೆ ಹೀಗಿದೆ:-

ಈಗನ್ ಪ್ರಕರಣದಲ್ಲಿ, ಕಾನೂನು ಹುಟ್ಟುಹಾಕಿರುವ ವ್ಯತ್ಯಾಸಗಳು ತಾರತಮ್ಯ ಎಸಗುತ್ತವೆಯೇ ಎಂಬುದನ್ನು ನಿರ್ಧರಿಸಲು ಎರಡು ಸೂಕ್ತ ಅಂಶಗಳಿವೆ. ಮೊದಲನೆಯದು, 15ನೇ ಪರಿಚ್ಛೇದದಡಿಯಲ್ಲಿ ಉಲ್ಲೇಖಿಸಲಾಗಿರುವ ಅಥವಾ ಉಲ್ಲೇಖಿಸಲಾಗಿರುವುದನ್ನು ಹೋಲುವ ವೈಯಕ್ತಿಕ ಗುಣಲಕ್ಷಣಗಳ ಆಧಾರದಲ್ಲಿ ಸಮಾನತೆಯ ಹಕ್ಕನ್ನು ನಿರಾಕರಿಸಲಾಗುತ್ತಿದೆಯೇ" ಎಂಬುದು. ಎರಡನೆಯದು, "ಆ ವ್ಯತ್ಯಾಸವು ಅರ್ಜಿದಾರರ ಮೇಲೆ, ಇತರರ ಮೇಲೆ ಹೊರಿಸದಂತಹ ಹೊರೆ, ಬದ್ಧತೆ ಅಥವಾ ಅನಾನುಕೂಲವನ್ನು ಹೊರಿಸುವ ಅಥವಾ

ಇತರರಿಗೆ ಲಭ್ಯವಿರುವ ಲಾಭಗಳು ಮತ್ತು ಅನುಕುಲಗಳ ದೊರಕುವಿಕೆಯನ್ನು ಸೀಮಿತಗೊಳಿಸುವಂತಹ" ಪರಿಣಾಮವನ್ನು ಹೊಂದಿದೆಯೇ ಎಂಬುದು. (131ನೇ ವಾಕ್ಯದಲ್ಲಿ).

ತಾರತಮ್ಯಪೂರ್ಣ ವ್ಯತ್ಯಾಸವನ್ನು "ಈ ವ್ಯತ್ಯಾಸದಿಂದ ಪರಿಕೂಲ ಪರಿಣಾಮಕ್ಕೆ ಒಳಗಾಗಿರುವ ವ್ಯಕ್ತಿಗಳನ್ನು ಮನುಷ್ಯರೆಂದು, ಅಥವಾ ಸಮಾನವಾದ ಕಾಲಜಿ ಗೌರವ ಮತ್ತು ಪರಿಗಣನೆಯನ್ನು ಪಡೆಯಬೇಕಿರುವ ಕೆನಡಾದ ಸಮಾಜದ ಸದಸ್ಯರೆಂದು ಗುರುತಿಸಲ್ಪಡಲು ಕಡಿಮೆ ಅರ್ಹರು ಅಥವಾ ಹಾಗೆ ಗುರುತಿಸಲ್ಪಡುವಷ್ಟು ಮೌಲ್ಯ ಅವರಿಗಿಲ್ಲ ಎಂಬ ದೃಷ್ಟಿಕೋನವನ್ನು ಪ್ರೋತ್ಸಾಹಿಸುವ ಅಥವಾ ಹರಡುವ ಸಾಮರ್ಥ್ಯವಿರುವ" ವ್ಯತ್ಯಾಸ ಎಂದು ಕೂಡ ವಿವರಿಸಲಾಗಿದೆ. (ಈಗನ್, ವಾಕ್ಯದಲ್ಲಿ, ನ್ಯಾ ಎಲ್'ಹ್ಯೂರೆಕ್ಸ್ - ಡ್ಯೂಬೆ ಪ್ರಕಾರ). ಅಸಮಾನ ನಡೆಸಿಕೊಳ್ಳುವಿಕೆಯು "ವ್ಯಕ್ತಿಯೊಬ್ಬರು ಸೇರಿದ್ದರೆ ಎಂದು ಕಲ್ಪಿಸಿಕೊಳ್ಳಲ್ಪಟ್ಟಿರುವ ಗುಂಪು ಅಥವಾ ಆವಗಿರಬಹುದಾದ ವೈಯಕ್ತಿಕ ಗುಣಾಲಕ್ಷಣಗಳ ರೂಢಮಾದರಿಯ ಅನ್ವಯಿಸುವಿಕೆ" ಯನ್ನು ಆಧರಿಸಿದೆಯೇ ಎಂಬುದನ್ನು ಪರಿಗಣಿಸುವುದು ಕೂಡಾ ಸೂಕ್ತವಾಗಬಹುದು (ಮಿರನ್, 128ನೇ ವಾಕ್ಯದಲ್ಲಿ ನ್ಯಾ. ಮೆಕ್ಲಾಕ್ಲಿನ್ ಪ್ರಕಾರ).

ಈಗನ್, ಪ್ರಕರಣದಲ್ಲಿ ಸಮಲೈಂಗಿಕರು ಅನುಭವಿಸಿದ "ಐತಿಹಾಸಿಕ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಅನನುಕೂಲ" ಮತ್ತು ಶಾಸಕಾಂಗಗಳಲ್ಲಿ ಮೂಡುತ್ತಿರುವ ಒಮ್ಮತ (176ನೇ ವಾಕ್ಯದಲ್ಲಿ), ಜೊತೆಗೆ ನ್ಯಾಯಾಂಗದ ಹಿಂದಿನ ನಿರ್ಣಯಗಳನ್ನು (177ನೇ ವಾಕ್ಯದಲ್ಲಿ) ಆಧರಿಸಿ ಲೈಂಗಿಕ ನಿಲುವು 15(1)ನೇ ಪರಿಚ್ಛೇದದಲ್ಲಿ ಪಟ್ಟಿಮಾಡಿರುವ ಆಧಾರಗಳನ್ನು ಹೋಲುತ್ತದೆ ಎಂದು ನಿರ್ಧರಿಸಲಾಯಿತು. ಲೈಂಗಿಕ ನಿಲುವು "ಒಪ್ಪಲಾರದ ವೈಯಕ್ತಿಕ ಬೆಲೆಯನ್ನು ತೆತ್ತಾಗ ಬದಲಾಗಬಲ್ಲ ಅಥವಾ ಬದಲಾಯಿಸಲು ಸಾಧ್ಯವಾಗದ ಗಾಢವಾದ ವೈಯಕ್ತಿಕ ಗುಣಲಕ್ಷಣವಾಗಿದೆ" (5ನೇ ವಾಕ್ಯ). ಆದು 15(1)ನೇ ಕಲಮಿನಲ್ಲಿ ನಮೂದಿಸಲಾಗಿರುವ ಇತರ ವೈಯಕ್ತಿಕ ಗುಣಲಕ್ಷಣಗಳನ್ನು ಹೋಲುತ್ತದೆ; ಆದ್ದರಿಂದ ಪರೀಕ್ಷೆಯ ಈ ಹಂತವನ್ನು ತೃಪ್ತಿಗೊಳಿಸಲಾಗಿದೆ"

199. ತರುವಾಯ, **ಡೆಲ್‌ವಿನ್ ವೆನ್ಡ್ (ಮೇಲ್ಕಂಡ)** ಪ್ರಕರಣದಲ್ಲಿ, ನ್ಯಾಯಾಲಯವು ಇಂತಹ ಪರಿಸ್ಥಿತಿಗಳು ಉಂಟುಮಾಡಬಹುಹಾದ ಅತಿದೊಡ್ಡ ಪರಿಣಾಮವೆಂದರೆ, ಬಹುಶಃ ಅದು ಮಾನಸಿಕ ಹಾನಿಯೊಂದೇ, ಏಕೆಂದರೆ, ತಾರತಮ್ಯದ ಭಯ, ಅವರನ್ನು (ಎಲ್.ಜಿ.ಬಿ.ಟಿ) ತಾರ್ಕಿವಾಗಿ ತನ್ನ ನಿಜವಾದ ಗುರುತನ್ನು ಮುಚ್ಚಿಡುವಂತೆ ಮಾಡುತ್ತದೆ ಮತ್ತು ಇದು ಅವರ ಖಾಸಗೀ ಆತ್ಮವಿಶ್ವಾಸ ಮತ್ತು ಸ್ವ-ಗೌರವಕ್ಕೆ ಹಾನಿಕರ ಎಂದು ಗಮನಿಸಿತು. ಇದು ವ್ಯಕ್ತಿಯನ್ನು ಕುಗ್ಗಿಸಿ ಸಮಲೈಂಗಿಕ ಪುರುಷರು ಮತ್ತು ಸಮಲೈಂಗಿಕ ಸ್ತ್ರೀಯರು ರಕ್ಷಣೆ ಪಡೆಯಲು ಕಡಿಮೆ ಅರ್ಹತೆಯಿರುವ ವ್ಯಕ್ತಿಗಳು ಎಂಬ ಅಭಿಪ್ರಾಯವನ್ನು ಕೆನಡಾದ ಸಮಾಜದಲ್ಲಿ ಹರಡುವಂತಹ ವ್ಯತ್ಯಾಸದ ಸ್ಪಷ್ಟ ಉದಾಹರಣೆ ಎಂದು ಕಂಡುಕೊಂಡ ನ್ಯಾಯಾಲಯವು, ಸಮಲೈಂಗಿಕ ಸ್ತ್ರೀ

ಪುರುಷರ ಘನತೆ ಮತ್ತು ಗ್ರಹೀತ ಮೌಲ್ಯಕ್ಕೆ ಆಗಬಾಹುದಾದ ಹಾನುಯು, ಅತ್ಯಂತ ಕ್ರೂರವಾದ ತಾರತಮ್ಯವಾಗಿದೆ.

## III. ದಕ್ಷಿಣ ಆಫ್ರಿಕಾ

200.ಗೇ ಮತ್ತು ಲೆಸ್ಬಿಯನ್ ಸಮಾನತೆಗಾಗಿ ರಾಷ್ಟ್ರೀಯ ಒಕ್ಕೂಟ ಪ್ರಕರಣದಲ್ಲಿ ದಕ್ಷಿಣ ಆಫ್ರಿಕಾದ ಸಾಂವಿಧಾನಿಕ ನ್ಯಾಯಾಲಯವು (ಮೇಲ್ಕಂಡ) ಈ ಕೆಳಗಿನ ಸೂಕ್ತ ಅವಲೋಕನಗಳನ್ನು ಮಾಡಿತು: -

> " ನಮ್ಮ ಕಾನೂನು ವ್ಯವಸ್ಥೆಯ ದೃಷ್ಟಿಯಲ್ಲಿ ಸಮಲೈಂಗಿಕರೆಲ್ಲರೂ ಅಪರಾಧಿಗಳು ಎಂದು ಹೇಳುವುದು ಇದರ ಸಾಂಕೇತಿಕ ಪರಿಣಾಮ. ಆದುದರಿಂದ ನಮ್ಮ ಜನಸಂಖ್ಯೆಯ ಗಣನೀಯ ಪ್ರಮಾಣದ ಜನರ ಮೇಲೆ ಹೇರಿರುವ ಕಳಂಕ ಸ್ಪಷ್ಟವಾಗಿ ಕಾಣುತ್ತಿದೆ, ಆದರೆ ಕ್ರಿಮಿನಲ್ ಕಾನೂನೊಂದು ಉಂಟುಮಾಡುವ ಹಾನಿ ಸಂಕೇತಕ್ಕಿಂತಲೂ ಮಿಗಿಲಾದುದು. ಕ್ರಿಮಿನಲ್ ಅಪರಾಧದ ದೆಸೆಯಿಂದ ಸಮಲೈಂಗಿಕ ಪುರುಷರು ತಮ್ಮ ಮಾನವ ಅನುಭವದ ಭಾಗವಾಗಿರುವ ಲೈಂಗಿಕ ನಡವಳಿಕೆಯಲ್ಲಿ ತೊಡಗಲು ಯತ್ನಿಸಿದ ಮಾತ್ರಕ್ಕೆ, ಬಂಧನ, ವಿಚಾರಣೆ ಮತ್ತು ಗುದಸಂಭೋಗದದ ಅಪರಾಧಕ್ಕೆ ಶಿಕ್ಷೆಯನ್ತಹ ಅಪಾಯಕ್ಕೆ ಒಳಗಾಗುತ್ತಾರೆ. ವರ್ಣಭೇದ ನೀತಿಯು ವಿವಿಧ ಜನಾಂಗೀಯ ಗುಂಪುಗಳ ದಂಪತಿಗಳು ನಿರಂತರವಾದ ಅಪಾಯದಲ್ಲಿರುವಂತೆ ಮಾಡಿದಹಾಗೆ, ಗುದಸಂಭೋಗದ ಅಪರಾಧವು ಸಮಲೈಂಗಿಕ ಪುರುಷರ ದೈನಂದಿನ ಬದುಕಿನಲ್ಲಿ ಅಭದ್ರತೆ ಮತ್ತು ದುರ್ಬಲತೆಯನ್ನು

> ಬೆಳೆಸುತ್ತದೆ. ಇಲ್ಲಿ ಸಮಲೈಂಗಿಕ ಪುರುಷರ ಲೈಂಗಿಕ ಅಭಿವ್ಯಕ್ತಿಯ ರೂಪವೊಂದನ್ನು ಶಿಕ್ಷಿಸುವ ಕಾನೂನಿನ ಇರುವಿಕೆಯು ಸಮಲೈಂಗಿಕ ಪುರುಷರನ್ನು ನಮ್ಮ ವಿಶಾಲ ಸಮಾಜದಲ್ಲಿ ಕೀಳಾಗಿಸುತ್ತದೆ ಮತ್ತು ದುರ್ಬಲಗೊಳಿಸುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ. ಅದು ಅವರ ಘನತೆಯ ಸ್ಪಷ್ಟ ಅತಿಕ್ರಮಣ ಮತ್ತು ಸಂವಿಧಾನದ 10ನೇ ಪರಿಚ್ಛೇದದ ಉಲ್ಲಂಘನೆ"

## IV. ಯುನೈಟೆಡ್ ಕಿಂಗ್ಡಮ್

201. **ಇಯಾನ್ ಸದರ್ಲೆಂಡ್ v. ಯುನೈಟೆಡ್ ಕಿಂಗ್ಡಮ್**[82] ಪ್ರಕ್ರಣದಲ್ಲಿ ಐರೋಪ್ಯ ಮಾನವ ಹಕ್ಕುಗಳ ಆಯೋಗದ ಮುಂದೆ ಸಮಲೈಂಗಿಕರು ಮತ್ತು ಭಿನ್ನಲಿಂಗೀಯರು, ಒಪ್ಪಿಗೆಯ ಲೈಂಗಿಕ ಸಂಬಂಧಗಳಲ್ಲಿ ತೊಡಗುವ ವಯೋಮಿತಿಯಲ್ಲಿದ್ದ ವ್ಯತ್ಯಾಸವು - ಭಿನ್ನಲಿಂಗೀಯರಿಗೆ 16 ವರ್ಷಗಳು ಹಾಗೂ ಸಮಲೈಂಗಿಕರಿಗೆ 18 ವರ್ಷಗಳು - ಸಮರ್ಥನೀಯವೇ ಎಂಬ್ಧ ಸಮಸ್ಯೆ ವಿಚಾರಣೆಗೆ ಬಂದಿತ್ತು. ಸದರಿ ವಿಚಾರವನ್ನು ಪರಾಂಬರಿಸುವಾಗ, ಸಮಿತಿಯು, ಪುರುಷ ಸಮಲೈಂಗಿಕಗರಿಗೆ, ಭಿನ್ನಲಿಂಗಾಸಕ್ತರಿಗಿಂತ ಹೆಚ್ಚಿನ ಕನಿಷ್ಟ ವಯೋಮಿತಿಯನ್ನು ವಿಧಿಸಿರುವುದಕ್ಕೆ ಯಾವುದೇ ವಸ್ತುನಿಷ್ಠ ಮತ್ತು ಸಮಂಜಸವಾದ ಸಮರ್ಥನೆ ಇಲ್ಲ ಎಂದು ಗಮನಿಸಿತು ಮತ್ತು ಆ ವ್ಯತ್ಯಾಸವು ಅಧಿವೇಶನದ 8 ನೇ ಕಲಮಿನಡಿಯಲ್ಲಿ ಅರ್ಜಿದಾರರಿಗೆ ನೀಡಲಾಗಿರುವ ತಮ್ಮ ಖಾಸಗೀ ಬದುಕಿಗೆ ಗೌರವ ಪಡೆಯುವ ಹಕ್ಕನ್ನು ಚಲಾಯಿಸುವ ವಿಚಾರದಲ್ಲಿ ಭೇದಭಾವದ ನಡವಳಿಕೆಯನ್ನು ತೋರ್ಪಡಿಸುತ್ತದೆ ಎಂದು ನುಡಿಯಿತು. ಸಮಿತಿಯು ಮುಂದುವರೆಯುತ್ತಾ, ಸಮಾಲೈಂಗಿಕತೆಯು, ಸಾಮಾನ್ಯವಾಗಿ ಬಾಲಕ ಮತ್ತು ಬಾಲಕಿಯರಲ್ಲಿ ಪ್ರೌಢಾವಸ್ಥೆಯ ವಯಸ್ಸಿಗೆ ಮೊದಲೇ ರೂಪುಗೊಳ್ಳುತ್ತದೆ ಮತ್ತು ಒಪ್ಪಿಗೆಯ ವಯಸ್ಸನ್ನು ಕಡಿಮೆ ಮಾಡುವುದು ಸಮಲೈಂಗಿಕ ಚಟುವಟಿಕೆಯಲ್ಲಿ ತೊಡಗುವ ಎಲ್ಲ ಅಥವಾ ನಿರ್ದಿಷ್ಟ ವಯಸ್ಸಿನ ಬಹುಪಾಲು ಪುರುಷರನ್ನು ಪ್ರಭಾವಿಸುವ

[82] 2001 ECHR 234

ಸಾಧ್ಯತೆಯಿಲ್ಲ ಎಂದು ಗಮನಿಸಿತು. ಕೌನ್ಸಿಲ್ ಆಫ್ ಬ್ರಿಟಿಷ್ ಮೆಡಿಕಲ್ ಅಸೋಸಿಯೇಷನ್ (ಬಿಎಂಎ) ತನ್ನ ವರದಿಯಲ್ಲಿ, ಆ ವೇಳೆಯಲ್ಲಿ ಅಸ್ತಿತ್ವದಲ್ಲಿರುವ ಕಾನೂನು ಯುವ ಸಮಲೈಂಗಿಕ ಮತ್ತು ಉಭಯಲಿಂಗಾಸಕ್ತ ಪುರುಷರ ಲೈಂಗಿಕ ಆರೋಗ್ಯವನ್ನು ವೃದ್ಧಿಸುವ ಪ್ರಯತ್ನಗಳಿಗೆ ತಡೆಯೊಡ್ಡಬಹುದಾದ್ದರಿಂದ, ಸಮಲೈಂಗಿಕ ವ್ಯಕ್ತಿಗಳ ಒಪ್ಪಿಗೆ ಸೂಚಿಸುವ ವಯಸ್ಸು ಕನಿಷ್ಟ ಪಕ್ಷ 16 ವರ್ಷವಿರಬೇಕು ಎಂದು ನಿರ್ಧರಿಸಿತು. ರಾಯಲ್ ಕಾಲೇಜ್ ಆಫ್ ಸೈಕಿಯಾಟ್ರಿಸ್ಟ್ಸ್, ಹೆಲ್ತ್ ಎಜುಕೇಶನ್ ಅಥಾರಿಟಿ ಮತ್ತು ನ್ಯಾಷನಲ್ ಅಸೋಸಿಯೇಷನ್ ಆಫ್ ಪ್ರೊಬೇಷನ್ ಆಫೀಸರ್ಸ್ ಹಾಗೂ ಆರೋಗ್ಯ ಮತ್ತು ಸಾಮಾಜಿಕ ಕಲ್ಯಾಣಕ್ಕೆ ಸಂಬಂಧಿಸಿದ ಇತರ ಮಂಡಳಿಗಳು ಮತ್ತು ಸಂಸ್ಥೆಗಳು ಕೂಡ ಒಪ್ಪಿಗೆ ಸೂಚಿಸುವ ಸಮಾನ ವಯಸ್ಸನ್ನು ಬೆಂಬಲಿಸಿದುವು. ಅದು ಮುಂದುವರೆಯುತ್ತಾ, ಒಪ್ಪಿಗೆಯ ವಯಸ್ಸಿನ ವಿಚಾರದಲ್ಲಿ ಸಮಾನವಾದ ನಡವಳಿಕೆಯನ್ನು ಐರೋಪ್ಯ ಸಮಿತಿಯ ದೊಡ್ಡ ಬಹುಮತದ ಸದಸ್ಯ ರಾಷ್ಟ್ರಗಳು ಗುರುತಿಸಿವೆ ಎಂಬುದನ್ನೂ ಗುರುತಿಸಲಾಯಿತು.

## V. ಇತರ ನ್ಯಾಯಾಲಯಗಳು/ ನ್ಯಾಯವ್ಯಾಪ್ತಿಗಳು

202. **ಆಂಗ್ ಲಡ್ಲಡ್ ಎಲ್.ಜಿ.ಬಿ.ಟಿ ಪಾರ್ಟಿ v. ಚುನಾವಣೆಗಳ ಆಯೋಗ**[83] ಪ್ರಕರಣದಲ್ಲಿ, ಫಿಲಿಪ್ಪೈನ್ಸ್ ಗಣರಾಜ್ಯದ ಸರ್ವೋಚ್ಚ ನ್ಯಾಯಾಲಯ ಕೆಳಕಂಡಂತೆ ಗಮನಿಸಿದೆ: -

> "ಅಭಿವ್ಯಕ್ತಿ ಸ್ವಾತಂತ್ರ್ಯವು ಪ್ರಜಾತಾಂತ್ರಿಕ ಸಮಾಜದ ಅತಿಮುಖ್ಯ ಅಡಿಪಾಯಗಳಲ್ಲಿ ಒಂದಾಗಿದೆ, ಮತ್ತು ಈ ಸ್ವಾತಂತ್ರ್ಯವು ಇಷ್ಟಪಟ್ಟು ಸ್ವೀಕರಿಸಲ್ಪಟ್ಟವರಿಗೆ ಮಾತ್ರವಲ್ಲದೆ, ಕೋಪಗೊಳಿಸುವ, ಆಘಾತಉಂಟುಮಾಡುವ ಅಥವಾ ಕದಡುವವರಿಗೂ ಅನ್ವಯಿಸುತ್ತದೆ. ಈ ವಲಯದೊಳಗೆ ಹೇರುವ ಯಾವುದೇ ನಿರ್ಬಂಧವು, ಸಾಧಿಸಬೇಕಿರುವ ಕಾನೂನುಬದ್ಧ ಗುರಿಗೆ ಅನುಗುಣವಾಗಿರಬೇಕು. ಯಾವುದೇ ಬಲವಾದ ಸರ್ಕಾರಿ

[83] G. R. No.190582, Supreme Court of Philippines (2010)

> ಹಿತಾಸಕ್ತಿ ಇಲ್ಲದಿರುವಾಗ, ಸಿ.ಓ.ಎಮ್.ಈ.ಎಲ್.ಈ.ಸಿ ಅಥವಾ ಈ ನ್ಯಾಯಾಲಯ ತನ್ನ ಅಭಿಪ್ರಾಯಗಳನ್ನು ಜನರ ಮೇಲೆ ಹೇರುವಂತಿಲ್ಲ.

ಮತ್ತಷ್ಟು ವಿವರಿಸುತ್ತ, ನ್ಯಾಯಾಲಯವು ಹೀಗೆಂದು ಘೋಷಿಸಿತು: -

> -ಒಬ್ಬರ ಸಮಲೈಂಗಿಕತೆಗೆ ಸಂಬಂಧಿಸಿದ ಮತ್ತು ಎಲ್.ಜಿ.ಬಿ.ಟಿ ವ್ಯಕ್ತಿಗಳನ್ನು ಬೆಂಬಲಿಸುವ ರಾಜನೈತಿಕ ಸಂಘಟನೆಯನ್ನು ರೂಪಿಸುವ ಅಭಿವ್ಯಕ್ತಿಗಳೂ ಕೂಡ ರಕ್ಷಿಸಲ್ಪಟ್ಟಿವೆ ಎಂಬುದು ಸ್ಪಷ್ಟವಾಗುತ್ತದೆ.

ಐರೊಪ್ಯ ಮತ್ತು ಸಂಯುಕ್ತ ರಾಷ್ಟ್ರಗಳ ನ್ಯಾಯಾಂಗಗಳತ್ತ ಮುಖಮಾಡಿದ ನ್ಯಾಯಾಲಯ ಹೀಗೆಂದು ನಿರ್ಧರಿಸಿತು:-

> -ಉದಾಹರಣೆಗೆ, ಪ್ರಜೆಯ ಸ್ವಾತಂತ್ರ್ಯದ ವಿಚಾರದಲ್ಲಿ, ಯುನೈಟೆಡ್ ಸ್ಟೇಟ್ಸಿನ ನ್ಯಾಯಾಲಯಗಳು ಅಸ್ತಿತ್ವದಲ್ಲಿರುವ ವಾಕ್ಸ್ವಾತಂತ್ರ್ಯದ ಸಿದ್ಧಾಂತಗಳು ಸಮಲೈಂಗಿಕ ಪುರುಷರು ಮತ್ತು ಸಮಲೈಂಗಿಕ ಸ್ತ್ರೀಯರ ಅಭಿವ್ಯಕ್ತಿಪಡಿಸುವ ನಡವಳಿಕೆಯನ್ನು ರಕ್ಷಿಸುತ್ತವೆ ಎಂದು ತೀರ್ಪಿತ್ತಿವೆ. ಒಂದು ನಿರ್ದಿಷ್ಟ ಅಭಿಪ್ರಾಯವನ್ನು ಅಭಿವ್ಯಕ್ತಿಪಡಿಸುವ ನಿಷೇಧಿಸುವುದನ್ನು ಸಮರ್ಥಿಸುವ ಸಲುವಾಗಿ, ಸಾರ್ವಜನಿಕ ಸಂಸ್ಥೆಗಳು ತಮ್ಮ ಕಾರ್ಯಗಳು "ಜನಪ್ರಿಯವಲ್ಲದ ದೃಷ್ಟಿಕೋನದ ಜತೆಗೆ ಯಾವಾಗಲೂ ಇರುವ ಅನಾನುಕೂಲ ಮತ್ತು ಅಸಂತೋಷಗಳನ್ನು

ತಪ್ಪಿಸುವ ಬಯಕೆಗಿಂತ ಹೆಚ್ಚಿನವು" ಎಂಬುದನ್ನು ನಿರೂಪಿಸಬೇಕು.

203. ಹಾಗೆಯೇ, ಟ್ಯೂನೆನ್ ಪ್ರಕರಣದಲ್ಲಿ, ಮಾನವ ಹಕ್ಕುಗಳ ಸಮಿತಿಯು ಈ ಕೆಳಗಿನ ಅವಲೋಕನಗಳನ್ನು ಮಾಡಿತು: -

"ಜನಾಂಗ, ಬಣ್ಣ ಮತ್ತು ಲಿಂಗ" ಎಂಬ ವಿಚಾರಗಳಲ್ಲಿ, ಅವುಗಳು ಜೈವಿಕ ಮತ್ತು ಅನುವಂಶಿಕವಾದುವು ಎಂಬುದು ಅವುಗಳಲ್ಲಿನ ಸಾಮಾನ್ಯ ಅಂಶ ಎಂಬ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ. ಹೀಗಿರುವಾಗ, ಟ್ಯಾಸ್ಮೇನಿಯನ್ ಅಪರಾಧ ಸಂಹಿತೆಯ 122(ಎ), (ಸೀ) ಮತ್ತು 123ನೇ ಪರಿಚ್ಛೇದಗಳಡಿಯಲ್ಲಿ ಒಂದು ಬಗೆಯ ನಡವಳಿಕೆಯನ್ನು ಅಪರಧೀಕರಿಸುವುದು ಒಡಂಬಡಿಕೆಯ 26ನೇ ಕಲಮಿನೊಂದಿಗೆ ಹೊಂದಾಣಿಕೆಯಾಗುವುದಿಲ್ಲ ಎಂದು ಪರಿಗಣಿಸಬೇಕು

ಮೊದಲನೆಯದಾಗಿ, ಟ್ಯಾಸ್ಮೆನಿಯಾದ ಅಪರಾಧ ಸಂಹಿತೆಯ ನಿಬಂಧನೆಗಳು ಪುರುಷರ ನಡುವಿನ ಮತ್ತು ಮಹಿಳೆಯರ ನಡುವಿನ ಲೈಂಗಿಕ ಸಂಭೋಗವನ್ನು ನಿಷೇಧಿಸುತ್ತವೆ, ಮತ್ತು ಆ ಮೂಲಕ ಭಿನ್ನಲಿಂಗಾಸಕ್ತರು ಮತ್ತು ಸಮಲೈಂಗಿಕರ ನಡುವೆ ವ್ಯತ್ಯಾಸ ಮಾಡುತ್ತವೆ. ಎರಡನೆಯದಾಗಿ, ಒಪ್ಪಿಗೆಯಿರುವ ಪುರುಷರ ನಡುವಿನ ಇತರ ಲೈಂಗಿಕ ಸಂಪರ್ಕವನ್ನು ಅಪರಾಧೀಕರಿಸುವ ಈ ಕಾನೂನುಗಳು, ಅದೇ ವೇಳೆ ಮಹಿಳೆಯರ ನಡುವಿನ

ಅಂತಹ ಸಂಪರ್ಕಗಳನ್ನು ಅಪರಾಧೀಕರಿಸುವುದಿಲ್ಲ. ಹೀಗಾಗಿ, ಈ ನಿಬಂಧನೆಗಳು ಕಾನೂನೆದುರಿನಲ್ಲಿ, ಸಮಾನತೆಯ ತತ್ವವನ್ನು ಪಕ್ಕಕ್ಕಿಡುತ್ತವೆ.ಇಲ್ಲಿ, ವ್ಯಕ್ತಿಗಳು ತಮ್ಮ ವಿರುದ್ಧ ಮಾಡಲಾಗಿದೆ ಎಂದು ಹೇಳಿಕೊಳ್ಳುವ ತಾರತಮ್ಯವನ್ನು ಇಂತಹ ಅಪರಾಧೀಕರಣ ಎಸಗುತ್ತದೆ ಎಂಬುದಕ್ಕೆ ಒತ್ತುನೀಡಬೇಕಿದೆ, ಹೀಗಾಗಿ ಅದು 26ನೇ ಕಲಮನ್ನು ಉಲ್ಲಂಘಿಸುತ್ತದೆ, ಇಲ್ಲಿ ಕಾನೂನನ್ನು ಬಹುಕಾಲದಿಂದ ಚಲಾಯಿಸಿಲ್ಲ ಎಂಬುದು ಸತ್ಯವಾದರೂ, ಅದಕ್ಕೆ ಸಂಬಂಧಪಟ್ಟ ನಡವಳಿಕೆ ಶಿಕ್ಷಾರ್ಹ ಅಪರಾಧವಾಗಿಯೇ ಉಳಿಯುತ್ತದೆ"

204. ಡುಡ್ಜಿಯಾನ್ (ಮೇಲ್ಕಂಡ) ಪ್ರಕರಣದಲ್ಲಿ, ಮಾನವ ಹಕ್ಕುಗಳ ಐರೋಪ್ಯ ನ್ಯಾಯಾಲಯವು, ಸಮಲೈಂಗಿಕತೆಗೆ ಸಂಬಂಧಿಸಿದಂತೆ ಈ ಕೆಳಗಿನ ಅವಲೋಕನಗಳನ್ನು ನಡೆಸಿದೆ:

-ಈ ಸಂದರ್ಭದಲ್ಲಿ, ಇಂತಹ ಕೃತ್ಯಗಳನ್ನು ಕ್ರಿಮಿನಲ್ ಅಪರಾಧಗಳನ್ನಾಗಿಸಲು "ತುರ್ತಾದ ಸಾಮಾಜಿಕ ಅಗತ್ಯ"ವಿದೆ ಎಂದು ಹೇಳಲು ಬರುವುದಿಲ್ಲ, ಅದಕ್ಕೆ ಸರಿಯಾದ ಸಮರ್ಥನೆಗಳಿಲ್ಲ ಮತ್ತು ಭದ್ರತೆಯ ಅಗತ್ಯವಿರುವ ಸಮಾಜದ ದುರ್ಬಲ ವರ್ಗದವರಿಗೆ ಹಾನಿಯಾಗುವ ಅಪಾಯವಿದೆ, ಅಲ್ಲದೆ ಅದು ಸಾರ್ವಜನಿಕರ ಮೇಲೆ ಪರಿಣಾಮ ಬೀರುತ್ತದೆ. ಪ್ರಮಾಣಬದ್ಧತೆಯ ವಿಚಾರದಲ್ಲಿ, ಸದರಿ ಕಾನುನನ್ನು ತಿದ್ದುಪಡಿಗೊಳಿಸದೆ ಜಾರಿಯಲ್ಲಿಡುವ ಕುರಿತು ಇರುವ

ಸಮರ್ಥನೆಗಳು, ಸದರಿ ಶಾಸಂದ ನಿಬಂಧನೆಗಳಿಂದ ಅರ್ಜಿದಾರದಂತಹ ಸಮಲೈಂಗಿಕ ನಿಲುವಿನ ವ್ಯಕ್ತಿಗಳ ಮೇಲೆ ಉಂಟಾಗಬಹುದಾದ ಅಪಾಯಕಾರಿ ಪರಿಣಮಗಳೆದುರು ಗೌಣವಾಗುತ್ತವೆ ಎಂಬುದು ನ್ಯಾಯಾಲಯದ ಅಭಿಪ್ರಾಯ. ಇತರರು ಸಮಲೈಂಗಿಕ ಕ್ರಿಯೆಗಳನ್ನು ನಡೆಸಿದಾಗ ಸಮಲೈಂಗಿಕತೆಯನ್ನು ಅನೈತಿಕವೆಂದು ಪರಿಗಣಿಸುವ ಸಾರ್ವಜನಿಕರು ಇದರಿಂದ ಆಘಾತ, ಕಿರಿಕಿರಿ ಅಥವಾ ಕದಡುವಿಕೆಗೆ ಒಳಗಾದರೂ, ಅದೊಂದರ ಆಧಾರದಲ್ಲಿ ಒಪ್ಪಿಗೆಯಿರುವ ಮತ್ತು ವಯಸ್ಕರಷ್ಟೇ ಶಾಮೀಲಾಗಿರುವ ಕೃತ್ಯಗಳಿಗೆ ದಂಡನೀಯ ಕಾಯ್ದೆಗಳನ್ನು ಅನ್ವಯಿಸಲು ಸಾಧ್ಯವಿಲ್ಲ" [ಒತ್ತು ನೀಡಲಾಗಿದೆ]

## O. ಐ.ಪಿ.ಸಿ.ಯ 375ನೇ ಪರಿಚ್ಛೇದ ಮತ್ತು 377 ನೇ ಪರಿಚ್ಛೇದಗಳ ತುಲನಾತ್ಮಕ ವಿಶ್ಲೇಷಣೆ

205. ಸದರಿ ಪ್ರಕರಣದ ಹಿನ್ನೆಲೆಯನ್ನು ಅರಿತುಕೊಳ್ಳುವ ಸಲುವಾಗಿ ನಾವೀಗ ಐ.ಪಿ.ಸಿ.ಯ 375 ಮತ್ತು 37 ನೇ ಪರಿಚ್ಛೇದಗಳಲ್ಲಿ ವಿವರಿಸಲಾಗಿರುವ ಅತ್ಯಾಚಾರದ ಅಪರಾಧ ಮತ್ತು ಅನೈಸರ್ಗಿಕ ಅಪರಾಧಗಳ ತುಲನಾತ್ಮಕ ವಿಶ್ಲೇಷಣೆ ನಡೆಸೋಣ. ಅತ್ಯಾಚಾರದ ಅಪರಾಧವನ್ನು ವರ್ಣಿಸುವ ಐ.ಪಿ.ಸಿ. ಈ ಕೆಳಗಿನಂತೆ ನುಡಿಯುತ್ತದೆ: -

375ನೇ ಪರಿಚ್ಛೇದ. ಅತ್ಯಾಚಾರ - ಒಬ್ಬ ಪುರುಷನು "ಅತ್ಯಾಚಾರ" ಎಸಗಿದ್ದಾನೆ ಎಂದು ಹೇಳಲು -

(1) ತನ್ನ ಶಿಶ್ನವನ್ನು, ಯಾವುದೇ ಮಟ್ಟಕ್ಕೆ, ಹೆಣ್ಣಿನ ಯೋನಿ, ಬಾಯಿ, ಮೂತ್ರದ್ವಾರ ಅಥವಾ ಗುದದ್ವಾರದೊಳಗೆ

ತೂರಿಸಿದರೆ ಅಥವಾ ಆತನೊಂದಿಗೆ ಅಥವಾ ಇತರ ವ್ಯಕ್ತಿಯೊಂದಿಗೆ ಹಾಗೆ ಮಾಡುವಂತೆ ಉತ್ತೇಜಿಸಿದರೆ; ಅಥವಾ

(2) ಶಿಶ್ನವನ್ನು ಹೊರತು ಪಡಿಸಿ, ಯಾವುದೇ ವಸ್ತು ಅಥವಾ ದೇಹದ ಅಂಗವನ್ನು ಹೆಣ್ಣಿನ ಯೋನಿ, ಬಾಯಿ, ಮೂತ್ರದ್ವಾರ ಅಥವಾ ಗುದದ್ವಾರದೊಳಗೆ ತೂರಿಸಿದರೆ ಅಥವಾ ಆತನೊಂದಿಗೆ ಇಲ್ಲವೇ ಇತರ ವ್ಯಕ್ತಿಯೊಂದಿಗೆ ಹಾಗೆ ಮಾಡುವಂತೆ ಹೆಣ್ಣನ್ನು ಉತ್ತೇಜಿಸಿದರೆ; ಅಥವಾ

(3) ಹೆಣ್ಣಿನ ದೇಹದ ಯಾವುದೇ ಭಾಗವನ್ನು ಆ ಯೋನಿ, ಬಾಯಿ, ಮೂತ್ರದ್ವಾರ ಅಥವಾ ಗುದದ್ವಾರದೊಳಗೆ ತೂರಿಸುವ ಸಲುವಾಗಿ ಬಳಸಿಕೊಂಡರೆ ಅಥವಾ ಆತನೊಂದಿಗೆ ಇಲ್ಲವೇ ಇತರ ವ್ಯಕ್ತಿಯೊಂದಿಗೆ ಹಾಗೆ ಮಾಡುವಂತೆ ಹೆಣ್ಣನ್ನು ಉತ್ತೇಜಿದರೆ; ಅಥವಾ

(4) ತನ್ನ ಬಾಯನ್ನು ಹೆಣ್ಣಿನ ಯೋನಿ, ಬಾಯಿ, ಮೂತ್ರದ್ವಾರ ಅಥವಾ ಗುದದ್ವಾರಕ್ಕೆ ಹಾಕಿದರೆ, ಅಥವಾ ಆತನೊಂದಿಗೆ ಇಲ್ಲವೇ ಇತರ ವ್ಯಕ್ತಿಯೊಂದಿಗೆ ಹಾಗೆ ಮಾಡುವಂತೆ, ಈ ಕೆಳಗಿನ ಏಳುಬಗೆಯ ಸಂದರ್ಭಗಳಲ್ಲಿ ಉತ್ತೇಜಿಸಿದರೆ:-

ಮೊದಲನೆಯದಾಗಿ - ಆಕೆಗೆ ಇಚ್ಛೆಯಿಲ್ಲದಿರುವಾಗ

ಎರಡನೆಯದಾಗಿ - ಆಕೆಗೆ ಒಪ್ಪಿಗೆಯಿಲ್ಲದಿರುವಾಗ

ಮೂರನೆಯದಾಗಿ - ಅಕ್ಕೆಗೆ ಒಪ್ಪಿಗೆಯಿರುವಾಗ, ಎಂದರೆ ಆಕೆಗೆ ಅಥವಾ ಆಕೆಗೆ ಸಂಬಂಧಿಸಿರುವ ಯಾವುದೇ ವ್ಯಕ್ತಿಗೆ ಸಾವು ಅಥವಾ ನೋವಿನ ಬೆದರಿಕೆಯೊಡ್ಡಿ ಆಕೆಯ ಒಪ್ಪಿಗೆ ಪಡೆದುಕೊಂಡಾಗ

ನಾಲ್ಕನೆಯದಾಗಿ - ಆಕೆಗೆ ಒಪ್ಪಿಗೆಯಿರುವಾಗ, ಎಂದರೆ ಪುರುಷನಿಗೆ ತಾನು ಆಕೆಯ ಗಂಡನಲ್ಲನೆಂಬುದು ತಿಳಿದಿದ್ದೂ, ಆಕೆ ಇವನನ್ನು ತಾನು ಮದುವೆಯಾಗಿರುವ ಅಥವಾ ಮದುವೆಯಾಗಿರುವುದಾಗಿ ನಂಬಿರುವ ಮತ್ತೊಬ್ಬ ವ್ಯಕ್ತಿಯೆಂದು ನಂಬಿ ಒಪ್ಪಿಗೆ ನೀಡಿರುವಾಗ,

ಐದನೆಯದಾಗಿ - ಆಕೆಗೆ ಒಪ್ಪಿಗೆಯಿರುವಾಗ, ಎಂದರೆ, ಅಂತಹ ಒಪ್ಪಿಗೆ ಸೂಚಿಸುವ ಸಮಯದಲ್ಲಿ ಆಕೆಗೆ ಮಾನಸಿಕ ಅಸ್ವಸ್ಥತೆಯಿದ್ದಾಗ, ಆಕೆ ಮದ್ಯದ ಅಮಲಿನಲ್ಲಿದ್ದಾಗ ಅಥವಾ ಆತ ಖುದ್ದಾಗಿ ಅಥವಾ ಬೇರೆಯವರ ಮೂಲಕ ಆಕೆಗೆ ಮತ್ತು ತರಿಸುವ ಅಥವಾ ಅಸ್ವಸ್ಥಗೊಳಿಸುವ ಮದ್ದನ್ನು ನೀಡಿರುವ ಸಂದರ್ಭದಲ್ಲಿ, ಆಕೆ ತಾನು ಒಪ್ಪಿಕೊಂಡಿರುವ ವಿಚಾರದ ಸ್ವರೂಪ ಮತ್ತು ಪರಿಣಾಮಗಳನ್ನು ಅರಿಯಲು ಸಾಧ್ಯವಾಗದಿರುವ ಸಂದರ್ಭದಲ್ಲಿ.

ಆರನೆಯದಾಗಿ - ಆಕೆ ಹದಿನೆಂಟು ವರ್ಷಕ್ಕಿಂತ ಸಣ್ಣವಳಾಗಿರುವ ಸಂದರ್ಭದಲ್ಲಿ, ಆಕೆಯ ಒಪ್ಪಿಗೆಯಿದ್ದರೂ ಅಥವಾ ಇಲ್ಲದಿದ್ದರೂ.

ಏಳನೆಯದಾಗಿ - ಆಕೆಗೆ ಒಪ್ಪಿಗೆಯನ್ನು ಸೂಚಿಸಲು ಸಾಧ್ಯವಾಗದಿರುವ ಸಂದರ್ಭಗಳಲ್ಲಿ

ವಿವ್ರಣೆ 1 - ಈ ಪರಿಚ್ಛೇದದ ಅಗತ್ಯಗಳ ಸಲುವಾಗಿ, "ಯೋನಿ" ಎಂಬುದು ಯೋನಿಯ ಹೊರತುಟಿಗಳನ್ನು ಸಹ ಒಳಗೊಳ್ಳುತ್ತದೆ.

ವಿವರಣೆ 2 - ಒಪ್ಪಿಗೆ ಎಂದರೆ, ಹೆಂಗಸೊಬ್ಬಳು, ಪದಗಳು, ಸನ್ನೆಗಳು, ಅಥವಾ ಯಾವುದೇ ಬಗೆಯ ಮೌಕಿಕ ಅಥವಾ ಮೌಕಿಕವಲ್ಲದ ಸಂವಹನದ ಮೂಲಕ ನಿರ್ಧಿಷ್ಟ ಲೈಂಗಿಕ ಕ್ರಿಯೆಯಲ್ಲಿ ಪಾಲ್ಗೊಳ್ಳುವ ಇಚ್ಛೆಯನ್ನು ತಿಳಿಯಪಡಿಸಿದಾಗ ನಡೆಯುವ ನಿಸ್ಸಂಶಯವಾದ ಸ್ವ-ಇಚ್ಛೆಯ ಒಪ್ಪಂದ

ಹೆಣ್ಣೊಬ್ಬಳು ಒಳತೂರಿಸುವಿಕೆಯ ಕ್ರಿಯೆಯನ್ನು ದೈಹಿಕವಾಗಿ ತಡೆಯಲಿಲ್ಲ ಎಂದ ಮಾತ್ರಕ್ಕೆ, ಅದು ಆಕೆ ಲೈಂಗಿಕ ಕ್ರಿಯೆಗೆ ಸೂಚಿಸಿರುವ ಒಪ್ಪಿಗೆ ಎಂದು ಪರಿಗಣಿಸಲು ಕಾರಣವಿಲ್ಲ.

ವಿನಾಯತಿ 1- ವೈಧ್ಯಕೀಯ ಪ್ರಕ್ರಿಯೆ ಅಥವಾ ಸಹಾಯವನ್ನು ಅತ್ಯಾಚಾರವೆಂದು ಕರೆಯಲಾಗುವುದಿಲ್ಲ.

ವಿನಾಯತಿ 2- ಪುರುಷನೊಬ್ಬ ತನ್ನ ಹೆಂಡತಿಯೊಂದಿಗೆ ಲೈಂಗಿಕ ಸಂಭೋಗ ಅಥವಾ ಲೈಂಗಿಕೆ ಕ್ರಿಯೆಗಳನ್ನು ನಡೆಸಿದಾಗ, ಮತ್ತು ಆಕೆಯು ಹದಿನೈದು ವರ್ಷಕ್ಕಿಂತ ಸಣ್ಣವಳಾಗಿಲ್ಲದಿದ್ದರೆ, ಅದು ಅತ್ಯಾಚಾರವಲ್ಲ.

206. 375ನೇ ಪರಿಚ್ಛೇದ ಐ.ಪಿ.ಸಿ.ಯನ್ನು ಮೇಲ್ನೋಟ್ಟದಲ್ಲಿ ಒಡಿಕೊಂಡಾಗ, 375ನೇ ಪರಿಚ್ಛೇದವು ಹೆಣ್ಣುಮಕ್ಕಳನ್ನು ರಕ್ಷಿಸುವ ಉದ್ಧೇಶವಿರುವ  ಲಿಂಗವೊಂದಕ್ಕೆ ಸಂಬಂಧಿಸಿದ ಕಾಯ್ದೆ, ಏಕೆಂದರೆ ಪುರುಷನೊಬ್ಬ ಮಾತ್ರ ಅತ್ಯಾಚಾರ ಎಸಗಲು ಸಾಧ್ಯ ಎಂಬುದು ಸ್ಪಷ್ಟವಾಗುತ್ತದೆ. ಪರಿಚ್ಛೇದವನ್ನು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ಎ) ಮತ್ತು ಡಿ) ಷರತ್ತುಗಳನ್ನು ಒಳಗೊಂಡಿರುವ ಮೊದಲನೆಯ ಭಾಗವು ಪುರುಷನೊಬ್ಬ ಹೆಣ್ಣಿನೊಂದಿಗೆ ನಡೆಸುವ ಯಾವ ಕೃತ್ಯವನು ಅತ್ಯಾಚಾರವೆಂದು ಪರಿಗಣಿಸಲಾಗಿತ್ತದೆ ಎಂಬುದನ್ನು ವಿವರಿಸುತ್ತದೆಯಷ್ಟೇ, ಆದರೆ ಅಂತಹ ಕೃತ್ಯಗಳನ್ನು ಈ ಪರಿಚ್ಛೇದದ ನಂತರದ ಭಾಗದಲ್ಲಿ ವಿವರಿಸಲಾಗಿರುವ ಏಳು ಬಗೆಯ ಸಂದರ್ಭಗಳಲ್ಲಿ ಎಸಗಲಾಗಿರಬೇಕು.

207. ಈ ಪ್ರಕಾರವಾಗಿ, ಐ.ಪಿ.ಸಿ.ಯ 375ನೇ ಪರಿಚ್ಛೇದದ ನಂತರದ ಭಾಗವು, ಪುರುಷನೊಬ್ಬ ಮಹಿಳೆಯೊಂದಿಗೆ ನಡೆಸುವ ಕ್ರಿಯೆಯು ಅತ್ಯಾಚಾರದ ವ್ಯಾಪ್ತಿಯೊಳಗೆ ಬರಬೇಕಿದ್ದರೆ ಇರಕದ ಸನ್ನಿವೇಶಗಳನ್ನು ಸ್ಪಷ್ಟಪಡಿಸುವುದರಿಂದ, ಅದು ಮಹತ್ವ ಪಡೆದುಕೊಳ್ಳುತ್ತದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಅತ್ಯಚಾರದ ಅಪರಾಧವನ್ನು ಪರಿಪೂರ್ಣವಾಗಿ ಗುರಿತಿಸಬೇಕಿದ್ದರೆ, 375ನೇ ಪರಿಚ್ಛೇದದ ನಂತರದ ಭಾಗದಲ್ಲಿ ವಿವರಿಸಲಾಗಿರುವ ಸನ್ನಿವೇಶಗಳು ಇರಬೇಕು. ಈಗ ನಾವು, ಕ್ರಿಯೆಯೊಂದನ್ನು ಬಲಾತ್ಕಾರವೆಂದು ಕರೆಯಬೇಕಿದ್ದಲ್ಲಿ, ಅಲ್ಲಿ ಸ್ವ-ಇಚ್ಛೆಯ ಮತ್ತು ಅರಿವಿನ ಒಪ್ಪಿಗೆ ಇರಬಾರದು ಎಂದು ಸ್ಪಷ್ಟಪಡಿಸುವ ಐ.ಪಿ.ಸಿ.ಯ 375ನೇ ಪರಿಚ್ಛೇದದಲ್ಲಿನ ಏಳು ವಿವರಣೆಗಳನ್ನು ಸೂಕ್ಷ್ಮವಾಗಿ ಅಭ್ಯಸಿಸೋಣ.

208. ಮೊದಲನೆಯ ವಿವರಣೆಯ ಪ್ರಕಾರ, 375ನೇ ಪರಿಚ್ಛೇದ ನಂತರದ ಭಾಗದಲ್ಲಿ ವಿವರಿಸಲಾಗಿರುವ ಯಾವುದೇ ಕ್ರಿಯೆಗಳನ್ನು ಹೆಣ್ಣೊಬ್ಬಳ ಇಚ್ಛೆಗೆ ವಿರುದ್ಧವಾಗಿ ನಡೆಸಿದರೆ ಅವು ಬಲಾತ್ಕಾರವೆನಿಸಿಕೊಳ್ಳುತ್ತವೆ. ಎರಡನೆಯ ವಿವರಣೆಯು ಸ್ಪಷ್ಟಪಡಿಸುವ, 375ನೇ ಪರಿಚ್ಛೇದ ನಂತರದ ಭಾಗದಲ್ಲಿ ವಿವರಿಸಲಾಗಿರುವ ಕ್ರಿಯೆಗಳನ್ನು ಹೆಣ್ಣೊಬ್ಬಳ ಇಚ್ಛೆಗೆ ವಿರುದ್ಧವಾಗಿ ನಡೆಸಿದರೆ ಅವು ಬಲಾತ್ಕಾರವೆನಿಸಿಕೊಳ್ಳುತ್ತವೆ. ಮೂರನೆಯ ವಿವರಣೆಯ ಅಭಿಪ್ರಾಯದಲ್ಲಿ, ವಿವರಿಸಲಾಗಿರುವ ಕ್ರಿಯೆಗಳಿಗೆ, ಹೆಣ್ಣು ಒಪ್ಪಿಗೆ ನೀಡಿದ್ದರೂ, ಆ ಒಪ್ಪಿಗೆಯನ್ನು ಆಕೆಗೆ ಅಥವಾ ಆಕೆಗೆ ಸಂಬಂಧಿಸಿದ ವ್ಯಕ್ತಿಗೆ ಸಾವು ಅಥವಾ ನೋವಿನ ಬೆದರಿಕೆ ಒಡ್ಡಿ ಪಡೆಯಲಾಗಿದ್ದಾರೆ, ಅದು ಬಲಾತ್ಕಾರವಾಗುತ್ತದೆ. ನಾಲ್ಕನೇ ವಿವರಣೆಯ ಪ್ರಕಾರ, ಪರಿಚ್ಛೇದದ ನಂತರದ ಭಾಗದಲ್ಲಿ

ವಿವರಿಸಲಾಗಿರುವ ಕ್ರಿಯೆಗಳಿಗೆ ಹೆಣ್ಣೊಬ್ಬಳು ಆ ಕ್ರಿಯೆಯನ್ನು ಎಸಗುತ್ತಿರುವ ವ್ಯಕ್ತಿಯನ್ನು ತಾನು ಕಾನೂನು ಪ್ರಕಾರ ಮದುವೆಯಾಗಿರುವ ಅಥವಾ ಮದುವೆಯಾಗಿದೆಯೆಂದು ನಂಬಿರುವ ಪುರುಷ ಎಂದುಕೊಂಡು ಒಪ್ಪಿಗೆ ನೀಡಿದ್ದರೆ ಅದು ಅತ್ಯಾಚಾರವಾಗುತ್ತದೆ. ಐದನೇ ವಿವರಣೆಯ ಪ್ರಕಾರ, ನಂತರದ ಭಾಗಗಳಲ್ಲಿ ವಿವರಿಸಲಾಗಿರುವ ಕ್ರಿಯೆಗಳಿಗೆ ಹೆಣ್ಣೊಬ್ಬಳು ಒಪ್ಪಿಗೆ ನೇಡಿದ್ದಾಗ್ಯೂ, ಹಾಗೆ ಒಪ್ಪಿಗೆ ಸೂಚಿಸುವ ಸಂದರ್ಭದಲ್ಲಿ ಆಕೆ ಮಾನಸಿಕ ಅಸ್ವಸ್ಥತೆ, ಅಥವಾ ಕ್ರಿಯೆಗಳನ್ನು ನಡೆಸುವ ವ್ಯಕ್ತಿ ಅಥವಾ ಇತರ ಮೂರನೇ ವ್ಯಕ್ತಿ ನೀಡಿದ ಮತ್ತುಬರಿಸುವ ಅಥವಾ ಅಸ್ವಸ್ಥಗೊಳಿಸುವ ಮದ್ದಿನ ದೆಸೆಯಿಂದ ತಾನು ಸಮ್ಮತಿಸಿರುವ ಕ್ರಿಯೆಗಳ ಸ್ವರೂಪ ಅಥವಾ ಪರಿಣಾಮಗಳನ್ನು ಅರಿಯಲು ಸಾಧ್ಯವಾಗದಿದ್ದಾಗ ಅದು ಅತ್ಯಾಚಾರವಾಗುತ್ತದೆ. ಆರನೇ ವಿವರಣೆ ಬಹಳ ಸರಳ ಮತ್ತು ನೇರವಾಗಿದ್ದು, ಆದ್ರ ಪ್ರಕಾರ ಪರಿಚ್ಛೇದದ ನಂತರದ ಭಾಗದಲ್ಲಿ ವಿವರಿಸಲಾಗಿರುವ ಕ್ರಿಯೆಗಳನ್ನು ನಡೆಸುವ ಸಮಯದಲ್ಲಿ ಆ ಮಹಿಳೆ ಹದಿನೆಂಟು ವರ್ಷಕ್ಕಿಂತ ಕಿರಿಯಳಾಗಿದ್ದರೆ, ಆಕೆ ಆ ಕ್ರಿಯೆಗೆ ಒಪ್ಪಿದ್ದರೂ, ಒಪ್ಪದೆ ಇದ್ದಿದ್ದರೂ ಅದು ಅತ್ಯಾಚರವೆಂದೇ ಕರೆಯಲ್ಪಡುತ್ತದೆ. ಏಳನೇ ಮತ್ತು ಕೊನೆಯ ವಿವರಣೆಯ ಬಗೆಗೆ ಹೇಳುವುದಾದರೆ, ಅದರ ಪ್ರಕಾರ, ಪರಿಚ್ಛೇದದ ನಂತರದ ಭಾಗದಲ್ಲಿ ವಿವರಿಸಲಾಗಿರುವ ಕ್ರಿಯೆಗಳಿಗೆ ಮಹಿಳೆಯು ತನ್ನ ಒಪ್ಪಿಗೆಯನ್ನು ಸೂಚಿಸಲು ಸಾಧ್ಯವಾಗದಿರುವ ಸನ್ನಿವೇಶದಲ್ಲಿ ಅದು ಅತ್ಯಾಚಾರವೆಂದು ಪರಿಗಣಿಸಲ್ಪಡುತ್ತದೆ.

209. ಐ.ಪಿ.ಸಿ.ಯ 375ನೇ ಪರಿಚ್ಛೇದದ ವಿವರಣೆ 2, 375ನೇ ಪರಿಚ್ಛೇದದ ಅಗತ್ಯಗಳಿಗಾಗಿ ಒಪ್ಪಿಗೆಯ ವ್ಯಾಖ್ಯಾನನೀಡುತ್ತದೆ ಮತ್ತು ಅದರ ಪ್ರಕಾರ, ಒಪ್ಪಿಗೆ ಎಂದರೆ, ಹೆಣ್ಣೊಬ್ಬಳು ಪದಗಳು, ಹಾವಭಾವಗಳು ಅಥವಾ ಯಾವುದೇ ಬಗೆಯ ವಾಚ್ಯ ಅಥವಾ ವಾಚ್ಯವಲ್ಲದ ಸಂವಹನದ ಮೂಲಕ 375ನೇ ಪರಿಚ್ಛೇದದ ನಂತರದ ಭಾಗದಲ್ಲಿ ವಿವರಿಸಲಾಗಿರುವ ಲೈಂಗಿಕ ಕ್ರಿಯೆಗಳಲ್ಲಿ ಪಾಲ್ಗೊಳ್ಳುವ ಇಚ್ಛೆಯನ್ನು ತಿಳಿಸುವ ನಿಸ್ಸಂಶಯವಾದ ಮತ್ತು ಸ್ವ-ಇಚ್ಚೆಯ ಒಪ್ಪಂದ.

210. ನಾವು 375ನೇ ಪರಿಚ್ಛೇದದ ನಂತರ ಭಾಗದಲ್ಲಿರುವ ಏಳು ವಿವರಣೆಗಳ ರಚನೆಯನ್ನು ಪರಿಶೀಲಿಸಿದ್ದೇವೆ ಮತ್ತು ಆ ಮೂಲಕ ಐ.ಪಿ.ಸಿ.ಯ 377ನೇ ಪರಿಚ್ಛೇದದಲ್ಲಿರುವ ವಿವರಣೆಗಳಲ್ಲಿ ಒಪ್ಪಿಗೆಯಿಲ್ಲದಿರುವಿಕೆ ಎಂಬ ಅಂಶವು ಧೃಡವಾಗಿ ಬೇರೂರಿದೆ, ಮತ್ತು ಐ.ಪಿ.ಸಿ.ಯ 375ನೇ ಪರಿಚ್ಛೇದದ ನಂತರದ ಭಾಗದಲ್ಲಿ

ವಿವರಿಸಲಾಗಿರುವ ಕ್ರಿಯೆಗಳನ್ನು ಅತ್ಯಾಚಾರವೆಂದು ಪರಿಗಣಿಸಲು ಸ್ವ-ಇಚ್ಛೆಯ ಮತ್ತು ಅರಿವಿನ ಒಪ್ಪಿಗೆಯ ಗೈರುಹಾಜರಿಯೇ ಮುಖ್ಯವಾದ ಅಂಶವಾಗಿದೆ ಎಂಬುದನ್ನು ಒತ್ತಿಹೇಳಿದ್ದೇವೆ.

211. ಪ್ರಸ್ತುತ ನಾವು, ಐ.ಪಿ.ಸಿ.ಯ 377ನೇ ಪರಿಚ್ಛೇದದ ನೈಜ ಸ್ವರೂಪ ಮತ್ತು ಸತ್ವವನ್ನು ಅರಿಯಲು, ಆದರ ರಚನೆಯನ್ನು ಪರಿಶೀಲಿಸಿ ಆದರ ನಿಬಂಧನೆಗಳ ಮೇಲೆ ಕ್ಷ-ಕಿರಣಗಳನ್ನು ಬೀರಲು ಹೋರಡುತ್ತಿದ್ದೇವೆ.

> ಅನೈಸರ್ಗಿಕ ಅಪರಾಧಗಳ ಬಗೆಗೆ
>
> 377. ಅನೈಸರ್ಗಿಕ ಅಪರಾಧಗಳು - ಯಾರಾದರೂ ಸ್ವ-ಇಚ್ಛೆಯಿಂದ ಯಾವುದೇ ಗಂಡು, ಹೆಣ್ಣು ಅಥವಾ ಪ್ರಾಣಿಯೊಂದಿಗೆ ನಿಸರ್ಗದ ನಿಯಮಕ್ಕೆ ವಿರುದ್ಧವಾಗಿ ಶಾರೀರಿಕ ಸಂಭೋಗ ನಡೆಸಿದರೆ ಅವರಿಗೆ ಜೀವಾವಧಿ ಶಿಕ್ಷೆ ಅಥವಾ ಜೀವಾವಾಧಿ ಎನಿಸಿಕೊಳ್ಳುವ ಹತ್ತು ವರ್ಷ ವರೆಗಿನ ಅವಧಿಯ ಸೆರೆಮನೆವಾಸದ ಶಿಕ್ಷೆವಿಧಿಸಲಾಗುತ್ತದೆ, ಜೊತೆಗೆ ದಂಡವನ್ನೂ ವಸೂಲಿ ಮಾಡಲಾಗುತ್ತದೆ.
>
> ವಿವರಣೆ - ಈ ಪರಿಚ್ಛೇದದಲ್ಲಿ ವಿವರಿಸಲಾಗಿರುವ ಅಪರಾಧವಾದ ಶರೀರಿಕ ಸಂಭೋಗ ಎಂದು ಪರಿಗಣಿಸುವುದಕ್ಕೆ, ಶಿಶ್ನದ ಒಳತೂರಿಸುವಿಕೆಯೊಂದೇ ಸಾಕಾಗುತ್ತದೆ.

212. ಐ.ಪಿ.ಸಿ.ಯ 377ನೇ ಪರಿಚ್ಛೇದವು, 375ನೇ ಪರಿಚ್ಛೇದಕ್ಕಿಂತ ಭಿನ್ನವಾಗಿ, "ಯಾರಾದರೂ" ಎಂಬ ಪದವನ್ನು ಬಳಸುವುದರಿಂದ, ಅದೊಂದು ಲಿಂಗ-ತಟಸ್ಥ ನಿಬಂಧನೆಯಾಗಿದೆ. ಬ್ಲ್ಯಾಕ್ ಕಾನೂನು ನಿಘಂಟಿನಲ್ಲಿ[84], "ಶಾರೀರಿಕ (ಕಾರ್ನಲ್)" ಎಂಬ ಪದವು ದೇಹ, ದೇಹಕ್ಕೆ ಸಂಬಂಧಿಸಿದ, ಮಾಂಸಕ್ಕೆ ಸಂಬಂಧಿಸಿದ ಅಥವಾ

[84] Black's Law Dictionary, 2nd edn.

ಲೈಂಗಿಕ ಎಂದು ವ್ಯಾಖ್ಯಾನಿಸಲ್ಪಟ್ಟೇದೆ. ಲೈಂಗಿಕ ಸಂಭೋಗ ಎಂಬುದು ಬ್ಲ್ಯಾಕ್ ಕಾನೂನು ನಿಘಂಟಿನಲ್ಲಿ ಗಂಡು ಮತ್ತು ಹೆಣ್ಣಿನ ಅಂಗಗಳ ನಡುವಿನ ಸಂಪರ್ಕ ಎಂದು ವ್ಯಾಖ್ಯಾನಿಸಲ್ಪಟ್ಟಿದೆ.

213. 377ನೇ ಪರಿಚ್ಛೇದದಲ್ಲಿ "ನಿಸರ್ಗದ ನಿಯಮಕ್ಕೆ ವಿರುದ್ಧ" ಎಂಬ ಮತ್ತೊಂದು ಭಾವವನ್ನು ಬಳಸಲಾಗಿದೆ. ನಿಸರ್ಗದ ನಿಯಮಕ್ಕೆ ವಿರುದ್ಧ ಎಂಬ ಪದಪುಂಜವನ್ನು ಐ.ಪಿ.ಸಿ.ಯ 377ನೇ ಪರಿಚ್ಛೇದಲ್ಲಾಗಲೀ, ಅಥವಾ ಐ.ಪಿ.ಸಿ.ಯ ಇನ್ನಾವುದೇ ನಿಬಂಧನೆಗಳಲ್ಲಾಗಲೀ ವಿವರಿಸಲಾಗಿಲ್ಲ. ಐ.ಪಿ.ಸಿ.ಯ 377ನೇ ಪರಿಚ್ಛೇದವು, ಅಂತಹ ಶಾರೀರಿಕ ಸಂಭೋಗಗಳನ್ನು, ಅವು ನಿಸರ್ಗದ ನಿಯಮಕ್ಕೆ ವಿರುದ್ಧವಾಗಿದೆ ಎಂಬ ತಳಪಾಯದ ಮೇಲೆ ಕಾನೂನುಬಾಹಿರಗೊಳಿಸುತ್ತದೆ. ಹೀಗಿರುವಾಗ, "ನಿಸರ್ಗದ ನಿಯಮದ ವಿರುದ್ಧವಾಗಿರುವುದು ಯಾವುದು? ಎಂಬ ಪ್ರಶ್ನೆ ನಮ್ಮೆದುರು ಮೂಡುತ್ತದೆ

214. ಖಾನು (ಮೇಲ್ಕಂಡ) ಪ್ರಕರಣದಲ್ಲಿ ನ್ಯಾಯಾಯಲದೆದುರು, ಮುಖಮೈಥುನ (ಪುರುಷರ ಜನನೇಂದ್ರಿಯಗಳೊಂದಿಗೆ ಬಾಯಿಯ ಸಂಪರ್ಕ) ನಿಸರ್ಗದ ನಿಯಮಕ್ಕೆ ವಿರುದ್ಧವಾದ ಶಾರೀರಿಕ ಸಂಭೋಗವೆಂದು ಪರಿಗಣಿಸಲ್ಪಡುತ್ತದೆಯೇ ಎಂಬ ಪ್ರಶ್ನೆಯೆದ್ದಾಗ, ನ್ಯಾಯಾಲಯ ಒಪ್ಪಿಗೆ ಸೂಚಿಸುತ್ತಾ, ಮನುಷ್ಯರನ್ನು ಗರ್ಭದಲ್ಲಿ ಧರಿಸಲು ಸಾಧ್ಯವಾಗಬೇಕು ಎಂಬುದು ಸಂಭೋಗದ ನೈಸರ್ಗಿಕ ಉದ್ದೇಶವೆಂದು ತೀರ್ಪಿತ್ತು, ಮುಖ ಮೈಥುನದ ವಿಚಾರದಲ್ಲಿ ಆ ಉದ್ದೇಶ ಈಡೇರಲು ಸಾಧ್ಯವಿಲ್ಲವೆಂದು ಗಮನಿಸಿತು. ಹೀಗಾಗಿ, ಸಾಂಪ್ರದಾಯಿಕವಾಘಿ, ಸಂತಾನೋತ್ಪತ್ತಿಯೊಂದೇ ಲೈಂಗಿಕ ಕ್ರಿಯೆಯ ಮುಖ್ಯ ಉದ್ದೇಶ ಎಂಬ ವಾದವನ್ನು ಸಮಲೈಂಗಿಕತೆಯನ್ನು ವಿರೋಧಿಸಲು ಮತ್ತು ಒಪ್ಪಿಗೆಯಿರುವ ವಯಸ್ಕರ ನಡುವಿನ ಶಾರೀರಿಕ ಸಂಭೋಗವನ್ನು ಅಪರಾಧೀಕರಿಸುವುದನ್ನು ಬೆಂಬಲಿಸಲು ಬಳಸಿಕೊಳ್ಳಲಾಗುತ್ತದೆ.

215. ಸಮಯ ಕಳೆದಂತೆ ಮತ್ತು ಸಮಾಜ ಮುಂದುವರೆದಂತೆ, ವ್ಯಕ್ತಿಗಳು ಜತೆಯಾಗಿ, ಕೂಡಿಬಾಳುವ ಸಂಬಂಧಗಳನ್ನು ಹೊಂದುವರು, ಲೈಂಗಿಕ ಕ್ರಿಯೆಯನ್ನು ನಡೆಸಲು, ಅಥವಾ ಮದುವೆಯಾನ್ನೇ ಆಗಲು, ಸಂತಾನೋತ್ಪತ್ತಿಯೊಂದೇ ಕಾರಣವಾಗಿ ಉಳಿದಿಲ್ಲ. ಅವರು ಅಂತಹ ಕ್ರಿಯೆಗಳನ್ನು ಮಾಡಲು, ಭಾವನಾತ್ಮಕ ಒಡನಾಟವೂ ಸೇರಿದಂತೆ, ಹಲವಾರು ಕಾರಣಗಳಿರಬಹುದು. ಹೋಮರ್ ಕ್ಲಾರ್ಕ್ ಬರೆಯುತ್ತಾರೆ:-

> - ಆದರೆ, ಈದಿನ, ಮದುವೆಯೂ ಮತ್ತಾವುದೇ ಸಂಬಂಧಗಳಲ್ಲಿ ದೊರೆಯದಂತಹ ಭಾವನಾತ್ಮಕ

ಸಂತೃಪ್ತಿಯನ್ನು ಒದಗಿಸುತ್ತದೆ ಎಂಬುದು ಮದುವೆಯ ಪ್ರಮುಖವಾದ ಕಾರ್ಯವಾಗಿದೆ. ಬಹು ಜನರಿಗೆ, ಮದುವೆಯೆಂಬುದು ತಮ್ಮನ್ನು ಸಮಕಾಲೀನ ಅಸ್ತಿತ್ವದ ತಣ್ಣಗಿನ ನಿರ್ಭಾವುಕತೆ ಮತ್ತು ಸಂಬಂಧಗಳೇ ಇಲ್ಲದ ಸ್ಥಿತಿಯಿಂದ ರಕ್ಷಿಸುವ ಆಶ್ರಯತಾಣ.

216. ಮದುವೆಯನ್ನು ಕೂಡ ಸಂತಾತ್ಪತ್ತಿಯೊಂದಿಗೆ ಥಳುಕು ಹಾಕದಿರುವ ಈಗಿನ ಕಾಲದ ಜಗತ್ತಿನಲ್ಲಿ ಎಂಬುದರ ಹಿನ್ನೆಲೆಯಲ್ಲಿ, ಸಮಲೈಂಗಿಕತೆ ಮತ್ತು ವಿರುದ್ಧ ಲಿಂಗದ ವಯಸ್ಕ ವ್ಯಕ್ತಿಗಳ ನಡುವಿನ ಒಪ್ಪಿಗೆಯ ಶಾರೀರಿಕ ಸಂಭೋಗಕ್ಕೆ "ನಿಸರ್ಗದ ನಿಯಮಕ್ಕೆ ವಿರುದ್ಧ" ಎಂಬ ಹಣೆಪಟ್ಟಿ ಅಂಟಿಸಲು ಸಾಧ್ಯವೇ ಎಂಬ ಪ್ರಶ್ನೆಯೇಳುತ್ತದೆ. ಲೈಂಗಿಕ ಕ್ರಿಯೆಗಳನ್ನು ಸಂತಾನೋತ್ಪತ್ತಿ ಅಥವಾ ಇಟ್ರ ಉದ್ದೇಶಗಳಿಗೆ ನಡೆಸುವುದು ಇಬ್ಬರು ಒಪ್ಪಿಗೆಯಿರುವ ವಯಸ್ಕರ ಮುಕ್ತ ಆಯ್ಕೆಯ ವಿಚಾರ ಮತ್ತು ಸನ್ತಾನೋತ್ಪತ್ತಿ ಅವರ ಆಯ್ಕೆ ಆಗಿರದಿದ್ದರೆ ಅದನ್ನು ನಿಸರ್ಗದ ನಿಯಮಕ್ಕೆ ವಿರುದ್ಧ ಎನ್ನಲು ಸಾಧ್ಯವಿಲ್ಲ. ಹೀಗಾಗಿ, ಲೈಂಗಿಕ ಕ್ರಿಯೆಯನ್ನು ಒಪ್ಪಿಗೆಯಿರುವ ವಯಸ್ಕರ ಆಯ್ಕೆಯ ಪ್ರಕಾರ ವಿಭಿನ್ನವಾಗಿ ನಡೆಸಿದರೆ, ಅದು ವಾಸ್ತವಿಕವಾಗಿ ನಿಸರ್ಗದ ನಿಯಮಕ್ಕೆ ವಿರುದ್ಧವಾಗುವುದಿಲ್ಲ

217. 377ನೇ ಪರಿಚ್ಛೇದವು ಸಮಲೈಂಗಿಕರಷ್ಟೇ ಅಲ್ಲದೆ, ಭಿನ್ನಲಿಂಗಾಸಕ್ತರ ನಡುವಿನ ಸ್ವ-ಇಚ್ಛೆಯ ಶಾರೀರಿಕ ಸಂಭೋಗವನ್ನೂ ಅಪರಾಧೀಕರಿಸುತ್ತದೆ. ಐ.ಪಿ.ಸಿ.ಯ 375ನೇ ಪರಿಚ್ಛೇದದ ನಂತರದ ಭಾಗದಲ್ಲಿ ವಿವರವಾಗಿ ನೀಡಿರುವ ಏಳು ವರ್ಣನೆಗಳಲ್ಲಿ ಅಡಕವಾಗಿರುವ ಒಪ್ಪಿಗೆಯಿಲ್ಲದಿರುವಿಕೆಯ ಅಂಶವೇ, 377ನೇ ಪರಿಚ್ಛೇದ ಮತ್ತು 375ನೇ ಪರಿಚ್ಛೇದಗಳಲ್ಲಿ ಬಳಸಲಾಗಿರುವ ಭಾಷೆಯ ನಡುವಿನ ಪ್ರಮುಖ ವ್ಯತ್ಯಾಸ. 375ನೇ ಪರಿಚ್ಛೇದದಡಿಯ ಏಳು ವಿವರಣೆಗಳಲ್ಲಿ ಸೇರಿಕೊಂಡಿರುವ ಸ್ವ-ಇಚ್ಛೆಯ ಮತ್ತು ತಿಳುವಳಿಕೆಯ ಒಪ್ಪಿಗೆಯ ಅನುಪಸ್ಥಿಥಿಯೇ ಅತ್ಯಾಚಾರವನ್ನು ಕ್ರಿಮಿನಲ್ ಅಪರಾಧವಾಗಿಸುತ್ತದೆ.

218. ಮತ್ತೊಂದೆಡೆ, ಐ.ಪಿ.ಸಿ.ಯ 377ನೇ ಪರಿಚ್ಛೇದವು ಸ್ವ-ಇಚ್ಛೆ ಮತ್ತು ಅರಿವಿನ ಒಪ್ಪಿಗೆಯ ಗೈರುಹಾಜರಿಯನ್ನು ಮೈಗೂಡಿಸಿಕೊಂಡಿರುವ ಯಾವುದೇ ವಿವರಣೆ ಅಥವಾ ವಿನಾಯತಿಗಳನ್ನು ಒಳಗೊಂಡಿಲ್ಲ ಮತ್ತು ಅದು ಸಮಲೈಂಗಿಕರು ಮತ್ತು ಭಿನ್ನಲಿಂಗಾಸಕ್ತರ ನಡುವಿನ ಸ್ವ-ಇಚ್ಛೆಯ ಶಾರೀರಿಕ ಸಂಭೋಗಗಳನ್ನೂ

ಅಪರಾಧೀಕರಿಸುತ್ತದೆ. ಹೀಗೆ ನುಡಿಯುವಾಗ, ನಾವುಗಳು, ಶಾಸಕಾಂಗವು ಕ್ರಿಮಿನಲ್ ಕಾನೂನು (ತಿದ್ದುಪಡಿ) ಕಾಯ್ದೆ, 2013ರ ನಂತರ ಐ.ಪಿ.ಸಿ.ಯ 375ನೇ ಪರಿಚ್ಛೇದವನ್ನು ಅದರ ತಿದ್ದುಪಡಿಗೊಂಡ ರೂಪದಲ್ಲಿ ಜಾರಿಗೊಳಿಸುವಾಗ, ವಿವೇಕವನ್ನು ಉಪಯೋಗಿಸಿ "ಐ.ಪಿ.ಸಿ.ಯ ಇತರ ನಿಬಂಧನೆಗಳಿಗೊಳಪಟ್ಟಂತೆ" ಎಂಬ ಪದಗಳನ್ನು ಬಳಸಿಕೊಂಡಿಲ್ಲ ಎಂಬ ವಿಚಾರದಿಂದ ಶಕ್ತಿ ಮತ್ತು ಬೆಂಬಲ ಪಡೆಯುತ್ತೇವೆ. ಈ ಪದಗಳ ಅನುಪಸ್ತಿತಿಯು, ಭಿನ್ನಲಿಂಗಾಸಕ್ತರ ನಡುವಿನ ಒಪ್ಪಿಗೆಯ ಸಂಭೋಗವನ್ನು ಅಪರಾಧೀಕರಿಸದ ಐ.ಪಿ.ಸಿ.ಯ 375ನೇ ಪರಿಚ್ಛೇದವು ಐ.ಪಿ.ಸಿ.ಯ 377ನೇ ಪರಿಚ್ಛೇದದ ನಿಬಂಧನೆಗೆ ಒಳಪಡುವುದಿಲ್ಲ ಎಂಬುದನ್ನು ಸೂಚಿಸುತ್ತದೆ.

219. 375ನೇ ಪರಿಚ್ಛೇದವು ಪುರುಷ ಮತ್ತು ಮಹಿಳೆಯ ನಡುವೆ, ಮಹಿಳೆಯ ಸ್ವ-ಇಚ್ಛೆಯ ಮತ್ತು ಅರಿವಿನ ಒಪ್ಪಿಗೆಯೊಂದಿಗೆ ನಡೆಯುವ ಶಾರೀರಿಕ ಸಂಭೋಗ ಅತ್ಯಾಚಾರವಲ್ಲ ಮತ್ತು ಅದು ಶಿಕ್ಷಾರ್ಹವಲ್ಲ ಎಂದು ಸ್ಪಷ್ಟಪಡಿಸುವುದರಿಂದ, ಭಿನ್ನಲಿಂಗಾಸಕ್ತರ ನಡುವಿನ ಶಾರೀರಿಕ ಸಂಭೋಗವನ್ನು ಅಪರಾಧೀಕರಿಸುವ 377ನೇ ಪರಿಚ್ಛೇದವು ತನ್ನ ಈಗಿನ ಸ್ವರೂಪದಲ್ಲಿ ಕಾನೂನಿನ ಪ್ರಕಾರ ಮುಂದುವರೆಯಲು ಆಗುವುದಿಲ್ಲ,

220. ಕ್ರಿಮಿನಲ್ ಕಾನೂನು (ತಿದ್ದುಪಡಿ) ಕಾಯ್ದೆ, 2013 ಜಾರಿಯಾಗಿ, ಆ ಮೂಲಕ 375ನೇ ಪರಿಚ್ಛೇದಕ್ಕೆ ತಿದ್ದುಪಡಿ ಮಾಡಿ, 375ನೇ ಪರಿಚ್ಛೇದದಲ್ಲಿದ್ದ "ಲೈಂಗಿಕ ಸಂಭೋಗ" ಎಂಬ ಪದಗಳನ್ನು ಬದಲಾಯಿಸಿ ಅತ್ಯಾಚಾರದ ಅಪರಾಧವನ್ನು ವಿಸ್ತಾರವಾಗಿ ವಿವರಿಸುವ (ಎ) ಮತ್ತು (ಡಿ) ನಡುವಿನ ನಾಲ್ಕು ಷರತ್ತುಗಳನ್ನು ಸೇರಿಸಿದ ಹೊರತಾಗಿಯೂ, ಐ.ಪಿ.ಸಿ.ಯ 377ನೇ ಪರಿಚ್ಛೇದ ತನ್ನ ಹಳೆಯ ಸ್ವರೂಪದಲ್ಲೇ ಶಾಸನಪುಸ್ತಕದಲ್ಲಿ ಮುಂದುವರೆದಿದೆ. ಇಂತಹ ವೈಪರೀತ್ಯವನ್ನು ಮುಂದುವರೆಯಲು ಬಿಟ್ಟರೆ, ಸ್ವ-ಇಚ್ಛೆ ಮತ್ತು ಅರಿವಿನ ಒಪ್ಪಿಗೆಯಿರುವ ಶಾರೀರಿಕ ಸಂಭೋಗವು ಅತ್ಯಾಚಾರವಲ್ಲ ಎನ್ನುವ ಐ.ಪಿ.ಸಿ.ಯ 375ನೇ ಪರಿಚ್ಛೇದದಡಿಯ ವ್ಯಾಖ್ಯಾನದ ಹೊರತಾಗಿಯೂ, ಪರಸ್ಪರರ ಸ್ವ-ಇಚ್ಛೆ ಮತ್ತು ಅರಿವಿನೊಂದಿಗೆ ಶಾರೀರಿಕ ಸಂಭೋಗದಲ್ಲಿ ತೊಡಗುವ ಭಿನ್ನಲಿಂಗಾಸಕ್ತ ಜೋಡಿಯನ್ನು, ಐ.ಪಿ.ಸಿ.ಯ 377ನೇ ಪರಿಚ್ಛೇದಡಿಯಲ್ಲಿ ಅನೈಸರ್ಗಿಕ ಲೈಂಗಿಕ ಕ್ರಿಯೆಯ ಅಪರಾಧಕ್ಕಾಗಿ ಶಿಕ್ಷಿಸಬೇಕಾಗುವ ಸನ್ನಿವೇಶವನ್ನು ಉಂಟುಮಾಡಬಹುದು.

221. ಮೇಲಿನದಕ್ಕೆ ಅನುಗುಣವಾಗಿ, ಭಿನ್ನಲಿಂಗಾಸಕ್ತ ಜೋಡಿಯ ನಡುವಿನ ಒಪ್ಪಿಗೆಯ ಶಾರೀರಿಕ ಸಂಭೋಗ ಅತ್ಯಾಚಾರವಲ್ಲದಿದ್ದರೆ, ಅದನ್ನು ಐ.ಪಿ.ಸಿ.ಯ 377ನೇ ಪರಿಚ್ಛೇದದಡಿಯಲ್ಲಿ ಖಂಡಿತವಾಗಿಯೂ ಅನೈಸರ್ಗಿಕ

ಅಪರಾಧವೆಂದು ಪರಿಗಣಿಸಬಾರದು. ಕ್ರಿಮಿನಲ್ ಕಾನೂನು (ತಿದ್ದುಪಡಿ) ಕಾಯ್ದೆ, 2013ರ ಕಾರಣದಿಂದ, ಬಿನ್ನಲಿಂಗಾಸಕ್ತ ಜನರಿಗೆ ಒಪ್ಪಿಗೆಯ ಶಾರೀರಿಕ ಸಂಭೋಗದೆಡೆಗೆ ಒಲವನ್ನು ತೋರ್ಪಡಿಸಲು ಅನುಮತಿ ದೊರಕಿದೆ ಎಂದಾದರೆ, ಎಲ್.ಜಿ.ಬಿ.ಟಿ ವ್ಯಕ್ತಿಗಳನ್ನು ಒಳಗೊಂಡಂತೆ ಇಬ್ಬರು ವ್ಯಕ್ತಿಗಳು, ಒಪ್ಪಿಗೆಯಿಂದ ತಮ್ಮ ವೈಯಕ್ತಿಕ ಮತ್ತು ಖಾಸಗೀ ಸ್ಥಳಗಳಲ್ಲಿ ಅಂತಹ ಒಲವನ್ನು ವ್ಯಕ್ತಪಡಿಸುವುದನ್ನು ಅಸಮರ್ಥನೀಯವೆಂದು ಪರಿಗಣಿಸಲು ಆಗುವುದಿಲ್ಲ.

222. 377ನೇ ಪರಿಚ್ಛೇದದಡಿಯಲ್ಲಿ ಶಾರೀರಿಕ ಸಂಭೋಗವನ್ನು ಅಪರಾಧೀಕರಿಸುವುದು ಪ್ರಚಲಿತವಾಗಿರುವ ಕ್ರಿಮಿನಲ್ ಕಾನುನಿನಡಿಯಲ್ಲಿ ಯಾವುದಾದರೂ ಉಪಯುಕ್ತ ಉದ್ದೇಶ ಸಾಧಿಸುತ್ತದೆಯೇ ಎಂಬುದು ಚರ್ಚಿಸಬೇಕಿರುವ ಮತ್ತೊಂದು ಅಂಶ. ಈ ವಿಚಾರವನ್ನು ವಿವರಿಸುತ್ತಾ, ಐರೋಪ್ಯ ಮಾನವ ಹಕ್ಕುಗಳ ಆಯೋಗವು ಡಡ್ಜಿಯಾನ್ (ಮೇಲ್ಕಂಡ) ಪ್ರಕರಣದಲ್ಲಿ ಈ ಕೆಳಗಿನ ಅಭಿಪ್ರಾಯ ಮಂಡಿಸಿತು: -

> ಸಂಸತ್ತಿನಲ್ಲಿ ಖಾಸಗೀ ಸದಸ್ಯರ ಮಸೂದೆಯಾಗಿ ಪರಿಚಯಿಸಲಾಗಿದ್ದ 1967ರ ಕಾಯ್ದೆಯನ್ನು, ಸರ್ ಜಾನ್ ವುಲ್ಫೆಂಡೆನ್ ಅಧ್ಯಕ್ಷತೆಯಲ್ಲಿ ಸ್ಥಾಪಿಸಲಾಗಿದ್ದ ಸಮಲೈಂಗಿಕ ಅಪರಾಧಗಳು ಮತ್ತು ವೇಶ್ಯಾವೃತ್ತಿಗೆ ಸಂಬಂಧಿಸಿದ ವಿಭಾಗೀಯ ಆಯೋಗ 1957ನೇ ಇಸವಿಯ ತನ್ನ ವರದಿಯಲ್ಲಿ ಮಾಡಿದ್ದ ಸಮಲೈಂಗಿಕತೆಗೆ ಸಂಬಂಧಿಸಿದ ಶಿಫಾರಸುಗಳನ್ನು ಜಾರಿಗೊಳಿಸುವ ಸಲುವಾಗಿ ಮಂಡಿಸಲಾಗಿತ್ತು (ವೂಲ್ಫೆಂಡೆನ್ ಸಮಿತಿ ಮತ್ತು ವೂಲ್ಫೆಂಡೆನ್ ವರದಿ). ವೂಲ್ಫೆಂಡೆನ್ ಸಮಿತಿಯು ಈ ಕ್ಷೇತ್ರದಲ್ಲಿ ಕ್ರಿಮಿನಲ್ ಕಾನೂನಿನ ಕಾರ್ಯದ ಬಗೆಗೆ ಹೀಗೆಂದು ಹೇಳಿತು
>
> ಸಾರ್ವಜನಿಕ ಸುವ್ಯವಸ್ಥೆ ಮತ್ತು ಸಭ್ಯತೆಯನ್ನು ಉಳಿಸಿಕೊಳ್ಳಲು, ಪ್ರಜೆಯನ್ನು ಅಪಾಯಕರ ಮತ್ತು ನೋವಾಗುವಂತಹ ವಿಚಾರಗಳಿಂದ ರಕ್ಷಿಸಲು, ಮತ್ತು

ಇತರರ ಶೋಷಣೆ ಮತ್ತು ಭ್ರಷ್ಟಾಚಾರ ವಿರುದ್ಧ, ಮುಖ್ಯವಾಗಿ ತಾವು ಸಣ್ಣ ವಯಸ್ಸಿನವರಾಗಿರುವ, ದೈಹಿಕವಾಗಿ ಅಥವಾ ಬೌದ್ಧಿಕವಾಗಿ ದುರ್ಬಲರಾಗಿರುವ, ಅನನುಭವಿಗಳಾಗಿರುವ, ಅಥವಾ ವಿಶೇಷವಾದ ದೈಹಿಕ, ಔಪಚಾರಿಕ ಅಥವಾ ಆರ್ಥಿಕ ಪರಾವಲಂಬನೆಯ ಸ್ತಿತಿಯಲ್ಲಿರುವ ಕಾರಣಕ್ಕೆ ವಿಶೇಷವಾಗಿ ಅಪಾಯದಲ್ಲಿರುವ ವ್ಯಕ್ತಿಗಳಿಗೆ ಸಾಕಷ್ಟು ಭದ್ರತೆಯನ್ನೊದಗಿಸಲು,

ಆದರೆ ಕಾನೂನು ಈ ಕೆಳಗಿನ ಉದ್ದೇಶಗಳಿಗೆ ಬಳಕೆಯಾಗಬಾರದು

ನಾವು ತಿಳಿಸಿರುವ ಉದ್ದೇಶಗಳನ್ನು ಏಡೇರಿಸಲು ಅಗತ್ಯವಿರುವುದಕ್ಕಿಂತ ಹೆಚ್ಚಾಗಿ, ಪ್ರಜೆಗಳ ಖಾಸಗೀ ಬದುಕಿನಲ್ಲಿ ಮೂಗುತೂರಿಸಲು, ಅಥvಅ ಒಂದು ನಿರ್ಧಿಷ್ಟ ಬಗೆಯ ನಡವಳಿಕೆಯನ್ನು ಹೇರುವ ಪ್ರಯತ್ನ ಮಾಡಲು,

ವುಲ್ಫೆನ್ ಸಮಿತಿಯು, ಒಪ್ಪಿಗೆಯ ವಯಸ್ಕರ ನಡುವಿನ ಖಾಸಗೀಯಾದ ಸಮಲೈಂಗಿಕ ನಡವಳಿಕೆಯು "ಚುಟುಕಾಗಿ ಮತ್ತು ಒರಟಾಗಿ ಹೇಳುವುದಾದರೆ, ಸರ್ಕಾರಕ್ಕೆ ಸಂಬಂಧಪಡದ, ಖಾಸಗೀ ನೈತಿಕತೆ ಅಥವಾ ಅನೈತಿಕತೆಯ ವಲಯ"ದ ಭಾಗ ಮತ್ತು ಅದು ಅಪರಾಧವಾಗುಳಿಯಬಾರದು ಎಂದು ನಿರ್ಧರಿಸಿತು (ಅಡಿಗೆರೆ ನಮ್ಮದು)

223. ಏನಿಲ್ಲವೆಂದರೂ, ಸಮಲೈಂಗಿಕರು, ಭಿನ್ನಲಿಂಗಾಸಕ್ತರು, ಉಭಯಲಿಂಗಾಸಕ್ತರು ಅಥವಾ ಲಿಂಗ ಪರಿವರ್ತಿತರ ನಡುವಿನ ಒಪ್ಪಿಗೆಯ ಶಾರೀರಿಕ ಸಂಭೋಗವನ್ನು ಅಪರಾಧಿಕರಿಸುವುದು, ಯಾವುದೇ ಬಗೆಯ ಕಾನೂನುಬದ್ಧ ಸಾರ್ವಜನಿಕ ಹಿತಾಸಕ್ತಿಯ ಉದ್ದೇಶ ಅಥವಾ ಹಿತಾಸಕ್ತಿಯನ್ನು ಸಾಧಿಸುವುದಿಲ್ಲ ಎಂದು ಹೇಳಬಹುದು. ಇದರ ಬದಲು, 377ನೇ ಪರಿಚ್ಛೇದವು ಶಾಸನಪುಸ್ತಕದಲ್ಲಿ ತನ್ನ ಈಗಿನ ಸ್ವರೂಪದಲ್ಲಿ ಉಳಿದುಕೊಂಡರೆ, ಅದು ಎಲ್.ಜಿ.ಬಿ.ಟಿ. ವ್ಯಕ್ತಿಗಳ ಮೇಲಿನ ಕಿರುಕುಳ ಮತ್ತು ಶೋಷಣೆಗಳು ಮುಂದುವರೆಯುವಂತಾಗುತಾದೆ ಎಂದು ನಾವು ನಂಬ ಬಯಸುತ್ತೇವೆ. ಆಯ್ಕೆಯ ಸ್ವಾತಂತ್ರ್ಯವನ್ನು, ಕ್ರಿಮಿನಲ್ ದಂಡನೆಯ ಬೆದರಿಕೆಯನ್ನೊಡ್ಡಿ ಕದಡಿ ಅಥವಾ ಕಡಿತಗೊಳಿಸಿ, ಆ ಮೂಲಕ ಅದನ್ನು, ಬಹುಸಂಖ್ಯಾತರ ಬದಲಾಗಬಲ್ಲ ಗ್ರಹಿಕೆಯ ಮೇಲೆ ಪರಾವಲಂಬಿಯಾಗುವಂತೆ ಮಾಡಲು ಸಾಧ್ಯವಿಲ್ಲ ಎಂಬುದನು ನಾವು ಸ್ಪಷ್ಟಪಡಿಸಬಯಸುತ್ತೇವೆ.

## P. ಐ.ಪಿ.ಸಿ. 377ನೇ ಪರಿಚ್ಛೇದದ ಉಳಿವಿಗಾಗಿ ಲಿಟ್ಮಸ್ ಪರೀಕ್ಷೆ

224. ಹಲವಾರು ಸಿಧ್ಧಾಂತಗಳನ್ನು ಮತ್ತು ತತ್ವಗಳನ್ನು ಚರ್ಚಿಸಿದ ನಂತರ ಮತ್ತು ಸಾಂವಿಧಾನಿಕ ನ್ಯಾಯಾಲಯಗಳಿಗೆ ಮಾರ್ಗದರ್ಶನ ಮಾಡುವ ಮುಲಭೂತಹಕ್ಕುಗಳ ಪಾವಿತ್ರ್ಯತೆಯನ್ನು ಗಮನಸಲ್ಲಿರಿಸಿಕೊಂಡು, ನಾವೀಗ 14, 19, ಮತ್ತು 21ನೇ ಕಲಮುಗಳಲ್ಲಿ ವರ್ಣಿಸಲಾಗಿರುವ ಸಿಧ್ಧಾಂತಗಳ ಅಡಿಪಾಯದ ಮೇಲೆ ಐ.ಪಿ.ಸಿ.ಯ 377ನೇ ಪರಿಚ್ಛೇದದ ಸಂವಿಧಾನಬಧ್ಧತೆಯನ್ನು ಪರಾಂಬರಿಸಲು ಹೋರಾಡುತ್ತಿದ್ದೇವೆ.

225. 21ನೇ ಕಲಮಿನಲ್ಲಿರುವ "ಬದುಕು ಅಥವಾ ವೈಯಕ್ತಿಕ ಸ್ವಾತಂತ್ರ್ಯ" ಎಂಬ ಭಾವವು ತನ್ನೊಳಗೆ ಹಲವಾರು ಹಕ್ಕುಗಳನ್ನು ಮೈಗೂಡಿಸಿಕೊಂಡಿದೆ ಎಂಬುದನ್ನು, ಮನೇಕಾ ಗಾಂಧಿ (ಮೇಲ್ಕಂಡ) ಪ್ರಕರಣದಲ್ಲಿ ನ್ಯಾ. ಭಾಗವತಿಯವರು (ಆಗ ಆ ಹುದ್ದೆಯಲ್ಲಿದ್ದವರು) ಈ ಕೆಳಗಿನಂತೆ ಗಮನಿಸಿದ್ದಾರೆ:-

> 21ನೇ ಕಲಮಿನಲ್ಲಿರುವ "ವೈಯಕ್ತಿಕ ಸ್ವಾತಂತ್ರ್ಯ" ಎಂಬ ಭಾವವು, ವಿಸ್ತಾರವಾದ ಧ್ವನಿಯನ್ನು ಹೊಂದಿದೆ ಮತ್ತು ಅದು ಮನುಷ್ಯನ ವೈಯಕ್ತಿಕ ಸ್ವಾತಂತ್ರ್ಯವನ್ನು ವಿವರಿಸುವ ಹಲವಾರು ಹಕ್ಕುಗಳನ್ನು ಒಳಗೊಂಡಿದೆ, ಅಲ್ಲದೆ ಅವುಗಳಲ್ಲಿ

> ಕೆಲವನ್ನು ನಿರ್ಧಿಷ್ಟ ಮೂಲಭೂತ ಹಕ್ಕುಗಳ ಸ್ಥಾನಮಾನಕ್ಕೇರಿಸಿ ಅವಕ್ಕೆ 19ನೇ ಕಲಮಿನಡಿ ಹೆಚ್ಚುವರಿ ಭದ್ರತೆಯನ್ನೊದಗಿಸಲಾಗಿದೆ

226. **ಅನುಜ್ ಗರ್ಗ್ (ಮೇಲ್ಕಂಡ)**, ಪ್ರಕರಣದಲ್ಲಿ, ಇಪ್ಪತ್ತೈದಕ್ಕಿಂತ ಕಡಿಮೆ ವಯಸ್ಸಿನ ಪುರುಷ ಅಥವಾ ಯಾವುದೇ ಮಹಿಳೆ ಉದ್ಯೋಗ ಮಾಡುವುದನ್ನು ನಿರ್ಬಂಧಿಸುತ್ತಿದ್ದ ಪಂಜಾಬ್ ಅಬಕಾರಿ ಕಾಯ್ದೆ, 1914ರ ಸಂವಿಧಾನಿಕ ಮಾನ್ಯತೆಯನ್ನು ಪರಿಶೀಲಿಸುತ್ತಿದ್ದ ನ್ಯಾಯಾಲಯವು, ಸದರಿ ಕಾಯ್ದೆಯ ಸಂವಿದಾನದ ಆಶಯಕ್ಕೆ ವಿರುದ್ಧವಾದುದು ಎನ್ನುತ್ತಾ, ಈ ರೀತಿ ತೀರ್ಪಿತ್ತಿತು.:-

> 31…. ಇದು ಅವರ ಬದುಕು, ಸಂವಿಧಾನ, ಶಾಸನ ಮತ್ತು ಸಾಮಾಜಿಕ ನಿಬಂಧನೆಗಳಿಗೊಳಪಟ್ಟಂತೆ - ಭಾರತದ ಪ್ರಜೆಯೊಬ್ಬರಿಗೆ ತಮ್ಮ ಬದುಕನ್ನು ತಮ್ಮಿಷ್ಟದಂತೆ ಬದುಕುವ ಅವಕಾಶವಿರಬೇಕು”

ಹಾಗೂ ಮತ್ತೊಮ್ಮೆ,

> ಖಾಸಗೀತನದ ಹಕ್ಕುಗಳು, ವೃತ್ತಿಯನ್ನು ಆರಿಸಿಕೊಳ್ಳುವ ಸ್ವಾಯುತ್ತತೆಯನ್ನು ವಿಧಿಸಿದರೆ, ಭದ್ರತೆ ಎಂಬುದು, ಆ ಆಶ್ವಾಸನೆಯನ್ನು ಈಡೇರಿಸುವ ವಾಸ್ತವಿಕ ವಿಧಾನಕ್ಕೆ ಸಂಬಂಧಿಸಿದೆ. ಆದಾಗ್ಯೂ, ಅಂತಹ ಸ್ವಾತಂತ್ರ್ಯದ ಖಾತರಿಗಳನ್ನು ರಕ್ಷಿಸುವ ಕ್ರಮಗಳು, ಆ ಖಾತರಿಯ ಸತ್ವವೇ ಕಳೆದುಹೋಗುವಷ್ಟು ಬಲಶಾಲಿಯಾಗಿರಬಾರದು ಎಂಬುದು ಸಮಂಜಸವಾದ ಪ್ರಸ್ತಾವನೆ

227. **ಕಾಮನ ಕಾಸ್ (ಎ ರಿಜಿಸ್ಟರ್ಡ್ ಸೊಸೈಟಿ) (ಮೇಲ್ಕಂಡ)** ಪ್ರಕರಣದಲ್ಲಿ, ಘನತೆಯ ಹಕ್ಕಿನ ವಿಚಾರದಲ್ಲಿ ಈ ಕೆಳಗಿನಂತೆ ಗಮನಿಸಿತು:-

> 21ನೇ ಕಲಮಿನಡಿಯಲ್ಲಿ ಮನಗಾಣಲಾಗಿರುವ ಬದುಕಿನ ಮತ್ತು ಸ್ವಾತಂತ್ರ್ಯದ ಹಕ್ಕುಗಳು ತಮ್ಮ ವಲಯದೊಳಗೆ ವೈಯಕ್ತಿಕ ಘನತೆಯನ್ನು ಒಳಗೊಳ್ಳದಿದ್ದರೆ, ಅವಕ್ಕೆ ಅರ್ಥವಿರುವುದಿಲ್ಲ ಮತ್ತು ಘನತೆಯ ಹಕ್ಕು ತನ್ನೊಳಗೆ, ವ್ಯಕ್ತಿಯು ತನ್ನ ಮನುಷ್ಯತ್ವದ ಅರ್ಥಪೂರ್ಣ ಅಭಿವ್ಯಕ್ತಿಗೆ ಅನುವಾಗುವ ಕಾರ್ಯ ಮತ್ತು ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದನ್ನು ಒಳಗೊಂಡಿದೆ.

228. **ಪುಟ್ಟಸ್ವಾಮಿ (ಮೇಲ್ಕಂಡ)** ಪ್ರಕರಣದಲ್ಲಿ, ಈ ನ್ಯಾಯಾಲಯವು ಖಾಸಗೀತನವನ್ನು ಸಂವಿಧಾನದ 21ನೇ ಕಲಮಿನಡಿಯಲ್ಲಿ ರಕ್ಷಿಸಲಾಗಿರುವ ಬದುಕು ಮತ್ತು ವೈಯಕ್ತಿಕ ಸ್ವಾತಂತ್ರ್ಯಗಳ ಭಾಗವೆಂದು ಪರಿಗಣಿಸಿ, ಖಾಸಗೀತನದ ಹಕ್ಕನ್ನು ಮೂಲಭೂತ ಹಕ್ಕೆಂದು ಘೋಷಿಸಿತು.

229. ಮೇಲ್ಕಂಡ ಅಧಿಕೃತ ತೀರ್ಪುಗಳ ಹಿನ್ನೆಲೆಯಲ್ಲಿ, ಐ.ಪಿ.ಸಿ.ಯ 377ನೇ ಪರಿಚ್ಛೇದವು ತನ್ನ ಈಗಿನ ಸ್ವರೂಪದಲ್ಲಿ, ಮಾನವ ಘನತೆ ಮತ್ತು ನಾಗರಿಕರ ಖಾಸಗೀತನ ಮತ್ತು ಆಯ್ಕೆಯ ಮೂಲಭೂತ ಹಕ್ಕುಗಳನ್ನು ಕಡಿತಗೊಳಿಸುತ್ತದೆ, ಮತ್ತಿಲ್ಲಿ ಅಂತಹ ಪ್ರಜೆಗಳ ಸಂಖ್ಯೆ ಎಷ್ಟು ಚಿಕ್ಕದು ಎಂಬುದು ಮುಖ್ಯವಲ್ಲ. ಲೈಂಗಿಕ ನಿಲುವು ಎಂಬುದು ಖಾಸಗೀತನದ ಮುಖ್ಯವಾದ ಮತ್ತು ಸ್ವಾಭಾವಿಕವಾದ ಭಾಗವಾಗಿದ್ದು, ಖಾಸಗೀತನದ ಹಕ್ಕು ತನ್ನ ತೆಕ್ಕೆಯೊಳಗೆ, ಎಲ್.ಜಿ.ಬಿ.ಟಿ. ವ್ಯಕ್ತಿಗಳನ್ನು ಒಳಗೊಂಡಂತೆ ಪ್ರತಿ ವ್ಯಕ್ತಿಗಿರುವ, ತನ್ನ ಆಯ್ಕೆಯನ್ನು ಲೈಂಗಿಕ ಒಲವಿನ ಮೂಲಕ, ಕಿರುಕುಳ ಅಥವಾ ಕ್ರಿಮಿನಲ್ ದಂಡನೆಗಳ ಭಯವಿಲ್ಲದೆ ವ್ಯಕ್ತಪಡಿಸುವ ಹಕ್ಕನ್ನೂ ಸೆಳೆದುಕೊಳ್ಳುತ್ತದೆ.

230. ತನ್ನ ಲೈಂಗಿಕ ಸಂಗಾತಿಯನ್ನು ಆರಿಸಿಕೊಳ್ಳುವ ಲೈಂಗಿಕ ಸ್ವಾತಂತ್ರ್ಯವು ವೈಯಕ್ತಿಕ ಸ್ವಾತಂತ್ರ್ಯದ ಮುಖ್ಯವಾದ ಕಂಬ ಮತ್ತು ಬೇರ್ಪಡಿಸಲಾಗದ ಭಾಗ. ಒಬ್ಬೇ ಒಬ್ಬ ವ್ಯಕ್ತಿಯ ಸ್ವಾತಂತ್ರ್ಯವನ್ನು, ನಿಸರ್ಗದ

ನಿಯಮಕ್ಕೆ ವಿರುದ್ಧವೆಂಬ ಯಾವುದೋ ಅಸ್ಪಷ್ಟ ಮತ್ತು ಪುರಾತನ ನಿಯಮದಡಿಯಲ್ಲಿ ಅಥವಾ ಅಂತಹ ವ್ಯಕ್ತಿ ತನ್ನ ಸ್ವಾತಂತ್ರ್ಯವನ್ನು, ಅದು ಆತನ/ಆಕೆಯ ಖಾಸಗೀ ವಲಯದೊಳಗೆ ಚಲಾವಣೆಯಾದ ಹೊರತಾಗಿಯೂ, ಚಲಾಯಿಸುವುದರಿಂದ ಬಹುಸಂಖ್ಯಾತರಿಗೆ ಇರುಸುಮುರಿಸಾಗುತ್ತದೆ ಎಂಬ ಕಾರಣಕ್ಕೆ ಹತ್ತಿಕ್ಕಿದರೆ, ಬದುಕಿನ ಗುರುತೇ ಕರಗಿಹೋಗಿ, ಬದುಕಿರುವುದು ಬರಿದಾದ ಉಳಿದುಕೊಳ್ಳುವಿಕೆಯಂತಾಗುತ್ತದೆ ಮತ್ತು ಅದರ ಪರಿಣಾಮವಾಗಿ ಅಂತಹ ವ್ಯಕ್ತಿಯ ಸ್ವಾತಂತ್ರ್ಯದ ಮೂಲಭೂತ ಹಕ್ಕು ಕಡಿತಗೊಳ್ಳುತ್ತದೆ.

231. ಹಾಗೆ ಹೇಳುವ ಸಂದರ್ಭದಲ್ಲಿ, 21ನೇ ಕಲಮಿನಲ್ಲಿ ಸೂಚಿಸಲಾಗಿರುವ ಷರತ್ತುಗಳನ್ನು ಮತ್ತು **ಮನೇಕಾ ಗಾಂಧಿ** (ಮೇಲ್ಕಂಡ) ಪ್ರಕರಣದ ತೀರ್ಪಿನಲ್ಲಿ ಕಾನುನಿನ ಮೂಲಕ ಸ್ಥಾಪಿಸಲಾಗಿರುವ ಪ್ರಕ್ರಿಯೆಗಳನ್ನು ಈಡೇರಿಸಿದರೆ, ವ್ಯಕ್ತಿಗಳು ತಮ್ಮ ಬದುಕಿನ ಮತ್ತು ವೈಯಕ್ತಿಕ ಸ್ವಾತಂತ್ರ್ಯದ ಹಕ್ಕುಗಳಿಂದ ವಂಚಿತರಾಗುತ್ತಾರೆ ಎಂಬುದರ ಸಂಪೂರ್ಣ ಅರಿವು ನಮಗಿದೆ. 21ನೇ ಕಲಮಿನ ಪ್ರಕಾರ, ವ್ಯಕ್ತಿಯೊಬ್ಬರನ್ನು, ಅವರ ಬದುಕುವ ಮತ್ತು ವೈಯಕ್ತಿಕ ಸ್ವಾತಂತ್ರ್ಯದ ಹಕ್ಕುಗಳಿಂದ ವಂಚಿತರನ್ನಾಗಿಸಬೇಕಿದ್ದರೆ, ಅದಕ್ಕೊಂದು ಕಾನುನೂನಿರಬೇಕು ಮತ್ತು ಸದರಿ ಕಾನೂನು ನ್ಯಾಯಸಮ್ಮತವಾದ ವಿಧಾನವನ್ನು ಅನುಸರಿಸಬೇಕು. 377ನೇ ಪರಿಚ್ಛೇದವು ವ್ಯಕ್ತಿಯೊಬ್ಬರ ಘನತೆ, ಆಯ್ಕೆಯ ಅಭಿವ್ಯಕ್ತಿ ಮತ್ತು ಬದುಕಿನ ಪರಮೋಚ್ಚ ತತ್ವಗಳನ್ನು ತಡೆದುಕೊಳ್ಳಬಲ್ಲದೆ ಮತ್ತು ಅದು ವ್ಯಕ್ತಿಯೊಬ್ಬರಿಗೆ ತಮ್ಮ ಬದುಕನ್ನು ತಮ್ಮ ನೈಸರ್ಗಿಕ ನಿಲುವಿಗೆ ತಕ್ಕಂತೆ ನಡೆಸಲು ಅನುಮತಿ ನಿಡುತ್ತದೆಯೇ ಎಂಬುದು ನಿರ್ಣಾಯಕ ವಿಚಾರ. ಅದಲ್ಲದೆ, ಬಹುಮುಖ್ಯವಾಗಿ, ಕಾಲ ಸರಿದಂತೆ, ಇಂತಹ ಲಿಂಗ-ತಟಸ್ಥ ಅಪರಾಧವನ್ನು, ಅದರಲ್ಲಿಯೂ, ಕ್ರಿಯೆಯೊಂದಕ್ಕೆ ಒಪ್ಪಿಗೆಯಿದ್ದು, ಆ ಒಪ್ಪಿಗೆಯೂ ದೈಹಿಕ ಸ್ವಾಯತ್ತತೆಯನ್ನು ಎತ್ತಿಹಿಡಿದಿರುವಾಗ ಶಾಸನ ಪುಸ್ತಕದಲ್ಲಿ ಉಳಿಯಲು ಬಿಡಬೇಕೇ ಎಂಬುದು ನಮ್ಮೆದುರಿಗಿರುವ ಪ್ರಶ್ನೆ. ಹೀಗಾಗಿ ಈ ನಿಬಂಧನೆಯನ್ನು ಸಂವಿಧಾನದ 14, 19 ಮತ್ತು 21ನೇ ಕಲಮುಗಳಡಿಯಲ್ಲಿ ವಿಕಸನಗೊಂಡಿರುವ ಸಿಧ್ಧಾಂತಗಳ ನೆಲೆಯಲ್ಲಿ ಪರೀಕ್ಷಿಸಬೇಕು.

232. **ಸುನಿಲ್ ಬತ್ರ v. ದೆಹಲಿ ಆಡಳಿತ ಮತ್ತು ಇತರರು**[85] ಪ್ರಕರಣದಲ್ಲಿ ನ್ಯಾ, ಕೃಷ್ಣ ಐಯ್ಯರ್ ರವರು, ದಂಡನೆಯೊಂದು ಖಂಡನೀಯವಾಗಿದ್ದು, ಅಪಮಾನಕಾರಿಯಾಗಿ ಅಸಹಜ ಅಥವಾ ಕ್ರೂರವಾಗಿದ್ದು, ಪುನರ್ವಸತಿಯ ಉದ್ದೇಶವನ್ನೇ ನಾಶಪಡಿಸುವಂತಿದ್ದರೆ, ಅದು ಖಂಡಿತವಾಗಿಯೂ ಅಸಮಂಜಸ ಮತ್ತು ನಿರಂಕುಶ ಹಾಗೂ ಅದು 14 ಮತ್ತು 19ನೇ ಕಲಮುಗಳಿಂದ ತಳ್ಳಿಹಾಕಲ್ಪಡುತ್ತದೆ, ಅಲ್ಲದೆ ಅದರ ಕಾರ್ಯವಿಧಾನವು ಅಪ್ರಾಮಾಣಿಕತೆಯಿಂದ ಬಾಧಿಸಲ್ಪಡುತ್ತಿದ್ದಾರೆ ಅದು 21ನೇ ಕಲಮಿಗೆ ವಿರುದ್ಧವಾಗುತ್ತದೆ.

233. ನಾವು ಮೊದಲಿಗೆ, ಐ.ಪಿ.ಸಿ. 377ನೇ ಪರಿಚ್ಛೇದದ ಸಿಂಧುತ್ವವನ್ನು ಸಂವಿಧಾನದ 14ನೇ ಕಲಮಿನ ಕಟಕಟೆಯಲ್ಲಿ ಪರೀಕ್ಷಿಸಬೇಕು. 14ನೇ ಕಲಮು "ಎಲ್ಲ ಸಮಾನರನ್ನು ಸಮಾನವಾಗಿ ನಡೆಸಿಕೊಳ್ಳಬೇಕು" ಎಂಬುದನ್ನು ಪ್ರತಿಪಾದಿಸುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಇದು ಎಲ್ಲಾ ಸಮಾಣರಾದ ವ್ಯಕ್ತಿಗಳೊಂದಿಗೆ ಸಮನಾದ ನಡವಳಿಕೆ ಸೂಚಿಸುತ್ತದೆ. ಶಾಸಕಾಂಗವು ಒಂದು ನಿರ್ದಿಷ್ಟ ವರ್ಗಕ್ಕೆ ಅನ್ವಯಿಸುವ ಕಾನೂನುಗಳನ್ನು ಜಾರಿಗೊಳಿಸುವ ಅಧಿಕಾರವನ್ನು ಸಂಪೂರ್ಣವಾಗಿ ಹೊಂದಿದ್ದರೂ ಸಹಮತಿಯ ಶಾರೀರಿಕ ಸಂಭೋಗದಲ್ಲಿ ತೊಡಗುವ ಪ್ರಜೆಗಳಿಗೆ 377ನೇ ಪರಿಚ್ಛೇದವು ಅನ್ವಯವಾಗುವ ಪ್ರಸ್ತುತ ಪ್ರಕಣದಲ್ಲಿರುವಂತೆ, ಆ ವರ್ಗೀಕರಣವು, 377ನೇ ಪರಿಚ್ಛೇದದಡಿಯಲ್ಲಿ ಮಾಡಿರುವ ವರ್ಗಿಕರ್ಣವನ್ನೂ ಸೇರಿದಂತೆ, ಅರ್ಥವಾಗಬಲ್ಲ ವ್ಯತ್ಯಾಸದ ಆಧಾರದಲ್ಲಿ ರಚನೆಯಾಗಿರಬೇಕು ಮತ್ತು ಅದು ಸದರಿ ನಿಬಂಧನೆ, ಎಂದರೆ ಐ.ಪಿ.ಸಿ.ಯ 377ನೇ ಪರಿಚ್ಛೇದ, ಸಾಧಿಸ ಹೊರಟಿರುವ ಉದ್ದೇಶದೊಂದಿಗೆ ಸಮಂಜಸವಾದ ತಾಳಮೇಳ ಹೊಂದಿರಬೇಕು ಎಂಬ ಅವಳಿ ಷರತ್ತುಗಳನ್ನು ಪೂರ್ತಿಮಾಡಬೇಕು.

234. **ಎಂ ನಾಗರಾಜ್ ಮತ್ತು ಇತರರು v. ಭಾರತ ಸರ್ಕಾರ ಮತ್ತು ಇತರರು**[86] ಪ್ರಕರಣದಲ್ಲಿ ಹೀಗೆ ನಿರ್ಧರಿಸಲಾಗಿದೆ:

> -ಸಮಾನವಾದ ನಡವಳಿಕೆಯೇ 14ನೇ ಕಲಮಿನ ಬಹುಮುಖ್ಯ ಜವಾಬ್ದಾರಿ. 14ನೇ ಕಲಮು, ಸಂಪೂರ್ಣ ನಿಷೇಧವನ್ನು ಜಾರಿಗೊಳಿಸುವ ಮೂಲಕ ವೈಯಕ್ತಿಕ

[85] AIR 1978 SC 1675 : (1978) 4 SCC 494

[86] AIR 2007 SC 71 : (2006) 8 SCC 212

ಹಕ್ಕನ್ನು ಪೂರೈಸುತ್ತದೆ. ನ್ಯಾಯಾಂಗ ನಿರ್ಧಾರಗಳ ಪ್ರಕಾರ, ವರ್ಗೀಕರಣದ ಸಿದ್ಧಾಂತವನ್ನು 14ನೇ ಕಲಮಿಗೆ ಅನ್ವಯಿಸಲಾಗುತ್ತದೆ. ಕಲಮು 14ನೇ ಕಲಮಿನಡಿಯಲ್ಲಿನ ನಡೆಸಿಕೊಳ್ಳುವಿಕೆಯ ಸಮಾನತೆಯು ವಸ್ತುನಿಷ್ಠ ಪರೀಕ್ಷೆಯಾಗಿದೆ. ಆದು ಉದ್ದೇಶದ ಪರೀಕ್ಷೆ ಅಲ್ಲ. ಆದ್ದರಿಂದ, ಒಂದೇ ರೀತಿಯ ಸನ್ನಿವೇಶಗಳಲ್ಲಿ, ಕಾನೂನು ಎಲ್ಲ ವ್ಯಕ್ತಿಗಳ ಮೇಲೂ ಸಮಾನವಾಗಿ ಚಲಾವಣೆಯಾಗಬೇಕು ಎಂಬುದು 14 ನೇ ಕಲಮಿನ ಮೂಲಭೂತ ತತ್ತ್ವ.

235. **ಈಪಿ ರೋಯಪ್ಪ v. ತಮಿಳುನಾಡು ಸರ್ಕಾರ ಮತ್ತು ಇನ್ನೊಬ್ಬರು**[87] , ಪ್ರಕರಣದ ಲ್ಲಿ ಈ ನ್ಯಾಯಾಲಯವು, ಸಮಾನತೆಯು ಅನೇಕ ಅಂಶಗಳು ಮತ್ತು ಆಯಾಮಗಳನ್ನು ಹೊಂದಿರುವ ಕ್ರಿಯಾತ್ಮಕ ಪರಿಕಲ್ಪನೆ ಆದನ್ನು ಸಾಂಪ್ರದಾಯಿಕ ಮತ್ತು ತಾತ್ವಿಕವಾದ ಗಡಿಗಳೊಳಗೆ ಮುಚ್ಚಿಹಾಕಲು, ಕೂಡಿಹಾಕಲು ಮತ್ತು ಸೀಮಿತಗೊಳಿಸಲು" ಸಾಧ್ಯವಿಲ್ಲ ಎಂಬುದನ್ನು  ಗಮನಿಸಿತು. ಹಾಗೆಯೇ, ಸಮಾನತೆಯು ನಿರಂಕುಶತೆಗೆ ವಿರುದ್ಧವಾಗಿದೆ ಏಕೆಂದರೆ, ಸಮಾನತೆ ಮತ್ತು ನಿರಂಕುಶತ್ವಗಳೆರಡೂ ಬದ್ಧ ವೈರಿಗಳು ಮತ್ತು ಅವುಗಳಲ್ಲಿ ಒಂದು ಗಣರಾಜ್ಯವೊಂದರಲ್ಲಿನ ಕೂನೂನಿನ ನಿಯಮಗಳಿಗೆ ಸೇರಿರುವಂಥಹುದು ಮತ್ತೊ ಇನ್ನೊಂದು ಅಂಶವು ಪರಿಪೂರ್ಣ ಸಾಮ್ರಾಟನೊಬ್ಬನ ಭ್ರಮೆ ಮತ್ತು ತೆವಲುಗಳಿಗೆ ಸಂಬಂಧಿಸಿದೆ.

236. **ಬುಧಾನ್ ಚೌಧರಿ ವಿ ಬಿಹಾರ ರಾಜ್ಯ ಸರ್ಕಾರ**[88] ಪ್ರಕರಣದಲ್ಲಿ, ಸಮಂಜಸವಾದ ವರ್ಗೀಕರಣದ ಕಲ್ಪನೆಯನ್ನು ವರ್ಣಿಸುತ್ತ ನ್ಯಾಯಾಲಯ ಹೀಗೆ ನಿರ್ಧರಿಸುತ್ತದೆ:-.

14ನೇ ಕಲಮು ವರ್ಗ ಶಾಸನವನ್ನು ನಿಷೇಧಿಸುತ್ತದೆಯಾದರೂ ಅದು ಶಾಸನದ ಉದ್ದೇಶಕ್ಕಾಗಿ

[87] AIR 1974 SC 555 : (1974) 4 SCC 3

[88] AIR 1955 SC 191

ಸಮಂಜಸವಾದ ವರ್ಗೀಕರಣ ಮಾಡುವುದನ್ನು ನಿಷೇಧಿಸುವುದಿಲ್ಲ ಎಂಬುದು ಈಗ ಚೆನ್ನಾಗಿ ತಿಳಿದಿದೆ. ಆದರೆ, ಅನುಮತಿಸಬಲ್ಲ ವರ್ಗೀಕರಣವದ ಪರೀಕ್ಷೆಯಲ್ಲಿ ಉತ್ತೀರ್ಣಗೊಳ್ಳಬೇಕು, ಎರಡು ಷರತ್ತುಗಳನ್ನು ಪೂರೈಸಬೇಕಗುತ್ತದೆ, ಎಂದರೆ (1) ವರ್ಗೀಕರಣವು, ಒಟ್ಟಾಗಿಸಲ್ಪಟ್ಟಿರುವ ವ್ಯಕ್ತಿಗಳು ಅಥವಾ ವಸ್ತುಗಳನ್ನು ಹೊರಬಿಡಲಾಗಿರುವ ವ್ಯಕ್ತಿ ಅಥವಾ ವಸ್ತುಗಳಿಂದ ಪ್ರತ್ಯೇಕಿಸುವಂತಹ "ಅರ್ಥವಾಗಬಲ್ಲ ವ್ಯತ್ಯಾಸವನ್ನು ಆಧರಿಸಬೇಕು. (2) ವ್ಯತ್ಯಾಸವು, ಸದರಿ ಶಾಸನ ಸಾಧಿಸಹೊರಟಿರುವ ಉದ್ದೇಶದೊಂದಿಗೆ ತಾರ್ಕಿಕವಾದ ತಾಳಮೇಳ ಹೊಂದಿರಬೇಕು. ವರ್ಗೀಕರಣವು ಯಾವುದೇ ವಿಚಾರಗಳನ್ನು ಆಧರಿಸಿರಬಹುದು, ಉದಾಹರಣೆಗೆ, ಭೌಗೋಳಿಕ ಅಥವಾ ಉದ್ಯೋಗಗಳ ಪ್ರಕಾರ, ಇತ್ಯಾದಿ. ಇಲ್ಲಿ ಪರಿಗಣಿಸಲಾಗುತ್ತಿರುವ ನಿಬಂಧನೆಯ ಉದ್ದೇಶ ಮತ್ತು ವರ್ಗಿಕರಣದ ಆಧಾರದ ನಡುವೆ ಹೊಂದಾಣಿಕೆಯಿರಬೇಕಿರುವುದು ಬಹುದೊಡ್ಡ ಅಗತ್ಯ. 14ನೇ ಕಲಮು ಭೇದಭಾವವನ್ನು ತಾತ್ವಿಕ ಕಾನೂನಿನ ಮೂಲಕ ಮಾತ್ರವಲ್ಲದೆ ಪ್ರಾಯೋಗಿಕತೆಯ ಕಾನೂನುನಿನ ಮೂಲಕವೂ ಖಂಡಿಸುತ್ತದೆ ಎಂಬುದು ಕೂಡ ಈ ನ್ಯಾಯಾಲಯದ ತೀರ್ಪುಗಳಿಂದ ಸ್ಪಷ್ಟವಾಗಿದೆ.

237. 377ನೇ ಪರಿಚ್ಛೇದ ಐ.ಪಿ.ಸಿ.ಯನ್ನು ಪರಾಂಬರಿಸಿದಾಗ, ಅದು ಮಹಿಳೆಯರು ಮಕ್ಕಳು ಶಾರೀರಿಕ ಸಂಭೋಗಕ್ಕೊಳಗಾಗುವುದನ್ನು ತಪ್ಪಿಸುವ ಸಲುವಾಗಿ ಶಾರೀರಿಕ ಸಂಭೋಗದಲ್ಲಿ ತೊಡಗುವ ವ್ಯಕ್ತಿಗಳಲ್ಲೂ

ವರ್ಗೀಕರಿಸಿ ಶಿಕ್ಷಿಸುತ್ತದೆ. ಹೀಗಿರುವಾಗ, ಸದರಿ ವರ್ಗೀಕರಣಕ್ಕೂ ಸದರಿ ಪರಿಚ್ಛೇದ ಸಾಧಿಸಹೊರಟಿರುವ ಉದ್ದೇಶಕ್ಕೂ ತಾರ್ಕಿಕವಾದ ತಾಳಮೇಳವಿದೆಯೇ ಎಂಬುದನ್ನು ಧೃಡಪಡಿಸಿಕೊಳ್ಳಬೇಕಿದೆ. ಐ.ಪಿ.ಸಿ. 377ನೇ ಪರಿಚ್ಛೇದದ ದೆಸೆಯಿಂದ ಅಪರಾಧೀಕರಿಸಲಾಗಿರುವ ಒಪ್ಪಿಗೆಯಿಲ್ಲದ ಕೃತ್ಯಗಳನ್ನು, 375ನೇ ಪರಿಚ್ಛೇದ ಐ.ಪಿ.ಸಿ. ಮತ್ತು ಪೋಕ್ಸೋ ಕಾಯ್ದೆಯಡಿಯಲ್ಲಿ ದಂಡನಾರ್ಹ ಅಪರಾಧಗಳೆಂದು ಈಗಾಗಲೇ ಗುರುತಿಸಲಾಗಿದೆಯಾದ್ದರಿಂದ ಮೇಲಿನ ಪ್ರಶ್ನೆಯ ಉತ್ತರ ನಕಾರಾತ್ಮಕವಾಗಿದೆ. ಅಲ್ಲದೆ, ಸದರಿ ಪರಿಚ್ಛೇದವು ತನ್ನ ಈಗಿನ ರೂಪದಲ್ಲಿ ಚಾಲ್ತಿಯಲ್ಲಿರುವುದರಿಂದ, ಅಸಹ್ಯಕರ ಮತ್ತು ಆಕ್ಷೇಪಾರ್ಹ ಪ್ರತಿಕೂಲ ಪರಿಣಾಮಗಳು ಉಂಟಾಗಿದ್ದು, ಆ ಮೂಲಕ, ಮಕ್ಕಳಿಗಾಗಲೀ ಮಹಿಳೆಯರಿಗಾಗಲೀ ಹಾನಿಕಾರಕವಲ್ಲದ, ಒಂದು ವರ್ಗಕ್ಕೆ ಸೇರಿದ ವ್ಯಕ್ತಿಗಳು (ಎಲ್.ಜಿ.ಬಿ.ಟಿ) ತಮ್ಮ ಅಸ್ಮಿತೆ ಮತ್ತು ವ್ಯಕ್ತಿತ್ವದಿಂದ ವ್ಯಾಖ್ಯಾನಿಸಲ್ಪಡುವ ಕೆಲ ಸ್ವಾಭಾವಿಕ ಗುಣಲಕ್ಷಣಗಳ ಕಾರಣದಿಂದ ನಡೆಸುವ ಒಪ್ಪಿಗೆಯ ಕ್ರಿಯೆಗಳನ್ನು ಕೂಡ ತಪ್ಪಾಗಿ ಗುರಿಪಡಿಸಲಾಗಿದೆ. ಎಲ್.ಜಿ.ಬಿ.ಟಿ ಸಮುದಾಯದವರನ್ನು ಈ ರೀತಿಯಲ್ಲಿ ಬೇರೆಯದೇ ವರ್ಗವೆಂದು ಪರಿಗಣಿಸಿ ಅವರ ಮೇಲೆ ಎಸಗಲಾಗುವ ತಾರತಮ್ಯ ಮತ್ತು ಅಸಮಾನ ನಡೆಸಿಕೊಳ್ಳುವಿಕೆಗಳು ಸಂವಿಧಾನದ 14ನೇ ಕಲಮನ್ನು ಉಲ್ಲಂಘಿಸುತ್ತವೆಯಾದ್ದರಿಂದ ಅದು ಸಂವಿಧಾನ ಬಾಹಿರವಾಗಿದೆ.

238. **ಶಾಯರಾ ಬಾನೋ** (ಮೇಲ್ಕಂಡ) ಪ್ರಕರಣದಲ್ಲಿ ನ್ಯಾಯಾಲಯವು, ಕಾನೂನಿನ ನಿಬಂಧನೆಯೊಂದರ ಸ್ಪಷ್ಟ ನಿರಂಕುಶತ್ವವನ್ನು, ಸದರಿ ಕಾನೂನು ಅಸಾಂವಿಧಾನಿಕವಾಗಿದೆ ಎಂದು ಘೋಷಿಸಲು ಆಧಾರವಾಗಿ ಬಳಸಿಕೊಳ್ಳಬಹುದು ಎಂದು ಗಮನಿಸುತ್ತಾ ಹೀಗೆ ನುಡಿಯಿತು:-

> ಆದ್ದರಿಂದ, ಮೇಲ್ಕಂಡ ತೀರ್ಪುಗಳಲ್ಲಿ ಹೇಳಲಾಗಿರುವಂತೆ, ಸ್ಪಷ್ಟವಾದ ನಿರಂಕುಶತ್ವದ ಪರೀಕ್ಷೆಯು, 14 ನೇ ಕಲಮಿನಡಿಯಲ್ಲಿನ ಶಾಸನ ಮತ್ತು ಅಧೀನ ಶಾಸನಗಳನ್ನು ಅಮಾನ್ಯಗೊಳಿಸುವ ರೀತಿಯಲ್ಲಿ ಅನ್ವಯಿಸುತ್ತದೆ. ಆದ್ದರಿಂದ, ಸ್ಪಷ್ಟವಾದ ನಿರಂಕುಶತೆಯನ್ನು ಶಾಸಕಾಂಗವೇ ದುರುದ್ದೇಶದಿಂದ, ವಿವೇಚನೆಯಿಲ್ಲದೆ ಮತ್ತು/ಅಥವಾ

ಸಮರ್ಪಕವಾಗಿ ನಿರ್ಣಯಿಸುವ ತತ್ವಗಳ ಆಧಾರವಿಲ್ಲದೇ ಜಾರಿಗೊಳಿಸಿರಬೇಕು. ಅಲ್ಲದೆ, ಒಂದೊಮ್ಮೆ ಶಾಸನವೊಂದು ಅತಿರೇಕ ಮತ್ತು ಅಸಮಂಜಸವಾಗಿರುವುದನ್ನು ಮಾಡಿದರೆ, ಅಂತಹ ಶಾಸನವು ಸ್ಪಷ್ಟವಾಗಿ ನಿರಂಕುಶವಾಗಿರುತ್ತದೆ. ಆದ್ದರಿಂದ ನಾವು ಮೇಲೇ ಉಲ್ಲೇಖಿಸಿದ ಸ್ಪಷ್ಟವಾದ ನಿರಂಕುಶತ್ವದ ಅರ್ಥನೀಡುವ ನಿರಂಕುಶತೆಯು 14 ನೇ ಕಲಮಿನಡಿಯ ಶಾಸನವನ್ನು ಅಮಾನ್ಯಗಳಿಸುವುದಕ್ಕೂ ಅನ್ವಯಿಸುತ್ತದೆ ಎಂಬುದು ನಮ್ಮ ಅಭಿಪ್ರಾಯ.

239. **ಶಾಯರಾ ಬಾನೊ** (ಮೇಲ್ಕಂಡ) ಪ್ರಕರಣದಲ್ಲಿ ರಚಿಸಲಾಗಿರುವ ಕಾನೂನಿನ ಹಿನ್ನೆಲೆಯಲ್ಲಿ ಮತ್ತು 377ನೇ ಪರಿಚ್ಛೇದ ವಯಸ್ಕರ ನಡುವಿನ ಒಪ್ಪಿಗೆಯ ಲೈಂಗಿಕ ಕ್ರಿಯೆಗಳನ್ನು ಅಪರಾಧೀಕರಿಸುತ್ತದೆ ಎಂಬುದ ಕಾರಣಕ್ಕೆ, ಅದು ಅರ್ಹ ವಯಸ್ಕರನಡುವಿನ ಒಪ್ಪಿಗೆಯ ಮತ್ತು ಒಪ್ಪಿಗೆಯಿಲ್ಲದ ಲೈಂಗಿನ ಕ್ರಿಯೆಗಳ ನಡುವಿನ ವ್ಯತ್ಯಾಸವನ್ನು ಗುರುತಿಸುವಲ್ಲಿ ಸೋಲುತದೆ. ಹಾಗೆಯೇ, 377ನೇ ಪರಿಚ್ಛೇದ ಐ.ಪಿ.ಸಿ.ಯೂ, ಒಪ್ಪಿಗೆಯ ಲೈಂಗಿಕ ಸಂಬಂಧಗಳು ಸಮಾಜಕ್ಕೆ ಹಾನಿಕರವಾಗಲಿ, ಸಾಂಕ್ರಾಮಿಕವಾಗಲೀ ಅಲ್ಲ ಎಂಬುದನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಬದಲಿಗೆ 377ನೇ ಪರಿಚ್ಛೇದವು ಏಲ್.ಜಿ.ಬಿ.ಟಿ. ಸಮುದಾಯಕ್ಕೆ ಸೇರಿದ ವ್ಯಕ್ತಿಗಳನ್ನು ಸಾಮಾಜಿಕ ಬಹಿಷ್ಕಾರ ಮತ್ತು ಅವಗಣನೆಗೆ ಈಡುಮಾಡಿ ಅವರ ಸ್ವಾತ್ತಂತ್ರ್ಯದ ವಿಚಾರದಲ್ಲಿ ಅಪಚಾರ ಎಸಗುತ್ತದೆ. ಅಲ್ಲದೆ ಸದರಿ ಪರಿಚ್ಛೇದವು ಅರ್ಹ ವ್ಯಕ್ತಿಗಳ ಖಾಅಗಿಯಾದ ಒಪ್ಪಿಗೇ ಕ್ರಿಯೆಗಳಲ್ಲೂ ಹಸ್ತಕ್ಷೇಪ ನಡೆಸುತ್ತದೆ ಎಂಬುದನ್ನು ಬೇರೆಯಾಗಿ ಹೇಳಬೇಕಿಲ್ಲ. ಲೈಂಗಿಕ ಕ್ರಿಯೆಗಳನ್ನು, ಸಾಮಾಜಿಕ ನೈತಿಕತೆ ಅಥವಾ ಲೈಂಗಿಕ ಕ್ರಿಯೆಗಳು ಸಂತಾನೋತ್ಪತ್ತಿಯ ಉದ್ದೇಶಕ್ಕಷ್ಟೇ ನಡೆಯುತ್ತವೆ ಎಂದು ಪರಿಗಣಿಸುವ ಸಾಂಪ್ರದಾಯಿಕ ಗ್ರಹಿಕೆಯ ದೃಷ್ಟಿಕೋನದಿನ ನೋಡಲು ಆಗುವುದಿಲ್ಲ. ಹೀಗಿರುವಾಗ, ಯಾವುದೇ ಸ್ವರೂಪದ ಒಪ್ಪಿಗೆಯ ಲೈಂಗಿಕ ಕ್ರಿಯೆಗಳನ್ನು ಅಪರಾಧೀಕರಿಸುವ 377ನೇ ಪರಿಚ್ಛೇದ ಐ.ಪಿ.ಸಿ.ಯೂ ಸ್ಪಷ್ಟವಾಗಿ ನಿರಂಕುಶವಾಗಿದೆ.

240. ಎಲ್.ಜಿ.ಬಿ.ಟಿ. ಸಮುದಾಯವು, ಇತರ ಪ್ರಜೆಗಳಿಗಿರುವಂಥ ಮಾನವೀಯ, ಮೂಲಭೂತ ಮತ್ತು ಸಾಂವಿಧಾನಿಕ ಹಕ್ಕುಗಳನ್ನು ಹೊಂದಿದೆ, ಏಕೆಂದರೆ ಈ ಹಕ್ಕುಗಳು ವ್ಯಕ್ತಿಗಳಿಗೆ ನೈಸರ್ಗಿಕ ಮತ್ತು ಮಾನವ ಹಕ್ಕುಗಳಷ್ಟೆ ಸಹಜವಾಗಿ ದೊರಕುತ್ತವೆ. ತಾರತಮ್ಯ ವಿರೋಧಿ ನ್ಯಾಯಶಾಸ್ತ್ರವು ಸಮಾನತೆಯ ತಳಪಾಯದ ಮೇಲೆ ನಿಂತಿದೆ ಎಂಬುದನ್ನು ನಾವು ಮರೆಯಬಾರದು. ವ್ಯಕ್ತಿಗತ ಆಯ್ಕೆಯನ್ನು ಗೌರವಿಸುವುದು ಕಾನೂನುಬದ್ಧ ಸ್ವಾತಂತ್ರ್ಯದ ಮೂಲಸತ್ವವಾಗಿದ್ದು, ಹಾಗಾಗಿ, 377ನೇ ಪರಿಚ್ಛೇದ ಐ.ಪಿ.ಸಿ.ಯಡಿಯಲ್ಲಿ ಶಾರೀರಿಕ ಸಂಭೋಗವನ್ನು ಅಪರಾಧೀಕರಿಸುವುದು ಅತಾರ್ಕಿಕವೂ, ಅಸಮರ್ಥನೀಯವೂ, ಸ್ಪಷ್ಟವಾಗಿ ನಿರಂಕುಶವೂ ಆಗಿದೆ. ಉದಾರವಾದಿ ಸಂವಿಧಾನದಡಿಯಲ್ಲಿ ಆಯ್ಕೆಯ ಸಿದ್ಧಾಂತವು ಎಂದಿಗೂ ಸಂಪೂರ್ಣವಲ್ಲ ಮತ್ತು ಕಾನೂನು ಮತ್ತೊಬ್ಬರಿಗೆ ಹಾನಿ ಅಥವಾ ನೋವಾಗುವುದನ್ನು ತಪ್ಪಿಸುವ ಸಲುವಾಗಿ ವ್ಯಕ್ತಿಯೊಬ್ಬರ ಆಯ್ಕೆಯನ್ನು ನಿಬಂಧಿಸುತ್ತದೆ ಎಂಬುದು ಸತ್ಯ. ಆದಾಗ್ಯೂ, ಖಾಸಗೀ ಸಂಬಂಧಗಳನ್ನು ಹೊಂದುವುದು, ವಿಶೇಷವಾಗಿ ಒಪ್ಪಿಗೆಯಿರುವ ವಯಸ್ಕರ ನಡುವಿನ ಸಂಬಂಧಗಳು, ಸಂಪೂರ್ಣ ವೈಯಕ್ತಿಕ ಆಯ್ಕೆಯ ವಿಚಾರ. ಇದು ಖಾಸಗೀ ರಕ್ಷಣಾತ್ಮಕ ವಲಯದ ಹಾಗೂ ವೈಯಕ್ತಿಕ ಆಯ್ಕೆ ಮತ್ತು ಸ್ವಾಯುತ್ತತೆಯ ಪರಿಧಿಯೊಳಗೆ ಸೇರಿರುವ ಪ್ರಮುಖ ವೈಯಕ್ತಿಕ ಹಕ್ಕು. ಸಾಂವಿಧಾನಿಕ ರಚನೆಯಲ್ಲಿ ಅಂತಹ ಪ್ರಗತಿಶೀಲ ಒಲವಿನ ಬೇರುಗಳಿವೆ ಮತ್ತು ಅದು ಮಾನವ ಸ್ವಭಾವದ ಅವಿಭಾಜ್ಯ ಅಂಗ.

241. ಪ್ರಸ್ತುತ ಸನ್ನಿವೇಶದಲ್ಲಿ 377ನೇ ಪರಿಚ್ಛೇದವು ತನ್ನ ಈಗಿನ ಸ್ವರೂಪದಲ್ಲಿ, ಸಂವಿಧಾನದ 19ನೇ ಕಲಮಿನ ಪರೀಕ್ಷೆಯನ್ನು ತಡೆದುಕೊಳ್ಳುತ್ತದೆಯೇ, ಎಂದರೆ ಅದು ಅತಾರ್ಕಿಕವಾಗಿದೆಯೇ ಮತ್ತು ಆ ಮೂಲಕ 19ನೇ ಕಲಮನ್ನು ಉಲ್ಲಂಘಿಸುತ್ತದೆಯೇ ಎಂಬುದನ್ನು ಪರಿಶೀಲಿಸಬೇಕಿದೆ. **ಚಿಂತಾಮನ್ ರಾವ್ v. ಮಧ್ಯಪ್ರದೇಶ ರಾಜ್ಯ**[89] ಸರ್ಕಾರ ಪ್ರಕರಣದಲ್ಲಿ, ಈ ನ್ಯಾಯಾಲಯವು, 19ನೇ ಕಲಮಿನಡಿಯಲ್ಲಿನ ಸಮಂಜಸ ನಿರ್ಬಂಧಗಳ ವಿಚಾರದಲ್ಲಿ ಹೀಗೆಂದು ಅಭಿಪ್ರಾಯಪಟ್ಟಿತು:-

> ಸಮಾಂಜಸ ನಿರ್ಬಂಧ ಎಂಬ ಪದಪುಂಜವು, ವ್ಯಕ್ತಿಯೊಬ್ಬರು ತಮ್ಮ ಹಕ್ಕನ್ನು ಅನುಭವಿಸುವುದಕ್ಕೆ ಒಡ್ಡುವ

[89] AIR 1951 SC 118

ತಡೆಯೂ, ಸಾರ್ವಜನಿಕರ ಹಿತಾಸಕ್ತಿಗೆ ಎಷ್ಟು ಅಗತ್ಯವೋ ಅದನ್ನು ಮೀರಿ ನಿರಂಕುಶ ಅಥವಾ ಅತಿರೇಕ ಸ್ವರೂಪದ್ದಾಗಿರಬಾರದು ಎಂಬುದನ್ನು ಸೂಚಿಸುತ್ತದೆ.. ಸಮಂಜಸ ಎಂಬ ಪದವು ಬುದ್ಧಿಶಾಲಿ ಕಾಳಜಿ ಮತ್ತು ವಿವೇಚನೆ, ಎಂದರೇ ತತ್ವಗಳ ಮಾರ್ಗದರ್ಶನದಲ್ಲಿ ಕಂಡುಕೊಂಡ ದಾರಿಯನ್ನು ಆಯ್ಕೆಮಾಡಿಕೊಳ್ಳುವುದು ಎಂಬ ಅರ್ಥ ನೀಡುತ್ತದೆ. ಆ ಹಕ್ಕನ್ನು ನಿರಂಕುಶವಾಗಿ ಅಥವಾ ಅತಿಯಾಗಿ ಅತಿಕ್ರಮಿಸುವ ಶಾಸನವು ಸಮಂಜಸತೇಯ ಗುಣವನ್ನು ಹೊಂದಿದೆ ಎಂದು ಹೇಳಲು ಸಾಧ್ಯವಿಲ್ಲ ಮತ್ತು ಸದರಿ ಶಾಸನವು 19(1)ನೇ(ಜಿ) ಕಲಮಿನಲ್ಲಿ ಖಾತ್ರಿಪಡಿಸಲಾಗಿರುವ ಸ್ವಾತಂತ್ರ್ಯ ಮತ್ತು 19ನೇ ಕಲಮಿನ (6) ನೇ ಷರತ್ತು ಅನುಮತಿಸುವ ಸಾಮಾಜಿಕ ನಿಯಂತ್ರಣಗಳನ್ನು ಸರಿತೂಗಿಸದ ಹೊರತು, ಅದು ಆ ಗುಣವನ್ನು ಹೊಂದಿಲ್ಲವೆಂದೇ ಪರಿಗಣಿಸಬೇಕು.

242. **ಎಸ್ ರಂಗರಾಜನ್ v. ಪಿ. ಜಗಜಿವನರಾಮ್ ಮಟ್ಟಿ ಇತರರು**[90] ಪ್ರಕರಣದಲ್ಲಿ ನ್ಯಾಯಾಯಲವು, ಬೇರೊಂದು ಸನ್ನಿವೇಶದಲ್ಲಿ ಹೀಗೆಂದು ಗಮನಿಸಿತು.

ಸ್ವಾತಂತ್ರ್ಯವನ್ನು ನೀಡುವುದರಿಂದ ಉಂಟಾಗುವ ಸನ್ನಿವೇಶ ಆತಂಕಕಾರಿಯಾಗಿದ್ದು ಅದರಿಂದ ಸಮುದಾಯದ ಹಿತಾಸಕ್ತಿಗೆ ಕುತ್ತುಬರದ ಹೊರತು, ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕಬಾರದು ಎಂಬುದು

[90] (1989) 2 SCC 574

> ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕೊಡಮಾಡುವ ನಮ್ಮ ವಾಗ್ದಾನದ ಅಪೇಕ್ಷೆ. ಹಾಗೆ ನಿರೀಕ್ಷಿಸಲ್ಪಟ್ಟಿರುವ ಅಪಾಯವೂ ಕೈಗೆಟುಕದಂತೆಯೂ, ಅಸ್ಪಷ್ಟವೂ, ಅಸಾಧ್ಯವೂ ಆಗಿರಬಾರದು. ಅದು ತನ್ನ ಆಭಿವ್ಯಕ್ತಿಯೊಂದಿಗೆ ಹತ್ತಿರದ ಮತ್ತು ನೇರವಾದ ಸಂಬಂಧ ಹೊಂದಿರಬೇಕು

243. **ಎಸ್. ಖುಶ್ಬೂ** (ಮೇಲ್ಕಂಡ) ಪ್ರಕರಣದಲ್ಲಿ ಈ ನ್ಯಾಯಾಲಯವು, ಯಾವುದರ ಆಧಾರದ ಮೇಲೆ 19ನೇ ಕಲಮಿನಡಿಯಲ್ಲಿ ಖಾತ್ರಿಪಡಿಸಲ್ಪಿರುವ ಹಕ್ಕುಗಳ ಮೇಲೆ ಸಮಂಜಸ ನಿರ್ಬಂಧಗಳನ್ನು ಹೇರಬಹುದೋ, ಅಂತಹ ನೈತಿಕತೆ ಮತ್ತು ಸಭ್ಯತೆಗಳನ್ನು ಒಂದು ತಾತ್ವಿಕ ಮತ್ತು ತಾರ್ಕಿಕ ಮಿತಿಯಾಚೆಗೆ ವೈಭವೀಕರಿಸಬಾರದು ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಾ, ಸಾಂವಿಧಾನಿಕವಾದ ಮಾತು ಮತ್ತು ಅಭಿವ್ಯಕ್ತಿಗಳ ಸ್ವಾತಂತ್ರ್ಯಗಳು ಕೂಡ ಪರಿಪೂರ್ಣವಾಗಿಲ್ಲ ಮತ್ತು ಅವುಗಳನ್ನು, ಇತರ ವಿಚಾರಗಳ ಜೊತೆಗೆ, ನೈತಿಕತೆ ಮತ್ತು ಸಭ್ಯತೆಗಳ ಆಧಾರದಲ್ಲಿ ಸಮಂಜಸ ನಿರ್ಬಂಧಕ್ಕೆ ಒಳಪಡಿಸಬಹುದು, ಆದರೂ ಸಾಮಾಜಿಕ-ಸಾಂಸ್ಕೃತಿಕ ವಲಯದಲ್ಲಿ ಜನಪ್ರಿಯವಲ್ಲದ ದೃಷ್ಟಿಕೋನವನ್ನು ಸಹಿಸಿಕೊಳ್ಳಬೇಕು ಎಂದು ತೀರ್ಪಿತ್ತಿತು.

244. **ಶ್ರೇಯಾ ಸಿಂಘಾಲ್ v. ಭಾರತ ಸರ್ಕಾರ**[91] ಪ್ರಕರಣದಲ್ಲಿ ಈ ನ್ಯಾಯಾಲಯವು, ಮಾಹಿತಿ ತಂತ್ರಜ್ಞಾನ ಕಾಯ್ದೆ, 2000ನ್ನು ರದ್ದುಗೊಳಿಸುತ್ತಾ, ರಕ್ಷಿಸಲಾಗಿರುವ ಮಾತು ಮತ್ತು ಅಮಾಯಕವಾದ ಮಾತನ್ನು ಅಪರಾಧೀಕರಿಸುವ ಕಾರಣಕ್ಕೆ ನಿಬಂಧನೆಯೊಂದು ಅಸ್ಪಷ್ಟ ಮತ್ತು ಅತಿರೇಕ ಸ್ವರೂಪದ್ದೂ ಆಗಿರುವಾಗ ಅದು ಪ್ರತಿಕೂಲ ಪರಿಣಾಮಗಳನ್ನು ಉಂಟುಮಾಡುತ್ತದೆ ಮದ್ದು ಅದನ್ನು ರದ್ದುಗೊಳಿಸಬೇಕಾಗುತ್ತದೆ ಎಂದು ಗಮನಿಸಿತ್ತು. ನ್ಯಾಯಾಲಯದ ಅಭಿಪ್ರಾಯ ಹೀಗಿತ್ತು,

---

[91] (2015) 5 SCC 1

> ಹೀಗಾಗಿ ನಾವುಗಳು, ಈ ಪರಿಚ್ಛೇದ ತನ್ನ ತೆಕ್ಕೆಯೊಳಗೆ ರಕ್ಷಿಸಲ್ಪಟ್ಟೀರುವ ಮಾತು ಮತ್ತು ಅಮಾಯಕ ಸ್ವರೂಪದ ಮಾತನ್ನು ಸೆಳೆದುಕೊಳ್ಳುತ್ತದೆ ಮತ್ತು ವಾಕ್ಸ್ವಾತಂತ್ರ್ಯದ ಮೇಲೆ ಪರಿಕೂಲ ಪರಿಣಾಮವನ್ನು ಹೊಂದುವ ರೀತಿಯಲ್ಲೀ ಬಳಕೆಯಾಗುತ್ತದೆ ಎಂಬ ಕಾರಣಕ್ಕೆ ಸದರಿ ಪರಿಚ್ಛೇದ ಅಸಾಂವಿಧಾನಿಕವಾಗಿದೆ ಮತ್ತು ಹೀಗಾಗಿ ಅತಿರೇಕದ ನಡವಳಿಕೆಯ ಆಧಾರದಲ್ಲಿ ಅದನ್ನು ರದ್ದುಪಡಿಸಬೇಕು ಎಂದು ನಿರ್ಧರಿಸಿದ್ದೇವೆ.

245. ಈ ಸನ್ನಿವೇಶವನ್ನು ಅರ್ಥಮಾಡಿಕೊಳ್ಳುವ ಸಲುವಾಗಿ, ಅಯ್ಕೆಯನ್ನೂ ಒಳಗೊಂಡಂತೆ ಅಭಿವ್ಯಕ್ತಿಯ ಮೂಲಭೂತ ಹಕ್ಕನ್ನು ಕಡಿತಗೊಳಿಸಲು ಆಧಾರವಾಗಿ ಬಳಕೆಯಾಗುವ ಸಾವರ್ಜನಿಕ ಸುವ್ಯವಸ್ಥೆ, ಸಭ್ಯತೆ ಮತ್ತು ನೈತಿಕತೆಗಳನ್ನು, ಸಮಂಜಸವಾದ ನಿರ್ಬಂಧಗಳೆಂದು ಒಪ್ಪಿಕೊಳ್ಳಬಹುದೇ ಎಂಬುದನ್ನು ಪರಿಶೀಲಿಸಬೇಕು. 377ನೇ ಪರಿಚ್ಛೇದ ತನ್ನ ತೆಕ್ಕೆಯೊಳಗೆ ಎಲ್.ಜಿ.ಬಿ.ಟಿ. ಸಮುದಾಯವು ಸೇರಿದಂತೆ, ವಯಸ್ಕರ ನಡುವಿನ ಒಪ್ಪಿಗೆಯ ಕ್ರಿಯೆಗಳನ್ನಷ್ಟೆ ಅಲ್ಲದೆ, ಸಾರ್ವಜನಿಕ ಸುವ್ಯವಸ್ಥೆಯನ್ನು ಕದಡದ ಮತ್ತು ಸಾರ್ವಜನಿಕ ಸಭ್ಯತೆ ಅಥವಾ ನೈತಿಕತೆಗೆ ಹಾನಿಯನ್ನುಂಟುಮಾಡದ ಅಮಾಯಕವಾದ ಕೃತ್ಯಗಳನ್ನು ಸೆಳೆದುಕೊಳ್ಳುತ್ತದೆ ಎಂಬ ಪ್ರಜ್ಞಾಪೂರ್ವಕ ಅಭಿಪ್ರಾಯ ನಮ್ಮದಾಗಿದೆ. ಕಾನುನಿನ ಪ್ರಕಾರ - ಒಬ್ಬ ವ್ಯಕ್ತಿಯ ಮನೆಯೇ ಅವನ ಭದ್ರಕೋಟೆ. ಸರ್ ಎಡ್ವರ್ಡ್ ಕೂಕ್[92] ಹೇಳುತ್ತಾರೆ.

> ಪ್ರತಿಯೊಬ್ಬರ ಮನೆಯೂ ಅವರವರ ಪಾಲಿಗೆ ಅವರ ಅರಮನೆ ಅಥವಾ ಭದ್ರಕೋಟೆಯಿದ್ದಂತೆ, ಅಲ್ಲದೆ ಅದು ತಮಗೆ ಹಾನಿ ಮತ್ತು ಹಿಂಸೆಯ ವಿರುದ್ಧ ರಕ್ಷಣೆ ನೀಡುತ್ತದೆ ಎಂದು ಅವರು ನಂಬುತ್ತಾರೆ

[92] Semayne's Case, 77 Eng. Rep. 194, 195; 5 Co. Rep. 91, 195 (K.B. 1604)

246. ಅದಲ್ಲದೆ, ಎಲ್.ಜಿ.ಬಿ.ಟಿ. ಸಮುದಾಯದ ಸದಸ್ಯರು ತಮ್ಮ ಸಂಗಾತಿಗಳ ಮೇಲೆ ಒಲವನ್ನು ತೋರ್ಪಡಿಸುವುದು ಅಸಭ್ಯವಾಗಿರದಿದ್ದರೆ ಅಥವಾ ಅದರಿಂದ ಸಾರ್ವಜನಿಕ ಸುವ್ಯವಸ್ಥೆ ಕದಡುವ ಸಾಧ್ಯತೆಯಿಲ್ಲದಿದ್ದರೆ, ಅದನ್ನು ಬಹುಸಂಖ್ಯಾತರ ದೃಷ್ಟಿಕೋನದ ಮೂಲಕ ತಡೆಯೊಡ್ಡುವ ಹಾಗಿಲ್ಲ. 377ನೇ ಪರಿಚ್ಛೇದ ಐ.ಪಿ.ಸಿ.ಯು ಒಪ್ಪಿಗೆಯಿರುವ ವಾಯಸ್ಕರ ನಡುವೆ ಅವರ ಭದ್ರಕೋಟೆಯೊಳಗೆ ನಡೆಯುವ ಶಾರೀರಿಕ ಸಂಭೋಗವನ್ನು ಕ್ರಿಮಿನಲ್ ಅಪರಾಧವೆಂದು ಪರಿಗಣಿಸುವುದರಿಂದ ಅದು ಅಸಮಂಜಸ ನಿರ್ಬಂಧವನ್ನೊಡ್ಡುತ್ತದೆ ಮತ್ತು ಇಂತಹ ಅಪರಾಧೀಕರಣವು ಸ್ಪಷ್ಟವಾಗಿ ಮಿತಿಮೀರಿರುವುದು ಮತ್ತು ಆಸ್ಪಷ್ಟವಾಗಿರುವುದಷ್ಟೇ ಅಲ್ಲದೆ, ಅದು ವ್ಯಕ್ತಿಯ ಆಯ್ಕೆಯ ಸ್ವಾತಂತ್ರ್ಯದ ಮೇಲೆ ಕಂಗೆಡಿಸುವ ಪರಿಣಾಮವನ್ನು ಬೀರುತ್ತದೆ.

247. ಮೇಲ್ಕಂಡ ತೀರ್ಪುಗಳು ವಿಧಿಸಿರುವ ಸವಾಲಿನ ಹಿನ್ನೆಲೆಯಲ್ಲಿ, ಐ.ಪಿ.ಸಿ.ಯ 377ನೇ ಪರಿಚ್ಛೇದವು ಸಮಂಜಸತೇಯ ಮಾನದಂಡಗಳಿಗೆ ಅನುಗುಣವಾಗಿಲ್ಲ ಮತ್ತು, ಲೈಂಗಿಕ ಸಂಗಾತಿಯನ್ನು ಆರಿಸಿಕೊಳ್ಳುವ ಹಕ್ಕು ಸೇರಿದಂತೆ ಮುಕ್ತ ಅಭಿವ್ಯಕ್ತಿಯ ಮೂಲಭೂತ ಹಕ್ಕನ್ನು ಉಲ್ಲಂಘಿಸುತ್ತದೆ. ಐ.ಪಿ.ಸಿ.ಯ 377ನೇ ಪರಿಚ್ಛೇದವು, ಬಹುಸಂಖ್ಯಾತರ ಕೈಗೆ ಸಿಕ್ಕಿ ಎಲ್.ಜಿ.ಬಿ.ಟಿ ಸಮುದಾಯವನ್ನು ಬಹಿಷ್ಕರಿಸುವ, ಶೋಷಣೆಗೊಳಪಡಿಸುವ ಮತ್ತು ಕಿರುಕುಳಕ್ಕೊಳಪಡಿಸುವ ಅಸ್ತ್ರವಾಗಿ ಬಳಕೆಯಾಗುವುದರಿಂದ ಸಹ ಅದು ಅಸಮಂಜಸತೇಯ ಗುಣಲಕ್ಷಣಗಳನ್ನು ಪಡೆದುಕೊಳ್ಳುತ್ತದೆ. ಅದು ಎಲ್.ಜಿ.ಬಿ.ಟಿ. ಸಮುದಾಯದ ಸದಸ್ಯರ ಜೀವನವದ ಮೇಲೆ ಅಪರಾಧದ ಪರದೆಯನ್ನೆಳೆಯುತ್ತದೆ ಮತ್ತು ನಿರಂತರವಾದ ಭಯವೂ ಅವರ ಬದುಕಿನ ಸಂತೋಷವನ್ನು ಹಾಳುಗೆಡವುತ್ತದೆ. ಅವರುಗಳು ಸತತವಾಗಿ ಸಾಮಾಜಿಕ ಪೂರ್ವಾಗ್ರಹ, ಅವಮರ್ಯಾದೆಗಳನ್ನು ಎದುರಿಸುತ್ತಾರೆ ಮತ್ತು ತಮ್ಮ ನೈಸರ್ಗಿಕವಾದ ವ್ಯಕ್ತಿತ್ವದ ದೆಸೆಯಿಂದ ಅವಮಾನಕ್ಕೊಳಗಾಗುತ್ತಾರೆ. ಹೀಗಾಗಿ, ಸಾಂವಿಧಾನಿಕ ಮೌಲ್ಯಗಳೊಂದಿಗೆ ಹೊಂದಾಣಿಕೆಯಾಗದ ಪುರಾತನವಾದ ಕಾನುನೊಂದನ್ನು ಉಳಿಸಿಕೊಳ್ಳಲು ಒಪ್ಪಿಗೆನೀಡಲು ಸಾಧ್ಯವಿಲ್ಲ.

248. ದ್ವೇಷ ಮತ್ತು ಸಮಲೈಂಗಿಕವಿರೋಧೀ ನಡವಳಿಕೆಗಳು ಲಿಂಗ ಪರಿವರ್ತಿತರ ಘನತೆ, ವ್ಯಕ್ತಿತ್ವ ಮತ್ತು ಎಲ್ಲಕ್ಕಿಂತ ಮಿಗಿಲಾದ ಮಾನವ ಹಕ್ಕುಗಳನ್ನು ಕಸಿದುಕೊಂಡು ಅವರನ್ನು ಹಿಂಸೆಗೊಳಪಡಿಸುತ್ತವೆ. ಅಸ್ಮಿತೆ

ಮತ್ತು ಲೈಂಗಿಕ ನಿಲುವುಗಳನ್ನು ದಬ್ಬಾಳಿಕೆಯ ಮೂಲಕ ಹತ್ತಿಕ್ಕಲು ಆಗುವುದಿಲ್ಲ ಎಂಬುದನ್ನು ಅರಿಯುವುದು ಅತ್ಯಗತ್ಯ. ಸಾಂವಿಧಾನಿಕ ಮೌಲ್ಯಗಳ ತಾಯಿಬೇರಾಗಿರುವ ಸ್ವಾತಂತ್ರ್ಯವು ವ್ಯಕ್ತಿಗಳಿಗೆ ತಮ್ಮ ಅಸ್ಮಿತೆಯನ್ನು ವ್ಯಾಖಿನಿಸುವ ಮತ್ತು ವ್ಯಕ್ತಪಡಿಸುವ ಸಾಮರ್ಥ್ಯ ನೀಡುತ್ತದೆ ಹಾಗೂ ವೈಯಕ್ತಿಕ ಅಸ್ಮಿತೆಯನ್ನು ಒಪ್ಪಿಕೊಂಡು ಗೌರವಿಸಬೇಕಿದೆ.

249.ಲಿಂಗಪರಿವರ್ತಿತರನ್ನು ಅಪರಾಧೀಕರಿಸುವ 377ನೇ ಪರಿಚ್ಛೇದ ಐ.ಪಿ.ಸಿ.ಯ ಇರುವಿಕೆ ಈಗಾಗಲೇ ದಬ್ಬಾಳಿಕೆ ಮತ್ತು ತರತಮ್ಯಕ್ಕೊಳಗಾಗಿರುವ ಜನಗಳ ವರ್ಗದ ಮೇಲೆ ಕಳಂಕದ ಕರಿನೆರಳು ಬೀರುತ್ತದೆ. ಇಂತಹ ಕಳಂಕ, ದಬ್ಬಾಳಿಕೆ ಮತ್ತು ಪೂರ್ವಾಗ್ರಹಗಳನ್ನು ನಿರ್ಮೂಲನೆ ಮಾಡಬೇಕು ಮತ್ತು ಲಿಂಗ ಪರಿವರ್ತಿತರು ಒಬ್ಬಂಟಿತನ ಮತ್ತು ಭಯಗಳೊಂದಿಗೆ ಅವಿತು ಬದುಕುವ ತಮ್ಮ ಇಕ್ಕಟ್ಟಾದ ಉಸಿರುಗಟ್ಟಿಸುವ ವಾತಾವರಣದಿಂದ, ಕತ್ತಲಿನಿಂದ ಮುಕ್ತವಾದ ಬಾಳ್ವೆಯ ಸಮೃದ್ಧಿಯನ್ನು ಅನಂದಿಸುವುದತ್ತ ಮತ್ತು ಬದುಕಿನ ಎಲ್ಲ ರಂಗಗಳಲ್ಲಿಯೂ ಸಮಾನವಾದ ಅವಕಾಶಗಳನ್ನು ಪಡೆಯುವತ್ತ ಮುನ್ನಡೆಯಬೇಕು. ಪ್ರತಿಯೊಬ್ಬ ವ್ಯಕ್ತಿಯನ್ನು ಸಮಾಜದ ಮುಖ್ಯವಾಹಿನಿಯಲ್ಲಿ ಪಾಲ್ಗೊಳ್ಳುವಂತೆ ಬಲಪಡಿಸಿದಾಗ ಮತ್ತು ಎಲ್ಲ ರಂಗಗಳಲ್ಲಿ ಸಮಾನತೆ, ಬದುಕಿನ ಎಲ್ಲ ಕ್ಷೇತ್ರಗಳಲ್ಲಿ ಸಮಾನವಾದ ಅವಕಾಶಗಳು, ಸಮನಾದ ಸ್ವಾತಂತ್ರ್ಯಗಳು ಮತ್ತು ಹಕ್ಕುಗಳು, ಹಾಗೂ ಎಲ್ಲದಕ್ಕಿಂತ ಹೆಚ್ಚಾಗಿ ಸಮತಾವಾದಿ ನ್ಯಾಯವನ್ನು ಸಾಧಿಸುವೆಡೆಗಿನ ಪ್ರಯಾಣದದಲ್ಲಿ ಪ್ರತಿಯೊಬ್ಬರೂ ಭಾಗವಹಿಸುವುದು ಸಾಧ್ಯವಾದಾಗ  ಮಾತ್ರ ನಮ್ಮ ಸಹೃದಯ ಸಂವಿಧಾನದಲ್ಲಿ ಅಡಕವಾಗಿರುವ ಆದರ್ಶ ಮತ್ತು ಉದ್ದೇಶಗಳನ್ನು ಏಡೇರಿಸಬಹುದು. ಮುಖ್ಯವಾಹಿನಿಯೊಳಗೆ ಎಲ್ಲರನ್ನೂ ಒಳಗೊಂಡು ಯಾರೂ ಹೊರಗುಳಿಯದಂತಾದಾಗ ಮೇಲಿನದನ್ನು ಸಾಧಿಸಬಹುದು.

250.ವಿಭಿನ್ನ ಬಣ್ಣಗಳು ಮತ್ತು ಛಾಯೆಗಳು ಒಟ್ಟಾದಾಗ ಮಾತ್ರ ಮಾನವೀಯತೆಯ ವರ್ಣಚಿತ್ರ ಸುಂದರವಾಗುತ್ತದೆ ಎಂಬುದನ್ನ ನಾವು ಅರಿತುಕೊಳ್ಳಬೇಕು ಮತ್ತು ಈ ಸೌಂದರ್ಯವೇ ಮಾನವೀಯತೆಯ ಮೂಲತತ್ವವಾಗಿದೆ. ಪರಸ್ಪರರ ಹಕ್ಕುಗಳ ಬಗೆಗೆ ಸಹಿಷ್ಣುತೆ ಮತ್ತು ಗೌರವನು ಪೋಷಿಸುವ ಮೂಲಕ ಮುಕ್ತ ನಾಗರಿಕರ ಒಗ್ಗಟ್ಟಿನ ಘಟಕದ ರೂಪದಲ್ಲಿರುವ ನಮ್ಮ ಐಕ್ಯತೆಯನ್ನು ಉಳಿಸಿಕೊಳ್ಳುವ ಸಲುವಾಗಿ ನಾವು ನಮ್ಮ ವೈವಿಧ್ಯತೆಯ ಶಕ್ತಿಯನ್ನು ಗೌರವಿಸಬೇಕು ಮತ್ತು ಆ ಮೂಲಕ ಮಾನವೀಯತೆಯ ಸರ್ವೋಚ್ಚ

ಸಂಬಂಧ ಬೆಸೆದು ಸಾಮರಸ್ಯ ಮತ್ತು ಶಾಂತಿಪೂರ್ಣ ಸಹಬಾಳ್ವೆ ನಡೆಸುವತ್ತ ಮನ್ನಡೆಯಬೇಕಿದೆ. ವ್ಯಕ್ತಿಗಳ ವಿಭಿನ್ನ ಅಸ್ಮಿತೆಯನ್ನು ಒಪ್ಪಿಕೊಳ್ಳುವುದು ಮತ್ತು ಅವರನ್ನು ಅವರೇನಲ್ಲವೋ ಅದರಂತಾಗಲು ಒತ್ತಾಯ ಪಡಿಸದೆ, ಅವರಿದ್ದಂತೆಯೇ ಸ್ವೀಕರಿಸುವುದು ಸಾಧ್ಯವಾಗ ಬೇಕಿದ್ದರೆ ಮನೋಧರ್ಮ ಮತ್ತು ಮನಸಿಕತೆಗಳು ಬದಲಾಗಬೇಕು. ಎಲ್ಲ ಮನುಷ್ಯರಿಗೂ, ಒಂದು ಗುಂಪಿನ ಜನರ ತಾತ್ವಿಕ ಪರಿಕಲ್ಪನೆಗಳಿಗೆನುಗುಣವಾಗಿ ಬದಲಾಗದೆ ಅಥವಾ ತಮ್ಮನ್ನು ಒಗ್ಗಿಸಿಕೊಳ್ಳದೆ, ತಾವು ತಾವಾಗಿಯೇ ಇರಲು ಸಮಾನವಾದ ಹಕ್ಕಿದೆ. ಸಾಮಾಜಿಕ ಪಕ್ಷಪಾತವನ್ನು ಬದಲಾಯಿಸುವ ಮತ್ತು ಕಲೆಯನ್ನು ತೆಗೆದುಹಾಕುವ ಸಲುವಾಗಿ, ನಮ್ಮ ಕಣ್ಣಿಗೆ ಬೀಳುವ ಲಿಂಗಪರಿವರ್ತೀರಾ ಮೇಲಿನ ಅತಿಸಣ್ಣ ತಾರತಮ್ಯದ ವಿರುಧ್ಧವೂ "ಎದ್ದುನಿಂತು ಮಾತನಾಡುವುದು" ನಮ್ಮೆಲ್ಲರ ಆದ್ಯ ಕರ್ತವ್ಯ . ನಾವಿನ್ನು ಕತ್ತಲಿನಿಂದ ಬೆಳಕಿನೆಡೆಗೆ, ದ್ವೇಷದಿಂದ ತಾಳ್ಮೆಯೆಡೆಗೆ, ಮತ್ತು ಬರಿಯ ಇರುವಿಕೆಯ ಶರದೃತುವಿನಿಂದ, ಬದುಕಿನ ವಸಂತಕಾಲದೆಡೆಗೆ - ಹೊಸ ಭಾರತದ ಓಲೆಕಾರರಗಿ - ಎಲ್ಲರನ್ನೂ ಒಳಗೊಳ್ಳುವ ಸಮಾಜದೆಡೆಗೆ ಸಾಗೋಣ.

251. ಇಂತಹ ಗಂಭೀರ ನಿರಾಶೆ, ನಿರಾಕರಣೆ, ಪ್ರತಿಕೂಲತೆ, ದುಃಖ, ಅನ್ಯಾಯ ಮತ್ತು ಹತಾಶೆಯ ಸಮಯದಲ್ಲಿ ಲಿಂಗ ಪರಿವರ್ತಿತರು ತಮ್ಮ ಅಸಾಧಾರಣ ಚೈತನ್ಯ, ಸ್ಪೂರ್ತಿ, ಬದ್ಧತೆ, ಬಲವಾದ ನಿರ್ಣಯ ಮತ್ತು ಅನಂತ ಭರವಸೆ ಮತ್ತು ನಂಬಿಕೆಯೊಂದಿಗೆ ಧೃಡವಾಗಿ ನಿಂತಿದ್ದಾರೆ. ಅವರು ಪ್ರತಿ ಮೋಡದಲ್ಲೂ ಮಳೆಬಿಲ್ಲನ್ನು ನೋಡುವಂತಾಗಿ ಅದು ಅವರನ್ನು ಪದಗಳಲ್ಲಿ ವಿವರಿಸಲಾಗದ ಬಂಧನದಿಂದ ಮುಕ್ತಿ ಮತ್ತು ವಿಮೋಚನೆಯನ್ನು ಹೊತ್ತು ತರುವ ಭವಿಷ್ಯದ ಹಾದಿಯತ್ತ ಮುನ್ನಡೆಸಿದೆ- ಎಲ್ಲರ ಘನತೆ ಮತ್ತು ಮಾನವೀಯತೆಯ ಮೂಲಭೂತ ಗುರುತಿಸುವಿಕೆಯೆಡೆಗೆ ಮತ್ತು ತೋರಿಕೆಯಿಲ್ಲದ, ಇಬ್ಬಂದಿತನ ಮತ್ತು ಅಸ್ಥಿರತೆಯಿಲ್ಲದೇ ಸಾಗಿಸುವ ಬದುಕಿನೆಡೆಗೆ. ಇದು ಅವರುಗಳ "ಸ್ವಾತಂತ್ರ್ಯದೆಡೆಗಿನ ನಡಿಗೆ" ಮತ್ತು ಸಂವಿಧಾನಿಕ ನೀತಿಗಳಾದ ಘನತೆ, ಸಮಾನತೆ ಮತ್ತು ಸ್ವಾತಂತ್ರ್ಯದೆಡೆಗಿನ ಪ್ರಯಾಣ ಮತ್ತು ಈ ಸ್ವಾತಂತ್ರ್ಯವು ನೈಜ ಅರ್ಥದಲ್ಲಿ ಈಡೇರಬೇಕಿದ್ದಲ್ಲಿ, ನಮ್ಮಲ್ಲಿ ಪ್ರತಿಯೊಬ್ಬರೂ, ಎಲ್.ಜಿ.ಬಿ.ಟಿ ಸಮುದಾಯವು, ಹಕ್ಕುಗಳ ಬೃಹತ್ ಸನ್ನದಾಗಿರುವ ನಮ್ಮ ಸಂವಿಧಾನದಡಿಯಲ್ಲಿ ಈ ದೇಶದ ಇತರರ ನಾಗರೀಕರಸಃಟೇ ಸಮಾನವಾದ ಹಕ್ಕುಗಳನ್ನು ಹೊಂದಿದ್ದಾರೆ ಎಂಬುದನ್ನು ಅರಿಯಬೇಕಿದೆ

252. ಹೀಗೆ ವಿಶ್ಲೇಷಿಸಿದಾಗ, ಇಬ್ಬರು ವಯಸ್ಕರ ನಡುವಿನ ಯಾವುದೇ ಬಗೆಯ ಒಪ್ಪಿಗೆಯ ಲೈಂಗಿಕ ಚಟುವಟಿಕೆಯನ್ನು, ಆದನ್‌ನು ಸಮಲೈಂಗಿಕ ಪುರುಷರು (ಪುರುಷ ಮತ್ತೊಬ್ಬ ಪುರುಷನೊಂದಿಗೆ), ಭಿನ್ನಲಿಂಗಾಸಕ್ತರು (ಪುರುಷ ಮತ್ತೊಬ್ಬ ಮಹಿಳೆಯೊಂದಿಗೆ) ಮತ್ತು ಸಮಲೈಂಗಿಕ ಸ್ತ್ರೀಯರು (ಮಹಿಳೆ ಮತ್ತು ಮಹಿಳೆ), ಯಾರೇ ಮಾಡಿದ್ದರೂ, ದಂಡಿಸುವ, ಐ.ಪಿ.ಸಿ.ಯ 377ನೇ ಪರಿಚ್ಛೇದವನ್ನು, ಸಾಂವಿಧಾನಿಕವೆಂದು ಪರಿಗಣಿಸಲು ಸಾಧ್ಯವಿಲ್ಲ. ಹೀಗಾದರೂ, ಯಾರೇ ಪುರುಷ ಮತ್ತು ಮಹಿಳೆಯು ಒಂದು ಪ್ರಾಣಿಯೊಂದಿಗೆ ಯಾವುದೇ ರೀತಿಯ ಲೈಂಗಿಕ ಚಟುವಟಿಕೆ ತೊಡಗುವ ವಿಚಾರದಲ್ಲಿ, ಐ.ಪಿ.ಸಿ.ಯ 377ನೇ ಪರಿಚ್ಛೇದದ ಆ ಭಾಗವು ಸಂವಿಧಾನಾತ್ಮಕವಾಗುಳಿಯುತ್ತದೆ ಮತ್ತು ಸದರಿ ಕೃತ್ಯವು ದಂಡನೀಯ ಅಪರಾಧವಾಗಿ ಉಳಿಯುತ್ತದೆ. ಐ.ಪಿ.ಸಿ.ಯ 377ನೇ ಪರಿಚ್ಛೇದದಡಿಯಲ್ಲಿ ವಿವರಿಸಲ್ಪಟ್ಟಿರುವ ವ್ಯಕಿಗಳ ನಡುವಿನ ಯಾವುದೇ ಬಗೆಯ ಕೃತ್ಯದಲ್ಲಿ ಯಾರೇ ಒಬ್ಬರ ಒಪ್ಪಿಗೆಯಿಲ್ಲದಿದ್ದಾರೆ, ಅಂತಹ ಕೃತ್ಯಕ್ಕೆ ಸದರಿ ಪರಿಚ್ಛೇದದಡಿಯಲ್ಲಿ ದಂಡನೆ ನೀಡಲಾಗುತ್ತದೆ.

## Q. ತೀರ್ಮಾನಗಳು

253. ಮೇಲ್ಕಂಡ ವಿಶ್ಲೇಷಣೆಯ ದೃಷ್ಟಿಯಿಂದ, ನಾವು ನಮ್ಮ ತೀರ್ಮಾನಗಳನ್ನು ಈ ಕೆಳಗಿನ ಸರಣಿಯಲ್ಲಿ ದಾಖಲಿಸುತ್ತೇವೆ:

i. ಅಸ್ಮಿತೆಯ ಮಹತ್ವವನ್ನು ಸ್ಪಷ್ಟವಾಗಿ ತಿಳಿಸಲ್ಪಟ್ಟಿರುವ **ನಾಲ್ಸಾ** ಪ್ರಕರಣದ ತೀರ್ಪಿನಲ್ಲಿ, ಮಾನವ ಹಕ್ಕುಗಳನ್ನು ಸಂವಿಧಾನ ಖಾತರಿಪಡಿಸುವ ಬದುಕಿನ ಹಕ್ಕು ಮತ್ತು ಘನತೆಯ ಸ್ವಾತಂತ್ರ್ಯದ ಹಕ್ಕುಗಳೊಂದಿಗೆ ಬಹಳ ಸೂಕ್ತವಾಗಿ ಜೋಡಿಸಲಾಯಿತು. ಅದೇ ಸ್ಫೂರ್ತಿಯಿಂದ, ಸಾಂವಿಧಾನಿಕ ಕೊಡುಗೆಯಾಗಿರುವ ಅಸ್ಮಿತೆಯ ಪರಿಕಲ್ಪನೆಯನ್ನು ವ್ಯಕ್ತಿಯೊಬ್ಬರ ಒಬ್ಬರ ನಿಲುವಿಗಷ್ಟೇ ಸೀಮಿತಗಳಿಸಲು ಸಾಧ್ಯವಿಲ್ಲ, ಏಕೆಂದರೆ ಅದು ವೈಯಕ್ತಿಕ ಆಯ್ಕೆಯನ್ನು ದೂರವಿರಿಸುತ್ತದೆ ಎಂಬುದನ್ನು ನಾವು ಗುರುತಿಸಬೇಕು. ಅಸ್ಮಿತೆಯ ಪರಿಕಲ್ಪನೆಯ ಮೂಲದಲ್ಲಿ ಅಡವಾಗಿರುವುದು ಸ್ವಯಂ-ನಿರ್ಣಯ, ಅವಕಾಶಗಳ ಕಲ್ಪಿಸಿಕೊಳ್ಳುವಿಕೆಯ ಹಿನ್ನೆಲೆಯಲ್ಲಿ ತಮ್ಮ ಸ್ವಂತ ಸಾಮರ್ಥ್ಯದ ಅರಿವು ಮತ್ತು ಹೊರಗಿನ ಅಭಿಪ್ರಾಯಗಳನ್ನು, ಸಾಂವಿಧಾನಿಕ ಮಾನದಂಡಗಳು ಮತ್ತು ಮೌಲ್ಯಗಳು ಅಥವಾ

ತತ್ವಗಳಿಗನುಗುಣವಾಗಿರುವ, ಎಂದರೆ ಒಂದೇ ಮಾತಿನಲ್ಲಿ, "ಸಾಂವಿಧಾನಿಕವಾಗಿ ಒಪ್ಪಿತವಾಗಿರುವ" ಸ್ಪಷ್ಟವಾದ ಆತ್ಮಸಾಕ್ಷಿಯೊಂದಿಗೆ ತಿರಸ್ಕರಿಸುವುದು.

ii. ಸುರೇಶ್ ಕೌಶಲ್ (ಮೇಲಿನ) ಪ್ರಕರಣದಲ್ಲಿ, ಈ ನ್ಯಾಯಾಲಯವು ನಾಜ಼್ ಫೌಂಡೇಶನ್ (ಮೇಲಿನ) ಪ್ರಕರಣದಲ್ಲಿ ದೆಹಲಿ ಉಚ್ಚ ನ್ಯಾಯಾಲಯ ನೀಡಿದ ತೀರ್ಪನ್ನು ಅನೂರ್ಜಿತಗೊಳಿಸಿತು ಮತ್ತು ಆ ಮೂಲಕ ಐ.ಪಿ.ಸಿ.ಯ 377ನೇ ಪರಿಚ್ಛೇದದ ಸಾಂವಿಧಾನಿಕತೆಯನ್ನು ಎತ್ತಿಹಿಡಿಯಿತು ಮತ್ತು ಎಲ್.ಜಿ.ಬಿ.ಟಿ ಸಮುದಾಯವು ಒಟ್ಟು ಜನಸಂಖ್ಯೆಯ ಕೇವಲ ಅತಿ ಸಣ್ಣ ಪ್ರಮಾಣದ ಭಾಗವನ್ನು ಒಳಗೊಂಡಿದೆ, ಅಲ್ಲದೆ ಮತ್ತು ಸದರಿ ವಿಭಾಗವನ್ನು ದುರ್ಬಳಕೆಯಾಗುತ್ತದೆ ಎಂಬ ಅಂಶವು ಸದರಿ ಪರಿಚ್ಛೇದದ ತಪ್ಪುಗಳ ಪ್ರತಿಫಲನವಲ್ಲ ಎಂದು ಹೇಳಿತು. ಇಂತಹ ದೃಷ್ಟಿಕೋನವು ಸಾಂವಿಧಾನಿಕವಾಗಿ ಒಪ್ಪಿತವಾದುದಲ್ಲ.

iii. ನಮ್ಮ ಸಂವಿಧಾನವು, ಸಮಾಜದ ಬದಲಾಗುತ್ತಿರುವ ಅಗತ್ಯಗಳು ಮತ್ತು ಬೇಡಿಕೆಗಳಿಗೆ ತಕ್ಕಂತೆ ವಿಸ್ತರಣೆಗೊಳ್ಳುವ ಸಾಮರ್ಥ್ಯವಿರುವ ಒಂದು ಜೀವಂತ ಮತ್ತು ಸಾವಯವ ದಾಖಲೆಯಾಗಿದೆ. ನ್ಯಾಯಾಲಯಗಳು ತಮ್ಮ ಅತ್ಯುನ್ನತ ನಿಷ್ಠೆಯು ಸಂವಿಧಾನ ಮತ್ತು ಅದರ ಸುವರ್ಣ ತತ್ವಗಳೆಡೆಗೆ ಇರಬೇಕು ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು ಮತ್ತು ಸಮಾಜದೊಳಗೆ ನುಸುಳಲು ಪ್ರಯತ್ನಿಸುವ ಅಸಮಾನತೆ ಮತ್ತು ಅನ್ಯಾಯವೆಂಬ ಪಿಶಾಚಿಗಳನ್ನು ಎದುರಿಸಲು ಪ್ರಗತಿಪರ ಮತ್ತು ಪ್ರಾಯೋಗಿಕ ವ್ಯಾಖ್ಯಾನದ ಶಸ್ತ್ರಾಸ್ತ್ರಗಳನ್ನು ಅವರು ಧರಿಸಬೇಕು. ಪ್ರಭಾವಿಸಲ್ಪಡುವ ಹಕ್ಕುಗಳು ಕಾಲಾಂತರದಿಂದ ತಮ್ಮ ಮೂಲಭೂತ ಹಕ್ಕುಗಳನು ಕಳೆದುಕೊಂಡಿರುವ ಅಲ್ಪಸಂಖ್ಯಾತರ ಗುಂಪಿಗೆ ಸಂಬಂಧಿಸಿದ್ದಾಗ ನ್ಯಾಯಾಲಯಗಳ ಪಾತ್ರ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆಯುತ್ತದೆ.

iv. ಸಮಾಜವನ್ನು ಕ್ರಮೇಣವಾಗಿ ಮತ್ತು ಎಲ್ಲರನ್ನೂ ಒಳಗೊಳ್ಳುವಂತೆ ಪರಿವರ್ತಿಸುವುದು ಸಾಂವಿಧಾನಿಕ ಪ್ರಜಾಪ್ರಭುತ್ವವನ್ನು ಹೊಂದುವ ಪ್ರಾಥಮಿಕ ಉದ್ದೇಶ. ನಮ್ಮ ಸಂವಿಧಾನದ ನಿಬಂಧನೆಗಳ ವ್ಯಾಖ್ಯಾನವು ಬರಿಯ ಅದರಲ್ಲಿನ ಪದಗಳ ಅಕ್ಷರಶಃ ಅರ್ಥಕ್ಕೆ ಸೀಮಿತವಾಗಿರಬಾರದು; ಬದಲಿಗೆ ಬದಲಾಗುತ್ತಿರುವ ಸಮಯದೊಂದಿಗೆ ತಾಳೆಯಾಗುವಂತಹ ಅವುಗಳ ಉದ್ದೇಶ ಮತ್ತು ಗುರಿಯನ್ನು ಪ್ರತಿಬಿಂಬಿಸುವ ಅರ್ಥಪೂರ್ಣವಾದ ವ್ಯಾಖ್ಯಾನ ನೀಡಬೇಕಾಗಿರುತ್ತದೆ, ಎಂಬ ಅರ್ಥದಲ್ಲಿ, ಅದನ್ನು ಪರಿವರ್ತಕವೆಂದು

ಗ್ರಹಿಸಲಾಗಿದೆ. ಪರಿವರ್ತಕ ಸಾಂವಿಧಾನಿಕತೆಯು ತನ್ನ ವಿಶಾಲ ವ್ಯಾಪ್ತಿಯೊಳಗೆ ಕೇವಲ ಹಕ್ಕುಗಳ ಗುರುತಿಸುವಿಕೆ ಮತ್ತು ವ್ಯಕ್ತಿಗಳ ಘನತೆಯನ್ನಷ್ಟೇ ಒಳಗೊಂಡಿರದೇ, ಪ್ರತಿ ವ್ಯಕ್ತಿಗೆ ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಅಭಿವೃದ್ಧಿಗೊಳ್ಳಲು ಸೂಕ್ತವಾದ ಅವಕಾಶಗಳನ್ನು ಒದಗಿಸಿಕೊಡುವ ವಾತಾವರಣವನ್ನು ಅಭಿವೃದ್ಧಿಪಡಿಸಿ ಅದನ್ನು ಪ್ರತಿಪಾದಿಸುತ್ತದೆ. ಯಾವುದೇ ಬಗೆಯ ತಾರತಮ್ಯ ಯಾವುದೇ ಪ್ರಜಾತಾಂತ್ರಿಕ ಸಮಾಜದ ಮೂಲಕ್ಕೆ ಕೊಡಲಿಪೆಟ್ಟು ನೀಡುತ್ತದೆ. ಪರಿವರ್ತಕ ಸಂವಿಧಾನಿಕತೆಯಲ್ಲಿ ಮಾರ್ಗದರ್ಶನದಲ್ಲಿ ಸಮಾಜವು ಯಾವುದೇ ರೀತಿಯ ತಾರತಮ್ಯದಲ್ಲಿ ತೊಡಗುವುದಕ್ಕೆ ತಡೆಬೀಳುತ್ತದೆ, ಇದರಿಂದಾಗಿ ರಾಷ್ಟ್ರವು ಸಮೃದ್ಧವಾದ ಭವಿಷ್ಯದೆಡೆಗೆ ಮುನ್ನಡೆಸಲ್ಪಡುತ್ತದೆ.

v. ಸಾಂವಿಧಾನಿಕ ನೈತಿಕತೆಯು ತನ್ನ ವ್ಯಾಪ್ತಿಯೋಳಗೆ ಅನೇಕ ಗುಣಗಳನ್ನು ಒಳಗೊಳ್ಳುತ್ತದೆ, ಅವುಗಳಲ್ಲಿ ಬಹುತ್ವದ ಮತ್ತು ಎಲ್ಲರನ್ನೂ ಒಳಗೊಳ್ಳುವ ಸಮಾಜದ ಪ್ರತಿಪಾದನೆ ಬಹುಮುಖ್ಯವಾದುದು. ಸಾಂವಿಧಾನಿಕ ನೈತಿಕತೆಯ ಪರಿಕಲ್ಪನೆಯು ನ್ಯಾಯಾಂಗವೂ ಸೇರಿದಂತೆ ಸರ್ಕಾರದ ಅಂಗಗಳಿಗೆ, ಸಮಾಜದ ವೈವಿಧ್ಯಮಯ ಸ್ವಭಾವವನ್ನು ಕಾಪಾಡಿಕೊಂಡು ಮತ್ತು ಜನಸಂಖ್ಯೆಯ ಸಣ್ಣ ಅಥವಾ ಅತಿಸಣ್ಣ ವಿಭಾಗಳ ಹಕ್ಕುಗಳನ್ನು ಕಸಿದುಕೊಳ್ಳುವ ಬಹುಸಂಖ್ಯಾತರ ಪ್ರಯತ್ನವನ್ನು ತಡೆಯುವಂತೆ ಆಗ್ರಹ ಪಡಿಸುತ್ತದೆ. ಸಾಂವಿಧಾನಿಕ ನೈತಿಕತೆಯನ್ನು ಸಮಾಜಿಕ ನೈತಿಕತೆಯ ಬಲಿಪೀಠದಲ್ಲಿ ಹುತಾತ್ಮಗೊಳಿಸಲು ಆಗುವುದಿಲ್ಲ ಮತ್ತು ಸಾಂವಿಧಾನಿಕ ನೈತಿಕತೆಯೊಂದಕ್ಕಷ್ಟೇ ಕಾನೂನಿನ ಆಳ್ವಿಕೆಯೊಳಗೆ ಪಸರಿಸುವ ಅವಕಾಶವಿರುವುದು. ಇದು ಕೇವಲ ರೂಢಿಗತ ನೈತಿಕತೆಯಾಗಿದ್ದು,. ಸಮಾಜಿಕ ನೈತಿಕತೆಯ ಮುಸುಕನ್ನು ಒಬ್ಬನೇ ಒಬ್ಬ ವ್ಯಕ್ತಿಯ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸಲು ಬಳಸಬಾರದು, ಏಕೆಂದರೆ, ಸಾಂವಿಧಾನಿಕ ನೈತಿಕತೆಯ ಅಡಿಪಾಯವು ಸಮಾಜದಲ್ಲಿ ಪಸರಿಸಿರುವ ವೈವಿಧ್ಯತೆಯು ಗುರುತಿಸುವಿಕೆಯ ಮೇಲೆ ನಿಂತಿದೆ.

vi. ಘನತೆಯೊಂದಿಗೆ ಬದುಕುವ ಹಕ್ಕನ್ನು ಅಂತಾರಾಷ್ಟ್ರೀಯ ವಲಯದಲ್ಲಿ ಮತ್ತು ಈ ನ್ಯಾಯಾಲಯದ ಹಿಂದಿನ ನಿರ್ಧಾರಗಳಲ್ಲಿ, ಮಾನವಾಧಿಕಾರವೆಂದು ಗುರುತಿಸಲಾಗಿದೆ ಮತ್ತು ಆದ್ದರಿಂದ, ಸಾಂವಿಧಾನಿಕ ನ್ಯಾಯಾಲಯಗಳು, ಪ್ರತಿ ವ್ಯಕ್ತಿಯ ಘನತೆಯನ್ನು ಕಾಪಡಲು ಶ್ರಮಿಸಬೇಕು, ಏಕೆಂದರೆ, ಘನತೆಯ ಹಕ್ಕಿಲ್ಲದೆ, ಇತರ ಯಾವುದೇ ಹಕ್ಕು ಅರ್ಥಹೀನವಾಗಿಬಿಡುತ್ತದೆ. ಘನತೆ ಎನ್ನುವುದು, ಅವನು/ಅವಳು, ತಮ್ಮ

ವ್ಯಕ್ತಿತ್ವದ ಮುಖ್ಯ ಅಂಶವೆಂದು ಪರಿಗಣಿಸುವ ಪ್ರತಿಯೊಂದು ವಿಚಾರದಲ್ಲೂ - ಅದು ಒಂದು ನಿಲುವಾಗಿರಬಹುದು ಅಥವಾ ಆಯ್ಕೆಯ ಐಚ್ಛಿಕ ಅಭಿವ್ಯಕ್ತಿಯಾಗಿರಬಹುದು- ಮತ್ತೊಬ್ಬರಿಂದ ಗೌರವವನ್ನು ಮರಳಿ ಬಯಸುವ ಪ್ರತಿಯೊಬ್ಬ ವ್ಯಕ್ತಿಯ ಅವಿಭಾಜ್ಯ ಅಂಶವಾಗಿದೆ. ಸಂವಿಧಾನವು ಪ್ರತಿಯೊಬ್ಬ ವ್ಯಕ್ತಿಯ ಹಕ್ಕನ್ನು ರಕ್ಷಿಸಿ ಮತ್ತು ಖಚಿತಪಡಿಸುವ ಬಹೂ ಮುಖ್ಯವಾದ ಜವಾಬ್ದಾರಿಯನ್ನು ನ್ಯಾಯಾಂಗದ ಮೇಲೆ ಹೊರಿಸಿದೆ, ಅದು ರಕ್ಷಿಸಬೇಕಾದ ಹಕ್ಕುಗಳಲ್ಲಿ, ವ್ಯಕ್ತಿಯೊಬ್ಬರು ಘನತೆಯಿಂದ ಬದುಕಲು ತಮ್ಮ ಮೂಲಭೂತ ಹಕ್ಕನ್ನು ಪೂರ್ತಿಯಾಗಿ ಅನುಭವಿಸಲು ಅನುವು ಮಾಡಿಕೊಡುವ ಸಲುವಾಗಿ, ಯಾವುದೇ ಅಡೆತಡೆಗಳಿಲ್ಲದೆ ವ್ಯಕ್ತಪಡಿಸುವ ಮತ್ತು ಆಯ್ಕೆಮಾಡುವ ಹಕ್ಕನ್ನು ಒಳಗೊಂಡಿವೆ.

vii. ಲೈಂಗಿಕ ದೃಷ್ಟಿಕೋನವು, ವ್ಯಕ್ತಿಯೊಳಗೆ ನೈಸರ್ಗಿಕವಾಗಿ ಅಂತರ್ಗತವಾಗಿರುವ ಅನೇಕ ಜೈವಿಕ ವಿದ್ಯಮಾನಗಳಲ್ಲಿ ಒಂದಾಗಿದೆ ಮತ್ತು ಆದ ನರವೈಜ್ಞಾನಿಕ ಮತ್ತು ಜೈವಿಕ ಅಂಶಗಳಿಂದ ನಿಯಂತ್ರಿಸಲ್ಪಡುತ್ತದೆ. ಅವನು/ಅವಳು ಯಾರೆಡೆಗೆ ಆಕರ್ಷಿತರಾಗುತ್ತಾರೆ ಎಂಬುದರ ಮೇಲೆ ವ್ಯಕ್ತಿಗಳಿಗಿರುವ ನಿಯಂತ್ರಣವನ್ನು ಬಹಳ ಕಡಿಮೆ ಅಥವಾ ನಿಯಂತ್ರಣವೇ ಇರುವುದಿಲ್ಲ ಎಂಬಾ ಸಿದ್ಧಾಂತವನ್ನು ಲೈಂಗಿಕತೆಯ ವಿಜ್ಞಾನ ಮಂಡಿಸುತ್ತದೆ. ಒಬ್ಬರ ಲೈಂಗಿಕ ನಿಲುವನ್ನಾಧರಿಸಿದ ಯಾವುದೇ ಬಗೆಯ ತಾರತಮ್ಯವು ಅಭಿವ್ಯಕ್ತಿ ಸ್ವಾತಂತ್ರ್ಯದ ಮೂಲಭೂತ ಹಕ್ಕನ್ನು ಉಲ್ಲಂಘಿಸುತ್ತದೆ.

viii. **ಪುಟ್ಟಸ್ವಾಮಿ** (ಮೇಲ್ಕಂಡ) ಪ್ರಕರಣದ ಖಾಸಗೀತನದ ತೀರ್ಪಿನ ನಂತರ, ಖಾಸಗೀತನದ ಹಕ್ಕನ್ನು ಮೂಲಭೂತ ಹಕ್ಕುಗಳ ಮಟ್ಟಕ್ಕೆ ಏರಿಸಲಾಯಿತು. **ಸುರೇಶ್ ಕೌಶಲ್ ಪ್ರಕರಣದಲ್ಲಿ** (ಮೇಲ್ಕಂಡ) ಬಳಸಲಾಗಿರುವ ತಾರ್ಕಿಕ ಪ್ರಕ್ರಿಯೆ, ಒಟ್ಟು ಜನಸಂಖ್ಯೆಯ ಅತಿಸಣ್ಣ ಭಾಗ ಮಾತ್ರ ಎಲ್.ಜಿ.ಬಿ.ಟಿ ಸಮುದಾಯವನ್ನು ಒಳಗೊಂಡಿದೆ ಮತ್ತು ಐ.ಪಿ.ಸಿ. 377ನೇ ಪರಿಚ್ಛೇದದ ಅಸ್ತಿತ್ವವು ಒಟ್ಟು ಜನಸಂಖ್ಯೆಯ ಅರಿಸಣ್ಣ ಶೇಕಡಾವಾರು ಭಾಗದ ಮೂಲಭೂತ ಹಕ್ಕುಗಳನ್ನು ಕಡಿತಗೊಳಿಸುತ್ತದೆ, ಇದು ಸಮಸ್ಯಾತ್ಮಕ ಟಿಪ್ಪಣಿಯಾಗಿದೆ. ನಮ್ಮ ಅಭಿಪ್ರಾಯದಲ್ಲಿ ಸುರೇಶ್ ಕೌಶಲ್ ಪ್ರಕರಣದಲ್ಲಿನ (ಮೇಲ್ಕಂಡ) ತಾರ್ಕಿಕತೆಯು ವಿವೇಚನೆ ಇಲ್ಲಾದ್ದಾಗಿದೆ, ಏಕೆಂದರೆ, ನಮ್ಮ ಸಂವಿಧಾನದ ನಿರ್ಮಾತತೃಗಳು ಮೂಲಭೂತ ಹಕ್ಕುಗಳು, ಬಹುಸಂಖ್ಯಾತರ ಪ್ರಯೋಜನಕ್ಕಾಗಿ ಮಾತ್ರ ಉಪಯೋಗವಾಗಬೇಕು ಮತ್ತು ನ್ಯಾಯಾಲಯಗಳು ಒಟ್ಟು

ಜನಸಂಖ್ಯೆಯ ಹೆಚ್ಚಿನ ಶೇಕಡಾ ಜನರ ಮೂಲಭೂತ ಹಕ್ಕುಗಳಿಗೆ ತೊಂದರೆಯಾದರೆ ಮಾತ್ರ ಮಧ್ಯಪ್ರವೇಶಿಸಬೇಕು ಎಂದು ಉದ್ದೇಶ ಹೊಂದಿರಲಿಲ್ಲ. ವಾಸ್ತವವಾಗಿ, ಮೇಲ್ಕಂಡ ಅಭಿಪ್ರಾಯವು ಸಂವಿಧಾನದ ನೀತಿಗಳಿಗೆ ಸಂಪೂರ್ಣವಾಗಿ ವಿರುದ್ಧವಾಗಿದೆ, ಏಕೆಂದರೆ, ಸಂವಿಧಾನದ 3ನೇ ಭಾಗದಲ್ಲಿ ಬಳಸಲಾಗಿರುವ ಭಾಷೆ ಮತ್ತು ಸಾಂವಿಧಾನದ ನಿರ್ಮಾತೃಗಳ ಉದ್ದೇಶಗಳು ಕಡ್ಡಾಯಗೊಳಿಸುವ ಪ್ರಕಾರ, ಮೂಲಭೂತ ಹಕ್ಕುಗಳು ಉಲ್ಲಂಘನೆಯಾದಾಗಲೆಲ್ಲಾ ನ್ಯಾಯಾಲಯವು ಮಧ್ಯಪ್ರವೇಶಿಸಬೇಕು, ಉಲ್ಲಂಘನೆಯಾದ ಹಕ್ಕುಗಳು ಒಬ್ಬನೇ ವ್ಯಕ್ತಿಗೆ ಸಂಬಂಧ ಪಟ್ಟಿದ್ದರೂ ಕೂಡ ಮಧ್ಯಪ್ರವೇಶಿಸಬೇಕು.

ix. ಸಂವಿಧಾನದ ಅಡಿಯಲ್ಲಿ ಹಕ್ಕುಗಳ ನಿಚ್ಚಳವಾಗಿ ಏರುಗತಿಯಲ್ಲೇ ಸಾಗುತ್ತವೆ ಮತ್ತು ಇದು ಹಕ್ಕುಗಳ ಪ್ರಗತಿಪರ ಸಾಕ್ಷಾತ್ಕಾರದ ಸಿದ್ಧಾಂತಕ್ಕೆ ದಾರಿಮಾಡಿಕೊಡುತ್ತದೆ, ಎಂದರೆ, ಸಮಾಜದ ವಿಕಾಸವಾದಂತೆ ಇಂತಹ ಹಕ್ಕುಗಳೂ ಕೂಡಾ ವಿಕಸನ ಹೊಂದುತ್ತವೆ. ಈ ಸಿದ್ಧಾಂತದ ಸಹಜ ಫಲಶೃತಿಯಿಂದ, ಹಿಮ್ಮೆಟ್ಟದಿರುವಿಕೆಯ ಸಿದ್ಧಾಂತ ಜನ್ಮ ತಾಳುತ್ತದೆ, ಅದರ ಪ್ರಕಾರ ಸಾಂವಿಧಾನಿಕ ಹಕ್ಕುಗಳು ಕಡಿತಗೊಳ್ಳಬಾರದು. ಈ ಹಿನ್ನೆಲೆಯಲ್ಲಿ, **ಸುರೇಶ್ ಕೌಶಲ್** (ಮೇಲ್ಕಂಡ) ಪ್ರಕರಣದಲ್ಲಿ ವ್ಯಕ್ತವಾದ ಅಭಿಪ್ರಾಯವನ್ನು ನಾವು ಒಪ್ಪಿಕೊಳ್ಳಬೇಕಾದರೆ, ಸಂವಿಧಾನದ ಪ್ರಗತಿಪರ ವ್ಯಾಖ್ಯಾನದೆಡೆಗಿನ ಪ್ರಯಾಣದಲ್ಲಿ ಹಿಂದಡಿಯಿಟ್ಟನ್ತಾಗಿ, ಹಕ್ಕುಗಳ ಪ್ರಗತಿಪರ ಸಾಕ್ಷಾತ್ಕಾರವನ್ನು ತಿರಸ್ಕರಿಸಿದಂತಾಗುತ್ತದೆ.

x. ಸ್ವಾಯತ್ತತೆಯು ವ್ಯಕ್ತಿತ್ವವಾದಿಯಾಗಿದೆ. ಸ್ವಾಯತ್ತತೆ ಸಿಧ್ಧಾಂತದ ಅಡಿಯಲ್ಲಿ, ವ್ಯಕ್ತಿಯು ಅವನ/ಅವಳ ದೇಹದ ಮೇಲೆ ಸಾರ್ವಭೌಮತ್ವವನ್ನು ಹೊಂದಿರುತ್ತಾರೆ. ಅವನು/ಅವಳು ಮತ್ತೊಬ್ಬರಿಗೆ ಅವನ/ಅವಳ ಸ್ವಾಯತ್ತತೆಯನ್ನು ಮನಃಪೂರ್ವಕವಾಗಿ ಒಪ್ಪಿಸಬಹುದು ಮತ್ತು ಅವರ ಖಾಸಗೀಯಾದ ಅನ್ಯೋನ್ಯತೆ ಅವರ ಆಯ್ಕೆಯ ವಿಷಯವಾಗಿದೆ. ಅಂತಹ ಅಸ್ಮಿತೆಯ ಪರಿಕಲ್ಪನೆಯು ಪವಿತ್ರವಷ್ಟೇ ಅಲ್ಲದೇ, ಅದು ವ್ಯಕ್ತಿಯೊಬ್ಬರ ಸ್ವಭಾವದಲ್ಲಿನ ಮಾನವೀಯತೆಯ ಸರ್ವೋತ್ಕೃಷ್ಟವಾದ ಭಾಗದ ಗುರುತಿಸುವಿಕೆ ಕೂಡಾ ಆಗಿದೆ. ಸ್ವಾಯತ್ತತೆ ಗುರುತನ್ನು ಸ್ಥಾಪಿಸುತ್ತದೆ ಮತ್ತು ಆ ಗುರುತು, ಕಾಲಾಂತರದಲ್ಲಿ, ವ್ಯಕ್ತಿಯ ಘನತೆಯ ಭಾಗವಾಗುತ್ತದೆ.

xi. ಐ.ಪಿ.ಸಿ.ಯ 375 ಮತ್ತು 377ನೇ ಪರಿಚ್ಛೇದಗಳನ್ನು ಮೇಲ್ಕಂಡದಲ್ಲಿ ಓದಿದಾಗ, 375ನೇ ಪರಿಚ್ಛೇದವು ಕೃತ್ಯವೊಂದನ್ನು ಅತ್ಯಾಚಾರ ಎಂದು ಕರೆಯಬೇಕಿದ್ದರೆ ಅಲ್ಲಿ ಉದ್ದೇಶಪೂರ್ವಕ ಮತ್ತು ತಿಳುವಳಿಕೆಯ ಒಪ್ಪಿಗೆಯ ಕೊರತೆಯಿರಬೇಕು ಎಂದು ಗುರುತಿಸುತ್ತದೆಯಾದರೂ, 377ನೇ ಪರಿಚ್ಛೇದದವು ಶಾರೀರಿಕ ಸಂಭೋಗವನ್ನು ಕಾನೂನುಬಾಹಿರಗೊಳಿಸಲು 'ಉದ್ದೇಶಪೂರ್ವಕ ಮತ್ತು ತಿಳುವಳಿಕೆಯ ಒಪ್ಪಿಗೆಯ ಅನುಪಸ್ಥಿತಿಯುಂತಹ ಯಾವುದೇ ಮಾನದಂಡವನ್ನು ಮೈಗೂಡಿಸಿಕೊಂಡಿಲ್ಲವಾದ್ದರಿಂದ ಅದರಿಂದಾಗಿ, ಸಮಲೈಂಗಿಕರು, ಭಿನ್ನಲಿಂಗಾಸಕ್ತರು, ಉಭಯಲಿಂಗಾಸಕ್ತರು ಮತ್ತು ಲಿಂಗ ಪರಿವರ್ತಿತರ ನಡುವಿನ ಸ್ವಯಂಪ್ರೇರಿತ ಶಾರೀರಿಕ ಸಂಭೋಗ ಅಪರಾಧೀಕರಿಸಲ್ಪಡುತ್ತದೆ. ಕ್ರಿಮಿನಲ್ ಕಾನೂನು (ತಿದ್ದುಪಡಿ) ಕಾಯಿದೆ, 2013 ಜಾರಿಗೆ ಬಂದ ನಂತರ ಐ.ಪಿ.ಸಿ. 375ನೇ ಪರಿಚ್ಛೇದವು ಐ.ಪಿ.ಸಿ.ಯ ಇತರ ಯಾವುದೇ ನಿಬಂಧನೆಗೆ ಒಳಪಟ್ಟ' ಪದಗಳನ್ನು ಬಳಸಲಿಲ್ಲ. ಇದು ಐ.ಪಿ.ಸಿ.ಯ 375ನೇ ಪರಿಚ್ಛೇದವು ಐ.ಪಿ.ಸಿ.ಯ 377ನೇ ಪರಿಚ್ಛೇದದ ವ್ಯಾಪ್ತಿಗೆ ಒಳಪಟ್ಟಿಲ್ಲ ಎಂಬುದನ್ನು ಸೂಚಿಸುತ್ತದೆ.

xii. ನಿಸರ್ಗದ ನಿಯಮದ ವಿರುದ್ಧ ಎಂಬ ಪದಪುಂಜವನ್ನು, ಐ.ಪಿ.ಸಿ.ಯ 377ನೇ ಪರಿಚ್ಛೇದದಲ್ಲಾಗಲೀ, ಅಥವಾ ಐ.ಪಿ.ಸಿ. ಯ ಯಾವುದೇ ಇತರ ನಿಬಂಧನೆಗಳಡಿಯಲ್ಲಾಗಲೀ ವ್ಯಾಖ್ಯಾನಿಸಲಾಗಿಲ್ಲ. ವಿವಿಧ ತೀರ್ಪುಗಳು ಆ ಪದಪುಂಜಕ್ಕೆ ನೀಡಿರುವ ಅರ್ಥದಲ್ಲಿ, ಸಂತಾನೋತ್ಪತ್ತಿಯ ಉದ್ದೇಶವಿಲ್ಲದ ಎಲ್ಲಾ ಲೈಂಗಿಕ ಕ್ರಿಯೆಗಳೂ ಸೇರಿಕೊಂಡಿವೆ. ಆದ್ದರಿಂದ, ಲೈಂಗಿಕ ಕ್ರಿಯೆಯನ್ನು ಕೇವಲ ಸಂತಾನೋತ್ಪತ್ತಿಗಷ್ಟೇ ನಡೆಸದ ಮಾತ್ರಕ್ಕೆ, ಅದು "ನಿಸರ್ಗದ ನಿಯಮಕ್ಕೆ ವಿರುದ್ಧ'ವಾಗುವುದಿಲ್ಲ.

xiii. ಐ.ಪಿ.ಸಿ.ಯ 377 ನೇ ಪರಿಚ್ಛೇದ, ತನ್ನ ಈಗಿನ ರೂಪದಲ್ಲಿ, ಘನತೆ ಮತ್ತು ಖಾಸಗೀತನದ ಹಕ್ಕನ್ನು ಉಲ್ಲಂಘಿಸುತ್ತದೆಯಾದ್ದರಿಂದ, ಅದನ್ನು, **ಮನೇಕಾ ಗಾಂಧಿ** (ಮೇಲ್ಕಂಡ) ಮತ್ತು ನಂತರದ ಇತರ ಪ್ರಕರಣಗಳ ತೀರ್ಪುಗಳಲ್ಲಿ ನಿರ್ಧರಿಸಲಾಗಿರುವ ಕಾನೂನಿನ ಪ್ರಕಾರ ಸಂವಿಧಾನದ 14 ಮತ್ತು 19ನೇ ಕಲಮುಗಳ ಕಟಕಟೆಯಲ್ಲಿ ಪರೀಕ್ಷಿಸಬೇಕಾಗುತ್ತದೆ.

xiv. ಐ.ಪಿ.ಸಿ.ಯ 375ನೇ ಪರಿಚ್ಛೇದ ಮತ್ತು ಪೋಸ್ಕೋ ಕಾಯಿದೆಗಳು ಈಗಾಗಲೇ ಒಪ್ಪಿಗೆಯಿಲ್ಲದ ಶಾರೀರಿಕ ಸಂಭೋಗವನ್ನು ಶಿಕ್ಷಿಸುತ್ತಿರುವ ಹಿನ್ನೆಲೆಯಲ್ಲಿ, ಐ.ಪಿ.ಸಿ.ಯ 377ನೇ ಪರಿಚ್ಛೇದವನ್ನು ಸಂವಿಧಾನದ 14ನೇ

ಕಲಮಿನ ಕಟಕಟಕಟೆಯಲ್ಲಿಟ್ಟು ಪರೀಕ್ಷಿಸಿದಾಗ, ಸದರಿ ಪರಿಚ್ಛೇದದಡಿಯಲ್ಲಿ ಅಳವಡಿಸಿಕೊಂಡ ವರ್ಗೀಕರಣಕ್ಕೆ ತನ್ನ ಉದ್ದೇಶದೊಂದಿಗೆ ಯಾವುದೇ ಬಗೆಯ ತಾರ್ಕಿಕ ಸಂಬಂಧವಿಲ್ಲ ಎಂಬುದು ಕಂಡು ಬರುತ್ತದೆ. ಅಲ್ಲದೇ, ತನ್ನ ಈಗಿನ ರೂಪದಲ್ಲಿ, ಐ.ಪಿ.ಸಿ. 377ನೇ ಪರಿಚ್ಛೇದವು ಅನಗತ್ಯ ಪ್ರತಿಕೂಲ ಪರಿಣಾಮಗಳನ್ನು ಉಂಟುಮಾಡಿ ಆ ಮೂಲಕ, ಎಲ್.ಜಿ.ಬಿ.ಟಿ ವ್ಯಕ್ತಿಗಳ ನಡುವಿನ, ಮಕ್ಕಳು ಅಥವಾ ಮಹಿಳೆಯರಿಗೆ ಯಾವುದೇ ರೀತಿಯಲ್ಲಿ ಹಾನಿಯುಂಟುಮಾಡದ "ಒಪ್ಪಿಗೆಯ ಲೈಂಗಿಕ ಕೃತ್ಯಗಳ"ನ್ನು ಕೂಡ, ಹಿಂಸಾತ್ಮಕವಾಗಿ ಗುರಿಪಡಿಸಲಾಗಿದ್ದು, ಆ ಮೂಲಕ ಎಲ್.ಜಿ.ಬಿ.ಟಿ ಸಮುದಾಯದೆಡೆಗೆ ತಾರತಮ್ಯ ಮತ್ತು ಅಸಮಾನತೆಯ ವರ್ತನೆಯನ್ನು ಉಂಟುಮಾಡುತ್ತದೆ ಮತ್ತು ಹೀಗಾಗಿ ಸಂವಿಧಾನದ 14ನೇ ಕಲಮನ್ನು ಉಲ್ಲಂಘಿಸುತ್ತದೆ.

xv. ಸಮರ್ಥ ವಯಸ್ಕರ ನಡುವಿನ ಒಪ್ಪಿಗೆಯ ಲೈಂಗಿಕ ಕ್ರಿಯೆಗಳನ್ನು ಕೂಡ ಅಪರಾಧೀಕರಿಸುವ ಐ.ಪಿ.ಸಿ.ಯ 377ನೇ ಪರಿಚ್ಛೇದವು, ಒಪ್ಪಿಗೆಯಿಲ್ಲದ ಲೈಂಗಿಕ ಕ್ರಿಯೆಗಳು ಮತ್ತು ಸಮರ್ಥರಾದ ವಯಸ್ಕರು ಖಾಸಗೀ ಜಾಗದಲ್ಲಿ ಸಮಾಜಕ್ಕೆ ಹಾನಿಕಾರಕ ಅಥವಾ ಸಾಂಕ್ರಾಮಿಕವಾಗದ ರೀತಿಯಲ್ಲಿ ನಡೆಸುವ ಒಪ್ಪಿಗೆಯ ಲೈಂಗಿಕ ಕ್ರಿಯೆಗಳ ನಡುವಿನ ವ್ಯತ್ಯಾಸವನ್ನು ಗುರುತಿಸಲು ವಿಫಲವಾಗಿದೆ. ಐ.ಪಿ.ಸಿ. 377ನೇ ಪರಿಚ್ಛೇದ ಎಲ್.ಜಿ.ಬಿ.ಟಿ ಸಮುದಾಯವನ್ನು ಸಾಮಾಜಿಕ ಬಹಿಷ್ಕಾರ ಮತ್ತು ನಿರ್ಲಕ್ಷಕ್ಕೆ ಒಳಪಡಿಸುತ್ತದೆ, ಆದ್ದರಿಂದ, ಅದು ಸ್ಪಷ್ಟವಾಗಿ ನಿರಂಕುಶವಾಗಿದೆ, ಏಕೆಂದರೆ ಆದು ಎಲ್.ಜಿ.ಬಿ.ಟಿ ಸಮುದಾಯವನ್ನು ತಾರತಮ್ಯ ಮತ್ತು ಅಸಮಾನ ನಡವಳಿಕೆಗೆ ಒಳಪಡಿಸುವ ಮೂಲಕ, ಅವರಿಗೆ ಕಿರುಕುಳ ನೀಡುವ ಒಂದು ದ್ವೇಷದ ಸಾಧನವಾಗಿ ಮಾರ್ಪಟ್ಟಿದೆ. ಆದ್ದರಿಂದ, **ಶಾಯರಾ ಬಾನೊ** (ಮೇಲ್ಕಂಡ) ಪ್ರಕರಣದಲ್ಲಿ ಮಂಡಿಸಿದ ಕಾನೂನಿನ ಹಿನ್ನೆಲೆಯಲ್ಲಿ, ಸಂವಿಧಾನದ 14ಕಲಮನ್ನು ಉಲ್ಲಂಘಿಸಿರುವುದರಿಂದ ಐ.ಪಿ.ಸಿ.ಯ 377ನೇ ಪರಿಚ್ಛೇದದ ವ್ಯಾಪ್ತಿಯನ್ನು ಭಾಗಶಃ ಕುಗ್ಗಿಸುವುದು ಸೂಕ್ತ.

xvi. 377ನೇ ಪರಿಚ್ಛೇದವನ್ನು 19 (1) (ಎ) ಕಲಮಿನ ಕಟಕಟೆಯಲ್ಲಿಟ್ಟು ಪರೀಕ್ಷಿಸಿದಾಗ, ಅಸಮಂಜಸ ನಿರ್ಬಂಧಕ್ಕೆ ಕಾರಣವಾಗುತ್ತದೆ ಎಂಬುದು ಬಹಿರಂಗವಾಗುತ್ತದೆ, ಏಕೆಂದರೆ ಸಾರ್ವಜನಿಕ ಸಭ್ಯತೆ ಮತ್ತು ನೈತಿಕತೆಯನ್ನು ತರ್ಕಬದ್ಧ ಅಥವಾ ತಾರ್ಕಿಕ ಮಿತಿಯಾಚೆಗೆ ವೃದ್ಧಿಸಲು ಬರುವುದಿಲ್ಲ ಮತ್ತು ಅವುಗಳನ್ನು ಎಲ್.ಜಿ.ಬಿ.ಟಿ ಸಮುದಾಯದ ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಆಯ್ಕೆಯ ಮೂಲಭೂತ ಹಕ್ಕುಗಳನ್ನು ಕಸಿಯುವುದಕ್ಕೆ

ಸೂಕ್ತವಾದ ಆಧಾರವಾಗಿ ಬಳಸಲು ಆಗುವುದಿಲ್ಲ. ಸಮಲೈಂಗಿಕ ಅಥವಾ ಭಿನ್ನಲಿಂಗೀಯ ವಯಸ್ಕರ ನಡುವಿನ ಇದು ಖಾಸಗೀ ಸ್ಥಳದಲ್ಲಿನಡೆಯುವ ಒಪ್ಪಿಗೆಯ ಶಾರೀರಿಕ ಸಂಭೋಗ, ಮತ್ತು ಅದು ಯಾವುದೇ ರೀತಿಯಲ್ಲಿ ಸಾರ್ವಜನಿಕ ಸಭ್ಯತೆ ಅಥವಾ ನೈತಿಕತೆ ಹಾನಿಯುಂಟುಮಾಡುವುದಿಲ್ಲ. ಆದ್ದರಿಂದ, ಐ.ಪಿ.ಸಿ. 377ನೇ ಪರಿಚ್ಛೇದ ಈಗಿನ ರೂಪದಲ್ಲಿ ಸಂವಿಧಾನದ 19ನೇ (1)(ಎ) ಕಲಮನ್ನು ಉಲ್ಲಂಘಿಸುತ್ತದೆ.

xvii. ಐ.ಪಿ.ಸಿ. 377ನೇ ಪರಿಚ್ಛೇದವು, ಇಬ್ಬರು ವಯಸ್ಕರ ನಡುವಿನ ಯಾವುದೇ ಬಗೆಯ ಒಪ್ಪಿಗೆಯ ಲೈಂಗಿಕ ಸಂಬಂಧವನ್ನು- ಅದು ಯಾರೇ ಆಗಿದ್ದರು, ಅದು ಸಮಲೈಂಗಿಕರಿರಬಹುದು (ಗಂಡು, ಗಂಡಿನೊಂದಿಗೆ), ಭಿನ್ನಲಿಂಗಾಸಕ್ತರಿರಬಹುದು (ಗಂಡು ಹೆಣ್ಣಿನೊಂದಿಗೆ) ಅಥವಾ ಸ್ತ್ರೀ ಸಮಲೈಂಗಿಕರಿರ ಬಹುದು (ಹೆಣ್ಣು ಹೆಣ್ಣಿನೊಂದಿಗೆ)- ದಂಡಿಸುವುದರಿಂದ, ಅದನ್ನು ಸಾಂವಿಧಾನಿಕ ಎಂದು ಪರಿಗಣಿಸಲು ಆಗುವುದಿಲ್ಲ. ಹೀಗಾದರೂ, ಗಂಡಸು ಅಥವಾ ಹೆಂಗಸು, ಪ್ರಾಣಿಯೊಂದರೊಂದಿಗೆ ಯಾವುದೇ ರೀತಿಯ ಲೈಂಗಿಕ ಚಟುವಟಿಕೆಯಲ್ಲಿ ತೊಡಗಿದಾಗ, 377ನೇ ಪರಿಚ್ಛೇದ ಸಾಂವಿಧಾನಿಕವಾಗುತ್ತದೆ ಮತ್ತು ಆ ಕೃತ್ಯವು ಐ.ಪಿ.ಸಿ.ಯ 377ನೇ ಪರಿಚ್ಛೇದದ ಅಡಿಯಲ್ಲಿ ಅಪರಾಧವಾಗಿಯೇ ಉಳಿಯುತ್ತದೆ. ಐ.ಪಿ.ಸಿ. 377 ನೇ ಪರಿಚ್ಛೇದದಲ್ಲಿ ವಿವರಿಸಿರುವ ಯಾವುದೇ ಬಗೆಯ ಕ್ರಿಯೆಗಳು ಇಬ್ಬರಾ ವ್ಯಕ್ತಿಗಳ ನಡುವೆ ಒಬ್ಬರ ಒಪ್ಪಿಗೆಯಿಲ್ಲದೆ ನಡೆದರೆ, ಅದು ಐ.ಪಿ.ಸೀ. 377ನೇ ಪರಿಚ್ಛೇದದ ಅಡಿಯಲ್ಲಿ ದಂಡನೆಯನ್ನು ಆಹ್ವಾನಿಸುತ್ತದೆ.

xviii. **ಸುರೇಶ್ ಕೌಶಲ್ ಪ್ರಕರಣದ ತೀರ್ಪು** (ಮೇಲ್ಕಂಡ), ನಾವು ಮೇಲೆ ಹೇಳಿರುವ ವಿಚಾರದೊಂದಿಗೆ ತಾಳೆಯಾಗುವುದಿಲ್ಲವಾದ್ದರಿಂದ, ಆ ತೀರ್ಪನ್ನು ತಳ್ಳಿಹಾಕಲಾಗಿದೆ.

254. ರಿಟ್ ಅರ್ಜಿಗಳನ್ನು ಈ ಪ್ರಕಾರವಾಗಿ ಪರಿಹರಿಸಲಾಗಿದೆ. ಖರ್ಚಿಗೆ ಸಂಬಂಧಿಸಿದಂತೆ, ಯಾವುದೇ ಆದೇಶವಿರುವುದಿಲ್ಲ.

**...................................ಮು.ನ್ಯಾ.**

**(ದೀಪಕ್ ಮಿಶ್ರಾ)**

**..........................................ನ್ಯಾ.**

**(ಎಮ್ ಖಾನ್ವಿಲ್ಕರ್)**

**ನವ ದೆಹಲಿ;**

**ಸೆಪ್ಟೆಂಬರ್ 6, 2018**

ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿ

ಕ್ರಿಮಿನಲ್/ಸಿವಿಲ್ ಮೂಲ ಅಧಿಕಾರ ವ್ಯಾಪ್ತಿ

**ರಿಟ್ ಅರ್ಜಿ (ಕ್ರಿಮಿನಲ್) ಸಂಖ್ಯೆ .76, 2016**

ನವತೇಜ್ ಸಿಂಘ್ ಜೋಹರ್ ಮತ್ತು ಇತರರು ...ಅರ್ಜಿದಾರರು

ಎದುರು

ಭಾರತ ಸರ್ಕಾರ

ಕಾರ್ಯದರ್ಶಿ,

ಕಾನೂನು ಮತ್ತು ನ್ಯಾಯ ಸಚಿವಾಲಯದ ಮುಖೇನ .... ಪ್ರತಿವಾದಿಗಳು

ಜೊತೆಗೆ

**ರಿಟ್ ಅರ್ಜಿ (ಕ್ರಿಮಿನಲ್) ಸಂಖ್ಯೆ .572, 2016**

ಜೊತೆಗೆ

**ರಿಟ್ ಅರ್ಜಿ (ಕ್ರಿಮಿನಲ್) ಸಂಖ್ಯೆ .88, 2018**

ಜೊತೆಗೆ

**ರಿಟ್ ಅರ್ಜಿ (ಕ್ರಿಮಿನಲ್) ಸಂಖ್ಯೆ .100, 2018**

ಜೊತೆಗೆ

**ರಿಟ್ ಅರ್ಜಿ (ಕ್ರಿಮಿನಲ್) ಸಂಖ್ಯೆ .101, 2018**

ಜೊತೆಗೆ

**ರಿಟ್ ಅರ್ಜಿ (ಕ್ರಿಮಿನಲ್) ಸಂಖ್ಯೆ .121, 2018**

# ತೀರ್ಪು

**ನ್ಯಾ. ಆರ್. ಎಫ್. ನಾರಿಮನ್**

1. "ತನ್ನ ಹೆಸರನ್ನು ಹೇಳ ಹೆದರುವ ಪ್ರೀತಿ" ಇದು ಸಮಲೈಂಗಿಕ ದಂಪತಿಗಳ ನಡುವಿನ ಒಲವನ್ನು 1894 ರ ವಿಕ್ಟೋರಿಯನ್ ಇಂಗ್ಲೆಂಡಿನಲ್ಲಿ ಪ್ರಕಟವಾದ ತನ್ನ "ಟೂ ಲವ್" ಕವಿತೆಯಲ್ಲಿ ಆಸ್ಕರ್ ವೈಲ್ಡ್ ನ ಪ್ರಿಯತಮ ಲಾರ್ಡ್ ಆಲ್ಫ್ರೆಡ್ ಡಗ್ಲಾಸ್ ವರ್ಣಿಸಿದ ಬಗೆ.

2. "ಸಮಲೈಂಗಿಕ" ಅಥವಾ ಇಂಗ್ಲೀಷ್ ಭಾಷೆಯ "ಹೋಮೋಸೆಕ್ಸುವಲ್" ಎಂಬ ಪದದ ಮೂಲ "ಮನುಷ್ಯ" ಎಂಬ ಅರ್ಥ ಬರುವ "ಹೋಮೊ" ಆಗಿರದೇ, "ಸಮಾನ" ಎಂಬ ಅರ್ಥ ಕೊಡುವ "ಹೋಮೋ" ಪದವಾಗಿದೆ. "ಲೆಸ್ಬಿಯನ್" ಎಂಬ ಪದವನ್ನು ಸಮಲೈಂಗಿಕ ಸ್ತ್ರೀ ಸಮಲೈಂಗಿಕ ಲೈಂಗಿಕತೆ ದಂಪತಿಗಳು ಜೋಡಿಗಳು ಇದ್ದರೂ ಎನ್ನಲಾಗುವ, ಗ್ರೀಕ್ ದ್ವೀಪವಾದ "ಲೆಸ್ಬೋಸ್" ನ ಹೆಸರಿನಿಂದ ರಚಿಸಲಾಗಿದೆ. ಇಂದು ನಮ್ಮ ಮುಂದೆ 1860ನೇ ಇಸವಿಯಲ್ಲಿ (150 ವರ್ಷಗಳ ಹಿಂದೆ) ಜಾರಿಯಾದ, ವಯಸ್ಕ ಸಮಲೈಂಗಿಕ ಜೋಡಿಗಳ ನಡುವಿನ ಒಪ್ಪಿಗೆಯ ಲೈಂಗಿಕ ಕ್ರಿಯೆಯನ್ನು ಅಪರಾಧೀಕರಿಸುವ ಭಾರತೀಯ ದಂಡ ಸಂಹಿತೆಯ 377ನೇ ಪರಿಚ್ಛೇದದ ಸಂವಿಧಾನಾತ್ಮಕ ಮಾನ್ಯತೆಯನ್ನು ಮರುಪರಿಶೀಲಿಸುವ ವಿಚಾರ ಬಂದಿದೆ.

3. ಈ ಪ್ರಕರಣಗಳಿಗೆ ಏಳುಬೀಳಿನ ಇತಿಹಾಸವಿದೆ. ವಯಸ್ಕ ಸಮಲೈಂಗಿಕ ಜೋಡಿಗಳು ತಮ್ಮ ಮನೆಯೊಳಗೆ ಅಥವಾ ಇತರ ಖಾಸಗೀ ಸ್ಥಳಗಳಲ್ಲಿ ನಡೆಸುವ ಒಪ್ಪಿಗೆಯ ಲೈಂಗಿಕ ಕ್ರಿಯೆಯನ್ನು ಅಪರಾಧೀಕರಿಸುವ ದಂಡ ಸಂಹಿತೆಯ 377ನೇ ಪರಿಚ್ಛೇದದ ಸಂವಿಧಾನಾತ್ಮಕ ಮಾನ್ಯತೆಯನ್ನು ಪ್ರಶ್ನಿಸಿ ದೆಹಲಿ ಉಚ್ಚನ್ಯಾಯಾಲಯಕ್ಕೆ ರಿಟ್ ಅರ್ಜಿಗಳನ್ನು ಸಲ್ಲಿಸಲಾಯಿತು. ನಾಜ್ ಪ್ರತಿಷ್ಠಾನ v. ದೆಹಲಿಯ ಎನ್.ಸಿ.ಟಿ ಸರ್ಕಾರ ("ನಾಜ್ ಪ್ರತಿಷ್ಠಾನ") 111 ಡಿಆರ್ಜೆ 1 (2009) ಪ್ರಕರಣದಲ್ಲಿ ಎರಡೂ ಪಕ್ಷಗಳ ಸುದೀರ್ಘ ವಾದಗಳನ್ನು ಆಲಿಸಿದ ದೆಹಲಿ ಉಚ್ಚನ್ಯಾಯಾಲಯದ ವಿಭಾಗೀಯ ಪೀಠವು, ಕೊನೆಯದಾಗಿ ಅರ್ಜಿದಾರರ ಮನವಿಯನ್ನು ಕೆಳಕಂಡಂತೆ ಎತ್ತಿಹಿಡಿಯಿತು:

132. ನಾವುಗಳು, ವಯಸ್ಕರ ನಡುವಿನ ಒಪ್ಪಿಗೆಯ ಲೈಂಗಿಕ ಕ್ರಿಯೆಗಳನ್ನು ಅಪರಾಧೀಕರಿಸು ಐ.ಪಿ.ಸಿ. 377ನೇ ಪರಿಚ್ಛೇದವು, ಸಂವಿಧಾನದ 21, 14 ಮತ್ತು 15 ನೇ ಕಲಮುಗಳನ್ನು ಉಲ್ಲಂಘಿಸುತ್ತದೆ ಎಂದು ಘೋಷಿಸುತ್ತೇವೆ. ಐ.ಪಿ.ಸಿ. 377ನೇ ಪರಿಚ್ಛೇದದ ನಿಬಂಧನೆಗಳು ಒಪ್ಪಿಗೆಯಿಲ್ಲದ ಶಿಶ್ನ-ಮತ್ತು-ಯೋನಿಯಲ್ಲದ ಭಾಗಗಳನ್ನೊಳಗೊಂಡ, ಲೈಂಗಿಕ ಕ್ರಿಯೆಗಳು ಮತ್ತು ಅಪ್ರಾಪ್ತರೊಂದಿಗಿನ ಶಿಶ್ನ ಮತ್ತು ಯೋನಿಯಲ್ಲದ ಭಾಗಗಳನ್ನೊಳಗೊಂಡ ಲೈಂಗಿಕ ಕ್ರಿಯೆಗಳ ವಿಚಾರದಲ್ಲಿ ಮುಂದುವರಿಯುತ್ತವೆ. ಇಲ್ಲಿ 'ವಯಸ್ಕರು' ಎಂಬ ಪದವು 18 ವರ್ಷ ಮೇಲ್ಪಟ್ಟವರು ಎಂಬುದನ್ನು ಸೂಚಿಸುತ್ತದೆ. 18 ವರ್ಷಕ್ಕಿಂತ ಕಿರಿಯ ವ್ಯಕ್ತಿಯು ಲೈಂಗಿಕ ಕ್ರಿಯೆಗೆ ಒಪ್ಪಿಗೆ ಸೂಚಿಸಲು ಸಾಧ್ಯವಿಲ್ಲ ಎಂದು ಭಾವಿಸಲಾಗುತ್ತದೆ. ಈ ವಿವರಣೆಯು ಸಂಸತ್ತು ಕಾನೂನನ್ನು ತಿದ್ದಿ, ಭಾರತದ ಕಾನೂನು ಆಯೋಗದ 172ನೇ ವರದಿಯ ಶಿಫಾರಸುಗಳನ್ನು ಜಾರಿಮಾಡಲು ನಿರ್ಧರಿಸುವವರೆಗೂ ಅನ್ವಯಿಸುತ್ತದೆ. ಈ ವಿವರಣೆಯಿಂದ ಹಲವಾರು ಗೊಂದಲಗಳು ಪರಿಹಾರವಾಗುತ್ತವೆ ಎಂದು ಭಾವಿಸುತ್ತೇವೆ. ಎರಡನೆಯದಾಗಿ, ನಮ್ಮ ತೀರ್ಪಿನಿಂದ 377ನೇ ಪರಿಚ್ಛೇದಕ್ಕೆ ಸಂಬಂಧಿಸಿದ ಈಗಾಗಲೇ ಮುಕ್ತಾಯಗೊಂಡಿರುವ ಕ್ರಿಮಿನಲ್ ಮೊಕದ್ದಮೆಗಳು

ಪುನರಾರಂಭಗೊಳ್ಳುವುದಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತೇವೆ.

ಮೇಲಿನ ನಿಯಮಗಳ ಪ್ರಕಾರ, ಸದರಿ ರಿಟ್ ಅರ್ಜಿಯನ್ನು ನಾವು ಅನುಮೋದಿಸುತ್ತೇವೆ"

4. ಭಾರತ ಸರ್ಕಾರ ಯಾವುದೇ ಮೇಲ್ಮನವಿಯನ್ನು ಸಲ್ಲಿಸದಿದ್ದರೂ, ಖಾಸಗೀ ವ್ಯಕ್ತಿಗಳು ಮತ್ತು ಗುಂಪುಗಳು ಸಲ್ಲಿಸಿದ ಮನವಿಗಳ ಆಧಾರದ ಮೇಲೆ, ಸುರೇಶ್ ಕುಮಾರ್ ಕೌಶಲ್ ಮತ್ತೊಬ್ಬರು v. ನಾಜ್ ಪ್ರತಿಷ್ಠಾನ ಮತ್ತು ಇತರರು ("ಸುರೇಶ್ ಕುಮಾರ್ ಕೌಶಲ್"), ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು, ದೆಹಲಿ ಉಚ್ಚ ನ್ಯಾಯಾಲಯದ ತೀರ್ಪನ್ನು ಹಿಂಪಡೆಯಿತು. ಮೇಲಿನ ತೀರ್ಪಿನ ವಿರುದ್ಧ ಸಲ್ಲಿಸಲಾಗಿದ್ದ, ಭಾರತ ಸರ್ಕಾರದ ಮನವಿಯನ್ನೂ ಒಳಗೊಂಡಿದ್ದ ಇತರ ಮರುಪರಿಶೀಲನಾ ಅರ್ಜಿಗಳನ್ನು ಇದೇ ನ್ಯಾಯಾಲಯ ವಜಾ ಮಾಡಿತ್ತು.

5. ಏತನ್ಮಧ್ಯೆ, ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ v. ಭಾರತ ಸರ್ಕಾರ ("ನಾಲ್ಸಾ"), (2014), ಪ್ರಕರಣದಲ್ಲಿ ಅತಿಮುಖ್ಯವಾದ ತೀರ್ಪನ್ನು ನೀಡಿದ ಸರ್ವೋಚ್ಚ ನ್ಯಾಯಾಲಯವು, ಭಾರತ ಸಂವಿಧಾನದ 15 ಮತ್ತು 21ನೇ ಕಲಮುಗಳು ಲೈಂಗಿಕ ಅಸ್ಮಿತೆ ಮತ್ತು ಲೈಂಗಿಕ ನಿಲುವುಗಳನ್ನು ಒಳಗೊಂಡಿದ್ದು, ಪುರುಷರು ಮತ್ತು ಮಹಿಳೆಯರ ಹಾಗೆ, ಲಿಂಗ-ಪರಿವರ್ತಿತರು ಸಹ ಭಾರತದ ಇತರ ನಾಗರಿಕರಿಗೆ ಲಭ್ಯವಿರುವ ಎಲ್ಲಾ ಮೂಲಭೂತ ಹಕ್ಕುಗಳನ್ನು ಆನಂದಿಸಬಹುದು ಎಂದು ತೀರ್ಪಿತ್ತಿತು. ಆನಂತರ, ನಿವೃತ್ತ ನ್ಯಾಯಮೂರ್ತಿ ಕೆ.ಎಸ್. ಪುಟ್ಟಸ್ವಾಮಿ ಮತ್ತೊಬ್ಬರು v. ಭಾರತ ಸರ್ಕಾರ ಮತ್ತು ಇತರರು ("ಪುಟ್ಟಸ್ವಾಮಿ"), (2017) 10 SCC 1, ಪ್ರಕರಣದಲ್ಲಿ ಈ ನ್ಯಾಯಾಲಯದ ಒಂಬತ್ತು ನ್ಯಾಯಾಧೀಶರ ಪೀಠವು, ಖಾಸಗೀತನವೆಂಬುದು ಎಲ್ಲ ವ್ಯಕ್ತಿಗಳಿಗೂ ಅನ್ವಯಿಸುವಂತಹ ಮೂಲಭೂತ ಹಕ್ಕು ಎಂದು ಸರ್ವಾನುಮತದಿಂದ ತೀರ್ಪಿತ್ತಿತು. ಈ ತೀರ್ಪಿನಿಂದ, ವ್ಯಕ್ತಿಯ ಜೀವನವಿಧಾನಕ್ಕೆ ಮೂಲಭೂತವಾಗಿ ಅಗತ್ಯವಾಗಿರುವ ಆಯ್ಕೆಗಳನ್ನು ಮಾಡುವ ಹಕ್ಕಿನಲ್ಲಿ, ಬಲವಾದ ಕಾರಣ ಮತ್ತು ಇತರರಿಗೆ

ಹಾನಿಯಾಗುವ ಸಂದರ್ಭಗಳು ಇಲ್ಲದಿರುವಾಗ ಸರ್ಕಾರ ಮೂಗು ತೂರಿಸಬಾರದು ಎಂಬ ಅಭಿಪ್ರಾಯ ವ್ಯಕ್ತವಾಯಿತು.

6. ಈ ನಿರ್ಧಾರದ ಪರಿಣಾಮವಾಗಿ, ಪುಟ್ಟಸ್ವಾಮಿ (ಮೇಲ್ಕಂಡ) ಪ್ರಕರಣ ಮತ್ತು ಶ್ರೀ ದತಾರ್ ರವರ ವಾದವನ್ನು ಪರಿಶೀಲಿಸಿದ ತ್ರಿಸದಸ್ಯ ಪೀಠವು, 08.08.18 ರಂದು ಸುರೇಶ್ ಕುಮಾರ್ ಕೌಶಲ್ ಪ್ರಕರಣದ (ಮೇಲ್ಕಂಡ) ಸಾಮಂಜಸ್ಯದ ವಿಚಾರಣೆಯನ್ನು ದೊಡ್ಡ ಪೀಠಕ್ಕೆ ವರ್ಗಾಯಿಸುವ ನಿರ್ಧಾರ ಕೈಗೊಂಡಿತು. ಈ ಪ್ರಕಾರವಾಗಿ ಸದರಿ ವಿಷಯವು ನಮ್ಮೆದುರು ಬಂದಿದೆ.

## 377ನೇ ಪರಿಚ್ಛೇದದ ಇತಿಹಾಸ

7. ಪಾಶ್ಚಿಮಾತ್ಯ ಪ್ರಪಂಚದಲ್ಲಿ, ಜುಡಾಯಿಸಂ ಮತ್ತು ಕ್ರೈಸ್ತ ಧರ್ಮಗಳು ಒಂದೇ ಲಿಂಗದ ಜೋಡಿಗಳ ನಡುವಿನ ಲೈಂಗಿಕ ಸಂಭೋಗವನ್ನು ಕಾನೂನುಬಾಹಿರಗೊಳಿಸಿದ್ದ ಕಾರಣದಿಂದ, ಅಂತಹ ಅಪರಾಧಗಳ ವಿಚಾರಣೆಯನ್ನು ಚರ್ಚಿನ ನ್ಯಾಯಪೀಠಗಳೇ ನಡೆಸುತ್ತಿದ್ದುವು. ಇಂಗ್ಲಂಡಿನ ರೋಮನ್ ಕ್ಯಾಥೋಲಿಕ್ ಚರ್ಚಿನಿಂದ ಹೊರಬಿದ್ದ 8ನೇ ಹೆನ್ರಿಯ ಶಾಸನಕಾಲದ ಕಾನೂನಾದ 1533 ರ ಬಗ್ಗರಿ ಆಕ್ಟ್" ಮನುಷ್ಯರು ಅಥವಾ ಪ್ರಾಣಿಯೊಂದಿಗೆ ನಡೆಸುವ "ಹೇಸಿಗೆ ಹುಟ್ಟಿಸುವ ಮತ್ತು ಅನೈತಿಕ ಅಪರಾಧ" ವನ್ನು ನಿಷೇಧಿಸಿತು.

8. ನಂಬಲರ್ಹ ಅಂಕಿಸಂಖ್ಯೆಗಳ ಆರಂಭಕಾಲವಾದ 1806 ರಿಂದ 1900ರ ನಡುವೆ ಇಂಗ್ಲೆಂಡ್ ಮತ್ತು ವೇಲ್ಸ್‌ನಲ್ಲಿ 8,921 ಪುರುಷರ ಮೇಲೆ ಗುದಸಂಭೋಗ, ಅಸಭ್ಯತೆ ಮತ್ತು ಇತರ "ಅನೈಸರ್ಗಿಕ ದುರ್ನಡತೆ" ಗಳ ದೋಷಾರೋಪಣೆ ಹೊರಿಸಲಾಯಿತು ಈ ಅವಧಿಯಲ್ಲಿ. ವರ್ಷವೊಂದಕ್ಕೆ ಸರಾಸರಿ ತೊಂಬತ್ತು ಪುರುಷರ ಮೆಲೆ, ಸಮಲೈಂಗಿಕ ಅಪರಾಧಗಳ ದೋಷಾರೋಪಣೆ ಹೊರಿಸಲಾಯಿತು. ಇವರಲ್ಲಿ ಸುಮಾರು ಮೂರನೇ ಒಂದು ಭಾಗ ಆರೋಪಿತರನ್ನು ಬಂಧಿಸಿ ಮತ್ತು ಅವರ ಪ್ರಕರಣವನ್ನು ನ್ಯಾಯಾಧೀಶರಿಗೆ ಒಪ್ಪಿಸಲಾಯಿತು. ಅಪರಾಧ ಸಾಬೀತಾದ ಬಂಧಿಸಲಾಯಿತು. ಆದರೆ 1806 ಮತ್ತು 1861ರ ನಡುವೆ ಗುದಸಂಭೋಗಕ್ಕಿದ್ದ ಸಾವಿನ ಶಿಕ್ಷೆ ಕೊನೆಗೂ ರದ್ದುಗೊಳಿಸುವಷ್ಟರಲ್ಲಿ, 404 ಜನರಿಗೆ ಮರಣದಂಡನೆ ಘೋಷಿಸಲಾಗಿತ್ತು. ಇವರಲ್ಲಿ ಐವತ್ತಾರು ಮಂದಿಗೆ ಮರಣದಂಡನೆ ನೀಡಿ, ಮತ್ತು

ಉಳಿದವರನ್ನು ಜೀವಾವಧಿ ಶಿಕ್ಷೆಗಾಗಿ ಆಸ್ಟ್ರೇಲಿಯಾಕ್ಕೆ ಸಾಗಿಸಲಾಗಿತ್ತು. 27 ನವೆಂಬರ್, 1835ರಂದು ಮರಣದಂಡನೆಗೊಳಗಾದ ಜೇಮ್ಸ್ ಪ್ರ್ಯಾಟ್ ಮತ್ತು ಜಾನ್ ಸ್ಮಿತ್, ಗುದಸಂಭೋಗಕಾಗಿ ಬ್ರಿಟನ್ ನಲ್ಲಿ ಮರಣದಂಡನೆ ಪಡೆದವರಲ್ಲಿ ಕೊನೆಯವರಾಗಿದ್ದರು.

9. ಈಸ್ಟ್ ಇಂಡಿಯಾ ಕಂಪನಿಯ ಭಾರತದಲ್ಲಿ ಆಳ್ವಿಕೆ ನಡೆಸುತ್ತಿದ್ದ ಕಾಲದಲ್ಲಿ, ಸಂಸತ್ತು, 1833ರಲ್ಲಿ ಭಾರತೀಯ ಕಾನೂನು ಆಯೋಗವನ್ನು ರಚಿಸಿ, ಥಾಮಸ್ ಬಾಬಿಂಗ್ಟನ್ ಮಕಾಲೆಯನ್ನು ಆಯೋಗದ ಅಧ್ಯಕ್ಷರನ್ನಾಗಿ ನೇಮಿಸಿತು. ಮೆಕಾಲೆ ನೇತೃತ್ವದ ಭಾರತೀಯ ಕಾನೂನು ಆಯೋಗವು 14.10.1837 ರಂದು ದಂಡ ಸಂಹಿತೆಯ ಕರ ಭಾರತ ಸರ್ಕಾರಕ್ಕೆ ಸಲ್ಲಿಸಿತು. ಈ ಕರಡು 488 ವಿಧಿಗಳನ್ನು ಒಳಗೊಂಡಿತ್ತು. 23.07.1846 ರಂದು ಮೊದಲ ವರದಿ ಸಲ್ಲಿಸಿದ ನಂತರ, 24.06.1847 ರಂದು ಸಿ.ಎಚ್. ಕ್ಯಾಮೆರಾನ್ ಮತ್ತು ಡಿ. ಎಲಿಯಟ್ ರವರು ಸದರಿ ಕಾನೂನನ್ನು ಪರಿಷ್ಕರಿಸಿ ಮತ್ತು ಗಟ್ಟಿಗೊಳಿಸುವುದಕ್ಕೆ ಸಂಬಂಧಿಸಿದಂತೆ, ಘನತೆವೆತ್ತ ಮಹಾರಾಣಿಯ ಆಯುಕ್ತರ ಎರಡನೇ ವರದಿಯನ್ನು ಸಲ್ಲಿಸಿದರು.

10. ದಂಡ ಸಂಹಿತೆಯು ಬಹುತೇಕ ಪೂರ್ಣಗೊಂಡಿದ್ದು, ಕೆಲ ಮಾರ್ಪಾಡುಗಳೊಂದಿಗೆ, ಕಾರ್ಯರೂಪಕ್ಕೆ ಬರಲು ಸಿದ್ಧವಾಗಿವೆ ಎಂದು ಈ ಕಮಿಷನರ್‌ಗಳು ತೀರ್ಮಾನಿಸಿದರು. ದಂಡ ಸಂಹಿತೆಯ ಪರಿಷ್ಕೃತ ಆವೃತ್ತಿಯನ್ನು 30.05.1851 ರಂದು ಕಲ್ಕತ್ತಾ ಸರ್ವೋಚ್ಛ ನ್ಯಾಯಾಲಯ ಮತ್ತು ಅಲ್ಲಿಯ ಸಡ್ಡರ್ ನ್ಯಾಯಾಲಯದ ನ್ಯಾಯಾಧೀಶರಿಗೆ ಕಳುಹಿಸಲಾಯಿತು.

11. ಭಾರತೀಯ ಶಾಸನ ಸಭೆಯ ಶಾಸಕ ಸದಸ್ಯರಾದ ಶ್ರೀಯುತ ಬೆಥೂನ್ ರವರು, ಕಲ್ಕತ್ತಾದಲ್ಲಿದ್ದ ಸರ್ವೋಚ್ಛ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಮತ್ತು ಶ್ರೀಯುತ ಜಸ್ಟಿಸ್ ಬುಲ್ಲರ್ರ ಮತ್ತು ಜಸ್ಟಿಸ್ ಕೊಲ್ವಿಲೆರ ಅಭಿಪ್ರಾಯದೊಂದಿಗೆ ತಯಾರಿಸಿದ ದಂಡ ಸಂಹಿತೆಯ ಪರಿಷ್ಕೃತ ಆವೃತ್ತಿಯನ್ನು ಲಂಡನ್ನಿನ ಕಂಪನಿಗೆ ಕಳುಹಿಸಲಾಯಿತು. ಲಂಡನ್ ನ್ಯಾಯಾಲಯದ ನಿರ್ದೇಶಕರು ಈ ದಂಡ ಸಂಹಿತೆಯು ಸಾಧ್ಯವಾದಷ್ಟು ಬೇಗ ಜಾರಿಯಾಗುವುದರ ಬಗೆಗೆ. ಅದಕ್ಕಾಗಿ ಅವರು ಸಭೆಯೊಂದನ್ನು ರಚಿಸಿ ಅದಕ್ಕೆ ಸರ್ ಬರ್ನ್ಸ್ ಪೀಕಾಕ್ ರವರನ್ನು ನಾಲ್ಕನೇ ಸದಸ್ಯರಾಗಿ ನೇಮಿಸಿದರು.

12. ಈ ಸಮಿತಿಯು ಪರಿಷ್ಕೃತ ದಂಡ ಸಂಹಿತೆಯನ್ನು ತಯಾರಿಸಿ 1857ರಲ್ಲಿ ಅದನ್ನು ಸೆಲೆಕ್ಟ್ ಸಮಿತಿಗೆ ವರ್ಗಾಯಿಸಿತು. 1857ರ ಭಾರತೀಯ ದಂಗೆಯ ಹಿನ್ನೆಲೆಯಲ್ಲಿ, ಈ ಸಂಹಿತೆಯನ್ನು 1860ರ ಅಕ್ಟೋಬರ್ ನಲ್ಲಿ ಶೀಘ್ರವಾಗಿ ಮಂಡಿಸಿ 01.01.1862 ರಂದು ಜಾರಿಗೊಳಿಸಲಾಯಿತು. ಸರ್ ಜೇಮ್ಸ್ ಫಿಟ್ಜ್‌ಜೇಮ್ಸ್ ಸ್ಟೀಫನ್ ಹೀಗೆಂದು ಘೋಷಿಸಿದರು:

> "ಭಾರತೀಯ ದಂಡ ಸಂಹಿತೆ ಮತ್ತು ಇಂಗ್ಲಿಷ್ ಕ್ರಿಮಿನಲ್ ಕಾನೂನಿನ ನಡುವೆ ಇರುವ ಸಂಬಂಧವು, ತಯಾರಿಸಲಾದ ವಸ್ತುವಿಗೂ, ಅದನ್ನು ತಯಾರಿಸಲು ಬಳಸುವ ಪರಿಕರಗಳಿಗೂ ಇರುವ ಸಂಬಂಧದ ಹಾಗೇ ಇದೆ. ಅಲ್ಲದೇ ಭಾರತೀಯ ದಂಡ ಸಂಹಿತೆ, ಫ್ರೆಂಚ್ ದಂಡ ಸಂಹಿತೆ ಮತ್ತು 1871 ರ ಉತ್ತರ ಜರ್ಮನಿಯ ಸಂಹಿತೆಗಳ ನಡುವಿನ ಸಂಬಂಧ ಕೂಡಾ, ಒಂದು ಮುಗಿದ ಚಿತ್ರಕ್ಕು, ಅದರ ಸ್ಥೂಲ ನಕ್ಷೆಗೂ ಇರುವ ಸಂಬಂಧವನ್ನು ಹೋಲುತ್ತದೆ ಎಂದು ಹೇಳಬಹುದು. ಲೂಯಿಸಿಯಾನದ ಲಿವಿಂಗ್ಸ್ಟನ್ ಸಂಹಿತೆಗೆ ಹೋಲಿಸಿದರೆ ಈ ಸಂಹಿತೆಯು ಬಹಳವೇ ಸರಳವಾಗಿದ್ದು ಇದಕ್ಕೆ ಉತ್ತಮವಾದ ಸ್ಪಷ್ಟತೆಯಿದೆ, ಅಲ್ಲದೆ ಈ ಸಂಹಿತೆಯು ಪರಿಪೂರ್ಣವಾದ ಪ್ರಾಯೋಗಿಕ ಯಶಸ್ಸನ್ನು ಕಂಡಿದೆ.

13. ಅವರು ದಂಡ ಸಹಿತೆಯನ್ನು ಮತ್ತಷ್ಟು ವಿವರಿಸುತ್ತಾರೆ: -

> ಇಂಗ್ಲೆಂಡಿನ ಕ್ರಿಮಿನಲ್ ಕಾನೂನಿನಿಂದ ಅತಿಯಾದ ತಾಂತ್ರಿಕತೆ ಮತ್ತು ಅನಗತ್ಯ ವಿವರಗಳನ್ನು

> ತೆಗೆದುಹಾಕಿ, ಅದನ್ನು ವ್ಯವಸ್ಥಿತವಾಗಿ ಮರುಜೋಡಿಸಿ, ಅದರಲ್ಲಿನ ಕೆಲ ವಿಚಾರಗಳನ್ನು (ಅಂಥವು ಅಚ್ಚರಿಹುಟ್ಟಿಸುವಷ್ಟು ಕಡಿಮೆಯಿವೆ) ಬ್ರಿಟಿಷ್ ಭಾರತಕ್ಕೆ ಹೊಂದುವಂತೆ ಬದಲಾಯಿಸಿದರೆ, ಅದು ಭಾರತೀಯ ದಂಡ ಸಂಹಿತೆಯ ರೂಪ ಪಡೆಯುತ್ತದೆ.

14. ಲಾರ್ಡ್ ಮೆಕಾಲಯ ಪ್ರಕಾರ, ಒಳ್ಳೆಯ ಸಂಹಿತೆಯೊಂದು ನಿಖರತೆ ಮತ್ತು ಸಮಗ್ರತೆ ಎಂಬ ಗುಣಗಳನ್ನು ಹೊಂದಿರಬೇಕು. ಅವರು, ಸಂಹಿತೆಯ ರಚನೆಗೆ ನೇಮಿಸಿದ್ದ ಸಮಿತಿಯಲ್ಲಿದ್ದ ಭಾರತದ ಗವರ್ನರ್ ಜನರಲ್ ಲಾರ್ಡ್ ಆಕ್ಲೆಂಡ್ಗೆ ಕರಡು ದಂಡ ಸಂಹಿತೆಯ ಜೊತೆಯಲ್ಲಿ ಕಳುಹಿಸಿದ ಪತ್ರದಲ್ಲಿ, ಹೀಗೆ ಹೇಳುತ್ತಾರೆ:

> "ಶಾಸಕನೊಬ್ಬ ಕಾನೂನುಗಳನ್ನು ರಚಿಸುವಾಗ ಸದಾ ಗಮನದಲ್ಲಿಡಬೇಕಾದ ಎರಡು ವಿಷಯಗಳಿವೆ: ಮೊದಲನೆಯದಾಗಿ ಆ ಕಾನೂನುಗಳು ಸಾಧ್ಯವಾದಷ್ಟೂ ನಿಖರವಾಗಿರಬೇಕು; ಮತ್ತು ಎರಡನೆಯದಾಗಿ ಅವುಗಳು ಇತರರಿಗೆ ಸುಲಭವಾಗಿ ಅರ್ಥವಾಗಬೇಕು. ಕಾನೂನನ್ನು, ಅದರಲ್ಲೂ ವಿಶೇಷವಾಗಿ ದಂಡನೆಯ ಕಾನೂನನ್ನು ಅವುಗಳನ್ನು ಪಾಲಿಸುವವರಿಗೆ ಅರ್ಥವಾಗದಂತೆ ರಚಿಸುವುದು ಸರಿಯಲ್ಲ. ಮತ್ತೊಂದೆಡೆ, ಬಿಗಿಯಾದ ಪದಗಳಳ್ಳಿ ಮಾತನಾಡುವ ಕಾನೂನು, ಕಾನೂನೇ ಅಲ್ಲ, ಅಲ್ಲದೇ, ಶಾಸಕಾಂಗವೊಂದು ಎಷ್ಟರ ಮಟ್ಟಿಗೆ ಕಾನೂನನ್ನು ಅಸ್ಪಷ್ಟವಾಗಿ ವ್ಯಕ್ತಪಡಿಸುತ್ತದೋ, ಅದು ಅಷ್ಟರ

> ಮಟ್ಟಿಗೆ ತನ್ನ ಕಾರ್ಯಗಳನ್ನು ತ್ಯಜಿಸಿ, ಕಾನೂನನ್ನು ರಚಿಸುವ ಅಧಿಕಾರವನ್ನು ನ್ಯಾಯಾಲಯಗಳಿಗೆ ಬಿಟ್ಟುಕೊಡುತ್ತದೆ "

15. ಸಂಹಿತೆಯನ್ನು ಹೊರತರುವಲ್ಲಿ ಆದ ವಿಳಂಬವನ್ನು ಟೀಕಿಸಿದಾಗ, ಬಹುಬೇಗ ನೊಂದುಕೊಂಡ ಅವರು, ಲಾರ್ಡ್ ಆಕ್ಲೆಂಡ್ಗೆ ನೀಡಿದ ಟಿಪ್ಪಣಿಯೊಂದರಲ್ಲಿ ಈ ರೀತಿ ನುಡಿದರು:

> ನನ್ನ ಸ್ವದೇಶದಲ್ಲಿನ ಕಾನೂನು-ಸುಧಾರಣೆಯ ನಿಧಾನ ಗತಿಯನ್ನು ನೆನೆದು, ಈ ಸಂಹಿತೆಯು, ಇಂಗ್ಲೆಂಡಿನಲ್ಲಿ ಹಲ ಬಗೆಯ ವಿವಾದಗಳನ್ನೂ, ಪ್ರಚಂಡ ಚರ್ಚೆಗಳನ್ನೂ ಹುಟ್ಟುಹಾಕಬಲ್ಲ ನೂರಾರು ವಿಚಾರಗಳನ್ನು ನಿರ್ಧರಿಸುತ್ತದೆ ಎಂದು ಪರಿಗಣಿಸಿದಾಗ, ನನಗೆ ಸಂಹಿತೆ ಹೊರತರಲು ಆಗುತ್ತಿರುವ ವಿಳಂಬಕ್ಕಿಂತ ಅದರಿಂದ ಆಗಬಹುದಾದ ಕೆಟ್ಟ ಪರಿಣಾಮಗಳ ಬಗೆಗೆ ಅಪರಾಧ ಪ್ರಜ್ಞೆಯಿದೆ ಎಂಬುದನ್ನು ಒಪ್ಪಿಕೊಳ್ಳಬಯಸುತ್ತೇನೆ .

16. ಇದಕ್ಕೆ ಮುನ್ನ, ತಮ್ಮ ಸಮಿತಿಗೆ 04.06.1835 ರಂದು ನೀಡಿದ ಟಿಪ್ಪಣಿಯಲ್ಲಿ, ತಮ್ಮ ಯೋಜನೆಯ ಮುಖ್ಯ ಉದ್ದೇಶವನ್ನು ವಿವರಿಸಿದ್ದರು, ಅದನ್ನು ಈ ಕೆಳಗಿನಂತೆ ಬರೆಯಬಹುದಾಗಿದೆ.

> ಅದು ಈಗಿರುವ ಕಾನೂನುಗಳ ಬರಿಯ ಸಂಗ್ರಹವಷ್ಟೇ ಆಗಿರದೇ, ಎಲ್ಲ ಬಗೆಯ ನಿದರ್ಶನಗಳನ್ನೂ ಒಳಗೊಂಡಿರಬೇಕು ಮತ್ತು "ಸಂಹಿತೆಯಲ್ಲಿ ಇರದಿರುಡುವ ಯಾವ ವಿಚಾರವೂ ಕಾನೂನಾಗುವಂತಿರಬಾರದು".

> ಅದು ಪಾತಕವನ್ನು ಸಾಧ್ಯವಾದಷ್ಟೂ ಕಡಿಮೆ ಹಾನಿ/ ನೋವಾಗದಂತೆ ಹತೋಟಿಯಲ್ಲಿಡಬೇಕು ಮತ್ತು ಆದಷ್ಟೂ ಕಡಿಮೆ ಸಮಯ ಮತ್ತು ಖರ್ಚಿನಲ್ಲಿ ಸತ್ಯವನ್ನು ಅರಿಯಲು ಸಹಾಯಮಾಡಬೇಕು.
>
> ಅದರ ಭಾಷೆಯು ಸ್ಪಷ್ಟ, ನಿಷ್ಪಕ್ಷಪಾತ ಮತ್ತು ಚುಟುಕಾಗಿರಬೇಕು. ಪ್ರತಿ ಪಾತಕ ಕೃತ್ಯವನ್ನೂ ಬಿಡಿಯಾಗಿ ವ್ಯಾಖ್ಯಾನಿಸಬೇಕು, ಆರೋಪವನ್ನು ಕಾನೂನಿನ ಭಾಷೆಯಲ್ಲೇ ನಿಖರವಾಗಿ ವಿವರಿಸಬೇಕು ಮತ್ತು ಪಾತಕ ಕೃತ್ಯವು ಕಾನೂನಿನ ವ್ಯಾಖ್ಯಾನಕ್ಕೆ ಅನುಗುಣವಾಗಿರಬೇಕು.
>
> ಏಕರೂಪತೆ ಅದರ ಮುಖ್ಯ ಉದ್ದೇಶವಾಗಿರಬೇಕು, ಅಲ್ಲದೇ ಇತರ ಜನಾಂಗ ಅಥವಾ ಪಂಗಡಗಳಿಗೆ ಸಂಬಂಧಿಸಿದ ವ್ಯಾಖ್ಯಾನಗಳು, ಕ್ರಮಗಳು ಅಥವಾ ಇತರ ವಿಚಾರಗಳನ್ನು ಹೊಂದಿರಬಾರದು, ಮತ್ತು ಅವನ್ನು ಹೊಂದಿರಬೇಕಿದ್ದರೆ ಅದಕ್ಕೆ ಬಲವಾದ ಕಾರಣಗಳಿರಬೇಕು

17. ಇಲ್ಲಿ ಆಸಕ್ತಿಕರವೆಂದರೆ, 377ನೇ ಪರಿಚ್ಛೇದದ ರೂಪದಲ್ಲಿ ಜಾರಿಯಾದ ಕಾನೂನಿಗೂ, ಮೆಕಾಲೆಯ ಕರಡಿಗೂ ಬಹಳಷ್ಟು ವ್ಯತ್ಯಾಸಗಳಿದ್ದವು. ಮೆಕಾಲೆಯ ಮೂಲ ಕರಡು ಹೀಗೆ ಹೇಳುತ್ತದೆ:-

> 361. ಯಾರಾದರೂ ತಮ್ಮ ಅನೈಸರ್ಗಿಕ ಕಾಮನೆಗಳನ್ನು ತೀರಿಸಿಕೊಳುವ ಸಲುವಾಗಿ, ಯಾವುದೇ ವ್ಯಕ್ತಿ ಮತ್ತು ಪ್ರಾಣಿಯನ್ನು ಮುಟ್ಟಿದರೆ ಅಥವಾ ತನ್ನದೇ ಒಪ್ಪಿಗೆಯಿಂದ ಇತರರ ಅನೈಸರ್ಗಿಕ ಕಾಮನೆಯನ್ನು ತೀರಿಸಲು

> ಮುಟ್ಟಿಸಿಕೊಂಡರೆ ಅವರಿಗೆ ಎರಡರಿಂದ ಹದಿನಾಲ್ಕು ವರ್ಷಗಳವರೆಗಿನ ಅವಧಿಯ ಸೆರೆವಾಸ ವಿಧಿಸಿ ದಂಡವನ್ನೂ ವಸೂಲು ಮಾಡಲಾಗುತ್ತದೆ.
>
> 362. ಯಾರಾದರೂ ತಮ್ಮ ಅನೈಸರ್ಗಿಕ ಕಾಮನೆಗಳನ್ನು ತೀರಿಸಿಕೊಳ್ಳಲು ಇತರರನ್ನು ಅವರ ಮುಕ್ತ ಮತ್ತು ಜಾಗೃತ ಒಪ್ಪಿಗೆಯಿಲ್ಲದೇ ಮುಟ್ಟಿದರೆ ಅವರಿಗೆ ಏಳು ವರ್ಷದಿಂದ ಮೇಲ್ಪಟ್ಟು ಜೀವಾವಧಿಯವರೆಗೆ ಸೆರೆವಾಸ ವಿಧಿಸಿ ದಂಡವನ್ನೂ ವಸೂಲು ಮಾಡಲಾಗುತ್ತದೆ.

18. ಅನೈಸರ್ಗಿಕ ಕಾಮನೆಯನ್ನು ಈಡೇರಿಸಿಕೊಳ್ಳಲು ಮತ್ತೊಬ್ಬ ವ್ಯಕ್ತಿಯನ್ನು ಅವರ ಮುಕ್ತ ಮತ್ತು ಜಾಗೃತ ಅನುಮತಿಯಿಲ್ಲದೆ ಮುಟ್ಟಿದರೆ ಅದಕ್ಕೆ ಜೀವಾವಧಿವರೆಗೂ ವಿಸ್ತರಿಸಬಲ್ಲ ಸೆರೆವಾಸ (ಏಳು ವರ್ಷ ಮೇಲ್ಪಟ್ಟು) ಮತ್ತು ಅದೇ ತಪ್ಪನ್ನು ಮತ್ತೊಬ್ಬರ ಆನುಮತಿಯಿದ್ದೂ ಮಾಡಿದರೆ ಅದಕ್ಕೆ ಅತಿ  ಹೆಚ್ಚು, ಎಂದರೆ, ಹದಿನಾಲ್ಕು ವರ್ಷಗಳ ಸೆರೆವಾಸ (ಎರಡು ವರ್ಷ ಮೇಲ್ಪಟ್ಟು) ವಿಧಿಸುತ್ತಿದ್ದರು ಎಂಬುದು ಮೆಕಾಲೆ ಬದುಕಿದ್ದ ಕಾಲದ ಮಟ್ಟಿಗೆ ಅತ್ಯಂತ ವಿಶೇಷವಾದ ಸಂಗತಿ. ಲಾರ್ಡ್ ಮೆಕಾಲೆ ಅನೈಸರ್ಗಿಕ ಕಾಮದ ಪಾತಕಕ್ಕೆ ಮತ್ತೊಬ್ಬರ ಒಪ್ಪಿಗೆಯಿದ್ದರೆ ಕಡಿಮೆ ಶಿಕ್ಷೆ ವಿಧಿಸಿದ್ದು, ಇಂಗ್ಲೀಷ್ ಇತಿಹಾಸದ ಆ ಕಾಲದ ಮಟ್ಟಿಗೆ ಬಹಳ ಪ್ರಬುದ್ಧ ನಿಲುವಾಗಿತ್ತು. ಅವರು ಬದುಕಿದ್ದ ಯುಗಧರ್ಮಕ್ಕೆ ತಕ್ಕಂತೆ ಈ ವಿಷಾದ ಮೇಲೆ ಚರ್ಚೆ ನಡೆಯುವುದನ್ನು ತಪ್ಪಿಸಲು ಈ ಕೆಳಗಿನಂತೆ ನುಡಿಯುತ್ತಾರೆ .

> 361 ಮತ್ತು 362ನೇ ಷರತ್ತುಗಳು ಅತ್ಯಂತ ಹೀನಾಯವಾದ ಅಪರಾಧಗಳಿಗೆ ಸಂಬಂಧಿಸಿವೆ, ಹಾಗಾಗಿ ಅದರ ಬಗ್ಗೆ ಎಷ್ಟು ಸಾಧ್ಯವೋ ಅಷ್ಟು ಕಡಿಮೆ ಹೇಳುವುದು ಒಳ್ಳೆಯದು. ಈ ಅಪರಾಧಗಳಿಗೆ ಸಂಬಂಧಿಸಿದ ಷರತ್ತುಗಳಿಗೆ ನಾವು ಯಾವುದೇ ವಿವರನೆಯನ್ನೂ ನೀಡುವುದಿಲ್ಲವೆಂದು

ಘನತೆವೆತ್ತ ಸಮಿತಿಗೆ ತಿಳಿಸುತ್ತಿದ್ದೇವೆ. ಈ ಅಸಹ್ಯಕರ ಅಪರಾಧಗಳ ಬಗೆಗೆ ಸಾರ್ವಜನಿಕರ ನಡುವೆ ಚರ್ಚೆ ಹುಟ್ಟಿಹಾಕಬಹುದಾದ ಯಾವುದೇ ರೀತಿಯ ವಿವರಣೆಯನ್ನು ಕರಡಿನಲ್ಲಿ ಅಥವಾ ಟಿಪ್ಪಣಿಯಲ್ಲಿ ಹಾಕಲು ನಾವು ಬಯಸುವುದಿಲ್ಲ. ಯಾಕೆಂದರೆ ಅಂತಹ ಚರ್ಚೆಗಳು ಸಮಾಜದ ನೈತಿಕತೆಯನ್ನು ಘಾಸಿಗೊಳಿಸುತ್ತವೆ ಮತ್ತು ಆ ನಷ್ಟವನ್ನು ಯಾವುದೇ ಬಗೆಯ ಜಾಗರೂಕತೆಯಿಂದ ರಚಿಸಿದ ಕಾನೂನಿಂದಲೂ ತುಂಬಿಕೊಡಲು ಸಾಧ್ಯವಾಗುವುದಿಲ್ಲ ಎಂದು ನಾವೆಲ್ಲ ಒಟ್ಟಾಗಿ ನಂಬುತ್ತೇವೆ.

(ಒತ್ತು ನೀಡಲಾಗಿದೆ)

19. 1837ನೇ ಇಸವಿಯ ನಂತರದ ಕಾನೂನು ರಚನೆಯ ಯಾವ ಹಂತದಲ್ಲಿ ಮತ್ತು ಯಾವ ವ್ಯಕ್ತಿ ಮತ್ತು ಸಮಿತಿಗಳ ದೇಖರೇಖಿಯಲ್ಲಿ 377ನೇ ಪರಿಚ್ಛೇದ ತನ್ನ ಅಂತಿಮ ರೂಪ ಪಡೆಯಿತು ಎಂಬುದು ಸ್ಪಷ್ಟವಿಲ್ಲ. ಆದಾಗ್ಯೂ ಸರ್ ಬಾರ್ನೇಸ್ ಪೀಕಾಕ್ ಸಮಿತಿ ಈಗ ಜಾರಿಯಲ್ಲಿರುವ 377ನೇ ಪರಿಚ್ಛೇದದವನ್ನು ಹೋಲುವ ಕರಡನ್ನು ಕಡೆಯದಾಗಿ ಕಳುಹಿಸಿಕೊಟ್ಟಿತು ಎಂಬುದು ಸ್ಪಷ್ಟವಾಗಿದೆ.

20. ಭಾರತೀಯ ದಂಡ ಸಂಹಿತೆಯ 150 ವರ್ಷಕ್ಕೂ ಹೆಚ್ಚಿನ ಆಯಸ್ಸಿಗೆ ಹೋಲಿಸಿದರೆ ಅದಕ್ಕೆ ಮಾಡಿದ ತಿದ್ದುಪಡಿಗಳು ಅಚ್ಚರಿಯಾಗುವಷ್ಟು ಕಡಿಮೆಯಿವೆ. ಈ ದೇಶದ ಇತಿಹಾಸದ ಮೊದಲ ಹಂತದಲ್ಲಿ ಹೊರಬಂದ 42ನೇ ಕಾನೂನು ಆಯೋಗದ ವರದಿಯೂ 377ನೇ ಪರಿಚ್ಛೇದದ ರದ್ದತಿ ಅಥವಾ ತಿದ್ದುಪಡಿಯನ್ನು ಶಿಫಾರಸು ಮಾಡಲಿಲ್ಲ. 2000ನೇ ಇಸವಿಯಲ್ಲಿ (172ನೇ ವರದಿ) ಹೊರಬಂದ ನ್ಯಾಯಮೂರ್ತಿ ಬಿ.ಪಿ. ಜೀವನ ರೆಡ್ಡಿರವರ ಕಾನೂನು ಆಯೋಗದ ವರದಿಯೂ, 377ನೇ ಪರಿಚ್ಛೇದದ ಹಿಂದಿರುವ ಪರಿಚ್ಛೇದಗಳನ್ನು ಬದಲಾಯಿಸಿ ನಂತರ 377 ಪರಿಚ್ಛೇದವನ್ನು ರದ್ದುಗೊಳಿಸುವಂತೆ ಶಿಫಾರಸು

ಮಾಡಿತು ಮತ್ತು ಆ ಮೂಲಕ, ಒಪ್ಪಿಗೆಯಿರುವ ವಯಸ್ಕರ (ಸಮಾನ ಲಿಂಗ ಅಥವಾ ಇತರೆ) ನಡುವಿನ ಗುದಸಂಭೋಗವನ್ನು ಶಿಕ್ಷಿಸಲು ಸಾಧ್ಯವಿಲ್ಲವೆಂಬುದನ್ನು ಸ್ಪಷ್ಟಪಡಿಸಲಾಯಿತು

## ಯುನೈಟೆಡ್ ಕಿಂಗ್ಡಮ್ ಕಾನೂನು

21. ಈ ತೀರ್ಪಿನಲ್ಲಿ ಈಗಾಗಲೇ ತಿಳಿಸಿರುವಂತೆ, ಸಮಾನ ಲಿಂಗದವರ ನಡುವಿನ ಸಂಭೋಗವನ್ನು ನಿರ್ಬಂಧಿಸುವ ಮೊತ್ತ ಮೊದಲ ಕಾನೂನನ್ನು 1533ನೇ ಇಸವಿಯಲ್ಲಿ 8ನೇ ಹೆನ್ರಿಯ ಆಳ್ವಿಕೆಯ ಕಾಲದಲ್ಲಿ ಜಾರಿಗೊಳಿಸಲಾಯಿತು. ಈ "ಪಾಪ"ದಲ್ಲಿ ಒಪ್ಪಿಗೆಯಿಂದ ತೊಡಗುವ ವಯಸ್ಕ ವ್ಯಕ್ತಿಗೆ ಕೂಡಾ ಮರಣದಂಡನೆ ವಿಧಿಸಲಾಗಿತ್ತು. ಆಸ್ಕರ್ ವೈಲ್ಡ್ ರವರಂತಹ ವ್ಯಕ್ತಿಗಳ ವಿಚಾರಣೆಗಳು, ಅವರಿಗೆ ಶಿಕ್ಷೆ ವಿಧಿಸಿದ 60 ವರ್ಷಗಳ ನಂತರ, ಯು.ಕೆ.ನಲ್ಲಿ ಕಾನೂನು ಸುಧಾರಣೆಗೆ ದಾರಿಮಾಡಿಕೊಟ್ಟವು.

22. ಕ್ವೀನ್ಸ್ಬೇರಿಯ ಮಾರ್ಕ್ವೆಸ್ಸಳಿಗೆ ತನ್ನ ಮಗ ಆಲ್ಫ್ರೆಡ್ ಡಗ್ಲಾಸ್ ಗೆ, ಆಸ್ಕರ್ ವೈಲ್ಡರೊಂದಿಗೆ ಸಂಬಂಧವಿರುವುದು ತಿಳಿದುಬರುತ್ತದೆ. ಮಾರ್ಕ್ವೆಸ್ಸಳು ಆಸ್ಕರ್ ವೈಲ್ಡರ ಕ್ಲಬ್ಬಿನಲ್ಲಿ ಅವರನ್ನು "ಸೋಡೋಮೈಟ್/ ಗುದಸಂಭೋಗಿ" ಎಂದು ಆಪಾದಿಸುವ ಪತ್ರವೊಂದನ್ನು ಇಡುತ್ತಾಳೆ ಮತ್ತು ಆ ಪತ್ರವೇ ಇಂಗ್ಲೆಂಡಿನ ಪ್ರಖ್ಯಾತ ಮಾನಹಾನಿ ವಿಚಾರಣೆಗೆ ದಾರಿಮಾಡಿಕೊಡುತ್ತದೆ. ಈ ವಿಚಾರಣೆಯ ಸಂದರ್ಭದಲ್ಲಿ ಸರ್ ಎಡ್ವರ್ಡ್ ಕಾರ್ಸನ್ ತನ್ನ ಖ್ಯಾತ ಸಾಕ್ಷಿಯೊಬ್ಬರ ಕೈಲಿ ಕೆಲ ಯುವಕರು ಸಾಮಾನ್ಯರೂ ಮತ್ತು ಕುರೂಪಿಗಳೂ ಆಗಿರುತಾರೆ ಎಂದು ಹೇಳಿಸಿದ್ದರ ಪರಿಣಾಮವಾಗಿ ಆಸ್ಕರ್ ವೈಲ್ಡ್ ಮೇಲಿನ ಅಪವಾದ ಸಾಬೀತಾಗುವಂತಾಯಿತು. ವಿಚಾರಣೆಗೆ ಒಳಗಾಗುವ ಬದಲು ಆಸ್ಕರ್ ವೈಲ್ಡ್ ತಾವು ಹೂಡಿದ್ದ ಮಾನಹಾನಿ ದಾವೆಯನ್ನು ಲಗುಬಗೆಯಿಂದ ಹಿಂಪಡೆಯುತ್ತಾರೆ, ಆದರೆ ಎಲ್ಲವೂ ಅಲ್ಲಿಗೇ ಮುಗಿಯಲಿಲ್ಲ. ಅಪರಾಧೀ ಕಾನೂನು ತಿದ್ದುಪಡಿ ಕಾಯ್ದೆ 1885ರ ಅಡಿಯಲ್ಲಿ ವಿಚಾರಣೆಯನ್ನು ಮುಂದುವರಿಸಲಾಯಿತು ಮತ್ತು ಆಸ್ಕರ್ ವೈಲ್ಡರಿಗೆ ಶಿಕ್ಷೆಯಾಗಿ ಅವರಿಗೆ ಎರಡು ವರ್ಷಗಳ ಕಾಲ ಸೆರೆವಾಸ ವಿಧಿಸಲಾಯಿತು. ತಮ್ಮ ಸೆರೆವಾಸ ಮುಗಿದ ನಂತರ ಅವರು ಮತ್ತೆಂದೂ ಚೇತರಿಸಿಕೊಳ್ಳಲೇ ಇಲ್ಲ ಮತ್ತು 46ರ ಸಣ್ಣ ವಯಸ್ಸಿನಲ್ಲೇ ಪ್ಯಾರಿಸ್‌ನಲ್ಲಿ ಬಡತನ ಮತ್ತು ಹತಾಶೆಯಲ್ಲೇ ಕೊನೆಯುಸಿರೆಳೆಯುತ್ತಾರೆ

23. ಬ್ರಿಟಿಷ್ ದ್ವೀಪಗಳಲ್ಲಿ ಬದಲಾವಣೆಯ ಗಾಳಿ ನಿಧಾನವಾಗಿ ಬೀಸಿತು ಮತ್ತು ಎರಡನೇ ವಿಶ್ವಯುದ್ಧದ ನಂತರ ಇತರ ವಿಚಾರಗಳ ಹೊರತಾಗಿ ಸಮಲೈಂಗಿಕ ಅಪರಾಧಗಳಿಗೆ ಸಂಬಂಧಿಸಿದ ಕಾನೂನನ್ನು ಪರಿಶೀಲಿಸಿ ಅಂತಹ ಅಪರಾಧಗಳಿಗೆ ನ್ಯಾಯಾಲಯದ ಶಿಕ್ಷೆ ಪಡೆದ ವ್ಯಕ್ತಿಗಳನ್ನು ಹೀಗೆ ನಡೆಸಿಕೊಳ್ಳಲಾಗುತ್ತದೆ ಎಂಬುದನ್ನು ತಿಳಿಯಲು 24.08.1940ನೇ ಇಸವಿಯಲ್ಲಿ ವೋಲ್ಫ್ಂಡೆನ್ ಸಮಿತಿಯನ್ನು ರಚಿಸಲಾಯಿತು. ಆ ಸಮಿತಿಯ ವರದಿ 1957ನೇ ಇಸವಿಯ ಸೆಪ್ಟೆಂಬರಿನಷ್ಟು ಹಳತಾದರೂ, ಓದಲು ಬಹಳ ಕುತೂಹಲಕಾರಿಯಾಗಿದೆ. ಆ ವರದಿಯ 31 ಮತ್ತು 32ನೇ ವಾಕ್ಯಗಳಲ್ಲಿ ಹೀಗೆ ಹೇಳಲಾಗಿದೆ:-

> ಸಮಲೈಂಗಿಕತೆ ಒಂದು ಖಾಯಿಲೆ ಎಂಬುದನ್ನು ಸಾಬೀತು ಪಡಿಸಿದರೂ ಕೂಡ, ಬಹಳ ಮಂಡಿ ಸಮಲೈಂಗಿಕರಲ್ಲಿ (ಅವರು ಹೀಗಾದರೂ ಆ ಸ್ಥಿತಿಗೆ ತಲುಪಿರಲಿ, ಅವರಲ್ಲಿ ಸಾಮಾಜಿಕ ಸಮಸ್ಯೆಗಳು ಕಾಣುತ್ತವೆಯೇ ಹೊರತು ವೈದ್ಯಕೀಯ ಸಮಸ್ಯೆಗಳು ಕಂಡುಬರುವುದಿಲ್ಲ ಹಾಗಾಗಿ ಈ ಸಮಸ್ಯೆಯನ್ನು ಸಾಮಾಜಿಕ ಮತ್ತು ಅಪರಾಧಶಾಸ್ತ್ರದ ಮೂಲಕ ಪರಿಹರಿಸಬೇಕು. ಸಮಲೈಂಗಿಕತೆ ಒಂದು ಖಾಯಿಲೆ ಮತ್ತು ಅದನ್ನು ಸರಿಪಡಿಸುವುದು ವೈದ್ಯಲೋಕದ ಜವಾಬ್ದಾರಿಯೆಂದು ನಂಬುವ ಸಂದರ್ಭದಲ್ಲಿ, ಮೇಲಿನ ನಿಲುವನ್ನು ತೆಗೆದುಕೊಳ್ಳುವುದು ಅಗತ್ಯವಾಗುತ್ತದೆ. ಸಮಲೈಂಗಿಕತೆ ಖಾಯಿಲೆಯೋ? ಎಂಬ ಸೈದ್ಧಾಂತಿಕ ಪ್ರಶ್ನೆಗಿಂತ, ಅದಕ್ಕೆ ಚಿಕಿತ್ಸೆಯನ್ನು ಒಬ್ಬ ವೈದ್ಯ ನೀಡಬೇಕೆ? ಎಂಬ ಪ್ರಾಯೋಗಿಕ ಪ್ರಶ್ನೆಯೇ ಮುಖ್ಯವಾಗುತ್ತದೆ. ಮನೋಚಿಕಿತ್ಸಕರು ಖಾಯಿಲೆಯೆಂದು ಪರಿಗಣಿಸಲು ಸಾಧ್ಯವಾಗದ ವ್ಯಕ್ತಿತ್ವಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು

ದಿನನಿತ್ಯ ನೋಡುತ್ತಿರುತ್ತಾರೆ ಮತ್ತು ಕೆಲ ಮಾನಸಿಕ ಸಮಸ್ಯೆಗಳಿಗೆ ವೈದ್ಯಕೀಯ ಚಿಕಿತ್ಸೆಗಿಂತ ವಾತಾವರಣದ ಬದಾಲವಣೆ ಅಥವಾ ಇತರ ವೈದ್ಯಕೀಯವಲ್ಲದ ಪರಿಹಾರಗಳೇ ಸಾಕಾಗುತ್ತವೆ. ಇದಕ್ಕೆ, ಮನೆಯಲ್ಲೇ ನಿರ್ವಹಿಸಬಹುದಾದ ಇಳಿವಯಸ್ಸಿನ ಮರೆವು ಅಥವಾ ದೀರ್ಘಕಾಲೀನ ಸ್ಕಿಝೂಫ್ರೀನಿಯಾದಂತಹ ಸಮಸ್ಯೆಗಳನ್ನು ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಹಾಗೆ ನೋಡಿದರೆ ನಡವಳಿಕೆಗೆ ಸಂಬಂಧಿಸಿದ ವೈಕಲ್ಯಗಳಿಗೆ ವೈದ್ಯಕೀಯ ಸಹಾಯ ಪಡೆದರೂ, ಅವುಗಳ ಚಿಕಿತ್ಸೆಯು ಮನೋಚಿಕಿತ್ಸೆ ಅಥವಾ ಇತರ ಕಟ್ಟುನಿಟ್ಟಿನ ವೈದ್ಯಕೀಯ ಚಿಕಿತ್ಸೆಗೆ ಸೀಮಿತವಾಗಿರುವುದಿಲ್ಲ. ಇದರ ಅರ್ಥ ಹಲವು ಸಮಲೈಂಗಿಕ ವ್ಯಕ್ತಿಗಳಿಗೆ ತಜ್ಞರ ಚಿಕಿತ್ಸೆಯ ಅಗತ್ಯವಿಲ್ಲ ಎಂಬುದಲ್ಲ. ಆದರೆ, ಸಮಲೈಂಗಿಕ ಅಪರಾಧಿಗಳ ಚಿಕಿತ್ಸೆಯ ವಿಚಾರದಲ್ಲಿ ನಾವು ಇನ್ನೂ ಹೀಸಿನ ವಿಚಾರಗಳನ್ನು ಪರಿಗಣಿಸಬೇಕಾಗುತ್ತದೆ

32. ಸಮಲೈಂಗಿಕತೆಯನ್ನು ಖಾಯಿಲೆ ಎಂದು ಪರಿಗಣಿಸಿದರೆ, ಅವರಿಗೆ ಅದರ ಮೇಲೆ ಹತೋಟಿಯಿಲ್ಲದಿರುವುದರಿಂದ ಅವರು ಮಾಡುವ ಕೃತ್ಯಗಳಿಗೆ ಅವರು ಸಂಪೂರ್ಣ ಜವಾಬ್ದಾರರಲ್ಲ ಎಂದು ಒಪ್ಪಿಕೊಂಡಂತಾಗುತ್ತದೆ. ಸಮಲೈಂಗಿಕತೆಯನ್ನು ಖಾಯಿಲೆ ಎಂದು ಒಪ್ಪಿಕೊಂಡರೂ, ಮೇಲೆ ತಿಳಿಸಿದ ತರ್ಕವನ್ನು ಒಪ್ಪಿಕೊಳ್ಳಲು ಬರುವುದಿಲ್ಲ. ವ್ಯಕ್ತಿಯೊಬ್ಬರಿಗೆ ತಮ್ಮದೇ

ಲಿಂಗದ ವ್ಯಕ್ತಿಗಳ ಮೇಲೆ ಸೆಳೆತವಿದ್ದ ಮಾತ್ರಕ್ಕೆ ಅವರು ಅದನ್ನು ಹತೋಟಿಯಲ್ಲಿ ಇಡಲು ಸಾಧ್ಯವಿಲ್ಲ, ಅಥವಾ ಅದು ಭಿನ್ನ ಲಿಂಗದವರ ನಡುವಿನ ಸೆಳೆತಕ್ಕಿಂತ ಭಿನ್ನಾವಾದುದು ಎಂಬುದಕ್ಕೆ ಯಾವುದೇ ನಿಖರವಾದ ಸಾಕ್ಷಿಗಳಿಲ್ಲ. ಮಾನಸಿಕ ಆಸ್ಪತ್ರೆಗಳಲ್ಲಿರುವ ಸಮಲೈಂಗಿಕ ರೋಗಿಗಳು, ಕೆಲವರನ್ನು ಹೊರತುಪಡಿಸಿ, ಹೆಚ್ಚಿನ ಜವಾಬ್ದಾರಿ ಮತ್ತು ಸ್ವನಿಯಂತ್ರಣ  ತೋರ್ಪಡಿಸ ಬಲ್ಲರು ಎಂಬುದು ನಮಗೆ ತಿಳಿದುಬಂದಿದೆ, ಉದಾಹರಣೆಗೆ ಅತಿ ಕಡಿಮೆ ಜನರನ್ನು ಮುಚ್ಚಿದ ಕೋಣೆಯಲ್ಲಿ ಕೂಡಿಹಾಕಲಾಗುತ್ತದೆ. ಸ್ವನಿಯಂತ್ರಣವೆಂಬುದು ವ್ಯಕ್ತಿಗಳಲ್ಲಿ ಸದಾಕಾಲ ಅಡಗಿರುವ ವಿಚಾರ, ಇದಕ್ಕೆ ಕೆಮ್ಮನ್ನು ಹತೋಟಿಯಲ್ಲಿಡುವುದನ್ನು ಉದಾಹರಣೆಯಾಗಿ ತೆಗೆದುಕೊಳ್ಳಬಹುದು.  ವ್ಯಕ್ತಿಯೊಬ್ಬರು ಎಷ್ಟರ ಮಟ್ಟಿಗೆ ತಮ್ಮನ್ನು ತಾವು ನಿಯಂತ್ರಣದಲ್ಲಿಟ್ಟುಕೊಳ್ಳಬಹುದು ಎಂಬ್ದು ಅವರ ವ್ಯಕ್ತಿತ್ವ ಮತ್ತು ತಾತ್ಕಾಲಿಕ ದೈಹಿಕ ಮತ್ತು ಭಾವನಾತ್ಮಕ ವಿಚಾರಗಳನ್ನು ಅವಲಂಬಿಸಿರುತ್ತದೆ. ಈ.ವ್ಯಕ್ತಿಗಳು ತಮ್ಮ ಕೃತ್ಯಗಳ ಜವಾಬ್ದಾರಿ ಹೊರಲು ಸಾಧ್ಯವಾಗದಿರುವ ಸ್ಥಿತಿಯಲ್ಲಿದ್ದಾರೆಯೇ ಎಂಬುದು ನಮ್ಮೆದುರಿಗಿರುವ ಮುಖ್ಯವಾದ ಪ್ರಶ್ನೆ. ಈ ಪ್ರಶ್ನೆಯು, ವ್ಯಕ್ತಿಯೊಬ್ಬ ಈಗ ತಾನಿರುವ ಸ್ತಿತಿಗೆ ತಾನೇ ಜಾವಾಬ್ದಾರನೇ ಎಂಬ ಪ್ರಶ್ನೆಗಿಂತ ಭಿನ್ನವಾದುದು. ಈ ವಿಚಾರ ಅತ್ಯಂತ ಕುತೂಹಲಕರವಾದುದು ಮತ್ತು ಇತರ

ಸಂದರ್ಭಗಳಲ್ಲಿ ಸಮಂಜಸವಾಗಿರಬಹುದು. ಆದರೆ ಸಧ್ಯದ ಪರಿಸ್ಥಿತಿಯಲ್ಲಿ ನಾವು ಯೋಚಿಸಬೇಕಿರುವುದು ವ್ಯಕ್ತಿಗಳ ಈಗಿನ ಸ್ತಿತಿಗೆ ಸಂಬಂಧಿಸಿದ ಅವರ ನಡವಳಿಕೆಗೆ ಅವರು ಎಷ್ಟರಮಟ್ಟಿಗೆ ಜವಾಬ್ದಾರರು ಎಂಬುದನ್ನು, ಮತ್ತು ಆ ಸ್ಥಿತಿಗೆ ಏನು ಕಾರಣ ಎಂಬುದು ಇಲ್ಲಿ ಮುಖ್ಯವಾಗುವುದಿಲ್ಲ. ಶಿಕ್ಷೆಗೊಳಗಾಗಿರುವ ವ್ಯಕ್ತಿಯನ್ನು ಹೀಗೆ ನಡೆಸಿಕೊಳ್ಳಬಹುದು ಎಂಬ ವಿಚಾರದಲ್ಲಿ ತಜ್ಞರ ಅಭಿಪ್ರಾಯಗಳು ಸಹಾಯಕ್ಕೆ ಬರುವ ಹಾಗೆ, ತನ್ನ ಕೃತ್ಯಗಳ ಮೇಲೆ ಅವನಿಗಿರುವ ಜವಾಬ್ದಾರಿಯನ್ನು ಯಾವ ಅಂಶಗಳು ಪ್ರಭಾವಿಸಿವೆ ಎಂಬನ್ನು ತಿಳಿದುಕೊಳ್ಳಲು ಕೂಡಾ ತಜ್ಞರ ಅಭಿಪ್ರಾಯದ ಅಗತ್ಯವಿದೆ.

24. ಈ ವರದಿಯ 36ನೇ ವಾಕ್ಯದಲ್ಲಿ, ಸಮಲೈಂಗಿಕತೆಯು ಸಮಾಜದ ಎಲ್ಲ ಸ್ಥರಗಳಲ್ಲಿಯೂ ಇದೆ ಮತ್ತು ಎಲ್ಲಾ ಬಗೆಯ ವೃತ್ತಿ ಮತ್ತು ವ್ಯಾಪಾರಗಳಲ್ಲಿ ಕಾಣಸಿಗುತ್ತದೆ ಎಂಬುದಕ್ಕೆ ಸಾಕ್ಷ್ಯಗಳಿರುವುದೇ ಎಂಬುದನ್ನು ಉಲ್ಲೇಖಿಸಲಾಗಿದೆ. ವಾಕ್ಯದಲ್ಲಿ ಪ್ರಸ್ತುತ ಕಾನೂನನ್ನು ಉಳಿಸಿಕೊಳ್ಳುವ ಬಗೆಗಿನ ಮುಖ್ಯವಾದ ವಾದಗಳನ್ನು ಮಂಡಿಸಲಾಗಿದೆ. ಸಮಾಜದ ಆರೋಗ್ಯದ ವಿಚಾರದಲ್ಲಿನ ವಾದಗಳನ್ನು ಸಾಕ್ಷಿಗಳ ಕೊರತೆಯ ಕಾರಣದಿಂದ ತಳ್ಳಿಹಾಕಿದ ಸಮಿತಿಯು, ಹೀಗೆ ನುಡಿಯಿತು:-

"54. ಇಂತಹ ಕೃತ್ಯಗಳು ನಾಗರಿಕತೆಗಳಲ್ಲಿ ಅನೈತಿಕತೆ ಮತ್ತು ಅದಃಪತನಕ್ಕೆ ಎಡೆಮಾಡಿಕೊಡುತ್ತವೆ, ಮತ್ತು, ನಮ್ಮ ರಾಷ್ಟ್ರ ಅದಃಪತನಕ್ಕೊಳಗಾಗಿ ಹಾಳಾಗುವುದನ್ನು ತಪ್ಪಿಸಬೇಕಿದ್ದರೆ, ಅಂತಹ ಕೃತ್ಯಗಳನ್ನು ಎಲ್ಲಾ ರೀತಿಯಿಂದಲೂ ತಡೆಯಬೇಕು ಎಂಬುದು ಮೊದಲ ಈ

ವಾದಗಳಲ್ಲಿ ಮೊದಲನೆಯದು. ಈ ಅಭಿಪ್ರಾಯವನ್ನು ಪುಷ್ಟೀಕರಿಸುವ ಯಾವ ಸಾಕ್ಷಿಯೂ ನಮಗೆ ದೊರೆತಿಲ್ಲ ಮತ್ತು ಈ ಕಾಲದಲ್ಲಿ ನಮ್ಮ ದೇಶವನ್ನು ಆಳುವುದಕ್ಕೆ, ಇತಿಹಾಸದಲ್ಲಿನ ಭಿನ್ನ ಕಾಲ ಮತ್ತು ಸನ್ನಿವೇಶಗಳಲ್ಲಿ ಬದುಕಿದ್ದ ವ್ಯಕ್ತಿಗಳ ಕಾಲ್ಪನಿಕ ವಿವರಣೆಗಳ ಆಧಾರದ ಮೇಲೆ ಕಾನೂನುಗಳನ್ನು ರಚಿಸುವುದು ಉಚಿತವಲ್ಲ.

ತಾವು ಅನೈಸರ್ಗಿಕ, ಪಾಪಕರ ಮತ್ತು ಅಸಹ್ಯಕರ ಎಂದು ನಂಬಿರುವ ವಿಚಾರಗಳ ಬಗೆಗಿನ ಅಸಹನೆಯೊಂದೇ ಈ ವಾದದ ಆಧಾರವೆಂಬುದನ್ನು ಗಮನಿಸಬೇಕು ಮತ್ತು ಹಲವರು ಒಂದಲ್ಲ ಒಂದು ಕಾರಣಕ್ಕೆ ಇಂತಹ ಅಸಹನೆಯನ್ನು ಅನುಭವಿಸುತ್ತಾರೆ.

ಆದರೆ ನೈತಿಕ ಬದ್ಧತೆ ಅಥವಾ ಭಾವನೆಗಳ ಆಧಾರದಲ್ಲಿ , ವ್ಯಕ್ತಿಗಳ ಖಾಸಗೀತನವನ್ನ ಉಲ್ಲಂಘಿಸುವುದಕ್ಕೆ ಅಥವಾ ಅವರ ವೈಯಕ್ತಿಕ ಲೈಂಗಿಕ ನಡವಳಿಕೆಗಳನ್ನು ಕಾನೂನಿನಡಿಯಲ್ಲಿ ಅಪರಾಧವೆಂದು ಪರಿಗಣಿಸಲು ಸಾಧ್ಯವಿಲ್ಲ.

ಅಂತಹ ಗಂಡಸರನ್ನು ಕೆಲ ವೃತ್ತಿಗಳು ಅಥವಾ ಸಾರ್ವಜನಿಕ ಸೇವೆಯ ವಿಭಾಗಗಳಿಗೆ ನೇಮಿಸಿದಾಗ ಅವರ ವೈಯಕ್ತಿಕ ಅಭ್ಯಾಸಗಳ ದೆಸೆಯಿಂದ ಅವರು ಬೆದರಿಕೆ ಅಥವಾ ಇತರ ಒತ್ತಡಗಳಿಗೆ ಒಳಗಾಗಿ ಅವರು "ಕೆಟ್ಟದಾದ ಭದ್ರತಾ ಸವಾಲಾಗಿ' ಪರಿಣಮಿಸುವ ಸಾಧ್ಯತೆ

ಇರುತ್ತದೆ ಎಂಬುದು ಮತ್ತೊಂದು ವಾದ. ಇದು ನಿಜವಾಗಿದ್ದಲ್ಲಿ, ಇತರ ಬಗೆಯ ಜನರು, ಎಂದರೆ ಕುಡುಕರು, ಜೂಜುಕೂರರು ಮತ್ತು ಭಿನ್ನಲೈಂಗಿಕವಾದ ಸಮಸ್ಯೆಗಳಲ್ಲಿ ಸಿಲುಕುವಂತಹ ಜನರ ವಿಚಾರದಲ್ಲೂ ಈ ವಾದ ಅನ್ವಯಿಸಬೇಕು. ಈ ಕಾರಣಗಳ ಆಧಾರದಲ್ಲಿ ಸಮಲೈಂಗಿಕ ವ್ಯಕ್ತಿಗಳನ್ನು ಕೆಲ ಬಗೆಯ ವೃತ್ತಿಗಳಿಂದ ಹೊರಗಿಡಬೇಕು ಎಂಬುದನ್ನು ಒಪ್ಪಬಹುದಾದರೂ, ಅವರ ಖಾಸಗೀ ಲೈಂಗಿಕ ನಡವಳಿಕೆಗಳನ್ನು ಅಪರಾಧೀಕರಿಸುವುದಕ್ಕೆ ಈ ಕಾರಣ ಸಾಕಾಗುವುದಿಲ್ಲ ಎಂಬುದು ನಮ್ಮ ಅಭಿಪ್ರಾಯ

(ಒತ್ತು ನೀಡಲಾಗಿದೆ)

25. ಕುಟುಂಬ ಜೀವನಕ್ಕೆ ಸಮಲೈಂಗಿಕತೆಯಿಂದ ಆಗುವ ಹಾನಿಯ ಬಗೆಗಿನ ವಾದವನ್ನು ಹೀಗೆ ತಳ್ಳಿಹಾಕಲಾಯಿತು:-

"55. ಗಂಡಸರ ನಡುವಿನ ಸಮಲೈಂಗಿಕ ನಡವಳಿಕೆಗಳು ಕುಟುಂಬ ಜೀವನವನ್ನು ಘಾಸಿಗೊಳಿಸುತ್ತವೆ ಎಂಬುದು ನಿಜವಿರಬಹುದು. ಇದನ್ನು ಪುಷ್ಟೀಕರಿಸಲು, ಗಂಡನ ಸಮಲೈಂಗಿಕ ನಡವಳಿಕೆಯ ದೆಸೆಯಿಂದ ವೈವಾಹಿಕ ಸಂಬಂಧಗಳು ಮುರಿದುಬಿದ್ದಿರುವ ಹಲವು ನಿದರ್ಶನಗಳು ನಮ್ಮ ಮುಂದಿವೆ ಮತ್ತು ಇಂತಹ ಸಾಕ್ಷ್ಯಗಳು ಸಾಕಷ್ಟಿವೆ.

ಅಲ್ಲದೇ, ಸಮಲೈಂಗಿಕ ಅಂಶಗಳು ದುರ್ಬಲವಾಗಿರುವ ಗಂಡಸು ತನ್ನ ಕಾಮನೆಗಳನ್ನು ಈಡೇರಿಸಿಕೊಳ್ಳುವ ಸಲುವಾಗಿ ಮದುವೆಯಾಗದೇ ಉಳಿದು ಒಂದು ಸಫಲ ಮತ್ತು ಸಂತೋಷಕರ ಸಂಬಂಧದಿಂದ ವಂಚಿತನಾಗಬಹುದು. ನಾವು ಸಮಾಜದ ಮೂಲ ಘಟಕವೆಂದು ನಂಬಿರುವ ಕುಟುಂಬ ವ್ಯಸ್ತೆಗೆ ಇಂತಹ ನಷ್ಟವಾಗುವುದನ್ನು ನಾವು ಖಂಡಿಸುತ್ತೇವೆ. ಆದರೆ ಹೆಂಡತಿಯ ಸಮಲೈಂಗಿಕ ನಡವಳಿಕೆಯಿಂದ ವಿವಾಹ ಮುರಿದು ಬೀಳುವುದು ಮತ್ತು ಕೆಲ ಹೆಂಗಸರು ಸಮಲೈಂಗಿಕ ಕ್ರಿಯೆಗಳಲ್ಲೇ ತೃಪ್ತಿ ಕಂಡು ವಿವಾಹವನ್ನು ತಪ್ಪಿಸಿಕೊಳ್ಳುವ ಘಟನೆಗಳು ಕೂಡ ಆಗಾಗ್ಗೆ ವರದಿಯಾಗುತ್ತಲೇ ಇರುತ್ತವೆ. ಹೀಗಾಗಿ ಹೆಂಗಸರ ಸಮಲೈಂಗಿಕತೆ, ವಿವಾಹ ಬಾಹಿರ ಸಂಬಂಧ ಮತ್ತು ವ್ಯಭಿಚಾರಗಳಿಗೆ ಹೋಲಿಸಿದರೆ, ಗಂಡಸರ ನಡುವಿನ ಸಮಲೈಂಗಿಕ ನಡವಳಿಕೆಗಳು, ಕುಟುಂಬ ವ್ಯವಸ್ಥೆಯ ಮೇಲೆ ಹೆಚ್ಚಿನ ಪರಿಣಾಮ ಬೀರುತ್ತವೆ ಎಂಬುದನ್ನು ನಂಬಲು ನಮ್ಮಲ್ಲಿ ಕಾರಣಗಳಿಲ್ಲ. ಮೇಲಿನ ಎಲ್ಲಾ ಕೃತ್ಯಗಳಿಂದ ಕುಟುಂಬ ವ್ಯವಸ್ಥೆಗೆ ಆಗುವ ನಷ್ಟ ಬಹುದೊಡ್ಡದೇ ಆದರೂ, ಆ ಕಾರಣಕ್ಕೆ ಕೀಲ ಗಂಡಸರ ಸಮಲೈಂಗಿಕ ನಡವಳಿಕೆಯನ್ನು ಅಪರಾಧವೆಂದು ಪರಿಗಣಿಸುವುದು ಸರಿಯಾಗುವುದಿಲ್ಲ. ಈ ವಾದದ ಅರ್ಥ ಸಮಾಜ ಸಮಲೈಂಗಿಕ ನಡವಳಿಕೆಯನ್ನು ಒಪ್ಪಿಕೊಂಡು

> ಪ್ರೋತ್ಸಾಹಿಸಬೇಕು ಎಂದಲ್ಲ. ಆದರೆ ವಿವಾಹೇತರ ಸಂಬಂಧ, ಸ್ತ್ರೀ ಸಮಲೈಂಗಿಕತೆ ಮತ್ತು ವ್ಯಭಿಚಾರಗಳನ್ನು ಅಪರಾಧವೆಂದು ಪರಿಗಣಿಸದೇ ಇರುವ ಸಂದರ್ಭದಲ್ಲಿ ಕುಟುಂಬ ವ್ಯವಸ್ತೆಗೆ ಘಾಸಿಯಾಗುತ್ತದೆ ಎಂಬ ನೆವದಲ್ಲಿ ಗಂಡಸರ ನಡುವಿನ ಸಮಲೈಂಗಿಕ ನಡವಳಿಕೆಗಳನ್ನು ಅಪರಾಧವೆಂದು ಕರೆಯಲು ಬರುವುದಿಲ್ಲ. ಅಲ್ಲದೆ, ಒಬ್ಬ ಸಂಗಾತಿಯಲ್ಲಿ ಸಮಲೈಂಗಿಕ ಅಂಶಗಳಿದ್ದರೆ, ಅವರ ವೈವಾಹಿಕ ಜೀವನ ಅತೃಪ್ತಿಕರವಾಗುತ್ತದೆ ಎಂಬುದನ್ನು ನಾವಿಲ್ಲಿ ಗಮನಿಸಬೇಕು. ಹೀಗಾಗಿ ಸಮಲೈಂಗಿಕರೊಬ್ಬರು ಸಮಾಜ ಒಪ್ಪುವ ವ್ಯವಸ್ತೆಯನ್ನು ಪಾಲಿಸುವ ಸಲುವಾಗಿ ಮತ್ತು ತಮ್ಮ ಸಮಲೈಂಗಿಕತೆ ಗುಣವಾಗಬಹುದು ಎಂಬ ಆಸೆಯಲ್ಲಿ ಮದುವೆಯಾದರೆ ಅದು ದುರಂತಗಳಿಗೆ ದಾರಿಮಾಡಿಕೊಡುತ್ತದೆ.

26. ಮತ್ತು, ಸಮಲೈಂಗಿಕ ಕ್ರಿಯೆಗಳಲ್ಲಿ ತೊಡಗುವ್ ವ್ಯಕ್ತಿಗಳು ಮುಂದೆ ಬಾಲಕರ ಮೇಲೆ ಆಕರ್ಷಿತರಾಗ ಬಹುದು ಎಂಬ ಆರೂಪವನ್ನು ತಳ್ಳಿ ಹಾಕುತ್ತಾ ಸಮಿತಿಯು ಹೀಗೆ ಹೇಳಿತು.

> "56. ಒಬ್ಬ ಗಂಡಸನ್ನು ತನ್ನ ಸಂಗಾತಿಯಾಗಿ ಆಯ್ಕೆ ಮಾಡಿಕೊಂಡಿರುವ ಪುರುಷನು ಆ ಸಂಬಂಧವನ್ನು ಬಿಟ್ಟು ಮುಂದೆ ಚಿಕ್ಕ ಬಾಲಕ ಅಥವಾ ಬಾಲಕರೆಡೆಗೆ ಆಕರ್ಷಿತರಾಗಬಹುದು ಎಂಬ ಮೂರನೇ ಆರೋಪವನ್ನು ನಾವು ಗಂಭೀರವಾಗಿ ಪರಿಗಣಿಸಿದ್ದೇವೆ. ಅಪ್ರಾಪ್ತರ ಮೇಲಿನ ಅಪರಾಧಗಳನ್ನು ಹೆಚ್ಚುಮಾಡಬಹುದಾದ ಯಾವ

ವಿಚಾರವನ್ನು ನಾವು ಖಂಡಿತವಾಗಿಯೂ ಅಸಡ್ಡೆ ಮಾಡಬಾರದು. ಕಾನೂನಿಗೆ ನಾವು ಮಾಡುವ ತಿದ್ದುಪಡಿಯು ಅಪ್ರಾಪ್ತ ವಯಸ್ಕರಿಗೆ ಅಪಾಯ ಉಂಟುಮಾಡಬಹುದಾದರೆ ಅಂತಹ ಯಾವ ಮಾರ್ಪಾಡನ್ನು ಮಾಡಬಾರದು ಎಂಬುದನ್ನು ನಾವು ಯೋಚಿಸಿದ್ದೇವೆ. ಆದರೆ ಈ ವಿಚಾರದಲ್ಲಿ ನಾವು ನಮ್ಮ ತಜ್ಞ ಸಾಕ್ಷಿಗಳಿಂದ ಬಹಳವೇ ಪ್ರಭಾವಿತಗೊಂಡಿದ್ದೀವೆ. ಅವರ ಪ್ರಕಾರ, ಸಮಲೈಂಗಿಕತೆಗೆ ಕಾರಣ ಏನೇ ಇದ್ದರೂ, ವಯಸ್ಕ ಸಮಲೈಂಗಿಕ ಪುರುಷರಲ್ಲಿ ಎರಡು ನಿಚ್ಚಳವಾಗಿ ಗುರುತಿಸಬಲ್ಲ ವಿಧವಿದೆ. ಅವರುಗಳಲ್ಲಿ ಕೆಲವರು ಇತರ ವಯಸ್ಕ ಪುರುಷರನ್ನು ಸಂಗಾತಿಗಳಾಗಿ ಆಯ್ದುಕೊಂಡರೆ, ಮತ್ತೆ ಕೆಲವರು ಶಿಶುಕಾಮಿಗಳಾಗಿರುತ್ತಾರೆ, ಎಂದರೆ ಇನ್ನೂ ಹರೆಯಕ್ಕೆ ಕಾಲಿಡದ ಹುಡುಗರನ್ನು ಸಂಗಾತಿಯಾಗಿ ಬಯಸುವವರು. ವಯಸ್ಕ ಗಂಡಸಿನ ಜೊತೆ ಸಮಲೈಂಗಿಕ ಸಂಬಂಧ ಹೊಂದಿರುವ ಗಂಡಸು ಬಾಲಕರೆಡೆಗೆ ಆಕರ್ಷಿತರಾಗುವುದು ಬಹು ಅಪರೂಪ ಮತ್ತು ಬಾಲಕರೆಡೆಗೆ ಆಕರ್ಷಿತರಾಗುವವರು ವಯಸ್ಕರನ್ನು ಬಯಸಲಾರರು ಎಂಬುದನ್ನು ನಮಗೆ ಅಧಿಕೃತವಾಗಿ ತಿಳಿಸಲಾಗಿದೆ. ಆದಾಗ್ಯೂ, ಪೋಲೀಸ್ ವರದಿ ಮತ್ತು ಇತರ ಸಾಕ್ಷಿಗಳ ಆಧಾರದ ಮೇಲೆ, ಅಂತಹ ಪ್ರಕರಣಗಳೂ ನಡೆಯುತ್ತವೆ ಎಂಬುದನ್ನು ಮನಗಾಣಲಾಗಿದೆ.

27. ಕಡೆಯದಾಗಿ ಸಮಿತಿಯು ಹೀಗೆ ನುಡಿಯಿತು

“60. ಹಲವು ವರ್ಷ ಜಾರಿಯಲ್ಲಿದ್ದ ಕಾನೂನೊಂದನ್ನು ಬದಲಾಯಿಸಿ ಹಿಂದೆ ಅಪರಾಧವೆಂದು ಪರಿಗಣಿಸಲಾಗುತ್ತಿದ್ದ ಕೃತ್ಯಗಳನ್ನು ಕಾನುನಿನಡಿಯಲ್ಲಿ ಮಾನ್ಯ ಮಾಡುವ ಪ್ರಸ್ತಾವನೆಯು ಟೀಕೆಗಳಿಗೆ ತುತ್ತಾಗುತ್ತದೆ ಎಂಬುದರ ಅರಿವು ನಮಗಿದೆ. ಅಲ್ಲದೆ ಹೊಸ ಕಾನೂನುಗಳನ್ನು ರದ್ದುಗೊಳಿಸಿ ಕೆಲ ವಿಚಾರಗಳನ್ನು ಅಪರಾಧೀಕರಿಸಿದರೆ ಅಂತಹದೇ ಪ್ರತಿಭಟನೆ ವ್ಯಕ್ತವಾಗುವುದಿಲ್ಲ ಎಂಬುದನ್ನು ನಾವು ಮನಗಂಡಿದ್ದೇವೆ. ದೀರ್ಘಕಾಲೀನ ಪದ್ಧತಿಯೊಂದನ್ನು ತಲೆಕೆಳಗು ಮಾಡುವುದು ಗಂಭೀರ ವಿಚಾರವಾಗಿದ್ದು ಅದನ್ನು ಹಗುರವಾಗಿ ತೆಗೆದು ಕೊಳ್ಳಬಾರದು. ಆದರೆ ಒಂದು ನಿಷ್ಪಕ್ಷಪಾತ ಮತ್ತು ಸಮಾನತೆಯನ್ನು ಪ್ರತಿಪಾದಿಸುವ ಕಾನೂನು ಹೇಗಿರಬೇಕು ಎಂಬುದರ ಬಗೆಗೆ ನಮ್ಮ ಅನಿಸಿಕೆಗಳನ್ನು ತಿಳಿಸಿವುದಷ್ಟೇ ನಮಗೊಪ್ಪಿಸಿದ್ದ ಕೆಲಸವಾಗಿತ್ತು. ಹಾಗಾಗಿ, ಒಳ್ಳೆಯ ಕಾನೂನಿನ ಬಗೆಗಿನ ನಮ್ಮ ಅಭಿಪ್ರಾಯವನ್ನು, ಪ್ರಸ್ತುತ ಜಾರಿಯಲ್ಲಿರುವ ಅಸ್ಪಷ್ಟವಾದ ನಂಬಿಕೆಗಳ ಆಧಾರದ ಮೇಲೆ ರಚನೆಯಾದ ಕಾನೂನಿನ ವಿಚಾರ ಪ್ರಭಾವಿಸಬಾರದು ಎಂಬುದು ನಮ್ಮ ಅನಿಸಿಕೆಯಾಗಿದೆ.

ಹಾಗೆಯೇ, ನಾವು ಈ ವಿಚಾರವನ್ನು ಹೇಳುವುದೂ ನಮ್ಮ ಕರ್ತವ್ಯ. ನಾವು ಪ್ರಸ್ತಾಪಿಸಿರುವ ಕಾನೂನಿನ ಬದಲಾವಣೆಯ ವಿರುದ್ಧ ಮಂಡಿಸಲಾಗಿರುವ ವಾದಗಳ ಮಹತ್ವ ನಮಗೆ ತಿಳಿದಿದೆ ಮತ್ತು ವಾದಗಳಿಗೆ ನಾವು

ಸರಿಯಾದ ಪ್ರತಿವಾದಗಳನ್ನೂ ಮಂಡಿಸಿದ್ದೇವೆ ಎಂದು ನಾವು ನಂಬುತ್ತೇವೆ. ಕಡೆಯದಾಗಿ ಮತ್ತೊಂದು ನಿರ್ಣಾಯಕ ಪ್ರತಿವಾದವನ್ನು ನಾವು ಇಡಲು ಬಯಸುತ್ತೇವೆ. ವ್ಯಕ್ತಿಗಳು ತಮ್ಮ ಖಾಸಗೀ ನೈತಿಕತೆಯ ವಲಯದಲ್ಲಿ ಮುಕ್ತವಾಗಿ ಆಯ್ಕೆ ಮಾಡುವ ಮತ್ತು ತಮಗಿಷ್ಟದ ಕ್ರಿಯೆಗಳನ್ನು ನಡೆಸುವ ಸ್ವತಂತ್ರ್ಯ ಹೊಂದಿರಬೇಕು ಎಂಬುದರ ಬಗ್ಗೆ ಸಮಾಜ ಮತ್ತು ಕಾನೂನುಗಳು ಗಮನ ಕೊಡಬೇಕು. ಸಮಾಜವೊಂದು ಕಾನೂನಿನ ಮೂಲಕ ಅಪರಾಧವನ್ನು ಬೇಕೆಂದೇ ಪಾಪವೆಂದು ಬಿಂಬಿಸುವ ಸಂದರ್ಭವನ್ನು ಹೊರತುಪಡಿಸಿ, ಇನ್ನೆಲ್ಲ ಸಮಯದಲ್ಲಿ ವ್ಯಕ್ತಿಗಳ ಖಾಸಗೀ ನೈತಿಕತೆ ಮತ್ತು ಅನೈತಿಕತೆಗಳು ಅವರ ಖಾಸಗೀ ವಲಯದಲ್ಲೇ ಉಳಿಯಬೇಕು ಮತ್ತು ಅದರಲ್ಲಿ ಕಾನೂನು ಮೂಗು ತೂರಿಸಬಾರದು.

ಹೀಗೆಂದಮಾತ್ರಕ್ಕೆ ಖಾಸಗೀ ಅನೈತಿಕತೆಯನ್ನು ಬೆಂಬಲಿಸಿ ಅದಕ್ಕೆ ಹುರಿದುಂಬಿಸಿದಂತೆ ಆಗುವುದಿಲ್ಲ. ಅದರ ಬದಲಿಗೆ ವ್ಯಕ್ತಿಯ ಕ್ರಿಯೆ ಅವನದೇ ಖಾಸಗೀ ಮತ್ತು ವೈಯಕ್ತಿಕ ಜವಾಬ್ದಾರಿ ಎಂದು ತಿಳಿಸಿ, ಪ್ರಬುದ್ಧ ವ್ಯಕ್ತಿಯು ಅಂತಹ ಹೊಣೆಗಾರಿಕೆಯನ್ನು ಕಾನೂನು ಕ್ರಮದ ಭಯವಿಲ್ಲದಿದ್ದಾಗಲೂ ಈಡೇರಿಸುತ್ತಾನೆ ಎಂದು ಸಾರಿದಂತೆ ಆಗುತ್ತದೆ.

> ಮೇಲಿನ ವರದಿಗೆ ಅನುಗುಣವಾಗಿ, ಒಪ್ಪಿಗೆಯಿರುವ ವಯಸ್ಕರ ನಡುವೆ ಖಾಸಗೀಯಾಗಿ ನಡೆಯುವ ಸಮಲೈಂಗಿಕ ಕ್ರಿಯೆಗಳನ್ನು ಇನ್ನೂ ಮುಂದೆ ಅಪರಾಧವೆಂದು ಪರಿಗಣಿಸಬಾರದೆಂದು ನಾವು ಶಿಫಾರಸು ಮಾಡುತ್ತೇವೆ.

28. ಬದಲಾವಣೆಯ ಸಮಯ ನಿಧಾನವಾಗಿ ಬಂದಿತು. ಬ್ರಿಟೀಷ್ ಸಂಸತ್ತು ಬಹುಸಮಯದ ನಂತರ, ಎಂದರೆ, 1967ರಲ್ಲಿ ವೋಲ್ಫೆಂಡೆನ್ ವರದಿಯನ್ನು ಅನುಷ್ಠಾನಗೊಳಿಸಿ, ಲೈಂಗಿಕ ಅಪರಾಧ ಕಾಯ್ದೆ 1967ರ (ಸೆಕ್ಷುವಲ್ ಅಫೆನ್ಸಸ್ ಆಕ್ಟ್) ಮೂಲಕ ಒಪ್ಪಿಗೆಯಿರುವ ವಯಸ್ಕರ ನಡುವಿನ ಸಮಲೈಂಗಿಕ ಕ್ರಿಯೆಗಳಿಗೆ ವಿಧಿಸುತ್ತಿದ್ದ ಶಿಕ್ಷೆಗಳನ್ನೂ ರದ್ದುಗೊಳಿಸಿತು

29. 2017ನೇ ಇಸವಿಯಲ್ಲಿ ಯುನೈಟೆಡ್ ಕಿಂಗ್‌ಡಮ್ ನಲ್ಲಿ ಪೋಲಿಸಿಂಗ್ ಅನ್ಡ್ ಕ್ರೈಮ್ಸ್ ಆಕ್ಟ ಅನ್ನು ಜಾರಿಗೊಳಿಸಿ ಅದರಡಿಯಲ್ಲಿ ಸಮಲೈಂಗಿಕತೆಯನ್ನು ಅಪರಾಧವೆಂದು ಪರಿಗಣಿಸುತ್ತಿದ್ದ ಕಾನೂನುಗಳಡಿಯಲ್ಲಿ ಶಿಕ್ಷೆಗೊಳಗಾಗಿದ್ದ ವ್ಯಕ್ತಿಗಳಿಗೆ ಮಾನವೀಯ ನೆಲೆಯಲ್ಲಿ ಕ್ಷಮಾದಾನ ನೀಡಲಾಯಿತು.

## ಯುನೈಟೆಡ್ ಸ್ಟೇಟ್ಸ್ ನಲ್ಲಿ ಕಾನೂನು

30. 1776ನೇ ಇಸವಿಯಲ್ಲಿ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕ ಸ್ವತಂತ್ರವಾಗುವ ವೇಳೆಗೆ ಆ ದೇಶದ ಎಲ್ಲ ರಾಜ್ಯಗಳಲ್ಲಿ ಸಮಲೈಂಗಿಕ ಅಪರಾಧಗಳಿಗೆ ಇಂಗ್ಲೀಷ್ ಕಾನೂನೇ ಅನ್ವಯವಾಗುತ್ತಿತ್ತು. ಕಳೆದ ಶತಮಾನದಲ್ಲಿ ಗುದಸಂಭೋಗವನ್ನು ಅಪರಾಧೀಕರಿಸುವ ಕಾನೂನುಗಳನ್ನು ಪ್ರಶ್ನಿಸುವವರೆಗೂ ಈ ಪರಿಸ್ಥಿತಿಯೇ ಮುಂದುವರೆದಿತ್ತು. ಬೋವರ್ಸ್ v. ಹಾರ್ಡ್ವಿಕ್ (1986) ಪ್ರಕರಣ ಅಂತಹ ಮೊಕದ್ದಮೆಗಳಲ್ಲಿ ಒಂದಾಗಿದೆ. ಬೋವರ್ಸ್ v. ಹಾರ್ಡ್ವಿಕ್ (ಬೋವರ್ಸ್) ಎಂಬ ಪ್ರಕರಣವೊಂದು 1986ನೇ ಇಸವಿಯಲ್ಲಿ ಯುನೈಟೆಡ್ ಸ್ಟೇಟ್ಸ್ ನ ಸರ್ವೋಚ್ಛ ನ್ಯಾಯಾಲಯದ ಮೆಟ್ಟಿಲೇರಿತು. ಈ ಪ್ರಕರಣದಲ್ಲಿ ಅಮೇರಿಕೆಯ ಸರ್ವೋಚ್ಛ ನ್ಯಾಯಾಲಯವು 5:4ರ ಅಂತರದಲ್ಲಿ ಗುದ ಸಂಭೋಗವನ್ನು ಅಪರಾಧವೆಂದು ಪರಿಗಣಿಸುವ

ಜಾರ್ಜಿಯಾ ಶಾಸನವನ್ನು ಎತ್ತಿಹಿಡಿಯಿತು ಮತ್ತು ಆ ಶಾಸನವು ವಯಸ್ಕ ಗಂಡಸು ಮತ್ತೊಬ್ಬ ಗಂಡಸಿನೊಂದಿಗೆ ಅವನ ಮನೆಯ ಮಲುಗುವ ಕೊಠಡಿಯಲ್ಲಿ ನಡೆಸುವ ಕ್ರಿಯೆಗೂ ಅನ್ವಯವಾಗುವುದನ್ನು ಒಪ್ಪಿಕೊಂಡಿತ್ತು. ನ್ಯಾಯಾಲಯದ ಬಹುತೇಕ ನ್ಯಾಯಮೂರ್ತಿಗಳ ಪರವಾಗಿ ನ್ಯಾಯಮೂರ್ತಿ ವೇಟ್ ನೀಡಿದ ಆ ತೀರ್ಪಿಗೆ ಹಲವು ಕಾರಣಗಳಿದ್ದವು.

31. ಖಾಸಗೀತನದ ಹಕ್ಕು ಸಮಲೈಂಗಿಕರ ನಡುವಿನ ಗೂದಸಂನಭೋಗವನ್ನು ಒಳಗೊಳ್ಳುವುದಿಲ್ಲ ಎಂಬುದು ಅವರು ನೀಡಿದ ಮೊಟ್ಟಮೊದಲ ಕಾರಣ. ಸಮಾಳೈಂಗಿಯಕ್ತೇಯೂ ಕುಟುMಬ, ಮದುವೆ ಮತ್ತು ಸಂತಾನೋತ್ಪತ್ತಿಗಳಿಗೆ ಹೊರತಾಗಿರುವುದು ಎಂಬುದನ್ನು ಅದಾಗಲೇ ನ್ಯಾಯಾಲಯದಲ್ಲಿ ಸಾಬೀತು ಮಾಡಲಾಗಿತ್ತು. ಸಮಲೈಂಗಿಕ ಕೃತ್ಯಗಳ ಮೇಲಿನ ನಿಷೇಧಕ್ಕೆ ಪುರಾತನ ಇತಿಹಾಸವಿದೆ ಎಂಬುದು ಆ ಕಾನೂನನ್ನು ಎತ್ತಿಹಿಡಿಯಲು ಬಳಸಿದ ಮುಂದಿನ ಕಾರಣವಾಗಿತ್ತು. ಸ್ಟ್ಯಾನ್ಲಿ v. ಜಾರ್ಜಿಯ ("ಸ್ಟ್ಯಾನ್ಲಿ"),(1969), ಪ್ರಕರಣದಲ್ಲಿ ನ್ಯಾಯಾಲಯವು ಮನೆಯಲ್ಲಿ ಅಸಭ್ಯ ಪುಸ್ತಕಗಳನ್ನು ಸಂಗ್ರಹಿಸುವುದು ಮತ್ತು ಅದನ್ನು ಖಾಸಗೀಯಾಗಿ ಓದುವುದಕ್ಕೆ ಶಿಕ್ಷೆ ವಿಧಿಸುವುದನ್ನು ಮೊದಲನೇ ತಿದ್ದುಪಡಿ ನಿಷೇಧಿಸುತ್ತದೆ ಎಂದು ಹೇಳಿತ್ತು. ಆದರೆ ಈ ಪ್ರಕರಣದಲ್ಲಿ ಆ ವಾದವನ್ನು ತಳ್ಳಿಹಾಕಿದ ನ್ಯಾಯಾಲಯವು ಮನೆಯಲ್ಲಿ ಮಾದಕ ವಸ್ತು, ಮದ್ದುಗುಂಡುಗಳು ಮತ್ತು ಕದ್ದ ವಸ್ತುಗಳನ್ನು ಸಂಗ್ರಹಿಸಿದವರಿಗೆ ರಕ್ಷಣೆ ನೀಡಲಾಗುವುದಿಲ್ಲ ಎಂದು ಸ್ಟ್ಯಾನ್ಲಿ ಪ್ರಕರಣದಲ್ಲಿ, ಹೇಳಾಗಿದೆ ಎಂದು,  ಹಾಗಾಗಿ ಅವಕ್ಕೆ ಸಮಾನವಾದ ಕೃತ್ಯಗಳಾದ ವಿವಾಹ ಬಾಹಿರ ಸಂಬಂಧ, ಒಡಹುಟ್ಟಿದವರೊಂದಿಗಿನ ಸಂಭೋಗ ಮೊದಲಾದ ಲೈಂಗಿಕ ಅಪರಾಧಗಳನ್ನು ಮನೆಯಲ್ಲೇ ಮಾಡಿದ್ದರೂ ಅವಕ್ಕೆ ಶಿಕ್ಷೆ ವಿಧಿಸುವಾಗ ಅಲ್ಲಿ ಖಾಸಗೀತನದ ಮೂಲಭೂತ ಹಕ್ಕನ್ನು ಅನ್ವಯಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ನುಡಿಯಿತು. ಜಾರ್ಜಿಯಾ ಕಾನೂನು ನೈತಿಕತೆಯ ಪರಿಕಲ್ಪನೆಯ ಆಧಾರದಲ್ಲಿ ರೂಪುಗೊಂಡಿದ್ದು ಆ ನೈತಿಕತೆಯನ್ನು ದೇಶದ ಶಾಸಕಾಂಗವು ಕಾನೂನಿನಡಿಯಲ್ಲಿ ಜಾರಿಗೊಳಿಸಬಹುದು ಎಂಬುದು ನ್ಯಾಯಾಲಯದ ಮತ್ತೊಂದು ತರ್ಕವಾಗಿತ್ತು. ಈ ನಿರ್ಧಾರಕ್ಕೆ ಸಹಮತಿ ವ್ಯಕ್ತಪಡಿಸಿದ ಮುಖ್ಯ ನ್ಯಾಯಮೂರ್ತಿ ಬರ್ಗರ್ ರವರು, ಕಾನೂನಿನ ಪುರಾತನ ಮೂಲವನ್ನು ಬಹುವಾಗಿ ಉಲ್ಲೇಖಿಸುತ್ತಾ ಪಾಶ್ಚಿಮಾತ್ಯ ನಾಗರಿಕತೆಯುದ್ದಕ್ಕೂ ಜುಡಾಯಿ-ಕ್ರೈಸ್ತ ಸಂಪ್ರದಾಯದಡಿಯಲ್ಲಿ ಗುದಸಂಭೋಗವನ್ನು ನಿರ್ಬಂಧಿಸಲಾಗಿತ್ತು, ಮತ್ತು ಜಾರ್ಜಿಯಾ ಕಾನೂನು

ಕೂಡಾ ಅದೇ ದಾರಿ ತುಳಿದಿದೆ ಎಂಬುದನ್ನು ಒತ್ತಿಹೇಳಿದರು. ಬಹುಮತದೊಂದಿಗೆ ದನಿಗೂಡಿಸಿದ ನ್ಯಾಯಮೂರ್ತಿ ಪ್ಯಾವೆಲ್, ವ್ಯಕ್ತಿಯು ತಮ್ಮ ಮನೆಯ ಖಾಸಗೀತನದಲ್ಲಿ ಒಂದೇ ಬಾರಿ ನಡೆಸಿದ ಗುದಸಂಭೋಗಕ್ಕೆ 20 ವರ್ಷಗಳ ಶಿಕ್ಷೆ ವಿಧಿಸುವುದು ಎಂಟನೇ ತಿದ್ದುಪಡಿಯ ಪ್ರಕಾರ ಕ್ರೂರ ಮತ್ತು ಅಸಹಜವಾಗಿತ್ತರುತ್ತದೆ ಎಂದು ಗಮನಿಸಿದರು. ಆದರೆ ಈ ಪ್ರಕರಣದಲ್ಲಿ ಮೇಲಿನ ವಿಷಯಗಳ ಪ್ರಸ್ತಾಪವಿರಲಿಲ್ಲ, ಮತ್ತು ಪ್ರತಿವಾದಿಗಳು ಎಂಟನೇ ತಿದ್ದುಪಡಿಯ ವಿಚಾರವನ್ನೇ ಎತ್ತಲಿಲ್ಲವಾದ್ದರಿಂದ, ನ್ಯಾಯಮೂರ್ತಿ ಪ್ಯಾವೆಲ್ ಬಹುಮತದೊಂದಿಗೆ ದನಿಗೂಡಿಸಿದರು.

32. ನಾಲ್ಕು ಮಂದಿ ನ್ಯಾಯಮೂರ್ತಿಗಳ ಭಿನ್ನಮತದ ಅಭಿಪ್ರಾಯ ಬಹು ಕುತೂಹಲಕರವಾಗಿವೆ. ಈ ನಾಲ್ಕು ಮಂದಿ ಭಿನ್ನಮತೀಯರ ಪರವಾಗಿ ಮಾತಾಡಿದ ಜಾಸ್ತೀಸ್ ಬ್ಲ್ಯಾಕ್ಮನ್, "ತಮ್ಮ ಪಾಡಿಗೆ ಬಿಟ್ಟುಬಿಡುವ ಹಕ್ಕು" ಎಂದು ಕರೆಯಲಾಗುತ್ತಿದ್ದ ಹಳೆಯ ಖಾಸಗೀತನದ ಹಕ್ಕಿನ ವ್ಯಾಖ್ಯಾನದೊಂದಿಗೆ ತಮ್ಮ ಮಾತುಗಳನ್ನು ಆರಂಭಿಸಿದರು. ಈ ಸಂದರ್ಭದಲ್ಲಿ ನ್ಯಾಯಮೂರ್ತಿ ಹೂಮ್ಸ್ ರ ದಿ ಪಾಥ್ ಆಫ್ ಲಾ (ನ್ಯಾಯದ ದಾರಿ) ಎಂಬ ಲೇಖನವನ್ನು ಉಲ್ಲೇಖಿಸಿದರು:-

> "ಕಾನೂನೊಂದನ್ನು ಮುಂದುವರಿಸುವುದಕ್ಕೆ, ನಾಲ್ಕನೇ ಹೆನ್ರಿಯ ಕಾಲದಲ್ಲಿದ್ದುದಕ್ಕಿಂತ ಭಿನ್ನ ಕಾರಣಗಳಿಲ್ಲ ಎಂಬುದು ಖೇದದ ವಿಚಾರವಾಗಿದೆ. ಕಾನೂನನ್ನು ಯಾವ ವಿಚಾರಗಳ ಆಧಾರದ ಮೇಲೆ ರೂಪಿಸಲಾಗಿತ್ತೋ, ಆ ವಿಚಾರಗಳು ಬಹಳ ಹಿಂದೆಯೇ ಇಲ್ಲವಾಗಿರುವುದರಿಂದ ಆ ಕಾನೂನು ಕೇವಲ ಹಿಂದಿನ ಕಾನೂನುಗಳ ಅನುಕರಣೆಯಾಗಿ ಉಳಿದಿದೆ ಎಂಬುದು ಮತ್ತಷ್ಟು ಖೇದದ ವಿಚಾರ."

33. ಇತಿಹಾಸ ಮತ್ತು ಅದರ ಪುರಾತನ ಬೇರುಗಳ ಬಣ್ಣವಾಳ ಇದರಿಂದಲೇ ತಿಳಿಯುತ್ತದೆ. ಜಸ್ಟೀಸ್ ಬ್ಲಾಕ್ಮನ್ನರು ತಮ್ಮ ಭಿನ್ನಮತವನ್ನು ಮುಂದುವರಿಸುತ್ತಾ ಬ್ಲ್ಯಾಕ್ಮನ್ ಪ್ರಖ್ಯಾತವಾದ **ವಿಸ್ಕಾನ್ಸಿನ್ v.**

**ಯೋಡರ್,** (1972) ಪ್ರಕರಣದ ತೀರ್ಪನ್ನು ಉಲ್ಲೇಖಿಸುತ್ತಾರೆ. ಈ ಪ್ರಕರಣದಲ್ಲಿ ಆಮಿಶ್ ಜನಾಂಗದ ಜನರಿಗೆ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸದೇ ಇರುವ ಮೂಲಭೂತ ಹಕ್ಕಿದೆ ಎಂದು ಸಾರಿದ ನ್ಯಾಯಾಲಯವು, ಕೆಲವರ ಜೀವನ ಶೈಲಿಯು ವಿಚಿತ್ರ ಅಥವಾ ತಪ್ಪು ಎನಿಸಿದರೂ, ಅದರಿಂದ ಮತ್ತೊಬ್ಬರ ಹಕ್ಕು ಮತ್ತು ಹಿತಾಸಕ್ತಿಗೆ ಚ್ಯುತಿಯಾಗದೇ ಇರುವ ಸಂದರ್ಭದಲ್ಲಿ ಅವರು ಬದುಕುವ ರೀತಿ ಭಿನ್ನವಾಗಿದೆ ಎಂಬ ಒಂದೇ ಕಾರಣಕ್ಕೆ ಖಂಡಿಸುವಂತಿಲ್ಲ ಎಂದು ನುಡಿಯಿತು. ಜ್ಯೂಡಾಯಿ-ಕ್ರೈಸ್ತ ಮೌಲ್ಯಗಳನ್ನು ಉಲ್ಲೇಖಿಸಿದ ನ್ಯಾಯಾಲಯವು, ಕೆಲ ಧಾರ್ಮಿಕ ಗುಂಪುಗಳು ಗುದಸಂಭೋಗವನ್ನು ಖಂಡಿಸುತ್ತವೆ ಎಂದ ಮಾತ್ರಕ್ಕೆ, ಆ ಗುಂಪುಗಳ ನೈತಿಕ ನಿರ್ಧಾರಗಳನ್ನು ಅಮೇರಿಕಾದ ಎಲ್ಲಾ ನಾಗರಿಕರ ಮೇಲೆ ಹೇರುವ ಅಧಿಕಾರ ಸರ್ಕಾರಕ್ಕೆ ಇಲ್ಲ ಎಂದು ಹೇಳಿ, ತಮ್ಮ ಭಿನ್ನನಿಲುವನ್ನು ಕೆಳಕಂಡ ಜಾನ್ ಸ್ಟುವರ್ಟ್ ಮಿಲ್ ಶೈಲಿಯ ವಿಶ್ಲೇಷಣೆಯೊಂದಿಗೆ ಮಂಡಿಸುತಾರೆ:-

> "44. **ಡೈಮಂಡ್ v. ಚಾರ್ಲ್ಸ್,** (1986), ಈ ಪ್ರಕರಣದಲ್ಲಿ ಒಬ್ಬರು ಮತ್ತೊಬ್ಬರ ಹಕ್ಕುಗಳಲ್ಲಿ ಮೂಗುತೂರಿಸುವ ಮಾತೇ ಉದ್ಭವಿಸುವುದಿಲ್ಲ, ಏಕೆಂದರೆ, ಒಬ್ಬರ ಮೌಲ್ಯಗಳನ್ನು ಮತ್ತೊಬ್ಬರು ಪಾಲಿಸುವುದಿಲ್ಲ ಎಂಬುದು ಕಾನೂನು ಹಿತಾಸಕ್ತಿಯ ವಿಚಾರವಲ್ಲ. ಮತ್ತು ಅದನ್ನೇ ನೆಪವಾಗಿಟ್ಟುಕೊಂಡು ತಮ್ಮ ಬದುಕನ್ನು ಭಿನ್ನವಾಗಿ ಸಾಗಿಸುವವರ ಮನೆ, ಹೃದಯ ಮತ್ತು ಮನಸ್ಸುಗಳನ್ನು ಅತಿಕ್ರಮಿಸುವುದನ್ನು ಸಮರ್ಥಿಸ್ಕೊಳ್ಳುವುದು ಬಹುದೂರದ ಮಾತು."

34. ನ್ಯಾಯಮೂರ್ತಿ ಸ್ಟೀವೆನ್ಸ್ ಕೂಡಾ ತಮ್ಮ ಭಿನ್ನಮತವನ್ನು ತೀಕ್ಷ್ಣವಾದ ಪದಗಳಲ್ಲಿ ವ್ಯಕ್ತಪಡಿಸುತ್ತಾ, ವಿವಾಹಿತ ಮತ್ತು ಅವಿವಾಹಿತ ವ್ಯಕ್ತಿಗಳ ಖಾಸಗೀ ನಿರ್ಧಾರಗಳು ಸಹ ಖಾಸಗೀತನದ ರಕ್ಷಣೆಯ ವ್ಯಾಪ್ತಿಯಲ್ಲಿ ಬರುತ್ತವೆಂದು ಸ್ಪಷ್ಟವಾಗಿ ತಿಳಿಸಿದರು.

35. ಕಾನೂನಿನ ಹಳೆಯ ದೃಷ್ಟಿಕೋನವನ್ನು ಬದಿಗಿರಿಸಿ, ಬೋವರ್ಸ್ (ಮೇಲ್ಕಂಡ) ಪ್ರಕರಣದ ಭಿನ್ನಮತದ ತೀರ್ಪುಗಳನ್ನು ಒಪ್ಪಿಕೊಳ್ಳಲು ಅಮೇರಿಕೆಗೆ 17 ವರ್ಷ ಹಿಡಿಯಿತು.

36. ಲಾರೆನ್ಸ್ v. ಟೆಕ್ಸಾಸ್, (2003) ಪ್ರಕರಣದಲ್ಲಿ ಬಹುಮತದ ಪರವಾಗಿ ಮಾತನಾಡಿದ ನ್ಯಾಯಮೂರ್ತಿ ಆಂಥನಿ ಕೆನೆಡಿ ರವರು, ಬೋವರ್ಸ್ (ಮೇಲ್ಕಂಡ) ಪ್ರಕರಣದ ತೀರ್ಪನ್ನು ರದ್ದುಪಡಿಸುತ್ತಾ, ಆ ಪ್ರಕರಣದಲ್ಲಿ ಹೊರಬಿದ್ದಿದ್ದ ಭಿನ್ನಮತದ ತೀರ್ಪುಗಳು ಸರಿಯಾಗಿವೆ ಎಂದು ಒಪ್ಪಿಕೊಂಡರು. ಬೋವರ್ಸ್ (ಮೇಲ್ಕಂಡ) ಪ್ರಕರಣದ ಐತಿಹಾಸಿಕ ವಿಶ್ಲೇಷಣೆಯನ್ನು ಬುಡಮೇಲು ಮಾಡಿದ ನ್ಯಾಯಾಲಯವು, ಹಿಂದಿನ ಗುದಸಂಭೋಗಕ್ಕೆ ಸಂಬಂಧಿಸಿದ ಕಾನೂನುಗಳು, ಸಮಲೈಂಗಿಕರನ್ನು ಗುರಿಯಾಗಿಸಿಕೊಂಡಿರಲಿಲ್ಲ, ಬದಲಿಗೆ ಸಂತಾನೋತ್ಪತ್ತಿಯ ಉದ್ದೇಶವಿಲ್ಲದ ಲೈಂಗಿಕ ಕ್ರಿಯೆಗಳನ್ನು ನಿರ್ಬಂಧಿಸುವ ಉದ್ದೇಶ ಹೊಂದಿದ್ದವು, ಮತ್ತು ಆ ಕಾನೂನುಗಳನ್ನು ವಯಸ್ಕರ ನಡುವಿನ ಒಪ್ಪಿಗೆಯ ಕ್ರಿಯೆಗಳಿಗೆ ಅನ್ವಯಿಸುತ್ತಿರಲಿಲ್ಲ ಎಂದು ಗಮನಿಸಿತು. ಪ್ಲ್ಯಾನ್ಡ್ ಪೇರೆಂಟ್ಹುಡ್ ಆಫ್ ಸೌಥೀಸ್ಟರ್ನ್ ಪೆ.ಎ. v. ಕ್ಯಾಸಿ ("ಕ್ಯಾಸಿ"),(1992) ಪ್ರಕರಣವನ್ನು ಉಲ್ಲೇಖಿಸಿದ ಬಹುಮತದ ನಿರ್ಧಾರವು - "ನಮ್ಮ ಬಾಧ್ಯತೆ ಎಲ್ಲರ ಸ್ವಾತಂತ್ರ್ಯವನ್ನು ಖಾತ್ರಿ ಪಡಿಸುವುದೇ ಹೊರತು, ನಮಗೆ ತೋಚಿದ ನೈತಿಕ ಸಂಹಿತೆಯನ್ನು ಜಾರಿಮಾಡುವುದಲ್ಲ" ನಂತರ ನ್ಯಾಯಾಲಯವು, ಅಮೇರಿಕನ್ ಕಾನೂನು ಸಂಸ್ಥೆ 1955ರಲ್ಲಿ ಹೊರತಂದಿದ್ದ ಮಾದರಿ ದಂಡ ಸಂಹಿತೆಯನ್ನು ಉಲ್ಲೇಖಿಸುತ್ತಾ, ಅದರಲ್ಲಿ ಖಾಸಗೀಯಾಗಿ ನಡೆಸುವ ಒಪ್ಪಿಗೆಯ ಸಮಲೈಂಗಿಕ ಸಂಬಂಧಗಳಿಗೆ ಶಿಕ್ಷೆ ವಿಧಿಸಲಾಗಿಲ್ಲ ಎಂಬುದನ್ನು ಸ್ಪಷ್ಟಪಡಿಸಿತು. ನಂತರ ಯುನೈಟೆಡ್ ಕಿಂಗ್ಡಂ ನ ವೋಲ್ಫೆನ್ ಸಮಿತಿಯ ವರದಿ ಮತ್ತು ಲೈಂಗಿಕ ಅಪರಾಧ ಕಾಯ್ದೆ, 1967 ಗಳನ್ನು ಉಲ್ಲೇಖಿಸಿದ ನ್ಯಾಯಾಲಯವು, ಡಡ್ಜಿಯಾನ್ v. ಯುನೈಟೆಡ್ ಕಿಂಗ್ಡಂ (1981) ಪ್ರಕರಣದಲ್ಲಿ ಆಂಗ್ಲ ನ್ಯಾಯಾಲಯ ನೀಡಿದ ತೀರ್ಪನ್ನು ಪ್ರಸ್ತಾಪಿಸಿತು. ನ್ಯಾಯಾಲಯವು ಆನಂತರದಲ್ಲಿ ಸಮಲೈಂಗಿಕರನ್ನು ಸರ್ಕಾರದ ತಾರತಮ್ಯ ವಿರೋಧೀ ಕಾನೂನುಗಳಿಂದ ವಞ್ಚಿತಗೊಳಿಸಿ, ಸಮಾನ ರಕ್ಷನೆಯ ನಿಯಮವನ್ನು ಉಲ್ಲಂಘಿಸುತ್ತಿದ್ದ ಸಾಮಾಜಿಕ ವರ್ಗಾಧಾರಿತ ಕಾಯ್ದೆಯೊಂದರ ರದ್ದತಿಗೆ ಕಾರಣವಾದ ರೂಮರ್ v. ಈವಾನ್ಸ್ ("ರೂಮರ್"),, ಪ್ರಕರಣವನ್ನು ಈ ತೀರ್ಪಿನಲ್ಲಿ ಉಲ್ಲೇಖಿಸಲಾಯಿತು. ತದನಂತರ, ನ್ಯಾಯಾಲಯ ಕ್ಯಾಸಿ (ಮೇಲ್ಕಂಡ) ಮತ್ತು  ರೂಮರ್ (ಮೇಲ್ಕಂಡ) ಪ್ರಕರಣದಲ್ಲಿ ತೆಗೆದುಕೊಂಡ

ನಿರ್ಧಾರಗಳಿಂದಾಗಿ, 1986ನೇ ಇಸವಿಯ ಬೋವರ್ಸ್ (ಮೇಲ್ಕಂಡ) ಪ್ರಕರಣದ ತೀರ್ಪು "ಗಂಭೀರವಾದ ಸವೆತಕ್ಕೆ ಒಳಗಾಗಿದ್ದು", ಆ ನಿರ್ಧಾರವನ್ನು ಮರುಪರಿಶೀಲಿಸಬೇಕು ಎಂದು ಬಹುಮತದ ತೀರ್ಪಿನಲ್ಲಿ ಘೋಷಿಸಲಾಯಿತು. ನ್ಯಾಯಮೂರ್ತಿ ಓ'ಕೊಣ್ಣೂರ್ ರವರು ಮೇಲಿನ ತೀರ್ಪನ್ನು ಒಪ್ಪಿಕೊಂಡರಾದರೂ, ಬೋವರ್ಸ್ (ಮೇಲ್ಕಂಡ) ತೀರ್ಪನ್ನು ರದ್ದುಮಾಡುವ ಬದಲು ಅದನ್ನು ಬದಿಗೆ ಸರಿಸಿದರು. ನ್ಯಾಯಾಲಯವು ಹಿಂದಿನ ಕಾನೂನುಗಳಿಗೆ ಬದ್ಧರಾಗಿರಬೇಕಿರುವುದರಿಂದ, ಬವರ್ಸ್ (ಮೇಲ್ಕಂಡ) ತೀರ್ಪನ್ನು ಹಿಂಪಡೆಯಲು ಆಗುವುದಿಲ್ಲ ಎಂಬ ನ್ಯಾಯಮೂರ್ತಿ ಸ್ಕೀಲಿಯಾರ ಅಭಿಪ್ರಾಯವನ್ನು ಮುಖ್ಯ ನ್ಯಾಯಮೂರ್ತಿ ಮತ್ತು ನ್ಯಾಯಮೂರ್ತಿ ಥಾಮಸ್ ಬೆಂಬಲಿಸಿದರು. ನ್ಯಾಯಮೂರ್ತಿ ಸ್ಕೀಲಿಯಾರವರ ತೀರ್ಪಿನ ಆಸಕ್ತಿಕರ ವಾಕ್ಯವೊಂದು ಹೀಗಿದೆ:-

> "ಸಮಲೈಂಗಿಕರು ಅಥವಾ ಇತರ ಗುಂಪಿನವರು ಪ್ರಜಾಪ್ರಭುತ್ವದ ಸಾಮಾನ್ಯ ಮಾರ್ಗಗಳ ಮೂಲಕ ತಮ್ಮ ಉದ್ದೇಶಗಳನ್ನು ಪ್ರತಿಪಾದಿಸುವುದಕ್ಕೆ ನನ್ನ ವಿರೋಧವಿಲ್ಲವೆಂದು ನಾನು ಸ್ಪಷ್ಟಪಡಿಸುತ್ತಿದ್ದೇನೆ. ಲೈಂಗಿಕ ಅಥವಾ ಇತರ ಬಗೆಯ ನೈತಿಕತೆಗಳ ಬಗೆಗಿನ ಸಮಾಜದ ಪರಿಕಲ್ಪನೆಗಳು ಕಾಲಕ್ರಮೇಣ ಬದಲಾಗುತ್ತವೆ, ಮತ್ತು ಅಂತಹ ವಿಚಾರಗಳಲ್ಲಿ ತಮ್ಮ ದೃಷ್ಟಿಕೋನವನ್ನು ಅನುಮೋದಿಸುವಂತೆ ಇತರರನ್ನು ಆಗ್ರಹಿಸುವ ಹಕ್ಕು ಪ್ರತೀ ಸಮುದಾಯಕ್ಕಿದೆ. ಸಮಲೈಂಗಿಕರು ತಮ್ಮ ಹಿತಾಸಕ್ತಿಯನ್ನು ಪ್ರತಿಪಾದಿಸುವುದರಲ್ಲಿ ಯಶಸ್ವಿಯಾಗಿದ್ದಾರೆ ಎನ್ನುವುದಕ್ಕೆ, ಟೆಕ್ಸಾಸ್ ರಾಜ್ಯವು, ಸಮಲೈಂಗಿಕತೆಯನ್ನು ಶಿಕ್ಷಿಸುವ ಕೆಲವೇ ರಾಜ್ಯಗಳಲ್ಲೊಂದಾಗಿ ಉಳಿದಿದೆ ಎಂಬುದೇ ಸಾಕ್ಷಿ. ಆದರೆ, ತಮ್ಮ ದೃಷ್ಟಿಕೋನವನ್ನು ಪ್ರತಿಪಾದಿಸುವುದಕ್ಕೂ,

ಪ್ರಜಾತಾಂತ್ರಿಕ ಬಹುಮತ ಇಲ್ಲದಿರುವ ಸಂದರ್ಭದಲ್ಲಿ ತಮ್ಮ ದೃಷ್ಟಿಕೋನವನ್ನು ಇತರ ನಾಗರಿಕರ ಮೇಲೆ ಹೇರುವುದಕ್ಕೂ ವ್ಯತ್ಯಾಸವಿದೆ. ಇಂತಹ ಸಂದರ್ಭದಲ್ಲಿ ನಾನು ಸಮಲೈಂಗಿಕ, ಅಥವಾ ಇತರ ನೈತಿಕವಾಗಿ ವಿರೋಧಾಭಾಸದ, ಕ್ರಿಯೆಗಳ ಅಪರಾಧೀಕರಣವನ್ನು ವಿರೋಧಿಸಿದಷ್ಟೇ ತೀವ್ರವಾಗಿ, ಆದನ್ನು ಅಪರಾಧ ಮುಕ್ತಗೊಳಿಸುವುದನ್ನೂ ವಿರೋಧಿಸುತ್ತೇನೆ. ಟೆಕ್ಸಾಸ್ ರಾಜ್ಯ ತೆಗೆದುಕೊಂಡಿರುವ ನಿರ್ಧಾರವು ಸಾಂಪ್ರದಾಯಿಕ ಪ್ರಜಾತಾಂತ್ರಿಕ ಪ್ರಕ್ರಿಯೆಗಳ ವ್ಯಾಪ್ತಿಯಲ್ಲೇ ಬರುತ್ತದೆ ಮತ್ತು, ಪ್ರಜಾತಂತ್ರವನ್ನು ಪರಿವರ್ತಿಸಲು ಕಾತುರವಾಗಿರುವ ನ್ಯಾಯಾಲಯವೊಂದು ಆವಿಷ್ಕರಿಸಿರುವ 'ಸಾಂವಿಧಾನಿಕ ನೈತಿಕತೆ' ಎಂಬ ಪರಿಕಲ್ಪನೆಯ ಮೂಲಕ ಆ ಸಾಂಪ್ರದಾಯಿಕ ಪ್ರಕ್ರಿಯೆಯನ್ನು ತಡೆಯುವುದು ಸಾಮಾಂಜಸವಲ್ಲ.

ಒಂದು ಕಾಲದಲ್ಲಿ ಅಗತ್ಯ ಮತ್ತು ಸಮಂಜಸ ಎಂದುಕೊಂಡಿದ್ದ ಕಾನೂನುಗಳು ಪ್ರಸ್ತುತ ಸನ್ನಿವೇಶದಲ್ಲಿ ಕೇವಲ ಶೋಷಣೆ ಮಾಡುತ್ತಿವೆ ಎಂಬುದನ್ನು ಮುಂದಿನ ಪೀಳಿಗೆಯವರು ಮನಗಾಣಬಹುದು ಎಂಬುದರ ಅರಿವು ನಮಗಿದೆ. ಹಾಗಾದಾಗ ಅಂತಹ ಕಾನೂನನ್ನು ಮುಂದಿನ ಪೀಳಿಗೆಯವರು ರದ್ದುಪಡಿಸಿಕೊಳ್ಳಬಹುದು. ಆದರೆ ಅಂತಹ ನಿರ್ಧಾರಗಳನ್ನು ಪ್ರಜೆಗಳು ತೆಗೆದುಕೊಳ್ಳಬೇಕೇ ಹೊರತು,

> ಅವರನ್ನು ಆಳುವವರು ತಮಗೆ ತೋಚಿದಂತೆ
> ಮಾಡಬಾರದು ಎಂಬುದು ನಮ್ಮ ವ್ಯವಸ್ಥೆಯ ನಿಯಮ"

37. ನಮ್ಮ ತೀರ್ಪನ್ನು ತಿಳಿಸುವುದಕ್ಕೆ ಮುನ್ನ, ಜಗತ್ತಿನ ಇತರ ಪ್ರಜಾತಾಂತ್ರಿಕ ದೇಶಗಳ ನ್ಯಾಯಾಲಯಗಳ ಕೆಲ ತೀರ್ಪುಗಳನ್ನು ಅವಲೋಕಿಸೋಣ. ಐರೂಪ್ಯ ಸಮುದಾಯದಲ್ಲಿ ಡಡ್ಜಿಯಾನ್ v. ಯುನೈಟೆಡ್ ಕಿಂಗ್ಡಂ (ಮೇಲ್ಕಂಡ) ಪ್ರಕರಣದಿಂದ ಮೊದಲುಗೊಂಡು, ನಾರಿಸ್ v. ಐರ್ಲ್ಯಾಂಡ್, ಮತ್ತು ಮೋದಿನೂಸ್ v. ಸಿಪ್ರಸ್,, 377ನೇ ಪರಿಚ್ಛೇದವನ್ನು ಹೋಲುವ ಕಾಯ್ದೆಗಳು, ಎಲ್ಲ ವ್ಯಕ್ತಿಗಳಿಗೆ ಖಾಸಗೀ ಹಾಗೂ ಕೌಟುಂಬಿಕ ಜೀವನ ನಡೆಸುವ, ತಮಗೆ ಬೇಕಾದಲ್ಲಿ ಮನೆ ಮಾಡುವ ಮತ್ತು ಬೇಕಾದವರೊಂದಿಗೆ ಸಂಪರ್ಕ ಇಟ್ಟುಕೊಳ್ಳುವ ಹಕ್ಕಿದ್ದು, ಆ ಹಕ್ಕುಗಳಲ್ಲಿ ಯಾರೂ ಮೂಗು ತೂರಿಸಬಾರದು, ಮತ್ತು ಮೂಗು ತೂರಿಸಲೇ ಬೇಕಿದ್ದಲ್ಲಿ ಅದಕ್ಕೆ ಪ್ರಜಾತಾಂತ್ರಿಕ ಸಮಾಜವೊಂದರಲ್ಲಿ ಪಾತಕ ಮತ್ತು ಅವ್ಯವಸ್ಥೆಗಳನ್ನು ತಡೆಯುವ, ಸಮಾಜದ ಸ್ವಾಸ್ಥ್ಯ ಮತ್ತು ನೈತಿಕತೆಯನ್ನು ಕಾಪಾಡುವ ಮತ್ತು ಇತರರ ಹಕ್ಕು ಮತ್ತು ಸ್ವಾತಂತ್ರ್ಯಗಳನ್ನು ರಕ್ಷಿಸುವ ಉದ್ದೇಶವಿರಬೇಕು ಎಂಬು ಸಾರುವ ಐರೂಪ್ಯ ಮಾನವಾಧಿಕಾರ ಅಧಿವೇಶನ, 1948ರ 8ನೇ ಕಲಮನ್ನು ಉಲ್ಲಂಘಿಸುತ್ತವೆ ಎಂಬ ಅಭಿಪ್ರಾಯಕ್ಕೆ ಬರಲಾಗಿದೆ. ಸದರಿ ಕಲಮಿನಲ್ಲಿ ಪ್ರತಿಪಾದಿಸಲಾಗಿದೆ.

38. ಎಲ್-ಅಲ್ ಇಸ್ರೈಲ್ ಏರ್ಲೈನ್ಸ್ ಲಿ. v. ಜಾನಥನ್ ಡೀನಿಯಲ್ವಿಟ್ಜ್, ಪ್ರಕರಣದಲ್ಲಿ ಇಸ್ರೇಲಿನ ಸರ್ವೋಚ್ಚ ನ್ಯಾಯಾಲಯದ ಪರವಾಗಿ ಮಾತನಾಡಿದ ನ್ಯಾ. ಬರಾಕ್, ಸಮಲೈಂಗಿಕ ಸಂಬಂಧಗಳನ್ನು ಗುರುತಿಸಿ, ಇಬ್ಬರು ಪುರುಷರನ್ನು ಸಂಗಾತಿಗಳೆಂದು ಪರಿಗಣಿಸಿ ಅವರಿಗೆ ಉಚಿತವಾಗಿ ಅಥವಾ ರಿಯಾಯತಿ ದರದಲ್ಲಿ ವಿಮಾನದ ಟೀಕೇಟುಗಳನ್ನು ನೀಡಬಹುದು ಎಂದು ನುಡಿಯಿತು. ನ್ಯಾಯಾಲಯದ ತೀರ್ಮಾನ ಹೀಗಿತ್ತು:-

> "**14.**...ಸಮಸ್ಯೆಯ ಸ್ವರೂಪ ಮತ್ತು ಸತ್ವಕ್ಕೆ ಅನುಗುಣವಾಗಿ
> ಅಗತ್ಯವಿದ್ದಾಗ ಮಾತ್ರ ಕಾನೂನು ಕೆಲ ಜನರನ್ನು ಇತರರಿಗಿಂತ

ಪ್ರತ್ಯೇಕವಾಗಿ ನಡೆಸಿಕೊಳ್ಳುವುದನ್ನು ಸಮರ್ಥಿಸಿಕೊಳ್ಳಬಹುದು ಎಂಬುದು ಸಮಾನತೆಯ ಸಿದ್ಧಾಂತದ ಮಾನದಂಡಗಳಲ್ಲೊಂದು. ಈ ಪ್ರಕಾರವಾಗಿ ಕೆಲ ಜನರನ್ನು ಪ್ರತ್ಯೇಕವೆಂದು (ಪರಕೀಯತೆ,ಅಸಮಾನತೆ) ಪರಿಗಣಿಸಲು ವಸ್ತುನಿಷ್ಟವಾದ ಕಾರಣವಿದೆ ಎಂಬ ನಂಬಿಕೆ ಸಮಾನತೆಯ ಸಿದ್ಧಾಂತಕ್ಕೆ ಇರುತ್ತದೆ. ಹೀಗಾಗಿ, ಮುಕ್ತ ಮತ್ತು ಪ್ರಜಾತಾಂತ್ರಿಕ ಸಮಾಜದಲ್ಲಿ ಇತರರಿಗಿಂತ ಭಿನ್ನವಾಗಿರುವ ವ್ಯಕ್ತಿಗಳಿಗೆ ಪ್ರತ್ಯೇಕ ಕಾನೂನು ಅನ್ವಯವಾಗುತ್ತಿದ್ದು ಅವರನ್ನು ಹಾಗೆ ಪ್ರತ್ಯೇಕವಾಗಿ ನಡೆಸಿಕೊಳ್ಳಲು ಸರಿಯಾದ ಸಮರ್ಥನೆಗಳು ಇಲ್ಲದೆ ಹೂಡಾಗ, ಅಂತಹ ಸಮಾಜದಲ್ಲಿ ಸಮಾನತೆಗೆ ವಿರುದ್ಧವಾದ - ಭೇದಾಭಾವ ಎದ್ದು ಕಾಣುತ್ತದೆ. ನ್ಯಾಯಮೂರ್ತಿ ಆರ್ ಹೇಳಿದಂತೆ, ಭೇದಾಭಾವ ಎಂದರೆ, "ವಸ್ತುನಿಷ್ಟ ಸಮರ್ಥನೆಗಳಿಲ್ಲದ ಸಂದರ್ಭದಲ್ಲಿ ಪ್ರತ್ಯೇಕವಾಗಿ ನಡೆಸಿಕೊಳ್ಳುವುದು". ಈ ವಿಚಾರವನ್ನು ಚರ್ಚಿಸಿದ ಅಧ್ಯಕ್ಷ ಅಗ್ರನಾಟ್ ಕೆಳಕಂಡಂತೆ ಗಮನಿಸುತ್ತಾರೆ:

> ತಾರತಮ್ಯಕ್ಕೆ ನೇರವಾಗಿ ವಿರುದ್ಧವಾಗಿರುವ ಮತ್ತು ನ್ಯಾಯ ಹಾಗು ಕಾನೂನುಬದ್ಧತೆಯ ಕಾರಣಗಳಿಗಾಗಿ, ಪ್ರತಿ ಪ್ರಜಾತಾಂತ್ರಿಕ ದೇಶದ ಕಾನೂನು ಸಾಧಿಸಲು ಬಯಸುವ ಸಮಾನತೆಯ ತತ್ವವು, ಉದ್ದೇಶವೊಂದಕ್ಕೆ ಸಂಬಂಧಿಸಿದಂತೆ ಜನಗಳ ನಡುವೆ ನೈಜವಾದ ವ್ಯತ್ಯಾಸಗಳು ಇಲ್ಲದಿದ್ದಾಗ ಜನರನ್ನು ಆ ನಿರ್ದಿಷ್ಟ ಉದ್ದೇಶಕ್ಕಾಗಿ ಸಮಾನವಾಗಿ ಪರಿಗಣಿಸಬೇಕು ಎಂಬ ಅರ್ಥನೀಡುತ್ತದೆ. ಅವರನ್ನು ಸಮಾನವಾಗಿ ನಡೆಸಿಕೊಳ್ಳದಿದ್ದರೆ, ನಮ್ಮೆದುರು ತಾರತಮ್ಯದ ನಿದರ್ಶವನವೊಂದು ಪ್ರಕಟವಾಗುತ್ತದೆ ಆದಾಗ್ಯೂ, ವಿವಿಧ

ಜನರ ನಡುವಿನ ವ್ಯತ್ಯಾಸ ಅಥವಾ ವ್ಯತ್ಯಾಸಗಳು ಚರ್ಚಿಸಲಾಗುತ್ತಿರುವ ಉದ್ದೇಶದ ಮಟ್ಟಿಗೆ ಸೂಕ್ತವಾಗಿದ್ದರೆ, ಅದು ಆ ಉದ್ದೇಶಕ್ಕಾಗಿ ಅವರನ್ನು ವಿಭಿನ್ನವಾಗಿ ನಡೆಸಿಕೊಳ್ಳಲು ಅನುಮತಿಸಬಹುದಾದ ವ್ಯತ್ಯಾಸವಾಗಿದೆ, ಆದರೆ ವ್ಯತ್ಯಾಸಗಳು ಇದನ್ನು ಸಮರ್ಥಿಸುವಂತಿರಬೇಕು. ಈ ಸನ್ನಿವೇಶದಲ್ಲಿ, "ಸಮಾನತೆ" ಎಂಬ ಪರಿಕಲ್ಪನೆಯು "ಸೂಕ್ತ ಸಮಾನತೆ" ಎಂಬ ಅರ್ಥ ನೀಡುತ್ತದೆ, ಮತ್ತು ಅದು ಚರ್ಚಿಸಲಾಗುತ್ತಿರುವ ಉದ್ದೇಶದ ಮಟ್ಟಿಗೆ ಈ ಸ್ಥಿತಿಯಲ್ಲಿರುವ ವ್ಯಕ್ತಿಗಳನ್ನು "ಸಮಾನವಾಗಿ ನಡೆಸಿಕೊಳ್ಳಬೇಕು" ಎಂದು ಅಪೇಕ್ಷಿಸುತ್ತದೆ. ಇದಕ್ಕೆ ತದ್ವಿರುದ್ಧವಾಗಿ, ವಿಭಿನ್ನ ವ್ಯಕ್ತಿಗಳನ್ನು ವಿಭಿನ್ನವಾಗಿ ನಡೆಸಿಕೊಳ್ಳುವುದು, ಆ ವ್ಯಕ್ತಿಗಳನ್ನು ಹಾಗೆ ನಡೆಸಿಕೊಳ್ಳುವ ಉದ್ದೇಶದಿಂದಲೇ ಸಮಂಜಸ ಅಸಮಾನತೆಯಲ್ಲಿ ಇಡಲಾಗಿದೆ ಎಂಬ ವಿಚಾರವನ್ನು ಆಧರಿಸಿದ್ದರೆ ಅದು ಒಪ್ಪತಕ್ಕಂತಹ ವ್ಯತ್ಯಾಸವಾಗಿರುತ್ತದೆ. ಅದೇ ವೇಳೆ ಆ ಭಿನ್ನವಾದ ನಡವಳಿಕೆಗಳು, ವ್ಯಕ್ತಿಗಳು ಅಸಮಾನತೆಯ ಪರಿಸ್ಥಿತಿಯಲ್ಲಿ ಇರುವುದು, ಅವರನ್ನು ಹಾಗೆ ನಡೆಸಿಕೊಳ್ಳುವುದರ ಹಿಂದಿನ ಉದ್ದೇಶದ ಮಟ್ಟಿಗೆ ಸೂಕ್ತವಾಗಿಲ್ಲದ ಸಂದರ್ಭವನ್ನು ಅವಲಂಬಿಸಿದ್ದರೆ ಅದು ತಾರತಮ್ಯಕ್ಕೆ ಸಮ.

ಆದ್ದರಿಂದ, ಇಬ್ಬರು ಪರಸ್ಪರ ಭಿನ್ನವಾಗಿರುವ ವ್ಯಕ್ತಿಗಳ ನಡುವಿನ ವಾಸ್ತವಿಕ ವ್ಯತ್ಯಾಸವು ಸದರಿ ಪರಿಸ್ಥಿತಿಗಳಲ್ಲಿ ಅವರಿಬ್ಬರನ್ನು ಬೇರೆಬೇರೆಯಾಗಿ ನಡೆಸಿಕೊಳ್ಳುವುದನ್ನು

ಸಮರ್ಥಿಸಲು ಸಾಧ್ಯವಾಗದಿರುವಾಗಲೂ ಅವರನ್ನು ಕಾನೂನೊಂದು ಭಿನ್ನವಾಗಿ ನಡೆಸಿಕೊಂಡಾಗ ಆ ನಿರ್ದಿಷ್ಟ ಕಾನೂನಿನಿಂದ ತಾರತಮ್ಯವನ್ನು ಉಂಟುಮಾಡುತ್ತದೆ. ಆದ್ದರಿಂದ ತಾರತಮ್ಯವು, ನಿರಂಕುಶತ್ವ, ಅನ್ಯಾಯ ಮತ್ತು ಅತಾರ್ಕಿಕತೆಯ ಅಂಶಗಳನ್ನು ಆಧರಿಸಿದೆ.

XXX

17. ಆದ್ದರಿಂದ, ಒಬ್ಬ (ಶಾಶ್ವತ) ಉದ್ಯೋಗಿಯ ವಿರುದ್ಧ ಲಿಂಗದ ಸಂಗಾತಿ ಅಥವಾ ಮಾನ್ಯಗೊಳಿಸಲ್ಪಟ್ಟ ಒಡನಾಡಿಗೆ ಸವಲತ್ತೊಂದನ್ನು ನೀಡಿ, ಅದೇ ಸವಲತ್ತನ್ನು ಮತ್ತೊಬ್ಬ ಉದ್ಯೋಗಿಯ ಸಮಾನ ಲಿಂಗದ ಒಡನಾಡಿಗೆ ನೀಡಿದಿದ್ದರೆ ಅದು ಸಮಾನತೆಯನ್ನು ಉಲ್ಲಂಘನೆ ಎಂಬುದನ್ನು ನಾವು ನೋಡಿದ್ದೇವೆ. ಈ ತಾರತಮ್ಯದ ಸ್ವರೂಪವೇನು? ಖಂಡಿತವಾಗಿಯೂ, ಎಲ್ಲಾ ತಾರತಮ್ಯವನ್ನು ನಿಷೇಧಿಸಲಾಗಿದೆ, ಆದರೆ ಬೇರೆ ಬೇರೆ ಬೇರೆ ತಾರತಮ್ಯಗಳಲ್ಲಿ, ಬೇರೆ ಬೇರೆ ಹಂತಗಳಿವೆ. ತಾರತಮ್ಯದ ತೀವ್ರತೆಯನ್ನು ಸಮಾನತೆಯ ತತ್ವದ ಉಲ್ಲಂಘನೆಯ ತೀವ್ರತೆಯಿಂದ ನಿರ್ಧರಿಸಲಾಗುತ್ತದೆ. ಹೀಗಾಗಿ, ಉದಾಹರಣೆಗೆ, ನಾವು ಜನಾಂಗ, ಧರ್ಮ, ರಾಷ್ಟ್ರೀಯತೆ, ಭಾಷೆ, ಜನಾಂಗೀಯ ಗುಂಪು ಮತ್ತು ವಯಸ್ಸಿನ ಆಧಾರದ ಮೇಲೆ ತಾರತಮ್ಯವನ್ನು ವಿಶೇಷವಾಗಿ ಗಂಭೀರವಾದುವೆಂದು ಪರಿಗಣಿಸುತ್ತೇವೆ. ಈ ಚೌಕಟ್ಟಿನಲ್ಲಿ, ಇಸ್ರೇಲಿನ ಕಾನೂನು ವ್ಯವಸ್ಥೆಯು ಲಿಂಗಗಳ ನಡುವಿನ

ಸಮಾನತೆಯನ್ನು ಖಾತರಿಪಡಿಸುವ ಅಗತ್ಯತೆಗೆ ಮತ್ತು ಲೈಂಗಿಕ ಆಧಾರದ ಮೇಲಿನ ತಾರತಮ್ಯವನ್ನು ತಡೆಗಟ್ಟುವ ಅವಶ್ಯಕತೆಗೆ ಮಹತ್ತರವಾದ ಪ್ರಾಮುಖ್ಯತೆಯನ್ನು ನಿಡುತ್ತದೆ (ಒತ್ತು ನೀಡಲಾಗಿದೆ)

39. ಟ್ರಿನಿಡಾಡ್ ಮತ್ತು ಟೊಬ್ಯಾಗೋದಲ್ಲಿ **ಜೇಸನ್ ಜೂನ್ಸ್ v. ಟ್ರಿನಿಡಾಡ್ ಮತ್ತು ಟೋಬ್ಯಾಗೂದ ಅಟಾರ್ನೀ ಜನರಲ್ ಕ್ಲೇಮ್** 2017 ಪ್ರಕರಣದಲ್ಲಿ ಇತ್ತೀಇಸೆಗೆ ನೀಡಲಾದ ತೀರ್ಪೊಂದು **ಪುಟ್ಟಸ್ವಾಮಿ (ಮೇಲ್ಕಂಡ)** ಪ್ರಕರಣದಲ್ಲಿನ ನಮ್ಮ ತೀರ್ಪಿನ್ನೇ ಅನುಸರಿಸಿ, ಸರ್ಕಾರ ಒಪ್ಪಿಗೆಯಿರುವ ಸಮಾನ ಲಿಂಗದ ವಯಸ್ಕರ ನಡುವಿನ ಲೈಂಗಿಕ ಕ್ರಿಯೆಗಳನ್ನು ಅಪರಾಧೀಕರಿಸುವ ಹಾಗಿಲ್ಲ ಎಂಬ ಕಾರಣ ನೀಡಿ ಸೆಕ್ಷುವಲ್ ಅಫೆನ್ಸಸ್ ಆಕ್ಟ್ (ಲೈಂಗಿಕ ಅಪರಾಧ ಕಾಯ್ದೆ), 1986ರ 13ನೇ ಪರಿಚ್ಛೇದವನ್ನು ರದ್ದುಪಡಿಸಿತು. ನ್ಯಾಯಾಲಯದ ನಿರ್ಧಾರ ಹೀಗಿತ್ತು:-

168. ಎಲ್ಲಾ ಪಕ್ಷಗಳು ನ್ಯಾಯಾಲದೆದುರು ಹಾಜರುಪಡಿಸಿದ ಸಾಕ್ಷ್ಯ ಮತ್ತು ಸಲ್ಲಿಕೆಗೆಳನ್ನು ಗಮನಿಸಿದನಂತರ, ಶಾಸನದ ಉದ್ದೇಶವು ಅರ್ಜಿದಾರರ ಹಕ್ಕುಗಳನ್ನು ಕಡಿತಗೊಳಿಸುವಷ್ಟು ಮುಖ್ಯವಲ್ಲ ಎಂಬುದು ಕಂಡುಬರುತ್ತದೆ ಮೇಲಿನ. ಶ್ರೀಯುತ ಹುಸೇನ್ ಈ ಕೆಳಗಿನ ಉದ್ದೇಶಗಳನ್ನು ತಿಳಿಸಿದರು.

168.1. ಸಮಾಜವನ್ನು ಪ್ರತಿನಿಧಿಸುವ ಸಾಂಪ್ರದಾಯಿಕ ಕುಟುಂಬ ಮತ್ತು ಮೌಲ್ಯಗಳನ್ನು ನಿವಹಿಸುವುದು

168.2 ಶಾಸನವನ್ನು ಇದ್ದಂತೆಯೇ ಉಲಿಸಿಕೊಳ್ಳುವುದು ಮತ್ತು ಕಾನುನನ್ನು ಸ್ಪಷ್ಟಪಡಿಸುವುದು.

168.3 16ನೇ ಪರಿಚ್ಛೇದದಡಿಯ ಅಪರಾಧವನ್ನು ಮಹಿಳೆಯರಿಗೂ ವಿಸ್ತರಿಸುವುದು ಮತ್ತು ಅದನ್ನು ಗಂಭೀರ ಅಸಭ್ಯತೆಯಿಂದ ಸಂಪೂರ್ಣ ಅಸಭ್ಯತೆಗೆ ಇಳಿಸುವುದು.

ಮೇಲಿನ ಉದ್ದೇಶಗಳು, ಅರ್ಜಿದಾರರು ಸಾಕ್ಷಿನೀಡಿರುವಂತೆ, ಅವರ ಮೂಲಭೂತ ಹಕ್ಕುಗಳ ಕಡಿತಗೊಳಿಸುವಿಕೆಯನ್ನು ಸರಿಪಡಿಸುವುದಿಲ್ಲ.

ಬದಲಿಗೆ ನ್ಯಾಯಾಲಯವು ಪ್ರಸ್ತುತ ಕಾನೂನು ಅವರ ಮೂಲಭೂತ ಹಕ್ಕುಗಳನ್ನು ಕಡಿತಗೊಳಿಸುವಷ್ಟು ಮುಖ್ಯವಲ್ಲ ಮತ್ತು ಅವರು ಅದನ್ನು ಸಂಭವನೀಯತೆಯ ಸಮತೋಲನದ ಆಧಾರದಲ್ಲಿ ಸಾಬೀತು ಪಡಿಸಿದ್ದಾರೆ ಎಂಬ ಅರ್ಜಿದಾರ ವಾದವನ್ನು ಒಪ್ಪಿಕೊಳ್ಳುತ್ತದೆ.

40. ಇಂತಹುದೇ ಪರಿಣಾಮ ಬೀರಬಲ್ಲ ತೀರ್ಪೊಂದನ್ನು ಫಿಜಿಯ ಉಚ್ಛ ನ್ಯಾಯಾಲಯವು ಧೀರೇಂದ್ರ ನಾದನ್ v. ಸರ್ಕಾರ, 2005, ಪ್ರಕರಣದಲ್ಲಿ ನೀಡಿತು ಈ ತೀರ್ಪಿನಲ್ಲಿ, 377ನೇ ಪರಿಚ್ಛೇದವನ್ನು ಹೋಲುವ ಪರಿಚ್ಛೇದವೊಂದು ಸಂವಿಧಾನಿಕವಾದ ಖಾಸಗೀತನದ ಹಕ್ಕಿನೊಂದಿಗೆ ತಾಳೆಯಾಗುವುದಿಲ್ಲ ಮತ್ತು ಅದು ವಯಸ್ಕರ ನಡುವಿನ "ನಿಸರ್ಗದ ಕ್ರಿಯೆಗೆ ವಿರುದ್ಧವಾದ" ಖಾಸಗೀ ಲೈಂಗಿಕ ಕ್ರಿಯೆಗಳನ್ನು ಅಪರಾಧೀಕರಿಸುವುದರಿಂದ ಅದು ಅಮಾನ್ಯವಾಗಿದೆ ಎಂದು ನಿರ್ಧರಿಸಲಾಯಿತು.

41. ದಕ್ಷಿಣ ಆಫ್ರಿಕಾದ ಸರ್ವೋಚ್ಛ ನ್ಯಾಯಾಲಯ, 1999ನೇ ಇಸವಿಯಲ್ಲಿ ನ್ಯಾಷನಲ್ ಕೊಯಲಿಶನ್ ಫಾರ್ ಗೇ ಅನ್ಡ್ ಲೆಸ್ಬಿಯನ್ ಈಕ್ವಾಲಿಟಿ v. ಆಂತರಿಕ ವ್ಯವಾಹರಗಳ ಸಚಿವ, ಪ್ರಕರಣದಲ್ಲಿ ಇತರ ನ್ಯಾಯಾಲಯಗಳ ಹಲವು ತೀರ್ಪುಗಳನ್ನು ಪರಾಂಬರಿಸಿದ ನಂತರ, ಇಂತಹುದೇ ಪರಿಚ್ಛೇದವೊಂದು ಆ ದೇಶದ ಸಂವಿಧಾನ ಕೊಡಮಾಡಿರುವ ಮೂಲಭೂತ ಹಕ್ಕುಗಳೊಂದಿಗೆ ತಾಳೆಯಾಗುವುದಿಲ್ಲ ಎಂದು ಗಮನಿಸಿತು..

42. ಸಂಯುಕ್ತ ರಾಷ್ಟ್ರ ಒಕ್ಕೂಟದ ಮಾನವಾಧಿಕಾರ ಸಮಿತಿಯು ಟ್ಯೂನೆನ್ v. ಆಸ್ಟ್ರೇಲಿಯಾ ಕಮ್ಯೂನಿಕೇಶನ್ (1994), ಪ್ರಕರಣದಲ್ಲಿ ನೀಈಡಿದ ತೀರ್ಪು ಇಂತಹುದೀ ಮತ್ತೊಂದು ನಿದರ್ಶನ. ಟಾಸ್ಮೇನಿಯಾ ರಾಜ್ಯದ ನಿವಾಸಿ ಶ್ರೀಯುತ ನಿಕೋಲಾಸ್ ಟ್ಯೂನೆನ್ ರವರ ಖಾಸಗೀತನದೊಳಕ್ಕೆ ನಿರಂಕುಶ ಹಸ್ತಕ್ಷೇಪ ನಡೆದಿತ್ತೇ  ಮತ್ತು ಸಮಲೈಂಗಿಕರಾಗಿದ್ದ ಅವರ ಲೈಂಗಿಕ ನಿಲುವಿನ ಆಧಾರದಲ್ಲಿ ಅವರ ಮೇಲೆ ತಾರತಮ್ಯ ಎಸಗಲಾಗಿತ್ತೇ ಎಂಬುದನ್ನು ಪರಿಶೀಈಲಿಸಲು ಸಮಿತಿಯೊಂದನ್ನು ರಚಿಸಲಾಯಿತು. ಆ ಸಮಿತಿಯು ಕೆಳಗಿನ ವಿಚಾರಗಳನ್ನು ಮನಗಂಡಿತು:-

> 8.2 17 ಕಲಮಿನ  ವಿಚಾರದಲ್ಲಿ, ಖಾಸಗೀಯಾಗಿ ನಡೆಯುವ ವಯಸ್ಕರ ಒಪ್ಪಿಗೆಯ ಲೈಂಗಿಕ ಚಟುವಟಿಕೆಯು "ಖಾಸಗೀತನ" ಎಂಬ ಪರಿಕಲ್ಪನೆಯಡಿಲ್ಲಿ ಬರುವುದಿಲ್ಲ ಮತ್ತು ಟಾಸ್ಮೇನಿಯನ್ ಕಾನೂನಿನ ಮುಂದುವರಿದ ಅಸ್ತಿತ್ವದಿಂದಾಗಿ ಶ್ರೀ ಟ್ಯೂನೆನ್ ನಿಜವಾಗಿ ಪ್ರಭಾವಿತನಾಗಿರುತ್ತಾರೆ ಎಂದು ನಿರ್ಣಯಿಸಲಾಗುತ್ತದೆ. ಈ ನಿಬಂಧನೆಗಳನ್ನು ಒಂದು ದಶಕದಿಂದ ಜಾರಿಗೊಳಿಸದಿದ್ದರೂ ಸಹ, ಲೇಖಕರು ಟ್ಯಾಸ್ಮೆನಿಯನ್ ಅಪರಾಧ ಸಂಹಿತೆಯ 122 (a), (c) ಮತ್ತು 123ನೇ ಪರಿಚ್ಛೇದಗಳು "ಲೇಖಕರ ಖಾಸಗೀತನ" ದಲ್ಲಿ "ಮಧ್ಯಪ್ರವೇಶಿಸಿವೆ" ಎಂದು ಸಮಿತಿಯು ಪರಿಗಣಿಸುತ್ತದೆ. ಈ ಸನ್ನಿವೇಶದಲ್ಲಿ, ಸಾರ್ವಜನಿಕ ವಿಚಾರಣಾ ಇಲಾಖೆಯು ಖಾಸಗೀ ಸಮಲೈಂಗಿಕ ನಡವಳಿಕೆಗೆ ಸಂಬಂಧಿಸಿದಂತೆ ಕ್ರಿಮಿನಲ್ ಮೊಕದ್ದಮೆಗಳನ್ನು ಪ್ರಾರಂಭಿಸಬಾರದು ಎಂಬ ನೀತಿಯು ಭವಿಷ್ಯದಲ್ಲಿ ಸಮಲೈಂಗಿಕರ ವಿರುದ್ಧ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳಲಾಗುವುದಿಲ್ಲ ಎಂಬುದನ್ನು

ಖಾತರಿ ಪಡಿಸುವುದಿಲ್ಲ ಎಂದು ಅದು ಗಮನಿಸುತ್ತದೆ, ವಿಶೇಷವಾಗಿ 1988ರಲ್ಲಿ ಟ್ಯಾಸ್ಮೈನಿಯಾ ಸಾರ್ವಜನಿಕ ವಿಚಾರಣಾ ನಿರ್ದೇಶಕ ಮತ್ತು ಟಾಸ್ಮೇನಿಯಾದ ಸಂಸತ್ತಿನ ಸದಸ್ಯರು ನೀಡಿದ ಹೇಳಿಕೆಗಳ ಹಿನ್ನೆಲೆಯಲ್ಲಿ ಇದು ಇನ್ನೂ ಮುಖ್ಯವಾಗುತ್ತದೆ. ಪ್ರಶ್ನಿಸಲಾಗಿರುವ ನಿಬಂಧನೆಗಳ ಮುಂದುವರಿದ ಇರುವಿಕೆಯು ನಿರಂತರವಾಗಿ ಮತ್ತು ನೇರವಾಗಿ ಲೇಖಕರ ಖಾಸಗೀತನದಲ್ಲಿ "ಹಸ್ತಕ್ಷೇಪ ಮಾಡುತ್ತದೆ"

8.3 ಖಾಸಗೀ ಸಮಲೈಂಗಿಕತೆ ನಡವಳಿಕೆಯ ವಿರುದ್ಧ ನಿಷೇಧವನ್ನು ಕಾನೂನಿನ ಮೂಲಕ ಒದಗಿಸಲಾಗಿದೆ, ಅವುಗಳೆಂದರೆ ಟ್ಯಾಸ್ಮೈನಿಯನ್ ಅಪರಾಧ ಸಂಹಿತೆಯ 122 ಮತ್ತು 123ನೇ ಪರಿಚ್ಛೇದಗಳು. ಇವುಗಳನ್ನು ಅನಿಯಂತ್ರಿತವೆಂದು ಪರಿಗಣಿಸಲ್ಪಡಬಹುದೇ ಎಂಬ ವಿಚಾರದಲ್ಲಿ ಎಂದು ಸಮಿತಿಯು 17ನೇ ಕಲಮಿನ ಮೇಲಿನ ತನ್ನ ಸಾಮಾನ್ಯ ಟಿಪ್ಪಣಿ 16ಕ್ಕೆ ಪ್ರತಿಕ್ರಿಯೆಯಾಗಿ "ನಿರಂಕುಶತೆಯ ಪರಿಕಲ್ಪನೆಯ ಪರಿಚಯದ ಹಿಂದೆ ಕಾನೂನಿನ ಬೆಂಬಲವಿರುವ ಹಸ್ತಕ್ಷೇಪ ಸಹ ಒಪ್ಪಂದದ ನಿಬಂಧನೆಗಳು, ಗುರಿಗಳು ಮತ್ತು ಉದ್ದೇಶಗಳಿಗೆ ಅನುಗುಣವಾಗಿರಬೇಕು ಮತ್ತು ಅದು ಯಾವುದೇ ಸನ್ನಿವೇಶದಲ್ಲೂ ಸಮಂಜಸವಾಗಿರಬೇಕು. ಎಂಬುದನ್ನು ಖಾತರಿಪಡಿಸುವ ಉದ್ದೇಶವಿದೆ"(4) ಖಾಸಗೀತನದೊಳಗಿನ ಯಾವುದೇ ಹಸ್ತಕ್ಷೇಪವು ಸಾಧಿಸ

ಹೊರಟಿರುವ ಉದ್ದೇಶದೊಂದಿಗೆ ತಾಳೆಯಾಗಬೇಕು ಮತ್ತು ಯಾವುದೇ ನಿರ್ದಿಷ್ಟ ಪ್ರಕರಣದ ಸನ್ನಿವೇಶಕ್ಕೆ ಅಗತ್ಯವಾಗಿರಬೇಕು ಎಂದು ಸಮಿತಿಯು ಸಮಂಜಸತೆಯ ಅಗತ್ಯತೆಯನ್ನು ಅರ್ಥೈಸುತ್ತದೆ.

8.5 ಟಾಸ್ಮೇನಿಯಾದ ಅಧಿಕಾರಿಗಳ ಸಾರ್ವಜನಿಕ ಆರೋಗ್ಯವನ್ನು ಕುರಿತಾದ ವಾದಕ್ಕೆ ಸಂಬಂಧಿಸಿದಂತೆ, ಸಮಲೈಂಗಿಕ ಪದ್ಧತಿಗಳ ಅಪರಾಧೀಕರಣವನ್ನು ಏಡ್ಸ್/ ಎಚ್ಐವಿ ಹರಡುವಿಕೆಯನ್ನು ತಡೆಗಟ್ಟುವ ಗುರಿಯನ್ನು ಸಾಧಿಸುವ ಸಮಂಜಸವಾದ ವಿಧಾನ ಅಥವಾ ಸೂಕ್ತವಾದ ಆಧಾರ ಎಂದು ಪರಿಗಣಿಸಲು ಆಗುವುದಿಲ್ಲ ಎಂದು ಸಮಿತಿಯು ಹೇಳುತ್ತದೆ. ಸಮಲೈಂಗಿಕ ಚಟುವಟಿಕೆಯನ್ನು ಅಪರಾಧೀಕರಿಸುವ ಮಾಡುವ ಕಾನೂನುಗಳು ಸಾರ್ವಜನಿಕ ಆರೋಗ್ಯ ಕಾರ್ಯಕ್ರಮಗಳಿಗೆ, "ಸೋಂಕಿನ ಅಪಾಯವಿರುವ ಹಲವಾರು ಜನರನ್ನು ಅಡಗಿ ಕುಳಿತುಕೊಳ್ಳುವಂತೆ ಮಾಡುವ ಮೂಲಕ" ತಡೆಯೊಡ್ಡುತ್ತವೆ ಎಂದು ಆಸ್ಟ್ರೇಲಿಯಾದ ಸರ್ಕಾರವು ಗಮನಿಸುತ್ತದೆ. ಸಮಲೈಂಗಿಕ ಚಟುವಟಿಕೆಯ ಅಪರಾಧೀಕರಣವು ಏಡ್ಸ್/ಎಚ್ಐವಿ ತಡೆಗಟ್ಟುವಿಕೆಗೆ ಸಂಬಂಧಿಸಿದ ಪರಿಣಾಮಕಾರಿ ಶಿಕ್ಷಣ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಅಡ್ಡಿಪಡಿಸುತ್ತದೆ. ಎರಡನೆಯದಾಗಿ, ಸಮಲೈಂಗಿಕ ಚಟುವಟಿಕೆಯ ಅಪರಾಧೀಕರಣ ಮುಂದುವರಿಕೆ ಮತ್ತು ಎಚ್ಐವಿ/ಏಡ್ಸ್ ಜೀವಾಣುವಿನ ಹರಡುವಿಕೆಯ

ಪರಿಣಾಮಕಾರಿ ನಿಯಂತ್ರಣದ ನಡುವೆ ಯಾವುದೇ ಕೊಂಡಿಯನ್ನು ತೋರಿಸಲಾಗಿಲ್ಲ ಎಂದು ಸಮಿತಿಯು ಹೇಳುತ್ತದೆ.

8.7 ಸರ್ಕಾರೀ ಪಕ್ಷವು 26 ನೇ ಕಲಮಿನ ಉದ್ದೇಶಗಳಿಗಾಗಿ ಲೈಂಗಿಕ ನಿಲುವನ್ನು "ಇತರ ಸ್ಥಾನಮಾನ" ಎಂದು ಪರಿಗಣಿಸಬಹುದೇ ಎಂಬುದರ ಬಗೆಗೆ ಸಮಿತಿಯ ಮಾರ್ಗದರ್ಶನವನ್ನು ಕೋರಿದೆ. ಒಪ್ಪಂದದ 2ನೇ ಕಲಮಿನ 1ನೇ ವಾಕ್ಯದಡಿಯಲ್ಲಿ ಅಡಿಯಲ್ಲೂ ಅದೇ ಸಮಸ್ಯೆ ಉಂಟಾಗಬಹುದು. ಆದಾಗ್ಯೂ, ತನ್ನ ದೃಷ್ಟಿಯಲ್ಲಿ 2ನೇ ಕಲಮಿನ, 1, ಮತ್ತು 26ನೇ ವಾಕ್ಯಗಳಲ್ಲಿನು "ಲೈಂಗಿಕ ಎಂಬ ಉಲ್ಲೇಖವನ್ನು ಲೈಂಗಿಕ ನಿಲುವನ್ನೂ ಒಳಗೊಳ್ಳುವಂತೆ ಪರಿಗಣಿಸಬೇಕು ಎಂದು ಸಮಿತಿಯು ಸೂಚಿಸುತ್ತದೆ.

ಒಪ್ಪಂದದ 2 (3) (ಎ) ಕಲಮಿನ ಅಡಿಯಲ್ಲಿ, ಒಪ್ಪಂದದ 17ನೇ ಕಲಮು, 1ನೇ ವಾಕ್ಯ 1, ಜಂಕ್ಟೋ 2, 1ನೇ ವಾಕ್ಯದ, ಉಲ್ಲಂಘನೆಯ ಬಲಿಪಶುವಾಗಿರುವ ಲೇಖಕನಿಗೆ ಪರಿಹಾರ ಪಡೆಯುವ ಅರ್ಹತೆ ಇದೆ. ಸಮಿತಿಯ ಅಭಿಪ್ರಾಯದಲ್ಲಿ, ಟ್ಯಾಸ್ಮೈನಿಯನ್ ಅಪರಾಧ ಸಂಹಿತೆಯ 122 (ಎ) (ಸಿ) ಮತ್ತು 123ನೇ ಪರಿಚ್ಛೇದದ ರದ್ದುಗೊಳಿಸುವಿಕೆ ಒಂದು ಪರಿಣಾಮಕಾರಿ ಪರಿಹಾರವಾಗಿದೆ. "

43. ಕಂಡುಕೊಳ್ಳಲಾದ ವಿಚಾರಗಳ, ಆಸ್ಟ್ರೇಲಿಯಾ ಸಂಸತ್ತು 1994ನೇ ಇಸವಿಯ ಡಿಸೆಂಬರಿಮಲ್ಲಿ ಮಾನವಧಿಕಾರ (ಲೈಂಗಿಕ ನಡತೆ) ಕಾಯ್ದೆ, 1994ನ್ನು ಮಂಡಿಸಿತು, ಆ ಕಾಯ್ದೆಯ 4ನೇ ಪರಿಚ್ಛೇದ ಹೀಗೆ ನುಡಿಯುತ್ತದೆ:-

> **"4. ಖಾಸಗೀತನದೊಂದಿಗೆ ನಿರಂಕುಶ ಹಸ್ತಕ್ಷೇಪ**
>
> ವಯಸ್ಕರ ನಡುವೆ ಖಾಸಗೀಯಾಗಿ ನಡೆಯುವ ಒಪ್ಪಿಗೆಯ ಕ್ರಿಯೆಗಳನ್ನು ಒಳಗೊಂಡಿರುವ ಲೈಂಗಿಕ ನಡವಳಿಕೆಯು ಅಂತರಾಷ್ಟ್ರೀಯ ನಾಗರಿಕ ಮತ್ತು ರಾಜಕೀಯ ಹಕ್ಕುಗಳ ಮೇಲಿನ ಒಪ್ಪಂದದ 17ನೇ ಕಲಮಿನ ಅರ್ಥವ್ಯಾಪ್ತಿಯೊಳಗೆ, ಕಾಮನ್ವೆಲ್ತ್, ಯಾವುದೇ ಸರ್ಕಾರ ಅಥವಾ ಪ್ರಾಂತ್ಯದ ಯಾವುದೇ ಕಾನೂನಿನ ಮೂಲಕ ಖಾಸಗೀತನದಲ್ಲಿನ ಯಾವುದೇ ಬಗೆಯ ನಿರಂಕುಶ ಹಸ್ತಕ್ಷೇಪಕ್ಕೆ ಒಳಗಾಗಬಾರದು.
>
> ಈ ಪರಿಚ್ಛೇದಕ್ಕೆ ಸಂಬಂಧಿಸಿದಂತೆ, 18 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನವರನ್ನು ವಯಸ್ಕ ವ್ಯಕ್ತಿಗಳೆಂದು ಪರಿಗಣಿಸಲಾಗಿದೆ

## ಈ ನ್ಯಾಯಾಲಯದ ಇತ್ತೀಚಿನ ತೀರ್ಪುಗಳು

44. ಅನುಜ್ ಗರ್ಗ್ ಮತ್ತು ಇತರರು. v. ಹೋಟೆಲ್ ಅಸೋಸಿಯೇಶನ್ ಆಫ್ ಇಂಡಿಯಾ ಮತ್ತು ಇತರರು (2008), ಪ್ರಕರಣದಲ್ಲಿ ಈ ನ್ಯಾಯಾಲಯವು ಮುಖ್ಯವಾದ ತೀರ್ಪನನ್ನು ನೀಡಿತು. ಈ ಪ್ರಕರಣದಲ್ಲಿ ಸಾರ್ವಜನಿಕರು ಮದ್ಯ ಸೇವಿಸುವ ಯಾವುದೇ ಸ್ಥಳದಲ್ಲಿ ಹೆಣ್ಣುಮಕ್ಕಳು ನೌಕರಿ ಮಾಡುವುದನ್ನು ನಿರ್ಬಂಧಿಸುತ್ತಿದ್ದ ಮತ್ತೊಂದು ಸಂವಿಧಾನ ಪೂರ್ವದ ಕಾನೂನಾದ ಪಂಜಾಬ್ ಅಬಕಾರಿ ಕಾಯ್ದೆ, 1914ನಾ

30ನೇ ಪರಿಚ್ಛೇದದ ಸಾಂವಿಧಾನಿಕ ಮಾನ್ಯತೆಯನ್ನು ಪರಿಶೀಲಿಸಾಯಿತು. ನ್ಯಾ ಸಿನ್ಹಾ, ರವರು, ಮೂಲ ಕಾಯ್ದೆಯು ಜಾರಿಯಾದಾಗ, ಲಿಂಗ ಸಮಾನತೆಯ ಪರಿಕಲ್ಪನೆ ಇರಲಿಲ್ಲ ಎಂಬ ವಿಚಾರದೆಡೆಗೆ ಗಮನ ಹರಿಸುತ್ತಾರೆ. ಸಂವಿಧಾನವು 14 ಮತ್ತು 15ನೇ ಕಲಮುಗಳು ಜಾರಿಯಾದ ನಂತರ ಅಂತಹುದೆಲ್ಲ ಬದಲಾಯಿತು. ವ್ಯಕ್ತಿಗಳ ಎರಡು ಗುಂಪುಗಳ ನಡುವೆ ತಾರತಮ್ಯ ಮಾಡುವಾಗ, ಅವರನ್ನು ಭಿನ್ನವೆಂದು ಗುರುತಿಸಲು ಸದ್ಯದ ಸಾಮಾಜಿಕ ಪರಿಸ್ತಿತಿಗಳೊಂದಿಗೆ ತಾಳೆಯಾಗುವಂತಹ ತಾತ್ವಿಕ ಅಧಾರಗಳಿರಬೇಕು ಮತ್ತು ಇಪ್ಪತ್ತನೇ ಶತಮಾನಕ್ಕೂ ಹಿಂದಿನ ವಿಚಾರಗಳ ಆಧಾರದ ಮೇಲೆ ಆ ತಾರತಮ್ಯ ನಡೆಯಬಾರದು ಎಂಬುದು ಮುಖ್ಯವಾದ ವಿಚಾರ. ಈ ವಿಚಾರವನ್ನು ನ್ಯಾಯಮೂರ್ತಿಗಳು ಕೆಲಕಂಡಂತೆ ವಿವರಿಸುತ್ತಾರೆ :-

> 7. ಈ ಕಾಯ್ದೆಯು ಪೂರ್ವ ಸಾಂವಿಧಾನಿಕ ಶಾಸನವಾಗಿದೆ. ಸಂವಿಧಾನದ 372ನೇ ಕಲಮಿನ ಪರಿಭಾಷೆಯಲ್ಲಿ ಇದನ್ನು ಉಳಿಸಿಕೊಳ್ಳಲಾಗಿದೆಯಾದರೂ, ಭಾರತೀಯ ಸಂವಿಧಾನದ 14, 15 ಮತ್ತು 19ನೇ ಲೇಖನಗಳ ಆಧಾರದಲ್ಲಿ ಅದರ ಸಿಂಧುತ್ವವನ್ನು ಪ್ರಶ್ನಿಸುವುದಕ್ಕೆ ಕಾನೂನಿನ ಅನುಮತಿ ನೀಡಲಾಗಿದೆ. ಎತ್ತಿರುವ ಪ್ರಶ್ನೆಗಳ ಪರಿಶೀಲನೆಯನ್ನು ಪ್ರಾರಂಭಿಸುವ ಸಮಯದಲ್ಲಿ, ಆ ಕಾಲದ ಸಾಮಾಜಿಕ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಕಾಯ್ದೆಯೊಂದನ್ನು ಕಾನೂನುಬದ್ಧವಾದ ಶಾಸನ ಎಂದು ಪರಿಗಣಿಸಿರಬಹುದಾದರೂ, ಆದರೆ ಅಂತಾರಾಷ್ಟ್ರೀಯ ಮತ್ತು ರಾಷ್ಟ್ರೀಯ ರಂಗಗಳಲ್ಲಿ ಬದಲಾವಣೆಗಳು ಸಂಭವಿಸುತ್ತಿರುವ ಹಿನ್ನೆಲೆಯಲ್ಲಿ, ಇಂತಹ ಕಾನೂನನ್ನು ಅಮಾನ್ಯ ಎಂದು ಕೂಡಾ ಘೋಷಿಸಬಹುದು.

**ಜಾನ್ ವಲ್ಲಮಾಟ್ಟಂ ವಿ. ಭಾರತ ಸರ್ಕಾರ**, (2003) ಪ್ರಕರಣದಲ್ಲಿ ಈ ನ್ಯಾಯಾಲಯವು, ಭಾರತೀಯ ಉತ್ತರಾಧಿಕಾರ ಕಾಯಿದೆಯ 118ನೇ ಪರಿಚ್ಛೇದವನ್ನು ಹೋಲುತ್ತಿದ್ದ ನಿಬಂಧನೆಯೊಂದಕ್ಕೆ ಯುಕೆಯಲ್ಲಿ ಮಾಡಲಾದ ತಿದ್ದುಪಡಿಯನ್ನು ಉಲ್ಲೇಖಿಸುವಾಗ ಈ ಕೆಳಗಿನಂತೆ ಗಮನಿಸಿತು:

"28 ... ಒಂದು ನಿಬಂಧನೆಯ ಸಂವಿಧಾನಾತ್ಮಕತೆಯನ್ನು, ಸಮಯ ಕಳೆದುದರಿಂದ ಪ್ರಭಾವಿತವಾಗಿರುವ ಶಾಸನಗಳ ವ್ಯಾಖ್ಯಾನಾತ್ಮಕ ಬದಲಾವಣೆಗಳ ದೃಷ್ಟಿಯಿಂದ ಪರಿಗಣಿಸಬೇಕು."

ಬದಲಾಗುತ್ತಿರುವ ಕಾನೂನು ಸನ್ನಿವೇಶವನ್ನು ಉಲ್ಲೇಖಿಸುತ್ತಾ ಮತ್ತು ಮಾನವ ಹಕ್ಕುಗಳ ವಿಶ್ವ ಸಮ್ಮೇಳನದಲ್ಲಿ ಅಳವಡಿಸಿಕೊಳ್ಳಲಾಗಿರುವ ಅಭಿವೃದ್ಧಿಯ ಹಕ್ಕಿನ ಘೋಷಣೆಯನ್ನು ಪರಿಗಣಿಸುತ್ತಾ, 1966ರ ನಾಗರಿಕ ಮತ್ತು ರಾಜಕೀಯ ಹಕ್ಕುಗಳ ಸಂಯುಕ್ತ ರಾಷ್ಟ್ರಗಳ ಒಡಂಬಡಿಕೆಯ 18ನೇ ಕಲಮನ್ನು ಗಣನೆಗೆ ತೆಗೆದುಕೊಳ್ಳುತ್ತಾ ಹೀಗೆಂದು ನಿರ್ಧರಿಸಲಾಯಿತು (ಜಾನ್ ವಲ್ಲಮಾಟ್ಟಮ್ ಪ್ರಕರಣ)

"33. ಸಂವಿಧಾನದ 13 (1)ನೇ ಕಲಮಿಗೆ ಸಂಬಂಧಿಸಿದಂತೆ, 26-01-1950ರಲ್ಲಿ ಅಸ್ತಿತ್ವದಲ್ಲಿದ್ದ ಕಾನೂನಿನ ಆಧಾರದ ಮೇಲೆ ಪ್ರಶ್ನಿಸಲಾಗಿರುವ ಶಾಸನದ

ಸಂವಿಧಾನಬದ್ಧತೆಯನ್ನು ಪರಿಗಣಿಸಬೇಕಾಗುತ್ತದೆ, ಆದರೆ ಹಾಗೆ ಮಾಡುವಾಗ ನ್ಯಾಯಾಲಯವು ಅದರ ನಂತರ ನಡೆದ ಘಟನೆಗಳನ್ನು ಪರಿಗಣಿಸುವುದನ್ನು ಇದನ್ನು ತಡೆಗಟ್ಟುವುದಿಲ್ಲ. ಕಾನೂನೊಂದು ಜಾರಿಯಾದಾಗ ಸಂವಿಧಾನಾತ್ಮಕವಾಗಿದ್ದರೂ ಸಮಯದ ಬದಲಾವಣೆಯೊಂದಿಗೆ, ಬದಲಾದ ಪರಿಸ್ತಿತಿಗಳ ದೃಷ್ಟಿಯಿಂದ ಅದನ್ನು ಅಸಂವಿಧಾನಿಕವೆಂದು ಪರಿಗಣಿಸಬಹುದು.

- 26. ವರ್ಗೀಕರಣದ ಆಧಾರದ ಮೇಲೆ ತಾರತಮ್ಯವನ್ನು ಮಾಡಲು ಪ್ರಯತ್ನಿಸಿದಾಗ, ತರ್ಕಬದ್ಧ ಮಾನದಂಡದ ಮೇಲೆ ಇಂತಹ ವರ್ಗೀಕರಣವನ್ನು ಸ್ಥಾಪಿಸಬೇಕು. ಯಾವುದೇ ಸಾಂವಿಧಾನಿಕ ನಿಬಂಧನೆಯ ಅನುಪಸ್ಥಿತಿಯಲ್ಲಿ ಮತ್ತು ಈ ಮಾನದಂಡವು 20ನೇ ಶತಮಾನದ ಆರಂಭದ ಸಾಮಾಜಿಕ ಸ್ಥಿತಿಗತಿಗಳು 21 ನೇ ಶತಮಾನದಲ್ಲಿ ತರ್ಕಬದ್ಧ ಮಾನದಂಡವಾಗಲಾರವು ಎಂಬುದನ್ನು ಸರ್ಕಾರಕ್ಕೆ ಮತ್ತೆ ಮತ್ತೆ ತಿಳಿಸುತ್ತದೆ. 20 ನೇ ಶತಮಾನದ ಆರಂಭದಲ್ಲಿ, ಆತಿಥ್ಯದ ಕ್ಷೇತ್ರವು ಸಾಮಾನ್ಯವಾಗಿ ಮಹಿಳೆಯರಿಗೆ ತೆರೆದಿರಲಿಲ್ಲ. ಕಳೆದ 60 ವರ್ಷಗಳಲ್ಲಿ, ಭಾರತದಲ್ಲಿ ಮಹಿಳೆಯರು ಸಾರ್ವಜನಿಕ ಜೀವನದ ಎಲ್ಲ

> ಕ್ಷೇತ್ರಗಳನ್ನು ಪ್ರವೇಶಿಸಿದ್ದಾರೆ. ಅವರು ಬೇರು ಮಟ್ಟದ ಪ್ರಜಾತಂತ್ರದಲ್ಲಿ ಜನರನ್ನು ಪ್ರತಿನಿಧಿಸುತ್ತಿದ್ದಾರೆ. ಅವರು ಈಗ ಭಾರಿ ಸಾರಿಗೆ ವಾಹನಗಳ ಚಾಲಕರು, ಸೇವೆ ಗಾಡಿಗಳ ನಿವಾಹಕರು, ಪೈಲಟ್ಗಳು, ಇತ್ಯಾದಿ ಕೆಲಸಗಳನ್ನು ನಿರ್ವಹಿಸುತ್ತಿದ್ದಾರೆ. ಬಹುರಾಷ್ಟ್ರೀಯ ಕಂಪೆನಿಯ 4ನೇ ವರ್ಗದ ಹುದ್ದೆಯಿಂದ ಹಿಡಿದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ವರೆಗಿನ ಹುದ್ದೆಗಳನ್ನು ಪಡೆದುಕೊಳ್ಳುತ್ತಿರುವ ಮಹಿಳೆಯರನ್ನು ಕಾಣಬಹುದಾಗಿದೆ. ಅವರನ್ನು ಪೋಲಿಸ್ ಹಾಗೂ ಸೇನಾ ಸೇವೆಗಳಲ್ಲಿಯೂ ಬಹುವಾಗಿ ಒಪ್ಪಿಕೊಳ್ಳಲಾಗುತ್ತಿದೆ. "

45. ನ್ಯಾಯಾಲಯ ಮುಂದುವರೆಯುತ್ತಾ, "ಪರಿಮಾಣ" ಎಂಬ ಮಾನದಂಡವು ಆಧುನಿಕ ಪ್ರಜಾತಾಂತ್ರಿಕ ಸಮಾಜವೊಂದಕ್ಕೆ ತಕ್ಕಂತಿರಬೇಕು ಎಂದು ಅಭಿಪ್ರಾಯ ಪಟ್ಟಿತು.

ತೀರ್ಪಿನ ಮುಖ್ಯವಾದ ವಾಕ್ಯದಲ್ಲಿ ಅರಿವುಳ್ಳ ನ್ಯಾಯಾಧೀಶರು ಹೀಗೆ ಹೇಳುತ್ತಾರೆ:-

> ಬಾರುಗಳಲ್ಲಿ ಮಹಿಳೆಯರು ಉದ್ಯೋಗ ಮಾಡುವುದನ್ನು ನಿಷೇಧಿಸುವ ಬದಲು, ಲಿಂಗ ವಿಭಿನ್ನತೆಯ ಅಸಮಾನ ಪರಿಣಾಮಗಳನ್ನು ನಿವಾರಿಸುವ ವಿಧಾನಗಳೆಡೆಗೆ ಸರ್ಕಾರ ಗಮನಹರಿಸಬೇಕು. ಮಹಿಳೆಯರಲ್ಲಿ ತಾವು ಮಾಡಲು ನಿರ್ಧರಿಸುವ ವೃತ್ತಿಯ

> ಅವಶ್ಯಕತೆಗಳಿಗೆ ಅನುಗುಣವಾಗಿ ಕರ್ತವ್ಯವನ್ನು ಸ್ವತಂತ್ರವಾಗಿ ನಿರ್ವಹಿಸುವ ವಿಶ್ವಾಸವನ್ನು ಪ್ರೇರೇಪಿಸುವ ಸುರಕ್ಷತೆಯ ಸನ್ನಿವೇಶಗಳನ್ನು ಖಚಿತಪಡಿಸುವುದು ಸರ್ಕಾರದ ಕರ್ತವ್ಯವಾಗಿದೆ, ಇದು. ಸಮಾಜದ ಪರಿಸ್ಥಿತಿಗಳ ಮೂಲಕ ನಡೆಯುವ ಯಾವುದೇ ಕಾರ್ಯನೀತಿಯ ಹಸ್ತಕ್ಷೇಪವು (ಸೆಕ್ಷನ್ 30ರ ಅಡಿಯಲ್ಲಿ ಅಡಕವಾಗಿರುವಂಥದ್ದು) ಮಹಿಳೆಯರ ಮೇಲಿನ ದಬ್ಬಾಳಿಕೆಯೆನಿಸಿಕೊಳ್ಳುತ್ತದೆ ಮತ್ತು ಗೌಪ್ಯತೆಯ ಹಕ್ಕುಗಳಿಗೆ ವಿರುದ್ಧವಾಗಿರುತ್ತದೆ. "

46. ಅರಿವುಳ್ಳ ನ್ಯಾಯಾಧೀಶರು ಮುಂದುವರೆಸುತ್ತಾ, ತಾರತಮ್ಯದ ಮೇಲೆ ಪರಿಣಾಮ ಬೀರುವ ಶಾಸನಗಳನ್ನು ಕಾನೂನಿನಡಿಯಲ್ಲಿ ವಿಮರ್ಶೆಗೊಳಪಡಿಸಲು, ಕೆಳಕಂಡ ಮಾನದಂಡಗಳನ್ನು ಬಳಸಬೇಕೆಂದು ಅಭಿಪ್ರಾಯ ಪಡುತ್ತಾರೆ:-

> 46. ಈ ರೀತಿಯ "ರಕ್ಷಣಾತ್ಮಕ ತಾರತಮ್ಯದ" ಗುರಿಗಳನ್ನು ಹೊಂದಿರುವ ಶಾಸನಗಳು ಎರಡಲಗಿನ ಕತ್ತಿಗಳಂತೆ ಬಳಸಲ್ಪಡುತ್ತವೆ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಈ ವಿಧವಾದ ಶಾಸನಗಳ ಪರಿಣಾಮಗಳನ್ನು ನಿರ್ಣಯಿಸುವಾಗ ಕಟ್ಟುನಿಟ್ಟಾದ ಪರಿಶೀಲನಾ ಪರೀಕ್ಷೆಯನ್ನು ಬಳಸಿಕೊಳ್ಳಬೇಕು. ಶಾಸನವನ್ನು ಅದರ ಪ್ರಸ್ತಾವಿತ ಗುರಿಗಳ ಮೇಲಷ್ಟೇ ಅಂದಾಜಿಸಬಾರದು, ಬದಲಿಗೆ ಅದರ ಪರಿಣಾಮಗಳು ಮತ್ತು ಪ್ರಭಾವಗಳ

ಆಧಾರದಲ್ಲಿ ಮಾತ್ರ ಪರೀಕ್ಷಿಸಬೇಕು. ಪ್ರಶ್ನಿಸಲಾಗಿರುವ ಶಾಸನವು ರೂಢಮಾದರಿಯ ನೈತಿಕತೆ ಮತ್ತು ಲೈಂಗಿಕ ಪಾತ್ರದ ಪರಿಕಲ್ಪನೆಯ ಮೇಲಿನ ಸರಿಪಡಿಸಲಾಗದ ಮೋಹದಿಂದ ಬಳಲುತ್ತಿದೆ. ಹೀಗೆ ಪಡೆದ ದೃಷ್ಟಿಕೋನದ ಸತ್ವ ಹಳಸಲು ಮತ್ತು ಅದರ ವಿಧಾನ ಉಸಿರುಗಟ್ಟಿಸುವಂತಿದೆ

47. ಯಾವುದೇ ಕಾನೂನಿನ ಕೊಟ್ಟಕೊನೆಯ ಪರಿಣಾಮದಿಂದಾಗಿ ಮಹಿಳೆಯರ ಮೇಲಿನ ದಬ್ಬಾಳಿಕೆಯನ್ನು ಪ್ರತಿಪಾದಿಸಿದಂತಾಗಬಾರದು. ವೈಯಕ್ತಿಕ ಸ್ವಾತಂತ್ರ್ಯವು ಒಂದು ಮೂಲಭೂತ ತತ್ತ್ವವಾಗಿದ್ದು, ಅದನ್ನು, ಬಲವಾದ ಸರ್ಕಾರೀ ಉದ್ದೇಶವಿರುವ ಸಂದರ್ಭವನ್ನು ಹೊರತುಪಡಿಸಿ, ಆವಶ್ಯಕತೆಯ ಹೆಸರಿನಲ್ಲಿ ರಾಜಿ ಮಾಡಿಕೊಳ್ಳಬಾರದು ಮತ್ತು ಇಂತಹ ಸಂದರ್ಭಗಳಲ್ಲಿ ಹೆಚ್ಚಿನ ಮಟ್ಟದ ವಿಮರ್ಶೆಯೇ ನ್ಯಾಯಾಂಗ ಪರಿಶೀಲನೆಯ ಸಾಮಾನ್ಯ ಆಧಾರ.

47. ಕೊನೆಯದಾಗಿ ನ್ಯಾಯಾಲಯ ಹೀಗೆಂದಿತು

**50**.ಇಂತಹ ರಕ್ಷಣಾತ್ಮಕ ತಾರತಮ್ಯದ ಶಾಸನವನ್ನು ಪರಿಶೀಲಿಸುವ ಪರೀಕ್ಷೆಯು ಎರಡು-ಬಗೆಯ ವಿಮರ್ಷೆಗೆ ಒಳಗಾಗುತ್ತದೆ:

(ಎ) ಶಾಸಕಾಂಗೀಯ ಹಸ್ತಕ್ಷೇಪವನ್ನು (ಪ್ರಸ್ತುತ ಪ್ರಕರಣದಲ್ಲಿ ಲೈಂಗಿಕ ತಾರತಮ್ಯದ ಶಾಸನದ ಮೂಲಕ ಪ್ರೇರೇಪಿಸಲ್ಪಟ್ಟಿರುವ) ತಾತ್ವಿಕವಾಗಿ ಸಮರ್ಥಿಸಿಕೊಳ್ಳಬೇಕು,

(ಬಿ) ಅದು ಅಳತೆಯಲ್ಲಿ ಪ್ರಮಾಣಕ್ಕೆ ಅನುಗುಣವಾಗಿರಬೇಕು.

51. ಮಹಿಳೆಯರ ಹಿತಾಸಕ್ತಿಗಳನ್ನು ರಕ್ಷಿಸುವ ನ್ಯಾಯಸಮ್ಮತ ಗುರಿಯನ್ನು ಬೆಂಬಲಿಸಲು ಶಾಸಕಾಂಗೀಯ ನಿರ್ದೇಶನದ ರೂಪದಲ್ಲಿ ಸರ್ಕಾರ ಜಾರಿಗೊಳಿಸಿದ ಕ್ರಮಗಳು ಸ್ವಾಯತ್ತತೆ, ಅವಕಾಶದ ಸಮಾನತೆ, ಖಾಸಗೀತನದ ಹಕ್ಕು, ಮತ್ತು ಇತ್ಯಾದಿ. ಇತರ ಸುಸ್ಥಾಪಿತ ಲಿಂಗಾಧಾರಿತ ನಿಯಮಗಳಿಗನುಗುಣವಾಗಿದೆಯೇ ಎಂದು ನಿರ್ಧರಿಸುವುದು ನ್ಯಾಯಾಲಯದ ಕೆಲಸ. ಲಿಂಗ, ಜನಾಂಗ, ಜಾತಿ ಅಥವಾ ಇತರ ಯಾವುದೇ ಆಧಾರದ ಮೇಲಿನ ತಾರತಮ್ಯವಿಲ್ಲದೇ, ವಿಭಿನ್ನ ಅವಕಾಶಗಳು ಮತ್ತು ಆಯ್ಕೆಗಳನ್ನು ಉಪಯೋಗಿಸುವ ಸ್ವಾತಂತ್ರ್ಯವನ್ನು ಖಾತ್ರಿಗೊಳಿಸುವ ಆಧುನಿಕ ಪ್ರಜಾತಾಂತ್ರಿಕ ಸಮಾಜದ ಕಾರ್ಯನಿರ್ವಹಣೆ ಈ ವಿಚಾರದ ಮೂಲ ತತ್ವ. ಉತ್ತಮ ರೀತಿಯಲ್ಲಿ, ಬಳಸಿದ ವಿಧಾನ ಮತ್ತು ಬಯಸಿದ ಗುರಿಯ ನಡುವೆ ಪ್ರಮಾಣಬದ್ಧವಾದ ಸಮಂಜಸವಾದ ಸಂಬಂಧ ಇರಬೇಕು.

48. ಉಚ್ಚ ನ್ಯಾಯಾಲಯವು ನಿರಂಕುಶ ಮತ್ತು ಅಸಮಂಜಸವೆಂದು ಬಗೆದು ರದ್ದುಗೊಳಿಸಿದ್ದ ಕಾನೂನೊಂದನ್ನು ಇದೇ ನ್ಯಾಯಾಲಯ ಸಹ ನಿರಂಕುಶ ಮತ್ತು ಅಸಮಂಜಸವೆಂದು ಪರಿಗಣಿಸಿತು.

49. ಸುರೇಶ್ ಕುಮಾರ್ ಕೌಶಲ್ (ಮೇಲ್ಕಂಡ) ಪ್ರಕರಣದಲ್ಲಿ ಈ ನ್ಯಾಯಾಲಯ ತೀರ್ಪು ನೀಡಿದ ಬೆನ್ನಲ್ಲೇ ನಾಲ್ಸಾ (ಮೇಲ್ಕಂಡ) ಪ್ರಕರಣದ ತೀರ್ಪು ಹೊರಬಿದ್ದಿತು. ಈ ಪ್ರಕಣದಲ್ಲಿ ನ್ಯಾಯಾಲಯವು ಲಿಂಗ ಪರಿವರ್ತಿತ ಸಮುದಾಯದ ಸದಸ್ಯರ ನೋವು, ದುಃಖ ಮತ್ತು ವೇದನೆಗಳನ್ನು ನಿಭಾಯಿಸಬೇಕಾಯಿತು.

ನ್ಯಾಯಾಲಯವು 377ನೇ ಪರಿಚ್ಛೇದವನ್ನು ಕೆಳಕಂಡಂತೆ ಪ್ರಸ್ತಾಪಿಸಿತು:

> 19. ಗುದ ಸಂಭೋಗ ಮತ್ತು ಮುಖಮೈಥುನವೂ ಸೇರಿದಂತೆ ವ್ಯಕ್ತಿಗಳ ನಡುವಿನ ಎಲ್ಲಾ ಶಿಶ್ನಯೋನಿ ಸಮಾಗಮವನ್ನು ಒಳಗೊಳ್ಳದ ಲೈಂಗಿಕ ಕ್ರಿಯೆಗಳನ್ನು ಅಪರಾಧಿಕರಿಸುವ ಕ್ರಿಮಿನಲ್ ಟ್ರೈಬ್ಸ್ ಕಾಯ್ದೆ ಜಾರಿಗೆ ಬರುವ ಮೊದಲೇ, ನಿರ್ಬಂಧಿಸಲಾಗಿದ್ದ ಲೈಂಗಿಕ ಕ್ರಿಯೆಗಳೊಂದಿಗೆ ಲಿಂಗಪರಿವರ್ತಿತರನ್ನೂ ತಳುಕು ಹಾಕಲಾಗುತ್ತಿದ್ದ ಕಾಲದಲ್ಲಿ ದಂಡ ಸಂಹಿತೆ, 1860 ರಲ್ಲಿ ಸ್ಥಾನ ಪಡೆಯಿತು. **ರಾಣಿ ಸಾಮ್ರಾಜ್ಞಿ ವಿ. ಖೈರತಿ, ಐಎಲ್‌ಆರ್ (1884)** ಎಲ್ಲಾ 204 ಪ್ರಕರಣದಲ್ಲಿ ಅಲಹಾಬಾದ್ ಉಚ್ಚನ್ಯಾಯಾಲಯ ಮಂಡಿಸಿದ ತೀರ್ಪನ್ನು ಉಲ್ಲೇಖಿಸಬಹುದು. ಈ ಪ್ರಕರಣದಲ್ಲಿ ಇದರಲ್ಲಿ ಒಬ್ಬರು ಲಿಂಗಪರಿವರ್ತಿತ ವ್ಯಕ್ತಿಯನ್ನು ಅವರು "ರೂಢಿಯ ಗುದಸಂಭೋಗಿ" ಎಂಬ ಸಂಶಯದ ಮೇಲೆ 377ನೇ ಪರಿಚ್ಛೇದದಡಿಯಲ್ಲಿ ಬಂಧಿಸಲಾಯಿತು ಮತ್ತು ನಂತರ ಮೇಲ್ಮನವಿಯ ಮೇರೆಗೆ ಅವರನ್ನು

ಖುಲಾಸೆಗೊಳಿಸಲಾಯಿತು. ಅವರನ್ನು ಖುಲಾಸೆಗೊಳಿಸುವ ಸಂದರ್ಭದಲ್ಲಿ, ನ್ಯಾಯಾಧೀಶರು ಹೀಗೆ ಹೇಳಿದ್ದಾರೆ: (ILR ಪುಟಗಳು 204-05) "...

'ಈ ಪ್ರಕರಣವು ಖೈರಾತಿ ಎಂಬ ವ್ಯಕ್ತಿಯೊಂದಿಗೆ ಸಂಬಂಧಿಸಿದೆ ಮತ್ತು ಅವರ ಮೇಲೆ ಅವರು ನಪುಂಸಕರಾಗಿರುವ ಕಾರಣಕ್ಕೆ ಪೋಲೀಸರು ಒಂದು ಬಗೆಯ ಕಣ್ಗಾವಲಿಟ್ಟಿದ್ದಂತೆ ಕಂಡುಬರುತ್ತದೆ, ಅದನ್ನು ಅವರು ನಿಯಮಿತವಾಗಿ ಮಾಡಿದರೋ ಇಲ್ಲವೋ ಇಲ್ಲಿ ಮುಖ್ಯವಲ್ಲ. ಆ ಮನುಷ್ಯನು ಅಕ್ಷರಶಃ ಅರ್ಥದಲ್ಲಿ ಒಬ್ಬ ನಪುಂಸಕನಲ್ಲ, ಆದರೆ ಅವರ ಗ್ರಾಮಕ್ಕೆ ಭೇಟಿ ನೀಡಿದ ಪೋಲಿಸ್ ಅವರನ್ನು ಕರೆಸಿಕೊಂಡಾಗ, ಅವರು ಕುಟುಂಬವೊಂದರ ಮಹಿಳೆಯರ ನಡುವೆ ಹೆಣ್ಣಿನಂತೆ ಉಡುಪು ತೊಟ್ಟು ಹಾಡುತ್ತಿರುವುದು ಕಂಡು ಬಂದಿತು. ಸಿವಿಲ್ ಸರ್ಜನ್ (ಮತ್ತೊಮ್ಮೆ, ಒಬ್ಬ ಅಧೀನ ವೈದ್ಯಕೀಯ ಮನುಷ್ಯ) ಮೂಲಕ ಅವರನ್ನು ಪರೀಕ್ಷೆಗೆ ಒಳಪಡಿಸಿದ ನಂತರ, ಅವರಿಗೆ ಗುದಸಂಭೋಗದ ರೂಢಿಯಿದೆ ಎಂಬುದಕ್ಕೆ ಅವರಲ್ಲಿ ಒಂದು ವಿಶಿಷ್ಟ ಲಕ್ಷಣವನ್ನು ಕಂಡುಕೊಳ್ಳಲಾಯಿತು -ಅವರ ಗುದದ ರಂಧ್ರವು ಒಂದು ತುತ್ತೂರಿ ಆಕಾರದಲ್ಲಿ ವಿರೂಪಗೊಂಡಿತ್ತು- ಮತ್ತು ಅವರು ಕೆಲವು ತಿಂಗಳುಗಳಲ್ಲಿ ಅಸ್ವಾಭಾವಿಕ ಸಂಭೋಗ

ನಡೆಸಿರುವುದನ್ನು ಸ್ಪಷ್ಟಪಡಿಸುವಂತೆ ಅದೇ ಭಾಗ ಸಿಫಿಲಿಸ್ ಸೋಂಕಿಗೆ ಒಳಗಾಗಿತ್ತು."

ಅವರನ್ನು ಮೇಲ್ಮನವಿಯ ಮೇರೆಗೆ ಖುಲಾಸೆಗೊಳಿಸಲಾಯಿತಾದರೂ, 377 ನೇ ಪರಿಚ್ಛೇದ ಕೆಲ ನಿರ್ಧಿಷ್ಟ ಲೈಂಗಿಕ ಕ್ರಿಯೆಗಳಿಗೆ ಸಂಬಂಧಿಸಿದುದಾದರೂ ಅದು, ಹಿಜ್ರಾಗಳನ್ನೂ ಒಳಗೊಂಡಂತೆ ನಿರ್ದಿಷ್ಟವಾದ ಅಸ್ಮಿತೆಗಳನ್ನು ಹೆಚ್ಚಾಗಿ ಗುರಿಯಲ್ಲಿಟ್ಟಿಕೊಳ್ಳುತ್ತದೆ ಮತ್ತು ಅದು ಲಿಂಗ ಪರಿವರ್ತಿತ ವ್ಯಕ್ತಿಗಳ ವಿರುದ್ಧದ ಕಿರುಕುಳ ಮತ್ತು ದೈಹಿಕ ದುರುಪಯೋಗದ ಸಾಧನವಾಗಿ ಬಳಕೆಯಾಗುತ್ತದೆ ಎಂಬುದನ್ನು ಈ ಪ್ರಕರಣ ತೋರ್ಪಡಿಸುತ್ತದೆ. "

50. ನ್ಯಾಯಾಲಯವು ಲೈಂಗಿಕ ಆಸ್ಮಿತೆ ಮತ್ತು ಲೈಂಗಿಕ ನಿಲುವಿನ ಪರಿಕಲ್ಪನೆಗಳನು ವಿವರಿಸುತ್ತಾ, ಲೈಂಗಿಕ ನಿಲುವು ಮತ್ತು ಲೈಂಗಿಕ ಅಸ್ಮಿತೆಗಳ ವಿಚಾರದಲ್ಲಿ ಅಂತಾರಾಷ್ಟ್ರೀಯ ಮಾನವಾಧಿಕಾರದ ಕಾನೂನಿನ ಅನ್ವಯಿಸುವಿಕೆಗೆ ಸಂಬಂಧಿಸಿದ ಯೋಗ್ಯಾಕಾರ್ತಾ ಸಿಧ್ಧಾಂತಗಳನ್ನು (ಯೋಗ್ಯಾಕಾರ್ತಾ ಪ್ರಿನ್ಸಿಪಲ್ಸ್ ಆನ್ ದಿ ಅಪ್ಲಿಕೆಶನ್ ಆಫ್ ಇಂಟರ್ನ್ಯಾಷನಲ್ ಹ್ಯೂಮನ್ ರೈಟ್ಸ್ ಇನ್ ರಿಲೀಶನ್ ಟು ಸೆಕ್ಷುವಲ್ ಓರಿಯೆನ್ಟೀಶನ್ ಆನ್ಡ್ ಜೆನ್ಡರ್ ಐಡೆನ್ಟಿಟಿ) ಆಧಾರವಾಗಿ ಇಟ್ಟುಕೊಂಡಿತು. ನ್ಯಾಯಾಲಯವು ಮುಂದುವರೆಯುತ್ತಾ, ಹೀಗೆ ಅಭಿಪ್ರಾಯ ಪಟ್ಟಿತು:

"60. ಭಾರತೀಯ ಸಂವಿಧಾನದಡಿಯಲ್ಲಿ ಖಾತರಿಪಡಿಸಲಾಗಿರುವ ವಿವಿಧ ಮೂಲಭೂತ ಹಕ್ಕುಗಳ ವಿಚಾರದಲ್ಲಿ ಅಸಮಂಜಸವಾಗಿಲ್ಲವೆಂದು

ನಾವು ಕಂಡುಕೊಂಡ ಯೋಗ್ಯಾಕಾರ್ತಾ ಸಿಧ್ಧಾಂತ ಸೇರಿದಂತೆ ಟಿಜಿಗಳ (ಲಿಂಗ ಪರಿವರ್ತಿತರು) ಬಗೆಗಿನ ಸಿಧ್ಧಾಂತಗಳು ಮತ್ತು ಅಂತಾರಾಷ್ಟ್ರೀಯ ಒಡಂಬಡಿಕೆಗಳನ್ನು ಗುರುತಿಸಬೇಕು ಮತ್ತು ಅನುಸರಿಸಬೇಕು, ಅವಕ್ಕೆ ನಮ್ಮ ದೇಶದಲ್ಲಿ ಸಾಕಷ್ಟು ಕಾನೂನಾತ್ಮಕ ಮತ್ತು ಐತಿಹಾಸಿಕ ಸಮರ್ಥನೆಯಿದೆ"

51. ಸಂವಿಧಾನದ 15 ಮತ್ತು 16ನೇ ಕಲಮಿನ ವಿಚಾರದಲ್ಲಿ ನ್ಯಾಯಾಲಯ ಹೀಗೆಂದಿತು:

"66. ಲಿಂಗಾಧಾರಿತ ತಾರತಮ್ಯವನ್ನು ಐತಿಹಾಸಿಕ ಸತ್ಯವೆಂದು ಮನಗಂಡ ಮತ್ತು ಅದನ್ನು ಪರಿಹರಿಸಬೇಕಾದ ಅಗತ್ಯವನ್ನು ಗುರುತಿಸಿದ 15 ಮತ್ತು 16 ನೇ ಕಲಮುಗಳು ಆ ತಾರತಮ್ಯವನ್ನು ನಿಷೇಧಿಸಲು ಪ್ರಯತ್ನಿಸಿದವು ನಮಗೆ ತಿಳಿದುಬರುವಂತೆ, ಸಂವಿಧಾನದ ನಿರ್ಮಾತೃಗಳು, ಲಿಂಗಾಧಾರಿತ ತಾರತಮ್ಯದ ವಿರುದ್ಧದ ಮೂಲಭೂತ ಹಕ್ಕಿಗೆ ಒತ್ತು ನೀಡಿರುವುದರ ಹಿಂದೆ, ಅದರಿಂದಾಗಿ ಇಬ್ಬಗೆಯ ಲಿಂಗಗಳ ರೂಢೀಗತ ಪರಿಗಣನೆಗಳಿಗೆ ಅನುಗುಣವಾಗಿಲ್ಲದಿರುವ ಕಾರಣಕ್ಕಾಗಿ ಕೆಲ ಜನರನ್ನು ವಿಭಿನ್ನವಾಗಿ ನಡೆಸಿಕೊಳ್ಳುವ ಪ್ರತ್ಯಕ್ಷ ಅಥವಾ ಪರೋಕ್ಷ ವರ್ತನೆ ತಡೆಗಟ್ಟುವ ಉದ್ದೇಶವಿದೆ. ಲಿಂಗ ಮತ್ತು ಜೈವಿಕ ಲಕ್ಷಣಗಳೆರಡೂ ಲೈಂಗಿಕತೆಯ ವಿಶಿಷ್ಟ ಅಂಶಗಳಾಗಿವೆ. ಜೈವಿಕ ಗುಣಲಕ್ಷಣಗಳು,

ಖಂಡಿತವಾಗಿ, ಜನನಾಂಗಗಳು, ವರ್ಣತಂತುಗಳು ಮತ್ತು ದ್ವಿತೀಯ ದರ್ಜೆಯ ಲೈಂಗಿಕ ಲಕ್ಷಣಗಳು ಒಳಗೊಂಡಿವೆ, ಆದರೆ ಲೈಂಗಿಕ ಲಕ್ಷಣಗಳು ಒಬ್ಬರ ಸ್ವಯಂ-ಚಿತ್ರಣವನ್ನು, ಲೈಂಗಿಕ ಗುರುತು ಮತ್ತು ನಡತೆಯ ಆಳವಾದ ಮಾನಸಿಕ ಅಥವಾ ಭಾವನಾತ್ಮಕ ಅರಿವನ್ನು ಒಳಗೊಂಡಿರುತ್ತವೆ. 15 ಮತ್ತು 16 ನೇ ಕಲಮುಗಳಡಿಯಲ್ಲಿರುವ "ಲಿಂಗ"ವನ್ನು ಆಧರಿಸಿರುವ ತಾರತಮ್ಯವು, ಲಿಂಗಾಧಾರಿತ ಅಸ್ಮಿತೆಯ ಆಧಾರದ ಮೇಲಿನ ತಾರತಮ್ಯವನ್ನೂ ಒಳಗೊಂಡಿದೆ. 15 ಮತ್ತು 16ನೇ ಕಲಮುಗಳಲ್ಲಿ ಬಳಸಲಾದ "ಲೈಂಗಿಕ" ಎಂಬ ಅಭಿವ್ಯಕ್ತಿಯು ಪುರುಷ ಅಥವಾ ಸ್ತ್ರೀಯರ ಜೈವಿಕ ಲೈಂಗಿಕತೆಗೆ ಮಾತ್ರ ಸೀಮಿತವಾಗಿಲ್ಲ, ಬದಲಿಗೆ ಅದಕ್ಕೆ ತಮ್ಮನ್ನು ಗಂಡು ಅಥವಾ ಹೆಣ್ಣೆಂದು ಎಂದು ಪರಿಗಣಿಸದ ಜನರನ್ನೂ ಒಳಗೊಳ್ಳುವ ಉದ್ದೇಶವಿದೆ. "

52. ಸಂವಿಧಾನದ 19(1)(ಆ) ಕಲಮು ಮತ್ತು ಲಿಂಗ ಪರಿವರ್ತಿತರ ವಿಚಾರದಲ್ಲಿ ನ್ಯಾಯಾಲಯ ಹೀಗೆಂದಿತು:

72. ಆದ್ದರಿಂದ ಲಿಂಗಾಧಾರಿತ ಅಸ್ಮಿತೆಯು ಒಬ್ಬರ ವೈಯಕ್ತಿಕ ಗುರುತು, ಲಿಂಗಾಧಾರಿತ ಅಭಿವ್ಯಕ್ತಿ ಮತ್ತು ತೋರ್ಪಡಿಕೆಯ ಮೂಲದಲ್ಲಿ ನೆಲೆಸಿದೆ ಮತ್ತು ಆದ್ದರಿಂದ ಭಾರತದ ಸಂವಿಧಾನದ 19(1)(ಎ) ಕಲಮಿನಡಿಯಲ್ಲಿ ಅದನ್ನು ರಕ್ಷಿಸಬೇಕು.

ಲಿಂಗಪರಿವರ್ತಿತರೊಬ್ಬರರು ತಮ್ಮ ವ್ಯಕ್ತಿತ್ವವನ್ನು ನಡವಳಿಕೆ ಮತ್ತು ಪ್ರಸ್ತುತಿಯ ಮೂಲಕ ವ್ಯಕ್ತಪಡಿಸಬಹುದು. ಲಿಂಗಪರಿವರ್ತಿತರ ಅಂತರ್ಗತ ವ್ಯಕ್ತಿತ್ವವನ್ನು ಪ್ರತಿಬಿಂಬಿಸುವ ಅಭಿವ್ಯಕ್ತಿಯನ್ನು ನಿಷೇಧಿಸಲು, ನಿರ್ಬಂಧಿಸಲು ಅಥವಾ ಅದರಲ್ಲಿ ಹಸ್ತಕ್ಷೇಪ ಮಾಡಲು ಸರ್ಕಾರಕ್ಕೆ ಅಧಿಕಾರವಿಲ್ಲ, ಇದು . ಆಗಾಗ್ಗೆ ಸರ್ಕಾರ ಮತ್ತು ಅದರ ಅಧಿಕಾರಿಗಳು ಅಜ್ಞಾನದಿಂದಾಗಿ ಅಥವಾ ಇತರ ಕಾರಣಗಳಿಂದಾಗಿ ಅಂತಹ ವ್ಯಕ್ತಿಗಳ ಸಹಜ ಗುಣ ಮತ್ತು ಗುರುತನ್ನು ಜೀರ್ಣಿಸಿಕೊಳ್ಳಲು ವಿಫಲರಾಗುತ್ತಾರೆ. ಆದ್ದರಿಂದ, ನಾವುಗಳು ಖಾಸಗೀತನ, ಸ್ವಯಂ-ಗುರುತಿಸುವಿಕೆ, ಸ್ವಾಯತ್ತತೆ ಮತ್ತು ವೈಯಕ್ತಿಕ ಸಮಗ್ರತೆಗಳ ಮೌಲ್ಯಗಳು, ಭಾರತದ ಸಂವಿಧಾನದ 19(1)(ಎ) ಕಲಮಿನಡಿಯಲ್ಲಿ ಲಿಂಗ ಪರಿವರ್ತಿತ ಸಮುದಾಯದ ಸದಸ್ಯರಿಗೆ ಖಾತರಿಪಡಿಸಲಾಗಿರುವ ಮೂಲಭೂತ ಹಕ್ಕುಗಳು ಮತ್ತು ಸರ್ಕಾರಗಳು ಆ ಹಕ್ಕುಗಳನ್ನು ಗುರುತಿಸಲು ರಕ್ಷಿಸಲು ಬದ್ಧವಾಗಿವೆ ಎಂದು ನಿರ್ಧರಿಸುತ್ತಿದ್ದೇವೆ "

53. ವ್ಯಕ್ತಿಯ ಖಾಸಗೀ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಮುಖ್ಯವಾದ ವಾಕ್ಯದಲ್ಲಿ ಈ ನ್ಯಾಯಾಲಯ ಹೀಗೆಂದಿತು:

"75. ಈಗಾಗಲೇ ಸೂಚಿಸಿರುವಂತೆ, 21 ನೇ ಕಲಮು , ವ್ಯಕ್ತಿಯ "ವೈಯಕ್ತಿಕ ಸ್ವಾಯತ್ತತೆ" ಯ ರಕ್ಷಣೆಯನ್ನು

ಖಾತರಿಪಡಿಸುತ್ತದೆ. ಅನುಜ್ ಗಾರ್ಗ್ v. ಭಾರತೀಯ ಹೋಟೆಲ್ ಸಂಘ (2008) ಪ್ರಕರಣದಲ್ಲಿ ಈ ನ್ಯಾಯಾಲಯವು ವೈಯಕ್ತಿಕ ಸ್ವಾಯತ್ತತೆಯು ಇತರರಿಂದ ಹಸ್ತಕ್ಷೇಪಕ್ಕೆ ಒಳಗಾಗದಿರುವ ಋಣಾತ್ಮಕ ಹಕ್ಕು ಮತ್ತು ವ್ಯಕ್ತಿಗಳು ತಮ್ಮ ಜೀವನದ ನಿರ್ಧಾರಗಳನ್ನು ತೆಗೆದುಕೊಳ್ಳುವ, ತಮ್ಮನ್ನು ವ್ಯಕ್ತಪಡಿಸಿಕೊಳ್ಳುವ ಮತ್ತು ಯಾವ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬೇಕೆಂದು ಆಯ್ಕೆಮಾಡುವ ಧನಾತ್ಮಕ ಹಕ್ಕನ್ನು ಒಳಗೊಂಡಿದೆ ಎಂದು ನಿರ್ಧರಿಸಿತು. ಲಿಂಗವನ್ನು ಸ್ವಯಂ-ನಿರ್ಣಯಿಸುವುದು ವೈಯಕ್ತಿಕ ಸ್ವಾಯತ್ತತೆ ಮತ್ತು ಸ್ವಯಂ ಅಭಿವ್ಯಕ್ತಿಯ ಒಂದು ಅವಿಭಾಜ್ಯ ಅಂಗವಾಗಿದೆ ಮತ್ತು ಅದು ಭಾರತೀಯ ಸಂವಿಧಾನದ 21ನೇ ಕಲಮಿನ ಅಡಿಯಲ್ಲಿ ಖಾತರಿಪಡಿಸಲಾಗಿರುವ ವೈಯಕ್ತಿಕ ಸ್ವಾತಂತ್ರ್ಯದ ಕ್ಷೇತ್ರದಲ್ಲಿ ಬರುತ್ತದೆ. "

54. ಕೊನೆಯ ನಿರ್ಧಾರ ಹೀಗಿತ್ತು:-

"83. ಆದ್ದರಿಂದ, ಲೈಂಗಿಕ ನಿಲುವು ಅಥವಾ ಲಿಂಗಾಧಾರಿತ ಅಸ್ಮಿತೆಯ ಆಧಾರದ ಮೇಲಿನ ತಾರತಮ್ಯವು ಕಾನೂನಿನ ಸಮಾನತೆಯನ್ನು ಅಥವಾ ನಮ್ಮ ಸಂವಿಧಾನದ ಅಡಿಯಲ್ಲಿ ಖಾತರಿಪಡಿಸಲಾದ ಕಾನೂನುಗಳಿಗೆ ಸಮನಾದ ರಕ್ಷಣೆಯನ್ನು ಅನೂರ್ಜಿತಗೊಳಿಸುವ ಅಥವಾ

ಪರಿವರ್ತಿಸುವಂತಹ ಪರಿಣಾಮವನ್ನುಂಟುಮಾಡುವ ಯಾವುದೇ ತಾರತಮ್ಯ, ಹೊರಗಿಡುವಿಕೆ, ನಿರ್ಬಂಧ ಅಥವಾ ಆದ್ಯತೆಗಳನ್ನು ಒಳಗೊಂಡಿರುತ್ತದೆ ಎಂದು ನಿರ್ಧರಿಸುತ್ತಿದ್ದೇವೆ, ಮತ್ತು ಹಾಗಾಗಿ ನಾವು ಟಿಜಿ ಸಮುದಾಯದ ಸದಸ್ಯರ ಸಾಂವಿಧಾನಿಕ ಹಕ್ಕುಗಳನ್ನು ಕಾಪಾಡಲು ವಿವಿಧ ನಿರ್ದೇಶನಗಳನ್ನು ನೀಡುವ ಒಲವನ್ನು ತೋರುತ್ತೇವೆ. "

55. ನ್ಯಾಯಮೂರ್ತಿ ಡಾ. ಎ.ಕೆ. ಸಿಕ್ರಿ, ತಮ್ಮ ಪ್ರತ್ಯೇಕವಾದ ಸಹಮತಿಯ ತೀರ್ಪಿನಲ್ಲಿ ಪ್ರತಿ ವ್ಯಕ್ತಿಗೆ ಮೂಲಭೂತವಾಗಿ ಮತ್ತು ಸಾರ್ವತ್ರಿಕವಾಗಿ ನೀಡಲಾಗುವ ಆಯ್ಕೆ ಮಾಡುವ ಹಕ್ಕನ್ನು ಪ್ರಸ್ತಾಪಿಸುತ್ತಾ ಅದು ಮಾನವಾಧಿಕಾರಗಳ ಅವಿಭಾಜ್ಯ ಅಂಗವೆಂದು ಹೇಳಿದರು. ಅವರು ಹೀಗೆಂದು ಅಭಿಪ್ರಾಯ ಪಟ್ಟರು:-

"116.1. ಭಾರತದಲ್ಲಿ ಹಿಂದೆ ಟಿಜಿಗಳಿಗೆ ಹೆಚ್ಚಿನ ಗೌರವವನ್ನು ನೀಡಲಾಗಿದ್ದರೂ, ಪ್ರಸ್ತುತ ಆ ಸನ್ನಿವೇಶದಲ್ಲಿ ಉಳಿದಿಲ್ಲ. 1871 ರ ಕ್ರಿಮಿನಲ್ ಟ್ರೈಬ್ಸ್ ಆಕ್ಟ್, ಮಂಡನೆಯಾಗುವುದರೊಂದಿಗೆ ಅವರ ಸ್ಥಾನಮಾನದ ಕುಗ್ಗುವಿಕೆ ಆರಂಭವಾಯಿತು, ಇದು ಹಿಜ್ರಾ ವ್ಯಕ್ತಿಗಳ ಇಡೀ ಸಮುದಾಯವನ್ನು ಸ್ವಾಭಾವಿಕವಾದ "ಅಪರಾಧಿಗಳು" ಮತ್ತು "ಜಾಮೀನು ರಹಿತ ಅಪರಾಧಗಳನ್ನು ವ್ಯವಸ್ಥಿತವಾಗಿ ಎಸಗುವ ಅಭ್ಯಾಸವುಳ್ಳವರು" ಎಂದು ಪರಿಗಣಿಸುವುದಕ್ಕೆ ಕಾರಣವಾಯಿತು.

ಮುಂಚಿನ ಊಹೆಯನ್ನಾಧರಿಸಿ ಭಾರತೀಯ ಜನರನ್ನು ಇಂತಹ ಉಪದೇಶ ಮತ್ತು ಸಿದ್ಧಾಂತಕ್ಕೆ ಒಳಪಡಿಸಿದ್ದು ಸಂಪೂರ್ಣವಾಗಿ ವಿಚಿತ್ರವೂ ಮತ್ತು ಅಪಾಯಕರವೂ ಆಗಿದೆ. ಬ್ರಿಟಿಷ್ ಆಳ್ವಿಕೆಯ ಸಮಯದಲ್ಲಿ ಕೆಟ್ಟ ಮತ್ತು ಘೋರ ಮನಸ್ಥಿತಿಯೊಂದಿಗೆ ಜಾರಿಯಾದ ಮೇಲ್ಕಂಡ ಕ್ರೂರ ಶಾಸದಿಂದ ಈ ಸಮುದಾಯಕ್ಕೆ ಹಿಂದೆಂದೂ ಆಗದಷ್ಟು ಹಾನಿಯಾಗಿರುವುದರಲ್ಲಿ ಅನುಮಾನವಿಲ್ಲ. ಇಂತಹ ಸರಿಪಡಿಸಲಾಗದ ಗಾಯಕ್ಕೆ ಅವಮಾನವನ್ನೂ ಸೇರಿಸುವಂತೆ, ಬ್ರಿಟಿಷ್ ಆಳ್ವಿಕೆಯಲ್ಲಿದ್ದಂತಹ ಲಿಂಗ ಪರಿವರ್ತಿತರನ್ನು ಬರಿಯ ಸಂಶಯದ ಆಧಾರದಲ್ಲಿ ಬಂಧಿಸಿ ಶಿಕ್ಷಿಸುವ ಪ್ರವೃತ್ತಿಯ ದೆಸೆಯಿಂದ ದಂಡ ಸಂಹಿತೆಯ 377 ನೇ ಪರಿಚ್ಛೇದವನ್ನು ದುರುಪಯೋಗ ಮತ್ತು ದೌರ್ಜನ್ಯಕ್ಕೊಳಪಡಿಸಲಾಯಿತು. ಭಾರತದ ಟಿಜಿಗಳಿಗೆ ಉಂಟಾದ ಈ ಗಂಭೀರ ಐತಿಹಾಸಿಕ ಹಾನಿಗಳನ್ನು ಸರಿಪಡಿಸಲು, ನಿರಂತರವಾದ ಜೀವಂತಿಕೆಯ ಪ್ರಯತ್ನಗಳ ಅಗತ್ಯವಿದೆ. "

56. ಹಾಗೆಯೇ, 125 ಮತ್ತು 129ನೇ ವಾಕ್ಯಗಳಲ್ಲಿ ಅವರು ನ್ಯಾಯಾಲಯ ವಹಿಸಬೇಕಾದ ಪಾತ್ರವನ್ನು ಈ ರೀತಿ ವಿವರಿಸಿದರು:-

"125. ಸಮಾಜದ ಕಲ್ಯಾಣಕ್ಕಾಗಿ ಸಂವಿಧಾನದ ಮೂಲ ಉದ್ದೇಶ ಮತ್ತು ಆಶಯವನ್ನು

ಅರ್ಥಮಾಡಿಕೊಳ್ಳುವುದು ನ್ಯಾಯಾಲಯದ ಪಾತ್ರ. ಸಮಾಜದ ಕಾನೂನಿನ ಹಾಗೆ ನಮ್ಮ ಸಂವಿಧಾನವು ಜೀವಂತ ಜೀವಿಯಾಗಿದೆ. ಇದು ನಿರಂತರವಾಗಿ ಬದಲಾಗುತ್ತಿರುವ ವಾಸ್ತವಿಕ ಮತ್ತು ಸಾಮಾಜಿಕ ಸತ್ಯವನ್ನು ಆಧರಿಸಿದೆ. ಕೆಲವೊಮ್ಮೆ ಕಾನೂನಿನ ಬದಲಾವಣೆಯು ಸಾಮಾಜಿಕ ಬದಲಾವಣೆಗಳಿಗೆ ಮುಂಚೆಯೇ ನಡೆಯುತ್ತದೆ ಮತ್ತು ಅದಕ್ಕೆ ಸಾಮಾಜಿಕ ಬದಲಾವಣೆಯನ್ನು ಉತ್ತೇಜಿಸುವ ಉದ್ದೇಶವಿರುತ್ತದೆ. ಕೆಲವೊಮ್ಮೆ, ಕಾನೂನಿನಲ್ಲಿನ ಬದಲಾವಣೆಯು ಸಾಮಾಜಿಕ ವಾಸ್ತವಿಕತೆಯ ಫಲಿತಾಂಶವಾಗಿರುತ್ತದೆ. ಸಾಂವಿಧಾನಿಕ ಸನ್ನಿವೇಶದಲ್ಲಿ ನಾವು ಟಿಜಿಗಳ ಹಕ್ಕುಗಳ ಬಗ್ಗೆ ಚರ್ಚಿಸುವಾಗ, ಸಂಪೂರ್ಣ ದೃಷ್ಟಿಕೋನದಲ್ಲಿ ಬದಲಾವಣೆಯನ್ನು ತರುವ ಸಲುವಾಗಿ ನಾವು ಕಾನೂನು ಹೆಚ್ಚು ಪ್ರಮುಖ ಪಾತ್ರವನ್ನು ವಹಿಸಬೇಕಾಗಿದೆ ಎಂದು ಕಂಡುಕೊಂಡಿದ್ದೇವೆ. ಭಾರತದಲ್ಲಿ ಟಿಜಿಗಳು, ಗಂಡು ಅಥವಾ ಹೆಣ್ಣು ಅಲ್ಲ, ಅವರನ್ನು ಅವೆರೆಡರಲ್ಲಿ ಒಂದು ವರ್ಗಕ್ಕೆ ಸೇರಿದವರು ಎಂದು ಪರಿಗಣಿಸಿದರೆ, ಅದು ಅವರ ಸಾಂವಿಧಾನಿಕ ಹಕ್ಕುಗಳ ನಿರಾಕರಣೆಗೆ ಸಮ. ಇದು ಸಾಮಾಜಿಕ ನ್ಯಾಯದ ನಿರಾಕರಣೆಯಾಗಿದ್ದು, ರಾಜಕೀಯ ಮತ್ತು ಆರ್ಥಿಕ ನ್ಯಾಯವನ್ನು ನಿರಾಕರಿಸುವ ಪರಿಣಾಮವನ್ನು ಹೊಂದಿದೆ.

129. ನಾವು ಮೇಲೆ ಸೂಚಿಸಿರುವಂತೆ ನಮ್ಮ ಸಂವಿಧಾನವು ಉದಾರ ಮತ್ತು ಸತ್ವಯುತವಾದ ಪ್ರಜಾಪ್ರಭುತ್ವವನ್ನು ಕಾಯ್ದುಕೊಳ್ಳುತ್ತದೆ ಮತ್ತು ಕಾನೂನಿನ ಆಳ್ವಿಕೆಯು ಅದರ ಪ್ರಮುಖ ಮತ್ತು ಮೂಲಭೂತ ಕಂಬವಾಗಿದೆ. ಎಲ್ಲಾ ಮಾನವರ ಘನತೆ ಮತ್ತು ಸಮಾನತೆಯ ಆಧಾರದ ಮೇಲೆ ಅದು ಸ್ವಂತ ಆಂತರಿಕ ನೈತಿಕತೆಯನ್ನು ಪಡೆದುಕೊಳ್ಳುತ್ತದೆ. ಕಾನೂನಿನ ನಿಯಮವು ವ್ಯಕ್ತಿಗತ ಮಾನವ ಹಕ್ಕುಗಳ ರಕ್ಷಣೆಯನ್ನು ಅಪೇಕ್ಷಿಸುತ್ತದೆ. ಅಂತಹ ಹಕ್ಕುಗಳನ್ನು ಪ್ರತಿಯೊಬ್ಬ ಮನುಷ್ಯನಿಗೂ ಖಾತರಿಪಡಿಸಬೇಕು. ಈ ಟಿಜಿಗಳು, ಸಂಖ್ಯೆಯಲ್ಲಿ ಅತ್ಯಲ್ಪವಾದರೂ ಕುಡಾ ಮಾನವರೇ ಮತ್ತು ಅವರಿಗೆ ಮಾನವ ಹಕ್ಕುಗಳನ್ನು ಆನಂದಿಸುವ ಎಲ್ಲಾ ಬಗೆಯ ಹಕ್ಕೂ ಇದೆ.

57. ವಿಶೇಷವಾದ ಕೊನೆಯ ಘೋಷಣೆಯಲ್ಲಿ , ನ್ಯಾಯಾಲಯ ಹೀಗೆಂದಿತು

135. ಆದ್ದರಿಂದ, ನಾವು ಈ ರೀತಿಯಲ್ಲಿ ಘೋಷಿಸುತ್ತೇವೆ:

135.1. ಉಭಯ ಲಿಂಗಗಳನ್ನು ಹೊರತುಪಡಿಸಿ, ಹಿಜ್ರಾಗಳು, ನಪುಂಸಕರ ಹಕ್ಕುಗಳನ್ನು ನಮ್ಮ ಸಂವಿಧಾನದ 3ನೇ ಭಾಗ ಹಾಗೂ ಸಂಸತ್ತು ಮತ್ತು ಸರ್ಕಾರದ ಶಾಸಕಾಂಗ ರಚಿಸಿದ ಕಾನೂನುಗಳ ಅಡಿಯಲ್ಲಿ ಕಾಪಾಡುವ ಉದ್ದೇಶಕ್ಕಾಗಿ ಅವರನ್ನು "ಮೂರನೇ ಲಿಂಗ" ಎಂದು ಪರಿಗಣಿಸಲಾಗುತ್ತದೆ.

135.2. ಲಿಂಗಪರಿವರ್ತಿತರಿಗಿರುವ ತಮ್ಮ ಸ್ವಯಂ-ಗುರುತಿಸಲ್ಪಟ್ಟ ಲಿಂಗವನ್ನು ನಿರ್ಧರಿಸುವ ಹಕ್ಕನ್ನು ಕೂಡಾ ಎತ್ತಿಹಿಡಿಯಲಾಗುತ್ತಿದೆ ಮತ್ತು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅವರ ಗಂಡು, ಹೆಣ್ಣು ಅಥವಾ ಮೂರನೆಯ ಲಿಂಗದವರೆಂಬ ಲಿಂಗಾಧಾರಿತ ಗುರುತನ್ನು ಕಾನೂನುಬದ್ಧವಾಗಿ ಗುರುತಿಸಲು ನಿರ್ದೇಶನ ನೀಡಲಾಗುತ್ತಿದೆ.

135.3. ಕೇಂದ್ರ ಮತ್ತು ರಾಜ್ಯ ಸರಕಾರಗಳು ಅವರನ್ನು ಸಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳೆಂದು ಪರಿಗಣಿಸಲು ಕ್ರಮಗಳನ್ನು ತೆಗೆದುಕೊಳ್ಳುವಂತೆ ಮತ್ತು ಶೈಕ್ಷಣಿಕ ಸಂಸ್ಥೆಗಳ ದಾಖಲಾತಿ ಮತ್ತು ಸಾರ್ವಜನಿಕ ನೇಮಕಾತಿಗಳ ಸಂದರ್ಭಗಳಲ್ಲಿ ಎಲ್ಲಾ ರೀತಿಯ ಮೀಸಲಾತಿಗಳನ್ನು ನೀಡುವಂತೆ ನಿರ್ದೇಶಿಸುತ್ತಿದ್ದೇವೆ.

135.4. ಹಿಜ್ರಾಗಳು/ಲಿಂಗಪರಿವರ್ತಿತರು ಹಲವು ಲೈಂಗಿಕ ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿರುವ ಕಾರಣ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರತ್ಯೇಕ ಎಚ್ಐವಿ ವಿಚಕ್ಷಣಾ ಕೇಂದ್ರಗಳನ್ನು ನಡೆಸಲು ನಿರ್ದೇಶಿಸಲ್ಪಟ್ಟಿವೆ.

135.5.ಹಿಜ್ರಾಗಳು/ಲಿಂಗಪರಿವರ್ತಿತಗಳು ಎದುರಿಸುತ್ತಿರುವ ಭಯ, ಅವಮಾನ, ಲಿಂಗ ಅಸ್ವಸ್ಥತೆ, ಸಾಮಾಜಿಕ ಒತ್ತಡ, ಖಿನ್ನತೆ, ಆತ್ಮಹತ್ಯೆ ಪ್ರವೃತ್ತಿಗಳು, ಸಾಮಾಜಿಕ ಕಳಂಕ,

ಮುಂತಾದ ಸಮಸ್ಯೆಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಗಂಭೀರವಾಗಿ ಪರಿಗಣಿಸಬೇಕು ಮತ್ತು ಒಬ್ಬರ ಲಿಂಗವನ್ನು ಘೋಷಿಸಲು ಎಸ್.ಆರ್.ಎಸ್.ಗಾಗಿ ಯಾವುದೇ ಬಗೆಯ ಒತ್ತಾಯಮಾಡುವುದು ಅನೈತಿಕ ಮತ್ತು ಅಕ್ರಮ ಎಂದು ಘೋಷಿಸುತ್ತಿದ್ದೇವೆ.

135.6. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಆಸ್ಪತ್ರೆಗಳಲ್ಲಿ ಟಿಜಿಗಳಿಗೆ ವೈದ್ಯಕೀಯ ಆರೈಕೆಯನ್ನು ಒದಗಿಸಲು ಸರಿಯಾದ ಕ್ರಮಗಳನ್ನು ತೆಗೆದುಕೊಳ್ಳಬೇಕು ಮತ್ತು ಅವರಿಗೆ ಪ್ರತ್ಯೇಕ ಸಾರ್ವಜನಿಕ ಶೌಚಾಲಯಗಳು ಮತ್ತು ಇತರ ಸೌಲಭ್ಯಗಳನ್ನು ಒದಗಿಸಬೇಕು.

135.7.ಅವರುಗಳ ಕಲ್ಯಾಣಕ್ಕಾಗಿ ವಿವಿಧ ಸಾಮಾಜಿಕ ಕಲ್ಯಾಣ ಯೋಜನೆಗಳನ್ನು ರಚಿಸುವ ಸಲುವಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕ್ರಮಗಳನ್ನು ತೆಗೆದುಕೊಳ್ಳಬೇಕು.

135.8. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ಟಿಜಿಗಳು ತಾವು ಸಾಮಾಜಿಕ ಜೀವನದ ಬೇರ್ಪಡಿಸಲಾಗದ ಭಾಗ ಎಂದು ಭಾವಿಸುವ ರೀತಿಯಲ್ಲಿ ಮತ್ತು ಅವರನ್ನು ಅಸ್ಪೃಶ್ಯರೆಂದು ಪರಿಗಣಿಸಬಾರದು ಎಂಬ ಕುರಿತು ಸಾರ್ವಜನಿಕ ಜಾಗೃತಿ ಮೂಡಿಸುವ ಕ್ರಮಗಳನ್ನು ತೆಗೆದುಕೊಳ್ಳಬೇಕು.

> 135.9. ನಮ್ಮ ಸಾಂಸ್ಕೃತಿಕ ಮತ್ತು ಸಾಮಾಜಿಕ ಜೀವನದಲ್ಲಿ ಅವರು ಹಿಂದೊಮ್ಮೆ ಆನಂದಿಸಿದ್ದ ಸಮಾಜದಲ್ಲಿನ ಗೌರವ ಮತ್ತು ಸ್ಥಾನಮಾನವನ್ನು ಮರಳಿ ಪಡೆಯುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕ್ರಮಗಳನ್ನು ತೆಗೆದುಕೊಳ್ಳಬೇಕು. "

58. ಸಮಾನ ಲಿಂಗದ ವ್ಯಕ್ತಿಗಳ ನಡುವಿನ ಒಪ್ಪಿಗೆಯ ಲೈಂಗಿಕ ಕ್ರಿಯೆಯನ್ನು ಪ್ರಸ್ತಾಪಿಸಿದ ಪುಟ್ಟಸ್ವಾಮಿ (ಮೇಲ್ಕಂಡ) ಪ್ರಕರಣದ ತೀರ್ಪು 377ನೇ ಪರಿಚ್ಛೇದದ ಶವಪೆಟ್ಟಿಗೆಗೆ ಹೊಡೆದ ಮತ್ತೊಂದು ಮುಖ್ಯಾವದ ಮೊಳೆಯಾಗಿತ್ತು. ಈ ತೀರ್ಪಿನ ೯೬ನೇ ವಾಕ್ಯದಲ್ಲಿ ನ್ಯಾ. ಚಂದ್ರಚೂಡ್ ರವರು **ನಾಲ್ಸಾ** (ಮೇಲ್ಕಂಡ) ತೀರ್ಪನ್ನು ಅನುಮೋದಿಸುತ್ತಾ ಖಾಸಗೀತನವು ಸ್ವಾತಂತ್ರ್ಯ ಮತ್ತು ಮುಕ್ತತೆಗಳ ಅವಿಭಾಜ್ಯ ಅಂಗವೆಂದು ಅಭಿಪ್ರಾಯಪಟ್ಟರು. **ಸುರೇಶ್ ಕುಮಾರ್ ಕೌಶಲ್** (ಮೇಲ್ಕಂಡ) ತೀರ್ಪನ್ನು ಉಲ್ಲೇಖಿಸಿದ, ನ್ಯಾ. ಚಂದ್ರಚೂಡ್ ಆ ತೀರ್ಪನ್ನು ಖಾಸಗೀತನದ ಹಕ್ಕಿಗೆ ಸಂಬಂಧಿಸಿದ ಸಾಂವಿಧಾನಿಕ ನ್ಯಾಯಶಾಸ್ತ್ರದ ವಿಕಾಸವಾದ ಮೇಲೆ ನೇರ ಪರಿಣಾಮಬೀರುವ "ಮತ್ತೊಂದು ಹೊಂದಾಣಿಕೆಯಾಗದ ಅಭಿಪ್ರಾಯ" ಎಂದು ಕರೆದರು. **ಸುರೇಶ್ ಕುಮಾರ್ ಕೌಶಲ್** (ಮೇಲ್ಕಂಡ) ಪ್ರಕರಣದ ತೀರ್ಪಿನ ಖಂಡನೆಯನ್ನು ಮುಂದುವರೆಸಿದ ನ್ಯಾ. ಚಂದ್ರಚೂಡ್ ಕೆಳಕಂಡ ಅಭಿಪ್ರಾಯ ವ್ಯಕ್ತಪಡಿಸಿದರು:-

> "144. ಸಂವಿಧಾನದ 21 ನೇ ಕಲಮಿನಡಿಯ ಖಾಸಗೀತನವನ್ನು ಆಧರಿಸಿರುವ ಹಕ್ಕೊಂದನ್ನು ನಿರಾಕರಿಸಲು ಈ ಮೇಲಿನ ಕಾರಣಗಳನ್ನು ಒಪ್ಪತಕ್ಕ ಸಾಂವಿಧಾನಿಕ ಆಧಾರವೆಂದು ಪರಿಗಣಿಸಲು ಆಗುವುದಿಲ್ಲ. "ದೇಶದ ಜನಸಂಖ್ಯೆಯ ಅತಿಸಣ್ಣ ಭಾಗ ಮಾತ್ರ ಸಮಲೈಂಗಿಕ ಸ್ತ್ರೀ ಪುರುಷರು, ಉಭಯಲಿಂಗಾಸಕ್ತರು ಅಥವಾ ಲಿಂಗಪರಿವರ್ತಿತರನ್ನು

ಒಳಗೊಂಡಿರುತ್ತದೆ" (ಈ ನ್ಯಾಯಾಲಯದ ತೀರ್ಪಿನಲ್ಲಿ ಗಮನಿಸಿದಂತೆ) ಎಂಬುದು ಖಾಸಗೀತನದ ಹಕ್ಕನ್ನು ನಿರಾಕರಿಸಲು ಸಮರ್ಥನೀಯವಾದ ಆಧಾರವಲ್ಲ. ಖಾತರಿಪಡಿಸಲಾದ ಮೂಲಭೂತ ಹಕ್ಕುಗಳ ಮಟ್ಟಕ್ಕೆ ಕೆಲವು ಹಕ್ಕುಗಳನ್ನು ಉನ್ನತೀಕರಿಸುವುದರ ಹಿಂದೆ ಆ ಹಕ್ಕುಗಳ ಚಲಾವಣೆಯನ್ನು ಶಾಸಕಾಂಗೀಯ ಅಥವಾ ಜನಪ್ರಿಯ ಬಹುಸಂಖ್ಯಾತರ ಅಸಮಾಧಾನದಿಂದ ರಕ್ಷಿಸುವ ಉದ್ದೇಶವಿದೆ. ಸಂವಿಧಾನಾತ್ಮಕ ಹಕ್ಕುಗಳ ಖಾತರಿಯು ತಮ್ಮ ಚಲಾವಣೆಯನ್ನು ಬಹುಮತದ ಅಭಿಪ್ರಾಯವು ಸಕಾರಾತ್ಮಕವಾಗಿ ಪರಿಗಣಿಸುತ್ತದೆಯೇ ಎಂಬುದನ್ನು ಅವಲಂಬಿಸಿಲ್ಲ. ಸಾಂವಿಧಾನಿಕ ರಕ್ಷಣೆಯ ಪವಿತ್ರತೆಯೊಂದಿಗೆ ಕೊಡಮಾಡಲಾಗಿರುವ ಹಕ್ಕುಗಳನ್ನು ನಿರ್ಲಕ್ಷಿಸಲು ಜನಪ್ರಿಯ ಸ್ವೀಕೃತಿಯ ಪರೀಕ್ಷೆಯು ಒಪ್ಪತಕ್ಕ ಆಧಾರವನ್ನು ಒದಗಿಸುವುದಿಲ್ಲ. ತಮ್ಮ ದೃಷ್ಟಿಕೋನಗಳು, ನಂಬಿಕೆಗಳು ಅಥವಾ ಜೀವನ ವಿಧಾನವು "ಮುಖ್ಯವಾಹಿನಿಯ" ಜೊತೆ ಹೊಂದಿಕೆಯಾಗುವುದಿಲ್ಲ ಎಂಬ ಸರಳ ಕಾರಣಕ್ಕಾಗಿ ಗೌಪ್ಯ ಮತ್ತು ಪ್ರತ್ಯೇಕಿಸಲ್ಪಟ್ಟ ಅಲ್ಪಸಂಖ್ಯಾತರು ತಾರತಮ್ಯದ ಗಂಭೀರ ಅಪಾಯಗಳನ್ನು ಎದುರಿಸುತ್ತಾರೆ. ಇನ್ನೂ ಕಾನೂನಿನ ನಿಯಮದಡಿಯಲ್ಲಿ ಸ್ಥಾಪಿಸಲಾದ ಪ್ರಜಾಪ್ರಭುತ್ವ ಸಂವಿಧಾನದಲ್ಲಿ, ಅವರ ಹಕ್ಕುಗಳು ಸ್ವಾತಂತ್ರ್ಯವನ್ನು

ರಕ್ಷಿಸಲು ಇತರ ನಾಗರಿಕರಿಗೆ ನೀಡಲಾದಂತಹ ಪವಿತ್ರವಾದವು. ಲೈಂಗಿಕ ದೃಷ್ಟಿಕೋನವು ಗೌಪ್ಯತೆಯ ಅತ್ಯಗತ್ಯ ಗುಣಲಕ್ಷಣವಾಗಿದೆ. ವ್ಯಕ್ತಿಯ ವಿರುದ್ಧ ಲೈಂಗಿಕ ದೃಷ್ಟಿಕೋನದ ಆಧಾರದ ಮೇಲೆ ತಾರತಮ್ಯವು ವ್ಯಕ್ತಿಯ ಘನತೆ ಮತ್ತು ಸ್ವಾಭಿಮಾನಕ್ಕೆ ಆಳವಾಗಿ ಆಕ್ರಮಣಕಾರಿಯಾಗಿದೆ. ಸಮಾಜದಲ್ಲಿ ಪ್ರತಿ ವ್ಯಕ್ತಿಯ ಲೈಂಗಿಕ ದೃಷ್ಟಿಕೋನವು ಸಹ ವೇದಿಕೆಯ ಮೇಲೆ ರಕ್ಷಿಸಬೇಕೆಂದು ಸಮಾನತೆ ಕೋರುತ್ತದೆ. ಖಾಸಗೀತನ ಮತ್ತು ಲೈಂಗಿಕ ನಿಲುವಿನ ರಕ್ಷಣೆಯ ಹಕ್ಕುಗಳು ಸಂವಿಧಾನದ 14, 15 ಮತ್ತು 21 ನೇ ಕಲಮುಗಳು ಖಾತರಿಪಡಿಸುವ ಮೂಲಭೂತ ಹಕ್ಕುಗಳ ಕೇಂದ್ರದಲ್ಲಿವೆ.

145. ಉಚ್ಚ ನ್ಯಾಯಾಲಯವು "ಎಲ್.ಜಿ.ಬಿ.ಟಿ ವ್ಯಕ್ತಿಗಳ ತಥಾಕಥಿತ ಹಕ್ಕುಗಳನ್ನು ಕಾಪಾಡುವ ತನ್ನ ತರಾತುರಿಯಲ್ಲಿ ಅಂತರಾಷ್ಟ್ರೀಯ ನಿದರ್ಶನಗಳನ್ನು ಅವಲಂಬಿಸಿದ್ದು ತಪ್ಪಾಗಿತ್ತು ಎಂಬ ಸುರೇಶ್ ಕುಮಾರ್ ಕೌಶಲ್ ವಿ. ನಾಜ್ ಪ್ರತಿಷ್ಠಾನ, (2014) ಪ್ರಕರಣದ ತೀರ್ಪಿನ ಅಭಿಪ್ರಾಯವು, ನಮ್ಮ ದೃಷ್ಟಿಯಲ್ಲಿ, ಸಮರ್ಥನೀಯವಲ್ಲ. ಸಮಲೈಂಗಿಕ ಸ್ತ್ರೀ, ಸಮಲೈಂಗಿಕ ಪುರುಷ, ಉಭಯಲಿಂಗಾಸಕ್ತರು ಮತ್ತು ಲಿಂಗಪರಿವರ್ತಿತ ಜನಸಂಖ್ಯೆಯ ಹಕ್ಕುಗಳನ್ನು ತಥಾಕಥಿತ ಹಕ್ಕುಗಳು" ಎಂದು ಪರಿಗಣಿಸಲು

ಆಗುವುದಿಲ್ಲ. ತಥಾಕಥಿತ ಎಂಬ ಭಾವವು ಹಕ್ಕಿನ ವೇಷದಲ್ಲಿ ಸ್ವಾತಂತ್ರ್ಯದ ಚಲಾವಣೆಯನ್ನು ಸೂಚಿಸುತ್ತದೆ ಮತ್ತು ಇದೊಂದು ಭ್ರಮೆ. ಇದು ಎಲ್.ಜಿ.ಬಿ.ಟಿ. ಸಮುದಾಯದ ಖಾಸಗೀತನವನ್ನಾಧರಿಸಿದ ಅಗ್ರಹಗಳ ಅಸಮಂಜಸ ನಿರೂಪಣೆಯಾಗಿದೆ. ಅವರ ಹಕ್ಕುಗಳು "ತಥಾಕಥಿತ"ವಲ್ಲ, ಬದಲಿಗೆ ಅವುಗಳು ಸಮರ್ಥ ಸಾಂವಿಧಾನಿಕ ಸಿಧ್ಧಾಂತದ ಮೇಲೆ ರೂಪುಗೊಂಡಿರುವ ನೈಜ ಹಕ್ಕುಗಳು. ಅವು ಬದುಕಿನ ಹಕ್ಕಿನ ಸ್ವಾಭಾವಿಕ ಭಾಗ. ಅವು ಖಾಸಗೀತನ ಮತ್ತು ಘನತೆಯಲ್ಲಿ ನೆಲೆಯಾಗಿವೆ. ಅವು ಮುಕ್ತತೆ ಮತ್ತು ಸ್ವಾತಂತ್ರ್ಯಗಳ ಮೂಲಸತ್ವ. ಲೈಂಗಿಕ ನಿಲುವು ಅಸ್ಮಿತೆಯ ಅತ್ಯಗತ್ಯ ಭಾಗ. ಸಮಾನ ರಕ್ಷಣೆಯು, ಪ್ರತಿವ್ಯಕ್ತಿಯ ಅಸ್ಮಿತೆಯನ್ನು ತಾರತಮ್ಯವಿಲ್ಲದೆ ರಕ್ಷಿಸಬೇಕೆಂದು ಅಪೇಕ್ಷಿಸುತ್ತದೆ.

146. **ಕೌಶಲ್ ಪ್ರಕರಣದ** ನಿರ್ಧಾರವು 377ನೇ ಕಲಮನ್ನು ಉಲ್ಲಂಘಿಸಿದ್ದಕ್ಕಾಗಿ ಕೇವಲ ಎರಡು ನೂರು ಪ್ರಕರಣಗಳಲ್ಲಿ ಶಿಕ್ಷೆ ನೀಡಲಾಗಿದೆ ಎಂದು ಪ್ರತಿಪಾದಿಸುವಾಗ ಅತಿಕಡಿಮೆ ತಾರ್ಕಿಕತೆಯನ್ನು ಪ್ರಯೋಗಿಸುತ್ತದೆ. ಈ ಅತಿಕಡಿಮೆ ತಾರ್ಕಿಕತೆಯ ಸಿಧ್ಧಾಂತವು ತಪ್ಪಾದುದಾಗಿದೆ, ಏಕೆಂದರೆ ಹೆಚ್ಚಿನ ಸಂಖ್ಯೆಯ ಜನರ ಬದಲು, ಕೆಲ ಜನರನ್ನು ಬೇರೆ

ರೀತಿಯಲ್ಲಿ ನಡೆಸಿಕೊಂಡಾಗ ನಡೆಯುವ ಮೂಲಭೂತ ಹಕ್ಕುಗಳ ಮೇಲಿನ ಅತಿಕ್ರಮಣವನ್ನು ಸಹಿಸಿಕೊಳ್ಳತಕ್ಕದ್ದಲ್ಲ. ಆಕ್ರಮಣಕಾರೀ ತಾರತಮ್ಯದ ಇಂತಹ ಕೃತ್ಯಗಳು ಮೂಲಭೂತ ಹಕ್ಕುಗಳ ಚಲಾವಣೆಯ ಮೇಲೆ ಬೀರುವ ಬೆಚ್ಚಿಬೀಳಿಸುವ ಪರಿಣಾಮಗಳ ಹಿನ್ನೆಲೆಯಲ್ಲಿ ಅವು ಸಂವಿಧಾನಾತ್ಮಕವಾಗಿ ಒಪ್ಪತಕ್ಕವಲ್ಲ. ಉದಾಹರಣೆಗೆ, ಸೆನ್ಸಾರ್ಶಿಪ್ ಮುಂತಾದ ಪೂರ್ವ-ಪ್ರಕಟಣೆಯ ನಿಗ್ರಹಗಳು ದುರ್ಬಲವಾಗಿವೆ, ಏಕೆಂದರೆ ಅವು, ಅಂತಹ ನಿರ್ಬಂಧಗಳು ಜಾರಿಯಾಗುವ ಭಯದಿಂದ ಜನರು ತಮ್ಮ ವಾಕ್ಸ್ವಾತಂತ್ರ್ಯ ಹಕ್ಕನ್ನು ಚಲಾಯಿಸದಂತೆ ನಿರುತ್ಸಾಹಗೊಳಿಸುತ್ತವೆ. ಹಕ್ಕುಗಳ ಚಲಾವಣೆಯ ಮೇಲಿನ ಪ್ರತಿಕೂಲ ಪರಿಣಾಮವು ಒಬ್ಬರ ಖಾಸಗೀತನ ಮತ್ತು ಘನತೆಯ ಒಂದು ಅಂಶವಾದ ಲೈಂಗಿಕ ನಿಲುವಿನ ಅಡ್ಡಿಯಿಲ್ಲದ ನೆರವೇರಿಕೆಗೆ ಭಾರೀ ಅಪಾಯವನ್ನು ಉಂಟುಮಾಡುತ್ತದೆ. ಅಪರಾಧವೊಂದಕ್ಕೆ ಮನುಷ್ಯನೊಬ್ಬನು ಎಸಗಿದ ಅಪರಾಧವನ್ನು ಸಮಾಜದ ಅಸಹನೆ ಮತ್ತು ನಿರಾದರಗಳು ವ್ಯಕ್ತವಾಗುವಂತಹ ಶಿಕ್ಷೆಗೆ ಒಳಪಡಿಸಳಪಡಿಸಬಹುದು ಎಂಬ ಅಪಾಯದ ಕಾರಣದಿಂದ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ, ಆದ್ದರಿಂದ **ಕೌಶಲ್** ಪ್ರಕರಣದ

ತೀರ್ಪಿನಲ್ಲಿ ಬಳಸಲಾಗಿರುವ ಕೆಲವೇ ವ್ಯಕ್ತಿಗಳನ್ನು ದಂಡಿಸಿರುವುದು ಉಲ್ಲಂಘನೆಯನ್ನು ಸೂಚಿಸುವುದಿಲ್ಲ ಎಂಬ ತರ್ಕವು ತಪ್ಪಾಗಿದೆ . ಇದರ ಪರಿಣಾಮವಾಗಿ, ಕೌಶಲ್ ಪ್ರಕರಣದ ತೀರ್ಪು ಎಲ್.ಜಿ.ಬಿ.ಟಿ ವ್ಯಕ್ತಿಗಳ ಖಾಸಗೀತನ-ಘನತೆಯ್ನಾಧರಿಸಿದ ಬೇಡಿಕೆಗಳ ವಿಚಾರದಲ್ಲಿ ವ್ಯವಹರಿಸಿರುವ ರೀತಿಯನ್ನು ನಾವು ಒಪ್ಪುವುದಿಲ್ಲ.

147. ಈ ನ್ಯಾಯಾಲಯದ ಹಿರಿಯ ಪೀಠದದೆದುರು 377ನೇ ಪರಿಚ್ಛೇದವನ್ನು ಪ್ರಶ್ನಿಸಿರುವ ಪ್ರಕರಣ ಬಾಕಿ ಉಳಿದಿರುವುದರಿಂದ, ನಾವು ಅದರ ಸಂವಿಧಾನಾತ್ಮಕ ಮಾನ್ಯತೆಯ ವಿಚಾರವು ಸೂಕ್ತವಾದ ಮೊಕದ್ದಮೆಯಲ್ಲಿ ನಿರ್ಧರಿಸಲಾಗಲಿ ಎಂದು ತೀರ್ಮಾನಿಸಿದ್ದೇವೆ"

59. ಬಹುಮುಖ್ಯವಾದ ವಾಕ್ಯದಲ್ಲಿ ಅರಿವುಳ್ಳ ನ್ಯಾಯಾಧೀಶರು ಕೊನೆಗೆ ಹೀಗೆ ನುಡಿದರು:

- "323. ಖಾಸಗೀತನವು ತನ್ನ ಮೂಲದಲ್ಲಿ ವೈಯಕ್ತಿಕ ಅನ್ಯೋನ್ಯತೆಗಳ ಸಂರಕ್ಷಣೆ, ಕುಟುಂಬ ಜೀವನದ ಪವಿತ್ರತೆ, ಮದುವೆ, ಸಂತಾನೋತ್ಪತ್ತಿ, ಮನೆ ಮತ್ತು ಲೈಂಗಿಕ ನಿಲುವಿನ ಸಂರಕ್ಷಣೆಯನ್ನು ಒಳಗೊಂಡಿದೆ. ಖಾಸಗೀತನ ಏಕಾಂಗಿಯಾಗಿ ಉಳಿಯುವ ಹಕ್ಕನ್ನು ಕೂಡಾ ನೀಡುತ್ತದೆ. ಖಾಸಗೀತನ ವೈಯಕ್ತಿಕ ಸ್ವಾಯತ್ತತೆಯನ್ನು ಕಾಪಾಡುತ್ತದೆ ಮತ್ತು ತನ್ನ ಜೀವನದ ಪ್ರಮುಖ

ಅಂಶಗಳನ್ನು ನಿಯಂತ್ರಿಸುವ ವ್ಯಕ್ತಿಯ ಸಾಮರ್ಥ್ಯವನ್ನು ಗುರುತಿಸುತ್ತದೆ. ಜೀವನ ವಿಧಾನವನ್ನು ನಿರ್ವಹಿಸುವ ವೈಯಕ್ತಿಕ ಆಯ್ಕೆಗಳು ಖಾಸಗೀತನದ ಸ್ವಾಭಾವಿಕ ಭಾಗವಾಗಿರುತ್ತದೆ. ಖಾಸಗೀತನ ವೈವಿಧ್ಯತೆಯನ್ನು ರಕ್ಷಿಸುತ್ತದೆ ಮತ್ತು ನಮ್ಮ ಸಂಸ್ಕೃತಿಯ ಬಹುತ್ವ ಮತ್ತು ವೈವಿಧ್ಯತೆಯನ್ನು ಗುರುತಿಸುತ್ತದೆ. ಖಾಸಗೀತನವನ್ನು ಕುರಿತಾದ ಕಾನೂನುಬದ್ಧ ನಿರೀಕ್ಷೆಗಳು ನಿಕಟ ವಲಯದಿಂದ ಖಾಸಗೀ ವಲಯಕ್ಕೆ ಮತ್ತು ಖಾಸಗೀ ವಲಯದಿಂದ ಸಾರ್ವಜನಿಕ ವಲಯಕ್ಕೆ ಬೇರೆಬೇರೆಯಾಗಿರಬಹುದು, ವ್ಯಕ್ತಿಯು ಸಾರ್ವಜನಿಕ ಸ್ಥಳದಲ್ಲಿದ್ದ ಮಾತ್ರಕ್ಕೆ ಖಾಸಗೀತನವು ಕಳೆದುಹೋಗುವುದಿಲ್ಲ ಅಥವಾ ಶರಣಾಗುವುದಿಲ್ಲ ಎಂದು ಒತ್ತಿಹೇಳುವದು ಮುಖ್ಯವಾಗಿದೆ. ಖಾಸಗೀತನವು ವ್ಯಕ್ತಿಗೆ ಸಂಬಂಧಪಡುತ್ತದೆ ಏಕೆಂದರೆ ಅದು ಮನುಷ್ಯನ ಘನತೆಗೆ ಅಗತ್ಯವಾದ ಅಂಶವಾಗಿದೆ. "

೬೦. ಉಳಿದ ಮೂವರು ಅರಿವುಳ್ಳ ನ್ಯಾಯಾಧೀಶರು ದನಿಗೂಡಿಸಿದ್ದ ತಮ್ಮ ತೀರ್ಪನ್ನು ನ್ಯಾ. ನಾರಿಮನ್, ಮೂಲಭೂತ ಖಾಸಗೀ ಆಯ್ಕೆಗಳನ್ನು ಮಾಡಲು ವ್ಯಕ್ತಿಗಿರುವ ಸ್ವಾತಂತ್ರ್ಯವನ್ನು ರಕ್ಷಿಸುವ "ಆಯ್ಕೆಯ ಖಾಸಗೀತನ" ವನ್ನು ಕೆಳಕಂಡಂತೆ ಗುರುತಿಸಿದರು:-

ಭಾರತೀಯ ಸನ್ನಿವೇಶದಲ್ಲಿ, ಖಾಸಗೀತನದ ಮೂಲಭೂತ ಹಕ್ಕು ಕನಿಷ್ಠ ಮೂರು ಅಂಶಗಳನ್ನು ಒಳಗೊಂಡಿರುತ್ತದೆ:

ವ್ಯಕ್ತಿಯನ್ನು ಒಳಗೊಳ್ಳುವ ಖಾಸಗೀತನ ಅಂದರೆ, ಸ್ವತಂತ್ರವಾಗಿ ಚಲಿಸುವ ಹಕ್ಕಿನಂತಹ ಭೌತಿಕ ದೇಹಕ್ಕೆ ಸಂಬಂಧಿಸಿದ ವ್ಯಕ್ತಿಯ ಹಕ್ಕುಗಳಲ್ಲಿ, ಸರ್ಕಾರ ಮಧ್ಯಪ್ರವೇಶ ಮಾಡಿದಾಗ; ವ್ಯಕ್ತಿಯ ದೇಹದ ಬದಲಿಗೆ ಅವರ ಮನಸ್ಸಿಗೆ ಸಂಬಂಧಿಸಿದ, ವ್ಯಕ್ತಿಯು ತಾನು ತನಗೆ ವೈಯಕ್ತಿಕವಾದ ವಸ್ತುಗಳ ಪ್ರಸಾರವನ್ನು ನಿಯಂತ್ರಿಸಬಹುದು ಎಂದು ಗುರುತಿಸುವ ಮಾಹಿತಿ ರೂಪದ ಖಾಸಗೀತನ. ಆದ್ದರಿಂದ ಒಬ್ಬ ವ್ಯಕ್ತಿಯ ಇಂತಹ ಮಾಹಿತಿಯ ಅನಧಿಕೃತ ಬಳಕೆಯು ಈ ಹಕ್ಕಿನ ಉಲ್ಲಂಘನೆಗೆ ಕಾರಣವಾಗಬಹುದು; ಮತ್ತು ಆಯ್ಕೆಯ ಖಾಸಗೀತನ, ಇದು ವೈಯಕ್ತಿಕ ಆಯ್ಕೆಗಳ ಮೇಲೀನ ವ್ಯಕ್ತಿಯ ಸ್ವಾಯತ್ತತೆಯನ್ನು ರಕ್ಷಿಸುತ್ತದೆ.

ಉದಾಹರಣೆಗೆ, ದೈಹಿಕ ಖಾಸಗೀತನ ಅಥವಾ ದೇಹಕ್ಕೆ ಸಂಬಂಧಿಸಿದ ಖಾಸಗೀತನವನ್ನು ನಾವು 19 (1) (ಡಿ) ಮತ್ತು (ಇ) ಕಲಮುಗಳಲ್ಲಿ ನೆಲೆಗೊಳಿಸಿ 21ನೇ ಕಲಮಿನೊಂದಿಗೆ ಓದಬಹುದು; 21ನೇ ಕಲಮಿನಡಿಯಲ್ಲಿ ವೈಯಕ್ತಿಕ ಮಾಹಿತಿಯ ಖಾಸಗೀತವನ್ನು ನೆಲೆಯಾಗಿರಿಸಬಹುದು; ಮತ್ತು 19 (1) (ಎ) ನಿಂದ (ಸಿ) , 20 (3), 21 ಮತ್ತು 25 ಕಲಮುಗಳಲ್ಲಿ ಆಯ್ಕೆಗಳ

> ಖಾಸಗೀತನವನ್ನು ನೆಲೆಯಾಗಿಸಬಹುದು. "ಖಾಸಗೀತನ"ವನ್ನು ಆಧರಿಸಿದ ವಾದವು ಅಸ್ಪಷ್ಟ ಮತ್ತು ನವಿರಾದ ಪರಿಕಲ್ಪನೆಯಾಗಿದ್ದು, ಆದ್ದರಿಂದ, ನಾವು ಅದರ ಮೇಲೆ ಹೆಚ್ಚು ಸಮಯ ಕಳೆಯಬಾರದು

61. ಪ್ರತ್ಯೇಕ ತೀರ್ಪನ್ನು ಮಂಡಿಸಿದ ನ್ಯಾ. ಕೌಲ್, **ಸುರೇಶ್ ಕುಮಾರ್ ಕೌಶಲ್** ತೀರ್ಪನ್ನು ಖಂಡಿಸುವಲ್ಲಿ ನ್ಯಾ. ಚಂದ್ರಚೂಡ್ ರೊಂದಿಗೆ ಸೇರಿಕೊಂಡು ಹೀಗೆ ನುಡಿದರು:-

> 647. ನ್ಯಾ. ಡಾ ಡಿ.ವೈ. ಚಂದ್ರಚೂಡ್ ರವರ, ಅಭಿಪ್ರಾಯದಲ್ಲಿ ಎರಡು ಅಂಶಗಳಿದ್ದು. ಇದರಲ್ಲಿ ಒಂದು ನ್ಯಾ. ರೋಹಿಂಟನ್ ಎಫ್. ನರಿಮನ್ ರವರ ಅಭಿಪ್ರಾಯವನ್ನು ಹೊಲುತ್ತದೆ ಮತ್ತು ಅದನ್ನು ನಿರ್ದಿಷ್ಟವಾಗಿ ಉಲ್ಲೇಖಿಸುವ ಅಗತ್ಯವಿದೆ. ಖಾಸಗೀತನದ ಹಕ್ಕಿಗೆ ಸಂಬಂಧಿಸಿದ ಸಾಂವಿಧಾನಿಕ ನ್ಯಾಯಶಾಸ್ತ್ರದ ವಿಕಾಸವನ್ನು ಪರಿಗಣಿಸುವಾಗ ಅವರು **ಸುರೇಶ್ ಕುಮಾರ್ ಕೌಶಲ್ ವಿ. ನಾಜ್ ಪ್ರತಿಷ್ಠಾನ** ಪ್ರಕರಣದ ತೀರ್ಪನ್ನು ಉಲ್ಲೇಖಿಸಿದ್ದಾರೆ. ದೆಹಲಿ ಉಚ್ಚನ್ಯಾಯಾಲಯದೆದುರು ದಂಡ ಸಂಹಿತೆಯ 377 ನೇ ಪರಿಚ್ಛೇದಕ್ಕೆ ಹಾಕಲಾದ ಸವಾಲಿನಲ್ಲಿ, ಈ ನಿಬಂಧನೆಯು ಘನತೆ ಮತ್ತು ಖಾಸಗೀತನದ ಹಕ್ಕಿನ ಉಲ್ಲಂಘನೆಗೆ ಕಾರಣವಾಗಿದೆ ಎಂಬುದು ಸವಾಲು ಹಾಕುವುದಕ್ಕೆ ಇದ್ದ ಆಧಾರಗಳಲ್ಲಿ ಒಂದಾಗಿತ್ತು. ದೆಹಲಿ ಉಚ್ಚ ನ್ಯಾಯಾಲಯವು, ಇತರ ವಿಚಾರಗಳ ಜೊತೆಗೆ,

[ನಾಜ್ ಪ್ರತಿಷ್ಠಾನ ವಿ ಸರ್ಕಾರ. (ದೆಹಲಿಯ ಎನ್.ಸಿ.ಟಿ), 2009] ಘನತೆಯಿಂದ ಬದುಕುವ ಹಕ್ಕು ಮತ್ತು ಖಾಸಗೀತನದ ಹಕ್ಕನ್ನು ಭಾರತೀಯ ಸಂವಿಧಾನದ 21 ನೇ ಕಲಮಿನ ಆಯಾಮಗಳೆಂದು ಗುರುತಿಸಲಾಗಿದೆ ಎಂದು ಗಮನಿಸಿತು. ಉಚ್ಚನ್ಯಾಯಾಯದ ಈ ದೃಷ್ಟಿಕೋನಕ್ಕೆ ಸರ್ವೋಚ್ಚ ನ್ಯಾಯಾಲಯದಿಂದ ಯಾವುದೇ ರೀತಿಯ ಬೆಂಬಲ ದೊರೆಯಲಿಲ್ಲ ಮತ್ತು ದೇಶದ ಜನಸಂಖ್ಯೆಯ ಅತಿಸಣ್ಣ ಭಾಗ ಮಾತ್ರ ಸಮಲೈಂಗಿಕ ಸ್ತ್ರೀಪುರುಷರು, ಉಭಯಲಿಂಗಾಸಕ್ತರು ಅಥವಾ ಲಿಂಗಪರಿವರ್ತಿತರನ್ನು ಒಳಗೊಂಡಿರುತ್ತದೆ ಮತ್ತು ಆದ್ದರಿಂದ ಸದರಿ ಪರಿಚ್ಛೇದವು ಸಂವಿಧಾನದ 14, 15 ಮತ್ತು 21 ನೇ ಕಲಮುಗಳ ನಿಬಂಧನೆಗಳಿಗೆ ವಿರುದ್ಧವಾಗಿದೆ ಎಂದು ಘೋಷಿಸಲು ಯಾವುದೇ ಕಾರಣಗಳಿಲ್ಲವೆಂದು ಗಮನಿಸಲಾಯಿತು ವಿಚಾರ ಅಲ್ಲಿಗೇ ನಿಲ್ಲಲಿಲ್ಲ ಏಕೆಂದರೆ ಅಲ್ಲಿ ಉಚ್ಚನ್ಯಾಯಾಲಯ ಚರ್ಚಿಸಿದಂತಹ ಖಾಸಗೀತನ ಮತ್ತು ಘನತೆಯ ವಿಷಯಗಳನ್ನೂ ಅವಲೋಕಿಸಲಾಯಿತು. ಲೈಂಗಿಕ ನಿಲುವೆಂಬುದು ಮನೆಯ ನಾಲ್ಕು ಗೋಡೆಯ ನಡುವೆ ಕೂಡ ಚರ್ಚೆಯ ವಿಷಯವಾಗಿದೆ. ನಾನು, ತಮ್ಮ ತೀರ್ಪಿನ 144ರಿಂದ 146ನೇ ವಾಕ್ಯಗಳಲ್ಲಿ, ತೊಂದರೆಗೊಳಗಾಗಿರುವ ಜನರು ಜನಸಂಖ್ಯೆಯ ಅತಿಸಣ್ಣ ಭಾಗವಾಗಿದ್ದರೂ

ಕೂಡ, ಖಾಸಗೀತನದ ಹಕ್ಕನ್ನು ನಿರಾಕರಿಸುವಂತಿಲ್ಲ ಎಂದು ನುಡಿದ ಡಾ. ಡಿ.ವೈ. ಚಂದ್ರಚೂಡ್ ರವರ ಅಭಿಪ್ರಾಯವನ್ನು ಒಪ್ಪುತ್ತೇನೆ. ಬಹುಸಂಖ್ಯಾತ ತತ್ವವು ಸಾಂವಿಧಾನಿಕ ಹಕ್ಕುಗಳಿಗೆ ಅನ್ವಯವಾಗುವುದಿಲ್ಲ ಮತ್ತು ಸಂವಿಧಾನದಲ್ಲಿ ಚಿತ್ರಿಸಲಾಗಿರುವ ಅಧಿಕಾರದ ಪರಿಶೀಲನೆ ಮತ್ತು ಸಮತೋಲನದ ತತ್ವಗಳ ಪ್ರಕಾರ ಬಹಳ ಸಲ ನ್ಯಾಯಾಲಯಗಳು ಬಹುಮತ ವಿರೋಧೀಯೆಂದು ವರ್ಗೀಕರಿಸಲ್ಪಡುವಂತಹ ನಿಲುವನ್ನು ತೆಗೆದುಕೊಳ್ಳಬೇಕಾಗುತ್ತದೆ. ಒಬ್ಬರ ಲೈಂಗಿಕ ನಿಲುವು ಖಾಸಗೀತನದ ಗುಣಲಕ್ಷಣಾ ಎನ್ನುವುದರಲ್ಲಿ ಅನುಮಾನವೇ ಇಲ್ಲ. **ಮೊಸ್ಲಿ v. ನ್ಯೂಸ್ ಗ್ರೂಪ್ ಪೇಪರ್ಸ್ ಲಿಮಿಟೆಡ್** ಪ್ರಕರಣದಲ್ಲಿ ಮಾಡಲಾಗಿರುವ ಅವಲೋಕನಗಳನ್ನು. ವಿಶಾಲವಾದ ಸನ್ನಿವೇಶದಲ್ಲಿ ಪ್ರಯೋಜನಕಾರಿಯಾಗಿ ಉಲ್ಲೇಖಿಸಬಹುದು:

130 ... ಇದು ಕೇವಲ ವೈಯಕ್ತಿಕ ಖಾಸಗೀತನದ ಮತ್ತು ಸಾರ್ವಜನಿಕ ಹಿತಾಸಕ್ತಿಯ ಜಿದ್ದಾಜಿದ್ದಿಯ ವಿಷಯವಲ್ಲ. ವೈಯಕ್ತಿಕ ಖಾಸಗೀತನವನ್ನು ಗೌರವಿಸುವುದರಲ್ಲಿ ಸಾರ್ವಜನಿಕ ಹಿತಾಸಕ್ತಿಯಿದೆ ಎಂಬುದು ಆಧುನಿಕ ಗ್ರಹಿಕೆ. ಹೀಗಾಗಿ, ಇದು ವಿರೋಧಾಭಾಸದ ಸಾರ್ವಜನಿಕ ಹಿತಾಸಕ್ತಿ ಪರಿಗಣನೆಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ಮತ್ತು

ಅವುಗಳನ್ನು ಹೆಚ್ಚು ಉತ್ತಮವಾಗಿ ಗುರುತಿಸಲ್ಪಟ್ಟ ಮಾನದಂಡ ಪ್ರಕಾರ ಮೌಲ್ಯಮಾಪನ ಮಾಡುವ ವಿಚಾರ.

131. ಒಬ್ಬ ವ್ಯಕ್ತಿಯ 8ನೇ ಕಲಮಿನ ಹಕ್ಕುಗಳ ಉಲ್ಲಂಘನೆಯನ್ನು ನ್ಯಾಯಾಲಯಗಳು ಗುರುತಿಸಿದಾಗ, ಮತ್ತು ನಿರ್ದಿಷ್ಟವಾಗಿ ತಮಗೆ ತೋಚಿದಂತೆ ಲೈಂಗಿಕ ಜೀವನ ಮತ್ತು ವೈಯಕ್ತಿಕ ಸಂಬಂಧಗಳನ್ನು ನಡೆಸುವ ತನ್ನ ಸ್ವಾತಂತ್ರ್ಯ ಉಲ್ಲಂಘನೆಯಾದ ಸಂದರ್ಭದಲ್ಲಿ ಪರಿಹಾರ ಪಡೆದು ಆ ಹಕ್ಕನ್ನು ಸಮರ್ಥಿಸಿಕೊಳ್ಳುವುದೇ ಸರಿ. ಪ್ರಬಲವಾದ ಸಾರ್ವಜನಿಕ ಹಿತಾಸಕ್ತಿ ಇದ್ದು, ಅದು ಆ ನಿರ್ದಿಷ್ಟ ಸಂದರ್ಭದಲ್ಲಿ ಆ ಹಕ್ಕನ್ನು ಮೀರಿಸುವಂತಿರುವ ಸಂದರ್ಭದಲ್ಲಿ ಮಾತ್ರ ಇದಕ್ಕೆ ವಿನಾಯಿತಿ ನೀಡಬಹುದು; ಏಕೆಂದರೆ ಸ್ಥಾಪಿತವಾದ "ಸೀಮಿತಗೊಳಿಸುವ ತತ್ವಗಳಲ್ಲಿ" ಕನಿಷ್ಠ ಒಂದು ತತ್ವ ಅಲ್ಲಿ ಕೆಲಸಮಾಡುತ್ತದೆ. ಅಕ್ರಮ ಚಟುವಟಿಕೆಯನ್ನು ಬಹಿರಂಗಪಡಿಸುವ ಅಥವಾ ವ್ಯಕ್ತಿಯೊಬ್ಬರು ಇಲ್ಲಿಯವರೆಗೂ ಮಾಡಿದ ಸಾರ್ವಜನಿಕರಿಗೆ ಹಕ್ಕುಮಂಡನೆಯಿಂದ ಸಾರ್ವಜನಿಕವಾಗಿ ಬಹುವಾಗಿ ದಾರಿತಪ್ಪುವುದನ್ನು ತಡೆಗಟ್ಟುವ (ಉದಾಹರಣೆಗೆ, ನವೋಮಿ ಕ್ಯಾಂಪ್ಬೆಲ್ ಮಾದಕ ದ್ರವ್ಯ ಸೇವನೆಮಾಡಿದ್ದನ್ನು ಸಾರ್ವಜನಿಕವಾಗಿ ನಿರಾಕರಿಸಿದಂತೆ) ನಿದರ್ಶನಗಳಿಗಾಗಿ ಹಕ್ಕುಗಳನ್ನು ಅತಿಕ್ರಮಿಸುವು ಅಗತ್ಯವೂ ಸೂಕ್ತವೂ ಆಗಿತ್ತೇ? ಅಥವಾ ವಾನ್ ಹ್ಯಾನೋವರ್ನಲ್ಲಿರುವ ಸ್ಟ್ರಾಸ್ಬರ್ಗ್ ನ್ಯಾಯಾಲಯ (60) ಮತ್ತು (76) ರಲ್ಲಿ ಆಡಿದ

> ಮಾತುಗಳಂತೆ ಸದರಿ ಮಾಹಿತಿಯ "ಸಾಮಾನ್ಯ ಆಸಕ್ತಿಯ ಚರ್ಚೆ"ಗೆ ಕೊಡುಗೆ ನೀಡುತ್ತಿತ್ತು ಎಂಬ ಕಾರಣಕ್ಕೆ ಅದು ಮುಖ್ಯವಾಗಿತ್ತೆ? ಇದು ನಿಜಕ್ಕೂ ಬಹಳ ದೊಡ್ಡಮಟ್ಟದ ಪರೀಕ್ಷೆ, ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಛಾಯಾಗ್ರಹಣಕ್ಕೆ ಸಂಬಂಧಿಸಿದ ವಿಚಾರದಲ್ಲಿ, ಈ ವ್ಯಾಪ್ತಿಯ ನ್ಯಾಯಾಲಯಗಳು ಆ ಸಿಧ್ಧಾಂತವನ್ನು ಎಷ್ಟರ ಮಟ್ಟಿಗೆ ಉಪಯೋಗಿಸುತ್ತವೆ ಎಂಬುದನ್ನು ಇನ್ನೂ ನಿರ್ಧರಿಸಬೇಕಿದೆ. ಅಕ್ಷರಶಃ ಪರಿಗಣಿಸಿದರೆ, ಒಪ್ಪಿಗೆ ನೀಡಲಾದ ವಿಚಾರದಲ್ಲಿ ಅದು ಬಹಳ ಮಹತ್ವದ ಬದಲಾವಣೆಯನ್ನು ಸೂಚಿಸುತ್ತದೆ. ಇದು ನಾವು ಇತ್ತೀಚಿನ ವರ್ಷಗಳಲ್ಲಿ ಒಗ್ಗಿಕೊಂಡಿರುವ ಟ್ಯಾಬ್ಲಾಯ್ಡ್ ಮತ್ತು ಸೆಲೆಬ್ರಿಟಿ ಸಂಸ್ಕೃತಿಯ ಮೇಲೆ ಆಳವಾದ ಪರಿಣಾಮವನ್ನು ಬೀರುತ್ತದೆ.

62. ಮೇಲಿನ ಮೂರು ತೀರ್ಪುಗಳು ಹೊರಬಿದ್ದ ಬೆನ್ನಲ್ಲೇ ಇನ್ನೂ ಮೂರು ಮುಖ್ಯ ನಿರ್ಧಾರಗಳು ಹೊರಬಿದ್ದವು. ದಯಾ ಮರಣಕ್ಕೆ ಸಂಬಂಧಿಸಿದ **ಕಾಮನ್ ಕಾಸ್ v. ಭಾರತಸರ್ಕಾರ,** 2018, ಪ್ರಕರಣದಲ್ಲಿ ದೀಪಕ್ ಮಿಶ್ರಾ ಕೆಳಗಿನಂತೆ ನುಡಿಯುತ್ತಾರೆ:-

> 166. ಹೀಗೆ ಹೇಳುವುದರ ಹಿಂದೆ ಕಾನೂನು ಬದಲಾಗುತ್ತಿರುವ ಸಮಾಜವನ್ನು ಪರಿಗಣಿಸಬೇಕು ಮತ್ತು ಅಭಿವೃದ್ಧಿಯಾಗುತ್ತಿರುವ ಪರಿಕಲ್ಪನೆಗಳಿಗೆ ಅನುಗುಣವಾಗಿ ನಡೆದುಕೊಳ್ಳಬೇಕು ಎಂದು ಸೂಚಿಸುವ ಉದ್ದೇಶವಿದೆ. ಕಾನೂನನ್ನು

ವ್ಯಾಖ್ಯಾನಿಸುವ ಪ್ರಕ್ರಿಯೆಲ್ಲಿ ಪ್ರಸ್ತುತ ಅಗತ್ಯಗಳನ್ನೂ ಈಡೇರಿಸಬೇಕು. ಆದಾಗ್ಯೂ, ಬದಲಾಗುತ್ತಿರುವ ಸಿದ್ಧಾಂತವನ್ನು ಪೂರ್ಣಗೊಳಿಸಲು ಮತ್ತು ಅದನ್ನು ವಾಸತವಾಗಿ ಮಾರ್ಪಡಿಸಲು ಸಂವಿಧಾನದಿಂದ ಎಷ್ಟರ ಮಟ್ಟಿಗಿನ ಶಕ್ತಿ ಮತ್ತು ಮಂಜೂರಾತಿಯನ್ನು ತೆಗೆದುಕೊಳ್ಳಬಹುದು ಎಂಬುದನ್ನು ನೋಡಬೇಕು ಪ್ರಸ್ತುತ ಅಗತ್ಯಗಳು ಸಾಂವಿಧಾನಿಕ ಚೌಕಟ್ಟಿನಿಂದ ಸಂಪೂರ್ಣವಾಗಿ ಹೊರ ಹೋಗುವ ಅಥವಾ ಸಂವಿಧಾನಾತ್ಮಕ ವ್ಯಾಖ್ಯಾನವು ಅಂತಹ ಚಲನಶೀಲತೆಯನ್ನು ಗುರುತಿಸಲು ವಿಫಲವಾಗುವ ಸಂದರ್ಭಗಳನ್ನು ಹೊರತುಪಡಿಸಿ, ನ್ಯಾಯಾಲಯವು ತಕ್ಷಣದ ಅಗತ್ಯತೆಗಳನ್ನು ವ್ಯಾಖ್ಯಾನದ ಪ್ರಕ್ರಿಯೆಯ ಮೂಲಕ ಪರಿಹರಿಸಬೇಕು. ಜಿಯಾನ್ ಕೌರ್ ಪ್ರಕರಣದಲ್ಲಿ ಸಂವಿಧಾನದ ಪೀಠವು (ಜಿಯಾನ್ ಕೌರ್ ವಿ. ಪಂಜಾಬ್ ರಾಜ್ಯ, (1996), ಮೊದಲೇ ಹೇಳಿದಂತೆ ಆರಂಭವಾಗಿರುವ ನೈಸರ್ಗಿಕ ಸಾವಿನ ಪ್ರಕ್ರಿಯೆಗೆ ವೇಗನೀಡುವುದನ್ನು ಆತ್ಮಹತ್ಯೆ ಮತ್ತು ಆತ್ಮಹತ್ಯೆಯ ಪ್ರಯತ್ನದಿಂದ ಪ್ರತ್ಯೇಕಿಸುತ್ತದೆ. ಇತರ ನ್ಯಾಯವ್ಯಾಪ್ತಿಗಳಿಂದ ನಾವು ಗಮನಹರಿಸಿರುವಂತೆ, ತೀರ್ಪುಗಳು, ಮಾರಣಾಂತಿಕ ಚುಚ್ಚುಮದ್ದು ಅಥವಾ ಕೆಲವು ಔಷಧಿಗಳ ಮೂಲಕ ನೋವುರಹಿತ ಸಾವನ್ನುಂಟುಮಾಡುವುದು ಮತ್ತು ಮರಣದ ಪ್ರಕ್ರಿಯೆ

ಪ್ರಾರಂಭವಾದ ಸಂದರ್ಭಗಳಲ್ಲಿ ಜೀವವನ್ನು ಉಳಿಸಿಕೊಳ್ಳಬಲ್ಲ ನಿರ್ದಿಷ್ಟ ಚಿಕಿತ್ಸೆಯನ್ನು ನೀಡದಿರುವುದು ಅಥವಾ, ಅದು ಜೀವನವನ್ನು ಉಳಿಸುವ ಸಾಧ್ಯತೆಯ ಸಂಪೂರ್ಣ ಅನುಪಸ್ಥಿತಿಯ ಕಾರಣದಿಂದ ರೋಗಿಗೆ ನೀಡಲಾದ ಚಿಕಿತ್ಸೆಯ ಹಿಂತೆಗೆದುಕೊಳ್ಳುವ ಸಂದರ್ಭಗಳ ನಡುವಿನ ವ್ಯತ್ಯಾಸಗಳನ್ನು ಗಮನಿಸಿದವು. ಎಂದರೆ, ಮೊದಲ ಭಾಗವು ಒಂದು ಬಹಿರಂಗ ಕಾರ್ಯಕ್ಕೆ ಸಂಬಂಧಿಸಿದೆ, ಆದರೆ ಎರಡನೆಯದು ತಿಳುವಳಿಕೆಯ ಸಮ್ಮತಿ ಮತ್ತು ಅಧಿಕೃತ ಲೋಪದ ವಲಯದೊಳಗೆ ಬರುತ್ತದೆ. ಅಂತಹ ಲೋಪವು ಅಂತಹ ಕ್ರಿಯೆಯನ್ನು ಕೆಲವು ಸುರಕ್ಷತೆಗಳ ಮಾರ್ಗದರ್ಶನದಲ್ಲಿ ಮಾಡಿದರೆ ಯಾವುದೇ ಕ್ರಿಮಿನಲ್ ಹೊಣೆಗಾರಿಕೆಯನ್ನು ಹೊಂದಿರುವುದಿಲ್ಲ. ಈ ಪರಿಕಲ್ಪನೆಯು ಜೀವನದ ದೀರ್ಘಾವಧಿಯ ಮೇಲೆ ಅವಲಂಬಿತವಾಗಿದೆ, ಅಲ್ಲಿ ರೋಗಿಯು ಪರಿಸ್ಥಿತಿಗೆ ಯಾವುದೇ ಚಿಕಿತ್ಸೆಯಿಲ್ಲದ ಮತ್ತು ಯಾವುದೇ ಸಂದರ್ಭಗಳಲ್ಲಿ, ಇಂತಹ ಅವಮಾನಕರ ಸ್ಥಿತಿಯನ್ನು ಹೊಂದಲು ಅವರು ಇಷ್ಟಪಡದ ಸನ್ನಿವೇಶವಿರುತ್ತದೆ. ಇದು ಚಿಕಿತ್ಸಕ ವೈದ್ಯರು ಮತ್ತು ಕುಟುಂಬದ ಸದಸ್ಯರಿಗೆ ಚಿಕಿತ್ಸೆಯು ವ್ಯಕ್ತಿಯ ಉಸಿರಾಟದ ನಿರಂತರತೆಯನ್ನು ಹಿಗ್ಗಿಸುತ್ತದೆಯಷ್ಟೇ ಎಂಬುದು ಸಂಪೂರ್ಣವಾಗಿ

ಚೆನ್ನಾಗಿ ತಿಳಿದಿರುವ ಸ್ಥಿತಿ ಮತ್ತು ರೋಗಿಯು ಅವರು ಉಸಿರಾಡುತ್ತಿರುವ ಕುರಿತು ಸಹ ತಿಳಿದಿರುವುದಿಲ್ಲ. ಕೃತಕ ಹೃದಯ ಬಡಿತದಿಂದ ಜೀವನವನ್ನು ಅಳೆಯಲಾಗುತ್ತದೆ ಮತ್ತು ರೋಗಿಯು ತನ ಮೇಲೆ ಹೇರಲ್ಪಟ್ಟಿರುವ ಈ ಅಗೌರವದ ಸ್ಥಿತಿಯನ್ನೂ ಅನುಭವಿಸಬೇಕು. ಬದುಕಿನ ಘನತೆಯು ಅವನಿಗೆ ನಿರಾಕರಿಸಲಾಗುತ್ತದೆ, ಏಕೆಂದರೆ ತಪ್ಪಿಸಿಕೊಳ್ಳಬಹುದಾದ ದೀರ್ಘಕಾಲದ ಚಿಕಿತ್ಸೆಯನ್ನು ಅನುಭವಿಸದ ಹೊರತು ಬೇರೆ ಆಯ್ಕೆಯಿರುವುದಿಲ್ಲ ಮತ್ತು ಇದರಿಂದಾಗಿ ವ್ಯಯಕ್ತಿಕ ಸ್ವಾಯತ್ತೆ ಮತ್ತು ಖಾಸಗೀತನದ ಹಕ್ಕಿನ ಸಂರಕ್ಷಿತ ತತ್ವವಾಗಿರುವ ಘನತೆಯೊಂದಿಗೆ ಬದುಕುವ ಮತ್ತು ಸಾವನ್ನು ಘನತೆಯಿಂದ ಎದುರುಗೊಳ್ಳುವ ಅವರ ಹಕ್ಕಿನ ಮೇಲೆ ಕಾರ್ಮೋಡವೊಂದನ್ನು ಕವಿಸಿ, ಆ ಹಕ್ಕನ್ನು ಘಾಸಿಗೊಳಿಸಲಾಗುತ್ತದೆ, ಅಂತಹ ಸ್ಥಿತಿಯಲ್ಲಿ ಅವರಿಗೆ ಹಳೆಯ ನೆನಪುಗಳು ಅಥವಾ ಭವಿಷ್ಯದ ಭರವಸೆಗಳಿರುವುದಿಲ್ಲ, ಆದರೆ ಅವರು ಯಾರೂ ಅನುಭವಿಸಲು ಬಯಸದ ದುಃಖ ಸ್ಥಿತಿಯಲ್ಲಿರುತ್ತಾರೆ. ಜೀವನದ ಅನಿವಾರ್ಯ ಸಂಗತಿಯಾಗಿರುವ ಮರಣವನ್ನು ಆಹ್ವಾನಿಸಲಾಗುವುದಿಲ್ಲ ಎಂದು ಕೆಲವರು ಮೌನವಾಗಿ ಯೋಚಿಸಬಹುದು. ಅಂತಹ ಸನ್ನಿವೇಶಗಳನ್ನು ಎದುರಿಸಲು ನ್ಯಾಯಾಲಯಕ್ಕೆ

21ನೇ ಕಲಮನ್ನು ಮತ್ತಷ್ಟು ಕ್ರಿಯಾತ್ಮಕ ರೀತಿಯಲ್ಲಿ ಅರ್ಥೈಸಿಕೊಳ್ಳುವ ಕರ್ತವ್ಯವಿದೆ ಮತ್ತು ಘನತೆಯೊಂದಿಗೆ ಬದುಕುವ ಹಕ್ಕು, ವ್ಯಕ್ತಿ ನಿಷ್ಕ್ರಿಯ ಸ್ಥಿತಿಯಲ್ಲಿದ್ದಾಗ ಅಥವಾ ಅನಿವಾರ್ಯ ಮತ್ತು ಘನತೆಯ ಪ್ರಕ್ರಿಯೆಯಾದ ಸಾವನ್ನು ನಿಧಾನಗೊಳಿಸುವ ಬದುಕಿನ ಅವಧಿಯನ್ನು ವೃದ್ಧಿಸುವಂತಹ ಕೃತಕ ಚಿಕಿತ್ಸೆಯ ನೆರವಿನಿಂದಷ್ಟೇ ಜೀವಿಸುತ್ತಿರುವಾಗ ಸಾಯುವ ಪ್ರಕ್ರಿಯೆಯನ್ನು ಮೃದುಗೊಳಿಸುವುದು ಸಹ ಸೇರಿದೆ ಎಂಬುದನ್ನು ಅನುಮಾನವಿಲ್ಲದೇ ಹೇಳಬೇಕಾಗುತ್ತದೆ. ಇಲ್ಲಿ, ಆಯ್ಕೆಯ ವಿಷಯವೂ ಬರುತ್ತದೆ. ಹೀಗೆ ವಿಶ್ಲೇಷಿಸಿದಂತೆ, ಸಂವಿಧಾನದ 21ನೇ ಕಲಮಿನ ವ್ಯಾಪ್ತಿಯೊಳಗೆ ಅಂತಹ ಹಕ್ಕು ಬರುತ್ತದೆ ಎಂದು ನಾವು ಯೋಚಿಸಬೇಕಾಗುತ್ತದೆ.

12) ಸ್ವಯಂ ನಿರ್ಣಯ ಮತ್ತು ವೈಯಕ್ತಿಕ ಸ್ವಾಯತ್ತತೆಯ ಹಕ್ಕು

167. ಸಂವಿಧಾನದ 21ನೇ ಕಲಮಿನ ಭಾಗವಾಗಿ ಆಧುನಿಕ ನವೀನ ತಂತ್ರಜ್ಞಾನದ ಸಹಾಯದಿಂದ ತಡೆಹಿಡಿಯಲ್ಪಟ್ಟ ನೈಸರ್ಗಿಕ ಮರಣದ ಪ್ರಕ್ರಿಯೆಯ ವೇಗವನ್ನು ವೃದ್ಧಿಸುವ ಹಕ್ಕನ್ನು ನಿಭಾಯಿಸಿದ ನಂತರ, ಸ್ವಯಂ-ನಿರ್ಣಯ ಮತ್ತು ವೈಯಕ್ತಿಕ ಸ್ವಾಯತ್ತತೆಯ

ಹಕ್ಕುಗಳ ಸಮಸ್ಯೆಗಳನ್ನು ಬಗೆಹರಿಸುವುದು ಅಗತ್ಯವಾಗಿದೆ .

ಸ್ವಾತಂತ್ರ್ಯದ ಉದಾರ ಪರಿಕಲ್ಪನೆಯು ಆಯ್ಕೆಯ ಮೇಲೆ ಕೇಂದ್ರೀಕರಿಸುತ್ತದೆ ಮತ್ತು ಅದೇ ರೀತಿಯಾಗಿ, [ರಾಲ್ಸ್, ಜಾನ್, ಪೊಲಿಟಿಕಲ್ ಲಿಬರಲಿಸಮ್, 32, 33 (ನ್ಯೂ ಯಾರ್ಕ್: ಕೊಲಂಬಿಯಾ ಯುನಿವರ್ಸಿಟಿ ಪ್ರೆಸ್, 1993)] ಆಯ್ಕೆ ಮಾಡುವ ಪ್ರಕ್ರಿಯೆಯ ಮೂಲಕ ಸ್ವ-ನಿರ್ಣಯವನ್ನು ಅರ್ಥೈಸಿಕೊಳ್ಳಲಾಗಿದೆ ಎಂದು ಜಾನ್ ರಾಲ್ಸ್ ಹೇಳುತ್ತಾರೆ. ಒಬ್ಬ ಮಾನವನ ಗೌರವ ಮತ್ತು ನಿರ್ದಿಷ್ಟವಾಗಿ ಅವನು ತನ್ನ ಸ್ವಂತ ಜೀವನವನ್ನು ಹೇಗೆ ಜೀವಿಸಬೇಕು ಎಂಬುದನ್ನು ಆಯ್ಕೆ ಮಾಡುವ ಹಕ್ಕೇ ವ್ಯಕ್ತಿಗತ ಸ್ವಾಯತ್ತತೆ ಅಥವಾ ಸ್ವಯಂ ನಿರ್ಣಯದ ಹಕ್ಕು. ಇದು ಇತರರ ಹಸ್ತಕ್ಷೇಪದ ವಿರುದ್ಧದ ಹಕ್ಕಾಗಿದ್ದು, ಅದು ಪ್ರಾಪ್ತವಯಸ್ಕನಾಗಿರುವ ಅರ್ಹ ವ್ಯಕ್ತಿಯೊಬ್ಬನಿಗೆ ಯಾವುದೇ ನಿಯಂತ್ರಣ ಅಥವಾ ಹಸ್ತಕ್ಷೇಪವಿಲ್ಲದೆಯೇ ತನ್ನ ಸ್ವಂತ ಜೀವನ ಮತ್ತು ದೇಹಕ್ಕೆ ಸಂಬಂಧಿಸಿದ ನಿರ್ಧಾರಗಳನ್ನು ತೆಗೆದುಕೊಳ್ಳುವ ಹಕ್ಕನ್ನು ನೀಡುತ್ತದೆ. ಲಾರ್ಡ್ **ಹಾಫ್ಮನ್, ರೀವ್ಸ್ v. ಮೆಟ್ರೊಪೊಲಿಸ್ ಪೊಲೀಸ್** ಆಯುಕ್ತರು ಪ್ರಕರಣದಲ್ಲಿ.

ಸ್ವಾಯತ್ತತೆ ಎಂದರೆ, ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಮೇಲೆ ಸಾರ್ವಭೌಮತ್ವವನ್ನು ಹೊಂದಿದ್ದಾನೆ ಮತ್ತು ಅವನಿಗಿರುವ ಕೆಲವು ರೀತಿಯ ನಡವಳಿಕೆಯ ಹಕ್ಕನ್ನು ನಿರಾಕರಿಸಲಾಗುವುದಿಲ್ಲ.

202.8. ಸಾಮಾನ್ಯ ಕಾನೂನಿನ ಅಧಿಕಾರ ವ್ಯಾಪ್ತಿಯನ್ನು ಪರಿಶೀಲಿಸಿದಾಗ, ಒಪ್ಪಿಗೆ ನೀಡುವ ಸಾಮರ್ಥ್ಯವಿರುವ ಎಲ್ಲಾ ವಯಸ್ಕರಿಗೆ ಸ್ವಯಂ-ನಿರ್ಣಯ ಮತ್ತು ಸ್ವಾಯತ್ತತೆಗೆ ಹಕ್ಕಿದೆ ಎಂದು ತಿಳಿಯುತ್ತದೆ. ಸಾರ್ವತ್ರಿಕ ಮಾನ್ಯತೆ ಪಡೆದ ವೈದ್ಯಕೀಯ ಚಿಕಿತ್ಸೆಯನ್ನು ನಿರಾಕರಿಸುವ ಹಕ್ಕನ್ನು ಈ ಹಕ್ಕುಗಳು ಸುಗಮಗೊಳಿಸುತ್ತವೆ. ವಯಸ್ಸಿಗೆ ಬಂದ ಒಬ್ಬ ಸಮರ್ಥ ವ್ಯಕ್ತಿಯು ನಿರ್ದಿಷ್ಟ ಚಿಕಿತ್ಸೆ ಎಲ್ಲಾ ಚಿಕಿತ್ಸೆಯನ್ನು ನಿರಾಕರಿಸುವ ಅಥವಾ ಪರ್ಯಾಯ ಚಿಕಿತ್ಸೆಯನ್ನು ಆಯ್ದುಕೊಳ್ಳುವ ಹಕ್ಕನ್ನು ಹೊಂದಿದ್ದಾನೆ, ಮತ್ತಿಲ್ಲಿ ಅಂತಹ ನಿರ್ಧಾರವು ಸಾವಿನ ಅಪಾಯವನ್ನು ಉಂಟುಮಾಡುತ್ತದೆ ಎಂಬುದು ಮುಖ್ಯವಾಗುವುದಿಲ್ಲ. "ತುರ್ತು ಸಿಧ್ಧಾಂತ" ಅಥವಾ "ಅವಶ್ಯಕತೆಯ ಸಿಧ್ಧಾಂತ"ಕ್ಕೆ ಚಿಕಿತ್ಸೆಗೆ ರೋಗಿಯ ಸಮ್ಮತಿಯನ್ನು ಪಡೆಯುವುದು ಪ್ರಾಯೋಗಿಕವಾಗಿಲ್ಲದಿದ್ದಾಗ ಮತ್ತು ಅವನ/ಅವಳ ಜೀವನ ಅಪಾಯದಲ್ಲಿದ್ದಾಗ ಮಾತ್ರ ಬಲವನ್ನು ನೀಡಬೇಕು. ಆದರೆ ರೋಗಿಯು ಈಗಾಗಲೇ ಸೂಕ್ತವಾದ ಸಂದೇಹದಿಂದ ಮುಕ್ತವಾದ

ಮುಂಚಿತವಾದ ನಿರ್ದೇಶನಗಳನ್ನು ನೀಡಿ ಅವನು/ಅವಳನ್ನು ಚಿಕಿತ್ಸೆ ಪಡೆಯಲು ಬಯಸುವುದಿಲ್ಲ ಎಂದು ಸೂಚಿಸಿರುವ ಸಂದರ್ಭದಲ್ಲಿ ಅಂತಹ ನಿರ್ದೇಶನಕ್ಕೆ ಬೆಲೆ ನೀಡಬೇಕು."

63. ಅದೇ ಪ್ರಕರಣದಲ್ಲಿ ನ್ಯಾ . ಚಂದ್ರಚೂಡ್ ಹೀಗೆಂದರು

> 437. ನಮ್ಮ ಸಂವಿಧಾನದ ಅಡಿಯಲ್ಲಿ, ಅಸ್ತಿತ್ವದ ಘನತೆಯು ಜೀವನವನ್ನು ಪವಿತ್ರಗೊಳಿಸುವ ಅಂತರ್ಗತ ಮೌಲ್ಯವಾಗಿದ. ಮಾನವನ ಘನತೆಯನ್ನು ಗುರುತಿಸುವುದು ಜೀವನದ ಪವಿತ್ರತೆಯನ್ನು ಕಾಪಾಡಿಕೊಳ್ಳುವುದರ ಸ್ವಾಭಾವಿಕವಾಗದ ಭಾಗ. ಘನತೆಯಿಂದ ಬದುಕಿದ್ದಾಗ ಜೀವನವು ನಿಜವಾಗಿಯೂ ಪರಿಶುದ್ಧವಾಗಿರುತ್ತದೆ. ಘನತೆ ಮತ್ತು ಜೀವನದ ಗುಣಮಟ್ಟದ ನಡುವೆ ಹತ್ತಿರದ ಸಂಬಂಧವಿದೆ. ಏಕೆಂದರೆ, ಮಾನವನ ಅಸ್ತಿತ್ವದ ಘನತೆಯ ಸಂಪೂರ್ಣ ಅನುಭವವಾಗುವುದು, ಜೀವನವನ್ನು ನಿಜವಾದ ಅರ್ಥದ ಗುಣಮಟ್ಟದೊಂದಿಗೆ ಬದುಕಿದಾಗ ಮಾತ್ರ. ಆದ್ದರಿಂದ, ಮಾನವ ಜೀವನದ ಪವಿತ್ರತೆ ಮತ್ತು ಜೀವನದ ಘನತೆ ಮತ್ತು ಗುಣಮಟ್ಟಗಳ ನಡುವೆ ಯಾವುದೇ ವಿರೋಧಾಭಾಸ ಇರಬಾರದು. ಜೀವನದ ಗುಣಮಟ್ಟವು ಜೀವನದ ಘನತೆಯನ್ನು

ಖಾತ್ರಿಗೊಳಿಸುತ್ತದೆ ಮತ್ತು ಘನತೆಯು ಜೀವನದ ಪವಿತ್ರತೆಯನ್ನು ಅರಿತುಕೊಳ್ಳುವ ಪ್ರಕ್ರಿಯೆಯಾಗಿದೆ.

438. ಮಾನವ ಘನತೆ ಅರ್ಥಪೂರ್ಣ ಅಸ್ತಿತ್ವದ ಅತ್ಯಗತ್ಯ ಅಂಶವಾಗಿದೆ. ಜೀವನದ ಅಂತ್ಯಕ್ಕೆ ಕಾರಣವಾಗುವ ಕೊನೆಯ ಹಂತದನ್ನೂ ಒಳಗೊಂಡಂತೆ ಎಲ್ಲಾ ಘಟ್ಟಗಳಲ್ಲಿ ಘನತೆ ಅರ್ಥಪಡೆದುಕೊಳ್ಳುತ್ತದೆ. ಸ್ವಾತಂತ್ರ್ಯ ಮತ್ತು ಸ್ವಾಯತ್ತತೆಯು ಒಂದು ಸತ್ವಯುತ ಜೀವನದ ಅಗತ್ಯ ಲಕ್ಷಣಗಳಾಗಿವೆ. ಇದು ಒಂದು ಅರ್ಥಪೂರ್ಣವಾದ ಅಸ್ತಿತ್ವಕ್ಕೆ ಕೇಂದ್ರವಾಗಿರುವ ವಿಷಯಗಳನ್ನು ನಿರ್ಧರಿಸಲು ಒಬ್ಬ ವ್ಯಕ್ತಿಯನ್ನು ಶಕ್ತಗೊಳಿಸುವ ಸ್ವಾತಂತ್ರ್ಯ. ಜೀವನದ ಕೊನೆಯ ಹಂತದಲ್ಲಿ ವ್ಯಕ್ತಿಯು ಅವನ ಅಥವಾ ಅವಳ ಘನತೆಯಿಂದ ವಂಚಿತರಾಗಿರಬಾರದು ಎಂಬ ಬಯಕೆಯು ಮರೆಯಾಗುತ್ತಿರುವ ಜೀವನದ ಪ್ರಮುಖವಾದ ನಿರೀಕ್ಷೆಗೆ ಅಭಿವ್ಯಕ್ತಿ ನೀಡುತ್ತದೆ: ನೋವು ಮತ್ತು ದುಃಖದ ಮೇಲಿನ ನಿಯಂತ್ರಣ ಮತ್ತು ವ್ಯಕ್ತಿಗೆ ದೊರಕಬೇಕಾದ ಚಿಕಿತ್ಸೆಯನ್ನು ನಿರ್ಧರಿಸುವ ಸಾಮರ್ಥ್ಯ. ಸಾಯುವ ಪ್ರಕ್ರಿಯೆಯಲ್ಲಿ ಅವಮಾನಕರ ಚಿಕಿತ್ಸೆಗೆ ಒಳಗಾಗುವುದನ್ನು ತಡೆಯುವುದಾಗಿ ಸಮಾಜವು ಪ್ರತಿಯೊಬ್ಬರಿಗೂ ಭರವಸೆ ನೀಡಿದಾಗ, ಅದು ಮೂಲ ಮಾನವ ಘನತೆಗೆ ಭರವಸೆ ನೀಡುತ್ತದೆ.

ಘನತೆಯು ಜೀವನದ ಪವಿತ್ರತೆಯನ್ನು ಖಾತ್ರಿಗೊಳಿಸುತ್ತದೆ. ಜೀವನದ ಅಂತ್ಯದ ತೀರ್ಮಾನಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ವ್ಯಕ್ತಿಯ ಸ್ವಾಯತ್ತತೆಗೆ ನೀಡುವ ಮಾನ್ಯತೆ ಬದುಕು ಕ್ಷೀಣಿಸುತ್ತಿರುವಾಗ ಅದನ್ನು ಘನತೆಯಿಂದ ವಂಚಿಸುವುದಿಲ್ಲ ಎಂದು ಖಾತ್ರಿಪಡಿಸುವೆಡೆಗಿನ ಒಂದು ಹೆಜ್ಜೆಯಾಗಿದೆ.

441. ಖಾಸಗೀತನದ ರಕ್ಷಣಾತ್ಮಕ ನಿಲುವು ಮಾನವನ ಜೀವನ ಚಕ್ರವನ್ನು ಮೂಲಭೂತವಾಗಿ ಪ್ರಭಾವಿಸುವ ನಿರ್ದಿಷ್ಟ ನಿರ್ಧಾರಗಳನ್ನು ಒಳಗೊಂಡಿರುತ್ತದೆ. [ರಿಚರ್ಡ್ ಡೆಲ್ಗಾಡೋ, "ಯುಥನೇಶಿಯಾ ರೀಕನ್ಸಿಡರ್ಡ್-ದಿ ಚಾಯ್ಸ್ ಆಫ್ ಡೆತ್ ಯಾಸ್ ಎನ್ ಆಸ್ಪೆಕ್ಟ್ ಆಫ್ ರೈಟ್ ಟು ಪ್ರೈವೆಸಿ", ಅರಿಜೋನಾ ಲಾ ರಿವ್ಯೂ (1975), ಸಂಪುಟ. 17, ಪು. 474.] ಇದು ವ್ಯಕ್ತಿಗಳ ಜೀವನ ಮತ್ತು ಬೆಳವಣಿಗೆಯ ಮೇಲೆ ಪರಿಣಾಮ ಬೀರುವ ಅತ್ಯಂತ ವೈಯಕ್ತಿಕ ಮತ್ತು ಖಾಸಗೀ ನಿರ್ಧಾರಗಳನ್ನು ರಕ್ಷಿಸುತ್ತದೆ. ಹೀಗಾಗಿ, ಸಂತಾನೋತ್ಪತ್ತಿ, ಗರ್ಭನಿರೋಧನೆ ಮತ್ತು ಮದುವೆಯಂತಹ ವಿಷಯಗಳ ಬಗೆಗಿನ ಆಯ್ಕೆ ಮತ್ತು ನಿರ್ಧಾರಗಳನ್ನು ರಕ್ಷಿಸಲಾಗಿದೆ. ಸಾವು ಮಾನವರ ಜೀವನ ಚಕ್ರದ ಪಥದಲ್ಲಿ ಒಂದು ಅನಿವಾರ್ಯವಾದ ಅಂತ್ಯವಾಗಿದ್ದರೂ, ಸಾವಿನ ಬಗೆಗಿನ ಆಯ್ಕೆಗಳು

ಮತ್ತು ನಿರ್ಧಾರಗಳನ್ನು ತೆಗೆದುಕೊಳ್ಳುವ ಸಂದರ್ಭ ಆಗಾಗ್ಗೆ ಎದುರಾಗುತ್ತದೆ. ಮರಣಕ್ಕೆ ಸಂಬಂಧಿಸಿದ ನಿರ್ಧಾರಗಳು ಜನ್ಮ, ಲಿಂಗ ಮತ್ತು ವಿವಾಹಗಳ ನಿರ್ಧಾರಗಳ ಹಾಗೆ, ಖಾಸಗೀತನದ ಹಕ್ಕಿನಡಿಯಲ್ಲಿ ಸಂವಿಧಾನದಿಂದ ರಕ್ಷಿಸಲ್ಪಟ್ಟಿದೆ. ಖಾಸಗೀತನದ ಹಕ್ಕು ಸ್ವಾತಂತ್ರ್ಯದ ಹಕ್ಕು ಮತ್ತು ಸ್ವಾಯತ್ತತೆಯ ಗೌರವದಲ್ಲಿ ಅಡಕವಾಗಿದೆ. [ಟಿ.ಎಲ್. ಬ್ಯೂಚಾಂಪ್, "ದಿ ರೈಟ್ ಟು ಪ್ರೈವಸಿ ಮತ್ತು ದಿ ರೈಟ್ ಟು ಡೈ", ಸೋಷಿಯಲ್ ಫಿಲಾಸಫಿ ಅಂಡ್ ಪಾಲಿಸಿ (2000), ಸಂಪುಟ. 17, ಪು. 276.] ಖಾಸಗೀತನದ ಹಕ್ಕು ಸಾವಿನ ಮತ್ತು ದೈಹಿಕ ಸಮಗ್ರತೆಗೆ ಸಂಬಂಧಿಸಿದ ನಿರ್ಧಾರಗಳನ್ನು ಮಾಡುವ ಸ್ವಾಯತ್ತತೆಯನ್ನು ರಕ್ಷಿಸುತ್ತದೆ. ಸಾವಿನ ಬಗ್ಗೆ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಕೆಲವೇ ಕ್ಷಣಗಳು ನಿಕಟ ಮತ್ತು ಖಾಸಗೀ ನಿರ್ಧಾರಗಳಷ್ಟೇ ಮಹತ್ವದ್ದಾಗಿರುತ್ತವೆ. ರೋಗಿಯ ಇಚ್ಛೆಗೆ ವಿರುದ್ಧವಾದ ಚಿಕಿತ್ಸೆಯನ್ನು ಮುಂದುವರೆಸುವುದು ವಿವೇಚನೆಯ ಸಮ್ಮತಿಯ ತತ್ವವನ್ನು ಉಲ್ಲಂಘಿಸುವುದಕ್ಕೆ ಸಮ, ಮಾತ್ರವಲ್ಲ, ಈ ನ್ಯಾಯಾಲಯವು ಗೌಪ್ಯತೆಯ ಒಂದು ಭಾಗವೆಂದು ಗುರುತಿಸಿರುವ ದೈಹಿಕ ಗೌಪ್ಯತೆ ಮತ್ತು ದೈಹಿಕ ಸಮಗ್ರತೆಯ ಉಲ್ಲಂಘನೆಯೂ ಆಗಿದೆ. "

64. ಇದೇ ಪ್ರಕಾರವಾಗಿ ಶಫೀನ್ ಜಹಾನ್ v. ಅಶೋಕನ್ ಕೆ.ಎಂ., 2018, ಪ್ರಕರಣದಲ್ಲಿ ನ್ಯಾಯಾಲಯವು ವಯಸ್ಕ ಹೆಣ್ಣುಮಗಳೊಬ್ಬಳು ತನ್ನ ವೈವಾಹಿಕ ನಿರ್ಧಾರ ತೆಗೆದುಕೊಳ್ಳುವ ಹಕ್ಕಿನ ಕುರಿತು ಆಲೋಚಿಸಿತು. ಅರಿವುಳ್ಳ ಮುಖ್ಯ ನ್ಯಾಯಮೂರ್ತಿಗಳು ಸಂವಿಧಾನದ 19 ಮತ್ತು 21ನೇ ಕಲಮು ಗಳನ್ನು ಕೆಳಕಂಡಂತೆ ಉಲ್ಲೇಖಿಸುತ್ತಾರೆ:-

> "28. ಹೀಗಾಗಿ, ಸದರಿ ರಿಟ್ನ ಪ್ರಮುಖ ಉದ್ದೇಶ ಕಾನೂನಿನ ಅನುಮತಿಯಿಲ್ಲದೆ ಅವನ/ಅವಳ ಸ್ವಾತಂತ್ರ್ಯವನ್ನು ಯಾರೂ ಕಳೆದುಕೊಳ್ಳದಂತೆ ನೋಡಿಕೊಳ್ಳಬೇಕು ಎಂಬುದು. ಸದರಿ ಹಕ್ಕನ್ನು ಯಾವುದೇ ರೀತಿಯಲ್ಲೂ ದುರ್ಬಳಕೆ ಮಾಡುವಂತಿಲ್ಲ ಮತ್ತು ಅದರ ಪವಿತ್ರತೆಯು ಯಾವುದೇ ವಿಧದ ಕುತಂತ್ರದಿಂದ ಪ್ರಭಾವಿತವಾಗಿಲ್ಲ ಎಂದು ನೋಡಿಕೊಳ್ಳುವುದು ಸರ್ಕಾರದ ಪ್ರಾಥಮಿಕ ಕರ್ತವ್ಯವಾಗಿದೆ. ಬಂಧಿತನು ತನ್ನೆದುರು ಹಾಜರಾಗುವಂತೆ ನೋಡಿಕೊಳ್ಳುವುದು, ಅವನ/ಅವಳ ಸ್ವತಂತ್ರ ಆಯ್ಕೆಯ ಬಗ್ಗೆ ಕಂಡುಕೊಳ್ಳುವುದು ಮತ್ತು ವ್ಯಕ್ತಿಯು ಕಾನೂನುಬಾಹಿರ ನಿರ್ಬಂಧದಿಂದ ಬಿಡುಗಡೆಯಾಗುವಂತೆ ನೋಡಿಕೊಳ್ಳುವುದು ನ್ಯಾಯಾಲಯದ ಪಾತ್ರ. ಆದರೆ ಬಂಧನವು ಅಕ್ರಮವಾಗಿಲ್ಲದಿರುವಾಗ ಸಮಸ್ಯೆಯು ವಿಭಿನ್ನವಾಗಿರುತ್ತದೆ. ಸ್ವಾತಂತ್ರ್ಯದ ಹಾಡನ್ನು ಪ್ರಾಮಾಣಿಕತೆಯಿಂದ ಹಾಡುವುದು ಮತ್ತು ವ್ಯಕ್ತಿಯ ಆಯ್ಕೆಯು ಸೂಕ್ತವಾಗಿ ಗೌರವಿಸಲ್ಪಟ್ಟಿದೆ ಮತ್ತು ಅದಕ್ಕೆ

ಸಾಂವಿಧಾನ ಖಾತರಿಪಡಿಸುವ ಅದರ ಗೌರವಾನ್ವಿತ ಸ್ಥಾನಮಾನವನ್ನು ನೀಡಲಾಗಿದೆ ಎಂದು ನೆನಪಿಟ್ಟುಕೊಳ್ಳುವುದು ಮೂಲಭೂತವಾದದ್ದು. ಯಾವುದೇ ಆಯ್ಕೆಯು ಯಾವುದೇ ಮಾನ್ಯ ಕಾನೂನು ಚೌಕಟ್ಟನ್ನು ಉಲ್ಲಂಘಿಸದಿದ್ದರೆ ಆಯ್ಕೆ ಮಾಡುವ ಅಭಿವ್ಯಕ್ತಿಯು ಸಂವಿಧಾನದ 19 ಮತ್ತು 21 ನೇ ಕಲಮಿನ ಅಡಿಯಲ್ಲಿನ ಮೂಲಭೂತ ಹಕ್ಕಾಗಿದೆ. ಆ ಅಂಶವು ಸ್ಪಷ್ಟವಾಗಿದ್ದರೆ, ವಿಚಾರಣೆ ಮತ್ತು ನಿರ್ಣಯವು ಕೊನೆಗೊಳ್ಳಬೇಕು.

54. ಕಾನೂನಿನ ಪ್ರಕಾರ ಆಯ್ಕೆ ಮಾಡುವ ಅಭಿವ್ಯಕ್ತಿಯು ವೈಯಕ್ತಿಕ ಗುರುತಿನ ಒಪ್ಪಿಗೆಗೆ ಸಮ ಎಂದು ಇಲ್ಲಿ ಹೇಳುವುದು ಕಡ್ಡಾಯವಾಗಿದೆ. ಆ ಅಭಿವ್ಯಕ್ತಿಯ ಮೊಟಕುಗೊಳಿಸುವಿಕೆ ಮತ್ತು ಸಮಾಜದೆಡೆಗೆ ವಿಧೇಯವಾಗಿರಬೇಕೆಂದು ನಂಬುವ ಪರಿಕಲ್ಪನಾ ರಚನಾತ್ಮಕತೆಯಿಂದ ಉಂಟಾಗುವ ಅಂತಿಮ ಪರಿಣಾಮವು ವ್ಯಕ್ತಿಯ ವೈಯಕ್ತಿಕ ಅಸ್ತಿತ್ವವನ್ನು ನಾಶಗೊಳಿಸುತ್ತದೆ. ಸಾಮಾಜಿಕ ಮೌಲ್ಯಗಳು ಮತ್ತು ನೀತಿಗಳು ತಮ್ಮ ಜಾಗವನ್ನು ಹೊಂದಿವೆ ಆದರೆ ಅವು ಸಾಂವಿಧಾನಿಕವಾಗಿ ಖಾತರಿಯಾದ ಸ್ವಾತಂತ್ರ್ಯಕ್ಕಿಂತ ಹೆಚ್ಚಲ್ಲ. ಸ್ವಾತಂತ್ರ್ಯವು ಸಾಂವಿಧಾನಿಕ ಮತ್ತು ಮಾನವೀಯ ಹಕ್ಕಾಗಿದೆ. ನಂಬಿಕೆಯ ಮನವಿಯನ್ನು ಆಧರಿಸಿರುವ ಆ

ಸ್ವಾತಂತ್ರ್ಯವನ್ನು ಕಸಿದುಕೊಳ್ಳುವುದನ್ನು ಒಪ್ಪಲಾಗದು. ವ್ಯಕ್ತಿಯ ನಂಬಿಕೆ ಅವನ/ಅವಳ ಅರ್ಥಪೂರ್ಣ ಅಸ್ತಿತ್ವಕ್ಕೆ ಸ್ವಾಭಾವಿಕವಾಗಿದೆ. ನಂಬಿಕೆಯ ಸ್ವಾತಂತ್ರ್ಯವನ್ನು ಹೊಂದಿರುವುದು ಅವನ/ ಅವಳ ಸ್ವಾಯತ್ತತೆಗೆ ಅತ್ಯಗತ್ಯ; ಮತ್ತು ಇದು ಸಂವಿಧಾನದ ಮೂಲ ರೂಢಿಗಳನ್ನು ಬಲಪಡಿಸುತ್ತದೆ. ಒಂದು ನಂಬಿಕೆಯನ್ನು ಆರಿಸುವುದು ಪ್ರತ್ಯೇಕತೆಯ ಮೂಲಾಧಾರವಾಗಿದೆ ಮತ್ತು ಅದಿಲ್ಲದೇ, ಆಯ್ಕೆಯ ಹಕ್ಕು ನೆರಳಿನಂತಾಗುತ್ತದೆ. ಹಕ್ಕನ್ನು ನೀಡುವುದಕ್ಕಿಂತ ಹಕ್ಕನ್ನು ಅನುಭವಿಸುವುದು ಹೆಚ್ಚು ಮುಖ್ಯ ಎಂದು ನೆನಪಿನಲ್ಲಿಟ್ಟುಕೊಳ್ಳಬೇಕು. ಅಂತಹ ವಾಸ್ತವೀಕರಣವು ಯಾವುದೇ ರೀತಿಯ ಸಾಮಾಜಿಕ ಕುಖ್ಯಾತಿಯನ್ನು ಬಹಿಷ್ಕರಿಸುತ್ತದೆ ಮತ್ತು ಪಿತೃಪ್ರಾಧಾನ್ಯದ ಪ್ರಾಬಲ್ಯವನ್ನು ದೂರವಿಡುತ್ತದೆ. ಏಕೆಂದರೆ, ವ್ಯಕ್ತಿಗತ ನಂಬಿಕೆ ಮತ್ತು ಆಯ್ಕೆಯ ಅಭಿವ್ಯಕ್ತಿಗಳು ಹಕ್ಕಿನ ಫಲವಂತಿಕೆಗೆ ಮೂಲಭೂತವಾಗಿವೆ. ಹೀಗಾಗಿ, ನಾವು ಅದನ್ನು ಅನಿವಾರ್ಯವಾದ ಪೂರ್ವಭಾವಿ ಸ್ಥಿತಿಯೆಂದು ಕರೆಯ ಬಯಸುತ್ತೇವೆ. "

65. ಮರ್ಯಾದೆಗೇಡು ಹತ್ಯೆಗಳ ಕುರಿತ **ಶಕ್ತಿ ವಾಹಿನಿ v. ಭಾರತ ಸರ್ಕಾರ,** 2018 ಪ್ರಕರಣದ ತೀರ್ಪನ್ನು ಇತ್ತೀಚೆಗೆ ನೀಡಿದ ತ್ರಿಸದಸ್ಯ ಪೀಠವೊಂದು ಕೆಳಗಿನ ಅಭಿಪ್ರಾಯವನ್ನು ಮಂಡಿಸಿತು:-

"44. ಮರ್ಯಾದೆಗೇಡು ಹತ್ಯೆಯು ವ್ಯಕ್ತಿಗತ ಸ್ವಾತಂತ್ರ್ಯ, ಆಯ್ಕೆಯ ಸ್ವಾತಂತ್ರ್ಯ ಮತ್ತು ಆಯ್ಕೆಯ ಬಗೆಗಿನ ಸ್ವಂತ ಗ್ರಹಿಕೆಯನ್ನು ನೇಣಿಗೇರಿಸುತ್ತದೆ. ಇಬ್ಬರು ವಯಸ್ಕರು ಪರಸ್ಪರನ್ನು ಜೀವನ ಸಂಗಾತಿಗಳಾಗಿ ಆಯ್ಕೆ ಮಾಡಿಕೊಂಡಾಗ, ಅದು ಅವರ ಆಯ್ಕೆಯ ಅಭಿವ್ಯಕ್ತಿಯಾಗಿದ್ದು ಅದು ಸಂವಿಧಾನದ 19 ಮತ್ತು 21 ನೇ ಕಲಮುಗಳಡಿಯಲ್ಲಿ ಗುರುತಿಸಲ್ಪಟ್ಟಿದೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಇಂತಹ ಹಕ್ಕಿಗೆ ಸಂವಿಧಾನದ ಕಾನೂನಿನ ಅನುಮೋದನೆ ಇದೆ ಮತ್ತು ಒಮ್ಮೆ ಅದು ಗುರುತಿಸಲ್ಪಟ್ಟರೆ, ಆ ಹಕ್ಕನ್ನು ರಕ್ಷಿಸಬೇಕು ಮತ್ತು ಅವು ಯಾವ ರೀತಯಿಂದಲೂ ನ್ಯಾಯ ಸಮ್ಮತವಲ್ಲದ ಪರಿಕಲ್ಪನೆಯೊಂದರಿಂದ ಹೊರಹೊಮ್ಮಿರುವ ವರ್ಗವೊಂದರ ಮರ್ಯಾದೆ ಅಥವಾ ಗುಂಪೊಂದರ ಆಲೋಚನೆಯ ಪರಿಕಲ್ಪನೆಗೆ ಬಲಿಯಾಗಬಾರದು.

45. ಸ್ವಾತಂತ್ರ್ಯದ ಪರಿಕಲ್ಪನೆಯನ್ನು ಸಾಂವಿಧಾನಿಕ ಸಂವೇದನೆ, ರಕ್ಷಣೆ ಮತ್ತು ಅದು ಪ್ರತಿನಿಧಿಸುವ ಮೌಲ್ಯಗಳ ಒರೆಗಲ್ಲಿನ ಮೇಲೆ ಪರೀಕ್ಷಿಸಬೇಕು ಮತ್ತು ಪರಿಶೀಲಿಸಬೇಕು. ವ್ಯಕ್ತಿಯ ಸ್ವಾತಂತ್ರ್ಯದ ಹಕ್ಕು ಸ್ವಾತಂತ್ರ್ಯದೊಂದಿಗೆ ಬೇರ್ಪಡಿಸಲಾಗದ ಸಂಬಂಧವನ್ನು ಹೊಂದಿರುವ ಕಾರಣ, ವ್ಯಕ್ತಿಯ ಸ್ವಾತಂತ್ರ್ಯದ ಹಕ್ಕನ್ನು ಕಾಪಾಡಿಕೊಳ್ಳಲು ಉತ್ಸಾಹದಿಂದ ಶ್ರಮಿಸುವುದು ಜಾಗರೂಕವಾದ ಸಾಂವಿಧಾನಿಕ ನ್ಯಾಯಾಲಯಗಳ

ಬಾಧ್ಯತೆಯಾಗಿದೆ. ಕಾನೂನಿನ ಸಂವಿಧಾನಾತ್ಮಕ ಮಾನ್ಯ ನಿಬಂಧನೆಗಳಿಗೆ ಅನುಗುಣವಾದ ಸ್ವಾತಂತ್ರ್ಯವಿಲ್ಲದಿದ್ದರೆ, ವ್ಯಕ್ತಿಯ ಜೀವನವು ಪ್ರತಿಭಟನೆಯಿಲ್ಲದೆ ಕ್ರೂರತೆ ಮತ್ತು ಚಿತ್ರಹಿಂಸೆಗಳನ್ನು ತಾಳಿಕೊಳ್ಳುವ ಮತ್ತು ಅಸಮ್ಮತಿ ವ್ಯಕ್ತಿಪಡಿಸಲು ಅಥವಾ ಭಿನ್ನಾಭಿಪ್ರಾಯವನ್ನು ದಾಖಲಿಸಲು ಧ್ವನಿಯಿಲ್ಲದೇ ಆಲೋಚನೆಗಳು ಮತ್ತು ವಿಚಾರಗಳ ಹೇರುವಿಕೆಯನ್ನು ತಡೆದುಕೊಳ್ಳುವ ಬದುಕಿದ್ದೂ ಸತ್ತವರಿಗೆ ಸಮವಾಗುತ್ತದೆ. ಘನತೆಯುಳ್ಳ ಅಸ್ತಿತ್ವದ ಮೂಲಭೂತ ವೈಶಿಷ್ಟ್ಯವೆಂದರೆ ದೈವತ್ವದ ಹೊಳಪಿರುವ ಘನತೆಯಾಗಿ ಆಗ್ರಹಿಸುವುದು ಮತ್ತು ಯಾವುದೇ ದಬ್ಬಾಳಿಕೆಯಿಲ್ಲದೆಯೇ ಕಾನೂನಿನ ಮಾನದಂಡಗಳೊಳಗೆ ಆಯ್ಕೆಯ ಸಾಕ್ಷಾತ್ಕಾರಕ್ಕಾಗಿ ಆಗ್ರಹಪಡಿಸುವುದು. ಸ್ವಾತಂತ್ರ್ಯದ ಚೌಕಟ್ಟಿನೊಳಗೆ ವೈಯಕ್ತಿಕ ಘನತೆ ಮತ್ತು ಆಯ್ಕೆಯ ಪರಿಕಲ್ಪನೆಗಳಿಗೆ ಒತ್ತು ನೀಡುವುದು ಅತ್ಯುತ್ಕೃಷ್ಟ ಪ್ರಾಮುಖ್ಯತೆಯನ್ನು ಹೊಂದಿದೆ. ಘನತೆ ಮತ್ತು ಆಯ್ಕೆಯಿಲ್ಲದ ಜೀವನ ಮತ್ತು ಸ್ವಾತಂತ್ರ್ಯಗಳು ವ್ಯಕ್ತಿಯ ವ್ಯಕ್ತಿತ್ವಕ್ಕೆ ದೊರೆತಿರುವ ಸಾಂವಿಧಾನಿಕ ಮಾನ್ಯತೆಯೊಳಗೆ ಟೊಳ್ಳುತನವನ್ನು ಸೇರಿಕೊಳ್ಳಲು ಬಿಡುವ ವಿದ್ಯಮಾನ ಎಂದು ನಾವು ಸ್ಪಷ್ಟವಾಗಿ ಮತ್ತು ದೃಢವಾಗಿ ಹೇಳಬಹುದು.

46. ಒಬ್ಬ ವ್ಯಕ್ತಿಯ ಆಯ್ಕೆಯು ಘನತೆಯ ಒಂದು ಅವಿಭಾಜ್ಯ ಭಾಗವಾಗಿದೆ, ಏಕೆಂದರೆ ಆಯ್ಕೆಯ ಸವಕಳಿಯಿರುವಲ್ಲಿ ಘನತೆಯನ್ನು ಕಲ್ಪಿಸಿಕೊಳ್ಳಲು

ಆಗುವುದಿಲ್ಲ. ನಿಜವೆಂದರೆ, ಆಯ್ಕೆಯು ಸಂವಿಧಾನಾತ್ಮಕ ಮಿತಿಯ ತತ್ವದಿಂದ ಬದ್ಧವಾಗಿರುತ್ತದೆ ಆದರೆ ಅಂತಹ ಮಿತಿಯಿಲ್ಲದಿರುವಾಗ, ಯಾರೆಂದರೆ ಯಾರೂ ಸದರಿ ಆಯ್ಕೆಯು ಸಾಫಲ್ಯದಲ್ಲಿ ಹಸ್ತಕ್ಷೇಪ ಮಾಡಲು ಯಾರಿಗೂ ಅನುಮತಿಯಿರುವುದಿಲ್ಲ. ಒಬ್ಬರ ಸ್ವಂತ ಆಯ್ಕೆ ವ್ಯಕ್ತಪಡಿಸುವ ತಡೆಯೊಡ್ಡಿದರೆ, ಘನತೆಯನ್ನು ಅದರ ಪವಿತ್ರವಾದ ಸಂಪೂರ್ಣತೆಯ ರೂಪದಲ್ಲಿ ಕಲ್ಪಿಸಿಕೊಳ್ಳುವುದು ಬಹಳ ಕಷ್ಟ. ಇಬ್ಬರು ವಯಸ್ಕರು ತಮ್ಮ ಇಚ್ಛೆಯಿಂದ ಮದುವೆಯಾದಾಗ, ಅವರು ತಮ್ಮ ಮಾರ್ಗವನ್ನು ಆರಿಸಿಕೊಳ್ಳುತ್ತಾರೆ; ಅವರು ತಮ್ಮ ಸಂಬಂಧವನ್ನು ಪರಿಪೂರ್ಣಗೊಳಿಸುತ್ತಾರೆ; ಅವರು ಅದು ತಮ್ಮ ಗುರಿ ಎಂದು ಭಾವಿಸುತ್ತಾರೆ ಮತ್ತು ಅವರು ಹಾಗೆ ಮಾಡುವ ಹಕ್ಕನ್ನು ಹೊಂದಿದ್ದಾರೆ. ಮತ್ತು ಅವರಿಗೆ ಆ ಹಕ್ಕಿದೆ ಮತ್ತು ಹಕ್ಕನ್ನು ಕಸಿದುಕೊಳ್ಳುವುದು ಸಂವಿಧಾನದ ಉಲ್ಲಂಘನೆಗೆ ಸಮಾನ ಎಂದು ನಿಸ್ಸಂದಿಗ್ಧವಾಗಿ ಹೇಳಬಹುದು. ವರ್ಗ ಅಥವಾ ಉನ್ನತ ಶ್ರೇಣಿಯ ಕುಲದ ಹೆಸರಿನಲ್ಲಿ ಬಹುಸಂಖ್ಯಾತರು ತಮ್ಮನ್ನು ತಾವು ತಮ್ಮಿಚ್ಛೆಯ ಯಾವುದೇ ನಿರ್ಧಾರವನ್ನು ಹೇರುವ ಮತ್ತು ಅದರ ಜಾರಿಯಾಗುವಿಕೆಯನ್ನು ನಿರ್ಣಯಿಸುವ ಶಕ್ತಿ, ಅಧಿಕಾರ ಮತ್ತು ನಿರ್ಣಾಯಕತೆಯನ್ನು ಹೊಂದಿರುವ ಯಾವುದೋ ವರ್ಣಿಸಲಾಗದ ಯುಗದ ಸಾಮ್ರಾಟರೆಂದು ತಿಳಿದುಕೊಂಡು ಅಂತಹ ಮದುವೆಯ ಸಮಯದಲ್ಲಿ ತಮ್ಮ ಉಪಸ್ಥಿತಿಯನ್ನು

> ಅಪೇಕ್ಷಿಸುವುದು ಅಥವಾ ಒತ್ತಾಯದಿಂದ ಉಪಸ್ಥಿತರಾಗುವುದು ಸಾಧ್ಯವಿಲ್ಲ. ಅಂಥವರು ತಮ್ಮನ್ನು ತಾವೇ ಕಾನೂನು ಎಂದು ಭಾವಿಸುವ ಇಲ್ಲವೇ ತಾವು ಸೀಸರ್ನ ಪೂರ್ವಜರು ಅಥವಾ, 14ನೇ ಲೂಯಿ ಎಂಬ ಕಲ್ಪನೆಯನ್ನು ಪೋಷಿಸಿಕೊಂಡಿರುತ್ತಾರೆ. ಈ ದೇಶದ ಸಂವಿಧಾನ ಮತ್ತು ಕಾನೂನುಗಳು ಅಂತಹ ಕಾರ್ಯವನ್ನು ಅನುಮೋದಿಸುವುದಿಲ್ಲ ಮತ್ತು ವಾಸ್ತವವಾಗಿ, ಅಂತಹ ಇಡಿಯ ಚಟುವಟಿಕೆಯು ಕಾನೂನುಬಾಹಿರ ಮತ್ತು ಕ್ರಿಮಿನಲ್ ಕಾನೂನಿನ ಅಡಿಯಲ್ಲಿ ಅಪರಾಧವಾಗಿದ್ದು, ಶಿಕ್ಷಾರ್ಹವಾಗಿದೆ. "

**<u>ಮಾನಸಿಕ ಆರೋಗ್ಯ ಕಾಯ್ದೆ, 2017</u>**

66. ಸಂಸತ್ತು ಖಾಸಗೀತನದ ವಿಚಾರ ಮತ್ತು ಒಟ್ಟಾಗಿ ಬದುಕುವ ಸಮಾನ-ಲಿಂಗದ ವ್ಯಕ್ತಿಗಳನ್ನು ಇತರರಿಗೆ ಸರಿಸಾಟಿಯಾಗಿ ನಡೆಸಿಕೊಳ್ಳುವುದು ಅವರ ಹಕ್ಕು ಎಂಬ ವಿಚಾರಗಳಿಗೆ ಸ್ಪಂದಿಸಬೇಕಾಗುತ್ತದೆ ಸಂಬಂಧಿಸಿದ

67. ಮಾನಸಿಕ ಆರೋಗ್ಯ ಕಾಯ್ದೆ, 2017 ಹೆಸರಿನ ಇತ್ತೀಚಿನ ಶಾಸನವು, ಸಂಸತ್ತು ಇತ್ತೀಇಚೆಗೆ ಈ ನ್ಯಾಯಾಲಯದ ತೀರ್ಪುಗಳಲ್ಲಿ ವ್ಯಕ್ತವಾಗಿರುವ ಸಾಂವಿಧಾನಿಕ ಮೌಲ್ಯಗಳನ್ನು ಅರಿತು ಒಪ್ಪಿಕೊಂದಿರುವ ವಿಚಾರದ ಮೇಲೆ ಬೆಳಕು ಸೆಲ್ಲುತ್ತದೆ. ಈ ಕಾಯ್ದೆಯ ಪರಿಚ್ಛೇದ 2(ಎಸ್) ಮಾನಸಿಕ ರೋಗವನ್ನು ಈ ಕೆಳಗಿನಂತೆ ವ್ಯಾಖ್ಯಾನಿಸುತ್ತದೆ:

> "2 (ಎಸ್)" ಮಾನಸಿಕ ಅಸ್ವಸ್ಥತೆ "ಅಂದರೆ ನಿರ್ಧಾರಗಳು, ನಡವಳಿಕೆ, ವಾಸ್ತವತೆಯನ್ನು ಗುರುತಿಸುವ ಸಾಮರ್ಥ್ಯ ಅಥವಾ ಜೀವನದ ಸಾಮಾನ್ಯ ಬೇಡಿಕೆಗಳನ್ನು ಪೂರೈಸುವ

> ಸಾಮರ್ಥ್ಯ, ಮದ್ಯ ಹಾಗೂ ಮಾದಕ ದ್ರವ್ಯಗಳ ದುರ್ಬಳಕೆಗೆ ಸಂಬಂಧಿಸಿದ ಮಾನಸಿಕ ಪರಿಸ್ಥಿತಿಗಳನ್ನು ತೀವ್ರವಾಗಿ ಬಾಧಿಸುವ ವಿಚಾರ, ಮನೋಭಾವ, ಗ್ರಹಿಕೆ, ನಿಲುವು ಅಥವಾ ಸ್ಮರಣೆ ಮುಂತಾದ ವಿಚಾರಗಳಲ್ಲಿನ ಗಣನೀಯ ವೈಕಲ್ಯ ಎಂದರ್ಥ, ಆದರೆ ಇದು ವ್ಯಕ್ತಿಯ ಮನಸ್ಸಿನ ತಡೆಹಿಡಿಯಲ್ಪಟ್ಟಿರುವ ಅಥವಾ ಅಪೂರ್ಣವಾದ ಬೆಳವಣಿಗೆಯ ಸ್ಥಿತಿಯಯಾಗಿರುವ, ವಿಶೇಷವಾಗಿ ಸಾಮಾನ್ಯಕ್ಕಿಂತ ಕಡಿಮೆ ಬುದ್ಧಿವಂತಿಕೆಯ ಲಕ್ಷಣವಿರುವ. ಮಾನಸಿಕ ವಿಕಲತೆಯನ್ನುನ್ನು ಒಳಗೊಂಡಿರುವುದಿಲ್ಲ, "

68. ಈ ವ್ಯಾಖ್ಯಾನವು ಮಾನಸಿಕ ರೋಗಗಳ ಕುರಿತು ಹಿಂದೆ ಇದ್ದ ತಪ್ಪು ಕಲ್ಪನೆಗಳನ್ನು ಗಾಳಿಗೆ ತೂರುತ್ತದೆ ಮತ್ತು ಈ ತಪ್ಪು ಕಲ್ಪನೆಗಳಲ್ಲಿ ಗೂಡ ಸಂಭೋಗದಲ್ಲಿ ತೊಡಗುವ ಸಮಾನ ಲಿಂಗದ ಜೋಡಿಗಳು ಮನೋರೋಗಿಗಳು ಎಂಬ ನಂಬಿಕೆಯೂ ಸೇರಿದೆ. ವಿಕ್ಟೋರಿಯನ್ ಇಂಗ್ಲೆಡ್ ಮತ್ತು ಬಹು ಹಿಂದಿನ ಅಮೇರಿಕೆಗಳಲ್ಲಿ ಒಂದು ಕಾಲದಲ್ಲಿ ಸಮಲೈಂಗಿಕತೆಯನ್ನು ಮಾನಸಿಕ ರೋಗವೆಂದು ಪರಿಗಣಿಸಬೇಕೆಂದು ಯೋಚಿಸಲಾಗುತ್ತಿತ್ತು. ಅಮೇರಿಕನ್ ಮನೋವೈಜ್ಞಾನಿಕ ಸಂಸ್ಥೆ (ಅಮೇರಿಕನ್ ಸೈಕಿಯಾಟ್ರಿಕ್ ಅಸೂಸಿಯೇಷನ್) **ಲಾರೆನ್ಸ್ ವೀ, ಟೆಕ್ಸಾಸ್** (ಮೇಲ್ಕಂಡ) ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಿದ ತಜ್ಞ ವರದಿಯೂ ಅಂತಹ ನಂಬಿಕೆಗಳಿಗೆ ಕೊನೆಹಾಡಿತು. ಕೆಲಕಂಡ ಟಿಪ್ಪಣಿಯು ಸಮಲೈಂಗಿಕತೆಯ ವಿಚಾರದಲ್ಲಿ ನಡೆದಿರುವ ಸಂಶೋಧನೆಯ ವಿವರಗಳನ್ನು ಒದಗಿಸುತ್ತದೆ:

> **"ಡಿ. ಸಮಲೈಂಗಿಕತೆ ಒಂದು "ಮಾನಸಿಕ ಅಸ್ವಸ್ಥತೆ"ಯಲ್ಲ ಎಂದು ಗುರುತಿಸುವಿಕೆ**

ಅಮೆರಿಕನ್ ಮಾನಸಿಕ ಆರೋಗ್ಯ ವೃತ್ತಿಗಳು ಕಾಲು ಶತಮಾನದ ಹಿಂದೆ ಸಮಲೈಂಗಿಕತೆಯು ಮಾನಸಿಕ ಅಸ್ವಸ್ಥತೆಯಲ್ಲ ಎಂದು ತೀರ್ಮಾನಿಸಿದವು. ಸ್ವತಂತ್ರ ಸಂಶೋಧಕರ ದಶಕಗಳ ಅಧ್ಯಯನದ ಮತ್ತು ಮಾನಸಿಕ-ಆರೋಗ್ಯ ವೃತ್ತಿಗಳಲ್ಲಿರುವ ಚಿಕಿತ್ಸಕರು, ವ್ಯಕ್ತಿಗಳ ಲೈಂಗಿಕ ನಿಲುವಿನಲ್ಲಿ ಬದಲಾವಣೆಯನ್ನು ಉಂಟುಮಾಡಲು ನಡೆಸಿದ ಹಲವಾರು ಪ್ರಯತ್ನಗಳ ನಂತರ ಆ ನಿರ್ಣಯವನ್ನು ತಲುಪಲಾಯಿತು. 20 ನೆಯ ಶತಮಾನದ ಮೊದಲಾರ್ಧದಲ್ಲಿ, ಅನೇಕ ಮಾನಸಿಕ ಆರೋಗ್ಯ ವೃತ್ತಿಪರರು ಸಮಲೈಂಗಿಕತೆಯನ್ನು ರೋಗದ ಸ್ಥಿತಿಯೆಂದು ಪರಿಗಣಿಸಿದ್ದರು, ಆದರೆ ಆ ದೃಷ್ಟಿಕೋನವು ಚಿಕಿತ್ಸೆಯನ್ನು ಪಡೆಯಲು ಬಂದ ರೋಗಿಗಳ ನಿರ್ಭಾವುಕ ಅನಿಸಿಕೆಗಳು ಮತ್ತು ಅವರನ್ನು ಅಪರಾಧ ನ್ಯಾಯ ವ್ಯವಸ್ಥೆಯೊಳಗೆ ಕರೆತಂದ ವ್ಯಕ್ತಿಗಳ ವರ್ತನೆಯ ಬೆಂಬಲವಿದ್ದ ಪರೀಕ್ಷೆಗೆ ಒಳಪಡದ ಪರಿಕಲ್ಪನೆಯನ್ನು ಪ್ರತಿಫಲಿಸುತ್ತದೆ. ನೋಡಿ. ಆ ಊಹೆಗಳನ್ನು ಕಳೆದ ಶತಮಾನದ ಅರ್ಧಭಾಗದವರೆಗೆ, ಸಮಲೈಂಗಿಕರ ಭಾವನೆಗಳನ್ನು ಗಣನೆಗೆ ತೆಗೆದುಕೊಂಡ ಮತ್ತು ಉದ್ದೇಶಪೂರ್ವಕ ಮಾರ್ಪಾಡುಗಳಿಗೆ ಒಳಗಾಗದ ಮಾದರಿಗಳನ್ನು ಬಳಸಿ ವೈಜ್ಞಾನಿಕ ಪರಿಶೀಲನೆಗೆ ಒಳಪಡಿಸಲಾಗಲಿಲ್ಲ.

ಸಮಲೈಂಗಿಕತೆಯು ಮಾನಸಿಕ ಅಸ್ವಸ್ಥತೆಗೆ ಸಂಬಂಧಿಸಿದೆ ಎಂಬ ಕಲ್ಪನೆಯನ್ನು ಪ್ರಾಯೋಗಿಕವಾಗಿ ಪರೀಕ್ಷಿಸಿದಾಗ, ಆ ಕಲ್ಪನೆಯು ಅಸಮರ್ಥ ಊಹೆಗಳು ಮತ್ತು ಮೌಲ್ಯಧಾರಿತ ತೀರ್ಪುಗಳನ್ನು ಆಧರಿಸಿತ್ತು ಎಂಬುದು ಸಾಬೀತಾಯಿತು.

ಸಮಲೈಂಗಿಕತೆಯ ಮಾನಸಿಕ ಆರೋಗ್ಯ ಸ್ಥಿತಿಗತಿಯ ಪರೀಕ್ಷೆಗಳಲ್ಲಿ ಒಂದರಲ್ಲಿ ಡಾ. ಎವೆಲಿನ್ ಹುಕರ್ ಒಂದೇ ವಯಸ್ಸಿನ, ಸಮಾನ ಐಕ್ಯೂ ಮತ್ತು ಶಿಕ್ಷಣವಿದ್ದ ಸಮಲೈಂಗಿಕ ಮತ್ತು ಭಿನ್ನಲಿಂಗೀಯ ಪುರುಷರಿಗೆ ಪ್ರಮಾಣಿತ ಮಾನಸಿಕ ಪರೀಕ್ಷೆಗಳನ್ನು ನೀಡಿದರು. (ಎವೆಲಿನ್ ಹೂಕರ್, ದ ಅಡ್ಜಸ್ಟ್ಮೆಂಟ್ ಆಫ್ ದಿ ಮೇಲ್ ಓವರ್ಟ್ ಹೋಮೋಸೆಕ್ಷುವಲ್, 21 ಜೆ. ಪ್ರಾಜೆಕ್ಟಿವ್ ಟೆಕ್ನಿಕ್ಸ್ 17-31 (1957) ನೋಡಿ). ಅಧ್ಯಯನದ ಸಮಯದಲ್ಲಿ ಯಾರೊಬ್ಬರೂ ಚಿಕಿತ್ಸೆ ಪಡೆಯುತ್ತಿರಲಿಲ್ಲ. ಆ ಪುರುಷರ ಲೈಂಗಿಕ ನಿಲುವಿನ ಅರಿವಿರದ ಪರಿಣಿತ ತೀರ್ಪುಗಾರು ಅಂಕಗಳ ಆಧಾರದ ಮೇಲೆ, ಮಾನಸಿಕ ಪರೀಕ್ಷೆಯ ಮೂಲಕ ಸಮಲೈಂಗಿಕ ಮತ್ತು ಭಿನ್ನಲಿಂಗೀಯ ಪುರುಷರನ್ನು ಪ್ರತ್ಯೇಕವಾಗಿ ಗುರುತಿಸಲು ಸಾಧ್ಯವಾಗುವುದಿಲ್ಲ ಎಂದು ನಿರ್ಧರಿಸಿದರು ಮತ್ತು ಇದೇ ರೀತಿಯ ಎರಡು ಗುಂಪುಗಳಲ್ಲಿನ ಸಮಾನ ಸಂಖ್ಯೆಯ ವ್ಯಕ್ತಿಗಳು ಮನೋರೋಗಗಳಿಂದ ಮುಕ್ತರಾಗಿದ್ದಂತೆ

ಕಂಡುಬಂದರು ಎಂದು ಗಮನಿಸಿದರು. ಸಮಲೈಂಗಿಕತೆಯು ಮನೋರೋಗದೊಂದಿಗೆ ಅಂತರ್ಗತವಾಗಿ ಸಂಬಂಧಿಸಿಲ್ಲ ಮತ್ತು " ಸಮಲೈಂಗಿಕತೆಯು ವೈದ್ಯಕೀಯ ವಿಚಾರದ ರೂಪದಲ್ಲಿ ಅಸ್ತಿತ್ವದಲ್ಲಿಲ್ಲ" ಎಂದು ತನ್ನ ದತ್ತಾಂಶಗಳಿಂದ ಆಕೆ ತೀರ್ಮಾನಿಸಿದರು. ಹೂಕರ್ ರವರ ಸಂಶೋಧನೆಯೆ ನಂತರದ ಎರಡು ದಶಕಗಳಲ್ಲಿ ಸಂಶೋಧನಾ ತಂತ್ರಗಳನ್ನು ಬಳಸಿ ಹಲವಾರು ಅಧ್ಯಯನಗಳು ನಡೆದವು, ಮತ್ತು ಅವೆಲ್ಲವೂ ಸಮಲೈಂಗಿಕತೆಯು ಮನೋರೋಗ ಅಥವಾ ಸಾಮಾಜಿಕ ದುಷ್ಪರಿಣಾಮಕ್ಕೆ ಸಂಬಂಧಿಸಿಲ್ಲವೆಂದು ತೀರ್ಮಾನಿಸಿದುವು.

1973 ರಲ್ಲಿ, ವೈಜ್ಞಾನಿಕ ಮಾಹಿತಿಯು ಸಮಲೈಂಗಿಕ ನಿಲುವು ಮನೋರೋಗದೊಂದಿಗೆ ಅಂತರ್ಗತವಾದ ಸಂಬಂಧ ಹೊಂದಿಲ್ಲವೆಂದು ಗುರುತಿಸಿದ, ಅಮೇರಿಕನ್ ಮನೋವೈದ್ಯಕೀಯ ಸಂಘದ ಟ್ರಸ್ಟಿಗಳ ಮಂಡಳಿಯು, ಮನೋವೈದ್ಯಕೀಯ ಸಂಘದ ಡಯಾಗ್ನೋಸ್ಟಿಕ್ ಮತ್ತು ಸ್ಟ್ಯಾಟಿಸ್ಟಿಕಲ್ ಮ್ಯಾನ್ಯುವಲ್ ಆಫ್ ಮೆಂಟಲ್ ಡಿಸಾರ್ಡರ್ಸ್ನಿಂದ ಸಮಲೈಂಗಿಕತೆಯನ್ನು ತೆಗೆದುಹಾಕುವಂತೆ ಮತ ಚಲಾಯಿಸಿದರು. ಆ ತೀರ್ಮಾನವು "ಸಮಲೈಂಗಿಕತೆಯು ನಿರ್ಧಾರ, ಸ್ಥಿರತೆ, ವಿಶ್ವಾಸಾರ್ಹತೆ ಅಥವಾ ಸಾಮಾನ್ಯ

ಸಾಮಾಜಿಕ ಅಥವಾ ವೃತ್ತಿಪರ ಸಾಮರ್ಥ್ಯಗಳಲ್ಲಿನ ಯಾವುದೇ ಬಗೆಯ ದುರ್ಬಲತೆಯನ್ನು ಸೂಚಿಸುವುದಿಲ್ಲ" ಎಂದು ಹೇಳಿತು. ಮುಂದಿನ ವರ್ಷ ಮನೋವೈದ್ಯಕೀಯ ಸಂಘವು ಸದಸ್ಯರ ಮತದಿಂದ ಆ ನಿರ್ಣಯವನ್ನು ಎತ್ತಿಹಿಡಿಯಲಾಯಿತು. ವೈಜ್ಞಾನಿಕ ಸಾಕ್ಷ್ಯಗಳ ಸಂಪೂರ್ಣ ಪರಿಶೀಲನೆಯ ನಂತರ, ಅಮೆರಿಕನ್ ಮನೋವೈದ್ಯಕೀಯ ಸಂಘವು 1975 ರಲ್ಲಿ ಅದೇ ಅಭಿಪ್ರಾಯವನ್ನು ಉಳಿಸಿಕೊಂಡಿತು ಮತ್ತು ಹಲ ಸಮಯದಿಂದ ಸಮಲೈಂಗಿಕತೆಯೊಂದಿಗೆ ತಳುಕು ಹಾಕಿಕೊಂಡಿದ್ದ ಮಾನಸಿಕ ಅಸ್ವಸ್ಥತೆಯ ಕಳಂಕವನ್ನು ತೊಡೆದುಹಾಕುವಂತೆ ಸಹಾಯ ಮಾಡುವಂತೆ ಎಲ್ಲಾ ಮಾನಸಿಕ ಆರೋಗ್ಯ ವೃತ್ತಿಪರರನ್ನು ಒತ್ತಾಯಿಸಿತು. ಅಮಿಕಸ್ ನ್ಯಾಷನಲ್ ಅಸೋಸಿಯೇಷನ್ ಆಫ್ ಸೋಷಿಯಲ್ ವರ್ಕರ್ಸ್ (NASW) ಇದೇ ರೀತಿಯ ನೀತಿಯನ್ನು ಅಳವಡಿಸಿಕೊಂಡಿದೆ.

ಖಂಡಿತವಾಗಿಯೂ, ಭಿನ್ನಲಿಂಗೀಯರಂತೆ ಕೆಲವು ಸಮಲೈಂಗಿಕರು ಮಾನಸಿಕ ಅಸ್ವಸ್ಥತೆಗಳು, ಮಾನಸಿಕ ತೊಂದರೆಗಳು ಅಥವಾ ಕಳಪೆ ಸಾಮಾಜಿಕ ಹೊಂದಾಣಿಕೆಯನ್ನು ಹೊಂದಿರುತ್ತಾರೆ. ಸಮಲೈಂಗಿಕರ ಪುರುಷರು ಮತ್ತು ಸ್ತ್ರೀಯರು ಮತ್ತು ಉಭಯಲಿಂಗೀಯರು ಸಾಮಾಜಿಕ ಕಳಂಕ ಮತ್ತು ಪೂರ್ವಾಗ್ರಹದ ಅನುಭವಗಳಿಗೆ ಸಂಬಂಧಿಸಿದ

ಒತ್ತಡಗಳಿಂದಾಗಿ ಕೆಲವು ವಿಧದ ಮಾನಸಿಕ ಸಮಸ್ಯೆಗಳಿಗೆ ಒಳಗಾಗುವ ಹೆಚ್ಚಿನ ಅಪಾಯದಲ್ಲಿರಬಹುದು. ಆದರೆ ನಾಲ್ಕು ದಶಕಗಳ ಕಾಲ ನಡೆಸಿದ ಸಂಶೋಧನೆಯು "ಸಮಲೈಂಗಿಕತೆಗೆ ಮಾನಸಿಕ ಹೊಂದಾಣಿಕೆಯೊಂದಿಗೆ ಯಾವುದೇ ಅಗತ್ಯ ಸಂಬಂಧವಿಲ್ಲ" ಎಂದು ದೃಢಪಡಿಸಿದೆ. ಹಿಂದಿನ ಪೀಳಿಗೆಯಲ್ಲಿ ಸಮಲೈಂಗಿಕತೆಯನ್ನು "ಗುಣಪಡಿಸುವ"ಯ ಪ್ರಯತ್ನಗಳನ್ನು-ಸಂಮೋಹನ, ಹಾರ್ಮೋನುಗಳನ್ನು ನೀಡುವುದು, ವಿದ್ಯುತ್-ಆಘಾತದಿಂದ ಅಸಹ್ಯ ಮೂಡಿಸುವುದು ಅಥವಾ ವಾಕರಿಕೆ ಬರಿಸುವ ಔಷಧಿಗಳು, ಲೋಬೊಟಮಿ, ಎಲೆಕ್ಟ್ರೋಶಾಕ್ ಮತ್ತು ಪುರುಷತ್ವಹರಣ ಮುಂತಾದವು- ಈಗ ಮಾನಸಿಕ-ಆರೋಗ್ಯ ವೃತ್ತಿಗಳು ವಿಷಾದನೀಯ ಎಂದು ಪರಿಗಣಿಸಿವೆ"

69. ಅದು ಸಮಲೈಂಗಿಕ ವ್ಯಕ್ತಿಗಳು ಅನುಭವಿಸಿರುವ ಪೂರ್ವಾಗ್ರಹ, ತಾರತಮ್ಯ ಮತ್ತು ಹಿಂಸೆಗಳನ್ನು ಈ ಕೆಳಗಿನಂತೆ ವಿವರಿಸಿತು :

**"ಸಮಲೈಂಗಿಕ ವ್ಯಕ್ತಿಗಳು ಎದುರಿಸುವ ಪೂರ್ವಾಗ್ರಹ, ತಾರತಮ್ಯ ಮತ್ತು ಹಿಂಸೆ**

ಯುನೈಟೆಡ್ ಸ್ಟೇಟ್ಸ್‌ನಲ್ಲಿ ಸಮಲೈಂಗಿಕ ಸ್ತ್ರೀಪುರುಷರು ತಮ್ಮ ಲೈಂಗಿಕ ದೃಷ್ಟಿಕೋನದ ದೆಸೆಯಿಂದ ವ್ಯಾಪಕ ಪೂರ್ವಾಗ್ರಹ, ತಾರತಮ್ಯ ಮತ್ತು ಹಿಂಸೆಯನ್ನು

ಎದುರಿಸುತ್ತಾರೆ. ಸಮಲೈಂಗಿಕ ಪುರುಷರು ಮತ್ತು ಸ್ತ್ರೀಯರ ವಿರುದ್ಧದ ತೀವ್ರವಾದ ಪೂರ್ವಾಗ್ರಹ 20 ನೇ ಶತಮಾನದ ಉದ್ದಕ್ಕೂ ವ್ಯಾಪಕವಾಗಿ ಹರಡಿತು; ಸಾರ್ವಜನಿಕ ಅಭಿಪ್ರಾಯಗಳ ಅಧ್ಯಯನಗಳು ನಿಯಮಿತವಾಗಿ, ಸಾರ್ವಜನಿಕರಲ್ಲಿ ಹಲವರು, ಸಮಲೈಂಗಿಕರೆಡೆಗೆ ಬಲವಾದ ದ್ವೇಷದ ಹೊಂದಿದ್ದರೆಂದು ತೋರಿಸಿದುವು. ಸಮಲೈಂಗಿಕತೆ ಬಗೆಗಿನ ಸಾರ್ವಜನಿಕ ಅಭಿಪ್ರಾಯದಲ್ಲಿ 1990ರ ದಶಕದಲ್ಲಿ ಬದಲಾವಣೆಯಾದರೂ, ಸಮಲೈಂಗಿಕ ಪುರುಷರು ಮತ್ತು ಸ್ತ್ರೀಯರ ವಿರುದ್ಧದ ದ್ವೇಷವು ಸಮಕಾಲೀನ ಅಮೆರಿಕನ್ ಸಮಾಜದಲ್ಲಿ ಸಾಮಾನ್ಯವಾಗಿದೆ. ಉಭಯಲಿಂಗಿಗಳ ವಿರುದ್ಧದ ಪೂರ್ವಾಗ್ರಹವು ಸಮಾನ ಮಟ್ಟದಲ್ಲಿ ಕಂಡುಬರುತ್ತದೆ. ಉದ್ಯೋಗ ಮತ್ತು ವಸತಿಯಲ್ಲಿ ಸಮಲೈಂಗಿಕರ ವಿರುದ್ಧದ ತಾರತಮ್ಯವು ವ್ಯಾಪಕವಾಗಿಯೇ ಉಳಿದುಕೊಂಡಿರುವಂತೆ ಕಂಡುಬರುತ್ತಿದೆ.

ಈ ಸಮಲೈಂಗಿಕ-ವಿರೋಧಿ ಪೂರ್ವಾಗ್ರಹದ ತೀವ್ರತೆಯು ಅಮೇರಿಕದ ಸಮಾಜದಲ್ಲಿ ನಿರಂತರವಾಗಿ ಹೆಚ್ಚಿನ ಪ್ರಮಾಣದಲ್ಲಿ ನಡೆಯುವ ಸಮಲೈಂಗಿಕ-ವಿರೋಧಿ ಕಿರುಕುಳ ಮತ್ತು ಹಿಂಸಾಚಾರದಲ್ಲಿ ಪ್ರತಿಫಲಿಸುತ್ತದೆ. ಮೌಖಿಕ ಕಿರುಕುಳ ಮತ್ತು ದುರ್ಬಳಕೆಗಳು ಸಮಲೈಂಗಿಕರ ಹೆಚ್ಚೂಕಡಿಮೆ

ಸಾರ್ವತ್ರಿಕ ಅನುಭವಗಳಾಗಿವೆ ಎಂದು ಹಲವಾರು ಸಮೀಕ್ಷೆಗಳು ಸೂಚಿಸುತ್ತವೆ. ದೈಹಿಕ ಹಿಂಸೆ ಕಡಿಮೆಯಾಗಿದ್ದರೂ, ಗಣನೀಯ ಸಂಖ್ಯೆಯ ಸಮಲೈಂಗಿಕರು ತಮ್ಮ ಲೈಂಗಿಕ ನಿಲುವಿನಿಂದಾಗಿ ತಮ್ಮ ವ್ಯಕ್ತಿ ಅಥವಾ ಆಸ್ತಿಗೆ ಸಂಬಂಧಿಸಿದಂತೆ ಅನುಭವಿಸಿದ ಅಪರಾಧಗಳನ್ನು ವರದಿ ಮಾಡುತ್ತಾರೆ. 2001ರ, ಇತ್ತೀಚಿನ ಎಫ್.ಬಿ.ಐ ಅಂಕಿಅಂಶಗಳ ಪ್ರಕಾರ, ಸಮಲೈಂಗಿಕ ಪುರುಷರು, ಸ್ತ್ರೀಯರು ಮತ್ತು ಉಭಯಲಿಂಗೀಯರ ವಿರುದ್ಧ 1,375 ಪಕ್ಷಪಾತ ಪ್ರೇರೇಪಿತ ಘಟನೆಗಳು ನಡೆದಿವೆ. ಆ ಅಂಕಿಸಂಖ್ಯೆಯು ಅಂತಹ ಅಪರಾಧಗಳ ಒಂದು ಭಾಗವನ್ನು ಮಾತ್ರ ಪ್ರತಿನಿಧಿಸುತ್ತವೆ, ಏಕೆಂದರೆ ಕಾನೂನು ಜಾರಿ ಸಂಸ್ಥೆಗಳು ಮಾಡುವ ದ್ವೇಷದ ಅಪರಾಧಗಳ ವರದಿ ಸ್ವಯಂಪ್ರೇರಿತವಾಗಿರುತ್ತದೆ, ಪೋಲಿಸ್ ಸಂಖ್ಯಾಶಾಸ್ತ್ರದ ಸಂಪೂರ್ಣತೆಯು ನ್ಯಾಯವ್ಯಾಪ್ತಿಗಳ ನಡುವೆ ಬಹುವಾಗಿ ಭಿನ್ನವಾಗಿರುತ್ತದೆ, ಮತ್ತು ಅನೇಕ ಸಂತ್ರಸ್ತರು ತಮ್ಮ ಅನುಭವಗಳನ್ನು ಪೋಲಿಸರಿಗೆ ವರದಿ ಮಾಡುತ್ತಿಲ್ಲ ಏಕೆಂದರೆ ಅವರು ಮತ್ತಷ್ಟು ಕಿರುಕುಳಕ್ಕೆ ಗುರಿಯಾಗುವ ಭಯದಲ್ಲಿರುತ್ತಾರೆ ಅಥವಾ ಅವರಿಗೆ ಆಕ್ರಮಣಕಾರರನ್ನು ಸೆರೆಹಿಡಿಯಲಾಗುವುದು ಎಂಬ ವಿಶ್ವಾಸವಿರುವುದಿಲ್ಲ.

ಸಮಲೈಂಗಿಕತೆಯು ಮಾನಸಿಕ ಅಸ್ವಸ್ಥತೆಯಲ್ಲವಾದರೂ, ಸಮಲೈಂಗಿಕ ಪುರುಷರು ಮತ್ತು ಸ್ತ್ರೀಯರ ವಿರುದ್ಧದ ಈ ಸಾಮಾಜಿಕ ಪೂರ್ವಾಗ್ರಹವು ಅವರ ನೈಜ ಮತ್ತು ಗಣನೀಯ ಮಾನಸಿಕ ಹಾನಿಗೆ ಕಾರಣವಾಗಬಹುದು. ಅನುಭವಿಸುವ ನಿರಾಕರಣೆ, ತಾರತಮ್ಯ ಮತ್ತು ಹಿಂಸೆಗಳು ಸಮಲೈಂಗಿಕ ಪುರುಷರು ಮತ್ತು ಮಹಿಳೆಯರಲ್ಲಿ ಹೆಚ್ಚಾದ ಮಾನಸಿಕ ಯಾತನೆಯೊಂದಿಗೆ ಸಂಬಂಧಿಸಿದೆ ಎಂದು ಸಂಶೋಧನೆಗಳು ಸೂಚಿಸುತ್ತವೆ. ಸಮಲೈಂಗಿಕ ವಿರೋಧಿ ಕಳಂಕದಿಂದಾಗಿ, ಸಾಮಾಜಿಕ ಬೆಂಬಲ ಮತ್ತು ಒತ್ತಡವನ್ನು ಸಹಿಸಿಕೊಳ್ಳಲು ಭಿನ್ನಲಿಂಗಾಸಕ್ತರಿಗೆ ನೆರವಾಗುವ ಇತರ ಸಂಪನ್ಮೂಲಗಳು ಸಮಲೈಂಗಿಕ ಪುರುಷರು ಮತ್ತು ಸ್ತ್ರೀಯರಿಗೆ ಕಡಿಮೆ ದೊರೆಯುತ್ತವೆಯಾದ್ದರಿಂದ ಈ ಸಮಸ್ಯೆಗಳು ಉಲ್ಬಣಗೊಳ್ಳುತ್ತವೆ. ಅನೇಕ ಸಮಲೈಂಗಿಕ ಪುರುಷರು ಮತ್ತು ಸ್ತ್ರೀಯರುರು ಸಮಲೈಂಗಿಕತೆಯ ಮೇಲಿನ ಸಾಮಾಜಿಕ ಕಳಂಕವನ್ನು ನಿಭಾಯಿಸಲು ಕಲಿತರೂ ಸಹ, ಲೈಂಗಿಕ ನಿಲುವನ್ನು ರಹಸ್ಯವಾಗಿಡುವ ಪ್ರಯತ್ನಗಳ ಮೂಲಕ ಸಾಮಾಜಿಕ ಕಳಂಕವನ್ನು ತಪ್ಪಿಸುವ ಯತ್ನಗಳನ್ನು ಮಾಡುವುದು ಸಮಲೈಂಗಿಕರ ಮಾನಸಿಕ

ಯೋಗಕ್ಷೇಮಕ್ಕೆ ಹಾನಿಮಾಡಬಹುದು. ಸಮಲೈಂಗಿಕ ಸ್ತ್ರೀಯರು ಮತ್ತು ಪುರುಷರು ತಮ್ಮ ಲೈಂಗಿಕ ನಿಲುವನ್ನು ಸಕಾರಾತ್ಮಕವಾಗಿ ಅನುಭವಿಸುವ ಮಟ್ಟಿಗೆ ಉತ್ತಮ ಮಾನಸಿಕ ಆರೋಗ್ಯವನ್ನು ಕಂಡುಕೊಂಡಿದ್ದಾರೆ ಮತ್ತು "ಹೊರಬರುವ" ಮೂಲಕ ಮತ್ತು ಸಮಲೈಂಗಿಕ ಸಮುದಾಯದಲ್ಲಿ ಭಾಗವಹಿಸುವ ಮೂಲಕ ತಮ್ಮ ಜೀವನದಲ್ಲಿ ಅದನ್ನು ಅಡಕಗೊಳಿಸಿದ್ದಾರೆ. ಒಬ್ಬರ ಲೈಂಗಿಕ ನಿಲುವನ್ನು ಇತರರಿಗೆ ಬಹಿರಂಗಪಡಿಸುವ ಸಾಮರ್ಥ್ಯವು ಮಾನಸಿಕ ಆರೋಗ್ಯಕ್ಕೆ ಅತ್ಯಗತ್ಯವಾದ ಸಾಮಾಜಿಕ ಬೆಂಬಲದ ದೊರಕುವಿಕೆಯನ್ನು ಹೆಚ್ಚಿಸುತ್ತದೆ. "

70. ಅಮೇರಿಕನ್ ಮನೋವೈಜ್ಞಾನಿಕ ಸಂಸ್ಥೆಯ ನಿಲುವನ್ನು ಅನುಮೋದಿಸಿರುವ ಭಾರತೀಯ ಮನೋವೈಜ್ಞಾನಿಕ ಸಂಸ್ಥೆವು (ಇಂಡಿಯನ್ ಸೈಕಿಯಾಟ್ರಿಕ್ ಸೊಸೈಟಿ, ಐ.ಪಿ.ಎಸ್) 02.07.2018 ರಂದು ನೀಡಿದ ಸಮಲೈಂಗಿಕತೆಯ ಕುರಿತಾದ ಹೇಳಿಕೆ ಈ ರೀತಿಯಿದೆ :-

ಭಾರತೀಯ ಸೈಕಿಯಾಟ್ರಿಕ್ ಸೊಸೈಟಿಯ (ಭಾರತೀಯ ಮನಃಶಾಸ್ತ್ರೀಯ ಸಂಸ್ಥೆ (ಐಪಿಎಸ್) ಅಭಿಪ್ರಾಯದಲ್ಲಿ ಸಮಲೈಂಗಿಕತೆಯು ಮಾನಸಿಕ ಅಸ್ವಸ್ಥತೆಯಲ್ಲ.

ಇದು ಮಾನಸಿಕ ಅಸ್ವಸ್ಥತೆಗಳ ಪಟ್ಟಿಯಿಂದ ಸಮಲೈಂಗಿಕತೆಯನ್ನು ಕ್ರಮವಾಗಿ 1973 ಮತ್ತು 1992 ರಲ್ಲಿ ತೆಗೆದುಹಾಕಿದ ಅಮೇರಿಕನ್ ಸೈಕಿಯಾಟ್ರಿಕ್

ಅಸೋಸಿಯೇಷನ್ (ಅಮೇರಿಕನ್ ಮನಃಶಾಸ್ತ್ರೀಯ ಸಂಘಟನೆ) ಮತ್ತು ವಿಶ್ವ ಆರೋಗ್ಯ ಸಂಸ್ಥೆಯ ರೋಗಗಳ ಅಂತಾರಾಷ್ಟ್ರೀಯ ವರ್ಗೀಕರಣದ ನಿಲುವಿಗೆ ಅನುಗುಣವಾಗಿರುತ್ತದೆ,.

ಐ.ಪಿ.ಎಸ್ ಸಮಲೈಂಗಿಕ ಲೈಂಗಿಕತೆಯನ್ನು ಮಾನವ ಲೈಂಗಿಕತೆಯ ಸಾಮಾನ್ಯ ರೂಪಾಂತರವೆಂದೂ ಭಿನ್ನಲಿಂಗೀಯತೆ ಮತ್ತು ಉಭಯ ಲಿಂಗೀಯತೆಯಂತೆಯೇ ಎಂದು ಗುರುತಿಸುತ್ತದೆ. ಲೈಂಗಿಕ ನಿಲುವನ್ನು ಯಾವುದೇ ಚಿಕಿತ್ಸೆಯಿಂದ ಬದಲಾಯಿಸಬಹುದು ಎಂಬುದಕ್ಕೆ ವೈಜ್ಞಾನಿಕ ಪುರಾವೆಗಳಿಲ್ಲ ಮತ್ತು ಅಂತಹ ಯಾವುದೇ ಪ್ರಯತ್ನಗಳು ವ್ಯಕ್ತಿಯ ಸ್ವಾಭಿಮಾನವನ್ನು ಕುಗ್ಗಿಸಬಹುದು ಮತ್ತು ಕಳಂಕವನ್ನು ಉಂಟುಮಾಡಬಹುದು. ಹಾಗೆಯೇ ಇಂಡಿಯನ್ ಸೈಕಿಯಾಟ್ರಿಕ್ ಸೊಸೈಟಿ ಸಮಲೈಂಗಿಕ ನಡವಳಿಕೆಗೆ ನೀರಪರಾಧೀಕರಣವನ್ನು ಬೆಂಬಲಿಸುತ್ತದೆ. "

71. ಒಬರ್ಜೆಫೆಲ್ ಮತ್ತು ಸಂಗಡಿಗರು. v. ಹೋಡ್ಜಸ್, ನಿರ್ದೇಶಕರು, ಒಹಾಯೋ ಆರೋಗ್ಯ ಇಲಾಖೆ ಮತ್ತು ಸಂಗಡಿಗರು (2015) ಪ್ರಕರಣದ ತನ್ನ ತೀರ್ಪಿನಲ್ಲಿ ಅಮೇರಿಕೆಯ ಸರ್ವೋಚ್ಚನ್ಯಾಯಾಲಯ ಸಹ ಬೋವರ್ಸ್ (ಮೇಲ್ಕಂಡ) ಪ್ರಕರಣ ಮತ್ತು ಲಾರೆನ್ಸ್ v. ಟೆಕ್ಸಾಸ್ (ಮೇಲ್ಕಂಡ) ಪ್ರಕರಣಗಳ ನಡುವಿನ ಅವಧಿಯಲ್ಲಿ ಸಮಲೈಂಗಿಕ ವ್ಯಕ್ತಿಗಳು ಅನುಭವಿಸಿದ ಅಗಾಧ ವೇದನೆಗಳನ್ನು ಕೆಳಗಿನ ಮಾತುಗಳಲ್ಲಿ ಎತ್ತಿ ತೋರಿಸಿತು:-

"ಮೂಲಭೂತ ಹಕ್ಕುಗಳನ್ನು ಗುರುತಿಸಲು ಮತ್ತು ರಕ್ಷಿಸಲು ನ್ಯಾಯಾಧೀಶರು ಎಚ್ಚರಿಕೆಯ ವಿಧಾನವನ್ನು ಅಳವಡಿಸಿಕೊಳ್ಳಲು ಹೇಳಿರುವುದು ಇದೇ ಮೊದಲ ಬಾರಿಯಲ್ಲ. ಬೋವರ್ಸ್ ಪ್ರಕರಣದಲ್ಲಿ, ಸಕಾರಾತ್ಮಕ ಅನ್ಯೋನ್ಯತೆಯನ್ನು ಅಪರಾಧೀಕರಿಸುವ ಕಾನೂನೊಂದನ್ನು ಸ್ಪಷ್ಟ ಬಹುಮತದಲ್ಲಿ ಎತ್ತಿಹಿಡಿಯಲಾಯಿತು. ಸಮಲೈಂಗಿಕ ಸ್ತ್ರೀ ಮತ್ತು ಪುರುಷರ ಹಕ್ಕುಗಳನ್ನು ಆಗಿನ್ನೂ ಪರಿಗಣಿಸಲು ಪ್ರಾರಂಭಿಸಿದ್ದ ಪ್ರಜಾಸತ್ತಾತ್ಮಕ ಪ್ರಕ್ರಿಯೆಗೆ ವ್ಯಕ್ತವಾದ ಎಚ್ಚರಿಕೆಯ ಬೆಂಬಲ ಎಂದು ಈ ವಿಧಾನವನ್ನು ನೋಡಲ್ಪಟ್ಟಿರಬಹುದು. ಆದರೂ, ಅಧಿಕೃತವಾಗಿ, ಬೋವರ್ಸ್ ಪ್ರಕರಣದ ತೀರ್ಪು ಸಮಲೈಂಗಿಕ ಪುರುಷರು ಮತ್ತು ಸ್ತ್ರೀಯರ ಮೂಲಭೂತ ಹಕ್ಕನ್ನು ನಿರಾಕರಿಸಿದ ರಾಜ್ಯದ ಕ್ರಮವನ್ನು ಸಮರ್ಥಿಸಿಕೊಂಡಿತು ಮತ್ತು ಅವರಿಗೆ ನೋವು ಮತ್ತು ಅವಮಾನವನ್ನು ಉಂಟುಮಾಡಿತು. ಆ ಸಂದರ್ಭದಲ್ಲಿ ಭಿನ್ನಮತದ ತೀರ್ಪುಗಳು ಸಾಬೀತುಪಡಿಸಿದಂತೆ, ಸರಿಯಾದ ವಿಚಾರಣೆಗೆ ಅಗತ್ಯವಾದ ಸತ್ಯಗಳು ಮತ್ತು ತತ್ವಗಳನ್ನು ಬೋವರ್ಸ್ ನ್ಯಾಯಾಲಯಕ್ಕೆ ತಿಳಿದಿತ್ತು. ಅದಕ್ಕಾಗಿಯೇ ಲಾರೆನ್ಸ್ ಪ್ರಕರಣದಲ್ಲಿ ಬೋವರ್ಸ್ ತೀರ್ಪನ್ನು "ಇದು ನಿರ್ಧರಿಸಿದಾಗ ಸರಿಯಾಗಿರಲಿಲ್ಲ" ಎಂದು ಹೇಳಲಾಗಿತ್ತು. 539

> ಯುಎಸ್, 578 ರಲ್ಲಿ. ಬೋವರ್ಸ್ ತೀರ್ಪನ್ನು ಅಂತಿಮವಾಗಿ ಲಾರೆನ್ಸ್ ಪ್ರಕರಣದಲ್ಲಿ ನಿರಾಕರಿಸಲಾಯಿತಾದರೂ, ಮಧ್ಯಂತರದಲ್ಲಿ ಪುರುಷರು ಮತ್ತು ಮಹಿಳೆಯರು ಹಾನಿಗೊಳಗಾದರು, ಮತ್ತು ಈ ಹಾನಿಯ ಗಣನೀಯ ಪರಿಣಾಮಗಳು ಬೋವರ್ಸ್ ಮುಂದೂಡಲ್ಪಟ್ಟ ನಂತರ ಬಹುಕಾಲದ ನಂತರವೂ ಉಳಿದಿದ್ದುವು. ಘನತೆಗೆ ಆದ ಗಾಯಗಳನ್ನು ಲೇಖನಿಯ ಒಂದು ಚಲನೆಯಿಂದ ಎಂದಿಗೂ ಗುಣಪಡಿಸಲಾಗುವುದಿಲ್ಲ. "

72. 2017ರ ಸಂಸತ್ತಿನ ಶಾಸನದಲ್ಲಿರುವ ಮಾನಸಿಕ ರೋಗದ ವ್ಯಾಖ್ಯಾನದಲ್ಲಿ ಸಮಲೈಂಗಿಕತೆಯನ್ನು ಮನೋರೋಗವೆಂದು ಪರಿಗಣಿಸಲಾಗುವುದಿಲ್ಲ ಎಂಬುದನ್ನು ಸ್ಪಷ್ಟಪಡಿಸಲಾಗಿದೆ. ಇದು ನಮ್ಮ ಕಾನೂನಿನ ಬಹು ಮುಖ್ಯವಾದ ಮುನ್ನಡೆಯಾಗಿದ್ದು ಅದಕ್ಕೆ ಸಂಸತ್ತಿನ ಅನುಮೋದನೆಯು ದೊರೆತಿದೆ. ಈ ವಿಚಾರವನ್ನು ಸದರಿ ಕಾಯ್ದೆಯ 3ನೇ ಪರಿಚ್ಛೇದ ಕೂಡ ಕೆಳಗಿನಂತೆ ಬಲಪಡಿಸುತ್ತದೆ:-

> "3. ಮಾನಸಿಕ ಅಸ್ವಸ್ಥತೆಯ ನಿರ್ಧಾರ. (1) ಕೇಂದ್ರ ಸರ್ಕಾರದ ಮೂಲಕ ತಿಳಿಸಲ್ಪಟ್ಟ ರಾಷ್ಟ್ರೀಯ ಅಥವಾ ಅಂತಾರಾಷ್ಟ್ರೀಯ ಮಟ್ಟದಲ್ಲಿ ಅಂಗೀಕರಿಸಲ್ಪಟ್ಟ ವೈದ್ಯಕೀಯ ಮಾನದಂಡಗಳಿಗೆ ತಕ್ಕಂತೆ ಮಾನಸಿಕ ರೋಗಗಳನ್ನು ನಿರ್ಧರಿಸಬಹುದು (ವಿಶ್ವ ಆರೋಗ್ಯ ಸಂಸ್ಥೆಯ ರೋಗಗಳ ಅಂತಾರಾಷ್ಟ್ರೀಯ ವರ್ಗೀಕರಣದ ಇತ್ತೀಚಿನ ಆವೃತ್ತಿಯನ್ನು ಒಳಗೊಂಡಂತೆ)

(2) ಯಾವುದೇ ವ್ಯಕ್ತಿ ಅಥವಾ ಅಧಿಕಾರಿಯು ಒಬ್ಬ ವ್ಯಕ್ತಿಯನ್ನು ಮಾನಸಿಕ ಅಸ್ವಸ್ಥನೆಂದು, ಮಾನಸಿಕ ಅನಾರೋಗ್ಯದ ಚಿಕಿತ್ಸೆಗೆ ಸಂಬಂಧಿಸಿದಂತೆ ಅಥವಾ ಈ ಕಾಯಿದೆಯಲ್ಲಿ ಅಥವಾ ಇತರ ಕಾನೂನಿನಡಿಯಲ್ಲಿ ಬರುವ ಇತರ ವಿಷಯಗಳಿಗೆ ನೇರವಾಗಿ ಸಂಬಂಧಿಸಿದ ಉದ್ದೇಶಕ್ಕಾಗಿ ಹೊರತುಪಡಿಸಿ, ವರ್ಗೀಕರಿಸಬಾರದು,.

(3) ವ್ಯಕ್ತಿಯ ಮಾನಸಿಕ ಅಸ್ವಸ್ಥತೆಯನ್ನ ಈ ಕೆಳಗಿನ ವಿಚಾರಗಳ ಆಧಾರದ ಮೇಲೆ ನಿರ್ಣಯಿಸಬಾರದು -

(4) ರಾಜಕೀಯ, ಆರ್ಥಿಕ ಅಥವಾ ಸಾಮಾಜಿಕ ಸ್ಥಾನಮಾನ ಅಥವಾ ಸಾಂಸ್ಕೃತಿಕ, ಜನಾಂಗೀಯ ಅಥವಾ ಧಾರ್ಮಿಕ ಗುಂಪಿನ ಸದಸ್ಯತ್ವ ಅಥವಾ ವ್ಯಕ್ತಿಯ ಮಾನಸಿಕ ಆರೋಗ್ಯ ಸ್ಥಿತಿಗೆ ನೇರವಾಗಿ ಸಂಬಂಧಿಸದಿರುವ ಯಾವುದೇ ಕಾರಣಕ್ಕಾಗಿ;

(5) ವ್ಯಕ್ತಿಯ ಸಮುದಾಯದ ನೈತಿಕ, ಸಾಮಾಜಿಕ, ಸಾಂಸ್ಕೃತಿಕ, ಕೆಲಸ ಅಥವಾ ರಾಜಕೀಯ ಮೌಲ್ಯಗಳು ಅಥವಾ ಧಾರ್ಮಿಕ ನಂಬಿಕೆಗಳನ್ನು ಅನುಸರಿಸದಿದ್ದಲ್ಲಿ.

(6) ಹಿಂದೆ ಮಾನಸಿಕ ಆರೋಗ್ಯ ಸಂಸ್ಥೆಯಲ್ಲಿ ಚಿಕಿತ್ಸೆ ಪಡೆದಿರುವುದು ಅಥವಾ ದಾಖಲಾಗಿರುವುದು, ವ್ಯಕ್ತಿಯ ಮಾನಸಿಕ ಅಸ್ವಸ್ಥತೆಯ ಕುರಿತ ಯಾವುದೇ ಪ್ರಸ್ತುತ ಅಥವಾ ಭವಿಷ್ಯದ ನಿರ್ಧಾರಗಳಿಗೆ ಸಮರ್ಥನೆಯಾಗಬಾರದು.

(5) ಸೂಕ್ತ ನ್ಯಾಯಾಲಯದಿಂದ ಘೋಷಿಸಲ್ಪಡದಿದ್ದರೆ, ಒಬ್ಬ ವ್ಯಕ್ತಿಗೆ ಮಾನಸಿಕ ಅನಾರೋಗ್ಯವಿದೆ ಎಂಬ ನಿರ್ಣಯದ ಆಧಾರದಲ್ಲಿ ಅವನು ಮಾನಸಿಕ ಅಸ್ವಸ್ಥ ಎಂದು ಅರ್ಥೈಸಿಕೊಳ್ಳಬಾರದು "

73. ನಮ್ಮ ಶಾಸನಗಳಲ್ಲಿರುವ ಮಾನಸಿಕ ರೋಗಗಳ ವ್ಯಾಖ್ಯಾನವು ಅಂತಾರಾಷ್ಟ್ರೀಯವಾಗಿ ಒಪ್ಪಿಗೆಯಾಗಿರುವ ವೈದ್ಯಕೀಯ ಮಾನದಂಡಗಳೊಂದಿಗೆ ತಾಳೆಯಾಗಬೇಕು ಮತ್ತು ಈ ಮಾನದಂಡಗಳಲ್ಲಿ ವಿಶ್ವ ಆರೋಗ್ಯ ಸಂಸ್ಥೆ ಇತ್ತೀಚೆಗೆ ಹೊರತಂದಿರುವ ರೋಗಗಳ ಅಂತಾರಾಷ್ಟ್ರೀಯ ವರ್ಗೀಕರಣವೂ ಸೇರಿದೆ ಎಂಬುದನ್ನು ಕಾಯ್ದೆಯ 3(1)ನೇ ಪರಿಚ್ಛೇದ ಸ್ಪಷ್ಟಪಡಿಸುತ್ತದೆ. 3(3)ನೀ ಪರಿಚ್ಛೇದದ ಪ್ರಕಾರ, ಸಾಮಾಜಿಕ ಪರಿಸ್ಥಿತಿ ಅಥವಾ ಸಾಂಸ್ಕೃತಿಕ ಗುಂಪುಗಳ ಸದಸ್ಯತ್ವ ಅಥವಾ ವ್ಯಕ್ತಿಯ ಮಾನಸಿಕ ಆರೋಗ್ಯಕ್ಕೆ ನೇರವಾಗಿ ಸಂಬಂಧಪಡದ ವಿಚಾರಗಳ ಆಧಾರದಮೇಲೆ ಮಾನಸಿಕ ಖಾಯಿಲೆಯನ್ನು ನಿರ್ಧರಿಸಬಾರದು ಎಂಬುದನ್ನು ಸ್ಪಷ್ಟಪಡಿಸಲಾಗಿದೆ. ಬಹುಮುಖ್ಯವಾಗಿ, ವ್ಯಕ್ತಿಯೊಬ್ಬರು ತಮ್ಮ ಸಮುದಾಯದಲ್ಲಿ ಪ್ರಚಲಿತವಾಗಿರುವ ನೈತಿಕ, ಸಾಮಾಜಿಕ, ಸಾಂಸ್ಕೃತಿಕ, ಔದ್ಯೋಗಿಕ ಮತ್ತು ರಾಜನೈತಿಕ ಮೌಲ್ಯಗಳು ಅಥವಾ ಧಾರ್ಮಿಕ ನಂಬುಗೆಗಳಿಗೆ ಬದ್ಧರಾಗಿಲ್ಲ ಎಂಬ ಆಧಾರದಮೇಲೆ ಅವರನ್ನು ಮಾನಸಿಕ ರೋಗಿಗಳೆಂದು ಪರಿಗಣಿಸಲಾಗುವುದಿಲ್ಲ. ಆದುದರಿಂದ, ಸಮಾನ ಲಿಂಗದ ಜೋಡಿಗಳಿಗೆ ಈ ಹಿಂದೆ ಅಂಟಿಕೊಂಡಿದ್ದ ಮಾನಸಿಕ ರೋಗಿಗಳೆಂಬ ಕಳಂಕವು ಕೊನೆಗೂ ಹೋಗಿದೆ ಎಂಬುದನ್ನು ಸಂಸತ್ತು ಅನುಮಾನಕ್ಕೆ ಎಡೆಯಿರದಂತೆ ಒಪ್ಪಿಕೊಂಡಿರುವುದು ಸ್ಪಷ್ಟವಾಗಿದೆ. ಇದು ಶಾಸಕಾಂಗವೇ ಮುಂದಿರಿಸಿರುವ ಮತ್ತೊಂದು ಬಹುಮುಖ್ಯವಾದ ಹೆಜ್ಜೆಯಾಗಿದ್ದು, ಇದು **ಸುರೇಶ್ ಕುಮಾರ್ ಕೌಶಲ್** (ಮೇಲ್ಕಂಡ) ಪ್ರಕರಣದ ತೀರ್ಪಿನ ಮೂಲಭೂತ ಅಂಶಗಳಲ್ಲೊಂದನ್ನು ಅಮಾನ್ಯಗೊಳಿಸುತ್ತದೆ. 21(1)(ಎ) ಪರಿಚ್ಛೇದವು ಬಹುಮುಖ್ಯವಾಗಿದೆ, ಅದನ್ನು ಕೆಳಕಂಡಂತೆ ವಿವರಿಸಲಾಗಿದೆ:

"21. ಸಮಾನತೆ ಮತ್ತು ತಾರತಮ್ಯದ ವಿರುದ್ಧದ ಹಕ್ಕು. (1) ಆರೋಗ್ಯ ಸೇವೆ ನೀಡುವಾಗ ಮಾನಸಿಕ ಅಸ್ವಸ್ಥತೆಯಿರುವ ಪ್ರತಿಯೊಬ್ಬ ವ್ಯಕ್ತಿಯನ್ನು ದೈಹಿಕ ಅನಾರೋಗ್ಯ ಹೊಂದಿರುವ ವ್ಯಕ್ತಿಗಳಿಗೆ ಸಮನಾಗಿ ಪರಿಗಣಿಸಬೇಕು, ಅದು ಈ ಕೆಳಗಿನವುಗಳನ್ನು ಒಳಗೊಂಡಿರುತ್ತದೆ: -

(1) ಲೈಂಗಿಕತೆ, ಲಿಂಗ, ಲೈಂಗಿಕ ನಿಲುವು, ಧರ್ಮ, ಸಂಸ್ಕೃತಿ, ಜಾತಿ, ಸಾಮಾಜಿಕ ಅಥವಾ ರಾಜಕೀಯ ನಂಬಿಕೆಗಳು, ವರ್ಗ ಅಥವಾ ಅಂಗವೈಕಲ್ಯ ಸೇರಿದಂತೆ ಯಾವುದೇ ಆಧಾರದ ಮೇಲೆ ಯಾವುದೇ ತಾರತಮ್ಯ ಇಲ್ಲದಿರುವಿಕೆ;

74. ಈ ಪರಿಚ್ಛೇದವು, ಇತರ ವ್ಯಕ್ತಿಗಳ ಜೊತೆಗೆ ಸಮಲೈಂಗಿಕ ವ್ಯಕಿಗಳು ಕೂಡಾ ಮಾನಸಿಕ ಖಾಯಿಲೆಗಳ ಪ್ರಭಾವಕ್ಕೆ ಒಳಗಾಗಬಹುದು ಮಾತು ಅವರನ್ನು ಅಂತಹ ಖಾಯಿಲೆಗಳಿರುವ ಇತರ ವ್ಯಕ್ತಿಗಳಿಗೆ ಸರಿಸಾಟಿಯಾಗಿ ನಡೆಸಿಕೊಂಡು, ಅವರ ಲೈಂಗಿಕ ನಿಲುವಿನ ಆಧಾರದಲ್ಲಿ ಯಾವುದೇ ತಾರತಮ್ಯ ಮಾಡಬಾರದು ಎಂಬುದಕ್ಕೆ ಸಂಸತ್ತಿನ ಮಾನ್ಯತೆ ದೊರೆತಿರುವುದನ್ನು ಸ್ಪಷ್ಟಪಡಿಸುತ್ತದೆ. 30ನೇ ಪರಿಚ್ಛೇದ ಅತ್ಯಂತ ಮುಖ್ಯವಾಗಿದೆ, ಕೆಳಗಿನಂತೆ ವಿವರಿಸುತ್ತದೆ:

"30. ಮಾನಸಿಕ ಆರೋಗ್ಯ ಮತ್ತು ಅನಾರೋಗ್ಯದ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ಮಾನಸಿಕ ಅಸ್ವಸ್ಥತೆಗೆ ಸಂಬಂಧಿಸಿದ ಕಳಂಕವನ್ನು ಕಡಿಮೆ ಮಾಡುವುದು.

ಸೂಕ್ತ ಸರ್ಕಾರವು ಈ ಕೆಳಗಿನವುಗಳಲ್ಲಿ ಖಚಿತಪಡಿಸಿಕೊಳ್ಳಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬೇಕು, -

(1) ಈ ಕಾಯ್ದೆಯ ನಿಬಂಧನೆಗಳಿಗೆ ಸಾರ್ವಜನಿಕ ಮಾಧ್ಯಮಗಲಾದ ದೂರದರ್ಶನ, ರೇಡಿಯೋ, ಮುದ್ರಣ ಮತ್ತು ಆನ್ಲೈನ್ ಮಾಧ್ಯಮಗಳ ಮೂಲಕ ನಿಯಮಿತವಾದ ವ್ಯಾಪಕ ಪ್ರಚಾರ ನೀಡುವುದು;

(2) ಮಾನಸಿಕ ಅಸ್ವಸ್ಥತೆಗೆ ಸಂಬಂಧಿಸಿದ ಕಳಂಕವನ್ನು ಕಡಿಮೆ ಮಾಡುವ ಕಾರ್ಯಕ್ರಮಗಳನ್ನು ಯೋಜಿಸುವುದು, ವಿನ್ಯಾಸಮಾಡುವುದು, ನಿಧಿ ಹೊಂದಿಸುವುದು ಮತ್ತು ಅವನ್ನು ಪರಿಣಾಮಕಾರಿ ರೀತಿಯಲ್ಲಿ ಜಾರಿಗೆ ತರುವುದು;

(3) ಪೊಲೀಸ್ ಅಧಿಕಾರಿಗಳು ಮತ್ತು ಸೂಕ್ತ ಸರ್ಕಾರದ ಇತರ ಅಧಿಕಾರಿಗಳು ಸೇರಿದಂತೆ ಸೂಕ್ತ ಸರ್ಕಾರಿ ಅಧಿಕಾರಿಗಳಿಗೆ ಈ ಕಾಯ್ದೆಯ ಅಡಿಯಲ್ಲಿ ಸಮಸ್ಯೆಗಳ ಬಗೆಗೆ ಆಗಾಗ್ಗೆ ಸೂಕ್ಷ್ಮತೆ ಮತ್ತು ಅರಿವು ಹೆಚ್ಚಿಸುವ ತರಬೇತಿಯನ್ನು ನೀಡುವುದು. "

75. 115ನೇ ಪರಿಚ್ಛೇದವು ಭಾರತೀಯ ದಂಡ ಸಂಹಿತೆಯ ಮತ್ತೊಂದು ಪರಿಚ್ಛೇದವಾದ 309ನೇ ಪರಿಚ್ಛೇದವನ್ನು ಬಹುಮಟ್ಟಿಗೆ ರದ್ದುಗೊಳಿಸುತ್ತದೆ. ಈ (115) ಪರಿಚ್ಛೇದವು ಈ ಕೆಳಗಿನಂತೆ ನುಡಿಯುತ್ತದೆ..

115. ಆತ್ಮಹತ್ಯೆ ಮಾಡಿಕೊಳ್ಳುವ ಪ್ರಯತ್ನದ ಸಂದರ್ಭದಲ್ಲಿ ತೀವ್ರ ಒತ್ತಡದ ಕಲ್ಪನೆ. (1) ಭಾರತೀಯ ದಂಡ ಸಂಹಿತೆಯ 309ನೇ ಪರಿಚ್ಛೇದ ಒಳಗೊಂಡಿರುವ ಎಲ್ಲ ವಿಚಾರಗಳನ್ನು ಹೊರತುಪಡಿಸಿ, ಆತ್ಮಹತ್ಯೆಗೆ ಪ್ರಯತ್ನಿಸುವ ಯಾವುದೇ ವ್ಯಕ್ತಿ, ಹಾಗಲ್ಲವೆಂದು ಸಾಬೀತುಪಡಿಸದಿರುವ ಸಂದರ್ಭದಲ್ಲಿ, ತೀವ್ರವಾದ ಒತ್ತಡವನ್ನು

ಎದುರಿಸಿದ್ದಾರೆಂದು ಭಾವಿಸಲಾಗುತ್ತದೆ ಮತ್ತು ಸದರಿ ಸಂಹಿತೆಯ ಅಡಿಯಲ್ಲಿ ಅವರನ್ನು ವಿಚಾರಣೆಗೊಳಪಡಿಸಬಾರದು ಮತ್ತು ಶಿಕ್ಷಿಸಬಾರದು.

(2) ಆತ್ಮಹತ್ಯೆಗೆ ಮತ್ತೆ ಪ್ರಯತ್ನಿಸುವ ಅಪಾಯವನ್ನು ತಗ್ಗಿಸಲು, ತೀವ್ರ ಒತ್ತಡವಿರುವ ಮತ್ತು ಆತ್ಮಹತ್ಯೆಗೆ ಪ್ರಯತ್ನಿಸಿದ ವ್ಯಕ್ತಿಯೊಬ್ಬನಿಗೆ ಆರೈಕೆ, ಚಿಕಿತ್ಸೆ ಮತ್ತು ಪುನರ್ವಸತಿ ಒದಗಿಸಲು ಸರ್ಕಾರವು ಸೂಕ್ತ ಕರ್ತವ್ಯವನ್ನು ಹೊಂದಿರಬೇಕು. "

76. ಶಾಸನ ಪುಸ್ತಕದಲ್ಲಿ 150ಕ್ಕೂ ಹೆಚ್ಚು ವರ್ಷಗಳ ಕಾಲ ಉಳಿದುಕೊಂಡಿದ್ದ ಅಮಾನವೀಯವಾದ 309ನೇ ಪರಿಚ್ಛೇದದ ಜಾಗದಲ್ಲಿ ಬಂದಿರುವ, 115ನೇ ಪರಿಚ್ಛೇದವು 309ನೇ ಪರಿಚ್ಛೇದವನ್ನು ಬಹುಪಾಲು ಅಸಮರ್ಥಗೊಳಿಸುತ್ತದೆ, ಮತ್ತು 309ನೇ ಪರಿಚ್ಛೇದಕ್ಕೆ ವಿರುದ್ಧವಾಗಿ, ಆತ್ಮಹತ್ಯೆಗೆ ಯತ್ನಿಸುವವರು ಅಪರಾಧ ಮಾಡಿದ್ದಾರೆ ಎಂದು ಬಗೆಯುವ ಬದಲು, ಅಂತಹವರು ಅತಿಯಾದ ಒತ್ತಡದಲ್ಲಿದ್ದರು ಎಂದು ನಂಬಿಕೊಂಡು ಅವರನ್ನು ಭಾರತೀಯ ದಂಡ ಸಂಹಿತೆಯ 309ನೇ ಪರಿಚ್ಛೇದಡಿಯಲ್ಲಿ ವಿಚಾರಣೆಗೊಳಪಡಿಸಿ ಶಿಕ್ಷಿಸುವ ಪ್ರಕ್ರಿಯೆ ನಡೆಸಲಾಗುವುದಿಲ್ಲ. ಬಹು ಮುಖ್ಯವಾಗಿ, ಅಂಥವರಿಗೆ ಆರೈಕೆ, ಚಿಕಿತ್ಸೆ ಮತ್ತು ಪುನರ್ವತಿ ಒದಗಿಸಿ ಅವರು ಮತ್ತೆ ಆತ್ಮಹತ್ಯೆಗೆ ಯತ್ನಿಸುವ ಅಪಾಯವನ್ನು ತಪ್ಪಿಸುವ ಗುರುತರ ಜವಾಬ್ದಾರಿ ಸರ್ಕಾರದ ಮೇಲಿರುತ್ತದೆ. 115ನೇ ಪರಿಚ್ಛೇದದ್ದಿಯಲ್ಲಿನ ಸಂಸತ್ತಿನ ಘೋಷಣೆಯನ್ನು ಪ್ರಸ್ತುತ ಸಾಂವಿಧಾನಿಕ ಮೌಲ್ಯಗಳನ್ನು ಪರಿಗಣಿಸಿ ಮಾಡಲಾಗಿದೆ ಮತ್ತು ಸದರಿ ಪರಿಚ್ಛೇದವು, ಆತ್ಮಹತ್ಯೆಗೆ ಯತ್ನಿಸುವ ವ್ಯಕ್ತಿಗಳನ್ನು ಶಿಕ್ಷಿಸುವ ಬದಲಿಗೆ ಸರ್ಕಾರ ಅವರ ವಿಚಾರದಲ್ಲಿ ಮಾನವೀಯ ನಿರ್ಧಾರಗಳನ್ನು ತೆಗೆದುಕೊಳ್ಳಬೇಕೆಂಬುದನ್ನು ಸದರಿ ಪರಿಚ್ಛೇದವು ಸ್ಪಷ್ಟಪಡಿಸುತ್ತದೆ.

77. ಕೊನೆಯದಾಗಿ ಸದರಿ ಕಾಯ್ದೆಯ 120ನೇ ಪರಿಚ್ಛೇದವು ಕೆಳಕಂಡಂತೆ ಹೇಳುತ್ತದೆ:-

"**120. ಕಾಯ್ದೆಯು ಅತಿಕ್ರಮೀಸುವ ಪರಿಣಾಮವನ್ನು ಹೊಂದಿರುತ್ತದೆ:** ಈ ಕಾಯ್ದೆಯ ನಿಬಂಧನೆಗಳು ಪ್ರಸ್ತುತ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಅಥವಾ ಈ ಕಾನೂನಿನಿಂದ ಹೊರತಾದ ಯಾವುದೇ ಕಾನೂನಿನ ದೆಸೆಯಿಂದ ಪ್ರಭಾವಹೊಂದಿರುವ ಯಾವುದೇ ಉಪಕರಣದಲ್ಲಿ ಒಳಗೊಂಡಿರುವ ಅಸಮಂಜಸ ವಿಚಾರಗಳ ಮೇಲೆ ಅತಿಕ್ರಮಿಸುವ ಪರಿಣಾಮವನ್ನು ಹೊಂದಿವೆ. "

78. ಕಾನೂನಿನ ಹಿಂದಿನ ತಾರ್ಕಿಕತೆ ಇಲ್ಲವಾದಾಗ, ಆ ಕಾನೂನೇ ಇಲ್ಲವಾಗುತ್ತದೆ ಎಂಬ ಅರ್ಥ ಕೊಡುವ ಲ್ಯಾಟಿನ್ ಭಾಷೆಯಾ ನಾಣ್ಣುಡಿಯಾ ಧ್ಯೇಯವನ್ನು ಈ ನ್ಯಾಯಾಲಯವು ಕಾನೂನು ರಚನೆಯ ನಿಯಮವೆಂದು ಒಪ್ಪಿಕೊಂಡಿರುವುದನ್ನು ಶ್ರೀ ಅಮರ ಮಠದ **ಶ್ರೀ ಶ್ರೀ ಶ್ರೀ ಸ್ವಾಮೀಜಿ v. ಆಯುಕ್ತರು, ಹಿಂದೂ ಧಾರ್ಮಿಕ ಮತ್ತು ದತ್ತಿ ಇಲಾಖೆ,** 1979 ಪ್ರಕರಣದ ತೀರ್ಪಿನ 29ನೇ ವಾಕ್ಯದಲ್ಲಿ ಮತ್ತು **ಪಂಜಾಬ್ ರಾಜ್ಯ ಸರ್ಕಾರ v. ದಿವಾನ್ಸ್ ಮಾಡರ್ನ್ ಬ್ರೆವರೀಸ್ ಲಿ,** (2004) ಪ್ರಕರಣದ 35ನೇ ವಾಕ್ಯದಲ್ಲಿ ನೋಡಬಹುದು. 377ನೇ ಪರಿಚ್ಛೇದವು ವಿಕ್ಟೋರಿಯನ್ ಯುಗದ ಉತ್ಪತ್ತಿಯಾಗಿದ್ದು, ಆ ಕಾಲದ ನೈತಿಕ ಮೌಲ್ಯಗಳನ್ನೇ ಪ್ರತಿಪಾದಿಸುತ್ತದೆ ಎಂಬುದನ್ನು ನಾವು ಮರೆಯಬಾರದು. ನಮ್ಮ ಹಲವು ತೀರ್ಪುಗಳಲ್ಲಿ ಮನಗಾಣಲಾಗಿರುವಂತೆ, ವಿಕ್ಟೋರಿಯನ್ ಯುಗದ ನೈತಿಕತೆಯು ಸಾಂವಿಧಾನಿಕ ನೈತಿಕತೆಗೆ ದಾರಿ ಮಾಡಿಕೊಡಬೇಕಿರುವುದು ಅಗತ್ಯವಾಗಿದೆ. ಸಾಂವಿಧಾನಿಕ ನೈತಿಕತೆಯೂ ಸಂವಿಧಾನದ ಆತ್ಮವೇ ಆಗಿದೆ ಎಂಬ ವಿಚಾರವನ್ನು ಸಂವಿಧಾನದ ತತ್ವಾದರ್ಶಗಳನ್ನು ಘೋಷಿಸುವ ಸಂವಿಧಾನದ ಪ್ರಸ್ತಾವನೆಯಲ್ಲಿ ಕಾಣಬಹುದಾಗಿದೆ. ಅಲ್ಲದೆ ಈ ಅಂಶವು ವ್ಯಕ್ತಿಗಳ ಘನತೆಯನ್ನು ನಿಶ್ಚಿತಪಡಿಸುವ ಸಂವಿಧಾನದ 3ನೇ ಭಾಗದ ಕಾಯ್ದೆಗಳಲ್ಲಿ ಅಡಕವಾಗಿರುವುದನ್ನು ಗಮನಿಸಬಹುದು. 377ನೇ ಪರಿಚ್ಛೇದದ ಹಿಂದಿರುವ ತಾತ್ವಿಕತೆಯಾದ ವಿಕ್ಟೋರಿಯನ್ ನೈತಿಕತೆಯೂ ಬಹು ಹಿಂದೆಯೇ ಇಲ್ಲವಾಗಿದ್ದು, ಆ ಪರಿಚ್ಛೇದವನ್ನು ಮುಂದುವರಿಸುವ ಅಗತ್ಯ ಕಂಡುಬರುತ್ತಿಲ್ಲ. ಈ ತೀರ್ಪಿನಲ್ಲಿ ಈ ಮೊದಲು

ಉಲ್ಲೇಖಿಸಲಾಗಿರುವ ಜಸ್ಟೀಸ್ ಹೂಮೇಸ್ರವರ "ಕಾನೂನಿನ ಹಿಂದಿನ ತಾರ್ಕಿಕತೆಯು ಇಲ್ಲವಾಗಿರುವಾಗ, ಆ ಕಾನೂನು ಕೇವಲ ಹಿಂದಿನ ಕಾನೂನೆಂಬ ಕಾರಣಕ್ಕೆ ಮುಂದುವರೆಯಬಾರದು" ಎಂಬ ಹೇಳಿಕೆಯನ್ನು ಇಲ್ಲಿ ಅನ್ವಯಿಸಬಹುದು.

79. **ಪುಟ್ಟಸ್ವಾಮಿ** (ಮೇಲ್ಕಂಡ) ಪ್ರಕರಣದಲ್ಲಿ, ಸಂವಿಧಾನದ 14, 19 ಮತ್ತು 21ನೇ ಕಲಮುಗಳಡಿಯಲ್ಲಿ ಪ್ರತಿ ಭಾರತೀಯ ಪ್ರಜೆಗೆ ನೀಡಲಾಗಿರುವ ತಮ್ಮಿಷ್ಟದಂತೆ ಘನತೆಯಲ್ಲಿ ಬದುಕುವ ಹಕ್ಕು ಮತ್ತು ಖಾಸಗೀ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಹಾಯವಾಗುವ ಖಾಸಗೀತನದ ಹಕ್ಕಿಗಳಿಗೆ ಸಂಬಂಧಿಸಿದಂತೆ ನಾವುಗಳು ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ, 377ನೇ ಪರಿಚ್ಛೇದವು ಒಪ್ಪಿಗೆಯಿರುವ ಸಮಾನ ಲಿಂಗದ ವಯಸ್ಕ ವ್ಯಕಿಗಳಿಗೆ ಅನ್ವಯಿಸುತ್ತದೆ, ಮತ್ತು ಅವರ ಲೈಂಗಿಕ ನಿಲುವನ್ನು ಅರ್ಥ ಮಾಡಿಕೊಂಡೂ ಶತಮಾನಗಳಿಂದ ಅವರಿಗಂಟಿಕೊಂಡಿರುವ ಕಳಂಕವನ್ನು ಅಳಿಸುವ ಬದಲಿಗೆ ಅವರನ್ನು ಶಿಕ್ಷಿಸಿ ಅಪಮಾನಿಸುತ್ತದೆ ಎಂದು ಹೇಳಬಹುದಾಗಿದೆ.

80. ಗೋಡೆ ಮೇಲಿನ ಬರೆಹದಷ್ಟೇ ಸ್ಪಷ್ಟವಾಗಿರುವ ಈ ವಿಚಾರವನ್ನು ಅರಿತುಕೊಂಡಿರುವ ಭಾರತ ಸರ್ಕಾರವು, ತಾನು ಸಲ್ಲಿಸಿರುವ ಅಫಿಡವಿಟ್ಟಿನಲ್ಲಿ ಅರ್ಜಿದಾರರನ್ನು ವಿರೋಧಿಸದೇ, ಈ ವಿಚಾರವನ್ನು ನ್ಯಾಯಾಲಯದ ವಿವೇಚನೆಗೆ ಬಿಟ್ಟಿದೆ. ಕೆಲ ಮಧ್ಯಸ್ತಿಕೆದಾರರು, ಒಪ್ಪಿಗೆಯಿರುವ ವಯಸ್ಕರಿಗೆ ಅನ್ವಯಿಸುವ 377ನೇ ಪರಿಚ್ಛೇದವು ಸಮಲೈಂಗಿಕರನ್ನು ನೇರವಾಗಿ ನಿರ್ಬಂಧಿಸುವುದಿಲ್ಲವಾದ್ದರಿಂದ ಸದರಿ ಪರಿಚ್ಛೇದವನ್ನು ಈಗಿನ ಸ್ವರೂಪದದಲ್ಲೇ ಉಳಿಸಿಕೊಳ್ಳಬೇಕು ಎಂದು ವಾದಮಾಡಿರುತ್ತಾರೆ. ಪರಿಚ್ಛೇದದಲ್ಲಿ ಉಲ್ಲೇಖಿಸಲಾಗಿರುವಂತೆ ಶಿಶ್ನದ ಒಳತೂರಿಸುವಿಕೆ ನಡೆಯದೇ ಇದ್ದರೆ, ಅಪರಾಧ ನಡೆದಂತೆ ಆಗುವುದಿಲ್ಲ. ಸದರಿ ಪರಿಚ್ಛೇದವು ಸಮಾಜದ ದೊಡ್ಡ ವರ್ಗಗಳಲ್ಲಿ ಪ್ರಚಲಿತವಾಗಿರುವ ಸಾಮಾಜಿಕ ನಿಯಮಗಳ ಸಂಸದೀಯ ಅಭಿವ್ಯಕ್ತಿಯಾಗಿರುವುದರಿಂದ ಅದನ್ನು ಉಳಿಸಿಕೊಳ್ಳಬೇಕು ಎಂದು ಕೂಡ ಅವರು ಮನವಿ ಮಾಡಿಕೊಂಡಿರುತ್ತಾರೆ. ಅವರ ಪ್ರಕಾರ, ಸಾರ್ವಜನಿಕ ಜೀವನದಲ್ಲಿ ಅಸಮ ನೈತಿಕತೆಯನ್ನು ಪ್ರತಿಪಾದಿಸುವ ಸರ್ಕಾರದ ತೀವ್ರವಾದ ಮತ್ತು ಅಸಮಂಜಸವಲ್ಲದ ಹಿತಾಸಕ್ತಿಯನ್ನು ಈ ಪರಿಚ್ಛೇದ ಬೆಂಬಲಿಸುತ್ತದೆ.. ಸಾಂವಿಧಾನಿಕ ನ್ಯಾಯಕ್ಕೆ ಸಂಬಂಧ ಪಟ್ಟಂತೆ ಈ ನ್ಯಾಯಾಲಯದಲ್ಲಿ ನಡೆದ ಕೆಲ ವಿದ್ಯಮಾನಗಳು ಮತ್ತು ಅಂತಹ ವ್ಯಕ್ತಿಗಳ ಪರಿಸ್ಥಿತಿಗೆ ಮಾನಸಿಕ ಆರೋಗ್ಯ ಕಾಯ್ದೆ, 2017ರ ಕೆಲ

ನಿಯಮಗಳಲ್ಲಿ ಸಿಕ್ಕಿರುವ ಸಂಸದೀಯ ಮನ್ನಣೆಯನ್ನು ಗಮನಿಸಿದರೆ, ನಾವು ಮೇಲೆ ಹೇಳಿರುವಂತೆ ಸಾಮಾಜಿಕ ನೈತಿಕತೆಯ ಜಾಗದಲ್ಲಿ ಸಾಂವಿಧಾನಿಕ ನೈತಿಕತೆಯನ್ನು ಸ್ಥಾಪಿಸುವುದು ಸಾಂವಿಧಾನಿಕ ನ್ಯಾಯಾಲಯದ ವ್ಯಾಪ್ತಿಯಲ್ಲಿ ಉಳಿಯದೇ ಇರಬಹುದು ಎಂಬುದು ನಮ್ಮ ಕಾಳಜಿ. **ಎಸ್. ಖುಷ್ಬೂ v. ಕಣ್ಣಿಯಮ್ಮಾಳ್ ಮತ್ತೊಬ್ಬರು.,** (2010), ಪ್ರಕರಣದ ತೀರ್ಪಿನ 46 ಮತ್ತು 50ನೇ ವಾಕ್ಯಗಳಲ್ಲಿ ಈ ನ್ಯಾಯಾಲಯ ಸ್ಪಷ್ಟಪಡಿಸಿರುವಂತೆ, ಸಾಮಾಜಿಕ ನೈತಿಕತೆಯ ಪರಿಕಲ್ಪನೆಗಳು ವ್ಯಕ್ತಿನಿಷ್ಠವಾಗಿದ್ದು, ಅಪರಾಧೀ ಕಾನೂನಿನ ಮೂಲಕ ವ್ಯಕ್ತಿಗಳ ಖಾಸಗೀ ಸ್ವಾಯತ್ತತೆಯ ವಿಚಾರಗಳಲ್ಲಿ ಮೂಗುತೂರಿಸಲು ಬರುವುದಿಲ್ಲ. ನೈತಿಕತೆ ಮತ್ತು ಅಪರಾಧಗಳು ಒಂದನ್ನೊಂದು ಒಳಗೊಳ್ಳುವುದಿಲ್ಲ, ಅಲ್ಲದೇ ಭೂಮಿ ಮೇಲಿನ ಪಾಪಗಳನ್ನು ಸರ್ಕಾರ ಸ್ಥಾಪಿಸಿರುವ ನ್ಯಾಯಾಲಯಗಳ ಮೂಲಕ ಶಿಕ್ಷಿಸಲು ಸಾಧ್ಯವಿಲ್ಲ; ಈ ಪ್ರಪಂಚದಲ್ಲಿ ಕೇವಲ ಅಪರಾಧಗಳನ್ನು ಮಾತ್ರ ಶಿಕ್ಷಿಸಲು ಸಾಧ್ಯ. ಪಾಪ ಮತ್ತು ಅಪರಾಧಗಳನ್ನು ಒಂದೇ ಎಂದು ಭಾವಿಸಿರುವ 377ನೇ ಪರಿಚ್ಛೇದವು ವಯಸ್ಕ ಸಮಲೈಂಗಿಕ ವ್ಯಕ್ತಿಗಳಿಗೆ ಅನ್ವಯವಾಗುತ್ತಿದೆ, ಇದೇ ಕಾರಣಕ್ಕೆ ಅದನ್ನು ರದ್ದುಪಡಿಸಬೇಕಿದೆ.

81. ಸಮಾಜದಲ್ಲಿ ಯಾವುದೇ ಬದಲಾವಣೆಗಳಾದರೆ ಚುನಾಯಿತ ಪ್ರತಿನಿಧಿಗಳು ಅದಕ್ಕೆ ಸಂಬಂಧಿಸಿದ ಕಾನೂನುಗಳನ್ನು ತಿದ್ದುವ ಮೂಲಕ ಅಂತಹ ಬದಲಾವಣೆಯನ್ನು ವ್ಯಕ್ತಿಪಡಿಸಬಹುದು ಎಂಬುದು ಮಧ್ಯಸ್ತಿಕೆದಾರರ ಪರವಾದ ಮತ್ತೊಂದು ವಾದ. ಆ ಪ್ರಕಾರವಾಗಿ, 377ನೇ ಪರಿಚ್ಛೇದದ ವ್ಯಾಪ್ತಿಯಿಂದ ಕೆಲ ವ್ಯಕ್ತಿಗಳನ್ನು ಹೊರತರುವುದು ಸಂಸತ್ತಿನ ವ್ಯಾಪ್ತಿಯಲ್ಲಿ ಬರುತ್ತದೆ, ಅಲ್ಲದೇ, ಸಾಮಾಜಿಕ ನಿಲುವುಗಳನ್ನು ಬದಲಾಯಿಸುವ ಜವಾಬ್ದಾರಿಯನ್ನು ಈ ನ್ಯಾಯಾಲಯ ತೆಗೆದುಕೊಳ್ಳಲು ಹೋಗಬಾರದು ಎಂಬುದು ಕೂಡಾ ಅವರ ವಾದ. ಈ ರೀತಿಯ ವಾದವನ್ನು ಸ್ಪಷ್ಟವಾಗಿ ತಿರಸ್ಕರಿಸಬೇಕಾಗಿದೆ. ವ್ಯಕ್ತಿಗಳ ಸ್ವಾತಂತ್ರ್ಯ ಮತ್ತು ಘನತೆಯ ವಿಚಾರಗಳನ್ನು ಬಹುಸಂಖ್ಯಾತ ಸರ್ಕಾರದ ಹಸ್ತಕ್ಷೇಪಗಳಿಂದ ದೂರವಿಟ್ಟು, 'ಗುಪ್ತವಾದ ಮತ್ತು ಸಮಾಜದಿಂದ ದೂರವಾಗಿರುವ' ಅಲ್ಪಸಂಖ್ಯಾತರ ಹಕ್ಕುಗಳನ್ನು ರಕ್ಷಿಸಲು ಸಾಂವಿಧಾನಿಕ ನೈತಿಕತೆಯನ್ನು ಜಾರಿಗೊಳಿಸುವ ಉದ್ದೇಶಾದಿಂದಲೇ ಭಾರತೀಯ ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳ ಅಧ್ಯಾಯವನ್ನು ಸೇರಿಸಲಾಗಿದೆ. ಈ ನ್ಯಾಯಾಲಯವು ಪ್ರಜೆಗಳ ಮೂಲಭೂತ ಹಕ್ಕುಗಳ ರಕ್ಷಕನಾಗಿರುವುದರಿಂದ, ಅಂತಹುದೇ ಒಂದು ಅಲ್ಪಸಂಖ್ಯಾತ ಸಮುದಾಯ ಈ

ನ್ಯಾಯಾಲಯದ ಮೆಟ್ಟಿಲೇರಿದೆ. ಈ ಮೂಲಭೂತ ಹಕ್ಕುಗಳು ಚುನಾವಣೆಯ ಫಲಿತಾಂಶಗಳನ್ನು ಅವಲಂಬಿಸಿಲ್ಲ ಮತ್ತು ಸಾಮಾಜಿಕ ನೈತಿಕತೆಯ ವಿಚಾರಗಳಲ್ಲಿ ಯಾವುದನ್ನು ಕಡ್ಡಾಯವಾಗಿ ಪಾಲಿಸಬೇಕು ಎಂಬುದನ್ನು ನಿರ್ಧರಿಸುವುದು ಬಹುಸಂಖ್ಯಾತ ಸರ್ಕಾರದ ಕೆಲಸವಲ್ಲ. ಭಾರತದ ಮಟ್ಟಿಗೆ ಹೇಳುವುದಾದರೆ, ಮೂಲಭೂತ ಹಕ್ಕುಗಳ ಅಧ್ಯಾಯ ಸಾಂವಿಧಾನಿಕತೆಯ ವಿಶ್ವದ ಧ್ರುವತಾರೆಯಂತೆ ಎನ್ನಬಹುದಾಗಿದೆ. ಹಲವು ಅಸ್ಥಿರ ಬಹುಸಂಖ್ಯಾತ ಸರ್ಕಾರಗಳು ಪ್ರಜೆಗಳ ಮೇಲೆ ಸಾಮಾಜಿಕ ನೈತಿಕತೆಯನ್ನು ಹೇರಲು ನಡೆಸುವ ತಂತ್ರಗಳನ್ನು ಸಾಂವಿಧಾನಿಕ ನೈತಿಕತೆ ವಿಫಲಗೊಳಿಸುತ್ತದೆ. ಹಲವು ಅಸ್ಥಿರವಾದ ಬಹುಸಂಖ್ಯಾತ ಪ್ರಭುತ್ವಗಳು ಸಾಮಾಜಿಕ ನೈತಿಕತೆಯ ದೃಷ್ಟಿಕೋನಗಳನ್ನು ಪ್ರಜೆಗಳ ಮೇಲೆ ಹೇರಲು ಹೊರಟಾಗ, ಸಾಂವಿಧಾನಿಕ ನೈತಿಕತೆಯೂ ಅದನ್ನು ತಡೆಗಟುತ್ತದೆ

82. ಸಂವಿಧಾನದ 14ನೇ ಕಲಮಿಗೆ ಸಂಬಂಧಿಸಿದಂತೆ ಈ ನ್ಯಾಯಾಲಯವು ಶಾಯರಾ ಬಾನೋ v. ಭಾರತ ಸರ್ಕಾರ, (2017) ಪ್ರಕರಣದ ತೀರ್ಪಿನ 101ನೇ ವಾಕ್ಯದಲ್ಲಿ ತಿಳಿಸಿರುವಂತೆ, ಶಾಸನದ ಕಾನೂನೊಂದು ದುರುದ್ದೇಶಪೀಡಿತ ಮತ್ತು ಅತಾರ್ಕಿಕವಾಗಿದ್ದರೆ, ಮತ್ತು/ಅಥವಾ ಅದಕ್ಕೆ ಸೂಕ್ತ ನಿರ್ಣಾಯಕ ಸಿದ್ಧಾಂತದ ಹಿನ್ನೆಲೆಯಿಲ್ಲದಿದ್ದಾರೆ, ಅಲ್ಲದೆ ಅದರಲ್ಲಿ ಅತಿರೇಕ ಹಾಗೂ ಅಸಮಂಜಸತೆ ಕಂಡುಬಂದರೆ ಅದನ್ನು ಸ್ಪಷ್ಟ ನಿರಂಕುಶತ್ವದ ಆಧಾರದಲ್ಲಿ ರದ್ದುಗೊಳಿಸಬಹುದು. 377ನೇ ಪರಿಚ್ಛೇದವು ಒಪ್ಪಿಗೆಯ ಸಮಲೈಂಗಿಕ ಕ್ರಿಯೆಗಳನ್ನು ರದ್ದುಪಡಿಸುವುದು ಸ್ಪಷ್ಟವಾದ ನಿರಂಕುಶತ್ವವನ್ನು ಸೂಚಿಸುತ್ತದೆ ಎಂಬುದನ್ನು ನಾವು ಮನಗಂಡಿದ್ದೀವೆ. ಆಧುನಿಕ ಮನಃಶಾಸ್ತ್ರೀಯ ಅಧ್ಯಯನಗಳು, ಹಾಗೂ ಸಮಲೈಂಗಿಕ ಮತ್ತು ಲಿಂಗ ಪರಿವರ್ತಿತ ವ್ಯಕ್ತಿಗಳು ಮನೋರೋಗಿಗಳಲ್ಲವಾದ್ದರಿಂದ ಅವರು ಶಿಕ್ಷೆಗೆ ಯೋಗ್ಯರಲ್ಲ ಎಂಬುದನ್ನು ಒಪ್ಪಿಕೊಳ್ಳುವ ಹೊಸ ಕಾಯ್ದೆಗಳ ಹಿನ್ನೆಲೆಯಲ್ಲಿ, ಸದರಿ ಪರಿಚ್ಛೇದವು ದುರುದ್ದೇಶಪೀಡಿತ ಮತ್ತು ಅತಾರ್ಕಿಕ ಕಾನೂನಾಗಿದೆ ಎಂಬುದನ್ನು ಎತ್ತಿಹಿಡಿಯಬೇಕಿದೆ. ಅಲ್ಲದೇ ಅಂತಹ ವ್ಯಕ್ತಿಗಳನ್ನು ಜೀವಾವಧಿವರೆಗಿನ ಸೆರೆವಾಸದ ಶಿಕ್ಷೆಗೆ ಒಳಪಡಿಸುವುದು ಅತಿರೇಕವು ಅಸಾಮಂಜಸವು ಆಗಿದೆ ಮತ್ತು, ಸದರಿ ಪರಿಚ್ಛೇದವನ್ನು ಅಂತಹ ವ್ಯಕ್ತಿಗಳಿಗೆ ಅನ್ವಯಿಸಿದಾಗ ಅದು ಸಂವಿಧಾನದ 14 ಮತ್ತು 21ನೇ ಕಲಮುಗಳ ಸ್ಪಷ್ಟ ಉಲ್ಲಂಘನೆಯಾಗುತ್ತದೆ. ಸದರಿ ಪರಿಚ್ಛೇದ ಭಾರತದ ಪ್ರಜೆಗಳ ಮೇಲೆ ಹೇರ ಹೊರಟಿರುವ ವಿಕ್ಟೋರಿಯನ್ ನಿಯಮಗಳಿಗೂ, ಆ ಯುಗದ ನಂತರ ನಡೆದ ಘಟನೆಗಳಿಗೂ

ತಾಳಮೇಳವಿಲ್ಲದಿರುವುದರಿಂದ, ಸಮಲೈಂಗಿಕ ಜೋಡಿಗಳು ಮತ್ತು ಲಿಂಗ ಪರಿವರ್ತಿತರನ್ನು ಶಿಕ್ಷಿಸುವ ಆ ಪರಿಚ್ಛೇದದ ಉದೇಶದಲ್ಲಿ ಭೇದಭಾವ ಕಾಣಿಸುತ್ತದೆ.

83. ನ್ಯಾ. ನಾರಿಮನ್ ರವರು ಶ್ರೇಯಾ ಸಿಂಘಾಲ್ v. ಭಾರತ ಸರ್ಕಾರ, (2015) ಪ್ರಕರಣದಲ್ಲಿ ತಿಳಿಸಿರುವಂತೆ, ಅಂತಹ ಕಾನೂನಿನ ಆಘಾತಕಾರಿ ಪರಿಣಾಮದ ಫಲವಾಗಿ 19(1)(ಎ) ಕಲಮಿನಡಿಯಲ್ಲಿನ ಖಾಸಗೀತನದ ಹಕ್ಕು ಸಹ ಉಲ್ಲಂಘನೆಗೊಳ್ಳುತ್ತದೆ. ಅಂತಹ ಉಲ್ಲಂಘನೆಯ ಮೂಲಕ, ಯಾವುದೇ ಬಗೆಯ ನೈತಿಕತೆ ಅಥವಾ ಸಭ್ಯತೆಯನ್ನು ಕಾಪಾಡುವುದನ್ನು ಊಹಿಸಿಕೊಳ್ಳಲು ಆಗುವುದಿಲ್ಲ (87 ರಿಂದ 94ನೇ ವಾಕ್ಯಗಳನ್ನು ನೋಡಿರಿ).

84. ಕೆಳಗೆ ಚರ್ಚಿಸಲಾಗಿರುವ ಲೈಂಗಿಕ ನಿಲುವು ಮತ್ತು ಲೈಂಗಿಕ ಅಸ್ಮಿತೆಗೆ ಅಂತಾರಾಷ್ಟ್ರೀಯ ಮಾನವಾಧಿಕಾರ ಕಾನೂನನ್ನು ಅನ್ವಯಿಸುವ ಕುರಿತಾದ ಯೋಗ್ಯಾಕಾರ್ತಾ ಸಿಧ್ಧಾಂತಗಳನ್ನು ನಾಲ್ಸಾ (ಮೇಲ್ಕಂಡ) ಪ್ರಕರಣದಲ್ಲಿ ನ್ಯಾ. ರಾಧಾಕೃಷ್ಣನ್ ರವರು ಉಲ್ಲೇಖಿಸಿದ್ದು, ಭಾರತದ ಪ್ರಜೆಗಳ ಮತ್ತು ಈ ನ್ಯಾಯಾಲಯಕ್ಕೆ ಬರುವ ವ್ಯಕ್ತಿಗಳ ಮೂಲಭೂತ ಹಕ್ಕುಗಳನ್ನು ಸಂವಿಧಾನದ ದೃಷ್ಟಿಕೋನದಿಂದ ನೋಡಬೇಕು ಎಂಬ ನಮ್ಮ ವಿಚಾರಕ್ಕೆ ಪುಷ್ಟಿ ಒದಗಿಸಿದೆ ಎಂಬುದನ್ನು ಸಹ ನಾವು ತಿಳಿಸಬಯಸುತ್ತೇವೆ.

85. ಅಂತಾರಾಷ್ಟ್ರೀಯ ನ್ಯಾಯವಾದಿಗಳ ಆಯೋಗ ಮತ್ತು ಅಂತಾರಾಷ್ಟ್ರೀಯ ಮಾನವಾಧಿಕಾರ ಸೇವೆಗಳು, ಹಲವು ಮಾನವಾಧಿಕಾರ ಸಂಸ್ಥೆಗಳ ಒಕ್ಕೂಟಗಳ ಪರವಾಗಿ ಲೈಂಗಿಕ ನಿಲುವು ಮತ್ತು ಲೈಂಗಿಕ ಅಸ್ಮಿತೆಯ ಆಧಾರದಮೇಲೆ ನಡೆಯುವ ಮಾನವಾಧಿಕಾರಗಳ ಉಲ್ಲಂಘನೆಗೆ ಅನ್ವಯವಾಗುವ ಅಂತಾರಾಷ್ಟ್ರೀಯ ಕಾನೂನುಗಳನ್ನು ಅಭಿವೃಧ್ಧಿಪಡಿಸಿ, ಸರ್ಕಾರದ ಮಾನವಾಧಿಕಾರ ಬಾಧ್ಯತೆಗಳನ್ನು ಸ್ಪಷ್ಟ ಮತ್ತು ಸಮಂಜಸಗೊಳಿಸುವ ಯೋಜನೆಯನ್ನು ಕೈಗೆತ್ತಿಕೊಂಡವು

86. ಮಾನವಾಧಿಕಾರ ವಿಶೇಷಜ್ಞರ ವಿಶೇಷವಾದ ಗುಂಪೊಂದು ಈ ಸಿಧ್ಧಾಂತಗಳನ್ನು ಸಿದ್ದಪಡಿಸಿ, ಅಭಿವೃಧ್ಧಿಪಡಿಸಿ ಚರ್ಚಿಸಿತು. ಇಂಡೋನೇಷ್ಯಾದ, ಯೋಗ್ಯಾಕಾರ್ತಾದಲ್ಲಿರುವ ಗಡ್ಜಾಮಾದಾ ವಿಶ್ವವಿದ್ಯಾಲಯದಲ್ಲಿ 6 ರಿಂದ 9 ನವೆಂಬರ್ 2006ರಲ್ಲಿ, 25 ದೇಶಗಳ ವಿಭಿನ್ನ ಹಿನ್ನೆಲೆಯಿಂದ ಬಂದ ಮತ್ತು ಮಾನವಾಧಿಕಾರಗಳಲ್ಲಿ ವಿದ್ವತ್ತು ಹೊಂದಿದ್ದ ಪ್ರಖ್ಯಾತ ತಜ್ಞರು ಪಾಲ್ಗೊಂಡಿದ್ದ ಸಭೆಯ ನಂತರ

ಲೈಂಗಿಕ ನಿಲುವು ಮತ್ತು ಲೈಂಗಿಕ ಅಸ್ಮಿತೆಗೆ ಅಂತಾರಾಷ್ಟ್ರೀಯ ಮಾನವಾಧಿಕಾರ ಕಾನೂನನ್ನು ಅನ್ವಯಿಸುವ ಕುರಿತಾದ ಯೋಗ್ಯಾಕಾರ್ತಾ ಸಿದ್ಧಾನ್ತಗಳನ್ನು, ಎಂದರೆ "ಪ್ರಿನ್ಸಿಪಲ್ಸ್ ಆನ್ ಡಿ ಏಪ್ಲಿಕೆಶನ್ ಆಫ್ ಇನ್ಟರ್ನ್ಯಶನಲ್ ಹ್ಯೂಉಮನ ರೈಟ್ಸ್ ಲಾ ಇನ್ ರಿಲಾಶನ್ ಟು ಸೆಕ್ಷುವಲ್ ಊರಿಯೆನ್ಟೀಶನ್ ಅನ್ಡ್ ಜೆನ್ಡರ್ ಐಡೆನ್ಟಿಟಿಯನ್ನು ಒಮ್ಮತದಿಂದ ಒಪ್ಪಿಕೊಳ್ಳಲಾಯಿತು.

87. ಯೋಗ್ಯಾಕಾರ್ತಾ ಸಿಧ್ಧಾಂತಗಳು ಮತ್ತು ಅದರ ಮುನ್ನುಡಿಯ ಕೆಲವು ಸಾಲುಗಳು ಈ ಕೆಳಗಿನಂತಿವೆ:

**"ಪ್ರಸ್ತಾವನೆ**

ನಾವು, ಅಂತಾರಾಷ್ಟ್ರೀಯ ಮಾನವ ಹಕ್ಕುಗಳ ಕಾನೂನು ಮತ್ತು ಲೈಂಗಿಕ ನಿಲುವು ಮತ್ತು ಲಿಂಗಾಧರಿತ ಆಸ್ಮಿತೆಯ ಅಂತಾರಾಷ್ಟೀಯ ತಜ್ನರ ಸಮಿತಿ,

XX

XX

ಲೈಂಗಿಕ ನಿಲುವನ್ನು ವಿಭಿನ್ನ ಲಿಂಗದ ಅಥವಾ ಒಂದೇ ಲಿಂಗದ ಅಥವಾ ಒಂದಕ್ಕಿಂತ ಹೆಚ್ಚು ಲಿಂಗದ ವ್ಯಕ್ತಿಗಳೆಡೆಗೆ, ಒಬ್ಬ ವ್ಯಕ್ತಿಯಲ್ಲಿರುವ ದೀರ್ಘಕಾಲೀನ ದೈಹಿಕ, ಪ್ರಣಯದ ಮತ್ತು/ ಅಥವಾ ಭಾವನಾತ್ಮಕ ಸೆಳೆತ ಅಥವಾ ಅವರೊಂದಿಗಿನ ಅನ್ಯೋನ್ಯ ಲೈಂಗಿಕ ಸಂಬಂಧ ಎಂದು ಅರ್ಥೈಸಿಕೊಳ್ಳುವುದು

XX

XX

ಇಂಡೋನೇಷ್ಯಾದ ಯೊಗ್ಯಾಕಾರ್ತಾದಲ್ಲಿ, 6ರಿಂದ 9ನೇ ನವೆಂಬರ್, 2006ರ ವರೆಗೆ ನಡೆದ ತಜ್ಞರ ಸಭೆಯ ನಂತರ, ಈ ನಿಯಮಗಳನ್ನು ಈ ಮೂಲಕ ಅಳವಡಿಸಿಕೊಳ್ಳುತ್ತಿದ್ದೇವೆ:

**1. ಮಾನವ ಹಕ್ಕುಗಳ ಸಾರ್ವತ್ರಿಕ ಆನಂದದ ಹಕ್ಕು -** ಎಲ್ಲಾ ಮಾನವರು ಮುಕ್ತವಾಗಿ ಮತ್ತು ಸಮಾನವಾದ ಘನತೆ ಮತ್ತು ಹಕ್ಕುಗಳೊಂದಿಗೆ ಜನಿಸುತ್ತಾರೆ. ಎಲ್ಲಾ ಲೈಂಗಿಕ ನಿಲುವು ಮತ್ತು ಲಿಂಗಾಧರಿತ ಅಸ್ಮಿತೆಗಳ ಮಾನವರು ಎಲ್ಲಾ ಮಾನವ ಹಕ್ಕುಗಳ ಸಂಪೂರ್ಣ ಆನಂದಕ್ಕೆ ಅರ್ಹರಾಗಿರುತ್ತಾರೆ.

**ಸರ್ಕಾರಗಳ ಬಧ್ಧತೆಗಳು:**

(1) ತಮ್ಮ ರಾಷ್ಟ್ರೀಯ ಸಂವಿಧಾನಗಳಲ್ಲಿ ಅಥವಾ ಇತರ ಸೂಕ್ತ ಶಾಸನಗಳಡಿಯಲ್ಲಿ ಎಲ್ಲಾ ಮಾನವ ಹಕ್ಕುಗಳ ಸಾರ್ವತ್ರಿಕತೆ, ಪರಸ್ಪರ ಸಂಬಂಧ, ಪರಸ್ಪರ ಅವಲಂಬನೆ ಮತ್ತು ಅಖಂಡತೆಯ ತತ್ವಗಳನ್ನು ಅಡಕಗೊಳಿಸುವುದು ಮತ್ತು ಎಲ್ಲಾ ಮಾನವ ಹಕ್ಕುಗಳ ಸಾರ್ವತ್ರಿಕ ಆನಂದದ ಪ್ರಾಯೋಗಿಕ ಈಡೇರಿಕೆಯನ್ನು ಖಚಿತಪಡಿಸಿಕೊಳ್ಳುವುದು;

(2) ಶಾಸನವೊಂದು ಎಲ್ಲಾ ಮಾನವ ಹಕ್ಕುಗಳ ಸಾರ್ವತ್ರಿಕ ಆನಂದದ ಆಶಯದೊಂದಿಗೆ ತಾಳೆಯಾಗುವುದನ್ನು ಖಚಿತಪಡಿಸಿಕೊಳ್ಳಲು ಅಪರಾಧೀ ಕಾನೂನು ಸೇರಿದಂತೆ ಯಾವುದೇ ಶಾಸನವನ್ನು ತಿದ್ದುಪಡಿಮಾಡುವುದು;

(3) ಲೈಂಗಿಕ ನಿಲುವು ಅಥವಾ ಲಿಂಗಾಧಾರಿತ ಅಸ್ಮಿತೆಯಬಗೆಗೆ ಎಲ್ಲಾ ವ್ಯಕ್ತಿಗಳು ಎಲ್ಲಾ ಮಾನವ ಹಕ್ಕುಗಳ ಸಂಪೂರ್ಣವಾಗಿ ಆನಂದಿಸುವುದನ್ನು ಉತ್ತೇಜಿಸಲು ಮತ್ತು ವೃದ್ಧಿಸಲು ಶಿಕ್ಷಣ ಮತ್ತು ಜಾಗೃತಿ ಕಾರ್ಯಕ್ರಮಗಳನ್ನು ಕೈಗೊಳ್ಳುವುದು;

(4) ಸರ್ಕಾರೀ ಕಾರ್ಯನೀತಿ ಸಂಯೋಜನೆ ಮತ್ತು ನಿರ್ಧಾರ ತೆಗೆದುಕೊಳ್ಳುವ ವ್ಯವಸ್ಥೆಯೊಂದಿಗೆ ಲೈಂಗಿಕ ನಿಲುವು ಮತ್ತು ಲಿಂಗಾಧಾರಿತ ಅಸ್ಮಿತೆ ಸೇರಿದಂತೆ ಮಾನವ ಗುರುತಿನ ಪರಸ್ಪರ ಸಂಬಂಧ ಮತ್ತು ಬೇರ್ಪಡಿಸಲಾಗದ ಸ್ವರೂಪವನ್ನು ಗುರುತಿಸುವ ಬಹುತ್ವದ ಕಾರ್ಯವಿಧಾನವನ್ನು ಒಂದುಗೂಡಿಸುವುದು.

**2. ಸಮಾನತೆ ಮತ್ತು ತಾರತಮ್ಯ-ವಿರೋಧೀ ಹಕ್ಕುಗಳು.-** ಪ್ರತಿಯೊಬ್ಬರೂ ಲೈಂಗಿಕ ನಿಲುವು ಅಥವಾ ಲಿಂಗಾಧಾರಿತ ಅಸ್ಮಿತೆಯನ್ನಾಧರಿಸಿದ ತಾರತಮ್ಯವಿಲ್ಲದೆ ಎಲ್ಲಾ ಮಾನವ ಹಕ್ಕುಗಳನ್ನು ಆನಂದಿಸುವ ಅರ್ಹತೆಯಿದೆ. ಪ್ರತಿಯೊಬ್ಬರಿಗೂ ಕಾನೂನಿನೆದುರಿನ ಸಮಾನತೆ ಮತ್ತು ಕಾನೂನಿನ ಸಮಾನ ರಕ್ಷಣೆಯನ್ನು ಯಾವುದೇ ಮೇಲುಕೀಳಿಲ್ಲದೆ ಪಡೆಯುವ ಅಧಿಕಾರವಿದೆ, ಮತ್ತಿಲ್ಲಿ ಅದು ಇತರ ಮನುಷ್ಯರು ತಮ್ಮ ಹಕ್ಕುಗಳನ್ನು ಅನುಭವಿಸುವುದನ್ನು ಪ್ರಭಾವಿಸುತ್ತದೆಯೇ ಅಥವಾ ಇಲ್ಲವೇ ಎಂಬುದು ಮುಖ್ಯವಲ್ಲ. ಕಾನೂನು ಅಂತಹ ಯಾವುದೇ

ತಾರತಮ್ಯವನ್ನು ನಿಷೇಧಿಸುತ್ತದೆ ಮತ್ತು ಎಲ್ಲಾ ವ್ಯಕ್ತಿಗಳಿಗೆ ಅಂತಹ ಯಾವುದೇ ತಾರತಮ್ಯದ ವಿರುದ್ಧ ಪರಿಣಾಮಕಾರಿ ರಕ್ಷಣೆಯನ್ನೊದಗಿಸುತ್ತದೆ.

ಲೈಂಗಿಕ ನಿಲುವು ಅಥವಾ ಲಿಂಗಾಧಾರಿತ ಅಸ್ಮಿತೆಯನ್ನಾಧರಿಸಿದ ತಾರತಮ್ಯವು ಲೈಂಗಿಕ ನಿಲುವು ಅಥವಾ ಲಿಂಗಾಧಾರಿತ ಅಸ್ಮಿತೆನ್ನಾಧರಿಸಿದ ಎಲ್ಲಾ ವ್ಯತ್ಯಾಸ, ಹೊರಗಿಡುವಿಕೆ, ನಿರ್ಬಂಧ ಅಥವಾ ಆದ್ಯತೆಯನ್ನು ಒಳಗೊಂಡಿರುತ್ತದೆ, ಇದು ಕಾನೂನಿನೆದುರಿನ ಸಮಾನತೆ, ಅಥವಾ ಕಾನೂನಿನ ಸಮಾನ ರಕ್ಷಣೆ ಅಥವಾ ಎಲ್ಲಾ ಮಾನವ ಹಕ್ಕುಗಳು ಮತ್ತು ಮೂಲಭೂತ ಸ್ವಾತಂತ್ರ್ಯಗಳ ಸಮಾನ ಮನ್ನಣೆ, ಅನುಭವ ಅಥವಾ ಚಲಾವಣೆಯನ್ನು. ಟೊಳ್ಳಾಗಿಸುವ ಅಥವಾ ದುರ್ಬಲಗೊಳಿಸುವ ಉದ್ದೇಶ ಅಥವಾ ಪರಿಣಾಮವನ್ನು ಹೊಂದಿದೆ. ಲೈಂಗಿಕ ನಿಲುವು ಅಥವಾ ಲಿಂಗಾಧರಿತ ಅಸ್ಮಿತೆಯನ್ನಾಧರಿಸಿದ ತಾರತಮ್ಯವು ಲಿಂಗ, ಜನಾಂಗ, ವಯಸ್ಸು, ಧರ್ಮ, ಅಂಗವೈಕಲ್ಯ, ಆರೋಗ್ಯ ಮತ್ತು ಆರ್ಥಿಕ ಸ್ಥಿತಿ ಸೇರಿದಂತೆ ಇತರ ಆಧಾರಗಳ ಮೇಲಿನ ತಾರತಮ್ಯದಿಂದ ವೃದ್ಧಿಯಾಗುತ್ತದೆ.

**ಸರ್ಕಾರಗಳ ಬಧ್ಧತೆಗಳು:**

(1) ತಮ್ಮ ರಾಷ್ಟ್ರೀಯ ಸಂವಿಧಾನಗಳಲ್ಲಿ ಅಥವಾ ಇತರ ಸೂಕ್ತ ಶಾಸನಗಳಲ್ಲಿ ಸಮಾನತೆ ಮತ್ತು ಲೈಂಗಿಕ ನಿಲುವು

ಮತ್ತು ಲಿಂಗಾಧರಿತ ಅಸ್ಮಿತೆಯನ್ನಾಧರಿಸಿದ ತಾರತಮ್ಯ-ವಿರೋಧೀ ತತ್ವಗಳನ್ನು ಇನ್ನೂ ಸೇರಿಸದೇ ಇದ್ದ ಪಕ್ಷದಲ್ಲಿ, ತಿದ್ದುಪಡಿ ಮತ್ತು ವ್ಯಾಖ್ಯಾನದ ಮೂಲಕ ಅಡಕಗೊಳಿಸುವುದು; ಮತ್ತು ಈ ತತ್ವಗಳ ಪರಿಣಾಮಕಾರಿ ಸಾಕ್ಷಾತ್ಕಾರವನ್ನು ಖಚಿತಪಡಿಸುವುದು;

(2) ಸಮ್ಮತಿಯ ವಯಸ್ಸಿನ ಮೇಲಿರುವ ಸಮಲೈಂಗಿಕ ಜನರಲ್ಲಿ ಒಪ್ಪಿಗೆಯ ಲೈಂಗಿಕ ಚಟುವಟಿಕೆಯನ್ನು ನಿಷೇಧಿಸುವ ಅಥವಾ ನಿಷೇಧಿಸುವುದಕ್ಕಾಗಿ ಬಳಕೆಯಾಗುವ ಕ್ರಿಮಿನಲ್ ಮತ್ತು ಇತರ ಕಾನೂನು ನಿಬಂಧನೆಗಳನ್ನು ರದ್ದುಗೊಳಿಸುವುದು ಮತ್ತು ಸಮಾನವಾದ ಒಪ್ಪಿಗೆ ನೀಡುವ ವಯಸ್ಸು ಸಮಾನಲಿಂಗ ಮತ್ತು ವಿರುದ್ಧಲಿಂಗದ ಚಟುವಟಿಕೆಗಳೆರಡಕ್ಕೂ ಅನ್ವಯಿಸುತ್ತದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು.

(3) ಸಾರ್ವಜನಿಕ ಮತ್ತು ಖಾಸಗೀ ಕ್ಷೇತ್ರಗಳಲ್ಲಿ ಲೈಂಗಿಕ ನಿಲುವು ಮತ್ತು ಲಿಂಗಾಧಾರಿತ ಅಸ್ಮಿತೆಯನ್ನಾಧರಿಸಿದ ತಾರತಮ್ಯವನ್ನು ನಿಷೇಧಿಸುವ ಮತ್ತು ನಿರ್ಮೂಲನೆ ಮಾಡುವ ಸೂಕ್ತವಾದ ಶಾಸಕಾಂಗೀಯ ಮತ್ತು ಇತರ ಕ್ರಮಗಳನ್ನು ಅಳವಡಿಸಿಕೊಳ್ಳುವುದು;

(4) ವಿಭಿನ್ನ ಲೈಂಗಿಕ ನಿಲುವುಗಳು ಮತ್ತು ಲಿಂಗಾಧಾರಿತ ಅಸ್ಮಿತೆಯ ಜನರ ಬೆಳವಣಿಗೆಯನ್ನು ಖಚಿತಪಡಿಸಿಕೊಳ್ಳಲು, ಅಗತ್ಯಕ್ಕೆ ತಕ್ಕಂತೆ,

ಸಮಂಜಸವಾದ ಕ್ರಮಗಳನ್ನು ತೆಗೆದುಕೊಳ್ಳುವುದು ಮತ್ತು ಅಂತಹ ಸಮೂಹಗಳು ಅಥವಾ ವ್ಯಕ್ತಿಗಳು ಮಾನವ ಹಕ್ಕುಗಳನ್ನು ಸಮಾನವಾಗಿ ಸಂತೋಷಿಸುತ್ತಿದ್ದಾರೆ ಅಥವಾ ಚಲಾಯಿಸುತ್ತಿದ್ದಾರೆ ಎಂಬುದನ್ನು ಖಾತರಿಪಡಿಸಿಕೊಳ್ಳುವುದು. ಅಂತಹ ಕ್ರಮಗಳನ್ನು ತಾರತಮ್ಯಪೂರ್ಣ ಎಂದು ಪರಿಗಣಿಸಲಾಗುವುದಿಲ್ಲ.

(5) ಲೈಂಗಿಕ ನಿಲುವು ಅಥವಾ ಲಿಂಗಾಧಾರಿತ ಅಸ್ಮಿತೆಯನ್ನಾಧರಿಸಿದ ತಾರತಮ್ಯದ ಎಲ್ಲ ಪ್ರತಿಕ್ರಿಯೆಗಳಲ್ಲಿಯೂ, ಅಂತಹ ತಾರತಮ್ಯವು ಇತರ ರೀತಿಯ ತಾರತಮ್ಯವನ್ನು ಯಾವ ರೀತಿಯಲ್ಲಿ ಸೇರಿಕೊಳ್ಳಬಹುದು ಎಂಬುದನ್ನು ಪರಿಗಣಿಸುವುದು;

(6) ಯಾವುದೇ ಲೈಂಗಿಕ ನಿಲುವು ಅಥವಾ ಲಿಂಗಾಧಾರಿತ ಅಸ್ಮಿತೆಯ ಕುರಿತು ಮೇಲ್ಮಟ್ಟ ಮತ್ತು ಕೆಳಮಟ್ಟದ ಕಲ್ಪನೆಗಳಿಗೆ ಸಂಬಂಧಿಸಿದ ಪೂರ್ವಾಗ್ರಹ ಅಥವಾ ತಾರತಮ್ಯದ ವರ್ತನೆಗಳು ಅಥವಾ ನಡವಳಿಕೆಯ ನಿರ್ಮೂಲನೆಯನ್ನು ಸಾಧಿಸುವ ದೃಷ್ಟಿಯಿಂದ ಶಿಕ್ಷಣ ಮತ್ತು ತರಬೇತಿ ಕಾರ್ಯಕ್ರಮಗಳನ್ನು ಒಳಗೊಂಡಂತೆ ಎಲ್ಲಾ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಿ,

**3. ಕಾನೂನಿನ ಗುರುತಿಸುವಿಕೆಯ ಹಕ್ಕು**- ಕಾನೂನಿನೆದುರು ಒಬ್ಬ ವ್ಯಕ್ತಿಯಂತೆ ಮನ್ನಣೆ ಪಡೆಯುವ ಹಕ್ಕು ಪ್ರತಿಯೊಬ್ಬರಿಗೂ ಇದೆ. ವೈವಿಧ್ಯಮಯ ಲೈಂಗಿಕ ನಿಲುವು

ಮತ್ತು ಲಿಂಗಾಧಾರಿತ ಗುರುತುಗಳುಳ್ಳ ವ್ಯಕ್ತಿಗಳು ಜೀವನದ ಎಲ್ಲ ಅಂಶಗಳಲ್ಲಿ ಕಾನೂನು ಬೆಂಬಲವನ್ನು ಅನುಭವಿಸಬೇಕು. ಪ್ರತಿಯೊಬ್ಬ ವ್ಯಕ್ತಿಯ ಸ್ವಯಂ-ವ್ಯಾಖ್ಯಾನಿಸಲ್ಪಟ್ಟ ಲೈಂಗಿಕ ನಿಲುವು ಮತ್ತು ಲಿಂಗಾಧಾರಿತ ಅಸ್ಮಿತೆಯು ಅವರ ವ್ಯಕ್ತಿತ್ವದ ಅವಿಭಾಜ್ಯ ಅಂಗ ಮತ್ತು ಸ್ವಯಂ-ನಿರ್ಣಯ, ಘನತೆ ಮತ್ತು ಸ್ವಾತಂತ್ರ್ಯದ ಮೂಲಭೂತ ಅಂಶಗಳಲ್ಲಿ ಒಂದಾಗಿದೆ.

ಲಿಂಗಾಧಾರಿತ ಅಸ್ಮಿತೆಗೆ ಕಾನೂನು ಮನ್ನಣೆ ಪಡೆಯಲು ಲಿಂಗ ಪರ್ತಿವರ್ತನಾ ಶಸ್ತ್ರಚಿಕಿತ್ಸೆ, ಪುರುಷತ್ವಹರಣ ಅಥವಾ ಹಾರ್ಮೋನ್ ಚಿಕಿತ್ಸೆಯನ್ನು ಒಳಗೊಂಡಂತೆ, ಯಾವುದೇ ವೈದ್ಯಕೀಯ ಪ್ರಕ್ರಿಯೆಗಳಿಗೆ ಒಳಗಾಗುವಂತೆ ಯಾರಿಗೂ ಬಲವಂತಮಾಡುವಂತಿಲ್ಲ. ವ್ಯಕ್ತಿಯ ಲಿಂಗಾಧಾರಿತ ಅಸ್ಮಿತೆಯ ಕಾನೂನುಬದ್ಧ ಗುರುತಿಸುವಿಕೆಯನ್ನು ತಡೆಗಟ್ಟಲು ಮದುವೆ ಅಥವಾ ಪೋಷಕತ್ವದಂತಹ ಯಾವುದೇ ವಿಚಾರವನ್ನು ಬಳಸಬಾರದು. ತಮ್ಮ ಲೈಂಗಿಕ ನಿಲುವು ಅಥವಾ ಲಿಂಗ ಗುರುತನ್ನು ರಹಸ್ಯವಾಗಿಡುವಂತೆ, ನಿಗ್ರಹಿಸುವಂತೆ ಅಥವಾ ನಿರಾಕರಿಸುವಂತೆ ಯಾರೂ ಒತ್ತಡ ಹಾಕುವಂತಿಲ್ಲ.

**ಸರ್ಕಾರಗಳ ಬಧ್ಧತೆ:**

(1) ಎಲ್ಲಾ ವ್ಯಕ್ತಿಗಳಿಗೆ ನಾಗರಿಕ ವಿಚಾರಗಳಲ್ಲಿ, ಲೈಂಗಿಕ ನಿಲುವು ಅಥವಾ ಲಿಂಗಾಧಾರಿತ ತಾರತಮ್ಯವಿಲ್ಲದೇ,

ಕಾನೂನು ಸಹಾಯ ದೊರೆಯಬೇಕು, ಮತ್ತು ಒಪ್ಪಂದವನ್ನು ಕೊನೆಗೊಳಿಸುವ, ಮತ್ತು ಸ್ವತ್ತನ್ನು ನೀಡುವ, ಕೊಳ್ಳುವ, ಸ್ವಾಧೀನಪಡಿಸಿಕೊಳ್ಳುವ (ಪಿತ್ರಾರ್ಜಿತ ಆಸ್ತಿಯ ಮೂಲಕ), ನಿರ್ವಹಿಸುವ, ಆನಂದಿಸುವ ಮತ್ತು ವಿಲೇವಾರಿ ಮಾಡುವ ಸಮಾನ ಹಕ್ಕುಗಳನ್ನೂ ಒಳಗೊಂಡಂತೆ ಆ ಸಹಾಯವನ್ನು ಉಪಯೋಗಿಸಿಕೊಳ್ಳುವ ಅವಕಾಶ ದೊರೆಯುವುದನ್ನು ಖಚಿತಪಡಿಸಿಕೊಳ್ಳಬೇಕು ;

(2) ಪ್ರತಿ ವ್ಯಕ್ತಿಯ ಸ್ವಯಂ-ನಿರ್ಧಾರಿತ ಲಿಂಗ ಗುರುತನ್ನು ಸಂಪೂರ್ಣವಾಗಿ ಗೌರವಿಸಲು ಮತ್ತು ಕಾನೂನುಬದ್ಧವಾಗಿ ಗುರುತಿಸಲು ಅಗತ್ಯವಿರುವ ಶಾಸಕಾಂಗೀಯ, ಆಡಳಿತ ಮತ್ತು ಇತರ ಕ್ರಮಗಳನ್ನು ತೆಗೆದುಕೊಳ್ಳುವುದು;

(3) ಒಬ್ಬ ವ್ಯಕ್ತಿಯ ಲಿಂಗ/ ಲೈಂಗಿಕತೆಯನ್ನು ಸೂಚಿಸುವ ಸರ್ಕಾರದಿಂದ ವಿತರಿಸಲಾದ ಗುರುತಿನ ಪತ್ರಗಳು- ಜನನ ಪ್ರಮಾಣಪತ್ರಗಳು, ಪಾಸ್ಪೋರ್ಟ್‌ಗಳು, ಚುನಾವಣಾ ದಾಖಲೆಗಳು ಮತ್ತು ಇತರ ದಾಖಲೆಗಳು-ಉತ್ಕಟವಾದ ಸ್ವಯಂ-ವ್ಯಾಖ್ಯಾನಿಸಿದ ಲಿಂಗಾಧಾರಿತ ಅಸ್ಮಿತೆಯನ್ನು ಬಿಂಬಿಸುವಂತೆ ನೋಡಿಕೊಳ್ಳಲು ಕಾರ್ಯವಿಧಾನಗಳು ಅಸ್ತಿತ್ವದಲ್ಲಿವೆ ಎಂದು ಖಚಿತಪಡಿಸಿಕೊಳ್ಳಲು ಎಲ್ಲಾ ಅಗತ್ಯ ಶಾಸಕಾಂಗೀಯ, ಆಡಳಿತಾತ್ಮಕ ಮತ್ತು ಇತರ ಕ್ರಮಗಳನ್ನು ತೆಗೆದುಕೊಳ್ಳುವುದು,

(4) ಅಂತಹ ಕಾರ್ಯವಿಧಾನಗಳು ಪರಿಣಾಮಕಾರಿ, ನ್ಯಾಯಯುತ ಮತ್ತು ತಾರತಮ್ಯ-ವಿರೋಧಿಯಾಗಿವೆ ಮತ್ತು ಸಂಬಂಧಪಟ್ಟ ವ್ಯಕ್ತಿಯ ಘನತೆ ಮತ್ತು ಗೌಪ್ಯತೆಯನ್ನು ಗೌರವಿಸುತ್ತವೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು;

(5) ಕಾನೂನು ಅಥವಾ ಕಾರ್ಯ ನೀತಿಗಾಗಿ ವ್ಯಕ್ತಿಗಳನ್ನು ಲಿಂಗದ ಆಧಾರದಲ್ಲಿ ಗುರುತಿಸುವ ಅಥವಾ ವರ್ಗೀಕರಿಸುವ ಅಗತ್ಯವಿರುವ ಎಲ್ಲಾ ಸಂದರ್ಭಗಳಲ್ಲಿ ಗುರುತಿನ ದಾಖಲೆಗಳಿಗೆ ಬದಲಾವಣೆಗಳನ್ನು ಗುರುತಿಸಲಾಗುವುದು;

(6) ಲಿಂಗ ಪರಿವರ್ತನೆ ಅಥವಾ ಮರುವಿಂಗಡಣೆ ಅನುಭವಿಸುವ ಎಲ್ಲ ವ್ಯಕ್ತಿಗಳಿಗೆ ಸಾಮಾಜಿಕ ಬೆಂಬಲವನ್ನು ಒದಗಿಸಲು ಉದ್ದೇಶಿತ ಕಾರ್ಯಕ್ರಮಗಳನ್ನು ಕೈಗೊಳ್ಳುವುದು.

XXX

4. **ಬದುಕಿನ ಹಕ್ಕು.**-ಪ್ರತಿಯೊಬ್ಬರಿಗೂ ಬದುಕುವ ಹಕ್ಕಿದೆ. ಲೈಂಗಿಕ ನಿಲುವು ಅಥವಾ ಲಿಂಗಾಅಧಾರಿತ ಗುರುತಿನ ಪರಿಗಣನೆಯನ್ನೂ ಒಳಗೊಂಡಂತೆ ಯಾರ ಬದುಕನ್ನೂ ನಿರಂಕುಶವಾಗಿ ಕಸಿದುಕೊಳ್ಳಬಹುದು. ಒಪ್ಪಿಗೆ ಸೂಚಿಸುವ ವಯಸ್ಸಿನ ವ್ಯಕ್ತಿಗಳ ನಡುವಿನ ಒಪ್ಪಿಗೆಯ ಲೈಂಗಿಕ ಚಟುವಟಿಕೆ ಅಥವಾ ಲೈಂಗಿಕ ನಿಲುವು ಇಲ್ಲವೇ

ಲಿಂಗಾಧಾರಿತ ಅಸ್ಮಿತೆಯ ಆಧಾರದ ಮೇಲೆ ಯಾವುದೇ ವ್ಯಕ್ತಿಗೆ ಮರಣದಂಡನೆಯನ್ನು ವಿಧಿಸಲಾಗುವುದಿಲ್ಲ.

**ಸರ್ಕಾರಗಳ ಬದ್ಧತೆಗಳು:-**

(1) ಸಮ್ಮತಿಯ ವಯಸ್ಸಿನ ಮೇಲಿರುವ ಸಮಲೈಂಗಿಕ ವ್ಯಕ್ತಿಗಳ ನಡುವೆ ಒಪ್ಪಿಗೆಯ ಲೈಂಗಿಕ ಚಟುವಟಿಕೆಯನ್ನು ನಿಷೇಧಿಸುವ ಉದ್ದೇಶ ಅಥವಾ ಪರಿಣಾಮವನ್ನು ಹೊಂದಿರುವ ಎಲ್ಲಾ ರೀತಿಯ ಅಪರಾಧಗಳನ್ನು ರದ್ದುಗೊಳಿಸುವುದು ಮತ್ತು ಅಂತಹ ನಿಬಂಧನೆಗಳನ್ನು ರದ್ದುಗೊಳಿಸುವವರೆಗೆ, ಅವುಗಳಡಿಯಲ್ಲಿ ಶಿಕ್ಷೆಗೊಳಗಾದ ಯಾವುದೇ ವ್ಯಕ್ತಿಗೆ ಮರಣದಂಡನೆಯನ್ನು ಎಂದಿಗೂ ವಿಧಿಸದಿರುವುದು;

(2) ಸಾವಿನ ಶಿಕ್ಷೆಯನ್ನು ರದ್ದುಮಾಡುವುದು ಮತ್ತು ಸಮ್ಮತಿಯ ವಯಸ್ಸಿನ ವ್ಯಕ್ತಿಗಳ ನಡುವಿನ ಒಮ್ಮತದ ಲೈಂಗಿಕ ಚಟುವಟಿಕೆಗೆ ಸಂಬಂಧಿಸಿದ ಅಪರಾಧಗಳಿಗೆ ಮರಣದಂಡನೆಯ ಸಜೆಗಾಗಿ ಕಾಯುತ್ತಿರುವ ಎಲ್ಲರನ್ನು ಬಿಡುಗಡೆ ಮಾಡುವುದು;

(3) ಲೈಂಗಿಕ ನಿಲುವು ಅಥವಾ ಲಿಂಗಾಧಾರಿತ ಅಸ್ಮಿತೆಯ ಆಧಾರದ ಮೇಲೆ ವ್ಯಕ್ತಿಗಳ ಜೀವನದಲ್ಲಿ ಯಾವುದೇ ಸರ್ಕಾರೀ-ಪ್ರಾಯೋಜಿತ ಅಥವಾ ಸರ್ಕಾರೀ-ಸಮ್ಮತ ದಾಳಿಯನ್ನು ನಿಲ್ಲಿಸುವುದು, ಮತ್ತು ಅಂತಹ ಹಲ್ಲೆಗಳಾದಾಗ ಸರ್ಕಾರೀ ಅದರ ಹಿಂದಿರುವ ಅಧಿಕಾರಿಗಳು ಅಥವಾ

ಯಾವುದೇ ವ್ಯಕ್ತಿ ಅಥವಾ ಗುಂಪನ್ನು ತೀವ್ರ ತನಿಖೆಯಾಗೊಳಪಡಿಸುವುದು ಮತ್ತು ಸೂಕ್ತ ಸಾಕ್ಷ್ಯ ಕಂಡುಬಂದಲ್ಲಿ, ಜವಾಬ್ದಾರರಾಗಿರುವವರ ಮೇಲೆ ಕಾನೂನು ಕ್ರಮ ಕೈಗೊಳ್ಳುವುದು, ವಿಚಾರಣೆ ನಡೆಸುವುದು ಮತ್ತು ಸೂಕ್ತವಾಗಿ ಶಿಕ್ಷಿಸುವುದು.

6. **ಖಾಸಗೀತನದ ಹಕ್ಕು**- ಪ್ರತಿಯೊಬ್ಬರೂ, ಅವರ ಲೈಂಗಿಕ ನಿಲುವು ಅಥವಾ ಲಿಂಗಾಧಾರಿತ ಅಸ್ಮಿತೆಯನ್ನು ಲೆಕ್ಕಿಸದೆಯೇ, ತಮ್ಮ ಕುಟುಂಬ, ಮನೆ ಅಥವಾ ಪತ್ರ ವ್ಯವಹಾರಗಳನ್ನೊಳಗೊಂಡ ವಿಚಾರಗಳಿಗೆ ಸಂಬಂಧಿಸಿದಂತೆ ಅನಧಿಕೃತ ಅಥವಾ ಕಾನೂನುಬಾಹಿರ ಹಸ್ತಕ್ಷೇಪವಿಲ್ಲದ ಖಾಸಗೀತನವನ್ನು ಅನುಭವಿಸಲು ಅರ್ಹರಾಗಿದ್ದಾರೆ ಮತ್ತು ಅವರು ತಮ್ಮ ಗೌರವ ಮತ್ತು ಖ್ಯಾತಿಗಳ ಮೇಲಿನ ಕಾನೂನುಬಾಹಿರ ದಾಳಿಯಿಂದ ರಕ್ಷಣೆ ಪಡೆಯಲೂ ಅರ್ಹರು. ಖಾಸಗೀತನದ ಹಕ್ಕು ಸಾಮಾನ್ಯವಾಗಿ ತಮ್ಮ ಲೈಂಗಿಕ ನಿಲುವು ಅಥವಾ ಲಿಂಗಾಧಾರಿತ ಅಸ್ಮಿತೆಯ ಮಾಹಿತಿ ಮತ್ತು ತನ್ನದೇ ದೇಹಕ್ಕೆ ಸಂಬಂಧಿಸಿದ ತನ್ನ ಆಯ್ಕೆಗಳು ಹಾಗೂ ಒಪ್ಪಿಗೆಯ ಲೈಂಗಿಕ ಮತ್ತು ಇತರ ಸಂಬಂಧಗಳ ಬಗೆಗಿನ ಮಾಹಿತಿಯನ್ನು ಇತರರೆದುರು ಬಹಿರಂಗಪಡಿಸುವ ಅಥವಾ ಬಹಿರಂಗಪಡಿಸದಿರುವ ಆಯ್ಕೆಯನ್ನೂ ಒಳಗೊಂಡಿರುತ್ತದೆ.

**ಸರ್ಕಾರಗಳ ಬದ್ಧತೆಗಳು**

(1) ಒಪ್ಪಿಗೆಯ ವಯಸ್ಸನ್ನು ದಾಟಿರುವ ವ್ಯಕ್ತಿಗಳ ನಡುವಿನ ಒಮ್ಮತದ ಲೈಂಗಿಕ ಚಟುವಟಿಕೆಯನ್ನು ಒಳಗೊಂಡಂತೆ ತಮ್ಮ ಖಾಸಗೀ ವಲಯ, ಖಾಸಗೀ ನಿರ್ಧಾರಗಳು, ಮತ್ತು ಮಾನವ ಸಂಬಂಧಗಳನ್ನು ಯಾವುದೇ ನಿರಂಕುಶ ಹಸ್ತಕ್ಷೇಪವಿಲ್ಲದೇ ಆನಂದಿಸುವ ಪ್ರತಿ ವ್ಯಕ್ತಿಯ ಹಕ್ಕನ್ನು, ಲೈಂಗಿಕ ನಿಲುವು ಅಥವಾ ಲಿಂಗಾಧಾರಿತ ಅಸ್ಮಿತೆಗಳಾಚೆಗೆ, ಖಾತ್ರಿಪಡಿಸಲು ಅಗತ್ಯವಿರುವ ಶಾಸಕಾಂಗೀಯ, ಆಡಳಿತಾತ್ಮಕ ಮತ್ತು ಇತರ ಕ್ರಮಗಳನ್ನು ತೆಗೆದುಕೊಳ್ಳುವುದು,

(2) ಸಮ್ಮತಿಯ ವಯಸ್ಸಿನ ವ್ಯಕ್ತಿಗಳ ನಡುವೆ ಒಮ್ಮತದ ಲೈಂಗಿಕ ಚಟುವಟಿಕೆಯನ್ನು ಕಾನೂನುಬಾಹಿರಗೊಳಿಸುವ ಎಲ್ಲಾ ಕಾನೂನುಗಳನ್ನು ರದ್ದುಪಡಿಸುವುದು ಮತ್ತು ಸಮಲೈಂಗಿಕ ಮತ್ತು ಭಿನ್ನಲೈಂಗಿಕ ಲೈಂಗಿಕ ಚಟುವಟಿಕೆಗಳಿಗೆ ಸಮಾನವಾದ ಸಮ್ಮತಿಯ ವಯಸ್ಸನ್ನು ಅನ್ವಯಿಸುವುದನ್ನು ಖಚಿತಪಡಿಸಿಕೊಳ್ಳುವುದು;

(3) ಸಮ್ಮತಿಯ ವಯಸ್ಸನ್ನು ದಾಟಿರುವ ಸಮಲೈಂಗಿಕ ವ್ಯಕ್ತಿಗಳ ನಡುವಿನ ಒಮ್ಮತದ ಲೈಂಗಿಕ ಚಟುವಟಿಕೆಯನ್ನು ಕಾನೂನುಬಾಹಿರಗೊಳಿಸಲು ಸಾಮಾನ್ಯ ಉಪಯೋಗದ ಕ್ರಿಮಿನಲ್ ಮತ್ತು ಇತರ ಕಾನೂನು ನಿಬಂಧನೆಗಳು ಅನ್ವಯವಾಗದಿರುವಂತೆ ನೋಡಿಕೊಳ್ಳುವುದು;

(4) ಉಡುಗೆ, ಮಾತು ಅಥವಾ ನಡವಳಿಕೆಯ ಮೂಲಕ, ತಮ್ಮ ಲಿಂಗಾಧಾರಿತ ಅಸ್ಮಿತೆಯನ್ನು ವ್ಯಕ್ತಪಡಿಸುವುದನ್ನು ಅಪರಾಧೀಕರಿಸುವ, ಅಥವಾ ತಮ್ಮ ಲೈಂಗಿಕ ಅಸ್ಮಿತೆಯನ್ನು ವ್ಯಕ್ತಪಡಿಸುವ ವಿಧಾನವಾಗಿ ತಮ್ಮ ದೇಹಗಳನ್ನು ಬದಲಾಯಿಸುವ ಅವಕಾಶವನ್ನು ನಿರಾಕರಿಸುವ ಯಾವುದೇ ಕಾನೂನನ್ನು ರದ್ದುಪಡಿಸುವುದು;

(5) ವ್ಯಕ್ತಿಗಳ ಬಂಧನವು ಒಪ್ಪಿಗೆಯ ವಯಸ್ಸಿನ ವ್ಯಕ್ತಿಗಳ ನಡುವಿನ ಒಪ್ಪಿಗೆಯ ಲೈಂಗಿಕ ಚಟುವಟಿಕೆಯನ್ನು ಆಧರಿಸಿದ್ದರೆ, ಅಥವಾ ಅವರ ಲಿಂಗಾಧಾರಿತ ಅಸ್ಮಿತೆಗೆ ಸಂಬಂಧಿಸಿದ್ದರೆ, ಹಾಗೆ ಸೆರೆಹಿಡಿಯಲ್ಪಟ್ಟ ಎಲ್ಲರನ್ನೂ ಬಿಡುಗಡೆ ಮಾಡುವುದು;

(6) ತಮ್ಮ ಲೈಂಗಿಕ ನಿಲುವು ಮತ್ತು ಲಿಂಗಾಧರಿತ ಅಸ್ಮಿತೆಯ ಬಗೆಗಿನ ಮಾಹಿತಿಯನ್ನು ಯಾರಿಗೆ ಮತ್ತು ಹೇಗೆ ಬಹಿರಂಗಪಡಿಸಬೇಕು ಎಂಬುದನ್ನು ಆಯ್ಕೆಮಾಡಿಕೊಳ್ಳುವ ಎಲ್ಲಾ ವ್ಯಕ್ತಿಗಳ ಹಕ್ಕನ್ನು ಖಾತ್ರಿಪಡಿಸಿಕೊಳ್ಳುವುದು ಮತ್ತು ಅಂತಹ ಮಾಹಿತಿಯ ಅನಿಯಂತ್ರಿತ ಅಥವಾ ಅನಗತ್ಯ ಬಹಿರಂಗಪಡಿಸುವಿಕೆ ಅಥವಾ ಇತರರಿಂದ ಅಂತಹ ಮಾಹಿತಿಯ ಬಹಿರಂಗಪಡಿಸುವಿಕೆಯ ಬೆದರಿಕೆಯಿಂದ ಎಲ್ಲ ವ್ಯಕ್ತಿಗಳನ್ನು ರಕ್ಷಿಸುವುದು, .

XXX

**18. ವೈದ್ಯಕೀಯ ದುರ್ಬಳಕೆಯಿಂದ ರಕ್ಷಣೆ.-** ತಮ್ಮ ಲೈಂಗಿಕ ನಿಲುವು ಅಥವಾ ಲಿಂಗಾಧಾರಿತ ಅಸ್ಮಿತೆಯ ಆಧಾರದ ಮೇಲೆ ಯಾವುದೇ ವೈದ್ಯಕೀಯ ಅಥವಾ ಮಾನಸಿಕ ಚಿಕಿತ್ಸೆ, ವಿಧಾನ, ತಪಾಸಣೆಗೊಳಗಾಗಲು ಅಥವಾ ವೈದ್ಯಕೀಯ ಸೌಲಭ್ಯಕ್ಕೆ ಬದ್ಧರಾಗಲು ಯಾರನ್ನೂ ಬಲವಂತಪಡಿಸಬಾರದು. ವ್ಯತಿರಿಕ್ತವಾದ ಯಾವುದೇ ವರ್ಗೀಕರಣಗಳ ಹೊರತಾಗಿಯೂ, ಒಬ್ಬ ವ್ಯಕ್ತಿಯ ಲೈಂಗಿಕ ನಿಲುವು ಮತ್ತು ಲಿಂಗಾಧಾರಿತ ಗುರುತಿಸುವಿಕೆಗಳು, ವೈದ್ಯಕೀಯ ಪರಿಸ್ಥಿತಿಗಳಲ್ಲ, ಮತ್ತು ಅವುಗಳಿಗಾಗಿ ಚಿಕಿತ್ಸೆ ನೀಡುವುದು, ಗುಣಪಡಿಸುವುದು ಅಥವಾ ನಿಗ್ರಹಿವುದನ್ನೆಲ್ಲಾ ಮಾಡಬಾರದು.

**ಸರ್ಕಾರಗಳ ಬದ್ಧತೆಗಳು:**

(**1**) ವ್ಯಕ್ತಿಯ ನಡತೆ, ದೈಹಿಕ ಲಕ್ಷಣಗಳು, ಅಥವಾ ಗ್ರಹೀತ ಲಿಂಗಾಧಾರಿತ ನಿಯಮಗಳಿಗೆ ಸಂಬಂಧಿಸಿದ, ಸಂಪ್ರದಾಯದಿಂದ ಅಥವಾ ಬೇರೆ ವಿಚಾರಗಳಿಂದ ಹುಟ್ಟಿಕೊಂಡ ರೂಢಮಾದರಿಗಳನ್ನೂ ಒಳಗೊಂಡಂತೆ, ಲೈಂಗಿಕ ನಿಲುವು ಅಥವಾ ಲಿಂಗಾಧಾರಿತ ಅಸ್ಮಿತೆಯನ್ನಾಧರಿಸಿದ ಹಾನಿಕಾರಕ ವೈದ್ಯಕೀಯ ಪದ್ಧತಿಗಳ ವಿರುದ್ಧ ಸಂಪೂರ್ಣ ಭದ್ರತೆಯನ್ನೊದಗಿಸಲು ಅಗತ್ಯವಾದ ಶಾಸಕಾಂಗೀಯ, ಆಡಳಿತಾತ್ಮಕ ಮತ್ತು ಇತರ ಕ್ರಮಗಳನ್ನು ತೆಗೆದುಕೊಳ್ಳುವುದು

(2) ಲಿಂಗಾಧಾರಿತ ಅಸ್ಮಿತೆಯೊಂದನ್ನು ಹೇರುವ ಸಲುವಾಗಿ, ಮಗುವಿನ ವಯಸ್ಸು ಮತ್ತು ಪ್ರೌಢತೆಗೆ ತಕ್ಕಂತೆ ಅದರ ಸಂಪೂರ್ಣವಾದ ಮುಕ್ತ ಮತ್ತು ಅರಿವಿನ ಒಪ್ಪಿಗೆಯನ್ನು ತೆಗೆದುಕೊಳ್ಳದೇ ಮಕ್ಕಳಿಗೆ ಸಂಬಂಧಿಸಿದ ಎಲ್ಲಾ ಕ್ರಿಯೆಗಳಲ್ಲಿ ಮಗುವಿನ ಅತ್ಯುತ್ತಮ ಹಿತಾಸಕ್ತಿಯೊಂದೇ ಪ್ರಾಥಮಿಕವಾಗಿ ಪರಿಗಣಿಸಬೇಕಾದ ವಿಚಾರ ಎಂಬ ಸಿಧ್ಧಾಂತವನ್ನು ಪಾಲಿಸುತ್ತಾ ಯಾವುದೇ ಮಗುವಿನ ದೇಹವನ್ನು, ವೈದ್ಯಕೀಯ ಪ್ರಕ್ರಿಯೆಗಳ ಮೂಲಕ ಸರಿಪಡಿಸಲಾಗದಂತೆ ಮಾರ್ಪಾಡುಗೊಳಿಸದಿರುವುದನ್ನು ಖಾತ್ರಿಪಡಿಸಿಕೊಳ್ಳುವ ಸಲುವಾಗಿ ಎಲ್ಲಾ ಅಗತ್ಯವಾದ ಶಾಸಕಾಂಗೀಯ, ಆಡಳಿತಾತ್ಮಕ ಮತ್ತು ಇತರ ಕ್ರಮಗಳನ್ನು ತೆಗೆದುಕೊಳ್ಳುವುದು.

(3) ಯಾವುದೇ ಮಗು ವೈದ್ಯಕೀಯ ದುರ್ಬಳಕೆಗೆ ಒಳಗಾಗುವುದನ್ನು ಅಥವಾ ಅಂತಹ ಅಪಾಯ ಎದುರಿಸುವುದನ್ನು ತಪ್ಪಿಸುವ ಸಲುವಾಗಿ ಶಿಶುರಕ್ಷಣಾ ಕಾರ್ಯವಿಧಾನಗಳನ್ನು ಸ್ಥಾಪಿಸುವುದು;

(4) ಲಸಿಕೆಗಳು, ಚಿಕಿತ್ಸೆಗಳು ಅಥವಾ ಎಚ್‌ಐವಿ/ಏಡ್ಸ್ ಅಥವಾ ಇತರ ಕಾಯಿಲೆಗಳಿಗೆ ಸೂಕ್ಷ್ಮಜೀವಿನಾಶಕನಾಶಕಗಳಿಗೆ ಸಂಬಂಧಿಸಿದ ವಿಷಯವೂ ಒಳಗೊಂಡಂತೆ ಅನೈತಿಕ ಅಥವಾ ಅನೈಚ್ಛಿಕ ವೈದ್ಯಕೀಯ ಕಾರ್ಯವಿಧಾನಗಳು ಅಥವಾ

ಸಂಶೋಧನೆಯ ವಿರುದ್ಧ ವಿವಿಧ ಲೈಂಗಿಕ ನಿಲುವು ಮತ್ತು ಲಿಂಗಾಧಾರಿತ ಅಸ್ಮಿತೆಗಳ ವ್ಯಕ್ತಿಗಳ ರಕ್ಷಣೆಯನ್ನು ಖಾತ್ರಿಪಡಿಸಿಕೊಳ್ಳುವುದು.;

(5) ಅಂತಹ ಶೋಷಣೆಯನ್ನು ಪ್ರತಿಪಾದಿಸುವ, ಅದಕ್ಕೆ ಸಹಾಯ ಒದಗಿಸುವ ಅಥವಾ ಅದನ್ನು ಯಾವುದಾದರೂ ರೀತಿಯಲ್ಲಿ ಸಾಧ್ಯವಾಗಿಸಬಲ್ಲ ಅಭಿವೃದ್ಧಿ-ನೆರವಿನ ಸ್ವರೂಪದ ಕಾರ್ಯಕ್ರಮಗಳೂ ಸೇರಿದಂತೆ, ಯಾವುದೇ ಬಗೆಯ ಆರೋಗ್ಯ ನಿಧಿಯ ನಿಬಂಧನೆಗಳು ಅಥವಾ ಕಾರ್ಯಕ್ರಮಗಳನ್ನು ಪರಿಶೀಲಿಸಿ ತಿದ್ದುಪಡಿಮಾಡುವುದು,

(6) ಯಾವುದೇ ಬಗೆಯ ವೈದ್ಯಕೀಯ ಅಥವಾ ಮಾನಸಿಕ ಚಿಕಿತ್ಸೆ ಅಥವಾ ಆಪ್ತಸಲಹೆಯು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಲೈಂಗಿಕ ನಿಲುವು ಅಥವಾ ಲಿಂಗಾಧಾರಿತ ಅಸ್ಮಿತೆಗಳನ್ನು ಚಿಕಿತ್ಸೆಗೊಳಪಡಿಸಬಲ್ಲ, ಗುಣಪಡಿಸಬಲ್ಲ ಅಥವಾ ನಿಗ್ರಹಿಸಬಲ್ಲ ವೈದ್ಯಕೀಯ ಪರಿಸ್ಥಿತಿಯ ರೂಪದಲ್ಲಿ ಆರೈಕೆ ಮಾಡದಿರುವಂತೆ ನೋಡಿಕೊಳ್ಳುವುದು.

**19. ಅಭಿಪ್ರಾಯದ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕು:-** ಪ್ರತಿಯೊಬ್ಬರಿಗೂ, ಅವರ ಲೈಂಗಿಕ ನಿಲುವು ಅಥವಾ ಲಿಂಗಾಧಾರಿತ ಅಸ್ಮಿತೆ ಏನೇ ಇದ್ದರೂ, ಅಭಿಪ್ರಾಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕಿದೆ. ಇದರಲ್ಲಿ ಭಾಷಣ, ಗಡೀಪಾರು, ಉಡುಗೆ, ದೈಹಿಕ ಗುಣಲಕ್ಷಣಗಳು, ಹೆಸರಿನ ಆಯ್ಕೆ, ಅಥವಾ ಬೇರೆ ಯಾವುದಾದರೂ ವಿಧಾನಗಳ

ಮೂಲಕ ಅಸ್ಮಿತೆ ಅಥವಾ ವ್ಯಕ್ತಿತ್ವದ ಅಭಿವ್ಯಕ್ತಿ ಅಲ್ಲದೆ ಲೈಂಗಿಕ ನಿಲುವು ಮತ್ತು ಲಿಂಗಾಧಾರಿತ ಅಸ್ಮಿತೆಗಳಿಗೆ ಸಂಬಂಧಿಸಿದ ವಿಚಾರವನ್ನೂ ಒಳಗೊಂಡಂತೆ ಮಾನವನಿಗೆ ಸಂಬಂಧಿಸಿದ ಎಲ್ಲಾ ರೀತಿಯ ಮಾಹಿತಿ ಮತ್ತು ಪರಿಕಲ್ಪನೆಗಳನ್ನು ಯಾವುದೇ ಮಾಧ್ಯಮಗಳ ಮೂಲಕ ಮತ್ತು ಎಲ್ಲೆಗಳ ಹಂಗಿಲ್ಲದೇ ಹುಡುಕುವ, ಸ್ವೀಕರಿಸುವ ಮತ್ತು ನೀಡುವ ಸ್ವಾತಂತ್ರ್ಯ ಕೂಡಾ ಸೇರಿದೆ.

**ಸರ್ಕಾರದ ಬದ್ಧತೆಗಳು:**

(1) ಇತರರ ಹಕ್ಕುಗಳು ಮತ್ತು ಸ್ವಾತಂತ್ರ್ಯಗಳನ್ನು ಗೌರವಿಸುತ್ತಾ, ಲೈಂಗಿಕ ನಿಲುವು ಅಥವಾ ಲಿಂಗಾಧಾರಿತ ಅಸ್ಮಿತೆಯನ್ನಾಧರಿಸಿದ, ತಾರತಮ್ಯವಿಲ್ಲದೆ, ಮತ್ತು ಲೈಂಗಿಕ ನಿಲುವು ಮತ್ತು ಲಿಂಗಾಧಾರಿತ ಅಸ್ಮಿತೆ ಅಲ್ಲದೇ ಕಾನೂನು ಹಕ್ಕುಗಳ ಪ್ರತಿಪಾದನೆ, ಮಾಹಿತಿಯ ಪ್ರಕಟಣೆ, ಪ್ರಸಾರ, ಸಮಾವೇಶಗಳ ಸಂಘಟನೆ ಅಥವಾ ಅವುಗಳಲ್ಲಿ ಪಾಲ್ಗೊಳ್ಳುವಿಕೆ ಮತ್ತು ಸುರಕ್ಷಿತ-ಲೈಂಗಿಕ ಕ್ರಿಯೆಯ ಅರಿವನ್ನು ಪಡೆಯುವುದು ಮತ್ತು ಹರಡುವುದಕ್ಕೆ ಸಂಬಂಧಿಸಿದ ಮಾಹಿತಿ ಮತ್ತು ಆಲೋಚನೆಗಳ ಕೊಡುಕೊಳ್ಳುವಿಕೆಯನ್ನೂ ಒಳಗೊಂಡಂತೆ, ಒಪ್ಪಿಗೆ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಸಂಪೂರ್ಣ ಆನಂದಿಸುವಿಕೆಯನ್ನು ಖಚಿತಪಡಿಸಿಕೊಳ್ಳಲು ಎಲ್ಲಾ ಅಗತ್ಯ ಶಾಸಕಾಂಗೀಯ,

ಆಡಳಿತಾತ್ಮಕ ಮತ್ತು ಇತರ ಕ್ರಮಗಳನ್ನು ತೆಗೆದುಕೊಳ್ಳುವುದು;

(2) ಸರ್ಕಾರದ ನಿಯಂತ್ರಣದಲ್ಲಿರುವ ಮಾಧ್ಯಮದ ಉತ್ಪನ್ನಗಳು ಮತ್ತು ಅವುಗಳ ಸಂಘಟನೆ ಲೈಂಗಿಕ ನಿಲುವು ಮತ್ತು ಲಿಂಗಾಧಾರಿತ ಅಸ್ಮಿತೆಯ ವಿಚಾರದಲ್ಲಿ ಬಹುತ್ವವಾದಿ ಮತ್ತು ತಾರತಮ್ಯ ವಿರೋಧಿಯಾಗಿವೆ ಎಂಬುದನ್ನು ಮತ್ತು ಅಂತಹ ಸಂಸ್ಥೆಗಳ ಸಿಬ್ಬಂದಿ ನೇಮಕಾತಿ ಮತ್ತು ಬಡ್ತಿ ನೀತಿಗಳಲ್ಲಿ ಲೈಂಗಿಕ ನಿಲುವು ಮತ್ತು ಲಿಂಗಾಧಾರಿತ ಅಸ್ಮಿತೆಯನ್ನಾಧರಿಸಿದ ತಾರತಮ್ಯವಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳುವುದು

(3) ವ್ಯಕ್ತಿಗಳು ಮಾತು, ಭಂಗಿ, ಉಡುಗೆ, ದೈಹಿಕ ಗುಣಲಕ್ಷಣಗಳು, ಹೆಸರಿನ ಆಯ್ಕೆ ಅಥವಾ ಯಾವುದೇ ಇತರ ವಿಧಾನಗಳ ಮೂಲಕ ಅಸ್ಮಿತೆಯನ್ನು ಅಥವಾ ವ್ಯಕ್ತಿತ್ವವನ್ನು ವ್ಯಕ್ತಪಡಿಸುವ ಹಕ್ಕನ್ನು ಸಂಪೂರ್ಣವಾಗಿ ಆನಂದಿಸುವುದನ್ನು ಖಚಿತಪಡಿಸಿಕೊಳ್ಳಲು ಎಲ್ಲಾ ಅಗತ್ಯ ಶಾಸನಕಾಂಗೀಯ, ಆಡಳಿತಾತ್ಮಕ ಮತ್ತು ಇತರ ಕ್ರಮಗಳನ್ನು ತೆಗೆದುಕೊಳ್ಳುವುದು;

(4) ಸಾರ್ವಜನಿಕ ಆದೇಶ, ಸಾರ್ವಜನಿಕ ನೈತಿಕತೆ, ಸಾರ್ವಜನಿಕ ಆರೋಗ್ಯ ಮತ್ತು ಸಾರ್ವಜನಿಕ ಸುರಕ್ಷತೆ ಎಂಬ ಕಲ್ಪನೆಗಳನ್ನು, ವಿಭಿನ್ನ ಲೈಂಗಿಕ ನಿಲುವುಗಳು ಅಥವಾ ಲಿಂಗಾಧಾರಿತ ಅಸ್ಮಿತೆಗಳನ್ನು

ದೃಢೀಕರಿಸುವಂತಹ ಅಭಿಪ್ರಾಯ ಮತ್ತು ಸ್ವಾತಂತ್ರ್ಯದ ಯಾವುದೇ ಬಗೆಯ ಚಲಾವಣೆಯನ್ನು ತಾರತಮ್ಯಪೂರ್ಣವಾಗಿ ನಿರ್ಬಂಧಿಸುವ ರೀತಿಯಲ್ಲಿ, ಬಳಸಿಕೊಳ್ಳುವುದಿಲ್ಲ.

(5) ಅಭಿಪ್ರಾಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಚಲಾವಣೆಯು ವಿವಿಧ ಲೈಂಗಿಕ ನಿಲುವು ಮತ್ತು ಲಿಂಗಾಧಾರಿತ ಅಸ್ಮಿತೆಗಳುಳ್ಳ ವ್ಯಕ್ತಿಗಳ ಹಕ್ಕುಗಳು ಮತ್ತು ಸ್ವಾತಂತ್ರ್ಯಗಳನ್ನು ಉಲ್ಲಂಘಿಸುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳುವುದು.

(6) ಎಲ್ಲಾ ವ್ಯಕ್ತಿಗಳಿಗೆ, ಲೈಂಗಿಕ ನಿಲುವು ಅಥವಾ ಲಿಂಗಾಧಾರಿತ ಅಸ್ಮಿತೆಯಾಚೆಗೆ, ಮಾಹಿತಿ ಮತ್ತು ಆಲೋಚನೆಗಳನ್ನು ಸಮಾನವಾಗಿ ಪಡೆದುಕೊಳ್ಳುವುದನ್ನು, ಮತ್ತು ಅವರು ಸಾರ್ವಜನಿಕ ಚರ್ಚೆಯಲ್ಲಿ ಭಾಗೀದಾರಿಕೆ ಪಡೆದುಕೊಳ್ಳುವುದನ್ನು ಖಾತ್ರಿಪಡಿಸಿಕೊಳ್ಳುವುದು. "(ಒತ್ತು ನೀಡಲಾಗಿದೆ)

88. ಈ ಸಿಧ್ಧಾಂತಗಳು 14, 15, 19 ಮತ್ತು 21ನೇ ಕಲಮುಗಳಲ್ಲಿ ಇರುವ ಮೂಲಭೂತ ಹಕ್ಕುಗಳಿಗೆ ಮತ್ತಷ್ಟು ಪುಷ್ಟಿನೀಡುತ್ತವೆ. ಅಲ್ಲದೇ, ಈ ಸಿಧ್ಧಾಂತಗಳ ನೆಲೆಗಟ್ಟಿನಿಂದ ಗಮನಿಸಿದಾಗ, 377ನೇ ಪರಿಚ್ಛೇದವನ್ನು ಅಸಾಂವಿಧಾನಿಕವೆಂದೇ ಕರೆಯಬೇಕಾಗುತ್ತದೆ.

89. ಮೇಲಿನ ವಿಚಾರಗಳ ಹಿನ್ನೆಲೆಯಲ್ಲಿ ಸುರೇಶ್ ಕುಮಾರ್ ಕೌಶಲ್ (ಮೇಲ್ಕಂಡ) ಪ್ರಕರಣದ ತೀರ್ಪು ಸರಿಯಾಗಿದೆಯೇ ಎಂಬುದನ್ನು ನಾವು ನಿರ್ಧರಿಸಬೇಕಿದೆ. ಸುರೇಶ್ ಕುಮಾರ್ ಕೌಶಲ್ ಪ್ರಕರಣದ ತೀರ್ಪು (ಮೇಲ್ಕಂಡ) ದಂಡ ಸಂಹಿತೆಯಂತಾಗ ಸಂವಿಧಾನ ಪೂರ್ವ ಕಾನೂನುಗಳು

ಸಂವಿಧಾನಬದ್ಧವಾಗಿವೆ ಎಂಬ ನಂಬುಗೆಯೊಂದಿಗೆ ಆರಂಭವಾಗುತ್ತದೆ. ಮುಂದೆ ಈ ತೀರ್ಪಿನಲ್ಲಿ, ಯಾವುದೇ ತಿದ್ದುಪಡಿಯಿಲ್ಲದೇ ಸಂಮ್ಸತ್ತಿನಲ್ಲಿ ಒಪ್ಪಿಗೆಯಾಗಿ ಜಾರಿಯಲ್ಲಿರುವ ಸಂವಿಧಾನ ಪೂರ್ವ ಕಾನೂನುಗಳು, ಸಂಸತ್ತಿನ ಮೂಲಕ ವ್ಯಕ್ತವಾಗಿರುವ ಭಾರತದ ಜನರ ಅಭಿಪ್ರಾಯಗಳನ್ನು ಪ್ರತಿನಿಧಿಸುತ್ತಿದ್ದು, ಅವುಗಳನ್ನು ಸಂವಿಧಾನ ಬದ್ಧವೆಂದೇ ಎಣಿಸಬೇಕು ಎಂದು ಹೇಳಲಾಗಿದ್ದು, ನಾವು ಇದನ್ನು ಒಪ್ಪುವುದಿಲ್ಲ ಎಂದು ಹೇಳಬಯಸುತ್ತೇವೆ .

೯೦. ಸಂವಿಧಾನದ 372ನೇ ಕಲಮು ಸಂವಿಧಾನ ಜಾರಿಯಾಗುವುದಕ್ಕೆ ಚೂರು ಮುಂಚೆ ಭಾರತದ ಪರಿಧಿಯಲ್ಲಿ ಚಲಾವಣೆಯಲ್ಲಿದ್ದ ಕಾನೂನುಗಳನ್ನು ಮುಂದುವರೆಸುತ್ತದೆ. ಈ ಹಿನ್ನೆಲೆಯಲ್ಲಿ ಭಾರತೀಯ ದಂಡ ಸಂಹಿತೆಯು ಸಂವಿಧಾನ ಜಾರಿಯಾಗುವುದಕ್ಕೆ ಸ್ವಲ್ಪ ಮುಂಚೆನಿಂದಷ್ಟೇ ಭಾರತದಲ್ಲಿ ಜಾರಿಯಲ್ಲಿತ್ತು ಎಂಬುದು ಸತ್ಯಕ್ಕೆ ದೂರವಾದ ಮಾತಾಗಿದೆ. 372(2)ನೆ ಕಲಮಿನಡಿಯಲ್ಲಿ ರಾಷ್ಟ್ರಪತಿಗಳು ಅಗತ್ಯವಿದ್ದಲ್ಲಿ ಸಂವಿಧಾನ ಪೂರ್ವ ಕಾನೂನುಗಳು ಸಂವಿಧಾನದ ಅಶಯಗಳಿಗೆ ಬದ್ಧವಾಗಿರುವಂತೆ ಮಾಡಲು ತಿದ್ದುಪಡಿ ಅಥವಾ ಹೊಸ ಸೇರ್ಪಡೆಗಳನ್ನು ಮಾಡುವ ಆದೇಶ ನೀಡಬಹುದು. 372(2)ನೇ ಕಲಮಿನಲ್ಲಿರುವಂತೆ, ಕಾನೂನೊಂದಕ್ಕೆ ರಾಷ್ಟ್ರಪತಿಗಳು ಹೊಸ ಸೇರ್ಪಡೆ ಅಥವಾ ತಿದ್ದುಪಡಿಗಳನ್ನು ಸೂಚಿಸಿಲ್ಲ ಎಂಬ ವಿಚಾರ ಇಲ್ಲಿ ಮುಖ್ಯವಾಗುವುದಿಲ್ಲ. ಸಂಸತ್ತು ಕಾನೂನೊಂದು ಸಂವಿಧಾನಬದ್ಧವಾಗಿದೆ ಎಂದು ಊಹಿಸಿಕೊಳ್ಳುವಾಗ, ಅದಕ್ಕೆ ತಾನು ಆಳುತ್ತಿರುವ ಜನರ ಅಗತ್ಯಗಳು ತಿಳಿದಿರಬೇಕು, ಅಲ್ಲದೆ ಅಧಿಕಾರ ವಿಕೇಂದ್ರೀಕರಣದ ತತ್ವದ ಪ್ರಕಾರ ಕಾನೂನು ರಚಿಸುವ ತನ್ನ ಅಧಿಕಾರದ ಮಿತಿಗಳ ಅರಿವು ಸಂಸತ್ತಿಗೆ ಇರಬೇಕು - ಸಂಸತ್ತು ಭಾರತೀಯ ಸಂವಿಧಾನದ 7ನೇ ಅಧಿಸೂಚನೆಯ 2ನೇ ಪಟ್ಟಿಯಡಿಯಲ್ಲಿ ಬರದ ಕಾನೂನುಗಳನ್ನಷ್ಟೇ ಜಾರಿಗೊಳಿಸಬಹುದು ಮತ್ತು ಹಾಗೆ ಕಾನೂನುಗಳನ್ನು ಜಾರಿಗೊಳಿಸುವಾಗ ಪ್ರಜೆಗಳ ಮೂಲಭೂತ ಹಕ್ಕುಗಳಲ್ಲಿ ಹಸ್ತಕ್ಷೇಪ ಮಾಡಬಾರದು. ಹಾಗಾಗಿ, ಸಂಸತ್ತಿಗೆ ತನ್ನ ಸಾಂವಿಧಾನಿಕ ಮಿತಿಗಳ ಅರಿವಿದೆ ಎಂದು ಭಾವಿಸಲಾಗುತ್ತದೆ. ಆದರೆ, ಪರದೇಶದ ಶಾಸಕಾಂಗ ಅಥವಾ ಮಂಡಳಿಗಳು ರಚಿಸಿರುವ ಸಂವಿಧಾನ ಪೂರ್ವ ಕಾನೂನುಗಳಲ್ಲಿ ಮೇಲಿನ ಮಾನದಂಡಗಳನ್ನು ಪಾಲಿಸಲಾಗಿರುವುದಿಲ್ಲ. ಅದೇ ರೀತಿ ದಂಡ ಸಂಹಿತೆಯಂತಹ ಸಂವಿಧಾನ ಪೂರ್ವ ಶಾಸನಕ್ಕೆ ಕೂಡಾ ಮೇಲಿನ ಯಾವ ಮಾನದಂಡಗಳೂ ಅನ್ವಯವಾಗಿಲ್ಲ ಎಂಬುದು ಸ್ಪಷ್ಟವಾಗುತ್ತದೆ.  ಹಾಗೆ ನೋಡಿದರೆ,

ನ್ಯಾ ಬಿ.ಪಿ. ಜೀವನ ರೆಡ್ಡಿಯವರು ನವ ದೆಹಲಿ ನಗರ ಪಾಲಿಕೆ v. ಪಂಜಾಬ್ ರಾಜ್ಯ ಸರ್ಕಾರ ಮತ್ತು ಇತರರು (1997) ಪ್ರಕರಣದಲ್ಲಿ ನೀಡಿದ ಬಹುಮತದ ತೀರ್ಪಿನಲ್ಲಿ, 1911ನೇ ಇಸವಿಯ ಪಂಜಾಬ್ ಮ್ಯುನಿಸಿಪಲ್ ಕಾಯ್ದೆಯು ಸಂವಿಧಾನ ಪೂರ್ವ ಕಾನೂನಾಗಿದ್ದು, ಅದನ್ನು ದೆಹಲಿಗೆ 1950ರಲ್ಲಷ್ಟೇ ಅನ್ವಯಿಸಲಾಗಿದೆ, ಮತ್ತು ಅದೇ ಕಾರಣಕಾಗಿಯೇ ಅದರ ಸಂವಿಧಾನಬದ್ಧತೆಯನ್ನು ಊಹಿಸಲಾಗಿದೆ ಎಂದು ನುಡಿಯುತ್ತಾರೆ. ಅಹ್ಮಾದಿ ಸಿ.ಜೆ ರವರು ತಮ್ಮ ಭಿನ್ನ ನಿಲುವಿನ ಅಭಿಪ್ರಾಯದಲ್ಲಿ, ಸಂವಿಧಾನ ಪೂರ್ವ ಕಾನೂನೊಂದನ್ನು ಪ್ರಶ್ನಿಸಲಾಗಿದೆ ಎಂದರೆ, ಅದು ಸಂವಿಧಾನಬದ್ಧವಾಗಿರುವುದಿಲ್ಲ ಎಂದು ಸರಿಯಾಗಿಯೇ ಹೇಳುತ್ತಾರೆ. ಆ ಹೇಳಿಕೆಗೆ ಸಂಬಂಧಿಸಿದ ವಾಕ್ಯವೊಂದನ್ನು ಕೆಳಗೆ ನೀಡಲಾಗಿದೆ:-

> 119. ರಾಜ್ಯಸಭೆಯ ವಾಣಿಜ್ಯ ಚಟುವಟಿಕೆಗಳ ಮೇಲೆ ಈ ಕಾಯಿದೆಗಳು ವಿಧಿಸುವ ತೆರಿಗೆಗಳನ್ನು ಉಳಿಸುವುದು ಕಾನೂನಿನ ಸಂವಿಧಾನಿಕತೆಯ ಸಿದ್ಧಾಂತದ ಅಗತ್ಯವೆಂದು ನ್ಯಾ. ರೆಡ್ಡಿ ಹೇಳುತ್ತಾರೆ. ಈ ಕಾಯ್ದೆ ಒಂದು ಪೂರ್ವ ಸಾಂವಿಧಾನಿಕ ಶಾಸನವಾಗಿದೆ. ಸಂವಿಧಾನಾತ್ಮಕ ಗಡಿಗಳನ್ನು ಮೀರಬಾರದೆಂಬ ಶಾಸಕಾಂಗದ ಕಲ್ಪಿತ ಉದ್ದೇಶವು ಈ ಸಿದ್ಧಾಂತದ ಆಧಾರ. ಸದರಿ ಕಾನೂನನ್ನು ಜಾರಿಗೊಳಿಸಿದಾಗ ಅಂತಹ ಯಾವುದೇ ಕಟ್ಟಳೆಯಿರಲಿಲ್ಲ ಮತ್ತು ಸಂವಿಧಾನ ಸದರಿ ತಡೆಯನ್ನು ಕಾನೂನು ಜಾರಿಯಾಗಿ ಹಲವು ಸಮಯದ ನಂತರ ರೂಪಿಸಿತು ಎಂಬುದನ್ನು ಗಮನದಲ್ಲಿಟ್ಟುಕೊಂಡರೆ, ಇಂತಹ ಉದ್ದೇಶದ ಕಲ್ಪಿಸಿಕೊಳ್ಳುವಿಕೆಯನ್ನು ಮೆಚ್ಚಿಕೊಳ್ಳಲು ಆಗುವುದಿಲ್ಲ. (ಈ ನ್ಯಾಯಾಲಯದ ಸಂವಿಧಾನಿಕ ಪೀಠವು ಗುಲಾಬಾಯ್ ವಲ್ಲಭಾಯಿ ದೇಸಾಯಿ ವಿ. ಯುನಿಯನ್ ಆಫ್ ಇಂಡಿಯಾ [ಎಐಆರ್ 1967 ಎಸ್ಸಿ 1110: (1967) 1 ಎಸ್ಸಿ.ಆ.ರ್ 602]

ಪ್ರಕರಣ ನಿರ್ಧಾರದಲ್ಲಿ, ಎ.ಐ.ಆರ್ 1117 ವಾಕ್ಯದಲ್ಲಿ ಇದೇ ರೀತಿಯ ಅನುಮಾನಗಳನ್ನು ವ್ಯಕ್ತಪಡಿಸಿದೆ). 289(2)ನೇ ಕಲಮಿನ ಅಡಿಯ ಕಾನೂನು ಅತ್ಯುನ್ನತ ದರ್ಜೆಯದ್ದಾಗಿರಬೇಕು ಎಂಬುದನ್ನು ಸಂವಿಧಾನದ ನಿರ್ಮಾತೃಗಳು ನಿಸ್ಸಂಶಯವಾಗಿ ಬಯಸಿದ್ದರು. 289 (2)ನೇ ಕಲಮಿಗೆ ಅತ್ಯಂತ ಅಗತ್ಯವಾಗಿರುವ ಅಂಶವೊಂದರ ಬಗೆಗೆ, ಅಂದರೆ, ರಾಜ್ಯ ಸರಕಾರಗಳ ವಹಿವಾಟಿನ ಚಟುವಟಿಕೆಗಳಿಗೆ ಕೇಂದ್ರ ತೆರಿಗೆ ಅನ್ವಯವಾಗುವ ಬಗೆಗೆ ಸುಮ್ಮನಿರುವ ಈ ಕಾನೂನುಗಳು, ಅಂತಹ ಮಾನದಂಡವನ್ನು ಪೂರೈಸುವ ಸಾಧ್ಯತೆಗಳಿವೆ ಎಂದು ಹೇಳಲು ಸಾಧ್ಯವೇ

91. "377ನೇ ಪರಿಚ್ಛೇದವು ಸಂವಿಧಾನಬದ್ಧವಾಗಿದೆ ಎಂದು ಉಹಿಸಬಹುದು ಎಂಬ ವಿಭಾಗೀಯ ಪೀಠದ ದೃಷ್ಟಿಕೋನವನ್ನು ಒಪ್ಪಿಕೊಳ್ಳುವುದು ಕೊಂಚ ಕಷ್ಟ.

92. 172ನೇ ಕಾನೂನು ಆಯೋಗದ ವರದಿಯೂ ಸ್ಪಷ್ಟವಾಗಿ 377ನೇ ಪರಿಚ್ಛೇದವನ್ನು ತೆಗೆದುಹಾಕಬೇಕೆಂದು ಶಿಫಾರಸು ಮಾಡಿದ ಹೊರತಾಗಿಯೂ, ಶಾಸಕಾಂಗ ಅದಕ್ಕೆ ತಿದ್ದುಪಡಿತಂದಿಲ್ಲವೆಂದಾದರೆ, ಸಂಸತ್ತಿಗೆ ಆ ಕಾನೂನನ್ನು ತೆಗೆದುಹಾಕುವುದು ಸರಿಯಲ್ಲವೆಂಬ ಭಾವನೆಯಿದೆ ಎಂಬುದು 377ನೇ ಪರಿಚ್ಛೇದವನ್ನು ಅಮಾನ್ಯಗೊಳಿಸದೇ ಇರಲು ಸುರೇಶ್ ಕುಮಾರ್ ಕೌಶಲ್ (ಮೇಲ್ಕಂಡ) ಪ್ರಕರಣದಲ್ಲಿ ನೀಡಲಾಗಿರುವ ಮತ್ತೊಂದು ಕಾರಣ. ಈ ಹಿನ್ನೆಲೆಯಲ್ಲಿ, 377ನೇ ಪರಿಚ್ಛೇದದ ಒಂದು ಭಾಗವನ್ನು ರದ್ದುಗೊಳಿಸಿದ ದೆಹಲಿ ಉಚ್ಚನ್ಯಾಯಲದ ಕ್ರಮವನ್ನು ಭಾರತ ಸರ್ಕಾರ ತಕ್ಷಣ ಪ್ರಶ್ನಿಸಲಿಲ್ಲ ಎಂಬುದನ್ನು ಅರಗಿಸಿಕೊಳ್ಳಲು ಆಗುತ್ತಿಲ್ಲ. ಎರಡನೆಯದಾಗಿ, ಸುರೇಶ್ ಕುಮಾರ್ ಕೌಶಲ್ (ಮೇಲ್ಕಂಡ) ಪ್ರಕರಣದಲ್ಲಿ ಹೇಳಿರುವಂತೆ, ಸಂಸತ್ತು ಕಾನೂನು ಆಯೋಗದ ವರದಿಯನ್ನು ಪಾಲಿಸಿತೇ ಇಲ್ಲವೇ ಎಂಬುದರ ಆಧಾರದಮೇಲೆ

ನ್ಯಾಯಾಲಯವು ಆ ಕಾನೂನಿನ ಸ್ವಭಾವ, ವ್ಯಾಪ್ತಿ ಮತ್ತು ವಿಸ್ತಾರಗಳನ್ನು ಅರ್ಥೈಸಿಕೊಳ್ಳುವುದು ಸರಿಯಾದ ಕ್ರಮವಲ್ಲ. ಸಂಸತ್ತು ವರದಿಯನ್ನು ಅನುಷ್ಠಾನಗೊಳಿಸಿವುದು ಒಂದು ತಟಸ್ಥ ವಿಚಾರವಾಗಿದ್ದು, ಅದನ್ನು ಪರಿಗಣಿಸದೇ ಇದ್ದರೂ ನಡೆಯುತ್ತದೆ. ಪ್ರಶ್ನಿಸಲಾಗಿರುವ ಕಾನೂನೊಂದು ಸಾಂವಿಧಾನಿಕ ನಿಯಮಗಳನ್ನು ಉಲ್ಲಂಘಿಸಿದೆಯೇ ಎಂಬುದನ್ನು ಪರಿಶೀಲಿಸಿ, ಹಾಗಾಗಿದ್ದಲ್ಲಿ ಸಹಜವಾದ ಪ್ರಕ್ರಿಯೆಯಂತೆ ಅಂತ ಕಾನೂನಿಗೆ ಕೊನೆಗಾಣಿಸುವುದಷ್ಟೇ ಇಲ್ಲಿ ನ್ಯಾಯಾಲಯ ಮಾಡಬೇಕಿರುವ ಕೆಲಸ.

93. 377ನೇ ಪರಿಚ್ಛೇದದ ವಿಸ್ತಾರವನ್ನು ಲೈಂಗಿಕ ಕ್ರಿಯೆ ಮತ್ತು ಆ ಕ್ರಿಯೆ ನಡೆಯುವ ಸಂದರ್ಭದ ಆಧಾರದಲ್ಲಿ ಮಾತ್ರ ವ್ಯಾಖ್ಯಾನಿಸಬೇಕು ಎಂಬ ನ್ಯಾಯಾಲಯದ ಹೇಳಿಕೆಯನ್ನು ಅನುಮೋದಿಸಿದರೂ ಕಷ್ಟವಾಗುತ್ತದೆ. ಅಲ್ಲದೇ, 377ನೇ ಪರಿಚ್ಛೇದವು ಲೈಂಗಿಕ ಅಸ್ಮಿತೆ ಮತ್ತು ನಿಲುವುಗಳನ್ನು ಪರಿಗಣಿಸದೇ ಕೇವಲ ವ್ಯಕ್ತಿಗಳ ಲೈಂಗಿಕ ನಡತೆಯನ್ನು ಮಾತ್ರ ನಿರ್ದೇಶಿಸುತ್ತದೆ ಎಂಬುದನ್ನು ಸಹ ಒಪ್ಪುವುದು ಕಷ್ಟಾವಗುತ್ತದೆ. .

94. 2013ರ ನಂತರ, ಎಂದರೆ 375ನೇ ಪರಿಚ್ಛೇದಕ್ಕೆ ತಿದ್ದುಪಡಿ ಮಾಡಿ ಅದು ಗಂಡಸರು ಮತ್ತು ಹೆಂಗಸರ ನಡುವಿನ ಗುದಸಂಭೋಗ ಮತ್ತು ಇತರ ಬಗೆಯ, ಬಲಾತ್ಕಾರವೆಂದು ಶಿಕ್ಷಿಸಲು ಸಾಧ್ಯವಾಗದಿರುವ ಲೈಂಗಿಕ ಸಂಭೋಗಗಳನ್ನು ಒಳಗೊಳ್ಳುವಂತೆ ಮಾಡಿದ ಬಳಿಕ, 377ನೇ ಪರಿಚ್ಛೇದವು ಅಂತಹ ಲೈಂಗಿಕ ಸಂಭೋಗಗಳನ್ನು ಶಿಕ್ಷಿಸಿದರೆ, ಅದು ಖಂಡಿತವಾಗಿಯೂ ವಿರೋಧಾಭಾಸದ ಸಂದರ್ಭವಾಗುತ್ತದೆ. ಅಂತಹ ಸಂಭೋಗದಲ್ಲಿ ತೊಡಗುವ ಗಂಡಸೊಬ್ಬನನ್ನು ಬಲಾತ್ಕಾರದ ಅಪರಾಧದಡಿಯಲ್ಲಿ ಶಿಕ್ಷಿಸದೇ, ಅವನಿಗೆ 377ನೇ ಪರಿಚ್ಛೇದದಡಿಯಲ್ಲಿ ಸಜೆ ನೀಡುವ ಸಾಧ್ಯತೆಯಿರುತ್ತದೆ. ಹಾಗೆಯೇ, ಹೆಂಗಸೊಬ್ಬಳನ್ನು ಯಾವ ಸಂದರ್ಭದಲ್ಲಿಯೂ ಬಲಾತ್ಕಾರದ ಆರೋಪದಡಿಯಲ್ಲಿ ಬಂಧಿಸಲಾಗದಿದ್ದರೂ, ಆಕೆ ಮತ್ತೊಬ್ಬ ಗಂಡಸಿನೊದಿಗೆ ಗುದಸಂಭೋಗವೇ ಮೊದಲಾದ ಕ್ರಿಯೆಗಳನ್ನು ಖಾಸಗೀಯಾಗಿ ನಡೆಸಿದರೆ ಆಕೆಯನ್ನು 377ನೇ ಪರಿಚ್ಛೇದದಡಿಯಲ್ಲಿ ಶಿಕ್ಷಿಸುವ ಅವಕಾಶವಿರುತ್ತದೆ. ಈ ಪ್ರಕಾರವಾಗಿ 377 ನೀ ಪರಿಚ್ಛೇದವನ್ನು ಒಪ್ಪಿಗೆಯಿರುವ ವಯಸ್ಕ ವ್ಯಕ್ತಿಗಳಿಗೆ ಅನ್ವಯಿಸಿದಾಗ ಅದು ಸ್ಪಷ್ಟವಾಗಿ ನಿರಂಕುಶವೆನಿಸಿಕೊಳ್ಳುತ್ತದೆ. ಕಾನೂನೊಂದರ ಒಂದು ಭಾಗವನ್ನು ಶಾಸಕಾಣಗವೇ 2013ರಲ್ಲಿ ತಿದ್ದಿ, ಒಪ್ಪಿಗೆಯಿರುವ ವಯಸ್ಕ ಗಂಡು ಹೆಣ್ಣುಗಳ ನಡುವಿನ ಗುದಸಂಭೋಗವೇ ಮೊದಲಾದ ಕ್ರಿಯೆಗಳು ಅಪರಾಧವಲ್ಲವೆಂದು

ನಿರ್ಧರಿಸಿರುವಾಗ, ಅಂತಹ ಸಂಭೋಗ ನಡೆಸುವ ವ್ಯಕ್ತಿಗಳನ್ನು 377ನೇ ಪರಿಚ್ಛೇದದಡಿಯಲ್ಲಿ ಶಿಕ್ಷಿಸುವುದು ಅತಿರೀಕವೂ ಅಸಮಂಜಸವೂ ಆಗುತ್ತದೆ. ಮೇಲೆ ಹೇಳಲಾಗಿರುವ ವಿಚಾರಗಳನ್ನು ಪರಿಗಣಿಸಿ, 377ನೇ ಪರಿಚ್ಛೇದವು ಗಂಡೂ-ಹೆಣ್ಣು ಜೋಡಿಗಳ ನಡುವಿನ ಗುದಸಂಭೋಗ ಮತ್ತು ಇತರ ಲೈಂಗಿಕ ಕ್ರಿಯೆಗಳಿಗೆ ಅನ್ವಯಿಸುವುದಿಲ್ಲವೆಂದು ನಿರ್ಧರಿಸಿದರೆ, ಆ ಪರಿಚ್ಛೇದವು ಸಮಲೈಂಗಿಕ ಕ್ರಿಯೆಗಳಿಗೆ ಮಾತ್ರ ಅನ್ವಯವಾಗುತ್ತದೆ. ಹೀಗಾದಲ್ಲಿ, ಸದರಿ ಪರಿಚ್ಛೇದವು ಸಮಲೈಂಗಿಕ ಮತ್ತು ಭಿನ್ನಲೈಂಗಿಕ ವಯಸ್ಕರ ನಡುವೆ ಭೇದಭಾವ ಎಸಗಿ ಸಂವಿಧಾನದ 14ನೇ ಕಲಮನ್ನು ಉಲ್ಲಂಘಿಸಿದಂತಾಗುತ್ತದೆ. ಅಲ್ಲದೇ ಅಂತಹ ಭೇದಭಾವಕ್ಕೂ, ಮತ್ತು ಅದರಿಂದ ಸಾಧಿಸಬೇಕಿರುವ ಉದ್ದೇಶವಾದ, ಸಮಲೈಂಗಿಕ ಮತ್ತು/ ಅಥವಾ ಭಿನ್ನಲೈಂಗಿಕ ವ್ಯಕ್ತಿಗಳು ನಿಸರ್ಗದ ನಿಯಮಕ್ಕೆ ವಿರುದ್ಧವಾಗಿ ನಡೆಸುವ ಶಾರೀರಿಕ ಸಂಭೋಗದ ನಿರ್ಬಂಧಕ್ಕೂ ಯಾವುದೇ ತಾರ್ಕಿಕ ಸಂಬಂಧ ಇರುವುದಿಲ್ಲ. ಯಾವ ರೀತಿಯಲ್ಲಿ ನೋಡಿದರೂ, 377ನೇ ಪರಿಚ್ಛೇದವು 14ನೇ ಕಲಮಿಗೆ ಚ್ಯುತಿಯನ್ನುಂಟು ಮಾಡುತ್ತದೆ.

95. ಈ ದೇಶದ ಜನಸಂಖ್ಯೆಯ ಅತಿ ಸಣ್ಣ ಪ್ರಮಾಣದ ಜನರು ಮಾತ್ರ ಸಮಲೈಂಗಿಕ ಸ್ತ್ರೀ ಪುರುಷ ಮತ್ತು ಲಿಂಗಪರಿವರ್ತಿತರಾಗಿದ್ದು, ಕಳೆದ 150 ವರ್ಷಗಳಲ್ಲಿ 200ಕ್ಕೂ ಕಡಿಮೆ ಮಂದಿಗೆ 377ನೇ ಪರಿಚ್ಛೇದದಡಿಯ ಅಪರಾಧಗಳಿಗೆ ಶಿಕ್ಷೆ ದೊರೆತಿದೆ ಎಂಬ ವಾದದಿಂದ ಯಾವ ಉಪಯೋಗವೂ ಇಲ್ಲ. ವ್ಯಕ್ತಿಗಳ ಖಾಸಗೀ ಹಿತಾಸಕ್ತಿಗಳ ವಿಚಾರ ಬಂದಾಗ, ಮತ್ತು ಸಮಾನ ಲಿಂಗದ ವ್ಯಕ್ತಿಗಳು ಇತರರಿಗೆ ಹಾನಿಯಾಗದಂತೆ ನಡೆಸುವ ಲೈಂಗಿಕ ಕ್ರಿಯೆಗಳನ್ನು ಅಪರಾಧೀಕರಿಸುವ ಕಾನೂನನ್ನು ಮುಂದುವರೆಸಲು ಸರ್ಕಾರದ ಬಳಿ ಯಾವುದೇ ಬಲವಾದ ಕಾರಣಗಳಿದ್ದ ಈ ಇರುವಾಗ ಮತ್ತು ಸುರೇಶ್ ಕುಮಾರ್ ಕೌಶಲ್ (ಮೇಲ್ಕಂಡ) ಪ್ರಕರಣದ ನಂತರ ಈ ನ್ಯಾಯಾಲಯ ನೀಡಿದ ಇತ್ತೀಚಿನ ತೀರ್ಪುಗಳನ್ನು ಗಮದಲ್ಲಿಟ್ಟುಕೊಂಡು ನೋಡಿದಾಗ, 377ನೇ ಪರಿಚ್ಛೇದವು ಸಂವಿಧಾನದ 14, 15, 19 ಮತ್ತು 21 ಕಲಮುಗಳನ್ನು ಉಲ್ಲಂಘಿಸಿರುವುದು ಮತ್ತು ಆ ಪರಿಚ್ಛೇದವನ್ನು ಎತ್ತಿಹಿಡಿಯಲು ಸರ್ಕಾರದ ಬಳಿ ಯಾವುದೇ ನ್ಯಾಯಯುತ ತಾರ್ಕಿಕತೆಯಿಲ್ಲದಿರುವುದು ಸ್ಪಷ್ಟವಾಗುತ್ತದೆ.

96. ಆದುದರಿಂದ, ಮೇಲಿನ ಎಲ್ಲಾ ಕಾರಣಗಳ ಹಿನ್ನೆಯಲ್ಲಿ ಸುರೇಶ್ ಕುಮಾರ್ ಕೌಶಲ್ (ಮೇಲ್ಕಂಡ) ಪ್ರಕರಣದ ತೀರ್ಪನ್ನು ತಳ್ಳಿಹಾಕಬೇಕು ಎಂಬುದು ನಮ್ಮ ಅಭಿಪ್ರಾಯವಾಗಿದ್ದು, ಅದೇ ರೀತಿ ಆ ತೀರ್ಪನ್ನು ರದ್ದುಪಡಿಸಲಾಗುತ್ತಿದೆ.

97. ಕೊನೆಯದಾಗಿ, ಸಮಲೈಂಗಿಕರಾಗಿರುವ ವ್ಯಕ್ತಿಗಳಿಗೆ ಘನತೆಯಿಂದ ಬದುಕುವ ಹಕ್ಕಿದೆ, ಮತ್ತು ಆ ಹಕ್ಕಿನ ಮೂಲಕ, ನಮ್ಮ ಕೆಲ ತೀರ್ಪುಗಳಲ್ಲಿ ಚರ್ಚಿಸಿರುವಂತೆ ((1) ನಂದಿನಿ ಸುಂದರ್ v. ಛತ್ತೀಸ್ಗಡ್ ರಾಜ್ಯ ಸರ್ಕಾರ, (2011) 16, 25 ಅಂಡ್ 52ನೇ ವಾಕ್ಯಗಳು; ಮತ್ತು (2) ಸುಬ್ರಮಣಿಯಮ್ ಸ್ವಾಮಿ v. ಭಾರತ ಸರ್ಕಾರ (2016) ಪ್ರಕರಣಗಳನ್ನು ನೋಡಿರಿ), ಭಾರತೀಯ ಸಂವಿಧಾನದ ಮುನ್ನುಡಿಯ ವಿಸ್ತಾರವಾದ ನೆಲೆಗಟ್ಟಿನ ಹಿನ್ನೆಲೆಯಲ್ಲಿ, ಭ್ರಾತೃತ್ವವೆಂಬ ಉನ್ನತವಾದ ಸಾಂವಿಧಾನಿಕ ಮೌಲ್ಯವು ಸುನಿಶ್ಚಿತಗೊಳ್ಳುತ್ತದೆ ಎಂಬುದನ್ನು ನಾವು ಹೇಳಬಯಸುತ್ತೇವೆ. ಹಾಗೆಯೇ, ಸಮಾನವಾದ ಕಾನೂನುಗಳ ರಕ್ಷಣೆ ಪಡೆಯುವುದು ಅಂತಹ ಗುಂಪುಗಳ ಹಕ್ಕಾಗಿದ್ದು, ಸಮಾಜವು ಅವರಿಗೆ ಯಾವುದೇ ಕಳಂಕಗಳನ್ನು ಅಂಟಿಸದೇ ಅವರನ್ನು ಮನುಷ್ಯರಂತೆಯೇ ನಡೆಸಿಕೊಳ್ಳುವುದಕ್ಕೆ ಅವರು ಅರ್ಹರು ಎಂದು ನಾವು ಘೋಷಿಸುತಿದ್ದೇವೆ. ಹಾಗೆಯೇ, ಸಮಲೈಂಗಿಕ ಮತ್ತು ಲಿಂಗಪರಿವರ್ತಿತ ವಯಸ್ಕರು ಒಪ್ಪಿಗೆಯಿಂದ ನಡೆಸುವ ಲೈಂಗಿಕ ಕ್ರಿಯೆಗಳನ್ನು ಅಪರಾಧೀಕರಿಸುವ 377ನೇ ಪರಿಚ್ಛೇದವನ್ನು ಅಸಾಂವಿಧಾನಿಕವೆಂದು ನಾವು ಘೋಷಿಸುತ್ತಿದ್ದೀವೆ.

98. ಸರ್ಕಾರವು ದೂರದರ್ಶನ, ರೇಡಿಯೂ, ಮುದ್ರಣ ಮತ್ತು ಅಂತರ್ಜಾಲ ಮಾಧ್ಯಮ ಮೊದಲಾದ ಸಾರ್ವಜನಿಕ ಮಾಧ್ಯಮಗಳ ಮೂಲಕ ಈ ತೀರ್ಪಿಗೆ ಆಗಾಗ ಹೆಚ್ಚಿನ ಪ್ರಚಾರ ನೀಡಿ, ಅಂತಹ ವ್ಯಕ್ತಿಗಳಿಗೆ ಅಂಟಿರುವ ಕಳಂಕವನ್ನು ಕ್ರಮೇಣ ಕಡಿಮೆಗೊಳಿಸಿ ನಿವಾರಿಸಲು ಸಹಾಯವಾಗುವ ಕಾರ್ಯಕ್ರಮಗಳನ್ನು ಆರಂಭಿಸಲು ಕ್ರಮ ಕೈಗೊಳ್ಳಬೇಕೆಂಬುದು ನಮ್ಮ ಅಭಿಪ್ರಾಯ. ಎಲ್ಲಕ್ಕಿಂತ ಹೆಚ್ಚಾಗಿ, ಈ ತೀರ್ಪಿನಲ್ಲಿ ಗಮನಿಸಲಾಗಿರುವ ವಿಚಾರಗಳ ಹಿನ್ನೆಲೆಯಲ್ಲಿ, ಸರ್ಕಾರಿ ಅಧಿಕಾರಿಗಳು, ಮತ್ತು ವಿಶೇಷವಾಗಿ ಪೋಲಿಸ್ ಅಧಿಕಾರಿಗಳು ಮತ್ತು ಇತರ ಕೇಂದ್ರ ಮತ್ತು ರಾಜ್ಯ ಸರ್ಕಾರದ ಅಧಿಕಾರಿಗಳಿಗೆ ಅಂತಹ ವ್ಯಕ್ತಿಗಳ

ಪರಿಸ್ಥಿತಿಗಳ ಬಗೆಗೆ ಅರಿವನ್ನು ಮೂಡಿಸುವ ತರಬೇತಿಯನ್ನು ಕಾಲಕಾಲಕ್ಕೆ ನೀಡಬೇಕು ಎಂಬುದು ನಮ್ಮ ಅಭಿಪ್ರಾಯವಾಗಿದೆ.

**……………………..**

**ನ್ಯಾ (ಆರ್. ಎಫ್. ನಾರಿಮನ್)**

**ನವ ದೆಹಲಿ;**

**ಸೆಪ್ಟೆಂಬರ್ 06, 2018.**

ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿ

ಕ್ರಿಮಿನಲ್/ಸಿವಿಲ್ ಮೂಲ ಅಧಿಕಾರ ವ್ಯಾಪ್ತಿ

**<u>ರಿಟ್ ಅರ್ಜಿ (ಕ್ರಿಮಿನಲ್) ಸಂಖ್ಯೆ .76, 2016</u>**

ನವತೇಜ್ ಸಿಂಘ್ ಜೋಹರ್ ಮತ್ತು ಇತರರು ...ಅರ್ಜಿದಾರರು

ಎದುರು

ಭಾರತ ಸರ್ಕಾರ

ಕಾರ್ಯದರ್ಶಿ,

ಕಾನೂನು ಮತ್ತು ನ್ಯಾಯ ಸಚಿವಾಲಯದ ಮುಖೇನ .... ಪ್ರತಿವಾದಿಗಳು

<u>ಜೊತೆಗೆ</u>

**<u>ರಿಟ್ ಅರ್ಜಿ (ಕ್ರಿಮಿನಲ್) ಸಂಖ್ಯೆ .572, 2016</u>**

ಅಕ್ಕೈ ಪದ್ಮಶಾಲಿ ..... ಅರ್ಜಿದಾರರು

ಎದುರು

ಭಾರತ ಸರ್ಕಾರ, ಕಾರ್ಯದರ್ಶಿ,

ಕಾನೂನು ಮತ್ತು ನ್ಯಾಯ ಸಚಿವಾಲಯದ ಮುಖೇನ .... ಪ್ರತಿವಾದಿ ಗಳು

<u>ಜೊತೆಗೆ</u>

**<u>ರಿಟ್ ಅರ್ಜಿ (ಕ್ರಿಮಿನಲ್) ಸಂಖ್ಯೆ .88, 2018</u>**

ಕೇಶವ್ ಸೂರಿ .....ಅರ್ಜಿದಾರರು

ಎದುರು

ಭಾರತ ಸರ್ಕಾರ, ಕಾರ್ಯದರ್ಶಿ,

ಕಾನೂನು ಮತ್ತು ನ್ಯಾಯ ಸಚಿವಾಲಯದ ಮುಖೇನ .... ಪ್ರತಿವಾದಿಗಳು

**ಜೊತೆಗೆ**

**ರಿಟ್ ಅರ್ಜಿ (ಕ್ರಿಮಿನಲ್) ಸಂಖ್ಯೆ .100, 2018**

ಆರಿಫ್ ಜಾಫರ್ ..... ಅರ್ಜಿದಾರರು

ಎದುರು

ಭಾರತ ಸರ್ಕಾರ, ಕಾರ್ಯದರ್ಶಿ,

ಕಾನೂನು ಮತ್ತು ನ್ಯಾಯ ಸಚಿವಾಲಯದ ಮುಖೇನ .... ಪ್ರತಿವಾದಿಗಳು

**ಜೊತೆಗೆ**

**ರಿಟ್ ಅರ್ಜಿ (ಕ್ರಿಮಿನಲ್) ಸಂಖ್ಯೆ .101, 2018**

ಅಶೋಕ್ ರೋವ್ ಕವಿ ಮತ್ತು ಇತರರು ..... ಅರ್ಜಿದಾರರು

ಎದುರು

ಭಾರತ ಸರ್ಕಾರ, ಕಾರ್ಯದರ್ಶಿ,

ಕಾನೂನು ಮತ್ತು ನ್ಯಾಯ ಸಚಿವಾಲಯದ ಮುಖೇನ .... ಪ್ರತಿವಾದಿಗಳು

**ಮತ್ತು**

**ಜೊತೆಗೆ**

**ರಿಟ್ ಅರ್ಜಿ (ಕ್ರಿಮಿನಲ್) ಸಂಖ್ಯೆ .121, 2018**

ಅನ್ವೇಶ್ ಪೊಕ್ಕುಲುರಿ ಮತ್ತು ಇತರರು ....... ಅರ್ಜಿದಾರರು

## ತೀರ್ಪು

**ನ್ಯಾ. ಡಿ. ವೈ. ಚಂದ್ರಚೂಡ್**

### A. ನಿರಾಕರಣೆಯಿಂದ ಸ್ವಾತಂತ್ರ್ಯದೆಡೆಗೆ

> ಒಲವು ಬಾಳಿಗೊಂದು ಅರ್ಥ ನೀಡುತ್ತದೆ. ಪ್ರೀತಿಸುವ ಅಧಿಕಾರವೇ ನಮ್ಮನ್ನು ಮನುಷ್ಯರನ್ನಾಗಿಸುವುದು. ಅಂತಹ ಭಾವನೆಯ ಅಭಿವ್ಯಕ್ತಿಯನ್ನು ಅಪರಾಧೀಕರಿಸುವುದು ಅತ್ಯಂತ ಕ್ರೌರ್ಯ ಮತ್ತು ಅಮಾನವೀಯತೆಯ ಪರಮಾವಧಿ. ಅಂಥ ಅಪರಾಧೀಕಾರಣಕ್ಕೆ ಮೌನ ಸಮ್ಮತಿ ಸೂಚಿಸುವುದು ಅಥವಾ ಇನ್ನು ಮುಂದುವರೆದು ಅದನ್ನು ಮರು-ಅಪರಾಧೀಕರಿಸುವುದು, ಕನಿಕರವೇ ಇಲ್ಲದಿರುವ ಲಕ್ಷಣ. ಸಾಂವಿಧಾನಿಕ ವ್ಯವಸ್ಥೆಯ ಪ್ರಕಾರ, ಹಕ್ಕುಗಳನ್ನ ಕೊಟ್ಟ ಕೊನೆಯದಾಗಿ ನಿರ್ಧರಿಸುವ ಅಧಿಕಾರ ನ್ಯಾಯಾಂಗದ್ದೇ ಆಗಿರುವಾಗ, ಪ್ರಜೆಗಳ ಮೂಲಭೂತ ಹಕ್ಕುಗಳ ವಿಚಾರದಲ್ಲಿ, ಬಹುಸಂಖ್ಯಾತ ಸಂಸತ್ತೊಂದಕ್ಕೆ ಮಿತಿಮೀರಿದ ಆದರ ತೋರಿಸುವುದು, ನ್ಯಾಯಂಗದ ಪುಕ್ಕಲುತನವವನ್ನು ಎತ್ತಿತೋರಿಸುತ್ತದೆ.[93]

1. ಕಾನೂನಿನ ಮೈಗಳ್ಳತನ ಮತ್ತೊಮ್ಮೆ ಎದ್ದುಕಾಣುತ್ತಿದೆ.
2. ನೂರಾ ಐವತ್ತೆಂಟು ವರ್ಷಗಳ ಹಿಂದೆ, ವಸಾಹತುಶಾಹಿ ಶಾಸನವೊಂದು, ಸಮಾನ ಲಿಂಗದ ವಯಸ್ಕರು, ತಮ್ಮ ಒಲವನ್ನು ಈಡೇರಿಸಿಕೊಳ್ಳುವುದನ್ನು ಅಪರಾಧವೆಂದು ಬಗೆಯಿತು. ಆ ಕಾನೂನಿಂದ ಅವರುಗಳು ತಮ್ಮ ಪ್ರಕೃತಿಗೆ ತಕ್ಕಂತೆ ಬದುಕುವ ಪ್ರೀತಿಸುವ ಮತ್ತು ಜೋಡಿಯಾಗುವ ಸರಳ ಮಾನವಾಧಿಕಾರಗಳಿಂದ ವಂಚಿತರಾದರು. ಅವರು ತಮ್ಮ ಲೈಂಗಿಕತೆಯನ್ನು ದೈಹಿಕವಾಗಿ ತೋರ್ಪಡಿಸುವುದನ್ನು ತಡೆಗಟ್ಟಿ, ಅವರೊಳಗಿನ ಮಾನವ ಸಹಜವಾದ ಪ್ರೀತಿಸುವ ಪ್ರವೃತ್ತಿಯನ್ನು ಬಂಧಿಸಲಾಯಿತು. ಸಮಲೈಂಗಿಕ ಸ್ತ್ರೀ ಪುರುಷರನ್ನು ಪ್ರತಿಬಂಧಕ ಪ್ರಭುತ್ವದ

[93] Justice Leila Seth, “A mother and a judge speaks out on Section 377”, The Times of India, 26 January, 2014

ಅಡಿಯಾಳುಗಳನ್ನಾಗಿಸಲಾಯಿತು. ನೈತಿಕತೆಯ ಕಾಯ್ದೆಯೊಂದು ಅವರ ಸಂಬಂಧಗಳನ್ನು ದ್ವೇಷಪೂರಿತಗೊಳಿಸಿತು. ಅಪರಾಧೀ ಕಾನೂನೊಂದನ್ನು, ಉದ್ದೇಶಪೂರ್ವಕವಾಗಿ ದಬ್ಬಾಳಿಕೆಯ ಸಾಧವನ್ನಾಗಿಸಿಕೊಳ್ಳಲಾಯಿತು. "ನಿಸರ್ಗದ ನಿಯಮದ ವಿರುದ್ಧ" "ಶಾರೀರಿಕ ಸಂಭೋಗ" ನಡೆಸಿದರೆ ಹತ್ತು ವರ್ಷ ಸೆರೆಮನೆಯಲ್ಲಿ ಕಳೆಯಬೇಕಾಗುವ ಅಪಾಯ ಬಂದೊದಗಿತು. ಅಂಥ ಅಪರಾಧ ನಡೆದರೆ, ಅದನ್ನು ಸಾಬೀತು ಪಡಿಸಲು ವ್ಯಕ್ತಿಗಳ ಅತ್ಯಂತ ಖಾಸಗೀ ಸ್ಥಳಗಳಲ್ಲಿ ಇಣುಕು ಹಾಕಿ, ಸಂಭೋಗದ ಗುರುತುಗಳನ್ನು ಹುಡುಕಲಾಗುತ್ತಿತ್ತು. ನಾಗರಿಕತೆಯು ಕ್ರೂರವಾಗಿ ನಡೆದುಕೊಂಡಿರುವುದು ಸ್ಪಷ್ಟ.

3. ಆ ಕಾನೂನನ್ನು ರಚಿಸಿ ಎಂಭತ್ತೇಳು ವರ್ಷಗಳಾದ ನಂತರ, ಭಾರತವು ವಸಾಹತುಶಾಹಿಯಿಂದ ಸ್ವಾತಂತ್ರ್ಯ ಪಡೆಯಿತು. ಆದಾಗ್ಯೂ, ಮೆಕಾಲೆ ಬಿಟ್ಟು ಹೋದ ದಂಡ ಸಂಹಿತೆಯ 377ನೇ ಪರಿಚ್ಛೇದವು, ನಾವು ಪ್ರಗತಿಪರ ಸಂವಿಧಾನ ಪಡೆದು ಅರವತ್ತೆಂಟು ವರ್ಷಗಳ ನಂತರವೂ ಮುಂದುವರೆದುಕೊಂಡು ಬಂದಿದೆ. ಸಮಲೈಂಗಿಕ ಸ್ತ್ರೀ ಪುರುಷರು, ಲಿಂಗಪರಿವರ್ತಿತರು ಮತ್ತು ಉಭಯಲಿಂಗಾಸಕ್ತರು, ಸ್ವಾತಂತ್ರ್ಯ ಸಿಕ್ಕು ಏಳು ದಶಕಗಳ ನಂತರವೂ ನಿಜವಾದ ಅರ್ಥದ ಸಮಾನ ನಾಗರಿಕತೆಯಿಂದ ವಂಚಿತರಾಗುತ್ತಲೇ ಬರುತ್ತಿದ್ದಾರೆ. ಈ ಕಾನೂನು ಅವರಮೇಲೆ ಈ ಕಾಲದೊಂದಿಗೆ ಸಂಬಂಧವೇ ಇಲ್ಲದ ನೈತಿಕತೆಯೊಂದನ್ನು ಹೇರಿದೆ. ಸಾಂವಿಧಾನಿಕ ನೈತಿಕತೆಯ ಆಳ್ವಿಕೆಯಿರುವ ಸಮಾಜವೊಂದರ ಸಮಾನವಾದ ಪಾಲುದಾರಿಕೆ ಅವರ ಹಕ್ಕಾಗಿದ್ದು, 377ನೇ ಪರಿಚ್ಛೇದ ಅವರನ್ನು ಹಕ್ಕನ್ನು ನಿರಾಕರಿಸುತ್ತದೆ. ಮತ್ತೆ ಮತ್ತೆ ಮರುಕಳಿಸುವ ಗತಕಾಲದ ನೆರಳು ಅವರ ಪರಿಪೂರ್ಣತೆಯ ಹುಡುಕಾಟಕ್ಕೆ ಅಡ್ಡಿಯನ್ನುಂಟುಮಾಡುತ್ತದೆ.

4. 377ನೇ ಪರಿಚ್ಛೇದವು ದಂಡನೆಯ ಭಯ ತೋರಿಸಿ ಅವರುಗಳು ಇತರರಂತೆ ನೆಡೆದುಕೊಳ್ಳುವಂತೆ ಮಾಡುತ್ತದೆ. ಈ ಪರಿಚ್ಛೇದ ಆಧರಿಸುವ ನೈತಿಕ ಮೌಲ್ಯಗಳಿಗೂ, ಸಂವಿಧಾನ ಅನುಸರಿಸುವ ನೈತಿಕತೆಗೂ ನಡುವೆ ಅಜಗಜಾಂತರ ವ್ಯತ್ಯಾಸವಿದ್ದು, ಸಂವಿಧಾನದಲ್ಲಿರುವ ಸ್ವಾತಂತ್ರ್ಯ ಮತ್ತು ಘನತೆಯೆಂಬ ತತ್ವಗಳು ಈ ಎರಡು ಬಗೆಯ ನೈತಿಕತೆಗಳನ್ನು ಭಿನ್ನವಾಗಿಸಿವೆ. ನಾವುಗಳು ಒಂದು ಸಮಾಜವಾಗಿ, ಅನ್ಯಾಯದ ಬಗೆ ಬಗೆಯ ಗುರುತುಗಳು ಮತ್ತು ರೂಪಗಳನ್ನು ಹುಡುಕಬಲ್ಲ ಪಶ್ನೆಗಳನ್ನೆತ್ತಬೇಕಿದೆ. ಹಾಗೆ ಮಾಡದಿದ್ದರೆ, ನಾವು ನ್ಯಾಯವಿಲ್ಲದ ಸಮಾಜವೊಂದರ ವಾರಸುದಾರರಷ್ಟೇ ಅಲ್ಲದೆ, ಅದರ ಕಾರಣವೂ ಆಗಿಬಿಡುವ ಅಪಾಯವಿದೆ. ಸಂವಿಧಾನವು, ತನ್ನ ಪ್ರಜೆಗಳಲ್ಲಿ ಅವರ

ಅಸ್ತಿತ್ವವನ್ನು ವ್ಯಾಖ್ಯಾನಿಸುವ ವಿಚಾರಗಳ ಕುರಿತು ಭಯ ಹುಟ್ಟಿಸಿ, ಆ ಭಯವನ್ನೇ ಅವರನ್ನು ರಕ್ಷಿಸಿ ಬೆಚ್ಚಗಿರಿಸುವ ಮೇಲು ಹೊದಿಕೆಯಾಗಿ ಬಳಸಲು ಅವಕಾಶ ಕೊಡುತ್ತದೆಯೇ? ನಾನು ನಂಬಿದಂತೆ ಮೇಲಿನ ಪ್ರಶ್ನೆಗೆ ಉತ್ತರ ಇರುವುದೇ ನಿಜವಾದರೆ, 377ನೇ ಪರಿಚ್ಛೇದದಿಂದ ಉಂಟಾಗುವ ದುಃಖ ಮತ್ತು ದುರಂತಗಳಿಗೆ ಪರಿಹಾರ ಒದಗಿಸುವುದೇ ಆ ಪ್ರಶ್ನೆಗೆ ನೀಡಬಹುದಾದ ಉತ್ತರವಾಗಿದೆ.

5. ಸಂವಿಧಾನ ರಾಜನೈತಿಕ ಅಧಿಕಾರದ ಹಸ್ತಾಂತರ ಉಂಟುಮಾಡಿತು. ಮತ್ತು ಎಲ್ಲಕ್ಕಿಂತ ಹೆಚ್ಚಾಗಿ, ಸಂವಿಧಾನವು ನ್ಯಾಯದ ಆಳ್ವಿಕೆಗೆ ಒಳಪಟ್ಟ ಸಮಾಜದ ಪರಿಕಲ್ಪನೆಯನ್ನು ಬಿಂಬಿಸುತ್ತದೆ. ವ್ಯಕ್ತಿಗತ ಸ್ವಾತಂತ್ರ್ಯ ಸಂವಿಧಾನದ ಆತ್ಮವಾಗಿದೆ. ಸಾಂವಿಧಾನಿಕ ನ್ಯಾಯದ ಪರಿಕಲ್ಪನೆಯಲ್ಲಿ, ಸಂಸ್ಕೃತಿ, ಸಿದ್ಧಾಂತ ಮತ್ತು ನಿಲುವುಗಳ ಭಿನ್ನತೆಗಳಿಗೆಲ್ಲ ಸ್ಥಾನವಿದೆ. ಪ್ರಜೆಗಳ ನಂಬಿಕೆ, ಆಲೋಚನೆ, ಮತ್ತು ಬದುಕುವ ಶೈಲಿಗಳಲ್ಲಿನ ಭಿನ್ನತೆಯ ವಿವಿಧ ರೂಪಗಳನ್ನು ಕಾಯುವುದರಲ್ಲೇ ಸಂವಿಧಾನದ ಅಡಿಪಾಯದ ಸ್ಥಿರತೆ ಅಡಕವಾಗಿದೆ. ಗಣತಂತ್ರ ಮತ್ತು ನಮ್ಮ ಸಂವಿಧಾನಗಳು ಇತರರು ಮಾಡಿದ್ದನ್ನೇ ಮಾಡಬೇಕೆಂದು ಕಡ್ಡಾಯಪಡಿಸುವುದಾಗಲೀ ಮತ್ತು ಸಂಸ್ಕೃತಿಯನ್ನು ಏಕರೂಪಗೊಳಿಸುದಾಗಲೀ ಮಾಡುವುದಿಲ್ಲ. ಬದಲಿಗೆ, ಸಂವಿಧಾನವು ಭಿನ್ನಮತವನ್ನು ಸಾಮಾಜಿಕ ಸಂಘರ್ಷಗಳ ಸುರಕ್ಷೆಗಿರುವ ಕವಾಟವೆಂದು ಪರಿಗಣಿಸಿ ಪೋಷಿಸುತ್ತದೆ. ನಾವು ನಮಗಿಂತ ಭಿನ್ನವಾಗಿರುವವರನ್ನು ಗುರುತಿಸಿದಾಗ, ಅದು ನಮ್ಮ ವಿಕಾಸವನ್ನು ಸೂಚಿಸುತ್ತದೆ. ಸಹಾನುಭೂತಿಯ, ಮಾನವೀಯ ಸಮಾಜವೊಂದರ ಕುರುಹುಗಳನ್ನು ತ್ಯಜಿಸುವುದು ನಮ್ಮನ್ನೇ ಅಪಾಯಕ್ಕೆ ಒಡ್ಡುತ್ತದೆ.

377ನೇ ಪರಿಚ್ಛೇದವು ಕಾನುನಿನ ಆಳ್ವಿಕೆಯ ಬದಲಿಗೆ, ಕಾನೂನಿಂದಲೇ ಆಳ್ವಿಕೆಗೆ ದಾರಿಮಾಡಿಕೊಡುತ್ತದೆ. ಕಾನೂನಿನ ಆಳ್ವಿಕೆಯಲ್ಲಿ ಕೇವಲ ಎಲ್ಲ ಬಗೆಯಲ್ಲಿ ಸಮಾನತೆ ಸ್ವಾತಂತ್ರ್ಯ ಮತ್ತು ಘನತೆಗಳನ್ನು ಎತ್ತಿಹಿಡಿಯುವ ನಿಷ್ಪಕ್ಷಪಾತ ಸಮಾಜದ ಅಗತ್ಯವಿರುತ್ತದೆ.

6. 377ನೇ ಪರಿಚ್ಛೇದವು ಈ ದೇಶದ ನಾಗರೀಕರ ಸಮೂಹವೊಂದನ್ನು ಮುಖ್ಯವಾಹಿನಿಯ ಅಂಚಿಗೆ ತಳ್ಳಿ ಅವರ ಅಸ್ಮಿತೆಗಳಿಗೆ ಮಾರಕವಾಗಿ ಪರಿಣಮಿಸಿದೆ. ಕಾನೂನಿನ ನಿಬಂಧನೆಗಳನ್ನು ಒಪ್ಪಿಗೆಯ ಲೈಂಗಿಕ ಸಂಬಂಧದಲ್ಲಿ ತೊಡಗುವ ವಯಸ್ಕರ ಮೇಲೆ ಹೇರುವ ಮೂಲಕ ಈ ಪರಿಚ್ಛೇದವು, ಸರಕಾರದ ಕೈಗೆ

ಸಾಮಜಿಕ ಸಿದ್ಧಮಾದರಿಗಳನ್ನು ಅನುಮೋದಿಸುವ ಮತ್ತು ಭೇದಭಾವವನ್ನು ಪ್ರೋತ್ಸಾಹಿಸುವ ಅಧಿಕಾರವನ್ನು ನೀಡಿಬಿಟ್ಟಿದೆ. ಸಮಲೈಂಗಿಕ ಸ್ತ್ರೀ ಪುರುಷರು, ಉಭಯಲಿಂಗಾಸಕ್ತರು ಮತ್ತು ಲಿಂಗ ಪರಿವರ್ತಿತರನ್ನು ಮುಚ್ಚುಮರೆಯಲ್ಲಿ ಬದುಕುವ ಸಂಕಟಕ್ಕೆ ತಳ್ಳಲಾಗಿದೆ. ತಂತ್ರಜ್ಞಾನದ ಯುಗದಲ್ಲಿ, ಲೈಂಗಿಕ ನಿಲುವು ಎಂಬುದು ಬೆದರಿಕೆಯಲ್ಲದಿದ್ದರೂ, ಶೋಷಣೆಯ ಅಸ್ತ್ರವಾಗಿ ಬಳಕೆಯಾಗುತ್ತಿದೆ. 377ನೇ ಪರಿಚ್ಛೇದದ ಪರಿಣಾಮಗಳು, ಬರಿಯ ಅಪರಾಧಕ್ಕೆ ದೊರಕುವ ಶಿಕ್ಷೆಯಷ್ಟೇ ಆಗಿರದೇ, ಇನ್ನೂ ಮುಂದುವರೆದು, ವ್ಯಕ್ತಿಗಳು ಘನತೆಯಿಂದ ಬದುಕಲು ಅತ್ಯಗತ್ಯವಾಗಿರುವ ಅವರ ಅಸ್ತಿತ್ವಕ್ಕೇ ಕೊಡಲಿಯೇಟು ನೀಡುತ್ತಿದೆ.

7. ಇತಿಹಾಸದ ತಪ್ಪುಗಳನ್ನು ಸರಿಮಾಡುವುದು ಕಷ್ಟಸಾಧ್ಯ, ಆದರೆ, ಭವಿಷ್ಯಕ್ಕೊಂದು ದಿಕ್ಕನ್ನು ಕಲ್ಪಿಸುವುದು ಖಂಡಿತವಾಗಿ ನಮ್ಮ ಕೈಲಿದೆ. ಅದನ್ನು ಮಾಡಬೇಕಿದ್ದಲ್ಲಿ, ನಾನು ಈ ಪ್ರಕರಣದಲ್ಲಿ ಹೇಳಹೊರಟಿರುವಂತೆ, ಸಮಲೈಂಗಿಕ ಸ್ತ್ರೀ ಪುರುಷರು, ಉಭಯಲಿಂಗಾಸಕ್ತರು ಮತ್ತು ಲಿಂಗ ಪರಿವರ್ತಿತರಿಗೆ ತಮ್ಮ ಪೌರತ್ವ ಮತ್ತು ಅದರ ವಿವಿಧ ಬಗೆಯ ಅಭಿವ್ಯಕ್ತಿಗಳ ಮೇಲೆ ಇತರರಿಗೆ ಸಮಾನವಾದ ಅಧಿಕಾರವಿದೆ ಎಂಬುದನ್ನು ಎತ್ತಿ ಹಿಡಿಯುವುದೊಂದೇ ದಾರಿ. ಸಂವಿಧಾನ ಲೈಂಗಿಕ ನಿಲುವನ್ನು ಗುರುತಿಸಿ ರಕ್ಷಿಸಿದೆ. ಹೀಗಾಗಿ, ಸಮಾನ ಲಿಂಗದ ವಯಸ್ಕ ವ್ಯಕ್ತಿಗಳ ನಡುವಿನ ಒಪ್ಪಿಗೆಯ ಸಂಬಂಧವನ್ನು ದಂಡಿಸುವ 377ನೇ ಪರಿಚ್ಛೇದವು ಸಂವಿಧಾನಬಾಹಿರವಾಗಿದೆ. ಸ್ವಾತಂತ್ರ್ಯ ಮತ್ತು ಘನತೆಗಳೆಂಬ ಸಾಂವಿಧಾನಿಕ ಮೌಲ್ಯಗಳು, ಮೇಲಿನದಕ್ಕೆ ಹೊರತಾದ ಬೇರೇನನ್ನೂ ಒಪ್ಪುವುದಿಲ್ಲ.

## B. "ನ್ಯಾಯಾಲಯದ ವಿವೇಚನೆಗೆ" - ನ್ಯಾಯಾಲಯಕ್ಕೆ ಕೇಂದ್ರ ಸರ್ಕಾರದ ಅರಿಕೆ

8. ಈ ವಿಚಾರಣೆ ಆರಂಭವಾದ ನಂತರ, ಹೆಚ್ಚುವರಿ ಸಾಲಿಸಿಟರ್ ಜನರಲ್ (ಎ.ಎಸ್.ಜಿ) ಒಂದು ಅಫಿಡವಿಟ್ಟನ್ನು ಸಲ್ಲಿಸುತ್ತಾರೆ. ಅದರ ಪ್ರಕಾರ, ಕೇಂದ್ರ ಸರ್ಕಾರವು 377ನೇ ಪರಿಚ್ಛೇದದ ಮಾನ್ಯತೆಯ ನಿರ್ಧಾರವನ್ನು "ನ್ಯಾಯಾಲಯದ ವಿವೇಚನೆ"ಗೆ ಬಿಡುವುದಾಗಿ ಹೇಳುತ್ತದೆ.. ಅದರರ್ಥ, ಸರಕಾರಕ್ಕೆ ಈ ವಿಷಯದಲ್ಲಿ ತನ್ನದೇ ಆದ ದೃಷ್ಟಿಕೋನವಿಲ್ಲ ಮತ್ತು ಅದು ನ್ಯಾಯಾಲಯ ಏನು ನಿರ್ಧಾರಿಸುತ್ತದೋ ಅದನ್ನು ಒಪ್ಪಿಕೊಳ್ಳುವುದರಲ್ಲೇ ತೃಪ್ತಿ ಕಾಣುತ್ತದೆ. ಆದಾಗ್ಯೂ, ನ್ಯಾಯಾಲಯದ ನಡಾವಳಿಗಳ

ಸಂದರ್ಭದಲ್ಲಿ ಎ.ಎಸ್.ಜಿ. ರವರು ನ್ಯಾಯಾಲಯವು **ಸುರೇಶ್ ಕುಮಾರ್ ಕೌಶಲ್ v. ನಾಜ್ ಪ್ರತಿಷ್ಠಾನ (ಕೌಶಲ್)** ಪ್ರಕರಣದ ತೀರ್ಪಿನ ಸಮಂಜಸತೆಯನ್ನು ಪ್ರಶ್ನಿಸುವ ಅರ್ಜಿಗೆ ಮಾತ್ರ ಸೀಮಿತಗೊಳ್ಳಬೇಕೆಂದು ಮನವಿಮಾಡಿಕೊಂಡಿರುತ್ತಾರೆ.

9. ಸರ್ಕಾರ 377ನೇ ಪರಿಚ್ಛೇದದ ಮಾನ್ಯತೆ ಮತ್ತು ಕೌಶಲ್ ಪ್ರಕರಣದ ತೀರ್ಪಿನ ಸಮಂಜಸತೆಯ ಬಗೆಗೆ ಧೃಡವಾದ ನಿಲುವು ತಾಳಿ, ಅದರ ಬಗೆಗೆಗಿನ ತನ್ನ ದೃಷ್ಟಿಕೋನವನ್ನು ಖಚಿತವಾಗಿ ತಿಳಿಯಪಡಿಸಿದ್ದರೆ ಅದನ್ನು ನಾವು ಮೆಚ್ಚಿಕೊಳ್ಳುತ್ತಿದ್ದೆವು. ಸರ್ಕಾರ ಈಗ ತಾಳಿರುವ ಇಬ್ಬಂದಿ ನಿಲುವಿನಿಂದ, ಈ ಪ್ರಕರಣದಲ್ಲಿ ಎತ್ತಲಾಗಿರುವ ವಿಚಾರಗಳನ್ನು ವಿಮರ್ಶಿಸಿ ನಿರ್ಧರಿಸುವ ಅಗತ್ಯಕ್ಕೇನೂ ಕುಂದುಂಟಾಗುವುದಿಲ್ಲ. 377ನೇ ಪರಿಚ್ಛೇದದ ಸಾಂವಿಧಾನಿಕ ಮನ್ಯತೆಗೆ ಒಡ್ಡಿರುವ ಸವಾಲಿಗೆ ಈ ವಿಚಾರಣೆಯಲ್ಲಿ ಸೂಕ್ತವಾದ ಪರಿಹಾರ ದೊರೆಯಬೇಕು ಮತ್ತು ಅದುವೇ ಈ ನ್ಯಾಯಾಲಯದ ನಿಜವಾದ ಕರ್ತವ್ಯವಾಗಿದೆ. ಸಾಂವಿಧಾನಿಕ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಯಾವುದೇ ರಿಯಾಯತಿಯಿರಬಾರದು. ಕೇಂದ್ರ ಸರ್ಕಾರದ ಹೇಳಿಕೆಯು, ಶಾಸನದ ಸದರಿ ಕಾಯ್ದೆಯು ಅಮಾನ್ಯವಾದುದು ಎಂಬ ಅರ್ಜಿದಾರ ತಕರಾರನ್ನು ಬಲಗೊಳಿಸುವುದಿಲ್ಲ. ಒಂದು ವೇಳೆ ಈ ಪ್ರಕರಣವನ್ನು ಇತ್ಯರ್ಥ ಮಾಡದಿದ್ದರೆ ಕಾನೂನಿನ ವಿಷಯದಲ್ಲಿ ರಾಜಿಮಾಡಿಕೊಂದಂತಾಗುತ್ತದೆ. ಸರ್ಕಾರ ತೆಗೆದುಕೊಂಡಿರುವ ನಿಲುವಿನಿಂದ, ಈ ವಿಚಾರ ಇನ್ನೂ ನ್ಯಾಯಾಲಯದ "ವಿವೇಚನೆ" ಯನ್ನು ಅವಲಂಬಿಸಿದೆ ಎಂಬುದು ಸ್ಪಷ್ಟವಾಗಿದೆ. ನಮ್ಮ ವಿವೇಚನೆಯನ್ನು ಆಶ್ರಯಿಸಿರುವ ಈ ಪರಿಯನ್ನು ಗಮನಿಸಿದರೆ, ನ್ಯಾಯಮೂರ್ತಿಗಳಾದ ನಾವುಗಳು ಮರೆತಿರುವ "ಹೊಗಳಿಕೆಯು ಅಮಾಯಕರ ಪಾಲಿನ ಸುಡುಗಾಡು" ಎಂಬ ಸತ್ಯವನ್ನು ನೆನಪಿಸಿಕೊಳ್ಳುವುದು ಒಳ್ಳೆಯದೆನಿಸುತ್ತದೆ.

10. ಸಾಂವಿಧಾನಿಕ ಸಿದ್ಧಾಂತವೊಂದರ ವಿಚಾರದಲ್ಲಿ ಸರ್ಕಾರದ ಪರವಾಗಿ ಯಾವುದೇ ಮನವಿ ಇಲ್ಲದಿರುವ ಪ್ರಕರಣವನ್ನು ಹೇಗೆ ಇತ್ಯರ್ಥಮಾಡಬೇಕು ಎಂಬ ಪ್ರಶ್ನೆಗೆ ಸಾಂವಿಧಾನಿಕ ನ್ಯಾಯಾಲಯವೊಂದರ ಬಳಿಯಿರುವ ಒಂದೇ ಉತ್ತರವೆಂದರೆ, ಸಂವಿಧಾನದ ಮೌಲ್ಯ ಮತ್ತು ಆದರ್ಶಗಳನ್ನು ಎತ್ತಿಹಿಡಿಯುವಂಥ ತೀರ್ಪನ್ನು ಪ್ರಕಟಿಸುವುದು.

11. ನ್ಯಾಯಾಲಯವು ಈ ಪ್ರಕರಣದಲ್ಲಿ ಉಲ್ಲೇಖವಾಗಿರುವ ವಿಷಯವನ್ನಷ್ಟೇ ಪರಿಗಣಿಸಬೇಕು ಎಂಬ ಎ.ಎಸ್.ಜಿ. ರವರ ಮನವಿಯು ನ್ಯಾಯೋಚಿತವಾಗಿದೆ. ಈ ಮನವಿಯು ನ್ಯಾಯಾಲಯ ಈ ಪ್ರಕರಣವನ್ನು ವಿವೇಕದ ದಾರಿಯಲ್ಲಿ ನಡೆಸಬೇಕು ಎಂಬುದನ್ನು ಸೂಚಿಸುತ್ತದೆ. ವಿವೇಕದ ಮಾತನ್ನು ಕೇಳುವುದೆಂದರೆ, ನ್ಯಾಯಾಲಯ ಈ ಮೊಕದ್ದಮೆಯಲ್ಲಿ ಉಲ್ಲೇಖಿಸಲಾಗಿರುವ ಸಮಸ್ಯೆಯನ್ನಷ್ಟೇ ಪರಿಗಣಿಸಿ ಪ್ರಕರಣದ ವ್ಯಾಪ್ತಿಯಾಚೆಯ ವಿಷಯಗಳನ್ನು ಕೈಗೆತ್ತಿಕೊಳ್ಳದಿರುವುದು. ಎ.ಎಸ್.ಜಿ.ರವರು ಸೂಚಿಸಿರುವ ಕ್ರಮದಲ್ಲಿರುವ ವಿವೇಕವನ್ನು ಒಪ್ಪಿಕೊಂಡರೂ, ಈ ಪ್ರಕರಣದ ವ್ಯಾಪ್ತಿಯ ಕುರಿತು ಕೆಲ ಮುಖ್ಯ ವಿಚಾರಗಳನ್ನು ಗಮನಿಸುವುದು ಅತ್ಯಗತ್ಯ.

12. **ಕೌಶಲ್** ಪ್ರಕರಣದ ತೀರ್ಪು ಸರಿಯಾಗಿದೆಯೇ ಎಂಬ ಪ್ರಶ್ನೆ ಸದ್ಯ ನ್ಯಾಯಾಲಯದ ಮುಂದಿದೆ. ಕೌಶಲ್ ಪ್ರಕರಣದ ತೀರ್ಪಿನಲ್ಲಿ (**ನಾಜ್ ಪ್ರತಿಷ್ಠಾನ v. ದೆಹಲಿ ಎ.ಸಿ.ಟಿ. ಸರ್ಕಾರ**[94] **(ನಾಜ್)** ಪ್ರಕರಣದಲ್ಲಿ ದೆಹಲಿ ಉಚ್ಚ ನ್ಯಾಯಾಲಯದ ತೀರ್ಪು) ಒಪ್ಪಿಗೆಯ ಲೈಂಗಿಕ ಕ್ರಿಯಗಳಲ್ಲಿ (ನಿಸರ್ಗದ ನಿಯಮಕ್ಕೆ ವಿರುದ್ಧವಾದ ಶಾರೀರಿಕ ಸಂಭೋಗ) ತೊಡಗುವ ವಯಸ್ಕರ ನಡುವಿನ ಸಂಬಂಧವನ್ನೂ ಕಾನೂನುಬಾಹಿರಗೊಳಿಸುವ 377ನೇ ಪರಿಚ್ಛೇದದ ಸಾಂವಿಧಾನಿಕ ಮಾನ್ಯತೆಯ ವಿಚಾರವನ್ನು ಪ್ರಸ್ತಾಪಿಸಲಾಗಿತ್ತು. ಈ ಕಾಯ್ದೆಯ ಮಾನ್ಯತೆಯನ್ನು ಪರಾಂಬರಿಸುವಾಗ, ಎಲ್.ಜಿ.ಬಿ.ಟಿ. ವ್ಯಕ್ತಿಗಳು ಆಗ್ರಹಪಡಿಸುತ್ತಿರುವ ಸಾಂವಿಧಾನಿಕ ಅಧಿಕಾರದ ಸ್ವರೂಪವನ್ನು ಅರ್ಥಮಾಡಿಕೊಳ್ಳುವುದು ಅಗತ್ಯವಾಗಿದೆ.

ಅರ್ಜಿದಾರರ ಪ್ರಕಾರ ತಮ್ಮದೇ ಲಿಂಗದ ವಯಸ್ಕ ವ್ಯಕ್ತಿಯೊಂದಿಗೆ ಪರಸ್ಪರ ಒಪ್ಪಿಗೆಯ ಸಂಬಂಧ ಬೆಳೆಸುವ ಹಕ್ಕು, ಬದುಕುವ ಹಕ್ಕಿನಿಂದ ಉದ್ಭವಿಸುತ್ತದೆ ಮತ್ತು ಅದು ಸಂವಿಧಾನದಡಿಯಲ್ಲಿ ರಕ್ಷಿಸಲಾಗಿರುವ ಮೌಲ್ಯವಾಗಿದೆ. ಅವರುಗಳು, ಲೈಂಗಿಕ ನಿಲುವನ್ನಾಧರಿಸಿದ ತಮ್ಮ ಅಸ್ಮಿತೆಯನ್ನೇ ಈ ಹಕ್ಕಿಗೆ ಆಧಾರವಾಗಿಸಿಕೊಳ್ಳುತ್ತಾರೆ. ಅವರುಗಳ ಪ್ರಕಾರ ಪ್ರಜೆಗಳ ಸ್ವಾತಂತ್ರ್ಯ ಮತ್ತು ಘನತೆಯನ್ನು ಉಳಿಸಬೇಕಿದ್ದಲ್ಲಿ, ಅವರ ಲೈಂಗಿಕ ನಿಲುವಿಗೆ ಕಾನೂನಿನ ಮಾನ್ಯತೆ ಮತ್ತು ರಕ್ಷಣೆಯನ್ನು ನೀಡಬೇಕಾಗುತ್ತದೆ. ತಮ್ಮ ಲೈಂಗಿಕ ನಿಲುವಿನ ಮೂಲಕ ತಮ್ಮ ಅಸ್ಮಿತೆಯನ್ನು ಪ್ರಪಂಚದೆದುರು ತೋರ್ಪಡಿಸುವುದು ಹಾಗೂ ಸಮುದಾಯ ಮತ್ತು ಸರ್ಕಾರದೊಂದಿಗಿನ ತಮ್ಮ ವ್ಯವಹಾರಗಳಲ್ಲಿ ಆ ನಿಲುವನ್ನು ಪ್ರಕಟಪಡಿಸುವುದು, ಇವೆರೆಡೂ, ಸಂವಿಧಾನ ಖಾತ್ರಿಪಡಿಸಿರುವ ವಾಕ್ ಮತ್ತು

[94] 2010) Cri LJ 94

ಅಭಿವ್ಯಕ್ತಿ ಸ್ವಾತಂತ್ರ್ಯಗಳ ಅವಿಭಾಜ್ಯ ಅಂಗವಾಗಿವೆ. ಲೈಂಗಿಕ ನಿಲುವು, ಲಿಂಗಾಧಾರಿತ ತಾರತಮ್ಯದ ವಿರುದ್ಧದ ಹಕ್ಕಿನ ಅವಿಭಾಜ್ಯ ಅಂಗವೆಂದೂ ಹೇಳಲಾಗಿದೆ. ಸಮಲೈಂಗಿಕ ಪುರುಷರ ಲೈಂಗಿಕ ಅಭಿವ್ಯಕ್ತಿಗಳೆಲ್ಲ 377ನೇ ಪರಿಚ್ಛೇದದಲ್ಲಿ ನಿರ್ಬಂಧಿಸಿರುವ ಕ್ರಿಯೆಗಳಡಿಯಲ್ಲೇ ಬರುವುದರಿಂದ, ಸದರಿ ಕಾಯ್ದೆಯು ಅವರನ್ನು ಇತರರಿಗಿಂತ ಹೆಚ್ಚಾಗಿ ಬಾಧಿಸುತ್ತದೆ ಮತ್ತು ಆ ಮೂಲಕ ನಿರಂಕುಶತ್ವದ ವಿರುದ್ಧದ ಮೂಲಭೂತ ರಕ್ಷಣೆಯನ್ನು ಕೂಡಾ ಉಲ್ಲಂಘಿಸುತ್ತದೆ ಎಂದು ಒತ್ತಿ ಹೇಳಲಾಗಿದೆ.

13. ನ್ಯಾಯಾಲಯವು, 377ನೇ ಪರಿಚ್ಛೇದಕ್ಕೆ ಸಂಬಂಧಿಸಿದ ತಕರಾರನ್ನು ಪರಿಹರಿಸುವಾಗ, ಅರ್ಜಿದಾರರು ಪಡೆಯಲೆತ್ನಿಸುತ್ತಿರುವ ಅಧಿಕಾರದ ಸ್ವರೂಪವನ್ನು, ಸಂವಿಧಾನದ ನೆಲೆಗಟ್ಟಿನಲ್ಲಿ ಅರ್ಥಮಾಡಿಕೊಂಡು ವಿವರಿಸಬೇಕು. 377ನೇ ಪರಿಚ್ಛೇದದ ವಿರುದ್ಧದ ತಕರಾರನ್ನು, ಸರಿಯಾಗಿ ಗ್ರಹಿಸಬೇಕಿದ್ದರೆ, ಸಾಂವಿಧಾನಿಕ ಹಕ್ಕುಗಳನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಅದಕ್ಕಾಗಿ, ಈ ಮನವಿಯ ಹಿಂದಿರುವ ಸಾಂವಿಧಾನಿಕ ಕಾರಣಗಳನ್ನು ತಿಳಿಯುವುದು ಅಗತ್ಯ. ಒಂದು ಹಕ್ಕನ್ನು ಸಂವಿಧಾನದಡಿಯಲ್ಲಿ ರಕ್ಷಿಸಲಾಗುತ್ತಿದೆ ಎಂಬ ವಾದ ಬಂದಾಗ, ಯಾವ ಆಧಾರದ ಮೇಲೆ ಇಂತಹ ವಾದ ಮಂಡಿಸಲಾಗುತ್ತಿದೆ ಎಂಬುದನ್ನು ನ್ಯಾಯಾಲಯ ವಿಶ್ಲೇಷಿಸಬೇಕು.ಹೀಗಾಗಿ, ಈ ಮೊಕದ್ದಮೆಯನ್ನು ಇತ್ಯರ್ಥ ಪಡಿಸುವಾಗ, ನ್ಯಾಯಾಲಯವು ಎಲ್.ಜಿ.ಬಿ.ಟಿ. ಸಮುದಾಯದ ಅಧಿಕಾರಗಳನ್ನು ಸಂವಿಧಾನದ ಚೌಕಟ್ಟಿನಲ್ಲೇ ವಿಶ್ಲೇಷಿಸಬೇಕು. ನಾವುಗಳು ಇಲ್ಲಿಯವರೆಗೆ ಈ ವಿಚಾರವನ್ನು ಸಾಂವಿಧಾನಿಕ ವಿಶ್ಲೇಷಣೆಯ ದೃಷ್ಟಿಕೋನದಿಂದ ಗಮನಿಸಿದ್ದೇವೆ. ಆದರೆ, ಈ ವಿಚಾರವನ್ನು ಮತ್ತೊಂದು ಸರಳವಾದ ತರ್ಕದ ಮೂಲಕ ಗ್ರಹಿಸಿಕೊಳ್ಳಬಹುದು, ಮತ್ತು ನಮ್ಮ ಪ್ರಕಾರ ಆ ತರ್ಕಕ್ಕೆ ಸಾಮಾನ್ಯ ಜ್ಞಾನವೊಂದೇ ಆಧಾರ. ಸಮಾನ ಲಿಂಗದ ವಯಸ್ಕರ ನಡುವಿನ ಒಪ್ಪಿಗೆಯ ಲೈಂಗಿಕ ಕೃತ್ಯಗಳು, ಸಮಲೈಂಗಿಕ ವ್ಯಕ್ತಿಗಳಿಗೆ ಪರಿಪೂರ್ಣವಾದ ಜೀವನ ನಡೆಸುವ ಅಧಿಕಾರವಿದೆ ಎಂಬುದನ್ನು ಪ್ರತಿಪಾದಿಸುತ್ತವೆ. ಅರ್ಥಪೂರ್ಣ ಬದುಕನ್ನು ಕಟ್ಟಿಕೊಳ್ಳಲು ಸಹಾಯಮಾಡುವ ಪ್ರತಿ ಅಂಶವೂ ಸಮಲೈಂಗಿಕ ಸ್ತ್ರೀ ಪುರುಷರ ಸಂಬಂಧಗಳನ್ನು ಉಳಿಸಿ ಬೆಳೆಸುತ್ತದೆ. ಅಂತಹ ಸಂಬಂಧಗಳ ನಿಜವಾದ ಸ್ವರೂಪ ಮತ್ತು ಅವರುಗಳಿಗೆ ಸಂವಿಧಾನ ನೀಡುವ ರಕ್ಷಣೆಯನ್ನು ಅರ್ಥಮಾಡಿಕೊಳ್ಳಲು, ಅವರನ್ನು ದಯಾಮಯ ಮತ್ತು ಮಾನವೀಯ ಸಮಾಜವೊಂದರ ಸಮಾನ ಅಧಿಕಾರದ ಸದ್ಯಸ್ಯರು ಎಂದು ಒಪ್ಪಿಕೊಳ್ಳುವ ಮನಃಸ್ಥಿತಿಯನ್ನು

ರೂಢಿಸಕೊಳ್ಳಬೇಕಾಗುತ್ತದೆ. ಇಂತಹ ಸಮಗ್ರ ದೃಷ್ಟಿಕೋನವನ್ನು ಪಡೆಯುವುದಕ್ಕಾಗಿ ನ್ಯಾಯಾಲಯವು ಲೈಂಗಿಕತೆ ಎಂಬ ತತ್ವದ ಆಸರೆ ಪಡೆಯಬೇಕಾಗುತ್ತದೆ. ಆದರೆ, ನ್ಯಾಯಾಲಯ ಆ ತತ್ವಕ್ಕಷ್ಟೇ ಸೀಮಿತವಾಗಿರುವ ಅಗತ್ಯವಿಲ್ಲ. ಲೈಂಗಿಕ ನಿಲುವು ವ್ಯಕ್ತಿಗಳ ಅಸ್ಮಿತೆಯನ್ನು ರೂಪಿಸುತ್ತದೆ ಮತ್ತು ಈ ಅಸ್ಮಿತೆ, ಘನತೆಯಿಂದ ಬದುಕುವ ಹಕ್ಕನ್ನು ವ್ಯಕ್ತಿಗಳಿಗೆ ನೀಡುತ್ತದೆ ಎಂಬುದು ಸಂವಿಧಾನದ ಅಭಿಪ್ರಾಯ. ಸದರಿ ಸಾಂವಿಧಾನಿಕ ಹಕ್ಕನ್ನು ನಿರ್ಧರಿಸುವಾಗ ಇಂತಹ ವಿಶಾಲ ದೃಷ್ಟಿಕೋನವನ್ನು ಹೊಂದಿರಬೇಕಾಗುತ್ತದೆ.

## C. ಫ್ರಂ ದಿ ಯಾಶಸ್ ಆಫ್ ದಿ ಗೇ (ಸಮಲೈಂಗಿಕರ ಬೂದಿಯಿಂದ)

“Democracy

It's coming through a hole in the air,

…

It's coming from the feel

that this ain't exactly real,

or it's real, but it ain't exactly there.

From the wars against disorder,

from the sirens night and day,

from the fires of the homeless,

from the ashes of the gay:

Democracy is coming[95]…

[95] ಲಿಯೊನಾರ್ಡ್ ಕೊಹೆನ್ನ ಹಾಡು "ಡೆಮಾಕ್ರಸಿ" (1992) ನ ಸಾಹಿತ್ಯ

ಪ್ರಜಾತಂತ್ರ

ಅದು ಗಾಳಿಯಲ್ಲಿರುವ ತೂತಿನಿಂದ ಬರುತ್ತಿದೆ

……

ಅದು ನೈಜವೆಂದು ಹೇಳಲಾಗದ,

ಅಥವಾ ನಿಜವಿದ್ದರೂ ಇಲ್ಲಿದೆ ಎಂದು ಹೇಳಲಾಗದ, ಭಾವವೊಂದರಿಂದ ಬರುತ್ತಿದೆ

ಅವ್ಯವಸ್ಥೆಯೊಂದಿಗಿನ ಕಾಳಗದಿಂದ,

ಹಗಲಿರುಳೂ ಮೊರೆಯುವ ಎಚ್ಚರಿಕೆಗಂಟೆಯಿಂದ

ಬೀದಿಗೆಬಿದ್ದವರೊಳಗಿನ ಬೆಂಕಿಯಿಂದ

ಸಮಲೈಂಗಿಕರ ಬೂದಿಯಿಂದ

ಪ್ರಜಾತಂತ್ರ ಬರುತ್ತಿದೆ

**14.** ಭಾರತೀಯ ದಂಡ ಸಂಹಿತೆ, 1860 (ಐ.ಪಿ.ಸಿ.)ಯ 377ನೇ ಪರಿಚ್ಛೇದವು, "ನಿಸರ್ಗದ ನಿಯಮಕ್ಕೆ ವಿರುದ್ಧವಾಗಿರುವ ಶಾರೀರಿಕ ಸಂಭೋಗ"ವನ್ನು ಅಪರಾಧವೆಂದು ಪರಿಗಣಿಸುತ್ತದೆ. ಶಿಶ್ನ-ಯೋನಿ ಸಮಾಗಮವನ್ನು ಒಳಗೊಳ್ಳದ ಸಂಭೋಗವನ್ನು ನಿಷೇಧಿಸುವ ಈ ಕಾಯ್ದೆಯು, ವಸಾಹತುಶಾಹೀ ಪ್ರಭುತ್ವವೊಂದರಿಂದ ಇತಿಹಾಸದ ಒಂದು ಘಟ್ಟದಲ್ಲಿ ನಡೆದ ನಿರ್ಧಿಷ್ಟವಾದ ನೈತಿಕ ನಿಯಮಗಳ ಹೇರಿಕೆಯನ್ನು ಸೂಚಿಸುತ್ತದೆ. ಮೂಲತಃ ಪರದೇಶದ ಕಾನೂನಾಗಿರುವ [96] 377ನೇ ಪರಿಚ್ಛೇದವು, ವಸಾಹತಿಶಾಹಿ ವಿರೋಧಿ ಹೋರಾಟ ಮತ್ತು ಪ್ರಜೆಗಳ ಮೂಲಭೂತ ಹಕ್ಕುಗಳನ್ನು ಸುನಿಶ್ಚಿತಪಡಿಸುವ ಭಾರತೀಯ ಪ್ರಜಾಪ್ರಭುತ್ವದ ಸ್ಥಾಪನೆಯ ಹೊರತಾಗಿಯೂ, ಸುಮಾರು 158 ವರ್ಷಗಳಷ್ಟು ಕಾಲದಿಂದ

[96] Same-Sex Love in India: A Literary History (Ruth Vanita and Saleem Kidwai, eds.), Penguin India (2008) ನೋಡಿ

ಉಳಿದುಬಂದಿದೆ. ಈ ಪರಿಚ್ಛೇದದ ವಸಾಹತುಶಾಹಿ ಮೂಲ ಮತ್ತು ಲೈಂಗಿಕತೆಯ ಬಗೆಗಿನ ನಂಬುಗೆಗಳನ್ನು ವಿಶ್ಲೇಷಿಸಿದರೆ, ಅದರ ಸಮಕಾಲೀನ ಔಚಿತ್ಯವನ್ನು ತಿಳಿದುಕೊಳ್ಳುವುದು ಸುಲಭವಾಗುತ್ತದೆ[97].

15. ಭಾರತೀಯ ದಂಡ ಸಂಹಿತೆಯ ನಿರ್ಮಾತೃವಾದ ಭಾರತದ ಮೊದಲನೇ ಕಾನೂನು ಆಯೋಗದ ಅಧ್ಯಕ್ಷ ಲಾರ್ಡ್ ಥಾಮಸ್ ಬ್ಯಾಬಿಂಗ್ಟನ್ ಮೆಕಾಲೆಯು, ದಂಡ ಸಂಹಿತೆಯನ್ನು ರೂಪಿಸಲು ತಾನು ಬಳಸಿದ ಎರಡು ಮುಖ್ಯ ಆಕರಗಳನ್ನು ಹೆಸರಿಸುತ್ತಾರೆ: ಅವುಗಳೆಂದರೆ, ಫ್ರೆಂಚ್ ದಂಡ ಸಂಹಿತೆ, 1810 ಮತ್ತು ಎಡ್ವರ್ಡ್ ಲಿವಿಂಗ್ಸ್ಟನ್ನನ ಲೂಸಿಯಾನಾ ಸಂಹಿತೆ[98]. ಲಾರ್ಡ್ ಮೆಕಾಲೆಯು, ಇಂಗ್ಲಿಷ್ ಕಾಮನ್ ಲಾ ಮತ್ತು ಬ್ರಿಟಿಷ್ ಅರಸೊತ್ತಿಗೆಯ ಆಯೋಗದ 1843ನೇ ಇಸವಿಯ ಕರಡು ಸಂಹಿತೆಗಳಿಂದಲೂ [99] ಪ್ರಭಾವಿತರಾಗಿದ್ದಾರೆ.

> ಇಂಗ್ಲೆಂಡಿನ ಕ್ರಿಮಿನಲ್ ಕಾನೂನಿನ ತಾಂತ್ರಿಕತೆ ಮತ್ತು ಇತರ ಅತಿರೇಕಗಳನ್ನು ತೆಗೆದು ಹಾಕಿ, ಅದನ್ನು ವ್ಯವಸ್ಥಿತವಾಗಿ ಜೋಡಿಸಿ, ಅದಕ್ಕೆ ಬ್ರಿಟಿಷ್ ಭಾರತಕ್ಕೆ ಹೊಂದುವಂತೆ ಕೆಲ ಮಾರ್ಪಾಡುಗಳನ್ನು ಮಾಡಿದರೆ, ಅದು ಭಾರತೀಯ ದಂಡ ಸಂಹಿತೆಯ ರೂಪ ಪಡೆಯುತ್ತದೆ[100]

---

[97] Law like Love: Queer Perspectives on Law (Arvind Narrain and Alok Gupta, eds.), Yoda Press (2011).

[98] K. N. Chandrasekharan Pillai and Shabistan Aquil, "Historical Introduction to the Indian Penal Code", in Essays on the Indian Penal Code, New Delhi, Indian Law Institute (2005); Siyuan Chen, "Codification, Macaulay and the Indian Penal Code [Book Review], Singapore Journal of Legal Studies, National University of Singapore, Faculty of Law (2011), at pages 581-584.

[99] Douglas E. Sanders, "377 and the Unnatural Afterlife of British Colonialism in Asia", Asian Journal of Comparative Law, Vol. 4 (2009), at page 11 ("Douglas"); David Skuy, "Macaulay and the Indian Penal Code of 1862: The Myth of the Inherent Superiority and Modernity of the English Legal System Compared to India's Legal System in the Nineteenth Century", Modern Asian Studies, Vol. 32 (1998), at pages 513-557.

[100] Barry Wright, "Macaulay's Indian Penal Code: Historical Context and Originating Principles", Carleton University (2011).

377ನೇ ಪರಿಚ್ಛೇಧದ ವಸಾಹತುಶಾಹಿ ಮೂಲವನ್ನು ಅರಿಯಲು, ಜುದಾಯಿ-ಕ್ರೈಸ್ತ ಧರ್ಮೀಯ ನೈತಿಕತೆಯನ್ನು ಆಧರಿಸಿದ ಮತ್ತು ಸಂತಾನೋತ್ಪತ್ತಿಯ ಉದ್ದೇಶವಿಲ್ಲದ ಲೈಂಗಿಕ ಕ್ರಿಯೆಯನ್ನು ಖಂಡಿಸುವ[101], ಆಧುನಿಕ ಇಂಗ್ಲಿಷ್ ಕಾನೂನಿನ ಗುದಸಂಭೋಗ ಮತ್ತು ಮುಖಮೈಥುನಗಳ ಕುರಿತಾದ ಪರಿಕಲ್ಪನೆಗಳನ್ನು ಗಮನಿಸಬೇಕಾಗುತ್ತದೆ. ಏಸು ಕ್ರಿಸ್ತನು ನೇರವಾಗಿ ಸಮಲೈಂಗಿಕತೆ ಮತ್ತು ಸಮಲೈಂಗಿಕ ಸಂಭೋಗವನ್ನು[102] ಉಲ್ಲೇಖಿಸುವುದಿಲ್ಲವಾದರೂ, ಲೆವಿಕ್ಟಸ್ಸಿನಲ್ಲಿ ದೊರಕುವ "ಹೋಲಿನೆಸ್ ಕೋಡ್", "ಪೂಜ್ಯತೆಯ ಸಂಹಿತೆ "[103], ಹೀಗೆ ಹೇಳುತ್ತದೆ .

> ನೀವು ಹೆಣ್ಣಿನೊಂದಿಗೆ ಮಲಗಿದಂತೆ, ಗಂಡಿನೊಂದಿಗೆ ಮಲಗುವುದಿಲ್ಲ, ಅದು ಪಾಪವಾಗಿದೆ (18:22)
>
> ಒಬ್ಬ ಗಂಡಸು ಮತ್ತೊಬ್ಬ ಗಂಡಸಿನೊಂದಿಗೆ, ಹೆಣ್ಣಿನೊಂದಿಗೆ ಮಲಗುವಂತೆ ಮಲಗಿದರೆ, ಇಬ್ಬರು ಪಾಪವನ್ನೆಸಗಿದವರೇ ಆಗುತ್ತಾರೆ; ಅವರನ್ನು ಖಂಡಿತವಾಗಿಯೂ ಕೊಲ್ಲಬಹುದು, ಅವರ ಸಾವಿಗೆ ಅವರೇ ಹೊಣೆ (19:13)
>
> ಗಂಡಸೊಬ್ಬ, ಮತ್ತೊಬ್ಬ ಗಂಡಿನ ಜೊತೆ, ಹೆಣ್ಣಿನೊಂದಿಗೆ ಮಲಗುವಂತೆ ಮಲಗಿದರೆ, ಅವರಿಬ್ಬರೂ ಪಾಪ ಎಸಗಿದ್ದಾರೆ ಎಂದರ್ಥ. ಅವರನ್ನು ಕೊಲ್ಲಬೇಕು, ಅವರ ರಕ್ತದ ಹೊಣೆ ಅವರದ್ದೇ ಆಗಿದೆ (20:13)

ಜುದಾಯಿ -ಕ್ರೈಸ್ತ ಧಾರ್ಮಿಕ ವ್ಯಾಖ್ಯಾನಗಳಲ್ಲಿ "ಸೋಡೋಮಿ" ಎಂಬ ಪದದ ಉಲ್ಲೇಖ ಬರುತ್ತದೆ. ಗುದಸಂಭೋಗವನ್ನು ಸೂಚಿಸಲು ಬಳಸುವ ಈ ಪದವವಾದ ಇದನ್ನು ಹಳೆಯ ಒಡಂಬಡಿಕೆಯಲ್ಲಿನ ಜೆನೆಸಿಸ್ (ಉಗಮ ) 18:20 [104] ರಲ್ಲಿ ಬರುವ ಸೊಡೋಮ್ ಮತ್ತು ಗೊಮ್ಮೋರಾದ ಕಥೆಗಳ ವ್ಯಾಖ್ಯಾನದಿಂದ ತೆಗೆದುಕೊಳ್ಳಲಾಗಿದೆ. ಈ ಕಥೆಯನ್ನು ಸಂಕ್ಷಿಪ್ತವಾಗಿ ಹೇಳುವುದಾದರೆ, ಲಾಟ್ ಎಂಬುವನ ಮನೆಯಲ್ಲಿ ಇಬ್ಬರು ದೇವತೆಗಳು ಆಶ್ರಯ ಪಡೆದಾಗ, ಸೊಡೋಮ್ ಶಹರದ ಗಂಡಸರೆಲ್ಲ ಅವನ ಮನೆಯನ್ನು ಸುತ್ತುವರೆದು, ಆ

[101] Michael Kirby, "The Sodomy Offence: England's Least Lovely Law Export?" Journal of Commonwealth Criminal Law, Inaugural Issue (2011).

[102] Douglas, supra note 9, at page 4.

[103] Ibid at page 2.

[104] Douglas, supra note 9, at page 4.

ದೇವತೆಗಳನ್ನು  ಅವರ ಬಳಿ ಅವರನ್ನು "ತಿಳಿದುಕೊಳ್ಳಲಿಕ್ಕಾಗಿ " (ಈ ವ್ಯಾಖ್ಯಾನದ ಪ್ರಕಾರ, ಲೈಂಗಿಕ ಉದ್ದೇಶಗಳೊಂದಿಗೆ) ಕಳುಹಿಸಬೇಕೆಂದು ಆಗ್ರಹಿಸುತ್ತಾರೆ. ದೇವತೆಗಳ ಬದಲಾಗಿ ಇನ್ನು ಕನ್ಯೆಯರಾಗಿರುವ ತನ್ನ ಹೆಣ್ಣು ಮಕ್ಕಳನ್ನು  ಒಪ್ಪಿಸುವುದಾಗಿ ಲಾಟ್ ಹೇಳಿದಾಗ, ಸೊಡೋಮಿನ ಪುರುಷರು ಅವನಿಗೆ ಬೆದರಿಕೆಯೊಡ್ಡುತ್ತಾರೆ. ನಂತರ ಆ ದೇವತೆಗಳು ಈ "ಸೊಡೊಮೈಟ್"ಗಳನ್ನು [105] ಕುರುಡರನ್ನಾಗಿಸುತ್ತಾರೆ. ಸೊಡೊಮೈಟ್ ಎಂಬ ಪದವನ್ನು ಗುದಸಂಭೋಗದಲ್ಲಿ ತೊಡಗುವವರನ್ನು ಸೂಚಿಸಲು ಬಳಸುವ ಪರಿಪಾಠ 13ನೇ ಶತಮಾದಲ್ಲಿ ಆರಂಭವಾಯಿತು. ಅದಕ್ಕೆ  ಎರಡು ಶತಮಾಗಳ ಹಿಂದೆ 'ಸೋಡೋಮ'  ಹಲಬಗೆಯ ಲೈಂಗಿಕ "ಪಾಪ" ಗಳನು ಸೂಚಿಸುವ ಕಾವ್ಯಾತ್ಮಕ ರೀತಿಯಾಗಿತ್ತು[106] .

16. ಚರ್ಚಿನ ಪಾದ್ರಿಗಳ ಪಿತಾಮಹ ಎಂದೇ ಕರೆಯಲ್ಪಡುವ  ಮತ್ತು ಸಮಲೈಂಗಿಕರನ್ನು ನಿಂದಿಸಿ ಅವರಿಗೆ ಮರಣದಂಡನೆ ನೀಡುವುದನ್ನು ಪ್ರತಿಪಾದಿಸಿದ ಜ್ಯೂ ಧರ್ಮಶಾಸ್ತ್ರಜ್ಞ ಎಲೆಕ್ಸಾಂಡ್ರಿಯಾದ ಫಿಲೋನ ದೆಸೆಯಿಂದಲೂ ಜುಡಾಯ್ ಕ್ರೈಸ್ತ ಧರ್ಮಗಳು ಸಮಲೈಂಗಿಕತೆಯನ್ನು ಖಂಡಿಸುತ್ತವೆ[107]. ರೋಮನ್ ಕಾನೂನಿನಲ್ಲಿ ಸಹ ಸಮಲೈಂಗಿಕತೆಯ ಖಂಡನೆಯನ್ನು ಗುರಿತುಸಬಹುದು. ಉದಾಹರಣೆಗೆ, ಸಾಮ್ರಾಟ ಜಸ್ಟಿನಿಯನ್ನನ 529ನೇ ಇಸವಿಯ ಸಂಹಿತೆಯು, ಸಮಲೈಂಗಿಕ ಸಂಭೋಗದಲ್ಲಿ ತೊಡಗುವವರಿಗೆ ಮರಣದಂಡನೆ ನೀಡಬೇಕೆಂದು ಹೇಳುತ್ತದೆ [108] . ಸಮಲೈಂಗಿಕತೆಯ ಖಂಡನೆ ರೋಮ್ ನಿಂದ ಯುರೋಪಿನಾದ್ಯಂತ ಹರಡಿ ಧಾರ್ಮಿಕ ಕಾನೂನಿನ ರೂಪ ಪಡೆಯಿತು[109]. ಪ್ರಾಟೆಸ್ಟೆಂಟ್ ಸುಧಾರಣೆಗಳ ಕಾಲದಲ್ಲಿ, ಅದು ತನ್ನ ಧಾರ್ಮಿಕ ಸ್ವರೂಪ ಕಳೆದುಕೊಂಡು ಅಪರಾಧಿ ಕಾನೂನಿನ ರೂಪ ತಾಳಿತು, ಇದು ಮೊಟ್ಟಮೊದಲು 1532ರಲ್ಲಿ ಜೆರ್ಮನಿಯಲ್ಲಿ ಜಾರಿಯಾಯಿತು[110].

[105] Jessica Cecil, "The Destruction of Sodom and Gomorrah", British Broadcasting Company, 11 February 2017

[106] Douglas, supra note 9, at page 4; KSN Murthy's Criminal Law: Indian Penal Code (KVS Sarma ed), Lexis Nexis (2016).

[107] Philo, translated by F.H. Colson and G.H. Whitaker, 10 Volumes, (Cambridge: Harvard University Press, 1929-1962).

[108] David F. Greenberg and Marcia H. Bystryn, "Christian Intolerance of Homosexuality", American Journal of Sociology, Vol. 88 (1982), at pages 515-548.

[109] Douglas, supra note 9, at pages 5 and 8.

[110] Ibid at page 5

1500ನೇ ಇಸವಿಯ ವೇಳೆಗೆ ಇಂಗ್ಲೆಂಡಿನಲ್ಲಿ ಸಮಲೈಂಗಿಕ ಸಂಭೋಗದ ವಿರುದ್ಧದ ಧಾರ್ಮಿಕ ಕಾನೂನುಗಳು ಪ್ರಚಲಿತವಾಗಿದ್ದುವಾದರೂ[111], ಮನುಷ್ಯರು ಮತ್ತು ಪ್ರಾಣಿಗಳೊಂದಿಗೆ ನಡೆಸುವ ಅಸಹ್ಯಕರ ಮತ್ತು ಖಂಡನಾರ್ಹ ದುಷ್ಕೃತ್ಯವಾದ ಗುದಸಂಭೋಗ ನಡೆಸುವುದನ್ನು ಶಿಕ್ಷಿಸುವ 1553ಯ ಬಗ್ಗರಿ ಕಾಯ್ದೆ ಇಂಗ್ಲೆಂಡಿನ ಮೊತ್ತ ಮೊದಲ ಅಪರಾಧಿ (ಧಾರ್ಮಿಕವಲ್ಲದ) ಕಾನೂನು[112]. "ಬಗ್ಗರಿ" ಎಂಬ ಪದವನ್ನು ಫ್ರೆಂಚ್ ಭಾಷೆಯಲ್ಲಿ ಸಂಪ್ರದಾಯ ವಿರೋಧಿಗಳಿಗೆ ಬಳಸುತ್ತಿದ್ದ "ಬೊಗೆರ್" (bougre) ಎಂಬ ಹಳೆಯ ಪದದಿಂದ ತೆಗೆದುಕೊಳ್ಳಲಾಗಿದ್ದು, ಅದು ಗುದದ್ವಾರದ ಮೂಲಕ ನಡೆಯುವ ಸಂಭೋಗವನ್ನು ಸೂಚಿಸುತ್ತದೆ[113].

17. ಮೂರನೇ ಹೆನ್ರಿ ಜಾರಿಗೊಳಿಸಿದ ಬಗ್ಗರಿ ಕಾಯ್ದೆಯು ಗುದಸಂಭೋಗದ ಅಪರಾಧಕ್ಕೆ ಮರಣದಂಡನೆ ವಿಧಿಸುತ್ತಿತ್ತು ಮತ್ತು ಹೆಚ್ಚುಕಡಿಮೆ 300 ವರ್ಷ ಮುಂದುವರೆಯಿತು. ಮುಂದೆ ಅದನ್ನು ತೆಗೆದುಹಾಕಿ ಅದರ ಬದಲಿಗೆ ಅಫೆನ್ಸಸ್ ಆಹೇನ್ಸ್ಟ್ ಪರ್ಸನ್ಸ್ ಕಾಯ್ದೆ, 1828 ಜಾರಿಗೊಳಿಸಲಾಯಿತು, ಆದಾಆಗ್ಯೂ, ಐ.ಪಿ.ಸಿ ಜಾರಿಯಾದ ಒಂದು ವರ್ಷದ ನಂತರವೂ ಇಂಗ್ಲೆಂಡಿನಲ್ಲಿ ಗುದಸಂಭೋಗ ಮರಣದಂಡನೆಯ ಅಪರಾಧವಾಗಿಯೇ ಉಳಿದಿತ್ತು. 377ನೇ ಪರಿಚ್ಛೇದದ ಹಿನ್ನೆಲೆ ಕೂಡ, ಸರ್ ಎಡ್ವರ್ಡ್ ಕೊಕ್ 17ನೇ ಶತಮಾನದ ಕಡೆಯಲ್ಲಿ ಹೊರತಂದ ಇಂಗ್ಲಿಷ್ ಕಾನೂನುಗಳ ಸಂಗ್ರಹದಲ್ಲಿರುವ ಬಗ್ಗರಿಯ ವ್ಯಾಖ್ಯಾನವೇ ಆಗಿದೆ[114] .

> "ಸೃಷ್ಟಿಕರ್ತನ ಆಣತಿಗೆ ಮತ್ತು ನಿಸರ್ಗದ ನಿಯಮದ ವಿರುದ್ಧ, ಗಂಡಸು ಗಂಡಸಿನೊಂದಿಗೆ, ಅಥವಾ ಪ್ರಾಣಿಯೊಂದಿಗೆ ಅಥವಾ ಹೆಂಗಸು ಪ್ರಾಣಿಯೊಂದಿಗೆ ನಡೆಸುವ ಲೈಂಗಿಕ ಕೃತ್ಯಗಳು"[115]

18. ಕ್ರಿಮಿನಲ್ ಲಾ ಅಮೆಂಡ್ಮೆಂಟ್ ಆಕ್ಟ್ (ಅಪಾರಾಧಿ ಕಾನೂನು ತಿದ್ದುಪಡಿ ಕಾಯ್ದೆ ), 1885 ಕೀಳ್ಮಟ್ಟದ ಅಸಭ್ಯತೆಯನ್ನು ಅಪರಾಧೀಕರಿಸಿತು ಮತ್ತು ಇದನ್ನು ಗುದಸಂಭೋಗದ ಆರೋಪ ಸಾಬೀತಾಗದ

---

[111] Ibid at page 2

[112] The Buggery Act, 1533.

[113] Douglas, supra note 9, at page 2 .

[114] Ibid at 7.

[115] Human Rights Watch. This Alien Legacy: The Origins of "Sodomy" Laws in British Colonialism (2008).

ಸಮಲೈಂಗಿಕರನ್ನು ಶಿಕ್ಷಿಸಲು ಬಳಸಲಾಗುತ್ತಿತ್ತು. 1895ನೇ ಇಸವಿಯಲ್ಲಿ ಆಸ್ಕರ್ ವೈಲ್ಡ್‌ನ್ನು "ಗಂಡಸರೊಂದಿಗೆ ಕೀಳ್ಮಟ್ಟದ ಅಸಭ್ಯ ಕೃತ್ಯ ನಡೆಸಿದ" ಆರೋಪದ ಮೇಲೆ ಬಂಧಿಸಲಾಯಿತು[116], ವೈಲ್ಡ್ ವಿಚಾರಣೆಯ ಸಂದರ್ಭದಲ್ಲಿ ಸರ್ಕಾರದ ಪರವಾದ ವಕೀಲರು, ಸಮಲೈಂಗಿಕ ಪ್ರೇಮವನ್ನು ಉಲ್ಲೇಖಿಸುತ್ತಾ ಅವರನ್ನು "ತನ್ನ ಹೆಸರನ್ನು ಹೇಳ ಹೆದರುವ" ಪ್ರೇಮ ಎಂದರೇನು ? ಎಂದು ಕೇಳಿದಾಗ, ವೈಲ್ಡ್‌ನ ಪ್ರತಿಕಿಯೆ ಹೀಗಿತ್ತು

> "ಡೇವಿಡ್ ಮತ್ತು ಜಾನಾಥನ್ನನ ನಡುವ ಇದ್ದಂತಹ, ಕಿರಿಯ ಗಂಡಸೊಬ್ಬನ ಮೇಲೆ ಹಿರಿಯ ವ್ಯಕ್ತಿಯೊಬ್ಬನಿಗಿರುವ ಮಹತ್ತರವಾದ ಒಲವನ್ನು ಈ ಶತಮಾನದಲ್ಲಿ ತನ್ನ ಹೆಸರ ಹೇಳ ಹೆದರುವ ಪ್ರೇಮವೆಂದು ಕರೆಯುತ್ತಾರೆ. ಅಂತಹ ಪ್ರೇಮವನ್ನೇ ಪ್ಲೇಟೋ ತನ್ನ ತತ್ವಜ್ಞಾನದ ಆಧಾರಸ್ಥಂಭವನ್ನಾಗಿಸಿಕೊಂಡಿದ್ದನು, ಮತ್ತು ಅದು ನಿಮಗೇ ಮೈಕೆಲಾಂಜೆಲೋ ಮತ್ತು ಶೇಕ್ಸ್‌ಪಿಯರರ ಕವನಗಳಲ್ಲಿಯೂ ಕಾಣಸಿಗುತ್ತದೆ. ಅದು ಪರಿಪೂರ್ಣವೂ ಪವಿತ್ರವೂ ಆಗಿರುವ ಆಳವಾದ ಆಧ್ಯಾತ್ಮಿಕ ಪ್ರೀತಿ. ಶೇಕ್ಸ್‌ಪಿಯರ್ ಮತ್ತು ಮೈಕಲಾಂಜೆಲೋರ ಮಹಾನ್ ಕಲಾಕೃತಿಗಳನ್ನು ಅದು ನಿಯಂತ್ರಿಸಿ ಆವರಿಸಿಕೊಳ್ಳುತ್ತದೆ ಮತ್ತು ಅದು ನನ್ನ ಆ ಎರಡು ಪತ್ರಗಳಲ್ಲಿಯೂ ಅಡಕವಾಗಿದೆ. ಈ ಶತಮಾನದಲ್ಲಿ ಅದನ್ನು ಬಹಳವೇ ತಪ್ಪುತಿಳಿಯಲಾಗಿದೆ, ಎಷ್ಟರ ಮಟ್ಟಿಗೆಂದರೆ, ಅದನ್ನು "ತನ್ನ ಹೆಸರ ಹೇಳ ಹೆದರುವ ಪ್ರೀತಿ ಎಂದು ಕರೆಯಲಾಗುತ್ತದೆ, ಮತ್ತು ಆ ತಪ್ಪುತಿಳುವಳಿಕೆಯ ದೆಸೆಯಿಂದಲೇ ನಾನು ಇಲ್ಲಿ ನಿಲ್ಲುವಂತಾಗಿದೆ. ಅದು ಸುಂದರ, ಅದು ಸೂಕ್ಷ್ಮ, ಅದು ಪ್ರೀತಿಯ ಅತ್ಯಂತ ಶ್ರೇಷ್ಠವಾದ ರೂಪ . ಅದು ಯಾವ ರೀತಿಯಲ್ಲೂ ಅನೈಸರ್ಗಿಕವಲ್ಲ. ಅದು ಬೌದ್ಧಿಕವಾಗಿ ಮೇಲ್ಮಟ್ಟದ್ದು. ಹಿರಿಯ ವ್ಯಕ್ತಿ ಬುದ್ಧಿವಂತನಾಗಿದ್ದಾಗ ಮತ್ತು ಕಿರಿಯ ವ್ಯಕ್ತಿಯಲ್ಲಿ ಬದುಕಿನ ಸಸಂತೋಷ,

[116] Douglas, supra note 9, at page 15.

> ಭರವಸೆ ಮತ್ತು ಒನಪುಗಳಿದ್ದಾಗ ಅವರ ನಡುವೆ ಪದೇ ಪದೇ ಸಂಭವಿಸುವಂಥದ್ದು. ಅದು ಹಾಗಿರುವ ಕಾರಣಕ್ಕೆ ಅದನ್ನು ಈ ಜಗತ್ತು ಅರ್ಥಮಾಡಿಕೊಂಡಿಲ್ಲ. ಜಗತ್ತು ಅದನ್ನು ಹೀಗಳೆಯುತ್ತದೆ ಮತ್ತು ಕೆಲವೊಮ್ಮೆ ಅದಕ್ಕಾಗಿ ಜನರನ್ನು ಶಿಲುಬೆಗೇರಿಸುತ್ತದೆ.[117]

ವೈಲ್ಡ್ ರನ್ನು ತಪ್ಪಿತಸ್ಥರೆಂದು ಘೋಷಿಸಿ ಎರಡು ವರ್ಷಗಳ ಕಠಿಣ ಶಿಕ್ಷೆಯನ್ನು ಘೋಷಿಸಿ ನಂತರ ಅವರನ್ನು ಸೆರೆಮನೆಯಲ್ಲಿಡಲಾಯಿತು

ಎರಡನೇ ಜಾಗತಿಕ ಯುದ್ಧದ ನಂತರ ಸಮಲೈಂಗಿಕ ಸೆರೆಹಿಡಿಯುವಿಕೆ ಮತ್ತು ಶಿಕ್ಷಿಸುವಿಕೆ ಹೆಚ್ಚಾಯಿತು. ಎರಡನೇ ವಿಶ್ವ ಯುದ್ಧದಲ್ಲಿ ನಾಝಿ ಎನಿಗ್ಮಾ ಕೋಡ್ ಭೇದಿಸಿದ ಖ್ಯಾತ ಗಣಿತಶಾಸ್ತ್ರಜ್ಞ ಮತ್ತು ಗುಪ್ತಭಾಷಾ ತಜ್ಞ ಅಲಾನ್ ಟ್ಯೂರಿಂಗ್ ರನ್ನು "ಕೀಳ್ಮಟ್ಟದ ಅಸಭ್ಯತೆ"ಗಾಗಿ ಶಿಕ್ಷೆಗೊಳಪಡಿಸಲಾಯಿತು . ಸೆರೆಮನೆವಾಸದಿಂದ ತಪ್ಪಿಸಿಕೊಳ್ಳಲು, ಟ್ಯೂರಿಂಗ್ ಅನಿವಾರ್ಯವಾಗಿ ರಾಸಾಯನಿಕ ಪುರುಷತ್ವಹರಣಕ್ಕೆ ಒಪ್ಪಿಕೊಳ್ಳಬೇಕಾಯಿತು ಮತ್ತು ಅವರಿಗೆ ಚುಚ್ಚುಮದ್ದಿನ ಮೂಲಕ ಕೃತಕ ಸ್ತ್ರೀ ಹಾರ್ಮೋನುಗಳನ್ನು ನೀಡಲಾಯಿತು. ಹಾರ್ಮೋನ್ ಚಿಕಿತ್ಸೆ ಆರಂಭಿಸಿ ಎರಡು ವರ್ಷವಾಗುವುದರೊಳಗೆ ಟ್ಯೂರಿಂಗ್ ಆತ್ಮಹತ್ಯೆ ಮಾಡಿಕೊಂಡರು. ತಿದ್ದುಪಡಿ ಕಾಯ್ದೆ (ಅಮೆಂಡ್ಮೆಂಟ್ ಆಕ್ಟ್) 1967ರ ವರೆಗೆ ಇಂಗ್ಲಿಷ್ ಕಾನೂನಿನಲ್ಲಿ ಮುಂದುವರೆಯಿತು. 2013ರಲ್ಲಿ ಟ್ಯುರಿಂಗ್ ರವರಿಗೆ ಮರಣೋತ್ತರ ಕ್ಷಮಾದಾನ ನೀಡಲಾಯಿತು ಮತ್ತು 2013ರಲ್ಲಿ ಯುನೈಟೆಡ್ ಕಿಂಗಡಮ್, "ಟ್ಯೂರಿಂಗ್ ಕಾನೂನು" ಎಂದೇ ಕರೆಯಲಾಗುವ ಪೋಲೀಸಿಂಗ್ ಅಂಡ್ ಕ್ರೈಮ್ ಬಿಲ್ ಅನ್ನು ಜಾರಿಮಾಡಿತು ಮತ್ತು ಆ ಮೂಲಕ 50,000 ಸಮಲೈಂಗಿಕ ಪುರುಷರಿಗೆ ಮರಣೋತ್ತರ ಕ್ಷಮಾದಾನ ನೀಡಲಾಯಿತು ಮತ್ತು ಬದುಕುಳಿದವರನ್ನು ಕ್ಷಮಿಸಲಾಯಿತು.

ನ್ಯಾಯಾಲಯದ ಹಲವು ಪ್ರಕರಣಗಳಲ್ಲಿ ಸಮಲೈಂಗಿಕತೆಯ ಉಲ್ಲೇಖ ಇದ್ದದ್ದರಿಂದ ಬ್ರಿಟಿಷ್ ಸಂಸತ್ತು 1954ರಲ್ಲಿ "ಸಮಲೈಂಗಿಕ ಅಪರಾಧಗಳಿಗೆ ಸಂಬಂಧಿಸಿದ ಕಾನೂನು ಮತ್ತು ಅವುಗಳ ಆಚರಣೆ, ಜೊತೆಗೆ ಅಂತಹ ಅಪರಾಧಗಳಲ್ಲ ಶಿಕ್ಷೆಗೊಳಗಾಗಿರುವ ವ್ಯಕ್ತಿಗಳನ್ನು ಹೇಗೆ ನಡೆಸಿಕೊಳ್ಳಲಾಗುತ್ತಿದೆ ಎಂಬುದನ್ನು ಪರಿಶೀಲಿಸಲು "

[117] H. Montgomery Hyde, John O'Connor, and Merlin Holland, The Trials of Oscar Wilde (2014), at page 201

ಜಾನ್ ವೋಲ್ಫೆಂಡನ್ ನೇತೃತ್ವದಲ್ಲಿ ವೋಲ್ಫೆಂಡನ್ ಸಮಿತಿಯನ್ನು ರಚಿಸಿತು. ಅದಲ್ಲದೆ, ವ್ಯಭಿಚಾರ ಮತ್ತು ಭಿಕ್ಷಾಟನೆಗಳಿಗೆ ಸಂಬಂಧಿಸಿದ ಕಾನೂನನ್ನು ಪರಿಶೀಲಿಸುವುದು ಈ ಸಮಿತಿಯ ಉದ್ದೇಶವಾಗಿತ್ತು. ಇಂಗ್ಲೆಂಡಿನ ಚರ್ಚಿನ ಬೆಂಬಲವಿದ್ದ 1957ರ ವೋಲ್ಫೆಂಡನ್ ವರದಿಯು[118], "ನೇರವಾಗಿ ಹೇಳುವುದಾದರೆ, ಖಾಸಗೀ ನೈತಿಕತೆ ಅಥವಾ ಅನೈತಿಕತೆಗಳು ಖಾಸಗೀ ವಲಯದಲ್ಲೇ ಉಳಿಯಬೇಕು ಮತ್ತು ಅವುಗಳಲ್ಲಿ ಕಾನೂನು ಮೂಗುತೂರಿಸಬಾರದು" ಎಂದು ಪ್ರಸ್ತಾಪಿಸಿ, ಇಬ್ಬರು ಒಪ್ಪಿಗೆಯಿರುವ ವಯಸ್ಕ ವ್ಯಕ್ತಿಗಳ ನಡುವಿನ ಸಮಲೈಂಗಿಕ ಕ್ರಿಯೆಗಳು ಅಪರಾಧವಾಗಿ ಉಳಿಯಬಾರದು ಎಂದು ಶಿಫಾರಸು ಮಾಡಿತು[119].

19. ಈ ವರದಿಯ ಯಶಸ್ಸಿನ ಫಲವಾಗಿ ಇಂಗ್ಲೆಂಡ್ ಮತ್ತು ವೇಲ್ಸ್ ನಲ್ಲಿ ಇಪ್ಪತ್ತೊಂದು ವರ್ಷ ಮೇಲ್ಪಟ್ಟ ಇಬ್ಬರು ಪುರುಷರ ನಡುವಿನ ಒಪ್ಪಿಗೆಯ ಸಮಲೈಂಗಿಕ ಸಂಭೋಗವನ್ನು ಅಪರಾಧಮುಕ್ತಗೊಳಿಸುವ ಸೆಕ್ಷುವಲ್ ಅಫೆನ್ಸಸ್ ಆಕ್ಟ್ (ಲೈಂಗಿಕ ಅಪರಾಧ ಕಾಯ್ದೆ), 1967 ಜಾರಿಯಾಯಿತು. ಬ್ರಿಟನ್ ಸಮಲೈಂಗಿಕ ಸಂಭೋಗಕ್ಕೆ ಸಂಬಂಧಿಸಿದ ಕಾನೂನುಗಳನ್ನು ಪರಿಚಯಿಸಿ ಮತ್ತು ತಿದ್ದಿ ಅವುಗಳಲ್ಲಿ ಸಮಾನತೆ ತರುವ ಪ್ರಕ್ರಿಯೆಯನ್ನು ಮುಂದುವರೆಸಿತು ಮತ್ತು ಅದರಲ್ಲಿ 2001ರಲ್ಲಿ ಸಮಲೈಂಗಿಕ ಅಥವಾ ಉಭಯಲಿಂಗಾಸಕ್ತ ವ್ಯಕ್ತಿಗಳು ಒಪ್ಪಿಗೆ ಸೂಚಿಸುವ ವಯಸ್ಸನ್ನು 16 ವರ್ಷಕ್ಕೆ ಇಳಿಸಿದ್ದೂ ಸೇರಿದೆ[120]. ಹಿಂದೆ ತನ್ನ ವಸಾಹತುಗಳಾಗಿದ್ದ ದೇಶಗಳಲ್ಲಿ ಸಮಲೈಂಗಿಕ ಸಂಭೋಗವನ್ನು ಅಪರಾಧೀಕರಿಸಿದ ಯುನೈಟೆಡ್ ಕಿಂಗ್ಡಂ, 2007ರ ಮೇ ತಿಂಗಳಲ್ಲ ಸಂಯುಕ್ತ ರಾಷ್ಟ್ರ ಮಾನವಾಧಿಕಾರ ಆಯೋಗಕ್ಕೆ ನೀಡಿದ ಹೇಳಿಕೆಯಲ್ಲಿ, ಜಗತ್ತಿನಾದ್ಯಂತ ಸಮಲೈಂಗಿಕತೆಯನ್ನು ಅಪರಾಧಮುಕ್ತಗೊಳಿಸುವ ಧ್ಯೇಯಕ್ಕೆ ಬದ್ಧವಾಯಿತು[121]. ವಸಾಹತುಶಾಹಿ ಕಾಲದಲ್ಲಿ ಹೇರಲಾಗಿದ್ದ ಕಾನೂನೊಂದು, ಅದನ್ನು ಮೊದಲು ಜಾರಿಮಾಡಿದ ಸರ್ಕಾರವೇ ಅದನ್ನು ರದ್ದುಪಡಿಸದ್ದರೂ, ಭಾರತದಲ್ಲಿ ಇಂದಿಗೂ ಜಾರಿಯಾಗುತ್ತಿದೆ.

---

[118] Ibid at 25

[119] Report of the Departmental Committee on Homosexual Offences and Prostitution (1957) ("Wolfenden Report").

[120] Sexual Offences (Amendment) Act 2000, Parliament of the United Kingdom.

[121] Douglas, supra note 9, at page 29.

## C.I. ನೈತಿಕ ವಿಶ್ವದ ಕಮಾನು ಗೋಪುರ

20. ಲಾರ್ಡ್ ಮೆಕಾಲೆಯು "ಕೋಡಿಫಿಕೇಶನ್" ಎಂಬ ಪದವನ್ನು ಹುಟ್ಟುಹಾಕಿ ಸದ್ಯದ ಕಾನೂನುಗಳನ್ನು ಸ್ಪಷ್ಟ, ನಿಖರ ಮತ್ತು ಅರ್ಥವಾಗಬಲ್ಲ ಮತ್ತು ಯೂರೋಪಿನಾದ್ಯಂತ ಅನ್ವಯಿಸಬಲ್ಲ ಕಾನೂನುಗಳೊಂದಿಗೆ ಬದಲಾಯಿಸಬೇಕೆಂದು ವಾದಿಸಿದ್ದ ಆಂಗ್ಲ ತತ್ವಜ್ಞಾನಿ ಮತ್ತು ನ್ಯಾಯಶಾಸ್ತ್ರಜ್ಞ ಜೆರೆಮಿ ಬೆಂಥಾಮ್ ರಿಂದ ಬಹಳವೇ ಪ್ರಭಾವಿತನಾಗಿದ್ದರು[122]. ವಿಪರ್ಯಾಸವೆಂದರೆ, ಆಂಗ್ಲ ಭಾಷೆಯಲ್ಲಿ ಸಮಲೈಂಗಿಕತೆಯನ್ನು ಸಮರ್ಥಿಸಿಕೊಂಡ ಆರಂಭಿಕ ಕೃತಿಗಳಲ್ಲಿ ಒಂದಾಗಿದ್ದ ತನ್ನ 1785ನೇ ಇಸವಿಯ ಪ್ರಬಂಧದಲ್ಲಿ ಬೆಂಥಾಮ್ ರೇ ಸಮಲೈಂಗಿಕತೆಯ ಅಪರಾಧೀಕರಣದ ವಿರುದ್ಧ ವಾದಮಡಿದ್ದನು. ಅದರೆ ಅವನ ಪ್ರಬಂಧ ಅವನು ಕಾಲವಾಗಿ ೧೦೦ ವರ್ಷಗಳ ನಂತರ ಪತ್ತೆಯಾಯಿತು.[123]

21. ಕಾನೂನು ಆಯೋಗದ 1837ನೇ ಇಸವಿಯ ಕರಡು ದಂಡ ಸಂಹಿತೆಯಲ್ಲಿ (ಲಾರ್ಡ್ ಮೆಕಾಲೆ ರಚಿಸಿದ್ದು) ಎರಡು ಭಾಗಗಳಿದ್ದುವು (361 ಮತ್ತು 362ನೇ ಷರತ್ತುಗಳು) ಮತ್ತು ಅವುಗಳೇ 377ನೇ ಪರಿಚ್ಛೇದದ ಹಿನ್ನೆಲೆಯೆಂದು ಪರಿಗಣಿಸಲಾಗಿದೆ.

> ಅನೈಸರ್ಗಿಕ ಅಪರಾಧಗಳ ಬಗ್ಗೆ
>
> 361. ಯಾರಾದರೂ ತಮ್ಮ ಅನೈಸರ್ಗಿಕ ಕಾಮನೆಗಳನ್ನು ತೀರಿಸಿಕೊಳುವ ಸಲುವಾಗಿ, ಯಾವುದೇ ವ್ಯಕ್ತಿ ಮತ್ತು ಪ್ರಾಣಿಯನ್ನು ಮುಟ್ಟಿದರೆ ಅಥವಾ ತನ್ನದೇ ಒಪ್ಪಿಗೆಯಿಂದ ಇತರರ ಅನೈಸರ್ಗಿಕ ಕಾಮನೆಯನ್ನು ತೀರಿಸಲು ಮುಟ್ಟಿಸಿಕೊಂಡರೆ ಅವರಿಗೆ ಎರಡರಿಂದ ಹದಿನಾಲ್ಕು ವರ್ಷಗಳವರೆಗಿನ ಅವಧಿಯ ಸೆರೆವಾಸ ವಿಧಿಸಿ ದಂಡವನ್ನೂ ವಸೂಲು ಮಾಡಲಾಗುತ್ತದೆ.
>
> 362. ಯಾರಾದರೂ ತಮ್ಮ ಅನೈಸರ್ಗಿಕ ಕಾಮನೆಗಳನ್ನು ತೀರಿಸಿಕೊಳ್ಳಲು ಇತರರನ್ನು ಅವರ ಮುಕ್ತ ಮತ್ತು ಜಾಗೃತ ಒಪ್ಪಿಗೆಯಿಲ್ಲದೇ ಮುಟ್ಟಿದರೆ

[122] Douglas, supra note 9, at page 9.

[123] Ibid

> ಅವರಿಗೆ ಏಳು ವರ್ಷದಿಂದ ಮೇಲ್ಪಟ್ಟು ಜೀವಾವಧಿಯವರೆಗೆ ಸೆರೆವಾಸ ವಿಧಿಸಿ ದಂಡವನ್ನೂ ವಸೂಲು ಮಾಡಲಾಗುತ್ತದೆ.

ಮೇಲಿನ ಎರಡು ಕರಡು ಷರತ್ತುಗಳಲ್ಲೂ ಅಪಾರಾಧೀಕರಿಸಬೇಕಿರುವ ಕೃತ್ಯಗಳ ಬಗ್ಗೆ ಸ್ಪಷ್ಟತೆ ಇಲ್ಲವಾಗಿದೆ. ಅಲ್ಲದೆ, ಲಾರ್ಡ್ ಮೆಕಾಲೆಯು ಸದರಿ ಷರತ್ತುಗಳ ವಿವರಣೆಯನ್ನು ತೆಗೆದು ಹಾಕಿದ್ದಾರೆ. 1837ರ ಕರಡಿನೊಂದಿಗೆ ಸಲ್ಲಿಸಿದ್ದ ಟಿಪ್ಪಣಿಯಲ್ಲಿ ಲಾರ್ಡ್ ಮೆಕಾಲೆಯು ಈ ರೀತಿಯಾಗಿ ವಿವರಿಸುತ್ತಾರೆ.

> 361 ಮತ್ತು 362ನೇ ಷರತ್ತುಗಳು ಅತ್ಯಂತ ಹೀನಾಯವಾದ ಅಪರಾಧಗಳಿಗೆ ಸಂಬಂಧಿಸಿವೆ, ಹಾಗಾಗಿ ಅದರ ಬಗ್ಗೆ ಎಷ್ಟು ಸಾಧ್ಯವೋ ಅಷ್ಟು ಕಡಿಮೆ ಹೇಳುವುದು ಒಳ್ಳೆಯದು. ಈ ಅಪರಾಧಗಳಿಗೆ ಸಂಬಂಧಿಸಿದ ಷರತ್ತುಗಳಿಗೆ ನಾವು ಯಾವುದೇ ವಿವರನೆಯನ್ನೂ ನೀಡುವುದಿಲ್ಲವೆಂದು ಘನತೆವೆತ್ತ ಸಮಿತಿಗೆ ತಿಳಿಸುತ್ತಿದ್ದೇವೆ. ಈ ಅಸಹ್ಯಕರ ಅಪರಾಧಗಳ ಬಗೆಗೆ ಸಾರ್ವಜನಿಕರ ನಡುವೆ ಚರ್ಚೆ ಹುಟ್ಟಿಹಾಕಬಹುದಾದ ಯಾವುದೇ ರೀತಿಯ ವಿವರಣೆಯನ್ನು ಕರಡಿನಲ್ಲಿ ಅಥವಾ ಟಿಪ್ಪಣಿಯಲ್ಲಿ ಹಾಕಲು ನಾವು ಬಯಸುವುದಿಲ್ಲ. ಯಾಕೆಂದರೆ ಅಂತಹ ಚರ್ಚೆಗಳು ಸಮಾಜದ ನೈತಿಕತೆಯನ್ನು ಘಾಸಿಗೊಳಿಸುತ್ತವೆ ಮತ್ತು ಆ ನಷ್ಟವನ್ನು ಯಾವುದೇ ಬಗೆಯ ಜಾಗರೂಕತೆಯಿಂದ ರಚಿಸಿದ ಕಾನೂನಿಂದಲೂ ತುಂಬಿಕೊಡಲು ಸಾಧ್ಯವಾಗುವುದಿಲ್ಲ ಎಂದು ನಾವೆಲ್ಲ ಒಟ್ಟಾಗಿ ನಂಬುತ್ತೇವೆ[124].
>
> (ಒತ್ತು ನೀಡಲಾಗಿದೆ)

[124] Enze Han, Joseph O'Mahoney, "British Colonialism and the Criminalization of Homosexuality: Queens, Crime and Empire", Routledge (2018).

ಲಾರ್ಡ್ ಮೆಕಾಲೆ ಅಂತಹ ಕೃತ್ಯಗಳನ್ನು ಅದೆಷ್ಟು ಪಾಪಕರವೆಂದು ನಂಬಿದ್ದರೆಂದರೆ ಅವುಗಳನ್ನು ಅಪರಾಧೀಕರಿಸುವುದಕ್ಕೆ ಸೂಕ್ತವಾದ ಸಮರ್ಥನೆ ನೀಡುವ ಯೋಚನೆಯನ್ನೂ ತಿರಸ್ಕರಿಸಲಾಯಿತು. ಅದನ್ನು ಸಾರ್ವಜನಿಕರು ಚರ್ಚಿಸುವ ಸಾಧ್ಯತೆಯೇ ಅಸಹ್ಯಕರವೆಂದು ಬಗೆಯಲಾಯಿತು.

ಇಪ್ಪತ್ತೈದು ವರ್ಷಗಳ ತಿದ್ದುಪಡಿಯ ನಂತರ, ಐ.ಪಿ.ಸಿ.ಯನ್ನು 1ನೇ ಜನವರಿ 1862ರಂದು, ಮೆಕಾಲೆ ಮರಣಹೊಂದಿ ಎರಡು ವರ್ಷಗಳ ನಂತರ, ಜಾರಿಗೊಳಿಸಲಾಯಿತು. ಐ.ಪಿ.ಸಿ.ಯು ಬ್ರಿಟಿಷ್ ಸಾಮ್ರಾಜ್ಯದ ಮೊತ್ತ ಮೊದಲ ಸಾಂಕೇತಿಕ ಸಂಹಿತೆಯಾಗಿತ್ತು. ಈ ಕರಡು ಸಂಹಿತೆಯ 377ನೇ ಪರಿಚ್ಛೇದ ಹೀಗಿತ್ತು

> ಅನೈಸರ್ಗಿಕ ಅಪರಾಧಗಳ ಬಗೆಗೆ
>
> 377. ಅನೈಸರ್ಗಿಕ ಅಪರಾಧಗಳು - ಯಾರಾದರೂ ಸ್ವಇಚ್ಛೆಯಿಂದ ಯಾವುದೇ ಗಂಡು, ಹೆಣ್ಣು ಅಥವಾ ಪ್ರಾಣಿಯೊಂದಿಗೆ ನಿಸರ್ಗದ ನಿಯಮಕ್ಕೆ ವಿರುದ್ಧವಾಗಿ ಶಾರೀರಿಕ ಸಂಭೋಗ ನಡೆಸಿದರೆ ಅವರಿಗೆ ಜೀವಾವಧಿ ಶಿಕ್ಷೆ ಅಥವಾ ಜೀವಾವಾಧಿ ಎನಿಸಿಕೊಳ್ಳುವ ಹತ್ತು ವರ್ಷ ವರೆಗಿನ ಅವಧಿಯ ಸೆರೆಮನೆ ವಾಸದ ಶಿಕ್ಷೆವಿಧಿಸಲಾಗುತ್ತದೆ[125], ಜೊತೆಗೆ ದಂಡವನ್ನೂ ವಸೂಲಿ ಮಾಡಲಾಗುತ್ತದೆ.
>
> ವಿವರಣೆ - ಈ ಪರಿಚ್ಛೇದದಲ್ಲಿ ವಿವರಿಸಲಾಗಿರುವ ಅಪರಾಧವಾದ ಶರೀರಿಕ ಸಂಭೋಗ ಎಂದು ಪರಿಗಣಿಸುವುದಕ್ಕೆ, ಶಿಶ್ನದ ಒಳತೂರಿಸುವಿಕೆಯೊಂದೇ ಸಾಕಾಗುತ್ತದೆ.

22. ಒಳತೂರಿಸುವಿಕೆ ನಡೆದಿದೆ ಎಂಬುದಕ್ಕೆ ಸಾಕ್ಷಿಯ ಆಗತ್ಯವಿರುವುದು ಈ ವಿವರಣೆಯ ವಿಷೇಷತೆಯಾಗಿತ್ತು, ಎಕೆಂದರೆ ಬ್ರಿಟೀಶ್ ಕಾನೂನಿನಲ್ಲಿ ಅದರ ಅಗತ್ಯವಿರಲಿಲ್ಲ. 'ಸ್ಪರ್ಶ' ನಡೆದಿರುವ ಬಗೆಗೆ ಸಾಕ್ಷಿ ಕೇಳುತ್ತಿದ್ದ ಕರಡು ಸಂಹಿತೆಯ ಎರಡು ಷರತ್ತುಗಳನ್ನು ಕೈಬಿಡಲಾಗಿತ್ತು[126].

[125] Changed from “transportation for life” by Act 26 of 1955

[126] Douglas, supra note 9, at page 16

ಭಾರತವು 1947ರಲ್ಲಿ ಸ್ವತಂತ್ರವಾಗುವ ವೇಳೆಗಾಗಲೇ ಐ.ಪಿ.ಸಿ.ಯನ್ನು ಹೋಲುತ್ತಿದ್ದ ದಂಡ ಸಂಹಿತೆಯನ್ನು ಬ್ರಿಟನ್ ಸರ್ಕಾರ ತನ್ನ ಹಿಂದಿನ ವಸಾಹತುಗಳಾದ ಜಾಂಜ಼ೀಬಾರ್ (ತಾಂಜಾನಿಯಾ)ನಲ್ಲಿ 1867ನೇ ಇಸವಿಯಲ್ಲಿ, 1871 ಇಸವಿಯಲ್ಲಿ ಸಿಂಗಾಪುರ, ಮಲೇಶಿಯಾ, ಮತ್ತು ಬ್ರೂನೈಗಳಲ್ಲಿ, 1888ನೇ ಇಸವಿಯಲ್ಲಿ ಸಿಲೋನ್ (ಶ್ರೀಲಂಕ) 1886[127] ಇಸವಿಯಲ್ಲಿ ಬರ್ಮಾ (ಮಾಯಾನ್ಮಾರ್)ನಲ್ಲಿ 1897ನೇ ಇಸವಿಯಲ್ಲಿ ಪೂರ್ವ ಆಫ್ರಿಕಾ ಪ್ರೊಟೆಕ್ಟೋರೇಟ್ (ಕೀನ್ಯಾ) ದಲ್ಲಿ, 1889ನೇ ಇಸವಿಯಲ್ಲಿ ಸುಡಾನಿನಲ್ಲಿ, 1902ನೇ ಇಸವಿಯಲ್ಲಿ ಉಗಾಂಡಾನಲ್ಲಿ, ಮತ್ತು 1920ನೇ ಇಸವಿಯಲ್ಲಿ ಟಾಂಗಾನ್ಯಿಕಾ (ತಾಂಜಾನಿಯಾ)ದಲ್ಲಿ ಜಾರಿಗೊಳಿಸಿತ್ತು[128]. ಸಂವಿಧಾನ ಜಾರಿಯಾಗುವುದಕ್ಕೆ ಹಿಂದಿನ ಕಾನೂನುಗಳೆಲ್ಲವೂ, ಅವುಗಳನ್ನು ತಿದ್ದುವ ಅಥವಾ ಕೈಬಿಡುವವರೆಗೂ ಜಾರಿಯಲ್ಲಿರುತ್ತವೆ ಎಂದು ತಿಳಿಸುವ ಸಂವಿಧಾನದ 372(1)ನೇ ಕಲಮಿನ ಕಾರಣದಿಂದ, ಐ.ಪಿ.ಸಿ. ಮತ್ತು ಇತರ ಸ್ವಾತಂತ್ರ್ಯಪೂರ್ವ ಕಾನೂನುಗಳನ್ನು "ಉಳಿಸಿಕೊಂಡು", ಸ್ವತಂತ್ರ ಭಾರತದಲ್ಲಿ ಚಾಲನೆಯಲ್ಲಿಡಲಾಯಿತು.

23. 377ನೇ ಪರಿಚ್ಛೇದವು ಒಪ್ಪಿಗೆಯಿಲ್ಲದ ಲೈಂಗಿಕ ಕ್ರಿಯೆಗಳಿಗೆ ಶಿಕ್ಷೆ ವಿಧಿಸುತ್ತದೆಯಾದರೂ, ಅದನ್ನು ಒಪ್ಪಿಗೆಯ ಲೈಂಗಿಕ ಕ್ರಿಯಗಳನ್ನು ಶಿಕ್ಷಿಸಲು ಬಳಸಲಾಗಿದೆ. ಉದಾಹರಣೆಗೆ (ಮೆಹಾರ್‌ಬನ್) **ನೋಷ್ವೀರ್ವಾನ್ ಇರಾನಿ v. ಸಾಮ್ರಾಟ**[129] ಪ್ರಕರಣದಲ್ಲಿ, ಪೊಲೀಸ್ ಅಧಿಕಾರಿಯೊಬ್ಬರು, ನೋಷ್ವೀರ್ವಾನ್ ಎಂಬ ಯುವ ಅಂಗಡಿವವನು, ರತನ್ಸಿ ಎಂಬ ಮತ್ತೊಬ್ಬ ಯುವಕನೊಂದಿಗೆ ಸಮಲೈಂಗಿಕ ಕ್ರಿಯೆನಡೆಸಿದ್ದನ್ನು ನೋಷ್ವೀರ್ವಾನ್ ನ ಮನೆ ಬಾಗಿಲಿನ ಕೀಲಿರಂಧ್ರದ ಮೂಲಕ ಗಮನಿಸುತ್ತಾನೆ. ಸರ್ಕಾರಿ ವಕೀಲರು ಅದು ಬಲವಂತದ ಕ್ರಿಯೆ ಎಂದು ವಾದಿಸಿದರಾದರೂ ಬಲಾತ್ಕಾರವನ್ನು ಸಾಬೀತು ಪಡಿಸಲಾಗಲಿಲ್ಲ[130]. ಕಡೆಗೆ ಸಿಂಧ್ ಉಚ್ಛ ನ್ಯಾಯಾಲಯವು ಸಾಕ್ಷಿಗಳ ಕೊರತೆಯಿಂದ ಶಿಕ್ಷೆಯನ್ನು ತಳ್ಳಿಹಾಕಿತು. ಆದಾಗ್ಯೂ, ಇಬ್ಬರು ಒಪ್ಪಿಗೆಯಿರುವ ವ್ಯಕ್ತಿಗಳ ನಡುವಿನ

---

[127] Nang Yin Kham, "An Introduction to the Law and Judicial System of Myanmar", Centre for Asia Legal Studies Faculty of Law, National University of Singapore, Working Paper 14/02, (2014).

[128] Supra note 34.

[129] AIR 1934 Sind. 206.

[130] Arvind Narrain, "'That Despicable Specimen of Humanity': Policing of Homosexuality in India", in Challenging the Rule(s) of Law: Colonialism, Criminology and Human Rights in India (Kalpana Kannabiran and Ranbir Singh eds.), Sage (2008).

ಮಲಗುವ ಕೊನೆಯ ಖಾಸಗೀ ಕ್ರಿಯೆಯಾಗಿರಬೇಕಿದ್ದ ವಿಚಾರವೊಂದು ಸಾರ್ವಜನಿಕ ಪ್ರಕರಣವಾಗಿ ಕಾನೂನಿನ ವಿಚಾರಣೆಗೆ ಒಳಪಟ್ಟಿತು[131].

**ಡಿ.ಪಿ. ಮಿನ್ವಲ್ಲ v. ಸಾಮ್ರಾಟ**[132] ಪ್ರಕರಣದಲ್ಲಿ, ಮಿನ್ವಲ್ಲ ಮತ್ತು ತಾಜ್ಮೊಹಮ್ಮದ್ ಲಾರಿಯೊಂದರಲ್ಲಿ ಗುದ ಸಂಭೋಗ ನಡೆಸುವಾಗ ಸಿಕ್ಕಿಬಿದ್ದರು, ಅವರನ್ನು ಬಂಧಿಸಿ 377ನೇ ಪರಿಚ್ಛೇದದ ಅಡಿಯಲ್ಲಿ ಸೆರೆಗಟ್ಟಲಾಯಿತು. ತಾಜ್ಮೊಹಮ್ಮದ್ ಗೆ ನಾಲ್ಕು ತಿಂಗಳುಗಳ ಸಶ್ರಮ ಸೆರೆವಾಸ ವಿಧಿಸಲಾಯಿತು ಮತ್ತು ಪ್ರಚೋದನೆಯೊಡ್ಡಿದ ಆರೋಪ ಎದುರಿಸುತ್ತಿದ್ದ ಮಿನ್ವಲ್ಲಗೆ 100 ರೂಪಾಯಿ ದಂಡ ಮತ್ತು ಪೀಠ ನಿರ್ಧರಿಸುವ ಅವಧಿಯವರೆಗೆ ಸೆರೆವಾಸ ವಿಧಿಸಲಾಯಿತು. ಮಿನ್ವಲ್ಲ ತಾನು ಆ ಕ್ರಿಯೆಯಲ್ಲಿ ಒಪ್ಪಿಗೆಯಿಂದ ಪಾಲ್ಗೊಂಡಿರಲಿಲ್ಲವೆಂದು ಮೇಲ್ಮನವಿ ಸಲ್ಲಿಸಿ ವೈದ್ಯಕೀಯ ಪರೀಕ್ಷೆಗೆ ಒಳಪಟ್ಟನು. ಆದರೆ ನ್ಯಾಯಾಧೀಶರಿಗೆ ಸಮಾಧಾನವಾಗದ ಕಾರಣ ಮೊದಲಿನ ತೀರ್ಪನ್ನು ಎತ್ತಿಹಿಡಿಯಲಾಯಿತು. ಸದರಿ ಕ್ರಿಯೆಗಳು ಒಪ್ಪಿಗೆಯಿಂದ ನಡೆದವೆಂದು ಮನಗಂಡ ನ್ಯಾಯಾಲಯ, ಈ ವ್ಯಕ್ತಿಗಳು 377ನೇ ಪರಿಚ್ಛೇದದಡಿಯಲ್ಲಿ ಅಪರಾಧಿಗಳೆಂದು ಬಗೆಯಿತು[133].

**ರತನ್ ಮಿಯಾ v. ಆಸಾಮ್ ರಾಜ್ಯ ಸರ್ಕಾರ**[134] ಪ್ರಕರಣದಲ್ಲಿ ನ್ಯಾಯಾಲಯವು ಹದಿನೈದೂವರೆ ವರ್ಷ ಮತ್ತು ಇಪ್ಪತ್ತು ವರ್ಷ ವಯಸ್ಸಿನ ಇಬ್ಬರು ಪುರುಷರಿಗೆ 377ನೇ ಪರಿಚ್ಛೇದದಡಿಯಲ್ಲಿ ಶಿಕ್ಷೆ ವಿಧಿಸಿದರು. ಇಬ್ಬರಲ್ಲಿ ಅಪರಾಧಕ್ಕೆ ಪ್ರಚೋದಿಸಿದವರು ಮತ್ತು ಬಲಿಪಶು ಯಾರೆಂದು ನಿರ್ಧರಿಸಲು ಸಾಧ್ಯವಾಗಲಿಲ್ಲವಾದ್ದರಿಂದ ಇಬ್ಬರನ್ನೂ ಸಮಾನ ಅಪರಾಧಿಗಳೆಂದು ಕರೆಯಲಾಯಿತು. ಮೊದಲು ಇಬ್ಬರು ಪುರುಷರಿಗೆ ಆರು ತಿಂಗಳ ಸೆರೆವಾಸ ಮತ್ತು 100 ರೂಪಾಯಿ ದಂಡ ವಿಧಿಸಲಾಯಿತು. ಮೂರು ತಿಂಗಳು ಸೆರೆಯಲ್ಲಿ ಕಳೆದು ಮೂರು ಬಾರಿ ಮೇಲ್ಮನವಿ ಸಲ್ಲಿಸಿದ ನಂತರ[135] ಇಬ್ಬರು ವ್ಯಕ್ತಿಗಳ ಸೆರೆವಾಸವನ್ನು ಏಳು ದಿನಗಳ ಸಶ್ರಮ ಬಂಧನಕ್ಕೆ

---

[131] Arvind Narrain, "A New Language of Morality: From the Trial of Nowshirwan to the Judgement in Naz Foundation", The Indian Journal of Constitutional Law, Vol. 4 (2010).

[132] AIR 1935 Sind. 78.

[133] Supra note 40.

[134] (1988) Cr.L.J. 980.

[135] Suparna Bhaskaran, "The Politics of Penetration: Section 377 of the Indian Penal Code" in Queering India: Same-Sex Love and Eroticism in Indian Culture and Society (Ruth Vanita ed.), Routledge (2002).

ಇಳಿಸಲಾಯಿತು, ಇದಕ್ಕೆ ಮುಖ್ಯ ಕಾರಣ ಅವರಿಬ್ಬರೂ ಮೊದಲ ಬಾರಿ ಅಪರಾಧ ಎಸಗಿದವರು ಮತ್ತು ಇಪ್ಪತ್ತೊಂದು ವರ್ಷಕ್ಕಿಂತ ಕಿರಿಯರು ಎಂಬುದಾಗಿತ್ತು[136].

ಖಾಸಗೀ ಕ್ರಿಯೆಗಳಿಗೆ ಸಂಬಂಧಿಸಿದ ಕಾನೂನುಗಳನ್ನು ಸರ್ಕಾರವೇ ತಾನಾಗಿ ಜಾರಿಗೊಳಿಸುತ್ತಿಲ್ಲವಾದರೂ, ಎಲ್ಲ ಕಡೆಯಿಂದಲೂ, ಶಿಕ್ಷೆಗೆ ಕಾಯುತ್ತಿರುವ ಪಾತಕಿಗಳೆಂದು ಪರಿಗಣಿಸಲ್ಪಡುವ ಸಮಲೈಂಗಿಕರ ಮೇಲಾಗುವ ಮಾನಸಿಕ ಪರಿಣಾಮಗಳು ಅವರನ್ನು ಹಲಬಗೆಯಲ್ಲಿ ಘಾಸಿಗೊಳಿಸುತ್ತವೆ:

> ಸಮಲೈಂಗಿಕ ವ್ಯಕ್ತಿಗಳ ಬದುಕಿನ ಮೇಲೆ 377ನೇ ಪರಿಚ್ಛೇದ ಉಂಟು ಮಾಡುವ ಪರಿಣಾಮ ನ್ಯಾಯಾಲಯದ ಹೊರಗೆ ಅನುಭವವಾಗುತ್ತದೆ ಮತ್ತು ಅದನ್ನು ಕಾನೂನು ಮೊಕದ್ದಮೆಗಳ ಮೂಲಕ ಅಳಿಯಲು ಸಾಧ್ಯವಿಲ್ಲ. ಲಿಖಿತ ದಾಖಲೆಗಳು ಮತ್ತು ಕಥೆಗಳನ್ನು ಒಳಗೊಂಡ ಹಲವಾರು ಅಧ್ಯಯನಗಳ ಪ್ರಕಾರ, 377ನೇ ಪರಿಚ್ಛೇದದ ನೆಪದಲ್ಲಿ ಲೈಂಗಿಕ ಅಲ್ಪಸಂಖ್ಯಾತರ ಮೇಲೆ ಪೋಲೀಸ್ ವ್ಯವಸ್ಥೆ, ಆರೋಗ್ಯ ಸಂಸ್ತೆಗಳು ಮತ್ತು ಸರ್ಕಾರಗಳು ಸತತವಾಗಿ ಮತ್ತು ನಿತ್ಯವೂ ಅತ್ಯಾಚಾರ ಎಸಗುತ್ತಿವೆ. ಇಲ್ಲಿ ಹಿಜ್ರಾಗಲು (ಲಿಂಗ ಪರಿವರ್ತಿತರ ವಿಶಿಷ್ಟವಾದ ಒಂದು ವರ್ಗ) ಮತ್ತು ಕೋತಿಗಳು (ಹೆಣ್ಣಿನ ಹಾವಭಾವದ ಪುರುಷರು) ಭಾರತಾದ ರಸ್ತೆಗಳ ಮೇಲೆ ಪ್ರತಿದಿನ ಅನುಭವಿಸುವ ಹಿಂಸೆಯ ಹಲವಾರು ಕಥೆಗಳಿಂದ ಹಿಡಿದು, ಹರೆಯದ ವ್ಯಕ್ತಿಯೊಬ್ಬನಿಗೆ ಸತತ ಮೂರು ವರ್ಷಗಳ ಕಾಲ ವಿದ್ಯುತ್ ಶಾಕ್ ಚಿಕಿತ್ಸೆ ನೀಡಿದ ಪ್ರಕರಣವನ್ನು ಆಲಿಸಲು ನಿರಾಕರಿಸಿದ ರಾಷ್ಟ್ರೀಯ ಮಾನವಾಧಿಕಾರ ಆಯೋಗದ ಕಥೆಗಳನ್ನು ಉಲ್ಲೇಖಿಸಬಹುದು. ಕರ್ನಾಟಕದ ಪೀಪಲ್ಸ್ ಯೂನಿಯನ್ ಆಫ್ ಸಿವಿಲ್ ಲಿಬರ್ಟೀಸ್ ನಾ ಇತ್ತೀಚಿನ ವರದಿಯ ಪ್ರಕಾರ, ಪೊಲೀಸರು 377ನೇ ಪರಿಚ್ಛೇದವನ್ನು ಅನಧಿಕೃತ ಸೆರೆಹಿಡಿಯುವಿಕೆ, ಲೈಂಗಿಕ

[136] Ibid.

> ದೌರ್ಜನ್ಯ ಮತ್ತು ಕಿರುಕುಳ, ಸುಲಿಗೆ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಬಗೆಗೆ ಅವರ ಕುಟುಂಬದವರಿಗೆ ತಿಳಿಸುವಂತಹ ಕೃತ್ಯಗಳನ್ನು ಸಮರ್ಥಿಸಿಕೊಳ್ಳಲು ಬಳಸುತ್ತಾರೆ[137].

19ನೇ ಶತಮಾದ ಕೊನೆಗೊಳ್ಳುವುದಕ್ಕೆ ಮೊದಲು, ಸಮಲೈಂಗಿಕ ಚಳವಳಿಗಳು ಬಹಳ ವಿರಳವಾಗಿದ್ದವು. ಆಸ್ಕರ್ ವೈಲ್ಡ್ ರ ಪ್ರಿಯತಮ ಆಲ್ಫ್ರೆಡ್ ಡಗ್ಲಸ್ ತನ್ನ 1890ನೇ ಇಸವಿಯ ಕವಿತೆ "ಟು ಲವ್ಸ್" ನಲ್ಲಿ "ತನ್ನ ಹೆಸರ ಹೇಳ ಹೆದರುವ ಪ್ರೇಮ" ದ ಬಗ್ಗೆ ಬರೆದಾಗ, ಅವರು ಖಂಡಿತವಾಗಿಯೂ ಸಮಲೈಂಗಿಕತೆಯ ಕುರಿತು ಸಮಾಜದಲ್ಲಿದ್ದ ನೈತಿಕ ಅಸಹನೆಯನ್ನು ಪ್ರಸ್ತಾಪಿಸಿದ್ದರು [138] . ಆದರೆ ಇಪ್ಪತನೇ ಶತಮಾನದಲ್ಲಿ ಎಲ್.ಜಿ.ಬಿ.ಟಿ.ಕ್ಯೂ. ಸಮುದಾಯವು ಜಗತ್ತಿನಾದ್ಯಂತ ಕತ್ತಲಿನಿಂದ ಹೊರಬಂದು ಸಮಾನ ನಾಗರೀಕ ಹಕ್ಕುಗಳಿಗಾಗಿ ಪ್ರತಿಭಟಿಸಲು ಆರಂಭಿಸಿತು. ಎಲ್.ಜಿ.ಬಿ.ಟಿ.ಕ್ಯೂ ಸಮುದಾಯವು ಹಲವು ವರ್ಗಗಳನ್ನು ಒಟ್ಟಿಗೂಡಿಸುವ ಬಗೆಗೆ, ಲೈಂಗಿಕ ಅಲ್ಪಸಂಖ್ಯಾತರ, ಕೆಳವರ್ಗದವರ, ಬಿಳಿಯರಲ್ಲದವರ, ವಿಕಲಾಂಗರ ಮೇಲಿನ ಶೋಷಣೆಗಳು ಒಂದಕ್ಕೊಂದು ಪೂರಕವಾಗಿರುವ ಬಗೆಗೆ ದನಿಯೆತ್ತಿದೆ. ಈ ಚಳವಳಿಯು ಸಮಾನ ಅಧಿಕಾರಗಳಿಗಾಗಿನ ಹೋರಾಟದಲ್ಲಿ ಬಹಳ ಮುಂದುವರೆದಿದ್ದರೂ, 21ನೇ ಶತಮಾನ ಆರಂಭವಾಗುವ ಕಾಲದಲ್ಲೂ ಸಮಲೈಂಗಿಕರ ಬಂಧನದ ಘಟನೆಗಳು ಮುಂದುವರೆದಿದ್ದವು.

ಈಡೇರಲಾಗದ ನಾಗರಿಕ ಹಕ್ಕುಗಳ ಬಗೆಗಿನ ಹೋರಾಟಗಳು ಡಾ. ಮಾರ್ಟಿನ್ ಲೂತರ್ ಕಿಂಗ್ ಹೇಳುವ "ನೈತಿಕ ವಿಶ್ವದ ಕಮಾನು ಗೋಪುರ ಬಹಳ ವಿಸ್ತಾರವಾದುದಾದರೂ, ಅದು ನ್ಯಾಯದ ಕಡೆಗೆ ಬಾಗುತ್ತದೆ" ಎಂಬ ತತ್ವದಡಿಯಲ್ಲಿ ಸಾಗುತ್ತವೆ. ಈ ತತ್ವವನ್ನು ಪಾಲಿಸುವವರೆಲ್ಲ ಸಮಲೈಂಗಿಕರು ತಾಳ್ಮೆ ರುಢಿಸಿಕೊಂಡು, ಸಮಾಜ ಅವರ ಬದುಕಿನ ಶೈಲಿಯನ್ನು ಅರ್ಥಮಾಡಿಕೊಂಡು ಒಪ್ಪಿಕೊಳ್ಳುವವರೆಗೆ ಕಾಯಬೇಕು ಎಂದು ನಂಬಿಕೊಂಡಿರುತ್ತಾರೆ. ಆದರೆ ಈ ತತ್ವವನ್ನು ನಂಬುವವರು ಡಾ. ಕಿಂಗ್ "ಕಾಯುವಿಕೆ" ಎಂಬ ತತ್ವದ ವಿರುದ್ಧ ವಾದಿಸಿದ್ದರು ಎಂಬುದನ್ನು ಅರ್ಥ ಮಾಡಿಕೊಳ್ಳುವಲ್ಲಿ ಸೋಲುತ್ತಾರೆ.

---

[137] Douglas, supra note 9, at page 21; “Introduction” to Because I Have a Voice: Queer Politics in India, (Gautam Bhan and Arvind Narrain eds), Yoda Press (2005) at pages 7, 8.

[138] Melba Cuddy-Keane, Adam Hammond and Alexandra Peat, “Q” in Modernism: Keywords, Wiley-Blackwell (2014

ಈಗ ಹಲವು ವರ್ಷಗಳ ವರೆಗೆ ನಾನು "ಕಾಯುವಿಕೆ" ಎಂಬ ಪದವನ್ನು ಕೇಳಿಸಿಕೊಂಡಿದ್ದೇನೆ. ಅದು ಪ್ರತಿ ಕರಿಯನ ಕಿವಿಯಲ್ಲಿ ಸೀಳುವಷ್ಟು ಹತ್ತಿರದಿಂದ ಅನುರಣಿಸುತ್ತದೆ. ಅದು ಮಂಪರುಬರಿಸಿ ಭಾವನಾತ್ಮಕ ಒತ್ತಡವನ್ನು ಆ ಕ್ಷಣಕ್ಕೆ ಕಡಿಮೆಮಾಡಿ ಹತಾಶೆಯ ಬುದ್ಧಿಹೀನ ಮಗುವಿಗೆ ಜನ್ಮನೀಡುವ ಥಾಲಿಡೋಮೈಡ್ ನಂತಿದೆ. ಪ್ರಖ್ಯಾತ ನ್ಯಾಯಶಾಸ್ತ್ರಜ್ಞರೊಬ್ಬರು ಇತ್ತೀಚೆಗೆ ಹೇಳಿದ "ತಡವಾದ ನ್ಯಾಯವು, ನಿರಾಕರಿಸಲಾದ ನ್ಯಾಯ" ಎಂಬ ಸತ್ಯವನ್ನು ನಾವು ಮನಗಾಣಬೇಕಿದೆ. ನಾವು ದೇವರು ಮತ್ತು ಸಂವಿಧಾನ ಕೊಡಮಾಡಿದ ಹಕ್ಕುಗಳನ್ನು ಪಡೆಯುವುದಕ್ಕಾಗಿ ಮುನ್ನೂರಾ ನಲವತ್ತು ವರ್ಷಕ್ಕೂ ಹೆಚ್ಚು ಕಾಲ ಕಾದಿದ್ದೇವೆ. ನಿಮ್ಮನ್ನು ಕರಿಯನೆಂಬ ಸತ್ಯವೊಂದರ ನೆಪದಲ್ಲಿ ಹಗಲು ರಾತ್ರಿ ಹಿಂಸೆಗೊಳಪಡಿಸಿ, ನೀವು ಸದಾಕಾಲ ತುದಿಗಾಲಿನಲ್ಲಿ ನಿಂತು, ಮುಂದೇನಾಗುವುದೋ ಎಂಬುದನ್ನು ತಿಳಿಯದೆ, ಒಳಗಿನ ಭಯಗಳು ಮತ್ತು ಹೊರಗಿನ ಆಕ್ರೋಶಗಳ ನೆರಳಿನಲ್ಲೇ ಬದುಕುವಂತೆ ಮಾಡಿದಾಗ; ನೀವು ಸದಾಕಾಲ ನೀವು "ಯಾರೂ ಅಲ್ಲ"ವೆಂಬ ಭಾವದ ವಿರುದ್ಧ ಹೋರಾಡುತ್ತಲೇ ಇರುವಾಗ, ಆಗ ಮಾತ್ರ ಕಾಯುವುದು ನಮ್ಮ ಪಾಲಿಗೆ ಎಷ್ಟು ಕಷ್ಟವೆಂದು ನಿಮಗೆ ಅರ್ಥವಾಗುತ್ತದೆ. ಒಂದಲ್ಲಾ ಒಂದು ದಿನ ತಾಳ್ಮೆಯ ಕೊಡ ತುಂಬಿ ಹರಿಯುತ್ತದೆ, ಮತ್ತು ವ್ಯಕ್ತಿಗಳು ತಾವು ಕೊರೆಯುವಂತಹ ಹತಾಶೆಗೆ ಒಡ್ಡುವ ಅನ್ಯಾಯದ ಕಂದಕದಲ್ಲಿ ಬೀಳುವುದನ್ನು ನಿರಾಕರಿಸುವ ಕಾಲ ಬರುತ್ತದೆ. ಮಹನೀಯರೇ, ನಿಮಗೆ ನಮ್ಮ ನ್ಯಾಯಯುತವಾದ ತಡೆದುಕೊಳ್ಳಲಾರದ ಸಹನೆಯೂ ಅರ್ಥವಾಗುತ್ತದೆ ಎಂದು ಆಶಿಸುತ್ತೇನೆ.

(ಬರ್ಮಿಂಗ್‌ಹ್ಯಾಮ್ ಸೆರೆಮನೆಯಿಂದ ಬರೆದ ಪತ್ರ)[139]

24. ಲೈಂಗಿಕ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಭಾರತೀಯ ಪ್ರಜೆಗಳು ಕಾದಿದ್ದಾರೆ. ತಮ್ಮ ಸಹ ನಾಗ್ರೀಕರು ಬ್ರಿಟೀಷರ ಮೂಗುದಾರದಿಂದ ಮುಕ್ತರಾಗುತ್ತಿದ್ದಾಗ, ಪುರಾತನ ಮತ್ತು ಈ ಕಾಲಕ್ಕೆ ಸಲ್ಲದ ವಸಾಹಾತುಕಾಲದ ಕಾನೂನೊಂದು ತಮ್ಮ ಮೂಲಭೂತ ಸ್ವಾತಂತ್ರ್ಯಗಳನ್ನು ಸೆರೆಹಿಡಿದಿಟ್ಟು, ತಮ್ಮನ್ನು ಮುಚ್ಚುಮರೆಯಲ್ಲಿ, ಭಯದಲ್ಲಿ, ಎರಡನೇ ದರ್ಜೆಯ ನಾಗರೀಕರಂತೆ ಬದುಕುವಂತೆ ಮಾಡಿದನ್ನು ನೋಡುತ್ತಲೇ ಕಾದಿದ್ದಾರೆ. 377ನೇ ಪರಿಚ್ಛೇದದ ಮಾನ್ಯತೆಯ ಕುರಿತು ತೀರ್ಪಿಗಾಗಿ ಸಲ್ಲಿಸಿರುವ ಮನವೀಯ ಮೂಲಕ, ಈ ಕಾನೂನಿನ ಅಡಿಯಲ್ಲಿ ಅಪರಾಧವೆಂದು ಪರಿಗಣಿಸಲಾಗಿರುವ ಕ್ರಿಯೆಗಳನ್ನು ಅಪರಾಧಮುಕ್ತಗೊಳಿಸಬೇಕೆಂದು ಈ ಪ್ರಜೆಗಳು ಆಗ್ರಹಿಸುತ್ತಾರೆ. ಆದರೆ ಈ ಪ್ರಕರಣದಲ್ಲಿ, ವಸಾಹರುಶಾಹೀ ಕಾನೂನೊನ್ದು ನಿಷೇಧಿಸುವ ಕೆಲ ಕ್ರಿಯೆಗಳನ್ನು ಅಪರಾಧ ಮುಕ್ತಗೊಳಿಸುವುದಕ್ಕಿಂತಲೂ ಮಿಗಿಲಿನ ವಿಚಾರಗಳಿವೆ. ಈ ಪ್ರಕರಣವು ಸಾಂವಿಧಾನಿಕ ಹಕ್ಕುಗಳನ್ನು ಅನುಭವಿಸುವ ಮಹದಾಸೆಯ ಕುರಿತದ್ದು. ಈ ಪ್ರಕರಣ ಪ್ರತಿ ಮನುಷ್ಯನು ಹೊಂದಿರುವ ಘನತೆಯಿಂದ ಬದುಕುವ ಹಕ್ಕಿನ ಕುರಿತದ್ದಾಗಿದೆ. ಈ ಪ್ರಕರಣ ಈ ಪ್ರಜೆಗಳಿಗೆ ಸಮಾನ ನಾಗರಿಕತೆಯ ಬೆಲೆ ತಿಳಿಸುವ ಬಗೆಗಿನದ್ದಾಗಿದೆ. ಇದೆಲ್ಲಕ್ಕಿಂತ ಮಿಗಿಲಾಗಿ ನಮ್ಮ ನಿರ್ಧಾರವು ಸಂವಿಧಾನಕ್ಕಿರುವ ಬದಲಾವಣೆ ತರುವ ಶಕ್ತಿಯನ್ನು ಎತ್ತಿಹಿಡಿಯುತ್ತದೆ. ಏಕೆಂದರೆ, ಸಾಮಾಜಿಕ ಬದಲಾವಣೆಗಳಾದಾಗ ಮಾತ್ರ ಸಂವಿಧಾನ ಪ್ರಜೆಗಳಿಗೆ ನ್ಯಾಯಯುತ, ಮಾನವೀಯ ಮತ್ತು ಪರಸ್ಪರ ಸಹಾನುಭೂತಿಯ ಬದುಕನ್ನು ಕಟ್ಟಿಕೊಡಲು ಸಾಧ್ಯ.

## D. ಒಂದು ಸಾಮಾನವಾದ ಪ್ರೇಮ

**“Through Love's Great Power"**

**ಪ್ರೇಮದ ಮಹೋನ್ನತ ಶಕ್ತಿಯಿಂದ**

Through love's great power to be made whole

[139] Martin Luther King Jr., “Letter from a Birmingham Jail” (1963).

In mind and body, heart and soul –

Through freedom to find joy, or be

By dint of joy itself set free In love and in companionhood:

This is the true and natural good.

To undo justice, and to seek

To quash the rights that guard the weak -

To sneer at love, and wrench apart

The bonds of body, mind and heart

With specious reason and no rhyme:

This is the true unnatural crime."[140]

ಸಂವಿಧಾನದ 14ನೇ ಕಲಮು ನಮ್ಮ ಸಮಾನತೆಯ ಮೂಲಭೂತ ಸನ್ನದಾಗಿದೆ.

> "ಸರ್ಕಾರವು, ಭಾರತದ ಸರಹೊದ್ದಿನೊಳಗೆ, ಯಾವ ವ್ಯಕ್ತಿಗೂ ಕಾನೂನಿನೆದುರಿನ ಸಮಾನತೆ ಅಥವಾ ಕಾನೂನಿನ ಸಮಾನ ರಕ್ಷಣೆಯನ್ನು ನಿರಾಕರಿಸುವಂತಿಲ್ಲ. (ಒತ್ತು ನೀಡಲಾಗಿದೆ)

25. ನಾಜ಼್ ಪ್ರಕರಣದಲ್ಲಿ, ದೆಹಲಿ ಉಚ್ಚ ನ್ಯಾಯಾಲಯವು 377ನೇ ಪರಿಚ್ಛೇದದ ವರ್ಗೀಕರಣಕ್ಕೂ, ಅದು ಈಡೇರಿಸಬಯಸುವ ಉದ್ದೇಶಗಳಿಗೂ ತಾಳಮೇಳವಿಲ್ಲವೆಂದು ಸಂವಿಧಾನದ 14ನೇ ಕಲಮನ್ನು ಉಲ್ಲಂಘಿಸುತ್ತದೆ ಎಂದು ನಿರ್ಧರಿಸಿತು[141]. **ಕೌಶಲ್** ಪ್ರಕರಣದಲ್ಲಿ ಇದೇ ನ್ಯಾಯಾಲಯವು ನಾಜ಼್ ಪ್ರಕರಣದ ನಿರ್ಧಾರವನ್ನು "ಸಾಮಾನ್ಯ ಸಂದರ್ಭಗಳಲ್ಲಿ ಶಾರೀರಿಕ ಸಂಭೋಗ ನಡೆಸುವವರು ಮತ್ತು ನಿಸರ್ಗದ ನಿಯಮಕ್ಕೆ ವಿರುದ್ಧ ಶಾರೀರಿಕ ಸಂಭೋಗ ನಡೆಸುವವರು ಎಂಬ ಎರಡು ಬೇರೆ ಬೇರೆ ವರ್ಗಕ್ಕೆ ಸೇರಿದ ವ್ಯಕ್ತಿಗಳು" ಎಂಬ ಆಧಾರದ ಮೇಲೆ ರದ್ದುಪಡಿಸಿತು[142]. ಈ ತರ್ಕದ ಆಧಾರದಲ್ಲಿ, 377ನೇ

[140] Vikram Seth

[141] Naz Foundation, at para 91.

[142] Koushal, at para 65.

ಪರಿಚ್ಛೇದ ನಿರಂಕುಶತ್ವ ಅಥವಾ ಅತಾರ್ಕಿಕ ವರ್ಗೀಕರಣದ ಸಮಸ್ಯೆಯನ್ನು ಹೊಂದಿಲ್ಲ ಎಂದು ಕೌಶಲ್ ಪ್ರಕರಣದಲ್ಲಿ ನಿರ್ಧರಿಸಲಾಯಿತು.

26. ನಮ್ಮ ತೀರ್ಪುಗಳ ಸರಣಿಯ ಪ್ರಕಾರ - ಪ್ರತಿ ತೀರ್ಪನ್ನೂ ಉಲ್ಲೇಖಿಸಿದರೆ ಹೇಳಿದ್ದನ್ನೇ ಹೇಳಿದಂತಾಗುತ್ತದೆ - ಸಂವಿಧಾನದ 14ನೇ ಕಲಮಿನಡಿಯಲ್ಲಿ ಅಪರಾಧವೆಂದು ವರ್ಗೀಕರಣಗೊಳ್ಳಲು ಎರಡು ಮಾನದಂಡಗಳು ಅಗತ್ಯ 1) ಅರ್ಥವಾಗಬಲ್ಲ ವತ್ಯಾಸಗಳ ಆಧಾರದಲ್ಲಿ ವರ್ಗೀಕರಣ ಆಗಬೇಕು ಮತ್ತು 2) ಕಾನೂನಿನ ವರ್ಗೀಕರಣಕ್ಕೂ ಅದು ಪೂರೈಸಬಯಸುವ ಉದ್ದೇಶಕ್ಕೂ ತಾರ್ಕಿಕವಾದ ಹೊಂದಾಣಿಕೆಯಿರಬೇಕು[143]. ಇದನ್ನೇ ಬೇರೆ ರೀತಿಯಲ್ಲಿ ಹೇಳುವುದಾದರೆ, ವರ್ಗೀಕರಣದ ಕಾರಣ ಮತ್ತು ಕಾನೂನಿಯ ಉದ್ದೇಶಗಳ ನಡುವೆ ಸಕಾರಾಣ ತಾಳಮೇಳವಿರಬೇಕು. ವರ್ಗೀಕರಣಮಾಡುವ ಉದ್ದೇಶ ಅಸಮಂಜಸವೂ, ನ್ಯಾಯವಿಲ್ಲದ್ದು ಮತ್ತು ಪಕ್ಷಪಾತಿಯಾಗಿರುವಂತಿದ್ದರೆ, ಆ ವರ್ಗೀಕರಣ ಅತಾರ್ಕಿಕವಾಗುತ್ತದೆ[144].

27. ಸಮಾನತೆಯನ್ನು ಅಪರಾಧವೊಂದರ ತಾತ್ವಿಕ ವರ್ಗೀಕರಣದೊಂದಿಗೆ ಸಮೀಕರಿಸಿದಾಗ ಕಾನೂನಿನ ಶಿಷ್ಟಾಚಾರ ಮೆರೆದಂತಾಗುತ್ತದೆ.. ಈ ವರ್ಗೀಕರಣ ಪರೀಕ್ಷೆಯ ಸಮಸ್ಯೆಯೆಂದರೆ, ತಾರ್ಕಿಕ ನೆಲೆಯಲ್ಲಿ ನಡೆಯಬೇಕಾಗಿದ್ದ ವರ್ಗೀಕರಣವು, ಕೇವಲ ಸೂತ್ರವಾಗಿ ಉಳಿದು: ಅರ್ಥವಾಗಬಲ್ಲ ವ್ಯತ್ಯಾಸ ಮತ್ತು ಕಾನೂನಿನ ಉದ್ದೇಶದ ಹುಡುಕಾಟ ಮಾತ್ರ ನಡೆಯುತ್ತದೆ. ಹಾಗಾದಾಗ, ವರ್ಗೀಕರಣದ ಪರೀಕ್ಷೆಯು ಸತ್ವಕ್ಕಿಂತ ಹೊರಗಿನ ಸ್ವರೂಪಕ್ಕೆ ಹೆಚ್ಚಿನ ಬೆಲೆ ನೀಡಿದಂತಾಗುತ್ತದೆ. ಸಾಂವಿಧಾನಿಕ ಹಕ್ಕುಗಳನ್ನು ನಿರ್ಧರಿಸುವ ಮೌಲ್ಯಗಳು, ಅವೆಷ್ಟೇ ಹಳೆಯದಾಗಿದ್ದರೂ, ತ್ಯಜಿಸಲು ಸಾಧ್ಯವಾಗದಿರುವುದೇ ಕಾನೂನಾತ್ಮಕ ಶಿಷ್ಟತೆಯಲ್ಲಿರುವ ಅಪಾಯ. ಕಾನೂನಿನ ಶಿಷ್ಟತೆಯು ಸಂವಿಧಾನದ ಜೀವದಾಯಕ ಶಕ್ತಿಯನ್ನು, ಬರಿಯ ಸೂತ್ರ ಅಥಾವಾ ಮಂತ್ರದಡಿಯಲ್ಲಿ ಹೂತುಹಾಕುತ್ತದೆ. ಈ ಶಿಷ್ಟತೆಯು 14ನೇ ಕಲಮಿನಲ್ಲಿರುವ, ಕಾನೂನಿನೆದುರು ಸಮಾನತೆ ಮತ್ತು ಕಾನೂನಿನ ಸಮಾನ ರಕ್ಷಣೆ ಎಂಬ ಶಕ್ತಿಶಾಲಿ ತತ್ವಗಳನ್ನು ನಿರ್ಲಕ್ಷಿಸುತ್ತದೆ. ಸಮಾನತೆಯನ್ನು ಕೇವಲ ವರ್ಗೀಕರಿಸುವ ಶಿಷ್ಟಾಚಾರದ ಕ್ರಿಯೆಯ ಹಂತಕ್ಕೆ ಇಳಿಸಿದರೆ, ನಿರಂಕುಶ ಪ್ರಭುತ್ವದಿಂದ ಪ್ರಜೆಗಳನ್ನು ರಕ್ಷಿಸುವ ಅದರ ಮೂಲ ಗುಣವನ್ನು

[143] State of West Bengal v. Anwar Ali Sarkar, AIR (1952) SC 75.

[144] Deepak Sibal v. Punjab University, (1989) 2 SCC 145.

ಮರೆತಂತಾಗುತ್ತದೆ. ಒಂದೆಡೆ ಸಾಂವಿಧಾನಿಕ ನ್ಯಾಯಶಾಸ್ತ್ರವು ಸ್ವಾತಂತ್ಯ ಮತ್ತು ಸಮಾನತೆಗಳ ಮುಖ್ಯ ಆಶಯಗಳನ್ನು ಗುರುತಿಸುವಷ್ಟು ಮುಂದುವರೆದಿದ್ದಾರೆ, ಮತ್ತೊಂದೆಡೆ 14ನೇ ಕಲಮಿನ ಮೂಲ ತತ್ವ ಕೂಡ ವರ್ಗೀಕರಣದ ನೆರಳಿನಿಂದ ಹೊರಬಂದಿದೆ. ಸಂವಿಧಾನವೆಂಬ ಸೌಧವನ್ನು, 14ನೇ ಕಲಮಿನ ಸ್ವಂತ ಶಕ್ತಿ, ಘನತೆ ಮತ್ತು ಸ್ವಾತಂತ್ರ್ಯಗಳ ಅಡಿಪಾಯದಮೇಲೆ ಕಟ್ಟಲಾಗಿದೆ. ಇದನ್ನು ಸರಳವಾಗಿ ಹೇಳುವುದಾದರೆ, ಮೇಲೆ ತಿಳಿಸಿದ ಅವತಾರದಲ್ಲಿ ಸಂವಿಧಾನವು ಮನುಷ್ಯರು ಮಾಡುವ ಪ್ರತಿ ಕೆಲಸದಲ್ಲಿ ಮತ್ತು ಜೀವನದ ಪ್ರತಿಯೊಂದು ಘಟ್ಟದಲ್ಲಿ ಅವರ ಹಾಗೂ ಇತರ ವ್ಯಕ್ತಿಗಳನ್ನು ನ್ಯಾಯಯುತವಾಗಿ ನಡೆಸಿಕೊಳ್ಳುವುದನ್ನು ಖಾತ್ರಿಪಡೆಸಿಕೊಳ್ಳುವುದರೆಡೆಗೆ ದಾಪುಗಾಲು ಹಾಕುತ್ತದೆ.

**ಈ.ಪಿ. ರೂಯಪ್ಪ v. ತಮಿಳು ನಾಡು ರಾಜ್ಯ ಸರ್ಕಾರ** [145] ಪ್ರಕರಣದಲ್ಲಿ, ಸರ್ಕಾರದ ಕ್ರಮಗಳು ನಿರಂಕುಶವಾಗಿವೆಯೇ ಇಲ್ಲವೇ ಎಂಬುದನ್ನು ಪರೀಕ್ಷಿಸಲಾಯಿತು

> ಸಮಾನತೆ ಎಂಬುದು ಹಲವು ಅಂಶಗಳು ಮತ್ತು ಆಯಾಮಗಳನ್ನು ಒಳಗೊಂಡಿರುವ ಚಲನಶೀಲ ತತ್ವವಾಗಿದ್ದು ಅದನ್ನು ಸಾಂಪ್ರಾದಾಯಿಕ ತಾತ್ವಿಕತೆಯೊಳಗೆ ಕಟ್ಟಿಹಾಕುವುದಾಗಲೀ, ಬಂಧಿಸುವುದಾಗಲೀ ಅಥವಾ ಅದನ್ನು ತಡೆಹಿಡಿಯುವುದಾಗಲೀ ಸಾಧ್ಯವಿಲ್ಲ. ನಿಜವಾದ ಅರ್ಥದಲ್ಲಿ ನೋಡಿದರೆ, ಸಮಾನತೆಯು ನಿರಕುಶತ್ವಕ್ಕೆ ವಿರುಧವಾದ ತತ್ವವಾಗಿದೆ. ಹಾಗೆ ನೋಡಿದರೆ, ಸಮಾನತೆ ಮತ್ತು ನಿರ್ರಂಕುಷತ್ವಗಳು ಬದ್ಧವೈರಿಗಳು; ಸಮಾನತೆಯು ಪ್ರಜಾತಾಂತ್ರಿಕ ಕಾನೂನಿಗೆ ಸಂಬಂಧಿಸಿದ್ದು ಮತ್ತು ನಿರಂಕುಶತ್ವವು ಸರ್ವಾಧಿಕಾರಿಯೊಬ್ಬನ ಹುಚ್ಚಾಟ ಮತ್ತು ತೆವಲುಗಳನ್ನು ಅವಲಂಬಿಸುರುತ್ತದೆ. ನಿರಂಕುಶವಾದ ಕ್ರಮವೊಂದು ರಾಜನೈತಿಕ ಮತ್ತು ಸಾಂವಿಧಾನಿಕ ನೆಲೆಗಳಲ್ಲಿ ಅಸಮಾನತೆಯನ್ನು ಪ್ರತಿಪಾದಿಸುವುದು

[145] (1974) 4 SCC 3

ಸ್ಪಷ್ಟವಾಗಿ ಗೋಚರಿಸುತ್ತದೆ, ಆ ಮೂಲಕ ಅದು 14 ನೇ ಕಲಮನ್ನು ಉಲ್ಲಂಘಿಸುತ್ತದೆ.

ನಾಲ್ಕು ದಶಕಗಳ ನಂತರದ **ಶಾಯರಾ ಬಾನೋ v. ಭಾರತ ಸರ್ಕಾರ**[146] ಪ್ರಕರಣದಲ್ಲಿ ವರ್ಗೀಕರಣದ ಪರೀಕ್ಷೆಯನ್ನು ಸಂಸ್ಕರಿಸಲಾಯಿತು.

> "ನಿರಂಕುಶ ಎಂಬ ಭಾವದ ಅರ್ಥ, ಅಸಮಂಜಸವಾದ ರೀತಿಯಲಿ, ಸರಿಯಾದ ಸಿದ್ಧಾಂತದ ಆಧಾರವಿಲ್ಲದೇ, ಒಬ್ಬರ ವಿನೋದಕ್ಕಾಗಿ, ಅಥವಾ ಕುಟಿಲತೆಯಿಂದ, ವಸ್ತುಗಳ ಸ್ವಭಾವಕ್ಕೆ ವಿರುದ್ಧವಾಗಿ, ಅತಾರ್ಕಿಕವಾಗಿ, ಸರಿಯಾಗಿ ವಿಚಾರಮಾಡದೇ ಅಥವಾ ನಿರ್ಧರಿಸದೇ, ಕೇವಲ ತಮ್ಮ ಮನಸ್ಸಿಗೆ ತೋಚಿದಂತೆ ನಡೆದುಕೊಳ್ಳುವುದು.

28. 377ನೇ ಪರಿಚ್ಛೇದದಲ್ಲಿ ಬಳಸಲಾಗಿರುವ ಪದಗಳಲ್ಲಿ, ಸಮಲೈಂಗಿಕ ಮತ್ತು ಭಿನ್ನಲಿಂಗಾಸಕ್ತರ ನಡುವೆ ಭೇದ ಕಾಣಿಸುವುದಿಲ್ಲವಾದರೂ. ಅದನ್ನು ನಿಖರವಾಗಿ ಅರ್ಥೈಸಿಕೊಂಡಾಗ, ಅದು ಭಿನ್ನಲಿಂಗಾಸಕ್ತರ ಕೆಲವೇ ಲೈಂಗಿಕ ಅಭಿವ್ಯಕ್ತಿಗಳನ್ನು ನಿರ್ಬಂಧಿಸಿದರೆ, ಸಮಲೈಂಗಿಕ ವ್ಯಕ್ತಿಗಳ ನಡುವಿನ ಎಲ್ಲಾ ಬಗೆಯ ಲೈಂಗಿಕ ಅನ್ಯೋನ್ಯತೆ ಮತ್ತು ಅಭಿವ್ಯಕ್ತಿಗಳನ್ನು ಕಾನೂನುಬಾಹಿರಗೊಳಿಸುತ್ತದೆ ಎಂಬುದು ಕಂಡುಬರುತ್ತದೆ[147]. 377ನೇ ಪರಿಚ್ಛೇದವು 14ನೇ ಕಲಮಿನ ನೆಲೆಗಟ್ಟಿನ ವಿಮರ್ಶೆಯಲ್ಲಿ ತೇರ್ಗಡೆಯಾಗಲು, ಕೌಶಲ್ ಪ್ರಕರಣದಲ್ಲಿ ನ್ಯಾಯಾಲಯವು 'ಸಾಮಾನ್ಯ ಸಂಭೋಗ' ಮತ್ತು 'ನಿಸರ್ಗದ ನಿಯಮಕ್ಕೆ ವಿರುದ್ಧವಾದ ಸಂಭೋಗ'ದ ನಡುವಿನ ಭಿನ್ನತೆಯನ್ನು ಸ್ಪಷ್ಟಪಡಿಸಬೇಕಿತ್ತು. ಹಾಗೆ ಮಾಡಿದಾಗ, ಸದರಿ ಪರಿಚ್ಛೇದದ ಉದ್ದೇಶ ಮತ್ತು ಅದನ್ನು ಭಿನ್ನವೆಂದು ವರ್ಗೀಕರಣ ಮಾಡುವುದರ ನಡುವಿನ ತಾತ್ವಿಕ ಸಂಬಂಧವನ್ನು ಕಾನೂನು ಬದ್ಧವಾಗಿ ಸಾಬೀತು ಪಡಿಸಿದಂತಾಗುತ್ತಿತ್ತು. ಆದರೆ, ಕೌಶಲ್ ಪ್ರಕರಣದಲ್ಲಿ ನ್ಯಾಯಾಲಯವು 14ನೇ ಕಲಮಿನ ವಿಚಾರ ನಿರ್ಧರಿಸುವಾಗ, "ನ್ಯಾಯಶಾಸ್ತ್ರೀಯ ತಾತ್ವಿಕತೆಯ ಕನಿಷ್ಟ

[146] (2017) 9 SCC 1

[147] Gautam Bhatia, "Equal moral membership: Naz Foundation and the refashioning of equality under a transformative constitution", Indian Law Review, Vol. 1 (2017), at pages 115-144.

ಮಾನದಂಡಗಳನ್ನು ಈಡೇರಿಸಲಿಲ್ಲ" ಎಂಬುದು ಆ ತೀರ್ಪನ್ನು ಖಂಡಿಸಲು ಇರುವ ಕಾರಣಗಳಲ್ಲಿ ಒಂದು[148]. ಕೌಶಲ್ ಪ್ರಕರಣದಲ್ಲಿ 377 ನೇ ಪರಿಚ್ಛೇದದ ಅಡಿಯಲ್ಲಿ ನಡೆದಿರುವ ವಿಚಾರಣೆಗಳನ್ನು ಮರುಪರಿಶೀಲಿಸಿದ ನ್ಯಾಯಾಲಯವು. "ಲೈಂಗಿಕ ಕ್ರಿಯೆಗಳನ್ನು ನಿಸರ್ಗದ ನಿಯಮಕ್ಕೆ ವಿರುದ್ಧವಾದ ಶಾರೀರಿಕ ಸಂಭೋಗ' ಎಂದು ವರ್ಗೀಕರಿಸಲು ಏಕರೂಪವಾದ ಪರೀಕ್ಷೆಯನ್ನು ನಿರ್ಧರಿಸಲು ಸಾಧ್ಯವಾಗಲಿಲ್ಲ" ಎಂದು ನುಡಿಯಿತು[149]. ಆದಾಗ್ಯೂ, ಕೌಶಲ್ ಪ್ರಕರಣದಲ್ಲಿ ನ್ಯಾಯಾಲಯವು 377ನೇ ಪರಿಚ್ಛೇದದ ಅಡಿಯಲ್ಲಿ ಲೈಂಗಿಕ ಕ್ರಿಯೆಗಳನ್ನು ವರ್ಗೀಕರಿಸುವುದನ್ನು ಸಮರ್ಥಿಸಿಕೊಂಡಿತು, ಆದರೆ, ಪ್ರಜೆಗಳನ್ನು ಭಿನ್ನವಾಗಿ ನಡೆಸಿಕೊಳ್ಳುವುದಕ್ಕೆ ಇರುವ ಕಾರಣವನ್ನಾಗಲೀ, ಅಥವಾ ಅವರುಗಳಲ್ಲಿರುವ ಭಿನ್ನತೆಯನ್ನಾಗಲೀ ವಿವರಿಸುವ ಗೋಜಿಗೆ ನ್ಯಾಯಾಲಯ ಹೋಗಲಿಲ್ಲ.

ಮೇಲಿನ ವಿಚಾರದಲ್ಲಿ ಸರಿಯಾದ ತರ್ಕ ಅಥವಾ ವಿಶ್ಲೇಷಣೆಯನ್ನು ನಡೆಸದಿರುವ ನ್ಯಾಯಾಲಯದ ಕ್ರಮವನ್ನು ಸಮಲೈಂಗಿಕತೆಗೆ ಸಂಬಂಧಿಸಿದ ಶೈಕ್ಷಣಿಕ ಸಂಶೋಧನೆಗಳಲ್ಲಿ ತರಾಟೆಗೆ ತೆಗೆದುಕೊಳ್ಳಲಾಗಿದೆ. ಈ ಕೆಳಗಿನ ಸಾಲುಗಳು ನ್ಯಾಯಾಲಯದ ನಿರ್ಧಾರದ ವಿಮರ್ಶೆಯನ್ನು ಸಮರ್ಥವಾಗಿ ಹಿಡಿದಿಡುತ್ತವೆ:

> "ಸಾಮಾನ್ಯ ರೀತಿ"ಯಲ್ಲಿ ಲೈಂಗಿಕ ಸಂಭೋಗದಲ್ಲಿ ತೊಡಗುವವರು ಮತ್ತು ಹಾಗೆ ಮಾಡದವರು ಎಂಬ ಎರಡು ವರ್ಗಗಳಿವೆ ಎಂದು ನ್ಯಾಯಾಲಯವು ಒಂದಿನಿತೂ ಸಾಕ್ಷ್ಯವಿಲ್ಲದೇ ನುಡಿಯುತ್ತದೆ. ಸಾಮಾನ್ಯ ರೀತಿ ಎಂದರೇನು? ಬಹುಷಃ, ಭಿನ್ನಲಿಂಗೀಯತೆ. ಅದೇ ಏಕೆ ಸಾಮಾನ್ಯ ರೀತಿಯಾಗಿದೆ? ಪ್ರಾಯಶಃ ಇದಕ್ಕೆ ಸಮಲೈಂಗಿಕರಿಗಿಂತ ಹೆಚ್ಚು ಭಿನ್ನಲಿಂಗೀಯರಿದ್ದಾರೆ ಎಂಬುದು ಕಾರಣವಿರಬಹುದು, ಆದರೆ, ನ್ಯಾಯಾಲಯವು ಅದಕ್ಕೆ ಯಾವುದೇ ಪುರಾವೆ ನೀಡುವುದಿಲ್ಲ. ಹಾಗೆ ನೋಡಿದರೆ, ಕಂದು ಕೂದಲಿನ ಜನರಿಗಿಂತ ಹೆಚ್ಚು ಕಪ್ಪು ಕೂದಲಿನ ಜನರು

[148] Shubhankar Dam, "Suresh Kumar Koushal and Another v. NAZ Foundation and Others (Civil Appeal No. 10972 of 2013)" Public Law, International Survey Section (2014).

[149] Koushal, at para 60.

> ಭಾರತದಲ್ಲಿದ್ದಾರೆ. ಕಂದು ಕೂದಲಿನ ವ್ಯಕ್ತಿಯೊಂದಿಗಿನ ಲೈಂಗಿಕ ಕ್ರಿಯೆನಡೆಯುವುದು ಕಡಿಮೆ ಎಂದ ಮಾತ್ರಕ್ಕೆ ಅದು ನಿಸರ್ಗದ ನಿಯಮಕ್ಕೆ ವಿರುದ್ಧವೇ? ... ಇಲ್ಲಿ ತರ್ಕಬದ್ಧವಾದ ತಾಳಮೇಳ ಎಲ್ಲಿದೆ? ಕಾನೂನುಬದ್ಧ ಸರ್ಕಾರಿ ಉದ್ದೇಶ ಏನು? ನಾವು ಇಲ್ಲಿ ಅರ್ಥವಾಗಬಲ್ಲ ವ್ಯತ್ಯಾಸವಿದೆ ಎಂಬುದನ್ನು ಒಪ್ಪಿಕೊಂಡರೂ ಸಹ, ಯಾವ ಆಧಾರದ ಮೇಲೆ ನೀವು ಅಪರಾಧೀಕರಿಸುತ್ತೀರಿ - ಮತ್ತು ಆ ಮೂಲಕ ಯಾವ ಆಧಾರದಲ್ಲಿ ಒಂದು ವರ್ಗದಜನರಿಗೆ ಕಾನೂನಿನ ಸಮಾನ ರಕ್ಷಣೆಯನ್ನು ನಿರಾಕರಿಸುತ್ತೀರಿ? ನ್ಯಾಯಾಲಯವು ಯಾವ ಉತ್ತರವನ್ನೂ ನೀಡುವುದಿಲ್ಲ. ಪರ್ಯಾಯವಾಗಿ, "ಸಾಮಾನ್ಯ ಲೈಂಗಿಕ ಕ್ರಿಯೆಯು" ಶಿಶ್ನ-ಯೋನಿ ಸಮಾಗಮವನ್ನು ಒಳಗೊಳ್ಳುತ್ತದೆ, ಮತ್ತು ಲೈಂಗಿಕ ಕ್ರಿಯೆ ಪ್ರತಿಯೊಂದು ಇತರ ವಿಧವೂ "ಪ್ರಕೃತಿಯ ಸಾಮಾನ್ಯ ಮಾರ್ಗಕ್ಕೆ ವಿರುದ್ಧ"ವಾಗಿದೆ. ಅಲ್ಲದೇ, ಅಲ್ಲದೇ, ನ್ಯಾಯಾಧೀಶರ ಹೇಳಿಕೆಯೊಂದನ್ನು ಬಿಟ್ಟರೆ, ಮೇಲಿನ ಹೇಳಿಕೆಯನ್ನು ಸಮರ್ಥಿಸಿಕೊಳ್ಳಲು ಯಾವುದೇ ಆಧಾರಗಳಿಲ್ಲ[150]

ಮೊಟ್ಟಮೊದಲಿಗೆ, "ನಿಸ್ರಗದ ನಿಯಮಕ್ಕೆ ವಿರುದ್ದ" ಎಂಬ ಪದಪುಂಜದ ಬಳಕೆಯು ಎಷ್ಟು ಗೊಂದಲಮಯವೆಂದುದನ್ನು ನಾವು ಅರ್ಥಮಾಡಿಕೊಳ್ಳಬೇಕಿದೆ. "ನೈಸರ್ಗಿಕ" ಎಂದರೇನು? 'ಅಸ್ನೈಸರ್ಗಿಕ' ಎಂದರೀನು ಮತ್ತು ಇಂತಹ ಗೊಂದಲಮಯ ಮತ್ತು ವ್ಯಾಖ್ಯಾನಿಸಲಾರದ ವಿಚಾರಗಳಲ್ಲಿ ಇಂತಹುದೇ ವರ್ಗೀಕರಣವಾಗಬೇಕೆಂಬುದನ್ನು ಯಾರು ನಿರ್ಧರಿಸುತ್ತಾರೆ? ಒಪ್ಪಿಗೆಯಿರುವ ವಯಸ್ಕ ವ್ಯಕ್ತಿಗಳ ನಡುವಿನ ಅನ್ಯೋನ್ಯತೆಗಳಲ್ಲಿ ಯಾವುದು ಉಚಿತ ಮತ್ತು ಯಾವುದು ಅನುಚಿತ ಎಂದು ನಿರ್ಧರಿಸುವ ಹಕ್ಕನ್ನು ನಾವು ಸರ್ಕಾರಗಳಿಗೆ ನೀಡಬೇಕೆ? ತಮ್ಮ ದುರ್ದೈವದಿಂದ ಮನುಷ್ಯರಿಗಿರುವ ತಾರ್ಕಿಕ ಸಾಮರ್ಥ್ಯ (ಮತ್ತು

---

150 Gautam Bhatia, "The Unbearable Wrongness of Koushal vs Naz Foundation", Indian Constitutional Law and Philosophy (2013).

ಸಾಮಾಲೈಂಗಿಕ ಭಾವನೆಗಳನ್ನು 'ಪೋಷಿಸುವ' ಸಾಮರ್ಥ್ಯ) ದಿಂದ ವಂಚಿತವಾಗಿರುವ ಹೆಚ್ಚೂಉಕಡಿಮೆ 1500 ಜೀವ ಪ್ರಭೇದಗಳಲ್ಲಿ ಸಮಲೈಂಗಿಕತೆಯನ್ನು ದಾಖಲಿಸಲಾಗಿದೆ[151]. ಇದಕ್ಕೆ ಸಂಬಂಧಿಸಿದ ಕುತೂಹಲಕಾರಿ ಬರೆಹವೊಂದರಲ್ಲಿ, "ಲೈಂಗಿಕ ಕ್ರಿಯೆಯನ್ನೇ ನಡೆಸದ ಪ್ರಭೇದಗಳಾದ ಸೀ ಆರ್ಚಿನ್ ಮತ್ತು ಏಫೀಸ್ ಹೊರತುಪಡಿಸಿ, ಸಮಲೈಂಗಿಕ ನಡವಳಿಕೆ ಇಲ್ಲದೇ ಇರುವ ಯಾವ ಜೀವ ಪ್ರಭೇದವೂ ಕಣ್ದುಬಂದಿಲ್ಲ" ಎಂದು ಉಲ್ಲೇಖಿಸಲಾಗಿದೆ[152].

29. ತಮ್ಮ ಪ್ರೌಢ ಬರೆಹವೊಂದರಲ್ಲಿ ಆಂಬ್ರೂಸಿನೂರವರು[153], ಜೀವ ಪ್ರಭೇದಗಳು ಸಂತಾನೋತ್ಪತ್ತಿಯ ಪ್ರವೃತತ್ತಿಯಿಂದ ಪ್ರಚೋದಕ ಕಾಮನೆಗಳೆಡೆಗೆ ಹೊರಳುವ ಕ್ರಿಯೆಯನ್ನು ವಿವರಿಸಿ, ಈ ಪಲ್ಲಟವು ಲೈಂಗಿಕತೆಗೆ ಸಂಬಂಧಿಸಿದ ಆಧುನಿಕ ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳಲು ಎಷ್ಟು ಸಹಾಯಕ ಎಂಬುದನ್ನು ಚರ್ಚಿಸುತ್ತಾರೆ. ಸಮಲೈಂಗಿಕತೆ ಮತ್ತು ಭಿನ್ನ ಲೈಂಗಿಕತೆಯ ನಡುವಿನ ಗೆರೆಯು ಅದೆಷ್ಟು ಮಸುಕಾಗಿದೆ ಎಂಬುದನ್ನ ವಿಶ್ಲೀಷಿಸುವ ಅವರು, ಇಂದಿನ ಲೈಂಗಿಕ ಅಸ್ಮಿತೆಗಳ ಅಸ್ಥಿರ ವಿಸ್ತಾರವನ್ನು ಅರ್ಥಮಾಡಿಕೊಂಡಾಗ ಆ ಗೆರೆಯು ಅಡಗೂಲಜ್ಜಿ ಕಾಲದ ಕಟ್ಟುಕತೆಯಂತೆ ಅಥವಾ ತುಂಬಾ ಹಳೆಯ ಆವಿಷ್ಕಾರದಂತೆ ಭಾಸವಾಗುತ್ತದೆ ಎಂದು ಹೇಳುತ್ತಾರೆ.[154]

> "ಭಿನ್ನಲಿಂಗಾಸಕ್ತರು ಮತ್ತು ಸಮಲೈಂಗಿಕರು ವಿಭಿನ್ನವಾಗಿರಬೇಕೆಂದು ಯಾರೊಬ್ಬರಿಗೂ ತಿಳಿದಿಲ್ಲ "ಎಂದು 1984ರ ಅಧ್ಯಯನ ಬಯಲಾಜಿಕಲ್ ರೀಸರ್ಚ್ ಆನ್ ಹೋಮೋಸೆಕ್ಶುವಾಲಿಟಿಯ ಲೇಖಕಿ ವೆಂಡೆಲ್ ರಿಕೆಟ್ಸ್ ಬರೆದಿದ್ದಾರೆ. ನಾವು ಪಡೆದಿರುವ ಅತ್ಯುತ್ತಮ ಉತ್ತರರ ಒಂದು ಕುತರ್ಕವಾಗಿದೆ: "ಬಿನ್ನಲಿಂಗಾಸಕ್ತರು ಮತ್ತು ಸಮಾಲೈಂಗಿಕರನ್ನು ವಿಭಿನ್ನವೆಂದು ಪರಿಗಣಿಸಲಾಗುತ್ತದೆ ಏಕೆಂದರೆ ಅವರುಗಳನ್ನು ಎರಡು

---

[151] Shamnad Basheer, Sroyon Mukherjee and Karthy Nair, "Section 377 and the 'Order of Nature': Nurturing 'Indeterminacy' in the Law", NUJS Law Review, Vol, 2 (2009).
[152] Bruce Bagemihl, Biological Exuberance: Animal Homosexuality and Natural Diversity, Stonewall Inn Editions (2000).
[153] Brandon Ambrosino, "The Invention of Heterosexuality", British Broadcasting Company, 26 March, 2017
[154] Ibid.

ಗುಂಪುಗಳಾಗಿ ವಿಂಗಡಿಸಬಹುದು ಎಂಬ ನಂಬಿಕೆಯ ಆಧಾರದಲ್ಲಿ ಅವರನ್ನು ಎರಡು ಗುಂಪುಗಳಾಗಿ ವಿಂಗಡಿಸಲಾಗುತಿದೆ"

ಭಿನ್ನಲಿಂಗಾಸಕ್ತ/ಸಮಲೈಂಗಿಕರ ನಡುವಿನ ವಿಭಜನೆಯು ಶಾಶ್ವತ, ಮತ್ತು ಪ್ರಕೃತಿಯ ಪರಮೋಚ್ಚ ಸತ್ಯವೆಂದು ತೋರುತ್ತದೆಯಾದರೂ, ಅದು ಸರಳವಾಗಿಲ್ಲ. ಇದು ಕೇವಲ ಒಂದು ಇತ್ತೀಚಿಗೆ ಮನುಷ್ಯರು ಲೈಂಗಿಕ ಕ್ರಿಯೆಯು ನಮ್ಮ ಪಾಲಿಗೆ ಹೊಂದಿರುವ ಅರ್ಥವೇನು ಎಂಬುದರ ಬಗ್ಗೆ ಮಾತನಾಡಲು ಕಂಡುಹಿಡಿದಿರುವ ವ್ಯಾಕರಣವಾಗಿದೆ.

"ಅವರು ಈ ಕೆಳಗಿನ ಪದಗಳಲ್ಲಿ 'ಸಾಮಾನ್ಯತೆ' ಯ ಉನ್ನತ ಸ್ಥಿತಿಯನ್ನು ಪ್ರಶ್ನಿಸುತ್ತಾರೆ:

"ಸಹಜ" ಎಂಬುದು ಒಂದು ಭಾರಿ ಪದವಾಗಿದೆ, ಮತ್ತು ಆ ಪದವನ್ನು ಖಂಡಿತವಾಗಿ ಇತಿಹಾಸದುದ್ದಕ್ಕೂ ದುರ್ಬಳಕೆ ಮಾಡಲಾಗಿದೆ. ಗುಲಾಮಗಿರಿಗೆ ದಾರಿ ಮಾಡಿಕೊಡುವ ಉತ್ತರಾಧಿಕಾರದ ಆದೇಶವನ್ನು ಒಂದು ಕಾಲಯದಲ್ಲಿ ಸಹಜ ಎಂದು ಸ್ವೀಕರಿಸಲಾಗಿತ್ತು, ಹಾಗೇ ಭೂಕೇಂದ್ರಿತ ಬ್ರಹ್ಮಾಂಡವಾದವನ್ನು ಕೂಡಾ ಸಹಜವೆಂದೇ ತಿಳಿಯಲಾಗಿತ್ತು. ಅಂತಹ ಒಮ್ಮತದ ದೃಷ್ಟಿಕೋನಗಳನ್ನು ಪ್ರಶ್ನಿಸುವ ಪ್ರವೃತ್ತಿಯ ಮೂಲಕ ಮಾತ್ರ "ಸಹಜ" ವಿದ್ಯಮಾನಗಳನ್ನು ಶ್ರೇಷ್ಠ ಸ್ಥಾನದಿಂದ ಕೆಳಗಿಳಿಸಲು ಸಾಧ್ಯವಾಯಿತು "

ನೈಸರ್ಗಿಕ ಮತ್ತು ಅನೈಸರ್ಗಿಕ ವಿಚಾರಗಳನ್ನು ನಿರ್ಧರಿಸುವ ಮನುಷ್ಯರ ಸಾಮರ್ಥ್ಯದಲ್ಲಿ ಸಹಜವಾದ ಕೆಲ ಕೊರತೆಗಳಿವೆ.

"ಅವನ ಅಥವಾ ಅವಳ ಪ್ರಾಣಿ ಸಹಜ ಸಾವಭಾವದ ಮೇಲೆ ಅವರ ನೈಸರ್ಗಿಕತೆ ಮತ್ತು ನೈತಿಕತೆಯನ್ನು ಏಕೆ ನಿರ್ಣಯಿಸಬೇಕು? ಮನುಷ್ಯರು

ಬೆಲೆಕೊಡುವ ವೈದ್ಯಕೀಯ ಮತ್ತು ಕಲೆಯಂಥ ವಿಚಾರಗಳು ಕೂಡಾ ಬಹಳವೇ ಅಸ್ವಾಭಾವಿಕವಾಗಿವೆ. ಅದೇ ಸಮಯದಲ್ಲಿ, ನಿಜಕ್ಕೂ ನೈಸರ್ಗಿಕವಾಗಿರುವ ರೋಗಗಳು ಮತ್ತು ಮರಣದಂತಹ, ವಿಷಯಗಳನ್ನು ಮನುಷ್ಯರು ಸಹಿಸಿಕೊಳ್ಳುವುದಿಲ್ಲ. ಕೆಲ ನೈಸರ್ಗಿಕವಾಗಿ ಸಂಭವಿಸುವ ವಿದ್ಯಮಾನಗಳು ಮಾತ್ರ ನೈತಿಕ ಮತ್ತು ಉಳಿದವು ಅನೈತಿಕವೆಂದು ನಾವು ಪರಿಗಣಿಸಿದರೆ, ನಮ್ಮ ಮನಸ್ಸುಗಳು (ನೋಡುತ್ತಿರುವ ಕಣ್ಣುಗಳು) ಯಾವುದನ್ನು ನೈಸರ್ಗಿಕವೆಂದೂ ಕರೆಯಬೇಕೆಂದು ನಿರ್ಧರಿಸುತ್ತಿವೆ ಎಂದು ಅರ್ಥ (ನೋಡಲಾಗುತ್ತಿರುವ ವಿಷಯಗಳು). ಪ್ರಕೃತಿ ಎಂಬುದು "ಅಲ್ಲೆಲ್ಲೋ" ನಮ್ಮಿಂದ ಸ್ವತಂತ್ರವಾಗಿ ಅಸ್ತಿತ್ವದಲ್ಲಿಲ್ಲ - ನಾವು ಯಾವಾಗಲೂ ಅದನ್ನು ಒಳಗಿನಿಂದ ವ್ಯಾಖ್ಯಾನಿಸುತ್ತಿರುತ್ತೇವೆ. "

ಕಾಲದೇಶಗಳ ಹಲವು ಘಟ್ಟಗಳಲ್ಲಿ ಲೈಂಗಿಕತೆಯ ವ್ಯವಸ್ಥೆ, ನಿಯಂತ್ರಣ ಮತ್ತು ವಿಸ್ತರಣೆಗಳ ಬಗೆಗಿನ ನಿರ್ದಿಷ್ಟ ವಿಚಾರಗಳನ್ನು ಚರಿತ್ರೆಯಿಂದ ತೆಗೆದುಹಾಕಿರುವುದೇ ಭಿನ್ನಲಿಂಗಾಸಕ್ತಿಯು "ನೈಸರ್ಗಿಕ"ಮತ್ತು "ಸರ್ವವ್ಯಾಪಿಯೂ" ಆಗಿರುವುದರ ಹಿಂದಿನ ಕಾರಣ ಎಂದು ವಾದ ಮಾಡಲಾಗಿದೆ [155] . ಹಾಗಾಗಿ, ಹೀಗೆ "ಇತಿಹಾಸವನ್ನು ಕತ್ತಲಿನಲ್ಲಿರಿಸಿದಾಗ" "ಮೇಲುಗೈ ಸಾಧಿಸಿದ ಭಿನ್ನಲಿಂಗಾಸಕ್ತ"ರು ಹುಟ್ಟಿಕೊಳ್ಳುತಾರೆ - ಇದು ಲೈಂಗಿಕತೆ, ಲಿಂಗ ಮತ್ತು ಕಾಮನೆಗಳು ಹೀಗೇ ಇರಬೇಕೆಂಬುದನ್ನು ಬಿಂಬಿಸಿ, ತನ್ನನ್ನು ತಾನು ನೈಸ್ಕಾರ್ಗಿಕ, ಅನಿವಾರ್ಯ ಮತ್ತು ಸಾರ್ವಕಾಲಿಕ ಎಂದು ತೋರಿಸಿಕೊಳ್ಳುವ ಸೈದ್ಧಾಂತಿಕ ಪ್ರವೃತ್ತಿಯನ್ನು ಸೂಚಿಸುತ್ತದೆ [156] . ಹೀಗಾದಾಗ ಭಿನ್ನಲಿಂಗಾಸಕ್ತಿಯು, ಗಂಡಸುತನವಿರುವ ಗಂಡಸು, ಹೆಣ್ತನವಿರುವ ಹೆಂಗಸನ್ನು ಬಯಸುವುದನ್ನು ಉಳಿದೆಲ್ಲಾ ಬಗೆಯ ಲೈಂಗಿಕ ಕಾಮನೆಗಳಿಗಿಂತ ಶ್ರೇಷ್ಠವೆಂದು ಭಾವಿಸುವ ವಿಚಾರವಾಗಿ ಬಿಡುತ್ತದೆ; ಮತ್ತು ಅಂತಹ ಭಿನ್ನಲೈಂಗಿಕ ನಿಲುವು ಎಲ್ಲ ಸಾಮಾಜಿಕ ವ್ಯವಸ್ಥೆಗಳಲ್ಲಿಯೂ ವ್ಯಾಪಿಸಿಬಿಡುತ್ತದೆ[157].

[155] Zaid Al Baset, "Section 377 and the Myth of Heterosexuality", Jindal Global Law Review, Vol. 4 (2012).

[156] Ibid

[157] Ibid.

“ಶಾರೀರಿಕ/ಕಾರ್ನಲ್' ಎಂಬ ಪದವನ್ನು ಹಲವು ಬಗೆಗೆಗಳಲ್ಲಿ ಅರ್ಥೈಸಿಕೊಳ್ಳಬಹುದಾಗಿದೆ. ಆ ಪದಕ್ಕೆ “ಲೈಂಗಿಕ, ಇಂದ್ರಿಯಾಸಕ್ತ, ಕಾಮ ಪ್ರಚೋದಕ, ಕಾಮುಕ, ಲಂಪಟ, ತೀವ್ರ ಕಾಮಾಸಕ್ತ, ಹಾದರ, ಸ್ವೇಚ್ಛಾಚಾರ, ಅಸಭ್ಯ, ಭೋಗಾಸಕ್ತ, ಅಶ್ಲೀಲ, ಒರಟಾದ, ನಯವಿಲ್ಲದ, ಚೆಲ್ಲುಚೆಲಾದ, ಉದ್ರೇಕಕಾರಿ ” ಎಂಬ ಅನೇಕ ಅರ್ಥಗಳಿವೆ.

ಅಷ್ಟೇ ಅಲ್ಲದೇ, ಆ ಪದವನ್ನು “ದೈಹಿಕ, ಶರೀರದ, ಅಂಗಾಂಗಳಿಗೆ ಮತ್ತು ಮಾಂಸಕ್ಕೆ ಸಂಬಂಧಿಸಿದ ಎಂದು ಕೂಡಾ ಅರ್ಥೈಸಿಕೊಳ್ಳಬಹುದು. ಮಧ್ಯಕಾಲೀನ ಇಂಗ್ಲೀಷ್ ಯುಗದ ಕೊನೆಯಲ್ಲಿ ಉದ್ಭವಿಸಿದ “ಕಾರ್ನಲ್/ ಶಾರೀರಿಕ” ಎಂಬ ಪದದ ಮೂಲವು ಕ್ರೈಸ್ತ ಲ್ಯಾಟಿನ್ ಭಾಷೆಯಲ್ಲಿ ಮಾಂಸವೆಂಬ ಅರ್ಥ ವಿರುವ 'ಕ್ಯಾರೋ', 'ಕ್ಯಾರ್ನ್' ಪದಗಳಿಂದ ಹುಟ್ಟಿರುವ “ಕಾರ್ನಾಲಿಸ್” ಎಂಬ ಪದದಲ್ಲಿದೆ. ಕಾರ್ನಲ್/ ಶಾರೀರಿಕ ಪದದ ಅರ್ಥ-ವಿಸ್ತಾರದ ಒಂದು ಕೊನೆಯಲ್ಲಿ ದೈಹಿಕ ಭಾವನೆಗಳು ಮತ್ತು ದೇಹದ ಬಯಕೆಗಳು ಎಂಬ ಅರ್ಥವಿದೆ. ಅದೇ ಮತ್ತೊಂದು ಕೊನೆಯಲ್ಲಿ “ದೇಹ ಅಥವಾ ಮಾಂಸಕ್ಕೆ ಸಂಬಂಧಿಸಿದಂತೆ ಇರುವ ದೈಹಿಕ ಬಯಕೆಗಳು” ಎಂಬ ಅರ್ಥ ಬರುತ್ತದೆ. ನೇರವಾಗಿ ನೋಡಿದರೆ, ಈ ಪದವು ಒರಟುತನ ಅಥವಾ ಅಸಭ್ಯಾತೆಯನ್ನು ಪ್ರತಿನಿಧಿಸುತ್ತದೆ. ಸ್ವಾತಂತ್ರ್ಯ ಮತ್ತು ಸಾಮಾನತೆಯೆಂಬ ಉನ್ನತ ಆದರ್ಶಗಳನ್ನು ಮೇಲೆ ಚರ್ಚಿಸಲಾಗಿರುವಂತಹ ಅಸ್ಪಷ್ಟ ಅರ್ಥವಿರುವ ಪದಗಳು ಮತ್ತು ನಿರ್ಧಾರಿಸಲು ಆಗದಿರುವ ತತ್ವಗಳ ಆಧಾರದಲ್ಲಿ ನಿರ್ಧರಿಸಬಹುದೇ ಎಂಬುದು ನಾವು ಕೇಳಿಕೊಳ್ಳಬೇಕಿರುವ ಸರಳ ಪ್ರಶ್ನೆಯಾಗಿದೆ. 377ನೇ ಪರಿಚ್ಛೇದವು, ಕಾಮುಕ ಬಯಕೆಗಳಿಂದ ಕೂಡಿರುವ ಸಂಭೋಗವನ್ನು ತಿರಸ್ಕರಿಸಬೇಕು ಎಂಬ ನೈತಿಕ ಪರಿಕಲ್ಪನೆಯ ಮೇಲೆ ರಚಿಸಲ್ಪಟ್ಟಿದೆ. ಅದರ ಪ್ರಕಾರ ಸಂಭೋಗದ ಏಕೈಕ ಉದ್ದೇಶ ಸಂತಾನೋತ್ಪತ್ತಿಯೊಂದೇ ಆಗಿದೆ. ಹಾಗಾಗಿ ಸದರಿ ಪರಿಚ್ಛೇದವು ಕೆಲ ಮೂಲಭೂತ ಮಾನವೀಯ ಕಾಮನೆಗಳನ್ನು ನಿಸರ್ಗದ ನಿಯಮಕ್ಕೆ ವಿರುದ್ಧವೆಂದು ಬಗೆದು ಅವುಗಳಮೇಲೆ ಅಪರಾಧೀಕರಣದ ಕಾನೂನನ್ನು ಹೇರುತ್ತಿದೆ. ಹಾಗಾಗುವುದಕ್ಕೆ ಮೂಲ ಕಾರಣ, ಸಾಮಾಜಿಕ ಬೂಟಾಟಿಕೆಯೊಂದನ್ನು ಕಾನೂನು ತನ್ನ ಭಾಗವಾಗಿಸಿಕೊಂಡಿರುವುದೇ ಆಗಿದೆ. ಅಂತಹ ಕಾನೂನಿನ ಅಡಿಯಲ್ಲಿ ಮನುಷ್ಯರು, ಯಾವುದು ನಿಸರ್ಗದ ನಿಯಮ ಯಾವುದು ಅಲ್ಲ ಎಂದು ನಿರ್ಧರಿಸುವ ನೈತಿಕ ಪರಿಕಲ್ಪನೆಯೊಂದರ ಪ್ರಕಾರ ದೈಹಿಕ ಸಂಬಂಧಗಳನ್ನು ಹೊಂದುವಂತಹ “ಸ್ವಚ್ಛತೆಯ” ಬದುಕನ್ನು ನಡೆಸಬೇಕಾಗುತ್ತದೆ. ಆ ಕಾನುನಿನಡಿಯಲ್ಲಿ ಸಂತಾನೋತ್ಪತ್ತಿಯ ಉದ್ದೇಶವಿಲ್ಲದ ಲೈಂಗಿಕ ಸಂಪರ್ಕವನ್ನು ಪಾಪ ಅಥವಾ ಶಿಕ್ಷಾರ್ಹವೆಂದು ಪರಿಗಣಿಸುವ ಜೀವನ ಪದ್ಧತಿಯನ್ನು ಮನುಷ್ಯರು ಒಪ್ಪಿಕೊಳ್ಳಬೇಕಾಗುತ್ತದೆ. ಅಂತಹ ಕಾನೂನು ನಮ್ಮ ಪ್ರಜೆಗಳಿಗೆ,

ಪ್ರೇಮಿಸುವ ಅಧಿಕಾರವನ್ನು ನೀಡುತ್ತದೆಯಾದರೂ, ಆ ಪ್ರೇಮವನ್ನು ದೈಹಿಕವಾಗಿ ತೋರ್ಪಡಿಸುವುದನ್ನು ಪಾತಕವೆಂದು ಕರೆಯುತ್ತದೆ. ಇಲ್ಲಿ ಸ್ಪಷ್ಟವಾದ ನಿರಂಕುಶತ್ವ ಎದ್ದು ಕಾಣುತ್ತದೆ.

ನೈಸರ್ಗಿಕ ಮತ್ತು ಅನೈಸರ್ಗಿಕ ಎಂಬ ನಿರ್ಧರಿಸಲಾಗದ ಪದಗಳ ನಡುವೆ "ಅರ್ಥವಾಗಬಲ್ಲ ವ್ಯತ್ಯಾಸವನ್ನು" ಹುಡುಕುವುದು ಕಷ್ಟವಾಗಿರುವಾಗ, ನೈಸರ್ಗಿಕ ಎಂದು ಕರೆಯಲ್ಪಡುವ ಸಂಭೋಗ ನಡೆಸುವವರು ಮತ್ತು ನಿಸರ್ಗದ ನಿಯಮಕ್ಕೆ ವಿರುದ್ಧವಾಗಿ ಶಾರೀರಿಕ ಸಂಭೋಗ ನಡೆಸುವವರನ್ನು ಭಿನ್ನವೆಂದು ವರ್ಗೀಕರಿಸುವುದನ್ನು ಕಾನೂನಿನಡಿಯಲ್ಲಿ ಮಾನ್ಯವೆಂದೂ ಹೇಳುವುದು ಮತ್ತಷ್ಟು ಕಷ್ಟದ ವಿಚಾರವಾಗಿದೆ.

ಪದಗಳನ್ನು ವಿಸ್ತಾರವನ್ನು ನಿರ್ಧರಿಸಲು ಆಗದಿರುವ ಸಮಸ್ಯೆಯಷ್ಟೇ ಅಲ್ಲದೆ, ಮೇಲ್ನೋಟಕ್ಕೆ ಸಾರ್ವತ್ರಿಕ ಅರ್ಥಗಳನ್ನು ಹೊಂದಿರುವ "ನೈಸರ್ಗಿಕ" ಮತ್ತು "ಅನೈಸರ್ಗಿಕ ಎಂಬ ತತ್ವಗಳನ್ನು ಕಾನೂನುಬದ್ಧ ಅಥವಾ ಕಾನೂನುಬಾಹಿರ ಎಂಬ ಪರಿಧಿಯಲ್ಲಿ ತರುವ ಕ್ರಿಯೆಯು ತಾರ್ಕಿಕವಾಗಿ ತಪ್ಪಾಗಿದೆ. ಈ ವಿಚಾರವನ್ನು ಬಷೀರ್ ಮತ್ತು ಸಂಗಡಿಗರು ತಮ್ಮ ವಿದ್ವತ್ಪೂರ್ಣ ಬರೆಹದಲ್ಲಿ[158] ಸಮರ್ಥವಾಗಿ ಮಂಡಿಸುತ್ತಾರೆ:

> "ನೈಸರ್ಗಿಕವಾಗಿ ನಡೆಯುತ್ತಿರುವುದು ಸಾಮಾಜಿಕವಾಗಿ ಅಪೇಕ್ಷಣೀಯವಾಗಿರಬೇಕಿಲ್ಲ. ಅಂತೆಯೇ, ಸಾಮಾನ್ಯವಾಗಿ 'ಅಸ್ವಾಭಾವಿಕ' ಎಂದು ಗ್ರಹಿಸಲ್ಪಟ್ಟಿರುವ ಕೃತ್ಯಗಳು ಕಾನೂನು ಬಾಹಿರವಾಗಿರಬೇಕಿಲ್ಲ. ಸದಾಕಾಲ ತನ್ನ ಕೈಯ ಮೇಲೆ ನಡೆಯುವ ವ್ಯಕ್ತಿಯ ಉದಾಹರಣೆಯನ್ನೇ ಪರಿಗಣಿಸಿ, ಇದು ಅಸ್ವಾಭಾವಿಕವಾಗಿದ್ದರೂ ಕೂಡಾ, ಖಂಡಿತವಾಗಿಯೂ ಕಾನೂನಿನ ಖಂಡನೆಗೆ ಯೋಗ್ಯವಾದೂದಲ್ಲ.
>
> ...ವಾಸ್ತವವಾಗಿ, ನಿಸರ್ಗದ ನಿಯಮವನ್ನು (ಉದಾಹರಣೆಗೆ, ಹೃದಯ ಕಸಿ) ವಿರೋಧಿಸುವಂತೆ ಕಂಡುಬರುವ ಹಲವಾರು ಚಟುವಟಿಕೆಗಳು ಪ್ರಯೋಜನಕಾರಿ ಮತ್ತು ಅಪೇಕ್ಷಣೀಯವಾಗಿರುತ್ತವೆ. ಅಸ್ವಾಭಾವಿಕ ಕೃತ್ಯವೊಂದು ಅದರ ವಿರುದ್ಧ ಕಾನೂನಿನ ನಿರ್ಬಂಧಗಳನ್ನು ವಿಧಿಸುವ

---

[158] Supra note 61.

ಮಟ್ಟಿಗೆ ಹಾನಿಕಾರಕವಾಗಿದ್ದರೂ, ಅದನ್ನು ನಿಷೇಧಿಸುವುದಕ್ಕೆ ಅದು ಹಾನಿಕಾರಕ ಎಂಬ ಕಾರಣವಿರುತ್ತದೆಯೇ ಹೊರತು, ಅದು ಅಸ್ವಾಭಾವಿಕ ಎಂಬುದಲ್ಲ. "

ಸಂಖ್ಯಾಶಾಸ್ತ್ರಿಯ ಸಂಭವನೀಯತೆಯ ನೆಲೆಗಟ್ಟಿನಲ್ಲಿ ವಿರಳವಾಗಿ ಕಾಣಸಿಗುವ ನಡವಳಿಕೆಯನ್ನು ಅಸಹಜವೆಂದು ಕರೆದು ಅದು ನೈತಿಕವಾಗಿ ತಪ್ಪು ಎಂದು ನಿರ್ಧರಿಸಲು ಯಾವುದೇ ನಂಬತಕ್ಕ ಆಧಾರವಿಲ್ಲ[159]. ಹಾಗೆ ನೋಡಿದರೆ, ಸರಿಯಾದ ಸಮರ್ಥನೆಗಳಿಲ್ಲದೆ ತಪ್ಪು ಅಥವಾ ಅನೈಸರ್ಗಿಕ ಎಂದು ಕರೆಯಲ್ಪಡುವ ನಡವಳಿಕೆಯನ್ನು ಸಹ ಅಪರಾಧೀಕರಿಸಲು ಸಾಧ್ಯವಿಲ್ಲ ಏಕೆಂದರೆ ಹಾಗೆ ಅಪರಾಧೀಕರಿಸುವುದು ಶಿಕ್ಷಾರ್ಹವಾಗುತ್ತದೆ. ಹೀಗಾಗಿ, ವ್ಯಕ್ತಿಗಳ ಒಪ್ಪಿಗೆಯಿದೆಯೇ, ಹಾಗೂ ಮತ್ತೊಬ್ಬರಿಗೆ ಹಾನಿಯಾಗಿದೆಯೇ ಎಂಬ ವಿಚಾರಗಳನ್ನು ಪರಿಗಣಿಸದೆ, ಸಂತಾನೋತ್ಪತ್ತಿಯ ಉದ್ದೇಶವಿಲ್ಲದ ಎಲ್ಲ ರೀತಿಯ 'ನೈಸರ್ಗಿಕ' ಲೈಂಗಿಕ ಕ್ರಿಯೆಗಳನ್ನು ಅಪರಾಧೀಕರಿಸುವ 377ನೇ ಪರಿಚ್ಛೇದವು ಎಲ್ಲವನ್ನು ಒಳಗೊಳ್ಳುವ ಅಪರಾಧದ ರೂಪ ತಾಳುತ್ತದೆ.

30. ಲೈಂಗಿಕ ಕ್ರಿಯೆ ಸಂತಾನೋತ್ಪತ್ತಿಗಾಗಿ ಮಾತ್ರ ಸಂಭವಿಸಬೇಕು ಎಂದು ನಂಬುವ **ಖಾನು v. ಸಾಮ್ರಾಟ** ದಂತಹ ಪ್ರಕರಣಗಳ ಆಧಾರದಲ್ಲಿ "ನೈಸರ್ಗಿಕ" ಎಂಬ ಪದವನ್ನು ಅರ್ಥಮಾಡಿಕೊಂಡರೆ ಅತಿರೀಕದ ಪರಿಣಾಮಗಳುಂಟಾಗುತ್ತವೆ. ಅಂತಹ ಕೆಲ ಪರಿಣಾಮಗಳು ಈ ಕೆಳಕಂಡಂತಿರುತ್ತವೆ:

> ಹಾಗಾಗಿ "ನೈಸರ್ಗಿಕ' ಲೈಂಗಿಕ ಸಂಭೋಗ ಎಂಬುದು ಭಿನ್ನಲಿಂಗೀಯ ಲೈಂಗಿಕ ಕ್ರಿಯೆಗಳಿಗೆ ಮಾತ್ರ ಸೀಮಿತವಾಗಿದೆ, ಅಲ್ಲದೇ ಅಂತಹ ಕ್ರಿಯೆಗಳಿಂದ ಗರ್ಭಧಾರಣೆ ಆಗುವಂತವಾಗಿರಬೇಕು ಎಂಬುದು ನ್ಯಾಯಾಲಯದ ಅಭಿಪ್ರಾಯವಾಗಿತ್ತು. ಪ್ರಾಯಶಃ ಆ ಕಾಲದಲ್ಲಿ ಪ್ರಚಲಿತವಾಗಿದ್ದ ಲೈಂಗಿಕತೆಯ ಬಗೆಗಿನ ಪ್ರಬಲ ದೃಷ್ಟಿಕೋನಕ್ಕೆ ವಿರುದ್ಧವಾಗಿದ್ದ ಗರ್ಭನಿರೋಧಕವನ್ನು ಬಳಸಿ ಲೈಂಗಿಕ ಕ್ರಿಯೆ ನಡೆಸುವುದಷ್ಟೇ ಅಲ್ಲದೇ, ಒಬ್ಬರು ಅಥವಾ ಇಬ್ಬರು ಸಂಗಾತಿಗಳು ಸಂತಾನೋತ್ಪತ್ತಿಯ

[159] Sex, Morality and the Law, (Lori Gruen and George Panichas eds.), Routledge (1996).

> ಶಕ್ತಿಯನ್ನು ಹೊಂದಿರದ ಸಂದರ್ಭದಲ್ಲಿ ಅಥವಾ ಮಹಿಳೆಯ ಋತುಚಕ್ರದ 'ಸುರಕ್ಷಿತ' ಅವಧಿಯಲ್ಲಿ ನಡೆಯುವ ಭಿನ್ನಲಿಂಗೀಯ ಲೈಂಗಿಕ ಕ್ರಿಯೆಗಳನ್ನ ಕೂಡ ಅಂತಹ 'ನೈಸರ್ಗಿಕ' ಲೈಂಗಿಕತೆಯ' ಪರಿಕಲ್ಪನೆಯಿಂದ ಹೊರಗಿಡಲಾಗಿತ್ತು. ಹಾಗೆ, ಅಂತಹ ಪರಿಕಲ್ಪನೆಯು ಭಿನ್ನಲಿಂಗೀಯ ಸಂಗಾತಿಗಳ ನಡುವಿನ ಮುಖಮೈಥುನ ಮತ್ತು ಯಾವುದೇ ಬಗೆಯ ಸಮಲೈಂಗಿಕ ಕ್ರಿಯೆಗಳನ್ನು ನಿರ್ಬಂಧಿಸುತ್ತಿತ್ತು ಎಂಬುದನ್ನು ಬೇರೆಯಾಗಿ ಹೇಳಬೇಕಿಲ್ಲ"[160]

"ಶಾರೀರಿಕ ಸಂಭೋಗ ಮತ್ತು ನಿಸರ್ಗದ ನಿಯಮಕ್ಕೆ ವಿರುದ್ಧ ಎಂಬ ಪದಗಳ ಅಸ್ಪಷ್ಟತೆ ಮತ್ತು ಅನಿರ್ದಿಷ್ಟತೆಯ ಕಾರಣದಿಂದ 377ನೇ ಪರಿಚ್ಛೇದವು 14ನೇ ಕಲಮಿನ ಸಮಾನತೆಯ ನಿಬಂಧನೆಯನ್ನು ಉಲ್ಲಂಗಿಸುವಂತಾಗಿ ಅದರ ಸಂವಿಧಾನಬದ್ಧತೆಯು ಡೋಲಾಯಮಾನವಾಗುತ್ತದೆ.

ಇಲ್ಲಿ ಕಾನೂನಿನ ವರ್ಗೀಕರಣವು ಅಮಾನ್ಯವೆಂದು ಅರ್ಥವಾಗುತ್ತದೆ. ಆದಾಗ್ಯೂ, 377ನೇ ಪರಿಚ್ಛೇದದ ಶಾಸಕಾಂಗೀಯ ಇತಿಹಾಸವನ್ನು ಅರಿತು, ಸದರಿ ವರ್ಗೀಕರಣದ ಅಸಲಿ ಉದ್ದೇಶವನ್ನು ಅರ್ಥಮಾಡಿಕೊಳ್ಳುವುದು ಉಪಯುಕ್ತವಾಗುತ್ತದೆ. ಈಗಿನ 377ನೇ ಪರಿಚ್ಛೇದದ ಹಿಂದೆ ಚಾಲ್ತಿಯಲ್ಲಿದ್ದ ಮೆಕಾಲೆಯ ಮೊದಲ ಕರಡಿನಲ್ಲಿದ್ದ 361ನೇ ನಿಬಂಧನೆಯಡಿಯಲ್ಲಿ ಅನೈಸರ್ಗಿಕ ಕಾಮನೆಯನ್ನು ಈಡೆರಿಸಿಕೊಳ್ಳಲು ಮತ್ತೊಬ್ಬರನ್ನು ಮುಟ್ಟಿದರೆ ತೀವ್ರವಾದ ಶಿಕ್ಷೆ ವಿಧಿಸಲಾಗುತ್ತಿತ್ತು. ಇಂತಹ ಘೋರ ಪಾತಕದ ಬಗೆಗೆ ವಾದ ಅಥವಾ ಚರ್ಚೆ ಮಾಡುವುದನ್ನು ಮೆಕಾಲೆಯು ತಿರಸ್ಕರಿಸುತ್ತಿದ್ದರು. ಭಾರತದ ಗುದಸಂಭೋಗ ವಿರೋಧಿ ಕಾನೂನನ್ನು ಬ್ರಿಟಿಷರು ಯಾವುದೇ ರೀತಿಯ ಸಾರ್ವಜನಿಕ ಚರ್ಚೆಯಿಲ್ಲದೆ ರಚಿಸಿ, ಶಾಸನವಾಗಿ ಜಾರಿಗೆ ತಂದರು[161]. ಅವರು ಸಮರ್ಥಿಸುತ್ತಿದ್ದ ನೈತಿಕ ಕಲ್ಪನೆಗಳ ಪ್ರಕಾರ ಸಮಲೈಂಗಿಕತೆ ಅದೆಷ್ಟು ಅಸಹ್ಯಕರವಾಗಿತ್ತು ಎಂದರೆ ಅದರ ಬಗೆಗಿನ ಚರ್ಚೆಯ ಕಲ್ಪನೆ ಕೂಡ ಅಸಹ್ಯಕರವೆಂದು ಎಂದು ಮೆಕಾಲೆ ನಂಬಿದ್ದರು. 377ನೇ ಪರಿಚ್ಛೇದವು ತಮ್ಮ ಜೊತೆಗಿನ ಮನುಷ್ಯರ ಕೆಲ ಖಾಸಗೀ

---

[160] Andrew Davis, "The Framing of Sex: Evaluating Judicial Discourse on the 'Unnatural Offences'", Alternative Law Journal, Vol. 5 (2006).

[161] Alok Gupta, "Section 377 and the Dignity of Indian Homosexuals" The Economic and Political Weekly, Vol. 41 (2006).

ಆಯ್ಕೆಗಳ ಬಗೆಗೆ ಆ ಕಾನೂನನ್ನು ರಚಿಸಿದವರಲ್ಲಿದ್ದ ದ್ವೇಷ, ಅಸಹ್ಯಭಾವ ಮತ್ತು ಅಸಮಾಧಾನವನ್ನು ಮಾತ್ರ ಬಹಿರಂಗಪಡಿಸುತ್ತದೆ. 377ನೇ ಪರಿಚ್ಛೇದದ ಅಡಿಯಲ್ಲಿ ಕೆಲ ಕೃತ್ಯಗಳನ್ನು ಅಪರಾಧೀಕರಿಸಿರುವುದಕ್ಕೆ ಕಾನೂನುಬದ್ಧವಾದ ಆಧಾರವೇನೂ ಇಲ್ಲ, ಬದಲಿಗೆ "ತಮ್ಮ ಖಾಸಗೀ ಆಯ್ಕೆಗಳ ಕಾರಣದಿಂದ ಭಿನರಾಗಿ ಕಾಣುವ ಕೆಲ ಬಗೆಯ ಜನರು ಇತರ ನಾಗರಿಕರಿಗಿಂತ ಕೆಳಗಿನ ಸ್ಥಾನದವರು ಎಂಬ ನೈತಿಕ ತೀರ್ಮಾನಗಳ" ಆಧಾರದಲ್ಲಿ ಆ ಕೃತ್ಯಗಳನ್ನು ಅಪರಾಧೀಕರಿಸಲಾಗಿದೆ.[162]

31. ನಾಝ್ ತೀರ್ಪನ್ನು ಅದು 377ನೇ ಪರಿಚ್ಛೇದ ವ್ಯಾಪ್ತಿಯಿಂದ ಒಪ್ಪಿಗೆಯಿರುವ ವಯಸ್ಕರ ನಡುವಿನ ಖಾಸಗೀ ಕೃತ್ಯಗಳನ್ನು ತೆಗೆದು ಹಾಕಿತಾದರೂ, ಅದು ಆ ಪರಿಚ್ಛೇದವನ್ನು ಅದರಲ್ಲಿದ್ದ "ನಿಸರ್ಗದ ನಿಯಮ" ಎಂಬ ಸಮಸ್ಯಾತ್ಮಕ ಪರಿಭಾಷೆಯ ಜೊತೆಗೆ ಉಳಿಸಿಕೊಂಡಿತು ಎಂಬ ಕಾರಣಕ್ಕೆ ಅದನ್ನು ಖಂಡಿಸಲಾಗಿದೆ.[163]

> "... ಕೃತ್ಯಗಳು ಅಪರಾಧ ಆಗಿರದಿದ್ದರೂ ಸಹ, ಅವುಗಳನ್ನು ಕಾನೂನಿನಲ್ಲಿ "ಅಸ್ವಾಭಾವಿಕ" ಎಂದು ವರ್ಗೀಕರಿಸಲಾಗುಟ್ಟಿದೆ. ಇದು ಬರಿಯ ಶಬ್ದಾರ್ಥದ ಸಮಸ್ಯೆಯಲ್ಲ. ಡರ್ಕೀಮ್ ರವಾ ನೂರು ವರ್ಷಗಳ ಹಿಂದೆ ಗಮನಿಸಿದಂತೆ, ಕಾನೂನು ಸಾಮಾಜಿಕ ಸಂಬಂಧಗಳನ್ನು ವ್ಯಕ್ತಪಡಿಸುವ ಒಂದು ಸಾಧನವಾಗಿ ಕೂಡಾ ಕಾರ್ಯನಿರ್ವಹಿಸುತ್ತದೆ[164]. ಆದ್ದರಿಂದ, ತೀರ್ಪಿನಲ್ಲಿ ಬಹುವಾಗಿ ಉಲ್ಲೇಖಿಸಲಾಗಿರುವ ಸದರಿ ಅಭಿವ್ಯಕ್ತಿಯು ವ್ಯಕ್ತಿಗಳ ಘನತೆಯ ನೆಲೆಗಟ್ಟಿನಲ್ಲಿ ಸಮಸ್ಯಾತ್ಮಕವಾಗಿದೆ"

ಈ ಹಂತದಲ್ಲಿ, ದಂಡ ಸಂಹಿತೆ ಜಾರಿಗೊಳಿಸಿದಾಗಿನಿಂದ ಭಾರತದ ಅಪರಾಧ ಕಾನೂನಿನಲ್ಲಿ ನಡೆದ ಕೆಲವು ಶಾಸನಬದ್ಧ ಬದಲಾವಣೆಗಳನ್ನು ನಾವು ಗಮನಿಸಬೇಕಿದೆ. ಕ್ರಿಮಿನಲ್ ಲಾ (ಅಪರಾಧ ಕಾನೂನು) (ತಿದ್ದುಪಡಿ) ಕಾಯ್ದೆ 2013, ರಲ್ಲಿರುವ ಅತ್ಯಾಚಾರದ ವಿಸ್ತೃತ ವ್ಯಾಖ್ಯಾನದೊಳಕ್ಕೆ, ಪ್ರಸ್ತುತ ಶಿಶ್ನ-ಯೋನಿ ಸಮಾಗಮವನ್ನೊಳಗೊಂಡ ಸಂಭೋಗವನ್ನು ಮೀರಿರುವ ಲೈಂಗಿಕ ದೌರ್ಜನ್ಯ ಎಂಬ ಪರಿಕಲ್ಪನೆಯ ಕೆಲ

[162] Supra note 25.

[163] John Sebastian, "The opposite of unnatural intercourse: understanding Section 377 through Section 375, Indian Law Review, Vol. 1 (2018).

[164] Emile Durkheim, The Division of Labour in Society, Macmillan (1984).

ಅರ್ಥಗಳನ್ನು ಆಮದು ಮಾಡಿಕೊಳ್ಳಲಾಯಿತು. ಈಗ 'ಲೈಂಗಿಕ ಸಂಭೋಗ' ಎಂಬುದು 377 ನೇ ಪರಿಚ್ಛೇದದಡಿಯಲ್ಲಿ ಪರಿಗಣಿಸಲಾಗಿರುವ ಅನೇಕ ಕ್ರಿಯೆಗಳನ್ನು ಒಳಗೊಂಡಿದೆ ಎಂದಾದರೆ, ಆ ಕ್ರಿಯೆಗಳು 'ನಿಸರ್ಗದ ನಿಯಮಕ್ಕೆ ವಿರುದ್ಧವಾಗಿ' ಇರುವುದಿಲ್ಲ ಎಂದು ವಾದಮಾಡಲಾಗಿದೆ. ವಾಸ್ತವವಾಗಿ, ಆ ಕೃತ್ಯಗಳು, ಲೈಂಗಿಕ ಸಂಭೋಗದ ಬದಲಾದ ಅರ್ಥದ ಭಾಗಗಳೇ ಆಗಿವೆ. ಇದರರ್ಥ 377ನೇ ಪರಿಚ್ಛೇದದಲ್ಲಿರುವ ಬಹುತೇಕ ವಿಚಾರಗಳನ್ನು ನಿರುಪಯುಕ್ತಗೊಳಿಸಿರುವುದಷ್ಟೇ ಅಲ್ಲದೇ, "ಅನೈಸರ್ಗಿಕ" ಎಂಬ ಪದ ಕೂಡ 2013ರ ತಿದ್ದುಪಡಿಗೆ ಮುನ್ನ ತನ್ನ ಮೇಲೆ ಹೇರಲಾಗುತ್ತಿದ್ದ ಅರ್ಥವನ್ನು ಕಳೆದುಕೊಂಡಿದೆ. 375ನೇ ಪರಿಚ್ಛೇದವು ಅತ್ಯಾಚಾರ ಎಂಬ ಅಭಿವ್ಯಕ್ತಿಯನ್ನು ವಿಸ್ತಾರವಾದ ಅರ್ಥದಲ್ಲಿ ವಿವರಿಸಿ, ಒಬ್ಬ ಮಹಿಳೆಗೆ ಸಂಬಂಧಿಸಿದಂತೆ ಒಬ್ಬ ವ್ಯಕ್ತಿಯು ಎಸಗುವ ಹಲವು ಕೃತ್ಯಗಳಲ್ಲಿ ಯಾವುದಾದರೂ ಒಂದನ್ನು ಒಳಗೊಳ್ಳುತ್ತದೆ. ಅಂತಹ ಕೃತ್ಯಗಳನ್ನು ಮಹಿಳೆಯ ಇಚ್ಛೆಗೆ ವಿರುದ್ಧವಾಗಿ ಅಥವಾ ಆಕೆಯ ಮುಕ್ತವಾದ ಒಪ್ಪಿಗೆಯಿಲ್ಲದೇ ಎಸಗಿದರೆ ಅತ್ಯಾಚಾರದ ಅಪರಾಧ ಸಾಬೀತಾಗುತ್ತದೆ. 375ನೇ ಪರಿಚ್ಛೇದವು, ಭಿನ್ನಲಿಂಗೀಯ ಸನ್ನಿವೇಶದಲ್ಲಿ, ಪುರುಷ ಮತ್ತು ಮಹಿಳೆಯ ನಡುವಿನ ಕೆಲ ದೈಹಿಕ ಕ್ರಿಯೆಗಳನ್ನು ಮಾಡುವವರು ವಯಸ್ಕರಾಗಿದ್ದರೆ ಅಂತಹ ಕ್ರಿಯೆಗಳು ದಂಡನೆಯಿಂದ ಹೊರಗುಳಿಯುತ್ತವೆ ಎಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತದೆ. 377ನೇ ಪರಿಚ್ಛೇದದ ವ್ಯಾಪ್ತಿಯೊಳಗೆ ಇರಬೇಕಾಗಿದ್ದ ಅನೇಕ ಕ್ರಿಯೆಗಳು, ಒಪ್ಪಿಗೆಯಿರುವ ಭಿನ್ನಲಿಂಗೀಯರ ನಡುವೆ ನಡೆದರೆ ಅವುಗಳು ಅಪರಾಧದ ಪರಿಧಿಯಿಂದ ಹೊರಗುಳಿಯುತ್ತವೆ. 375ರ ವಿಚಾರದಲ್ಲಿ, ಅಂತಹ ಕ್ರಿಯೆಗಳನ್ನು 'ನಿಸರ್ಗದ ನಿಯಮಕ್ಕೆ' ವಿರುದ್ಧ ಎಂದು ಪರಿಗಣಿಸುವುದನ್ನು ಸಂಸತ್ತು ವಿರೋಧಿಸಿ ತೀರ್ಮಾನ ಕೈಗೊಂಡಿದೆ. ಆದಾಗ್ಯೂ ಇಬ್ಬರು ವಯಸ್ಕ ಪುರುಷರು ಅಥವಾ ಮಹಿಳೆಯರ ನಡುವಿನ ಒಪ್ಪಿಗೆಯ ಲೈಂಗಿಕ ಕ್ರಿಯೆಯನ್ನು ಅಪರಾಧವಾಗಿ ಪರಿಗಣಿಸುವುದು ಮುಂದುವರೆದಿದೆ. ಇದು 14ನೇ ಕಲಮಿನ ಉಲ್ಲಂಘನೆಯಾಗಿದೆ.

'ಸಹಜ' ಲೈಂಗಿಕತೆಯು ನಿಸರ್ಗದಿಂದ ಉಂಟಾಗುತ್ತದೆ ಎಂಬುದನ್ನು ವಿರೋಧಿಸುವ ನಿವೇದಿತಾ ಮೆನನ್, 'ಸಹಜ' ಲೈಂಗಿಕತೆ ಎಂಬ ಪರಿಕಲ್ಪನೆಯು ಒಂದು ಬಗೆಯ ಸಾಂಸ್ಕೃತಿಕ ಮತ್ತು ಸಾಮಾಜಿಕ ರಚನೆ ಎಂದು ವಾದಿಸುತ್ತಾರೆ[165]

[165] Nivedita Menon, “How Natural is Normal? Feminism and Compulsory Heterosexuality”, In Because I have a Voice, Queer Politics in India, (Narrain and Bhan eds.) Yoda Press (2005).

"ಲೈಂಗಿಕ ನಡವಳಿಕೆಯ ನಿಯಮಗಳು, ಸಂಚಾರ ನಿಯಮಗಳಂತೆ ಆಸ್ಪಷ್ಟವಾಗಿದ್ದೆ, ಅವು ಒಂದು ನಿರ್ದಿಷ್ಟ ಕ್ರಮವನ್ನು ಉಳಿಸಿಕೊಳ್ಳುವ ಸಲುವಾಗಿ ಮಾನವ ಸಮಾಜಗಳಿಂದ ರಚಿಸಲ್ಪಟ್ಟಿದ್ದು ಸ್ಥಳದಿಂದ ಸ್ಥಳಕ್ಕೆ ಭಿನ್ನವಾಗಿರುತ್ತವೆ ಎಂಬುಕೊಳ್ಳಿ - ಉದಾಹರಣೆಗೆ, ನೀವು ವಾಹನಗಳನ್ನು ಭಾರತದಲ್ಲಿ ರಸ್ತೆಯ ಎಡಭಾಗದಲ್ಲಿ ಮತ್ತು ಮತ್ತು ಅಮೇರಿಕಾದಲ್ಲಿ ರಸ್ತೆಯ ಬಲಭಾಗದಲ್ಲಿ ಚಲಾಯಿಸಬಹುದು. ಆಲ್ಲದೆ, ದೆಹಲಿಯಲ್ಲಿನ ಸಂಚಾರ ನಿಯಮಗಳು ನಗರ ಕೆಂದ್ರಿತ ಯೋಜನಾ ಮಾದರಿಯ ಉತ್ಪನ್ನವಾಗಿದ್ದೂ, ಅವು ಶ್ರೀಮಂತರಿಗೆ ಅನುಕೂಲಮಾಡಿಕೊಟ್ಟು, ಮತ್ತು ಬಡವರಿಗೆ ದಂಡ ವಿಧಿಸುತ್ತವೆ ಮತ್ತು ಈ ಕ್ರಮವು ಪೆಟ್ರೋಲ್-ಸೇವಿಸುವ ಖಾಸಗೀ ವಾಹನಗಳನ್ನು ಪ್ರೋತ್ಸಾಹಿಸಿ ಶಕ್ತಿಯನ್ನು ಉಳಿತಾಯಮಾಡುವ ಸಾರಿಗೆಯ ವಿಧಾನಗಳಾದ ಬೈಸಿಕಲ್, ಸಾರ್ವಜನಿಕ ಸಾರಿಗೆ ಮತ್ತು ಪಾದಚಾರಿಗಳ ಪಾಲಿಗೆ ನಿರುತ್ತೇಜಕವಾಗಿವೆ ಎಂದು ನೀವು ನಂಬುತ್ತೀರಿ ಎಂದುಕೊಳ್ಳಿ. ಹಾಗಾದಾಗ ನೀವು, ಹಲವು ಮಂದಿ ನಗರ ನಿವಾಸಿಗಳು ಓದು ಮತ್ತು ಕೆಲಸಕಾಗಿ ಪ್ರತಿದಿನ ಬಹುದೂರ ಪ್ರಯಾಣಿಸುವುದನ್ನು ಅನಿವಾರ್ಯಗೊಳಿಸಿರುವ ನಗರದ ಮಾದರಿಯನ್ನು ಪ್ರಶ್ನಿಸುತ್ತೀರಿ. ನೀವು ಸಂಚಾರ ನಿಯಮಗಳು ಮತ್ತು ನಗರ ಯೋಜನೆಗಳ ಅನುಕೂಲ, ಸಮಾನತೆ ಮತ್ತು ಅವುಗಳಿಂದಾಗುವ ನೈಸರ್ಗಿಕ ಸಮ್ಪನ್ಮೂಲಗಳ ಉಳಿಯಾತದ ಬಗೆಗೆ ಚರ್ಚೆನಡೆಸಬಹುದು - ಕನಿಷ್ಟಪಕ್ಷ, ಯಾವುದೇ ಸಂಚಾರ ನಿಯಮಗಳ 'ನೈಸರ್ಗಿಕ'ವಾದವು ಎಂದು ಯಾರೂ ಗಂಭೀರವಾಗಿ ವಾದಮಾಡಲಾರರು "

32. ಲೈಂಗಿಕ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ನಾಗರಿಕರ ಹೋರಾಟ, ಭಾರತದ ಸಾಮಾಜಿಕ ಕಟ್ಟುಪಾಡುಗಳ ಹಲವು ಸ್ವರೂಪಗಳ ವಿರುದ್ಧದ ನಡೆದ ಹೋರಾಟಗಳ ವಿಸ್ತೃತ ಇತಿಹಾಸದ ಭಾಗವಾಗಿದೆ. 377ನೇ ಪರಿಚ್ಛೇದದಲ್ಲಿರುವ 'ನಿಸರ್ಗದ ನಿಯಮ' ಸಂತಾನೋತ್ಪತ್ತಿಯ ಉದ್ದೇಶವಿಲ್ಲದ

ಲೈಂಗಿಕ ಕ್ರಿಯೆಗಳ ಬಗೆಗಷ್ಟೇ ಅಲ್ಲದೇ, ಸಮಾಜದ ನಿಯಮಗಳ ಪ್ರಕಾರ "ಸಮಸ್ಯಾತ್ಮಕ" ಎಂದು ಪರಿಗಣಿಸಲ್ಪಡುವ ಖಾಸಗೀ ಅನ್ಯೋನ್ಯತೆಗಳ ಬಗೆಗೆ ಕೂಡಾ ಮಾತನಾಡುತ್ತದೆ. ಇದರಲ್ಲಿ ಸಮಾಜ ನಿರ್ಬಂಧಿಸಲೆತ್ನಿಸುವ ಅಂತರ್ಜಾತಿ ಮತ್ತು ಅಂತರ-ಸಮುದಾಯ ಸಂಬಂಧಗಳಂತಹ ಹಲವು ಬಗೆಯ ಉಲ್ಲಂಘನೆಗಳು ಸೇರಿಕೊಂಡಿವೆ. ಪ್ರೀತಿಸುವ ಹಕ್ಕಿಗಾಗಿ ವೈಯಕ್ತಿಕವಾಗಿ ಬಹಳ ಅಪಾಯಗಳನ್ನು ಎದುರಿಸುತ್ತಾ ಸಾಮಾಜಿವಾಗಿ ಚಾಲ್ತಿಯಲ್ಲಿರುವ  ಕಟ್ಟಳೆಗಳನ್ನು ಧಿಕ್ಕರಿಸುವ ವಿಚಾರದಲ್ಲಿ ಜಾತಿ ಮತ್ತು ಸಮುದಾಯಗಳನ್ನು ಮೀರಿ ಪ್ರೀತಿಸುವ ಜೋಡಿಗಳು ಮತ್ತು ಎಲ್.ಜಿ.ಬಿ.ಟಿ ವ್ಯಕ್ತಿಗಳು ಒಂದಾಗುತ್ತಾರೆ. ಹೀಗಾಗಿ, ನಿಸರ್ಗದ ನಿಯಮ ಎಂಬುದು ಸಂತಾನೋತ್ಪತ್ತಿಯ ಉದ್ದೇಶವಿರದ ಲೈಂಗಿಕ ಕ್ರಿಯೆಗಳನ್ನು ವಿರೋಧಿಸುವ ಬದಲು, ಲಿಂಗ, ಜಾತಿ, ವರ್ಗ, ಧರ್ಮ, ಮತ್ತು ಸಮುದಾಯಗಳೆಂಬ ವ್ಯವಸ್ಥೆಗಳು ಹೇರುವ ಕಟ್ಟಳೆಗಳನ್ನು ವಿರೋಧಿಸುವಂತೆ ಮರು ಕಲ್ಪಿಸಿಕೊಂಡರೆ ಪ್ರೀತಿಯ ಹಕ್ಕಿಹಾಗಿ ನಡೆಯುವ ಹೋರಾಟವು ಎಲ್.ಜಿ.ಬಿ.ಟಿ ವ್ಯಕ್ತಿಗಳಿಗೆ ಮಾತ್ರ ಸೀಮಿತವಾಗದೇ, ಎಲ್ಲದ ಹೋರಾಟವಾಗಿ ಬದಲಾಗುತ್ತದೆ.

## E. ಭೌತಿಕತೆಯನ್ನು ಮೀರಿ: ಲಿಂಗ, ಗುರುತು ಮತ್ತು ರೂಢಮಾದರಿಗಳು

> "ಈ ಪ್ರಕರಣವನ್ನು ಅತ್ಯಂತ ತಾಂತ್ರಿಕವಾಗಿ ಗಮನಿಸಿದರೆ ಇಲ್ಲಿ ಯಾರು ಯಾರೊಳಗೆ ಎಲ್ಲಿ ತೂರಿಸಬಹುದು ಎಂಬುದರ ಬಗೆಗೆ ಮಾತ್ರ ನಿರ್ಧರಿಸಲಾಗುತ್ತಿದೆ. ಆದರೆ, ಪ್ರಾಯೋಗಿಕ ಮತ್ತು ಸಾಂಕೇತಿಕವಾಗಿ ಗಮನಿಸಿದರೆ, ಈ ಪ್ರಕರಣವು, ಸಮಾಜದ ಪ್ರಮಕುಖ ವರ್ಗದ ಸ್ಥಾನಮಾನ, ನೈತಿಕ ಪೌರತ್ವ ಮತ್ತು ಸ್ವಯಂ-ಮೌಲ್ಯಗಳ ಬಗೆಗಿನಾದಾಗಿದೆ. ಮತ್ತು ಸಾಮಾನ್ಯ ಮತ್ತು ಪರಿಕಲ್ಪನೆಯ ನೆಲಾಯಲ್ಲಿ ಗಮನಿಸಿದರೆ, ಈ ಪ್ರಕರಣವು ಸಂವಿಧಾನದ ಆಶಯವಾಗಿರುವ, ಮುಕ್ತ ಪ್ರಜಾತಾಂತ್ರಿಕ ಮತ್ತು ಬಹುತ್ವವಾದಾಇ ಸಮಾಜದ ಸ್ವರೂಪಕ್ಕೆ ಸಂಬಂಧಿಸಿದುದಾಗಿದೆ. "[166]

[166] The National Coalition for Gay and Lesbian Equality v. The Minister of Justice, 1999 (1) SA 6 (CC), Sachs J., concurring.

33. ಅರ್ಜಿದಾರರ ತಕರಾರಿನ ಪ್ರಕಾರ, (1) 377ನೇ ಪರಿಚ್ಛೇದವು ಲೈಂಗಿಕತೆಯ ಆಧಾರದಲ್ಲಿ ತಾರತಮ್ಯ ಎಸಗಿ 15 ಮತ್ತು 16ನೇ ಕಲಮುಗಳನ್ನು ಉಲ್ಲಂಘಿಸುತ್ತದೆ ಮತ್ತು (2) ಲೈಂಗಿಕ ನಿಲುವಿನ ಆಧಾರದಲ್ಲಿ ನಡೆಯುವ ತಾರತಮ್ಯವು ಅಸಲಿಗೆ ಲಿಂಗಾಧಾರಿತ ತಾರತಮ್ಯವಾಗಿದೆ. ಮಧ್ಯಸ್ಥಿಕೆದಾರರು ವಾದಿಸುವ ಪ್ರಕಾರ (1) 377ನೇ ಪರಿಚ್ಛೇದವು ಕ್ರಿಯೆಗಳನ್ನು ಅಪರಾಧೀಕರಿಸುತ್ತದೆ, ಜನರನ್ನಲ್ಲ; (2) ಗುದ ಮತ್ತು ಮುಖಮೈಥುನದ ಮೇಲಿನ ನಿಷೇಧವು ಭಿನ್ನಲೈಂಗಿಕ ಮತ್ತು ಸಮಲೈಂಗಿಕ ದಂಪತಿಗಳಿಗೆ ಸಮನಾಗಿ ಅನ್ವಯಿಸುವುದರಿಂದ ಈ ಪರಿಚ್ಛೇದವು ಭೇದಾಭಾವ ಎಸಗುವಂತಹುದಲ್ಲ; ಮತ್ತು (3) 15ನೇ ಕಲಮು ನಿರ್ಬಂಧಿಸುವ ಲಿಂಗಾದಾರಿತ ತಾರತಮ್ಯದಲ್ಲಿ 'ಲೈಂಗಿಕ ನಿಲುವು' ಕೂಡ ಸೇರಿದೆ ಎಂದು ವಿಸ್ತಾರವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ .

34. ಕಾನೂನೊಂದರ ಸಾಂವಿಧಾನಿಕತೆಯನ್ನು ಅದು ಸಂವಿಧಾನದ 3ನೇ ಭಾಗದಲ್ಲಿ ಖಾತರಿಪಡಿಸಲಾಗಿರುವ ವಿಚಾರಗಳನ್ನು ಉಲ್ಲಂಘಿಸುತ್ತದೆ ಎಂಬ ಆಧಾರದಲ್ಲಿ ಪ್ರಶ್ನಿಸಿದಾಗ, ಸದರಿ ಕಾನೂನು ಮೂಲಭೂತ ಹಕ್ಕುಗಳ ಉಲ್ಲಂಘನೆ ಮಾಡಿದೆಯೇ ಎಂಬುದನ್ನು ಅರ್ಥೈಸಿಕೊಳ್ಳಬೇಕಾಗುತ್ತದೆ[167]. ಹೀಗೆ ಮಾಡಿದಾಗ, ಹಕ್ಕುಗಳನ್ನು ಕಸಿದುಕೊಳ್ಳುವುದು ಸದರಿ ಕಾಯ್ದೆಯ ಉದ್ದೇಶವಾಗಿರಲಿಲ್ಲ ಎಂಬ ಸರ್ಕಾರದ ಸಮಜಾಯಿಷಿಯ ಬದಲು ಖಾತರಿಪಡಿಸಲಾಗಿರುವ ಸ್ವಾತಂತ್ರ್ಯಗಳಿಗೆ ನಿಜವಾದ ಅರ್ಥಬಂದಂತಾಗುತ್ತದೆ. ಕಾನೂನಿನ ಹಿಂದಿನ ಉದ್ದೇಶಗಳಾಗಲೀ, ನಾಗರಿಕರನ್ನು ರಕ್ಷಿಸಲು ತೆಗೆದುಕೊಳ್ಳುವ ಕ್ರಮಗಳಾಗಲೀ ನಾಗರಿಕರ ಹಕ್ಕುಗಳನ್ನು ದುರ್ಬಲಗೊಳಿಸುವುದಿಲ್ಲ. ಆದರೆ ಅಂತಹ ಕಾನೂನುಗಳು ಮೂಲಭೂತ ಹಕ್ಕಿನಮೇಲೆ ಪರಿಣಾಮ ಬೀರಿದಾಗ ನ್ಯಾಯಾಲಯಗಳು ಮಧ್ಯಪ್ರವೇಶಿಸಿ ಉಲ್ಲಂಘನೆಯಾಗಿರುವ ವಿಚಾರಗಳಲ್ಲಿ ಪರಿಹಾರ ಸೂಚಿಸಬೇಕಾಗುತ್ತದೆ. ಕಾನೂನೊಂದರಿಂದ ನೋವುಂಟಾಗಿರುವುದರಿಂದ ವ್ಯಕ್ತಿಯು ದುಃಖಿತನಾಗುತ್ತಾನೆ. ಹಾಗೂ ಸುರಕ್ಷಿತವಾಗಿರುವ ಹಕ್ಕೊಂದು ಎಷ್ಟರಮಟ್ಟಿಗೆ ಉಲ್ಲಂಘನೆಯಾಗಿದೆ ಎಂಬುದರ ಆಧಾರದಲ್ಲಿ ವ್ಯಕ್ತಿಗಾಗಿರುವ ಹಾನಿಯನ್ನು ಅಳೆಯಲಾಗುತ್ತದೆ. ಆದ್ದರಿಂದ, ಕಾನೂನೊಂದು ಮೂಲಭೂತ ಹಕ್ಕನ್ನು ಉಲ್ಲಂಘಿಸುತ್ತದೆಯೆ ಎಂದು

[167] Kerala Education Bill, AIR 1958 SC 956 at para 26; Sakal Papers v Union of India, AIR 1962 SC 305 at para 42; R.C. Cooper v Union of India, (1970) 1 SCC 248 at paras 43, 49; Bennett Coleman v. Union of India, AIR (1972) 2 SCC 788 at para 39; Maneka Gandhi v Union of India, (1978) 1 SCC 248 at para 19.

ತೀರ್ಮಾನಿಸುವಾಗ, ಆ ಕಾನೂನನ್ನು ಚಲಾಯಿಸಿದಾಗ ಮೂಲಭೂತ ಹಕ್ಕುಗಳ ಹರಣವಾಗುತ್ತಿದೆಯೇ ಎಂಬುದನ್ನು ತಿಳಿದುಕೊಳ್ಳಬೇಕೇ ಹೊರತು, ಕಾನೂನು ರಚಿಸುವುದರ ಉದ್ದೇಶವೇನು ಎಂಬುದನ್ನಲ್ಲ.

ಸಂವಿಧಾನದ 15 ನೇ ಕಲಮು ಹೀಗೆ ಹೇಳುತ್ತದೆ:

> "15. (1) ಸರ್ಕಾರವು ಯಾವುದೇ ಪ್ರಜೆಯ ವಿರುದ್ಧ ಕೇವಲ ಧರ್ಮ, ಜನಾಂಗ, ಜಾತಿ, ಲಿಂಗ , ಹುಟ್ಟಿದ ಸ್ಥಳ ಅಥವಾ ಇವುಗಳಲ್ಲಿ ಯಾವುದೀ ವೀರಾರಾದ ಆಧಾರದಲ್ಲಿ ತಾರತಮ್ಯವನ್ನು ಎಸಗುವಂತಿಲ್ಲ.
>
> (ಒತ್ತು ನೀಡಲಾಗಿದೆ)

15ನೇ ಕಲಮು ಸರ್ಕಾರವು ಕೇವಲ ಲಿಂಗಡಾ ಆಧಾರದ ಮೇಲೆ ತಾರತಮ್ಯ ಎಸಗುವುದನ್ನು ನಿಷೇಧಿಸುತ್ತದೆ. ನ್ಯಾಯಾಂಗದ ಹಿಂದಣ ತೀರ್ಮಾನಗಳಲ್ಲಿ 15ನೇ ಕಲಮು ಲಿಂಗಾಧಾರಿತ ತಾರತಮ್ಯವನ್ನು ಮಾತ್ರ ಒಳಗೊಂಡಿದೆಯೂ ಅಥವಾ ಸದರಿ ಕಲಮು ಲಿಂಗ ಮತ್ತು ಇತರ ವಿಚಾರಗಳ ('ಸೆಕ್ಸ್ ಪ್ಲಸ್') ಆಧಾರದ ಮೇಲೆ ನಡೆಯುವ ತಾರತಮ್ಯವನ್ನು ಸಹ ನಿರ್ಬಂಧಿಸುತ್ತದೆಯೋ ಎಂಬ ವಿಚಾರವನ್ನು ಪರಾಂಬರಿಸಲಾಗಿದೆ. 15ನೇ ಕಲಮು ನಿರ್ದಿಷ್ಟವಾದ ವಿಚಾರವೊಂದರ ಆಧಾರದಲ್ಲಿ ನಡೆಯುವ ತಾರತಮ್ಯವನ್ನು ನಿಷೇಧಿಸಿರುವ ಕಾರಣ, ಆ ನಿರ್ದಿಷ್ಟ ವಿಚಾರದ ಜೊತೆಗೆ ಇತರ ವಿಚಾರಗಳ ಆಧಾರದಲ್ಲಿ ನಡೆಯುವ ತಾರತಮ್ಯವನ್ನು ನಿಷೇಧಿಸಲು ಬರುವುದಿಲ್ಲ ಎಂಬ ವಾದವನ್ನು ಮಂಡಿಸಲಾಗಿತ್ತು. ಲಿಂಗ ಮತ್ತು ಇತರ ಅಂಶಗಳ ಆಧಾರದ ಮೇಲೆ ನಡೆಯುವ ತಾರತಮ್ಯ ಸರಿ ಎಂದಾದರೆ, ಅದು 15 ನೇ ಕಲಮಿನಡಿಯ ನಿಷೇಧದ ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂಬ ಅಭಿಪ್ರಾಯವನ್ನು ಹೊಂದಲಾಗಿತ್ತು.

35. 1951ನೇ ಇಸವಿಯಲ್ಲಿ **ಶ್ರೀ ಶ್ರೀ ಮಹಾದೇವ್ ಜೀವ್ v. ಡಾ. ಬಿ.ಬಿ. ಸೇನ್**[168] ಪ್ರಕರಣದಲ್ಲಿ ಕಲ್ಕತ್ತಾ ಉಚ್ಚನ್ಯಾಯಾಲಯದಿಂದ ಹೊರಬಿದ್ದ ತೀರ್ಪು ಈ ವಿಚಾರದಲ್ಲಿನ ಮೊದಲ ತೀರ್ಮಾನವಾಗಿತ್ತು. ಕೋಡ್ ಆಫ್ ಸಿವಿಲ್ ಪ್ರೊಸೀಜರ್ ನ ಆರ್ಡರ್ ಸಂಖ್ಯೆ XXV. R. 1 ಪ್ರಕಾರ ಭಾರತದಲ್ಲಿ ಸಾಕಷ್ಟು ಚರಾಸ್ತಿ ಇಲ್ಲದಿರುವ ಪುರುಷರು ಭಾರತದ ಹೊರಗೆ ವಾಸವಾಗಿದ್ದರೆ ಮಾತ್ರ ಅವರು ಭದ್ರತಾ ವೆಚ್ಚವನ್ನು

[168] AIR (1951) Cal. 563.

ಭರಿಸಬೇಕಾಗಿತ್ತು. ಆದರೆ, ಹೆಂಗಸರು ಭಾರತದಲ್ಲಿ ವಾಸಿಸುತ್ತಿರಲಿ ಇಲ್ಲದಿರಲಿ ಅವರು ಭದ್ರತಾ ಶುಲ್ಕವನ್ನು ಪಾವತಿಸಲೇಬೇಕಿತ್ತು. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಈ ಕಾನೂನು ಭಾರತದಲ್ಲಿ ವಾಸಿಸುವ ಸಾಕಷ್ಟು ಸ್ಥಿರಾಸ್ತಿ ಇಲ್ಲದಿರುವ ಗಂಡಸರು ಮತ್ತು ಭಾರತದಲ್ಲಿ ವಾಸಿಸುವ ಸಾಕಷ್ಟು ಸ್ಥಿರಾಸ್ತಿ ಇಲ್ಲದಿರುವ ಹೆಂಗಸರ ನಡುವೆ ಭೇದಮಾಡುತ್ತಿತ್ತು. ಸದರಿ ಕಾನೂನನ್ನು ಎತ್ತಿ ಹಿಡಿದಿರುವ ಕಲ್ಕತ್ತಾ ಉಚ್ಛ ನ್ಯಾಯಾಲಯ ಹೀಗೆಂದಿತು:

> "31. ಸಂವಿಧಾನದ 15(1)ನೀ ಕಲಮು, ಇತರ ವಿಚಾರಗಳ ಜೊತೆಗೆ- ಸರ್ಕಾರವು ಯಾವುದೇ ಪ್ರಜೆಗಳ ವಿರುದ್ಧ ಕೇವಲ ಅವರ ಲಿಂಗದ ಆಧಾರದಲ್ಲಿ ತಾರತಮ್ಯ ಮಯಡಬಾರದು ಎಂದು ನುಡಿಯುತ್ತದೆ. ಈ ಕಲಮಿನಲ್ಲಿ 'ಕೇವಲ' ಎಂಬ ಪದವು ಅತಿಯಾದ ಮಹತ್ವ ಮತ್ತು ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ ಎಂಬುದನ್ನು ಮರೆಯಬಾರದು. ತೆಗೆದುಹಾಕಲಾಗಿರುವ ಕಾನೂನು ಕೇವಲ ಲಿಂಗದ ಆಧಾರದಲ್ಲಿ ದೌರ್ಜನ್ಯವನ್ನುಂಟುಮಾಡುತ್ತಿದೆ ಎಂಬುದನ್ನು ಸಾಬೀಇತು ಪಡಿಸಸಬೇಕು. ಅಂತಹ ಭೇದಾಭಾವದ ಕಾನೂನಿನಲ್ಲಿ ಲಿಂಗವನ್ನು ಹೊರತುಪಡಿಸಿ ಇತರ ಅಂಶಗಳು ಕೂಡಾ ಸೀರಿಕೊಂಡಿದ್ದರೆ, ನನ್ನ ಪ್ರಕಾರ ಅಂತಹ ತಾರತಮ್ಯವು ಸಂವಿಧಾನದ 15(1) ನೀ ಕಲಮಿನ ವ್ಯಾಪ್ತಿಯೊಳಗೆ ಬರುವುದಿಲ್ಲ. " (ಒತ್ತು ನೀಡಲಾಗಿದೆ)

ಈ ನ್ಯಾಯಾಲಯವು ಮೇಲಿನ ವ್ಯಾಖ್ಯಾನವನ್ನು **ಏರ್ ಇಂಡಿಯಾ v. ನರ್ಗೆಶ್ ಮೀರ್ಜಾ**[169] **("ನರ್ಗೆಶ್ ಮೀರ್ಜಾ")** ಪ್ರಕರಣದಲ್ಲಿ ಎತ್ತಿಹಿಡಿಯಿತು. ಏರ್ ಇಂಡಿಯಾ ನೌಕರರ ಸೇವಾ ನಿಯಮಗಳನ್ನು ಅವುಗಳಲ್ಲಿನ 46 ಮತ್ತು 47 ನೇ ನಿಯಮಗಳು ಪುರುಷರ ಮತ್ತು ಮಹಿಳಾ ಕ್ಯಾಬಿನ್ ಕ್ರೂಗಳನ್ನು ವೇತನ ಮತ್ತು ಬಡ್ತಿಯ ಅವಕಾಶಗಳ ವಿಚಾರದಲ್ಲಿ ಅಸಮಾನವಾಗಿ ನಡೆಸಿಕೊಳ್ಳುತ್ತವೆ ಎಂಬ ಆಧಾರದಲ್ಲಿ ಪ್ರಶ್ನಿಸಲಾಗಿತ್ತು. 46ನೇ ನಿಯಮದ ಪ್ರಕಾರ,

---

[169] (1981) 4 SCC 335

ಪುರುಷ ಫ್ಲೈಟ್ ಪರ್ಸರಗಳ ನಿವೃತ್ತಿಯ ವಯಸ್ಸು ಐವತ್ತೆಂಟಾದರೆ, ಗಗನ ಸಖಿಯರು ಮೂವತ್ತೈದು ವರ್ಷವಾದಗ, ಮದುವೆಯ ನಂತರ (ಅವರು ಕೆಲಸಕ್ಕೆ ಸೇರಿ ನಾಲ್ಕು ವರ್ಷಗಳ ಒಳಗೆ ಮದುವೆಯಾದಲ್ಲಿ) ಅಥವಾ ಅವರ ಚೊಚ್ಚಲ ಗರ್ಭಧಾರಣೆ, ಈ ಮೂರು ಸಂಗತಿಗಳಲ್ಲಿ ಯಾವುದು ಮೊದಲು ಸಂಭವಿಸಿದರೂ ಆಗ ನಿವೃತ್ತರಾಗಬೇಕಾಗಿತ್ತು. ಈ ಅವಧಿಯನ್ನು ಮುಂದೂಡುವ ಸಂಪೂರ್ಣ ವಿವೇಚನೆ ವ್ಯವಸ್ಥಾಪಕ ನಿರ್ದೇಶಕರದ್ದಾಗಿತ್ತು. ನೌಕರರ ಆ ಎರಡು ಗುಂಪುಗಳನ್ನು ಅವರುಗಳ ಲಿಂಗದ ಆಧಾರದ ಮೇಲೆ ರಚಿಸಿಲಾಗಿದ್ದರೂ ಕೂಡ, ನ್ಯಾಯಾಲಯವು ಆ ನಿಯಮಗಳನ್ನು ಭಾಗಶಃ ಅಂಗೀಕರಿಸಿ ಹೀಗೆ ಅಭಿಪ್ರಾಯಪಟ್ಟಿತು:

> "68. ಇತರ ಸಂದರ್ಭಗಳಲ್ಲಿ ಸಹ, 15 (1) ಮತ್ತು 16 (2) ನೀ ಕಲಮುಗಳು ಕೇವಲ ಮತ್ತು ಕೇವಲ ಲಿಂಗಾಧಾರಿತ ತಾರತಮ್ಯವನ್ನು ಮಾಡಬಾರದು ಎಂದು ನುಡಿಯುತ್ತವೆ. ಸಂವಿಧಾನದ ಈ ಕಲಮುಗಳು ಸರ್ಕಾರ ಲಿಂಗಾದೊಟ್ಟಿಗೆ ಸೇರಿಕೊಂಡಿರುವ ಇತರ ವಿಚಾರಗಳ ಆಧಾರದಲ್ಲಿ ತಾರತಮ್ಯ ಎಸಗುವುದನ್ನು ನಿಷೇಧಿಸುವುದಿಲ್ಲ . " (ಒತ್ತು ನೀಡಲಾಗಿದೆ)

36. 15ನೇ ಕಲಮಿನ ಈ ಔಪಚಾರಿಕ ವ್ಯಾಖ್ಯಾನವು, ತಾರತಮ್ಯದ ವಿರುದ್ಧ ಸಾಂವಿಧಾನ ನೀಡಿರುವ ಭದ್ರತೆಯನ್ನು ಅರ್ಥಹೀನವಾಗಿಸುತ್ತದೆ. ಏಕೆಂದರೆ, ಈ ವ್ಯಾಖ್ಯಾನವು, ಸರ್ಕಾರ ತಾನು ಎಸಗಿದ ತಾರತಮ್ಯವು ಲಿಂಗವನ್ನಷ್ಟೇ ಅಲ್ಲದೇ ಇನ್ನಿತರ ವಿಷಯಗಳನ್ನು ಆಧರಿಸಿತ್ತು ('ಸೆಕ್ಸ್ ಪ್ಲಸ್') ಮತ್ತು ಹಾಗಾಗಿ ಅದು 15ನೇ ಕಲಮಿನ ವ್ಯಾಪ್ತಿಯ ಹೊರಗಿನದ್ದು ಎಂದು ಹೇಳಿಕೊಳ್ಳುವುದಕ್ಕೆ ಅವಕಾಶ ನೀಡುತ್ತದೆ. ತಾರತಮ್ಯದ ಕುರಿತಾದ ವಾದದಲ್ಲಿ ಅಂತಹ ತಾರತಮ್ಯವನ್ನು ಸಮರ್ಥಿಸಲು ಬಳಸಲಾಗುವ ಗಂಡು ಮತ್ತು ಹೆಣ್ಣಿನ ನಡುವಿನ ವ್ಯತ್ಯಾಸಗಳ ರೂಢಮಾದರಿಗಳು ಸುಪ್ತವಾಗಿ ಅಡಗಿರುತ್ತವೆ. 15ನೇ ಕಲಮನ್ನು ಹೀಗೆ ಸಂಕುಚಿತವಾಗಿ ನೋಡಿದರೆ, ತಾರತಮ್ಯದ ಮೇಲಿನ ನಿಷೇಧದ ಮೂಲ ಸತ್ವವನ್ನೇ ನಾಶಪಡಿಸಿದಂತಾಗುತ್ತದೆ. ಅಂತಹ ಸಂಕುಚಿತ ವ್ಯಾಖ್ಯಾನವು, ಲಿಂಗಾಧಾರಿತ ತಾರತಮ್ಯ ಹಲವು ವರ್ಗಗಳನ್ನು ಬಾಧಿಸುವ ಸಾಧ್ಯತೆಯನ್ನು ಗಣನೆಗೆ ತೆಗೆದುಕೊಳ್ಳಲು ವಿಫಲವಾದಂತಾಗುತ್ತದೆ. ಏಕೆಂದರೆ, ಲಿಂಗಾಧಾರಿತ ತಾರತಮ್ಯವು ಇತರ ಸಾಮಾಜಿಕ ಗುರುತುಗಳ ಮೇಲೆ ಕೂಡಾ, ವಿಶೇಷವಾಗಿ ಸಾಮಾಜಿಕ-ರಾಜಕೀಯ ಮತ್ತು ಆರ್ಥಿಕ ಸನ್ನಿವೇಶಗಳಲ್ಲಿ ಸಮಾನವಾದ

ಪರಿಣಾಮ ಬೀರುತ್ತದೆ. ಉದಾಹರಣೆಗೆ, ಸೈನ್ಯದಲ್ಲಿ ಆರು ಅಡಿಗಳಿಗಿಂತ ಎತ್ತರದ ಜನರನ್ನು ಬಳಸಿಕೊಳ್ಳಲಾಗುವುದಿಲ್ಲ ಎಂಬ ನಿಯಮವನ್ನು ಅದು ಲಿಂಗ ಮತ್ತು ಎತ್ತರದ ಆಧಾರದ ಮೇಲೆ ತಾರತಮ್ಯ ಎಸಗುತ್ತದೆ ಎಂಬ ಕಾರಣಕ್ಕೆ ಉಳಿಸಿಕೊಂಡರೆ, ಅದು ಸೇನೆಗೆ ಸೀರ ಬಯಸುವ ಮಹಿಳೆಯರ ವಿರುದ್ಧದ ತಾರತಮ್ಯವನ್ನು ತಡೆಗಟ್ಟಲು ಸಮರ್ಥವಾಗಿರುತ್ತದೆ. 15ನೇ ಕಲಮಿನಲ್ಲಿರುವ ತಾರತಮ್ಯ ನಿಷೇಧವನ್ನು ಔಪಚಾರಿಕ ದೃಷ್ಟಿಕೋನದಿಂದ ನೋಡಿದಾಗ, ಭಿನ್ನ ಅಸ್ಮಿತೆ ಮತ್ತು ಗುಣಲಕ್ಷಣಗಳನ್ನು ಬಾಧಿಸುವ ತಾರತಮ್ಯದ ನಿಜವಾದ ಪರಿಣಾಮವನ್ನು ಅವಗಣನೆಮಾಡಿದಂತಾಗುತ್ತದೆ.

37. **ಅನುಜ್ ಗರ್ಗ್ v. ಹೋಟೆಲ್ ಅಸೋಸಿಯೇಷನ್ ಆಫ್ ಇಂಡಿಯಾ**[170] ಪ್ರಕರಣದಲ್ಲಿ ಈ ನ್ಯಾಯಾಲಯವು ಭಿನ್ನವಾದ ನಿಲುವನ್ನು ತಾಳಿತು. ಪಂಜಾಬ್ ಅಬಕಾರಿ ಕಾಯಿದೆ 1914ರ 30ನೇ ಪರಿಚ್ಛೇದವು, ಸಾರ್ವಜನಿಕರು ಮದ್ಯ ಅಥವಾ ಇತರ ಮಾದಕ ದ್ರವ್ಯಗಳನ್ನು ಸೇವಿಸುವ ಆವರಣದಲ್ಲಿ ಮಹಿಳಾ ಉದ್ಯೋಗಿಗಳು (ಮತ್ತು 25 ವರ್ಷಕ್ಕಿಂತ ಕೆಳಗಿನ ಪುರುಷರು) ಕೆಲಸ ಮಾಡುವುದನ್ನು ನಿಷೇಧಿಸುತ್ತಿತ್ತು "ರೂಢೀಗತ ನೈತಿಕತೆ ಮತ್ತು ಲಿಂಗಾಧಾರಿತ ಜವಾಬ್ದಾರಿಯ ಪರಿಕಲ್ಪನೆಯೆಡೆಗೆ ಅತಿಯಾದ ಸೆಳೆತ"ದಿಂದ ಬಳಲುತ್ತಿದೆ ಎಂಬ ಕಾರಣಕ್ಕೆ ಸದರಿ ಕಾನೂನನ್ನು ಮುಂದೂಡಿದ, ನ್ಯಾಯಾಲಯವು ಹೀಗೆ ನುಡಿಯಿತು:

> "42 … ಇಂತಹ ಸಂದರ್ಭಗಳಲ್ಲಿ ಸಾಂಪ್ರದಾಯಿಕ ಸಾಂಸ್ಕೃತಿಕ ನಿಯಮಗಳು ಮತ್ತು ಸಮಾಜದ ಸಾಮಾನ್ಯ ವಾತಾವರಣದ ಸ್ಥಿತಿಗತಿಗಳು ನೇರವಾಗಿ ಕೆಲಸಮಾಡುತ್ತವೆ ಮತ್ತು ಅದರ ಪರಿಣಾಮಗಳನ್ನು ಕೆಲಸಮಾಡಲು ಉದ್ದೇಶಿಸುವ ಮಹಿಳೆಯರು ಎದುರಿಸಬೇಕಾಗುತ್ತದೆ ಆದರೆ ಪುರುಷರು ಇಂತಹ ಪರಿಸ್ಥಿತಿಗಳಿಂದ ಮುಕ್ತರಾಗಿರುತ್ತಾರೆ … "

[170] 2008) 3 SCC 1

"43 … ಮಹಿಳೆಯರು ತಾವು ಮಾಡಬಯಸುವ ವೃತ್ತಿಯ ಅವಶ್ಯಕತೆಗಳಿಗೆ ಅನುಗುಣವಾಗಿ ತಮ್ಮ ಕರ್ತವ್ಯವನ್ನು ಮುಕ್ತವಾಗಿ ನಿಭಾಯಿಸುವ ವಿಶ್ವಾಸವನ್ನು ಬೆಳೆಸುವಂತಹ ಸುರಕ್ಷಿತ ಸನ್ನಿವೇಶಗಳನ್ನು ಖಚಿತಪಡಿಸುವುದು ಇದು ಸರ್ಕಾರದ ಕರ್ತವ್ಯ .ಸಾಮಾಜಿಕ ಸನ್ನಿವೇಶಗಳನ್ನು ಆಧರಿಸಿದ ಇತರ ಯಾವುದೇ ಕಾರ್ಯನೀತಿಯ ಹಸ್ತಕ್ಷೇಪವು (ಉದಾಹರಣೆಗೆ ಸೆಕ್ಷನ್ 30 ಅಡಿಯಲ್ಲಿ ಮೂರ್ತಿವೆತ್ತಿರುವ ನೀತಿ।ಗಳು) ಮಹಿಳೆಯರ ಮೇಲೆ ದಬ್ಬಾಳಿಕೆಯನ್ನೆಸಗುತ್ತವೆ

(ಒತ್ತು ನೀಡಲಾಗಿದೆ)

ಸಾಂಪ್ರದಾಯಿಕ ಸಾಂಸ್ಕೃತಿಕ ನಿಯಮಗಳು ಒಂದು ಲಿಂಗಕ್ಕೆ ಸೇರಿದವರು ಇಂಥವೇ ಜವಾಬ್ದಾರಿಗಳನ್ನು ನಿರ್ವಹಿಸಬೇಕು ಎಂದು ರೂಢಿಮಾಡಿಬಿಡುತ್ತವೆ ಎಂಬುದನ್ನು  ನ್ಯಾಯಾಲಯ ಗುರುತಿಸಿತು. ಅಂತಹ ರೂಢಮಾದರಿಗೆಳು ಇಂತಹ ಲಿಂಗದವನು ಹೀಗೇ ನಡೆದುಕೊಳ್ಳಬೇಕೆಂದು ಸಾಮಾಜ ರೂಪಿಸಿರುವ ಮಹಿಳೆಯರ ವಿರುದ್ಧ ತಾರತಮ್ಯ ಎಸಗುವ ನಿಯಮಗಳನ್ನು ಆಧರಿಸಿರುತ್ತವೆ. ನ್ಯಾಯಾಲಯವು "ಸರ್ಕಾರದ ನೀತಿಯು ಮೇಲ್ಕಂಡ ಸಾಂಸ್ಕೃತಿಕ ರೂಢಿಗಳನ್ನು ಆಧರಿಸಿದ್ದೇ ಆದಲ್ಲಿ ಅದು ಸಾಂವಿಧಾನಿಕವಾಗಿ ಅಮಾನ್ಯವಾಗಿರುತ್ತದೆ." ಎಂದು ನುಡಿಯಿತು. ಅದೇ ವಿಚಾರವನ್ನು ಎತ್ತಿಹಿಡಿಯುತ್ತಾ **ಫ್ರಾನ್ಟೆರೂ v. ರಿಚರ್ಡ್ಸನ್**[171]; **ಯುನೈಟೆಡ್ ಸ್ಟೇಟ್ಸ್ v. ವರ್ಜೀನಿಯಾ**[172] ಪ್ರಕರಣಗಳ ತೀರ್ಪುಗಳು ಮತ್ತು **ಡೊಥರ್ಡ್ v. ರಾಲಿನ್ಸನ್**[173] ಪ್ರಕರಣದಲ್ಲಿ ನ್ಯಾಯಮೂರ್ತಿ ಮಾರ್ಷಲ್ ರ ಭಿನ್ನಮತದ ತೀರ್ಪನ್ನು  ಉಲ್ಲೇಖಿಸಿದ ನ್ಯಾಯಾಲಯ, 15ನೇ ಕಲಮಿನಡಿಯಲ್ಲಿನ ನಿರ್ಬಂಧದಲ್ಲಿ ರೂಢೀಗತ ಪರಿಕಲ್ಪನೆಗಳನ್ನು ವಿರೋಧಿಸುವ ತತ್ವ ದೃಢವಾಗಿ ಬೇರೂರಿದೆ ಎಂದು ನುಡಿಯಿತು.

**ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರ v. ಭಾರತ ಸರ್ಕಾರ ("ನಾಲ್ಸಾ")**[174] ಪ್ರಕರಣದಲ್ಲಿ, ಸಂವಿಧಾನ ಲಿಂಗ ಪರಿವರ್ತಿತ ವ್ಯಕ್ತಿಗಳಿಗೆ ಕೊಡಮಾಡಿರುವ ಹಕ್ಕುಗಳ ಬಗ್ಗೆ ಈ ನ್ಯಾಯಾಲಯದ ಅಭಿಪ್ರಾಯ ಹೀಗಿತ್ತು:

---

[171] 411 U.S. 677 (1973).

[172] 518 U.S. 515 (1996).

[173] 433 U.S. 321 (1977).

[174] 433 U.S. 321 (1977).

"66. ಲಿಂಗಾಧಾರಿತ ತಾರತಮ್ಯವನ್ನು ಐತಿಹಾಸಿಕ ಸತ್ಯವೆಂದು ಗುರುತಿಸಿದ 15 ಮತ್ತು 16ನೇ ಕಲಮುಗಳು, ಅದನ್ನು ಸರಿಪಡಿಸುವ ಸಲುವಾಗಿ ಲಿಂಗಾಧಾರಿತ ತಾರತಮ್ಯವನ್ನು ನಿಷೇಧಿಸಲು ಪ್ರಯತ್ನಿಸಿದವು. ಸಂವಿಧಾನದ ನಿರ್ಮಾತೃಗಳು, ಇಬ್ಬಗೆ ಲೈಂಗಿಕತೆಗೆ ಸಂಬಂಧಿಸಿದ ರೂಢೀಗತ ನಂಬುಗೆಗಳಿಗೆ ಅನುಗುಣವಾಗಿಲ್ಲದಿರುವ ಕಾರಣಕ್ಕೆ, ಜನರನ್ನು ಬೇರೆಯಾಗಿ ನಡೆಸಿಕೊಳ್ಳುವವ ಪ್ರತ್ಯಕ್ಷ ಅಥವಾ ಪರೋಕ್ಷ ಪ್ರಯತ್ನವನ್ನು ತಡೆಯಲು ಲೈಂಗಿಕ ತಾರತಮ್ಯದ ವಿರುದ್ಧ ಮೂಲಭೂತ ಹಕ್ಕಿಗೆ ಒತ್ತು ಕೊಟ್ಟರು. ಲೈಂಗಿಕ ಮತ್ತು ಜೈವಿಕ ಲಕ್ಷಣಗಳೆರಡೂ ಲೈಂಗಿಕತೆಯ ವಿಶಿಷ್ಟ ಅಂಶಗಳಾಗಿವೆ. ಜೈವಿಕ ಗುಣಲಕ್ಷಣಗಳು ಸಹಜವಾಗಿ, ಜನನಾಂಗಗಳು, ವರ್ಣತಂತುಗಳು ಮತ್ತು ಎರಡನೇ ದರ್ಜೆಯ ಲೈಂಗಿಕ ಲಕ್ಷಣಗಳನ್ನು ಒಳಗೊಂಡಿರುತ್ತವೆ, ಆದರೆ ಲೈಂಗಿಕ ಲಕ್ಷಣಗಳು ಒಬ್ಬರ ಸ್ವಯಂಚಿತ್ರಣವನ್ನು ಒಳಗೊಂಡಿರುತ್ತವೆ, ಎಂದರೇ, ಲೈಂಗಿಕ ಅಸ್ಮಿತೆ ಮತ್ತು ನಡತೆಯ ಬಗೆಗಿನ ಆಳವಾದ ಮಾನಸಿಕ ಅಥವಾ ಭಾವನಾತ್ಮಕವದ ಭಾವನೆ. ಆದ್ದರಿಂದ 15 ಮತ್ತು 16ನೇ ಕಲಮುಗಳಡಿಯ ಲಿಂಗಾಧಾರಿತ ತಾರತಮ್ಯಬು, ಲೈಂಗಿಕ ಗುರುತನ್ನಾಧರಿಸಿದ ತಾರತಮ್ಯವನ್ನೂ ಒಳಗೊಂಡಿದೆ (ಒತ್ತು ನೀಡಲಾಗಿದೆ)

ಈ ದೃಷ್ಟಿಕೋನವು ಸರಿಯಾಗಿದೆ ಎಂಬುದು ನನ್ನ ಅಭಿಪ್ರಾಯ.

ನೆರ್ಗೇಶ್ ಮಿಇರ್ಜಾ ಪ್ರಕರಣದಲ್ಲಿ, ಈ ನ್ಯಾಯಾಲಯವು "ವಿಶೇಷ ಲಕ್ಷಣಗಳು, ಗುಣಗಳನ್ನು" ಹೊಂದಿರುವ ನಿರ್ದಿಷ್ಟ ವರ್ಗಕ್ಕೆ ಸೇರಿದ ವ್ಯಕ್ತಿಗಳನ್ನು, 'ಸಾರ್ವಜನಿಕ ಹಿತಾಸಕ್ತಿ'ಯ ನೆಪದಲ್ಲಿ ಬೇರೆ ರೀತಿಯಲ್ಲಿ ನಡೆಸಿಕೊಂಡರೆ, ಅದು ತಾರತಮ್ಯವಲ್ಲ ಎಂದು ನುಡಿಯಿತು. ಗಗನ ಸಖಿಯರ ವಿಚಾರದಲ್ಲಿ ನೇಮಕಾತಿಯ ವಿಧಾನಗಳು, ಬಡ್ತಿಯ ಅವಕಾಶಗಳು ಮತ್ತು ಇತರ ವಿಷಯಗಳು ಇತರರಿಗಿಂತ ವಿಭಿನ್ನವಾಗಿದ್ದರಿಂದ, ಅವರು ಪುರುಷ ಫ್ಲೈಟ್ ಪರ್ಸರ್ಸ್ನಿಂದ ಭಿನ್ನವಾದ ವರ್ಗಕ್ಕೆ ಸೇರುತ್ತಾರೆ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿತು . ನ್ಯಾಯಾಲಯವು,

"ಅಫಿಡವಿಟ್ನಲ್ಲಿ ವಿವರಿಸಲ್ಪಟ್ಟಂತೆ, ಎರಡುಉ ವರ್ಗದವರ ಕೆಲಸದ ಜವಾಬ್ದಾರಿಗಳು ಬೇರೆಬೇರೆಯಾಗಿದ್ದಾರು, ಕೆಲ ಸಂದರ್ಭಗಳಲ್ಲಿ ಅವು ಒಂದೇಬಗೆಯದ್ದಾಗಿರುತ್ತವೆ ಮತ್ತು ಅವರ ಕೆಲಸಗಳ ಮತ್ತ ಬೇರೆಬೇರೆಯಾದರೂ ಎರಡುಉ ವರ್ಗಗಳು ಒಂದೇ ಬಗೆಯ ಕೆಲಸ ಮಾಡುತ್ತಾರೆ" ಎಂದು ಗಮನಿಸಿದ ಹೊರತಾಗಿಯೂ ಇಂತಹ ನಿರ್ಧಾರವನ್ನು ತೆಗೆದಿಕೊಂಡಿತು"

38. ಎರಡು ವರ್ಗಗಳ ನಡುವಿನ ಮೂಲ ವರ್ಗೀಕರಣವು ಅವರ ಲಿಂಗವನ್ನು ಆಧರಿಸಿರುವುದರಿಂದ ಅಲ್ಲಿ ತಾರತಮ್ಯದ ವಿರುದ್ಧ ಸಾಂವಿಧಾನ ಕೊಡಮಾಡಿರುವ ಭದ್ರತೆಯ ಉಲ್ಲಂಘನೆಯಾಗಿದೆಯೇ ಎಂಬ ವಿಚಾರವನ್ನು ನ್ಯಾಯಾಲಯ ಪರಿಗಣಿಸಲಿಲ್ಲ. ನೌಕರಿಯ ನಿಯಮಗಳು ಗಗನಸಖಿಯರ ಮೇಲೆ ಹೇರುವ ಮೂರು ಮಹತ್ವದ ನಿರ್ಬಂಧಗಳನ್ನು ನಿರ್ದಿಷ್ಟವಾಗಿ ಉಲ್ಲೇಖಿಸಿದ ನ್ಯಾಯಾಲಯವು "ಗಗನಸಖಿಯರು ಒಳಪಡುವ ನಿಯಮಗಳಲ್ಲಿ ಕೆಲ ವಿಚಿತ್ರ ಷರತ್ತುಗಳು ಇವೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ, ಆದರೆ ಗಗನಸಖಿಯರು ಭಿನ್ನ ಮತ್ತು ಪ್ರತ್ಯೇಕವಾದ ನಿದರ್ಶನಗಳನ್ನು ಒಳಗೊಂಡಿರುವ ಪ್ರತ್ಯೇಕ ವರ್ಗಕ್ಕೆ ಸೇರುತ್ತಾರೆ ಎಂದು ನ್ಯಾಯಾಲಯ ನಿರ್ಧರಿಸಿರುವಾಗ, ಅರ್ಜಿದಾರರು ಉಲ್ಲೇಖಿಸಿರುವ ಸನ್ನಿವೇಶಗಳಲ್ಲಿ ತಾರತಮ್ಯದ ನಡೆದಿದ್ದು ಸಂವಿಧಾನದ 14 ನೇ ಕಲಮನ್ನು ಉಲ್ಲಂಘಿಸಲಾಗಿದೆ ಎಂದು ಪರಿಗಣಿಸಲು ಆಗುವುದಿಲ್ಲ" ಎಂದು ಅಭಿಪ್ರಾಯ ಪಟ್ಟಿತು

39. ಈ ವರ್ಗೀಕರಣ ಗಂಡಸರು ಕೇವಲ ಪುರುಷ ಫ್ಲೈಟ್ ಪರ್ಸರ್ಸ್ ಆಗಬಹುದು ಮತ್ತು ಮಹಿಳೆಯರು ಕೇವಲ ಗಗನಸಖಿಯರಾಗಬಹುದು ಎಂಬ ತತ್ವವನ್ನು ಆಧರಿಸಿದೆ. ಸದರಿ ಕೇಡರರಿನ ರಚನೆಯೇ ಲಿಂಗದ ಆಧಾರದಲ್ಲಿ ನಡೆದಿದೆ. ಇದರ ಅರ್ಥವೇನೆಂದರೆ, 15ನೇ ಕಲಮಿನಡಿಯಲ್ಲಿ ತಾರತಮ್ಯವೆಂದು ಪರಿಗಣಿಸಬೀಕಿದ್ದರೆ, ಸರ್ಕಾರವು ಕೇವಲ ಲಿಂಗದ ಆಧಾರದಲ್ಲಿ ಎರಡು ಪ್ರತ್ಯೇಕ ವರ್ಗಗಳನ್ನು ರಚಿಸಿ, ಎರಡು ಪ್ರತ್ಯೇಕ ಕೇಡರುಗಳನ್ನು ರೂಪಿಸಬೇಕಾಗಿತ್ತು. ಹಾಗೆ ಮಾಡಿದಾಗ ಅದು ತಾರತಮ್ಯವಾಗುತ್ತಿರಲಿಲ್ಲ.

ನ್ಯಾಯಾಲಯ ಒಂದು ಹೆಜ್ಜೆ ಮುಂದೆಹೋಗಿ, ಕೆಳಕಂಡಂತೆ ಅಭಿಪ್ರಾಯಪಟ್ಟಿತು:

> "ಆದ್ದರಿಂದ, ಈ ನಿಯಮವು ಗಗನಸಖಿಯೊಬ್ಬರು ತಮ್ಮ 19 ನೇ ವಯಸ್ಸಿನಲ್ಲಿ ಕೆಲಸಕ್ಕೆ ಸೇರ್ಪಡೆಗೊಂಡಿದ್ದರೆ, ಅವರು 23ನೇ ವಯಸ್ಸಿನಲ್ಲಿ

ಮದುವೆಯಾಗಲು ಅನುಮತಿ ನೀಡುತ್ತದ್ದೆ, ಇದು ಎಲ್ಲಾ ರೀತಿಯಲ್ಲೂ ಬಹಳ ಒಳ್ಳೆಯ ಮತ್ತು ಗೌರವಾನ್ವಿತ ನಿಬಂಧನೆಯಾಗಿದೆ. ಈ ನಿಬಂಧನೆಯು ನೌಕರರ ಆರೋಗ್ಯವನ್ನು ಸುಧಾರಿಸುವುದಲ್ಲದೇ, ನಮ್ಮ ಕುಟುಂಬ ಯೋಜನೆ ಕಾರ್ಯಕ್ರಮವನ್ನು ಪ್ರತಿಪಾದಿಸಲು ಮತ್ತು ಬಲಗೊಳಿಸಲಲು ಕುಡಾ ಸಹಾಯಮಾಡುತ್ತದೆ. ಎರಡನೆಯದಾಗಿ, ಮಹಿಳೆಯೊಬ್ಬಳು 20 ರಿಂದ 23 ವರ್ಷ ವಯಸ್ಸಿನಲ್ಲಿ ಮದುವೆಯಾದರೆ, ಅವಳು ಸಂಪೂರ್ಣ ಪ್ರಬುದ್ಧಳಗಿರುತ್ತಾಳೆ ಮತ್ತು ಎಲ್ಲಾ ವಿಷಯಗಳು ಸಮಾನವಾಗಿದ್ದಾಗ ಅಂತಹ ಮದುವೆ ಯಶಸ್ವಿಯಾಗುವ ಎಲ್ಲ ಅವಕಾಶವೂ ಇರುತ್ತದೆ. ಮೂರನೆಯದಾಗಿ, ನಾಲ್ಕು ವರ್ಷಗಳ ಸೇವವಧಿಯೊಳಗೆ ಮದುವೆಗೆ ತಡೆಯೊಡ್ಡುವುದನ್ನು ರದ್ದುಪದಿಸಿದರೆ, ಕಾರ್ಯನಿರತ ಗಗನಸಖಿಯರು ನಾಲ್ಕು ವರ್ಷಗಳ ಅವಧಿಗೆ ಮುನ್ನವೇ ಗರ್ಭಧರಿಸಿದರೆ ನಿಗಮವು ತಾತ್ಕಾಲಿಕ ಅಥವಾ ಗುತ್ತಿಗೆ ಆಧಾರದ ಮೇಲೆ ಹೆಚ್ಚುವರಿ ಗಗನಸಖಿಯರನ್ನು ನೇಮಕ ಮಾಡಿಕೊಳ್ಳಲು ಭಾರೀ ಖರ್ಚನ್ನು ನಿಭಾಯಿಸಬೇಕಾಗುತ್ತದೆ ಮತ್ತು ಅಂತಹ ಮಹತ್ವಾಕಾಂಕ್ಷೆಯ ಯೋಜನೆಯನ್ನು ಕೊನೆಗೊಳಿಸಲು ನಿಗಮಕ್ಕೆ ಬಹಳ ಕಡಿಮೆ ಸಮಯವುಳಿಯುತ್ತದೆ ಎಂಬುದನ್ನು ನಿಗಮವು ನಮಗೆ ತಿಳಿಸಿರುವುದು ಸರಿಯಾಗಿದೆ" (ಒತ್ತು ನೀಡಲಾಗಿದೆ)

40. ಈ ತೀರ್ಪಿನಲ್ಲಿ ಒಂದು ಬಲವಾದ ರೂಢಮಾದರಿಯು ಕಂಡುಬರುತ್ತದೆ. ಮದುವೆಯ ವಿಚಾರದಲ್ಲಿ ಪುರುಷರು ಒಂದೇ ಬಗೆಯ ಮಾನದಂಡಗಳಿಗೆ ಒಳಪಟ್ಟಿಲ್ಲ ಎಂಬುದನ್ನು ನ್ಯಾಯಾಲಯ ಗುರುತಿಸಲಿಲ್ಲ. ಈ ಪ್ರಕಾರವಾಗಿ ನ್ಯಾಯಾಲಯವು ಆರೋಗ್ಯ ಮತ್ತು ಮತ್ತು ಕುಟುಂಬದ ಯೋಜನೆಯ ಜವಾಬ್ದಾರಿಯನ್ನೆಲ್ಲ ಮಹಿಳೆಯರೇ ಹೊರಬೇಕು ಎಂದು ನಿರ್ಧರಿಸಿದಂತಾಗುತ್ತದೆ. ಕುಟುಂಬವನ್ನು ಬೆಳೆಸುವ ಜವಾಬ್ದಾರಿ ಕೇವಲ ಮಹಿಳೆಯದ್ದು ಎಂಬ ಪರಿಕಲ್ಪನೆಯನ್ನು ಈ ತೀರ್ಪು ಬೆಳೆಸುತ್ತದೆ. ಮೊದಲ

ಬಾರಿ ಗರ್ಭಧರಿಸಿದಾಗ ಗಗನಸಖಿಯರ ಸೇವೆಯನ್ನು ಕೊನೆಗೊಳಿಸುವ ವಿಚಾರದಲ್ಲಿ ನ್ಯಾಯಾಲಯವು, ಮೊದಲನೇ ಬಾರಿಯಯ ಬದಲು ಮೂರನೇ ಬಾರಿ ಗರ್ಭಧರಿಸಿದಾಗ ಸೇವೆಯನ್ನು ಕೊನೆಗೊಳಿದರೆ "ಗಗನ ಸಖಿಯರು ತಮ್ಮ ಆರೋಗ್ಯ ಕಾಪಾಡಿಕೊಳ್ಳಲು ಮತ್ತು ಮಕ್ಕಳನ್ನು ಉತ್ತಮವಾಗಿ ಬೆಳೆಸಲು." ಸಹಾಯವಾಗುತ್ತದೆ ಎಂದು ನುಡಿಯಿತು. ಇಲ್ಲಿ ನ್ಯಾಯಾಲಯದ ದೃಷ್ಟಿಕೋನವು ಮತ್ತೊಮ್ಮೆ ಒಂದು ರೂಢಮಾದರಿಯನ್ನು ಅವಲಂಬಿಸಿತ್ತು. ಹೆಣ್ಣು ಮಕ್ಕಳ ಜವಾಬ್ದಾರಿಗಳನ್ನು ತಾವೇ ನಿರ್ಧರಿಸುವ ಧೋರಣೆಯ ಹಿನ್ನೆಲೆಯಲ್ಲಿ ನರ್ಗೇಶ್ ಮೀರ್ಜಾ ಪ್ರಕರಣದಲ್ಲಿನ ತರ್ಕವನ್ನು ಒಪ್ಪಿಕೊಳ್ಳುವುದು ಕಷ್ಟವಾಗುತ್ತದೆ. ಈ ದೃಷ್ಟಿಕೋನವು ಖಂಡಿತವಾಗಿಯೂ ತಪ್ಪು ಎಂಬುದು ನನ್ನ ಅಭಿಪ್ರಾಯ .

41. ತಾರತಮ್ಯ ಎಸಗುವ ಕಾಯ್ದೆಯೊಂದನ್ನು ಸಾಂವಿಧಾನಿಕ ಮೌಲ್ಯಗಳ ಹಿನ್ನೆಲೆಯಲ್ಲಿ ಪರೀಕ್ಷಿಸಲಾಗುವುದು. 15(1)ನೇ ಕಲಮಿನಲ್ಲಿ ನಿಷೇಧಿಸಲಾದ ವಿಚಾರಗಳ ಆಧಾರದಲ್ಲಿ ಒಂದು ವರ್ಗದ ಬಗೆಗೆ ರೂಢಮಾದರಿಗಳನ್ನು ಪ್ರತಿಪಾದಿಸುವ ತಾರತಮ್ಯವು ಸಾಂವಿಧಾನಿಕ ವಿಮರ್ಶೆಯಿಂದ ಪಾರಾಗುವುದು ಸಾಧ್ಯವಿಲ್ಲ. ಯಾವುದೇ ಬಗೆಯ ತಾರತಮ್ಯ ನೇರ ಅಥವಾ ಪರೋಕ್ಷವಾಗಿ ಲಿಂಗಾಧಾರಿತ ಜವಾಬ್ದಾರಿಗಳ ಬಗೆಗಿನ ರೂಢಮಾದರಿಯನ್ನು ಆಧಾರಿಸಿದ್ದರೆ, ಅದನ್ನು 15 ನೇ ಕಲಮಿನಿಂದ ನಿಷೇಧಿಸಲ್ಪಟ್ಟಿರುವ ಲಿಂಗದ ಆಧಾರದಲ್ಲಿ ನಡೆಯುವ ತಾರತಮ್ಯದಿಂದ ಪ್ರತ್ಯೇಕವಾಗಿ ಪರಿಗಣಿಸಲು ಆಗುವುದಿಲ್ಲ. ಮಾತ್ರವಲ್ಲದೆ ರೂಢಮಾದರಿಗಳನ್ನು ಆಧರಿಸಿರುವ ಕೆಲ ಗುಣಲಕ್ಷಣಗಳನ್ನು ಒಂದಿಡೀ ವರ್ಗಕ್ಕೆ ಆರೋಪಿಸಿ, ಅವರ ವಿರುದ್ಧ 15(1)ನೇ ಕಲಮಿನಲ್ಲಿ ನಿಷೇಧಿಸಲಾಗಿರುವ ವಿಚಾರಗಳ ಆಧಾರದಲ್ಲಿ ತಾರತಮ್ಯ ಎಸಗುವುದನ್ನು ಸಹಿಸಿಕೊಳ್ಳಲು ಆಗುವುದಿಲ್ಲ. ಅಂತಹ ತಾರತಮ್ಯವು 15(1)ನೀ ಕಲಮಿನಡಿಯಲ್ಲಿ ನೀಡಲಾಗಿರುವ ತಾರತಮ್ಯದ ವಿರುದ್ಧದ ಸಾಂವಿಧಾನಿಕ ಭದ್ರತೆಯನ್ನು ಉಲ್ಲಂಘಿಸುತ್ತದೆ. ಭೇದಭಾವ ಹೇಗೆ ವಿವಿಧ ವರ್ಗಗಳನ್ನು ಬಾಧಿಸುತ್ತದೆ ಎಂಬುದನ್ನು ಅರ್ಥೈಸಿಕೊಂಡಿರುವ ಹಿನ್ನೆಲೆಯಲ್ಲಿ, ಅಂತಹ ತಾರತಮ್ಯಗಳನ್ನು, ಅಲ್ಲಿ ಲಿಂಗ ಮತ್ತು ಇತರ ವಿಚಾರಗಳನ್ನು ಪರಿಗಣಿಸಲಾಗಿದೆ ಎಂಬ ನೆಪದಲ್ಲಿ ಸಮರ್ಥಿಸಿಕೊಳ್ಳಲು ಬರುವುದಿಲ್ಲ. ಇಂತಹ ನಿಲುವನ್ನು ತಳೆದಾಗ, 15ನೇ ಕಲಮಿಗೆ ನೈಜ ಶಕ್ತಿಯನ್ನು ತುಂಬಿದಂತಾಗಿ, ಅದಕ್ಕೆ ತಾರತಮ್ಯವನ್ನು ನಿಷೇಧಿಸುವುದಕ್ಕೆ ಸಂಪೂರ್ಣ ಸಂವಿಧಾನಾತ್ಮಕ ಅಧಿಕಾರವನ್ನು ನೀದಿದಂತಾಗುತ್ತದೆ..

ನ್ಯಾಯಾಲಯ ನರ್ಗೇಷ್ ಮೀರ್ಜಾ ಪ್ರಕರಣದಲ್ಲಿ ತಳೆದಿರುವ ನಿಲುವು ತಪ್ಪಾಗಿದೆ.

ಕೇವಲ ಲಿಂಗಾಧಾರಿತ ತಾರತಮ್ಯವನ್ನು ನಿಷೇಧಿಸುವ 15ನೇ ಕಲಮಿನ ಆಶಯಕ್ಕೆ ವಿರುದ್ಧವಾಗಿದೆ ಎಂಬ ಕಾರಣಕ್ಕೆ ಕಾನೂನೊಂದನ್ನು ಪ್ರಶ್ನಿಸುವಾಗ ಅಲ್ಲಿ ಸರ್ಕಾರ ಆ ಕಾನೂನನ್ನು ಯಾವ ಉದ್ದೇಶದಿಂದ ಜಾರಿಗೊಳಿಸಿತು ಎಂಬುದಕ್ಕಿಂತ, ಆ ಕಾನೂನು ವ್ಯಕ್ತಿಗಳು ಮತ್ತು ಅವರ ಮೂಲಭೂತ ಹಕ್ಕುಗಳ ಮೇಲೆ ಯಾವ ರೀತಿಯ ಪರಿಣಾಮ ಬೀರಿದೆ ಎಂಬುದನ್ನು ಗಮನಿಸಬೇಕಾಗುತ್ತದೆ. ಯಾವುದೇ ಬಗೆಯ ತಾರತಮ್ಯವೊಂದು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ, ಇಂತಹ ಲಿಂಗಕ್ಕೆ ಸೇರಿದವರು ಇಂತಹುದೇ ಪಾತ್ರ ವಹಿಸಬೇಕು ಎಂಬ ರೂಢೀಗತ ನಂಬುಗೆಗಳನ್ನು ಆಧರಿಸಿದ್ದರೆ, ಅದನ್ನು 15ನೇ ಕಲಮಿನಲ್ಲಿ ನಿಶೀಧಿಸಲಾಗಿರುವ ಲಿಂಗಾಧಾರಿತ ತಾರತಮ್ಯದಿಂದ ಪ್ರತ್ಯೇಕವೆಂದು ಪರಿಗಣಿಸಲು ಆಗುವುದಿಲ್ಲ.

## E.I. ಮೇಲ್ನೋಟದ ತಟಸ್ಥತೆ: ಭೂತಕನ್ನಡಿಯ ಮೂಲಕ ನೋಡಿದಾಗ

42. ಸಂತಾನೋತ್ಪತ್ತಿಗೆ ಕಾರಣವಾಗದಿರುವ ಲೈಂಗಿಕ ಚಟುವಟಿಕೆಗಳು ನಿಸರ್ಗದ ನಿಯಮಕ್ಕೆ ವಿರುದ್ಧ ಮತ್ತು ಅವುಗಳನ್ನು 377ನೇ ಪರಿಚ್ಛೇದದಡಿಯಲ್ಲಿ ಅಪರಾಧೀಕರಿಸಬೇಕು ಎಂಬ ನೈತಿಕ ನಂಬಿಕೆ 377ನೇ ಪರಿಚ್ಛೇದದಲ್ಲಿ ಅಡಕವಾಗಿದೆ. ಮಧ್ಯಸ್ಥಿಕೆದಾರರು 377ನೇ ಪರಿಚ್ಛೇದವು, ಭಿನ್ನಲಿಂಗೀಯ ಜೋಡಿಗಳ ನಡುವಿನ ಗುದಸಂಭೋಗ ಮತ್ತು ಮುಖಮೈಥುನವನ್ನು ಅಪರಾಧೀಕರಿಸುವುದರಿಂದ ಆ ಪರಿಚ್ಛೇದವು ಲೈಂಗಿಕ ನಿಲುವನ್ನು ಮೀರಿ, 'ನಿಸರ್ಗದ ನಿಯಮಕ್ಕೆ' ವಿರುದ್ಧವಾದ ಎಲ್ಲಾ ವರ್ತನೆಗಳಿಗೆ ಸಮನಾಗಿ ಅನ್ವಯಿಸುತ್ತದೆ ಎಂದು ತಿಳಿಸಿರುತ್ತಾರೆ. ಈ ಆಗ್ರಹವು ತಪ್ಪಾಗಿದೆ. ನಾಲ್ಸಾ ಪ್ರಕರಣದಲ್ಲಿ ಈ ನ್ಯಾಯಾಲಯವು 377ನೇ ಪರಿಚ್ಛೇದ ಕೆಲ ನಿರ್ದಿಷ್ಟ ಲೈಂಗಿಕ ಕ್ರಿಯೆಗಳಿಗೆ ಸಂಬಂಧಿಸಿದೆಯಾದರೂ, ಅದು ಕೆಲ ವ್ಯಕ್ತಿಗಳ ಅಸ್ಮಿತೆಯನ್ನು ಗುರಿಮಾಡಿಕೊಂಡಿದೆ ಎಂದು ಅಭಿಪ್ರಾಯಪಟ್ಟಿತು. ನಾಝ್ ಪ್ರಕರಣದಲ್ಲಿ ದೆಹಲಿ ನ್ಯಾಯಾಲಯವು 377ನೇ ಪರಿಚ್ಛೇದ ಮೇಲ್ನೋಟಕ್ಕೆ ತಟಸ್ಥವಾಗಿ ಕಂಡುಬಂದರೂ ಅದನ್ನು ಕೆಲ ಕ್ರಿಯೆಗಳ ವಿರುದ್ಧ ಅನ್ವಯಿಸಿದಾಗ ಅದು ಕೆಲ ನಿರ್ದಿಷ್ಟ ಸಮುದಾಯಗಳ ಮೇಲೆ ಪರಿಣಾಮ ಬೀರುತ್ತವೆ ಎಂಬುದನ್ನು ಪರಿಣಾಮಕಾರಿಯಾಗಿ ತೋರಿಸಿಕೊಟ್ಟಿತು:

" 377ನೇ ಪರಿಚ್ಛೇದ ಐ.ಪಿ.ಸಿ. ಮೇಲ್ನೋಟಕ್ಕೆ ತಟಸ್ಥವಾಗಿದೆ ಮತ್ತು ಇದು ನಿರ್ಧಿಷ್ಟವಾಗಿ ಯಾವುದೇ ಅಸ್ಮಿತೆಗಳನ್ನು ಗುರಿಯಾಗಿಸಿಕೊಂಡಿಲ್ಲ, ಬದಲಿಗೆಗೆ ಅದು ತನ್ನ ಕಾರ್ಯಾಚರಣೆಯಲ್ಲಿ ಒಂದು ನಿರ್ದಿಷ್ಟ ಸಮುದಾಯವನ್ನು ಅನ್ಯಾಯವಾಗಿ ತೊಂದರೆಗೀಡುಮಾಡುತ್ತದೆ.

ವಾಸ್ತವವಾಗಿ, ಅಪರಾಧೀಕರಿಸಲಾದ ಈ ಲೈಂಗಿಕ ಕ್ರಿಯೆಗಳು, ವ್ಯಕ್ತಿಗಳ ಒಂದು ವರ್ಗಕ್ಕೆ, ಎಂದರೆ ಸಮಲೈಂಗಿಕರ ವರ್ಗಕ್ಕೆ ಹೆಚ್ಚಾಗಿ ಸಂಬಂಧಿಸಿವೆ ಎಂಬುದು ವಾಸ್ತವ. 377ನೇ ಪರಿಚ್ಛೇದ ಐ.ಪಿ.ಸಿ. ಎಲ್ಲಾ ಸಮಲೈಂಗಿಕರನ್ನು ಅಪರಾಧಿಗಳೆಂದು ನೋಡುವ ಪರಿಣಾಮ ಹೊಂದಿದೆ. ಸಮಲೈಂಗಿಕತೆಯೊಂದಿಗೆ ಸಂಬಂಧಿಸಿರುವ ಎಲ್ಲವನ್ನೂ ಡೊಂಕಾದುದು, ವಿಲಕ್ಷಣವಾದುದು, ಅಸಭ್ಯವೂ ಎಂದು ಪರಿಗಣಿಸಿದಾಗ, ಸಮಲೈಂಗಿಕ ಸ್ತ್ರೀರು ಮತ್ತು ಸಮಲೈಂಗಿಕತ ಪುರುಷರ ಇಡೀ ಸಮುದಾಯವನ್ನು ಪೈಶಾಚಿಕ ಮತ್ತು ಅಸಭ್ಯವೆಂದು ಗುರುತಿಸಿದಂತಾಗುತ್ತದೆ.

ಅವರು ಏನಾಗಿದ್ದಾರೆ ಅಥವಾ ಅವರನ್ನು ಏನೆಂದು ಗ್ರಹಿಸಲಾಗಿದೆ ಎಂಬ ಆಧಾರದಲ್ಲಿ ಅಂಥವರು ವ್ಯಾಪಕವಾದ ಪೂರ್ವಾಗ್ರಹಕ್ಕೆ ಒಳಗಾಗುತ್ತಾರೆಯೇ ಹೊರತು ಅವರು ಏನು ಮಾಡುತ್ತಿದ್ದಾರೆ ಎಂಬ ಕಾರಣದಿಂದ ಅಲ್ಲ. ಇದರ ಪರಿಣಾಮವಾಗಿ, ಜನಸಂಖ್ಯೆಯ ಗಮನಾರ್ಹ ಭಾಗವೊಂದನ್ನು, ಅದರ ಲೈಂಗಿಕ ಅನನುಸರಣೆಯ ಕಾರಣಕ್ಕೆ, ಶಿಕ್ಷಿಸಲಾಗುತ್ತದೆ, ಕಡೆಗಣಿಸಲಾಗುತ್ತದೆ ಮತ್ತು ಒಬ್ಬಂಟಿಯಾಗಿಸಲಾಗುತ್ತದೆ [175] (ಒತ್ತು ನೀಡಲಾಗಿದೆ)

[175] Naz, at para 94.

ಈ ನಿಟ್ಟಿನಲ್ಲಿ, ನ್ಯಾಯಾಲಯವು 377ನೇ ಪರಿಚ್ಛೇದದ ಸಂತ್ರಸ್ತರ ಅನುಭವಗಳನ್ನು ದಾಖಲಿಸಿತು. ಇದಕ್ಕಾಗಿ, ವಿಚಾರಣೆಯ ಸಂದರ್ಭದಲ್ಲಿ ನಡೆಸುವ ಅತ್ಯಾಚಾರ ಮತ್ತು ಚಿತ್ರಹಿಂಸೆ, ಸಾಮಾಜಿಕ ಬಹಿಷ್ಕಾರ, ಅವಮಾನ ಮತ್ತು ಅಮಾನವೀಯ ನಡವಳಿಕೆ ಮತ್ತು ಸೆರೆವಾಸದ ನಿದರ್ಶನಗಳ ಬಗೆಗೆ ಅರ್ಜಿದಾರರು ಸಲ್ಲಿಸಿದ ವಿಸ್ತೃತ ದಾಖಲೆಗಳು ಮತ್ತು ಅಫಿಡವಿಟ್ಗಳನ್ನು ಉಲ್ಲೇಖಿಸಲಾಯಿತು. 377ನೇ ಪರಿಚ್ಛೇದವು ಕೆಲ ಕ್ರಿಯೆಗಳನ್ನು ಅಪರಾಧೀಕರಿಸುತ್ತದೆಯಾದರೂ, ಅದು ಎಲ್.ಜಿ.ಬಿ.ಟಿ ಸಮುದಾಯ ಮತ್ತು ಭಿನ್ನಲಿಂಗೀಯವಲ್ಲದ ನಡವಳಿಕೆ ಹೊಂದಿರುವವರ ಪಾಲಿಗೆ ಅನಾನುಕೂಲಕರವಾಗಿ, ಪರಕೀಯವಾಗಿ ಮತ್ತು ಅನ್ಯಾಯದಿಂದ ನಡೆದುಕೊಳ್ಳುವ ವ್ಯವಸ್ಥೆಯೊಂದನ್ನು ಸೃಷ್ಟಿಸಿದೆ.

43. ಹಲವು ದೇಶಗಳ ನ್ಯಾಯಶಾಸ್ತ್ರವು, ಮೇಲ್ನೋಟಕ್ಕೆ ತಟಸ್ಥವಾಗಿ ಕಾಣುವ ಸರ್ಕಾರಿ ಕ್ರಮಗಳು ನಿರ್ಧಿಷ್ಟ ವರ್ಗಗಳ ಮೇಲೆ ವ್ಯಕ್ತಿರಿಕ್ತ ಪರಿಣಾಮವನ್ನು ಬೀರಬಹುದು ಎಂಬ ತತ್ವವನ್ನು ಎತ್ತಿಹಿಡಿಯುತ್ತದೆ. ಯುರೋಪಿಯನ್ ಸಂಸತ್ತು ಮತ್ತು 5ನೇ ಜುಲೈ 2006ರ ಸಮಿತಿಯ 2006/54/EC ನಿರ್ದೇಶನವು "ನಿಯಮ, ಮಾನದಂಡ ಅಥವಾ ಪದ್ಧತಿಯೊಂದು ನ್ಯಾಯಸಮ್ಮತವಾದ ಉದ್ದೇಶಹೊಂದಿದ್ದು ಆ ಉದ್ದೇಶವನ್ನು ಸಾಧಿಸುವ ವಿಧಾನವು ಸೂಕ್ತ ಮತ್ತು ಅವಶ್ಯಕವಾಗಿರುವ ಸಂದರ್ಭಗಳ ಹೊರತಾಗಿ, ತಟಸ್ಥವಾಗಿ ಕಂಡುಬರುವ ನಿಯಮ, ಮಾನದಂಡ ಅಥವಾ ಕ್ರಮವೊಂದು ಒಂದು ಲಿಂಗದ ವ್ಯಕ್ತಿಗಳ ಪಾಲಿಗೆ ಇತರ ಲಿಂಗದವರಿಗೆ ಹೋಲಿಸಿದರೆ ಅನಾನುಕೂಲತೆಗಳನ್ನು ಉಂಟುಮಾಡಿದಾಗ" ಅದು 'ಪರೋಕ್ಷ ತಾರತಮ್ಯ'ವಾಗುತ್ತದೆ ಎಂದು ವ್ಯಾಖ್ಯಾನಿಸಿತು.

**ಗ್ರಿಗ್ಸ್ v. ಡ್ಯೂಕ್ ಪವರ್ ಕಂ**[176], ಪ್ರಕರಣದಲ್ಲಿ ಅಮೇರಿಕಾದ ಸರ್ವೋಚ್ಚ ನ್ಯಾಯಾಲಯವು, ಪ್ರತ್ಯೇಕ ಶಾಲೆಗಳ ದೆಸೆಯಿಂದ ಆಫ್ರಿಕನ್ ಅಮೆರಿಕನ್ನರು ಕಡಿಮೆ ಗುಣಮಟ್ಟದ ಶಿಕ್ಷಣ ಪಡೆದರು ಎಂಬುದನ್ನು ಗುರುತಿಸುತ್ತಾ, ಕೌಶಲ್ಯ/ಬುದ್ಧಿವಂತಿಕೆಯ ಪರೀಕ್ಷೆ ತೆಗ್ದುಕೊಳ್ಳಬೇಕಂಬ ನಿಯಮವು ಆಫ್ರಿಕನ್ ಅಮೆರಿಕನ್ ಅಭ್ಯರ್ಥಿಗಳ ಮೇಲೆ ಅಸಮಂಜಸವಾದ ಪರಿಣಾಮ ಬೀರಿತು ಎಂದು ಅಭಿಪ್ರಾಯ ಪಟ್ಟಿತು. ನ್ಯಾಯಾಲಯವು "ನಾಗರಿಕ ಹಕ್ಕುಗಳ

[176] 401 U.S. 424 (1971)

ಕಾಯಿದೆಯು" ಬಹಿರಂಗವಾದ ತಾರತಮ್ಯವನ್ನು ನಿರ್ಬಂಧಿಸಿತಷ್ಟೇ ಅಲ್ಲದೇ, ನೋಡುವುದಕ್ಕೆ ನ್ಯಾಯಸಮ್ಮತವಾಗಿದ್ದು ಜಾರಿಯಾದಾಗ ಭೇದಭಾವ ಮಾಡುವ ಕ್ರಮಗಳನ್ನು ಕೂಡಾ ನಿಷೇಧಿಸಿತು.

**ಬಿಳ್ಕಾ-ಕೌಫೌಸ್ ಜಿಎಂಬಿಹೆಚ್ v. ಕರಿನ್ ವೆಬರ್ ವಾನ್ ಹಾರ್ಟ್ಜ್**[177] ಪ್ರಕರಣದಲ್ಲಿ ಐರೋಪ್ಯ ನ್ಯಾಯಾಲಯವು ಮಹಿಳೆಯರು ಅರೆಕಾಲಿಕ ನೌಕರಿ ಮಾಡುವ ಸಾಧ್ಯತೆ ಹೆಚ್ಚಾಗಿರುವುದರಿಂದ, ಅರೆಕಾಲಿಕ ನೌಕರರಿಗೆ ಪಿಂಚಣಿ ನಿರಾಕರಿಸಿದರೆ, ಅದು ಮಹಿಳೆಯರ ಮೇಲೆ ಪರಿಣಾಮ ಬೀರುವ ಸಾಧ್ಯತೆ ಹೆಚ್ಚು ಎಂದು ಗಮನಿಸಿತು:

> "ಅದರ ಔದ್ಯೋಗಿಕ ಪಿಂಚಣಿ ಯೋಜನೆಯಿಂದ ಅರೆಕಾಲಿಕ ನೌಕರರನ್ನು ಹೊರಗುಳಿಸಿರುವ ಡಿಪಾರ್ಟ್ಮೆಂಟ್ ಸ್ಟೋರ್ ಕಂಪನಿಯು ಈ.ಈ.ಸಿ. ಒಡಂಬಡಿಕೆಯ 119ನೇ ಕಲಮನ್ನು ಉಲ್ಲಂಘಿಸಿದೆ, ಏಕೆಂದರೆ, ಹೊರಗಿಡುವಿಕೆಯು ಲಿಂಗಾಧಾರಿತ ತಾರತಮ್ಯಕ್ಕೆ ಸಂಬಂಧ ಪಡದ ವಸ್ತುನಿಷ್ಠವಾಗಿ ಸಮರ್ಥನೀಯ ವಿಚಾರಗಳನಾಧರಿಸಿರದಿದ್ದರೆ, ಅಂತಹ ಹೊರಗಿಡುವಿಕೆಯು ಪುರುಷರಿಗಿಂತ ಹೆಚ್ಚಿನ ಸಂಖ್ಯೆಯ ಮಹಿಳೆಯರ ಮೇಲೇ ಪರಿಣಾಮ ಬೀರುತ್ತದೆ." (ಒತ್ತು ನೀಡಲಾಗಿದೆ).

ಸರ್ಕಾರದ ಕ್ರಮ ಒಂದು ವರ್ಗದ ಜನರಮೇಲೆ ಅಸಮಂಜಸವಾದ ಪರಿಣಾಮ ಬೀರುವ ಸಂದರ್ಭವನ್ನು ಉಲ್ಲೇಖಿಸಿದ ಕೆನಡಾದ ಸರ್ವೋಚ್ಚ ನ್ಯಾಯಾಲಯ ಅಸಮಾನ ಪರಿಣಾಮದ ಪರಿಕಲ್ಪನೆಯನ್ನು ಅನುಮೋದಿಸಿತು. **ಆಂಡ್ರ್ಯೂಸ್ v. ಲಾ ಸೊಸೈಟಿ ಆಫ್ ಬ್ರಿಟಿಷ್ ಕೊಲಂಬಿಯ**[178] ಪ್ರಕರಣದಲ್ಲಿ ನ್ಯಾಯಾಲಯ ಹೀಗೆ ನುಡಿಯಿತು:

> "ತಾರತಮ್ಯವು ಉದ್ದೇಶಪೂರ್ವಕವೋ ಅಲ್ಲವೋ ಎಂಬುದನ್ನು ಹೊರತುಪಡಿಸಿ ವ್ಯಕ್ತಿಯ ಅಥವಾ ಗುಂಪಿನ ವೈಯಕ್ತಿಕ ಗುಣಲಕ್ಷಣಗಳಿಗೆ ಸಂಬಂಧಿಸಿದ ಆಧಾರದಗಳ ಮೇಲೆ ಇತರರ ಮೇಲೆ ಹೇರದಂತಹ ಅನನುಕೂಲಗಳನ್ನು ಹೇರುವ ಅಥವಾ ಸಮಾಜದ ಇತರ ಸದಸ್ಯರಿಗೆ ಲಭ್ಯವಿರುವ

[177] 1986) ECR 1607

[178] (1989) 1 SCR 143

> ಪ್ರಯೋಜನಗಳಿಂದ ವಂಚಿಸುವ ಪರಿಣಾಮವನ್ನುಂಟುಮಾಡುತ್ತದೆ. ವ್ಯಕ್ತಿಯೊಬ್ಬರು ಒಂದು ಗುಂಪಿನೊಂದಿಗೆ ಸಂಬಂಧ ಹೊಂದಿರುವ ಮಾತ್ರಕ್ಕೆ ಅವರಿಗೆ ತಳುಕು ಹಾಕಲಗಿರುವ ವೈಯಕ್ತಿಕ ಗುಣಲಕ್ಷಣಗಳನ್ನು ಆಧರಿಸಿ ತಾರತಮ್ಯ ಎಸಗಿದರೆ ಅದು ಭೇದಭಾವದ ಆರೋಪವನ್ನು ತಪ್ಪಿಸಿಕೊಳ್ಳಲು ಆಗುವುದಿಲ್ಲ, ಆದರೆ ವ್ಯಕ್ತಿಯ ಯೋಗ್ಯತೆ ಮತ್ತು ಸಾಮರ್ಥ್ಯಗಳ ಆಧಾರದ ಮೇಲಿನ ಭೇದಭಾವವನ್ನು ತಾರತಮ್ಯವೆಂದು ವರ್ಗೀಕರಿಸಲಾಗುವುದಿಲ್ಲ.
>
> "(ಒತ್ತು ನೀಡಲಾಗಿದೆ)

ಹೀಗಾಗಿ, ಒಂದು ಕ್ರಮವು "ಒಂದು ಗುಂಪಿನ ವ್ಯಕ್ತಿಗಳ ಮೇಲೆ ಇತರರ ಮೇಲೆ ಹೇರದಿರುವ ಹೊರೆಗಳು, ಕಟ್ಟುಪಾಡುಗಳು, ಅಥವಾ ಇತರರಿಗೆ ಹೋಲಿಸಿದರೆ, ಒಂದು ವರ್ಗಕ್ಕೆ ಲಭ್ಯವಿರುವ ಅವಕಾಶಗಳು, ಲಾಭಗಳು ಮತ್ತು ಅನುಕೂಲಗಳನ್ನು ತಡೆಹಿಡಿದಾಗ ಅಥವಾ ಸೀಮಿತಗೊಳಿಸಿದಾಗ", ಆ ಕ್ರಮವನ್ನು ಪ್ರಶ್ನಿಸಬೇಕಾಗುತ್ತದೆ[179].

**ಪ್ರಿಟೋರಿಯಾ ಸಿಟಿ ಕೌನ್ಸಿಲ್ v.. ವಾಕರ್**[180] ಪ್ರಕರಣದಲ್ಲಿ, ದಕ್ಷಿಣ ಆಫ್ರಿಕಾದ ಸಂವಿಧಾನಾತ್ಮಕ ನ್ಯಾಯಾಲಯವು ಹೀಗೆ ಗಮನಿಸಿತು:

> " ಪರೋಕ್ಷ ತಾರತಮ್ಯದ ಪರಿಕಲ್ಪನೆಯನ್ನು, ಹೊರನೋಟಕ್ಕೆ ತಟಸ್ಥವಾಗಿ ಕಾಣುವ ಮಾನದಂಡದ ಹಿಂದೆ ತಾರತಮ್ಯವನ್ನು ಮರೆಮಾಚುವ ಸಂದರ್ಭಗಳು ಅಥವಾ ಐತಿಹಾಸಿಕ ಅಧೀನತೆಯ ಮಾದರಿಯಿಂದ ವ್ಯತಿರಿಕ್ತ ಪರಿಣಾಮಗಳನ್ನು ಈಗಾಗಲೇ ಅನುಭವಿಸಿರುವ ವ್ಯಕ್ತಿಗಳ ಅನಾನುಕೂಲತೆಗಳನ್ನು, ಅವರನ್ನು ನೇರವಾಗಿ ಪೂರ್ವಾಗ್ರಹಗಳಿಗೆ ಒಳಪಡಿಸುವ ಉದ್ದೇಶವಿಲ್ಲದ ಕ್ರಮಗಳ ಮೂಲಕ ಎತ್ತಿಹಿಡಿಯಲಾಗುವ ಸಂದರ್ಭಗಳನ್ನು ನಿಭಾಯಿಸಲು ಅಭಿವೃದ್ಧಿಪಡಿಸಲಾಗಿದೆ.

[179] Ibid.

[180] (1998) 3 BCLR 257

> ಅನೇಕ ಸಂದರ್ಭಗಳಲ್ಲಿ, ವಿಶೇಷವಾಗಿ ಪರೋಕ್ಷ ತಾರತಮ್ಯದ ಆಪಾದನೆಯಿರುವಾಗ, ತಾರತಮ್ಯದ ಬಗ್ಗೆ ದೂರು ಸಲ್ಲಿಸುವ ವ್ಯಕ್ತಿಗಳು ತಾವು ನ್ಯಾಯೋಚಿತವಲ್ಲದ ತಾರತಮ್ಯವನ್ನು ಎದುರಿಸುತ್ತಿದ್ದೇವೆ ಮತ್ತು ಅಂತಹ ಅನ್ಯಾಯದ ತಾರತಮ್ಯವು ಉದ್ದೇಶಪೂರ್ವಕವಾಗಿವೆ ಎಂದು ಸಾಬೀತುಪಡಿಸಬೇಕಾಗಿ ಬಂದರೆ ರಕ್ಷಣಾತ್ಮಕ ಉದ್ದೇಶ ಸೋತುಹೋಗುತ್ತದೆ. ಪರೋಕ್ಷ ತಾರತಮ್ಯದ ಸಂದರ್ಭಗಳಲ್ಲಿ ಈ ಸಮಸ್ಯೆಯು ವಿಶೇಷ ತೀಕ್ಷ್ಣತೆ ಹೊಂದಿರುತ್ತದೆ, ಮತ್ತು ಕ್ರಮವೊಂದಕ್ಕೆ ತಾರತಮ್ಯ ಎಸಗುವುದಕ್ಕಿಂತ ಮಿಗಿಲಾದ ಉದ್ದೇಶವಿರುವ ಸಂದರ್ಭಗಳಲ್ಲಿ ಇನ್ನಷ್ಟೂ ತೀವ್ರವಾಗಿರುತ್ತದೆ.(ಒತ್ತು ನೀಡಲಾಗಿದೆ)

## E.2. ಇಬ್ಬಗೆ ಲಿಂಗಗಳ ಧ್ರುವೀಕರಣದ ವಿಘಟನೆ

44. 377ನೇ ಪರಿಚ್ಛೇದವು ಸಮಾಜದ ಭಿನ್ನಲಿಂಗೀಯ ನಿರೀಕ್ಷೆಗಳಿಗೆ ಅನುಗುಣವಾಗಿರದ ವರ್ತನೆಯನ್ನು ಅಪರಾಧೀಕರಿಸುತ್ತದೆ. ಹಾಗೆ ಮಾಡುವಾಗ ಆದು ಸಮಲೈಂಗಿಕ ವಿರೋಧಿ ಶಾಸನಗಳು ಮತ್ತು ಲಿಂಗಾಧಾರಿತ ಜವಾಬ್ದಾರಿಗಳ ಸಾಂಪ್ರದಾಯಿಕ ಪರಿಕಲ್ಪನೆಗಳ ನಡುವಿನ ಸಂಬಂಧವನ್ನು ಎತ್ತಿಹಿಡಿಯುತ್ತದೆ.

ಲಿಂಗಾಧಾರಿತ ಜವಾಬ್ದಾರಿಗಳ ಸಾಂಪ್ರದಾಯಿಕ ಪರಿಕಲ್ಪನೆಯು ಸಂಬಂಧಗಳ ಸ್ವರೂಪ ಒಂದೇ ಬಗೆಯಾದಾಗಿರುತ್ತದೆ ಮತ್ತು ಅದು "ನಿಸರ್ಗದ ನಿಯಮಕ್ಕೆ" ಅನುಗುಣವಾಗಿರುತ್ತದೆ ಎಂಬ ಪರಿಕಲ್ಪನೆಯನ್ನು ಎತ್ತಿಹಿಡಿದು ಸಮಲೈಂಗಿಕತೆಯನ್ನು ಹೊರಗಿಡುತ್ತದೆ. ಹಾಗೆ ಮಾಡುವುದರ ಪರಿಣಾಮವನ್ನು ಈ ಕೆಳಗಿನಂತೆ ವಿವರಿಸಲಾಗಿದೆ:

> ಈ ರೀತಿಯಲ್ಲಿ ಸಾಂಸ್ಕೃತಿಕ ಸಮಲೈಂಗಿಕದ್ವೇಷವು ಭಿನ್ನಲಿಂಗೀಯ ಲಿಂಗಗಳ ಪಾತ್ರಗಳ ಸ್ಥಿರತೆಗೆ ಸವಾಲೊಡ್ಡುವ ಸಾಮಾಜಿಕ ವರ್ತನೆಯನ್ನು ನಿರುತ್ಸಾಹಗೊಳಿಸುತ್ತದೆ. ಸಾಮಾಜಿಕ ಮತ್ತು ಲೈಂಗಿಕ ನಡವಳಿಕೆಯ ಈ

> ಇಬ್ಬಗೆಯ ನಿಯಮ ಮತ್ತು ಮಾನದಂಡಗಳು ಸಮಲೈಂಗಿಕ ಪುರುಷ ಮತ್ತೊಬ್ಬ ಪುರುಷನೊಂದಿಗೆ ಲೈಂಗಿಕ ಕ್ರಿಯೆಯಲ್ಲಿ ತೊಡಗಿ ಪುರುಷತ್ವದ ಲಿಂಗಧಾರಿತ ಪಾತ್ರದಿಂದ ಹಿಂದೆ ಸರಿಯುತ್ತಾನೆ ಎಂಬ ಕಾರಣಕ್ಕೆ ಅವನ್ನು ಆಸಹಜವಾಗಿರುವಂತೆ ಚಿತ್ರಿಸುತ್ತವೆ[181]

ಸಮಾಜ ವ್ಯಕ್ತಿಗಳು ಮತ್ತು ನಿರ್ಧಿಷ್ಟ ಲಿಂಗದವರು ನಿರ್ವಹಿಸಬೇಕಾದ ಪಾತ್ರಗಳ ಬಗ್ಗೆ ಬಲವಾದ ನಂಬಿಕೆಗಳನ್ನು ಹೊಂದಿದ್ದರೆ - ಎಂದರೆ ಪುರುಷರು (ವಿಶೇಷವಾಗಿ ಗುಣಲಕ್ಷಣಗಳ ಬಗೆಗೆ ಹೇಳಬೇಕಿದ್ದರೆ) ಭಾವನೆಗಳಿಲ್ಲದವರು, ಸಾಮಾಜಿಕವಾಗಿ ಬಲಾಢ್ಯರು, ಮತ್ತು ಸ್ತ್ರೀಯರೆಡೆಗೆ ಆಕರ್ಷಿತರಾಗುವವರು ಮತ್ತು ಸಂಸಾರವಾದ ಖರ್ಚುಗಳನ್ನು ನಡೆಸುವವರು ಮತ್ತು ಮಹಿಳೆಯರು ಭಾವಜೀವಿಗಳು, ಸಾಮಾಜಿಕವಾಗಿ ಬಲಹೀನರು, ಆರೈಕೆ ಮಾಡುವವರು ಮತ್ತು, ಪುರುಷರೆಡೆಗೆ ಆಕರ್ಷಿತರಾಗುವವರು - ಅಂತಹ ಸಮಾಜ ಅಥವಾ ವ್ಯಕ್ತಿಗಳು ಇಬ್ಬರು ಪುರುಷರು ಅಥವಾ ಇಬ್ಬರು ಮಹಿಳೆಯರು ಸಂಬಂಧವನ್ನು ಬೆಳೆಸಬಹುದು ಎಂಬ ಕಲ್ಪನೆಯನ್ನು ಒಪ್ಪಿಕೊಳ್ಳುವುದು ಅನುಮಾನ. ಅಂತಹ ನಿರಾಕರಣೆಗೆ 377ನೇ ಪರಿಚ್ಛೇದದಂತಹ ಕಾನೂನಿನ ಬೆಂಬಲವೂ ಇದ್ದುಬಿಟ್ಟರೆ, ಸಮಲೈಂಗಿಕತೆಯು 'ಸಾಮಾನ್ಯ ಜೀವನ ವಿಧಾನದ" ದಿಂದ ಹೊರತಾದ ವೈಕಲ್ಯ ಎಂಬ ನಂಬಿಕೆ ಬಲಗೊಳ್ಳುತ್ತದೆ.

45. ಜಕಾರಿ ಎ. ಕ್ರಾಮರ್[182] ಅವರ ಉಪಯುಕ್ತ ಬರೆಹವೊಂದು, ಭಿನ್ನಲಿಂಗವಾದಿ ಸಮಾಜವು ಪುರುಷರು ಮತ್ತು ಮಹಿಳೆಯರು ವಿರುದ್ಧ ಲಿಂಗದವರೊಂದಿಗೆ ಮಾತ್ರ ಸಂಬಂಧ ಬೆಳಸಬೇಕು ಎಂದು ನಿರೀಕ್ಷಿಸುತ್ತದೆ ಎಂದು ಗಮನಿಸುತ್ತದೆ. ಆದ್ದರಿಂದ, ಸಮಲೈಂಗಿಕ ಸಂಬಂಧಗಳ ಅಸ್ತಿತ್ವವು, ಭಿನ್ನಲಿಂಗಶಾಹಿ ಸಾಮಾಜಿಕ ನಿರೀಕ್ಷೆಗಳಿಗೆ ವಿರುದ್ಧವಾಗಿರುತ್ತದೆ. ಕ್ರಾಮರ್ ಈ ಕೆಳಗಿನಂತೆ ವಾದಿಸುತ್ತಾರೆ:

> "ಸಮಲೈಂಗಿಕ ಪುರುಷru ಮತ್ತು ಸ್ತ್ರೀyara ವಿರುದ್ಧda ತಾರತಮ್ಯvu ಸಾಂಪ್ರದಾಯಿಕ ಲಿಂಗಾಧಾರಿತ ಪಾತ್ರಗಳನ್ನು ಬಲಪಡಿಸುತ್ತದೆ. ಸಮಲೈಂಗಿಕತೆಯು ಸಾಂಪ್ರದಾಯಿಕ ಲಿಂಗ ಪಾತ್ರಗಳಿಂದ

181 Elvia R. Arriola, “Gendered Inequality: Lesbians, Gays, and Feminist Legal Theory”, Berkeley Women’s Law Journal, Vol. 9 (1994), at pages 103-143.

182 Zachary A. Kramer, “The Ultimate Gender Stereotype: Equalizing Gender-Conforming and Gender-Nonconforming Homosexuals under Title VII”, University of Illinois Law Review (2004), at page 490.

ದೂರಸರಿಯುತ್ತದೆ ಮತ್ತು "ನೈಜ" ಪುರುಷರು ಮತ್ತು ಮಹಿಳೆಯರು ತಮ್ಮದೇ ಲಿಂಗದ ಸದಸ್ಯರೆಡೆಗೆ ಆಕರ್ಷಿತರಾಗಬಾರದು ಎಂಬ ಕಲ್ಪನೆಗಳು ಸಮಲೈಂಗಿಕ ಪುರುಷರು ಮತ್ತು ಸ್ತ್ರೀಯರ ಮೇಲೆ ನಡೆಯುವ ಲಿಂಗಾಧಾರಿತ ಅಪಮಾನಕ್ಕೆ ಪ್ರಾಥಮಿಕ ಬೆಂಬಲ ನೀಡುತ್ತದೆ. ಈ ಚಿತ್ರಣವು ಬೆನೆಟ್ ಕೇಪರ್ಸ್ ರವರ "ದ್ವಿಮಾನ ಲಿಂಗ ವ್ಯವಸ್ಥೆಯನ್ನು" ಮೇಲೆ ಅವಲಂಬಿsiದೆ

46. ಇಬ್ಬಗೆ ಲಿಂಗ ವ್ಯವಸ್ಥೆಯು "ಭಿನ್ನಲಿಂಗೀಯತೆಯ"ನ್ನು ಆಧರಿಸಿದೆ ಎಂದು ಬೆನೆಟ್ ಕೇಪರ್ಸ್ ವ್ಯಾಖ್ಯಾನಿಸುತ್ತಾರೆ, ಅಲ್ಲದೇ ಅದು "ಭಿನ್ನಲಿಂಗೀಯ ಚಟುವಟಿಕೆಯ ಸಾಂಸ್ತಿಕ ವಿಜೃಂಭಣೆ" ಎಂದು ವ್ಯಾಖ್ಯಾನಿಸುತ್ತಾರೆ. ವಾಸ್ತವವಾಗಿ ಕೇಪರ್ಸ್ ಈ ಕೆಳಗಿನಂತೆ ಸೂಚಿಸುತ್ತಾರೆ:

> "ಲೈಂಗಿಕ ನಿಲುವನ್ನಾಧರಿಸಿದ ತಾರತಮ್ಯವನ್ನು ಅನುಮೋದಿಸುವುದರಿಂದ ಸಮಲೈಂಗಿಕ ಸ್ತ್ರೀಪುರುಷರಷ್ಟೇ ಅಲ್ಲದೇ ಮಹಿಳೆಯರನ್ನೂ ಮತ್ತೊಬ್ಬರ ಅಧೀನದಲ್ಲಿರುವಂತೆ ಮಾಡಲಾಗುತ್ತದೆ.
>
> ಲಿಂಗ ಮತ್ತು ಲೈಂಗಿಕತೆಯಗಳ ದ್ವಿಮಾನ/ ಇಬ್ಬಗೆಯ ವ್ಯವಸ್ಥೆಯ್ಯನ್ನು ಅವಲಂಬಿಸುರುವ ಭಿನ್ನಲಿಂಗೀಯತೆಯು, ಲಿಂಗತಾರಾತಮ್ಯವನ್ನು ಎರಡು ರೀತಿಯಲ್ಲಿ ಬಲಪಡಿಸುತ್ತದೆ. ಮೊದಲನೆಯಗಾಗಿ, ದ್ವಿಮಾನ/ ಇಬ್ಬಗೆ ಲಿಂಗ ವ್ಯವಸ್ಥೆಗೆ ಅನುಗುಣವಾಗಿಲ್ಲದ ವ್ಯಕ್ತಿಗಳನ್ನು ದಂಡಿಸಿ ಮತ್ತು ಅದಕ್ಕೆ ಅನುಗುಣವಾಗಿರುವ ಸ್ತ್ರೀ ಪುರುಷರನ್ನು ಸನ್ಮಾನಿಸುವ ಮೂಲಕ, ಭಿನ್ನಲಿಂಗೀಯ ಅಧಿಪತ್ಯವು ನಿಷ್ಕ್ರಿಯ, ಪರಾವಲಂಬಿ ಮಹಿಳೆಯರನ್ನು ವೈಭವೀಕರಿಸಿ ಆ ಮೂಲಕ ಲಿಂಗತಾರತೆಮ್ಯಕ್ಕೆ ಕಾರಣವಾಗುವ ವ್ಯವಸ್ಥೆಯನ್ನು ಶಾಶ್ವತಗೊಳಿಸುತ್ತದೆ. ಎರಡನೆಯದಾಗಿ, ಭಿನ್ನಲಿಂಗೀಯತೆಯು ಲಿಂಗತಾರತೆಮ್ಯವನ್ನು ಬಲಪಡಿಸುತ್ತದೆ ಏಕೆಂದರೆ ಅದು ಸ್ತ್ರೀಯರನ್ನು ತನ್ನ ಶ್ರೇಣೀಯ ಧ್ರುವೀಯತೆಯ ಮೂಲಕ

> ಬಗ್ಗುಬಡಿಯುತ್ತದೆ. ಭಿನ್ನಲಿಂಗೀಯತೆಯು ಲಿಂಗಭೇದಭಾವವನ್ನು ಪ್ರತಿಪಾದಿಸುತ್ತದೆಯಾದ್ದರಿಂದ, ಪ್ರಮುಖ ಹಕ್ಕುಗಳನ್ನು, ಹೆಸರೇ ಸೂಚಿಸುವಂತೆ ಭಿನ್ನಲಿಂಗೀಯತೆ ಮತ್ತು ದ್ವಿಮಾನ ಲೈಂಗಿಕ ಪದ್ಧತಿಯನ್ನು ವಿರೋಧಿಸುವ ಸಮಲೈಂಗಿಕ ಸ್ತ್ರೀ-ಪುರುಷರಿಗೆ ವಿಸ್ತರಿಸುವ ಮೂಲಕ, ಲಿಂಗಭೇದಭಾವ ಮತ್ತು ಪುರುಷಾಧಿಕಾರಕ್ಕೆ ಸವಾಲು ಹಾಕಿದಂತಾಗುತ್ತದೆ[183]

ಬೇರೆ ರೀತಿಯಲ್ಲಿ ಹೇಳುವುದಾದರೆ, ತಾರತಮ್ಯವನ್ನು ಲೈಂಗಿಕ ನಿಲುವು ಮತ್ತು ಲಿಂಗದ ಆಧಾರದ ಮೇಲೆ ಪ್ರತ್ಯೇಕಿಸಲು ಸಾಧ್ಯವಿಲ್ಲ, ಏಕೆಂದರೆ ಲೈಂಗಿಕ ನಿಲುವನ್ನು ಆಧರಿಸಿದ ತಾರತಮ್ಯವು ಲೈಂಗಿಕತೆ ಮತ್ತು ಲಿಂಗದಾಧಾರಿತ ನಡವಳಿಕೆಗಳ ಬಗೆಗಿನ ರೂಢಮಾದರಿಗಳ ಬಗೆಗಿನ ನಂಬುಗೆಗಳನ್ನು ಪ್ರತಿಪಾದಿಸುತ್ತದೆ. ಇದನ್ನು ಮತ್ತಷ್ಟು ವಿವರಿಸುವ ಆಂಡ್ರ್ಯೂ ಕೊಪ್ಪೆಲ್ಮನ್ ಹೀಗೆ ವಾದಿಸುತ್ತಾರೆ:

> "ಹಾಗೆಯೇ, ಗುದಸಂಭೋಗದ ಕಾನೂನುಗಳು ಲೈಂಗಿಕತೆಯ ಆಧಾರದ ಮೇಲೆ ತಾರತಮ್ಯವನ್ನು ಎಸಗುತ್ತವೆ - ಉದಾಹರಣೆಗೆ, ಸಾಂಪ್ರದಾಯಿಕ ಲೈಂಗಿಕ ಪಾತ್ರಗಳನ್ನು ವಿಧಿಸುವ ಸಲುವಾಗಿi ಪುರುಷರಿಗೆ ಮಹಿಳೆಯರೊಂದಿಗೆ ಲೈಂಗಿಕ ಸಂಬಂಧ ಹೊಂದಲು ಅನುಮತಿಸುವುದು, ಆದರೆ ಮಹಿಳೆಯriಗೆ ಅನುಮತಿi ನೀಡದಿರುವುದು. ನ್ಯಾಯಾಲಯವು ಈ ಉದ್ದೇಶವನ್ನು ಇತರ ಸಂದರ್ಭಗಳಲ್ಲಿ ಒಪ್ಪಿಕೊಳ್ಳಲು ಆಗುವುದಿಲ್ಲ ಎಂದು ಹೇಳಿದೆ, ಏಕೆಂದರೆ ಇದು ಮಹಿಳೆಯರ ಮೇಲಿನ ದಬ್ಬಾಳಿಕೆಯನ್ನು ಶಾಶ್ವತಗೊಳಿಸುತ್ತದೆ. ಇದೇ ಕಾಳಜಿಯು ಗುದಸಂಭೋಗದ ಕಾನೂನುಗಳಿಗೆ ಹೆಚ್ಚಿನ ಬಲದೊಂದಿಗೆ ಅನ್ವಯವಾಗುತ್ತದೆ, ಏಕೆಂದರೆ, ಹೆಣ್ಣು ಮಕ್ಕಳ ಮೇಲಿನ ದಬ್ಬಾಳಿಕೆಯು ಯಾವುದರ ಮೇಲೆ ಅವಲಂಬಿತಬಾಗಿದೆಯೋ

[183] Bennett Capers, "Note, Sexual Orientation and Title VII", Columbia Law Review (1991), at pages 1159, 1160, 1163.

ಅಂತಹ ಲಿಂಗಾಧಾರಿತ ಧೃವೀಕರಣವನ್ನು ಉಳಿಸಿಕೊಳ್ಳುವುದೇ ಅವುಗಳ ಕೆಲಸ.[184]

ಆದ್ದರಿಂದ ಸಮಲೈಂಗಿಕರ ವಿರುದ್ಧದ ನಿಷೇಧವು "ಸಾಮಾಜಿಕ ಶ್ರೇಣಿಯಲ್ಲಿ ಆಳುವವರು ಮತ್ತು ಆಳಿಸಿಕೊಳ್ಳುವವರನ್ನು ಪ್ರತ್ಯೇಕಿಸುವ ಗಡಿಗಳನ್ನು ನಿರ್ಧರಿಸುತ್ತದೆ" ಎಂದು ಕೊಪ್ಪಲ್ಮ್ಯಾನ್ ಸೂಚಿಸುತ್ತಾರೆ[185]. ಈ ಪರಿಕಲ್ಪನೆಯನ್ನು ಮತ್ತಷ್ಟು ವಿಸ್ತರಿಸಲು ಅವರು ಅಂತರ್ಜನಾಂಗೀಯ ಸಂತಾನೋತ್ಪತ್ತಿಯ ಉಪಮೆಯನ್ನು ಬಳಸುತ್ತಾರೆ:

"ಸಮಲೈಂಗಿಕ ಕ್ರಿಯೆಗಳನ್ನು ಕಾನೂನುಬಾಹಿರಗೊಳಿಸುವ ಶಾಸನಗಳು ಸಾಂಪ್ರದಾಯಿಕ ಲೈಂಗಿಕ ಪಾತ್ರಗಳನ್ನು ಹೇರುತ್ತವೆಯೇ? ಮ್ಯಾಕ್ಲಾಫ್ಲಿನ್ [ ಮ್ಯಾಕ್ಲಾಲಿನ್ ವಿ ಫ್ಲೋರಿಡಾ ]ನ ಮಾತುಗಳು ಈ ಪ್ರಶ್ನೆಗೆ ಉತ್ತರವೊಂದನ್ನು ನೀಡಬಹುದು : ಅಪರಾಧದ ವ್ಯಾಖ್ಯಾನದ ಪ್ರಕಾರ, ಅದು ತಮ್ಮ ಲಿಂಗದ ಮಟ್ಟಿಗೆ ಅನುಚಿತವಾದ ಚಟುವಟಿಕೆಯಲ್ಲಿ ತೊಡಗುವುದನ್ನು ಸೂಚಿಸುತ್ತದೆ. ಆದರೆ ಸಂವಿಧಾನದ ಸಮಾನತೆಯ ಆದೇಶಗಳೆಡೆಗಿನ ಈ ಕಾನೂನುಗಳ ಅಸಹನೆಯು ಹೆಚ್ಚು ಆಳವಾಗಿದೆ. ವರ್ಣಸಂಕರಕ್ಕೆ (ಭಿನ್ನ ಜನಂಗಗಳ ನಡುವಿನ ಸಂತಾನೋತ್ಪತ್ತಿ) ಸಂಬಂಧಿಸಿದ ಶಾಸನಗಳಂತೆ, ಗುದಸಂಭೋಗದ ಶಾಸನಗಳು ಹುಟ್ಟನ್ನು ಆಧರಿಸಿರುವ ವ್ಯವಸ್ಥೆಯ ನೈತಿಕತೆಯನ್ನು ಪ್ರತಿಫಲಿಸುತ್ತವೆ ಮತ್ತು ಬಲಪಡಿಸುತ್ತವೆ. ಜನಾಂಗಗಳ ನಡುವಿನ ಸಂತಾನೋತ್ಪತ್ತಿಯ ಮೇಲಿನ ಬಿಳಿಯರ ಪ್ರಾಬಲ್ಯದ ಆಧಾರವಾಗಿದ್ದ ಜನಾಂಗಗಳ ಧ್ರುವೀಕರಣವನ್ನು ಸಂರಕ್ಷಿಸಿದಂತೆಯೇ, ಗುದಸಂಭೋಗದ

[184] Andrew Koppelman, “The Miscegenation Analogy: Sodomy Law as Sex Discrimination”, Yale Law Journal, Vol. 98 (1988), at page 147.

[185] Andrew Koppelman, “Why Discrimination against Lesbians and Gay Men is Sex Discrimination”, New York University Law Review, Vol. 69 (1994).

> ಮೇಲಿನ ನಿಷೇಧವು, ಹೆಣ್ಣಮಕ್ಕಳ ಗುಲಾಮಗಿರಿಗೆ ಆಧಾರವಾಗಿರುವ ಲಿಂಗಾಧಾರಿತ ಧ್ರುವೀಕರಣವನ್ನು ಸಂರಕ್ಷಿಸುತ್ತದೆ,

377ನೇ ಪರಿಚ್ಛೇದದಂತಹ ಶಾಸನಗಳು ಜನರ ಕೈಗೆ "ಗಂಡಸು ಹೀಗಿರಬಾರದು" ಎಂದು ಹೇಳುವ ಕಾನೂನನ್ನು ನೀಡಿ, "ಗಂಡಸು ಹೀಗೇ ಇರಬೇಕು" ಎಂದು ಹೇಳುವ ಅಧಿಕಾರವನ್ನು ನೀಡಿಬಿಡುತ್ತದೆ. ಹೀಗಾಗಿ, ಭಿನ್ನಲಿಂಗೀಯರಲ್ಲದವರ ಮೇಲೆ ಪರಿಣಾಮ ಬೀರುವ ಕಾನೂನುಗಳು ಪ್ರಚಲಿತ ರೂಢಮಾದರಿಗಳನ್ನು ಅವಲಂಬಿಸಿವೆ" ಇದಕ್ಕೆ ಉದಾಹರಣೆಯೆಂದರೆ, ಮಹಿಳೆಯರೊಂದಿಗೆ ಲೈಂಗಿಕ ಕ್ರಿಯೆ ನಡೆಸುವಾಗಿನ ಕೆಲ ನಡವಳಿಕೆಗಳು ಒಂದು ಲಿಂಗದ ಸದಸ್ಯರಿಗೆ ಮಾತ್ರ ಸೂಕ್ತವಾಗಿದೆ, ಇತರ ಲಿಂಗದವರಿಗಿಲ್ಲ ಎಂಬ ಜಾಳುಜಾಳಾದ ನಂಬುಗೆ

ಹೀಗಾಗಿ, ಎಲ್.ಜಿ.ಬಿ.ಟಿ ವ್ಯಕ್ತಿಗಳು ಹಾಗೂ ಲೈಂಗಿಕ ನಡವಳಿಕೆಯ ಬಗೆಗಿನ ಸಾಮಾಜದ ನಿರೀಕ್ಷೆಗಳಿಗೆ ಅನುಗುಣವಾಗಿ ನಡೆದುಕೊಳ್ಳದವರು ಲಿಂಗಾಧಾರಿತ ರೂಢಿಗತ ಪರಿಕಲ್ಪನೆಗಳನ್ನು ನಿರಾಕರಿಸುತ್ತಾರೆ ಎಂಬುದು ಇದರಿಂದ ಅರ್ಥವಾಗುತ್ತದೆ.

> ಲಿಂಗಾಧಾರಿತ ರೂಢಮಾದರಿಗಳ ರಚನೆಯು ಅಂತಿಮವಾಗಿ ಎರಡ ವಿರುದ್ಧ ಮತ್ತು ಪರಸ್ಪರ ಪ್ರತ್ಯೇಕವಾಗಿರುವ ಜೈವಿಕ ಲಿಂಗಳಿವೆ ಎಂಬ ಉಹೆಯನ್ನು ಅವಲಂಬಿಸಿದೆ. ಭಿನ್ನಲಿಂಗೀಯತೆಯ ಕಲ್ಪನೆಯೂ ಈ ಲಿಂಗಾಧಾರಿತ ಇಬ್ಬಗೆ ಪದ್ಧತಿಯ ಕೇಂದ್ರಬಿಂದುವಾಗಿ. ಪುರುಷಪ್ರಧಾನ ಸನ್ನಿವೇಷದಲ್ಲಿ, ಈ ನಿಯಮಗಳನ್ನು ಮೀರುವ ಕೆಲವರು ಹೀಗಿರುತ್ತಾರೆ: ಮಹಿಳೆಯೊಬ್ಬಳು ತನ್ನ ಪುರುಷ ಲೈಂಗಿಕ ಸಂಗಾತಿಯನ್ನು ತ್ಯಜಿಸುವುದು ಆಥವಾ ಹುಟ್ಟಿನಿಂದ ಹೆಣ್ಣಾಗಿರುವ ವ್ಯಕ್ತಿಯೊಬ್ಬರು ತಮ್ಮ ಹೆಣ್ತನವನ್ನು ತ್ಯಜಿಸುವುದು, ಮತ್ತು ಆ ಮೂಲಕ ಪಿತೃಪ್ರಧಾನ ವ್ಯವಸ್ಥೆ ಮತ್ತು ಪುರುಷ ಮೇಲ್ವಿಚಾರಣೆ ಮತ್ತು ನಿಯಂತ್ರಣದ ಎಲ್ಲಾ ವಿಧಗಳನ್ನು ತಿರಸ್ಕರಿಸುವುದು ಹಾಗೂ ಹುಟ್ಟಿನಿಂದ ಗಂಡಾಗಿರುವ ವ್ಯಕ್ತಿಯು ಹೆಣ್ತನವನ್ನು ಅಪ್ಪಿಕೊಳ್ಳುವುದು ಮತ್ತು ಆ ಮೂಲಕ

ಕೆಳಮಟ್ಟದ್ದೆಂದು ಪರಿಗಣಿಸಲಾಗುವ ಹೆಣ್ತಾನಕ್ಕಾಗಿ, ತನ್ನ ಸೌಕರ್ಯಗಳನ್ನು ಬಿಟ್ಟುಕೊಡುವುದು. [186]

ಲಿಂಗಾಧಾರಿತ ತಾರತಮ್ಯದ ನಿಷೇಧದ ಉದ್ದೇಶ ವ್ಯಕ್ತಿಗಳನ್ನು ಅವರ ಲಿಂಗದ ಆಧಾರದಲ್ಲಿ ಕಾನೂನಾತ್ಮಕವಾಗಿ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ತೊಂದರೆಗೊಳಪಡಿಸುವ ಸಾಂಪ್ರದಾಯಿಕ ಅಭ್ಯಾಸಗಳನ್ನು ಬದಲಿಸುವುದೇ ಆಗಿದೆ. ಸಮಲೈಂಗಿಕರ ಹಕ್ಕುಗಳಿಗಾಗಿನ ಹೋರಾಟವು ನಿಸ್ಸಂದೇಹವಾಗಿ ಸಮಲೈಂಗಿಕರಿಗೆ ನ್ಯಾಯ ಒದಗಿಸುವ ಉದ್ದೇಶವನ್ನು ಹೊಂದಿದೆ. ಆದರೆ ಈ ಹೋರಾಟವು ಸಮಲೈಂಗಿಕರ ಸಮಸ್ಯೆಗಳನ್ನು ಮೀರಿ ಬೆಳೆಯುತ್ತದೆ. ಸಮಲೈಂಗಿಕರ ಮೇಲಿನ ತಾರತಮ್ಯವನ್ನು ಕೊನೆಗೊಳ್ಳುವ ಪ್ರಯತ್ನವು, ಲಿಂಗಾಧಾರಿತ ಅಸಮಾನತೆಯನ್ನು ಕೊನೆಗೊಳಿಸುವ ದೊಡ್ಡ ಹೋರಾಟದ ಮುಖ್ಯಾ ಭಾಗ ಎಂಬುದನ್ನು ಅರ್ಥಮಾಡಿಕೊಳ್ಳಬೇಕು.

ಸಮಲೈಂಗಿಕ ಸ್ತ್ರೀ (ಲೆಸ್ಬಿಯನ್) ಆಗಿರುವುದೆಂದರೆ, ಎಲ್ಲೆಯನ್ನು ಮೀರಿದವಳಾಗಿರುವುದು, ಪುರುಷನ ಮೇಲಿನ ಲೈಂಗಿಕ/ಆರ್ಥಿಕ ಅವಲಂಬನೆಯಿಂದ ದುರವಾದವಳಗಿರುವುದು, ಹೆಣ್ಣಾಗಿ ಗುರುತಿಸಲ್ಪಡುವವಳು ಎಂದು ಗ್ರಹಿಸಲ್ಪಡುವುದಕ್ಕೆ (ಹಣೆಪಟ್ಟಿ ಹಚ್ಚಲ್ಪಡುವುದಕ್ಕೆ) ಸಮ. ಲೆಸ್ಬಿಯನ್ ಒಬ್ಬರನ್ನು ಪುರುಷನಿಲ್ಲದೆ ಬದುಕಬಲ್ಲವಳು ಮತ್ತು ಆ ಕಾರಣದಿಂದ (ಅತಾರಿಕವಾಗಿ) ಪುರುಷ ವಿರುದ್ಧವಿರುವವಳು ಎಂದು ಪರಿಗಣಿಸಲಾಗುತ್ತದೆ. ಲೆಸ್ಬಿಯನ್ ಒಬ್ಬಳನ್ನು ಆಕೆ ಸಂಗತಿಗಳ ಒಪ್ಪಿತ ಮತ್ತು ದೈನಂದಿನ ವ್ಯವಸ್ಥೆಯಿಂದ ಹೊರಗಿರುವವಳು ಎಂದು ಗ್ರಹಿಸಲಾಗುತ್ತದೆ. ಅವಳನ್ನು ತನ್ನ ರಕ್ಷಣೆಗೆ ಯಾವುದೇ ಸಾಮಾಜಿಕ ಸಂಸ್ಥೆಗಳಿಲ್ಲದಿರುವವಳಂತೆ, ಪುರುಷ ವಕ್ತಿಗಳ

[186] The Relationship between Homophobia, Transphobia, and Women's Access to Justice for the Forthcoming CEDAW General Recommendation on Women's Access to Justice. Submitted to the United Nations Committee for the Elimination of All Forms of Discrimination against Women (2013).

ರಕ್ಷಣೆಯ ಸವಲತ್ತು ಇಲ್ಲದಿರುವವಳಂತೆ ನೋಡಲಾಗುತ್ತದೆ. ಲೆಸ್ಬಿಯನ್ ಒಬ್ಬಳನ್ನು ವಿಭಕ್ತ ಕುಟುಂಬ,. ಪುರುಷರ ಪ್ರಾಬಲ್ಯ ಮತ್ತು ನಿಯಂತ್ರಣ, ಮತ್ತು ಲಿಂಗತಾರತಮ್ಯದ ಮೂಲಕ್ಕೆ ಅಪಾಯವನ್ನೊಡ್ಡುವವಳೆಂದು ಗ್ರಹಿಸಲಾಗುತ್ತದೆ187.

15ನೇ ಕಲಮಿನ ಸತ್ವದೊಂದಿಗೆ ಅದಕ್ಕಿರುವ ಸಂಬಂಧದ ಕುರಿತು ತರುಣಾಭ್ ಖೈತಾನ್ ಬರೆಯುತ್ತಾರೆ:

ರಾಜನೈತಿಕವಾಗಿ ಶಕ್ತಿಹೀನವಾಗಿರುವ ಅಲ್ಪಸಂಖ್ಯಾತರ ಸಮುದಾಯದ ಮೇಲೆ, ಕೇವಲ ಬಹುಸಂಖ್ಯಾತರ ಪೂರ್ವಾಗ್ರಹಗಳನ್ನಾಧರಿಸಿ ತಾರತಮ್ಯ ಎಸಗುವ ಪ್ರಕರಣದ ಪ್ರಾಮುಖ್ಯ ಏಲ್.ಜಿ.ಬಿ.ಟಿ. ಹಕ್ಕುಗಳ ಸಮಸ್ಯೆಯನ್ನು ಮೀರಿರುವಂಥದ್ದು. ...ಭಾರತೀಯ ಸಾಂವಿಧಾನಿಕ ಪ್ರಜಾತಂತ್ರವು ಕಾವಲುದಾರಿಯಲ್ಲಿದೆ. ...ಒಳಗೊಳ್ಳುವಿಕೆ ಮತ್ತು ಬಹುತ್ವವು 15ನೇ ಕಲಮಿನ ಕೇಂದ್ರಬಿಂದುವಾಗಿವೆ ಅತ್ತು ಸದರಿ ಕಲಮನ್ನು ನಮ್ಮ ಸಾಂವಿಧಾನಿಕ ಅಸ್ಮಿತೆಯಲ್ಲಿ ಈ ಪರಿಕಲ್ಪನೆಗಳ ಪ್ರಾಮುಖ್ಯತೆಗೆ ನ್ಯಾಯಾಲಯಗಳು ತಮ್ಮ ಸಾಂಸ್ಥಿಕ ಸಾಮ್ಸ್ಥಿಕ ಅಧಿಕಾರವನ್ನೊದಗಿಸುವಂತೆ ಮಾಡುವ ಮಾಧ್ಯಮವಾಗಿ ಬಳಸಬಹುದು[188].

47. ಪುರುಷ ಮತ್ತು ಸ್ತ್ರೀಯರ ನಡುವಿನ ಭಿನ್ನತೆಯನ್ನು ಧಿಕ್ಕರಿಸಬಲ್ಲ ಸಂಬಂಧಗಳು ಸಾಮಾಜ ಹೇರುವ ಲಿಂಗ ಅಸಮಾನತೆಯನ್ನು ಉಳಿಸಿಕೊಳ್ಳಲು ಅಗತ್ಯವಾಗಿರುತ್ತವೆ. ಗಂಡು ಹೆಣ್ಣುಗಳ ನಡುವಿನ ಗೆರೆಯನ್ನು ಪ್ರಶ್ನಿಸುವ ಸಂಬಂಧಗಳನ್ನು ಶೋಷಣೆಗೆ ಗುರಿಪಡಿಸಲಾಗುತ್ತದೆ ಮತ್ತು 377ನೇ ಪರಿಚ್ಛೇದ ಇದಕ್ಕೆ ಅನುಮತಿ ನೀಡುತ್ತದೆ. ಪರಸ್ಪರ ಆರೈಕೆ ಮತ್ತು ಪ್ರತಿಸ್ಪಂದನೆಯನ್ನು ಆಧರಿಸಿರುವ ಸಮುದಾಯಗಳನ್ನು ಕಟ್ಟುವ ಸಂದರ್ಭದಲ್ಲಿ ಸಮಾಜದ ನಿರ್ಧಿಷ್ಟ ಲಿಂಗಾಧಾರಿತ ಪಾತ್ರಗಳನ್ನು ಪ್ರಶ್ನಿಸುವ ಪೀಡಿತ

[187] Suzanne Pharr, Homophobia: A weapon of Sexism, Chardon Press (1988), at page18.

[188] Tarunabh Khaitan, “Inclusive Pluralism or Majoritarian Nationalism: Article 15, Section 377 and Who We Really Are”, Indian Constitutional Law and Philosophy (2018).

ಸಮುದಾಯದ ಸದಸ್ಯರು, ವ್ಯಕ್ತಿಗತ ಸಂಬಂಧಗಳು, ಮತ್ತು ಅವುಗಳ ವಿಸ್ತರಣೆಯದ ಸಮಾಜ ಕಾರ್ಯನಿರ್ವಹಿಸಬೇಕಿದ್ದರೆ, ಅವುಗಳನ್ನು ಶ್ರೇಣೀಕೃತವಾದ ಲಿಂಗಾಧಾರಿತ ಪಾತ್ರಗಳ ಆಧಾರದಲ್ಲಿ ವಿಭಜಿಸಬೇಕು ಎಂಬ ಪರಿಕಲ್ಪನೆಗೆ ಸವಾಲೆಸೆಯುತ್ತಾರೆ. ಒಂದು ಸಮುದಾಯದ ಸದಸ್ಯರನ್ನು, ಹಗೆತನ ಮತ್ತು ಬಹಿಷ್ಕಾರಕ್ಕೆ ಗುರಿಪಡಿಸಿದಾಗ, ಅವರು ಸಾರ್ವಜನಿಕ ಅಭಿವ್ಯಕ್ತಿ ಮತ್ತು ದೃಷ್ಟಿಯಿಂದ ಮರೆಯಾಗಿ ಅಡಗಿಕೊಳ್ಳುವಂತಾಗುತ್ತದೆ. ಸಮುದಾಯದ ಸದಸ್ಯರು ಎದುರಿಸುತ್ತಿರುವ ಈ ತಾರತಮ್ಯದಿಂದಾಗಿ ಅವರ ಧ್ವನಿಗಳು ಮೌನವಾಗಿ ಅದರ ಪರಿಣಾಮವಾಗಿ ಅವರು ಅದೃಶ್ಯರಾಗುವಂತಾಗಿ, ಅವರ ಔದ್ಯೋಗಿಕ ಪಾಲ್ಗೊಳ್ಳುವಿಕೆಗೆ ವ್ಯವಸ್ಥಿತ ಮತ್ತು ಉದ್ದೇಶಪೂರ್ವಕ ಅಡೆತಡೆಯುಂಟಾಗಿ ನೈಜ ಅರ್ಥದ ಸಮಾನತೆಯನ್ನು ಧಿಕ್ಕರಿಸಿದಂತಾಗುತ್ತದೆ. ಅಂತರ್‌ಜನಾಗೀಯ ಸಂಬಂಧಗಳ ಮೇಲಿದ್ದ ನಿರ್ಬಂಧಕ್ಕೆ ಜನಾಂಗಗಳನ್ನು ಧೃವೀಕರಿಸಿ ಬಿಳಿಯರ ಪರಮಾಧಿಕಾರವನ್ನು ಉಳಿಸಿಕೊಳ್ಳುವ ಉದ್ದೇಶವಿದ್ದಂತೆ, ಸಮಲೈಂಗಿಕತೆಯ ಮೇಲಿನ ನಿಷೇಧಕ್ಕೆ ಲಿಂಗ ಮತ್ತು ಲೈಂಗಿಕತೆಗಳನ್ನು ಆಧರಿಸಿರುವ ಸಾಮಾಜಿಕ ನಿಯಂತ್ರಣದ ದೊಡ್ಡ ವ್ಯವಸ್ಥೆಯನ್ನು ರೂಪಿಸುವ ಉದ್ದೇಶವಿದೆ.

48. ಅಂತಾರಾಷ್ಟ್ರೀಯ ನ್ಯಾಯಶಾಸ್ತ್ರಜ್ಞರ ಆಯೋಗದ[189] ವರದಿಯು ಪೀಡಿತ ಸಮುದಾಯವ 377ನೇ ಪರಿಚ್ಛೇದದ ದೆಸೆಯಿಂದ ಎದುರಿಸಿರುವ ಶೋಷಣೆಯನ್ನು ದಾಖಲಿಸಿದೆ. ಆ ವರದಿಯು 377ನೇ ಪರಿಚ್ಛೇದದ ಅಡಿಯಲ್ಲಿ ಜನರ ಮೇಲೆ ನಡೆದಿರುವ ಹಲವಾರು ಶೋಷಣೆಗಳನ್ನು ದಾಖಲಿಸಿದೆ. ನ್ಯಾಷನಲ್ ಕ್ರೈಂ ರೆಕಾರ್ಡ್ ಬ್ಯೂರೋದ ಪ್ರಕಾರ, 2104 ರಲ್ಲಿ 1279 ವ್ಯಕ್ತಿಗಳು ಮತ್ತು 2015 ರಲ್ಲಿ 1491 ವ್ಯಕ್ತಿಗಳನ್ನು 377ನೇ ಪರಿಚ್ಛೇದದಡಿಯಲ್ಲಿ ಬಂಧಿಸಲಾಗಿದೆ.

377ನೇ ಪರಿಚ್ಛೇದದಡಿಯಲ್ಲಿ ಕಾನೂನು ಕಾಪಡುವ ಸಂಸ್ಥೆಗಳು ನಡೆಸುವ ಅತ್ಯಾಕಾರದ ನಿರ್ದರ್ಶಣಗಳನ್ನು ದಾಖಲಿಸಿರುವ ಈ ವರದಿಯೂ 377 ನೀ ಪರಿಚ್ಛೇದದ ಅಡಿಯಲ್ಲಿ ಶಿಕ್ಷೆಗೊಳಪಡಿಸಿದರೆ ಅದಕ್ಕೆ ಪರಿಹಾರವಿರುವುದಿಲ್ಲ ಎಂಬುದನ್ನು ವಿವರಿಸುತ್ತದೆ. ಬೆದರಿಕೆ, ದೌರ್ಜನ್ಯ ಮತ್ತು ದೈಹಿಕ ಪಾತಕಗಳಂತಹ ಕೃತ್ಯಗಳು ದಂಡನೆಯ

[189] International Commission of Jurists, "Unnatural Offences" Obstacles to Justice in India Based on Sexual Orientation and Gender Identity (2017).

ಕಾನೂನುಗಳಡಿಯಲ್ಲಿ ಶಿಕ್ಷಾರ್ಹವಾಗಿದ್ದರೂ, ಪ್ರತಿಹಿಂಸೆ ಮತ್ತು ಕಿರುಕುಳದ ಭಯದಲ್ಲಿ ಆ ಸಮುದಾಯಗಳು ಅಂತಹ ವಿಧಾನಗಳ ಮೂಲಕ ಪರಿಹಾರವನ್ನು ಪಡೆಯುವ ಬಗ್ಗೆ ಯೋಚಿಸುವುದಿಲ್ಲ.

49. ಪ್ರಸ್ತುತ ಪ್ರಕರಣ ಸರಣಿಗಳಲ್ಲಿ ಅರ್ಜಿದಾರರು ಭೇದಭಾವ, ಪೂರ್ವಾಗ್ರಹ ಮತ್ತು ದ್ವೇಷಗಳನ್ನು ಸಹಿಸಿಕೊಂಡಿರುವುದನ್ನು ನೈಜವಾಗಿ ನಿರೂಪಿಸಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿರುವ **ಅನ್ವೇಶ್ ಪೊಕ್ಕುಳೂರಿ v. ಭಾರತ ಸರ್ಕಾರ**[190], ಪ್ರಕ್ರಣದಲ್ಲಿ, ಅರ್ಜಿದಾರರು ಎಲ್.ಜಿ.ಬಿ.ಟಿ.ಕ್ಯು ಸಮುದಾಯಕ್ಕೆ ಸೇರಿದವರಾಗಿರುತ್ತಾರೆ, ಮತ್ತು ಅವರಲ್ಲಿ ಪ್ರತಿಯೊಬ್ಬರೂ ತಮ್ಮ ಕ್ಷೇತ್ರಗಳಲ್ಲಿ ಶ್ರೇಷ್ಠರಾಗಿರುವವರಾಗಿದ್ದಾರೆ. ಆದರೆ ಅವರು 377ನೇ ಪರಿಚ್ಛೇದದ ಜಾರಿಯಿಂದ ಅಪಾರವಾಗಿ ನೊಂದಿದ್ದಾರೆ. ಸಮುದಾಯದಲ್ಲಿ ಬೆಳೆಯುತ್ತಿರುವ ಒಬ್ಬಂಟಿತನವನ್ನು ಎದುರಿಸಲು, "ಪ್ರವೃತ್ತಿ" ಎಂಬ ರಹಸ್ಯ ಒಕ್ಕೂಟವನ್ನು ಸ್ಥಾಪಿಸಿಕೊಂಡಿದ್ದಾರೆ. ಈ ಗುಂಪು ಎಲ್.ಜಿ.ಬಿ.ಟಿ.ಕ್ಯೂ ಸಮುದಾಯದ ವ್ಯಕ್ತಿಗಳನ್ನು ಒಳಗೊಂಡಿದೆ ಮತ್ತು ಈ ಗುಂಪಿನಲ್ಲಿ ಈ ದೇಶದ ಯಾವುದೇ ಐ.ಐ.ಟಿ.ಯ ಆವರಣದಲ್ಲಿ ಒಮ್ಮೆಯಾದರೂ ನೆಲೆಸಿದ್ದ ಬೋಧಕ ಸಿಬ್ಬಂದಿ, ಹಾಲೀ ಮತ್ತು ಹಳೆಯ ವಿದ್ಯಾರ್ಥಿಗಳು, ಮತ್ತು ಇತರ ಸದಸ್ಯರಿದ್ದಾರೆ. ಈ ಗುಂಪನ್ನು 2012 ರಲ್ಲಿ ಸದಸ್ಯರು ತಮ್ಮ ಅಸ್ಮಿತೆಯನ್ನು ಒಪ್ಪಿಕೊಳ್ಳುವಾಗ ಅನುಭವಿಸುವ ಒಂಟಿತನ ಮತ್ತು ತೊಂದರೆಗಳನ್ನು ಎದುರಿಸುವುದಕ್ಕೆ ನೆರವಾಗಲು ಮತ್ತು ಹಲವು ವಿಚಾರಗಳ ಬಗ್ಗೆ ತಿಳಿದುಕೊಳ್ಳಲು ಮುಕ್ತ ಚರ್ಚೆಗಳನ್ನು ನಡೆಸುವುದಕಾಗಿ ರಚಿಸಲಾಯಿತು.

50. ಪ್ರಸ್ತುತ ಅರ್ಜಿದಾರರಲ್ಲಿ, ಹದಿನಾರು ಮಂದಿ ಸಮಲೈಂಗಿಕ ಪುರುಷರು, ಇಬ್ಬರು ಉಭಯಲಿಂಗಾಸಕ್ತ ಮಹಿಳೆಯರು ಮತ್ತು ಒಬ್ಬ ಉಭಯಲಿಂಗಾಸಕ್ತ ಪುರುಷರಿದ್ದಾರೆ. ಅರ್ಜಿದಾರರಲ್ಲಿ ಒಬ್ಬರು ಲಿಂಗ ಪರಿವರ್ತಿತ ಮಹಿಳೆಯಿದ್ದಾರೆ. ಮೂರು ಅರ್ಜಿದಾರರು ತಾವು ಅಪಾರ ಮಾನಸಿಕ ಸಂಕಟಗಳನ್ನು ಅನುಭವಿಸಿ ಆತ್ಮಹತ್ಯೆಗೆ ಯತ್ನಿಸುವ ಹಂತಕ್ಕೆ ಹೋಗಿದ್ದರ ಬಗ್ಗೆ ವಿವರಿಸುತ್ತಾರೆ. ಇಬ್ಬರು ಅರ್ಜಿದಾರರು ತಮ್ಮ ಲೈಂಗಿಕ ಅಸ್ಮಿತೆಯ ಕುರಿತು ಮಾತನಾಡುವುದು ಕಷ್ಟಕರವಾಗಿದ್ದು, ಅದಕ್ಕೆ ಅವರ ಕುಟುಂಬದವರ ಬೆಂಬಲವಿಲ್ಲವೆಂದೂ, ಅವರ ಲೈಂಗಿಕ ನಿಲುವಿನ ಬಗ್ಗೆ ಕುಟುಂಬದವರಿಗೆ ತಿಳಿದಾಗ ಅವರಲ್ಲಿನ "ರೋಗ" ಎಂದು ಕರೆಯಲ್ಪಡುವ ವಿಚಾರವನ್ನು ಗುಣಪಡಿಸುವುದಕ್ಕಾಗಿ ಅವರುಗಳನ್ನು ಮನೋವೈದ್ಯಕೀಯ ಚಿಕಿತ್ಸೆ

[190] Writ Petition (Criminal) No. 121 of 2018.

ಕೊಡಿಸಲು ಕರೆದುಕೊಂದು ಹೋಗಿದ್ದಾಗಿಯೂ ವಿವರಿಸುತ್ತಾರೆ. ಮೂವರು ಅರ್ಜಿದಾರರ ಕುಟುಂಬಗಳು ಅವರ ಲೈಂಗಿಕ ಗುರುತನ್ನು ನಿರ್ಲಕ್ಷಿಸಿಬಿಟ್ಟಿವೆ. ಅವರಲ್ಲೊಬ್ಬರು ಪ್ರತಿ ವರ್ಷ 4,00,000 ಕ್ಕೂ ಹೆಚ್ಚು ಜನರು ಬರೆಯುವ ಒಂದು ಪರೀಕ್ಷೆಯನ್ನು ಬರೆದು ಭಾರತೀಯ ಆಡಳಿತ ಸೇವೆಯ ಆಧಿಕಾರಿ ಅಧಿಕಾರಿಯಾಗಲು ಅರ್ಹರಾಗಿದ್ದಾರೆ. ಆದರೆ ತಮ್ಮ ಲೈಂಗಿಕತೆಯ ಕಾರಣದಿಂದ ತಾರತಮ್ಯವನ್ನು ಎದುರಿಸಬೇಕಾಗುತ್ತದೆ ಎಂಬ ಆತಂಕದಿಂದಾಗಿ ಅವರ ತಮ್ಮ ಆ ಕನಸನ್ನು ಕೈಬಿಡಲು ನಿರ್ಧರಿಸಾಬೇಕಾಯಿತು. ಇವರಲ್ಲಿ ಕೆಲವರು ಖಿನ್ನತೆಯನ್ನು ಅನುಭವಿಸಿದ್ದಾರೆ; ಇತರರು ಬೆಳೆಯುತ್ತಿರುವಾಗ ಓದಿನ ಮೇಲಿನ ಗಮನವನ್ನು ಹರಿಸಲಾಗದ ಸಮಸ್ಯೆಯನ್ನು ಎದುರಿಸಿದ್ದಾರೆ; ಅವರಲ್ಲಿ ಒಬ್ಬರು ವಾಸಮಾಡುತ್ತಿದ್ದ ಹೆಣುಮಕ್ಕಳ ವಿದ್ಯಾರ್ಥಿನಿಲಯದ ಅಧಿಕಾರಿಗಳು ಅವರ ಅಸ್ಮಿತೆಯನ್ನು ಪ್ರಶ್ನಿಸಿದ್ದರಿಂದ, ಅವರು ಪ್ರೌಢಶಾಲೆಯಿಂದ ಬಲವಂತವಾಗಿ ಹೊರಬರಬೇಕಾಯಿತು. ಅವರಲ್ಲಿ ಒಬ್ಬರ ಲೈಂಗಿಕತೆಯನ್ನು ನಿರ್ಲಕ್ಷಿಸಿದ ಹೆತ್ತವರು, ಅವರು ಮಹಿಳೆಯನ್ನು ಮದುವೆಯಾಗಬೇಕೆಂದು ಸೂಚಿಸಿದರು. 377ನೇ ಪರಿಚ್ಛೇದ ಸೃಷ್ಟಿಸಿರುವ ವಾತಾವರಣದ ಹಿನ್ನೆಯಲ್ಲಿ ತಮ್ಮ ಸಂಬಂಧಗಳನ್ನು ಮುಂದುವರೆಸಬೇಕೆ ಭೇಡವೇ ಎಂದು ಕೂಡಾ ಕೆಲವರು ಆಲೋಚಿಸಿದ್ದಾರೆ. ಇವರಲ್ಲಿ ಹಲವಾರು ಎಲ್.ಜಿ.ಬಿ.ಟಿ ಸಮುದಾಯವನ್ನು ರಕ್ಷಿಸುವ ನೀತಿಗಳನ್ನು ಹೊಂದಿರುವ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಾರೆ. ತಮ್ಮ ವೈಯಕ್ತಿಕ ಜೀವನದಲ್ಲಿ ಇಷ್ಟೆಲ್ಲಾ ನೋವನ್ನು ಎದುರಿಸಿರುವ ಅರ್ಜಿದಾರರು, 377 ನೇ ಪರಿಚ್ಛೇದದ ಉಪಯೋಗ ಮುಂದುವರೆದಲ್ಲಿ ತಮಗಾದ ಅನುಭವಗಳು ತಡೆಯಿಲ್ಲದೇ ಮುಂದುವರೆಯಿತ್ತವೆ ಎಂದು ಆರಿಕೆ ಮಾಡ್ಡಿಕೊಳ್ಳುತ್ತಾರೆ.

51. ಈ ಮೊಕದ್ದಮೆಗೆ ಸಂಬಂಧಿಸಿರುವ **ನವತೇಜ್ ಜೋಹರ್ ವಿ. ಭಾರತ ಸರ್ಕಾರ**[191], ಪ್ರಕರಣದಲ್ಲಿ ಅರ್ಜಿದಾರರು ತಾರತಮ್ಯ ಮತ್ತು ಬಹಿಷ್ಕಾರದ ಹಲವಾರು ನಿದರ್ಶನಗಳನ್ನು ಉಲ್ಲೇಖಿಸಿದ್ದಾರೆ. ಅಂತಹ ಒಂದು ನಿದರ್ಶನದ ವಾಸ್ತವಿಕ ಚಿತ್ರಣ ಕೆಳಕಂಡಂತಿದೆ:

> ಸಮಾಜ, ಗೆಳೆಯರು ಮತ್ತು ನನ್ನ ಕುಟುಂಬ ನನ್ನ ಲೈಂಗಿಕತೆಯನ್ನು ಒಪ್ಪಿಕೊಂಡಿದ್ದಾರೆಯಾದರೂ, ನನಗೆ ನಿರಂತರವಾಗಿ ಪೋಲಿಸರಿಂದ ಬಂಧನ

[191] Writ Petition (Criminal) No. 76 of 2016.

ಮತ್ತು ಹಿಂಸೆಗೊಳಗಾಗುವ ಭಯವಿರುವುದರಿಂದ ನಾನು ನನ್ನ ಅಸ್ಮಿತೆ ಮತ್ತು ಸಂಬಂಧಗಳ ಬಗೆಗೆ ಸಂಪೂರ್ಣವಾಗಿ ಮುಕ್ತವಾಗಿರಲು ಆಗುವುದಿಲ್ಲ . ಈ ಪರಿಚ್ಛೇದ ಅಸ್ತಿತ್ವದಲ್ಲಿ ಇಲ್ಲದೇ ಇದ್ದಿದ್ದರೆ, ನಾನು ಎದುರಿಸಿದ ಪೂರ್ವಗ್ರಹ ಮತ್ತು ಅವಾಮನಗಳು ಬಹಳಷ್ಟು ಕಡಿಮೆಯಾಗಿರುತ್ತಿತ್ತು…ನನ್ನಂತಹ ಸಮಲೈಂಗಿಕ ವಕ್ತಿಗಳನ್ನು ಕೇವಲ ಪಾತಕಿಗಳೆಂದೇ ಪರಿಗಣಿಸಲಾಗುತ್ತದೆ ಎಂಬ ವಿಚಾರವು ನನ್ನಲ್ಲಿ ತೀವ್ರವಾದ ಅಸಮಾಧಾನವನ್ನುಂಟು ಮಾಡುತ್ತದೆ ಮತ್ತು ನನಗೆ ದೊರೆಯಬೇಕಾದ ಘನತೆ ತ್ತು ಗೌರವವನ್ನು ನನ್ನಿಂದ ಕಸಿದುಕೊಳ್ಳುತ್ತದೆ[192].

377ನೇ ಪರಿಚ್ಛೇದದ ಗೋಚರವಾಗುವ ಸಾಮಾಜಿಕ ಪರಿಣಾಮಗಳ ಹೊರತಾಗಿ ಅಂತಹ ನಿಬಂಧನೆಯನ್ನು ಮುಂದುವರೆಸಿದರೆ ಒಂದು ಬಗೆಯ ಸಂಸ್ಕೃತಿಯನ್ನು ಬೆಳೆಸಿದಂತಾಗುತ್ತದೆ. 377ನೇ ಪರಿಚ್ಛೇದ ಪ್ರೋತ್ಸಾಹಿಸುವ ರೂಢೀಗತ ಪರಿಕಲ್ಪನೆಯು ಇತರ ವ್ಯಕ್ತಿಗಳು ಮತ್ತು ಸರ್ಕಾರೇತರ ಸಂಸ್ಥೆಗಳು ಎಲ್.ಜಿ.ಬಿ.ಟಿ ಸಮುದಾಯವನ್ನು ನಡೆಸಿಕೊಳ್ಳುವ ರೀತಿಯ ಮೇಲೆ ಮೇಲೆ ಪರಿಣಾಮ ಬೀರುತ್ತದೆ. ಈ ನಡವಳಿಕೆಯನ್ನು 377ನೇ ಪರಿಚ್ಛೇದ ಅನುಮೋದಿಸದಿದ್ದರೂ, ಆ ಕಾನೂನು ಅಸ್ತಿತ್ವದಲ್ಲಿರುವುದರಿಂದ ಸಮಲೈಂಗಿಕ ದ್ವೇಷದ ವರ್ತನೆಗಳನ್ನು ಪ್ರತಿಪಾದಿಸಿ, ದಬ್ಬಾಳಿಕೆಗೆ ಬಲಿಯಾದವರು ನ್ಯಾಯ ಪಡೆಯುವುದು ಅಸಾಧ್ಯವಾಗುತ್ತದೆ. ಹೀಗಾಗಿ, ಇಂತಹ ಕಾಯ್ದೆಯನ್ನು ಉತ್ಸಾಹದಿಂದ ಜಾರಿಗೊಳಿಸಿದಾಗ, ಅದರ ಸಾಮಾಜಿಕ ಪರಿಣಾಮದಿಂದಾಗಿ ಮೌಖಿಕ ಕಿರುಕುಳಕ್ಕೆ ಅನುಮತಿಯಿತ್ತಾಂತಾಗಿ, ಕೌಟುಂಬದ ಭಯ, ಸಾರ್ವಜನಿಕ ಸ್ಥಳ ಪ್ರವೇಶಕ್ಕೆ ನಿರ್ಬಂಧ ಮತ್ತು ಸುರಕ್ಷಿತ ಸ್ಥಳಗಳ ಕೊರತೆಯಂತಹ ಸಮಸ್ಯೆಗಳು ಉಂಟಾಗುತ್ತವೆ. ಇದರಿಂದಾಗಿ ವ್ಯಕ್ತಿಗಳು ತಮ್ಮತನವನ್ನು ತಾವಾಗಿಯೇ ನಿರಾಕರಿಸುವಂತಾಗುತ್ತದೆ. ಹಾಗಾದಾಗ ಸಂವಿಧಾನದ ಖಾತ್ರಿಪಡಿಸುವ ಸಮಾನ ಪಾಲುದಾರಿಕೆ ಮತ್ತು ಘನತೆಯ ಹಕ್ಕುಗಳನ್ನು ನಿರಾಕರಿಸಿದಂತಾಗಿ, ಅಸ್ಮಿತೆಗಳನ್ನು ನಾಶಮಾಡಿದಂತಾಗುತ್ತದೆ. 377ನೇ ಪರಿಚ್ಛೇದವು ವ್ಯಕ್ತಿಗಳ ಸಮಾನ ಪೌರತ್ವವನ್ನು ನಿರಾಕರಿಸುತ್ತದೆ. "ಅಧಿಕಾರದ ಸ್ವನಿಯಂತ್ರಿತ ಚಲಾವಣೆಯನ್ನು ಖಾತ್ರಿಪಡಿಸುವ

192 Written Submission on Behalf of the Voices Against 377, in W.P. (CRL.) No. 76/2016 at page 18.

ಜಾಗೃತ ಮತ್ತು ಶಾಶ್ವತವಾಗಿ ಗೋಚರವಾಗುತ್ತಿರುವ ಸ್ತಿತಿ"ಯನ್ನು ತಂದೊಡ್ಡುವ ಫೌಕಾಲ್ಟ್ ನ ನಿರಂತರ ಕಣ್ಗಾವಲಿನ ಪರಿಣಾಮವನ್ನು ಉಲ್ಲೇಖಿಸುವ ರಯಾನ್ ಗುಡ್ಮ್ಯಾನ್[193] ಹೀಗೆ ಬರೆಯುತ್ತಾರೆ:

> ಗುದಸಂಭೋಗದ ಕಾನೂನುಗಳಡಿಯಲ್ಲಿ ಸಮಲೈಂಗಿಕ ಸ್ತ್ರೀ ಪುರುಷರೊಂದಿಗಿನ ಸರ್ಕಾರದ ಸಂಬಂಧವೂ ಇಂತಹುದೇ ರೀತಿಯ, ಆದರೆ ಚದುರಿದ, ಗಮನಿಸುವಿಕೆ ಮತ್ತು ಕಣ್ಗಾವಲಿನ ವ್ಯವಸ್ಥೆಯನ್ನು ರೂಪಿಸುತ್ತದೆ. ಸಮಲೈಂಗಿಕ ಸ್ತ್ರೀ ಪುರುಷರು ಸಾಮಾಜಿಕ ಮತ್ತು ಕಾನೂನಾತ್ಮಕವಾದ ನೆಲೆಗಳಲ್ಲಿ ದುಶ್ಕರ್ಮಿಗಳೆದು ಗೋಚವಾಗುವುದರ ಕುರಿತು ಸಾರ್ವಜನಿಕರು ಸೂಕ್ಷ್ಮತೆಯನ್ನು ಹೊಂದಿದ್ದಾರೆ. ಸರ್ಕಾರೀ ಅಧಿಕಾರದ ಹಲವು ಹಂತಗಳಲ್ಲಿ ಪ್ರಮಾಣೀಕರಿಸಲಾದ ಕೆಲ ವ್ಯಕ್ತಿಗಳು ಕಾನೂನಿನ ಅಧಿಕಾರದ ವಿಸ್ತರಣೆಯೊಂದಿಗೆ ನೇರವಾದ ನಂಟು ಹೊಂದಿರುತ್ತಾರೆ ಎಂಬುದರಲ್ಲಿ ಅನುಮಾನವಿಲ್ಲ. ಆದರೆ, ಗುದಸಂಭೋಗದ ಕಾನೂನುಗಳ ಸಾಮಾಜಿಕ ಪರಿಣಾಮಗಳನ್ನು ಈ ವಿಶೇಷ ಕಾರ್ಯಕರ್ತರೊಂದಿಗಷ್ಟೇ ತಳುಕು ಹಾಕಲು ಬರುವುದಿಲ್ಲ. ಬೇರುಮಟ್ಟದಲ್ಲಿ, ಖಾಸಗೀ ವ್ಯಕ್ತಿಗಳು ಕೂಡ, ನ್ಯಾಯದ ವಿಧಾನಗಳನ್ನು ಅನುಕರಿಸುವ ರೀತಿಯಲ್ಲಿ ಸಮಲೈಂಗಿಕ ಸ್ತ್ರೀ ಪುರುಷರ ಬದುಕನ್ನು ಕಣ್ಗಾವಲಿನಲ್ಲಿರಿಸುವ ಮತ್ತು ನಿಯಂತ್ರಿಸುವ ಪಾತ್ರವನ್ನು ನಿರ್ವಹಿಸುತ್ತಾರೆ[194]. (ಒತ್ತು ನೀಡಲಾಗಿದೆ)

ಹಾಗಾಗಿ 377ನೇ ಪರಿಚ್ಛೇದವು, ಒಂದು ಕ್ರಿಯೆಯನ್ನಷ್ಟೇ ಅಪರಾಧೀಕರಿಸದೇ, ನಿರ್ದಿಷ್ಟವಾದ ಕೆಲ ಗುರುತುಗಳನ್ನು ಅಪರಾಧೀಕರಿಸುತ್ತದೆ. ಮೇಲ್ನೋಟಕ್ಕೆ ತಟಸ್ಥವಾಗಿದ್ದರೂ, ಸದರಿ ಕಾಯ್ದೆಯ ಮೂಲಕ ನಿರ್ದಿಷ್ಟ ಅಸ್ಮಿತೆಗಳನ್ನು ತೆಗೆದುಹಾಕುವ ಪ್ರಕ್ರಿಯೆ ನಡೆಯುತ್ತದೆ. ಇಂತಹ ಅಸ್ಮಿತೆಗಳು ಎಲ್.ಜಿ.ಬಿ.ಟಿ ಸಮುದಾಯದ ಆತ್ಮವಾಗಿವೆ.

---

[193] Michel Foucault, Discipline And Punish: the Birth of the Prison, Pantheon Books (1977) at page 201.

[194] Ryan Goodman, "Beyond the Enforcement Principle: Sodomy Laws, Social Norms, and Social Panoptics", California Law Review, Vol. 89 (2001), at page 688.

52. ಸಂವಿಧಾನವು ಸರ್ಕಾರ ಮತ್ತು ವ್ಯಕ್ತಿಗಳ ನಡುವಿನ ಸಂಬಂಧಗಳಷ್ಟೇಲ್ಲದೆ, ವ್ಯಕ್ತಿಗಳ ನಡುವಿನ ಸಂಬಂಧಗಳ ಸ್ವರೂಪದ ಪರಿವರ್ತನೆಯನ್ನೂ ಕಲ್ಪಿಸಿಕೊಂಡಿತ್ತು: ಕಾನೂನಿನ ಆಳ್ವಿಕೆಯಿರುವ ಸಾಂವಿಧಾನಿಕ ವ್ಯವಸ್ಥೆಯಲ್ಲಿ, ಸಮತಾವಾದ ಮತ್ತು ತಾರತಮ್ಯ ವಿರೋಧೀ ನೀತಿಗಳು ಅಂತಹ ಸಂಬಂಧಗಳಲ್ಲಿ ಅಡಕವಾಗಿರುತ್ತವೆ. **ಕೆ. ಎಸ್ ಪುಟ್ಟಸ್ವಾಮಿ v. ಭಾರತ ಸರ್ಕಾರ ("ಪುಟ್ಟಸ್ವಾಮಿ")**[195], ಪ್ರಕರಣದಲ್ಲಿ ಈ ನ್ಯಾಯಾಲಯವು ವ್ಯಕ್ತಿಯು ಸಂವಿಧಾನ ಖಾತರಿಪಡಿಸುವ ಹಕ್ಕುಗಳನ್ನು ಹೊಂದಿರುತ್ತಾನೆ ಎಂಬುದನ್ನು ದೃಢಪಡಿಸಿತು. ಕಾನೂನಿನ ಮಾನ್ಯತೆಯ ಹೊರತಾಗಿಯೂ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸನ್ನಿವೇಶಗಳು ತಾರತಮ್ಯವನ್ನು ಮುಂದುವರಿಸುವ ವಾತಾವರಣವನ್ನು ಸೃಷ್ಟಿಸಿದಾಗ, ಅಂತಹ ಹಕ್ಕುಗಳು ವ್ಯಕ್ತಿಗಳಿಗೆ ದಕ್ಕುತ್ತವೆ ಎಂಬ ಖಾತರಿಯಿರುವುದಿಲ್ಲ. ಸಂವಿಧಾನವು ಪ್ರತಿಯೊಬ್ಬ ವ್ಯಕ್ತಿಗೆ ಸಮಾನತೆ ಮತ್ತು ಒಳಗೊಳ್ಳುವಿಕೆಯ ತತ್ವಗಳನ್ನು ಅವಲಂಬಿಸಿರುವ ಸಾಂವಿಧಾನಿಕ ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳುವ ಜವಾಬ್ದಾರಿಯನ್ನು ನೀಡುತ್ತದೆ. ವೈಯಕ್ತಿಕ ಘನತೆ ಮತ್ತು ಸ್ವಾಯತ್ತತೆಯನ್ನು ರಕ್ಷಿಸಲು ಬದ್ಧವಾಗಿರುವ ಸಾಂವಿಧಾನಿಕ ಪ್ರಜಾಪ್ರಭುತ್ವದಲ್ಲಿ, ಸಾಂವಿಧಾನಿಕ ಮೌಲ್ಯಗಳ ವ್ಯವಸ್ಥೆಯನ್ನು ಬೆಳೆಸಿ ಪ್ರಚಲಿತಪಡಿಸುವಂತೆ ನಡೆದುಕೊಳ್ಳುವುದು ಸರ್ಕಾರ ಮತ್ತು ಪ್ರತಿ ವ್ಯಕ್ತಿಯ ಕರ್ತವ್ಯವಾಗಿರುತ್ತದೆ.

ಇಬ್ಬರು ಸಮಲೈಂಗಿಕ ವಯಸ್ಕರ ನಡುವಿನ ಒಮ್ಮತದ ಲೈಂಗಿಕ ಕ್ರಿಯೆಗಳನ್ನು ಅಪರಾಧೀಕರಿಸುವ ಮೂಲಕ, 377ನೇ ಪರಿಚ್ಛೇದ ಅವರನ್ನು ಕೇವಲ ಶಿಕ್ಷೆಗೊಳಪಡಿಸುವುದಷ್ಟೇ ಅಲ್ಲದೇ, ಆವರ ವಿರುದ್ಧದ ಕಿರುಕುಳಗಳಿಗೂ ಆಧಾರವಾಗಿದೆ. 377ನೇ ಪರಿಚ್ಛೇದವು ವ್ಯಕ್ತಿಗಳ ದನಿಯನ್ನು ಉಡುಗಿಸಿ ಅವರನ್ನು ಕಳಂಕಿತರನ್ನಾಗಿಸುವ ಸಂಸ್ಕೃತಿಯೊಂದನ್ನು ಪ್ರತಿಪಾದಿಸುತ್ತದೆ. 377ನೇ ಪರಿಚ್ಛೇದವು ಕೆಲ ಸಂಬಂಧಗಳನ್ನು ನಿಸರ್ಗದ ನಿಯಮಕ್ಕೆ ವಿರುದ್ಧವೆಂದು ನಿಷೇಧಿಸುವಂತಹ ನೈತಿಕ ಪರಿಕಲ್ಪನೆಗಳನ್ನು ಎತ್ತಿಹಿಡಿಯುತ್ತದೆ. ಅಪರಾಧೀಕರಿಸುವ ಕಾನೂನು ಒಂದಿಡೀ ವರ್ಗದ ಜನರಮೇಲೆ ರೂಢಮಾದರಿಗಳನ್ನು ಆಧರಿಸುರುವ, 15(1)ನೇ ಕಲಮಿನಲ್ಲಿ ನಿಷೇಧಿಸಲ್ಪಟ್ಟ ವಿಚಾರಗಳ ಆಧಾರದಲ್ಲಿ ತಾರತಮ್ಯ ಎಸಗುವುದನ್ನು ಸಮರ್ಥಿಸುತ್ತದೆ. ಇದು ಲಿಂಗಾಧಾರಿತ ತಾರತಮ್ಯವಷ್ಟೇ ಅಲ್ಲದೇ, 15(1) ನೇ ಕಲಮು ಕೊಡಮಾಡುವ ಶೋಷಣೆಯ ವಿರುದ್ಧದ ಭದ್ರತೆಯನ್ನು ಉಲ್ಲಂಘಿಸುತ್ತದೆ.

[195] (2017) 10 SCC 1

53. ಇತಿಹಾಸವು ಸಾಮಾಜದ ಮಾನದಂಡಗಳಿಗೆ ಬದ್ಧಾರಾಗದೇ ಅವರ ಬಗೆಗಿನ ನಿರೀಕ್ಷೆಗಳಿಗೆ ಅನುಗುಣವಾಗಿ ನಡೆದುಕೊಳ್ಳದವರ ಮೇಲೆ ನಡೆಯುವ ವ್ಯವಸ್ಥಿತವಾದ ದಬ್ಬಾಳಿಕೆ ಮತ್ತು ಬಹಿಷ್ಕಾರಗಳಿಗೆ ಸಾಕ್ಷಿಯಾಗಿದೆ. 377ನೇ ಪರಿಚ್ಛೇದವು ಆಳವಾಗಿ ಬೇರೂರಿರುವ ಲಿಂಗಾಧಾರಿತ ರೂಢಮಾದರಿಗಳ ಮೇಲೆ ಅವಲಂಬಿಸಿದೆ. ತಮ್ಮ ಸ್ವಾತಂತ್ರ್ಯವನ್ನು ಪ್ರತಿಪಾದಿಸುವ ಸಂದರ್ಭದಲ್ಲಿ, ಈ ಕಾನೂನಿನ ಜಾರಿಯಿಂದ ಅಪರಾಧೀಕರಣಕ್ಕೊಳಗಾದ ಜನರು, ಈ ಪರಿಚ್ಛೇದದ ಅಸ್ತಿತ್ವವನ್ನಷ್ಟೇ ಅಲ್ಲದೇ ಯಾವುದು ಸಹಜ ಎಂಬುದರ ಬಗ್ಗೆ ಬಹುಸಂಖ್ಯಾತರು ರೂಪಿಸಿರುವ ಮಾನದಂಡಗಳನ್ನು ಅವಲಂಬಿಸಿರುವ ಹಲವು ನಂಬಿಕೆಗಳನ್ನು ಕೂಡಾ ಪ್ರಶ್ನಿಸುತ್ತಾರೆ.. ಈ ಅನ್ವೇಷಣೆಯ ಭಾಗವಾಗಿ 377ನೇ ಪರಿಚ್ಛೇದದ ವಿರುದ್ಧ ಎಸೆದಿರುವ ಸವಾಲು, ಸಮಾಜಿಕ ತಾರತಮ್ಯ ಮತ್ತು ಅಸ್ಮಿತೆಯ ಆಧಾರದಲ್ಲಿ ಜನರಿಗೆ ನೀಡಿರುವ ಕಿರುಕುಳದ ದೀರ್ಘ ಇತಿಹಾಸದ ವಿರುದ್ಧದ ಹೋರಾಟವೂ ಆಗಿದೆ. ತಮ್ಮ ಧ್ವನಿಗಳನ್ನು ಹತ್ತಿಕ್ಕುವ ಮತ್ತು ತಮ್ಮ ಬದುಕನ್ನು ಮುಚ್ಚಿದ ಬಾಗಿಲುಗಳ ಹಿಂದೆ ಅದೃಶ್ಯವಾಗಿ ಕಳೆಯುವ ಸಂಸ್ಕೃತಿಯಲ್ಲಿ ಅವರನ್ನು ಬಂಧಿಸಿಡಲಾಗಿದೆ. ಸಂವಿಧಾನ ಕೊಡಮಾಡುವ ಸಮಾನತೆ ಮತ್ತು ಒಳಗೊಳ್ಳುವಿಕೆತೆಂಬ ಭದ್ರತೆಗಳ ಮೂಲಕ, ನಿರ್ಧಿಷ್ಟ ಲಿಂಗಾಧಾರಿತ ಪಾತ್ರಗಳ ಬಗೆಗೆ ಬಹುಸಂಖ್ಯಾತರಿಗಿರುವ ಭಾವನೆಗಳ ಆಧಾರದಲ್ಲಿ ದಶಕಗಳ ಕಾಲ ನಡೆದ ತಾರತಮ್ಯವನ್ನು ಅಂತ್ಯಗೊಳಿಸುವ ಕಾಲ ಬರಬೇಕು. ಆ ಸಮಯ ಈಗ ಬಂದಿದೆ.

## F. ಮುಚ್ಚಿದ ಬಾಗಿಲುಗಳನ್ನು ಎದುರಿಸುವುದು

54. ಖಾಸಗೀತನದ ಹಕ್ಕು ಸ್ವಾತಂತ್ರ್ಯದ ಅವಿಭಾಜ್ಯ ಅಂಗ, ಮಾನವ ಘನತೆ ಮತ್ತು ಸ್ವಾಯತ್ತತೆಯ ಕೇಂದ್ರ. ಈ ಮೌಲ್ಯಗಳು ಸಂವಿಧಾನದ 21 ನೇ ಕಲಮಿನಡಿಯ ಬದುಕುವ ಹಕ್ಕಿನ ಅವಿಭಾಜ್ಯ ಅಂಗ. ಸ್ವಾತಂತ್ರ್ಯ, ಸ್ವಾಭಿಮಾನದ ಜೀವನ ಮತ್ತು ಬದುಕುವ ಬಗೆಯನ್ನು ನಿರ್ಧರಿಸುವ ಸಾಮರ್ಥ್ಯವುಳ್ಳ ಜೀವನವೇ ಒಂದು ಒಂದು ಅರ್ಥಪೂರ್ಣವಾದ ಜೀವನ. ಪುಟ್ಟಸ್ವಾಮಿ ಪ್ರಕರಣದಲ್ಲಿ ಒಂಬತ್ತು ನ್ಯಾಯಾಧೀಶರ ಪೀಠ ನೀಡಿದ ತೀರ್ಪಿನಲ್ಲಿ, ಈ ನ್ಯಾಯಾಲಯವು ಖಾಸಗೀತನದ ಹಕ್ಕು ನೈಸರ್ಗಿಕವಾದುದು ಮತ್ತು ವ್ಯಕ್ತಿಗಳಿಂದ

ಬೇರ್ಪಡಿಸಲು ಆಗದಿರುವಂಥದ್ದು ಎಂದು ನಿರ್ಧರಿಸಿದೆ. ನಾಲ್ಕು ಮಂದಿ ನ್ಯಾಯಾಧೀಶರ ಪರವಾಗಿ ತೀರ್ಪು ನೀಡಿದ ನ್ಯಾಯಮೂರ್ತಿಗಳು ಹೀಗೆನ್ನುತ್ತಾರೆ:

> ಖಾಸಗೀತನವು ವ್ಯಕ್ತಿಯ ತನ್ನ ವ್ಯಕ್ತಿತ್ವದ ಮೇಲೆ ನಿಯಂತ್ರಣ ಹೇರುವ ಹಕ್ಕಿನೊಂದಿಗೆ ಹೊಂದಿಕೊಂಡಿರುವ ಹಕ್ಕಾಗಿದೆ. ಕೆಲ ಹಕ್ಕುಗಳು ಮನುಷ್ಯರಲ್ಲಿ ನೈಸರ್ಗಿಕವಾಗಿ ಇರುತ್ತವೆ ಅಥವಾ ಸ್ವಭಾವಿಕವಾಗಿ ಇರುತ್ತವೆ ಎಂಬ ಪರಿಕಲ್ಪನೆಯಲ್ಲಿ ಅದರ ಮೂಲವಿದೆ. ನೈಸರ್ಗಿಕ ಹಕ್ಕುಗಳನ್ನು ಮಾನವ ವ್ಯಕ್ತಿತ್ವದಿಂದ ಬೇರ್ಪಡಿಸಲು ಸಾಧ್ಯವಿಲ್ಲವಾದ್ದರಿಂದ ಅವು ಅವಿಭಾಜ್ಯವಾಗಿವೆ. ನೈಸರ್ಗಿಕ ಹಕ್ಕುಗಳ ಇರುವಿಕೆಯಿಲ್ಲದಿದ್ದರೆ, ಬದುಕಿನಲ್ಲಿ ಮಾನವಿಯ ಅಂಶಗಳಿರುವುದು ಅಸಾಧ್ಯ.[196]

ನ್ಯಾ. ಬಾಬ್ಡೆ, 'ಖಾಸಗೀತನದ ಹಕ್ಕಿನ' ರೂಪವನ್ನು ವಿವರಿಸುತ್ತಾ ಹೀಗೆ ಹೇಳುತ್ತಾರೆ:

> ನಾವು ಇಲ್ಲಿ ಚರ್ಚಿಸುತ್ತಿರುವ ಖಾಸಗೀತನವು, ಒಂದು ಅವಿಭಾಜ್ಯವಾದ ನೈಸರ್ಗಿಕ ಹಕ್ಕಿನ ಅರ್ಹತೆಯನ್ನು ಘನತೆಯಿಂದ ಪಡೆಯುತ್ತದೆ ಮತ್ತು ಅದು ಮನುಷ್ಯನ ಯಾವೆರೆಡು ಮೌಲ್ಯಗಳ ರಕ್ಷಣೆಯು ಜಾಗತಿಕ ನೈತಿಕ ಒಪ್ಪಂದಗಳ ವಿಚಾರವಾಗಿದೆಯೋ, ಅಂತಹ ಸ್ವಾಭಾವಿಕ ಘನತೆ ಮತ್ತು ಸ್ವಾಯುತ್ತತೆಗಳೊಂದಿಗೆ ಅನ್ಯೋನ್ಯವಾಗಿ ಬೆಸೆದುಕೊಂಡಿದೆ[197]

ನ್ಯಾ. ನರಿಮನ್ ರವರು ಖಾಸಗೀತನದ ಹಕ್ಕಿನ ವ್ಯಕ್ತಿಗಳಿಂದ ಬೇರ್ಪಡಿಸಲಾಗದ ಗುಣದ ಬಗ್ಗೆ ಹೀಗೆನ್ನುತ್ತಾರೆ:

> ಮತ್ತೊದೆಡೆ, ಪ್ರಜೆಗಳು ಚುನಾಯಿಸಿದ ಸರ್ಕಾರ ಯಾವುದೇ ಇದ್ದರೂ ದೇಶದ ಪ್ರಜೆಗಳು ಅನುಭವಿಸಬಹುದಾದ ಕೆಲ ಹಕ್ಕುಗಳು ಇರಬೇಕು ಎಂಬ ಕಾರಣಕ್ಕೆ ಸಂವಿಧಾನದಲ್ಲಿ ಮೂಲಭೂತಹಕ್ಕುಗಳನ್ನು ಸೇರಿಸಲಾಗಿದೆ. ವ್ಯಕ್ತಿಯೊಬ್ಬರು

---

[196] Puttaswamy, at para 42

[197] Puttaswamy, at para 392.

> ಮನುಷರೆಂಬ ಕಾರಣಕ್ಕೆ ಅವ್ರಲ್ಲಿ ಸ್ವಭಾವಿಕವಾಗಿರುವ, ಅವಿಭಾಜ್ಯವಾದ ಹಕ್ಕಾಗಿರುವ ಖಾಸಗೀತನದ ಮೂಲಭೂತಹಕ್ಕಿನ ವಿಚಾರದಲ್ಲಿ ಮೇಲಿನ ವಿಷಯ ಮತ್ತಷ್ಟು ಸೂಕ್ತವಾಗುತ್ತದೆ. ಅಂತಹ ಹಕ್ಕುಗಳನ್ನು ಮೂಲಭೂತಹಕ್ಕುಗಳ ಅಧ್ಯಾಯದಲಿ ಗುರುತಿಸಿರುವುದು, ಬಹುಸನ್ಯಾ್ತ ಸರ್ಕಾರಗ್ಳ ಬದಲಾಗುತ್ತಿರುವ ನಿಲುವುಗಳ ಹೊರತಾಗಿಯೂ ಅಂತಹ ಹಕ್ಕು ಆಸ್ತಿತದಲ್ಲಿರುತ್ತದೆ ಎಂಬುದನ್ನು ಸೂಚಿಸುತ್ತದೆ[198]

ತಮ್ಮ ಅಭಿಪ್ರಾಯ ಮಂಡಿಸಿದ ನ್ಯಾಯಮೂರ್ತಿ ಸಾಪ್ರೆ, 'ಖಾಸಗೀತನವನ್ನು' ನೈಸರ್ಗಿಕವಾದ ಹಕ್ಕು ಎಂದು ಕರೆದು ಅದನ್ನು ಪವಿತ್ರಗೊಳಿಸಿದ್ದಾರೆ:

> ನಾನು ಯೋಚಿಸಿ ಮಂಡಸುತ್ತಿರುವ ಅಭಿಪ್ರಾಯದ ಪ್ರಕಾರ, "ವ್ಯಕ್ತಿಯೊಬ್ಬರ ಖಸಗೀತನದ ಹಕ್ಕು" ಮುಖ್ಯವಾಘಿ ಒಂದು ನೈಸರ್ಗಿಕ ಹಕ್ಕು, ಮತ್ತು ಅದು ಎಲ್ಲ ಮನುಷ್ಯರಲ್ಲಿ ಹುಟ್ಟಿನಿಂದಲೇ ಸ್ವಾಭಾವಿಕವಾಗಿಯೇ ಇರುತ್ತದೆ... ಅದು ಖಂಡಿತವಾಗಿಯೂ, ಬೇರ್ಪಡಿಸಲಾಗದ್ದು ಮತ್ತು ಅವಿಭಾಜ್ಯವಾದುದು…ಅದು ಮನುಷ್ಯರೊಂದಿಗೇ ಹುಟ್ಟುತ್ತದೆ[199]

ಈ ಅಭಿಪ್ರಾಯಗಳು ಖಾಸಗೀತನದ ಹಕ್ಕು ನೈಸರ್ಗಿಕವಾದ ಹಕ್ಕು ಎಂಬುದನ್ನು ದೃಢಪಡಿಸುತ್ತವೆ. ಪುಟ್ಟಸ್ವಾಮಿ ಪ್ರಕರಣದಲ್ಲಿ ನಾಲ್ಕು ನ್ಯಾಯಾಧೀಶರ ಪೀಠ ನೀಡಿದ ತೀರ್ಪಿನ ಪ್ರಕಾರ, ಲೈಂಗಿಕ ನಿಲುವಿನ ಹಕ್ಕು ಖಾಸಗೀತನದ ಹಕ್ಕಿನ ಸ್ವಾಭಾವಿಕ ಭಾಗ. ಈ ಹಕ್ಕಿನ ವ್ಯಾಪ್ತಿಯನ್ನು ವ್ಯಾಖ್ಯಾನಿಸುವ ಸಲುವಾಗಿ, ಈ ನ್ಯಾಯಾಲಯದ ಕೆಲ ಮೇಲ್ಪಂಕ್ತಿಯ ತೀರ್ಪುಗಳಲ್ಲಿ ನಡೆದ ಲೈಂಗಿಕ ನಿಲುವಿನ ಕುರಿತಾದ ಚರ್ಚೆಗಳನ್ನು ಪರಾಂಬರಿಸಬೇಕು.

---

[198] Puttaswamy, at para 490.

[199] Puttaswamy at para 557.

55. ನಾಲ್ಸಾ ಪ್ರಕರಣದಲ್ಲಿ ದ್ವಿಸದಸ್ಯ ಪೀಠದ ಪರವಾಗಿ ಮಾತನಾಡಿದ ನ್ಯಾಯಮೂರ್ತಿ ಕೆ.ಎಸ್. ರಾಧಾಕೃಷ್ಣನ್ ಅವರು ವ್ಯಕ್ತಿಗಳ ಲೈಂಗಿಕ ನಿಲುವು ಎಂಬ ಪದವು ಅವರ ಲೈಂಗಿಕ ಅಸ್ಮಿತೆಗಿಂತ ವಿಭಿನ್ನವಾದುದು ಎಂಬ ವಿಚಾರದ ಮೇಲೆ ಬೆಳಕು ಚೆಲ್ಲಿದರು.

> ಲೈಂಗಿಕ ನಿಲುವು ಎಂದರೆ, ಇತರ ವ್ಯಕ್ತಿಗಳೆಡೆಗಿನ ಒಬ್ಬ ವ್ಯಕ್ತಿಯಲ್ಲಿರುವ ದೀರ್ಘಕಾಲೀನ ದೈಹಿಕ, ಪ್ರಣಯದ ಮತ್ತು/ ಅಥವಾ ಭಾವನಾತ್ಮಕ ಸೆಳೆತ. ಲೈಂಗಿಕ ನಿಲುವು ಲಿಂಗ ಪರಿವರ್ತಿತರು ಮತ್ತು ವಿಪುಲವಾದ ಲೈಂಗಿಕ ನಿಲುವಿನ ವಿಭಿನ್ನ ಲೈಂಗಿಕತೆಯ ವ್ಯಕ್ತಿಗಳನ್ನು ಒಳಗೊಳ್ಳುತ್ತದೆ ಮತ್ತು ಅವರ ಲೈಂಗಿಕ ನಿಲುವು ಅವರ ಲಿಂಗತ್ವ ಬೆಳವಣಿಗೆಯ ಸಮಯದಲ್ಲಿ ಬದಲಾಗಬಹುದು, ಆಗದೆಯೂ ಇರಬಹುದು ಮತ್ತು ಅದು ಸಮಲೈಂಗಿಕರು, ಉಭಯಲೈಂಗಿಕರು, ಭಿನ್ನಲೈಂಗಿಕರು ಮತ್ತು ಅಲೈಂಗಿಕರು ಮುಂತಾದವರನ್ನು ಒಳಗೊಳ್ಳುತ್ತದೆ. ಈಗಾಗಲೇ ಹೇಳಿರುವಂತೆ, ಲಿಂಗಾಧಾರಿತ ಅಸ್ಮಿತೆ ಮತ್ತು ಲೈಂಗಿಕ ನಿಲುವುಗಳು ಭಿನ್ನವಾದದ ತತ್ವಗಳು. ಪ್ರತಿ ವ್ಯಕ್ತಿಯ ಸ್ವ-ವ್ಯಾಖ್ಯಾನಿತ ಲೈಂಗಿಕ ನಿಲುವು ಮತ್ತು ಲಿಂಗಾಧಾರಿತ ಅಸ್ಮಿತೆಗಳು ಅವರ ವ್ಯಕ್ತಿತ್ವದ ಮುಖ್ಯವಾದ ಅಂಶ ಮತ್ತು ಸ್ವ-ನಿರ್ಧಾರ, ಘನತೆ ಮತ್ತು ಸ್ವಾತಂತ್ರ್ಯಗಳ ಅತ್ಯಂತ ಮೂಲಭೂತ ತತ್ವಗಳು[200]

**ಪುಟ್ಟಸ್ವಾಮಿ** ಪ್ರಕರಣದಲ್ಲಿ, ಕೌಶಲ್ ಪ್ರಕರಣದಲ್ಲಿ ಈ ನ್ಯಾಯಾಲಯ ನಡೆಸಿದ್ದ "ಜನಪ್ರಿಯ ಒಪ್ಪಿಗೆಯ ಪರೀಕ್ಷೆಯನ್ನು" ತಿರಸ್ಕರಿಸಲಾಯಿತು ಮತ್ತು ಲೈಂಗಿಕ ನಿಲುವು ಸಾಂವಿಧಾನ ಖಾತರಿಪಡಿಸುವ ಸ್ವಾತಂತ್ರ್ಯ ಎಂಬುದನ್ನು ಸಮರ್ಥಿಸಲಾಯಿತು:

[200] NALSA, at para 22.

ಸಾಂವಿಧಾನಿಕ ಹಕ್ಕುಗಳ ಖಾತರಿಯು, ಅವುಗಳ ಚಲಾವಣೆಯನ್ನು ಬಹುಸಂಕ್ಯಾತ ಅಭಿಪ್ರಾಯ ಒಪ್ಪಿಕೊಳ್ಳುತ್ತದೆಯೇ ಎಂಬುದನ್ನು ಅವಲಂಬಿಸಿರುವುದಿಲ್ಲ. ಜನಪ್ರಿಯ ಸ್ವೀಕೃತಿಯ ಪರೀಕ್ಷೆಯು, ಸಾಂವಿಧಾನಿಕ ರಕ್ಷಣೆಯ ಪಾವಿತ್ರ್ಯತೆಯೊಂದಿಗೆ ಕೊಡಮಾಡಲಾಗಿರುವ ಹಕ್ಕುಗಳನ್ನು ಕಡೆಗಣಿಸುವುದಕ್ಕೆ ಸೂಕ್ತವಾದ ಆಧಾರವನ್ನು ಒದಗಿಸುವುದಿಲ್ಲ..ಗೌಪ್ಯ ಮತ್ತು ಪ್ರತ್ಯೇಕಿಸಲ್ಪಟ್ಟ ಅಲ್ಪಸಂಖ್ಯಾತರು, ಅವರ ಅಭಿಪ್ರಾಯಗಳು, ನಂಬಿಕೆಗಳು ಅಥವಾ ಜೀವನ ಕ್ರಮ ಮುಖ್ಯವಾಹಿನಿಗನುಗುಣವಾಗಿಲ್ಲ ಎಂಬ ಒಂದೇ ಕಾರಣಕ್ಕೆ ತಾರತಮ್ಯದ ಗಂಭೀರ ಅಪಾಯಗಳನ್ನು ಎದುರಿಸುತ್ತಾರೆ. ಆದರೂ ಕಾನೂನಿನ ಆಳ್ವಿಕೆಯನ್ನಾಧರಿಸಿ ರಚಿಸಲಾಗಿರುವ ಪ್ರಜಾತಾಂತ್ರಿಕ ಸಂವಿಧಾನದಲ್ಲಿ ಅವರ ಹಕ್ಕುಗಳು ಇತರರಿಗೆ ಅವರ ಸ್ವಾತಂತ್ರ್ಯ ಮತ್ತು ಮುಕ್ತತೆಯನ್ನು ರಕ್ಷಿಸುವ ಸಲುವಾಗಿ ಕೊಡಮಾಡಲಾಗಿರುವ ಹಕ್ಕುಗಳಷ್ಟೆ ಪವಿತ್ರವಾದವು. ಲೈಂಗಿಕ ನಿಲುವು ಖಾಸಗೀತನದ ಅತ್ಯಗತ್ಯ ಗುಣ. ಲೈಂಗಿಕ ನಿಲುವಿನ ಆಧಾರದಲ್ಲಿ ವ್ಯಕ್ತಿಯೊಬ್ಬರ ವಿರುದ್ಧ ತಾರತಮ್ಯ ಎಸಗುವುದು ವ್ಯಕ್ತಿಯ ಘನತೆ ಮತ್ತು ಸ್ವ-ಮೌಲ್ಯಕ್ಕೆ ಗಂಭೀರವಾದ ಹಾನಿಯನ್ನುಂಟು ಮಾಡುತ್ತದೆ. ಸಮಾಜದ ಪ್ರತಿ ವ್ಯಕ್ತಿಯ ಲೈಂಗಿಕ ನಿಲುವನ್ನು ಸಮಾನವಾದ ವೇದಿಕೆಯ ಮೇಲೆ ರಕ್ಷಿಸಬೇಕು ಎಂಬುದು ಸಮಾನತೆಯ ಅಪೇಕ್ಷೆ. ಖಾಸಗೀತನದ ಹಕ್ಕು ಮತ್ತು ಲೈಂಗಿಕ ನಿಲುವಿನ ರಕ್ಷಣೆಯು ಸಂವಿಧಾನದ 14, 15ತ್ತು 21ನೇ ಕಲಮುಗಳು ಖಾತ್ರಿಪಡಿಸುವ ಮೂಲಭೂತ ಹಕ್ಕುಗಳ ಕೇಂದ್ರಬಿಂದು.[201]

[201] Puttaswamy, at para 144.

ಎಲ್.ಜಿ.ಬಿ.ಟಿ ಸಮುದಾಯದ ಹಕ್ಕುಗಳನ್ನು ಭ್ರಮೆ ಎಂದು ವ್ಯಾಖ್ಯಾನಿಸುವ ಪರಿಕಲ್ಪನೆಯನ್ನು ನಿರಾಕರಿಸಿದ ನ್ಯಾಯಾಲಯವು, ಲೈಂಗಿಕ ಅಲ್ಪಸಂಖ್ಯಾತರು ಆಗ್ರಹಿಸುತ್ತಿರುವ ಖಾಸಗೀತನದ ಹಕ್ಕು ಸಾಂವಿಧಾನಿಕವಾಗಿ ಸುನಿಶ್ಚಿತಗೊಳಿಸಲಾಗಿರುವ ಹಕ್ಕು ಎಂದು ತೀರ್ಮಾನಿಸಿತು:

> ಸಮಲೈಂಗಿಕ ಸ್ತ್ರೀ ಪುರುಷರು, ಉಭಯಲಿಂಗಾಸಕ್ತರು ಮತ್ತು ಲಿಂಗಪರಿವರ್ತಿತ ಸಮುದಾಯಗಳ ಹಕ್ಕುಗಳನ್ನು "ತಥಾಕಥಿತ ಹಕ್ಕುಗಳು" ಎಂದು ಪರಿಗಣಿಸಲು ಆಗುವುದಿಲ್ಲ. ತಥಾಕಥಿತ ಎಂಬ ಭಾವವು ಹಕ್ಕಿನ ವೇಶದಲ್ಲಿ ಸ್ವಾತಂತ್ರ್ಯದ ಚಲಾವಣೆಯನ್ನು ಸೂಚಿಸುತ್ತದೆ ಮತ್ತು ಇದೊಂದು ಭ್ರಮೆ. ಇದು ಎಲ್.ಜಿ.ಬಿ.ಟಿ. ಸಮುದಾಯದ ಖಾಸಗೀತನವನ್ನಾಧರಿಸಿದ ಅಗ್ರ್ರಹಗಳ ಅಸಮಂಜಸ ನಿರೂಪಣೆಯಾಗಿದೆ. ಅವರ ಹಕ್ಕುಗಳು "ತಥಾಕಥಿತ" ವಲ್ಲ, ಬದಲಿಗೆ ಅವುಗಳು ಸಮರ್ಥ ಸಾಂವಿಧಾನಿಕ ಸಿಧ್ಧಾಂತದ ಮೇಲೆ ರೂಪುಗೊಂಡಿರುವ ನೈಜ ಹಕ್ಕುಗಳು. ಅವು ಬದುಕಿನ ಹಕ್ಕಿನ ಸ್ವಾಭಾವಿಕ ಭಾಗ. ಆವ್ ಖಾಸಗೀತನ ಮತ್ತು ಘನತೆಯಲ್ಲಿ ನೆಲೆಯಾಗಿವೆ. ಅವು ಮುಕ್ತತೆ ಮತ್ತು ಸ್ವಾತಂತ್ರ್ಯಗಳ ಮೂಲಸತ್ವ ಲೈಂಗಿಕ ನಿಲುವು ಅಸ್ಮಿತೆಯ ತ್ಯಾಗತ್ಯ ಭಾಗ. ಸಮಾನ ರಕ್ಷಣೆಯು, ಪ್ರತಿವ್ಯಕ್ತಿಯ ಅಸ್ಮಿತೆಯನ್ನು ತಾರತಮ್ಯವಿಲ್ಲದೆ ರಕ್ಷಿಸಬೇಕೆಂದು ಅಪೇಕ್ಷಿಸುತ್ತದೆ[202]

ಗೌಪ್ಯತೆಯ ಲೈಂಗಿಕ ನಿಲುವನ್ನು ಖಾಸಗೀತನದ ಒಂದು ಅಂಶವೆಂದು ಗುರುತಿಸುವುದನ್ನು ಒಪ್ಪಿಕೊಂಡ ಜಸ್ಟಿಸ್ ಕೌಲ್ ಹೀಗೆನ್ನುತ್ತಾರೆ:

> ಹೀಗಾಗಿ, ಲೈಂಗಿಕ ನಿಲುವೆಂಬುದು ಮನೆಯ ನಾಲ್ಕುಗೋಡೆಯ ನಡುವೆ ಕೂಡ ಚರ್ಚೆಯ ವಿಷಯವಾಗಿದೆ. ನಾನು, ತಮ್ಮ ತೀರ್ಪಿನ 144ರಿಂದ 146ನೇ ವಾಕ್ಯಗಳಲ್ಲಿ, ತೊಂದರೆಗೊಳಾಗಿರುವ ಜನರು ಜನಸಂಖ್ಯೆಯ ಅತಿಸಣ್ಣ

[202] Puttaswamy, at para 145.

ಭಾಗವಾಗಿದ್ದರೂ ಕೂಡ, ಖಾಸಗೀತನದ ಹಕ್ಕನ್ನು ನಿರಾಕರಿಸುವಂತಿಲ್ಲ ಎಂದು ನುಡಿದ ಡಾ. ಡಿ.ವೈ. ಚಂದ್ರಚೂಡ್ ರವರ ಅಭಿಪ್ರಾಯವನ್ನು ಒಪ್ಪುತ್ತೇನೆ. ಬಹುಸಂಖ್ಯಾತ ತತ್ವವು ಸಾಂವಿಧಾನಿಕ ಹಕ್ಕುಗಳಿಗೆ ಅನ್ವಯವಾಗುವುದಿಲ್ಲ ಮತ್ತು ಸಂವಿಧಾನದಲ್ಲಿ ಚಿತ್ರಿಸಲಾಗಿರುವ ಅಧಿಕಾರದ ಪರಿಶೀಲನೆ ಮತ್ತು ಸಮತೋಲನದ ತತ್ವಗಳ ಪ್ರಕಾರ ಬಹಳ ಸಲ ನ್ಯಾಯಾಲಯಗಳು ಬಹುಮತ ವಿರೋಧಿಯೆಂದು ವರ್ಗೀಕರಿಸಲ್ಪಡುವಂತಹ ನಿಲುವನ್ನು ತೆಗೆದುಕೊಳ್ಳಬೇಕಾಗುತ್ತದೆ. ಒಬ್ಬರ ಲೈಂಗಿಕ ನಿಲುವು ಖಾಸಗೀತನದ ಗುಣಲಕ್ಷಣ ಎನ್ನುವುದರಲ್ಲಿ ಅನುಮಾನವೇ ಇಲ್ಲ[203]

ಪುಟ್ಟಸ್ವಾಮಿ ಪ್ರಕರಣದಲ್ಲಿ ಒಂಬತ್ತು ನ್ಯಾಯಾಧೀಶರ ಪೀಠ ಗಮನಿಸಿರುವ ವಿಚಾರಗಳ ಹಿನ್ನೆಲೆಯಲ್ಲಿ, ಕೌಶಲ್ ಪ್ರಕರಣದಲ್ಲಿ 377ನೇ ಪರಿಚ್ಛೇದದ ಮಾನ್ಯತೆಯನ್ನು ಎತ್ತಿಹಿಡಿಯಲು ಬಳಸಲಾದ ವಿಚಾರಗಳು ನೆಲೆ ಕಳೆದುಕೊಳ್ಳುತ್ತವೆ.

56. ನಾವೀಗ ಲೈಂಗಿಕ ಅಲ್ಪಸಂಖ್ಯಾತರು ತಮ್ಮ ಖಾಸಗೀತನದ ಹಕ್ಕನ್ನು ಚಲಾಯಿಸುವುದನ್ನು 377ನೇ ಪರಿಚ್ಛೇದ ಹೇಗೆ ಬಾಧಿಸುತ್ತದೆ ಎಂಬುದನ್ನು ಅರಿಯಬೇಕು. ಶಾಸನವೊಂದು ನಿರ್ವಾತದಲ್ಲಿ ಅಸ್ತಿತ್ವದಲ್ಲಿರಲು ಆಗುವುದಿಲ್ಲ. 377ನೇ ಪರಿಚ್ಛೇದದ ಸಾಮಾಜಿಕ ಪರಿಣಾಮಗಳು ಅಗಾಧವಾಗಿವೆ. 377ನೇ ಪರಿಚ್ಛೇದವು ಮೇಲ್ನೋಟಕ್ಕೆ ಕೆಲವು "ಕ್ರಿಯೆಗಳನ್ನು" ಮಾತ್ರ ಅಪರಾಧೀಕರಿಸುತ್ತದೆಯೇ ಹೊರತು ಸಂಬಂಧಗಳನ್ನಲ್ಲ ಎಂಬುದು ನಿಜವಾದರೂ, ಇದು ಎಲ್.ಜಿ.ಬಿ.ಟಿ.ಕ್ಯೂ ಸದಸ್ಯರನ್ನು ಸಮಾಜ ನೋಡುವ ರೀತಿಯನ್ನೇ ಬದಲಾಯಿಸುತ್ತದೆ. ನಡವಳಿಕೆ ಮತ್ತು ಅಸ್ಮಿತೆಯನ್ನು ಒಂದೇ ಎಂದು ಬಗೆಯಲಾಗುತ್ತದೆ. ಜನಪ್ರಿಯ ಪರಿಕಲ್ಪನೆಗಳನ್ನು ಧಿಕ್ಕರಿಸುವ ಲೈಂಗಿಕ ಸಂಬಂಧಗಳನ್ನು ಅಪರಾಧೀಕರಿಸುವುದರಿಂದ ಭಿನ್ನಲಿಂಗಾಸಕ್ತ ಲೈಂಗಿಕ ಅಸ್ಮಿತೆಯ ಪರಿಧಿಯಾಚೆಗಿರುವ ವ್ಯಕ್ತಿಗಳನ್ನು ಅಪರಾಧಿಗಳೆಂದು ಗ್ರಹಿಸಲಾಗುತ್ತದೆ.

---

[203] Puttaswamy, at para 647.

57. ವಿಶ್ವದಾದ್ಯಂತ, ಸಮಾಜ ಹೇರಿರುವ ಭಿನ್ನಲಿಂಗಾಸಕ್ತ ವ್ಯವಸ್ಥೆಯೊಳಗೆ ಸ್ವೀಕೃತಿ ಪಡೆದುಕೊಳ್ಳುವುದಕ್ಕಾಗಿ ಲೈಂಗಿಕ ಅಲ್ಪಸಂಖ್ಯಾತರು ಪ್ರಯಾಸಪಟ್ಟಿದ್ದಾರೆ. 'ಎಪಿಸ್ಟೆಮಾಲಜಿ ಆಫ್ ದಿ ಕ್ಲೋಸೆಟ್[204] ' ಎಂಬ ಹೆಸರಿನ ತಮ್ಮ ಪುಸ್ತಕದಲ್ಲಿ ಈವ್ ಸೆಡ್ಗ್ವಿಕ್ ರವರು "ಕ್ಲೋಸೆಟ್ (ಆಲಮಾರಿ/ ಮುಚ್ಚಿದ ಬಾಗಿಲು) ಈ ಶತಮಾನದಲ್ಲಿ ಸಮಲೈಂಗಿಕರ ಮೇಲಿನ ದಬ್ಬಾಳಿಕೆಯನ್ನು ಪ್ರತಿನಿಧಿಸುತ್ತದೆ" ಎಂದು ಹೇಳುತ್ತಾರೆ. ಕ್ಲೋಸೆಟ್/ ಮುಚ್ಚಿದ ಬಾಗಿಲು ಎಂಬುದು ಅವರುಗಳು ಎದುರಿಸಿದ ಬಹಿಷ್ಕಾರದ ಸಂಕೇತವಾಗಿದೆ:

> ಮುಚ್ಚಿದ ಬಾಗಿಲುಗಳು ಅಸ್ತಿತ್ವದಲ್ಲಿವೆ ಮತ್ತು ಅವು ಸಾಮಾಜಿಕ ಮಾಹಿತಿಯನ್ನು ಅಡಗಿಸಿಟ್ಟಿವೆ. ಅವು ಕೆಲ ಸಾಮಾಜಿಕವಾಗಿ ಬಹಿಷ್ಕರಿಸಲಾಗಿರುವ ಬಯಕೆಗಳನ್ನು, ಸಾಮ್ಸ್ಕೃತಿಕ ಹಿನ್ನೆಲೆ ಮತ್ತು ಕಾನುನಿನ ಮೂಲಕ ಅನ್ಯೆಸರ್ಗಿಕವೆಂದು ಪರಿಗಣಿಸಲ್ಪಟ್ಟಿರುವ ಕೆಲ ಹೆಸರಿಸಲಾಗದ ಲೈಂಗಿಕ ಕ್ರಿಯೆಗಳನ್ನು, ತಮ್ಮ ಹೆಸರನ್ನು ಹೇಳುವ ಧೈರ್ಯ ವಿಲ್ಲದ ಕೆಲ ಗುರುತುಗಳನ್ನು ಮತ್ತು ವ್ಯಕ್ತಿಯೊಬ್ಬರನ್ನು ಕಳನ್ಕ ಮತ್ತು ದಬ್ಬಳಿಕೆಗಳಿಗೆ ಏಡುಮಾಡಬಲ್ಲ ಕೆಲ ಬಗೆಯ ನಡವಳಿಕೆಗಳನ್ನು ಅಡಗಿಸಿಡುತ್ತದೆ. ಮುಚ್ಚಿದ ಬಾಗಿಲು ಬರಿಯ ಮೇಲೆ ಕಳನ್ಕ ಮತ್ತು ದಬ್ಬಾಳಿಕೆಯ ಅಪಾಯವನ್ನಷ್ಟೆ ಅಲ್ಲದೆ ಅಪಾಯಗಳನ್ನಷ್ಟೆ ಅಲ್ಲ, ಅದು ಕಳನ್ಕ ಮತ್ತು ದಬ್ಬಳಿಕೆಗಳನ್ನೇ ಮುಚ್ಚುತ್ತದೆ. ಅದು ಹಲವು ದಾನಿಗಳ ಸದ್ದಡಗಿಸುತ್ತದೆ, ಮತ್ತು ಅಂತಹ ಮೌನವನ್ನು ಮುಚ್ಚಿದ್ ಬಾಗಿಲುಗಳ ಹಿಂಡಿತುವ ಜೀವಗಳನ್ನು ಹಿಂಸೆ ಮತ್ತು ಮುಚ್ಚುಮರೆಯ ಓಳಗೆ ಮತ್ತು ಹೊರಗಿರುವ ಸಂಗಾತಿಗಳಿಂದ ಉಂಟಾಗುವ ನೋವು ಮತ್ತು ಸ್ವಯಂಕೃತ ವೇದನೆ ಮತ್ತು ಹಿಂಸೆಗಳ ಮೂಲಕ ಓಟ್ಟಾರೆಯಾಗಿ ಘಾಸಿಗೊಳಿಸಿ ಸಾಧಿಸಲಾಗುತ್ತದೆ. ಮುಚ್ಚಿದ ಬಾಗಿಲು ಆಹ್ಲಾದವನ್ನು, ವಿವಿಧ ಲೈಂಗಿಕ ಅಭಿವ್ಯಕ್ತಿಗಳು ಮತ್ತು ತಮ್ಮನ್ನು ತೃಪ್ತಿಪಡಿಸಿಕೊಳ್ಳಲು ನಡೆಸುವ ಗೌಪ್ಯವಾದ

[204] Eve Kosofsky Sedgwick, Epistemology of the Closet, University of California Press (1990).

ಭೇಟಿಗಳನ್ನು ಮುಚ್ಚಿಡುತ್ತದೆ. ಮುಚ್ಚಿದ ಬಾಗಿಲು ಕಾಯಿಲೆ ಮತ್ತು ಸಾವಿನ ಸಾಧ್ಯತೆಗಳನ್ನು ಮುಚ್ಚಿಡುತ್ತದೆ.[205]

ಸಾಮಾಜಿಕ ನಿಯಮಗಳಿಗೆ ಬದ್ಧವಾಗಿರುವ ಲೈಂಗಿಕ ಸಂಬಂಧಗಳನ್ನು ಮಾತ್ರ ಗುರುತಿಸುವ ಪ್ರಸ್ತುತ ಭಿನ್ನಲೈಂಗಿಕ ನಿಯಮಗಳ ಚೌಕಟ್ಟನ್ನು ಈ ಚೌಕಟ್ಟಿನಿಂದ ಹೊರಗಿರುವ ಲೈಂಗಿಕ ಸಂಬಂಧಗಳಿಗೆ "ಅಸಹಜತೆ"ಯ ಕಳಂಕ ಹಚ್ಚುವ 377ನೇ ಪರಿಚ್ಛೇದ ಕಾನೂನುಬದ್ಧಗೊಳಿಸುತ್ತದೆ. "ಅಸಹಜ ಕೃತ್ಯಗಳು" ಎಂಬ ಪರಿಕಲ್ಪನೆಯನ್ನು, "ನಿಶ್ಚಿತ ಸಂತಾನೋತ್ಪತ್ತಿಗಾಗಿ ನಡೆಯುವ ಲೈಂಗಿಕ ಕ್ರಿಯೆಗಳ ಮಾದರಿಯ" ಸಂಕುಚಿತ ನೆಲೆಗಟ್ಟಿನಲ್ಲಷ್ಟೇ ಗಮನಿಸಿ, ಒಪ್ಪಿಗೆಯಿರುವ ವಯಸ್ಕರ ನಡುವಿನ ಲೈಂಗಿಕ ಸಂಬಂಧಗಳಿಗೆ ಅದನ್ನು ತಪ್ಪಾಗಿ ಅನ್ವಯಿಸಲಾಗುತ್ತದೆ[206]. ವಯಸ್ಕರ ನಡುವೆ ಒಪ್ಪಿಗೆಯ ಮೇರೆಗೆ ನಡೆಯುವ ಲೈಂಗಿಕ ಚಟುವಟಿಕೆಗಳನ್ನು ಮನುಷ್ಯರ ಲೈಂಗಿಕ ಸಾಮರ್ಥ್ಯ ಮತ್ತು ಸಂವೇದನೆಗೆಳ "ಸ್ವಾಭಾವಿಕ ಅಭಿವ್ಯಕ್ತಿ" ಎಂದು ಪರಿಗಣಿಸಬೇಕು. ಇಂತಹ ಕ್ರಿಯೆಗಳನ್ನು ಒಪ್ಪಿಕೊಳ್ಳದಿದ್ದರೆ, ಸಂತಾನೋತ್ಪತ್ತಿಗಾಗಿ ನಡೆಯುವ ಲೈಂಗಿಕ ಕ್ರಿಯೆಗಳ ವ್ಯಾಪ್ತಿಯಾಚೆಗೆ ಲೈಂಗಿಕ ಅನುಭವ ಪಡೆಯುವ ಮನುಷ್ಯರ ವಿಶಿಷ್ಟ ಸಾಮರ್ಥ್ಯವನ್ನು ನಿರಾಕರಿಸಿದಂತಾಗುತ್ತದೆ.

58. ಎಲ್.ಜಿ.ಬಿ.ಟಿ ಸಮುದಾಯದ ಸದಸ್ಯರು ತಮ್ಮ ಲೈಂಗಿಕ ನಿಲುವಿನ ಹಕ್ಕನ್ನು ಸಂಪೂರ್ಣವಾಗಿ ವ್ಯಕ್ತಪಡಿಸುವುದನ್ನು ತಡೆದರೆ, ಸಂವಿಧಾನದಡಿಯಲ್ಲಿನ ಸಂಪೂರ್ಣ ಪೌರತ್ವದ ಮೇಲೆ ಅವರಿಗಿರುವ ಅಧಿಕಾರವನ್ನು ಕಸಿದುಕೊಂಡಂತೆ. ಲೈಂಗಿಕ ನಿಲುವಿನ ಹಕ್ಕನ್ನು ನಿರಾಕರಿಸುವುದು ಖಾಸಗೀತನದ ಹಕ್ಕನ್ನು ನಿರಾಕರಿಸುವುದಕ್ಕೆ ಸಮ. 377ನೇ ಪರಿಚ್ಛೇದವನ್ನು ಜಾರಿಗೊಳಿಸಿದಾಗ ಪ್ರತಿ ನಾಗರಿಕರಿಗೆ ನೀಡಲಾಗಿರುವ ಖಾಸಗೀತನದ ಮೂಲಭೂತ ಹಕ್ಕನ್ನು ಹತ್ತಿಕ್ಕಿದಂತಾಗುತ್ತದೆ. ಅಂತಹ ಮಾನವ ಹಕ್ಕುಗಳ ಉಲ್ಲಂಘನೆಯ ವಿರುದ್ಧ ಪ್ರಜೆಗಳಿಗೆ ರಕ್ಷಣೆ ಒದಗಿಸುವ ಕರ್ತವ್ಯವನ್ನು ನ್ಯಾಯಾಲಯಕ್ಕೆ ವಹಿಸಲಾಗಿದೆ. ಪುಟ್ಟಸ್ವಾಮಿ ಪ್ರಕರಣದ ತಮ್ಮ ತೀರ್ಪಿನಲ್ಲಿ ನ್ಯಾಯಮೂರ್ತಿ ಚೆಲಮೇಶ್ವರ್, ಈ ರೀತಿ ನುಡಿದರು:

[205] Supra note 65, at page 102.

[206] David A. J. Richards, "Sexual Autonomy and the Constitutional Right to Privacy: A Case Study in Human Rights and the Unwritten Constitution", Hastings Law Journal, Vol. 30, at page 786.

ಪಠ್ಯದಲ್ಲಿ ಇಲ್ಲದಿರುವುದೆಲ್ಲ ಸಂವಿಧಾನದ ಭಾಗವಾಗಲಾರದು ಎಂಬ ವಾದವನ್ನು ಬೆಂಬಲಿಸಿದರೆ, ಅದು ಸಂವಿಧಾನವನ್ನು ಅತ್ಯಂತ ಪುರಾತನ ರೀತಿಯಲ್ಲಿ ಅರ್ಥಮಾಡಿಕೊಂಡಂತಾಗುತ್ತದೆ ಅಲ್ಲದೆ ಅದು ಸಾಂವಿಧಾನಿಕ ವ್ಯಾಖ್ಯಾನದ ಒಪ್ಪಿತ ಕಟ್ಟಳೆಗಳಿಗೆ ವಿರುದ್ಧವಾಗಿದೆ. ಪ್ರಜೆಗಳ ಹಕ್ಕುಗಳು ಮತ್ತು ಸ್ವಾತಂತ್ರ್ಯಗಳ ವಿಚಾರದಲ್ಲಿ ಅಂತಹ ವಿಧಾನವನ್ನು ಅನುಸರಿಸುವುದು, ನಮ್ಮ ಜನರ ಸಾಮೂಹಿಕ ವಿವೇಕ ಮತ್ತು ಸಂವಿಧಾನ ಸಭೆಯ ಜ್ಞಾನಕ್ಕೆ ಮಾಡಿದ ಅವಮಾನಕ್ಕೆ ಸಮ.[207]

59. ನೈಸರ್ಗಿಕವಾದ ಮತ್ತು ವ್ಯಕ್ತಿಗಳಿಂದ ಬೇರ್ಪಡಿಸಲಾಗದ ಖಾಸಗೀತನದ ಹಕ್ಕನ್ನು ಚಲಾಯಿಸುವುದೆಂದರೆ, ಒಬ್ಬ ವ್ಯಕ್ತಿಗೆ ಸ್ವಯಂ-ನಿರ್ಧಾರಿತ ಲೈಂಗಿಕ ನಿಲುವಿನ ಹಕ್ಕನ್ನು ಒದಗಿಸುವುದಕ್ಕೆ ಸಮ. ಹೀಗಾಗಿ, ಅಲ್ಪಸಂಖ್ಯಾತರ ಹಕ್ಕುಗಳನ್ನು ರಕ್ಷಿಸುವ ಸಲುವಾಗಿ ಖಾಸಗೀತನದ ಹಕ್ಕಿನ ವ್ಯಾಪ್ತಿಯನ್ನು ವಿಸ್ತರಿಸಿ ಅದರಲ್ಲಿ 'ಲೈಂಗಿಕ ಖಾಸಗೀತನ'ದ ಹಕ್ಕನ್ನು ಸೇರಿಸುವುದು ಅನಿವಾರ್ಯವಾಗಿದೆ. ವ್ಯಕ್ತಿಗಳಿಂದ ಬೇರ್ಪಡಿಸಲಾಗದ ಖಾಸಗೀತನದ ಹಕ್ಕಿನ ಹಿನ್ನೆಲೆಯಲ್ಲಿ ಲೈಂಗಿಕ ಖಾಸಗೀತನದ ಹಕ್ಕಿಗೆ ನೈಸರ್ಗಿಕ ಹಕ್ಕಿನ ಸ್ಥಾನಮಾನ ನೀಡಿ, ಅದನ್ನು ಸಂವಿಧಾನದಡಿಯಲ್ಲಿ ಸ್ವಾತಂತ್ರ್ಯದ ಮೂಲಭೂತ ಭಾಗ ಮತ್ತು ಘನತೆಯ ಆತ್ಮಸಂಗಾತಿ ಎಂದು ಪರಿಗಣಿಸಿ ರಕ್ಷಿಸಬೇಕು.

60. ದಬ್ಬಾಳಿಕೆಯ ವಸಾಹತುಶಾಹಿ ಶಾಸನವೊಂದರ ಮೂಲಕ ಒಂದು ಪ್ರಜಾಪ್ರಭುತ್ವದ ನಾಗರಿಕರನ್ನು ತಮ್ಮ ಜೀವನವನ್ನು ಮರೆಯಲ್ಲಿ ಕಳೆಯಲು ಒತ್ತಾಯಿಸಲು ಸಾಧ್ಯವಿಲ್ಲ. ತಮ್ಮ ಮೂಲಭೂತ ಹಕ್ಕುಗಳ ಪೂರೈಸುವಿಕೆಯನ್ನು ಲೈಂಗಿಕ ಮತ್ತು ಲಿಂಗಾಧಾರಿತ ಅಲ್ಪಸಂಖ್ಯಾತರ ಮೂಲಭೂತ ಹಕ್ಕುಗಳು ಅವರಿಗೆ ದೊರಕಿವೆ ಎಂಬುದನ್ನು ಖಚಿತಪಡಿಸಿಕೊಳ್ಳಲು, 'ಕ್ಲೋಸೆಟ್/ಅಲಮಾರಿ ಅಥವಾ ಮುಚ್ಚಿದ ಬಾಗಿಲುಗಳನ್ನು ಎದುರಿಸುವುದು' ಅನಿವಾರ್ಯ, ಆ ಮೂಲಕ 'ಕಡ್ಡಾಯವಾದ ಭಿನ್ನಲಿಂಗೀಯತೆ'ಯನ್ನು ಎದುರಿಸುವುದು ಕೂಡ ಅಗತ್ಯವಾಗಿದೆ. ಕ್ಲೋಸೆಟ್ ಅನ್ನು ಎದುರಿಸುವುದು ಎಂದರೆ "ಮುಚ್ಚಿದ ಬಾಗಿಲಿಗೆ ಸವಾಲೆಸೆಯುವ ಎಲ್ಲಾ ಬಗೆಯ ಆಸೆ, ಅಸ್ಮಿತೆ ಮತ್ತು ಕ್ರಿಯೆಗಳ ಸಂಕೇತಗಳನ್ನು

[207] Puttaswamy, at Para 350.

ಪುನಃಪಡೆದುಕೊಳ್ಳುವುದು". ಅಲ್ಲದೆ, ಅದು ಲೈಂಗಿಕ ಅಲ್ಪಸಂಖ್ಯಾತ ವ್ಯಕ್ತಿಗಳು ತಮ್ಮ ಮೇಲೆ ಭಿನ್ನಲೈಂಗಿಕತೆಯು ಹೇರಿರುವ ಅದೃಶ್ಯ ಸಂಕೋಲೆಗೆಳಿಂದ ಬಿಡುಗಡೆ ಹೊಂದಿ ಸಾರ್ವಜನಿಕ ಜೀವನದಲ್ಲಿ ಸಂಪೂರ್ಣವಾಗಿ ಪಾಲ್ಗೊಳ್ಳುವ ಸ್ವಾತಂತ್ರ್ಯ ಹೊಂದಿದ್ದಾರೆ ಎಂಬುದನ್ನು ಖಾತರಿಪಡಿಸಿಕೊಳ್ಳುವುದನ್ನೂ ಒಳಗೊಂಡಿದೆ. ಲೈಂಗಿಕತೆಯ ಆಯ್ಕೆಯು ಖಾಸಗೀತನದ ಕೇಂದ್ರ ವಸ್ತುವಾಗಿದೆ. ಆದಲ್ಲದೇ, ಲೈಂಗಿಕ ನಿಲುವನ್ನು ಆಧರಿಸಿರುವ ಅಸ್ಮಿತೆಯನ್ನು ಸಾರ್ವಜನಿಕವಾಗಿ ಸಮರ್ಥಿಸಿಕೊಳ್ಳುವುದು ಕೂಡಾ ಸ್ವಾತಂತ್ರ್ಯಗಳ ಚಲಾವಣೆಯ ಮುಖ್ಯ ಭಾಗ ಎಂಬುದನ್ನು ನಮ್ಮ ಸಂವಿಧಾನಾತ್ಮಕ ನ್ಯಾಯಶಾಸ್ತ್ರ ಗುರುತಿಸಬೇಕು.

61. ಲೈಂಗಿಕ ಖಾಸಗೀತನದ ಹಕ್ಕನ್ನು ಮನಗಾಣುವಾಗ, 'ಸಾರ್ವಜನಿಕ' ಮತ್ತು 'ಖಾಸಗೀ' ಸ್ಥಳಗಳ ಚಿತ್ರಣವು ಎಲ್.ಜಿ.ಬಿ.ಟಿ.ಕ್ಯು ಸಮುದಾಯದವರ ಬದುಕಿನ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬುದನ್ನು ಪರಿಗಣಿಸುವುದು ಮುಖ್ಯವಾಗುತ್ತದೆ. ಈ ಸಮುದಾಯದ ಸದಸ್ಯರು, ತಮ್ಮ ಅಧಿಕಾರಗಳನ್ನು ಖಾಸಗೀತನದ ಹಕ್ಕನ್ನು ಆಧರಿಸಿ ಮಂಡಿಸಿದರೆ ಅಂತಹ ಅಧಿಕಾರವು ಖಾಸಗೀ ಸ್ಥಳದ ಅನುಕೂಲವಿಲ್ಲದ ವ್ಯಕ್ತಿಗಳ ಪಾಲಿಗೆ ನಿರುಪಯುಕ್ತವಾಗುತ್ತದೆ ಎಂದು ವಾದಿಸಿದ್ ದಾರೆ[208]. ಹಾಗೆ ನೋಡಿದರೆ, ಖಾಸಗೀ ಸ್ಥಳದ ಅವಕಾಶವಿರುವ ವ್ಯಕ್ತಿಗಳ ವಿಚಾರದಲ್ಲಿ ಕೂಡಾ 'ಖಾಸಗೀ' ಎಂಬುದನ್ನು ಮನೆ ಮತ್ತು ಕುಟುಂಬವೆಂದು ತಪ್ಪಾಗಿ ಅರ್ಥೈಸಿಕೊಳ್ಳಬಹುದು. ಕುಟುಂಬದೊಳಗಿನ ಭಿನ್ನಲಿಂಗೀಯತೆಯ ದೆಸೆಯಿಂದ ಸಮಲೈಂಗಿಕ ವ್ಯಕ್ತಿಯು ಮರೆಯಲ್ಲಿ ಉಳಿಯಬೇಕಾಗಿ ಬರುವುದರಿಂದ ಮನೆ ಎಂಬುದು ಕೂಡ ಸಾರ್ವಜನಿಕ ಸ್ಥಳವಾಗಿ ಬದಲಾಗುತ್ತದೆ, ಆದ್ದರಿಂದ, ಕೆಲವು ವ್ಯಕ್ತಿಗಳಿಗೆ ಖಾಸಗೀ ಜಾಗದ ಎಂಬ ಕಲ್ಪನೆ ಕೂಡಾ ದೂರದ ಕನಸಾಗಿರುತ್ತದೆ.

62. ಖಾಸಗೀತನವು "ಮರ್ಯಾದಸ್ತ' ಮತ್ತು 'ಮರ್ಯಾದೆಯಿಲ್ಲದ' ಲೈಂಗಿಕ ಕ್ರಿಯೆಗಳ ವರ್ಗಗಳನ್ನು ಸೃಷ್ಟಿಸಿ ಮುಚ್ಚಿದ ಬಾಗಿಲುಗಳ ಹಿಂದಿನ ಕ್ರಿಯೆಗಳಿಗೆ ಮಾತ್ರ ರಕ್ಷಣೆ ಒದಗಿಸುತ್ತದೆ. ಹಾಗಾಗಿ ಖಾಸಗೀಯಾಗಿ ನಡೆಯುವ ಒಪ್ಪಿಗೆಯ ಲೈಂಗಿಕ ಕ್ರಿಯೆಗಳಿಗೆ ಒದಗಿಸಿರುವ ಭದ್ರತೆಯು, ತಮ್ಮ ಲೈಂಗಿಕತೆ ಮತ್ತು ಬಾಹ್ಯಲಕ್ಷಣಗಳ ದೆಸೆಯಿಂದ ಲೈಂಗಿಕ ಅಲ್ಪಸಂಖ್ಯಾತರು ಸಾರ್ವಜನಿಕ ಸ್ಥಳಗಳಲ್ಲಿ

[208] Danish Sheikh, "Queer Rights and the Puttaswamy Judgement", Economic and Political Weekly, Vol. 52 (2017), at page 51.

ತೊಂದರೆಗೊಳಗಾಗುವ ಸಂದರ್ಭಗಳಲ್ಲಿ ಸಹ ಲಭ್ಯವಿರಬೇಕು [209] . ಸಾರ್ವಜನಿಕ ಸ್ಥಳಗಳು ಭಿನ್ನಲೈಂಗಿಕವಾಗಿವೆ ಮತ್ತು ಸಮಾಲೈಂಗಿಕ ಕ್ರಿಯೆಗಳು ಭಾಗಶಃ ಮರೆಯಲ್ಲಿ ನಡೆಯುತ್ತವೆ, ಮತ್ತು ಅದರಿಂದಾಗಿ 'ಸಮಲೈಂಗಿಕ' ಕ್ರಿಯೆಗಳನ್ನು ಖಾಸಗೀ ವಲಯಕ್ಕೆ ಸೀಮಿತಗೊಳಿಸಲಾಗಿದೆ ಎಂಬುದನ್ನು ಒಪ್ಪಿಕೊಂಡರೆ, "ಸಾರ್ವಜನಿಕ ಸ್ಥಳಗಳಲ್ಲಿ ಅಡಕವಾಗಿರುವ ಭಿನ್ನಲಿಂಗೀಯತೆ" ಯನ್ನು ಬೆಂಬಲಿಸಿದಂತಾಗುತ್ತದೆ. ಲೈಂಗಿಕ ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದ ಸದಸ್ಯರು ಸಾರ್ವಜನಿಕ ಸ್ಥಳಗಳಲ್ಲಿ ಆಗಾಗ್ಗೆ ಕಿರುಕುಳಕ್ಕೆ ಒಳಗಾಗುತ್ತಾರೆ ಎಂಬುದನ್ನು ಒಪ್ಪಿಕೊಳ್ಳಬೇಕು. ಸ್ವಾತಂತ್ರ್ಯದ ಹಕ್ಕನ್ನು ಅವಲಂಬಿಸಿರುವ ಲೈಂಗಿಕ ಖಾಸಗೀತನದ ಹಕ್ಕಿನಡಿಯಲ್ಲಿ, ಸಮುದಾಯದ ವ್ಯಕ್ತಿಗಳು ಸಾರ್ವಜನಿಕ ಸ್ಥಳಗಳಲ್ಲಿ ಸರ್ಕಾರದ ಹಸ್ತಕ್ಷೇಪವಿಲ್ಲದೇ, ತಮ್ಮಿಷ್ಟದಂತೆ ಓಡಾಡುವ ಹಕ್ಕನ್ನು ಕೂಡಾ ಗುರುತಿಸಬೇಕು .

## F.I. ಲೈಂಗಿಕ ಖಾಸಗೀತನ ಮತ್ತು ಸ್ವಾಯತ್ತತೆ - ಭಿನ್ನಲಿಂಗೀಯ ಚೌಕಟ್ಟಿನ ವಿಘಟನೆ

63. ಖಾಸಗೀತನದ ಸಂರಕ್ಷಿತ ವಲಯ ಇಲ್ಲದಿರುವ ಸಂದರ್ಭದಲ್ಲಿ, ವ್ಯಕ್ತಿಗಳು ಸಾಮಾಜದ ರೂಢೀಗತ ಪರಿಕಲ್ಪನೆಗಳಿಗೆ ಒತ್ತಾಯಪೂರ್ವಕವಾಗಿ ಬದ್ಧರಾಗಬೇಕಾಗುತ್ತದೆ. ಪುಟ್ಟಸ್ವಾಮಿ ಪ್ರಕರಣದಲ್ಲಿ ಖಾಸಗೀತನದ ಹಕ್ಕನ್ನು ಏಕರೂಪತೆಯನ್ನು ಬಲವಂತವಾಗಿ ಹೇರುವುದರ ವಿರುದ್ಧದ ಗುರಾಣಿಯೆಂದು ಕರೆಯಲಾಗಿದ್ದು ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು ಅವಶ್ಯಕವಾದ ಅಂಶವೆಂದು ಕರೆಯಲಾಗಿದೆ:

> ಖಾಸಗೀತನದ ವಲಯವನ್ನು ಗುರುತಿಸುವುದು, ವ್ಯಕ್ತಿಯೊಬ್ಬರಿಗೆ ತಮ್ಮ ವ್ಯಕ್ತಿತ್ವದ ಅಭಿವೃದ್ಧಿಯ ಮಾರ್ಗವನ್ನು ಚಿತ್ರಿಸಿಕೊಂಡು ಅದರಲ್ಲಿ ನಡೆಯುವ ಅಧಿಕಾರವಿರಬೇಕು ಎಂಬುದನ್ನು ಒಪ್ಪಿಕೊಳ್ಳುವುದಕ್ಕೆ ಸಮ. ಹೀಗಾಗಿ ಖಾಸಗೀತನವೆಂಬುದು ಮಾನವ ಘನತೆಗೆ ಸಂಬಂಧಿಸಿದ ಒಂದು ಸಿದ್ಧ ನಿಯಮವೇ ಸರಿ. ವ್ಯಕ್ತಿಯೊಬ್ಬರು ಸಾಜಾಕ ನಿರೀಕ್ಷೆಗಳಿಂದ ಮುಕ್ತವಾಗಿರಬಲ್ಲ ಖಾಸಗೀತನದ ವಲಯವೊಂದನ್ನು ಪಡೆಯುವುದು ವ್ಯಕ್ತಿಯ ಖಾಸಗೀ ವಿಚಾರಗಳಾಗಿರುವ ಆಲೋಚನೆಗಳು ಮತ್ತು ನಡವಳಿಕೆಯ ಮಾದರಿಗಳ ಅಧಿಕಾರ. ಖಾಸಗೀತನದ ಆ

---

[209] Saptarshi Mandal, "'Right To Privacy' In Naz Foundation: A Counter-Heteronormative Critique", NUJS Law Review, Vol. 2 (2009), at page 533.

> ವಲಯದಲ್ಲಿ ವ್ಯಕ್ತಿಯೊಬ್ಬರ ಕುರಿತು ಇತರರು ನಿರ್ಧಿಷ್ಟ ಅಭಿಪ್ರಾಯಗಳನ್ನು ಹೊಂದುವುದಿಲ್ಲ. ಖಾಸಗೀತನವು ವ್ಯಕ್ತಿಗೆ, ಮಾನವ ವ್ಯಕ್ತಿತ್ವದ ಮೂಲಕ ವ್ಯಕ್ತವಾಗುವ ನಿರ್ಣಾಯಕ ನಿರ್ಧಾರಗಳನ್ನು ತೆಗೆದುಕೊಳ್ಳುವ ಶಕ್ತಿನೀಡುತ್ತದೆ. ಅದು ವ್ಯಕ್ತಿಗಳಿಗೆ ತಮ್ಮ ನಂಬಿಕೆಗಳು, ಯೋಚನೆಗಳು, ಅಭಿವ್ಯಕ್ತಿಗಳು, ಆಲೋಚನೆಗಳು, ಸಿಧ್ಧಾಂತಗಳು, ಒಲವುಗಳು ಮತ್ತು ಸಮಾಜದ ಏಕರೂಪತೆಯ ಬೇಡಿಕೆಗಳ ವಿರುಧ್ಧದ ಆಯ್ಕೆಗಳನ್ನು ಸಂರಕ್ಷಿಸುವ ಬಲ ನೀಡುತ್ತದೆ

ಈ ನ್ಯಾಯಾಲಯವು ಸಮಾಜದ ಬೇಡಿಕೆಗಳ ಬಂಧನದಿಂದ ಬಿಡುಗಡೆ ಹೊಂದುವ ಹಕ್ಕನ್ನು ಹಾಗೂ ಒಂದು ಬಹುತ್ವವಾದಿ ಮತ್ತು ಒಳಗೊಳ್ಳುವ ಸಂಸ್ಕೃತಿಯನ್ನು ಪ್ರೋತ್ಸಾಹಿಸುವ ಅಗತ್ಯವನ್ನು ಮನಗಣ್ಡಿದೆ. ಉದಾಹರಣೆಗೆ ಪುಟ್ಟಸ್ವಾಮಿ ಪ್ರಕರಣದಲ್ಲಿ ನಾಲ್ಕು ಮಂದಿ ನ್ಯಾಯಮೂರ್ತಿಗಳ ಪೀಠದ ತೀರ್ಪು ಈ ರೀತಿ ನುಡಿಯಿತು :

> ಖಾಸಗೀತನವು ಎಲ್ಲ ಬಗೆಯ ಸ್ವಾತ್ರಂತ್ರ್ಯದ ಅಡಿಪಾಯವಾಗಿದೆ, ಏಕೆಂದರೆ, ವ್ಯಕ್ತಿಗಳು ತಮ್ಮ ಸ್ವಾತಂತ್ರ್ಯವನ್ನು ಹೇಗೆ ಅತ್ಯುತ್ತಮವಾಗಿ ಚಲಾಯಿಸಬಹುದು ಎಂಬುದನ್ನು ಖಾಸಗೀತನದಲ್ಲೇ ನಿರ್ಧರಿಸುತ್ತಾರೆ. ವೈವಿಧ್ಯತೆಯೆಂಬ ದಾರವು ಬಹುತ್ವದ ಸಂಸ್ಕೃತಿಯೆಂಬ ಬಟ್ಟೆಯಮೇಲೆ ಹೆಣೆದಿರುವ ಕಸೂತಿಯೊಳಗೆ ವೈಯಕ್ತಿಕ ಘನತೆ ಮತ್ತು ಖಾಸಗೀತನಗಳನ್ನು ಬಿಡಿಸಲಾಗದಂತೆ ಬೆಸೆಯಲಾಗಿದೆ

64. **ಸಂತೋಷ್ ಸಿಂಘ್ v. ಭಾರತ ಸರ್ಕಾರ**[210] ಪ್ರಕರಣದಲ್ಲಿ, ಈ ನ್ಯಾಯಾಲಯದ ದ್ವಿಸದಸ್ಯ ಪೀಠವು 32ನೇ ಕಲಮಿನಡಿಯಲ್ಲಿ ನೈತಿಕ ಮೌಲ್ಯಗಳನ್ನು ಬೆಳೆಸಲು ಶಾಲಾ ಪಠ್ಯಕ್ರಮದಲ್ಲಿ ನೀತಿಶಾಸ್ತ್ರವನ್ನು ಕಡ್ಡಾಯ ವಿಷಯವಾಗಿ ಸೇರಿಸುವಂತೆ  ಪ್ರೌಢ ಶಿಕ್ಷಣದ ಕೇಂದ್ರ ಮಂಡಳಿಗೆ ನಿರ್ದೇಶನ ನೀಡುವಂತೆ ಕೇಳಿಕೊಂಡಿದ್ದ ಅರ್ಜಿಯೊಂದನ್ನು ವಜಾಗೊಳಿಸಿತ್ತು. ನಮ್ಮಲ್ಲಿ ಒಬ್ಬ ನ್ಯಾಯಾಮೂರ್ತಿಗಳು (ನ್ಯಾ.

[210] (2016) 8 SCC 253

ಚಂದ್ರಚೂಡ್) ಆಲೋಚನೆಗಳಲ್ಲಿನ ಬಹುತ್ವವನ್ನು ಒಪ್ಪಿಕೊಳ್ಳುವುದರ ಮತ್ತು ಕ್ರಾಂತಿಕಾರಕವಾದ ಭಿನ್ನ ದೃಷ್ಟಿಕೊನಗಳನ್ನು ಒಪ್ಪಿಕೊಳ್ಳುವುದರ ಮಹತ್ವವನ್ನು ಎತ್ತಿಹಿಡಿದರು:

> ನೈತಿಕತೆಯು, ಕೆಲವರಿಗೆ ಅದೆಷ್ಟೇ ಮುಖ್ಯವೆಂದು ಅನಿಸಿದರೂ, ಅದು ಸಮಾಜ ತಾನಾಗಿಯೇ ಪಾಲಿಸುತ್ತಿರುವ ಮೌಲ್ಯಗಳ ರಚನೆಯಲ್ಲಿನ ಕೇವಲ ಒಂದು ಅಂಶವಷ್ಟೇ ಆಗಿದೆ. ಪ್ರಜಾತಾಂತ್ರಿಕ ಸಮಾಜವೊಂದು ತನ್ನ ಮಕ್ಕಳಿಗೆ ನೀಡುವುದಕ್ಕೋಸ್ಕರ ಕಲಿಯಬಯಸುವ ಸಮಾನ ಪ್ರಾಮುಖ್ಯತೆಯ ಇತರ ಮೌಲ್ಯಗಳಿವೆ. ಆ ಮೌಲ್ಯಗಳಲ್ಲಿ, ಆಲೋಚನೆ, ಚಿತ್ರಣ ಮತ್ತು ನಂಬುಗೆಗಳ ಬಹುತ್ವ ಮತ್ತು ವೈವಿಧ್ಯತೆಯನ್ನು ಒಪ್ಪಿಕೊಳ್ಳುವುದೂ ಸೇರಿದೆ, ಅದರೆ ದುರ್ದೈವದಿಂದ ಅದು ಜಾಗತಿಕ ಅಪಾಯಗಳನ್ನು ಎದುರಿಸುತ್ತಿದೆ. ಆದಾಗ್ಯೂ, ವಿಪರೀತ ಭಿನ್ನವಾದ ಅಭಿಪ್ರಾಯಗಳನ್ನು ಹೊಂದಿರುವವರೆಡೆಗೆ ಸಹಿಷ್ಣುತೆ, ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಗಳಿಂದ ಅಂಚಿಗೆ ದೂಡಲ್ಪಟ್ಟಿರುವಂಥವರೆಡೆಗೆ ಸ್ವಾನುಭೂತಿ, ಪ್ರತಿ ಮನುಷ್ಯನಲ್ಲಿ ನೆಲೆಯಾಗಿರುವ ಸ್ವಾಭಾವಿಕ ಮಾನವೀಯತೆಯೆಡೆಗೆ ಕನಿಕರ ಮತ್ತು ಆ ಮಾನವೀಯಯ ಅರಿವನ್ನು ಪೋಷಿಸುವುದು ಕೂಡಾ ಅಷ್ಟೇ ಮುಖ್ಯವಾದುದು. ಮೌಲಾಧರಿತ ಶಿಕ್ಷಣವು ನಮ್ಮ ಕಿರಿಯರಿಗೆ ಜಗತ್ತಿನೆಲ್ಲೆಡೆ ಜನರು ಮತ್ತು ಸಮಾಜಗಳಿಗೆ ಬೆದರಿಕೆಯನ್ನೊಡ್ಡುತ್ತಿರುವ  ಪೂರ್ವಾಗ್ರಹ, ದ್ವೇಷ ಮತ್ತು ತಾರತಮ್ಯಗಳ ಭಯಾನಕ ಪರಿಣಾಮಗಳ ತಿಳಿವಳಿಕೆಯಿರುವಂತೆ ನೋಡಿಕೊಳ್ಳಬೇಕು

ಖಾಸಗೀತನದ ಹಕ್ಕು ಒಬ್ಬ ವ್ಯಕ್ತಿಗೆ ಸಾಮಾಜದ ನಿರೀಕ್ಷೆಗಳ ಭುಉತಗನ್ನಡಿಯಾಚೆಗೆ ತನ್ನ ಸ್ವಾಯತ್ತತೆಯನ್ನು ಚಲಾಯಿಸುವ ಶಕ್ತಿ ನೀಡುತ್ತದೆ. ಮನುಷ್ಯರಿಗೆ ತಮ್ಮ ವ್ಯಕ್ತಿತ್ವದ ಅರಿವಿರುವುದು ಅವರು ಸ್ವಾಯತ್ತೆ ಹೊಂದಿರುವುದನ್ನು ಅವಲಂಬಿಸಿರುತ್ತದೆ. ಒಂದು ಮುಕ್ತ ಪ್ರಜಾಪ್ರಭುತ್ವದಲ್ಲಿ, ವ್ಯಕ್ತಿಯನ್ನು ಸ್ವತಂತ್ರ ಮನುಷ್ಯರೆಂದು

ಗುರುತಿಸಿದಾಗ, ವ್ಯಕ್ತಿಗಳಿಗಿರುವ ಸ್ವತಂತ್ರ ಆಯ್ಕೆಗಳನ್ನು ಮಾಡುವ ಸಾಮರ್ಥ್ಯವನ್ನು ಗೌರವಿಸುವ ಸರ್ಕಾರದ ಕ್ರಮವನ್ನು ಅಂಗೀಕರಿಸಿದಂತಾಗುತ್ತಾದೆ. ಗೌಪ್ಯತೆಯ ಹಕ್ಕು, ಕೆಲ ಕ್ರಿಯೆಗಳು ಇನ್ನು ಮುಂದೆ ಅನೈತಿಕವಲ್ಲವೆಂದುದು ಹೇಳುವುದಷ್ಟೇ ಅಲ್ಲದೇ, ವ್ಯಕ್ತಿಗಳಿಗೆ ಅಂತಹ ಕ್ರಿಯೆಗಳನ್ನು ಮಾಡುವ ಸದೃಢವಾದ ನೈತಿಕ ಹಕ್ಕಿದೆ ಎಂಬುದನ್ನು ಸೂಚಿಸುತ್ತದೆ. ರಿಚರ್ಡ್ಸ್ ಗಮನಿಸಿದಂತೆ, ಈ ನೈತಿಕ ಹಕ್ಕು, ವ್ಯಕ್ತಿಗಳ ಅಧಿಕಾರವಾಗಿರುವ ಸ್ವಾಯತ್ತತೆಯಿಂದ ಹೊರಹೊಮ್ಮುತ್ತದೆ:

> ಮಾನವಾಧಿಕಾರ ಸಿಧ್ಧಾಂತದ ಕೇಂದ್ರದಲ್ಲಿರುವ ವಿಚಾರವಾಗಿರುವ ಸ್ವಾಯುತ್ತತೆ ಎಂಬುದು, ವ್ಯಕ್ತಿಗಳು ಒಬ್ಬರ ಬದುಕು ಮಾತು ಬದುಕುವ ಬಗೆಗೆ ಸಂಬಂಧಿಸಿದ ಯೋಜನೆಗಳನ್ನು ಅಭಿವೃದ್ಧಿ ಪಡಿಸುವ ಮತ್ತು ಅವನ್ನು ಕಾರ್ಯರುಉಪಕ್ಕಿಳಿಸುವ ಹಲಬಗೆಯ ಸಾಮರ್ಥ್ಯಳನ್ನು ಹೊಂದಿದ್ದಾರೆ ಎಂಬ ಕುರಿತು ಪ್ರಾಯೋಗಿಕ ಕಲ್ಪನೆ. ಈ ಸಾಮರ್ಥ್ಯಗಳ ಪರಿಣಮದಿನ್ದದಿಂದ, ಮನುಷ್ಯರು ತಮ್ಮ ಬದುಕು ಹೀಗಿರ್ಬೇಕು ಮತ್ತು ಪ್ರತ್ಯೇಕ ಜ್ಈವಿಯಾಗಿ ಜೀವಿಯಾಗಿ ವಿಮರ್ಶಾತ್ಮಕವಾಗಿ ಆಲೋಚಿಸುತ್ತಾ, ತನ್ನ ಮೊದಲ ದರ್ಜೆಯ ಬಯಕೆಗಳಲ್ಲಿ ಯಾವುದನ್ನು ಬೆಳೆಸಿಕೊಳ್ಳಬೆಕು ಯಾವುದನ್ನು ತ್ಯಜಿಸಬೇಕು, ಯಾವ ಸಾಮರ್ಥ್ಯಗಳನ್ನು ವೃಧ್ಧಿಸಿಕೊಳ್ಳಬೇಕು, ಯಾವುದನ್ನು ಬಿಡಬೇಕು, ಯಾರೊಂದಿಗೆ ಗುರುತೀಕೊಳ್ಳಬೆಕು ಯಾರೊಂದಿಗೆ ಸಲ್ಲದು, ತನ್ನ ಅಗತ್ಯ ಮತ್ತು ಆಕಾಂಕ್ಷೆಗಳೆಂದು ಯಾವುದನ್ನು ವ್ಯಾಖ್ಯಾನಿಸಿಕೊಳ್ಳಬೇಕು ಎಂಬುದರ ಕುರಿತು ಸ್ವತಂತ್ರ ನಿರ್ಧಾರ ತೆಗೆದುಕೊಳ್ಳುವಂತಾಗುತ್ತದೆ. ಸಂಕ್ಷಿಪ್ತವಾಗಿ, ಸ್ವಾಯುತ್ತತೆಯು ವ್ಯಕ್ತಿಗಳಿಗೆ ತಮ್ಮ ಬದುಕನ್ನು ತಮ್ಮದೇ ಎಂದುಕೊಳ್ಳುವ ಸಾಮರ್ಥ್ಯ ನೀಡುತ್ತದೆ. ಪ್ರತ್ಯೇಕಗೊಳ್ಳಲು ಮತ್ತು ವ್ಯಕ್ತಿತ್ವ ರೂಢಿಸಿಕೊಳ್ಳಲು ಈ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳುವುದು, ವ್ಯಕ್ತಿಯಾಗಿ ರೂಪುಗೊಳ್ಳುವ

ಪ್ರಕ್ರಿಯೆಯ ಕೇಂದ್ರದಲ್ಲಿರುವ ಹುಟ್ಟಿನಿಂದಲೂ ನಡೆಯುವ ಬೆಳವಣಿಗೆಗೆ ಸಂಬಂಧಿಸಿದ ಕ್ರಿಯೆ.[211]

65. **ಕಾಮನ್ ಕಾಸ್ (ಎ ರೆಜಿಸ್ಟರಡ್ ಸೊಸೈಟಿ)** v. **ಭಾರತ ಸರ್ಕಾರ**[212] **(" ಕಾಮನ್ ಕಾಸ್ ")** ಪ್ರಕರಣದಲ್ಲಿ, ಈ ನ್ಯಾಯಾಲಯದ ಸಾಂವಿಧಾನಿಕ ಪೀಠವು, ಘನತೆಯೊಂದಿಗೆ ಸಾಯುವ ಹಕ್ಕೂ ಸಂವಿಧಾನದ ಮಾನ್ಯಮಾಡಿರುವ ಬದುಕುವ ಹಕ್ಕಿನ ಅವಿಭಾಜ್ಯ ಅಂಗ ಮತ್ತು ಮತ್ತು ಯೋಗ್ಯವಾದ ಮಾನಸಿಕ ಸಾಮರ್ಥ್ಯ ಹೊಂದಿರುವ ಒಬ್ಬ ವ್ಯಕ್ತಿಯು ಈ ಬಗ್ಗೆ ಮುಂಚಿತವಾಗಿ ವೈದ್ಯಕೀಯ ನಿರ್ದೇಶನವನ್ನು ನೀಡಿ ತನ್ನ ಸ್ವಾಯತ್ತತೆಯನ್ನು ವ್ಯಕ್ತಪಡಿಸುವ ಅರ್ಹತೆ ಹೊಂದಿದ್ದಾನೆ ಎಂದು ಹೇಳಿತು. :

> ಖಾಸಗೀತನದ ರಕ್ಷಣಾತ್ಮಕ ಕವಚವು, ಮನುಷ್ಯನ ಜೀವನ ಚಕ್ರವನ್ನು ಮೂಲಭೂತವಾಗಿ ಪ್ರಭಾವಿಸುವ ಕೆಲ ನಿರ್ಧಾರಗಳನ್ನು ಒಳಗೊಂಡಿರುತ್ತದೆ. ಅದು ವ್ಯಕ್ತಿಗಳ ಬದುಕು ಮತ್ತು ಬೆಳವಣಿಗೆಯ ಮೇಲೆ ಪ್ರಭಾವ ಬೀರುವ ಅತ್ಯಂತ ವೈಯಕ್ತಿಕ ಮತ್ತು ಖಸಗೀ ನಿರ್ಧಾರಗಳನ್ನು ಕಾಘಾಡುತ್ತದೆ. ಹೀಗಾಗಿ, ಸಂತಾನೋತ್ಪತ್ತಿ, ಗರ್ಭನಿರೋಧನೆ ಮತ್ತು ಮದುವೆಯೇ ಮೊದಲಾದ ವಿಚಾರಗಳ ಆಯ್ಕೆ ಮತ್ತು ನಿರ್ಧಾರಗಳನ್ನು ರಕ್ಷಿಸಬೇಕೆಂದು ನಿರ್ಧರಿಸಲಾಗಿದೆ. ಸಾವು ಮಾನವ ಜೀವನ ಚಕ್ರದ ಓಟದ ಅನಿವಾರ್ಯ ಕೊನೆ ಎನ್ನುವುದು ನಿಜವಾದರೂ, ವ್ಯಕ್ತಿಗಳು ಬಹುಬಾರಿ ಸಾವಿಗೆ ಸಂಬಂಧಿಸಿದ ಆಯ್ಕೆಗಳು ಮತ್ತು ನಿರ್ಧಾರಗಳನ್ನು ಎದುರುಗೊಳ್ಳಬೇಕಾಗುತ್ತದೆ. ಹುಟ್ಟು, ಲೈಂಗಿಕ ಕ್ರಿಯೆ ಮತ್ತು ಮದುವೆಗೆ ಸಂಬಂಧಿಸಿದ ನಿರ್ಧಾರಗಳಂತೆ, ಸಾವಿಗೆ ಸಂಬಂಧಿಸಿದ ನಿರ್ಧಾರಗಳೂ ಖಾಸಗೀತನದ ಹಕ್ಕಿನ ದಯೆಯಿಂದ ಸಂವಿಧಾದಲ್ಲಿ ರಕ್ಷಿಸಲ್ಪಟ್ಟಿವೆ.

[211] M. Mahler, "The Psychological Birth of The Human Infant: Symbiosis And Individuation" (1975); L. Kaplan, Oneness And Separateness: From Infant To Individual (1978).

[212] (2018) 5 SCC 1

ಸ್ವಾಯತ್ತತೆ ಮತ್ತು ಖಾಸಗೀತನಗಳ ನಡುವೆ ಬಿಡಿಸಲಾರದ ನಂಟಿದೆ. ಒಂದರ ಸಂಪೂರ್ಣ ಸಾಕ್ಷಾತ್ಕಾರಕ್ಕೆ ಮತ್ತೊಂದರ ಅಗತ್ಯವಿದೆ. ಈ ಪರಸ್ಪರ ಸಂಬಂಧವನ್ನು ಪುಟ್ಟಸ್ವಾಮಿ ಪ್ರಕರಣದಲ್ಲಿ ಗುರುತಿಸಲಾಗಿದೆ :

> ಖಾಸಗೀತನವು, ವ್ಯಕ್ತಿಯೊಬ್ಬರಿಗೆ ಖಾಸಗೀ ಸ್ಥಳವೊಂದನ್ನು ಕಾಯಿದಿರಿಸಬೇಕೆಂದು ಸ್ಪಷ್ಟಪಡಿಸುತ್ತದೆ ಮತ್ತುಉ ಅದನ್ನು "ಒಬ್ಬಂಟಿಯಾಗಿ ಬಿಟ್ಟುಬಿಡಲ್ಪಡುವ ಹಕ್ಕು" ಎಂದು ಕರೆಯುತ್ತಾರೆ. ಈ ತತ್ವವುಉ ವ್ಯಕ್ತಿಯ ಸ್ವಾಯುತ್ತೆಯ ಮೇಲೆ ರೂಪುಗೊಂಡಿದೆ. ಖಾಸಗೀತನದ ಪರಿಕಲ್ಪನೆಯು ವ್ಯಕ್ತಿಯನ್ನು ತನ್ನ ವ್ಯಕ್ತಿತ್ವದ ಅವಿಭಾಜ್ಯ ಅಂಗವಾಗಿರುವ ತನ್ನ ಮಾನವೀಯ ಅಂಶವನ್ನು ಸಮರ್ಥಿಸಿಕೊಳ್ಳುವ ಮತ್ತು ನಿಯಂತ್ರಿಸುವ ರೀತಿಯಲ್ಲಿ ಬಲಪಡಿಸುತ್ತದೆ. ಮನುಷ್ಯಜೀವನದ ಮಟ್ಟಿಗೆ ಖಾಸಗೀಯಾಗಿರುವ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯದಲ್ಲಿ ಮನುಶ್ಯ ವ್ಯಕ್ತಿತ್ವದ ಉಲ್ಲಂಘಿಸಲಾಗದ ಸ್ವಾಭಾವ ಪ್ರಕಟಗೊಳ್ಳುತ್ತದೆ. ಖಾಸಗೀಯಾಗಿ ಇಡಬಲ್ಲ ವಿಚಾರಗಳೊಂದಿಗೆ ವ್ಯಕ್ತಿಯೊಬ್ಬರ ಸ್ವಾಯುತ್ತದೆ ಸಂಬಂಧಿಸಿದೆ. ಈ ಸಂಗತಿಗಳ ವಿಚಾರದಲ್ಲಿ ಖಾಸಗೀತನದ ನ್ಯಾಯಸಮ್ಮತ ಅಪೇಕ್ಷೆಯಿಟ್ಟುಕೊಳ್ಳಲಾಗುತ್ತದೆ.

ಲೈಂಗಿಕ ಆಯ್ಕೆಗಳು ಯಾವ ರೀತಿಯಲ್ಲಿ ಸ್ವಾಯತ್ತತೆಯ ಪ್ರಮುಖ ಅಂಶವಾಗಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು, ಸಾಮಾಜಿಕ ಒಪ್ಪಂದದ ಕುರಿತ ಜಾನ್ ರಾಲ್ಸ್ ರವರ ಸಿದ್ಧಾಂತವನ್ನು ಉಲ್ಲೇಖಿಸುವುದು ಉತ್ತಮ. "ಅಜ್ಞಾನವೆಂಬ ಅರೆಬರೆ ಪರದೆ"ಯ ಹಿಂದಿನ ಆಯ್ಕೆಯ ಪರಿಕಲ್ಪನೆಯನ್ನು ವಿವರಿಸಲು 'ಮೂಲ ಸ್ಥಾನ'ದ ಬಗೆಗಿನ ರಾಲ್ಸ ರವರ ಕಲ್ಪನೆಯು ಒಂದು ಸೃಜನಶೀಲ ಮಾದರಿಯಾಗಿ ಬಳಕೆಯಾಗುತ್ತದೆ[213]. ಪರದೆಯ ಹಿಂದಿರುವ ವ್ಯಕ್ತಿಗಳು ಸಮಾಜದಲ್ಲಿನ ತಮ್ಮ ಸ್ಥಾನದ ಅರಿವಿರದ, ಪರಸ್ಪರರ ಬಗೆಗೆ ಅಸ್ಸಕ್ತಿಯಿಲ್ಲದಿರುವ ತರ್ಕಬದ್ಧರಾಗಿ ಯೋಚಿಸುವ ವ್ಯಕ್ತಿಗಳೆಂದು ಭಾವಿಸಲಾಗಿದೆ. ಇಲ್ಲಿ ರಾಲ್ಸ್ ಒಬ್ಬ ವ್ಯಕ್ತಿ ಯಾವುದನ್ನು 'ಒಳ್ಳೆಯದು'

[213] Thomas M. Jr. Scanlon, Rawls' Theory of Justice, University of Pennsylvania Law Review (1973) at 1022

ಎಂದು ಕಲ್ಪಿಸಿಕೊಳ್ಳುತ್ತಾರೆ ಎಂಬುದನ್ನು ಪರಿಗಣಿಸದೇ, ಆ ವ್ಯಕ್ತಿಯು ಬಯಸಬಹುದಾದ ಒಳ್ಳೆಯವುಗಳ ಗುಂಪಿನೆಡೆಗೆ ಗಮನ ಕೇಂದ್ರೀಕರಿಸುವ ತಂತ್ರ ಬಳಸುತ್ತಾರೆ. ಇಂತಹ ಸಹಜವಾಗಿ ಇಷ್ಟವಾಗಬಹುದಾದ ಒಳ್ಳೆಯ ವಸ್ತುಗಳನ್ನು ರಾಲ್ಸ್ 'ಪ್ರಾಥಮಿಕ ಸಾಮಾಜಿಕ ಒಳ್ಳೆಯತನಗಳು' ಎಂದು ವಿವರಿಸುತ್ತಾರೆ ಮತ್ತು ಅವುಗಳಲ್ಲಿ ಹಕ್ಕುಗಳು, ಸ್ವಾತಂತ್ರ್ಯಗಳು, ಅಧಿಕಾರಗಳು, ಅವಕಾಶಗಳು, ಆದಾಯ, ಸಂಪತ್ತು ಮತ್ತು ಸ್ವಯಂ-ಗೌರವದ ಅಂಶಗಳನ್ನು ಸೇರಿಸುತಾರೆ. ರಾಲ್ಸ್ ಸ್ವ-ಗೌರವವನ್ನು ಪ್ರಾಥಮಿಕ ಸಾಮಾಜಿಕ ಒಳ್ಳೆಯತನ ಎಂದು ಕಲ್ಪಿಸಿಕೊಳ್ಳುವುದಕ್ಕೂ, ಸ್ವಾಯತ್ತತೆಯ ಕಲ್ಪನೆಗೂ ನಿಕಟವಾದ ಸಂಬಂಧವಿದೆ. ಒಬ್ಬ ವ್ಯಕ್ತಿಯ ಸ್ವಯಂ-ಗೌರವವು, ಹುಟ್ಟಿನಿಂದ ಬಂದ ತನ್ನ ಸಾಮರ್ಥ್ಯಗಳನ್ನು ಯೋಗ್ಯ ರೀತಿಯಲ್ಲಿ ಬಳಸಿಕೊಳ್ಳುವ ಅವರ ಸಾಮರ್ಥ್ಯವನ್ನು ಅವಲಂಬಿಸಿದೆ.

66. ಒಬ್ಬ ವ್ಯಕ್ತಿಯ ಲೈಂಗಿಕತೆಯನ್ನು ಪೆಟ್ಟಿಗೆಗಳಲ್ಲಿ ಇರಿಸಿದಂತೆ ನಿರ್ದಿಷ್ಟ ವಿಭಾಗಗಳಲ್ಲಿ ವಿಂಗಡಿಸಲು ಆಗುವುದಿಲ್ಲ; ಬದಲಿಗೆ ಲೈಂಗಿಕತೆಯನ್ನು, ವ್ಯಕ್ತಿಗೆ ತನ್ನ ಬಯಕೆಗಳು ಮತ್ತು ಪ್ರವೃತ್ತಿಗಳನ್ನು ತಿಳಿದುಕೊಳ್ಳುವ ಸ್ವಾತಂತ್ರ್ಯವನ್ನು ನೀಡುವ, ಹಲವು ದಿಕ್ಕುಗಳಲ್ಲಿ ಪಸರಿಸಲು ಅನುವಾಗುವ ದ್ರವ ಪದಾರ್ಥದಂತೆ ನೂಡಬೇಕು. ತಮ್ಮ ಲೈಂಗಿಕ ನಿಲುವನ್ನು ತಾವೇ ಧೃಡಪಡಿಸುವುದು ಕೂಡಾ ಸ್ವಾಯತ್ತತೆಯ ಚಲಾವಣೆಯೇ ಆಗಿದೆ. ವ್ಯಕ್ತಿಯ ಬೆಳವಣಿಗೆಯಲ್ಲಿ ಮಾನವ ಲೈಂಗಿಕತೆಯು ಸ್ವತಂತ್ರ ಶಕ್ತಿಯಾಗಿ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ಒಪ್ಪಿಕೊಂಡಾಗ, ಒಬ್ಬ ಮುಕ್ತ ವ್ಯಕ್ತಿ ಎಂಬ ಪರಿಕಲ್ಪನೆಗೆ ಲೈಂಗಿಕ ಸ್ವಾಯತ್ತತೆಯು ಎಷ್ಟು ಮುಖ್ಯ ಎಂಬುದನ್ನ ಒಪ್ಪಿಕೊಂದಂತಾಗುತ್ತದೆ ಸ್ವಾಯತ್ತತೆಯನ್ನು ಈ ರೀತಿಯಲ್ಲಿ ವ್ಯಾಖ್ಯಾನಿಸಿದಾಗ ಮಾನವಾಧಿಕಾರಗಳ ವ್ಯಾಪ್ತಿಯನ್ನು ವಿಸ್ತರಿಸಿ ಅದನ್ನು ಲೈಂಗಿಕತೆಯ ಮೇಲಿನ ಮನುಷ್ಯ ಹಕ್ಕಿಗೂ ಅನ್ವಯಿಸಬಹುದು. ಲೈಂಗಿಕತೆಯನ್ನು ಕಡ್ಡಾಯವಾಗಿ ವೈವಾಹಿಕ ಮತ್ತು ಸಂತಾನೋತ್ಪತ್ತಿಯ ಉದ್ದೇಶವಿರುವ ಸ್ವರೂಪದಲ್ಲಿ ಮಾತ್ರ ಸರ್ಕಾರ ಕಾನೂನುಬದ್ಧಗೊಳಿಸಬಹುದಾದಂತಹ ವಿಚಾರವೆಂದು ಪ್ರತಿಪಾದಿಸಲು ಆಗುವುದಿಲ್ಲ. ಲೈಂಗಿಕತೆಯನ್ನು ವ್ಯಕ್ತಿಗಳು ತಮ್ಮ ಜೀವನದ ಅರ್ಥವನ್ನು ವ್ಯಾಖ್ಯಾನಿಸಲು ಬಳಸುವ ಮೂಲಭೂತ ಅನುಭವ ಎಂದು ವ್ಯಾಖ್ಯಾನಿಸಬೇಕು ಮಾನವ ಲೈಂಗಿಕತೆಯನ್ನು ಇಬ್ಬಗೆಯ ಸೂತ್ರಕ್ಕೆ ಸೀಮಿತಗೊಳಿಸಲು ಆಗುವುದಿಲ್ಲ ಅಲ್ಲದೇ ಅದನ್ನು ಸಂತಾನೋತ್ಪತ್ತಿ ಮಾಡುವ ವಿಧಾನವೆಂಬ ನೆಲೆಯಲ್ಲೂ ವ್ಯಾಖ್ಯಾನಿಸಬಾರದು.

ಸೀಮಿತ ವಿಭಾಗಗಳಿಗೆ ಅದನ್ನು ಕಟ್ಟಿಹಾಕಿದರೆ, ಮಾನವಾಧಿಕಾರವು ಎಲ್ಲಾ ವಿಧದಲ್ಲಿಯೂ ಸಾಂವಿಧಾನಿಕ ಹಕ್ಕು ಎಂಬ ವಿಚಾರವನ್ನು ಸಂಪೂರ್ಣವಾಗಿ ನಿರಾಕರಿಸಿದಂತಾಗುತ್ತದೆ. ಸಂವಿಧಾನವು ಲೈಂಗಿಕ ಅನುಭವಗಳ ಪಸರಿಸುವ ಗುಣವನ್ನು ರಕ್ಷಿಸುತ್ತದೆ. ಮತ್ತು ವಿವಿಧ ಸಂಸ್ಕೃತಿಗಳಲ್ಲಿ, ಬದುಕಿನ ಹಲವಾರು ಬಗೆಗಳಲ್ಲಿ ಹಾಗೂ ಪ್ರೇಮ ಮತ್ತು ಹಾತೊರೆಯುವಿಕೆಗಳ ಎಲ್ಲೆಯಿರದ ರೂಪಗಳಲ್ಲಿ, ತಮ್ಮ ಸಂಬಂಧಗಳ ಈಡೇರಿಕೆಯನ್ನು ಕಂಡುಕೊಳ್ಳುವ ಸ್ವಾತಂತ್ರ್ಯ ನೀಡುತ್ತದೆ.

## F.2. ಅನ್ಯೋನ್ಯತೆಯ ಹಕ್ಕು - ಲೈಂಗಿಕ ಸ್ವಾಯತ್ತತೆಯ ಸಂಭ್ರಮಾಚರಣೆ

67. ಸಂವಿಧಾನದಡಿಯಲ್ಲಿ ಸಂರಕ್ಷಿಸಲ್ಪಟ್ಟಿರುವ ತಮ್ಮ ಲೈಂಗಿಕ ನಿಲುವಿನ ಹಕ್ಕುಗಳನ್ನು ಚಲಾಯಿಸ ಬಯಸುವ ವ್ಯಕ್ತಿಗಳ ನಡುವಿನ ಒಪ್ಪಿಗೆಯ ಕೃತ್ಯಗಳನ್ನು ಅಪರಾಧೀಕರಿಸುವ ಮೂಲಕ, ಸರ್ಕಾರವು ತನ್ನ ನಾಗರಿಕರ ಅನ್ಯೋನ್ಯತೆಯ ಹಕ್ಕನ್ನು ನಿರಾಕರಿಸುತ್ತಿದೆ. ಅನ್ಯೋನ್ಯತೆಯ ಹಕ್ಕು, ತಮ್ಮದೇ ಆದ ನಿಯಮಗಳ ಪ್ರಕಾರ ಲೈಂಗಿಕ ಸಂಬಂಧಗಳನ್ನು ಹೊಂದುವ ವ್ಯಕ್ತಿಯ ಇಚ್ಛೆಯಿಂದ ಹೊರಹೊಮ್ಮುತ್ತದೆ. ಅದು ವ್ಯಕ್ತಿಯ ಲೈಂಗಿಕ ಸ್ವಾಯತ್ತತೆಯ ಚಲಾವಣೆಯಾಗಿದೆ, ಮತ್ತು ವ್ಯಕ್ತಿಯು ತನ್ನ ಸಂಗಾತಿಯನ್ನು ಆಯ್ಕೆಮಾಡುವ ಹಕ್ಕನ್ನಷ್ಟೇ ಅಲ್ಲದೇ, ತಾನು ಇಟ್ಟುಕೊಳ್ಳಬಯಸುವ ಸಂಬಂಧದ ಸ್ವರೂಪವನ್ನು ನಿರ್ಧರಿಸುವ ಸ್ವಾತಂತ್ರ್ಯವನ್ನೂ ಒಳಗೊಂಡಿದೆ.

ಶಕ್ತಿ ವಾಹಿನಿ v. ಭಾರತ ಸರ್ಕಾರ ಪ್ರಕರಣದಲ್ಲಿ, ಈ ನ್ಯಾಯಾಲಯದ ತ್ರಿಸದಸ್ಯ ಪೀಠವು ಖಾಪ್ ಪಂಚಾಯತಿಗಳ ಆಣತಿಯಂತೆ ನಡೆಯುವ ಮರ್ಯಾದೆಗೇಡು ಕೊಲೆಗಳನ್ನು ತಡೆಗಟ್ಟಲು ಮತ್ತು ಪಂಚಾಯತಿಗಳ ಅನುಮೋದನೆಯಿಲ್ಲದೀ ಮದುವೆಯಾಗುವ ವ್ಯಕ್ತಿಗಳನ್ನು ರಕ್ಷಿಸುವ ಸಲುವಾಗಿ ನಿರ್ದೇಶನಗಳನ್ನು ನೀಡಿತು. ಜೀವನಸಂಗಾತಿಯನ್ನು ಆಯ್ಕೆ ಮಾಡುವ ಹಕ್ಕನ್ನು ಸಂವಿಧಾನದ 19 ಮತ್ತು 21ನೇ ಕಲಮುಗಳಡಿಯ ಮೂಲಭೂತ ಅಧಿಕಾರವೆಂದು ನ್ಯಾಯಾಲಯ ಗುರುತಿಸಿತು. ಅರಿವುಳ್ಳ ಮುಖ್ಯ ನ್ಯಾಯಮೂರ್ತಿಗಳು ಹೀಗೆಂದರು:

> ವಯಸ್ಕರಿಬ್ಬರು ಒಪ್ಪಿಗೆಯಿಂದ ಪರಸ್ಪರರನ್ನು ಜೀವನ ಸಂಗಾತಿಗಳೆಂದು ಆರಿಸಿಕೊಂಡಾಗ, ಅದು ಸಂವಿಧಾನದ 19 ಮತ್ತು 21ನೇ ಕಲಮುಗಳಡಿಯಲ್ಲಿಇ ಗುರುತಿಸಲಾಗಿರುವ ಅವರ ಆಯ್ಕೆಯ

> ಪ್ರಕಟಗೊಳಿಸುವಿಕೆಯಾಗಿರುತ್ತದೆ. ಅಂತಹ ಹಕ್ಕಿಗೆ ಸಾಂವಿಧಾನಿಕ ಕಾನೂನಿನ ಅನುಮೋದನೆಯಿದೆ ಮತ್ತು ಒಮ್ಮೆ ಅದನ್ನು ಗುರುತಿಸಿದ ನಂತರ, ಸದರಿ ಹಕ್ಕನ್ನು ರಕ್ಷಿಸಬೇಕಾಗುತ್ತದೆ ಮತ್ತು ಅದು ದೂರದೂರದವರೆಗೂ ಕಾನೂನುಬದ್ಧತೆಯಿಲ್ಲದಿರುವ ಯಾವುದೋ ಪರಿಕಲ್ಪನೆಯಿಂದ ಹುಟ್ಟಿಕೊಂಡ ವರ್ಗವೊಂದರ ಮರ್ಯಾದೆ ಅಥವಾ ಗುಂಪು ಆಲೋಚನೆಗಳ ಕಲ್ಪನೆಗೆ ಬಲಿಯಾಗಬಾರದು.

**ಶಫೀನ್ ಜಹಾನ್ v. ಅಶೋಕನ್** ಪ್ರಕರಣದಲ್ಲಿ, ಇಪ್ಪತ್ನಾಲ್ಕು ವರ್ಷ ವಯಸ್ಸಿನ ಮಹಿಳೆಯೊಬ್ಬರು ತಮ್ಮ ಆಯ್ಕೆಯ ವ್ಯಕ್ತಿಯೊಂದಿಗೆ ಮಾಡಿಕೊಂಡಿದ್ದ ಮದುವೆಯನ್ನು, ಆಕೆಯ ತಂದೆ ಸಲ್ಲಿಸಿದ್ದ ಹೇಬಿಯಸ್ ಕಾರ್ಪಸ್ ಅರ್ಜಿಯ ಮೇರೆಗೆ ರದ್ದುಗೊಳಿಸಿದ ಕೇರಳದ ಹೈಕೋರ್ಟ್ ತೀರ್ಪನ್ನು ಈ ನ್ಯಾಯಾಲಯ ತಳ್ಳಿಹಾಕಿತು. ನ್ಯಾಯಾಲಯವು ಆಕೆಗಿರುವ ಜೀವನ ಸಂಗಾತಿಯನ್ನು ಆಯ್ಕೆಮಾಡಿಕೊಳ್ಳುವ ಹಕ್ಕು ಮತ್ತು ತನ್ನ "ಅಂತರಾಳದ ವೈಯಕ್ತಿಕ ನಿರ್ಧಾರಗಳ" ವಲಯದಲ್ಲಿ ಆಕೆಗಿದ್ದ ಸ್ವಾಯತ್ತತೆಯನ್ನು ಎತ್ತಿಹಿಡಿಯಿತು. ಮುಖ್ಯನ್ಯಾಯಾಧೀಶರು ಹೀಗೆ ಹೇಳಿದರು:

> ಕಾನೂನಿಗೆ ಅನುಗುಣವಾಗಿ ಆಯ್ಕೆಯನ್ನು ಅಭಿವ್ಯಕ್ತಪಡಿಸುವುದು ವೈಯಕ್ತಿಕ ಅಸ್ಮಿತೆಯನ್ನು ಒಪ್ಪಿಕೊಳ್ಳುವುದಕ್ಕೆ ಸಮ. ಆ ಅಭಿವ್ಯಕ್ತಿಯ ಕಡಿತಗೊಳಿಸುವಿಕೆ ಮತ್ತು ಅದರಿಂದ ಹೊರಹೊಮ್ಮುವ ಸಾಮಾಜದೆಡೆಗಿನ ನಿಷ್ಠೆಯ ತಾತ್ವಿಕ ರಚನಾತ್ಮಕತೆಯನ್ನಾಧರಿಸಿದ ಕ್ರಿಯೆಗಳು ವ್ಯಕ್ತಿಯೊಬ್ಬರ ವೈಯಕ್ತಿಕ ಅಸ್ತಿತ್ವವನ್ನು ನಾಶಮಾಡುತ್ತವೆ. ಸಾಮಾಜಿಕ ಮೌಲ್ಯಗಳು ಮತ್ತು ನೀತಿಗಳಿಗೆ ತಮ್ಮದೇ ಆದ ಸ್ಥಾನವಿದೆ, ಆದರೆ ಅವುಗಳು ಸಾಂವಿಧಾನಿಕವಾಗಿ ಖಾತ್ರಿಪಡಿಸಲಾಗಿರುವ ಸ್ವಾತಂತ್ರ್ಯಕ್ಕಿಂತ ಮಿಗಿಲಲ್ಲ. (ಒತ್ತು ನೀಡಲಾಗಿದೆ)

ನಮ್ಮಲ್ಲೊಬ್ಬರು (ನ್ಯಾ. ಚಂದ್ರಚೂಡ್) ಸಂಗಾತಿಯನ್ನು ಆಯ್ಕೆ ಮಾಡುವ ಹಕ್ಕೂ ಸ್ವಾಯತ್ತತೆಯ ಪ್ರಮುಖ ಭಾಗವೆಂದು ಗುರುತಿಸಿದ್ದಾರೆ:

> ಮದುವೆಯ ಒಳಗೆ ಅಥವಾ ಹೊರಗೆ ಸಂಗಾತಿಯನ್ನು ಆಯ್ಕೆಮಾಡಿಕೊಳ್ಳುವುದು, ಪ್ರತಿ ವ್ಯಕ್ತಿಗೆ ಮೀಸಲಾಗಿರುವ ವಲಯದೊಳಗೆ ಬರುತ್ತದೆ. ಮದುವೆಯ ಅನ್ಯೋನ್ಯತೆಗಳು, ಉಲ್ಲಂಘಿಸಬಾರದಂತಹ ಖಾಸಗೀತನದ ಕೇಂದ್ರಪ್ರದೇಶಕ್ಕೆ ಸೇರುತ್ತವೆ. ಒಬ್ಬ ವ್ಯಕ್ತಿಗಿರುವ ತನ್ನ ಜೀವನ ಸಂಗಾತಿಯನ್ನು ಆರಿಸಿಕೊಳಳ್ಳುವ ಪರಿಪೂರ್ಣವಾದ ಹಕ್ಕು, ಯಾವುದೇ ರೀತಿಯಲ್ಲಿ ನಂಬಿಕೆಗೆ ಸಂಬಂಧಿಸಿದ ವಿಚಾರಗಳಿಂದ ಪ್ರಭಾವಿತವಾಗುವುದಿಲ್ಲ. ಖಾಸಗೀ ವೈಯಕ್ತಿಕ ನಿರ್ಧಾರಗಳನ್ನು ಗುರುತಿಸುವುದಕ್ಕೆ ಸಾಮಾಜಿಕ ಅನುಮೋದನೆಯನ್ನು ಆಧಾರವಾಗಿಟ್ಟುಕೊಳ್ಳಲು ಸಾಧ್ಯವಿಲ್ಲ. (ಒತ್ತು ನೀಡಲಾಗಿದೆ)

ಶಫೀನ್ ಜಹಾನ್ ಪ್ರಕರಣದ ತೀರ್ಪು ಒಬ್ಬ ವ್ಯಕ್ತಿಯು ಅತ್ಯಂತ ಖಾಸಗೀ ವೈಯಕ್ತಿಕ ನಿರ್ಧಾರಗಳನ್ನು ತೆಗೆದುಕೊಳ್ಳುವ ಸ್ವಾಯತ್ತತೆಯನ್ನು ಅನುಭವಿಸಲು ಸಾಧ್ಯವಾಗುವ ವಲಯವೊಂದರ ಬಗೆಗೆ ಮಾತನಾಡುತ್ತದೆ:

> ಹೀಗಾಗಿ ಸಂವಿಧಾನದ ಶಕ್ತಿ ಅಡಗಿರುವುದು ಅದು ಪ್ರತಿ ವ್ಯಕ್ತಿಗೂ ಮದುವೆಯ ಒಳಗೆ ಮತ್ತು ಹೊರಗೆ ಅನ್ಯೋನ್ಯತೆಯನ್ನು ಹಂಚಿಕೊಳ್ಳುವ ಸಲುವಾಗಿ ಸಂಗಾತಿಯ ಆಯ್ಕೆಯನ್ನು ನಿರ್ಧರಿಸುವ ಸವಲತ್ತನ್ನು ರಕ್ಷಿಸುವ ಕುರಿತು ನೀಡುವ ಖಾತರಿಯಲ್ಲಿ.

ಸ್ವಾಭಿಮಾನವನ್ನು ಪ್ರಾಥಮಿಕ ಒಳ್ಳೆಯದರ ವಿಚಾರವೆಂದು ಪರಿಗಣಿಸುವ ರಾಲ್ಸ್ ಪ್ರಣೀತ ಪರಿಕಲ್ಪನೆಯನ್ನು ಮುಂದುವರೆಸುತ್ತಾ, ವ್ಯಕ್ತಿಗಳಿಗೆ ಲೈಂಗಿಕ ಅನ್ಯೋನ್ಯತೆಯ ಆಧಾರದ ಮೇಲೆ ತಮ್ಮ ಸಂಬಂಧಗಳನ್ನು ರೂಪಿಸಿಕೊಳ್ಳುವ ಸ್ವಾತಂತ್ರ್ಯವನ್ನು ನಿರಾಕರಿಸಬಾರದು. ಬಯಕೆಗಳನ್ನು ಈಡೇರಿಸಿಕೊಳ್ಳುವ ಮನುಷ್ಯ ಸಹಜ ಆಸೆಯನ್ನು ಅವಲಂಬಿಸಿರುವ, ವಯಸ್ಕರ ನಡುವಿನ ಒಪ್ಪಿಗೆಯ ಲೈಂಗಿಕ ಸಂಬಂಧಗಳ ವಿಚಾರದಲ್ಲಿ ಗೌರವದಿಂದ ನಡೆದುಕೊಳ್ಳಬೇಕು. ಒಪ್ಪಿಗೆಯ ಸಂಬಂಧಗಳನ್ನು ಗೌರವಿಸುವುದರ ಜೊತೆಗೆ, ತಮ್ಮ ಸಂಗಾತಿಯೆಡೆಗಿನ ತಮ್ಮ ಒಲವನ್ನು ಅಡ್ಡಿಯಿರದಂತೆ ಅಭಿವ್ಯಕ್ತಿಪಡಿಸುವ ಸಾಮರ್ಥ್ಯವನ್ನು ಪಡೆಯುವಂತೆ ಮಾಡಬಲ್ಲ ಸಮಾಜವೊಂದನ್ನು

ಬೆಳೆಸುವುದು ಮುಖ್ಯವಾಗಿದೆ. ಈ "ಪ್ರೀತಿಯ ಸಾಂಸ್ಥಿಕ ಅಭಿವ್ಯಕ್ತಿ"ಯನ್ನು ಸ್ವಾಭಿಮಾನದ ಆದರ್ಶದ ಸಂಪೂರ್ಣ ವಾಸ್ತವೀಕರಣದ ಪ್ರಮುಖ ಅಂಶವೆಂದು ಪರಿಗಣಿಸಬೇಕು. ಸಾಮಾಜಿಕ ಸಂಸ್ಥೆಗಳು ವ್ಯಕ್ತಿಗಳಿಗೆ ಲಿಂಗ ಮತ್ತು ಲೈಂಗಿಕತೆಯ ಇಬ್ಬಗೇತನದ ಹಾನಿಗೊಳಗಾಗದೇ ಸಂಬಂಧಗಳನ್ನು ಬೆಳೆಸುವ ಸ್ವಾತಂತ್ರ್ಯವಿರುವ ಮತ್ತು ಅವರ ತಮ್ಮ ಸಂಬಂಧಗಳನ್ನು ಪರಿಪೂರ್ಣಗೊಳಿಸುವಂತಹ ಸೂಕ್ತವಾದ ಸಾಂಸ್ಥಿಕ ಮಾನ್ಯತೆ ಪಡೆಯುವ ರೀತಿಯಲ್ಲಿ ರಚನೆಯಾಗಿರಬೇಕು. ಕಾನೂನು ಸಾಮಾಜಿಕ ಸಂಸ್ಥೆಗಳಿಗೆ ಕಾನೂನುಬದ್ಧತೆಯನ್ನು ಒದಗಿಸುತ್ತದೆ. ಕಾನೂನಿನ ನಿಯಮದ ಆಳ್ವಿಕೆಯಿರುವ ಪ್ರಜಾತಾಂತ್ರಿಕ ಚೌಕಟ್ಟಿನಲ್ಲಿ, ಕಾನೂನು ಸಾಂವಿಧಾನಿಕ ಮೌಲ್ಯಗಳಾದ ಸ್ವಾತಂತ್ರ್ಯ, ಘನತೆ ಮತ್ತು ಸ್ವಾಯತ್ತತೆಗಳೊಂದಿಗೆ ತಾಳೆಯಾಗಬೇಕು. ಕಾನೂನು ಮನುಷ್ಯರ ವ್ಯಕ್ತಿತ್ವದ ಪೂರ್ಣ ಅಭಿವ್ಯಕ್ತಿಗೆ ಮೂಗುದಾರವಾಗಲು ಬಿಡಬಾರದು. ಒಪ್ಪಿಗೆಯಿರುವ ವಯಸ್ಕರ ನಡುವಿನ ಲೈಂಗಿಕ ಕ್ರಿಯೆಗಳನ್ನು ದಂಡಿಸುವುದರ ಮೂಲಕ, 377ನೇ ಪರಿಚ್ಛೇದವು ಸಂವಿಧಾನಿಕ ವ್ಯವಸ್ಥೆಯ ಪ್ರಕಾರ ಅಸಮಂಜಸವಾದ ನೈತಿಕ ಪರಿಕಲ್ಪನೆಗಳನ್ನು ಹೇರುತ್ತದೆ. ಮೇಲ್ನೋಟಕ್ಕೆ 'ಕೃತ್ಯಗಳ'ನ್ನು ದಂಡಿಸುವ ಪ್ರಕ್ರಿಯೆಯಲ್ಲಿ, ಸದರಿ ಪರಿಚ್ಛೇದವು ಎಲ್.ಜಿ.ಬಿ.ಟಿ ಸಮುದಾಯದ ಅಸ್ಮಿತೆಯ ಮೇಲೆ ಪರಿಣಾಮ ಬೀರಿ, ಅವರು ಸಂಪೂರ್ಣ ಮತ್ತು ಸಮಾನ ನಾಗರೀಕತೆಯ ಲಾಭ ಪಡೆದುಕೊಳ್ಳುವುದನ್ನು ತಡೆಯುತ್ತದೆ. 377ನೇ ಪರಿಚ್ಛೇದ ಲೈಂಗಿಕ ಕ್ರಿಯೆಗಳ ಬಗೆಗಿನ ರೂಢಮಾದರಿಯೊಂದನ್ನು ಆಧರಿಸಿದೆ. ಲೈಂಗಿಕ ನಿಲುವವನ್ನು ಕಾಪಾಡುವ ನಮ್ಮ ಸಂವಿಧಾನವು, ಆ ನಿಲುವಿನ ಈಡೇರಿಕೆಗೆ ತಡೆಯೊಡ್ಡುವ ಯಾವುದೇ ಕಾನೂನನ್ನು ಬಹಿಷ್ಕರಿಸಬೇಕು

## G. 377ನೇ ಪರಿಚ್ಛೇದ ಮತ್ತು ಆರೋಗ್ಯದ ಹಕ್ಕು

> ವೈದ್ಯಶಾಸ್ತ್ರವು ತನ್ನ ಮಹೋನ್ನತ ಉದ್ದೇಶವನ್ನು ಈಡೇರಿಸಿಕೊಳ್ಳಬೇಕಿದ್ದರೆ, ಅದು ನಮ್ಮ ಕಾಲಮಾನದ ವಿಸ್ತಾರವಾದ ರಾಜನೈತಿಕ ಮತ್ತು ಸಮಾಜಿಕ ಜೀವನದೊಳಗೆ ಪ್ರವೇಶಿಸಬೇಕು; ಜೀವನಚಕ್ರದ ಸಾಮಾನ್ಯವಾದ ಪೂರೈಸುವಿಕೆಯನ್ನು ತಡೆಯುವ ಅಡ್ಡಿಗಳನ್ನು ತೋರ್ಪಡಿಸಬೇಕು ಮತ್ತು ಅವುಗಳನ್ನು ತೆಗೆದುಹಾಕಬೇಕು
>
> – ವಿರ್ಚಾವ್ ರುಡಾಲ್ಫ್

68. 21ನೇ ಕಲಮಿನಡಿಯಲ್ಲಿನ ಸಂವಿಧಾನಾತ್ಮಕವಾದ ಬದುಕಿನ ಹಕ್ಕಿಗೆ ಸಂಬಂಧಿಸಿದ ನ್ಯಾಯಶಾಸ್ತ್ರದ ವಿಕಸನದ ಸಂದರ್ಭದಲ್ಲಿ, ಈ ನ್ಯಾಯಾಲಯವು ಕೆಲವು ಸಹವರ್ತಿ ಹಕ್ಕುಗಳು ಜೊತೆಗಿಲ್ಲದಿದ್ದಾರೆ, ಬದುಕುವ ಹಕ್ಕು ಅರ್ಥಹೀನ ಎಂಬುದನ್ನು ಸತತವಾಗಿ ಹೇಳುತ್ತಲೇ ಬಂದಿದ್ದು, ಅಂತಹ ಹಕ್ಕುಗಳಲ್ಲಿ ಆರೋಗ್ಯದ ಹಕ್ಕು ಸೇರಿದೆ. ಆರೋಗ್ಯದ ಹಕ್ಕು ಘನತೆ ಮತ್ತು ಯೋಗಕ್ಷೇಮದ ಬದುಕಿಗೆ ಅನಿವಾರ್ಯವೆಂದು ಅರ್ಥೈಸಲಾಗಿದ್ದು, ಮತ್ತು ಅದು ಉದಾಹರಣೆಗೆ, ತುರ್ತು ವೈದ್ಯಕೀಯ ಚಿಕಿತ್ಸೆಯ ಹಕ್ಕು ಮತ್ತು ಸಾರ್ವಜನಿಕ ಆರೋಗ್ಯದ ನಿರ್ವಹಣೆ ಮತ್ತು ಸುಧಾರಣೆಯ ಹಕ್ಕನ್ನು ಒಳಗೊಂಡಿದೆ. 173

ಆರೋಗ್ಯದ ಹಕ್ಕನ್ನು ಮಾನ್ಯಮಾಡಲಾಗಿರುವ ಈ ನ್ಯಾಯಾಲಯದ ಕೆಲ ತೀರ್ಪುಗಳನ್ನು ಉಲ್ಲೇಖಿಸಿದರೆ ಉಪಯೋಗವಾಗುತ್ತದೆ.

**ಬಂಧುವಾ ಮುಕ್ತಿ ಮೋರ್ಚಾ** v. **ಭಾರತ ಸರ್ಕಾರ ಪ್ರಕರಣದಲ್ಲಿ**[214], ತ್ರಿಸದಸ್ಯ ಪೀಠವು ಬದುಕುವ ಮತ್ತು ಘನತೆಯ ಹಕ್ಕಿನೊಳಗೆ ಆರೋಗ್ಯ ಹಕ್ಕೂ ಅಡಕವಾಗಿದೆ ಎಂಬುದನ್ನು ಗುರುತಿಸಿತು. ಹಾಗೆ ಮಾಡುವಾಗ, ಈ ನ್ಯಾಯಾಲಯವು ಸರ್ಕಾರೀ ನೀತಿಯ ಮಾರ್ಗದರ್ಶೀ ಸಿಧ್ಧಾಂತಗಳತ್ತ ಗಮನ ಸೆಳೆಯಿತು:

> ಶೋಷಣೆಯಿಂದ ಮುಕ್ತರಾಗಿ ಮಾನವ ಘನತೆಯೊಂದಿಗೆ ಬದುಕುವುದು ಈ ದೇಶದ ಎಲ್ಲಾ ವ್ಯಕ್ತಿಗಳ ಮೂಲಭೂತ ಹಕ್ಕು. 21ನೇ ಕಲಮಿನಲ್ಲಿ ಅಡಕಗೋಲಿಸಲಾಗಿರುವ ಮಾನವ ಘನತೆಯೊಂದಿಗೆ ಬದುಕುವ ಈ ಹಕ್ಕು ಸರ್ಕಾರದ ನೀತಿಗಳ ನಿರ್ದೇಶಕ ತತ್ವಗಳು ಮತ್ತುಉ ಬಹುಮುಖ್ಯವಾಗಿ 39ನೇ ಕಲಮಿನ (ಈ) ಮತ್ತು (ಎಫ್) ಷರತ್ತುಗಳು ಮತ್ತು 41 ಹಾಗೂ 42ನೇ ಕಲಮುಗಳಿಂದ ಜೀವ ಪಡೆಯುತ್ತದೆ ಮತ್ತು ಹಾಗಾಗಿ ಅದು ಕನಿಷ್ಠಪಕ್ಷ ಪುರುಷ ಮತ್ತು ಸ್ತ್ರೀ ಕೆಲಸಗಾರರ ಆರೋಗ್ಯ ಮತ್ತು ಶಕ್ತಿಯ ರಕ್ಷಣೆ, ಎಳೆಮಕ್ಕಳಿಗೆ ಮೇಲಿನ ದೌರ್ಜನ್ಯದ ವಿರುಧ್ಧದ ರಕ್ಷಣೆ, ಆರೋಗ್ಯವಾಗಿ ಅಭಿವೃಧ್ಧಿ ಹೊಂದುವ ಮತ್ತು ಸ್ವಾತಂತ್ರ್ಯ ಹಾಗೂ ಘನತೆಯ ಪರಿಸ್ಥಿತಿಗಳಲ್ಲಿ

[214] 1984) 3 SCC 161

> ಬದುಕುವ ಅವಕಾಶ ಮತ್ತು ಸವಲತ್ತುಗಳು, ಶಿಕ್ಷಣದ ಸವಲತ್ತುಗಳು, ಕೆಲಸ ಮಾಡಲು ನ್ಯಾಯೋಚಿತ ಮತ್ತು ಮಾನವೀಯ ಪರಿಸ್ಥಿತಿಗಳು ಮತ್ತು ಹೆರಿಗೆ ರಜೆಗಳನ್ನು ಒಳಗೊಳ್ಳಬೇಕು. ಇವುಗಳು ವ್ಯಕ್ತಿಯೊಬ್ಬ ಮಾನವ ಘನತೆಯೊಂದಿಗೆ ಬದುಕವುದನ್ನು ಸಾಧ್ಯಹಗೊಳಿಸುವುದಕ್ಕೆ ಇರಲೇಬೇಕಾದ ಕನಿಷ್ಟ ಅಗತ್ಯಗಳು, ಮತ್ತು ಒಬ್ಬ ವ್ಯಕ್ತಿಯು ಈ ಮೂಲಭೂತ ಅಗತ್ಯಗಳನ್ನು ಅನುಭವಿಸುವುದನ್ನು ತಡೆಗಟ್ಟುವಂತಹ ಯಾವುದೇ ಕ್ರಮವನ್ನು ತೆಗೆದುಕೊಳ್ಳುವ ಹಕ್ಕು ಯಾವುದೇ ದೇಶದ ರಾಜ್ಯ ಅಥವಾ ಕೇಂದ್ರ ಸರ್ಕಾರಗಳಿಗಿಲ್ಲ. (ಒತ್ತು ನೀಡಲಾಗಿದೆ)

**ಗ್ರಾಹಕ ಶಿಕ್ಷಣ ಮತ್ತು ಸಂಶೋಧನಾ ಕೇಂದ್ರ v. ಭಾರತ ಸರ್ಕಾರ**[215] **ಪ್ರಕರಣದಲ್ಲಿ**( "ಸಿ.ಇ.ರ್.ಸಿ"), ತ್ರಿಸದಸ್ಯ ಪೀಠವು ಕಲ್ನಾರಿನ (ಆಸ್ಬೆಸ್ಟಾಸ್) ಕೈಗಾರಿಕೆಗಳ ಕಾರ್ಮಿಕರ ಆರೋಗ್ಯದ ಹಕ್ಕಿನ ವಿಚಾರವನ್ನು ಪರಾಂಬರಿಸಿತು.. ಕಾರ್ಮಿಕರ ಯೋಗಕ್ಷೇಮಕ್ಕಾಗಿ ಅನುಸರಿಸಬೇಕಾದ ಕಡ್ಡಾಯ ಮಾರ್ಗಸೂಚಿಗಳನ್ನು ಪಟ್ಟಿಮಾಡುತ್ತಾ, ನ್ಯಾಯಾಲಯ ಹೀಗೆಂದು ಹೇಳಿತು:

> ಕೆಲಸಗಾರರೊಬ್ಬರ ಪಾಲಿನ ಆರೋಗ್ಯದ ಹಕ್ಕು, ಅರ್ಥಪೂರ್ಣ ಅಸ್ತಿತ್ವವನ್ನಷ್ಟೇ ಅಲ್ಲದೇ ಯಾವುದಿಲ್ಲದೇ ಕೆಲಸಗಾರನೊಬ್ಬ ಕಷ್ಟದ ಬದುಕನ್ನು ಸಾಗಿಸಬೇಕಾಗುತ್ತದೋ ಅಂತಹ ಸಧೃಢ ಆರೋಗ್ಯ ಮತ್ತು ಶಕ್ತಿಯನ್ನು ಹೊಂದುವ ಅರ್ಥಪೂರ್ಣವಾದ ಬದುಕುವ ಹಕ್ಕಿನ ಆಂತರಿಕ ಭಾಗ. ಆರೋಗ್ಯದ ಕೊರತೆಯು ವ್ಯಕ್ತಿಯ ಜೀವನವನ್ನು ಕಸಿದುಕೊಳ್ಳುತ್ತದೆ.
>
> ಹೀಗಾಗಿ, ಆರೋಗ್ಯದ ಮತ್ತು ವೈದ್ಯಕೀಯ ಸೇವೆಯ ಹಕ್ಕು ಸಂವಿಧಾನದ 39(ಸಿ), 41 ಮತ್ತು 43ನೇ ಕಲಮುಗಳ ಜೊತೆಗೆ ಓದಲಾಗುವ 21ನೇ ಕಲಮಿನಡಿಯ ಮೂಲಭೂತ ಹಕ್ಕು ಮತ್ತು ಅದು ಕೆಲಸಗಾರರ ಬದುಕನ್ನು

[215] (1995) 3 SCC 42

ಘನತೆಯೊಂದಿಗೆ ಅರ್ಥಪೂರ್ಣ ಮತ್ತು ಸದುದ್ದೇಶಪೂರ್ಣವಾಗಿಸುತ್ತದೆ ಎಂದು ನಿರ್ಧರಿಸಬೇಕು (ಒತ್ತು ನೀಡಲಾಗಿದೆ)

**ಸೆಸ್ಕ್ (ಸಿ.ಈ.ಎಸ್.ಸಿ.) ಲಿಮಿಟೆಡ್ v. ಸುಭಾಷ್ ಚಂದ್ರ ಬೋಸ್[216] ಪ್ರಕರಣದ** , ಭಿನ್ನಮತದ ತೀರ್ಪಿನಲ್ಲಿ ನ್ಯಾ. ಕೆ. ರಾಮಸ್ವಾಮಿ ಈ ಕೆಳಗಿನಂತೆ ಗಮನಿಸಿದರು:

> ಆದುದರಿಂದ ಆರೋಗ್ಯವು ಸಂಪೂರ್ಣ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಯೋಗಕ್ಷೇಮದ ಸ್ಥಿತಿ ಮತ್ತು ಬರೆಯ ಅನಾರೋಗ್ಯ ಅಥವಾ ವೈಕಲ್ಯದ ಗೈರು ಹಾಜರಿಯಲ್ಲ. ಅಂತಾರಾಷ್ಟ್ರೀಯ ಮನವಾಧಿಕಾರಗಳ ಘೋಷಣೆ, ಆರ್ಥಿಕ, ಸಾಮಾಜಿಕ ಮತ್ತು ಸಾಂಸಸ್ಕೃತಿಕ ಹಕ್ಕುಗಳ ಅಂತಾರಾಷ್ಟ್ರೀಯ ಅಧಿವೇಶನ ಮತ್ತು ನಮ್ಮ ಸಂವಿಧಾನದಲ್ಲಿ ಸುನಿಶ್ಚಿತಗೊಳಿಸಿರುವ ಸಾಮಾಜಿಕ-ಆರ್ಥಿಕ ನ್ಯಾಯಗಳ ನೆಲೆಗಟ್ಟಿನಲ್ಲಿ, ಆರೋಗ್ಯದ ಹಕ್ಕು ಕೆಲಸಗಾರರ ಪಾಲಿನ ಮೂಲಭೂತ ಮಾನವ ಹಕ್ಕು. ಆರೋಗ್ಯವನ್ನು ಕಾಪಾಡಿಕೊಳ್ಳುವುದು ಅತ್ಯಂತ ಅನಿವಾರ್ಯವಾದ ಸಾಂವಿಧಾನಿನ ಗುರಿ, ಮತ್ತು ಆ ಗುರಿಯನ್ನು ಸಾಧಿಸಲು ಹಲವಾರು ಸಾಮಾಜಿಕ ಮತ್ತು ಆರ್ಥಿಕ ಅಂಶಗಳ ಸಮನ್ವಯದ ಅಗತ್ಯವಿದೆ. (ಒತ್ತು ನೀಡಲಾಗಿದೆ)

**ಕಿರ್ಲೋಸ್ಕರ್ ಬ್ರದರ್ಸ್ ಲಿಮಿಟೆಡ್** v. **ನೌಕಾರರ ರಾಜ್ಯ ವಿಮಾ ನಿಗಮ**[217] ಪ್ರಕರಣದಲ್ಲಿ 177 ಈ ನ್ಯಾಯಾಲಯದ ತ್ರಿಸದಸ್ಯ ಪೀಠವು, ರಾಜ್ಯ ವಿಮಾ ಕಾಯಿದೆ, 1948, ಮೇಲ್ಮನವಿದಾರರ ಪ್ರಾದೇಶಿಕ ಕಚೇರಿಗಳಿಗೆ ಅನ್ವಯಿಸುತ್ತದೆಯೇ ಎಂಬುದನ್ನು ಪರಿಶೀಲಿಸುತ್ತಾ, ಈ ಕೆಳಗಿನಂತೆ ಗಮನಿಸಿತು:

[216] (1992) 1 SCC 441

[217] (1996) 2 SCC 682

> ಹೀಗಾಗಿ ಆರೋಗ್ಯವೆಂಬುದು ಸಂಪೂರ್ಣ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಯೋಗಕ್ಷೇಮದ ಸ್ಥಿತಿ. ಆದ್ದರಿಂದ, ಆರೋಗ್ಯದ ಹಕ್ಕು ಕೆಲಸಗಾರರ ಪಾಲಿಗೆ ಮೂಲಭೂತ ಮತ್ತು ಮಾನವೀಯ ಹಕ್ಕು. ಆರೋಗ್ಯವನ್ನು ಕಾಪಾಡಿಕೊಳ್ಳುವುದು ಅತ್ಯಂತ ಅನಿವಾರ್ಯವಾದ ಸಾಂವಿಧಾನಿನ ಗುರಿ, ಮತ್ತು ಆ ಗುರಿಯನ್ನು ಸಾಧಿಸಲು ಹಲವಾರು ಸಾಮಾಜಿಕ ಮತ್ತು ಆರ್ಥಿಕ ಅಂಶಗಳ ಸಮನ್ವಯದ ಅಗತ್ಯವಿದೆ.

**ಪಂಜಾಬ್ ರಾಜ್ಯ** v. **ರಾಮ್ ಲುಭಾಯ ಬಗ್ಗಾ**[218] ಪ್ರಕರಣದಲ್ಲಿ, ಈ ನ್ಯಾಯಾಲಯದ ತ್ರಿಸದಸ್ಯ ಪೀಠವು ಪಂಜಾಬ್ ರಾಜ್ಯದ ವೈದ್ಯಕೀಯ ವೆಚ್ಚ ನೀತಿಯಯನ್ನು ಪ್ರಶ್ನಿಸಿದ ವಿಚಾರವನ್ನು ಪರಿಶೀಲಿಸಿತು. ಪೀಠದ ಪರವಾಗಿ ಮಾತನಾಡಿದ ನ್ಯಾ. ಎ.ಪಿ.ಮಿಶ್ರಾ ಅವರು ಹೀಗೆ ನುಡಿಯುತ್ತಾರೆ:

> ಆರೋಗ್ಯವು ಬದುಕಿನ ಮೂಲ ಮತ್ತು ಸತ್ವ, ಮತ್ತು ಆರೋಗ್ಯವೇ ಬದುಕಿನ ಎಲ್ಲಾ ಚಟುವಟಿಕೆಗಳ ಕೇಂದ್ರ ಮತ್ತು ಅವುಗಳಲ್ಲಿ ಉದ್ಯೋಗಿಯ ಚಟುವಟಿಕೆ ಮತ್ತು ಇತರ, ಎಂದರೆ, ದೈಹಿಕ, ಸಾಮಾಜಿಕ, ಅಧ್ಯಾತ್ಮಿಕ ಮತ್ತು ಮನುಷ್ಯರು ಕಲ್ಪಿಸಿಕೊಳ್ಳಬಲ್ಲ ಯಾವುದೇ ಬಗೆಯ ಚಟುವಟಿಕೆಗಳೂ ಸೇರಿವೆ. ಇದನ್ನು ನಿರಾಕರಿಸಿದರೆ, ಎಲ್ಲವೂ ಕುಸಿದುಬೀಳುತ್ತದೆ ಎಂದು ಹೇಳಲಾಗುತ್ತದೆ.
>
> ಈ ನ್ಯಾಯಾಲಯವು ಮತ್ತೆ ಮತ್ತೆ ಸರ್ಕಾರ ಮತ್ತು ಇತರ ಪ್ರಾಧಿಕಾರಗಳಿಗೆ ತನ್ನ ಪ್ರಜೆಯ ಆರೋಗ್ಯಕ್ಕೆ ಗಮನ ಮತ್ತು ಪ್ರಾಧಾನ್ಯ ನೀಡುವಂತೆ ಒತ್ತಿ ಹೇಳಿವೆ, ಏಕೆಂದರೆ ಅದು ಒಬ್ಬರ ಬದುಕನ್ನು ಅರ್ಥಪೂರ್ಣವಾಗಿಸುದು, ಅವರ ಕಾರ್ಯಕ್ಷಮತೆಯನ್ನು ವೃದ್ಧಿಸುವುದರ ಜೊತೆಗೆ ಸಮರ್ಪಕ ಫಲಿತಾಂಶವನ್ನೂ ನೀಡುತ್ತದೆ.

---

[218] (1998) 4 SCC 117

**ಶ್ರೀಮತಿ ಎಂ ವಿಜಯ v. ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿ ಸಿಂಗಾರೇನಿ ಕಲ್ಲಿದ್ದಲು ಗಣಿಗಳು ಕಂ.ಲಿ.**[219] ಪ್ರಕರಣದಲ್ಲಿ, ಆಂಧ್ರಪ್ರದೇಶ ಉಚ್ಛ ನ್ಯಾಯಾಲಯದ ಐವರು ನ್ಯಾಯಾಧೀಶರ ಪೀಠವು ಹುಡುಗಿಯೊಬ್ಬಳಿಗೆ ಆಸ್ಪತ್ರೆಯ ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಎಚ್.ಐ.ವಿ. ಸೋಂಕು ತಗುಲಿದ ಪ್ರಕರಣವನ್ನು ಕೈಗೆತ್ತಿಕೊಂಡಿತು. ನ್ಯಾಯಾಲಯ ಈ ಕೆಳಗಿನ ಅಭಿಪ್ರಾಯ ಮಂಡಿಸಿತು:

> ಭಾರತೀಯ ಸಂವಿಧಾನದ 21ನೇ ಕಲಮು ಯಾವ ವ್ಯಕ್ತಿಯೂ, ಕಾನೂನಿನಿಂದ ಸ್ಥಾಪಿತವಾದ ಪ್ರಕ್ರಿಯೆಗಳ ಅಗತ್ಯವಿರುವ ಸಂದಭಗಳನ್ನು ಹೊರತುಪಡಿಸಿ, ತನ್ನ ಬದುಕು ಅಥವಾ ವೈಯಕ್ತಿಕ ಸ್ವಾತಂತ್ರ್ಯಗಳಿಂದ ವಂಚಿತನಾಗಬಾರದು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಸರ್ವೋಚ್ಛ ನ್ಯಾಯಾಲಯದ ಹಲವಾರು ತೀರ್ಪುಗಳ ಕಾರಣದಿಂದ 21ನೇ ಕಲಮಿನ ಎಲ್ಲೆಗಳನ್ನು ಪ್ರಜೆಗಳ ಹಲವು ಹಕ್ಕುಗಳನ್ನು ಎಂದರೆ, ಆರೋಗ್ಯದ ಹಕ್ಕನ್ನು, ಗುರುತಿಸುವ ಸಲುವಾಗಿ ವಿಸ್ತರಿಸಲಾಗಿದೆ. (89)
>
> 21ನೇ ಕಲಮಿನಡಿಯಲ್ಲಿ ಖಾತ್ರಿಪಡಿಸಲಾಗಿರುವ ಬದುಕಿನ ಹಕ್ಕು ಬರಿಯ ಪ್ರಾಣಿ ಸಮಾನ ಅಸ್ತಿತ್ವವಲ್ಲ ಎಂಬುದನ್ನು ಬಹಳ ಚೆನ್ನಾಗಿ ಸ್ಪಷ್ಟಪಡಿಸಲಾಗಿದೆ. ಅದು ಬದುಕಿನ ಎಲ್ಲಾ ಸವಲತತ್ತುಗಳನ್ನು ಆನಂದಿಸುವ ಹಕ್ಕಾಗಿದೆ. ಅದರ ಅತ್ಯಗತ್ಯ ವಿಸ್ತರಣೆಯಂತೆ, ಬದುಕುವ ಹಕ್ಕು ಆರೋಗ್ಯಕರ ಬದುಕಿನ ಹಕ್ಕನ್ನೂ ಒಳಗೊಂಡಿದೆ." (89)

**"ದೇವಿಕಾ ಬಿಸ್ವಾಸ್ v. ಭಾರತ ಸರ್ಕಾರ**[220] ಪ್ರಕರಣದಲ್ಲಿ, ದೇಶದಲ್ಲೆಡೆಯ ಸಂತಾನಶಕ್ತಿ ಹರಣ ಶಿಬಿರಗಳಲ್ಲಿನ ಅನಾರೋಗ್ಯಕರ ವಾತಾವರಣದ ದೆಸೆಯಿಂದ ನಡೆದಿದ್ದ ಹಲವಾರು ಸಾವುಗಳಿಗೆ ಸಂಬಂಧಿಸಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆಯ ಸಂದರ್ಭದಲ್ಲಿ, ಈ ನ್ಯಾಯಾಲಯದ ದ್ವಿಸದಸ್ಯ ಪೀಠ ಹೀಗೆಂದು ಆದೇಶಿಸಿತು:

---

[219] (2001) 5 ALD 522

[220] (2016) 10 SCC 726

> ಸಂವಿಧಾನದ 21ನೇ ಕಲಮಿನಡಿಯ ಬದುಕಿನ ಹಕ್ಕು ಘನತೆಯ ಮತ್ತು ಅರ್ಥಪೂರ್ಣವಾದ ಬದುಕನ್ನು ಸಾಗಿಸುವ ಹಕ್ಕನ್ನೂ ಒಳಗೊಂಡಿದೆ ಮತ್ತು ಆರೋಗ್ಯದ ಹಕ್ಕು ಈ ಹಕ್ಕಿನ ಸ್ವಾಭಾವಿಕ ಭಾಗವಾಗ ಎಂಬುದು ಸುಸ್ಪಷ್ಟವಾಗಿದೆ. ಆರೋಗ್ಯದ ಆ ಹಕ್ಕು ಬದುಕುವ ಹಕ್ಕಿನ ನೈಸರ್ಗಿಕ ಭಾಗ ಎಂಬುದನ್ನು ಮತ್ತೊಮ್ಮೆ ಹೇಳಬೇಕಾಗಿಲ್ಲ.

ಕಾಮನ್ ಕಾಸ್ v. ಭಾರತ ಸರ್ಕಾರ ಪ್ರಕರಣದಲ್ಲಿ, ಒಮ್ಮತದ ತೀರ್ಪು ಪ್ರಕಟಿಸಿದ ನ್ಯಾ. ಸಿಕ್ರಿ ರವರ ಆರೋಗ್ಯದ ಹಕ್ಕು ಮತ್ತು ಘನತೆಯ ಹಕ್ಕಿನ ನಡುವಿನ ಬಿಡಿಸಸಲಾರದ ನಂಟನ್ನು ಮನಗಂಡರು:

> "ಇದಕ್ಕೆ ಸಂಬಂಧಿಸಿದ ಮತ್ತು ಕುತೂಹಲಕಾರಿಯಾದ, ಘನತೆಯ ಅಂಶವೊಂದಿದ್ದು ಅದನ್ನು ಒತ್ತಿಹೇಳಬೇಕಿದೆ. ಆರೋಗ್ಯದ ಹಕ್ಕು ಸಂವಿಧಾನದ ೨1ನೇ ಕಲಮಿನ ಭಾಗವಾಗಿದೆ. ಅದೇ ವೇಳೆ, ಬಡತನ ಇತ್ಯಾದಿ ವಿಚಾರಗಳ ಕಾರಣದಿಂದ ಎಲ್ಲರೂ ಆ ಹಕ್ಕನ್ನು ಆನಂದಿಸಲು ಆಗುವುದಿಲ್ಲ ಎಂಬುದು ಕೂಡಾ ಕಠೋರವಾದ ವಾಸ್ತವ. ಈ ಆರೋಗ್ಯದ ಹಕ್ಕನ್ನ್ ವಾಸ್ತವವಾಗಿ ಮಾರ್ಪಾಡುಗೊಳಿಸುವ ಪರಿಸ್ಥಿತಿಯಲ್ಲಿ ಸರ್ಕಾರವಿಲ್ಲ. ಹಾಗಾಗಿ, ಪ್ರಜೆಗಳಿಗೆ ಅವರ ಆರೋಗ್ಯದ ಹಕ್ಕನ್ನೇ ಖಾತ್ರಿಪಡಿಸಲು ಸಾಧ್ಯವಾಗದಿರುವಾಗ, ಅವರಿಗೆ, ಘನತೆಯಿಂದ ಸಾಯುವ ಹಕ್ಕನ್ನು ನಿರಾಕರಿಸಲಾದೀತೆ?"

ಆರೋಗ್ಯದ ಹಕ್ಕಿಗೆ ಸಿಕ್ಕಿರುವ ಸಾಂವಿಧಾನಿಕ ಮನ್ನಣೆಯ ಜೊತೆಗೆ, ಭಾರತ ಅಂಗೀಕರಿಸಿರುವ ಅಂತಾರಾಷ್ಟ್ರೀಯ ಒಡಂಬಡಿಕೆಗಳು, ಕರಾರುಗಳು ಮತ್ತು ಒಪ್ಪಂದಗಳಲ್ಲಿ ಕೂಡ ಆರೋಗ್ಯದ ಹಕ್ಕನ್ನು ಗುರುತಿಸಲಾಗಿದೆ, ಇದರಲ್ಲಿ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಕ್ಕುಗಳ ಅಂತಾರಾಷ್ಟ್ರೀಯ ಒಡಂಬಡಿಕೆ, 1966 ("ಐ.ಸಿ.ಇ.ಎಸ್.ಸಿ.ಆರ್") ಮತ್ತು ಸಾರ್ವತ್ರಿಕ ಮಾನವ ಹಕ್ಕುಗಳ ಘೋಷಣೆ, 1948 ("ಯು.ಡಿ.ಎಚ್.ಆರ್") ಕೂಡಾ ಸೇರಿವೆ. ಯು.ಡಿ.ಎಚ್.ಆರ್.ನ 25ನೇ ಕಲಮು ಆರೋಗ್ಯದ ಹಕ್ಕನ್ನು ಗುರುತಿಸುತ್ತದೆ:

ಎಲ್ಲ ವ್ಯಕ್ತಿಗಳಿಗೂ ತಮಗಾಗಿ ಹಾಗೂ ತಮ್ಮ ಕುಟುಂಬಕ್ಕಾಗಿ ಬದುಕಿನ ನಿರ್ಧಿಷ್ಟ ಮಟ್ಟವನ್ನು ಸಾಧಿಸುವ ಹಕ್ಕಿರುತ್ತದೆ ಮತ್ತು ಅದರಲ್ಲಿ ಆಹಾರ, ಬಟ್ಟೆ, ವಸತಿ ಮತ್ತು ವೈದ್ಯಕೀಯ ಸೇವೆ ಹಾಗೂ ಅಗತ್ಯ ಸಾಮಾಜಿಕ ಸೇವೆಗಳೂ ಸೇರಿವೆ.

69. ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಕ್ಕುಗಳ ಅಂತಾರಾಷ್ಟ್ರೀಯ ಒಡಂಬಡಿಕೆಯ ("ಐ.ಸಿ.ಈ.ಎಸ್.ಸಿ.ಆರ್") 12ನೇ ಕಲಮು ಎಲ್ಲಾ ವ್ಯಕ್ತಿಗಲಿಗಿರುವ ದೈಹಿಕ ಮತ್ತು ಮಾನಸಿಕ ಆರೋಗ್ಯದ ಅತ್ಯುನ್ನತ ಮಟ್ಟವನ್ನು ಆನಂದಿಸುವ ಹಕ್ಕನ್ನು ಗುರುತಿಸುತ್ತದೆ:

"ಪ್ರಸ್ತುತ ಒಡಂಬಡಿಕೆಗೆ ಬದ್ಧವಾಗಿರುವ ರಾಷ್ಟ್ರಗಳು ಅತ್ಯುತ್ತಮ ಗುಣಮಟ್ಟದ ದೈಹಿಕ ಮತ್ತು ಮಾನಸಿಕ ಆರೋಗ್ಯದ ಮೇಲೆ ಎಲ್ಲರಿಗೂ ಇರುವ ಹಕ್ಕನ್ನು ಗುರುತಿಸುತ್ತವೆ.

12.2 ನೇ ಕಲಮಿನ ಪ್ರಕಾರ, ಸರ್ಕಾರಗಳು ತಮ್ಮ ನಾಗರಿಕರ ಆರೋಗ್ಯವನ್ನು ಸುಧಾರಿಸಲು, ವೈದ್ಯಕೀಯ ಸೇವೆಗಳು ಸಮಾನವಾಗಿ ಮತ್ತು ಸಕಾಲಿಕವಾಗಿ ದೊರಕುವ ವಾತಾವರಣವನ್ನು ನಿರ್ಮಿಸುವುದು ಸೀರಿದಂತೆ, ನಿರ್ದಿಷ್ಟ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಅಪೇಕ್ಷಿಸುತ್ತದೆ. ತನ್ನ ಸಾಮಾನ್ಯ ಟಿಪ್ಪಣಿ ಸಂಖ್ಯೆ 14 ರಲ್ಲಿ ಸಂಯುಕ್ತ ರಾಷ್ಟ್ರ ಆರ್ಥಿಕ ಮತ್ತು ಸಾಮಾಜಿಕ ಸಮಿತಿಯು, ಸರ್ಕಾರಗಳು ಎಲ್ಲಾ ವ್ಯಕ್ತಿಗಳ ಆರೋಗ್ಯವನ್ನು ಗೌರವಿಸುವ, ರಕ್ಷಿಸುವ ಮತ್ತು ಖಾತ್ರಿಪಡಿಸುವ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಹೇಳುತ್ತದೆ[221]. ರಾಜ್ಯಗಳು ಆರೋಗ್ಯಕ್ಕೆ ಸಂಬಂಧಿಸಿದ ಮಾಹಿತಿ, ಶಿಕ್ಷಣ, ಸೌಲಭ್ಯಗಳು, ಸರಕುಗಳು ಮತ್ತು ಸೇವೆಗಳು ತಾರತಮ್ಯವಿಲ್ಲದೆ, ವಿಶೇಷವಾಗಿ ದುರ್ಬಲ ಮತ್ತು ಅಂಚಿನಲ್ಲಿರುವ ಜನರಿಗೆ, ಕೈಗೆಟಕುವಂತೆ ದೊರಕುವುದನ್ನು ಖಾತ್ರಿಪಡಿಸಿಕೊಳ್ಳುವುದು ಸರ್ಕಾರಗಳ ಜವಾಬ್ದಾರಿಯಾಗಿದೆ.

[221] UN Economic and Social Council (ECOSOC), Committee on Economic, Social and Cultural Rights, General Comment No. 14: The Right to the Highest Attainable Standard of Health, UN Doc. E/C.12/2004 (2000).

ಸಾಮಾನ್ಯ ಟಿಪ್ಪಣಿ ಸಂಖ್ಯೆ 14ರ ಅಡಿಯಲ್ಲಿ, ಭಾರತವು, ಎಲ್.ಜಿ.ಬಿ.ಟಿ.ಐ.ಕ್ಯೂ. ಸಮುದಾಯದ ಸದಸ್ಯರೂ ಸೇರಿದಂತೆ, ಕಡೆಗಣಿಸಲ್ಪಟ್ಟ ಜನರಿಗೆ ದೊರಕುವಂತಹ (ಸಾಕಷ್ಟು ಪ್ರಮಾಣದಲ್ಲಿ), ಕೈಗೆಟುಕುವಂತಹ (ಭೌತಿಕ, ಭೌಗೋಳಿಕ, ಆರ್ಥಿಕವಾಗಿ ಮತ್ತು ನಿಷ್ಪಕ್ಷಪಾತವಾಗಿ), ಒಪ್ಪಿಗೆಯಾಗುವಂತಹ (ಸಂಸ್ಕೃತಿ ಮತ್ತು ವೈದ್ಯಕೀಯ ನೀತಿಗಳನ್ನು ಗೌರವಿಸುವ) ಮತ್ತು ಗುಣಮಟ್ಟ (ವೈಜ್ಞಾನಿಕವಾಗಿ ಮತ್ತು ವೈದ್ಯಕೀಯವಾಗಿ ಸೂಕ್ತ ಮತ್ತು ಉತ್ತಮ ಗುಣಮಟ್ಟದ) ಸರಕುಗಳು ಮತ್ತು ಸೇವೆಗಳನ್ನು ಒದಗಿಸಬೇಕಿದೆ.

70. 1948ನೇ ಇಸವಿಯಷ್ಟು ಹಿಂದೆಯೇ ವಿಶ್ವ ಆರೋಗ್ಯ ಸಂಸ್ಥೆಯು (ಡಬ್ಲ್ಯೂ.ಎಚ್.ಓ") "ಆರೋಗ್ಯಕರ" ಎಂಬ ಪದವನ್ನು "ಕೇವಳ ಖಾಯಿಲೆ ಮತ್ತು ವೈಕಲ್ಯಗಳ ಗೈರುಹಾಜರಿಯಷ್ಟೇ ಅಲ್ಲದೆ, ದೈಹಿಕ, ಮಾನಸಿಕ ಮತ್ತು ಸಾಮಾಜಿಕ ದೃಷ್ಟಿಯಲ್ಲಿ ಸಂಪೂರ್ಣವಾಗಿ ಕ್ಷೇಮವಾಗಿರುವ ಸ್ಥಿತಿ" ಎಂಬ ವಿಶಾಲವಾದ ಅರ್ಥ ಬರುವಂತೆ ವ್ಯಾಖ್ಯಾನಿಸಿತ್ತು.ಇಂದಿಗೂ ಬಹುದೊಡ್ಡ ಸಂಖ್ಯೆಯ ಭಾರತೀಯ ನಾಗರಿಕರ ಪಾಲಿಗೆ ಈ ಮಟ್ಟದ ಆರೋಗ್ಯ ಗಗನಕುಸುಮವಾಗಿಯೇ ಉಳಿದಿದೆ. ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ನಾಗರಿಕರ ಒಂದು ನಿರ್ದಿಷ್ಟ ವರ್ಗಕ್ಕೆ ಅವರ ಅತ್ಯಂತ ಖಾಸಗೀ ಲೈಂಗಿಕ ಆಯ್ಕೆಗಳ ದೆಸೆಯಿಂದಾಗಿ ಆರೋಗ್ಯದ ಹಕ್ಕು ಎಂಬ ಸಾಂವಿಧಾನಿಕ ಸವಲತ್ತಿನ ಲಾಭಗಳನ್ನು ನಿರಾಕರಿಸಲಾಗುತ್ತಿದೆ.

71. ಲೈಂಗಿಕತೆ ಬದುಕಿನ ಒಂದು ನೈಸರ್ಗಿಕ ಮತ್ತು ಅಮೂಲ್ಯ ಅಂಶವಾಗಿದ್ದೂ, ನಮ್ಮಲ್ಲಿನ ಮಾನವೀಯತೆಯ ಮುಖ್ಯ ಮತ್ತು ಮೂಲಭೂತ ಭಾಗವಾಗಿದೆ[222]. ಲೈಂಗಿಕ ಹಕ್ಕುಗಳು ಲೈಂಗಿಕತೆಗೆ ಸಂಬಂಧಿಸಿದ ಅಧಿಕಾರಗಳಾಗಿದ್ದು, ಸ್ವಾತಂತ್ರ್ಯ, ಸಮಾನತೆ, ಖಾಸಗೀತನ, ಸ್ವಾಯತ್ತತೆ, ಮತ್ತು ಎಲ್ಲ ಜನರ ಘನತೆಯ ಹಕ್ಕುಗಳಿಂದ ಉದ್ಭವಿಸುತ್ತವೆ. ಜನರು ಆರೋಗ್ಯದ ಅತ್ಯುನ್ನತ ಮಟ್ಟವನ್ನು ತಲುಪಬೇಕಿದ್ದಲ್ಲಿ, ಅವರಿಗೆ ತಮ್ಮ ಲೈಂಗಿಕ ಜೀವನಕ್ಕೆ ಸಂಬಂಧಿಸಿದಂತೆ ತಮ್ಮಿಷ್ಟದಂತೆ ಆಯ್ಕೆ ಮಾಡುವ ಮತ್ತು ತಮ್ಮ ಲೈಂಗಿಕ ಅಸ್ಮಿತೆಯನ್ನು ವ್ಯಕ್ತಪಡಿಸುವಾಗ ಸುರಕ್ಷತೆಯ ಭಾವನೆ ಅನುಭವಿಸುವ ಹಕ್ಕು ಇರಬೇಕು. ಆದರೆ, ತಾರತಮ್ಯ, ಕಳಂಕ, ಭಯ ಮತ್ತು ಹಿಂಸೆಗಳು ಕೆಲ ನಾಗರಿಕರು, ಮೂಲಭೂತ ಲೈಂಗಿಕ ಹಕ್ಕುಗಳು ಮತ್ತು ಆರೋಗ್ಯ ಪಡೆಯುವುದನ್ನು ತಡೆಯುತ್ತವೆ.

---

[222] Sexual Rights, International Planned Parenthood Federation (2008).

72. ಲೈಂಗಿಕತೆ ಮತ್ತು ಲಿಂಗಾಧಾರಿತ ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದ ವ್ಯಕ್ತಿಗಳು ತಾರತಮ್ಯ, ಕಳಂಕ, ಮತ್ತು ಕೆಲವು ಸಂದರ್ಭಗಳಲ್ಲಿ, ಅವರ ಲೈಂಗಿಕ ನಿಲುವು ಮತ್ತು ಲೈಂಗಿಕ ಅಸ್ಮಿತೆಯ ಕಾರಣದಿಂದ ಚಿಕಿತ್ಸೆಯ ನಿರಾಕರಣೆಯಂತಹ ಭೇದಭಾವ ಅನುಭವಿಸುತ್ತಾರೆ[223]. ಆದಾಗ್ಯೂ, 'ಲೈಂಗಿಕ ಮತ್ತು ಲಿಂಗಾಧಾರಿತ ಅಲ್ಪಸಂಖ್ಯಾತ ಸಮುದಾಯಗಳು 'ಒಂದೇ ಬಗೆಯ ವ್ಯಕ್ತಿಗಳನ್ನು ಹೊಂದಿಲ್ಲ ಅಲ್ಲದೇ, ಅವರುಗಳಿಗಾಗುವ ಸಾಮಾಜಿಕ ಬಹಿಷ್ಕಾರ, ಕಡೆಗಣಿಸುವಿಕೆ, ಮತ್ತು ಭೇದಭಾವದ ಅನುಭವಗಳಷ್ಟೇ ಅಲ್ಲದೇ ಆ ಸಮುದಾಯದ ವ್ಯಕ್ತಿಗಳ ನಿರ್ದಿಷ್ಟ ಆರೋಗ್ಯದ ಅಗತ್ಯಗಳು ಕೂಡಾ ಗಣನೀಯವಾಗಿ ಭಿನ್ನವಾಗಿರುತ್ತವೆ[224]. ಎಂಬುದನ್ನು ಬಹುಮುಖ್ಯವಾಗಿ ಗಮನಿಸಬೇಕು. ಆದಾಗ್ಯೂ, ಅವರು ಅನುಭವಿಸುವ ಬಹಿಷ್ಕಾರ, ತಾರತಮ್ಯ ಮತ್ತು ಕಡೆಗಣನೆಗಳು, ಭಿನ್ನಲೈಂಗಿಕ ನಿಯಮಗಳಿಗೆ ಒಳಪಡದ ಲೈಂಗಿಕ ಮತ್ತು ಲಿಂಗಾಧಾರಿತ ಅಸ್ಮಿತೆಗಳನ್ನು ಕಡೆಗಣಿಸಿ, ಹೊರಗಿಡುವಂತಹ ಭಿನ್ನಲೈಂಗಿಕ ಸಾಮಾಜಿಕ ನಿಯಮಗಳು, ಮತ್ತು ಇಬ್ಬಗೆ ಲಿಂಗ ಮತ್ತು ವಿರುದ್ಧ-ಲಿಂಗ ಸಂಬಂಧಗಳೆಡೆಗಿನ ಸಮಾಜದ ತೀವ್ರವಾದ ಪಕ್ಷಪಾತಗಳಲ್ಲಿ ಬೇರೂರಿದೆ ಎಂಬ ವಿಚಾರದಲ್ಲಿ ಈ ವ್ಯಕ್ತಿಗಳು ಒಂದಾಗುತ್ತಾರೆ. ಇದು, ವ್ಯಕ್ತಿಗಳ ಆರೋಗ್ಯಸೇವೆ ಪಡೆದುಕೊಳ್ಳುವ ಪ್ರವೃತ್ತಿ, ಆರೋಗ್ಯ ಸೇವೆಗಳ ದೊರಕುವಿಕೆ ಮತ್ತು ಅವರು ಎಷ್ಟರ ಮಟ್ಟಿಗಿನ ಲೈಂಗಿಕ ಆರೋಗ್ಯ ಹೊಂದಿರುತ್ತಾರೆ ಎಂಬುದುದಾರ ಮೇಲೆ ಘನವಾದ ಪರಿಣಾಮಗಳನ್ನು ಬೀರುತ್ತದೆ.

73. "ಲೈಂಗಿಕ ಆರೋಗ್ಯ" ಎಂಬ ಪದವನ್ನು ಮೊದಲ ಬಾರಿಗೆ 1975 ರ ವಿಶ್ವ ಆರೋಗ್ಯ ಸಂಸ್ಥೆಯ ತಾಂತ್ರಿಕ ವರದಿಗಳ ಸರಣಿಯಲ್ಲಿ "ವ್ಯಕ್ತಿಗಳನ್ನು ಧನಾತ್ಮಕವಾಗಿ ಸಮೃದ್ಧಗೊಳಿಸುವ ಮತ್ತು ಅವರ ವ್ಯಕ್ತಿತ್ವ, ಸಂವಹನ ಮತ್ತು ಪ್ರೀತಿಯನ್ನು ವರ್ಧಿಸುವ ರೀತಿಯಲ್ಲಿ, ಲೈಂಗಿಕ ಜೀವಿಯೊಬ್ಬರಿಗೆ ಸಂಬಂಧಿಸಿದ ದೈಹಿಕ, ಭಾವನಾತ್ಮಕ, ಬೌದ್ಧಿಕ ಮತ್ತು ಲೈಂಗಿಕ ಅಂಶಗಳ ಸಾಮಾಜಿಕ ಒಟ್ಟುಗೂಡಿಸುವಿಕೆ[225], ಎಂದು

[223] Alexandra Muller, "Health for All? Sexual Orientation, Gender Identity, and the Implementation of the Right to Access to Health Care in South Africa", Health and Human Rights (2016) at pages 195–208.

[224] Institute of Medicine, "The Health of Lesbian, Gay, Bisexual, and Transgender People: Building a Foundation for Better Understanding", National Academies Press (2011).

[225] World Health Organization, "Gender and human rights: Defining sexual health", (2002).

ವ್ಯಾಖ್ಯಾನಿಸಲಾಯಿತು. ಲೈಂಗಿಕ ಆರೋಗ್ಯದ ವಿಶ್ವ ಆರೋಗ್ಯ ಸಂಸ್ಥೆಯ ಈಗಿನ ಚಾಲ್ತಿಯಲ್ಲಿರುವ ವ್ಯಾಖ್ಯಾನ ಕೆಳಕಂಡಂತಿವೆ:

> "... ಲೈಂಗಿಕತೆಗೆ ಸಂಬಂಧಿಸಿದ ದೈಹಿಕ, ಭಾವನಾತ್ಮಕ, ಮಾನಸಿಕ ಮತ್ತು ಸಾಮಾಜಿಕ ಯೊಗಕ್ಷೇಮದ ಸ್ಥಿತಿ. ಅದು ಬರಿಯ ಖಾಯಿಲೆ, ವೈಕಲ್ಯ ಮತ್ತು ದೌರ್ಬಲ್ಯಗಳಗಳ ಗೈರುಹಾಜರಿಯಲ್ಲ. ಲೈಂಗಿಕ ಆರೋಗ್ಯವು ಲೈಂಗಿಕತೆ ಮತ್ತು ಲೈಂಗಿಕ ಸಂಬಂಧಗಳ ಕುರಿತು ಸಕಾತ್ಮಕ ಮತ್ತು ಗೌರವಾನ್ವಿತ ಭಾವನೆ ಹಾಗೂ ಬಲವಂತ, ತಾರತಮ್ಯ ಮತ್ತು ಹಿಂಸೆಯಿಂದ ಮುಕ್ತವಾದ ಆಹ್ಲಾದಕರ ಲೈಂಗಿಕ ಅನುಭವಗಳನ್ನು ಹೊಂದುವ ಸಾದ್ಯತೆಯನ್ನು ಒಳಗೊಂಡಿರುತ್ತದೆ. ಲೈಂಗಿಕ ಆರೋಗ್ಯವನ್ನು ಹೊಂದಲು ಮತ್ತು ನಿರ್ವಹಿಸಲು ಎಲ್ಲಾ ವ್ಯಕ್ತಿಗಳ ಲೈಂಗಿಕ ಹಕ್ಕುಗಳನ್ನು ಗೌರವಿಸಬೇಕು, ರಕ್ಷಿಸಬೇಕು, ಮತ್ತು ಈಡೇರಿಸಬೇಕು.

ವಿಶ್ವ ಆರೋಗ್ಯ ಸಂಸ್ಥೆ ಮುಂದುವರೆಯುತ್ತಾ, "ಲೈಂಗಿಕ ಆರೋಗ್ಯಕ್ಕೆ ಸಂಬಂಧಿಸಿದ ಪ್ರಮುಖ ವರ್ತನೆಗಳು ಮತ್ತು ಫಲಶೃತಿಗಳಲ್ಲಿ ಅಡಕವಾಗಿರುವ ಲೈಂಗಿಕತೆಯನ್ನು ವಿಶಾಲವಾದ ಅರ್ಥದಲ್ಲಿ ಪರಿಗಣನೆಗೆ ತೆಗೆದುಕೊಳ್ಳದ್ದೇ, ಲೈಂಗಿಕ ಆರೋಗ್ಯವನ್ನು ವಿವರಿಸಲು, ಅರ್ಥಮಾಡಿಕೊಳ್ಳಲು ಅಥವಾ ಜಾರಿಗೊಳಿಸಲು ಆಗುವುದಿಲ್ಲ" ಎಂದು ಹೇಳುತ್ತದೆ. ಆದು ಲೈಂಗಿಕತೆಯನ್ನು ಹೀಗೆ ವ್ಯಾಖ್ಯಾನಿಸುತ್ತದೆ:

> ಜೀವನವಿಡೀ ಮನುಷ್ಯರಾಗಿರುವುದರ ಕೇಂದ್ರ ಅಂಶವು ಲೈಂಗಿಕ ಕ್ರಿಯೆ, ಲೈಂಗಿಕ ಅಸ್ಮಿತೆ ಮತ್ತು ಪಾತ್ರಗಳು, ಲೈಂಗಿಕ ನಿಲುವು, ಕಾಮಪ್ರಚೋದನೆ, ಆನಂದ, ಅನ್ಯೋನ್ಯತೆ ಮತ್ತು ಸಂತಾನೋತ್ಪತ್ತಿಯನ್ನು ಒಳಗೊಂಡಿದೆ. ಲೈಂಗಿಕತೆಯನ್ನು ಆಲೋಚನೆಗಳು, ಕಲ್ಪನೆಗಳು ಬಯಕೆಗಳು, ನಂಬುಗೆಗಳು, ಮನೋಭಾವ, ಮೌಲ್ಯಗಳು ನಡವಳಿಕೆಗಳು, ಪದ್ಧತಿಗಳು, ಪಾತ್ರಗಳು ಮತ್ತು ಸಂಬಂಧಗಳ ಮೂಲಕ ಅನುಭವಿಸಲಾಗುತ್ತದೆ ಮತ್ತು ವ್ಯಕ್ತಪಡಿಸಲಾಗುತ್ತದೆ. ಲೈಂಗಿಕತೆ ಮೇಲಿನ ಎಲ್ಲ ಆಯಾಮಗಳನ್ನೂ

ಒಳಗೊಳ್ಳಬಹುದಾದರೂ, ಅವೆಲ್ಲವನ್ನೂ ಯಾವಾಗಲೂ ಅನುಭವಿಸುವುದು ಮಥವಾ ವ್ಯಕ್ತಪಡಿಸುವುದು ಸಾಧ್ಯವಿಲ್ಲ. ಲೈಂಗಿಕತೆಯು ಜೈವಿಕ, ಮಾನಸಿಕ, ಸಾಮಾಜಿಕ, ಆರ್ಥಿಕ, ರಾಜನೈತಿಕ, ಸಾಂಸ್ಕೃತಿಕ, ಕಾನೂನಾತ್ಮಕ, ಐತಿಹಾಸಿಕ, ಧಾರ್ಮಿಕ ಮತ್ತು ಆಧ್ಯಾತ್ಮಿಕ ಅಂಶಗಳ ಸಂವಹನದಿಂದ ಪ್ರಭಾವಿತಗೊಳ್ಳುತ್ತದೆ.

74. ವಿಶ್ವ ಆಗೋಗ್ಯ ಸಂಸ್ಥೆ 2015ರಲ್ಲಿ ಪ್ರಕಟಿಸಿದ "ಸೆಕ್ಯುವಲ್ ಹೆಲ್ತ್, ಹ್ಯೂಮನ್ ರೈಟ್ಸ್ ಅಂಡ್ ಲಾ" ಎಂಬ ಹೆಸರಿನ ವರದಿಯು ಈ ಪರಿಕಲ್ಪನೆಗಳ ನಡುವಿನ ಸಂಬಂಧವನ್ನು ಪರಾಂಬರಿಸುತ್ತದೆ[226]. ಈ ವರದಿಯು "ಮಾನವ ಲೈಂಗಿಕತೆಯು, ವಿವಿಧ ಬಗೆಯ ವರ್ತನೆ ಮತ್ತು ಅಭಿವ್ಯಕ್ತಿಗಳನ್ನು ಒಳಗೊಂಡಿರುತ್ತದೆ ಮತ್ತು ಲೈಂಗಿಕ ನಡವಳಿಕೆ ಮತ್ತು ಅಭಿವ್ಯಕ್ತಿಗಳ ಭಿನ್ನತೆಯನ್ನು ಗುರುತಿಸಿದಾಗ ಜನರ ಒಟ್ಟಾರೆ ಆರೋಗ್ಯ ಮತ್ತು ಯೋಗಕ್ಷೇಮ ವೃದ್ಧಿಯಾಗುತ್ತದೆ" ಎಂದು ಹೇಳುತ್ತದೆ." ಈ ವರದಿ, ಲೈಂಗಿಕ ಆರೋಗ್ಯವು ವ್ಯಕ್ತಿ, ದಂಪತಿ ಮತ್ತು ಕುಟುಂಬಗಳ ದೈಹಿಕ ಮತ್ತು ಭಾವನಾತ್ಮಕ ಯೋಗಕ್ಷೇಮಕ್ಕಷ್ಟೇ ಅಲ್ಲದೇ, ಸಮುದಾಯ ಮತ್ತು ದೇಶಗಳ ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆಗೆ ಮೂಲಭೂತವಾಗಿ ಅಗತ್ಯವಾಗಿರುವ ವಿಚಾರ ಎಂಬುದನ್ನು ಎತ್ತಿಹಿಡಿಯುತ್ತದೆ. ಲೈಂಗಿಕ ಆರೋಗ್ಯ ಮತ್ತು ಯೋಗಕ್ಷೇಮದೆಡೆಗೆ ಸಾಗುವ ವ್ಯಕ್ತಿಗಳ ಸಾಮರ್ಥ್ಯವು "ಲೈಂಗಿಕತೆಯ ಕುರಿತಾದ ವಿಸ್ತೃತ ಮಾಹಿತಿ ದೊರಕಿವಿಕೆ, ಲೈಂಗಿಕ ಚಟುವಟಿಕೆಯ ಪ್ರತಿಕೂಲ ಪರಿಣಾಮಗಳ ಅಪಾಯ ಮತ್ತು ಆ ವಿಚಾರದಲ್ಲಿ ತಾವೆಷ್ಟು ದುರ್ಬಲರೆಂಬ ಅರಿವು, ಒಳ್ಳೆಯ ಗುಣಮಟ್ಟದ ಲೈಂಗಿಕ ಆರೋಗ್ಯ ಸೇವೆಗಳ ಲಭ್ಯತೆ ಮತ್ತು ಲೈಂಗಿಕ ಆರೋಗ್ಯವನ್ನು ಪ್ರತಿಪಾದಿಸುವ ಮತ್ತು ಉತ್ತೇಜಿಸುವ ಪರಿಸರ" ಮುಂತಾದ ವಿವಿಧ ಅಂಶಗಳನ್ನು ಅವಲಂಬಿಸಿರುತ್ತದೆ.

75. ಅಂತಾರಾಷ್ಟ್ರೀಯ ಮಹಿಳೆಯರ ಆರೋಗ್ಯ ಒಕ್ಕೂಟವು ಲೈಂಗಿಕ ಆರೋಗ್ಯವನ್ನು 'ಲೈಂಗಿಕ ಹಕ್ಕುಗಳ' ಪರಿಧಿಯೋಳಗೆ ಗುರುತಿಸಿ , ಈ ಕೆಳಗಿನಂತೆ ವ್ಯಾಖ್ಯಾನಿಸಿದೆ[227]:

[226] World Health Organisation, "Sexual Health, Human Rights and the Law" (2015).

[227] International Women's Health Coalition, "Sexual Rights are Human Rights" (2014).

ಲೈಂಗಿಕ ಹಕ್ಕುಗಳು, ರಾಷ್ಟ್ರೀಯ ಕಾನೂನುಗಳು, ಅಂತಾರಾಷ್ಟ್ರೀಯ ಮಾನವಾಧಿಕಾರ ದಸ್ತಾವೇಜುಗಳು ಮತ್ತು ಇತರ ಒಪ್ಪಂದದ ದಸ್ತಾವೇಜುಗಳಲ್ಲಿ ಈಗಾಗಲೇ ಗುರಿತಿಸಲಾಗಿರುವ ಕೆಲ ಮಾನವಹಕ್ಕುಗಳನ್ನು ಅಪ್ಪಿಕೊಳ್ಳುತ್ತವೆ. ಅವುಗಳು ವ್ಯಕ್ತಿಗಳಿಗೆ - ಬಲವಂತ, ಹಿಂಸೆ ಮತ್ತು ಯಾವುದೇ ಬಗೆಯ ತಾರತಮ್ಯದಿಂದ ಮುಕ್ತವಾಗಿ - ಅತ್ಯುನ್ನತ ಗುಣಮಟ್ಟದ ಲೈಂಗಿಕ ಆರೋಗ್ಯ ಹೊಂದುವ; ತೃಪ್ತಿಕರ, ಸುರಕ್ಷಿತ ಮತ್ತು ಆನಂದದಾಯಕ ಲೈಂಗಿಕ ಬದುಕನ್ನು ನಡೆಸುವ; ತನ್ನ ಲೈಂಗಿಕತೆ, ಸಂತಾನೋತ್ಪತ್ತಿ, ಲೈಂಗಿಕ ನಿಲುವು, ದೈಹಿಕ ಸಮಗ್ರತೆ, ಸಂಗಾತಿಯ ಆಯ್ಕೆ ಮತ್ತು ಲೈಂಗಿಕ ಅಸ್ಮಿತೆಗೆ ಸಂಬಂಧಿಸಿದ ವಿಚಾರಗಳಲ್ಲಿ ಇತರ ಹಕುಗಳನ್ನು ಗಣನೆಗೆ ತೆಗೆದುಕೊಳ್ಳುತ್ತಾ, ನಿಯಂತ್ರಣ ಸಾಧಿಸುವ ಮತ್ತು ಮುಕ್ತವಾಗಿ ನಿರ್ಧರಿಸುವ; ಮತ್ತು ಹಾಗೆ ಮಾಡಲು ಅಗತ್ಯವಿರುವ, ಸೇವೆಗಳು, ಶಿಕ್ಷಣ ಮತ್ತು ಸಂಪೂರ್ಣ ಲೈಂಗಿಕತೆಯ ಶಿಕ್ಷಣವನ್ನೂ ಒಳಗೊಂಡ ಮಾಹಿತಿಯನ್ನು ಪಡೆಯುವ ಹಕ್ಕುಗಳಿವೆ ಎಂಬ ನಂಬುಗೆಯನ್ನು ಅವಲಂಬಿಸಿವೆ.

ಆರೋಗ್ಯದ ಹಕ್ಕಿನ ಚೌಕಟ್ಟಿನೊಳಗಿನ 'ಲೈಂಗಿಕ ಹಕ್ಕುಗಳ (ಲೈಂಗಿಕತೆ ಮತ್ತು ಲೈಂಗಿಕ ನಿಲುವಿಗೆ ಸಂಬಂಧಿಸಿದಂತೆ) ಕುರಿತ ಚರ್ಚೆಯು ಇತ್ತೀಚಿನ ವಿದ್ಯಮಾನವಾಗಿದೆ:

೧೯೯೩ರಲ್ಲಿ ವಿಯೆನ್ನಾದಲ್ಲಿ ನಡೆದ ಮಾನವ ಹಕ್ಕುಗಳ ಮೇಲಿನ ಜಾಗತಿಕ ಸಮ್ಮೇಳನ ಮತ್ತು ನಂತರ ೧೯೯೪ರಲ್ಲಿ ಕಾರ್ಯೋದಲ್ಲಿ ನಅಡೆದ ಜನಸಂಖ್ಯೆ ಮತು ಅಭಿವೃದ್ಧಿಯ ಮೇಲಿನ ಅಂತಾರಾಷ್ಟ್ರೀಯ ಅಧಿವೇಶನಕ್ಕೆ ಮೊದಲು, ಲೈಂಗಿಕತೆ, ಲೈಂಗಿಕ ಹಕ್ಕುಗಳು ಮತ್ತು ಲೈಂಗಿಕ ವೈವಿಧ್ಯತೆಗಳು ಅಂತಾರಾಷ್ಟ್ರೀಯ ಆರೋಗ್ಯ ಮತ್ತು ಮಾನವಾಧಿಕಾರಗಳ ಭಾಗವಾಗಿರಲಿಲ್ಲ.

ಈ ಹೊಸದಾಗಿ ಉದ್ಭವಿಸಿರುವ "ಲೈಂಗಿಕ ಹಕ್ಕು"ಗಳನ್ನು ದೈಹಿಕ ಸಮಗ್ರತೆ, ವ್ಯಕ್ತಿತ್ವ, ಸಮಾನತೆ ಮತ್ತು ವೈವಿಧ್ಯತೆಗಳ ಆಧಾರದಲ್ಲಿ ರೂಪಿಸಲಾಗಿದೆ.

(ಒತ್ತು ನೀಡಲಾಗಿದೆ)_

76. 377ನೇ ಪರಿಚ್ಛೇದದ ಚಲಾವಣೆಯು ಒಪ್ಪಿಗೆಯಿರುವ ವಯಸ್ಕರು ತಮ್ಮ ಆರೋಗ್ಯದ ಹಕ್ಕನ್ನು ಸಂಪೂರ್ಣವಾಗಿ ಅನುಭವಿಸುವುದನ್ನು ತಡೆಯುತ್ತದೆಯಲ್ಲದೇ ಅವರ ಲೈಂಗಿಕ ಹಕ್ಕುಗಳನ್ನೂ ನಿರಾಕರಿಸುತ್ತದೆ. ಗುದಸಂಭೋಗ ಮತ್ತು ಮುಖಮೈಥುನ ನಡೆಸುವ ವ್ಯಕ್ತಿಗಳು ಆರೋಗ್ಯ ಸಲಹೆ ಪಡೆದಾಗ ಅವರಿಗೆ ಶಿಕ್ಷೆಯಾಗುವ ಅಪಾಯದ ಹಿನ್ನೆಲೆಯಲ್ಲಿ, ಈ ಪರಿಚ್ಛೇದವು ವಯಸ್ಕರ ನಡುವಿನ ಒಪ್ಪಿಗೆಯ ಲೈಂಗಿಕ ಸಂಬಂಧಗಳು ಭಯ ಮತ್ತು ಅವಮಾನದ ಪರಿಧಿಯಲ್ಲಿ ನಡೆಯುವಂತೆ ಒತ್ತಾಯಿಸುತ್ತದೆ. ಇದರಿಂದಾಗಿ ಅಂತಹವರ ಮತ್ತು ವಿಶೇಷವಾಗಿ ಲೈಂಗಿಕ ಮತ್ತು ಲಿಂಗಾಧಾರಿತ ಅಲ್ಪಸಂಖ್ಯಾತ ಸಮುದಾಯದ ಸದಸ್ಯರ ಆರೋಗ್ಯದ ಗುಣಮಟ್ಟ ಸಮಾಜದ ಇತರರಿಗಿಂತ ಕಳಪೆಯಾಗುತ್ತದೆ.

77. ಆರೋಗ್ಯದ ಹಕ್ಕು ಅಸ್ವಸ್ಥರಾಗುವ ಹಕ್ಕಷ್ಟೇ ಅಲ್ಲದೆ, ಸ್ವಸ್ಥರಾಗಿರಬೇಕಾದ ಹಕ್ಕು ಕೂಡ. ಇದು ಖಾಯಿಲೆ ಅಥವಾ ದೌರ್ಬಲ್ಯದ ಗೈರುಹಾಜರಿಯನ್ನು ಮಾತ್ರವಲ್ಲದೇ, "ಸಂಪೂರ್ಣ ಭೌತಿಕ, ಮಾನಸಿಕ ಮತ್ತು ಸಾಮಾಜಿಕ ಯೋಗಕ್ಷೇಮ[228]" ಮತ್ತು ತಮ್ಮ ಆರೋಗ್ಯ ಮತ್ತು ದೇಹವನ್ನು ನಿಯಂತ್ರಿಸುವ ಮತ್ತು ಹಸ್ತಕ್ಷೇಪದಿಂದ ಮುಕ್ತವಾಗಿರುವ ಸ್ವಾತಂತ್ರ್ಯ (ಉದಾಹರಣೆಗೆ, ಒಪ್ಪಿಗೆಯಿಲ್ಲದ ವೈದ್ಯಕೀಯ ಚಿಕಿತ್ಸೆ ಮತ್ತು ಪ್ರಾಯೋಗದಿಂದ ಮುಕ್ತರಾಗಿರುವುದು), ಹಾಗೂ, ಎಲ್ಲರಿಗೂ ಅತ್ಯುನ್ನತ ಮಟ್ಟದ ಆರೋಗ್ಯವನ್ನು ಅನುಭವಿಸುವ ಸಮಾನವಾದ ಅವಕಾಶ ಒದಗಿಸುವ ವ್ಯವಸ್ಥೆಯನ್ನು ಪಡೆಯುವ ಹಕ್ಕುಗಳಂತಹ ಅಧಿಕಾರಗಳನ್ನು ಕೂಡಾ ಒಳಗೊಂಡಿರುತ್ತದೆ.

78. ಈ ನ್ಯಾಯಾಲಯದ ನ್ಯಾಯಶಾಸ್ತ್ರವು, ಆರೋಗ್ಯದ ಹಕ್ಕು ಮತ್ತು ವೈದ್ಯಕೀಯ ಆರೈಕೆಯ ಕೈಗಟಕುವಿಕೆಯನ್ನು ಗುರುತಿಸುವ ಮೂಲಕ ಋಣಾತ್ಮಕ ಮತ್ತು ಸಕಾರಾತ್ಮಕ ಕಟ್ಟುಪಾಡುಗಳ ನಡುವಿನ ಪ್ರಮುಖ ವ್ಯತ್ಯಾಸವನ್ನು ಬಿಂಬಿಸುತ್ತದೆ. 21ನೇ ಕಲಮು ಸರ್ಕಾರದ ಮೇಲೆ ಆರೋಗ್ಯದ ಹಕ್ಕಿನಲ್ಲಿ

[228] Preamble to the Constitution of the World Health Organisation.

ಮೂಗುತೂರಿಸದ ರೀತಿಯಲ್ಲಿ ನಡೆದುಕೊಳ್ಳಬೇಕೆಂಬ ಋಣಾತ್ಮಕ ಬದ್ಧತೆಯನ್ನಷ್ಟೇ ಹೇರುವುದಿಲ್ಲ. ಆರೋಗ್ಯದ ಹಕ್ಕನ್ನು ಪರಿಣಾಮಕಾರಿಯಾಗಿ ಆನಂದಿಸಲು ನೆರವಾಗಲು ಬೇಕಾದಷ್ಟು ಸಂಪನ್ಮೂಲಗಳು ಅಥವಾ ಆರೈಕೆಯ ಸವಲತ್ತುಗಳನ್ನು ಒದಗಿಸಲು ಕ್ರಮಗಳನ್ನು ತೆಗೆದುಕೊಳ್ಳಬೀಕೆಂಬ ಸಕಾರಾತ್ಮಕ ಕಟ್ಟುಪಾಡುಗಳನ್ನು ವಿಧಿಸುವ ಅಧಿಕಾರ ಈ ನ್ಯಾಯಾಲಯಕ್ಕಿದೆ.[229]

79. ಲೈಂಗಿಕತೆ ಮತ್ತು ಆರೋಗ್ಯದ ಹಕ್ಕಿನೊಂದಿಗಿನ ಅದರ ಸಂಬಂಧದ ಮೇಲೆ ದಕ್ಷಿಣ ಆಫ್ರಿಕಾದಲ್ಲಿ ನಡೆದ ಒಂದು ಅಧ್ಯಯನವು ಲೈಂಗಿಕ ನಿಲುವನ್ನು ಆಧರಿಸಿದ ತಾರತಮ್ಯ ಮತ್ತು ಆರೋಗ್ಯದ ಹಕ್ಕಿನ ನಡುವಿನ ನಕಾರಾತ್ಮಕ ಸಂಬಂಧವನ್ನು ಸೂಚಿಸುವ ಇತರ ಅನೇಕ ಅಧ್ಯಯನಗಳತ್ತ ಗಮನ ಸೆಳೆಯುತ್ತದೆ:

> ಉದಾಹರಣೆಗೆ ಕೆನಡಾದ ಅಧ್ಯಯನವೊಂದರಲ್ಲಿ, ಬ್ರೋಟ್ಮ್ಯಾನ್ ಮತ್ತು ಅವರ ಸಹೋದ್ಯೋಗಿಗಳು, ಆರೋಗ್ಯ ಸೇವೆಯ ವ್ಯವಸ್ಥೆಯಲ್ಲಿ ತಮ್ಮ ಲೈಂಗಿಕ ನಿಲುವಿನ ಬಗೆಗೆ ಮುಚ್ಚುಮರೆಯಿಲ್ಲದಂತಿದ್ದರೆ ಅದು ಸಮಲೈಂಗಿಕ ಸ್ತ್ರೀ ಪುರುಷರು ಮತ್ತು ಉಭಯಲಿಂಗಾಸಕ್ತ ಜನರು ತಾರತಮ್ಯವನ್ನು ಅನುಭವಿಸುವುದಕ್ಕೆ ದಾರಿಮಾಡಿಕೊಡುತ್ತದೆ ಎಂಬುದನ್ನು ಕಂಡುಕೊಂಡರು.
>
> "ಲೇನ್ ಮತ್ತು ಆವರ ಸಹೋದ್ಯೋಗಿಗಳು ಸೊವೆಟೋದಲ್ಲಿರುವ ಪುರುಷರೊಂದಿಗೆ ಲೈಂಗಿಕ ಕ್ರಿಯೆ ನಡೆಸುವ ಪುರುಷರನ್ನು ಸಂದರ್ಶಿಸಿದರು, ಮತ್ತು ಸಾರ್ವಜನಿಕ ಸವಲತುಗಳ ಸ್ಥಳಗಳಲ್ಲಿ ತಮ್ಮ ಲೈಂಗಿಕ ನಿಲುವಿನ ಬಗೆಗೆ ತಿಳಿಸುವ ಎಲ್ಲಾ ಪುರುಷರು, ಒಂದಲ್ಲಾ ಒಂದು ಬಗೆಯ ತಾರತಮ್ಯ ಅನುಭವಿಸಿರುತ್ತಾರೆ ಎಂಬುದನ್ನು ಕಂಡುಕೊಂಡರು. ಅಂತಹ ತಾರತಮ್ಯ (ಮೌಖಿಕ ಶೋಷಣೆಯಿಂದ ಹಿಡಿದು ಆರೋಗ್ಯ ಸೇವೆಯನ್ನು ನಿರಾಕರಿಸುವುದರವರೆಗೆ) ಮತ್ತು ಅದರ ನಿರೀಕ್ಷೆಯು, ಎಚ್.ಐ.ವಿ, ಆಪ್ತ ಸಲಹೆ ಮತ್ತು ತಪಾಸಣೆಯಂತಹ ಸೇವೆಗಳನ್ನು ಪಡೆಯುವುದರಲ್ಲಿ ತಡವಾಗುತ್ತದೆ.

[229] Jayna Kothari, "Social Rights and the Indian Constitution", Law, Social Justice and Global Development Journal (2004).

೪೦. ಅಂತಹ ತಾರತಮ್ಯವನ್ನು ಅನುಭವಿಸಿದ ಇಬ್ಬರು ವ್ಯಕ್ತಿಗಳ ಕಥೆಯನ್ನು ಅಲೆಕ್ಸಾಂಡ್ರಾ ಮುಲ್ಲರ್ ವಿವರಿಸುತ್ತಾರೆ. ಸಮಲೈಂಗಿಕ ಪುರುಷನಾದ ಟಿ, ತನ್ನ ಲೈಂಗಿಕತೆಯ ನೆವದಲ್ಲಿ ತನ್ನ ಮೇಲೆ ಹಲ್ಲೆ ನಡೆಸಲು ಬಂದ ಜನರ ಗುಂಪಿನಿಂದ ತಪ್ಪಿಸಿಕೊಳ್ಳುವಾಗ ಅವನ ಎರಡೂ ಕೈಗಳು ಮುರಿದವು. ಆಸ್ಪತ್ರೆಯಲ್ಲಿ, ಟಿ ನ ಲೈಂಗಿಕ ನಿಲುವನ್ನು ಅರಿತ ಸಿಬ್ಬಂದಿ, ಅವನೆದುರಲ್ಲೇ ಆ ವಿಚಾರದಲ್ಲಿ ಕಟುವಾಗಿ ಚರ್ಚಿಸಿದರು. ರೋಗಿಗಳಿಗೆ ಆಧ್ಯಾತ್ಮಿಕ ಬೆಂಬಲವನ್ನು ಒದಗಿಸಲು ಪ್ರತಿದಿನ ಆಸ್ಪತೆಯ ಕೊಠಡಿಗೆ ಭೇಟಿ ನೀಡುತ್ತಿದ್ದ ಸ್ಥಳೀಯ ಪ್ರಾರ್ಥನಾ ಗುಂಪೊಂದು, ತನ್ನ "ಪೈಶಾಚಿಕ" ಲೈಂಗಿಕತೆಯನ್ನು ಗುಣಪಡಿಸಲು ತನ್ನ ಹಾಸಿಗೆಯ ಪಕ್ಕದಲ್ಲಿ ಪ್ರಾರ್ಥಿಸುತ್ತಿದ್ದುದನ್ನು ಆತ ಸಹಿಸಿಕೊಳ್ಳಬೇಕಾಯಿತು. ಅವರನ್ನು ಅಲ್ಲಿಂದ ಹೊರಡಟು ಹೋಗುವಂತೆ ಅಥವಾ ತನ್ನನ್ನು ಬೇರೆ ಕೊಠಡಿಗೆ ವರ್ಗಾಯಿಸಬೇಕೆಂದು ಆತ ಕೇಳಿಕೊಂಡಾಗ, ದಾದಿಯರು ಸಹಾಯಮಾಡಲಿಲ್ಲ ಮತ್ತು ಆ ಪ್ರಾರ್ಥನಾ ಗುಂಪು ನಿಯಮಿತವಾಗಿ ಭೇಟಿ ನೀಡಿ ಸಮಲೈಂಗಿಕದ್ವೇಷೀ ಪ್ರಾರ್ಥನೆಗಳನ್ನು ಪಠಿಸುವುದನ್ನು ಮುಂದುವರೆಸಿತು. ಆರೋಗ್ಯ ಸೇವೆಯ ಲಭ್ಯತೆಯಮೇಲೆ ಭವಿಷ್ಯದಲ್ಲಿ ಪ್ರತಿಕೂಲ ಪರಿಣಾಮವುಂಟಾಗಬಹುದೆಂದು ಹೆದರಿದ ಟಿ, ಅಧಿಕೃತ ದೂರನ್ನು ದಾಖಲಿಸಲಿಲ್ಲ. ಆಸ್ಪತ್ರೆಯಿಂದ ಹೊರಬಂದ ಟಿ, ಚಿಕಿತ್ಸಾನಂತರದ ಪ್ರಕ್ರಿಯೆಗಳಿಗೆ ಆ ಆಸ್ಪತ್ರೆಗೆ ಮರಳಬಾರದೆಂದು ನಿರ್ಧರಿಸಿ ಬೇರೊಂದು ಆಸ್ಪತ್ರೆಯಲ್ಲಿ ತಮ್ಮ ಕೈಗೆ ಹಾಕಿದ್ದ ಕಾಸ್ಟ್ ಗಳನ್ನು ತೆಗೆಸಿಕೊಂಡರು.

ತನ್ನ ಸ್ತ್ರೀ ಸಂಗಾತಿಯೊಂದಿಗೆ ಮೂರು ವರ್ಷಗಳ ಕಾಲ ವಾಸವಿದ್ದ ಮತ್ತೊಬ್ಬ ಮಹಿಳೆ, ಪಿ, ಎಚ್ಐವಿ ಪರೀಕ್ಷೆಗೆ ಒಳಗಾಗಬೇಕೆಂದು ಬಯಸಿದರು. ಪಿ ನ ಸಂಭವನೀಯ ಅಪಾಯಕಾರಿ ವರ್ತನೆಗಳನ್ನು ತಿಳಿಯಲು ಆಸ್ಪತ್ರೆಯಲ್ಲಿರುವ ದಾದಿ ಕೆಲ ಪ್ರಶ್ನೆಗಳನ್ನು ಕೇಳಿದರು. ಆಕೆ ಕಾಂಡೋಂಗಳನ್ನು ಅಥವಾ ಗರ್ಭನಿರೋಧಕಗಳನ್ನು ಏಕೆ ಬಳಸಿಲ್ಲವೆಂದು ಕೇಳಿದಾಗ, ಪಿ ತನ್ನ ಲೈಂಗಿಕತೆಯ ಕಾರಣದಿಂದ ತನಗೆ ಅವುಗಳ ಅಗತ್ಯವಿಲ್ಲ ಎಂದು ಬಹಿರಂಗಪಡಿಸಿದರು. ತಕ್ಷಣ, ಪಿ ಗೆ ಎಚ್.ಐ.ವಿಯ ಅಪಾಯವಿಲ್ಲ ಎಂದು ಉದ್ಗರಿಸಿದ ದಾದಿ, ಆಕೆಗೆ "ಮನೆಗೆ ಹೋಗಿ ಮತ್ತು ನನ್ನ ಸಮಯವನ್ನು ಹಾಳುಮಾಡದಿರಿ" ಎಂದು ಹೇಳಿದರು. ಆನಂತರ ಫಿ ಮತ್ತೆಂದೂ ಎಚ್.ಐ.ವಿ ಪರೀಕ್ಷೆಗೊಳಗಾಗಲು ಪ್ರಯತ್ನಿಸಲಿಲ್ಲ.

ಇಂತಹ ಉದಾಹರಣೆಗಳು, ಪ್ರಪಂಚದೆಲ್ಲೆಡೆ ವ್ಯಕ್ತಿಗಳಿಗೆ ಅವರ ಲೈಂಗಿಕ ನಿಲುವಿನ ಆಧಾರದಲ್ಲಿ ಸಮಾನವಾದ ಆರೋಗ್ಯಸೇವೆಯನ್ನು ನಿರಾಕರಿಸಲಾಗುತ್ತಿದೆ ಎಂಬ ವಿಸ್ತೃತವಾದ ಸಮಸ್ಯೆಯನ್ನು ಸೂಚಿಸುತ್ತವೆ. ಜಗತ್ತಿನಾದ್ಯಂತ ತಾರತಮ್ಯದ ವಿಚಾರವೊಂದರ ಆಧಾರದಲ್ಲಿ ಜನರನ್ನು ಹೆದರಿಸಲಾಗುತ್ತಿದೆ ಅಥವಾ ಅವರು ಆರೋಗ್ಯ ಸೇವೆಗಳನ್ನು ಪಡೆದುಕೊಳ್ಳುವುದನ್ನು ತಡೆಗಟ್ಟಲಾಗುತ್ತದೆ ಎಂಬ ವಿಚಾರವು, ಕೇವಲ ತರಗತಿಗಳಲ್ಲಿ ಮತ್ತು ನ್ಯಾಯಾಲಯಗಳಲ್ಲಿ ಚರ್ಚಿಸಲ್ಪಡುವ ಸೈದ್ಧಾಂತಿಕ ವಿವಾದವಾಗಿರಾದೇ, ಬೀರುಮಟ್ಟದಲ್ಲಿ ವ್ಯಕ್ತಿಗಳನ್ನು ಪ್ರತಿಕೂಲವಾಗಿ ಪ್ರಭಾವಿಸುವ ಮತ್ತು ಆರೋಗ್ಯದ ಹಕ್ಕನ್ನು ಒಳಗೊಂಡಂತೆ ಅವರ ಅಧಿಕಾರಗಳನ್ನು ಉಲ್ಲಂಘಿಸುವ ವಿಷಯವಾಗಿದೆ.

81. ಲಿಂಗಾಧಾರಿತ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಸಮಾನತೆಯ ಹೋರಾಟಗಳು ಪ್ರಭಾವಿಸುವ ಪ್ರಮುಖ ವಿಚಾರಗಳಲ್ಲಿ ಆರೋಗ್ಯದ ಹಕ್ಕು ಕೂಡಾ ಒಂದಾಗಿದೆ:[230]

> ದೈಹಿಕ ಮತ್ತು ಮಾನಸಿಕ ಆರೋಗ್ಯದ ಹಕ್ಕು, ತಾರತಮ್ಯಪೂರ್ಣ ನೀತಿಗಳು ಮತ್ತು ಪದ್ಧತಿಗಳು, ಕೆಲ ವೈದ್ಯರ ಸಮಲೈಂಗಿಕದ್ವೇಷ, ಆರೋಗ್ಯಸೇವಾ ಸಿಬ್ಬಂದಿಗೆ ಲೈಂಗಿಕ ನಿಲುವಿಗೆ ಸಂಬಂಧಿಸಿದ ವಿಚಾರಗಳ ಕುರಿತು ಸಾಕಷ್ಟು ತರಬೇತಿಯ ಕೊರತೆ ಅಥವಾ ರೋಗಿಗಳೆಲ್ಲ ಭಿನ್ನಲಿಂಗಾಸಕ್ತರು ಎಂಬ ಸಾಮಾನ್ಯ ಊಹೆಯ ಜೊತೆಗೆ ಸಂಘರ್ಷಕ್ಕಿಳಿಯುತ್ತದೆ

ಸಮಾನ ಆರೋಗ್ಯ ಸೇವೆಗಳ ಹಕ್ಕನ್ನು ಒದಗಿಸುವುದು ಮುಖ್ಯವಾದುದಾದರೂ, ವ್ಯಕ್ತಿಯ ಸಮಗ್ರ ಯೋಗಕ್ಷೇಮದಲ್ಲಿ ಲೈಂಗಿಕ ಆರೋಗ್ಯ ಕೂಡಾ ಅಷ್ಟೇ ಮಹತ್ವದ ಪಾತ್ರವಹಿಸುತ್ತಾದೆ. ಆರೋಗ್ಯಕಾಲ ಲೈಂಗಿಕ ಜೀವನವು ವ್ಯಕ್ತಿಯ ದೈಹಿಕ ಮತ್ತು ಮಾನಸಿಕ ಆರೋಗ್ಯಡಾ ಅವಿಭಾಜ್ಯ ಅಂಗವಾಗಿದೆ, ಮತ್ತು ಇಲ್ಲಿ ವ್ಯಕ್ತಿಯು ಯಾರೆಡೆಗೆ ಆಕರ್ಷಿತರಾಗುತ್ತಾರೆ ಎಂಬ ವಿಚಾರ ಮುಖ್ಯವಾಗುವುದಿಲ್ಲ. ಕೆಲವು ಲೈಂಗಿಕ ಕ್ರಿಯೆಗಳನ್ನು ಅಪರಾಧೀಕರಿಸಿ, ಆ ವ್ಯಕ್ತಿಗಳನ್ನು ಮುಖ್ಯವಾಹಿನಿಯ ವಿಚಾರಗಳಿಂದ ದೂರವಿರಿಸಿದರೆ, ಖಣ್ದಿತವಾಗಿಯೂ

[230] Study Guide: Sexual Orientation and Human Rights, University of Minnesota Human RIghts Library (2003).

ಅಸುರಕ್ಷಿತ ಲೈಂಗಿಕ ಸಂಭೋಗ, ಬಲಾತ್ಕಾರ ಮತ್ತು ಸರಿಯಾದ ವೈದ್ಯಕೀಯ ಸಲಹೆ ಮತ್ತು ಲೈಂಗಿಕ ಶಿಕ್ಷಣದ ಕೊರತೆಗಳನ್ತಹ ಸಮಸ್ಯೆ ತಲೆದೂರುತ್ತವೆ.

82. ಹಾರ್ವರ್ಡ್ ಸ್ಕೂಲ್ ಆಫ್ ಪಬ್ಲಿಕ್ ಹೆಲ್ಥ್ ನಲ್ಲಿರುವ ಫ್ರಾಂಕೋಯಿಸ್-ಗ್ಸೇವಿಯರ್ ಬಾಗ್ನಾಡ್ ಆರೋಗ್ಯ ಮತ್ತು ಆರೋಗ್ಯ ಹಕ್ಕುಗಳ ಕೆಂದ್ರದ ವರದಿಯೊಂದು 'ಲೈಂಗಿಕ ಆರೋಗ್ಯ' ಎಂಬ ಪದವನ್ನು ಹೀಗೆಂದು ವ್ಯಾಖ್ಯಾನಿಸುತ್ತದೆ:

> ಲೈಂಗಿಕತೆಗೆ ಸಂಬಂಧಿಸಿದ ದೈಹಿಕ, ಭಾವನಾತ್ಮಕ, ಮಾನಸಿಕ ಮತ್ತು ಸಾಮಾಜಿಕ ಯೊಗಕ್ಷೇಮದ ಸ್ಥಿತಿ. ಸಾಮಾನ್ಯವಾದ ಆರೋಗ್ಯದಂತೆ, ಅದು ಬರಿಯ ಖಾಯಿಲೆಗಳ ಗೈರುಹಾಜರಿಯಲ್ಲ, ಬದಲಿಗೆ ಅದು, ಲೈಂಗಿಕತೆಯ ಸಕಾರಾತ್ಮಕ ಮಾತು ಸಂಕೀರ್ಣ ಅನುಭವಗಳು ಮತ್ತು ಲೈಂಗಿಕ ಸಂಬಂಧಗಳನ್ನು ನಿರ್ಧರಿಸುವ ಸ್ವಾತಂತ್ರ್ಯ ಹಾಗೂ ಬಲವಂತ, ತಾರತಮ್ಯ ಮತ್ತು ಹಿಂಸೆಯಿಂದ ಮುಕ್ತವಾದ ಆಹ್ಲಾದಕರ ಲೈಂಗಿಕ ಅನುಭವಗಳನ್ನು ಹೊಂದುವ ಸಾಧ್ಯತೆಯನ್ನು ಒಳಾಗೊಂಡಿರುತ್ತದೆ[231]

83. ಸಮಲೈಂಗಿಕ ಸಂಭೋಗವನ್ನು ಅಪರಾಧೀಕರಿಸುವ ಕಾನೂನುಗಳು ಆರೋಗ್ಯಸೇವೆಗಳನ್ನು ಪಡೆದೊಳ್ಳುವುದಕ್ಕೆ ಸಾಮಾಜಿಕ ತಡೆಗಳನ್ನು ಸೃಷ್ಟಿಸುತ್ತವೆ ಮತ್ತು ಎಚ್.ಐ.ವಿ/ ಏಡ್ಸ್.ನ ಪರಿಣಾಮಕಾರಿ ತಡೆಗಟ್ಟುವಿಕೆ ಮತ್ತು ಆರೈಕೆಗೆ ತಡೆಯೊಡ್ಡುತ್ತವೆ. ಅಪರಾಧೀಕರಿಸುವ ಕಾನೂನುಗಳು ಕೆಲ ಕೃತ್ಯಗಳು ಮತ್ತು ನಡವಳಿಕೆಯನ್ನು ಶಿಕ್ಷಿಸಲು ಸರ್ಕಾರಕ್ಕಿರುವ ಶಕ್ತಿಯ ಪ್ರಬಲ ಅಭಿವ್ಯಕ್ತಿಯಾಗಿದ್ದು, ಈ ಕಾರಣದಿಂದ ಲೈಂಗಿಕ ಅಲ್ಪಸಂಖ್ಯಾತರ ನಿರ್ದಿಷ್ಟ ಅಗತ್ಯತೆಗಳನ್ನು ಒಳಗೊಂಡಂತೆ ಎಲ್ಲಾ ವ್ಯಕ್ತಿಗಳಿಗೆ ಪೂರ್ಣ ರಕ್ಷಣೆಯನ್ನು ಒದಗಿಸಲಾಗಿದೆ ಎಂಬುದನ್ನು ಖಾತ್ರಿಪಡಿಸಿಕೊಳ್ಳುವುದು ಸರ್ಕಾರದ ಕರ್ತವ್ಯ. ಕಾನೂನಿನ ಸಮನಾದ ರಕ್ಷಣೆಯು ಸರ್ಕಾರ ಈ ಸಾಂವಿಧಾನಿಕ ಕರ್ತವ್ಯವನ್ನು ಪೂರೈಸುವುದನ್ನು ಕಡ್ಡಾಯಗೊಳಿಸುತ್ತದೆ. ವಾಸ್ತವವಾಗಿ, ಕಾನೂನುಗಳು ಮತ್ತು ಕಾರ್ಯನಿರ್ವಾಹಕ ನಿರ್ಧಾರಗಳು

[231] Center for Health and Human Rights and Open Society Foundations. "Health and Human Rights Resource Guide (2013).

ಕಾನುನಿನಡಿಯ ಸಮಾನತೆ ಮತ್ತು ಕಾನೂನಿನ ಸಮಾನ ರಕ್ಷಣೆಯನ್ನು ಹತ್ತಿಕ್ಕುತ್ತಿಲ್ಲ ಎಂಬುದನ್ನು ಖಾತ್ರಿಪಡಿಸಿಕೊಳ್ಳುವ ಸಲುವಾಗಿ ಸರ್ಕಾರಕ್ಕೆ ಅವುಗಳನ್ನು ಮರುಪರಿಶೀಲಿಸುವ ಬದ್ಧತೆಯಿರುತ್ತದೆ. ಕಾನೂನೊಂದು ತಾರತಮ್ಯ ಮಾಡಬಾರದು ಎಂಬುದು ಸಮಾನತೆಯ ಒಂದು ಅಂಶವಾಗಿದೆ. ಆದರೆ ಅಷ್ಟಕ್ಕೇ ಮುಗಿಯುವುದಿಲ್ಲ. ಹೀಗಾಗಿ, ಪ್ರಜೆಗಳ ಲೈಂಗಿಕ ನಿಲುವು ಯಾವುದೇ ಇದ್ದರೂ, ಅವರೆಲ್ಲರಿಗೂ ಕಾನೂನಿನ ಸಮಾನ ರಕ್ಷಣೆ ಒದಗಿಸಲು ಬೇಕಾದ ದೃಢವಾದ ಕ್ರಮಗಳನ್ನು ಕಾನೂನು ತೆಗೆದುಕೊಳ್ಳಬೇಕು.

ಲೈಂಗಿಕತೆ ಮತ್ತು ಆರೋಗ್ಯಕ್ಕೆ ಸಂಬಂಧಿಸಿದಂತೆ, ಇತರರಿಗೆ ಹಾನಿಯುಂಟುಮಾಡುವ ನಡವಳಿಕೆಗಳಾದ ಅತ್ಯಾಚಾರ ಮತ್ತು ಒತ್ತಾಯದ ಲೈಂಗಿಕ ಸಂಭೋಗ ಮತ್ತು ಹಾನಿಯುಂಟುಮಾಡದ ನಡವಳಿಕೆಗಳಾದ ವಯಸ್ಕರ ನಡುವಿನ ಒಪ್ಪಿಗೆಯ ಲೈಂಗಿಕ ಕ್ರಿಯೆ, ಮತ್ತೊಂದು ಲಿಂಗದವರ ಉಡುಗೆ ಧರಿಸುವಂತಹ ಲಿಂಗಾಧಾರಿತ ಅಭಿವ್ಯಕ್ತಿಗೆ ಸಂಬಂಧಿಸಿದ ನಡವಳಿಕೆಗಳು, ಹಾಗೆಯೇ ಲೈಂಗಿಕತೆ ಮತ್ತು ಸಂತಾನೋತ್ಪತ್ತಿ ಕುರಿತಾದ ಆರೋಗ್ಯ ಮಾಹಿತಿ ಮತ್ತು ಸೇವೆಗಳನ್ನು ಪಡೆಯುವುದು ಅಥವಾ ಒದಗಿಸುವುದರ ನಡುವಿನ ವ್ಯತ್ಯಾಸವನ್ನು ತಿಳಿಯುವುದು ಮುಖ್ಯವಾಗುತ್ತದೆ. ತಮ್ಮ ವ್ಯಾಪ್ತಿಯನ್ನು ಹಿಗ್ಗಿಸಿಕೊಳ್ಳುತ್ತಿರುವ ಒಪ್ಪಿಗೆಯಿರುವ ಲೈಂಗಿಕ ನಡವಳಿಕೆಗಳ ವಿಚಾರದಲ್ಲಿ ಅಪರಾಧೀ ಕಾನೂನುಗಳನ್ನು ಬಳಸುವುದು ತಾರತಮ್ಯದ ಕ್ರಮವಾಗಿದ್ದು, ಇಂತಹ ಸಂದರ್ಭಗಳಲ್ಲಿ ಇತರ ಮಾನವಾಧಿಕಾರಗಳಾದ ಖಾಸಗೀತನ, ಸ್ವಯಂ-ನಿರ್ಣಯ, ಮಾನವ ಘನತೆ ಮತ್ತು ಆರೋಗ್ಯದ ಹಕ್ಕುಗಳು ಸಹ ಉಲ್ಲಂಘನೆಯಾಗುತ್ತವೆ ಎಂಬುದನ್ನು ಅಂತಾರಾಷ್ಟ್ರೀಯ ಮತ್ತು ಸ್ಥಳೀಯ ನ್ಯಾಯಾಲಯಗಳು ಗಮನಿಸಿವೆ.[232].

## G.I. 377ನೇ ಪರಿಚ್ಛೇದ ಮತ್ತು ಎಚ್ಐವಿ ತಡೆಗಟ್ಟುವ ಪ್ರಯತ್ನಗಳು

84. 377ನೇ ಪರಿಚ್ಛೇದವು ಎಚ್.ಐ.ವಿಗೆ ಒಳಗಾಗಬಹುದಾದ ವ್ಯಕ್ತಿಗಳು, ಎಂದರೆ ಪುರುಷರೊಂದಿಗೆ ಸಂಭೋಗ ನಡೆಸುವ ಪುರುಷರೂ ("ಎಂ.ಎಸ್.ಎಂ") ಮತ್ತು ಲಿಂಗ ಪರಿವರ್ತಿತರ ಆರೋಗ್ಯದ ಮೇಲೆ ಹಾನಿಕಾರಕ ಪರಿಣಾಮ ಬೀರುತ್ತದೆ. ಜಾಗತಿಕ ಎಚ್.ಐ.ವಿ. ಮತ್ತು ಕಾನೂನು ಆಯೋಗವು,

[232] Eszter Kismodi, Jane Cottingham, Sofia Gruskin & Alice M. Miller, “Advancing sexual health through human rights: The role of the law”, Taylor and Francis, (2015), at pages 252-267.

ಎಚ್.ಐ.ವಿ.ಗೆ ಒಳಗಾಗಿರುವ ಅಥವಾ ಸೂಂಕಿಂಗೆ ಒಳಗಾಗಬಲ್ಲ ವ್ಯಕ್ತಿಗಳ ಆರೋಗ್ಯದ ಹಕ್ಕಿನ ಮೇಲೆ 377ನೇ ಪರಿಚ್ಛೇದ ಬೀರುವ ಪ್ರಭಾವವನ್ನು ಗುರುತಿಸಿದೆ:

> ಕಾನೂನು ಮತ್ತು ಅದರ ಸಂಸ್ಥೆಗಳು ಎಚ್.ಐ.ವಿಯೊಂದಿಗೆ ಬದುಕುತ್ತಿರುವ ಎಲ್ಲ ವ್ಯಕ್ತಿಗಳ ಘನತೆಯನ್ನು ರಕ್ಷಿಸಬಹುದು, ಮತ್ತು ಆ ಮೂಲಕ ಎಚ್.ಐ.ವಿ.ಯ ಅತಿಹೆಚ್ಚು ಅಪಾಯವಿರುವ - ತಥಾಕಥಿತ "ಮುಖ್ಯ ಜನಸಂಖ್ಯೆಗಳು" , ಎಂದರೆ, ಲೈಂಗಿಕ ಕಾರ್ಯಕರ್ತರು, ಎಂ.ಎಸ್.ಎಂ, ಲಿಂಗ ಪರಿವರ್ತಿತ ವಕ್ತಿಗಳು, ಸೆರೆಯಾಳುಗಳು ಮತ್ತು ವಲಸಿಗರನ್ನು ಹುರಿದುಂಬಿಸಬಹುದು. ಇಂಥ ವಕ್ತಿಗಳ ಹಕ್ಕುಗಳು ತುಳಿತಕ್ಕೊಳಗಾದಾಗ ಕಾನೂನು ನ್ಯಾಯದ ಬಾಗಿಲುಗಳನ್ನು ತೆರೆಯಬಹುದು…..ಆದರೆ ಕಾನೂನು ಎಚ್.ಐ.ವಿ.ಯೊಂದಿಗೆ ಬದುಕುತ್ತಿರುವವರ ದೇಹ ಮತ್ತು ಆತ್ಮಗಳಿಗೆ ಗಂಭೀರ ಹಾನಿಯನ್ನು ಮಾಡಬಹುದು. ಅದು ತಾರತಮ್ಯವನ್ನು ಹರಡಿ ಎಚ್.ಐ.ವಿ ಅಪಾಯಕ್ಕೆ ಅತಿಹೆಚ್ಚು ಒಳಾಗಾಗುವ ವ್ಯಕ್ತಿಗಳನ್ನು ಆ ಜೀವಾಣುವಿನಿಂದ ತಪ್ಪಿಸ್ಕೊಳ್ಳಲು ಅಥವಾ ಅದನ್ನು ನಿಭಾಯಿಸಲು ಅವರಿಗೆ ಸಹಾಯ ಮಾಡಬಲ್ಲ ಕಾರ್ಯಕ್ರಮಗಳಿಂದ ದೂರವಿಡಬಹುದು. ಜನರನ್ನು ಅಪರಾಧಿ ಮತ್ತು ಸಂತ್ರಸ್ತ ಅಥವಾ ಪಾಪಿ ಮತ್ತು ಅಮಾಯಕ ಎಂದು ವಿಂಗಡಿಸುವ ಮೂಲಕ ಕಾನೂನು ವ್ಯವಸ್ಥೆಯು ಈ ಜಾಗತಿಕ ಸಾಂಕ್ರಾಮಿಕವನ್ನು ಸೋಲಿಸಲು ಅಗತ್ಯವಿರುವ ಸಾಮಾಜಿಕ, ರಾಜನೈತಿಕ ಮತ್ತು ಆರ್ಥಿಕ ಒಗ್ಗಟ್ಟನ್ನು ನಾಶಮಾಡಿಬಿಡಬಹುದು.[233]

85. ಅರಿವುಳ್ಳ ಹಿರಿಯ ವಕೀಲರಾದ ಶ್ರೀಯುತ ಆನಂದ್ ಗ್ರೋವರ್, ತಮ್ಮ ಮನವಿಗಳಲ್ಲಿ ಎಂ.ಎಸ್.ಎಂ ಮತ್ತು ಲಿಂಗ ಪರಿವರ್ತಿತ ವ್ಯಕ್ತಿಗಳ ದುರ್ಬಲತೆಯನ್ನು ವಿವರಿಸಿದ್ದಾರೆ. ಜಾಗತಿಕ ಎಚ್.ಐ.ವಿ. ಮತ್ತು ಕಾನೂನು ಆಯೋಗ ಪ್ರಕಟಿಸಿದ ಅಧ್ಯಯನ ವರದಿಯೋನ್ದರ ಪ್ರಕಾರ, ಇತರ ವಯಸ್ಕ ಪುರುಷರಿಗೆ

[233] United Nations Development Programme, "Global Commission on HIV and the Law: Risks, Rights and Health" (2012), at pages 11-12.

ಹೋಲಿಸಿದರೆ ಎಂ.ಎಸ್.ಎಂ.ಗಳು ಎಚ್.ಐ.ವಿ ಸೋಂಕಿಗೆ ಒಳಗಾಗುವ ಅಪಾಯ 19 ಪಟ್ಟು ಹೆಚ್ಚಾಗಿರುತ್ತದೆ.

86. ಸಮಲೈಂಗಿಕತೆಯ ಅಪರಾಧೀಕರಣ ಎಚ್.ಐ.ವಿ./ಏಡ್ಸ್ ಹರಡುವಿಕೆಯ ಮೇಲೆ ಬೀರುವ ಪ್ರಭಾವವನ್ನು ಸಂಯುಕ್ತ ರಾಷ್ಟ್ರ ಒಕ್ಕೂಟದ ಮಾನವ ಹಕ್ಕುಗಳ ಸಮಿತಿಯು ಗುರುತಿಸಿದೆ. ಟ್ಯೂನೆನ್ ವಿ. ಆಸ್ಟ್ರೇಲಿಯಾ ಪ್ರಕರಣದಲ್ಲಿ, ಸಮಲೈಂಗಿಕತೆಯನ್ನು ಅಪರಾಧೀಕರಿಸಲಾಗಿರುವ ಟ್ಯಾಸ್ಮೇನಿಯಾದಲ್ಲಿ, ಸಮಲೈಂಗಿಕ ವ್ಯಕ್ತಿಯೊಬ್ಬ, ಒಪ್ಪಿಗೆಯಿರುವ ವಯಸ್ಕರ ನಡುವಿನ ಸಮಲೈಂಗಿಕ ಚಟುವಟಿಕೆಗಳ ಅಪರಾಧೀಕರಣವು, ನಾಗರಿಕ ಮತ್ತು ರಾಜಕೀಯ ಹಕ್ಕುಗಳ ಅಂತಾರಾಷ್ಟ್ರೀಯ ಒಪ್ಪಂದದ ("ಐ.ಸಿ.ಸಿ.ಪಿ.ಆರ್") 17ನೇ ಕಲಮಿನಡಿಯಲ್ಲಿ ತನಗೆ ಕೊಡಮಾಡಲಾಗಿರುವ ಖಾಸಗೀತನದ ಹಕ್ಕಿನ ಉಲ್ಲಂಘನೆಯಾಗಿದೆ ಎಂದು ವಾದಿಸಿದರು. ಸದರಿ ಸಮಿತಿಯು, ಟ್ಯಾಸ್ಮೇನಿಯಾದಲ್ಲಿ ಎಚ್.ಐ.ವಿ./ಏಡ್ಸ್ ಹರಡುವುದನ್ನು ತಡೆಗಟ್ಟಲು ಜಾರಿಮಾಡಲಾಗಿರುವ ಆ ಕಾನೂನು ಸಾರ್ವಜನಿಕ ಆರೋಗ್ಯ ಮತ್ತು ನೈತಿಕತೆಯ ಹಿನ್ನೆಲೆಯಲ್ಲಿ ಸಮರ್ಥನೀಯ ಎಂಬ ಟ್ಯಾಸ್ಮೇನಿಯನ್ ಅಧಿಕಾರಿಗಳ ವಾದವನ್ನು ತಿರಸ್ಕರಿಸಿತು. ಸಮಿತಿಯು ಈ ಕೆಳಗಿನಂತೆ ನುಡಿಯಿತು:

> ಸಮಲೈಂಗಿಕ ಕೃತ್ಯಗಳ ಅಪರಾಧೀಕರಣವನ್ನು ಏಡ್ಸ್/ಎಚ್.ಐ.ವಿಯ ಹರಡುವಿಕೆಯನ್ನು ತಡೆಗಟ್ಟುವ ಸಮಂಜಸ ವಿಧಾನ ಅಥವಾ ಸರಿಯಾದ ಕ್ರಮ ಎಂದು ಪರಿಗಣಿಸಲು ಆಗುವುದಿಲ್ಲ.
>
> ಹಾಗಾಗಿ, ಸಮಲೈಂಗಿಕ ಚಟವಟಿಕೆಗಳ ಅಪರಾಧೀಕರಣವು ಎಚ್.ಐ.ವಿ/ ಏಡ್ಸ್ ಗೆ ಸಂಬಂಧಿಸಿದಂತೆ ಪರಿಣಾಮಕಾರಿಯಾದ ಶಿಕ್ಷಣ ಕಾರ್ಯಕ್ರಮಗಳ ಅನುಷ್ಠಾನದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಎರಡನೆಯದಾಗಿ, ಸಮಲೈಂಗಿಕ ಚಟುವಟಿಕೆಗಳ ಅಪರಾಧೀಕರಣದ ಮುಂದುವರಿಕೆಗೂ ಎಚ್.ಐ.ವಿ/ ಏಡ್ಸ ನ ಹರಡುವಿಕೆಯ ಪರಿಣಾಮಕಾರಿಯಾದ ನಿಯಂತ್ರಣಕ್ಕೂ

ಯಾವುದೇ ಸಂಬಂಧ ಕಂಡು ಬಂದಿಲ್ಲವೆಂದು ಈ ಆಯೋಗವು ಗಮನಿಸಿರುತ್ತದೆ.

ಸಮಿತಿಯ ನಿರ್ಧಾರದ ಪ್ರಕಾರ, ಸಮಲೈಂಗಿಕತೆಯನ್ನು ಅಪರಾಧೀಕರಿಸುವ ಟ್ಯಾಸ್ಮೆನಿಯನ್ ಕಾನೂನನ್ನು ಪರಿಹರಿಸಲು ಮತ್ತೊಂದು ಕಾನೂನನ್ನು ಜಾರಿಗೆ ತರಲಾಯಿತು.

87. 377ನೇ ಪರಿಚ್ಛೇದವು ಈ "ಮುಖ್ಯ ಜನಸಂಖ್ಯೆ"ಯ ಮೇಲೆ ದೀರ್ಘಕಾಲೀನ ಪರಿಣಾಮಗಳನ್ನು ಬೀರಿ, ಅವರನ್ನು ಸಾರ್ವಜನಿಕ ಆರೋಗ್ಯ ವ್ಯವಸ್ಥೆಯಿಂದ ಹೊರದಬ್ಬಿದೆ. ಎಂ.ಎಸ್.ಎಂ ಮತ್ತು ಲಿಂಗಪರಿವರ್ತಿತ ವ್ಯಕ್ತಿಗಳು ಅಪರಾಧೀಕರಿಸಲಾಗಿರುವ ಸಂಭೋಗದಲ್ಲಿ ತೊಡಗಿಸಿಕೊಂಡದ್ದಕ್ಕೆ ಶಿಕ್ಷೆಗೊಳಗಾಗುವ ಭಯದಿಂದ ಸರ್ಕಾರದ ಆರೋಗ್ಯಸೇವಾ ಕಾರ್ಯಕರ್ತರನ್ನು ಸಂಪರ್ಕಿಸುವುದಿಲ್ಲ. ಅಧ್ಯಯನಗಳು ಈ ವ್ಯಕ್ತಿಗಳಿಗೆ ಅಂಟಿರುವ ಕಳಂಕದಿಂದಾಗಿಯೇ, ಅವರಲ್ಲಿ ಅಪಾಯಕರ ಲೈಂಗಿಕ ನಡವಳಿಕೆ ಹೆಚ್ಚಾಗಿ ಅವರು ಎಚ್.ಐ.ವಿ ತಡೆಗಟ್ಟುವ ಸೇವೆಗಳನ್ನು ಬಳಸುವುದು ಕಡಿಮೆಯಾಗಿದೆ.[234]

88. ಸಾಂಸ್ಥಿಕ ತಾರತಮ್ಯದ ಜತೆಗೂಡಿರುವ ಮೌನ ಮತ್ತು ಗೋಪ್ಯತೆಯು, ಎಚ್.ಐ.ವಿ/ಏಡ್ಸ್ ಹೆಚ್ಚಾಗುವುದನ್ನು ಪ್ರೋತ್ಸಾಹಿಸುವ ಪರಿಸ್ಥಿತಿಗಳನ್ನು ಉಂಟುಮಾಡಬಹುದು. ಮುಖ್ಯ ಜನಸಂಖ್ಯೆಯು ಆರೋಗ್ಯಸೇವಾ ಪೂರೈಕೆದಾರರು, ಉದ್ಯೋಗದಾತರು ಮತ್ತು ಇತರ ಸೇವಾದಾರರಿಂದ ಕಳಂಕಕ್ಕೊಳಗಾಗಿದೆ. ಇದರ ಪರಿಣಾಮವಾಗಿ, ತಾರತಮ್ಯ ಮತ್ತು ಕಿರುಕುಳಗಳು ಎಚ್.ಐ.ವಿ ಹಾಗೂ ಲೈಂಗಿಕ ಆರೋಗ್ಯ ಸೇವೆಗಳು ಮತ್ತು ಆವನ್ನು ತಡೆಗಟ್ಟುವ ಕಾರ್ಯಕ್ರಮಗಳ ದೊರಕುವಿಕೆಗೆ ತಡೆಯೊಡ್ಡುವುದರಿಂದ, ಎಚ್.ಐ.ವಿ.ಯ ಪರಿಣಾಮಕಾರಿ ತಡೆಗಟ್ಟುವಿಕೆಗೆ ಗಂಭೀರವಾದ ಅಡ್ಡಿಗಳಿವೆ.

89. ವಿವಿಧ ದೇಶಗಳಲ್ಲಿ ನಡೆದ ವ್ಯಾಪಕ ಪ್ರಾಯೋಗಿಕ ಸಂಶೋಧನೆಯನ್ನು ಆಧರಿಸಿರುವ ಪರಿಣಾಮಕಾರಿ ಬರೆಹವೊಂದು, "ಸಮಲೈಂಗಿಕ ನಡವಳಿಕೆಯನ್ನು ಅಪರಾಧ ಮಾಡುವ ಕಾನೂನುಗಳು ಮತ್ತು ಎಚ್.ಐ.ವಿ.-ಏಡ್ಸ್ ಪ್ರಮಾಣಗಳ ಮೇಲಿನ ಪ್ರತಿಕೂಲ ಆರೋಗ್ಯ ಪರಿಣಾಮಗಳು ಅಲ್ಲದೇ ಎಂ.ಎಸ್.ಎಂ

[234] Beena Thomas, Matthew J. Mimiaga, Senthil Kumar, Soumya Swaminathan, Steven A. Safren, and Kenneth H. Mayer, "HIV in Indian MSM: Reasons for a concentrated epidemic & strategies for prevention", Indian Journal Medical Research (2011), at pages 920–929.

ಸಮುದಾಯದ ಇತರ ಆರೋಗ್ಯ ಮಾನದಂಡಗಳ" ನಡುವೆ ಸಾಬೀತುಪಡಿಸಬಹುದಾದ ಸಂಬಂಧವಿದೆ ಮತ್ತು ಇದಕ್ಕೆ ಮುಖ್ಯವಾದ ಎಚ್.ಐ.ವಿ ತಡೆಗಟ್ಟುವಿಕೆಯ ಸಾಧನಗಳು ಮತ್ತು ಸಹಾಯ ಕಾರ್ಯಕ್ರಮಗಳು ಸರಿಯಾಗಿ ದೊರಕದಿರುವುದೆ ಕಾರಣ ಎಂದು ತಿಳಿಸಿತು" ಸಂಯುಕ್ತ ರಾಷ್ಟ್ರ ಒಕ್ಕೂಟದ ಎಚ್.ಐ.ವಿ/ ಏಡ್ಸ್ ಜಂಟಿ ಕಾರ್ಯಕ್ರಮವು (ಯು.ಎನ್.ಎ.ಐ.ಡಿ.ಎಸ್) ಪ್ರಕಟಿಸಿರುವ ವರದಿಯ ಪ್ರಕಾರ, ಸಮಲೈಂಗಿಕ ಸಂಬಂಧಗಳು ಅಪರಾಧವಾಗಿರುವ ಕೆರಿಬಿಯನ್ ದೇಶಗಳಲ್ಲಿ ಬಹುತೇಕ ನಾಲ್ವಾರು ಎಂ.ಎಸ್.ಎಂಗಳಲ್ಲಿ ಒಬ್ಬರಿಗೆ ಎಚ್.ಐ.ವಿ ಸೋಂಕಿರತ್ತದೆ. ಅಂತಹ ಅಪರಾಧೀಕರಿಸುವ ನಿಬಂಧನೆಗಳಿಲ್ಲದಿರುವ ಸಂದರ್ಭಗಳಲ್ಲಿ ಹದಿನೈದು ಮಂದಿ ಎಂ.ಎಸ್.ಎಮ್.ಗಳ ಪೈಕಿ ಒಬ್ಬರು ಮಾತ್ರ ಎಚ್.ಐ.ವಿಗೆ ಒಳಗಾಗಿರುತ್ತಾರೆ 219

೯೦. ನಮ್ಮ ದೇಶದಲ್ಲಿ, ಯು.ಎನ್.ಎ.ಐ.ಡಿ.ಎಸ್. ಯೋಜನೆಯು ನಾಜ್ ತೀರ್ಪಿನ ನಂತರದ ನಾಲ್ಕು ವರ್ಷಗಳಲ್ಲಿ ಎಂ.ಎಸ್.ಎಂ. ಗಳಿಗೆ ಲಿಂಗಪರಿವರ್ತಿತ ವ್ಯಕ್ತಿಗಳಿಗೆ ಎಚ್.ಐ.ವಿ ಸೇವೆಗಳನ್ನು ಒದಗಿಸುವ ಆರೋಗ್ಯ ಕೇಂದ್ರಗಳ ಸಂಖ್ಯೆ 50% ಕ್ಕಿಂತ ಹೆಚ್ಚಾಗಿದೆ ಎಂಬುದನ್ನು ಕಂಡುಕೊಂಡಿತು[235]. ಸಮಲೈಂಗಿಕ ಸಂಬಂಧಗಳು ಅಪರಾಧವಾಗಿ ಮುಂದುವರೆದರೆ, ಎಂ.ಎಸ್.ಎಂ ಗಳಿಗೆ ಸಂಬಂಧಿಸಿದ ಎಚ್ಐವಿ ಚಟುವಟಿಕೆಗಳು ಅಸಮರ್ಪಕಗಿಯೇ ಉಳಿಯುತ್ತವೆ, ಎಂ.ಎಸ್.ಎಂ.ಗಳ ಆರೋಗ್ಯ ಸೇವೆಗಳಲ್ಲಿ ಕಡೆಗಣನೆಗೊಳಗಾಗುತ್ತಲೇ ಇರುತ್ತಾರೆ ಮತ್ತು ಎಚ್.ಐ.ವಿ. ಹರಡುವಿಕೆಯು ಉಲ್ಬಣಗೊಳ್ಳುತ್ತದೆ[236].

91. ಎಚ್.ಐ.ವಿ ಸೋಂಕುಂಟಾಗುವ ಅತಿ ಹೆಚ್ಚಿನ ಅಪಾಯವನ್ನು ಎದುರಿಸುವ ವ್ಯಕ್ತಿಗಳ ಆರೋಗ್ಯವನ್ನು ಕಾಪಾಡಲು, ಪರಿಣಾಮಕಾರಿಯದ ಎಚ್.ಐ.ವಿಯ ತಡೆಗಟ್ಟುವಿಕೆ ಮತ್ತು ಚಿಕಿತ್ಸಾ ಸೇವೆಗಳು ಹಾಗೂ ಸ್ವಚ್ಛ ಸೂಜಿಗಳು, ಸಿರಿಂಜ್ಗಳು, ಕಾಂಡೋಮ್ಗಳು ಮತ್ತು ಲ್ಯೂಬ್ರಿಕೆಂಟುಗಳೇ ಮೊದಲಾದ ವಸ್ತುಗಳು ದೊರಕುವಂತೆ ಮಾಡುವುದು ಅನಿವಾರ್ಯ. ಒಂದು ಸೂಜಿ ಅಥವಾ ಕಾಂಡೋಮ್ ದುರ್ಬಲ ಗುಂಪುಗಳು ಪಡೆಯಬೇಕಾದ ಸವಲತ್ತುಗಳಾಅದ: ಘನತೆ, ಸ್ವಾಯತ್ತತೆ ಮತ್ತು ತಮ್ಮ ಮೇಲಿನ ದುರ್ನಡತೆಯಿಂದ ಮುಕ್ತಿಯ ಮೂಲಭೂತ ಮಾನವ ಹಕ್ಕುಗಳು, ಜೊತೆಗೆ, ಲೈಂಗಿಕತೆ ಮತ್ತು ಕಾನೂನುಬದ್ಧತೆಯ

235 UNAIDS, "UNAIDS Calls on India and All Countries to Repeal Laws That Criminalize Adult Consensual Same Sex Sexual Conduct" (2013).

236 UNAIDS, "Judging the Epidemic: A Judicial Handbook on HIV, Human Rights and the Law" (2013) at page 165

ಹಂಗಿಲ್ಲದೆ ಅತ್ಯುನ್ನತ ಮಟ್ಟದ ದೈಹಿಕ ಮತ್ತು ಮಾನಸಿಕ ಆರೋಗ್ಯ ಹೊಂದುವ ಹಕ್ಕುಗಳನ್ನ ವಾಸತವಿಕವಾಗಿ ಪ್ರಾತಿನಿಸುತ್ತವೆಂದು ಹೇಳಬ್ಬಹುದು: 223 ಇದು ಸಂವಿಧಾನದ 4ನೇ ಭಾಗದಲ್ಲಿರುವ ನಿರ್ದೇಶಕ ತತ್ವಗಳು ಕಡ್ಡಾಯಗೊಳಿಸುರುವ ವಿಚಾರವಾಗಿದೆ.

92. ಎಚ್.ಐ.ವಿ/ಏಡ್ಸ್ ಹರಡುವಿಕೆಯ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಹಾಗೂ ಖಾಯಿಲೆಗೊಳಗಾಗಿರುವ ವ್ಯಕ್ತಿಗಳ ಮಾನವ ಹಕ್ಕುಗಳ ರಕ್ಷಣೆಗಾಗಿ 2017 ರಲ್ಲಿ ಸಂಸತ್ತು ಎಚ್.ಐ.ವಿ (ತಡೆ ಮತ್ತು ನಿಯಂತ್ರಣ) ಕಾಯಿದೆ ಜಾರಿಗೊಳಿಸಿತು. ಎಂ.ಎಸ್.ಎಂ.ಗಳೂ ಸೇರಿದಂತೆ ದುರ್ಬಲ ಗುಂಪುಗಳಿಗೆ ಸೋಂಕು ತಗುಲದಂತೆ ತಡೆಗಟ್ಟುವ ಚಟುವಟಿಕೆಗಳ ಪ್ರಾಮುಖ್ಯತೆಯನ್ನು ಸಂಸತ್ತು ಗುರುತಿಸಿತು. ಈ ಕಾಯ್ದೆಯ 22ನೇ ಪರಿಚ್ಛೇದವು, ಅಪರಾಧೀಕರಿಸುವ ಕಾನೂನುಗಳಿಂದ ಮತ್ತು ಎಚ್.ಐ.ವಿ.ಯ ಅಪಾಯವನ್ನು ತಡೆಯುವ ಸಲುವಾಗಿ ತೆಗೆದುಕೊಳ್ಳುವ ಉತ್ತೇಜನಾ ಕ್ರಮಗಳು ಅಥವಾ ಆಚರಣೆಗಳು "ಯಾವುದೇ ಯೋಜನೆ ಅಥವಾ ವಿಧಾನ ಅಥವಾ ತಂತ್ರ ಗಳಿಂದ ಉದ್ಭವಿಸಬಹುದಾದ ಯಾವುದೇ ಬಗೆಯ ನಾಗರಿಕ ಸಮಸ್ಯೆಗಳಿಂದ ರಕ್ಷಣೆ ಒದಗಿಸುತ್ತದೆ. 22ನೇ ಪರಿಚ್ಛೇದದ (ಎ) ಮತ್ತು (ಬಿ) ವಿಭಾಗಗಳು ಈ ಕೆಳಗಿನಂತಿವೆ:

> "(A) A ಎಂಬುವವರು ಲೈಂಗಿಕ ಕಾರ್ಯಕರ್ತರಾಗಿರುವ B ಗೆ ಕಾನ್ಡೋಂಗಳನ್ನು ಪೂರೈಸುತ್ತಾರೆ ಅಥವಾ, B ಯ ಗಿರಾಕಿಯಾಗಿರುವ C ಗೆ ಅವುಗಳನ್ನು ಪೂರೈಸುತ್ತಾರೆ. A, B ಅಥವಾ C ರನ್ನು ಅಂತಹ ಕೃತ್ಯಗಳಿಗಾಗಿ ಕ್ರಿಮಿನಲ್ ಅಥವಾ ಸಿವಿಲ್ ಶಿಕ್ಷೆಗೆ ಒಳಪಡಿಸುವಂತಿಲ್ಲ ಅಥವಾ ಅವರು ಅಂತಹ ತತ್ರಗಳನ್ನು ಜಾರಿಗೊಳಿಸುವುದನ್ನು ಅಥವಾ ಉಪಯೋಗಿಸುವುದನ್ನು ನಿರ್ಬಂಧಿಸುವಂತಿಲ್ಲ
>
> (B) M ಎಂಬ ವ್ಯಕ್ತಿ, ಪುರುಷರೊಂದಿಗೆ ಲೈಂಗಿಕ ಕ್ರಿಯೆ ನಡೆಸುವ ಪುರುಷರಿಗೆ ಎಚ್.ಐ.ವಿ ಅಥವಾ ಏಡ್ಸ್ ಅರಿವು ಮತ್ತು ಲೈಂಗಿಕ ಆರೋಗ್ಯ ಮಾಹಿತಿ, ಶಿಕ್ಷಣ, ಮತ್ತು ಆಪ್ತಸಲಹೆ ನೀಡುವ ಕಾರ್ಯಕ್ರಮ ನಡೆಸುತ್ತಾರೆ ಹಾಗೂ ಪುರುಷರೊಂದಿಗೆ ಲೈಂಗಿಕ ಕ್ರಿಯೆ ನಡೆಸುವ N ಗೆ ಸುರಕ್ಷಿತ ಲೈಂಗಿಕ ಕ್ರಿಯೆ ಬಗೆಗೆ ಮಾಹಿತಿ,

> ಉಪಯುಕ್ತ ವಸ್ತುಗಳು ಮತ್ತು ಕಾನ್ಡೋಂಗಳನ್ನು ಒದಗಿಸುತ್ತಾರೆ. M ಅಥವಾ N ರನ್ನು ಅಂತಹ ಕೃತ್ಯಗಳಿಗಾಗಿ ಕ್ರಿಮಿನಲ್ ಅಥವಾ ಸಿವಿಲ್ ಶಿಕ್ಷೆಗೆ ಒಳಪಡಿಸುವಂತಿಲ್ಲ ಅಥವಾ ಅವರು ಅಂತಹ ಕಾರ್ಯಕ್ರಮಗಳನ್ನು ಜಾರಿಗೊಳಿಸುವುದನ್ನು ಅಥವಾ ಉಪಯೋಗಿಸುವುದನ್ನು ನಿರ್ಬಂಧಿಸುವಂತಿಲ್ಲ

ಗುದದ್ವಾರದ ಸಂಭೋಗ ಅಥವಾ ಮುಖಮೈಥುನದಲ್ಲಿ ತೊಡಗುವ ವ್ಯಕ್ತಿಗಳು 377ನೇ ಪರಿಚ್ಛೇದದ ಚಲಾವಣೆಯ ದೆಸೆಯಿಂದ ಗಮನಾರ್ಹವಾದ ಲೈಂಗಿಕ ಆರೋಗ್ಯದ ಅಪಾಯಗಳನ್ನು ಎದುರಿಸುತ್ತಾರೆ. ಎಚ್.ಐ.ವಿಯ ಹರಡುವಿಕೆಯ ಪ್ರಮಾಣವು ವಿಶೇಷವಾಗಿ ಪುರುಷರೊಂದಿಗೆ ಲೈಂಗಿಕ ಕ್ರಿಯೆ ನಡೆಸುವ ಪುರುಷರಲ್ಲಿ ಹೆಚ್ಚಿರುತ್ತದೆ ತಾರತಮ್ಯ, ಕಳಂಕ ಮತ್ತು ಹಲವು ಮಂದಿ ಆರೋಗ್ಯ ಸೇವಾ ಪುರೈಕೆದಾರರಲ್ಲಿರುವ ಅರಿವಿನ ಕೊರತೆಯ ಕಾರಣದಿಂದ ಇಂತಹ ವ್ಯಕ್ತಿಗಳು ಹೆಚ್ಚಿನ ಸಂದರ್ಭಗಳಲ್ಲಿ ಅಗತ್ಯವಾದ ಆರೋಗ್ಯ ಕಾಳಜಿಯನ್ನು ಪಡೆಯುವುದಿಲ್ಲ ಮತ್ತು ಪಡೆಯಲು ಸಾಧ್ಯವಾಗುವುದಿಲ್ಲ. ಎಲ್.ಜಿ.ಬಿ.ಟಿ ವ್ಯಕ್ತಿಗಳಲ್ಲಿ ಲೈಂಗಿಕ ಆರೋಗ್ಯವನ್ನು ಉತ್ತೇಜಿಸುವ ಮತ್ತು ಎಚ್.ಐ.ವಿ.ಯ ಹರಡುವಿಕೆಯನ್ನು ಕಡಿಮೆಗೊಳಿಸುವ ಸಲುವಾಗಿ, ಎಲ್.ಜಿ.ಬಿ.ಟಿ. ಸಮುದಾಯಕ್ಕೆ ನೀಡಲಾಗುವ ಆರೋಗ್ಯ ಸೇವೆಗಳ ದೊರಕುವಿಕೆ, ಸಾಮರ್ಥ್ಯ ಮತ್ತು ಗುಣಮಟ್ಟಗಳು ಗಣನೀಯವಾಗಿ ಸುಧಾರಣೆಯಾಗುವುದು ಅನಿವಾರ್ಯವಾಗಿದೆ.

ನಮ್ಮ ಸಂವಿಧಾನದ ವಿನ್ಯಾಸದ ಪ್ರಕಾರ, ಬಹುಸಂಖ್ಯಾತರ ಜೀವನ ಕ್ರಮವನ್ನು ಅನುಸರಿಸದಿರುವ ಯಾವುದೇ ಅಲ್ಪಸಂಖ್ಯಾತ ಗುಂಪು ಸಾಂವಿಧಾನಿಕ ಹಕ್ಕುಗಳು ಅಭಾವವನ್ನು ಅನುಭವಿಸಬಾರದು. ಭಾರತೀಯ ದಂಡ ಸಂಹಿತೆಯ 377ನೇ ಪರಿಚ್ಛೇದವನ್ನು ಚಲಾಯಿಸಿದರೆ, ಎಂ.ಎಸ್.ಎಂ ಮತ್ತು ಲಿಂಗ ಪರಿವರ್ತಿತ ವ್ಯಕ್ತಿಗಳು ತಮ್ಮ ಲೈಂಗಿಕ ಅಸ್ಮಿತೆಗೆ ಅಂಟಿರುವ ಸಾಮಾಜಿಕ ಕಳಂಕದ ದೆಸೆಯಿಂದ ಆರೋಗ್ಯ ಸೇವೆಯ ಲಭ್ಯತೆಯಿಂದ ಹೊರಗುಳಿಯುತ್ತಾರೆ. ಇಂತಹ ವ್ಯಕ್ತಿಗಳು ಎಚ್.ಐ.ವಿ.ಯ ಅಪಾಯಕ್ಕೆ ವಿಶೇಷವಾಗಿ ಒಳಗಾಗುವ ಸಾಧ್ಯತೆಯಿರುವುದರಿಂದ, ಈ ಬಗೆಯ ಕಡೆಗಣಿಸುವಿಕೆಯು ಕ್ರೂರವೂ ನಿತ್ರಾಣಗೊಳಿಸುವಂತಹುದೂ ಆಗಿದೆ. ಲೈಂಗಿಕ ಅಲ್ಪಸಂಖ್ಯಾತರು ಅನುಭವಿಸುವ ಅವಮಾನವೂ ಯಾವುದೇ ರೀತಿಯಲ್ಲಿ ಸಾಂವಿಧಾನಿಕ ಮಾನ್ಯತೆಯ ಸವಾಲಿನಲ್ಲಿ ಜಯಗಳಿಸಲು ಆಗುವುದಿಲ್ಲ.

## G.2. ಮಾನಸಿಕ ಆರೋಗ್ಯ

93. ಸಮಲೈಂಗಿಕತೆಯನ್ನು ವೈಕಲ್ಯವೆಂದು ಪರಿಗಣಿಸುವುದರಿಂದ ಎಲ್.ಜಿ.ಬಿ.ಟಿ ವ್ಯಕ್ತಿಗಳ ಮಾನಸಿಕ ಆರೋಗ್ಯ ಮತ್ತು ಯೋಗಕ್ಷೇಮದ ಮೇಲೆ ಗಂಭೀರ ಪರಿಣಾಮಗಳುಂಟಾಗುತ್ತವೆ. "ಸಮಲೈಂಗಿಕ ಬಯಕೆಯನ್ನು ದುರ್ಬಲಗೊಳಿಸುವ ಮತ್ತು ಮೌನವಾಗಿಸುವ ಸಂಸ್ಕೃತಿಯಲ್ಲಿ ಬೆಳೆಯುವ" ನಾಗರಿಕರ ಮಾನಸಿಕ ಆರೋಗ್ಯದ ಮೇಲೆ ತೀವ್ರವಾದ ಪ್ರಭಾವ ಉಂಟಾಗುತ್ತದೆ[237]. ಜಾಗತಿಕ ಮನೋವೈದ್ಯಕೀಯ ತಜ್ಞ ದಿನೇಶ್ ಭುಗ್ರಾರವರು ಎಲ್.ಜಿ.ಬಿ.ಟಿ ಜನಸಂಖ್ಯೆಯಲ್ಲಿನ ಮೇಲ್ಮಟ್ಟದ ಮಾನಸಿಕ ಅಸ್ವಸ್ಥತೆಯನ್ನು ಎದುರಿಸಲು ಕ್ರಾಂತಿಕಾರೀ ಪರಿಹಾರಗಳ ಅಗತ್ಯವಿದೆಯೆಂದು ಒತ್ತಿ ಹೇಳಿ, "ರಾಜಕೀಯ ಮತ್ತು ಸಾಮಾಜಿಕ ಪರಿಸರಗಳು ಮತ್ತು ಎಲ್.ಜಿ.ಬಿ.ಟಿ ವ್ಯಕ್ತಿಗಳ ವಿರುದ್ಧದ ಕಿರುಕುಳದ ಕಾನೂನುಗಳು ಹೆಚ್ಚಿನ ಮಟ್ಟದ ಖಿನ್ನತೆ, ಆತಂಕ, ಸ್ವಯಂ-ಹಾನಿ, ಮತ್ತು ಆತ್ಮಹತ್ಯೆಗಳನ್ನು ಉಂಟುಮಾಡುತ್ತಿರುವುದರ ನಡುವೆ ಸ್ಪಷ್ಟವಾದ ಸಂಬಂಧವಿದೆ ಎಂದು ಹೇಳಿದರು. ಬ್ರಿಟನ್ನಿನಲ್ಲಿ ಸಹ, ಸಮಲೈಂಗಿಕ ವ್ಯಕ್ತಿಗಳು ಹಲವು ಬಗೆಯ ಮಾನಸಿಕ ಆರೋಗ್ಯ ಸಮಸ್ಯೆಗಳಿಗೆ ಒಳಗಾಗುವ ಅಪಾಯವನ್ನು ಎದುರಿಸುತ್ತಿದ್ದೂ ಅವರು ತಮ್ಮ ಜೀವವನ್ನು ತಾವೇ ತೆಗೆದುಕೊಳ್ಳುವ ಸಾಧ್ಯತೆಯಿದೆ ಎಂದು ನಂಬಲಾಗಿದೆ.

> ಈವರ್ಷ ಹಲವಾರು ಅಧ್ಯಯನಗಳು ಎಲ್.ಜಿ.ಬಿ.ಟಿ ವ್ಯಕ್ತಿಗಳಲ್ಲಿ ಅಳತೆ ಮೀರಿದ ಮಟ್ಟದ ಮಾನಸಿಕ ರೋಗಗಳನ್ನು ಎತ್ತಿ ತೋರಿಸಿವೆ. ಈ ಸಮುದಾಯದ ಮಟ್ಟಿಗೆ ಪ್ರಾಪಂಚದ ಅತಿದೊಡ್ಡ ಕಾನೂನಾತ್ಮಕವಾಗಿ ಸಮಾನವಾಗಿರುವ ದೇಶವಾದ ಬ್ರಿಟನ್ ನಲ್ಲಿ, ಕಳೆದ ಕೆಲ ತಿಂಗಳುಗಳ ಸಂಶೋಧನೆಯು, ಎಲ್.ಜಿ.ಬಿ.ಟಿ ವ್ಯಕ್ತಿಗಳು ಆತ್ಮಹತ್ಯೆಗೆ ಯತ್ನಿಸುವ ಅಥವಾ ತಮಗೆ ಹಾನಿ ಮಾಡಿಕೊಳ್ಳುವ ಸಾಧ್ಯತೆ ಎರಡು ಪಟ್ಟು ಹೆಚ್ಚೆಂದು, ಸಮಲೈಂಗಿಕ ಪುರುಷರು ಮಾನಸಿಕ ಖಾಯಿಲೆ ಹೊಂದುವ ಸಾಧ್ಯತೆ ಭಿನ್ನಲಿಂಗಾಸಕ್ತ ಪುರುಷರಿಗೆ ಹೋಲಿಸಿದರೆ ಎರಡು ಪಟ್ಟಿಗಿಂತ ಹೆಚ್ಚೆಂದೂ, ಮತ್ತು 4ರಲ್ಲಿ 5 ಮಂದಿ ಲಿಂಗ ಪರಿವರ್ತಿತ ವಕ್ತಿಗಳು

[237] Ketki Ranade, "Process of Sexual Identity Development for Young People with Same Sex Desires: Experiences of Exclusion", Psychological Foundations - The Journal (2008).

ಕಳೆದ ಐದು ವರ್ಷಗಳಲ್ಲಿ ಖಿನ್ನತೆಯಿಂದ ಬಳಲಿದ್ದಾರೆಂದು ವರದಿ ಮಾಡಿವೆ (ಒತ್ತು ನೀಡಲಾಗಿದೆ)

ಅವರು, ಎಲ್.ಜಿ.ಬಿ.ಟಿ. ವ್ಯಕ್ತಿಗಳ ವಿರುದ್ಧದ ಕಾನೂನುಗಳು ಭೇದಭಾವವನ್ನು ಮುಂದುವರೆಸುವ ದೇಶಗಳಲ್ಲಿ, ಮಾನಸಿಕ ಅಸ್ವಸ್ಥತೆಗಳು ಹೆಚ್ಚಿನ ಪ್ರಮಾಣದಲ್ಲಿವೆ ಎಂದು ತಿಳಿಯಪಡಿಸುವ ಹಲವು ದೇಶಗಳಲ್ಲಿ ನಡೆಸಿದ ಅಧ್ಯಯನಗಳನ್ನು ಚರ್ಚಿಸುತ್ತಾರೆ. ಆದೇ ರೀತಿ, ಅಮೆರಿಕದಲ್ಲಿ, ಎಲ್.ಜಿ.ಬಿ.ಟಿ ವ್ಯಕ್ತಿಗಳಿಗೆ ಸಮಾನವಾದ ಹಕ್ಕುಗಳಿವೆ ಎಂಬುದಕ್ಕೆ ಸರ್ಕಾರದ ನೀತಿಗಳ ಮಾನ್ಯತೆ ದೊರೆತ ಸಂದರ್ಭದಲ್ಲಿ ಈ ಮನೋವೈದ್ಯಕೀಯ ಖಾಯಿಲೆಗಳ ಪ್ರಮಾನಾ ಕುಸಿದಿವೆ ಎಂದು ತೋರಿಸಿಕೊಡುವ ಹಲವಾರು ಅಧ್ಯಯನಗಳು ನಡೆದಿವೆ ಎಂದು ಅವರು ಹೇಳಿದ್ದಾರೆ.

94. ಮನೋಚಿಕಿತ್ಸಕರೂ ಆಗಿರುವ ತಮ್ಮ ಮಧ್ಯಸ್ಥಿಕೆದಾರರನ್ನು ಪ್ರತಿನಿಧಿಸುತ್ತಿರುವ ಅರಿವುಳ್ಳ ಹಿರಿಯ ವಕೀಲರಾದ ಶ್ರೀಯುತ ಚಂದರ್ ಉದಯ್ ಸಿಂಘ್ ರವರು, ಮಾನಸಿಕ ಆರೋಗ್ಯ ಕ್ಷೇತ್ರ ಕೂಡ ಹಲವು ಬಾರಿ ಸಮಲೈಂಗಿಕತೆಯನ್ನು ರೋಗವೆಂದು ಪರಿಗಣಿಸುವ ಸಾಮಾಜಿಕ ಪೂರ್ವಾಗ್ರಹವನ್ನು ಪ್ರತಿಬಿಂಬಿಸುವ ಪರಿಯನ್ನು ನಮ್ಮ ಗಮನಕ್ಕೆ ತಂದಿದ್ದಾರೆ.

95. ಒಪ್ಪಿಗೆಯ ಸಮಲೈಂಗಿಕ ವರ್ತನೆಯು ನಿಸರ್ಗದ ನಿಯಮಕ್ಕೆ ವಿರುದ್ಧವಾಗಿಲ್ಲ ಮತ್ತು ಸಮಲೈಂಗಿಕತೆಯು ನೈಸರ್ಗಿಕವಾದುದು ಮತ್ತು ಲೈಂಗಿಕತೆಯ ಸಾಮಾನ್ಯ ರೂಪಾಂತರ ಎಂಬುದನ್ನು ವೈದ್ಯಕೀಯವಾಗಿ ಮತ್ತು ವೈಜ್ಞಾನಿಕವಾಗಿ ನಿರೂಪಿಸಲಾಗಿದೆ. 2017ರ ಮಾನಸಿಕ ಆರೋಗ್ಯ ಕಾಯ್ದೆ ಜಾರಿಗೊಳಿಸುವ ಮೂಲಕ ಸಂಸತ್ತು ಈ ಜಾಗತಿಕ ಒಮ್ಮತದ ವಿಚಾರಕ್ಕೆ ಒಪ್ಪಿಗೆ ಸೂಚಿಸಿದೆ. ಈ ಕಾಯ್ದೆಯ 3ನೇ ಪರಿಚ್ಛೇದವು ಮಾನಸಿಕ ಅನಾರೋಗ್ಯವನ್ನು ಪತ್ತೆಹಚ್ಚುವಾಗ 'ರಾಷ್ಟ್ರೀಯ' ಅಥವಾ 'ಅಂತಾರಾಷ್ಟ್ರೀಯ'ವಾಗಿ ಮಾನ್ಯ ಮಾಡಲಾಗಿರುವ ವೈದ್ಯಕೀಯ ಮಾನದಂಡಗಳಿಗನುಗುಣವಾಗಿ ನಡೆದುಕೊಳ್ಳುವುದನ್ನು ಕಡ್ಡಾಯಗೊಳಿಸುತ್ತದೆ. ಅಂತಾರಾಷ್ಟ್ರೀಯವಾಗಿ ಒಪ್ಪಿಕೊಳ್ಳಲಾಗಿರುವ ವೈದ್ಯಕೀಯ ಮಾನದಂಡವೆಂದು ಪರಿಗಣಿಸಲ್ಪಟ್ಟಿರುವ ವಿಶ್ವ ಆರೋಗ್ಯ ಸಂಸ್ಥೆಯ ಅಂತಾರಾಷ್ಟ್ರೀಯ ರೋಗ ವರ್ಗೀಕರಣವು (ಇಂಟರ್ನ್ಯಾಷನಲ್ ಕ್ಲಾಸಿಫಿಕೇಷನ್ ಆಫ್ ಡಿಸೀಸಸ್ (ಐ.ಸಿ.ಡಿ-10)) ವಯಸ್ಕರ

ನಡುವಿನ ಶಿಶ್ನ-ಯೋನಿ ಸಮಾಗಮವನ್ನು ಒಳಗೊಳ್ಳದ ಲೈಂಗಿಕ ಕ್ರಿಯೆಯನ್ನು ಮಾನಸಿಕ ವೈಕಲ್ಯ ಅಥವಾ ಖಾಯಿಲೆಯೆಂದು ಪರಿಗಣಿಸುವುದಿಲ್ಲ. 18(2)ನೇ ಪರಿಚ್ಛೇದ ಮತ್ತು 21ನೇ ಪರಿಚ್ಛೇದದ ಮೂಲಕ ಈ ಕಾಯ್ದೆಯು ಲೈಂಗಿಕ ನಿಲುವಿನ ಆಧಾರದಲ್ಲಿ ನಡೆಯುವ ತಾರತಮ್ಯದ ವಿರುದ್ಧ ರಕ್ಷಣೆ ನೀಡುತ್ತದೆ.

ಪೂರ್ವಾಗ್ರಹ, ಕಳಂಕ ಮತ್ತು ತಾರತಮ್ಯದ ಪರಿಣಾಮಗಳು 377ನೇ ಪರಿಚ್ಛೇದಿಂದ ಬಾಧಿಸಲ್ಪಟ್ಟಿರುವ ವ್ಯಕ್ತಿಗಳ ಮಾನಸಿಕ ಯೋಗಕ್ಷೇಮದ ಮೇಲೆ ಪರಿಣಾಮ ಬೀರುತ್ತಲೇ ಇವೆ. ಮಾನಸಿಕ ಆರೋಗ್ಯ ವೃತ್ತಿಪರರು ಕಾನೂನಿನ ಈ ಬದಲಾವಣೆಯನ್ನು, ಸಮಲೈಂಗಿಕತೆಯ ಬಗೆಗಿನ ತಮ್ಮ ಸ್ವಂತ ದೃಷ್ಟಿಕೋನಗಳನ್ನು ಪುನಃ ಪರೀಕ್ಷಿಸುವ ಅವಕಾಶದಂತೆ ಬಳಸಿಕೊಳ್ಳಬಹುದು.

96. ಆಪ್ತಸಲಹಾ ಪ್ರಕ್ರಿಯೆಗಳು ಸಮಲೈಂಗಿಕ ಕಕ್ಷೀದಾರರನ್ನು ಬದಲಾವಣೆ ಹೊಂದಲು ಉತ್ತೇಜಿಸುವ ಬದಲು, ಅವರು ತಮ್ಮ ತನದ ಬಗ್ಗೆ ನೆಮ್ಮದಿಯನ್ನು ಹೊಂದಿ ತಮ್ಮ ಬದುಕನ್ನು ಮುನ್ನಡೆಸಲು ಬೆಂಬಲ ನೀಡಬೇಕು. ಖಾಯಿಲೆ ಅಥವಾ ಅನಾರೋಗ್ಯವೇ ಅಲ್ಲದಿರುವ ವಿಚಾರವೊಂದನ್ನು ಗುಣಪಡಿಸಲು ಪ್ರಯತ್ನಿಸುವ ಬದಲು ಆಪ್ತಸಲಹೆಗಾರ ಬದಲಾದ ವೈದ್ಯಕೀಯ ನೆಲೆಗಟ್ಟು ಮತ್ತು ಬದಲಾಗುತ್ತಿರುವ ಸಾಮಾಜಿಕ ಮೌಲ್ಯಗಳನ್ನು ಪ್ರತಿಬಿಂಬಿಸುವಂತಹ ಹೆಚ್ಚು ಪ್ರಗತಿಶೀಲವಾದ ದೃಷ್ಟಿಕೋನವನ್ನು ಅಳವಡಿಸಿಕೊಳ್ಳಬೇಕು. ಆಪ್ತಸಲಹೆಗಾರರಿಗೆ ವಿಶೇಷವಾದ ಕೌಶಲ್ಯಗಳ ಅಗತ್ಯವಿರುವುದಿಲ್ಲ, ಆದರೆ ಎಲ್.ಜಿ.ಬಿ.ಟಿ. ವ್ಯಕ್ತಿಗಳ ಬದುಕಿನ ಬಗೆಗೆ ಹೆಚ್ಚಿನ ಮಟ್ಟದ ಸೂಕ್ಷ್ಮತೆ ಮತ್ತು ತಿಳುವಳಿಕೆಯ ಅಗತ್ಯವಿದೆ. ಇತರ ಎಲ್ಲಾ ನಾಗರಿಕರಂತೆ, ಎಲ್.ಜಿ.ಬಿ.ಟಿ ವ್ಯಕ್ತಿಗಳ ಮಾನವ ಹಕ್ಕುಗಳಿಗೂ ಸಮಾನ ಮಟ್ಟದ ಬೆಲೆ ನೀಡಿ, ಅವರನ್ನು ಸಮಾನವಾದ ಗೌರವದಿಂದ ನಡೆಸಿಕೊಳ್ಳುವಂತಹ, ತಾರತಮ್ಯದಿಂದ ಮುಕ್ತವಾಗಿರುವ ಸಮಾಜದ ನಿರ್ಮಾಣದಲ್ಲಿ ನೆರವಾಗುವ ಸಲುವಾಗಿ, ವ್ಯಕ್ತಿಗಳು, ಕುಟುಂಬಗಳು, ಕೆಲಸದ ಸ್ಥಳಗಳು ಹಾಗೂ ಶೈಕ್ಷಣಿಕ ಮತ್ತು ಇತರ ಸಂಸ್ಥೆಗಳಿಗೆ ಲೈಂಗಿಕತೆಯನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಸಹಾಯ ಮಾಡುವ ಜವಾಬ್ದಾರಿಯನ್ನು ವೈದ್ಯಕೀಯ ವಲಯವು ಹಂಚಿಕೊಳ್ಳಬೇಕು[238].

[238] Vinay Chandran, "From judgement to practice: Section 377 and the medical sector", Indian Journal of Medical Ethics, Vol. 4 (2009).

## H. ನ್ಯಾಯಾಂಗ ವಿಮರ್ಶೆ

97. ಸಂವಿಧಾನ ತನ್ನ 245 ಮತ್ತು 246ನೇ ಕಲಮುಗಳಡಿಯಲ್ಲಿ ಕಾನೂನುಗಳನ್ನು ರೂಪಿಸುವ ಕಾರ್ಯವನ್ನು ಸಂಸತ್ತು ಮತ್ತು ಸರ್ಕಾರದ ಶಾಸಕಾಂಗಗಳಿಗೆ ವಹಿಸುತ್ತದೆ. ಶಾಸಕಾಂಗದ ಮುಖ್ಯಸ್ತರು ರಚಿಸಿರುವ, ಶಾಸಕಾಂಗದ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಕಾನೂನಿಗೆ ವಿರುದ್ಧವಾಗಿರುವ ವಿಚಾರಗಳನ್ನು ಅಪರಾಧವೆದ್ನು ಪರಿಗಣಿಸುವ ಅಧಿಕಾರವನ್ನು ಸಂಸತ್ತು ಮತ್ತು ಸರ್ಕಾರಿ ಶಾಸಕಾಂಗಗಳು, ಹೊಂದಿವೆ.(ಈ ಪಟಿಯ 93ನೇ ದಾಖಲೆ ಮತ್ತು ಏಳನೇ ವೇಳಾಪಟ್ಟಿಯ ಎರಡನೇ ಪಟ್ಟಿಯ ದಾಖಲಾತಿ 64 ಅನ್ನು ನೋಡಿ). ಕ್ರಿಮಿನಲ್ ಅಪರಾಧದ ಕಾನೂನು ಎಂಬುದು ಸಮಕಾಲೀನ ಪಟ್ಟಿಯ ವ್ಯಾಪ್ತಿಯಲ್ಲಿ ಬರುವ ವಿಷಯವನ್ನು ಅವಲಂಬಿಸಿರುತ್ತದೆ. 1ನೇ ಪಟ್ಟಿಯ 3ನೇ ದಾಖಲೆ ಹೀಗೆನ್ನುತ್ತದೆ:

> ಈ ಸಂವಿಧಾನದ ಆರಂಭದಲ್ಲಿ ಭಾರತೀಯ ದಂಡ ಸಂಹಿತೆಯಲ್ಲಿ ಸೇರಿಸಲಾದ ಎಲ್ಲ ವಿಚಾರಗಳನ್ನು ಒಳಗೊಂಡಿರುವ ಮತ್ತು ಪಟ್ಟಿ 1 ಅಥವಾ ಪಟ್ಟಿ 2 ರಲ್ಲಿ ವಿವರಿಸಿರುವ ಯಾವುದೇ ವಿಚಾರಗಳಿಗೆ ಸಂಬಂಧಿಸಿದ ಕಾನೂನುಗಳನ್ನು ಹೊರತುಪಡಿಸುವ ಮತ್ತು ನಾಗರಿಕ ಅಧಿಕಾರದ ಸಹಾಯಕ್ಕೆ ನೌಕಾಪಡೆ, ಸೇನೆ ಅಥವಾ ವಾಯುಪಡೆ ಅಥವಾ ದೇಶದ ಇತರ ಯಾವುದೇ ಸಶಸ್ತ್ರ ಪಡೆಗಳ ಬಳಕೆಯನ್ನು ಹೊರತುಪಡಿಸಿದಂತೆ, ಕ್ರಿಮಿನಲ್ ಕಾನೂನು .

ಕ್ರಿಮಿನಲ್ ಕಾನೂನಿನ ವ್ಯಾಪ್ತಿಯಲ್ಲಿ ಶಾಸನವನ್ನು ಜಾರಿಗೆ ತರುವ ಅಧಿಕಾರವನ್ನು ಸಂಸತ್ತಿಗೆ ವಹಿಸಲಾಗಿದೆ ಮತ್ತು ಸರ್ಕಾರಿ ಶಾಸಕಾಂಗಗಳಿಗೂ ಅವುಗಳ ಅಧಿಕಾರಕ್ಕೆ ಅನುಗುಣವಾಗಿ ಈ ಅಧಿಕಾರವನ್ನು ನೀಡಲಾಗಿದೆ. ಸಂಸತ್ತು ಮತ್ತು ಸರ್ಕಾರಿ ಶಾಸನಸಭೆಗಳೆರಡೂ ತಮ್ಮ ಶಾಸಕಾಂಗೀಯ ವ್ಯಾಪ್ತಿಯಲ್ಲಿ ಬರುವ ಕಾಯ್ದೆಗಳಿಗೆ ಸಂಬಂಧಿಸಿದ ಅಪರಾಧಗಳಿಗೆ ಸಂಬಂಧಿಸಿದ ಕಾನೂನುಗಳನ್ನು ಜಾರಿಗೆ ತರಬಹುದು. ಕಾನೂನನ್ನು ಜಾರಿಗೊಳಿಸುವ ಅಧಿಕಾರವು, ಸಾಂವಿಧಾನಿಕ ಭದ್ರತೆಗಳ ಒರೆಗಲ್ಲಿನಲ್ಲಿನ ಪರೀಕ್ಷೆಗೊಳಪಡುವ ಆ ಕಾನೂನಿನ ಮಾನ್ಯತೆಯನ್ನು ಅವಲಂಬಿಸಿರುತ್ತದೆ. ಒಬ್ಬ ನಾಗರಿಕ, ಅಥವಾ ಪ್ರಸ್ತುತ ಪ್ರಕರಣದಲ್ಲಿರುವಂತೆ ನಾಗರಿಕರ ಒಂದು ಸಮುದಾಯ, ಅಪರಾಧೀಕರಿಸುವ ಕಾನೂನಿನ ಮಾನ್ಯತೆಗೆ ಸವಾಲನ್ನು ಒಡ್ಡಿದಾಗ, ಆ ಸಮಸ್ಯೆಯನ್ನು

ನ್ಯಾಯಾಂಗೀಯ ಮರುಪರಿಶೀಲನೆ ನಡೆಸಿ ಪರಿಹರಿಸುವ ಅಧಿಕಾರವನ್ನು ನ್ಯಾಯಾಂಗ ಶಾಖೆಗೆ ವಹಿಸಲಾಗುತ್ತದೆ. ನ್ಯಾಯಾಂಗೀಯ ಮರುಪರಿಶೀಲನೆಯ ನಡೆಸುವಾಗ, ನ್ಯಾಯಾಲಯವು ಶಾಸಕಾಂಗವು ಶಾಸನವೊಂದರ ಅವಶ್ಯಕತೆ ಅಥವಾ ಸಾಮರ್ಥ್ಯದ ಬಗೆಗೆ ತೆಗೆದುಕೊಂಡಿರುವ ತೀರ್ಮಾನವನ್ನು ಖಂಡಿಸುವುದಿಲ್ಲ. ಆದರೆ ಅಪರಾಧವೊಂದನ್ನು ನಿರ್ಧರಿಸುವ ಕಾನೂನು ಮೂಲಭೂತ ಹಕ್ಕುಗಳಿಗೆ ಮಾರಕವಾಗಿದೆ ಎಂದು ಕಂಡುಬಂದರೆ, ಅಂತಹ ಕಾನೂನನ್ನು ಪ್ರಶ್ನಿಸುವುದಕ್ಕೆ ಯಾವುದೇ ಪ್ರತಿರೋಧವಿರುವುದಿಲ್ಲ. ಶಾಸಕಾಂಗಗಳಿಗೆ ವಹಿಸಲಾಗಿರುವ ಅಪರಾಧಗಳನ್ನು ನಿರ್ಧರಿಸುವ ಸಾಂವಿಧಾನಿಕ ಅಧಿಕಾರವು, ಲಿಖಿತ ಸಂವಿಧಾನದ ನಿಯಮಕ್ಕೊಳಪಟ್ಟಿರುತ್ತದೆ. ಕಾನೂನಿನ ಸಿಂಧುತ್ವವನ್ನು ಪ್ರಶ್ನಿಸುವ ಸಂದರ್ಭದಲ್ಲಿ, ನ್ಯಾಯಾಂಗ ಪರಿಶೀಲನೆಯು, ಆ ಕಾನೂನು ಮೂಲಭೂತ ಸ್ವಾತಂತ್ರ್ಯಗಳನ್ನು ಕಸಿದುಕೊಳ್ಳುವಾಗ ಸ್ಪಷ್ಟವಾದ ನಿರಂಕುಶತ್ವವನ್ನು ಪ್ರದರ್ಶಿಸುತ್ತದೆಯೇ ಎಂಬುದನ್ನು ಒಳಗೊಳ್ಳುತ್ತದೆ. ಕಾನೂನೊಂದು, ಒಂದು ಗುಂಪು ಅಥವಾ ನಾಗರಿಕರ ಸಮುದಾಯ ಸಂವಿಧಾನ ಕೊಡಮಾಡಿರುವ ಹಕ್ಕು ಮತ್ತು ಸ್ವಾತಂತ್ರ್ಯಗಳಲ್ಲಿ ಇತರ ನಾಗರಿಕರಂತೆ ಸಂಪೂರ್ಣವಾಗಿ ಮತ್ತು ಸಮಾನವಾಗಿ ಭಾಗವಹಿಸುವುದನ್ನು ನಿರಾಕರಿಸಿ ತಾರತಮ್ಯ ಎಸಗಿದರೆ ಸಂವಿಧಾನದಿಂದ ಮಂಜೂರು ಮಾಡಿದ ಹಕ್ಕುಗಳು ಮತ್ತು ಸ್ವಾತಂತ್ರ್ಯಗಳ ನೆಲೆಯಲ್ಲಿ ಅಂತಹ ಕಾನೂನಿನ ಮಾನ್ಯತೆಯನ್ನು ಮೌಲ್ಯಮಾಪನಕ್ಕೆ ಒಳಪಡಿಸುವುದು ನ್ಯಾಯಾಲಯದ ಕರ್ತವ್ಯ.

## I. ಅಂತಾರಾಷ್ಟ್ರೀಯ ಕಾನೂನಿಗೆ ಸಂಬಂಧಿಸಿದ ಭಾರತದ ಬದ್ಧತೆಗಳು

೨೪. ಅಂತಾರಾಷ್ಟ್ರೀಯ ನ್ಯಾಯಶಾಸ್ತ್ರ ಮತ್ತು ಮಾನವಾಧಿಕಾರ ಒಪ್ಪಂದಗಳು ಸರ್ಕಾರಗಳ ಮೇಲೆ ಎಲ್ಲ ವ್ಯಕ್ತಿಗಳನ್ನು ಮಾನವ ಹಕ್ಕುಗಳ ಉಲ್ಲಂಘನೆಯಿಂದ ಕಾಪಾಡುವ ಕಟ್ಟುಪಾಡುಗಳನ್ನು ವಿಧಿಸುತ್ತವೆ, ಮತ್ತು ಇದರಲ್ಲಿ ಲೈಂಗಿಕ ನಿಲುವನ್ನಾಧರಿಸಿದ ಮಾನವಾಧಿಕಾರ ಉಲ್ಲಂಘನೆಯೂ ಸೇರಿದೆ[239]. ಆದಾಗ್ಯೂ, ಒಪ್ಪಿಗೆಯಿರುವ ವಯಸ್ಕರ ನಡುವಿನ ಸಮಲೈಂಗಿಕ ಸಂಬಂಧವನ್ನು ಅಪರಾಧೀಕರಿಸುವ ಕಾನೂನುಗಳು ಎಪ್ಪತ್ತಕ್ಕೂ ಹೆಚ್ಚು ದೇಶಗಳ ಶಾಸನಗಳಲ್ಲಿ ಉಳಿದುಕೊಂಡಿವೆ. ಇವುಗಳಲ್ಲಿ ಹಲವು, "ಸೊಡೊಮಿ (ಗುದಸಂಭೋಗ) ಕಾನೂನುಗಳು" ಎಂದು ಕರೆಯಲ್ಪಡುವ ಕಾನೂನುಗಳನ್ನು ಒಳಗೊಂಡಂತೆ, ಕೆಲವು

[239] Dominic McGoldrick, "The Development and Status of Sexual Orientation Discrimination under International Human Rights Law", Human Rights Law Review, Vol. 16 (2016).

ರೀತಿಯ ಲೈಂಗಿಕ ಚಟುವಟಿಕೆಯನ್ನು ನಿಷೇಧಿಸುವ ಅಥವಾ ಒಂದೇ ಲಿಂಗದ ವ್ಯಕ್ತಿಗಳ ನಡುವಿನ ಎಲ್ಲಾ ಬಗೆಯ ಅನ್ಯೋನ್ಯತೆ ಅಥವಾ ಲೈಂಗಿಕ ಚಟುವಟಿಕೆಯನ್ನು ನಿಷೇಧಿಸುವಂತಹ ವಸಾಹತು-ಯುಗದ ಶಾಸನಗಳ ಪಳೆಯುಳಿಕೆಗಳಗಿವೆ[240]. ಕೆಲವು ಸಂದರ್ಭಗಳಲ್ಲಿ, ಈ ಕಾನೂನುಗಳಲ್ಲಿ ಬಳಸಿದ ಭಾಷೆಯು ಅಸ್ಪಷ್ಟ ಮತ್ತು ಅನಿರ್ದಿಷ್ಟ ಪರಿಕಲ್ಪನೆಗಳನ್ನು ಒಳಗೊಂಡಿರುತ್ತದೆ, ಉದಾಹರಣೆಗೆ 'ನಿಸರ್ಗದ ನಿಯಮದ ವಿರುದ್ಧದ ಅಪರಾಧಗಳು', 'ನೈತಿಕತೆ', ಅಥವಾ 'ವ್ಯಭಿಚಾರ[241]'. ಭಾರತದಲ್ಲಿನ ಇಂತಹ ಕಾನೂನಿನ ಇತಿಹಾಸ ಮತ್ತು ಪಠ್ಯದಲ್ಲಿ ಕೂಡಾ ಇಂತಹವೇ ಧ್ವನಿಗಳಿವೆ.

೯೯. ಅಂತಾರಾಷ್ಟ್ರೀಯ ಕಾನೂನುಗಳು, ಸಮಲೈಂಗಿಕ ವಯಸ್ಕರ ನಡುವಿನ ಖಾಸಗೀಯಾದ ಒಪ್ಪಿಗೆಯ ಲೈಂಗಿಕ ಕ್ರಿಯೆಗಳ ಅಪರಾಧೀಕರಣವು ಸಮಾನತೆ, ಗೌಪ್ಯತೆ ಮತ್ತು ತಾರತಮ್ಯದಿಂದ ಸ್ವಾತಂತ್ರ್ಯದ ಹಕ್ಕುಗಳಿಗೆ ವ್ಯಕ್ತಿರಿಕ್ತವಾಗಿದೆ ಎಂಬುದನ್ನು ಸಾಬೀತು ಪಡಿಸುವಷ್ಟು ಮುಂದುವರೆದಿವೆ. ಈ ಹಕ್ಕುಗಳನ್ನು ಯು.ಡಿ.ಎಚ್.ಆರ್, ಈ.ಸಿ.ಟಿ.ಎಚ್.ಆರ್, ಮತ್ತು ಐ.ಸಿ.ಈ.ಎಸ್.ಸಿ.ಆರ್. ಮೊದಲಾದ ಭಾರತವು ಬದ್ಧತೆ ವ್ಯಕ್ತಪಡಿಸಿರುವ ಅಂತಾರಾಷ್ಟ್ರೀಯ ಒಡಂಬಡಿಕೆಗಳು, ಕರಾರುಗಳು, ಮತ್ತು ಒಪ್ಪಂದಗಳು ಗುರುತಿಸಿವೆ [242] . ಭಾರತವು, ಅಂತರಾಷ್ಟ್ರೀಯವಾಗಿ ಗುರುತಿಸಲ್ಪಟ್ಟ ಈ ನಿಯಮಗಳು ಮತ್ತು ತತ್ವಗಳನ್ನು ಗೌರವಿಸುವ ಸಾಂವಿಧಾನಿಕ ಕರ್ತವ್ಯವನ್ನು ಹೊಂದಿದೆ. ಸರ್ಕಾರದ ನಿರ್ದೇಶಕ ತತ್ವಗಳ ಭಾಗವಾಗಿರುವ ಸಂವಿಧಾನದ 51 ನೇ ಕಲಮಿನ ಪ್ರಕಾರ, ಸರ್ಕಾರಗಳು "ಸಂಘಟಿತ ಜನರು ಪರಸ್ಪರ ವ್ಯವಹರಿಸುವಾಗ ಅಂತಾರಾಷ್ಟ್ರೀಯ ಕಾನೂನು ಮತ್ತು ಒಪ್ಪಂದದ ಕಟ್ಟುಪಾಡುಗಳೆಡೆಗಿನ ಗೌರವವನ್ನು ಬೆಳೆಸಿಕೊಳ್ಳಲು" ಪ್ರಯತ್ನಿಸಬೇಕು.

100. ಭಾರತ ಬಧ್ಧವಾಗಿರುವ ಮಾನವಾಧಿಕಾರದ ಒಪ್ಪಂದಗಳ ಪ್ರಕಾರ, ಸರ್ಕಾರಗಳು ಜನರಿಗೆ ಕಾನೂನಿಡಿಯಲ್ಲಿ ಸಮಾನ ಹಕ್ಕುಗಳು, ಕಾನೂನಿನ ಸಮಾನ ರಕ್ಷಣೆ ಮತ್ತು ತಾರತಮ್ಯದಿಂದ ಮುಕ್ತಿಯ

---

240 UN Human Rights Council, "Discriminatory laws and practices and acts of violence against individuals based on their sexual orientation and gender identity" (2011).

241 UN Human Rights Council, "Promotion and Protection of all Human Rights, Civil, Political, Economic, Social and Cultural Rights, including the Right to Development" (2008).

242 Vishaka v State of Rajasthan, (1997) 6 SCC 241.

ಹಕ್ಕುಗಳನ್ನು ಖಾತರಿಪಡಿಸುವ ಅಗತ್ಯವಿದೆ. ಉದಾಹರಣೆಗೆ, ಐ.ಸಿ.ಇ.ಎಸ್.ಆರ್.ನ 2ನೇ ಕಲಮು, ಸರ್ಕಾರ ಈ ಕೆಳಗಿನವುಗಳನ್ನು ಖಚಿತಪಡಿಸಬೇಕೆಂದು ಹೇಳುತ್ತದೆ:

> ಪ್ರಸ್ತುತ ಒಡಂಬಡಿಕೆಯಲ್ಲಿ ವಿವರಿಸಲಾಗಿರುವ ಹಕ್ಕುಗಳನ್ನು ಜನಾಂಗ, ಬಣ್ಣ, ಭಾಷೆ, ಧರ್ಮ, ರಾಜನೈತಿಕ ಅಥವಾ ಇತರ ಅಭಿಪ್ರಾಯ, ರಾಷ್ಟ್ರೀಯ ಅಥವಾ ಸಾಮಾಜಿಕ ಮೂಲ, ಸ್ವತ್ತು, ಹುಟ್ಟು ಅಥವಾ ಇತರ ಸ್ಥಾನಮಾನಗಳನ್ನು ಆಧರಿಸಿದ ಯಾವುದೇ ರೀತಿಯ ತಾರತಮ್ಯವಿಲ್ಲದೆ ಚಲಾಯಿಸಬೇಕು

101. ಸರ್ಕಾರಗಳು ಒಡಂಬಡಿಕೆಯನ್ನು ಜಾರಿಗೊಳಿಸುವುದರ ಮೇಲ್ವಿಚಾರಣೆ ನಡೆಸಲು ಐ.ಸಿ.ಇ.ಎಸ್.ಆರ್ ರಚಿಸಿರುವ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಕ್ಕುಗಳ ಸಮಿತಿಯು, ತನ್ನ 2(2)ನೇ ಕಲಮಿನಲ್ಲಿರುವ "ಇತರ ಸ್ಥಾನಮಾನವು" ಲೈಂಗಿಕ ನಿಲುವನ್ನು ಕೂಡಾ ಒಳಗೊಂಡಿದೆ ಎಂದು ತಿಳಿಸಿದೆ ಮತ್ತು ಲಿಂಗಪರಿವರ್ತಿತರು, ಬದಲೀ-ಲೈಂಗಿಕತೆಯವರು ಮತ್ತು ಬದಲೀ-ಲಿಂಗದವರು ಆಗಾಗ್ಗೆ ಗಂಭೀರವಾದ ಮಾನವ ಹಕ್ಕುಗಳ ಉಲ್ಲಂಘನೆ ಎದುರಿಸಬೇಕಾಗುತ್ತದೆಯಾದ್ದರಿಂದ "ಲಿಂಗಾಧಾರಿತ ಅಸ್ಮಿತೆಯ"ನ್ನು ತಾರತಮ್ಯ ಮಾಡಬಾರದ ವಿಚಾರಗಳಲ್ಲೊಂದೆಂದು ಗುರುತಿಸಲಾಗಿದೆ ಎಂಬುದನ್ನು ಪುನರುಚ್ಚರಿಸಿದೆ"[243]

102. ಐ.ಸಿ.ಸಿ.ಪಿ.ಆರ್.ನಲ್ಲಿನ ತಾರತಮ್ಯದ ವಿರುದ್ಧದ ನಿಷೇಧವು, ಕಾನೂನಿನೆದುರಿನ ಸಮಾನತೆಯನ್ನು ಖಾತರಿಪಡಿಸುವ 26ನೇ ಕಲಮಿನಲ್ಲಿ ಅಡಕವಾಗಿದೆ:

> ಎಲ್ಲ ವ್ಯಕ್ತಿಗಳು ಕಾನೂನಿನೆದುರು ಸಮಾನರು ಮತ್ತು ಯಾವುದೇ ತಾರತಮ್ಯವಿಲ್ಲದೆ ಕಾನೂನಿನ ಸಮಾನ ರಕ್ಷಣೆ ಪಡೆಯಲು ಅರ್ಹರು. ಈ ಸಂಬಂಧ, ಕಾನೂನುಗಳು ಯಾವುದೇ ಬಗೆಯ ತಾರತಮ್ಯವನ್ನ ನಿರ್ಬಂಧಿಸಬೇಕು ಮತ್ತು ಎಲ್ಲ ವ್ಯಕ್ತಿಗಳಿಗೆ ಜನಾಂಗ, ಬಣ್ಣ, ಭಾಷೆ, ಧರ್ಮ, ರಾಜನೈತಿಕ ಅಥವಾ ಇತರ ಅಭಿಪ್ರಾಯ, ರಾಷ್ಟ್ರೀಯ ಅಥವಾ

[243] Committee on Economic, Social and Cultural Rights, "General Comment 20: Non-discrimination in economic, social and cultural rights" (2009), at para 32.

ಸಾಮಾಜಿಕ ಮೂಲ, ಸ್ವತ್ತು, ಹುಟ್ಟು ಅಥವಾ ಇತರ ಸ್ಥಾನಮಾನಗಳನ್ನು ಆಧರಿಸಿದ ತರಮ್ಯಗಳ ವಿರುದ್ಧ ಸಮಾನವಾದ ಮತ್ತು ಸಮರ್ಪಕವಾದ ರಕ್ಷಣೆಯನ್ನು ಖಾತ್ರಿಪಡಿಸಬೇಕು

ಭಾರತವು ಖಾಸಗೀತನದ ಹಕ್ಕನ್ನು ಕೂಡಾ ರಕ್ಷಿಸುವ ಅಗತ್ಯವಿದೆ ಮತ್ತು ಇದರಲ್ಲಿ ಒಪ್ಪಿಗೆಯ ಸಮಲೈಂಗಿಕ ಸಂಬಂಧಗಳಲ್ಲಿ ತೊಡಗುವ ಹಕ್ಕೂ ಕೂಡ ಸೇರಿದೆ 234 ಯು.ಡಿ.ಎಚ್.ಆರ್.ನ 12ನೇ ಕಲಮು ಖಾಸಗೀತನದ ಹಕ್ಕನ್ನು ಗುರುತಿಸುತ್ತದೆ:

12ನೇ ಕಲಮು: ಯಾರನ್ನೂ ಅವರ ಖಾಸಗೀತನ, ಕುಟುಂಬ, ಮನೆ ಅಥವಾ ಸಂವಹನಗಳ ವಿಚಾರದಲ್ಲಿ ನಿರಂಕುಶ ಹಸ್ತಕ್ಷೇಪಕ್ಕೊಳಪಡಿಸಬಾರದು, ಅಲ್ಲದೆ ಅವರ ಘನತೆ ಮತ್ತು ಗೌರವವನ್ನು ಹಲ್ಲೆಗೊಳಪಡಿಸಬಾರದು. ಎಲ್ಲರಿಗೂ, ಇಂತಹ ಹಸ್ತಕ್ಷೇಪ ಮತ್ತು ಹಲ್ಲೆಗಳ ವಿರುದ್ಧ ಕಾನೂನಿನ ರಕ್ಷಣೆ ಪಡೆಯುವ ಹಕ್ಕಿದೆ.

ಅಂತೆಯೇ, 11 ಡಿಸೆಂಬರ್ 1977 ರಂದು ಭಾರತವು ಅನುಮೋದಿಸಿದ ಐ.ಸಿ.ಸಿ.ಪಿ.ಆರ್ ನ 17ನೇ ಕಲಮು ಹೀಗೆನ್ನುತ್ತದೆ:

“ಈ ಕಲಮಿನ ಮೂಲಕ ವಿಧಿಸಲಾಗಿರುವ ಬದ್ಧತೆಗಳು, ಸರ್ಕಾರ ಇಂತಹ ಹಸ್ತಕ್ಷೇಪಗಳು ಮತ್ತು ಹಲ್ಲೆಗಳ ವಿರುದ್ಧದ ನಿರ್ಬಂಧಗಳಿಗೆ ಮತ್ತು ಹಕ್ಕಿನ ರಕ್ಷಣೆಗೆ ಬಲನೀಡುವ, ಶಾಸಕಾಂಗೀಯ ಅಥವಾ ಇತರ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಬಯಸುತ್ತದೆ."

ಮಾನವ ಹಕ್ಕುಗಳ ಸಮಿತಿಯು ತನ್ನ ಸಾಮಾನ್ಯ ಟಿಪ್ಪಣಿ ಸಂಖ್ಯೆ 16ರಲ್ಲಿ, ಖಾಸಗೀತನದಲ್ಲಿನ ಮೂಗುತೂರಿಸುವಿಕೆ, ಅದು ಕಾನೂನಿನಡಿಯಲ್ಲಿ ನಡೆದಿದ್ದರೂ ಕೂಡಾ, ಅದು "ಒಡಂಬಡಿಕೆಯ ನಿಬಂಧನೆಗಳು, ಗುರಿಗಳು ಮತ್ತು ಉದ್ದೇಶಗಳಿಗೆ ಅನುಗುಣವಾಗಿ ಇರಬೇಕು ಮತ್ತು, ಖಂಡಿತವಾಗಿಯು, ಆಯಾ ಸಂದರ್ಭಗಳಿಗೆ ತಕ್ಕುದಾಗಿರಬೇಕು" ಎಂದಿತು. ಮಾನವ ಹಕ್ಕುಗಳ ಒಡಂಬಡಿಕೆ ಮಂಡಳಿಗಳು ತಮ್ಮ ಸಾಮಾನ್ಯ ಟಿಪ್ಪಣಿಗಳು, ಸಮಾರೋಪದ ಅವಲೋಕನಗಳು ಮತ್ತು ಸಂವಾದಗಳ ಬಗೆಗಿನ ಅಭಿಪ್ರಾಯಗಳಲ್ಲಿ, ರಾಜ್ಯಗಳು ಲೈಂಗಿಕ

ನಿಲುವು ಮತ್ತು/ಅಥವಾ ಲಿಂಗಾಧಾರಿತ ಅಸ್ಮಿತೆಯ ಆಧಾರದ ಮೇಲೆ ನಡೆಯುವ ತಾರತಮ್ಯದಿಂದ ವ್ಯಕ್ತಿಗಳನ್ನು ರಕ್ಷಿಸುವ ಬದ್ಧತೆಗೆ ಒಳಗಾಗುತ್ತವೆ ಎಂದು ದೃಢಪಡಿಸಿವೆ, ಏಕೆಂದರೆ ಈ ಅಂಶಗಳು ಒಬ್ಬ ವ್ಯಕ್ತಿಯು ತನ್ನ ಪಾಲಿನ ಮಾನವ ಹಕ್ಕುಗಳ ಸಂಪೂರ್ಣ ಶ್ರೇಣಿಯನ್ನು ಅನುಭವಿಸುವ ಅರ್ಹತೆಯನ್ನು ಕಡಿಮೆಗೊಳಿಸುವುದಿಲ್ಲ. 236

103. ನಾಲ್ಸಾ ಪ್ರಕರಣದಲ್ಲಿ, ಲಿಂಗಪರಿವರ್ತಿತ ವ್ಯಕ್ತಿಗಳ ಹಕ್ಕುಗಳ ವಿಚಾರ ಮಾತನಾಡುವಾಗ, ಈ ನ್ಯಾಯಾಲಯವು 'ಲೈಂಗಿಕ ನಿಲುವು ಮತ್ತು ಲಿಂಗಾಧಾರಿತ ಅಸ್ಮಿತೆಯ ವಿಚಾರಗಳಿಗೆ ಅಂತಾರಾಷ್ಟ್ರೀಯ ಕಾನೂನನ್ನು ಅನ್ವಯಿಸುವುದಕ್ಕೆ ಸಂಬಂಧಿಸಿದ ಯೋಗಕಾರ್ಟಾ ತತ್ವಗಳನ್ನು' ಗುರುತಿಸಿತು - ಈ ತತ್ವಗಳು, ಅಂತಾರಾಷ್ಟ್ರೀಯ ಕಾನೂನಿನ ರಕ್ಷಣೆಯಡಿಯಲ್ಲಿ ಲೈಂಗಿಕ ಅಲ್ಪಸಂಖ್ಯಾತರು ಮಾನುಷ್ಯರಾಗಿ ಅನುಭವಿಸುವ ಹಕ್ಕುಗಳನ್ನು ಸ್ಪಷ್ಟಪಡಿಸಿ ಆ ಹಕ್ಕುಗಳನ್ನು ಭಾರತೀಯ ಕಾನೂನಿನ ಮೂಲಕ ಜಾರಿಗೊಳಿಸಬೇಕೆಂದು ನಿರ್ಧರಿಸಿತು. 33ನೇ ತತ್ವ ಹೀಗೆನ್ನುತ್ತದೆ:

> " ಎಲ್ಲರಿಗೂ ಅಪರಾಧೀಕರಣದಿಂದ ಮತ್ತು ಆ ವ್ಯಕ್ತಿಯ ಗ್ರಹೀತ ಲೈಂಗಿಕ ನಿಲುವು, ಲೈಂಗಿಕ ಅಸ್ಮಿತೆ, ಲಿಂಗಾಭಿವ್ಯಕ್ತಿ ಅಥವಾ ಲಿಂಗಾಧಾರಿತ ಗುಣಲಕ್ಷಣಗಳನ್ನು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಆಧರಿಸಿರುವ ಯಾವುದೇ ಬಗೆಯ ಕಾನೂನುಗಳಿಂದ ಮುಕ್ತವಾಗಿರುವ ಹಕ್ಕಿದೆ.

ಯೊಗ್ಯಕಾರ್ಟಾ ತತ್ವಗಳಿಗೆ ಕಾನೂನಿನ ಚೌಕಟ್ಟಿಲ್ಲವಾದರೂ, ನಾಲ್ಸಾ ಪ್ರಕರಣದ ತೀರ್ಪು, ಲಿಂಗಾಧಾರಿತ ಅಸ್ಮಿತೆಯ ಆಧಾರದಲ್ಲಿ ನಡೆಯುವ ತಾರತಮ್ಯದ ವಿರುದ್ಧದ ಹಕ್ಕುಗಳನ್ನು ಒಪ್ಪಿಕೊಂಡಿರುವುದನ್ನು ಸೂಚಿಸುತ್ತದೆ ಅಲ್ಲದೇ, ಹಕ್ಕುಗಳ ಉಲ್ಲಂಘನೆಯನ್ನು ಪರಿಹರಿಸುವ ಪ್ರಕ್ರಿಯೆಯಲ್ಲಿ ಅಂತಾರಾಷ್ಟ್ರೀಯ ಮಾನವಾಧಿಕಾರಗಳ ಮಾನದಂಡಗಳ ಪ್ರಸ್ತುತತೆಯನ್ನು ಕೂಡಾ ದೃಢಪಡಿಸುತ್ತದೆ.

104. ಭಾರತದ ಅಂತಾರಾಷ್ಟ್ರೀಯ ಬದ್ಧತೆಗಳು ಮತ್ತು ಸಮಲೈಂಗಿಕ ವಯಸ್ಕರ ನಡುವಿನ ಒಪ್ಪಿಗೆಯ ಖಾಸಗೀ ಲೈಂಗಿಕ ಕ್ರಿಯೆಗಳನ್ನು ಅಪರಾಧೀಕರಿಸುವ ಭಾರತೀಯ ದಂಡ ಸಂಹಿತೆಯ 377ನೇ ಪರಿಚ್ಛೇದದ ನಡುವಿನಲ್ಲಿ ವಿರೋಧಾಭಾಸವಿದೆ. ಈ ನಿಬಂಧನೆಯ ಮಾನ್ಯತೆಯನ್ನು ತೀರ್ಮಾನಿಸುವಾಗ,

ಭಾರತೀಯ ದಂಡ ಸಂಹಿತೆಯು ಭಾರತೀಯ ಸಂವಿಧಾನ ಮತ್ತು ಭಾರತ ಬದ್ಧತೆ ವ್ಯಕ್ತಪಡಿಸಿರುವ ಅಂತಾರಾಷ್ಟ್ರೀಯ ಕಾನೂನಿನ ನಿಯಮಗಳು ಮತ್ತು ತತ್ವಗಳ ಅನುಗುಣವಾಗಿರುವಾಂತೆ ಮಾಡಬೇಕು. ಮೇಲಿನವೆರಡೂ ಕೂಡ ಲೈಂಗಿಕ ಮತ್ತು ಲಿಂಗಾಧಾರಿತ ಅಲ್ಪಸಂಖ್ಯಾತರ ಮಾನವ ಹಕ್ಕುಗಳನ್ನು ಗುರುತಿಸುವ ವಿಚಾರದಲ್ಲಿ ಪ್ರಮುಖವಾದ ಪಾತ್ರ ವಹಿಸಿವೆ.

## J. ಗಡಿಗಳನ್ನು ದಾಟುತ್ತಾ - ತುಲನಾತ್ಮಕ ಕಾನೂನು

105.ಕಳೆದ ಹಲವಾರು ದಶಕಗಳಲ್ಲಿ, ಅಂತಾರಾಷ್ಟ್ರೀಯ ಮತ್ತು ಸ್ಥಳೀಯ ನ್ಯಾಯಾಲಯಗಳು ಲೈಂಗಿಕ ನಿಲುವಿನ ಆಧಾರದಲ್ಲಿ ನಡೆಯುವ ತಾರತಮ್ಯದ ವಿರುದ್ಧ ಬಲವಾದ ನ್ಯಾಯಶಾಸ್ತ್ರವನ್ನು ಅಭಿವೃದ್ಧಿಪಡಿಸಿವೆ. ಈ ವಿಭಾಗವು, ತುಲನಾತ್ಮಕ ಕಾನೂನಿನ ನೆಲೆಗಟ್ಟಿನಲ್ಲಿ ಲೈಂಗಿಕ ನಿಲುವಿನ ಕುರಿತಾದ ಕಾನೂನಿನ ದೃಷ್ಟಿಕೋನ ವಿಕಾಸಗೊಂಡ ಬಗೆಯನ್ನು ವಿಶ್ಲೇಷಿಸುತ್ತದೆ ಮತ್ತು ಅವರ ಹಲವು ನ್ಯಾಷಾಸ್ತ್ರಗಳು ತಮ್ಮ  ಚರಿತ್ರೆಗನುಗುಣವಾಗಿ ಗುದಸಂಭೋಗಕ್ಕೆ ಸಂಬಂಧಿಸಿದ ಕಾನೂನುಗಳನ್ನು ಅರ್ಥೈಸಿಕೊಂಡಿರುವ ಬಗೆಯತ್ತ ದೃಷ್ಟಿಹಾಯಿಸುತ್ತದೆ.

106. 1967 ರಲ್ಲಿ, ವಯಸ್ಕ ಪುರುಷರ ನಡುವೆ ಖಾಸಗೀಯಾಗಿ  ನಡೆಯುವ ಒಪ್ಪಿಗೆಯ ಸಮಲೈಂಗಿಕ ಸಂಭೋಗವನ್ನು ಇಂಗ್ಲೆಂಡ್ ಮತ್ತು ವೇಲ್ಸ್ ದೇಶಗಳು ನಿರಪರಾಧೀಕರಿಸಿದವು ಮತ್ತು 1980ರಲ್ಲಿ ಸ್ಕಾಟ್ಲ್ಯಾಂಡ್ ಇದನ್ನೇ ಅನುಸರಿಸಿತು. ಉತ್ತರ ಐರ್ಲೆಂಡ್ ನ ಕಾನೂನು 1982ರಲ್ಲಿ ಈ.ಸಿ.ಟಿ.ಎಚ್.ಆರ್ **ಡಡ್ಜಿಯಾನ್ v. ಯುನೈಟೆಡ್ ಕಿಂಗ್ಡಮ್ ("ಡಡ್ಜಿಯಾನ್")**. ಪ್ರಕರಣದ ತೀರ್ಪು ಹೊರಬಿದ್ದಾಗ ಬದಲಾಯಿತು.  ಅರ್ಜಿದಾರರು 1861ರ ಅಫೆನ್ಸಸ್ ಎಗೈನ್ಸ್ಟ್ ದಿ ಪರ್ಸನ್ ಆಕ್ಟ್, ಕ್ರಿಮಿನಲ್ ಲಾ ತಿದ್ದುಪಡಿ ಕಾಯಿದೆ, 1885 ಮತ್ತು ಪರಸ್ಪರ ಒಪ್ಪಿಗೆಯನ್ನು ಗಣನೆಗೆ ತೆಗೆದುಕೊಳ್ಳದ ಗುದಸಂಭೋಗ ಮತ್ತು "ಸಂಪೂರ್ಣ ಅಸಭ್ಯತೆಯನ್ನು" ಅಪರಾಧೀಕರಿಸುವ ಗುದಸಂಭೋಗಕ್ಕೆ ಸಂಬಂಧಿಸಿದ ಕಾನೂನೊಂದನ್ನು ಪ್ರಶ್ನಿಸಿದರು. ಕಾನೂನು ಈ ಪದಗಳನ್ನು ನಿರ್ದಿಷ್ಟವಾಗಿ ವ್ಯಾಖ್ಯಾನಿಸಿರಲಿಲ್ಲವಾದರೂ, ನ್ಯಾಯಾಲಯವು "ಬಗ್ಗರಿ" ಎಂಬುದನ್ನು ಪುರುಷನೊಬ್ಬನು ಮತ್ತೊಬ್ಬ ಪುರುಷ ಅಥವಾ ಮಹಿಳೆಯೊಂದಿಗೆ ನಡೆಸುವ ಗುದ ಸಂಭೋಗ ಎಂದು ಅರ್ಥೈಸಕೊಂಡಿತು ಮತ್ತು ಸಂಪೂರ್ಣ ಅಸಭ್ಯತೆ ಎಂಬುದು "ಪುರುಷ

ವ್ಯಕ್ತಿಗಳ ನಡುವಿನ ಲೈಂಗಿಕ ಅಸಭ್ಯತೆಯನ್ನು ಒಳಗೊಂಡಿದೆ" ಎಂದು ವ್ಯಾಖ್ಯಾನಿಸಿತು. ಈ ಕಾಯ್ದೆಗಳು ನಿಷೇಧಿಸಿರುವ ಕ್ರಿಯೆಗಳ ಕುರಿತು, ಈ.ಸಿ.ಟಿ.ಏಚ್.ಆರ್. ಹೀಗೆ ಗಮನಿಸಿತು:

> ಇಲ್ಲಿ ಸಮಲೈಂಗಿಕತೆಯನ್ನು ನೇರವಾಗಿ ನಿರ್ಬಂಧಿಸುತ್ತಿಲ್ಲ, ಬದಲಿಗೆ ಪುರುಷರ ನಡುವಿನ ನಿರ್ದಿಷ್ಟವಾದ ಸಂಪೂರ್ಣ ಅಸಭ್ಯತೆಯ ಕೃತ್ಯಗಳು ಮತ್ತು ಗುದಸಂಭೋಗವನ್ನಷ್ಟೇ ನಿರ್ಬಂಧಿಸುತ್ತಿರುವುದರ ಹೊರತಾಗಿಯೂ, ಅರ್ಜಿದಾರರ ದೂರಿನ ಸಂಗತಿಯಾಗಿರುವ ಪುರುಷರ ನಡುವಿನ ಸಮಲೈಂಗಿಕ ಕ್ರಿಯೆಗಳು, ಪ್ರಶ್ನಿಸಲಾಗಿರುವ ಶಾಸನದಡಿಯ ದಂಡನೀಯ ಅಪರಾಧಗಳ ವ್ಯಾಪ್ತಿಯಲ್ಲೇ ಬರುತ್ತವೆ ಎಂಬುದು ನಿರ್ವಿವಾದ.

ಈ.ಸಿ.ಟಿ.ಏಚ್.ಆರ್., ಡಡ್ಜಿಯಾನ್ ರವರು ತಮ್ಮ ಖಾಸಗೀ ಜೀವನದೆಡೆಗಿನ ಗೌರವಡಾ ಹಕ್ಕಿನಲ್ಲಿ ನ್ಯಾಯಸಮ್ಮತವಲ್ಲದ ಹಸ್ತಕ್ಷೇಪವನ್ನು ಅನುಭವಿಸಿದ್ದು ಆ ಹಸ್ತಕ್ಷೇಪ ಮುಂದಿವರೆಯುತ್ತಿದೆ ಎಂದು ತೀರ್ಮಾನಿಟು. ಆದ್ದರಿಂದ, ನ್ಯಾಯಾಲಯವ ಪ್ರಶ್ನಿಸಲಾಗಿರುವ ಕಾನೂನುಗಳು, ಸೂಕ್ತವಾದ ಒಪ್ಪಿಗೆ ಸೂಚಿಸುವ ಸಾಮರ್ಥ್ಯವಿರುವ ವಯಸ್ಕ ಪುರುಷರ ನಡುವಿನ ಖಾಸಗೀಯ ಸಮಲೈಂಗಿಕ ಕ್ರಿಯೆಗಳನ್ನು ಅಪರಾಧೀಕರಿಸುವ ಮೂಲಕ ಐರೂಪ್ಯ ಮಾನವ ಹಕ್ಕುಗಳ ಅಧಿವೇಶನದ 8ನೇ ಕಲಮನ್ನು ಉಲ್ಲಂಘಿಸುತ್ತವೆ ಎಂಬ ಕಾರಣಕ್ಕೆ ಅವುಗಳನ್ನು ರದ್ದುಪಡಿಸಿತು, ಈ ಕಾನೂನುಗಳು ತಮ್ಮ ಉದ್ದೇಶಿತ ಗುರಿಗೆ ಅನುಗುಣವಾಗಿಲ್ಲವೆಂಬುದನ್ನು ನ್ಯಾಯಾಲಯ ಹೀಗೆ ಗಮನಿಸಿತು:

> " ಪ್ರಮಾಣಬದ್ಧತೆಯ ವಿಚಾರಕ್ಕೆ ಸಂಬಂಧಿಸಿದಂತೆ, ಕಾನೂನನ್ನು ತಿದ್ದದೆ ಚಾಲ್ತಿಯಲ್ಲಿಡುವ ಬಗೆಗಿನ ಇಂತಹ ಸಮರ್ಥನೆಗಳು, ಅರ್ಜಿದಾರರಂತಹ ಸಮಲೈಂಗಿಕ ನಿಲುವುಳ್ಳ ವ್ಯಕ್ತಿಗಳ ಬದುಕಿನ ಮೇಲೆ ಇಂತಹ ಶಾಸನದ ನಿಬಂಧನೆಗಳು ಉಂಟುಮಾಡಬಹುದಾದ ಕೇದಿನ ಪರಿಣಾಮಗಳೆದುರು ಬಲಹೀನವಾಗುತ್ತವೆ. ಇತರರು ಸಮಲೈಂಗಿಕ ಕ್ರಿಯೆಗಳನ್ನು ನಡೆಸಿದಾಗ ಸಮಲೈಂಗಿಕತೆಯನ್ನು

> ಅನೈತಿಕವೆಂದು ಪರಿಗಣಿಸುವ ಸಾರ್ವಜನಿಕರು ಇದರಿಂದ ಆಘಾತ, ಕಿರಿಕಿರಿ ಅಥವಾ ಕದಡುವಿಕೆಗೆ ಒಳಗಾದರೂ, ಅದೊಂದರ ಆಧಾರದಲ್ಲಿ ಒಪ್ಪಿಗೆಯಿರುವ ಮತ್ತು ವಯಸ್ಕರಷ್ಟೇ ಶಾಮೀಲಾಗಿರುವ ಕೃತ್ಯಗಳಿಗೆ ದಂಡನೀಯ ಕಾಯ್ದೆಗಳನ್ನು ಅನ್ವಯಿಸಲು ಸಾಧ್ಯವಿಲ್ಲ"

ಈ.ಸಿ.ಟಿ.ಎಚ್.ಆರ್. ಹೀಗೆಂದು ತೀರ್ಮಾನಿಸಿತು:

> ಒಟ್ಟಾರೆಯಾಗಿ ಹೇಳುವುದಾದರೆ, ಉತ್ತರ ಐರ್ಲ್ಯಾಂಡ್ ಕಾನೂನಿನಡಿಯಲ್ಲಿ ಶ್ರೀಯುತ ಡಡ್ಜಿಯಾನ್ರವರ ಮೇಲೆ ಹೇರಲಾಗಿದ್ದ ನಿರ್ಬಂಧವು ತನ್ನ ವಿಸ್ತಾರ ಮತ್ತು ನೈಜ ಗುಣಾಲಕ್ಷಣಗಳ ದೆಸೆಯಿಂದ, ವಿಧಿಸಲಾಗಿರುವ ಶಿಕ್ಷೆಗಳ ತೀವ್ರತೆಗಿಂತ ಭಿನ್ನವಾಗಿದೆ ಮತ್ತು ಸಾಧಿಸಹೊರಟಿರುವ ಗುರಿಯೊಂದಿಗೆ ಹೊಂದಾಣಿಕೆಯಾಗುತ್ತಿಲ್ಲ.

ನಂತರ, ನಾರಿಸ್ v. ಐರ್ಲೆಂಡ್ ಪ್ರಕರಣದಲ್ಲಿ, ಅರ್ಜಿದಾರರು, ಒಪ್ಪಿಗೆಯಿರುವ ವಯಸ್ಕ ಪುರುಷರ ನಡುವಿನ ಕೆಲ ಸಮಲೈಂಗಿಕ ಕ್ರಿಯೆಗಳನ್ನು ಅಪರಾಧೀಕರಿಸುವ ಐರ್ಲ್ಯಾಂಡ್, ಖಾಸಗೀ ಮತ್ತು ಕೌಟುಂಬಿಕ ಜೀವನದೆಡೆಗಿನ ಗೌರವದ ಹಕ್ಕನ್ನು ರಕ್ಷಿಸುವ, ಐರೋಪ್ಯ ಮಾನವ ಹಕ್ಕುಗಳ ಅಧಿವೇಶನದ 8ನೇ ಕಲಮನ್ನು ಉಲ್ಲಂಘಿಸುತ್ತಿದೆ ಎಂದು ತಕರಾರು ಸಲ್ಲಿಸಿದರು. ಈ.ಸಿ.ಟಿ.ಎಚ್.ಆರ್., ಸದರಿ ಕಾನೂನು, ಅದು ಅನುಷ್ಠಾನಗೊಂಡಿದೆಯೊ ಇಲ್ಲವೋ ಎಂಬುದರ ಹೊರತಾಗಿ, 8ನೇ ಕಲಮನ್ನು ಉಲ್ಲಂಘಿಸಿದೆ ಎಂದು ಹೇಳಿತು:

> ನಿರ್ದಿಷ್ಟ ಪ್ರಕರಣಗಳ ವರ್ಗದ ಮೇಲೆ ಬಹುಕಾಲದವರೆಗೆ ಜಾರಿಯಾಗದಿದ್ದರೂ ಶಾಸನ ಪುಸ್ತಕದಲ್ಲಿ ಉಳಿಯುವ ಕಾನೂನೊಂದನ್ನು, ಕಾರ್ಯನೀತಿಗಳೇನಾದರೂ ಬದಲಾದರೆ, ಅಂತಹ ಪ್ರಕರಣಗಳಲ್ಲಿ ಯಾವುದೇ ಸಮಯದಲ್ಲೂ ಮತತ್ತೊಮ್ಮೆ ಅನ್ವಯಿಸಿಬಿಡಬಹುದು. ಹೀಗಾಗಿ ಅರ್ಜಿದಾರರು ಸದರಿ ಶಾಸನದಿಂದ "ನೇರವಾಗಿ ಪ್ರಭಾವಿತರಾಗುವ ಅಪಾಯವನ್ನು" ಎದುರಿಸುತ್ತಾರೆ ಎಂದು ಹೇಳಬಹುದು

ಈ ನಿರ್ಣಯವನ್ನು , ಸಮಲೈಂಗಿಕ ವರ್ತನೆಯನ್ನು ದಂಡನೆಗೆ ಒಳಪಡಿಸುವ ಸೈಪ್ರಸ್ ನ ಕ್ರಿಮಿನಲ್ ಸಂಹಿತೆಯು, ಅರ್ಜಿದಾರರ ಖಾಸಗೀ ಜೀವನದಲ್ಲಿ ಅಸಮಂಜಸವಾದ ಹಸ್ತಕ್ಷೇಪವನ್ನು ಮಾಡುತ್ತದೆ ಎಂಬ ತಕರಾರು ವ್ಯಕ್ತವಾದ **ಮೊಡಿನೋಸ್ v. ಸೈಪ್ರಸ್**[244] ಪ್ರಕರಣ ದಲ್ಲಿ ಬೆಂಬಲಿಸಲಾಯಿತು .

107. ಡಡ್ಜಿಯಾನ್ ಪ್ರಕರಣದ ತೀರ್ಪು ಹೊರಬಿದ್ದು ಐದು ವರ್ಷಗಳಾದ ನಂತರ, **ಬೋವರ್ಸ್ ವಿ. ಹಾರ್ಡ್ವಿಕ್ ("ಬೋವರ್ಸ್")** ಪ್ರಕರಣದಲ್ಲಿ ಅಮೇರಿಕೆಯ ಸರ್ವೋಚ್ಛ ನ್ಯಾಯಾಲಯವು, "ಗುದ ಸಂಭೋಗದ" ಕಾನೂನುಗಳು ಅಮೆರಿಕನ್ ಇತಿಹಾಸದ ಪ್ರಮುಖ ಭಾಗವಾಗಿದ್ದವು ಮತ್ತು ಅವು ಸಂವಿಧಾನ ಉಲ್ಲಂಘಿಸುವುದಿಲ್ಲ ಎಂದು ನುಡಿಯಿತು. ಬೋವರ್ಸ್ ಪ್ರಕರಣದಲ್ಲಿ ಸರ್ವೋಚ್ಛ ನ್ಯಾಯಾಲಯ ಮಾಡಿದ ತರ್ಕಕ್ಕೂ, ಡಡ್ಜಿಯಾನ್ ಪ್ರಕರಣದಲ್ಲಿ ಐ.ಸಿ.ಸಿ.ಪಿ.ಆರ್ ಮಾಡಿದ ತರ್ಕಕ್ಕೂ ಸ್ಪಷ್ಟವಾಗಿ ಭಿನ್ನತೆಯಿತ್ತು. ಬೋವರ್ಸ್ ಪ್ರಕರಣದಲ್ಲಿ, ಸರ್ವೋಚ್ಛ ನ್ಯಾಯಾಲಯವು ಸಮಸ್ಯೆಯು ಖಾಸಗೀತನದ ಹಕ್ಕಿಗೆ ಸಂಬಂಧಿಸಿದ್ದು ಎಂಬುದನ್ನು ಸ್ವೀಕರಿಸಲು ನಿರಾಕರಿಸಿತು. ಬದಲಿಗೆ, ನ್ಯಾಯಲಾಯವು ಪ್ರಕರಣ "ಸಮಲೈಂಗಿಕರಿಗಿರುವ ಗುದಸಂಭೋಗದಲ್ಲಿ ತೊಡಗುವ  ಮೂಲಭೂತ ಹಕ್ಕಿಗೆ" ಸಂಬಂಧಿಸಿದ್ದು ಆ ಹಕ್ಕನ್ನು ಅಮೇರಿಕೆಯ ಸಂವಿಧಾನ ರಕ್ಷಿಸುವುದಿಲ್ಲ ಎಂದು ಹೇಳಿತು.

ಹದಿನೇಳು ವರ್ಷಗಳ ನಂತರ, ಅಮೇರಿಕೆಯ ಸರ್ವೋಚ್ಛ ನ್ಯಾಯಾಲಯವು, **ಲಾರೆನ್ಸ್ v. ಟೆಕ್ಸಾಸ್**[245] **("ಲಾರೆನ್ಸ್")** ಪ್ರಕರಣದ ತೀರ್ಪಿನ ಮೂಲಕ ದೇಶದಲ್ಲಿ ಎಲ್.ಜಿ.ಬಿ.ಟಿ ಹಕ್ಕುಗಳಿಗೆ ಸಾಂವಿಧಾನಿಕ ಅಡಿಪಾಯ ಹಾಕಿಕೊಟ್ಟಿತು. ಲಾರೆನ್ಸ್ ಪ್ರಕರಣದಲ್ಲಿ, ಅರ್ಜಿದಾರರನ್ನು ಸಮಲೈಂಗಿಕ ಒಡನಾಟದಲ್ಲಿ ತೊಡಗುವುದನ್ನು, ಒಪ್ಪಿಗೆಯಿದ್ದ ಹೊರತಾಗಿಯೂ, ನಿಷೇಧಿಸುವ ಟೆಕ್ಸಾಸ್ ನ ಕಾನೂನಿನ ಅಡಿಯಲ್ಲಿ ಬಂಧಿಸಲಾಯಿತು. ಆ ಕಾನೂನಿನ ಮಾನ್ಯತೆಯುನ್ನು ಪರಿಶೀಲಿಸಲಾಯಿತು.

ಡಡ್ಜಿಯಾನ್ ಪ್ರಕರಣವನ್ನು ಉಲ್ಲೇಖಿಸಿದ ಯು.ಎಸ್ ಸರ್ವೋಚ್ಛ ನ್ಯಾಯಾಲಯವು, ಆ ಕಾನೂನು ಸಂವಿಧಾನದ ಹದಿನಾಲ್ಕನೇ ತಿದ್ದುಪಡಿಯ ಡ್ಯೂ ಪ್ರಾಸೆಸ್ ಷರತ್ತನ್ನು ಉಲ್ಲಂಘಿಸುತ್ತಿದೆ ಎಂಬ ಕಾರಣಕ್ಕೆ ಅದನ್ನು ರದ್ದುಪಡಿಸಿತು. ಬೋವರ್ಸ್ ಪ್ರಕರಣದ ತೀರ್ಪನ್ನು, ತಳ್ಳಿಹಾಕಿದ ನ್ಯಾಯಮೂರ್ತಿ ಕೆನಡಿಯವರು ಬಹುಮತದ ಪರವಾಗಿ

[244] Application No. 15070/89,16 EHRR 485

[245] 539 U.S. 558 (2003).

ಮಾತನಾಡುತ್ತಾ, ಲಾರೆನ್ಸ್ ಪ್ರಕರಣದ ಬಹುಮತದ ನಿರ್ಧಾರದ ಭಾಗವಾಗಿದ್ದ ನ್ಯಾ. ಸ್ಟೀವನ್ಸ, ಬೋವರ್ಸ್ ಪ್ರಕರಣದಲ್ಲಿ ಮಂಡಿಸಿದ್ದ ಭಿನ್ನ ನಿಲುವಿನ ತೀರ್ಪನ್ನು ಎತ್ತಿಹಿಡಿದರು :

> ನಮ್ಮ ಹಿಂದಿನ ಪ್ರಕರಣಗಳು ಎರಡು ಪ್ರಸ್ತಾವನೆಗಳನ್ನು ಅತ್ಯಂತ ಸ್ಪಷ್ಟಪಡಿಸುತ್ತವೆ. ಮೊದಲನೆಯದಾಗಿ, ಆಳುತ್ತಿರುವ ಬಹುಸಂಖ್ಯಾತರು ನಿರ್ದಿಷ್ಟ ಕ್ರಿಯೆಯೊಂದನ್ನು ಅನೈತಿಕವೆಂದು ಪರಿಗಣಿಸಿವೆ ಎಂಬ ವಿಚಾರವವು ಆ ಕ್ರಿಯೆಯನ್ನು ನಿರ್ಬಂಧಿಸುವ ಕಾನುನನ್ನು ಎತ್ತಿಹಿಡಿಯುವುದಕ್ಕೆ ಸಮಂಜಸವಾದ ಕಾರಣವಲ್ಲ. ಇತಿಹಾಸದಿಂದಾಗಲೀ ಸಂಪ್ರದಾಯದಿಂದಾಗಲೀ, ವರ್ಣ ಸಂಕರವನ್ನು ನಿರ್ಬಂಧಿಸುವ ಕಾನೂನನ್ನು ಸಾಂವಿಧಾನಿಕ ಆಕ್ರಮಣದಿಂದ ಪಾರುಮಾಡಲು ಸಾಧ್ಯವಿಲ್ಲ. ಎರಡನೆಯದಾಗಿ, ಮದುವೆಯಾದ ವ್ಯಕ್ತಿಗಳು ತಮ್ಮ ದೈಹಿಕ ಸಂಬಂಧದ ಅನ್ಯೋನ್ಯತೆಗಳ ವಿಚಾರದಲ್ಲಿ ತೆಗೆದುಕೊಳ್ಳುವ ವ್ಯಕ್ತಿಗತ ನಿರ್ಧಾರಗಳಿಗೆ ಸಂತಾನವನ್ನು ಹಡೆಯುವ ಉದ್ದೇಶವಿಲ್ಲದಿದ್ದರೂ, ಅವುಗಳು ಹದಿನಾಲ್ಕನೇ ತಿದ್ದುಪಡಿಯ ಡ್ಯೂ ಪ್ರಾಸೆಸ್ ಕ್ಲಾಸ್‌ನಿಂದ ರಕ್ಷಿಸಲ್ಪಟ್ಟಿರುವ ಸ್ವಾತಂತ್ರ್ಯದ ಒಂದು ಸ್ವರೂಪವಾಗಿವೆ. ಅಲ್ಲದೇ ಈ ರಕ್ಷಣೆಯು ವಿವಾಹಿತ ಮತ್ತು ಅವಿವಾಹಿತ ವಕ್ತಿಗಳ ಖಾಸಗೀ ಆಯ್ಕೆಗಳಿಗೆ ಅನ್ವಯಿಸುತ್ತದೆ.

ಈ ಪ್ರಕರಣವು ಒಪ್ಪಿಗೆಯಿರುವ ವಯಸ್ಕರ ಖಾಸಗೀ, ವೈಯಕ್ತಿಕ ಸಂಬಂಧಗಳ ಕುರಿತಾದುದು ಎಂಬುದನ್ನು ಗಮನಿಸಿದ ಅವರು, ಪ್ರಶ್ನಿಸಲ್ಪಟ್ಟಿದ್ದ ಕಾನೂನುಗಳು ಸರ್ಕಾರದ ಯಾವುದೇ ಕಾನೂನುಬದ್ಧ ಹಿತಾಸಕ್ತಿಯನ್ನು ಹೊಂದಿಲ್ಲ ಎಂದು ನುಡಿದರು.

> ಪ್ರಸ್ತುತ ಪ್ರಕರಣ ಅಪ್ರಾಪ್ತರನ್ನು ಒಳಗೊಂಡಿಲ್ಲ, ಹಾಗೆಯೇ ಗಾಯಗೊಂಡವರು ಅಥವಾ ಬಲವಂತಕ್ಕೆ ಒಳಗಾದವರು ಅಥವಾ ಸುಲಭವಾಗಿ ನಿರಾಕರಿಸುವುದು ಸಾಧ್ಯವಿಲ್ಲದಿರುವ ಸಂಬಂಧಗಳಲ್ಲಿ

ಇರುವವರನ್ನೂ ಒಳಗೊಂಡಿಲ್ಲ. ಈ ಪ್ರಕರಣ ಸಾರ್ವಜನಿಕವಾಗಿ ನಡೆದಿಲ್ಲ, ವ್ಯಭಿಚಾರವನ್ನೂ ಒಳಗೊಂಡಿಲ್ಲ. ಅಲ್ಲದೇ ಈ ಪ್ರಕರಣ ಸಮಲೈಂಗಿಕರು ಹೊಂದ ಬಯಸುವ ಸಂಬಂಧಕ್ಕೆ ಸರ್ಕಾರ ಶಿಷ್ಟಾಚಾರದ ಮಾನ್ಯತೆಯನ್ನು (ಉದಾ: ಮದುವೆಯಾಗುವ ಅಥವಾ ನಾಗರಿಕ ಸಮಾಗಮ ಎಂದು ನೋಂದಣಿಗೊಳಿಸುವ ಹಕ್ಕು) ನೀಡಬೇಕಿರುವ ಸಂದರ್ಭವನ್ನೂ ಒಳಗೊಂಡಿಲ್ಲ. ಈ ಪ್ರಕರಣ ಖಂಡಿತವಾಗಿ ಪರಸ್ಪರರ ಸಂಪೂರ್ಣ ಒಪ್ಪಿಗೆಯಿಂದ, ಸಮಲೈಂಗಿಕ ಜೀವನ ಶೈಲಿಯಲ್ಲಿ ಸಾಮಾನ್ಯವಾದ ಲೈಂಗಿಕ ಕ್ರಿಯೆಗಳಲ್ಲಿ ತೊಡಗಿದ್ದ ಇಬ್ಬರು ವಯಸ್ಕರನ್ನು ಒಳಗೊಂಡಿದೆ. ತಮ್ಮ ಖಾಸಗೀ ಜೀವನದ ಗೌರವ ಕಾಪಾಡುವುದು ಅರ್ಜಿದಾರ ಹಕ್ಕು. ಅವರ ಖಾಸಗೀ ಲೈಂಗಿಕ ಕ್ರಿಯೆಗಳನ್ನು ಪಾತಕವೆಂದು ಕರೆದು ಅವರ ಅಸ್ತಿತ್ವವನ್ನು ಅವಮಾನಿಸುವ ಅಥವಾ ಅವರ ಭಾಗ್ಯವನ್ನು ನಿಯಂತ್ರಿಸುವ ಕೆಲಸವನ್ನು ಸರ್ಕಾರ ಮಾಡಬಾರದು. ಡ್ಯೂ ಪ್ರಾಸೆಸ್ ಕ್ಲಾಸ್ ನ ಅಡಿಯಲ್ಲಿರುವ ಸ್ವಾತಂತ್ರ್ಯದ ಹಕ್ಕು ಅವರಿಗೆ ಸರ್ಕಾರದ ಯಾವುದೇ ಹಸ್ತಕ್ಷೇಪವಿಲ್ಲದೇ, ತಮ್ಮ ಕ್ರಿಯೆಗಳಲ್ಲಿ ತೊಡಗುವ ಸಂಪೂರ್ಣ ಸ್ವಾತಂತ್ರ್ಯವನ್ನು ನೀಡುತ್ತದೆ. ಸರ್ಕಾರ ಪ್ರವೇಶಿಸುವಂತಿಲ್ಲದ ವೈಯಕ್ತಿಕ ಸ್ವಾತಂತ್ರ್ಯದ ಪರಿಧಿಯೊಂದನ್ನು ನಿರ್ಮಿಸುವುದಾಗಿ ಸಂವಿಧಾನ ವಚನವನ್ನಿತ್ತಿದೆ. ಮೇಲ್ಕಂಡ ಕ್ಯಾಸೀ ಪ್ರಕರಣ, ಸಂಖ್ಯೆ 847. ನಲ್ಲಿ ಟೆಕ್ಸಸ್ ಶಾಸನವು ವ್ಯಕ್ತಿಯೊಬ್ಬರ ವೈಯಕ್ತಿಕ ಮತ್ತು ಖಾಸಗೀ ಬದುಕಿನಲ್ಲಿ ಮೂಗುತೂರಿಸುವುದನ್ನು ಸಮರ್ಥಿಸಿಕೊಳ್ಳುವ ಯಾವುದೇ ಬಗೆಯ ನೈತಿಕವಾದ ಸರ್ಕಾರೀ ಉದ್ದೇಶವನ್ನೂ ಬೆಂಬಲಿಸುವುದಿಲ್ಲ

108. ಅಪರಾಧೀಕರಿಸುವ ಕಾನೂನುಗಳನ್ನು ಜಾರಿಗೊಳಿಸಿದಾಗ ಉಂಟಾಗುವ ಹಾನಿಯನ್ನು ನ್ಯಾ. ಕೆನಡಿ ಗುರುತಿಸಿದರು:

> ಸಮಲೈಂಗಿಕ ನಡವಳಿಕೆಯನ್ನು ಸರ್ಕಾರದ ಕಾನೂನಿನ ಮೂಲಕ ಅಪರಾಧವೆಂದು ಘೋಷಿಸಿದಾಗ, ಅಂತಹ ಘೋಷಣೆಯು, ಸಮಲೈಂಗಿಕ ವ್ಯಕ್ತಿಗಳನ್ನು ಸಾರ್ವಜನಿಕ ಮತ್ತು ಖಾಸಗೀ ವಲಯಗಳಲ್ಲಿ ತಾರತಮ್ಯಕ್ಕೊಳಪಡಿಸುವುದಕ್ಕೆ ಆಹ್ವಾನದಂತೆ ಕೆಲಸಮಾಡುತ್ತದೆ.

ಈ ಪ್ರಕಾರವಾಗಿ ನ್ಯಾಯಾಲಯವು "ಒಂದೇ ಲಿಂಗದ ವ್ಯಕ್ತಿಗಳ ನಡುವಿನ ಭಿನ್ನವಾದ ಲೈಂಗಿಕ ಸಂಭೋಗವನ್ನು" ನಿರ್ಬಂಧಿಸುವ ಟೆಕ್ಸಾಸ್ ಕಾನೂನನ್ನು ನಿಷೇಧಿಸಿ (ಜೊತೆಗೆ ಅಮೇರಿಕ ಮತ್ತು ಪೋರ್ಟೋ ರಿಕೋದ 13 ರಾಜ್ಯಗಳಲ್ಲಿನ ಇದೇ ರೀತಿಯ ಕಾನೂನುಗಳನ್ನು ಕೂಡಾ) ಹೀಗೆಂದಿತು:

> ಬೋವರ್ಸ್ ಮತ್ತು ಈ ಪ್ರಕರಣದಲ್ಲಿ ಬಳಕೆಯಾಗಿರುವ ಕಾನೂನುಗಳು, ನಿರ್ದಿಷ್ಟ ಲೈಂಗಿಕ ಕ್ರಿಯೆಯನ್ನು ನಿರ್ಬಂಧಿಸುವುದನ್ನು ಬಿಟ್ಟು ಬೇರೇನನ್ನೂ ಮಾಡದ ಶಾಸನ ಎಂಬುದು ಸ್ಪಷ್ಟವಿದೆ. ಆದಾಗ್ಯೂ, ಅವುಗಳ ಶಿಕ್ಷೆ ಮತ್ತು ಉದ್ದೇಶಗಳು ದೂರಗಾಮಿ ಪರಿಣಾಮಗಳನ್ನು ಹೊಂದಿವೆ ಮತ್ತು ಅತ್ಯಂತ ಖಾಸಗೀ ಮಾನವ ಕೃತ್ಯ, ಎಂದರೆ ಲೈಂಗಿಕ ನಡವಳಿಕೆ,ಮತ್ತು ಅತ್ಯತಂತ ಖಾಸಗೀ ಸ್ಥಳ, ಎಂದರೆ 'ಮನೆ'ಗಳನ್ನು ಪ್ರಭಾವಿಸುತ್ತವೆ. ಶಾಸನಗಳು, ಅಪರಾಧಿಗಳಂತೆ ಶಿಕ್ಷೆಗೊಳಗಾಗದೆ ಆಯ್ಕೆ ಮಾಡುವ ವ್ಯಕ್ತಿಗಳ ಸ್ವಾತಂತ್ರ್ಯದ ವ್ಯಾಪ್ತಿಯಲ್ಲೇ ಬರುವ, ಖಾಸಗೀ ಸಂಬಂಧವೊಂದನ್ನು ನಿಯಂತ್ರಿಸಲು ಯತ್ನಿಸುತ್ತವೆ, ಇಲ್ಲಿ ಆ ಸಂಬಂಧ ಕಾನೂನು ಮಾನ್ಯತೆಗೆ ಅರ್ಹವೋ ಅಲ್ಲವೋ ಎಂಬುದು ಮುಖ್ಯವಲ್ಲ. (ಒತ್ತು ನೀಡಲಾಗಿದೆ)

109. ಟ್ಯೂನೆನ್ ಪ್ರಕರಣದಲ್ಲಿ, ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಸಮಿತಿಯು ಖಾಸಗೀಯಾದ, ವಯಸ್ಕರ ನಡುವಿನ ಒಪ್ಪಿಗೆಯ ಸಮಲೈಂಗಿಕ ಸಂಬಂಧಗಳನ್ನು ಅಪರಾಧೀಕರಿಸುವ ಕಾನೂನುಗಳು, ಖಾಸಗೀತನದ ಹಕ್ಕು ಮತ್ತು ತಾರತಮ್ಯದ ವಿರುದ್ಧದ ಹಕ್ಕನ್ನು ಉಲ್ಲಂಘಿಸುತ್ತವೆ ಎಂದು ನುಡಿಯಿತು. ಟ್ಯಾಸ್ಮೆನಿಯನ್ ಗೇ ಲಾ ರಿಫಾರ್ಮ್ ಗ್ರೂಪ್ ನ ಸದಸ್ಯರಾದ ಶ್ರೀ ಟೂನೆನ್ ಅವರು 'ಅಸಹಜ ಲೈಂಗಿಕ ಸಂಭೋಗ', ಮತ್ತು 'ನಿಸರ್ಗದ ವಿರುದ್ಧದ ಸಂಭೋಗ' ಮತ್ತು 'ಗಂಡು ವ್ಯಕ್ತಿಗಳ ನಡುವಿನ ಅಸಭ್ಯ

ಕ್ರಿಯೆ'ಯನ್ನು ಅಪರಾಧವೆಂದು ಪರಿಗಣಿಸುವ ಟ್ಯಾಸ್ಮೆನಿಯನ್ ಕಾನೂನಿನ ಬಗ್ಗೆ ಸಮಿತಿಗೆ ದೂರು ನೀಡಿದ್ದರು. ಈ ಕಾನೂನು ಪೋಲೀಸ್ ಅಧಿಕಾರಿಗಳಿಗೆ ತನ್ನ ಖಾಸಗೀ ಜೀವನದ ವೈಯಕ್ತಿಕ ಅಂಶಗಳ ಬಗೆಗೆ ತನಿಖೆ ಮಾಡಲು ಅವಕಾಶ ಮಾಡಿಕೊಡುತ್ತದೆ ಮತ್ತು ತನ್ನ ಮನೆಯ ಖಾಸಗೀ ವಾತಾವರಣದಲ್ಲಿ ತನ್ನ ಬಹುಕಾಲದ ಸಂಗಾತಿಯೊಂದಿಗೆ ಲೈಂಗಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರ ಬಗೆಗೆ ಅವರಿಗೆ ಅನುಮಾನವಿದ್ದರೆ ತನ್ನನ್ನು ಬಂಧಿಸಲು ಅವಕಾಶ ಮಾಡಿಕೊಡುತ್ತದೆ ಎಂದು ಅವರು ಹೇಳಿದರು. ಶ್ರೀ ಟ್ಯೂನೆನ್ ಈ ಕಾನೂನುಗಳನ್ನು ಅವು 2(1)ನೇ ಕಲಮು, 17ನೇ ಕಲಮು ಮತ್ತು 26ನೇ ಕಲಮನ್ನು , ಉಲ್ಲಂಘಿಸುತ್ತವೆ ಎಂಬ ಆಧಾರದಲ್ಲಿ ಪ್ರಶ್ನಿಸಿದರು:

> ಈ ನಿಬಂಧನೆಗಳು ಉದ್ಯೋಗದಲ್ಲಿ ತಾರತಮ್ಯ, ಸತತ ಛೀದರಿಕೆ, ಮಾನಹಾನಿ, ದೈಹಿಕ ಹಿಂಸೆಯ ಬೆದರಿಕೆ ಮತ್ತು ಮೂಲಭೂತ ಪ್ರಜಾತಾಂತ್ರಿಕ ಹಕ್ಕುಗಳ ಉಲ್ಲಂಘನೆಯ ಪರಿಸ್ಥಿತಿಗಳನ್ನು ನಿರ್ಮಿಸಿವೆ

ಅಪರಾಧೀಕರಣವನ್ನು ಸಾರ್ವಜನಿಕ ಆರೋಗ್ಯ ಅಥವಾ ನೈತಿಕತೆಯ ರಕ್ಷಣೆ ಎಂಬ ಆಧಾರದಲ್ಲಿ "ಸಮಂಜಸ" ಎಂದು ಸಮರ್ಥಿಸಿಕೊಳ್ಳುವ ವಾದವನ್ನು ತಿರಸ್ಕರಿಸಿದ ಸಮಿತಿಯು, ಅಂತಹ ಸಂದರ್ಭಗಳಲ್ಲಿ ಕ್ರಿಮಿನಲ್ ಕಾನೂನಿನ ಬಳಕೆಯು ಅಗತ್ಯವೂ ಸಮಂಜಸವೂ ಆಗಿರುವುದಿಲ್ಲ ಎಂದು ತಿಳಿಸಿತು:

> ಟಾಸ್ಮೇನಿಯಾದ ಅಧಿಕಾರಿಗಳ ಸಾರ್ವಜನಿಕ ಆರೋಗ್ಯದ ಕುರಿತಾದ ಅಭಿಪ್ರಾಯ ವಿಚಾರದಲ್ಲಿ,, ಸಮಲೈಂಗಿಕ ಕೃತ್ಯಗಳ ಅಪರಾಧೀಕರಣವನ್ನು ಏಡ್ಸ್/ ಎಚ್.ಐ.ವಿಯ ಹರಡುವಿಕೆಯನ್ನು ತಡೆಗಟ್ಟುವ ಸಮಂಜಸ ವಿಧಾನ ಅಥವಾ ಸರಿಯಾದ ಕ್ರಮ ಎಂದು ಪರಿಗಣಿಸಲು ಆಗುವುದಿಲ್ಲ ಎಂಬುದನ್ನು ಸಮಿತಿ ಗಮನಿಸಿದೆ.

ಸದರಿ ಶಾಸನವು ಐ.ಸಿ.ಸಿ.ಪಿ.ಆರ್ ನ 7ನೇ ಕಲಮನ್ನು ಉಲ್ಲಂಘಿಸುತ್ತದೆ ಎಂದು ತೀರ್ಮಾನಿಸಿದ ನ್ಯಾಯಾಲಯ, ಹೀಗೆಂದಿತು:

> ಖಾಸಗೀತನದಲ್ಲಿ ನಡೆಯುವ ವಯಸ್ಕರ ಒಪ್ಪಿಗೆಯ ಲೈಂಗಿಕ ಚಟುವಟಿಕೆಗಳು "ಖಾಸಗೀತನ" ಎಂಬ ತತ್ವದಡಿಯಲ್ಲಿ ಬರುತ್ತವೆ ಎಂಬುದು ನಿರ್ವಿವಾದ ಮತ್ತು ಶ್ರೀಯುತ ಟ್ಯೂನೆನ್ ರವರು ಸದ್ಯದ ಪರಿಸ್ಥಿತಿಯಲ್ಲಿ ಟಾಸ್ಮೇನಿಯನ್ ಕಾನೂನುಗಳ ಮುಂದುವರೆದ ಅಸ್ತಿತ್ವದ ದೆಸೆಯಿಂದ ನಿಜವಾಗಿಯೂ ಬಾಧಿಸಲ್ಪಟ್ಟಿದ್ದಾರೆ ಎಂಬುದರಲ್ಲಿ ಎರಡು ಮಾತಿಲ್ಲ

110. **ಎಕ್ಸ್ v. ಕೊಲಂಬಿಯ**[246] ಪ್ರಕರಣದಲ್ಲಿ, ಸಮಿತಿಯು **ಟ್ಯೂನೆನ್** ಪ್ರಕರಣದ ತೀರ್ಪಿನಿಂದ ಯಾವ ರೀತಿಯಲ್ಲೂ "ಪ್ರಪಂಚದ ದಕ್ಷಿಣಭಾಗದವರು ಹೊರತುಪಡುವುದಿಲ್ಲ[247] " ಎಂದು ಸ್ಪಷ್ಟಪಡಿಸಿತು. ಅವಿವಾಹಿತ ಸಮಲೈಂಗಿಕ ಮತ್ತು ಭಿನ್ನಲೈಂಗಿಕ ಜೋಡಿಗಳನ್ನು ಸಮಾನವಾಗಿ ನಡೆಸಿಕೊಳ್ಳುವ ಅಗತ್ಯವವನ್ನು ಸೂಚಿಸಿದ ಬಹುಮತದ ನಿರ್ಧಾರದ ಬಗೆಗೆ ಭಿನ್ನಾಭಿಪ್ರಾಯ ವ್ಯಕ್ತಪಡಿಸಿದ ಈಜಿಪ್ಟಿನ ಮತ್ತು ಟ್ಯುನೀಶಿಯಾದ ಸದಸ್ಯರು, ಟೂನೆನ್ ಪ್ರಕರಣದಲ್ಲಿ ಪಾಲಿಸಲಾದ ತತ್ವವನ್ನು ಒಪ್ಪಿಕೊಂಡರು:

> "ಲೈಂಗಿಕ ನಿಲುವನ್ನಾಧರಿಸಿದ ತಾರತಮ್ಯವು 17ನೇ ಕಲಮನ್ನು ಉಲ್ಲಂಘಿಸುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ.....ಸಮಿತಿಯು.. ಸಮಂಜಸವಾಗಿ ಮತ್ತು ಪದೇಪದೇ ಹೇಳಿರುವಂತೆ ಖಾಸಗೀತನದೊಳಗಿನ ನಿರಂಕುಶ ಮತ್ತು ಕಾನೂನುಬಾಹಿರ ಹಸ್ತಕ್ಷೇಪದ ವಿರುದ್ಧದ ರಕ್ಷಣೆಯು, ಒಪ್ಪಿಗೆಯ ವಯಸ್ಕರ ನಡುವಿನ ಸಮಲೈಂಗಿಕ ಸಂಬಂಧಗಳಿಗಾಗಿ ವ್ಯಕ್ತಿಗಳಿಗೆ ಕಿರುಕುಳ ಮತ್ತು ಶಿಕ್ಷೆ ನೀಡುವುದನ್ನು ನಿರ್ಬಂಧಿಸುತ್ತದೆ "

111. ಈಕ್ವೆಡಾರ್ ನಾ ಸಾಂವಿಧಾನಿಕ ನ್ಯಾಯಮಂಡಳಿಯು ಪ್ರಪಂಚದ ದಕ್ಷಿಣ ಭಾಗದಲ್ಲಿ ಗುದ ಸಂಭೋಗಕ್ಕೆ ಸಂಬಂಧಿಸಿದ ಕಾನೂನುಗಳನ್ನು ನಿರಪರಾಧೀಕರಿಸಿದ ಮೊತ್ತಮೊದಲ ಸಾಂವಿಧಾನಿಕ

---

[246] Communication No. 1361/2005.

[247] Robert Wintemute, "Same-Sex Love and Indian Penal Code §377: An Important Human Rights Issue for India" National University of Juridical Sciences Law Review, (2011).

ನ್ಯಾಯಾಲಯವಾಗಿದೆ[248]. "ಅತ್ಯಾಚಾರವೆಂದು ಪರಿಗಣಿಸಲು ಸಾಧ್ಯವಾಗದ ಸಮಲೈಂಗಿಕತೆ"ಯನ್ನು ದಂಡಿಸುವಂತಹ ದಂಡ ಸಂಹಿತೆಯ 516ನೇ ಕಲಮಿನ ಮಾನ್ಯತೆಯನ್ನು ಮಂಡಳಿಯೆದುರು ಪ್ರಶ್ನಿಸಲಾಯಿತು. ಮಂಡಳಿಯು "ಇಂತಹ ಅಸಹಜ ನಡವಳಿಕೆಗೆ ವೈದ್ಯಕೀಯ ಚಿಕಿತ್ಸೆ ಒದಗಿಸಬೇಕು ... ಸೆರೆಮನೆವಾಸವು, ಈ ವೈಕಲ್ಯದ ಬೆಳವಣಿಗೆಗೆ ಸೂಕ್ತವಾದ ವಾತಾವರಣವನ್ನು ಸೃಷ್ಟಿಸುತ್ತದೆ" ಎಂಬ ತರ್ಕಮಾಡಿತು. ಸಮಲೈಂಗಿಕ ಚಟುವಟಿಕೆ ವೈದ್ಯಕೀಯ ಚಿಕಿತ್ಸೆಯ ಅಗತ್ಯವಿರುವ 'ಅಸಹಾಜ ನಡವಳಿಕೆ' ಎಂಬಾ ಮಂಡಳಿಯ ತರ್ಕದಲ್ಲಿ ಗಂಭೀರವಾದ ಸಮಸ್ಯೆಗಳಿವೆ. ಆ ಕಲ್ಪನೆಯು ವಾಸ್ತವದಲ್ಲಿ ನೆಲೆಯಿಲ್ಲದಂತಹುದು ಮತ್ತು ಸ್ವಾತಂತ್ರ್ಯ ಮತ್ತು ಘನತೆಯನ್ನು ರಕ್ಷಿಸುವ ಸಂವಿಧಾನಾತ್ಮಕ ನ್ಯಾಯಾಲಯ ಒಪ್ಪಿಕೊಂಡಿರುವ ಈ ಸಿದ್ಧಾಂತ ತಪ್ಪಾದುದು. ಹೀಗಿದ್ದರೂ ಕೊನೆಯಾದಾಗಿ, ಮಂಡಳಿಯು ದಂಡ ಸಂಹಿತೆಯ 516ನೇ ಕಲಮಿನ ಮೊದಲ ವಾಕ್ಯವನ್ನು ಈ ರೀತಿ ತೆಗೆದು ಹಾಕಿತು:

> " ಎಲ್ಲವನ್ನೂ ಮೀರಿ ಸಮಲೈಂಗಿಕರು ಮಾನವ ಹಕ್ಕುಗಳನ್ನು ಹೊಂದಿರುವವರು ಮತ್ತು ಹಾಗಾಗಿ ಆ ಹಕ್ಕುಗಳನ್ನು ಸಂಪೂರ್ಣ ಸಮಾನತೆಯ ಪರಿಸ್ಥಿತಿಗಳಲ್ಲಿ ಚಲಾಯಿಸುವ ಹಕ್ಕನ್ನು ಹೊಂದಿದ್ದಾರೆ ... ಎಂದರೆ, ಎಲ್ಲಿಯವರೆಗೂ ಅವರು ತಮ್ಮ ನಡವಳಿಕೆಯನ್ನು ಪ್ರಕಟಪಡಿಸುವಾಗ ಇತರರ ಹಕ್ಕುಗಳಿಗೆ ಹಾನಿಮಾಡುವುದಿಲ್ಲವೋ, ಅಲ್ಲಿವರೆಗೆ ಅವರ ಹಕ್ಕುಗಳು ಸಮಾನವಾದ ಕಾನೂನು ರಕ್ಷಣೆಯನ್ನು ಅನಂದಿಸುತ್ತವೆ, ಇದು ಎಲ್ಲ ವ್ಯಕ್ತಿಗಳಿಗೆ ಅನ್ವಯಿಸುತ್ತದೆ.

112. ಸಮಲೈಂಗಿಕ ವಯಸ್ಕರ ಜೀವನದ ಮೇಲೆ ಗುದಸಂಭೋಗಕ್ಕೆ ಸಂಬಂಧಿಸಿದ ಕಾನೂನುಗಳು ಬೀರುವ ಪ್ರತಿಕೂಲ ಪರಿಣಾಮವನ್ನು ದಕ್ಷಿಣ ಆಫ್ರಿಕಾದ ಸಂವಿಧಾನಾತ್ಮಕ ನ್ಯಾಯಾಲಯವು **ಗೇ ಮತ್ತು ಲೆಸ್ಬಿಯನ್ ಸಮಾನತೆಯ ರಾಷ್ಟ್ರೀಯ ಒಕ್ಕೂಟ v. ಕಾನೂನು ಮಂತ್ರಿ ("ರಾಷ್ಟ್ರೀಯ ಒಕ್ಕೂಟ")**[249] ಪ್ರಕರಣದಲ್ಲಿ,

---

[248] Case No. 111-97-TC (27 November 1997).

[249] 1999 (1) SA 6 (CC).

ಪರಿಗಣಿಸಿತು. ಈ ಪ್ರಕರಣದಲ್ಲಿ ಗಂಡಸರ ನಡುವಿನ ಲೈಂಗಿಕ ಕ್ರಿಯೆಗಳನ್ನು ಶಿಕ್ಷಿಸುವ ಗುದಸಂಭೋಗಕ್ಕೆ ಸಂಬಂಧಿಸಿದ ಸಾಮಾನ್ಯ ಕಾನೂನು ಮತ್ತು ಇತರ ಶಾಸನಗಳ ಸಂವಿಧಾನಾತ್ಮಕತೆಯನ್ನು ಪರಿಶೀಲಿಸಲಾಯಿತು. ಸಂವಿಧಾನಿಕ ನ್ಯಾಯಾಲಯವು, ಸಮಲೈಂಗಿಕ ವಯಸ್ಕ ಪುರುಷರ ನಡುವಿನ ಲೈಂಗಿಕ ಅನ್ಯೋನ್ಯತೆಯನ್ನು ನಿಷೇಧಿಸುವ ಉದ್ದೇಶವಿರುವ ಗುದಸಂಭೋಗದ ಕಾನೂನುಗಳು, ಸಾಮಾನತೆಯೆಡೆಗಿನ ಅವರ ಹಕ್ಕನ್ನು ಉಲ್ಲಂಘಿಸುತ್ತದೆ ಮತ್ತು ಅವರ ವಿರುದ್ಧ ಲೈಂಗಿಕ ನಿಲುವಿನ ಆಧಾರದಲ್ಲಿ ತಾರತಮ್ಯ ಎಸಗುತ್ತದೆ ಎಂದು ಸರ್ವಾನುಮತದಿಂದ ಒಪ್ಪಿಕೊಂಡಿತು.

ನಾರಿಸ್ ಪ್ರಕರಣದಲ್ಲಿ ಈ.ಸಿ.ಟಿ.ಎಚ್.ಆರ್. ಅಭಿಪ್ರಾಯದೊಂದಿಗೆ ದನಿಗೂಡಿಸಿದ ಜಸ್ಟಿಸ್ ಅಕೆರ್ಮನ್ ಹೀಗೆ ಗಮನಿಸಿದರು:

> ಪುರುಷರ ನಡುವಿನ ಲೈಂಗಿಕ ಕ್ರಿಯೆಗಳ ಮೇಲಿನ ತಾರತಮ್ಯಪೂರ್ಣ ನಿರ್ಬಂಧಗಳು ಈಗಾಗಲೇ ಚಾಲ್ತಿಯಲ್ಲಿರುವ ಸಾಮಾಜಿಕ ಪೂರ್ವಗ್ರಹಗಳನ್ನ ಬಲಪಡಿಸುತ್ತವೆ ಮತ್ತು ಅವರ ಬದುಕಿನ ಮೇಲೆ ಆ ಪೂರ್ವಾಗ್ರಹಗಳ ದುಶ್ಪರಿಣಾಮಗಳನ್ನು ತೀವ್ರವಾಗಿ ಹೆಚ್ಚಿಸುತ್ತವೆ

ಜಸ್ಟಿಸ್ ಅಕೆರ್ಮನ್ ಅವರು ಎಡ್ವಿನ್ ಕ್ಯಾಮೆರಾನ್ ರ "ಸೆಕ್ಸುವಲ್ ಓರಿಯಂಟೇಶನ್ ಆನ್ಡ್ ದಿ ಕಾನ್ಸ್ಟಿಟ್ಯೂಶನ್: ಎ ಟೆಸ್ಟ್ ಕೇಸ್ ಫಾರ್ ಹ್ಯೂಮನ್ ರೈಟ್ಸ್"[250] ಅನ್ನು ಉಲ್ಲೇಖಿಸಿದರು:

> ಈ ನಿಬಂಧನೆಗಳನ್ನು ಜಾರಿಗೊಳಿಸದಿದ್ದರೂ, ಅವು ಸಮಲೈಂಗಿಕ ವ್ಯಕ್ತಿಗಳನ್ನು, ಲೇಖಕರು ಹೇಳಿರುವಂತೆ, "ಸೆರೆಹಿಡಿಯದೇ ಬಿಟ್ಟ ಪಾತಕಿ"ಗಳ ಮಟ್ಟಕ್ಕೆ ಇಳಿಸಿಬಿಡುತ್ತವೆ, ಆ ಮೂಲಕ ಕಳಂಕವನ್ನು ಬಲಪಡಿಸುತ್ತವೆ ಮತ್ತು ಉದ್ಯೋಗ, ವಿಮೆ ಹಾಗೂ ಪಾಲನೆಯ ಜವಾಬ್ದಾರಿ ಮೊದಲಾದ ನಿಲುವನ್ನು ಅವಲಂಬಿಸಿರುವ ವಿಚಾರಕ್ಕೆ ಸಂಬಂಧಿಸಿದ ಕಾನೂನು ನಿರ್ಧಾರಗಳಲ್ಲಿ ತಾರತಮ್ಯವನ್ನು ಪ್ರೋತ್ಸಾಹಿಸುತ್ತವೆ (ಒತ್ತು ನೀಡಲಾಗಿದೆ)

---

[250] (1993) 110 SALJ 450.

ವ್ಯಕ್ತಿಗಳ ಖಾಸಗೀತನ ಮತ್ತು ಘನತೆಯ ಹಕ್ಕುಗಳ ಉಲ್ಲಂಘನೆಯ ಕುರಿತು ದನಿಯೆತ್ತಿದ ನ್ಯಾಯಾಲಯವು ಈ ರೀತಿ ತೀರ್ಮಾನಿಸಿತು:

> ಸಮಲೈಂಗಿಕ ವ್ಯಕ್ತಿಗಳು ನಮ್ಮ ಸಮಾಜದ ಅಪಾಯದಲ್ಲಿರುವ ಅಲ್ಪಸಂಖ್ಯಾತ ಸಮುದಾಯ. ಗುದಸಂಭೋಗದ ಕಾನೂನುಗಳು ಅವರ ಅತ್ಯಂತ ಖಾಸಗೀ ಸಂಬಂಧಗಳನ್ನು ಅಪರಾಧೀಕರಿಸುತ್ತವೆ. ಇದು ಅವರನ್ನು ಕುಗ್ಗಿಸಿ ಕೀಳಾಗಿ ನೋಡುತ್ತದೆ ಮತ್ತು ಹಾಗಾಗಿ ಅವರಿಗಿರುವ ಘನತೆಯ ಮೂಲಭೂತ ಹಕ್ಕನ್ನು ಉಲ್ಲಂಘಿಸುತ್ತದೆ. ಅಲ್ಲದೆ, ಸದರಿ ಅಪರಾಧಗಳು ಮತ್ತಾರಿಗೂ ಹಾನಿಯುಂಟುಮಾಡದ ಒಪ್ಪಿಗೆಯಿರುವ ವಯಸ್ಕ ವ್ಯಕ್ತಿಗಳ ನಡುವಿನ ಖಾಸಗೀ ಕೃತ್ಯಗಳನ್ನು ಕಾನೂನುಬಾಹಿರಗೊಳಿಸುತ್ತವೆ. ಮನುಷ್ಯರ ಬದುಕಿನ ಈ ಅಂತರಾಳಾದ ವಲಯದ ಮೇಲಿನ ಅತಿಕ್ರಮಣವು ಸಾಂವಿಧಾನಿಕವಾದ ಖಾಸಗೀತನದ ಹಕ್ಕಿಗೆ ಘಾಸಿಯನ್ನುಂಟು ಮಾಡುತ್ತದೆ. ತಾರತಮ್ಯದ ಮೂಲದಲ್ಲಿರುವ ಅಪರಾಧಗಳು, ಖಾಸಗೀತನ ಮತ್ತು ಘನತೆಯ ಹಕ್ಕುಗಳನ್ನು ಉಲ್ಲಂಘಿಸುತ್ತವೆ ಎಂಬ ಸತ್ಯವೂ ಸಮಲೈಂಗಿಕ ವ್ಯಕ್ತಿಗಳ ವಿರುದ್ಧದ ತಾರತಮ್ಯ ನ್ಯಾಯೋಚಿತವಲ್ಲ ಎಂಬ ನಿರ್ಧಾರವನ್ನು ಬಲಪಡಿಸುತ್ತದೆ

ಕೊನೆಯಲ್ಲಿ ನ್ಯಾಯಾಲಯ ಎಲ್ಲಾ ವ್ಯಕ್ತಿಗಳಿಗೂ ಹೊರಗಿನ ಹಸ್ತಕ್ಷೇಪವಿಲ್ಲದೇ ಮಾನವ ಸಂಬಂಧಗಳನ್ನು ಸ್ಥಾಪಿಸಿ ಪೋಷಿಸಿಸುವುದನ್ನು ಉತ್ತೇಜಿಸುವ ಖಾಸಗೀ ಅನ್ಯೋನ್ಯತೆ ಮತ್ತು ಸ್ವಾಯತ್ತತೆಯ ವಲಯವನ್ನು ಹೊಂದುವ ಹಕ್ಕಿದೆ ಎಂದು ನಿರ್ಧರಿಸಿತು

113. 2005 ರಲ್ಲಿ, ಫಿಜಿ ಉಚ್ಚ ನ್ಯಾಯಾಲಯ, **ಧೀರೇಂದ್ರ ನಾಡಾನ್ ಥಾಮಸ್ ಮ್ಯಾಕ್ ಕೊಸ್ಕರ್ ವಿ. ಸರ್ಕಾರ**[251] **ಪ್ರಕರಣದಲ್ಲಿ**, ಪುರುಷನೊಬ್ಬನಿಗೆ ತನ್ನ ಬಗೆಗಿನ "ಶಾರೀರಿಕ ಅರಿವು" ಹೊಂದಲು

[251] [2005] FJHC 500

ಅನುಮತಿಸುವ ಯಾವುದೇ ಗಂಡಸನ್ನು ಮತ್ತು ಗಂಡು ವ್ಯಕ್ತಿಗಳ ನಡುವಿನ "ಸಂಪೂರ್ಣ ಅಸಭ್ಯತೆ"ಯನ್ನು ಶಿಕ್ಷೆಗೊಳಪಡಿಸುವ, ಫಿಜಿಯನ್ ದಂಡ ಸಂಹಿತೆಯ ನಿಬಂಧನೆಗಳನ್ನು ತಳ್ಳಿಹಾಕಿತು. ಸರ್ವೋಚ್ಚ ನ್ಯಾಯಾಲಯವು, ಫಿಜಿಯ ಸಂವಿಧಾನದೊಂದಿಗೆ ತಾಳೆಯಾಗದಂತಹ ನಿಬಂಧನೆಗಳನ್ನು ರದ್ದುಪಡಿಸಿ, ಒಪ್ಪಿಗೆಯ ಮತ್ತು ಒಪ್ಪಿಗೆಯಿಲ್ಲದ ಲೈಂಗಿಕ ವರ್ತನೆಯ ನಡುವಿನ ಸ್ಪಷ್ಟವಾದ ವ್ಯತ್ಯಾಸವನ್ನು ಈ ಕೆಳಗಿನಂತೆ ಗುರುತಿಸಿತು:

> ಕಾನೂನು ಭಿನ್ನತೆಯನ್ನು ಗುರುತಿಸಬೇಕು, ಘನತೆಯನ್ನು ಸುನಿಶ್ಚಿತಪಡಿಸಬೇಕು ಮತ್ತು ಪ್ರತಿ ಪ್ರಜೆಗೂ ಅವರಿರುವಂತೆಯೇ ಸಮಾನವಾದ ಗೌರವ ದೊರಕಿಸಿಕೊಡಬೇಕು ಎಂಬುದು ಸಂವಿಧಾನದ ಅಪೇಕ್ಷೆ. ಭಿನ್ನತೆಯನ್ನು ಒಪ್ಪಿಕೊಳ್ಳುವುದು ವೈವಿಧ್ಯತೆಯನ್ನು ಸಂಭ್ರಮಿಸಿದಂತೆ. ವೈಯಕ್ತಿಕ ಘನತೆಯನ್ನು ಸುನಿಶ್ಚಿತ ಪಡಿಸುವುದು ಇಡೀ ಸಮಾಜಕ್ಕೆ ಗೌರವ ತಂದುಕೊಡುತ್ತದೆ. ಸಮಾನತೆಯ ಪ್ರತಿಪಾದನೆಯು ಪ್ರಕ್ರಿಯಾತ್ಮಕ ಜೀವಂತಿಕೆಯ ಮೂಲವಾಗಬಹುದು. …ಈ ರೀತಿ ಸ್ಥಾಪನೆಯಾದ ರಾಷ್ಟ್ರವೊಂದು, ಖಾಸಗೀ ಸಂಬಂಧಗಳಲ್ಲಿನ ಲೈಂಗಿಕ ಅಭಿವ್ಯಕ್ತಿಯನ್ನು ಸರಿಯಾದ ದೃಷ್ಟಿಕೋನದಲ್ಲಿ ನೋಡುತ್ತದೆ ಮತ್ತು ಪ್ರಜೆಗಳಿಗೆ ತಮ್ಮ ಉತ್ತಮ ನೈತಿಕ ಸಂವೇದನೆಗಳನ್ನು ವ್ಯಾಖ್ಯಾನಿಸಿಕೊಳ್ಳಲು ಬಿಟ್ಟು, ಕಾನುನನಿಗೆ ತನ್ನ ಅಗತ್ಯ ಕರ್ತವ್ಯ ಮಾಡಲು ಬಿಡುತ್ತದೆ.

ಇತ್ತೀಚಿನ ವರ್ಷಗಳಲ್ಲಿ, ಕೆರಿಬಿಯನ್ ರಾಜ್ಯಗಳಾದ ಬೆಲೀಜ್ ಹಾಗೂ ಟ್ರಿನಿಡಾಡ್ ಮತ್ತು ಟೊಬ್ಯಾಗೋ ವಯಸ್ಕರ ನಡುವಿನ ಒಪ್ಪಿಗೆಯ ಖಾಸಗೀ ಲೈಂಗಿಕ ಕ್ರಿಯೆಗಳನ್ನು ಅಪರಾಧ ಮುಕ್ತಗೊಳಿಸಿವೆ. **ಕ್ಯಾಲೆಬ್ ಓರೋಜ್ಕೊ ವಿ. ಬೆಲೀಜ್ ಅಟಾರ್ನಿ ಜನರಲ್ ("ಕ್ಯಾಲೆಬ್ ಓರೋಜ್ಕೊ")**[252] ಪ್ರಕರಣದಲ್ಲಿ, "ಯಾವುದೇ ವ್ಯಕ್ತಿಯೊಂದಿಗೆ ನಿಸರ್ಗದ ನಿಯಮದ ವಿರುದ್ಧ ಸಂಭೋಗ ಹೊಂದುವ ಪ್ರತಿ ವ್ಯಕ್ತಿಯನ್ನು" ದಂಡನೆಗೆ ಒಳಪಡಿಸುವ ಬೆಲೀಜ್ ದಂಡ

[252] Claim No. 668 of 2010.

ಸಂಹಿತೆಯ ನಿಬಂಧನೆಗಳನ್ನು ಸರ್ವೋಚ್ಚ ನ್ಯಾಯಾಲಯದ ಎದುರಿನಲ್ಲಿ ಪ್ರಶ್ನಿಸಲಾಯಿತು. ಘನತೆಯ ಪರಿಕಲ್ಪನೆಯ ಕುರಿತು ಮಾತನಾಡುವಾಗ, ನ್ಯಾಯಮೂರ್ತಿ ಬೆಂಜಮಿನ್, ಕೆನಡಿಯನ್ ಸರ್ವೋಚ್ಚ ನ್ಯಾಯಾಲಯದ ಅವಲೋಕನಗಳನ್ನು ಉಲ್ಲೇಖಿಸುತ್ತಾ ಹೀಗೆಂದರು[253]:

> "ಮಾನವ ಘನತೆ ಎಂದರೆ ಒಬ್ಬ ವ್ಯಕ್ತಿ ಅಥವಾ ಗುಂಪು ಸ್ವಾಭಿಮಾನ ಮತ್ತು ಆ ಸ್ವಾಭಿಮಾನವನ್ನು ಅನುಭವಿಸುವುದು. ಇದು ದೈಹಿಕ ಮತ್ತು ಮಾನಸಿಕ ಸಮಗ್ರತೆ ಮತ್ತು ಸಬಲೀಕರಣಕ್ಕೆ ಸಂಬಂಧಿಸಿದೆ. ವೈಯಕ್ತಿಕ ಲಕ್ಷಣಗಳು ಅಥವಾ ವೈಯಕ್ತಿಕ ಅಗತ್ಯಗಳು ಸಾಮರ್ಥ್ಯಗಳು, ಅಥವಾ ಅರ್ಹತೆಗಳಿಗೆ ಸಂಬಂಧಿಸದ ಪರಿಸ್ಥಿತಿಗಳನ್ನಾಧರಿಸಿದ ಅನ್ಯಾಯವಾದ ವರ್ತನೆಯಿಂದ ಮಾನವ ಘನತೆಗೆ ಹಾನಿಯಾಗುತ್ತದೆ. ಇದು ವಿವಿಧ ವ್ಯಕ್ತಿಗಳ ಅಗತ್ಯತೆಗಳು, ಸಾಮರ್ಥ್ಯಗಳು ಮತ್ತು ಅರ್ಹತೆಗಳಿಗೆ ಸೂಕ್ಷ್ಮವಾಗಿರುವ, ವ್ಯಕ್ತಿಗಳ ಭಿನ್ನಾತೆಗಳನ್ನು ಗಣನೆಗೆ ತೆಗೆದುಕೊಳ್ಳುವ ಕಾನೂನುಗಳಿಂದ ಹೆಚ್ಚಿಸಲ್ಪಡುತ್ತದೆ. (ಒತ್ತು ನೀಡಲಾಗಿದೆ)

ಡಡ್ಜಿಯಾನ್, ನ್ಯಾಶನಲ್ ಒಕ್ಕೂಟ, ಮೆಕೊಸ್ಕರ್, ಟೂನೆನ್ ಮತ್ತು ಲಾರೆನ್ಸ್ ತೀರ್ಪುಗಳನ್ನು ಉಲ್ಲೇಖಿಸಿದ ಸರ್ವೋಚ್ಚ ನ್ಯಾಯಾಲಯವು ಸದರಿ ಕಾಯ್ದೆಯು ಅರ್ಜಿದಾರರ ಖಾಸಗೀತನ, ಘನತೆ ಮತ್ತು ಸಮಾನತೆಯ ಸಂವಿಧಾನಾತ್ಮಕ ಹಕ್ಕುಗಳನ್ನು ಉಲ್ಲಂಘಿಸುತ್ತದೆ ಎಂದು ಅದನ್ನು ತಳ್ಳಿಹಾಕಿತು . ನ್ಯಾಯಮೂರ್ತಿ ಬೆಂಜಮಿನ್ ಹೀಗೆಂದರು:

> ಆದಾಗ್ಯೂ, ಕಾನೂನು ಸಿಧ್ಧಾಂತದ ದೃಷ್ಟಿಕೋನದ ಪ್ರಕಾರ, ನ್ಯಾಯಾಲಯಗಳು ಪ್ರಚಲಿತ ಬಹುಮತದ ಅಭಿಪ್ರಾಯದ ಪ್ರಕಾರ ಅಥವಾ ಯಾವುದನ್ನು ಜನರೆಲ್ಲರೂ ನೈತಿಕವೆಂದು

[253] Law v Canada (Minister of Employment and Immigration) [1999] 1 S.C.R. 497.

> ಪರಿಗಣಿಸುತ್ತಾರೋ ಅದರ ಆಧಾರದ ಮೇಲೆ ಕಾರ್ಯನಿರ್ವಹಿಸುವಂತಿಲ್ಲ. ನಿಷೇಧಿಸಿರುವ ಕೃತ್ಯವನ್ನು ನಿಯಂತ್ರಣಗಳಿಂದ ಮುಕ್ತಗೊಳಿಸಿದರೆ ಅದರಿಂದ ಹಾನಿ ಉಂಟಾಗುತ್ತದೆ ಎಂಬುದನ್ನು ತೋರ್ಪಡಿಸಬೇಕಾಗುತ್ತದೆ. ನೈಜವಾಗಿ ಅಂತಹ ಹಾನಿ ನಡೆಯಬಹುದು ಎಂಬುದಕ್ಕೆ ಯಾವುದೇ ಸಾಕ್ಷ್ಯವನ್ನೊದಗಿಸಲಾಗಿಲ್ಲ. ಸಂವಿಧಾನದ ನಿಬಂಧನೆಗಳನ್ನು ಜಾರಿಗೊಳಿಸುವುದು ನ್ಯಾಯಾಲಯದ ಕರ್ತವ್ಯ

114. **ಜೇಸನ್ ಜೋನ್ಸ್ ವಿ. ಟ್ರಿನಿಡಾಡ್ ಮತ್ತು ಟೊಬ್ಯಾಗೋದ ಅಟಾರ್ನಿ ಜನರಲ್ ("ಜೋನ್ಸ್")**[254] ಪ್ರಕರಣದಲ್ಲಿ, ಯುನೈಟೆಡ್ ಕಿಂಗ್ಡಮ್ನಲ್ಲಿ ವಾಸಿಸುತ್ತಿರುವ ವಲಸಿಗ ಸಮಲೈಂಗಿಕ ಹಕ್ಕುಗಳ ಕಾರ್ಯಕರ್ತರೊಬ್ಬರು 'ಗುದಸಂಭೋಗ' ಮತ್ತು 'ಗಂಭೀರ ಅಸಭ್ಯತೆ'ಯನ್ನು ಅಪರಾಧಗೊಳಿಸುವ ಟ್ರಿನಿಡಾಡ್ ಮತ್ತು ಟೊಬ್ಯಾಗೋದ ಲೈಂಗಿಕ ಅಪರಾಧಗಳ ಕಾಯ್ದೆಯ ನಿಬಂಧನೆಗಳನ್ನು ಟ್ರಿನಿಡಾಡ್ ಮತ್ತು ಟೊಬ್ಯಾಗೊದಲ್ಲಿ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದರು. ಸಂವಿಧಾನ ಜಾರಿಗೆ ಬರುವ ಮೊದಲು ಅಸ್ತಿತ್ವದಲ್ಲಿದ್ದ ಮತ್ತು ಆನಂತರದಲ್ಲಿ ಅತ್ಯಂತ ಕಡಿಮೆ ಬದಲಾವಣೆಗೊಂಡಿದ್ದ ಕಾನೂನುಗಳನ್ನು ರಕ್ಷಿಸುವ ಸಂವಿಧಾನದ 6ನೇ ಪರಿಚ್ಛೇದದವು, ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸುವ ಕಾನೂನುಗಳು ರದ್ದುಗೊಳ್ಳದಂತೆ ಅವನ್ನು "ರಕ್ಷಿಸು"ತ್ತದೆಯೇ ಎಂಬುದು ನ್ಯಾಯಾಲಯದೆದುರು ಇದ್ದ ವಿಷಯವಾಗಿತ್ತು.

ಉಚ್ಚ ನ್ಯಾಯಾಲಯ ಸದರಿ ನಿಬಂಧನೆಗಳನ್ನು ಸಂವಿಧಾನಬಾಹಿರವೆಂದು ಕರೆದು ತಳ್ಳಿಹಾಕಿ, ಸಂಗಾತಿಯನ್ನು ಆಯ್ಕೆ ಮಾಡಿ ಕುಟುಂಬವನ್ನು ಹೊಂದುವ ಹಕ್ಕು ಒಬ್ಬ ವ್ಯಕ್ತಿಯ ವೈಯಕ್ತಿಕ ಸ್ವಾಯತ್ತತೆ ಮತ್ತು ಘನತೆಯ ಅವಿಭಾಜ್ಯ ಅಂಗ ಎಂದು ಗಮನಿಸಿತು:

> ಈ ನ್ಯಾಯಾಲಯದ ಪಾಲಿಗೆ ಮಾನವ ಘನತೆ ಎಂಬುದು ಜಗತ್ತಿನಾದ್ಯಂತ ಎಲ್ಲಾ ಪ್ರಜಾತಾಂತ್ರಿಕ ಸಮಾಜಗಳಲ್ಲಿ

[254] Claim no. CV2017-00720. .

> ಗುರುತಿಸಲಾಗಿರುವ ಮೂಲಭೂತ ಮತ್ತು ಅವಿಭಾಜ್ಯ ಅಧಿಕಾರ. ಈ ಹಕ್ಕಿನೊಂದಿಗೆ ಸ್ವಾಯುತ್ತೆಯ ತತ್ವ ಮತ್ತು ಸರ್ಕಾರದ ಯಾವುದೇ ಬಗೆಯ ಅಸಮಂಜಸ ಹಸ್ತಕ್ಷೇಪವಿಲ್ಲದೇ, ತನ್ನ ನಿರ್ಧಾರವನ್ನು ತೆಗೆದುಕೊಳ್ಳುವ ವ್ಯಕ್ತಿಯ ಹಕ್ಕು ಕೂಡಾ ಸೇರಿಕೊಂಡಿದೆ. ಇಂತಹ ಪ್ರಕಣದಲ್ಲಿ ವ್ಯಕ್ತಿಯು ತಾನು ಯಾರನ್ನು ಪ್ರೀತಿಸುತ್ತೇನೆ, ಯಾರೊಂದಿಗೆ ಬದುಕ ಬಯಸುತೇನೆ ಮತ್ತು ಯಾರೊಂದಿಗೆ ಕುಟುಂಬವನ್ನು ಹೊಂದಬಯಸುತ್ತೇನೆ ಎಂಬುದನ್ನು ನಿರ್ಧರಿಸಲು ಸಾಧ್ಯವಾಗಬೇಕು

ಉಚ್ಛ ನ್ಯಾಯಾಲಯ ಅಂತಹ ಕಾನೂನುಗಳ ಇರುವಿಕೆಯು ಸಮಲೈಂಗಿಕರ ಬದುಕನ್ನು ಉದ್ದೇಶಪೂರ್ವಕವಾಗಿ ದುರ್ಬಲಗೊಳಿಸುತ್ತವೆ ಎಂದು ಹೇಳಿತು:

> ಪ್ರಜೆಯೊಬ್ಬರು ಡಮೋಕ್ಲೆಸ್ಸನ ಖಡ್ಗದಂಚಿನಲ್ಲಿ ಸತತವಾದ ಅಪಾಯದ ನೆರಳಿನಲ್ಲಿ, ಯಾವ ಕ್ಷಣದಲ್ಲಿ ಬೇಕಾದರೂ ತನ್ನನ್ನು ಶಿಕ್ಷಿಸಬಹುದೆಂಬ ಭಯದಲ್ಲಿ ಬದುಕುವಂತಾಗಬಾರದು. ಈಗ ಇರುವ ಅಪಾಯ ಅದುವೇ. ಆ ಅಪಾಯವನ್ನು ಸರ್ಕಾರವೇ ಬೆಂಬಲಿಸುತ್ತಿದೆ ಮತ್ತು ಆ ಆಪಾಯ ಬಹುಮುಖ್ಯವಾದುದು, ಏಕೆಂದರೆ ಅದು ಸಮಾಜದ ಇತರರ ಮನಸ್ಸಿನಲ್ಲಿ, ಅರ್ಜಿದಾರರಂತೆ ಬದುಕಲು ನಿರ್ಧರಿಸುವವರ ಜೀವನಶೈಲಿ ಮತ್ತು ಅಸ್ತಿತ್ವಕ್ಕೆ ಇತತರದ್ದಕ್ಕಿಂತ ಕಡಿಮೆ ಬೆಲೆಯಿದೆಯೆಂಬ ನಂಬಿಕೆಯನ್ನು ಬೇರೂರುವಂತೆ ಮಾಡುತ್ತದೆ. ಅರ್ಜಿದಾರರಂತಹ ವ್ಯಕ್ತಿಗಳ ಪ್ರೇಮದ ಅತ್ಯುನ್ನತ ಅಭಿಯವ್ಯಕ್ತಿಯು ಶಾಸನದ ಪ್ರಕಾರ ಕಾನೂನುಬಾಹಿರವಾಗಿರುವ ಕ್ರಿಯೆಗಳಲ್ಲಿ ಅಡಕವಾಗಿದೆ ಮತ್ತು ಅಂಥವರ ಜೀವನ ಷೈಲಿಯನ್ನು ಅಪರಾಧಿಇಕರಿಸುವ ನಿರ್ಧಾರವನ್ನು ಸಂಸತ್ತು

ಉದ್ದೇಶಪೂರ್ವಕವಾಗಿಯೇ ತೆಗೆದುಕೊಂಡಿದೆ ಮತ್ತಿಲ್ಲಿ ಸದರಿ ಕ್ರಿಯೆ ಒಪ್ಪಿಗೆಯದ್ದೋ ಬಲವಂತದ್ದೋ ಎಂಬುದನ್ನು ಪರಿಗಣಿಸಲಾಗುತ್ತಿಲ್ಲ. (ಒತ್ತು ನೀಡಲಾಗಿದೆ)

ತೆಗೆದು ಹಾಕಲಾದ ನಿಯಮಗಳನ್ನು ಜನಾಂಗೀಯ ಪ್ರತ್ಯೇಕತೆ, ವರ್ಣಭೇದ ಮತ್ತು ಹೋಲೂಕಾಸ್ಟ್ ಹತ್ಯಾಕಾಂಡಕ್ಕೆ ಹೋಲಿಸಿದ ಉಚ್ಛ ನ್ಯಾಯಾಲಯವು, ಕೆಳಕಂಡಂತೆ ಗಮನಿಸಿತು:

ಅಲ್ಪಸಂಖ್ಯಾತ ಎಂದು ಗ್ರಹಿಸಲಾಗಿರುವ ಸಮುದಾಯದ ಮಾನವೀಯತೆ ಮತ್ತು ಮಾನವೀಯ ಘನತೆಯ ಹಕ್ಕು ಗಳನ್ನು ಈಗ ಕಸಿದುಕೊಂಡರೆ, ಕೆಲವರ ನೈಜ ನಂಬಿಕೆಗಳನ್ನಷ್ಟೇ ಆಧರಿಸಿರುವ ಇಂತಹ ಆಲೋಚನಾ ಶೈಲಿ, ಈ ರೀತಿಯ ಗ್ರಹೀತ ಶ್ರೇಷ್ಟತೆಯನ್ನು ಮುಂದುವರೆಸಿದಂತಾಗುತ್ತದೆ.

115. **ಲೆಯುಂಗ್ ಟಿಸಿ ವಿಲಿಯಂ ರಾಯ್ ವಿ. ಕಾನೂನು ಕಾರ್ಯದರ್ಶಿ**[255], ಪ್ರಕರಣದಲ್ಲಿ ಹಾಂಗ್ ಕಾಂಗ್ ಉಚ್ಛ ನ್ಯಾಯಾಲಯವು ಗುದಸಂಭೋಗ ಮತ್ತು ಸಾಮಾನ್ಯ ಲೈಂಗಿಕ ಸಂಭೋಗಳಿಗೆ ಒಪ್ಪಿಗೆ ಸೂಚಿಸುವುದಕ್ಕೆ ಬೇರೆಬೇರೆ ವಯಸ್ಸನ್ನು ಶಿಫಾರಸು ಮಾಡುವ ನಿಬಂಧನೆಗಳ ಸಾಂವಿಧಾನಿಕ ಮಾನ್ಯತೆಯನ್ನು ಪರಿಗಣಿಸಿತು. ಈ ನಿಬಂಧನೆಗಳು ಅರ್ಜಿದಾರರ ಖಾಸಗೀತನ ಮತ್ತು ಸಮಾನತೆಯ ಹಕ್ಕುಗಳನ್ನು ಉಲ್ಲಂಘಿಸುತ್ತವೆ ಎಂದು ನ್ಯಾಯಾಲಯ ತೀರ್ಮಾನಿಸಿತು:

"ಬಹುಸಂಖ್ಯಾತ ವರ್ಗಗಳ ವ್ಯಕ್ತಿಗಳು ತಮ್ಮ ಸ್ವಾಭಾವಿಕವಾದ ರೀತಿಯಲ್ಲಿ ಲೈಂಗಿಕತೆಯನ್ನು ಅಭಿವ್ಯಕ್ತಪಡಿಸುವ ಹಕ್ಕು ಮಾನ್ಯಗೊಂಡಿರುವಾಗ, ಅಲ್ಪಸಂಖ್ಯಾತ ವರ್ಗದ ವ್ಯಕ್ತಿಗಳಿಂದ ಅವರಿಗೆ ತಿಳಿದಿರುವ ಏಕೈಕ ಮಾರ್ಗದಲ್ಲಿ ತಮ್ಮ ಲೈಂಗಿಕತೆಯನ್ನು ಅಭಿವ್ಯಕ್ತಪಡಿಸುವ ಹಕ್ಕನ್ನು ಕಸಿದುಕೊಂಡರೆ, ಅದನ್ನೂ ಅದೇ

[255] Civil Appeal No. 317 of 2005.

> ರೀತಿಯಲ್ಲೇ ಎಲ್ಲರಿಗೂ ನಿರಾಕರಿಸಿದರೂ, ಅದು ತಾರತಮ್ಯವಾಗಿಯೇ ಮುಂದುವರೆಯುತ್ತದೆ. ಮನವಿ ಸಲ್ಲಿಕೆಯ ಸಮಯದಲ್ಲಿ ಅದನ್ನು 'ಮಾರುವೇಷದ ತಾರತಮ್ಯ' ಎಂದು ವರ್ಣಿಸಲಾಗಿದೆ. ಇದೊಂದು ಸೂಕ್ತವಾದ ವಿವರಣೆ ಎಂಬುದು ನನ್ನ ಭಾವನೆ. ಈ ಮಾರುವೇಷದ ತಾರತಮ್ಯ ಒಂದೇ ಒಂದು ವಿಚಾರವನ್ನಾಧರಿಸಿದೆ, ಅದುವೇ, ಲೈಂಗಿಕ ನಿಲುವು.

ಒಪ್ಪಿಗೆ ಸೂಚಿಸಲು ಬೇರೆ ಬೇರೆ ವಯಸ್ಸನ್ನು ಶಿಫಾರಸು ಮಾಡುವುದು ಅಸಮರ್ಥನೀಯವೆಂದು ತೀರ್ಮಾನಿಸಿದ ನ್ಯಾಯಾಲಯ ಹೀಗೆಂದಿತು:

> ಸ್ತ್ರೀ ಮತ್ತು ಪುರುಷರು ಪರಸ್ಪರ ಲೈಂಗಿಕ ಸಂಭೋಗ ಹೊಂದುವ ಕನಿಷ್ಟ ವಯಸ್ಸು 16 ವರ್ಷವಿರುವಾಗ, ಗುದಸಂಭೋಗ (ಬಗ್ಗರಿ) ಯ ವಿಚಾರದಲ್ಲಿ ಕನಿಷ್ಟ ವಯಸ್ಸು 21ವರ್ಷ ಏಕಿರಬೇಕು ಎಂಬುದನ್ನು ವಿವರಿಸಲು ನಮ್ಮೆದುರು ಯಾವುದೇ ಸಾಕ್ಷ್ಯವನ್ನು ಹಾಜರು ಪಡಿಸಲಾಗಿಲ್ಲ. ಇದಕ್ಕೆ ವೈದ್ಯಕೀಯ ಕಾರಣಗಳಿಲ್ಲ ಮತ್ತು ವಾದ ಮಾಡುವಾಗ ಕೂಡ ಅಂತಹ ಯಾವುದೇ ಕಾರಣಗಳನ್ನು ಸೂಚಿಸಲಾಗಿಲ್ಲ

ಜಗತ್ತಿನೆಲ್ಲೆಡೆಯ ನ್ಯಾಯಾಲಯಗಳು ಗುದಸಂಭೋಗಕ್ಕೆ ಸಂಬಂಧಿಸಿದ ಕಾನೂನುಗಳನ್ನು ಅಪರಾಧಮುಕ್ತಗೊಳಿಸುವುದರಿಂದ ಒಂದು ಹೆಜ್ಜೆ ಮುಂದೆ ಹೋಗಿ ಸಮಲೈಂಗಿಕ ವ್ಯಕ್ತಿಗಳಿಗಾಗಿಗೆ ವಿಸ್ತಾರವಾದ ಹಕ್ಕುಗಳು ಮತ್ತು ಭದ್ರತೆಗಳ ಸಮೂಹವನ್ನು ಅಭಿವೃದ್ಧಿಪಡಿಸಿದ್ದಾರೆ. ಈ ಹಕ್ಕುಗಳು ಬರಿಯ ಖಾಸಗೀಯಾದ ಒಪ್ಪಿಗೆಯ ಲೈಂಗಿಕ ಕ್ರಿಯೆ ನಡೆಸುವ ಸ್ವಾತಂತ್ರ್ಯವನ್ನು ಮೀರಿ, ಸಂಪೂರ್ಣ ಪೌರತ್ವದ ಹಕ್ಕು, ಒಕ್ಕೂಟಗಳನ್ನು ರಚಿಸುವ ಹಕ್ಕನ್ನು ಮತ್ತು ಕುಟುಂಬ ಜೀವನ ಹೊಂದುವ ಹಕ್ಕನ್ನು ಒಳಗೊಂಡಿವೆ.

116. ಉದ್ಯೋಗದ ವಿಚಾರಗಳಲ್ಲಿನ ತಾರತಮ್ಯದ ವಿರುದ್ಧ ಸಮಲೈಂಗಿಕರ ಹಕ್ಕುಗಳನ್ನು ಮೊತ್ತಮೊದಲು ಗುರುತಿಸಿದ ರಾಷ್ಟ್ರಗಳಲ್ಲಿ ಇಸ್ರೇಲ್ ಒಂದಾಗಿದೆ. **ಎಲ್-ಅಲ್ ಇಸ್ರೇಲ್ ವಿಮಾನ ಸಂಸ್ಥೆಗಳು ಲಿಮಿಟೆಡ್ ವಿ.**

**ಜೊನಾಥನ್ ದನಿಲ್ವಿಟ್ಜ್[256] ( "ಎಲ್-ಅಲ್ ಇಸ್ರೇಲ್ ಏರ್ಲೈನ್ಸ್")** ಪ್ರಕರಣದಲ್ಲಿ, ಇಸ್ರೇಲ್ ನ ಸರ್ವೋಚ್ಚ ನ್ಯಾಯಾಲಯವು ತನ್ನ ಉದ್ಯೋಗಿಗಳು ಮತ್ತು 'ಉದ್ಯೋಗಿಯ ಪತಿ/ಪತ್ನಿ ಎಂದು ಗುರುತಿಸಲ್ಪಡುವ ಒಡನಾಡಿ"ಗೆ ರಿಯಾಯಿತಿಯ ಟಿಕೆಟ್ಗಳನ್ನು ನೀಡುವ ವಿಮಾನಯಾನ ಸಂಸ್ಥೆಯೊಂದರ ನೀತಿಯನ್ನು ಪರಿಶೀಲಿಸಿತು. ಈ ಪ್ರಯೋಜನವನ್ನು ಉದ್ಯೋಗಿಯ ಜತೆ ಪತಿ ಮತ್ತು ಹೆಂಡತಿಯಂತೆ ಒಟ್ಟಿಗೆ ವಾಸಿಸುತ್ತಿದ್ದ, ಆದರೆ ಮದುವೆಯಾಗಿರದಿದ್ದ ಸಂಗಾತಿಗೂ ನೀಡಲಾಯಿತು. ಆದಾಗ್ಯೂ, ವಿಮಾನಯಾನ ಸಂಸ್ಥೆಯು ಅರ್ಜಿದಾರ ಮತ್ತು ಆತನ ಪುರುಷ ಸಂಗಾತಿಗೆ ರಿಯಾಯಿತಿ ಟಿಕೆಟ್ಗಳನ್ನು ನೀಡಲು ಒಪ್ಪಲಿಲ್ಲ. ಇಸ್ರೇಲ್ ನ ಸರ್ವೋಚ್ಚ ನ್ಯಾಯಾಲಯ ಹೀಗೆಂದಿತು:

> ಜನರನ್ನು ಪ್ರತ್ಯೇಕವಾಗಿ ನಡೆಸಿಕೊಳ್ಳುವ ನಿಯಮವೊಂದನ್ನು ಆ ವಿಚಾರದ ಸ್ವರೂಪ ಮತ್ತು ಸತ್ವದ ಆಧಾರದಲ್ಲಿ ಸಮರ್ಥಿಸಿಕೊಳ್ಳಬೇಕು ಎಂಬುದು ಸಮಾನತಾ ಸಿಧ್ಧಾಂತದ ನಿಯಮ…ಹಾಗಾಗಿ ಪರಸ್ಪರ ಭಿನ್ನರಾಗಿರುವ (ನೈಜ ಭಿನ್ನತೆ) ಇಬ್ಬರು ವ್ಯಕ್ತಿಗಳನ್ನು, ಅವರ ನಡುವಿನ ನೈಜ ಭಿನ್ನತೆಗಳನ್ನು (ಅವರನ್ನು ಕೆಲ ಸನ್ನಿವೇಶಗಳಲ್ಲಿ ಬೇರೆಯಾಗಿ ನಡೆಸಿಕೊಳ್ಳುವುದನು ಸಮರ್ಥಿಸಿಕೊಳ್ಳಲು ಆಗದಿರುವ ಸಂದರ್ಭದಲ್ಲಿ ಕೂಡಾ) ಕಾನೂನು ಭಿನ್ನವಾಗಿ ನಡೆಸಿಕೊಂಡರೆ ಆ ಕಾನೂನು ತಾರತಮ್ಯವನ್ನು ಉಂಟು ಮಾಡುತ್ತದೆ" (ಒತ್ತು ನೀಡಲಾಗಿದೆ)

ವಿರುದ್ಧ ಲಿಂಗದ ಸಂಗಾತಿಯನ್ನು ಹೊಂದಿರುವ ನೌಕರನಿಗೆ ಸವಾಲೊತ್ತೊಂದನ್ನು ನೀಡಿ, ಮತ್ತೊಬ್ಬ ನೌಕರನ ಸಂಗಾತಿ ಸಾಮಾನಲಿಂಗದವರು ಎಂಬ ಕಾರಣಕ್ಕೆ ಅವರಿಗೆ ಅದೇ ಸವಲತ್ತನ್ನು ನಿರಾಕರಿಸುವುದು ಲೈಂಗಿಕ ನಿಲುವನ್ನಾಧರಿಸಿದ ತಾರತಮ್ಯ ಎನಿಸಿಕೊಳ್ಳುತ್ತದೆ ಎಂದು ಸರ್ವೋಚ್ಚ ನ್ಯಾಯಾಲಯ ತೀರ್ಮಾನಿಸಿತು. ಇದು ಅರ್ಜಿದಾರರ ಸಮಾನತೆಯ ಅಧಿಕಾರವನ್ನು ಉಲ್ಲಂಘಿಸಿ ನೌಕರ ಸವಲತ್ತುಗಳ ವಿಚಾರದಲ್ಲಿ ಅಸಮರ್ಥನೀಯ ಭೇದಭಾವ ಸೃಷ್ಟಿಸುತ್ತಿತ್ತು.

---

[256] HCJ 721/94.

117. **ವೈಂಡ್ v. ಆಲ್ಬರ್ಟಾ**[257] ಪ್ರಕರಣದಲ್ಲಿ, ಸಮಲೈಂಗಿಕ ಕಾಲೇಜು ನೌಕರರಾಗಿದ್ದ ಅರ್ಜಿದಾರರನ್ನು ಕೆಲಸದಿಂದ ತೆಗೆದುಹಾಕಲಾಗಿತ್ತು. ತನ್ನ ಉದ್ಯೋಗದಾತನು ತನ್ನ ವಿರುದ್ಧ ಲೈಂಗಿಕ ನಿಲುವನ್ನಾಧರಿಸಿದ ತಾರತಮ್ಯ ಎಸಗಿದ್ದಾನೆಂದು ಆರೋಪಿಸಿದ ಅವರು, ಕೆನಡಾದ ತಾರತಮ್ಯ ವಿರೋಧಿ ಶಾಸನವಾದ - ಇಂಡಿವಿಜುವಲ್ ರೈಟ್ಸ್ ಪ್ರೊಟೆಕ್ಷನ್ ಆಕ್ಟ್ ("ಇರ್ಪ") ಲೈಂಗಿಕ ನಿಲುವನ್ನು ತಾರತಮ್ಯ ಮಾಡಬಾರದ ವಿಚಾರವೆಂದು ಪರಿಗಣಿಸಿಲ್ಲವಾದ್ದರಿಂದ ಆ ಕಾಯ್ದೆಯಡಿಯಲ್ಲಿ ತಾನು ದೂರು ದಾಖಲಿಸಲು ಸಾಧ್ಯವಾಗಿಲ್ಲ ಎಂದರು. ಕೆನಡಾದ ಸರ್ವೋಚ್ಚ ನ್ಯಾಯಾಲಯ ಲೈಂಗಿಕ ನಿಲುವನ್ನಾಧರಿಸಿದ ತಾರತಮ್ಯದ ವಿರುದ್ಧ ರಕ್ಷಣೆ ನೀಡದೇ ಇರುವುದು ಕೆನಡಿಯನ್ ಚಾರ್ಟರ್ ಆಫ್ ರೈಟ್ಸ್ ಅಂಡ್ ಫ್ರೀಡಮ್ಸ್ ನ ಸಮಾನತೆಯ ಹಕ್ಕಿನ ಅಸಮರ್ಥನೀಯ ಉಲ್ಲಂಘನೆ ಎಂದು ಹೇಳಿತು.

118. ಐ.ಆರ್.ಪಿ.ಎ ದ ಅಡಿಯಲ್ಲಿ ರಕ್ಷಿಸಲ್ಪಟ್ಟಿರುವ ವಿಚಾರಗಳಲ್ಲಿ ಲೈಂಗಿಕ ನಿಲುವು ಇಲ್ಲದೇ ಇರುವುದನ್ನು ತರ್ಕಬದ್ಧವಾಗಿ ಸಮರ್ಥಿಸಿಕೊಳ್ಳಲು ಸರ್ಕಾರ ವಿಫಲವಾಗಿದೆ ಎಂದು ಸರ್ವೋಚ್ಚ ನ್ಯಾಯಾಲಯ ನಿರ್ಧರಿಸಿತು. ಅಂತಹ ತಾರತಮ್ಯಗಳು ಸಮಲೈಂಗಿಕರ ಬದುಕಿನ ಮೇಲೆ ಬೀರುವ ಬಗೆ ಬಗೆಯ ಪರಿಣಾಮವನ್ನು ಕುರಿತು ಸರ್ವೋಚ್ಚ ನ್ಯಾಯಾಲಯ ಈ ರೀತಿ ಹೇಳಿತು:

> " ಇಂತಹ ಪರಿಸ್ತಿತಿಯಿಂದ ಉಂಟಾಗಬಹುದಾದ ಮಾನಸಿಕ ಹಾನಿಯೂ ಬಹುಷಃ ಎಲ್ಲದಕ್ಕಿಂತ ಮುಖ್ಯವಾದುದು. ತಾರತಮ್ಯದ ಭಯ ತಾರ್ಕಿಕವಾಗಿ ನಿಜವಾದ ಅಸ್ಮಿತೆಯ ಮುಚ್ಚಿಡುವಿಕೆಗೆ ಎಡೆಮಾಡಿಕೊಡುತ್ತದೆ ಮತ್ತು ಇದು ವೈಯಕ್ತಿಕ ಆತ್ಮವಿಶ್ವಾಸ ಮತ್ತು ಸ್ವ-ಗೌರವಕ್ಕೆ ಹಾನಿ ಮಾಡುತ್ತದೆ. ಸಮಲೈಂಗಿಕ ಸ್ತ್ರೀ ಪುರುಷರು ಇತರರಂತೆ ರಕ್ಷಣೆಗೆ ಅರ್ಹರಲ್ಲ ಎಂದು ಅವರನ್ನು ಬೇರೆಯಾಗಿಡುವುದರಿಂದ ರವಾನೆಯಾಗುವ ಸಂದೇಶ ಈ ಹಾನಿಯ ಪ್ರಭಾವವನ್ನು ಹೆಚ್ಚುಮಾಡುತ್ತದೆ. ಇದು ವ್ಯಕ್ತಿಯೊಬ್ಬರನ್ನು ಅವಮಾನಿಸಿ, ಕೆನಡಾದ ಸಮಾಜದಲ್ಲಿ ಸಮಲೈಂಗಿಕ ಸ್ತ್ರೀ

[257] (1998) 1 S.C.R. 493.

ಪುರುಷರು, ಇತರ ವ್ಯಕ್ತಿಗಳಿಗೆ ಕೊಡಮಾಡುವ ರಕ್ಷಣೆಗೆ ಅರ್ಹರಲ್ಲ ಎಂಬ ಆಲೋಚನೆಯನ್ನು ಪ್ರತಿಪಾದಿಸುವ ಭೇದಭಾವಕ್ಕೆ ಇದು ಸ್ಪಷ್ಟವಾದ ಉದಾಹರಣೆ. ಸಮಲೈಂಗಿಕ ಸ್ತ್ರೀ ಪುರುಷರ ಘನತೆ ಮತ್ತು ಯೋಗ್ಯತೆಗೆ ಉಂಟಾಗಬಹುದಾದ ಹಾನಿಯು, ಅತ್ಯಂತ ಕ್ರೂರವಾದ ತಾರತಮ್ಯವಾಗಿದೆ

ಎಲ್.ಜಿ.ಬಿ.ಟಿ.ಐ ಹಕ್ಕುಗಳ ವಿಚಾರದಲ್ಲಿ ಮುಂದಿನ ಮುನ್ನಡೆಯು, ನೇಪಾಳದ ಸರ್ವೋಚ್ಚ ನ್ಯಾಯಾಲಯದಿಂದ **ಸುನೀಲ್ ಬಾಬು ಪಂತ್ v. ನೇಪಾಳ ಸರ್ಕಾರ**[258] ಪ್ರಕರಣದಲ್ಲಿ ಕಂಡು ಬಂದಿತು. ಬಹಿರಂಗವಾಗಿ ತಮ್ಮ ಸಮಲೈಂಗಿಕತೆಯನ್ನು ಹೇಳಿಕೊಂಡ ಏಶಿಯಾದ ರಾಷ್ಟ್ರೀಯ ನಾಯಕರಲ್ಲಿ ಮೊದಲಿಗರಾದ ಸುನೀಲ್ ಪಂತ್ ರವರು ಸಮಲೈಂಗಿಕ ಸ್ತ್ರೀ ಪುರುಷರು ಮತ್ತು ಮೂರನೇ ಲಿಂಗದ ವ್ಯಕ್ತಿಗಳ ಹಕ್ಕುಗಳನ್ನು ಗುರುತಿಸಬೇಕೆಂಬ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ನೇಪಾಳದ ಸರ್ವೋಚ್ಚ ನ್ಯಾಯಾಲಯದ ಎದುರಿಟ್ಟರು. ಎಲ್.ಜಿ.ಬಿ.ಟಿ.ಕ್ಯು ವ್ಯಕ್ತಿಗಳ ಲೈಂಗಿಕ ನಿಲುವಿನ ಹಕ್ಕು ಖಾಸಗೀತನದ ಹಕ್ಕಿನಲ್ಲೇ ಅಡಕವಾಗಿದೆ ಎಂಬುದನ್ನು ಗುರುತಿಸಿದ ಸರ್ವೋಚ್ಚ ನ್ಯಾಯಾಲಯ ಹೀಗೆಂದಿತು:

> ಖಾಸಗೀತನದ ಹಕ್ಕು ಯಾವುದೇ ವ್ಯಕ್ತಿಯ ಮೂಲಭೂತ ಹಕ್ಕು. ಲೈಂಗಿಕ ಕ್ರಿಯೆಗಳ ವಿಚಾರ ಖಾಸಗೀತನದ ವ್ಯಾಖ್ಯಾನದಡಿಯಲ್ಲೇ ಬರುತ್ತದೆ. ಇಬ್ಬರು ವಯಸ್ಕರು ಯಾವ ರೀತಿಯ ಲೈಂಗಿಕ ಕ್ರಿಯೆನಡೆಸುತ್ತಾರೆ ಮತ್ತು ಆ ಕ್ರಿಯೆ ನೈಸರ್ಗಿಕವೋ ಅನೈಸರ್ಗಿಕವೋ ಎಂದು ಪ್ರಶಿಸುವ ಹಕ್ಕು ಯಾರಿಗೂ ಇಲ್ಲ.

ವ್ಯಕ್ತಿಯ ಲೈಂಗಿಕ ನಿಲುವು ಏನಾಗಿದೆ ಎಂಬುದರ ಹೊರತಾಗೀ ಎಲ್ಲಾ ವ್ಯಕ್ತಿಗಳು ಸಹಜಾಗಿಯೇ ಮದುವೆಯ ಹಕ್ಕನ್ನು ಹೊಂದಿರುತ್ತಾರೆ ಎಂದು ನ್ಯಾಯಾಲಯ ತೀರ್ಮಾನಿಸಿತು:

> ಸಮಲೈಂಗಿಕ ಮದುವೆಯ ವಿಚಾರವನ್ನು ಗಮನಿಸಿ, ವಯಸ್ಕ ವ್ಯಕ್ತಿಯೊಬ್ಬರು ಮತ್ತೊಬ್ಬ ವಯಸ್ಕರೊಂದಿಗೆ, ಅವರ ಮುಕ್ತವಾದ ಒಪ್ಪಿಗೆ

[258] Writ Petition No. 917 of 2007.

ಮತ್ತು ಅವರ ಇಚ್ಛೆಯಂತೆ ವೈವಾಹಿಕ ಸಂಬಂಧ ಹೊಂದವುದು ಅವರ ಆಂತರ್ಯದ ಹಕ್ಕು ಎಂದು ನಾವು ನಿರ್ಧರಿಸುತ್ತೇವೆ.

ಕಡೆಯದಾಗಿ ನ್ಯಾಯಾಲಯವು, ಎಲ್ಲಾ ಬಗೆಯ ಲೈಂಗಿಕ ನಿಲುವು ಮತ್ತು ಲಿಂಗಾಧಾರಿತ ಅಸ್ಮಿತೆಯ ಜನರಿಗೆ ಸಮಾನವಾದ ಹಕ್ಕುಗಳು ದೊರಕುತ್ತಿವೆಯೆಂದು ಖಚಿತಪಡಿಸಿಕೊಳ್ಳುವ ಹೊಸ ಶಾಸನವನ್ನು ಜಾರಿಗೊಳಿಸಿ ಅಥವಾ ಅಸ್ತಿತ್ವದಲ್ಲಿರುವ ಶಾಸನಗಳನ್ನು ತಿದ್ದುಪಡಿ ಮಾಡುವಂತೆ ನೇಪಾಳದ ಸರಕಾರಕ್ಕೆ ನಿರ್ದೇಶಿಸಿತು.

119. 2015ನೇ ಇಸವಿಯಲ್ಲಿ, **ಒಲಿಯರಿ v. ಇಟಲಿ**[259] ಪ್ರಕರಣದಲ್ಲಿ ("ಒಲಿಯರಿ") ಈ.ಸಿ.ಟಿ.ಎಚ್.ಆರ್. ಎದುರು ಅಭ್ಯರ್ಥಿಗಳು ಇಟಲಿಯ ಶಾಸನದಲ್ಲಿ ಸಮಲೈಂಗಿಕ ಮದುವೆ ಅಥವಾ ಇನ್ನಾವುದೇ ನಾಗರಿಕ ಸಮಾಗಮಕ್ಕೆ ಅನುಮತಿಸುವ ಕಾನೂನು ಇಲ್ಲದೆ ಇರುವುದು, ಲೈಂಗಿಕ ನಿಲುವನ್ನಾಧರಿಸಿದ ತಾರತಮ್ಯವಾಗಿದ್ದು ಅದು ಮಾನವ ಹಕ್ಕುಗಳ ಐರೂಪ್ಯ ಅಧಿವೇಶನದ 8, 12, ಮತ್ತು 14ನೇ ಕಲಮುಗಳನ್ನು ಉಲ್ಲಂಘಿಸುತ್ತದೆ ಎಂದು ವಾದಿಸಿದರು. ತನ್ನ ಹಿಂದಿನ ಕಾನೂನಿನ ಪ್ರಕಾರ, ಸಮಲೈಂಗಿಕ ದಂಪತಿಗಳ "ಸಂಬಂಧಗಳಿಗೆ ಕಾನೂನುನ ಮಾನ್ಯತೆ ಮತ್ತು ರಕ್ಷಣೆಯ ಅಗತ್ಯವಿದೆ" ಎಂದು ನ್ಯಾಯಾಲಯ ನುಡಿಯಿತು. ಈ.ಸಿ.ಟಿ.ಎಚ್.ಆರ್. ಸಮಲೈಂಗಿಕ ಜೋಡಿಗಳು ಸ್ಥಿರವಾದ ಮತ್ತು ಬದ್ಧತೆಯ ಸಂಬಂಧಗಳನ್ನು ಹೊಂದಲು ಭಿನ್ನಲಿಂಗೀಯ ದಂಪತಿಗಳಷ್ಟೇ ಸಮರ್ಥವಾಗಿವೆ ಎಂದು ನುಡಿಯಿತು.

120. ಇಟಲಯ ಸ್ಥಳೀಯ ಸನ್ನಿವೇಶವನ್ನು ಪರಿಶೀಲಿಸಿದ ಈ.ಸಿ.ಟಿ.ಎಚ್.ಆರ್. ಬಹಿರಂಗವಾಗಿ ತಮ್ಮ ಸಂಬಂಧಗಳನ್ನು ನಿಭಾಯಿಸುವ "ಅರ್ಜಿದಾರರ ಸಾಮಾಜಿಕ ವಾಸ್ತವ" ಮತ್ತು ಮತ್ತು ಸಮಲೈಂಗಿಕ ಸಾಂಗತ್ಯಗಳನ್ನು ಔಪಚಾರಿಕವಾಗಿ ಗುರುತಿಸಲು ವಿಫಲವಾದ ಕಾನೂನಿನ ನಡುವೆ ಸ್ಪಷ್ಟವಾದ ಕಂದಕವಿದೆ ಎಂಬುದನ್ನು ಗುರುತಿಸಿತು. ಸಮಲೈಂಗಿಕ ಸಂಬಂಧಗಳಿಗೆ ಕಾನೂನು ಮಾನ್ಯತೆಯನ್ನು ನೀಡುವುದನ್ನು ತಡೆಗಟ್ಟುವುದಕ್ಕೆ ಯಾವುದೇ ಬಗೆಯ ಸಮುದಾಯಕ ಹಿತಾಸಕ್ತಿಯಿರುವ ಸಾಕ್ಷ್ಯವಿಲ್ಲದಿರುವ ಹಿನ್ನೆಲೆಯಲ್ಲಿ ಇಟಾಲಿಯನ್ ಅಧಿಕಾರಿಗಳು "ಮೆಚ್ಚುಗೆಯ ಗಡಿಯಾಚೆಗೆ ಸಾಗಿದ್ದಾರೆ ಮತ್ತು ಅರ್ಜಿದಾರರಿಗೆ, ಸಮಲೈಂಗಿಕ ಸಂಬಂಧಗಳನ್ನು ಗುರುತಿಸಿ ರಕ್ಷಿಸುವ ನಿರ್ದಿಷ್ಟವಾದ ಕಾನೂನಿನ

[259] [2015] ECHR 716

ಚೌಕಟ್ಟನ್ನು ಒದಗಿಸುವ ಸಕಾರಾತ್ಮಕ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ವಿಫಲರಾಗಿದ್ದಾರೆ ಎಂದು ನ್ಯಾಯಾಲಯ ನಿರ್ಧರಿಸಿತು "

121. 2013ನೇ ಇಸವಿಯ, **ಯುನೈಟೆಡ್ ಸ್ಟೇಟ್ಸ್ v. ವಿಂಡ್ಸರ್ ಪ್ರಕರಣದಲ್ಲಿ**[260], ಯು.ಎಸ್. ಸರ್ವೋಚ್ಚ ನ್ಯಾಯಾಲಯವು, ಫೆಡರಲ್ ಕಾನೂನಿನ ಉದ್ದೇಶಕ್ಕಾಗಿ, 'ಮದುವೆ' ಮತ್ತು 'ಸಂಗಾತಿ' ಎಂಬ ಪದಗಳನ್ನು ಒಬ್ಬ ಪುರುಷ ಮತ್ತು ಒಬ್ಬ ಮಹಿಳೆಯ ನಡುವಿನ ನ್ಯಾಯಸಮ್ಮತ ಸಮಾಗಮ ಎಂದು ಉಲ್ಲೇಖಿಸುವ ಮದುವೆ ರಕ್ಷಣೆ ಕಾಯ್ದೆಯ (ಡಿಫೆನ್ಸ್ ಆಫ್ ಮ್ಯಾರೀಜ್ ಆಕ್ಟ್ "ಡಿ.ಓ.ಏಂ.ಎ") ಸಂವಿಧಾನಬದ್ಧತೆಯನ್ನು ಪರಿಶೀಲಿಸಿತು. ತನ್ನ ಸಮಲೈಂಗಿಕ ಸಂಗಾತಿಯ ಆಸ್ತಿಯನ್ನು ವಾರಸುದಾರಿಕೆಯಲ್ಲಿ ಪಡೆದಿದ್ದ ವಿಂಡ್ಸರ್, ಫೆಡರಲ್ ಕಾನೂನಿನ ಪ್ರಕಾರ ಮದುವೆಯಾಗದ ಕಾರಣ, ಅವರಿಗೆ ಬದುಕುಳಿದಿರುವ ಪತ್ನಿಯರಿಗೆ ದೊರೆಯುವ ಫೆಡರಲ್ ಎಸ್ಟೇಟ್ ತೆರಿಗೆ ವಿನಾಯಿತಿ ಸಿಗದಂತೆ ತಡೆಹಿಡಿಯಲಾಯಿತ[261]ು. ಬಹುಮತದ ಪರವಾಗಿ ತೀರ್ಪನ್ನಿತ್ತ ನ್ಯಾಯಮೂರ್ತಿ ಕೆನಡಿ, 'ಮದುವೆ' ಮತ್ತು 'ಸಂಗಾತಿ' ಎಂಬ ಪದಗಳ ಫೆಡರಲ್ ವ್ಯಾಖ್ಯಾನವನ್ನು ಭಿನ್ನಲೈಂಗಿಕ ಸಂಗಾತಿಗಳಿಗಷ್ಟೇ ಅನ್ವಯಿಸುವಂತೆ ನಿರ್ಬಂಧಿಸುವುದು, ಐದನೇ ತಿದ್ದುಪಡಿಯ ಡ್ಯೂ ಪ್ರಾಸೆಸ್ ನಿಬಂಧನೆಗಳ ಪ್ರಕಾರ ಸಂವಿಧಾನಬಾಹಿರವಾಗಿದೆ ಎಂದು ನುಡಿದರು:

> ಮದುವೆಯ ಕುರಿತಾದ ಸರ್ಕಾರದ ವ್ಯಾಖ್ಯಾನಗಳನ್ನು ಗುರುತಿಸಿ ಒಪ್ಪಿಕೊಳ್ಳುವ ಪರಂಪರೆಯನ್ನು ಬಿಟ್ಟು ಅಸಹಜವಾದ ಅಡ್ಡದಾರಿ ಹಿಡಿದಿರುವ ಈ (ಡಿ.ಓ.ಏಂ.ಎ) ನಿರ್ಧಾರವು, ಸಮಲೈಂಗಿಕ ಜೋಡಿಗಳು ತಮ್ಮ ಮದುವೆಗೆ ಸರ್ಕಾರದ ಮುದ್ರೆ ಬಿದ್ದಾಗ ದೊರಕುವ ಅನುಕೂಲಗಳು ಮತ್ತು ಜವಾಬ್ದಾರಿಗಳನ್ನು ಪಡೆದುಕೊಳ್ಳದಂತೆ ತಡೆಯೊಡ್ಡುತ್ತದೆ.
>
> ಇದು ಕಾಯ್ದೆಯೊಂದು, ಸರ್ಕಾರದ ಕಾನೂನುಗಳಿಂದ ಗುರುತಿಸಿಕೊಂಡೂ, ಕಾಪಾಡಲ್ಪಟ್ಟಿರುವ ವರ್ಗವೊಂದರ ಬಗೆಗೆ ಅಸಹನೆ ವ್ಯಕ್ತಪಡಿಸುವ ಉದ್ದೇಶ ಹೊಂದಿರುವುದಕ್ಕೆ ಬಲವಾದ ಸಾಕ್ಷ್ಯ. ಸರ್ಕಾರಗಳ ಪ್ರಶ್ನಾತೀತ ಅಧಿಕಾರದ ಮೂಲಕ ಕಾನುಬದ್ಧಗೊಂಡಿರುವ

[260] 570 U.S. 744 (2013)
[261] Section 3, Defense of Marriage Act.

ಸಮಲೈಂಗಿಕ ವಿವಾಹ ಮಾಡಿಕೊಂಡವರ ಮೇಲೆ ಒಂದು ಬಗೆಯ ಅನಾನುಕೂಲ ಹೇರುವುದು, ಅವರನ್ನು ಪ್ರತ್ಯೇಕ ಸ್ಥಾನದಲ್ಲಿಡುವುದು ಮತ್ತು ಅವರಿಗೆ ಕಳಂಕ ಹಚ್ಚುವುದು ಡಿ.ಓ.ಎಂ.ಎ ಪ್ರತಿಪಾದಿಸುವ ಉದ್ದೇಶವಾಗಿದೆ"

ಎರಡು ವರ್ಷಗಳ ನಂತರ, **ಒಬರ್ಜೆಫೆಲ್ ವಿ. ಹಾಡ್ಜೆಸ್** [262] ("ಒಬೆರ್ಜೆಲ್") ಪ್ರಕರಣದಲ್ಲಿ, ಸಮಲೈಂಗಿಕ ವಿವಾಹವನ್ನು ಇತರ ಯು.ಎಸ್. ನ್ಯಾಯಾಲಯಗಳು ಗುರುತಿಸಿದ ನಿದರ್ಶನ ಮತ್ತು ನಿರ್ಧಾರಗಳನ್ನು ವಿಶ್ಲೇಷಿಸುತ್ತಾ, ನ್ಯಾ. ಕೆನಡಿ ಕೆಳಕಂಡಂತೆ ಗಮನಿಸಿದರು:

ಮದುವೆಗೆ ಸಂಬಂಧಿಸಿದ ಖಾಸಗೀ ಆಯ್ಕೆಯು ವೈಯಕ್ತಿಕ ಸ್ವಾಯುತ್ತತೆಯ ತತ್ವದ ಅವಿಭಾಜ್ಯ ಅಂಗ ಎಂಬುದು ನ್ಯಾಯಾಲಯ ಈ ವಿಚಾರದಲ್ಲಿ ತೆಗೆದುಕೊಂಡಿರುವ ನಿರ್ಧಾರಗಳ ಸಾರಾಂಶ. ಸಂವಿಧಾನದಡಿಯಲ್ಲಿ ರಕ್ಷಿಸಲಾಗಿರುವ ಗರ್ಭನಿರೋಧಕಗಳು, ಕೌಟುಂಬಿಕ ಸಂಬಂಧಗಳು, ಸಂತಾನೋತ್ಪತ್ತಿ ಮತ್ತು ಮಕ್ಕಳಾಗುವಿಕೆಗೆ ಸಂಬಂಧಿಸಿದ ಆಯ್ಕೆಗಳ ಹಾಗೆಯೇ, ಮದುವೆಗೆ ಸಂಬಂಧಿಸಿದ ನಿರ್ಧಾರಗಳು ವ್ಯಕ್ತಿಯೊಬ್ಬರು ತೆಗೆದುಕೊಳ್ಳಬಹುದಾದ ಅತ್ಯಂತ ಖಾಸಗೀ ನಿರ್ಧಾರಗಳಲ್ಲೊಂದು.

122.ಲಾರೆನ್ಸ್ ಪ್ರಕರಣದ ಕಿರಿದಾದ ವ್ಯಾಪ್ತಿಯನ್ನು ಮೀರಿ, ಸಮಲೈಂಗಿಕರ ಹಕ್ಕುಗಳನ್ನು ವಿಸ್ತಾರವಾದ ದೃಷ್ಟಿಕೋನದಿಂದ ನೋಡುವತ್ತ ಮುನ್ನಡೆಯಬೇಕಿರುವ ಅಗತ್ಯವನ್ನು ಜಸ್ಟಿಸ್ ಕೆನೆಡಿ ಈ ರೀತಿ ವ್ಯಕ್ತಪಡಿಸಿದರು:

" ಲಾರೆನ್ಸ್ ಪ್ರಕರಣದ ತೀರ್ಪು ಸಮಲೈಂಗಿಕ ಅನ್ಯೋನ್ಯತೆಯನ್ನು ಅಪರಾಧವೆನ್ನುವ ಕಾನುಗಳನ್ನು ಅಮಾನ್ಯಗೊಳಿಸಿತು.. ಆದರೆ, ಲಾರೆನ್ಸ್ ತೀರ್ಪು ವ್ಯಕ್ತಿಗಳು ಶಿಕ್ಷೆಯ ಭಯವಿಲ್ಲದೆ ಅನ್ಯೋನ್ಯ ಸಂಬಂಧಗಳಲ್ಲಿ ತೊಡಗಲು ಅನುಮತಿಸುವ ಆಯಾಮವೊಂದನ್ನು

[262] 576 U.S. ___ (2015).

> ದೃಢಪಡಿಸಿತಾದರೂ, ಸ್ವಾತಂತ್ರ್ಯ ಅಷ್ಟಕ್ಕೇ ಸೀಮಿತಗೊಳ್ಳುತ್ತದೆ ಎಂಬುದನ್ನು ಅದು ಒಪ್ಪುವುದಿಲ್ಲ. ಕಾನೂನು ಬಾಹಿರವಾಗಿದ್ದವರನ್ನು ನಿರಪರಾಧೀಕರಿಸಿದ್ದು ಉತ್ತಮ ಬೆಳವಣಿಗೆಯೇ ಸರಿ, ಆದರೆ ಅದು ಸ್ವಾತಂತ್ರ್ಯದ ವಾಗ್ದಾನವನ್ನು ಸಂಪೂರ್ಣವಾಗಿ ಈಡೇರಿಸುವುದಿಲ್ಲ”

ಡ್ಯೂ ಪ್ರಾಸೆಸ್ ನಿಬಂಧನೆ ಮತ್ತು ಅಮೇರಿಕೆಯ ಸಂವಿಧಾನದ ಹದಿನಾಲ್ಕನೇ ತಿದ್ದುಪಡಿಯಲ್ಲಿರುವ ಸಮಾನ ರಕ್ಷಣೆಯ ಷರತ್ತುಗಳು ಸಮಲೈಂಗಿಕ ದಂಪತಿಗಳಿಗೆ ಮದುವೆಯಾಗುವ ಹಕ್ಕನ್ನು ಖಾತ್ರಿಪಡಿಸುತ್ತವೆ ಎಂದು ಯು.ಎಸ್. ಸರ್ವೋಚ್ಛ ನ್ಯಾಯಾಲಯವು 5-4 ರ ಬಹುಮತದಲ್ಲಿ, ತೀರ್ಪು ನೀಡಿತು. ಮದುವೆಯ ಹಕ್ಕಿನ ಕುರಿತು ಮಾತನಾಡುತ್ತಾ, ನ್ಯಾ. ಕೆನಡಿ ಈ ರೀತಿ ಗಮನಿಸಿದರು:

> ಮದುವೆಯಷ್ಟು ಗಾಢವಾದ ಸಂಬಂಧ ಮತ್ತೊಂದಿಲ್ಲ, ಏಕೆಂದರೆ ಮದುವೆಯು ಪ್ರೇಮ, ನಿಷ್ಠೆ, ಭಕ್ತಿ, ತ್ಯಾಗ ಮತ್ತು ಕುಟುಂಬಗಳೆಂಬ ಅತ್ಯುನ್ನತ ಆದರ್ಶಗಳನ್ನು ಮೈಗೂಡಿಸಿಕೊಂಡಿದೆ. ಈ ಸ್ತ್ರೀ ಪುರುಷರು ಮದುವೆಯೆಂಬ ಪರಿಕಲ್ಪನೆಯನ್ನು ಗೌರವಿಸುವುದಿಲ್ಲ ಎಂದರೆ ಅದು ಅವರನ್ನು ತಪ್ಪು ತಿಳಿದಂತಾಗುತ್ತದೆ. ನನ್ನ ಅರಿಕೆಯೆಂದರೆ, ಅವರು ಮದುವೆಯನ್ನು ಗೌರವಿಸುತ್ತಾರೆ, ಅದೆಷ್ಟು ಉತ್ಕಟವಾಗಿ ಗೌರವಿಸುತ್ತಾರೆಂದರೆ, ತಾವು ಕೂಡ ಅದರ ಮೂಲಕ ಪರಿಪೂರ್ಣತೆಯನ್ನು ಹೊಂದ ಬಯಸುತ್ತಾರೆ. ತಮ್ಮನ್ನು ನಾಗರಿಕತೆಯ ಅತ್ಯಂತ ಹಳೆಯ ಸಂಸ್ಥೆಯೊಂದರಿಂದ ಹೊರಗುಳಿಸಿ ತಾವು ಒಬ್ಬಂಟಿತನದ ಜೀವನ ನಡೆಸುವಂತಾಗಬಾರದು ಎಂಬುದೇ ಅವರಿಗಿರುವ ಭರವಸೆಯಾಗಿದೆ. ಅವರು ಕಾನೂನಿನ ದೃಷ್ಟಿಯಲ್ಲಿ ಸಮಾನವಾದ ಘನತೆ ಬೇಕೆಂದು ಕೇಳಿದ್ದಾರೆ. ಸಂವಿಧಾನ ಅವರಿಗೆ ಆ ಹಕ್ಕನ್ನು ನೀಡುತ್ತದೆ

123. ಇತ್ತೀಚಿನ **ಮಾಸ್ಟರ್ಪೀಸ್ ಕೇಕ್ ಶಾಪ್ v. ಕೊಲೊರಾಡೋ ನಾಗರಿಕ ಹಕ್ಕುಗಳ ಸಮಿತಿ**[263] ಪ್ರಕರಣದಲ್ಲಿ ("ಮಾಸ್ಟರ್ಪೀಸ್ ಕೇಕ ಶಾಪ್") ತನ್ನ ಧಾರ್ಮಿಕ ನಂಬಿಕೆಗಳ ನೆವದಲ್ಲಿ ಸಮಲೈಂಗಿಕ ದಂಪತಿಗಳ ವಿವಾಹಕ್ಕೆ ಕೇಕ್ ಮಾಡಲು ನಿರಾಕರಿಸಿದ ಕ್ರೈಸ್ತ ಬೇಕರ್ ಒಬ್ಬರು ತಾರತಮ್ಯ-ವಿರೋಧಿ ಕಾನೂನನ್ನು ಉಲ್ಲಂಘಿಸಿದ್ದರ ಕುರಿತಾಗಿತ್ತು. ಕೊಲೊರಾಡೋ ಸಿವಿಲ್ ರೈಟ್ಸ್ ಕಮಿಷನ್ (ಕೊಲೊರಾಡೂ ನಾಗರಿಕ ಹಕ್ಕುಗಳ ಸಮಿತಿ) ("ಸಿ.ಸಿ.ಆರ್.ಸಿ") ಬೇಕರ್ ವಿರುದ್ಧ ತೀರ್ಪು ನೀಡಿತು ಮತ್ತು ಮೇಲ್ಮನವಿಯ ಮೇರೆಗೆ ಸರ್ವೋಚ್ಚನ್ಯಾಯಾಲಯ 7-2 ಬಹುಮತದಲ್ಲಿ ಸಿ.ಸಿ.ಆರ್.ಸಿ.ಯು ಅಭಿವ್ಯಕ್ತಿಯ ಸ್ವಾತಂತ್ರ್ಯವನ್ನು ಖಾತರಿಪಡಿಸುವ ಮೊದಲನೇ ತಿದ್ದುಪಡಿಯಡಿಯಲ್ಲಿನ್ನ ಬೇಕರ್ ಗೆ ಕೊಡಮಾಡಲಾಗಿರುವ ಹಕ್ಕುಗಳನ್ನು ಉಲ್ಲಂಘಿಸಿದೆ ಎಂದು ನಿರ್ಧರಿಸಿತು. ಬಹುಮತದ ಪರವಾಗಿ ತೀರ್ಪನ್ನಿತ್ತ, ನ್ಯಾಯಮೂರ್ತಿ ಕೆನಡಿ, ಸಿ.ಸಿ.ಆರ್.ಸಿ ಬೇಕರ್ ನ ಧಾರ್ಮಿಕ ನಂಬಿಕೆಗಳೆಡೆಗೆ "ಹಗೆತನವನ್ನು" ತೋರಿಸಿದೆ ಎಂದು ಅಭಿಪ್ರಾಯಪಟ್ಟಿತು:

> ಸರ್ಕಾರಿ ಕೆಲಸಗಳಲ್ಲಿ ಕಡ್ಡಾಯವಾಗಿ ಪಾಲಿಸಬೇಕಿರುವ ಧಾರ್ಮಿಕ ತಟಸ್ಥೆಯ ತತ್ವಕ್ಕೆ ತಕ್ಕಂತೆ, ಈ ಪ್ರಕರಣದಲ್ಲಿ ಫಿಲಿಪ್ ನ ಪ್ರಾಮಾಣಿಕವಾದ ಧಾರ್ಮಿಕ ತಕರಾರುಗಳೆದುರು ಸರ್ಕಾರದ ಹಿತಾಸಕ್ತಿಗಳು ಮೇಲುಗೈ ಸಾಧಿಸಿದುವು ಎಂದು ನಿರ್ಧರಿಸಬಹುದು. ಆಯುಕ್ತರ ಕೆಲ ಟಿಪ್ಪಣಿಗಳಲ್ಲಿ ಕಂಡುಬರುವ ಧರ್ಮದೆಡೆಗಿನ ದ್ವೇಷದ ಅಧಿಕೃತ ಅಭಿವ್ಯಕ್ತಿಗಳು - ಫ್ರೀ ಎಕ್ಸರ್ಸೈಸ್ ಕ್ಲಾಸ್ (ಮುಕ್ತ ಚಲಾವಣಾ ನಿಬಂಧನೆ) ನ ಅಗತ್ಯದೊಂದಿಗೆ ತಾಳೆಯಾಗುವುದಿಲ್ಲ–ಆ ಟಿಪ್ಪಣಿಗಳನ್ನು ಆಯೋಗದಲ್ಲಾಗಲೀ, ಸರ್ಕಾರದ ಮೂಲಕವಾಗಲೀ ಆದೇಶ ಅಂಗ೦ೀಕಾರಗೊಳ್ಳಲು ಕಾರಣವಾದ ಮೊಕದ್ದಮೆಯ ಯಾವುದೇ ಹಂತದಲ್ಲಿ ವಿರೋಧಿಸಲಾಗಲಿಲ್ಲ. ಹೋಲಿಸಿದರೆ, ಫಿಲಿಪ್ ನ ಪ್ರಕರಣವನ್ನು ಆಯೋಗವು ಇತರ ಬೇಕರ್ಗಳ ಪ್ರಕರಣಗಳಿಗಿಂತ

---

[263] 584 U.S. ____ (2018).

ಭಿನ್ನವಾಗಿ ಪರಿಗಣಿಸಿರುವುದು ಕೂಡ ಅದನ್ನೇ ಸೂಚಿಸುತ್ತದೆ. ಈ ಎಲ್ಲಾ ಕಾರಣಗಳಿಂದ, ಸದರಿ ತೀರ್ಪನ್ನು ತಳ್ಳಿಹಾಕಬೇಕಿದೆ"

ಬಹುಪಾಲು ನ್ಯಾಯ ಮೂರ್ತಿಗಳು, ಸಂವಿಧಾನವು ಸಮಲೈಂಗಿಕ ವ್ಯಕ್ತಿಗಳಿಗೆ ನಾಗರಿಕ ಹಕ್ಕುಗಳನ್ನು ಚಲಾಯಿಸುವ ಅನುಮತಿ ನೀಡುತ್ತದೆಯಾದರೂ, "ಸಮಲೈಂಗಿಕ ಮದುವೆಯ ಕುರಿತಾದ ಧಾರ್ಮಿಕ ಮತ್ತು ತಾತ್ವಿಕ ಆಕ್ಷೇಪಣೆಗಳು ರಕ್ಷಿಸಲ್ಪಟ್ಟಿರುವ ಅಭಿಪ್ರಾಯಗಳಾಗಿದ್ದು, ಅವು ಕೆಲವು ಸಂದರ್ಭಗಳಲ್ಲಿ ಅಭಿವ್ಯಕ್ತಿಯ ಸಂರಕ್ಷಿಸಲ್ಪಟ್ಟ ರೂಪಗಳಾಗಿವೆ" ಎಂದು ಅಭಿಪ್ರಾಯಪಟ್ಟರು. ಮೊದಲನೇ ತಿದ್ದುಪಡಿಯ ಹಕ್ಕುಗಳ್ ಹಿನ್ನೆಲೆಯಲ್ಲಿ ಬೇಕರ್ ನ ಹಕ್ಕುಗಳ ಸಮಂಜಸಾತೆಯನ್ನು ಮನಗಂಡ ಸರ್ವೋಚ್ಚ ನ್ಯಾಯಾಲಯ, ಈ ಘಟನೆ ಕೊಲೊರಾಡೋದ ತಾರತಮ್ಯ-ವಿರೋಧಿ ಕಾನೂನು ಜಾರಿಯಾಗುವುದಕ್ಕೂ ಮೊದಲು ಮತ್ತು ಸಮಲೈಂಗಿಕ ವಿವಾಹವನ್ನು ಕಾನೂನುಬದ್ಧಗೊಳಿಸಿದ ಓಬರ್ಜೆಫೆಲ್ ತೀರ್ಪು ಹೊರಬೀಳುವುದಕ್ಕೂ ಮುನ್ನ 2012 ರಲ್ಲಿ ನಡೆದದ್ದು ಎಂಬ ಹಿನ್ನೆಲೆಯಲ್ಲಿ ಬೇಕರ್ ನ ಸಂದಿಗ್ಧ ಅರ್ಥವಾಗುವಂತಹದ್ದಾಗಿದೆ, ಎಂದು ಗಮನಿಸಿತು.

ಇತರ ಹಲವಾರು ಪ್ರಕರಣಗಳಲ್ಲಿ, ಕೇಕುಗಳನ್ನು ಅಲಂಕರಿಸುವ ಸಲುವಾಗಿ ಸಮಲೈಂಗಿಕ ವ್ಯಕ್ತಿಗಳ ಕುರಿತ ಅವಹೇಳನಕಾರಿ ಸಂದೇಶಗಳನ್ನು ಬರೆಯಲು ಬೇಕರ್ ಗಳು ಒಪ್ಪದಿದ್ದುದು ಮತ್ತು ಸರ್ಕಾರದ ನಾಗರಿಕ ಹಕ್ಕುಗಳ ವಿಭಾಗವು, ಬೇಕರ್ ಗಳು ಹಾಗೆ ನಿರಾಕರಿಸುವ ಹಕ್ಕುಗಳನ್ನು ಹೊಂದಿದ್ದಾರೆ ಎಂದು ನಿರ್ಧರಿಸಿದ್ದ ನಿದರ್ಶನಗಳನ್ನು ಉಲ್ಲೇಖಿಸಿದ ನ್ಯಾಯಾಲಯ ತನ್ನ ನಿಲುವನ್ನು ಸಮರ್ಥಿಸಿಕೊಂಡಿತು. ಅದೇ ರೀತಿ ಮಾಸ್ಟರ್ಪೀಸ್ ಕೇಕ್ ಶಾಪ್ ಪ್ರಕರಣದಲ್ಲಿ ಕೇಕ್ ಅಂಗಡಿಯ ಮಾಲೀಕನಿಗೆ ಕೇಕನ್ನು ತಯಾರಿಸುವುದನ್ನು ನಿರಾಕರಿಸುವ ಅಧಿಕಾರವಿದದ್ದು, ಈ ಪ್ರಕರಣವನ್ನು ಬೇರೆ ರೀತಿಯಲ್ಲಿ ನಡೆಸಿಕೊಳ್ಳಬಾರದು ಎಂಬ ಬಹುಮತದ ತೀರ್ಪನ್ನು ಮಂಡಿಸಲಾಯಿತು.

124. ಜಸ್ಟೀಸ್ ಸೋಟೊಮೇಯರ್ ರವರು ಬೆಂಬಲಿಸಿದ, ನ್ಯಾಯಮೂರ್ತಿ ಗಿನ್ಸ್ಬರ್ಗ್ರವರ ಭಿನ್ನನಿಲುವಿನ ತೀರ್ಪು, ಇತರ ಮೂರು ಬೇಕರ್ಗಳಿಂದ ಮಾಸ್ಟರ್ಪೀಸ್ ಕೇ ಕಶಾಪ್ ನಾ ಬೇಕರ್ ನನ್ನು ಪ್ರತ್ಯೇಕಿಸಿತು. ಇತರ ಬೇಕರ್ಗಳು, ಎಲ್ಲಾ ಗ್ರಾಹಕರಿಗೆ ಕೇಕ್ ಅಲಂಕಾರ ಮಾಡುವುದನ್ನು ನಿರಾಕರಿಸಿದರೆ, ಮಾಸ್ಟರ್ಪೀಸ್ ಕೇಕ್ ಶಾಪಿನ ಮಾಲೀಕರಾದ ಫಿಲಿಪ್ಸ್, ನಿರ್ದಿಷ್ಟವಾದ ಜೋಡಿಯೊಂದರ ಮದುವೆಯ ಕೇಕ್ (ಇತರ ಗ್ರಾಹಕರಿಗೆ ಅವರು ಒದಗಿಸುವಂತಹದು) ತಯಾರಿಸಲು ವಿಶೇಷವಾಗಿ ನಿರಾಕರಿಸಿದರು ಎಂದು ಜಸ್ಟಿನ್ ಗಿನ್ಸ್ಬರ್ಗ್ ಗಮನಿಸಿದರು. ಅವರು ಹೀಗೆ ವಿವರಿಸುತ್ತಾರೆ:

" ಫಿಲಿಪ್ಸ್ ತನಗೆ ಆಘಾತಕರವೆನಿಸಿದ ಕೇಕನ್ನು ತಯಾರಿಸಲು ನಿರಾಕರಿಸಿದನು ಮತ್ತು ಇಲ್ಲಿ ಆಘಾತಕಾರಿತನವು ಕೇಕನ್ನು ತಯಾರಿಸುವಂತೆ ಕೇಳಿಕೊಂಡ ಗ್ರಾಹಕನ ಅಸ್ಮಿತೆಯ ಆಧಾರದಲ್ಲಿ ನಿರ್ಧರಿಸಲಾಗಿತ್ತು. ಇತರ ಮೂವರು ಬೇಕರ್ಗಳು ಕೇಕ್ ತಯಾರಿಸಲು ನಿರಾಕರಿಸಿದ ಪ್ರಕರಣದಲ್ಲಿ, ಅವರ ನಿರಾಕರಣೆಯು ತಾವು ತಾಯಾರಿಸಬೇಕಿರುವ ವಸ್ತುವಿನ ಮೇಲೆ ಎಲ್ಲರಿಗೂ ಕಾಣುವರೀತಿಯಲ್ಲಿ ಬರೆಯಾಲಾಗುವ ಅವಮಾನಕರ ಸಂದೇಶದ ದೆಸೆಯಿಂದ ಹುಟ್ಟಿಕೊಂಡಿತ್ತು (ಒತ್ತು ನೀಡಲಾಗಿದೆ)

ಜೋಡಿಯೊಂದು ತಮ್ಮ ಮದುವೆಯ ಕೇಕನ್ನು ತಯಾರಿಸಲು ಬೇಕರಿಯೊಂದನ್ನು ಸಮ್ಪರ್ಕಿಸಿದಾಗ ಅವರು ಬಯಸುವ ಕೇಕ್ ಅವ್ರ ಮದುವೆಯನ್ನು ಸಂಭ್ರಮಿಸಲು ಬಳಕೆಯಾಗುತ್ತದೆಯೇ ಹೊರತು ಅದು ಭಿನ್ನಲೈಂಗಿಕ ಅಥವಾ ಸಮಲೈಂಗಿಕ ಮದುವೆಯನ್ನು ಸಂಭ್ರಮಿಸುವ ಉದ್ದೇಶಹೊಂದಿರುವುದಿಲ್ಲ. ಕ್ರೇಗ್ ಮತ್ತು ಮಲ್ಲಿನ್ಸ್ ಬಯಸಿದ ಅನ್ತಹುದೇ ಉತ್ಪನ್ನವನ್ನು ನಿರಾಕರಿಸಲಾಗಿದೆ

ಜಸ್ಟಿಸ್ ಗಿನ್ಸ್ಬರ್ಗ್, ಕೊಲೊರಾಡೋದ ತಾರತಮ್ಯ ವಿರೋಧಿ ಕಾಯ್ದೆಯನ್ನು ಸೂಕ್ತವಾಗಿ ಅನ್ವಯಿಸಬೇಕಿದ್ದಾರೆ, ಕೆಳಸ್ಥರಗಳ ನ್ಯಾಯಾಲಯಗಳ ತೀರ್ಪುಗಳನ್ನು ಎತ್ತಿಹಿಡಿಯ ಬೇಕಾಗುತ್ತದೆ ಎಂದು ತೀರ್ಮಾನಿಸಿದರು.

125. **ಮಾಸ್ಟರ್ಪೀಸ್ ಕೇಕ್ ಶಾಪ್** ಪ್ರಕರಣವನ್ನು, ಅದನ್ನೇ ಹೋಲುವ, ಪ್ರಸ್ತುತ ಯುನೈಟೆಡ್ ಕಿಂಗ್ಡಂ ನ ಸರ್ವೋಚ್ಚ ನ್ಯಾಯಾಲಯದಲ್ಲಿ ವಿಚಾರಣೆಗೊಳಗಾಗುತ್ತಿರುವ **ಲೀ ವಿ. ಆಶರ್ಸ್ ಬೇಕರಿ ಕಂ ಲಿಮಿಟೆಡ್**[264] ಪ್ರಕರಣದ ಮೂಲಕ ಕೂಡಾ ಗುರುತಿಸಬಹುದಾಗಿದೆ. ಈ ಪ್ರಕರಣದಲ್ಲಿ, ಉತ್ತರ ಐರ್ಲೆಂಡ್ ನ

[264] [2015] NICty 2.

ಬೇಕರಿಯೊಂದು ತನ್ನ ಗ್ರಾಹಕರಿಗೆ, ಕೇಕ್ ನ ಮೇಲೆ ಸಂದೇಶಗಳು, ಚಿತ್ರಗಳು ಅಥವಾ ಗ್ರಾಫಿಕ್ಸ್ ಗಳನ್ನು ಬರೆಯಿಸುವ ಸೇವೆಯನ್ನು ಒದಗಿಸಿತು. ಎಲ್.ಜಿ.ಬಿ.ಟಿ ಸಂಘಟನೆಯೊಂದರ ಸದಸ್ಯರಾದ ಲೀ ಎಂಬುವವರು, "ಸಮಲೈಂಗಿಕ ಮದುವೆಯನು ಬೆಂಬಲಿಸಿ" ಎಂಬ ಸಂದೇಶವಿರುವ ಕೇಕನ್ನು ತಯಾರಿಸಲು ಹೇಳಿದರು. ಕ್ರೈಸ್ತರಾಗಿದ್ದ ಮಾಲೀಕರು, ಅಂತಹ ಕೇಕನ್ನು ತಯಾರಿಸುವುದು ತಮ್ಮ ಧಾರ್ಮಿಕ ನಂಬಿಕೆಗಳೊಂದಿಗೆ ತಾಳೆಯಾಗುವುದಿಲ್ಲ ಎಂದು ಹೇಳಿ ನಿರಾಕರಿಸಿದರು. ತನ್ನ ಕೇಕ್ ತಯಾರಿಸುವುದನ್ನು ನಿರಾಕರಿಸುವ ಮೂಲಕ, ಬೇಕರಿಯವರು ತನ್ನ ವಿರುದ್ಧ ಲೈಂಗಿಕ ನಿಲುವನ್ನಾಧರಿಸಿದ ತಾರತಮ್ಯ ಎಸಗಿದ್ದಾರೆ ಎಂದು ಲೀ ಆರೋಪಿಸಿದರು. ಕೌಂಟಿ ನ್ಯಾಯಾಲಯ ಮತ್ತು ಮೇಲ್ಮನವಿಯ ನ್ಯಾಯಾಲಯಗಳೆರಡೂ ತಮ್ಮ ಧಾರ್ಮಿಕ ನಂಬಿಕೆಗಳ ನೆಲೆಯಲ್ಲಿ ಅರ್ಜಿದಾರರ ಕೋರಿಕೆಯನ್ನು ನಿರಾಕರಿಸುವುದು, ಸಮಾನತಾ ಕಾಯಿದೆಯ (ಲೈಂಗಿಕ ನಿಲುವು) ನಿಯಮಗಳು (ಉತ್ತರ ಐರ್ಲೆಂಡ್), 2006 ಮತ್ತು ನ್ಯಾಯೋಚಿತ ಉದ್ಯೋಗ ಮತ್ತು ವರ್ತನೆಯ ಆದೇಶ, 1998ರ ನಿಬಂಧನೆಗಳಿಗೆ ವಿರುದ್ಧವಾಗಿದೆ ಎಂಬ ಆಧಾರದ ಮೇಲೆ ಲೀರವರ ಪರವಾಗಿ ತೀರ್ಪು ನೀಡಿದವು.

ಪ್ರಪಂಚದಾದ್ಯಂತದ ತುಲನಾತ್ಮಕ ನ್ಯಾಯಶಾಸ್ತ್ರದ ವಿಶ್ಲೇಷಣೆಯಿಂದ, ಕೆಳಗಿನ ತತ್ವಗಳು ಹೊರಹೊಮ್ಮುತ್ತವೆ:
ಜಗತ್ತಿನೆಲ್ಲೆಡೆಯ ನ್ಯಾಯನಿರ್ಣಯಗಳನ್ನು ಹೋಲಿಸಿ ವಿಶ್ಲೇಷಿಸಿದಾಗ, ಈ ಕೆಳಗಿನ ತತ್ವಗಳು ಎದ್ದು ಕಾಣುತ್ತವೆ:

1. ಲೈಂಗಿಕ ನಿಲುವು ಸ್ವಾತಂತ್ರ್ಯ, ಘನತೆ, ಗೌಪ್ಯತೆ, ವೈಯಕ್ತಿಕ ಸ್ವಾಯತ್ತತೆ ಮತ್ತು ಸಮಾನತೆಗಳ ಅವಿಭಾಜ್ಯ ಅಂಶವಾಗಿದೆ;
2. ಸಮಾನ ಲಿಂಗದ ಒಪ್ಪಿಗೆಯಿರುವ ವಯಸ್ಕರ ನಡುವಿನ ಅನ್ಯೋನ್ಯತೆಯು ಸರ್ಕಾರದ ಕಾನೂನುಬದ್ಧ ಹಿತಾಸಕ್ತಿಗಳನ್ನು ಮೀರಿದ ವಿಚಾರವಾಗಿದೆ;
3. ಗುದಸಂಭೋಗದ ಕಾನೂನುಗಳು ಲೈಂಗಿಕ ನಿಲುವಿನ ನೆವದಲ್ಲಿ ಜನಸಂಖ್ಯೆಯ ಒಂದು ಭಾಗವನ್ನು ಗುರಿಯಾಗಿಟ್ಟುಕೊಂಡು ಸಮಾನತೆಯನ್ನು ಉಲ್ಲಂಘಿಸುತ್ತವೆ;
4. ಇಂತಹ ಕಾನೂನೊಂದು, ರೂಢಮಾದರಿಗಳನ್ನು ಎತ್ತಿಹಿಡಿಯುತ್ತದೆ, ಸಾಮಾಜಿಕ ರೂಢಿಗಳಿಗೆ ಸರ್ಕಾರದ ಮುದ್ರೆಯನ್ನೊತ್ತುತ್ತದೆ ಮತ್ತು ಸ್ವಾತಂತ್ರ್ಯದ ಚಲಾವಣೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ;

5. ಪ್ರೀತಿಸುವ ಮತ್ತು ಸಂಗಾತಿಯನ್ನು ಹೊಂದುವ ಹಕ್ಕು, ಸಮಲೈಂಗಿಕ ಸಂಬಂಧವೊಂದರಲ್ಲಿ ಪರಿಪೂರ್ಣತೆ ಕಂಡುಕೊಳ್ಳುವ ಹಕ್ಕು, ಹಕ್ಕುಗಳ ಮೇಲೆ ರಚನೆಯಾಗಿರುವ ಸಾಂವಿಧಾನಿಕ ವ್ಯವಸ್ಥೆಯಡಿಯಲ್ಲಿ ಸ್ವಾತಂತ್ರ್ಯದಲ್ಲಿ ನಂಬಿಕೆಯಿರಿಸುವ ಸಮಾಜವೊಂದಕ್ಕೆ ಅಗತ್ಯವಾಗಿದೆ;
6. ಲೈಂಗಿಕ ನೀಲುವು ಸರ್ಕಾರದ ಮೇಲೆ ನಕಾರಾತ್ಮಕ ಮತ್ತು ಸಕಾರಾತ್ಮಕ ಬದ್ಧತೆಗಳನ್ನು ಹೇರುತ್ತದೆ. ಆದು ಸರ್ಕಾರಕ್ಕೆ ತಾರತಮ್ಯ ಮಾಡಬಾರದೆಂದು ಹೇಳುವುದರ ಜೊತೆಗೆ, ಸಮಲೈಂಗಿಕ ಸಂಬಂಧಗಳ ನೈಜ ನೆರವೇರಿಕೆಗೆ ಅನುವಾಗುವ ಹಕ್ಕುಗಳನ್ನು ಗುರುತಿಸಬೇಕೆಂದು ಕರೆನೀಡುತ್ತದೆ; ಮತ್ತು
7. ನಿರಪರಾಧೀಕರಣಕ್ಕೆ ಕಾರಣವಾದ ಸಂವಿಧಾನಾತ್ಮಕ ತತ್ವಗಳು, ಜೀವನದ ಪ್ರತಿಯೊಂದು ಘಟ್ಟದಲ್ಲಿ ಸಮಲೈಂಗಿಕ ಸಂಬಂಧಗಳ ನೈಜವಾದ ಈಡೇರಿಕೆಯನ್ನು ಕಂಡುಕೊಳ್ಳಲು ಅನುವಾಗುವ ಹಕ್ಕುಗಳ ನಿರಂತರ ಪ್ರತಿಪಾದನೆಯಲ್ಲಿ ತೊಡಗಬೇಕು. ಕಾನೂನು ಸಮಲೈಂಗಿಕ ಸಂಬಂಧಗಳ ವಿರುದ್ಧ ತಾರತಮ್ಯ ಎಸಗುವಂತಿಲ್ಲ. ಸಮಾನ ರಕ್ಷಣೆಯನ್ನು ಒದಗಿಸಲು ಕಾನೂನು ಸೂಕ್ತವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು.

ಕಳೆದೆರಡು ದಶಕಗಳು, ಖಾಸಗೀಯಾದ ಸಮಲೈಂಗಿಕ ಕ್ರಿಯೆಗಳ ಕಾನೂನುಬದ್ಧತೆ ಮತ್ತು ಲೈಂಗಿಕ ನಿಲುವಿನ ಸಮಾನತೆಯನ್ನು ಒಪ್ಪುವ ವಿಸ್ತಾರವಾದ ಹಕ್ಕುಗಳೆರಡನ್ನೂ ಗುರುತಿಸಿದ ಸಾಂವಿಧಾನಿಕ ಮತ್ತು ಅಂತಾರಾಷ್ಟ್ರೀಯ ನ್ಯಾಯಾಲಯಗಳ ಹಲವಾರು ತೀರ್ಪುಗಳಿಗೆ ಸಾಕ್ಷಿಯಾಗಿವೆ, ಅಲ್ಲದೇ 1996ನೇ ಇಸವಿಯಲ್ಲಿ, ದಕ್ಷಿಣ ಆಫ್ರಿಕಾವು ಲೈಂಗಿಕ ನಿಲುವನ್ನಾಧರಿಸಿದ ತಾರತಮ್ಯವನ್ನು ಸಂವಿಧಾನಾತ್ಮಕವಾಗಿ ನಿಷೇಧಿಸುವ ಮೊತ್ತಮೊದಲ ದೇಶವಾಯಿತು[265]. ಈ ತೀರ್ಪು ಹೊರಬೀಳುತ್ತಿರುವ ಈ ದಿನದ ಮಟ್ಟಿಗೆ ಹತ್ತು ದೇಶಗಳು ಲೈಂಗಿಕ ನಿಲುವನ್ನಾಧರಿಸಿದ ತಾರತಮ್ಯವನ್ನು ಸಂವಿಧಾನಾತ್ಮಕವಾಗಿ ನಿಷೇಧಿಸುತ್ತವೆ. ಯುನೈಟೆಡ್ ಕಿಂಗ್ಡಮ್, ಬೊಲಿವಿಯಾ, ಈಕ್ವೆಡಾರ್, ಫಿಜಿ ಮತ್ತು ಮಾಲ್ಟಾ ದೇಶಗಳು ವಿಶೇಷವಾಗಿ ಲಿಂಗಾಧಾರಿತ ಅಸ್ಮಿತೆಯನ್ನಾಧರಿಸಿದ ತಾರತಮ್ಯವನ್ನು ಸಾಂವಿಧಾನಿಕವಾಗಿ ಅಥವಾ ಕಾನೂನುಗಳನ್ನು ಜಾರಿಗೊಳಿಸುವ ಮೂಲಕ ನಿಷೇಧಿಸುತ್ತವೆ. ಅಂತಾರಾಷ್ಟ್ರೀಯ ಲೆಸ್ಬಿಯನ್, ಗೇ, ಬೈಸೆಕ್ಸುವಲ್, ಟ್ರಾನ್ಸ್ ಮತ್ತು ಇಂಟರ್ಸೆಕ್ಸ್ ಸಂಘದ ಪ್ರಕಾರ, 2017ರ ಮಟ್ಟಿಗೆ 74 ದೇಶಗಳು (ಭಾರತವನ್ನೂ ಒಳಗೊಂಡಂತೆ) ಸಮಲೈಂಗಿಕ ನಡವಳಿಕೆಯನ್ನು

[265] Amy Raub, "Protections Of Equal Rights Across Sexual Orientation And Gender Identity: An Analysis Of 193 National Constitutions", Yale Journal of Law and Feminism, Vol. 28 (2017).

ಅಪರಾಧೀಕರಿಸುತ್ತವೆ[266]. ಈ ದೇಶಗಳಲ್ಲಿ ಹೆಚ್ಚಿನವು ಉಪ-ಸಹಾರ ಮತ್ತು ಮಧ್ಯಪ್ರಾಚ್ಯ ಪ್ರದೇಶದಲ್ಲಿವೆ. ಕೆಲ ರಾಷ್ಟ್ರಗಳು ಸಮಲೈಂಗಿಕತೆಗೆ ಮರಣದಂಡನೆಯನ್ನು ವಿಧಿಸುತ್ತವೆ.

126.ಸಾಮಾಜಿಕ ಮತ್ತು ಐತಿಹಾಸಿಕ ಸನ್ನಿವೇಶಗಳು ಒಂದು ವ್ಯಾಪ್ತಿಯಿಂದ ವ್ಯಾಪ್ತಿಗೆ ಭಿನ್ನವಾಗಿರುತ್ತವೆ ಎಂಬುದರ ಅರಿವು ನಮಗಿದ್ದು, ಈ ಕಾರಣದಿಂದ ಅವುಗಳಿಗೆ ತುಲನಾತ್ಮಕ ಕಾನೂನು ರಚನೆಯ ಆಧಾರದಲ್ಲಿ ರಿಯಾಯತಿಗಳನ್ನು ನೀಡುವತ್ತ ಗಮನಹರಿಸಬೇಕು ಎಂದು ನಮಗೆ ತಿಳಿದಿದೆ. ಆದಾಗ್ಯೂ, ಅಂತಾರಾಷ್ಟ್ರೀಯ ಅಭಿಪ್ರಾಯದ್ದ ಅಗಾಧ ಒತ್ತಡ ಮತ್ತು ಸಮಲೈಂಗಿಕ ದಂಪತಿಗಳ ಮೂಲಭೂತ ಹಕ್ಕುಗಳನ್ನು ಗುರುತಿಸುವ ಪ್ರಮಾಣವು ನಾಟಕೀಯವಾಗಿ ಹೆಚ್ಚಳವಾಗಿರುವುದು, ಲೈಂಗಿಕ ನಿಲುವಣ್ಣಾಧರಿಸಿದ ಸಮಾನತೆಯೆಡೆಗೆ ಬೆಳೆಯುತ್ತಿರುವ ಒಮ್ಮತವನ್ನು ಪ್ರತಿಫಲಿಸುತ್ತದೆ. ಈ ತೀರ್ಪುಗಳಲ್ಲಿ ಪ್ರತಿಬಿಂಬಿತವಾಗಿರುವ ಸಂಗ್ರಹಿಸಲ್ಪಟ್ಟ ಜ್ಞಾನವನ್ನು ಒಪ್ಪಿಕೊಳ್ಳಬೇಕೆಮ್ಬ ಭಾವನೆ ನಮ್ಮದಾಗಿದ್ದು, ಭಾರತೀಯ ಸಮ್ವಿದಾನದಡಿಯ ಖಾತರಿಗಳ ಅರ್ಥ್ವನ್ನು ನಿರ್ಧರಿಸುವ ಬದಲು, ಆ ಖಾಟರಿಗಳಿಗೆ ನಮ್ಮ ನಿರ್ಧಾರದ ಮೂಲಕ ಧೃಡವಾದ ಮತ್ತು ಪ್ರಶಂಸಾರ್ಹ ದೃಢೀಕರಣ ಒದಗಿಸಬೇಕೆಂಬುದು ನಮ್ಮ ನಿಲುವಾಗಿದೆ.

ಇಂತಹ ವಿಕಾಸವು, ಉದಾರ ಸಾಂವಿಧಾನಿಕ ಮೌಲ್ಯಗಳಾದ -ಸ್ವಾತಂತ್ರ್ಯ, ಘನತೆ, ಖಾಸಗೀತನ, ಸಮಾನತೆ ಮತ್ತು ವೈಯಕ್ತಿಕ ಸ್ವಾಯತ್ತತೆ- ಗಳಿಂದ ಆಳಲ್ಪಡುತ್ತಿರುವ ಸಮಾಜಗಳು, ಒಮ್ಮತದ ಸಮಲೈಂಗಿಕ ಸಂಬಂಧಗಳಿಗೆ ಸಂಬಂಧಿಸಿದ ಅಪರಾಧಗಳನ್ನು ನಿರಪರಾಧೀಕರಿಸುವುದನ್ನು ಮೀರಿ ಮುನ್ನಡೆಯುವಂತೆ ಮಾಡಿದೆ. ಸಂಪೂರ್ಣವಾಗಿ ಭಿನ್ನವಾಗಿದ್ದ ಯುಗ ಮತ್ತು ಕಾಲದಲ್ಲಿ ಪ್ರಚಲಿತವಾಗಿದ್ದ ನೈತಿಕತೆಯ ಭೂತಗಳನ್ನು ಮಣ್ಣುಮಾಡುವ ಸಲುವಾಗಿ, ನಿರಪರಾಧೀಕರಣವು ಖಂಡಿತವಾಗಿಯೂ ಆಗಲೇಬೇಕಿದೆ. ಆದರೆ ನಿರಪರಾಧೀಕರಣ ಮೊದಲ ಹೆಜ್ಜೆಯಷ್ಟೇ. ನಿರಪರಾಧೀಕರಣ ಅವಲಂಬಿಸಿರುವ ಸಾಂವಿಧಾನಿಕ ತತ್ವಗಳು, ಇನ್ನಷ್ಟು ವಿಶಾಲ ಶ್ರೇಣಿಯ ಸವಲತ್ತುಗಳಿಗೆ ಅನ್ವಯಿಸತ್ತವೆ. ಭಾರತೀಯ ಸಂವಿಧಾನವು  ಅಂತಹ ಸಾಂವಿಧಾನಿಕ ಮೌಲ್ಯಗಳ

[266] The International Lesbian, Gay, Bisexual, Trans And Intersex Association, “Sexual Orientation Laws of the World”, (2017).

ಮೇಲಿನ ಪ್ರಾಮಾಣಿಕ ನಂಬಿಕೆಯನ್ನು ಅವಲಂಬಿಸಿದೆ. ಸಹಾನುಭೂತಿಯುಳ್ಳ ಜಾಗತಿಕ ವ್ಯವಸ್ಥೆಯೆಡೆಗೆ ವಿಶ್ವದ ನಾಗರಿಕತೆಗಳು ಸಾಗುತ್ತಿರುವಾಗ ಭಾರತ ಹಿಂದುಳಿಯಬಾರದು.

## K. ಅಪರಾಧ, ನೈತಿಕತೆ ಮತ್ತು ಸಂವಿಧಾನ

127. ಕಾನೂನಿನಡಿಯಲ್ಲಿ ಶಿಕ್ಷೆಗೆ ಗುರಿಯಾಗಬಹುದಾದ ಅಪರಾಧ ಎಂದು ಯಾವುದನ್ನು ಕರೆಯಬಹುದು ಎಂಬ ಪ್ರಶ್ನೆಯು ಕಾನೂನು ಸಿದ್ಧಾಂತದಲ್ಲಿ ಪ್ರಮುಖ ಪಾತ್ರ ವಹಿಸಿದೆ. ಅಪರಾಧವೊಂದನ್ನು ವ್ಯಾಖ್ಯಾನಿಸಲು ಕಾನೂನು ವಿದ್ವಾಂಸರು ಮತ್ತು ನ್ಯಾಯಾಧೀಶರು ಸಮಾನವಾದ ಪ್ರಯತ್ನಗಳನ್ನು ಮಾಡಿದ್ದಾರೆ. **ಹಾಲ್ಸ್‌ಬರಿಸ್ ಲಾಸ್ ಆಫ್ ಇಂಗ್ಲೆಂಡ್** ಪ್ರಕರಣದ ತೀರ್ಪು ಅಪರಾಧವನ್ನು "ಕಾನೂನುಬಾಹಿರ ಕೃತ್ಯ ಅಥವಾ ಸಾರ್ವಜನಿಕರ ವಿರುದ್ಧದ ಅಪರಾಧವೆಂದು ಕರೆಯಲ್ಪಡುವ ಕೃತ್ಯ ಮತ್ತು ಆ ಕೃತ್ಯ ಅಥವಾ ತಪ್ಪನ್ನು ಎಸಗಿದ ವ್ಯಕ್ತಿಯನ್ನು ಕಾನೂನಾತ್ಮಕ ಶಿಕ್ಷೆಗೆ ಅರ್ಹನನ್ನಾಗಿಸುವ ತಪ್ಪು ಕೆಲಸ" ಎಂದು ವ್ಯಾಖ್ಯಾನಿಸುತ್ತದೆ[267]. ಗ್ಲ್ಯಾನ್ವಿಲ್ಲೆ ವಿಲಿಯಮ್ಸ್ ಈ ಕೆಳಗಿನಂತೆ ಗಮನಿಸುತ್ತಾರೆ:

> ಅಪರಾಧ ಎಂಬುದು, ಅಪರಾಧಿ ಪರಿಣಾಮಗಳಿರುವ ಮತ್ತು ಅಪರಾಧೀ ವಿಚಾರಣೆಗೆ ಒಳಗಾಗಲು ಸಾಧ್ಯವಾಗುವ ಕ್ರಿಯೆ. ಕ್ರಿಮಿನಲ್ ಕಾನೂನು ಎಂಬುದು ನಡವಳಿಕೆಯನ್ನು ಕ್ರಿಮಿನಲ್ ನ್ಯಾಯಾಲಯಗಳಲ್ಲಿ ವಿಚಾರಣೆಗಳ ಮೂಲಕ ಶಿಕ್ಷಿಸುವಂತಹ ಕಾನೂನಿನ ಒಂದು ಶಾಖೆ[268]

ತಮ್ಮ "ದಿ ಎಮ್ಸ್ ಆಫ್ ಕ್ರಿಮಿನಲ್ ಲಾ" ಎಂಬ ಪ್ರಬಂಧದಲ್ಲಿ[269] ಹೆನ್ರಿ ಹಾರ್ಟ್, ಕಾನೂನಿನ ಈ ಶಾಖೆಯಲ್ಲಿ ವ್ಯಾಖ್ಯಾನ ಮಾಡುವ ಕಷ್ಟದ ಬಗ್ಗೆ ಟಿಪ್ಪಣಿ ಮಾಡುತ್ತಾರೆ. ಒಂದು ಅಪರಾಧವನ್ನು ಅಪರಾಧ ಎಂದು ಕರೆಯಲಾಗುತ್ತದೆಯಾದಾರಿಂದ ಅದು ಅಪರಾಧವಾಗಿದೆ:

> ಹಲವಾರು ನ್ಯಾಯಾಶಾಸ್ತ್ರೀಯ ಅಭಿಪ್ರಾಯಗಳು ಮತ್ತು ಅವುಗಳಲ್ಲಿ ಬಳಸುವ ಕೆಲವು ನೇರವಾದ ಮಾತುಗಳ ಆಧಾರದಲ್ಲಿ

---

[267] Halsbury's Laws of England. 3rd edition, Vol. 3, Butterworths (1953) at page. 271

[268] Glanville Williams, 'The Definition of Crime', Current Legal Problems, Vol. 8 (1955).

[269] Henry M. Hart, "The Aims of the Criminal Law", Law and Contemporary Problems, Vol. 23 (1958), at pages 401–441.

> ನಿರ್ಧರಿಸಬೇಕಿದ್ದಲ್ಲಿ, ಅಪರಾಧವೆಂದು ಕರೆಯಲ್ಪಡುವ ಯಾವುದೇ ಕ್ರಿಯೆನ್ನು ಅಪರಾಧವೆಂದು ಕರೆಯಬಹುದು ಮಾತು ಅಪರಾಧದ ಶಿಕ್ಷೆ ಎಂಬುದನ್ನು, ಅಪರಾಧವೆಂದು ಕರೆಯಲ್ಪಡುವ ಕಾರ್ಯವನ್ನು ಮಾಡಿದರೆ ನೀಡಲಾಗುವ ಸಜೆ ಎನ್ನುವ ಮೂಲಕ ಈ ಒಗಟನ್ನು ಬಿಡಿಸಬಹುದು

ಆದಾಗ್ಯೂ, ಅಂತಹ ಸರಳವಾದ ವ್ಯಾಖ್ಯಾನವು "ಬೌದ್ಧಿಕ ದಿವಾಳಿತನದ ಗುಟ್ಟುಬಿಟ್ಟುಕೊಟ್ಟಂತೆ" ಎಂಬುದನ್ನು ಹಾರ್ಟ್ ಒಪ್ಪಿಕೊಳ್ಳುತ್ತಾರೆ. ರೋಸ್ಕೋ ಪೌಂಡ್ ಯಾವುದು ಅಪರಾಧವಾಗುತ್ತದೆ ಎಂಬುದನ್ನು ನಿರ್ಧರಿಸುವುದರಲ್ಲಿರುವ ಸಂದಿಗ್ಧತೆಯನ್ನು ಹೀಗೆ ವ್ಯಕ್ತಪಡಿಸುತ್ತಾರೆ:

> ಅಪರಾಧವೆಂದರೇನು? ಎಂಬ ಪ್ರಶ್ನೆಗೆ ಕೊನೆಯ ಉತ್ತರ ಎಂಬುದು ಇರಲು ಸಾಧ್ಯವಿಲ್ಲ. ಏಕೆಂದರೆ, ಕಾನೂನು ಎಂಬುದು ಒಂದು ಜೀವಂತ, ಪರಿವರ್ತನಾಶೀಲ ವಿಚಾರ, ಮತ್ತು ಅದು ಕೆಲವೊಮ್ಮೆ ಏಕರೂಪದಲ್ಲಿದ್ದರೆ ಮತ್ತೊಮ್ಮೆ ನ್ಯಾಯಾಂಗದ ವಿವೇಚನೆಗೆ ಸಾಕಷ್ಟು ಅವಕಾಶ ನೀಡಬಹುದು, ಅದು ಕೆಲವೊಮ್ಮೆ ಅತಿ ನಿರ್ಧಿಷ್ಟವಾದ ನಿರ್ದೇಶನಗಳನ್ನು ನೀಡಬಹುದು ಮತ್ತೊಮ್ಮೆ ಅದರ ನಿರ್ದೇಶನಗಳು ಅತ್ಯಂತ ಸರ್ವತ್ರಿಕವಾಗಿರಬಹುದು[270]

ಆರಂಭ ಕಾಲದ ತತ್ವಜ್ಞಾನಿಗಳು ಅಪರಾಧವನ್ನು ವ್ಯಾಖ್ಯಾನಿಸುವ ಸಲುವಾಗಿ ಅದನ್ನು ನಾಗರಿಕ ತಪ್ಪುಕೆಲಸಗಳಿಂದ ಪ್ರತ್ಯೇಕಿಸಲು ಪ್ರಯತ್ನಿಸಿದರು. ವಾಕ್ಚಾತುರ್ಯದ ಮೇಲಿನ ತನ್ನ ಅಧ್ಯಯನದಲ್ಲಿ, ಅರಿಸ್ಟಾಟಲ್ ಕೆಳಗಿನಂತೆ ಗಮನಿಸಿದರು:

> ವ್ಯಕ್ತಿಯೊಬ್ಬರಿಗೆ ಸಂಬಂಧಿಸಿದ ನ್ಯಾಯವನ್ನು ಎರಡು ರೀತಿಯಲ್ಲಿ ವ್ಯಾಖ್ಯಾನಿಸಬಹುದು. ಏಕೆಂದರೆ ಅದನ್ನು ಸಮುದಾಯಕ್ಕೆ ಸಂಬಂಧ ಪಟ್ಟಂತೆ ಅಥವಾ ಆ ಸಮುದಾಯದ ಸದಸ್ಯರು ಏನು ಮಾಡಬೇಕು

[270] Roscoe Pound, Interpretation of Legal History, Harvard University Press (1946).

> ಅಥವಾ ಮಾಡಬಾರದು ಎಂಬುದಕ್ಕೆ ಸಂಬಂಧಪಟ್ಟಂತೆ ವ್ಯಾಖ್ಯಾನಿಸಲಾಗುತ್ತದೆ. ಅದೇ ಪ್ರಕಾರವಾಗಿ, ನ್ಯಾಯ ಮತ್ತು ಅನ್ಯಾಯದ ಕಾರ್ಯಗಳನ್ನು ಎರಡು ರೀತಿಯಲ್ಲಿ ಮಾಡಬಹುದು, ಎಂದರೆ, ಅವುಗಳನ್ನು ಒಬ್ಬ ವ್ಯಕ್ತಿಗೆ ಸಂಬಂಧಿಸಿದಂತೆ ಅಥವಾ ಒಂದು ಸಮುದಾಯಕ್ಕೆ ಸಂಬಂಧ ಪಟ್ಟಂತೆ ಎಸಗಬಹುದು[271]

ಕಾಂಟ್, ತನ್ನ "ಮಾರಲ್ಸ್ ಆಫ್ ಮೆಟಾಫಿಸಿಕ್ಸ್" ನಲ್ಲಿ, ಈ ಕೆಳಗಿನಂತೆ ಗಮನಿಸಿದರು:

> ವ್ಯಕ್ತಿಯೊಬ್ಬರು, ಸಾರ್ವಜನಿಕ ಕಾನೂನೊಂದನ್ನು ಉಲ್ಲಂಘಿಸಿ, ನಾಗರೀಕರಾಗಿರಲು ಅನರ್ಹರೆನಿಸಿಕೊಂಡಾಗ, ಅದನ್ನು ಸರಳವಾಗಿ ಅಪರಾಧ (ಕ್ರಿಮೇನ್) ಎಂದು ಕರೆಯುತ್ತಾರೆ ಆದರೆ ಆದಾನ್‌ನು ಸಾರ್ವಜನಿಕ ಅಪರಾಧ (ಕ್ರಿಮೇನ್ ಪಬ್ಲಿಕಂ) ಎಂದು ಕೂಡ ಕರೆಯಲಾಗುತ್ತದೆ; ಹೀಗಾಗಿ ಅದನ್ನು ಮೊದಲು ಸಿವಿಲ್ ನ್ಯಾಯಾಲಯದೆದುರು ತರಲಾಗುತ್ತದೆ, ನಂತರ ಕ್ರಿಮಿನಲ್ ನ್ಯಾಲಯದೆದುರು ಹಾಜರು ಪಡಿಸಲಾಗುತ್ತದೆ[272]

ಕೃತ್ಯವೊಂದರಿಂದ ಉಂಟಾದ ನಷ್ಟವು "ಖಾಸಗೀಯಾದುದಾಗಿರದೇ, ಸಾರ್ವಜನಿಕವಾದ ತಪ್ಪುಗಳ" ಸ್ವರೂಪದಲ್ಲಿದೆಯೇ ಎಂದು ಅರಿಯುವುದು, ಅಪರಾಧವನ್ನು ವ್ಯಾಖ್ಯಾನಿಸುವ ಮತ್ತೊಂದು ಬಗೆ[273]. ಈ ವ್ಯತ್ಯಾಸವನ್ನು ಬ್ಲಾಕ್ಸ್ಟೋನ್ ಮತ್ತು ನಂತರದಲ್ಲಿ ಡ್ಯಾಫ್, ಕ್ರಿಮಿನಲ್ ಕಾನೂನಿನ ಮೇಲಿನ ತಮ್ಮ ಸಿದ್ಧಾಂತಗಳ ಮೂಲಕ ಹೊರಗೆಡವಿದರು. ಬ್ಲಾಕ್ಸ್ಟೋನ್ ತನ್ನ "ಕಾಮೆಂಟರೀಸ್ ಆನ್ ದಿ ಲಾಸ್ ಆಫ್ ಇಂಗ್ಲೆಂಡ್" ನಲ್ಲಿ ಸಾರ್ವಜನಿಕವಾದ ತಪ್ಪು' ಎಂದು ಪರಿಗಣಿಸಲ್ಪಡುವ ಕೃತ್ಯಗಳನ್ನು ಮಾತ್ರ ಅಪರಾಧವೆಂದು ವರ್ಗೀಕರಿಸಬೇಕು ಎಂಬ ಕಲ್ಪನೆಯನ್ನು ಮಂಡಿಸಿದರು[274]. ಸಾರ್ವಜನಿಕ ತಪ್ಪುಗಳನ್ನು ಅವರು "ತನ್ನ ಸಾಮಾಜಿಕ ಸಂಘಟನೆಯ

[271] H.C. Lawson-Tancred, The Art of Rhetoric/ Aristotle, Penguin (2004).

[272] Immanuel Kant: The Metaphysics of Morals (Mary Gregor ed.), Cambridge University Press (1996).

[273] Grant Lamond, “What is a Crime?”, Oxford Journal of Legal Studies, Vol.27 (2007).

[274] Sir William Blackstone, Commentaries on the Laws of England, Book IV, Ch. 1 & 2.

ಸಾಮರ್ಥ್ಯದ ಆಧಾರದಲ್ಲಿ ಸಮುದಾಯವೆಂದು ಪರಿಗಣಿಸಲ್ಪಡುವ ಒಂದಿಡೀ ಸಮುದಾಯಕ್ಕೆ ಸೇರಬೇಕಾದ ಹಕ್ಕು ಮತ್ತು ಕರ್ತವ್ಯಗಳ ಉಲ್ಲಂಘನೆ ಮತ್ತು ಘಾಸಿಗೊಳಿಸುವಿಕೆ" ಎಂದು ವಿವರಿಸಿದರು. ಸಾರ್ವಜನಿಕ ತಪ್ಪೊಂದನ್ನು, ಸಾರ್ವಜನಿಕರಿಗೆ ನಷ್ಟವನ್ನುಂಟುಮಾಡುವ ತಪ್ಪುಕೆಲಸವೆಂದು ವ್ಯಾಖ್ಯಾನಿಸದೇ, ಸಾರ್ವಜನಿಕರೆಲ್ಲರಿಗೆ ತೊಂದರೆಮಾಡುವ, ಎಂದರೆ ಒಂದಿಡೀ ರಾಜ್ಯ ವ್ಯವಸ್ಥೆಗೆ ಸಂಬಧಿಸಿದ ವಿಷಯವೆಂದು ಪರಿಗಣಿಸಬೇಕೆಂದು ವಾದ ಮಾಡುವ ಡ್ಯಾಫ್ 'ಸಾರ್ವಜನಿಕ ತಪ್ಪಿನ' ಪರಿಕಲ್ಪನೆಯನ್ನು ವಿಸ್ತರಿಸುತ್ತಾರೆ[275].

ನೊಝಿಕ್ ಮತ್ತು ಬೆಕರ್ ಸಹ ಅಪರಾಧವೆಂದರೆ, ಸಾರ್ವಜನಿಕರಿಗೆ ಹಾನಿ ಉಂಟುಮಾಡುವಂತಹ ಕೃತ್ಯ ಎಂಬ ಸಿದ್ಧಾಂತವನ್ನು ಬೆಂಬಲಿಸುತ್ತಾರೆ. ನೊಝಿಕ್ ಅವರು, ಅಪರಾಧದಿಂದ ಉಂಟಾದ ಹಾನಿ, ಇತರ ಖಾಸಗೀ ಕಾನೂನಿನ ತಪ್ಪುಗಳಂತಲ್ಲದೇ, ಅಪರಾಧದ ಸಂಭಾವ್ಯ ಬಲಿಪಶುಗಳನ್ನು ಮೀರಿ ತಮ್ಮನ್ನು ತಾವು ಆ ಅಪರಾಧದ ಸಂಭಾವ್ಯ ಸಂತ್ರಸ್ತರೆಂದು ಪರಿಗಣಿಸುವ ಎಲ್ಲರನ್ನು ಒಳಗೊಳ್ಳುತ್ತದೆ ಎಂದು ವಾದಿಸುತ್ತಾರೆ[276]. ಇಂತಹ ಕೆಲಸವನ್ನು ಬೇಕೆಂದೇ ಮಾಡಿದಾಗ, ಅದು ಸಾಮಾನ್ಯ ಸಮುದಾಯದಲ್ಲಿ ಭಯವನ್ನು ಹರಡುತ್ತದೆ ಮತ್ತು ಸಮುದಾಯಕ್ಕೆ ಈ ಹೆಚ್ಚುವರಿಯದ ಹಾನಿಯನ್ನುಂಟು [ಭಯ ಮತ್ತು ಅಭದ್ರತೆಯನ್ನುಂಟುಮಾಡುವುದು] ಮಾಡಿದ ಕಾರಣ , ಇಂತಹ ಕೃತ್ಯಗಳನ್ನು ಅಪರಾಧವೆಂದು ವರ್ಗೀಕರಿಸಿ ಸರ್ಕಾರಿ ಕ್ರಮ ಜರುಗಿಸಲಾಗುತ್ತದೆ. ಬೆಕರ್ ಅಪರಾಧವನ್ನು ಸಾಮಾಜಿಕ ಸ್ಥಿರತೆಗೆ ಭಂಗ ತರುವ ಮತ್ತು "ಮೂಲಭೂತ ಸಾಮಾಜಿಕ ರಚನೆಗಳಿಗೆ ವಿನಾಶಕಾರಿ ಅಡಚಣೆಯನ್ನು ಉಂಟುಮಾಡುವ ಸಾಧ್ಯತೆಯಿರುವ" ವಿಚಾರವೆಂದು ವ್ಯಾಖ್ಯಾನಿಸುವುದಕ್ಕೆ ಆದ್ಯತೆ ನೀಡುತ್ತಾರೆ.[277] ಆದಾಗ್ಯೂ, ಎಲ್ಲಾ ತಪ್ಪುಗಳು ಸಮಾಜದ ಮೇಲೆ ಒಂದಲ್ಲಾ ಒಂದು ರೀತಿಯಲ್ಲಿ ಪರಿಣಾಮ ಬೀರುತ್ತವೆಯಾದ್ದರಿಂದ, ಅಪರಾಧವನ್ನು ಕೇವಳ ಸಾರ್ವಜನಿಕವಾದ ತಪ್ಪೂ ಎಂದು ವ್ಯಾಖ್ಯಾನಿಸುವ ಸಿದ್ಧಾಂತವನ್ನು ಹಾರ್ಟ್ ಪ್ರಶ್ನಿಸಿದರು,

> ಕ್ರಿಮಿನಲ್ ಕೃತ್ಯಗಳನ್ನು, ಅವು ಸಮಾಜಕ್ಕೆ ಹಾನಿಯನ್ನುಂಟು ಮಾಡುತ್ತವೆ ಮತ್ತು ಅವನ್ನು ತಡೆಗಟ್ಟಲು ಸಮಾಜ ಪ್ರಯತ್ನ ಪಡುತ್ತಿರುತ್ತದೆ ಎಂಬ ಆಧಾರದಲ್ಲಿ ಸಿವಿಲ್ ಅಪರಾಧಗಳಿಂದ ಭಿನ್ನವಾಗಿ ನೋಡಬಹುದೇ?

---

275 Antony Duff and Sandra Marshall, "Criminalization and Sharing Wrongs", Canadian Journal of Law and Jurisprudence, Vol. 11, (1998) at pages 7-22.

276 Robert Nozick, Anarchy, State and Utopia, Basic Books (1974) ,at page 65.

277 Lawrence C. Becker, "Criminal Attempts and the Theory of the Law of Crimes", Philosophy & Public Affairs, Vol 3 (1974), at page 273.

ಸಮಾಜವು ಒಪ್ಪಂದಗಳ ಈಡೇರಿಕೆ ಮತ್ತು ಸಂಚಾರರಿ ಅಪಘಾತಗಳ ತಡೆಗಟ್ಟುವಿಕೆ ಮತ್ತು ಇತರ ಸಿವಿಲ್ ತಕರಾರುಗಳಿಗೆ ಸಂಬಂಧಿಸಿದ ವಿಚಾರಗಳಲ್ಲಿ ಕೂಡ ಆಸಕ್ತಿ ವ್ಯಕ್ತಪಡಿಸುತ್ತದೆ ಎಂಬುದು ಹಾಗೆ ಬೇರ್ಪಡಿಸುವುದನ್ನು ಕಷ್ಟಸಾಧ್ಯಗೊಳಿಸುತ್ತವೆ.

128. ಅಪರಾಧೀಕರಿಸುವ ಕಾನೂನಿನ ವಿಧಾನ ಮತ್ತು ಈ ವಿಧಾನದ ಗುಣಲಕ್ಷಣಗಳ ನೆಲೆಗಟ್ಟಿನಲ್ಲಿ ಅಪರಾಧವನ್ನು ವ್ಯಾಖ್ಯಾನಿಸುವುದಕ್ಕೆ ಹಾರ್ಟ್ ಆದ್ಯತೆ ನೀಡಿದರು. ಅವರು ಅಪರಾಧಕ್ಕೆ ಸಂಬಂಧಿಸಿದ ಕಾನೂನು ಈ ಕೆಳಗಿನ ಲಕ್ಷಣಗಳನ್ನು ಹೊಂದಿರಬೇಕೆಂದು ವಿವರಿಸಿದ್ದಾರೆ:

ಈ ವಿಧಾನವು, ಸಾಮಾನ್ಯ ಪದಳಲ್ಲಿ ರೂಪಿಸಲಾಗಿದ್ದು ಜನರಿಗೆ ಅವರು ಏನು ಮಾಡಬೇಕು, ಏನು ಮಾಡಬಾರದು ಎಂಬ ನಿರ್ದೇಶನಗಳು ಮತ್ತು ಆಜ್ಞೆಗಳ ಸರಣಿಯ ಮೂಲಕ ಕೆಲಸ ಮಾಡುತ್ತದೆ

ಆ ನಿರ್ದೇಶನಗಳನ್ನು ಪಾಲಿಸುವ ಸಮಯ ಬಂದಾಗ, ತಮಗೆ ತಿಳಿಸಲಾಗಿರುವಂತೆ ನಡೆದುಕೊಳ್ಳುವವರೆಲ್ಲರೂ ಆ ನಿರ್ದೇಶನಗಳನ್ನು ಒಪ್ಪಿಕೊಂಡು ಅವಕ್ಕೆ ಬಧ್ಧರಾಗಿರಬೇಕು, ಇಲ್ಲಿ, ಆ ನಿರ್ದೇಶನಗಳನ್ನು ಒಂದು ಬಗೆಯ ಅಧಿಕಾರಯುಕ್ತ ಪದಗಳಲ್ಲಿ ಮುಂಚಿತವಾಗಿ ರೂಪಿಸಲಾಗಿತ್ತೆ ಇಲ್ಲವೇ ಎಂಬುದನ್ನು ಗಣನೆಗೆ ತೆಗೆದು ಕೊಳ್ಳುವುದಿಲ್ಲ.

ಆ ನಿರ್ದೇಶನಗಳು, ಅವನ್ನು ಪಾಲಿಸದೇ ಇರುವ ವ್ಯಕ್ತಿಗಳ ಮೇಲೆ ಸಮುದಾಯವು ಹೇರಲು ಸಿಧ್ಧವಿರುವ ಒಂದು ಅಥವಾ ಹೆಚ್ಚಿನ ಶಿಕ್ಷೆಗಳನ್ನು ಒಳಗೊಂಡಿರುತ್ತವೆ

> ಕಾನೂನಿನ ಹೇರಿಕೆಯನ್ನು ಸಮರ್ಥಿಸಿಕೊಳ್ಳುವ ಮತ್ತು ಅದರ ಜೊತೆಗೆ ಸಂಭವಿಸುವ ಸಮುದಾಯದ ಖಂಡನೆಯ ನಿರ್ಧಾರದ ಆಧಾರದಲ್ಲಿ ಕ್ರಿಮಿನಲ್ ಕಾನೂನನ್ನು, ಸಿವಿಲ್ ಕಾನೂನಿಂದ ಭಿನ್ನವೆಂದು ಗುರುತಿಸಬಹುದು (ಒತ್ತು ಕೊಡಲಾಗಿದೆ)

ಹಾರ್ಟ್ ರವರ ಪ್ರಕಾರ, ಮೇಲಿರುವ ಮೊದಲ ಮೂರು ಗುಣಲಕ್ಷಣಗಳು ಸಿವಿಲ್ ಮತ್ತು ಕ್ರಿಮಿನಲ್ ಕಾನೂನಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ. ಆದಾಗ್ಯೂ, "ಸಾಮುದಾಯಿಕ ಖಂಡನೆ" ಎಂಬುದು ಸಿವಿಲ್ ಮತ್ತು ಕ್ರಿಮಿನಲ್ ಕಾನೂನಿನ ನಡುವಿನ ಪ್ರಮುಖವಾದ ವಿಭಿನ್ನ ಅಂಶವೆಂದು ಅವರು ಗಮನಿಸಿದರು. ಹೀಗಾಗಿ, ಅವನು ಅಪರಾಧವನ್ನು ಈ ರೀತಿ ವ್ಯಾಖ್ಯಾನಿಸಲು ಪ್ರಯತ್ನಿಸಿದರು:

> ಕೃತ್ಯವೊಂದು ನಡೆದಿದೆ ಎಂಬುದನ್ನು ಸ್ಪಷ್ಟವಾಗಿ ತೋರ್ಪಡಿಸಿದರೆ, ಅದಕ್ಕೆ ಸಮುದಾಯವಾದ ಔಪಚಾರಿಕ ಮತ್ತು ಗಂಭೀರವಾದ ನೈತಿಕ ಖಂಡನೆಯನ್ನು ಘೋಶಿಸಲಾಗುತ್ತಿತ್ತು

ಕ್ರಿಮಿನಲ್ ಕಾನೂನು ಸ್ವಭಾವತಃ ವಿವಿಧ ಆಯಾಮಗಳನ್ನು ಹೊಂದಿರುವ ಕಾರಣ, ಅಪರಾಧವನ್ನು ಒಂದೇ ಬಗೆಯಲ್ಲಿ ವ್ಯಾಖ್ಯಾನಿಸುವುದು ಬಹುಶಃ ಕಷ್ಟ. ಕ್ರಿಮಿನಲ್ ಸಿದ್ಧಾಂತಗಳನ್ನು ಮತ್ತು 377ನೇ ಪರಿಚ್ಛೇದದೊಂದಿಗಿನ ಅವುಗಳ ಒಡನಾಟವನ್ನು ಗಮನಿಸುವ ಮೂಲಕ ವಯಸ್ಕರ ನಡುವಿನ ಒಪ್ಪಿಗೆಯ ಲೈಂಗಿಕ ಕ್ರಿಯೆಗಳ ಅಪರಾಧೀಕರಣವನ್ನು ಒಡೆದು ನೋಡುವ ನೋಡುವ ಪ್ರಕ್ರಿಯೆಯನ್ನು ಸುಗಮಗೊಳಿಸಬಹುದು.

## ಕ್ರಿಮಿನಲ್ ಕಾನೂನು ಸಿದ್ಧಾಂತಗಳು

## ಬೆಂಥಮ್ ರವರ ಉಪಯುಕ್ತತಾ ಸಿಧ್ಧಾಂತ

129.ಉಪಯುಕ್ತತಾವಾದವು (ಯುಟಿಲಿಟೇರಿಯನಿಸಮ್) ಅಸ್ತಿತ್ವದಲ್ಲಿರುವ ಕಾನೂನಿನ ಕೆಲವು ಶಕ್ತಿಶಾಲಿ ವಿಮರ್ಶೆಗಳನ್ನು ಒಳಗೊಂಡಿದೆ. ಬೆಂಥಮ್ ರವರು, ಗುದಸಂಭೋಗದ ಕಾನೂನುಗಳಲ್ಲಿನ ಸುಧಾರಣೆಯ ಆರಂಭಿಕ ಬೆಂಬಲಿಗರು. ಅವರ "ಅಫೆನ್ಸಸ್ ಎಗೇನ್ಸ್ಟ್ ವನ್ಸ್ ಸೆಲ್ಫ್"[278], ಎಂಬ ಪ್ರಬಂಧದಲ್ಲಿ ಬೆಂಥಮ್

[278] Jeremy Bentham, “Offences Against One's Self” (Louis Crompton Ed.), Columbia University

ರವರು ಗುದಸಂಭೋಗಕ್ಕೆ ಸಂಬಂಧಿಸಿದ ಕಾನೂನುಗಳನ್ನು ಜಾರಿಮಾಡುವುದಕ್ಕೆ ಸರ್ಕಾರ ನೀಡಿದ ಎಲ್ಲಾ ಸಮರ್ಥನೆಗಳನ್ನು ತಿರಸ್ಕರಿಸುತ್ತಾರೆ. ಬೆಂಥಾಮ್ ಪ್ರಕಾರ, ಸಮಲೈಂಗಿಕತೆಯನ್ನು, ನೈತಿಕತೆ ಮತ್ತು ಧರ್ಮದ ವಲಯಗಳ ಹೊರಗಿಟ್ಟು ಗಮನಿಸಿದರೆ, ಅದು ಭಾಗವಹಿಸುವವರಿಗೆ ಸಂತೋಷವನ್ನುಂಟುಮಾಡುವ ಮತ್ತು ಇನ್ನಾರಿಗೂ ನೋವನ್ನುಂಟುಮಾಡದ ತಟಸ್ಥ ವರ್ತನೆಯಾಗಿದೆ. ಆದ್ದರಿಂದ, ಇಂತಹ ಕೃತ್ಯವನ್ನು ಅಪರಾಧವೆಂದು ಪರಿಗಣಿಸಲು ಸಾಧ್ಯವಿಲ್ಲ, ಮತ್ತು "ಅದನ್ನು ಶಿಕ್ಷಿಸುವುದಕ್ಕೆ ಕಾರಣಗಳೇ ಇಲ್ಲ" ಎಂದು ನಿರ್ಧರಿಸಿದರು.

130. ಬೆಂಥಮ್ ಗುದಸಂಭೋಗದ ಕಾನೂನುಗಳನ್ನು ಈ ಮೂರು ಪ್ರಮುಖ ತತ್ವಗಳನ್ನಾಧರಿಸಿ ಪರೀಕ್ಷಿಸಿದರು: (ಎ) ಆ ಕ್ರಿಯೆಗಳು ಯಾವುದೇ ಬಗೆಯ ಮೊದಲಾನೇ ದರ್ಜೆಯ ಕಿರುಕುಳವನ್ನುಂಟು ಮಾಡುತ್ತವೆಯೇ, ಎಂದರೆ, ಇನ್ನೊಬ್ಬ ವ್ಯಕ್ತಿಗೆ ನೇರ ಹಾನಿಯನ್ನುಂಟುಮಾಡುತ್ತವೆಯೇ; (ಈ) ಅವುಗಳು ಯಾವುದೇ ಬಗೆಯ ಎರಡನೇ ದರ್ಜೆಯ ಕಿರುಕುಳವನ್ನುಂಟುಮಾಡುತ್ತದೆಯೇ, ಎಂದರೆ, ಸಮಾಜದ ಸ್ಥಿರತೆ ಮತ್ತು ಭದ್ರತೆಗೆ ಹಾನಿಯುಂಟುಮಾಡುತ್ತವೆಯೇ; ಮತ್ತು ಅವು ಸಮಾಜಕ್ಕೆ ಯಾವುದೇ ಬಗೆಯ ಅಪಾಯವನ್ನು ಉಂಟುಮಾಡುತ್ತವೆಯೇ. ಅವರು ಗುದಸಂಭೋಗದ ಕಾನೂನುಗಳು ಮೇಲಿನ ಯಾವುದೇ ಮಾನದಂಡಗಳನ್ನು ತೃಪ್ತಿಪಡಿಸುವುದಿಲ್ಲವೆಂದೂ, ಹೀಗಾಗಿ ಅವುಗಳನ್ನು ತೆಗೆದುಹಾಕಬೇಕೆಂದೂ ವಾದಿಸಿದರು, ಮೊದಲನೆ ದರ್ಜೆಯ ಕಿರುಕುಳಕ್ಕೆ ಸಂಬಂಧಿಸಿದ ಮೊದಲನೇ ತತ್ತ್ವದ ಬಗೆಗೆ, ಬೆಂಥಮ್ ಹೀಗೆಂದರು:

> ಮೊದಲನೇ ದರ್ಜೆಯ ತಪ್ಪಿನ ಬಗ್ಗೆ ಮಾತನಾಡುವುದಾದರೆ, ಅದು ಯಾರಿಗೂ ಹಾನಿಮಾಡುವುದಿಲ್ಲ ಎಂಬುದು ಸ್ಪಷ್ಟವಾಗಿದೆ. ಅದರ ಬದಲಿಗೆ ಅದು ಆಹ್ಲಾದವನ್ನುಂಟುಮಾಡುತ್ತದೆ, ಮತ್ತು ಇಂತಹ ವ್ಯಕ್ತಿಗಳು, ಸಾಮಾನ್ಯವಾಗಿ ಅತ್ಯಂತ ಗೌರವದಿಂದ ಕಾಣಲಾಗುವ ಆಹ್ಲಾದದ ಬದಲಿಗೆ, ತಮ್ಮ ವ್ಯತಿರಿಕ್ತವಾದ ಒಲವಿನ ದೆಸೆಯಿಂದ ಬೇರೆಯ ಆಹ್ಲಾದವನ್ನೇ ಬಯಸುತ್ತಾರೆ. ಸಂಗಾತಿಗಳಿಬ್ಬರೂ ಇಚ್ಛಿಸಿದ್ದಾರೆ. ಅವರಲ್ಲಿ ಯಾರಾದರೊಬ್ಬರಿಗೆ ಇಚ್ಚೆಯಿಲ್ಲದಿರುವಂತಹ ಸಂದರ್ಭದಲ್ಲಿನ ಕೃತ್ಯಗಳು

> ಪ್ರಸ್ತುತ ನಮ್ಮೆದುರಿಗಿಲ್ಲ, ಅದೊಂದು ಬೇರೆಯದೇ ಸ್ವರೂಪ ಮತ್ತು ಪರಿಣಾಮಗಳಿರುವ ಅಪರಾಧ, ಅದು ವೈಯಕ್ತಿಕ ಹಾನಿ, ಅದು ಒಂದು ಬಗೆಯ ಅತ್ಯಾಚಾರ"

ಹೀಗಾಗಿ, ಒಪ್ಪಿಗೆಯ ಸಮಲೈಂಗಿಕ ಕ್ರಿಯೆಗಳು ಬೇರೆಯವರಿಗೆ ಹಾನಿಮಾಡುವುದಿಲ್ಲವೆಂದು ಬೆಂಥಮ್ ವಾದಿಸಿದರು. ಬದಲಿಗೆ, ಅವುಗಳಲ್ಲಿ ತೊಡಗಿಸಿಕೊಳ್ಳಲು ನಿರ್ಧರಿಸುವ ವಯಸ್ಕರ ಪಾಲಿಗೆ ಆ ಕ್ರಿಯೆಗಳು ಸುಖದ ಮೂಲವಾಗಿವೆ. 'ಒಪ್ಪಿಗೆಯಿರುವ' ಸಂಗಾತಿಗಳು ಮತ್ತು 'ಒಪ್ಪಿಗೆಯಿಲ್ಲದ' ಸಂಗಾತಿಗಳ ನಡುವಿನ ವ್ಯತ್ಯಾಸದ ಬಗ್ಗೆ ಬೆಂಥಮ್ ಸ್ಪಷ್ಟ ನಿಲುವನ್ನು ಹೊಂದಿದ್ದರು, ಮತ್ತು ಅವರ ಪ್ರಕಾರ, ಒಪ್ಪಿಗೆಯಿಲ್ಲದಿರುವ ಸಂಗಾತಿಗಳ ವಿಚಾರ ಅವರ ವ್ಯಾಪ್ತಿಯಲ್ಲಿ ಬರುವುದಿಲ್ಲ.

ಅಂತಹ ಕ್ರಿಯೆಗಳು ಎರಡನೇ ದರ್ಜೆಯ ಕಿರುಕುಳಗಳನ್ನೀ ಉಂಟುಮಾಡುವುದಿಲ್ಲ ಎಂಬುದು ಬೆಂಥಮ್ ರವರ ಎರಡನೆಯ ವಾದವಾಗಿತ್ತು, ಅವರು ಎರಡನೇ ದರ್ಜೆಯ ಕಿರುಕುಳವನ್ನು "ಸಮುದಾಯದಲ್ಲಿ ಯಾವುದೇ ಬಗೆಯ ಆತಂಕಾವನ್ನು ಉಂಟುಮಾಡುವಂತಹವು" ಎಂದು ವಿವರಿಸಿದರು. ಇದರ ಬಗ್ಗೆ ಬೆಂಥಮ್ ಹೀಗೆ ವಾದಿಸಿದರು:

> "“ಎರಡನೇ ದರ್ಜೆಯ ತೊಂದರೆಯ ಬಗೆಗೆ ಮಾತನಾಡುವುದಾದರೆ, ಅದು ಯಾವುದೇ ರೀತಿಯ ಹಾನಿಯ ಆತಂಕವನ್ನುಂಟುಮಾಡುವುದಿಲ್ಲ. ಹಾಗಾಗಿ, ಇಲ್ಲಿ ಯಾರಾದರೂ ಹೆದರಿಕೊಳ್ಳುವ ವಿಚಾರವೇನಿದೆ? ಈಗ ಕಂಡು ಬರುತ್ತಿರುವಂತೆ, ಹಾಗಿರಲು ನಿರ್ಧರಿಸುವವರು, ಹಾಗಿರುವುದರಲ್ಲಿ ಸಂತೋಷ ಪಡೆಯುವವರು ಮಾತ್ರ ಅದಕ್ಕೆ ಸಂಬಂಧಿಸಿರುತ್ತಾರೆ ಮತ್ತು ಅವರು ಹಾಗಿರುವುದರಲ್ಲಿ ಸಂತೋಷವಾಗಿರುವಂತೆ ತೋರುತ್ತದೆ

ಬೆಂಥಮ್ ರವರ ವಿವರಣೆಯ ಪ್ರಕಾರ ಸಮಲೈಂಗಿಕ ಕೃತ್ಯಗಳನ್ನು ಆಯ್ಕೆ ಮಾಡುವ ವಯಸ್ಕರು ಮಾತ್ರ ಸಮಲೈಂಗಿಕ ಕ್ರಿಯೆಗಳಲ್ಲಿ ಪಾಲ್ಗೊಳ್ಳುತ್ತಾರೆ. ಸಮಾಜದ ಇತರಲ್ಲಿ ಆತಂಕವನ್ನುಂಟುಮಾಡುವ ಯಾವುದೇ ಬಗೆಯ ಚಟುವಟಿಕೆಯನ್ನು ಅದು ಒಳಗೊಳ್ಳುವುದಿಲ್ಲ. ಆದ್ದರಿಂದ, ಸಮಲೈಂಗಿಕತೆಯು ದ್ವಿತೀಯ ದರ್ಜೆಯ ಹಾನಿಯನ್ನು ಕೂಡಾ ಉಂಟುಮಾಡುವುದಿಲ್ಲ.

ಕೊನೆಯದಾಗಿ, ಬೆಂಥಮ್ ರವರು ಸಮಲೈಂಗಿಕ ಚಟುವಟಿಕೆಗಳು ಸಮಾಜಕ್ಕೆ ಅಪಾಯವನ್ನು ಉಂಟುಮಾಡುತ್ತವೆಯೇ ಎಂಬುದರ ಹಿನ್ನೆಲೆಯಲ್ಲಿ ಗುದಸಂಭೋಗದ ಕಾನೂನುಗಳನ್ನು ಪರೀಕ್ಷಿಸಿದರು. ಇತರರನ್ನು ಸಮಲೈಂಗಿಕ ಕ್ರಿಯೆಗಳಲ್ಲಿ ತೊಡಗಿಸಿಕೊಳ್ಳಲು ಪ್ರೋತ್ಸಾಹಿಸುವ ಅಪಾಯವೊಂದೇ ಬೆಂಥಮ್ ಊಹಿಸಲು ಸಾಧ್ಯವಾದ ಏಕೈಕ ಅಪಾಯವಾಗಿತ್ತು. ಹೀಗಾದರೂ, ಸಮಲೈಂಗಿಕ ಚಟುವಟಿಕೆಗಳು ತಾವಾಗಿಯೇ ಯಾವುದೇ ಹಾನಿಯನ್ನುಂಟುಮಾಡದ ಕಾರಣ, ಅವುಗಳು ಇತರ ವ್ಯಕ್ತಿಗಳ ಮೇಲೆ ಸರಣಿ ಪ್ರಭಾವವನ್ನು ಉಂಟುಮಾಡಿದರೂ ಯಾವುದೇ ಅಪಾಯವಿಲ್ಲ ಎಂದು ಬೆಂತಮ್ ವಾದ ಮಾಡಿದರು:

> ನೋವನ್ನುಂಟು ಮಾಡದ ಯಾವುದೇ ಬಗೆಯ ಅಪಾಯದ ಬಗ್ಗೆ ಹೇಳುವುದಾದರೆ, ಯಾವುದೇ ಬಗೆಯ ಅಪಾಯವೂ, ಅದನ್ನು ಉಂಟುಮಾಡುವ ನಿದರ್ಶನದ ಪ್ರವೃತ್ತಿಯಲ್ಲೇ ವ್ಯಕ್ತಗೊಳ್ಳಬೇಕು. ಆದರೆ, ಈ ನಿದರ್ಶನದ ಪ್ರವೃತ್ತಿಯೇನು? ಇತರರು ಅದೇ ಬಗೆಯ ಅಭ್ಯಾಸಗಳಲ್ಲಿ ತೊಡಗಿಕೊಳ್ಳುವಂತೆ ಆಗ್ರಹಪಡಿಸುವುದು: ಆದರೆ, ಈ ಅಭ್ಯಾಸವು ಇಲ್ಲಿಯವರೆಗೂ ಯಾರಿಗೂ, ಯಾವುದೇ ಬಗೆಯ ಹಾನಿಯನ್ನುಂಟುಮಾಡಿಲ್ಲ

ಆದ್ದರಿಂದ, ಬೆಂಥಮ್ ಪ್ರಕಾರ, ಗುದಸಂಭೋಗದ ಕಾನೂನುಗಳು ಎಲ್ಲಾ ಮೂರು ವಿಭಾಗಗಳಲ್ಲಿ ವಿಫಲಗೊಳ್ಳುತ್ತವೆ- ಅವುಗಳು ಮೊದಲ ದರ್ಜೆಯ ಕಿರುಕುಳವನ್ನಾಗಲ್ಲೀ, ಎರಡನೇ ದರ್ಜೆಯ ಕಿರುಕುಳವನ್ನಾಗಲೀ ನೀಡುವುದಿಲ್ಲ, ಅಲ್ಲದೇ ಸಮಾಜಕ್ಕೆ ಯಾವುದೇ ಅಪಾಯವನ್ನು ಸಹ ಉಂಟುಮಾಡುವುದಿಲ್ಲ.

ಬೆನ್ಥಮ್ ರವರು ಕ್ರಿಮಿನಲ್ ಕಾನೂನುಗಳು ವಿಧಿಸುವ ಶಿಕ್ಷೆಯ ಉಪಯುಕ್ತತೆಯನ್ನು ವಿಶ್ಲೇಷಿಸುವ ಮೂಲಕ ಕ್ರಿಮಿನಲ್ ಕಾನೂನುಗಳನ್ನು ವಿಮರ್ಶಿಸಿದ್ದಾರೆ. ಅವರು ಕಾನೂನಿನ ಉದ್ದೇಶವನ್ನು ಉಪಯುಕ್ತತೆಯ ತತ್ವಗಳ ಮೂಲಕ ಸೊಗಸಾಗಿ ವಿವರಿಸಿದ್ದಾರೆ- "ಎಲ್ಲ ಕಾನೂನುಗಳು ಹೊಂದಿರುವ ಅಥವಾ ಹೊಂದಿರಬೀಕಿರುವ ಸಾಮಾನ್ಯವಾದ ವಿಚಾರವೆಂದರೆ.....ಸಮುದಾಯದ ಒಟ್ಟಾರೆ ಸಂತೋಷವನ್ನು ಹೆಚ್ಚಿಸುವುದು; ಆ ಸಂತೋಷವನ್ನು ಕಡಿತಗೊಳಿಸುವ ಎಲ್ಲವನ್ನೂ ಕೈಬಿಡುವುದು." ಬೆಂಥಮ್ ಪ್ರಕಾರ," ಎಲ್ಲಾ ಬಾಹ್ಯ ಶಿಕ್ಷೆಯೂ ಮೂಲತಃ ದುಷ್ಟವಾದುದು" 322 ಏಕೆಂದರೆ ಅದು ಸಮಾಜದಲ್ಲಿರುವ ಸಂತೋಷದ ಮಟ್ಟವನ್ನು ಕಡಿಮೆ

ಮಾಡುತ್ತದೆ ಮತ್ತು ಅದು "ಕೆಲವು ಹೆಚ್ಚಿನ ದುಷ್ಟತನಗಳನ್ನು ಹೊರಗುಳಿಸಿದ್ದರೆ" ಮಾತ್ರ ಅದನ್ನು ಶಿಫಾರಸು ಮಾಡಬೇಕು[279]. ಬೆಂಥಮ್ ಶಿಕ್ಷೆ ವಿಧಿಸುವುದು ಉಪಯೋಗವಾಗದಂತಹ ನಾಲ್ಕು ರೀತಿಯ ಸಂದರ್ಭಗಳನ್ನು ಸೂಚಿಸಿದರು:

> "“1. ಅದು ಆಧಾರಹೀನವಾಗಿರುವಾಗ: ಅದು ತಡೆಯಬಹುದಾದಂತಹ ತಪ್ಪು ಇಲ್ಲದಿರುವಾಗ; ಕೃತ್ಯವು ಒಟ್ಟಾರೆಯಾಗಿ ತಪ್ಪಲ್ಲದಿರುವಾಗ
>
> 2. ಅದು ಅಸಮರ್ಥವಾಗಿರುವಾಗ: ಅದು ತಪ್ಪೊಂದನ್ನು ತಡೆಯಲು ಕ್ರಮ ತೆಗೆದುಕೊಳ್ಳಲು ಸಾಧ್ಯವಾಗದೇ ಇರುವಾಗ
>
> 3. ಅದು ಲಾಭದಾಯಕವಲ್ಲದಿರುವಾಗ, ಅಥವಾ ತುಂಬಾ ದುಬಾರಿಯಾಗಿದ್ದಾಗ: ಅದರಿಂದ ಉಂಟಾಗುವ ಸಮಸ್ಯೆಯು, ಅದು ತಡೆಗಟ್ಟಿದ ತಪ್ಪಿಗಿಂತ ದೊಡ್ಡಮಟ್ಟದ್ದಲ್ಲಿರುವಾಗ
>
> 4. ಅದು ಅನಗತ್ಯವಾಗಿರುವಾಗ: ತಪ್ಪೇ ನಡೆಯದಂತೆ ತಡೆಗಟ್ಟುವುದು ಸಾಧ್ಯವಿರುವಾಗ, ಅಥವಾ ತಪ್ಪು ತಾನಾಗಿಯೇ, ಶಿಕ್ಷೆಯ ಸಹಾಯವಿಲ್ಲದೆ, ಅಗ್ಗವಾಗಿ ಸರಿಯಾಗುವ ಸಂದರ್ಭದಲ್ಲಿ

## ಹಾನಿ ಸಿಧ್ಧಾಂತ

131. ಜಾನ್ ಸ್ಟುವರ್ಟ್ ಮಿಲ್, ತನ್ನ ವಿಮರ್ಶಾಪುಸ್ತಕ "ಆನ್ ಲಿಬರ್ಟಿ"ನಲ್ಲಿ, ಸರ್ಕಾರಗಳು ವ್ಯಕ್ತಿಯ ಜೀವನದ ಖಾಸಗೀಯಾದ ವಲಯಗಳಲ್ಲಿ ಮಧ್ಯಪ್ರವೇಶಿಸುವುದನ್ನು ತಡೆಯುವ ಬಗೆಗೆ ಪ್ರಬಲವಾದ ವಾದ ಮುಂದಿಡುತ್ತಾನೆ. "ಹಾನಿ ಸಿಧ್ಧಾಂತ" ಎಂದು ಕರೆಯಲ್ಪಡುವ ಮಿಲ್ ನ ಸಿದ್ಧಾಂತವು, ವ್ಯಕ್ತಿಯೊಬ್ಬರಿಂದ

[279] Jeremy Bentham, An Introduction to the Principles of Morals and Legislation, The Library of Economics and Liberty (1823).

ಇತರರಿಗೆ ಹಾನಿ ಉಂಟಾದರೆ ಅಥವಾ ಅವರ ನಡವಳಿಕೆಯು "ಇತರರ ಮೇಲೆ ಪ್ರಭಾವ" ಬೀರುವಂತಿದ್ದಾರೆ ಮಾತ್ರ ಅವರ ಖಾಸಗೀ ಜೀವನದೊಳಗೆ ಸರ್ಕಾರ ಮೂಗುತುರಿಸಬಹುದೆಂದು ಸೂಚಿಸುತ್ತದೆ[280]. ಮಿಲ್ ಮಾತುಗಳನ್ನು ಉಲ್ಲೇಖಿಸುವುದಾದರೆ:

> ಮತ್ತೊಬ್ಬರಿಗೆ ಹಾನಿಯಾಗುವುದನ್ನು ತಪ್ಪಿಸುವ ಉದ್ದೇಶಕ್ಕಾಗಿ ಮಾತ್ರ ನಾಗರಿಕ ಸಮುದಾಯದ ವ್ಯಕ್ತಿಯೊಬ್ಬರ ಮೇಲೆ, ಅವರ ಇಚ್ಛೆಗೆ ವಿರುದ್ಧವಾಗಿ, ಅಧಿಕಾರವನ್ನು ಹಕ್ಕಿನಿಂದ ಚಲಾಯಿಸಬಹುದು. ಅಧಿಕಾರವನ್ನು ಚಲಾಯಿಸುವುದಕ್ಕೆ, ಆ ವ್ಯಕ್ತಿಯ, ದೈಹಿಕ ಅಥವಾ ನೈತಿಕ ಹಿತಾಸಕ್ತಿಯನ್ನು ನೆಪಮಾಡಿಕೊಳ್ಳಲು ಬರುವುದಿಲ್ಲ. ಇತರರ ಅಭಿಪ್ರಾಯದಲ್ಲಿ ಅವರು ಹಾಗೆ ಮಾಡುವುದು ಬುದ್ಧಿವಂತಿಕೆ ಅಥವಾ ಸರಿ ಎಂಬ ಆಧಾರದಲ್ಲಿ ವ್ಯಕ್ತಿಯು ಹಾಗೆ ಮಾಡಿದರೆ ಅವರಿಗೆ ಒಳ್ಳೆಯದಾಗುತ್ತದೆ, ಅದು ಅವರನ್ನು ಸಂತೋಷದಲ್ಲಿಡುತ್ತದೆ ಎಂಬ ಕಾರಣಕ್ಕೆ ಅವರು ಕ್ರಿಯೆಯೊಂದನ್ನು ಮಾಡಬೇಕೆಂದು ಕಾನೂನುಬದ್ಧವಾಗಿ ಒತ್ತಾಯಪಡಿಸುವ ಹಾಗಿಲ್ಲ ...ಮತ್ತೊಬ್ಬರಿಗೆ ಸಂಬಂಧಿಸಿದಂತಹ ತಮ್ಮ ನಡವಳಿಕೆಯ ವಿಚಾರದಲ್ಲಿ ಮಾತ್ರ ಯಾವುದೇ ವ್ಯಕ್ತಿಯು ಸಮಾಜಕ್ಕೆ ಉತ್ತರ ನೀಡಬೇಕಾಗುತ್ತದೆ. ಅವರಿಗಷ್ಟೇ ಸಂಬಂಧಿಸಿದ ವಿಚಾರದಲ್ಲಿ, ಅವರ ಸ್ವಾತಂತ್ರ್ಯವೂ ನೈಜ ಅರ್ಥದಲ್ಲಿ ಸಂಪೂರ್ಣವಾಗಿರುತ್ತದೆ. ತನ್ನ ಮೇಲೆ, ತನ್ನದೇ ದೇಹ ಮತ್ತು ಮನಸ್ಸಿನ ಮೇಲೆ, ವ್ಯಕ್ತಿಯು ಸಾರ್ವಭೌಮತ್ವ ಹೊಂದಿರುತ್ತಾನೆ." (ಒತ್ತು ನೀಡಲಾಗಿದೆ)

ಮಿಲ್ "ತಮಗೆ-ಸಂಬಂಧಿಸಿದ" ಕ್ರಿಯೆಗಳು (ವ್ಯಕ್ತಿಯನ್ನಷ್ಟೇ ಪ್ರಭಾವಿಸುವ ಮತ್ತು ಸಮಾಜದ ಮೇಲೆ ಮಹತ್ವದ ಪರಿಣಾಮ ಬೀರದಿರುವ ಕ್ರಿಯೆಗಳು) ಮತ್ತು "ಇತರರಿಗೆ-ಸಂಬಂಧಿಸಿದ" ಕ್ರಿಯೆಗಳ (ಸಮಾಜದ ಮೇಲೆ ಪರಿಣಾಮ

280 John Stuart Mill, On Liberty, (Elizabeth Rapaport ed), Hackett Publishing Co, Inc (1978)

ಬೀರುವ ಕ್ರಿಯೆಗಳು) ನಡುವೆ ಒಂದು ಬಗೆಯ ವ್ಯತ್ಯಾಸವನ್ನು ಸೃಷ್ಟಿಸುತ್ತಾನೆ. ಒಂದು ರೀತಿಯಲ್ಲಿ, ವ್ಯಕ್ತಿಯೊಬ್ಬನ ಎಲ್ಲಾ ಕ್ರಿಯೆಗಳು "ಅವನಿಗೆ ಅತಿಯಾಗಿ ಹತ್ತಿರವಿರುವವರ ಮೇಲೆ ಮತ್ತು ಸ್ವಲ್ಪ ಮಟ್ಟಿಗೆ, ಸಮಾಜದ" ಮೇಲೆ ಪರಿಣಾಮ ಬೀರುತ್ತವೆ ಎಂಬುದನ್ನು ಅವನು ಅರಿತಿದ್ದನು. ಆದಾಗ್ಯೂ, ಒಂದು ಕ್ರಿಯೆಯು ಎಲ್ಲಿಯವರೆಗೆ "ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಕೊಟ್ಟಿರಬಹುದಾದ ವಿಶಿಷ್ಟವಾದ ಬಾಧ್ಯತೆಯನ್ನು ಉಲ್ಲಂಘಿಸುವುದಿಲ್ಲವೋ", ಆದು ತನಗೆ-ಸಂಬಂಧಿಸಿದ ಕ್ರಿಯೆಗಳ ವರ್ಗದಲ್ಲೇ ಉಳಿಯುತ್ತದೆ ಎಂದು ಅವನು ವಾದಿಸಿದನು. ಹೀಗಾಗಿ, "ಒಬ್ಬ ವ್ಯಕ್ತಿಯ ಮೇಲೆ ಅಥವಾ ಇತರರ ಮೇಲೆ ಅವರ ಮುಕ್ತ, ಸ್ವಯಂಪ್ರೇರಿತ ಮತ್ತು ಮೋಸವಿಲ್ಲದ ಅನುಮತಿ ಮತ್ತು ಪಾಲ್ಗೊಳ್ಳುವಿಕೆಯ ಮೇರೆಗೆ ಪರಿಣಾಮ ಬೀರುವ ಅವನ ಜೀವನ ಮತ್ತು ನಡವಳಿಕೆಯ ಎಲ್ಲ ವಿಚಾರಗಳು," ರಾಜ್ಯದ ಮೂಗುತೂರಿಸುವಿಕೆಯಿಂದ ಮುಕ್ತವಾಗಿರಬೇಕು ಎಂದು ಮಿಲ್ ಪ್ರಸ್ತಾಪಿಸಿದರು. ಸರ್ಕಾರ ಮತ್ತು ಸಮಾಜ ಕೆಲವು ನಡವಳಿಕೆಗಳನ್ನು "ಮೂರ್ಖ, ಅಸಭ್ಯ ಅಥವಾ ತಪ್ಪು" ಎಂದು ನಂಬಿದ ಮಾತ್ರಕ್ಕೆ, ವ್ಯಕ್ತಿಯೊಬ್ಬರ "ತನಗೆ-ಸಂಬಂಧಿಸಿದ" ವಲಯದಲ್ಲಿ ಮಧ್ಯಪ್ರವೇಶಿಸುವುದನ್ನು ಸಮರ್ಥಿಸಲು ಸಾಧ್ಯವಿಲ್ಲ, ಎಂದೂ ಹೇಳಿದರು ಮೂಲಭೂತವಾಗಿ, ಮಿಲ್ ವಿವಿಧ ಬಗೆಯ ನಡವಳಿಕೆಗಳನ್ನು ವಿಂಗಡಿಸುವ ಕ್ರಮವೊಂದನ್ನು ರಚಿಸಿದನು - (ಎ) ತನಗೆ-ಸಂಬಂಧಿಸಿದ ಕ್ರಿಯೆಗಳ ಮೇಲೆ ಸರ್ಕಾರವಾಗಲೀ, ಸಮಾಜವಾಗಲೀ ನಿರ್ಬಂಧಗಳನ್ನು ಹೇರಬಾರದು; (ಬಿ) ಇತರರಿಗೆ ಹಾನಿಯನ್ನುಂಟುಮಾಡುವ ಆದರೆ ಯಾವುದೇ ಕಾನೂನುಬದ್ಧ ಹಕ್ಕುಗಳನ್ನು ಉಲ್ಲಂಘಿಸದಿರುವ ಕೃತ್ಯಗಳನ್ನು ಸಾರ್ವಜನಿಕವಾಗಿ ಖಂಡಿಸಬಹುದು, ಆದರೆ ಅದನ್ನು ಸರ್ಕಾರ ಶಿಕ್ಷಿಸುವಂತಿಲ್ಲ; (ಸಿ) ಇತರರ ಕಾನೂನುಬದ್ಧ ಹಕ್ಕುಗಳನ್ನು ಕಸಿದುಕೊಳ್ಳುವ ಕ್ರಿಯೆಯನ್ನು ಮಾತ್ರ ಕಾನೂನಿನ ಶಿಕ್ಷೆಗೆ (ಮತ್ತು ಸಾರ್ವಜನಿಕ ಖಂಡನೆಗೆ) ಗುರಿಪಡಿಸಬೇಕು[281]. ಈ ಪ್ರಕಾರವಾಗಿ, ಹಾನಿಕಾರಕವಲ್ಲದ ಕ್ರಿಯೆಯೊಂದು ಅನೈತಿಕ ಅಥವಾ ಒಪ್ಪತಕ್ಕದ್ದಲ್ಲ ಎಂದು ಗ್ರಹಿಸಲ್ಪಟ್ಟಿದೆ ಎಂಬ ಕಾರಣಕ್ಕೆ ಅದನ್ನು ಕಾನೂನಿನ ಮೂಲಕ ನಿರ್ಬಂಧಿಸುವುದನ್ನು ತಡೆಯುವ ಮುಖ್ಯ ಉದ್ದೇಶವಿರುವ ಹಾನಿ ಸಿದ್ಧಾಂತವು, ನಕಾರಾತ್ಮಕ ಅಥವಾ ಸಂಕುಚಿಗೊಳಿಸುವ ತತ್ವದಂತೆ ಕಾರ್ಯನಿರ್ವಹಿಸಿತು[282].

[281] Mark Strasser, “Lawrence, Mill, and Same Sex Relationships: On Values, Valuing and the Constitution”, Southern California Interdisciplinary Law Journal, Vol. 15 (2006).

[282] Joseph Raz, ‘Autonomy, Toleration and the Harm Principle’, in Issues in Contemporary Legal Philosophy: The Influence of HLA Hart (R. Gavison ed.), Oxford University Press (1987).

ಮಿಲ್ ನ ಸಿದ್ಧಾಂತ ಎಲ್.ಜಿ.ಬಿ.ಟಿ.ಕ್ಯೂ ಹಕ್ಕುಗಳಿಗೆ ಸಂಬಂಧಿಸಿದಂತೆ ಪ್ರತಿಪಾದಿಸಿಡುದಲ್ಲವಾದರೂ, ಕ್ರಿಮಿನಲ್ ಕಾನೂನಿನ ಕುರಿತಾದ ಅವನ ತಿಳುವಳಿಕೆಯು ಗುದಸಂಭೋಗದ ಕಾನೂನುಗಳು, ಮೊದಲನೆಯ ದರ್ಜೆಯ ನಡವಳಿಕೆಯಾಗಿರುವ "ತನಗೆ-ಸಂಬಂಧಿಸಿದ" ಮತ್ತು ಸರ್ಕಾರ ಅಥವಾ ಸಮಾಜ ನಿರ್ಬಂಧನೇಗೆ ಒಳಪಡಿಸಬಾರದ ಕ್ರಿಯೆಗಳನ್ನು ಅಪರಾಧೀಕರಿಸುತ್ತವೆ ಎಂದು ವಾದಿಸಲು ಸೂಕ್ತವಾಗಿದೆ.

132.ಲಾರ್ಡ್ ಡೆವ್ಲಿನ್ 1959 ರಲ್ಲಿ "ದಿ ಎನ್ಫೋರ್ಸ್ಮೆಂಟ್ ಆಫ್ ಮಾರಲ್ಸ್"[283] ಎಂಬ ಶೀರ್ಷಿಕೆಯ ಮಕಾಬಿಯನ್ ಉಪನ್ಯಾಸವನ್ನು ಮಂಡಿಸಿದಾಗ ಕ್ರಿಮಿನಲ್ ಕಾನೂನು ಮತ್ತು ನೈತಿಕತೆಯ ನಡುವಿನ ಪರಸ್ಪರ ಸಂಬಂಧದ ಮೇಲಿನ ನ್ಯಾಯಶಾಸ್ತ್ರೀಯ ಚರ್ಚೆ ಪ್ರಾರಂಭವಾಯಿತು. ಲಾರ್ಡ್ ಡೆವ್ಲಿನ್ ಅವರ ಉಪನ್ಯಾಸವು ಇಂಗ್ಲೆಂಡ್ನಲ್ಲಿ ಗುದಸಂಭೋಗದ ಕಾನೂನುಗಳನ್ನು ಅಪರಾಧಮುಕ್ತಗೊಳಿಸಬೇಕೆಂದು ಶಿಫಾರಸು ಮಾಡಿದ್ದ ಸಮಲೈಂಗಿಕ ಅಪರಾಧಗಳು ಮತ್ತು ವೇಶ್ಯಾವಾಟಿಕೆಯ ಬಗೆಗಿನ ವೋಲ್ಫೆಂಡನ್ ಸಮಿತಿಯ ("ವೋಲ್ಫೆಂಡನ್ ರಿಪೋರ್ಟ್") ವರದಿಯ ಮೇಲಿನ ಆಕ್ರಮಣವಾಗಿತ್ತು. ಯು,ಕೆ ನಲ್ಲಿ ಪುರುಷರ ನಡುವಿನ ಸಮಲೈಂಗಿಕ ಕ್ರಿಯೆಗಳಿಗೆ ಸಂಬಂಧಿಸಿದ ಬಂಧನ ಮತ್ತು ಶಿಕ್ಷೆಗಳು ಹೆಚ್ಚಾದ ಹಿನ್ನೆಲೆಯಲ್ಲಿ, ಸಮಲೈಂಗಿಕತೆ ಮತ್ತು ವೇಶ್ಯಾವೃತ್ತಿಯ ಅಪರಾಧೀಕರಣದ ಬಗೆಗೆ ಪರಿಶೀಈಲಿಸಲು 1954 ರಲ್ಲಿ ರೀಡಿಂಗ್ ವಿಶ್ವವಿದ್ಯಾನಿಲಯದ ಉಪಕುಲಪತಿಯಾದ ಸರ್ ಜಾನ್ ವೋಲ್ಫೆಂಡನ್ ನೇತೃತ್ವದಲ್ಲಿ ವೋಲ್ಫೆಂಡನ್ ಸಮಿತಿಯನ್ನು ಸ್ಥಾಪಿಸಲಾಯಿತು. 1553ರ ಬಗ್ಗರಿ ಕಾಯ್ದೆ ಮತ್ತು 1967ರ ಲೈಂಗಿಕ ದೌರ್ಜನ್ಯ ಕಾಯ್ದೆಯಡಿಯ 'ಸಂಪೂರ್ಣ ಅಸಭ್ಯತೆ'ಗೆ ಸಂಬಂಧಿಸಿದಂತೆ ಶಿಕ್ಷೆಗೊಳಗಾದವರಲ್ಲಿ ಆಸ್ಕರ್ ವೈಲ್ಡ್, ಅಲನ್ ಟ್ಯೂರಿಂಗ್ ಮತ್ತು ಬ್ಯೂಲಿಯೌವಿನ ಲಾರ್ಡ್ ಮೊಂಟಾಗು ಮುಂತಾದ ಶ್ರೇಷ್ಠ ವ್ಯಕ್ತಿಗಳಿದ್ದರು. ಮೂರು ವರ್ಷಗಳ ಕಾಲ ವಿಚಾರಣೆ ನಡೆಸಿ, ಪ್ರಾಯೋಗಿಕ ಸಂಶೋಧನೆ ನಡೆಸಿ, ಮೂರು ಮಂದಿ ಸಮಲೈಂಗಿಕರನ್ನು ಸಂದರ್ಶಿಸಿದ ನಂತರ ವೂಲ್ಫೆಂಡೆನ್ ಸಮಿತಿಯು 1957ರಲ್ಲಿ ತನ್ನ ವರದಿಯನ್ನು ಬಿಡುಗಡೆಮಾಡಿತು. [338] ವೂಲ್ಫೆಂಡನ್ ವರದಿ ಹೀಗೆ ಶಿಫಾರಸು ಮಾಡಿತು:

> "ಒಪ್ಪಿಗೆಯಿರುವ ವಯಸ್ಕರ ನಡುವಿನ ಸಮಲೈಂಗಿಕ ನಡವಳಿಕೆಯು ಇನ್ನು ಮುಂದೆ ಅಪರಾಧ ಕೃತ್ಯವಾಗಿ ಉಳಿಯಬಾರದು.... ಸಮಾಜವು,

[283] Graham Hughes, "Morals and the Criminal Law", The Yale Law Journal, Vol.71 (1962).

ಉದ್ದೇಶಪೂರ್ವಕವಾಗಿ, ಕಾನೂನಿನ ಸ್ವಾಯುತ್ತತೆಯನ್ನು ಬಳಸಿಕೊಂಡು, ಅಪರಾಧದ ಪರಿಧಿಯನ್ನು ಪಾಪದ ಪರಿಧಿಯೊಂದಿಗೆ ಸಮೀಕರಿಸಲು ಯತ್ನಿಸದ ಹೊರತು, ಖಾಸಗೀ ನೈತಿಕತೆ ಮತ್ತು ಅನೈತಿಕತೆಗಳ ವಲಯವೊಂದು ಹಾಗೆ ಉಳಿದುಕೊಳ್ಳಬೇಕು ಮತ್ತು ಒರಟಾದ ಪದಗಳಲ್ಲಿ ಹೇಳುವುದಾದರೆ, ಆ ವಲಯದಲ್ಲಿ ಕಾನೂನಿಗೆ ಯಾವುದೇ ಕೆಲಸವಿರಬಾರದು"

ವೂಲ್ಫೆಂಡೆನ್ ವರದಿಯು "ನಾಗರಿಕರ ಖಾಸಗೀ ಜೀವನದಲ್ಲಿ ಮಧ್ಯಪ್ರವೇಶಿಸುವುದು ಅಥವಾ ಯಾವುದೋ ನಿರ್ದಿಷ್ಟ ಬಗೆಯ ನಡವಳಿಕೆಯನ್ನು ಜಾರಿಗೊಳಿಸಲು ಹವಣಿಸುವುದು. ಕಾನೂನಿನ ಉದ್ದೇಶವಲ್ಲ, " ಎಂದು ಹೇಳಿ ಕಾನೂನು ಮತ್ತು ಸಾರ್ವಜನಿಕ ಅಭಿಪ್ರಾಯಗಳ ನಡುವೆ ಹತ್ತಿರದ ಸಂಬಂಧವಿದೆಯೆಂದು ವೋಲ್ಫೆಂಡೆನ್ ವರದಿ ಒಪ್ಪಿಕೊಂಡಿತು -ಸಮುದಾಯದ ಬೆಂಬಲವನ್ನು ಪಡೆದುಕೊಳ್ಳಬೀಕಿದ್ದಲ್ಲಿ, ಕಾನೂನು, "ಸಾರ್ವಜನಿಕ ಅಭಿಪ್ರಾಯವನ್ನು ಹಿಂಬಾಲಿಸಬೇಕು", ಹಾಗೆಯೇ ಕಾನೂನನು ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸಿ ಅದನ್ನು ಮುನ್ನಡೆಸುವ ಕೆಲಸವನ್ನು ಮಾಡಬೇಕು. ಆದಾಗ್ಯೂ, ಸಮಿತಿಯು, ಕ್ರಿಮಿನಲ್ ಕಾನೂನಿನಿಂದ ನೈತಿಕತೆಯನ್ನು ಬೇರ್ಪಡಿಸುವುದನ್ನು ಪ್ರಬಲವಾಗಿ ಪ್ರತಿಪಾದಿಸಿತು- "ನೈತಿಕ ಬದ್ಧತೆ ಅಥವಾ ಸಹಜವಾದ ಭಾವನೆಗಳು ಎಷ್ಟೇ ಬಲವಾಗಿದ್ದರೂ, ಅವನ್ನು ವ್ಯಕ್ತಿಯ ಖಾಸಗೀತವನನ್ನು ಅತಿಕ್ರಮಿಸುವ ಮತ್ತು ಈ ಬಗೆಯ ವೈಯಕ್ತಿಕ ಲೈಂಗಿಕ ನಡವಳಿಕೆಯನ್ನು ಕಾನೂನು ಅಪರಾಧದ ವ್ಯಾಪ್ತಿಯೊಳಗೆ ತರುವ ಸಾಧನದಂತೆ ಬಳಸಬಾರದು" ಸಮಲೈಂಗಿಕತೆ ಮಾನಸಿಕ ಖಾಯಿಲೆಯಲ್ಲವೆಂದು ಸ್ಪಷ್ಟಪಡಿಸಿದ ವೋಲ್ಫೆಂಡೆನ್ ವರದಿಯು, ಸಮಲೈಂಗಿಕತೆಯು "ಒಬ್ಬರ ಸ್ವಂತ ಲಿಂಗದ ವ್ಯಕ್ತಿಗಳೆಡೆಗಿನ ಲೈಂಗಿಕ ಒಲವು ... ಅದು ಒಂದು ಬಗೆಯ ಅವಸ್ಥೆ ಅಥವಾ ಸ್ಥಿತಿಯ, ಮತ್ತು ಅದು ಅಪರಾಧೀಕರಿಸುವ ಕಾನೂನಿನ ಪರಿಧಿಯೊಳಗೆ ಬರುವುದಿಲ್ಲ, ಬರುವಂತೆ ಮಾಡುವುದೂ ಸಲ್ಲ"

133. ವೊಲ್ಫೆಂಡೆನ್ ವರದಿಯಲ್ಲಿ ಬಳಸಲಾದ ತರ್ಕದಿಂದ ಉದ್ವಿಘ್ನಗೊಂಡ ಲಾರ್ಡ್ ಡೆವ್ಲಿನ್, ಅಪರಾಧೀಕರಿಸುವ ಕಾನೂನು ಮತ್ತು ನೈತಿಕತೆಯ ಬಗೆಗೆ ಪ್ರಶ್ನೆಗಳನ್ನು ರೂಪಿಸಿದರು:

> ಸಮಾಜಕ್ಕೆ, ನೈತಿಕತೆಗೆ ಸಂಬಂಧಿಸಿದ ಎಲ್ಲ ವಿಚಾರಗಳಲ್ಲಿ ನಿರ್ಧಾರ ತೆಗೆದುಕೊಳ್ಳುವ ಹಕ್ಕಿದೆಯೇ?
>
> ಸಮಾಜಕ್ಕೆ ನಿರ್ಧಾರ ತೆಗೆದುಕೊಳ್ಳುವ ಹಕ್ಕಿದ್ದರೆ, ಅದಕ್ಕೆ ಕಾನೂನಿನ ಆಸ್ತ್ರಗಳನ್ನು ಬಳಸಿಕೊಂಡು ಆ ನಿರ್ಧಾರವನ್ನು ಜಾರಿಗೊಳಿಸುವ ಹಕ್ಕಿದೆಯೇ?[284]

ಸಮಾಜ ತನ್ನ ಸ್ಥಿರತೆ ಮತ್ತು ಉಳಿವಿಗಾಗಿ ಸಾಮಾನ್ಯವಾದ ನೈತಿಕತೆಯನ್ನು ಅವಲಂಬಿಸಿದೆ ಎಂದು ಡೆವ್ಲಿನ್ ನಂಬಿದ್ದರು. ಈ ನಂಬಿಕೆಯ ಆಧಾರದಲ್ಲಿ, ಮೇಲಿನ ಪ್ರಶ್ನೆಗಳಿಗೆ ಸಕಾರಾತ್ಮಕವಾಗಿ ಉತ್ತರಿಸಿದ ಡೆವ್ಲಿನ್ - ಸಮಾಜವು ನೈತಿಕತೆಗೆ ಸಂಬಂಧಿಸಿದ ಎಲ್ಲಾ ವಿಷಯಗಳ ಕುರಿತು ನಿರ್ಧಾರಗಳನ್ನು ತೆಗೆದುಕೊಳ್ಳುವ ಮತ್ತು ಅಂತಹ ನೈತಿಕತೆಯನ್ನು ಜಾರಿಗೊಳಿಸಲು ಕಾನೂನನ್ನು ಬಳಸುವ ಹಕ್ಕನ್ನು ಹೊಂದಿದೆ- ಎಂದರು[285]. ಈ ಸಾಮಾನ್ಯ ನೈತಿಕತೆಯನ್ನು ಪಾಲಿಸದಿದ್ದಲ್ಲಿ ಸಮಾಜ ಒಡೆದುಹೋಗುತ್ತದೆ ಎಂದು ಡೆವ್ಲಿನ್ ವಾದಿಸಿದರು. ಆದ್ದರಿಂದ, ತನ್ನ ನೈತಿಕತೆಯನ್ನು ಉಳಿಸಿಕೊಳ್ಳಲು ಕ್ರಮಗಳನ್ನು ತೆಗೆದುಕೊಳ್ಳುವ ಸಮಾಜದ ನಡೆಯು ಸಮರ್ಥನೀಯ, ಆ ಮೂಲಕ ಸಮಾಜವು ಸರ್ಕಾರವನ್ನು ಉಳಿಸುತ್ತದೆ. ಸಾಮಾನ್ಯ ನೈತಿಕತೆ ಅಥವಾ "ಸಮಾಜದ ಸಾಮೂಹಿಕ ನಿರ್ಧಾರ" ವನ್ನು "ವಿವೇಕವುಳ್ಳ ಮನುಷ್ಯ" ನನ್ನು ಪರಿಗಣನೆಗೆ ತೆಗೆದುಕೊಂಡು ರೂಪಿಸಬೇಕು ಎಂದು ಡೆವ್ಲಿನ್ ಪ್ರಸ್ತಾಪಿಸಿದರು. ಅಲ್ಲದೇ, ಈ "ವಿವೇಕವುಳ್ಳ ಮನುಷ್ಯ", ಕೃತ್ಯವೊಂದನ್ನು ಅನೈತಿಕ ಎಂದು ಭಾವಿಸಿದರೆ ಮತ್ತು ಈ ನಂಬಿಕೆಯನ್ನು ಪ್ರಾಮಾಣಿಕವಾಗಿ ಮತ್ತು ನಿರುದ್ವಿಘ್ನವಾಗಿ ವ್ಯಕ್ತಪಡಿಸಿದರೆ, ಕಾನೂನಿನ ಉದ್ದೇಶಕ್ಕಾಗಿ ಅಂತಹ ಕೃತ್ಯವನ್ನು ಅನೈತಿಕ ಎಂದು ಪರಿಗಣಿಸಬೇಕು ಎಂದು ಪ್ರತಿಪಾದಿಸಿದರು.

134. ಡೆವ್ಲಿನ್ ಸಿದ್ಧಾಂತವನ್ನು ವಿರೋಧಿಸಿದ ಹಾರ್ಟ್, ಸಮಾಜವು ಸಾಮಾನ್ಯ ನೈತಿಕತೆಯಿಂದ ಒಂದುಗೂಡಿಸಲ್ಪಟ್ಟಿಲ್ಲ, ಏಕೆಂದರೆ, ಎಲ್ಲವನ್ನೂ ಮೀರಿ, ಸಮಾಜ ಎಂಬುದು, ಒಂದೇ ರೀತಿಯ ನೀತಿ ಮತ್ತು ತತ್ವಗಳಿಗೆ ಒಳಪಟ್ಟಿರುವ, ಒಂದೇ ಬಗೆಯಲ್ಲಿ ಯೋಚಿಸುವ ವ್ಯಕ್ತಿಗಳನ್ನು ಹೊಂದಿಲ್ಲ ಅಥವಾ ಅದು ಏಕಶಿಲೆಯಾಂತಹ ವ್ಯವಸ್ಥೆಯೂ ಅಲ್ಲ. ಡೆವ್ಲಿನ್ ರ ವಾದವನ್ನು ಹಾರ್ಟ್ ಈ ಕೆಳಗಿನಂತೆ ತಳ್ಳಿಹಾಕಿದರು:

---

[284] Sir Patrick Arthur Devlin, "The Enforcement Of Morals" Oxford University Press (1959) at page 9.

[285] Animesh Sharma, "Section 377: No Jurisprudential Basis." Economic and Political Weekly, Vol. 43 (2008) at pages 12-14.

“...ನೈತಿಕತೆಯ ಕೊಂಡಿಗಳು ಸಡಿಲಗೊಳ್ಳುವುದು, ಒಡೆದುಹೋಗುವಿಕೆಯ ಮೊದಲನೇ ಹಂತ” ಎಂದು ತೋರಿಸುವ ಒಂದೇ ಒಂದು ಅಸ್ಪಷ್ಟ ಉಲ್ಲೇಖವನ್ನು ಬಿಟ್ಟರೆ, ವಯಸ್ಕರು ಖಾಸಗೀತನದಲ್ಲಿ ಒಪ್ಪಿತವಾದ ಲೈಂಗಿಕ ನೈತಿಕತೆಯನ್ನು ಉಲ್ಲಂಘಿಸುವುದು, ರಾಜದ್ರೋಹದ ಸಂದರ್ಭದಲ್ಲಿ ಆಗುವಂತೆ, ಸಮಾಜದ ಅಸ್ತಿತ್ವಕ್ಕೆ ಅಪಾಯವನ್ನೊಡ್ಡುತ್ತದೆ ಎಂಬುದಕ್ಕೆ ಯಾವುದೇ ಸಾಕ್ಷ್ಯವಿಲ್ಲ. ಯಾವ ಹೆಸರಾಂತ ಇತಿಹಾಸಾಕರರೂ ಸಹ ಈ ಸಿಧ್ಧಾಂತವನ್ನು ಬೆಂಬಲಿಸಿಲ್ಲ, ಅಲ್ಲದೇ, ಈ ಹೇಳಿಕೆಗೆ ವಿರುದ್ಧವಾದ ಸಾಕ್ಷ್ಯಗಳೇ ಬಹಳಷ್ಟಿವೆ ...ಅದರಲ್ಲಿ ಲಾರ್ಡ್ ಡೆವ್ಲಿನ್ನಿಗಿರುವ ನಂಬಿಕೆಯೂ, [ಸಮಲೈಂಗಿಕತೆಯು ಸಮಾಜಿಕ ವಿಭಜನೆಗೆ ಕಾರಣವೆಂಬುದರಲ್ಲಿ], ಮತ್ತು ಸಾಕ್ಷಿಯ ವಿಚಾರದಲ್ಲಿ ಅವರು ತೋರಿಸುತ್ತಿರುವ ಅಸಡ್ಡೆಯೂ, ಚರ್ಚಿಸಲಾಗದಿರುವ ಊಹೆಯೊಂದರಿಂದ ಉದ್ಭವಿಸಿವೆ ಎಂಬುದನ್ನು ಹಲವು ಸಂದರ್ಭಗಳಲ್ಲಿ ಅರಿಯಬಹುದು. ಆ ಉಹೆಯ ಪ್ರಕಾರ - ಎಲ್ಲ ಬಗೆಯ ನೈತಿಕತೆಯೂ - ಲೈಂಗಿಕ ನೈತಿಕತೆ ಮತ್ತು ಇತರರಿಗೆ ಅಪಾಯಕರವಾದ ಕೃತ್ಯಗಳಾದ ಕೊಲೆ, ಕಳ್ಳತನ ಮತ್ತು ಅಪ್ರಾಮಾಣಿಕತೆಗಳನ್ನು ನಿರ್ಬಂಧಿಸುವ ನೈತಿಕತೆಗಳು - ಒಂದು ಎಲ್ಲೆಯಿಲ್ಲದ ಜಾಲವೊಂದನ್ನು ರಚಿಸುತ್ತವೆ ಮತ್ತು ಅದರಲ್ಲಿನ ಯಾವುದೇ ವಿಚಾರವನ್ನು ಉಲ್ಲಂಘಿಸಿದರೂ ಅಂಥವರು ಇಡೀ ಜಾಲವನ್ನೇ ಉಲ್ಲಂಘಿಸಿದಂತಾಗುತ್ತದೆ. ಮತ್ತೊಬ್ಬರಿಗೆ ಹಾನಿಯನ್ನುಂಟು ಮಾಡಬಲ್ಲ ಕೃತ್ಯಗಳನ್ನು ನಿಷೇಧಿಸುವ ಕಾನುನಿನ ಕ್ರಮವನ್ನು ಪ್ರತಿಫಲಿಸುವ ಮತ್ತು ಬಲಪಡಿಸುವ ನೈತಿಕತೆಯಿಲ್ಲದ್ದಿದ್ದರೆ ಸಮಾಜಕ್ಕೆ ಉಳಿಗಾಲವಿಲ್ಲ ಎಂಬುದು ಖಂಡಿತವಾಗಿಯೂ ಸ್ಪಷ್ಟವಾಗಿದೆ (ಅದು ರಾಜನೈತಿಕ ಸಿಧ್ಧಾಂತದ ಅತ್ಯಂತ ಹಳೆಯ ಜ್ಞಾನವು ಆಗಿದೆ). ಆದರೆ, ಸಾಂಪ್ರದಾಯಿಕ ಲೈಂಗಿಕ

> ನೈತಿಕತೆಯನ್ನು ಉಲ್ಲಂಘಿಸಿದವರು ಸಮಾಜ ವಿರೋಧಿಗಳು ಎಂಬ ಸಿಧ್ಧಾಂತವನ್ನು ಬೆಂಬಲಿಸುವ ಸಾಕ್ಷಿಗಳಾವುವೂ ದೊರಕುವುದಿಲ್ಲ, ಬದಲಿಗೆ ಆ ಸಿಧ್ಧಾಂತವನ್ನು ತಿರಸ್ಕರಿಸುವ ಸಾಕ್ಷ್ಯಗಳೇ ಬಹಳಷ್ಟಿವೆ"[286]

ಡೆವ್ಲಿನ್‌ರನ್ನು ವಿರೋಧಿಸಿದ ಹೊರತಾಗಿಯೂ, ಕಾನೂನು ಮತ್ತು ನೈತಿಕತೆಯ ನಡುವಿನ ಸಂಬಂಧವನ್ನು ಹಾರ್ಟ್ ಸಂಪೂರ್ಣವಾಗಿ ವಿರೋಧಿಸಲಿಲ್ಲ, ಅಲ್ಲದೇ ಅವರೆಡರ ನಡುವೆ ಹತ್ತಿರದ ಸಂಬಂಧವಿದೆ ಎಂದು ಒತ್ತಿ ಹೇಳಿದರು.

> " ಪ್ರತಿ ಆಧುನಿಕ ಸರ್ಕಾರದ ಕಾನೂನುಗಳು ಹತ್ತು ಹಲವೆಡೆಗಳಲ್ಲಿ, ಒಪ್ಪಿತ ಸಾಮಾಜಿಕ ನೈತಿಕತೆ ಮತ್ತು ವಿಸ್ತಾರವಾದ ನಾಗರಿಕ ಅಲೊಚನೆಗಳ ಪ್ರಭಾವಿರುವುದನ್ನು ಕಾಣಬಹುದು. ಈ ಪ್ರಭಾವಗಳು ಕಾನೂನಿನೊಳಗೆ, ಎಕಾಏಕಿಯಾಗಿ ಶಾಸನವೊಂದರ ಮೇಲ್ವಿಚಾರಣೆಯ ಮೂಲಕ ಸೇರಿಕೊಳ್ಳುತ್ತವೆ ಅಥವಾ ಅವುಗಳು ಸದ್ದಿಲ್ಲದೆ ಕಾನುನಿನೊಳಗೆ ಸೇರಿಕೊಂಡು, ನ್ಯಾಯಾಂಗ ಪ್ರಕ್ರಿಯೆಯೊಳಗೆ ಹರಡಿಕೊಳ್ಳುತ್ತವೆ...ಇನ್ನೂ ಹತ್ತು ಹಲವು ಬಗೆಗಳಲ್ಲಿ ಕಾನೂನು ನೈತಿಕತೆಯನ್ನು ಪ್ರತಿಬಿಂಬಿಸುತ್ತದೆಯಾದರೂ, ಅದರ ಮೇಲೆ ಸಾಕಷ್ಟು ಅಧ್ಯಯನ ಮಾಡಲಾಗಿಲ್ಲ: ಶಾಸನಗಳ ಹೊರಮೈಯಷ್ಟೇ ಕಾನೂನುಬದ್ದವಾಗಿದ್ದು, ಅವುಗಳು ಸ್ಪಷ್ಟವಾದ ಪದಗಳಲ್ಲಿ ತಮ್ಮನ್ನು ನೈತಿಕ ತತ್ವಗಳ ಸಹಾಯದಿಂದ ಸಮೃದ್ಧಗೊಳಿಸಬೇಕೆಂದು ಆದೇಶಿಸಬಹುದು; ಜಾರಿಗೊಳಿಸಬಹುದಾದ ಒಪ್ಪಂದಗಳ ವ್ಯಾಪ್ತಿಗೆ ನೈತಿಕತೆ ಮತ್ತು ನ್ಯಾಯೋಚಿತವಾಗಿರುವಿಕೆಯ ಪರಿಕಲ್ಪನೆಗಳು ತಡೆಯೊಡ್ಡಬಹುದು; ಸಿವಿಲ್ ಮತ್ತು ಕ್ರಿಮಿನಲ್, ಎರಡು ಬಗೆಯ ಅಪರಾಧಗಳ ಶಿಕ್ಷೆಯನ್ನು

[286] Hart, H. L. A, "The Changing Sense of Morality" In Political Thought (Michael Rosen and Jonathan Wolff eds.), Oxford University Press (1999) at pages 140-141.

> ಪ್ರಾಚಲಿತವಾಗಿರುವ ನೈತಿಕ ಜವಾಬ್ದಾರಿಯ ಪರಿಕಲ್ಪನೆಗಳಿಗೆ ಹೊಂದಾಣಿಕೆಯಾಗುವಂತೆ ನಿರ್ಧರಿಸುವಂತಾಗಬಹುದು[287].

ಆದಾಗ್ಯೂ, ಹಾರ್ಟ್ ರವರು, ಡೆವ್ಲಿನ್ ಹೇಳಿದಂತೆ, ಕಾನೂನು ಮಾನ್ಯಗೊಳ್ಳಬೇಕಿದ್ದರೆ, ನೈತಿಕತೆಯ ಅವಶ್ಯಕತೆಯಿದೆ ಎಂಬುದನ್ನು ಪ್ರತಿಪಾದಿಸಲಿಲ್ಲ. ಹಾಗೆಯೇ "ಕಾನೂನು ನೈತಿಕವಾಗಿ ಸಮಂಜಸ" ಆದರೆ "ನೈತಿಕವಾಗಿ ನಿರ್ಣಾಯಕವಲ್ಲ" ಎಂದು ಹೇಳಿದರು[288]. ಕಾನೂನುಗಳು ಯಾವುದೇ ಬಗೆಯ ಸಾಮೂಹಿಕ ನೈತಿಕತೆಯನ್ನು ಆಧರಿಸಿರದಿದ್ದರೆ ಮತ್ತು ನೈತಿಕತೆಯನು ಬಲಪಡಿಸಲು ಕಾನೂನನ್ನು ಜಾರಿಗೊಳಿಸದಿದ್ದರೆ, ಸಮಾಜ ಒಡೆದುಹೋಗುತ್ತದೆ ಎಂಬ ಡೆವ್ಲಿನ್ ರ ದೃಷ್ಟಿಕೋನವನ್ನು ಹಾರ್ಟ್ ತೀವ್ರವಾಗಿ ನಿರಾಕರಿಸಿದರು. ಮೇಲಿನ ವಿಚಾರಗಳ ನಡುವಿನ ಎಂದು ವ್ಯತ್ಯಾಸವನ್ನು ತಿಳಿಸಲು, ಕೆಲವು ಲೈಂಗಿಕ ಕ್ರಿಯೆಗಳನ್ನು (ಸಮಲೈಂಗಿಕ ಕೃತ್ಯಗಳನ್ನೂ ಒಳಗೊಂಡಂತೆ) ಮುಖ್ಯವಾಹಿನಿಯ ಪಾಶ್ಚಾತ್ಯ ಸಮಾಜವು "ಅನೈತಿಕ" ಎಂದು ಪರಿಗಣಿಸಿದೆ, ಎಂದು ಹೇಳುವ ಹಾರ್ಟ್, ಆದಾಗ್ಯೂ, ಖಾಸಗೀ ಲೈಂಗಿಕ ಚಟುವಟಿಕೆಗಳು "ವೈಯಕ್ತಿಕ ನೈತಿಕತೆಯ" ವಿಚಾರವಾಗಿದ್ದು, ಸಮಾಜಕ್ಕೆ ಅದರಲ್ಲಿ ಯಾವುದೇ ಪಾತ್ರವಿಲ್ಲ ಮತ್ತು ಕಾನೂನು ಅದನ್ನು ನಿಯಂತ್ರಿಸುವಂತಿಲ್ಲ ಎಂದು ಹೇಳುತ್ತಾರೆ[289].

ಬಹುಸಂಖ್ಯಾತರ ನೈತಿಕತೆಯನ್ನು ಹೇರುವ ಬಗೆಗಿನ ತನ್ನ ಎಚ್ಚರಿಕೆಯನ್ನು ಮತ್ತಷ್ಟು ವಿವರಿಸುವ ಹಾರ್ಟ್, "ಪ್ರಜಾಪ್ರಭುತ್ವವನ್ನು ಗೊಂದಲಕ್ಕೀಡುಮಾಡುವ ಅಪಾಯವಿರುವ" ಅಧಿಕಾರವು ಬಹುಮತದ ಕೈಯಲ್ಲಿರಬೇಕು ಎಂಬ ಪ್ರಜಾಪ್ರಭುತ್ವದ ತತ್ವವನ್ನು, ಅದಕ್ಕಿಂತ ಬಹಳ ವಿಭಿನ್ನವಾದ "ಅಧಿಕಾರ ಹೊಂದಿರುವ ಬಹುಸಂಖ್ಯಾತರು, ಯಾವುದೇ ಬಗೆಯ ಮಿತಿಗಳಿಗೆ ಒಳಪಡಬಾರದು" ಎಂದು ತಪ್ಪು ತಿಳಿಯುವುದು ಭಯಂಕರ ಸುಲಭ" ಎಂದು ಪ್ರತಿಪಾದಿಸುತ್ತಾನೆ "

> ನೈತಿಕತೆಯನ್ನು ಜಾರಿಗೊಳಿಸುವ ಕುರಿತಾದ ಇತರ ವಾದಗಳೇನೇ ಇದ್ದರೂ, ಜನಪ್ರಿಯ ನೈತಿಕತೆಗೆ "ಭಾರೀ ಬಹುಮತದ" ಬೆಂಬಲ

---

287 H.L.A. Hart, Law, Liberty And Morality (1979).

288 William Starr, "Law and Morality in H.L.A. Hart's Legal Philosophy", Marquette Law Review, Vol. 67 (1984).

289 Peter August Bittlinger, "Government enforcement of morality: a critical analysis of the Devlin-Hart controversy", Doctoral Dissertations 1896-February 2014 (1975) at pages 69-70.

> ವ್ಯಕ್ತವಾದಾಗ ಅಥವಾ ಅದು ವ್ಯಾಪಕ ಅಸಹಿಷ್ಣುತೆ, ದ್ವೇಷ ಮತ್ತು ಅಸಹನೆಯ ಮೂಲಕ ವ್ಯಕ್ತವಾದಾಗ, ಪ್ರಜಾಪ್ರಭುತ್ವದ ಮೇಲಣ ತನ್ನ ನಿಷ್ಠೆ ತೋರ್ಪಡಿಸಲು, ಜನಪ್ರಿಯ ನೈತಿಕತೆಯನ್ನು ಅಲ್ಪಸಂಖ್ಯಾತರ ಮೇಲೆ ಹೇರುವುದನ್ನು ಸಮರ್ಥನೀಯ ಎಂದು ಒಪ್ಪಿಕೊಳ್ಳಬೇಕೆಂದು ಯಾರು ಯೋಚಿಸಬಾರದು

ಈ ರೀತಿಯಾಗಿ, ಕಾನೂನು ನೈತಿಕತೆಯಿಂದ ಗಂಭೀರವಾದ ತಪಾಸಣೆಗೊಳಗಾಗಬೇಕು ಎಂಬ ಮೇಲ್ನೋಟದ ಸಾಮಾನ್ಯೀಕರಣವನ್ನು ತಳ್ಳಿಹಾಕಿದ ಹಾರ್ಟ್, ಸಾಮಾಜಿಕ ಒಡಂಬಡಿಕೆಯನ್ನು ರಕ್ಷಿಸುವ ಸಲುವಾಗಿ ಅಲ್ಪಸಂಖ್ಯಾತರ ಮೇಲೆ ಬಹುಸಂಖ್ಯಾತರಲ್ಲಿ ಪ್ರಚಲಿತವಾಗಿರುವ ಸರಿ ಮತ್ತು ತಪ್ಪುಗಳ ಪರಿಕಲ್ಪನೆಯನ್ನು ಹೇರುವ 377ನೇ ಪರಿಚ್ಛೇದದಂತಹ ಕಾನೂನುಗಳನ್ನು ನ್ಯಾಯಶಾಸ್ತ್ರ ಮತ್ತು ಪ್ರಜಾಪ್ರಭುತ್ವದ ನೆಲೆಗಟ್ಟಿನಲ್ಲಿ ಒಪ್ಪಿಕೊಳ್ಳಲು ಸಾಧ್ಯವಿಲ್ಲ ಎಂದು ನುಡಿದರು..

ಬೆಂಥಮ್ ನೈತಿಕತೆಯ ಬಗೆಗೆ ವಿಭಿನ್ನವಾದ ದೃಷ್ಟಿಕೋನವನ್ನು ಹೊಂದಿದ್ದರು ಮತ್ತು ಅವರು ನೈತಿಕತೆಯನ್ನು ಉಪಯುಕ್ತತೆಯ ತತ್ತ್ವಗಳ ಹಿನ್ನೆಲೆಯಲ್ಲಿ ಅಳೆದುನೋಡಿದರು. ಶಿಕ್ಷೆ ಉಪಯುಕ್ತವಲ್ಲದಿದ್ದರೆ (ಎಂದರೆ, ತಡೆಯೊಡ್ಡುವ ಕೆಲಸ ಮಾಡದಿದ್ದರೆ, ನಷ್ಟಕರ ಅಥವಾ ಅನಗತ್ಯವಾಗಿದ್ದಾರೆ), 'ಅನೈತಿಕ' ಕೃತ್ಯಗಳು ಶಿಕ್ಷೆಗೊಳಗಾಗದೇ ಇರಬೇಕಾಗುತ್ತದೆ ಎಂದು ಬೆಂಥಮ್ ವಾದಿಸಿದರು. ಶಾಸಕರು ಸಾಮಾಜಿಕ ನೈತಿಕತೆಯಿಂದ ಅತಿಯಾಗಿ ಪ್ರಭಾವಿತರಾಗಬಾರದು ಎಂದು ಅವರು ಅಭಿಪ್ರಾಯಪಟ್ಟರು:

> ಅವರು ವಿಷಯವೊಂದರ ಕುರಿತು ಎಷ್ಟು ಧೃಡವಾದ ಪೂರ್ವಾಗ್ರಹ ಹೊಂದಿದ್ದಾರೆ ಎಂಬುದರ ಆಧಾರದಲ್ಲಿ ಆ ವಿಷಯಕ್ಕೆ ಎಷ್ಟರ ಮಟ್ಟಿಗಿನ ಸ್ವಾತಂತ್ರ್ಯ ಕೊಡುಬಹುದು ಎಂಬುದನ್ನು ನಿರ್ಧರಿಸಬೇಕು. ಶಾಸಕರು, ತನಗೆ ತಡೆಯೊಡ್ಡುವ ಎಲ್ಲವನ್ನೂ ಕೊಚ್ಚಿಕೊಂಡು ಹೋಗುವಂತಹ ಅಲೆಯ ಹೊಡೆತದೆದುರು ಶರಣಾಗಬೇಕಾಗುತ್ತದೆ

> ಆದರೆ ಶಾಸಕನು ತಾನು ಆಳುತ್ತಿರುವವರ ಭ್ರಾಂತಿಗಳ ಗುಲಾಮನಾಗಿರಬೇಕೆ? ಇಲ್ಲ. ಅವಿವೇಕದಿಂದ ವಿರೋಧಿಸುವುದು ಮತ್ತು ಗುಲಾಮರಂತೆ ಅನುಸರಿಸುವುದರ ಮಧ್ಯದಲ್ಲಿ, ಗೌರವಯುತ ಮತ್ತು ಸುರಕ್ಷಿತವಾಗಿರುವ ನಡುವಿನ ದಾರಿಯೊಂದಿದೆ

ಬೇರೆ ರೀತಿಯಲ್ಲಿ ಹೇಳುವುದಾದರೆ, ಕಾನೂನುಗಳನ್ನು ರಚಿಸುವಾಗ ಜನಗಳ ನೈತಿಕತೆಯನ್ನು ನಿರ್ಲಕ್ಷಿಸಬಾರದಾದರೂ, ಕಾನೂನಿನಲ್ಲಿ ಜನಗಳ ನೈತಿಕತೆಯ ಪ್ರಭಾವಕ್ಕೆ ತಡೆಯಿಲ್ಲದಂತಾಗಬಾರದು ಎಂದು ಬೆಂತಮ್ ವಾದಿಸಿದಂತೆ ತೋರುತ್ತದೆ. ಹಾಗೆಯೇ ಜನರಿಂದ ಉದ್ಭವಿಸಿದ ಪೂರ್ವಾಗ್ರಹಪೀಡಿತ ನೈತಿಕತೆಗಳನ್ನು, ಹಿಂದು ಮುಂದು ನೋಡದೆ ಕಾನೂನಿನಲ್ಲಿ ಶಾಶ್ವತವಾಗಿ ಅಡಕಗೊಳಿಸಬಾರದು, ಬದಲಿಗೆ ಅಂತಹ ನೈತಿಕತೆಯನ್ನು ಪರಿಹರಿಸಿ ಅದನ್ನು ಹತೋಟಿಗೆ ತೆಗೆದುಕೊಳ್ಳಬೇಕು.

ಸ್ಟುವರ್ಟ್ ಮಿಲ್ ಸಹ ಪ್ರಚಲಿತ ನೈತಿಕತೆಯನ್ನು ಕಾನೂನುಗಳಾಗಿ ಪರಿವರ್ತನೆ ಮಾಡುವುದರ ವಿರುದ್ಧ ಬಲವಾದ ವಾದವನ್ನು ಮಂಡಿಸಿದರು. "ಅಸಹ್ಯ' ಎಂಬುದನ್ನು ಹಾನಿ ಎಂದು ವಿಂಗಡಿಸಲು ಸಾಧ್ಯವಿಲ್ಲ, ಮತ್ತು, ತಮಗೆ ಹಿಡಿಸದ ಯಾವುದೇ ಕ್ರಿಯೆಯೊಂದನ್ನು ತಮ್ಮ ಮೇಲಿನ ಅಕ್ರಮಣವೆಂದು " ಪರಿಗಣಿಸುವ ವ್ಯಕ್ತಿಗಳು, ಇತರರ ಕ್ರಿಯೆಗಳು ತಮ್ಮ ನಂಬಿಕೆ ಅಥವಾ ಅಭಿಪ್ರಾಯಗಳಿಗೆ ವಿರುದ್ಧವಾಗಿವೆ ಎಂಬ ಕಾರಣಕ್ಕೆ, ಅವುಗಳನ್ನು ನಿರ್ದೇಶಿಸಲು ಸಾಧ್ಯವಿಲ್ಲ ಎಂದು ಅವರು ವಾದಿಸಿದರು. ಸಂಪೂರ್ಣವಾಗಿ ವೈಯಕ್ತಿಕವಾದ ನಡವಳಿಕೆಯಲ್ಲಿ ಯಾವಾಗ ಹಸ್ತಕ್ಷೇಪ ಮಾಡಬೇಕೆಂಬುದನ್ನು ನಿರ್ಧರಿಸಲು ಸಮಾಜಕ್ಕೆ ಅಧಿಕಾರವಿಲ್ಲ ಮತ್ತು ಒಂದು ವೇಳೆ ಸಮಾಜ ಹಸ್ತಕ್ಷೇಪ ಮಾಡಿದರೆ, ಅಂತಹ ಹಸ್ತಕ್ಷೇಪ ತಪ್ಪಾಗಿರುವ ಮತ್ತು ತಪ್ಪಾದ ವಿಚಾರದಲ್ಲಿ ನಡೆಯುತ್ತಿರುವ ಸಾಧ್ಯತೆಯಿದೆ ಎಂದು ಮಿಲ್ ನಂಬಿದ್ದರು.

135. ಕ್ರಿಸ್ಟೋಫರ್ ಆರ್. ಲೆಸ್ಲೀ ಅವರು ಕಾನುನಿನೊಳಗೆ ನೈತಿಕತೆ ಸೇರಿಕೊಂಡರೆ ಎದುರಾಗುವ ಅಪಾಯವನ್ನು ಹೀಗೆ ಸೂಚಿಸುತ್ತಾರೆ:

> ಈಗಿನ ತಲೆಮಾರುಗಳು ಕಾನೂನುಗಳನ್ನು ಜಾರಿಗೊಳಿಸಿ ತಮ್ಮ ನೈತಿಕತೆಯನ್ನು ಮೆರೆಸುತ್ತಾರೆ ಮತ್ತು ಆ ಕಾನೂನುಗಳನ್ನು ತಮ್ಮ

> ಮಕ್ಕಳಿಗೆ ಹಸ್ತಾಂತರಿಸುವ ಮೂಲಕ ತಮ್ಮ ಪೂರ್ವಾಗ್ರಹಗಳನ್ನು ಪ್ರಚಲಿತಗೊಳಿಸುತ್ತಾರೆ. ಬಹು ಬೇಗ, ಶಾಸನಗಳಿಗೆ ತಮ್ಮದೇ ಆದ ಜೀವ ಬರುತ್ತದೆ ಮತ್ತು ಅವುಗಳ ಇರುವಿಕೆಯೇ ಅವುಗಳ ವ್ಯಾಪ್ತಿ ಮತ್ತು ವಿಸ್ತಾರಗಳಿಂದ ಆಗಬಹುದಾದ ಪರಿಣಾಮಗಳನ್ನು ಸಮರ್ಥಿಸಿಕೊಳ್ಳುತ್ತದೆ. ಪುರಾತನ ಕಾನೂನುಗಳ ವ್ಯಾಪ್ತಿಯ ಬಗೆಗಿನ ಚರ್ಚೆಗಳಾಗಲಿ, ವಿಮರ್ಶೆಯಾಗಲಿ ನಡೆಯುವುದಿಲ್ಲ[290]

"ಗುದಸಂಭೋಗದ ಕಾನೂನುಗಳು ಕೇವಲ ಸಾಮಾಜದ ಅಸಮ್ಮತಿಯನ್ನಷ್ಟೇ ವ್ಯಕ್ತಪಡಿಸುವುದಿಲ್ಲವೆಂದು ಹೇಳುವ ಲೆಸ್ಲಿ, ಅವುಗಳು ಒಂದು ಹೆಜ್ಜೆ ಮುಂದೆ ಹೋಗಿ ಅಪರಾಧಿಗಳ ವರ್ಗವೊಂದನ್ನು ರಚಿಸುತ್ತವೆ ಎಂದು ಹೇಳುತ್ತಾನೆ:

> ಸರ್ಕಾರಗಳು ಗುದಸಂಭೋಗದ ಕಾನೂನುಗಳನ್ನು ಚುರುಕಾಗಿ ಜಾರಿಗಳಿಸುವ ಉದ್ದೇಶವಿಲ್ಲದ ಹೊರತಾಗಿಯೂ, ಅವುಗಳನ್ನು, ಶಾಸನಗಳಲ್ಲಿ ಉಳಿಸಿಕೊಳ್ಳಲಾಗಿದೆ, ಏಕೆಂದರೆ ಕಾನೂನುಗಳು ಸಮಲೈಂಗಿಕತೆ ಒಪ್ಪತಕ್ಕದ್ದಲ್ಲ ಎಂಬ ಸಂದೇಶವನ್ನು ಸಮಾಜಕ್ಕೆ ರವಾನಿಸಿವೆ. ಅಪರಾಧಗಳಿಗೆ ಶಿಕ್ಷೆ ವಿಧಿಸದಿದ್ದರೂ, ಕಾನೂನುಗಳು ಅರ್ಥವನ್ನು ಸೂಚಿಸುತ್ತಿರುತ್ತವೆ… ಸರಳವಾಗಿ ಹೇಳುವುದಾದರೆ, ಇಂದಿನ ಗುದಸಂಭೋಗದ ಕಾನೂನುಗಳು ಸಮಲೈಂಗಿಕ ಸ್ತ್ರೀ ಪುರುಷರ ಸಾಮಾಜಿಕ ಸ್ಥಾನಮಾನಗಳನ್ನು ಕಡಿತಗೊಳಿಸಬೇಕೆಂಬ ಸರ್ಕಾರದ ಸಂದೇಶವನ್ನು ರವಾನಿಸುತ್ತವೆ ಎಂಬುದು ಅವುಗಳಿಗಿರುವ ಮಹತ್ವ.

136.ಅಪರಾಧ ಸಿದ್ಧಾಂತವನ್ನು ಆಳವಾದ ವಿಶ್ಲೇಷಣೆಗೆ ಒಳಪಡಿಸಿದಾಗ, ಅಪರಾಧಶಾಸ್ತ್ರಜ್ಞರು ಮತ್ತು ಕಾನೂನು ತತ್ವಜ್ಞಾನಿಗಳು, ಅಪರಾಧವು ಮೂರನೇ ವ್ಯಕ್ತಿಗೆ ಅಥವಾ ಸಮಾಜಕ್ಕೆ

---

[290] Christopher. R. Leslie, “Creating criminals: The Injuries Inflicted by “Unenforced” Sodomy Laws”, Harvard Civil Rights and Civil Liberties Law Review, Vol. 35 (2000).

ಹಾನಿಯುಂಟುಮಾಡಬೇಕು- ಎಂಬ  ಅಪರಾಧದ ಮೂಲಭೂತ ಗುಣಲಕ್ಷಣವೊಂದರ ಬಗೆಗೆ ಬಹಳ ಹಿಂದೆಯೇ ಒಪ್ಪಂದಕ್ಕೆ ಬಂದಿದ್ದಾರೆ ಎಂಬಾ ಸಾಮಾನ್ಯ ತೀರ್ಮಾನಕ್ಕೆ ಬರಬಹುದು:

ಮಹತ್ವದ ಸಾರ್ವಜನಿಕ ಹಿತಾಸಕ್ತಿ ಎಂಬ ಅಂಶವು ಅಪರಾಧದ ಸಾರವಾಗಿ ಹೊರಹೊಮ್ಮುತ್ತದೆ. 377 ನೇ ಪರಿಚ್ಛೇದವು ಅಪರಾಧೀಕರಿಸುವ ಪುರುಷ ಅಥವಾ ಮಹಿಳೆಯೊಂದಿಗಿನ ನಿಸರ್ಗದ ನಿಯಮಕ್ಕೆ ವಿರುದ್ಧವಾದ ಸ್ವಯಂಪ್ರೇರಿತ 'ಶಾರೀರಿಕ ಸಂಭೋಗ ಮತ್ತು ಇತರ ನಡವಳಿಕೆಗಳು- ಕೇವಲ ಒಪ್ಪಿಗೆಯಿರುವ ವಯಸ್ಕರ ನಡುವಿನ ಕ್ರಿಯೆಗಳಿಗೆ ಮಾತ್ರ ಸಂಬಂಧಿಸಿದೆ. ಅಂತಹ ನಡವಳಿಕೆಯು ಸಂಪೂರ್ಣವಾಗಿ ಖಾಸಗೀಯಾದುದು ಅಥವಾ ಮಿಲ್ ಹೇಳುವಂತೆ ಅದು "ತನಗೆ-ಸಂಬಂಧಿಸಿರುವಂತಹುದು" ಮತ್ತು ಆ ಕೃತ್ಯಗಳು ಮತ್ತೊಬ್ಬರಿಗೆ ಹಾನಿ ಮಾಡುವ ಸಾಮರ್ಥ್ಯ ಹೊಂದಿಲ್ಲ ಅಲ್ಲದೇ ಸಮಾಜದ ಸ್ಥಿರತೆ ಮತ್ತು ಭದ್ರತೆಗೆ ಬೆದರಿಕೆಯನ್ನೊಡ್ಡುವುದಿಲ್ಲ. ಒಂದು ಬಾರಿ ಕೃತವೊಂದಕ್ಕೆ ಒಪ್ಪಿಗೆ ಇರುವ ಅಂಶ ಋಜುವಾತದರೆ, ಅಂತಹ ನಡವಳಿಕೆಯು ಯಾವುದೇ ಬಗೆಯ ಹಾನಿಯನ್ನು ಉಂಟುಮಾಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಮೇಲ್ನೋಟಕ್ಕೆ 377ನೇ ಪರಿಚ್ಛೇದ ಕೆಲ ಕ್ರಿಯೆಗಳು ಅಥವಾ ನಡವಳಿಕೆಯನ್ನಷ್ಟೇ ಅಪರಾಧೀಕರಿಸುತ್ತದೆ ಎಂದು ಕಂಡು ಬರುತ್ತದೆಯಾದರೂ,  ಅದು  ಒಪ್ಪಿಗೆಯ ಲೈಂಗಿಕ ಚಟುವಟಿಕೆಯಲ್ಲಿ ತೊಡಗಿರುವ ವ್ಯಕ್ತಿಗಳನ್ನು ಒಳಗೊಂಡ, ಅಪರಾಧಿಗಳ ವರ್ಗವನ್ನು ಸೃಷ್ಟಿಸುತ್ತದೆ. ಈ ಪರಿಚ್ಛೇದವು, ಎಲ್.ಜಿ.ಬಿ.ಟಿ.ಕ್ಯು. ವ್ಯಕ್ತಿಗಳನ್ನು ಲೈಂಗಿಕ ಅಪರಾಧಿಗಳ ಪಾತ್ರಕ್ಕೆ ಸೀಮಿತಗೊಳಿಸಿ, ಒಪ್ಪಿಗೆಯ ಕ್ರಿಯೆಗಳನ್ನು  ಅತ್ಯಾಚಾರ ಮತ್ತು ಮಕ್ಕಳ ಅತ್ಯಾಚಾರದಂತಹ ಲೈಂಗಿಕ ಅಪರಾಧಗಳೊಂದಿಗೆ ಸಮೀಕರಿಸುತ್ತದೆ. 377ನೇ ಪರಿಚ್ಛೇದವು ಅಪರಾಧವೆಂದು ಪರಿಗಣಿಸಬಾರದ ಕೃತ್ಯಗಳನ್ನು (ವಯಸ್ಕರ ನಡುವಿನ ಒಪ್ಪಿಗೆಯ ಲೈಂಗಿಕ ಕ್ರಿಯೆ) ಅಪರಾಧೀಕರಿಸುವುದಷ್ಟೇ ಅಲ್ಲದೆ, ಸಮಾಜದಲ್ಲಿ ಎಲ್.ಜಿ.ಬಿ.ಟಿ.ಕ್ಯು ವ್ಯಕ್ತಿಗಳನ್ನು ಕಳಂಕ ಮತ್ತು ಖಂಡನೆಗೊಳಪಡಿಸುತ್ತದೆ.

137. ನೈತಿಕತೆಯು ಅಪರಾಧಕ್ಕೆ ಸಂಬಂಧಿಸಿದ ಕಾನೂನಿನ ನಿಯಮಗಳನ್ನು ನಿರ್ದೇಶಿಸಲು ಬಿಟ್ಟರೆ ಬಂದೊದಗುವ ಗಂಡಾಂತರಗಳ ಅರಿವು ನಮಗಿದೆ. ಒಂದೇ ಬಗೆಯ ನೈತಿಕತೆಯನ್ನು ಸಮಾಜಕ್ಕೆ ಅನ್ವಯಿಸಿದರೆ, ಆದು ಅಲ್ಪಸಂಖ್ಯಾತ ಸಮುದಾಯಗಳ ನೈತಿಕತೆಯ ಮೇಲೆ 'ತುಳಿದುಹಾಕುವ' ಅಥವಾ 'ಪರಕೀಯಗೊಳಿಸುವ' ಪರಿಣಾಮ ಬೀರುವುದರ ಬಗೆಗೆ ಅನುಮಾನವೇ ಇಲ್ಲ. ಎಲ್.ಜಿ.ಬಿ.ಟಿ.ಕ್ಯು

ಸಮುದಾಯವು, ಭಾರತೀಯ ದಂಡ ಸಂಹಿತೆ ತಯಾರಾದ ಮತ್ತು ಜಾರಿಗೆ ಬಂದ ಸಮಯದಲ್ಲಿ ಪ್ರಚಲಿತವಾಗಿದ್ದ ಪ್ರಬಲ (ವಿಕ್ಟೋರಿಯನ್) ನೈತಿಕತೆಗೆ ಬಲಿಯಾಗಿದೆ. ಆದ್ದರಿಂದ, 377ನೇ ಪರಿಚ್ಛೇದದ ಮಾನ್ಯತೆಯನ್ನು ನಿರ್ಧರಿಸುವಾಗ, ಲೈಂಗಿಕ ನೈತಿಕತೆಯ ಬಗೆಗಿನ ಮುಖ್ಯವಾಹಿನಿಯ ದೃಷ್ಟಿಕೋನದ ಬದಲಿಗೆ, ಸಾಂವಿಧಾನಿಕ ನೈತಿಕತೆಯಷ್ಟೇ ಪ್ರೇರಕ ಅಂಶವೆಂದು ಪರಿಗಣಿಸಬೇಕೆಂಬುದು ನಮ್ಮ ಭಾವನೆಯಾಗಿದೆ.

## L. ಸಾಂವಿಧಾನಿಕ ನೈತಿಕತೆ

138.1947ನೇ ಇಸವಿಯ ಆಗಸ್ಟ್ 15 ರಂದು ಸ್ವಾತಂತ್ರ್ಯ ಪಡೆಯುವುದರೊಂದಿಗೆ, ಭಾರತೀಯರು ತಮ್ಮ ಭಾಗ್ಯವನ್ನು ತಾವೇ ರೂಪಿಸಿಕೊಳ್ಳಲು ಕೊನೆಗೂ ಸ್ವಾತಂತ್ರರಾಗಿದ್ದರು [291]. ಭಾಗ್ಯವನ್ನು ಲಿಖಿತ ಸಂವಿಧಾನದ ಮೂಲಕ ರೂಪಿಸಬೇಕಿತ್ತು. ಸಂವಿಧಾನಗಳನ್ನು, ಜನರು ತಾವು ಬಯಸುವ ಸಾಮೂಹಿಕ ಭಾಗ್ಯವನ್ನು ಬರೆದಿಟ್ಟುಕೊಳ್ಳಲು ಬಳಸುವ ಲಿಪಿ ಎನ್ನಬಹುದು. ಅವರು ಯಾರು, ಅವರು ಏನಾಗ ಬಯಸುತ್ತಾರೆ, ಮತ್ತು ಅವರು ಭವಿಷ್ಯದಲ್ಲಿ ಆ ಮಾರ್ಗದಲ್ಲಿ ನಡೆಯುವಂತೆ ದಾರಿತೋರಬಲ್ಲ ತತ್ವಗಳಾವುವು ಎಂಬುದನ್ನು ಅವರು ಬರೆದಿಟ್ಟುಕೊಳ್ಳುತ್ತಾರೆ [292]. ಭೂತಕಾಲದ ಸಾಮಾಜಿಕ ಅಸಮಾನತೆ ಮತ್ತು ಪೂರ್ವಾಗ್ರಹಗಳಿಗೆ "ಪರದೆ ಎಳೆಯುವ" ಸವಾಲೀನ ಹೊರೆ ಭಾರತೀಯ ಸಂವಿಧಾನದ ಮೇಲಿಟ್ಟು ಭಾರತವನ್ನು ಸ್ವಾತಂತ್ರ್ಯದೆಡೆಗೆ ಕರೆದೊಯ್ದವರು, ಸಂವಿಧಾನದೊಳಗೆ ಜೀವಂತಿಕೆಯ ಸಮಸಮಾಜದ ಆದರ್ಶ ಮತ್ತು ದೃಷ್ಟಿಕೋನವನ್ನು ಬಿತ್ತಿದರು.

ಭಾರತದ ಸಂವಿಧಾನದ ರಚನೆಯು, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವವೆಂಬ ಸಮಾನ ಮೌಲ್ಯಗಳನ್ನು ಸ್ಥಾಪಿಸುವ ಮತ್ತು ಉತ್ತೇಜಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಿ ಸಮಾಜವನ್ನು ಮುಕ್ತಗೊಳಿಸುವ ಮಾಧ್ಯಮವಾಗಿತ್ತು. ಇತಿಹಾಸದುದ್ದಕ್ಕೂ, ಸಾಮಾಜಿಕ-ಸಾಂಸ್ಕೃತಿಕ ದಂಗೆಗಳು, ತಾರತಮ್ಯ-ವಿರೋಧಿ ನಿಲುವುಗಳು, ಚಳುವಳಿಗಳು, ಸಾಹಿತ್ಯ ಮತ್ತು ನಾಯಕರುಗಳಿಂದ, ಜನರನ್ನು ದಬ್ಬಾಳಿಕೆಯ ಚಿಂತನೆಯಿಂದ

[291] Jawaharlal Nehru, "Tryst with Destiny", address to the Constituent Assembly of India, delivered on 14-15 August 1947.

[292] Uday S. Mehta, "Constitutionalism", In The Oxford Companion to Politics in India (Niraja Gopal Jayal and Pratap Bhanu Mehta eds.), Oxford University Press (2010), at page 15.

ದೂರವಾಗಿಸಿ ಸಮಾನಾತಾವಾದಿ ಅಸ್ತಿತ್ವದೆಡೆಗೆ ಕರೆದೊಯ್ಯುವ ಕೆಲಸಗಳಾಗಿವೆ. ಭಾರತೀಯ ಸಂವಿಧಾನವು ಇಂತಹ ನಿಲುವುಗಳ ಅಭಿವ್ಯಕ್ತಿಯಾಗಿದೆ. ಅದು ಹೊಂದಾಣಿಕೆಯಿಲ್ಲದ ಸಮಾಜದಲ್ಲಿ ಪೂರ್ವಾಗ್ರಹ, ತಾರತಮ್ಯ, ಮತ್ತು ಅಧಿಕಾರದ ದಬ್ಬಾಳಿಕೆಯನ್ನು ಬಿತ್ತಿದ ಕ್ರಿಯೆಯನ್ನು ಸರಿಪಡಿಸುವ ಪ್ರಯತ್ನವಾಗಿತ್ತು. ಎಲ್ಲಾ ನಾಗರಿಕರು ಪ್ರಭುತ್ವದ, ಅಥವಾ ಸಮಾಜದಿಂದ ಖಾಸಗೀಯಾಗಿ ನಡೆಯುವ, ದಬ್ಬಾಳಿಕೆ ಅಥವಾ ನಿರ್ಬಂಧದಿಂದ ಮುಕ್ತರಾಗಬೇಕಿತ್ತು. ಸ್ವಾತಂತ್ರ್ಯವು, ಇನ್ನುಮುಂದೆ ಬರೀ ಕೆಲವರ ಸವಲತ್ತಾಗಿ ಉಳಿಯುವಂತಿರಲಿಲ್ಲ[293]. **ಪುಟ್ಟಸ್ವಾಮಿ** ಪ್ರಕರಣದ ತೀರ್ಪು ಸಂವಿಧಾನದ ನಿರ್ಮಾತೃಗಳ ಬದ್ಧತೆಯನ್ನು ಈ ರೀಟಿಯಲ್ಲಿ ಎತ್ತಿತೋರಿಸುತ್ತದೆ:

> ""ಇಲ್ಲಿ ಮತ್ತು ಇತರೆಡೆಗಳಲ್ಲಿ ದಬ್ಬಾಳಿಕೆ ಮತ್ತು ಘನತೆಯ ಉಲ್ಲಂಘನೆಯನ್ನು ಅನುಭವಿಸಿದವರ ನೋವಿನ ಇತಿಹಾಸಗಳು ಸಂವಿಧಾನದ ನಿರ್ಮಾತೃಗಳ ದೃಷ್ಟಿಕೋನವನ್ನು ಪುಷ್ಟೀಕರಿಸಿದುವು"

139.ಭಾರತದ ಪರಿಕಲ್ಪನೆಯನ್ನು, ಆ ಮೊದಲು ಅದರ ಸರಿಯಾದ ಪರಿಕಲ್ಪನೆಯೇ ಇಲ್ಲದಿರುವ ಸಮಯದಲ್ಲಿ ಅರ್ಥಮಾಡಿಕೊಳ್ಳುವುದು, ಸಂವಿಧಾನದ ವಾಸ್ತವವಾದ ರಚನೆಯಲ್ಲಿ ಜನರು ಯಾವುದೇ ಪಾತ್ರವನ್ನು ವಹಿಸದಿದ್ದರೂ, ಸಂವಿಧಾನದ ಪ್ರಸ್ತಾವನೆಯು, ಜನರೇ ಸಂವಿಧಾನವನ್ನು ಅಂಗೀಕರಿಸಿದ್ದಾರೆ ಎಂದು ಪ್ರತಿಪಾದಿಸಿರುವುದರ ಹಿನ್ನೆಲೆಯಲ್ಲಿ ಅತ್ಯಂತ ಮಹತ್ವದ ವಿಚಾರವಾಗಿದೆ. ಸಾಂವಿಧಾನಿಕ ಇತಿಹಾಸಕಾರ ಗ್ರನ್ವಿಲ್ ಆಸ್ಟಿನ್ ಭಾರತೀಯ ಸಂವಿಧಾನ ಮುಖ್ಯವಾಗಿ ಒಂದು ಸಾಮಾಜಿಕ ದಸ್ತಾವೇಜು ಎಂದು ಹೇಳಿದ್ದಾರೆ. ಭಾರತೀಯ ಸಂವಿಧಾನ ಆಡಳಿತದ ಚೌಕಟ್ಟನ್ನಷ್ಟೇ ಒದಗಿಸುವುದಿಲ್ಲ, ಬದಲಿಗೆ ಇದು ಪರಿಕಲ್ಪನೆಯೊಂದನ್ನು ಮೈವೆತ್ತಿದೆ. ಆದು ಗುರಿ-ಆಧಾರಿತವಾಗಿದ್ದು, ದೇಶದಲ್ಲಿ ಒಂದು ಸಾಮಾಜಿಕ ಪರಿವರ್ತನೆಯನ್ನುಂಟುಮಾಡುವುದು ಅದರ ಉದ್ದೇಶವಾಗಿದೆ. ಆದು ತನ್ನ ನಿರ್ಮಾತೃಗಳ ಆಶೋತ್ತರಗಳನ್ನು ಪ್ರತಿನಿಧಿಸುತ್ತದೆ. ಭಾರತದ ಪ್ರಜಾತಾಂತ್ರಿಕ ಸಂವಿಧಾನವು ಮೌಲ್ಯಾಧಾರಿತ ನಿಯಮಗಳನ್ನು ಮೈವೆತ್ತಿದೆ.

[293] Granville Austin, The Indian Constitution: Cornerstone of a Nation, Oxford University Press (1966), at page 65.

140. ಸಂವಿಧಾನದ ರಚನೆಯ ಸಮಯದಲ್ಲಿ, ಸಾಂವಿಧಾನಿಕ ಕಲ್ಪನೆ ಮತ್ತು ವಾಸ್ತವದ ನಡುವೆ ಬಹುದೊಡ್ಡ ಅಂತರವಿರುವುದನ್ನು ಸಂವಿಧಾನ ಸಭೆಯ ಸದಸ್ಯರು ಮನಗಂಡರು. ಸಾಮಾನ್ಯ ಜನರು ಹೊಸ ಸಂವಿಧಾನಾತ್ಮಕ ಮೌಲ್ಯಗಳನ್ನು ಗ್ರಹಿಸಿಕೊಳ್ಳಲು ಸ್ವಲ್ಪ ಸಮಯ ಹಿಡಿಯುತ್ತದೆ ಎಂಬುದರ ಬಗೆಗೆ ನಿರ್ಮಾತೃಗಳಿಗೆ ಸ್ಪಷ್ಟತೆಯಿತ್ತು. ಸಮಾಜವು ರಾತ್ರೋರಾತ್ರಿ ಬದಲಾಗುವುದು ಸಾಧ್ಯವಿರಲಿಲ್ಲ. ಡಾ. ಅಂಬೇಡ್ಕರ್ ಅವರು ಸಂವಿಧಾನ ಸಭೆಯಲ್ಲಿ ಹೀಗೆ ಹೇಳಿದ್ದಾರೆ:

> "ಭಾರತದಲ್ಲಿ ಪ್ರಜಾತಾಂತ್ರಿಕತೆಯು, ಮೂಲಭೂತವಾಗಿ ಅ-ಪ್ರಜಾತಾಂತ್ರಿಕವಾಗಿರುವ ಭಾರತದ ಮಣ್ಣಿನ ಮೇಲ್ಪದರವಷ್ಟೇ ಆಗಿದೆ"

141. ಸಮಾಜವೊಂದು, ಪ್ರಜಾಪ್ರಭುತ್ವದ ಮೌಲ್ಯಗಳ ಪ್ರಕಾರ ಕೆಲಸ ಮಾಡಬೇಕಿದ್ದಲ್ಲಿ ಹಲವು ವರ್ಷಗಳ ಅಭ್ಯಾಸ, ಪ್ರಯತ್ನ, ಮತ್ತು ಅನುಭವಾಗದ ಅಗತ್ಯವಿದೆ. ತಾರತಮ್ಯದಿಂದ ಮುಕ್ತಿ, ಸಮಾನತೆ, ಭ್ರಾತೃತ್ವ ಮತ್ತು ಜಾತ್ಯತೀತತೆಗಳ ಪರಿಸ್ಥಿತಿಯೂ ಇದೇ ಆಗಿದೆ. ಸಂವಿಧಾನವು ಕಾನೂನಿನೆದೂರಿನ ಸಮಾನತೆ ಮತ್ತು ಕಾನೂನಿನ ಸಮಾನ ರಕ್ಷಣೆಗಳನ್ನು ಖಾತರಿಪಡಿಸುತ್ತದೆಯಾದರೂ, ಸಾಂವಿಧಾನಿಕವಾದ ಈ ಪರಿಕಲ್ಪನೆಯನ್ನು ಸಾಧಿಸುವ ಸಲುವಾಗಿ, ಆ ಪರಿಕಲ್ಪನೆಗೆ ಬದ್ಧತೆ ವ್ಯಕ್ತಪಡಿಸುವುದು ಕೂಡಾ ಅಗತ್ಯವೆಂದು ಭಾವಿಸಲಾಯಿತು. ಈ ಬದ್ಧತೆಯನ್ನು ಡಾ. ಅಂಬೇಡ್ಕರ್, ಸಮಾಜದ ಸದಸ್ಯರಲ್ಲಿರುವ ಸಾಂವಿಧಾನಿಕ ನೈತಿಕತೆ ಎಂದು ಕರೆದರು. ಸಾಂವಿಧಾನಿಕ ನೈತಿಕತೆಯ ಪರಿಕಲ್ಪನೆಯು ಸಾರ್ವಜನಿಕ ಅಥವಾ ಸಾಮಾಜಿಕ ನೈತಿಕತೆಗಿಂತ ಭಿನ್ನವಾದುದಾಗಿದೆ.

ಸಾರ್ವಜನಿಕ ನೈತಿಕತೆಯ ಅಡಿಯಲ್ಲಿ, ಸಮಾಜದ ನಡವಳಿಕೆಗಳನ್ನು ಸಮಾಜದಲ್ಲಿ ಪ್ರಚಲಿತವಾಗಿರುವ ಜನಪ್ರಿಯ ಗ್ರಹಿಕೆಗಳ ಆಧಾರದಲ್ಲಿ ನಿರ್ಧರಿಸಲಾಗುತ್ತದೆ. ಕೆಲ ಚಿಹ್ನೆಗಳು, ಹಣೆಪಟ್ಟಿಗಳು, ಹೆಸರುಗಳು ಅಥವಾ ದೇಹಾಕಾರಗಳು ಮುಂದುವರಿಕೆಯು ವ್ಯಕ್ತಿಗಳು ಮತ್ತು ವಸ್ತುಗಳ ಕಡೆಗಿನ ಜನರ ಕಲ್ಪನೆಗಳು, ಭಾವನೆಗಳು ಮತ್ತು ಮಾನಸಿಕ ನಿಲುವುಗಳನ್ನು ನಿರ್ಧರಿಸುತ್ತದೆ[294]. ಸಾಂವಿಧಾನಿಕ ನೈತಿಕತೆಯು, ವ್ಯಕ್ತಿಗಳು ಮತ್ತು ಸಮಸ್ಯೆಗಳೆಡೆಗಿನ

[294] Babasaheb.R. Ambedkar, Annihilation of Caste, Navayana Publishing (2014); See also Martha C. Nussbaum, “Disgust or Equality? Sexual Orientation and Indian Law”, Journal of Indian Law and Society, Vol. 6 (2010).

ಮಾನಸಿಕ ಧೋರಣೆಯನ್ನು ಸಂವಿಧಾನದ ಪಠ್ಯ ಮತ್ತು ಸ್ಪೂರ್ತಿಯ ಆಧಾರದಲ್ಲಿ ನಿರ್ಧರಿಸುತ್ತದೆ. ವ್ಯಕ್ತಿಯ ಹಕ್ಕುಗಳನ್ನು ಸಮಾಜದ ಜನಪ್ರಿಯ ಅಭಿಪ್ರಾಯಗಳ ಮೂಲಕ ಪೂರ್ವಾಗ್ರಹಕ್ಕೊಳಪಡಿಸಬಾರದು ಎಂಬುದು ಸಾಂವಿಧಾನಿಕ ನೈತಿಕತೆಯ ನಿಲುವಾಗಿದೆ. ಅದು, ಪ್ರಜೆಗಳು ಸಂವಿಧಾನದ ನಿರ್ಮಾತೃಗಳ ದೃಷ್ಟಿಕೋನವನ್ನು ಗೌರವಿಸುತ್ತಾರೆ ಮತ್ತು ಆ ದೃಷ್ಟಿಕೋನವನ್ನು ಈಡೇರಿಸುವ ರೀತಿಯಲ್ಲಿ ತಮ್ಮನ್ನು ತಾವು ನಡೆಸಿಕೊಳ್ಳುತ್ತಾರೆಂದು ಭಾವಿಸುತ್ತದೆ. ಸಾಂವಿಧಾನಿಕ ನೈತಿಕತೆಯು, ಅಸ್ತಿತ್ವಕ್ಕಾಗಿ ನಡೆಯುವ ಹೋರಾಟದಲ್ಲಿ ನ್ಯಾಯವೆಂಬ ಆದರ್ಶವು, ಸಾಮಾಜಿಕ ಒಪ್ಪಿಗೆಗೆ ಸಂಬಂಧಿಸಿದ ಬೇರೆ ಯಾವುದೇ ಪರಿಕಲ್ಪನೆಯನ್ನು ಮೀರಿಸುವ ಪ್ರಬಲ ಅಂಶವಾಗಿದೆ ಎಂದು ಪ್ರತಿಪಾದಿಸುತ್ತದೆ. ಆದು ಪ್ರಜಾಪ್ರಭುತ್ವದ ಅಡಿಪಾಯವನ್ನು ನಿರ್ಮಿಸುತ್ತದೆ ಮತ್ತು ಕಾಪಾಡುತ್ತದೆ, ಇಂತ ರಕ್ಷಣೆ ಇಲ್ಲದೇ ಹೋದಲ್ಲಿ, ರಾಷ್ಟ್ರವೊಂದು ತನ್ನ ಅಡಿಪಾಯದಲ್ಲಿ ಉಂಟಾಗುವ ಬಿರುಕುಗಳಿಂದಾಗಿ ಒಡೆದುಹೋಗುತ್ತದೆ. ಈ ಕಾರಣಕ್ಕಾಗಿ, ಸಾಂವಿಧಾನಿಕ ನೈತಿಕತೆಯನ್ನು ನಾಗರಿಕರು ನಿರಂತರವಾಗಿ ಮತ್ತು ಸತತವಾಗಿ ಮೈಗೂಡಿಸಿಕೊಳ್ಳಬೇಕು. ಡಾ. ಅಂಬೇಡ್ಕರ್ ರವರು ಸಂವಿಧಾನ ಸಭೆಯೆದುರು ಹಂಚಿಕೊಂಡ ವಿಚಾರವನ್ನು ಸಮಾಜ ಯಾವಾಗಲೂ ಮನಸ್ಸಿನಲ್ಲಿಟ್ಟುಕೊಳ್ಳಬೇಕು.

> "ಸಾಂವಿಧಾನಿಕ ನೈತಿಕತೆ ನೈಸರ್ಗಿಕ ಭಾವನೆ ಅಲ್ಲ ಅದನ್ನು ಬೆಳೆಸಬೇಕಿದೆ. ನಮ್ಮ ಜನರು ಅದನ್ನು ಕಲಿಯಬೇಕಿದೆ ಎಂಬುದನ್ನು ನಾವು ಮನಗಾಣಬೇಕು

142. ದೆಹಲಿ ಎನ್.ಸಿ.ಟಿ.ಯ ಸರ್ಕಾರ v. ಭಾರತ ಸರ್ಕಾರ ಪ್ರಕರಣದಲ್ಲಿನ ತೀರ್ಪಿನಲ್ಲಿ, ಈ ನ್ಯಾಯಾಲಯದ ಸಾಂವಿಧಾನಿಕ ಪೀಠವು ಸಾಂವಿಧಾನಿಕ ನೈತಿಕತೆಯನ್ನು ರಚಿಸಿರುವ ಹಾಗೂ ಪ್ರಜಾತಾಂತ್ರಿಕ ವ್ಯವಸ್ಥೆ ಮತ್ತು ಸರ್ಕಾರದ ಪ್ರಾತಿನಿಧಿಕ ಸ್ವರೂಪವನ್ನು ನಿಯಂತ್ರಿಸುವಂತಹ ಅಂಶಗಳನ್ನು ಪರಿಗಣಿಸಿತು. ಸಾಂವಿಧಾನಿಕ ನೈತಿಕತೆಯನ್ನು "ಸಾಂವಿಧಾನಿಕ ಸಂಸ್ಕೃತಿಯ" ಮೇಲೆ ಸ್ಥಾಪಿಸಲಾಗಿದ್ದು, ಅದಕ್ಕೆ "ಭಾರತೀಯ ಸಂವಿಧಾನ ಸಾಧಿಸಲೆತ್ನಿಸುತ್ತಿರುವ ಸಾಮಾಜಿಕ ಪರಿವರ್ತನೆಯೊಂದನ್ನು ಅರಿತುಕೊಳ್ಳಬಲ್ಲ ಭಾವನೆ ಮತ್ತು ಬಧ್ಧತೆ" ಇರುವುದು ಅತ್ಯಗತ್ಯ. ನ್ಯಾಯಾಲಯ ಹೀಗೆಂದು ನಿರ್ಧರಿಸಿತು:

"ನಮ್ಮ ಸಂವಿಧಾನದ ನೈತಿಕ ಮೌಲ್ಯಗಳನ್ನು ಪ್ರತಿ ಹಂತದಲ್ಲಿ ಎತ್ತಿಹಿಡಿಯದಿದ್ದರೆ, ತನ್ನ ಪ್ರಜಾಪ್ರಭುತ್ವದ ಮೌಲ್ಯಗಳನ್ನು ರಕ್ಷಿಸಲು ಸಂವಿಧಾನದ ಪಠ್ಯಗಳಷ್ಟೇ ಸಾಕಾಗುವುದಿಲ್ಲ.

ಸಾಂವಿಧಾನಿಕ ನೈತಿಕತೆಯು "ಬಹುಸಂಖ್ಯಾತ ದಬ್ಬಾಳಿಕೆ"ಯನ್ನು ತಡೆಯುವ ತಡೆಗೂಡೆ, ಮತ್ತು "ಗುಂಪು ನಿರ್ಧಾರಗಳ ವೇಗವನ್ನು ಕುಗ್ಗಿಸುವ ಹೊಸ್ತಿಲಿನಂತೆ" ಕೆಲಸ ಮಾಡುತ್ತದೆ ಎಂದು ಈ ನ್ಯಾಯಾಲಯ ತೀರ್ಮಾನಿಸಿತು. ಅದು ಜನಪ್ರಿಯ ಸಾರ್ವಜನಿಕ ನೈತಿಕತೆಯ ಪರಿಣಾಮಗಳನ್ನು ಸಮತೋಲನದಲ್ಲಿರಿಸುತ್ತದೆ ಎಂದು ನಿರ್ಧರಿಸಲಾಯಿತು.

143. ಪ್ರಜಾಪ್ರಭುತ್ವದಲ್ಲಿ ಸಾಂವಿಧಾನಿಕ ನೈತಿಕತೆಗೆ ಕೆಲ ಕನಿಷ್ಠ ಹಕ್ಕುಗಳ ಭರವಸೆಯ ಅಗತ್ಯವಿದೆ, ಮತ್ತು ಅವು ಅದು ಸಮಾಜದ ಪ್ರತಿಯೊಂದು ಸದಸ್ಯರ ಮುಕ್ತ ಅಸ್ತಿತ್ವಕ್ಕೆ ಅವಶ್ಯಕವಾಗಿವೆ. ಸಂವಿಧಾನದ ಪ್ರಸ್ತಾವನೆಯು ಈ ಹಕ್ಕುಗಳನ್ನು "ಚಿಂತನೆ, ಅಭಿವ್ಯಕ್ತಿ, ನಂಬಿಕೆ, ಶ್ರದ್ಧೆ ಮತ್ತು ಆರಾಧನೆಯ ಸ್ವಾತಂತ್ರ್ಯ" ಮತ್ತು "ಸ್ಥಾನಮಾನ ಮತ್ತು ಅವಕಾಶಗಳ ಸಮಾನತೆ" ಎಂದು ಗುರುತಿಸುತ್ತದೆ. ಸಾಂವಿಧಾನಿಕ ನೈತಿಕತೆಯು ಎಲ್ಲಾ ಬಗೆಯ ಅಸಮಾನತೆಗಳು ಸಾಮಾಜಿಕ ವ್ಯವಸ್ಥೆಯಿಂದ ಹೊರಹಾಕುತ್ತದೆ ಮತ್ತು ಖಾತ್ರಿಗೊಳಿಸಲಾಗಿರುವ ಹಕ್ಕುಗಳನ್ನು ಜಾರಿಗೊಳಿಸುವ ವಿಧಾನಗಳನ್ನು ಪ್ರತಿ ವ್ಯಕ್ತಿಗೂ ಒದಗಿಸುವ ಬಗ್ಗೆ ಭರವಸೆ ನೀಡುತ್ತದೆ. ಸಾಂವಿಧಾನಿಕ ನೈತಿಕತೆಯು, ವಿವಿಧ ವರ್ಗ, ಜನಾಂಗ, ಧರ್ಮ, ಸಂಸ್ಕೃತಿ, ಜಾತಿ ಮತ್ತು ವಿಭಾಗಗಳಿಗೆ ಸೇರಿದ ವೈವಿಧ್ಯಮಯ ಹಿನ್ನೆಲೆಯ ಜನರ ನಡುವೆ ಸಹೋದರತ್ವದ ಭಾವನೆಯನ್ನು ಉಂಟುಮಾಡುವ ಮೂಲಕ ಭಾರತೀಯ ಪ್ರಜಾಪ್ರಭುತ್ವವನ್ನು ಸಮೃದ್ಧಗೊಳಿಸುವ ದಿಸೆಯಲ್ಲಿ ಒಲವು ತೋರುತ್ತದೆ. ಆದಾಗ್ಯೂ, ಸಂವಿಧಾನಾತ್ಮಕ ನೈತಿಕತೆಯನ್ನು ಸಂವಿಧಾನದ ಪ್ರಸ್ತಾವನೆಯು ಗುರುತಿಸದೇಹೋದರೆ, ಅದನ್ನು ಪೋಷಿಸಲು ಸಾಧ್ಯವಿಲ್ಲ, ಪ್ರಸ್ತಾವನೆಯಲ್ಲಿ ಪ್ರತಿಯೊಬ್ಬರಿಗೆ ಘನತೆಯನ್ನು ಕೊಡಮಾಡಿ ಅದನ್ನು ನಿರ್ವಹಿಸುವ ಭ್ರಾತೃತ್ವದ ಭಾವ ಅಸ್ತಿತ್ವದಲ್ಲಿದೆ. "ಅನಿಹೈಲೇಷನ್ ಆಫ್ ಕ್ಯಾಸ್ಟ್" (ಅದನ್ನು ನಂತರ ಪುಸ್ತಕ ರೂಪದಲ್ಲಿ ಪ್ರಕಟಿಸಲಾಯಿತು) ಹೆಸರಿನ ತಮ್ಮ ಪ್ರಸಿದ್ಧ, ಆದರೆ, ಎಲ್ಲೂ ನೀಡದ ಭಾಷಣದಲ್ಲಿ, ಡಾ. ಅಂಬೇಡ್ಕರ್ ಅವರು "ಸಹೋದರತ್ವವನ್ನು" ಸಂಯೋಜಿತವಾದ ಸಂವಹನದ ಅನುಭವ ನೀಡುವ ಸಮುದಾಯ ಜೀವನದ ಪ್ರಾಥಮಿಕ ಅಗತ್ಯ" ಮತ್ತು "ಜೊತೆಗಿನ

ವ್ಯಕ್ತಿಗಳೆಡೆಗೆ ಗೌರವ ಮತ್ತು ಆಸ್ಥೆ ತೂರುವ ಮೂಲಭೂತವಾದ ಒಂದು ವರ್ತನೆ" ಎಂದು ವ್ಯಾಖ್ಯಾನಿಸಿದರು. ಅವರು ಹೀಗೆ ಗಮನಿಸಿದರು:

> ಮಾದರಿ ಸಮಾಜವೊಂದು ಚಲನಶೀಲವಾಗಿರಬೇಕು, ಮತ್ತು ಸಮಾಜದ ಒಂದು ಭಾಗದಲ್ಲಿ ನಡೆಯುತ್ತಿರುವ ಬದಲಾವಣೆಯನ್ನು ಇನ್ನಿತರ ಪ್ರದೇಶಗಳಿಗೆ ತಿಳಿಯಪಡಿಸುವ ಮಾಧ್ಯಮಗಳು ಎಲ್ಲೆಡೆ ಇರಬೇಕು. ಮಾದರಿ ಸಮಾಜವೊಂದರಲ್ಲಿ, ಹಲವಾರು ಹಿತಾಸಕ್ತಿಗಳ ಪ್ರಜ್ಞಾಪೂರ್ವಕ ಸಂವಹನ ಮತ್ತು ಹಂಚುವಿಕೆ ನಡೆಯುತ್ತಿರಬೇಕು. ಬೇರೆ ಬೇರೆ ಜತೆಗಾರಿಕೆಯ ವಿಧಾನಗಳನ್ನು ಸಂಪರ್ಕಿಸಲು ಬಗೆಬಗೆಯ ಮುಕ್ತವಾದ ಅವಕಾಶಗಳಿರಬೇಕು. ಬೇರೆ ಪದಗಳಲ್ಲಿ ಹೇಳುವುದಾದರೆ, ಸಾಮಾಜದಲ್ಲಿ ಆಂತರಿಕ ಕೊಡುಕೊಳ್ಳುವಿಕೆಯಿರಬೇಕು. ಇದುವೇ, ಪ್ರಜಾಪ್ರಭುತ್ವದ ಮತ್ತೊಂದು ಹೆಸರಾಗಿರುವ ಭ್ರಾತೃತ್ವ.

ಸಂವಿಧಾನ ಸಭೆಯಲ್ಲಿ ಅವರು ಮಾಡಿದ ಕೊನೆಯ ಭಾಷಣದಲ್ಲಿ. ಸೋದರತ್ವವನ್ನು "ಎಲ್ಲಾ ಭಾರತೀಯರ ನಡುವಿನ ಸಾಮಾನ್ಯ ಭ್ರಾತೃತ್ವದ ಒಂದು ಭಾವನೆ" ಎಂದು ವ್ಯಾಖ್ಯಾನಿಸಿದರು. ಸಾಮಾಜಿಕ ಮತ್ತು ಆರ್ಥಿಕ ನೆಲೆಗಟ್ಟಿನಲ್ಲಿ, ಭಾರತೀಯ ಸಮಾಜವನ್ನು ಶ್ರೇಣೀಕೃತ ಅಸಮಾನತೆಯ ಆಧಾರದಲ್ಲಿ ವರ್ಗೀಕರಿಸಲಾಗಿತ್ತಾದ್ದರಿಂದ, ಡಾ. ಅಂಬೇಡ್ಕರ್ ಅವರು ಸ್ಪಷ್ಟವಾದ ಮಾತುಗಳಲ್ಲಿ ಎಚ್ಚರಿಸಿದ್ದರು:

> "ಭ್ರಾತೃತ್ವವಿಲ್ಲದೆ, ಸ್ವಾತಂತ್ರ್ಯ ಮತ್ತು ಸಮಾನತೆಗಳು, ಸ್ವಾಭಾವಿಕ ಅಭ್ಯಾಸಗಳಾಗಲು ಸಾಧ್ಯವಾಗುವುದಿಲ್ಲ. ಅವುಗಳನ್ನು ಜಾರಿಗೊಳಿಸಲು, ಅಧಿಕಾರಿಯೊಬ್ಬರ ಅಗತ್ಯವಿರುತ್ತದೆ ಸೋದರತ್ವವಿಲ್ಲದೇ ಸಮಾನತೆ ಮತ್ತು ಸ್ವಾತಂತ್ರ್ಯಗಳು ಗೋಡೆಯ ಮೇಲಿನ ಬಣ್ಣದ ಪದರಗಳಷ್ಟೂ ಆಳವಾಗಿ ಬೇರೂರುವುದಿಲ್ಲ[295]

---

[295] Constituent Assembly Debates (25 November 1949).

144. ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವವನ್ನು ಆಧರಿಸಿರುವ ಸಂವಿಧಾನದ ವಿಶಾಲ ಅರ್ಥದ ಮೌಲ್ಯಗಳನ್ನು ಎಲ್ಲಾ ನಾಗರಿಕರು ಅರ್ಥಮಾಡಿಕೊಳ್ಳಬೇಕೆಂದು ಸಾಂವಿಧಾನಿಕ ನೈತಿಕತೆ ಬಯಸುತ್ತದೆ. ಸಾಂವಿಧಾನಿಕ ನೈತಿಕತೆಯು, ಸಂವಿಧಾನ ಸಮಾಜದಲ್ಲಿ ಸಾಧಿಸಲು ಉದ್ದೇಶಿಸಿರುವ ಪರಿವರ್ತನೆಯನ್ನು ತರುವು ದಿಸೆಯಲ್ಲಿ ಮಾರ್ಗದರ್ಶನ ಮಾಡುವ ಶಕ್ತಿಯಾಗಿದೆ. ಇಂತಹ ಅರಿವು, ಒಂದು ಅವಶ್ಯಕವಾದ ಪರಿಣಾಮವನ್ನು ಒಳಗೊಂಡಿರುತ್ತದೆ: ಒಂದು ಸಮಾಜವು ಪ್ರಬುದ್ಧವಾಗುವ ಮತ್ತು ಸಂವಿಧಾನಾತ್ಮಕ ನೈತಿಕತೆಯನ್ನು ಮೈಗೂಡಿಸಿಕೊಳ್ಳುವ ಪ್ರಕ್ರಿಯೆಯು ಕ್ರಮೇಣವಾಗಿ ನಡೆಯುವಂತಹುದು, ಮತ್ತು ಬಹುಶಃ ಅದಕ್ಕೆ ಕೊನೆಯೇ ಇಲ್ಲದಿರಬಹುದು. ಆದ್ದರಿಂದ, ಸಂವಿಧಾನಾತ್ಮಕ ನ್ಯಾಯಾಲಯಗಳಿಗೆ ಹೊರಗಿನ ಸಹಾಯಕರಂತೆ ನಡೆದುಕೊಳ್ಳುವ ಮತ್ತು ಸರ್ಕಾರಿ ಅಧಿಕಾರದ ಮಿತಿಮೀರಿದ ನಡವಳಿಕೆ ಮತ್ತು ಪ್ರಜಾತಾಂತ್ರಿಕ ಅಧಿಕಾರ ಕೇಂದ್ರೀಕರಣದ ವಿರುದ್ಧ ಜಾಗರೂಕತೆಯು ರಕ್ಷಣೆ ಒದಗಿಸುವ ಕರ್ತವ್ಯವನ್ನು ವಹಿಸಿಕೊಡಲಾಗಿದೆ. ಅತ್ಯುನ್ನತ ಸಾಂವಿಧಾನಿಕ ನ್ಯಾಯಸಭೆಯಾಗಿರುವ, ಈ ನ್ಯಾಯಾಲಯವು ಸಾಂವಿಧಾನಿಕ ಮಾನವ ಘನತೆ ಮತ್ತು ಸ್ವಾತಂತ್ರ್ಯಗಳು ಬೆಳೆಯುವುದಕ್ಕೆ ಸಹಾಯವಾಗಬಲ್ಲ ಪರಿಸ್ಥಿತಿಗಳನ್ನು ನಿರ್ಮಿಸಿ ಆ ಮೂಲಕ ನೈತಿಕತೆಯ ಸಂರಕ್ಷಣೆಯ ಮೇಲ್ವಿಚಾರಣೆ ನಡೆಸುವ ಜವಾಬ್ದಾರಿಯನ್ನು ಹೊಂದಿದೆ. ಜನಪ್ರಿಯವಾದ ಸಾರ್ವಜನಿಕ ನೈತಿಕತೆಯು ಈ ನ್ಯಾಯಾಲಯದ ತೀರ್ಪಿನ ಮೇಲೆ ಪರಿಣಾಮ ಬೀರಲಾರದು. ಲಾರ್ಡ್ ನ್ಯೂಬರ್ಗರ್ (ಯುಕೆ ಸರ್ವೋಚ್ಚ ನ್ಯಾಯಾಲಯ) ಸೂಕ್ತವಾಗಿ ಗಮನಿಸಿದ್ದಾರೆ:

> ಸಂಸತ್ತಿಗೆ ಪ್ರಜಾತಾಂತ್ರಿಕ ನ್ಯಾಯಬದ್ಧತೆಯಿದೆ ಎಂಬುದನ್ನು ನಾವು ಯಾವಾಗಲೂ ನೆನಪಿನಲ್ಲಿಡಬೇಕು -ಆದರೆ ಅದಕ್ಕೆ ಅದರದೇ ಆದ ಅನುಕೂಲ ಮತ್ತು ಅನಾನುಕೂಲತೆಗಳೇರೆಡೂ ಇವೆ. ಮತ್ತೊಮ್ಮೆ ಚುನಾಯಿತರಾಗ ಬೇಕೆಂಬ್ದ ಹಂಬಲದ ಹಿನ್ನೆಲೆಯಲ್ಲಿ, ಕೆಲಮೊಮ್ಮೆ ಕಠಿಣವಾದ, ಆದರೆ ಸರಿಯಾದ ನಿರ್ಧಾರ ತೆಗೆದುಕೊಳ್ಳುವುದು ಕಷ್ಟಸಾಧ್ಯವಾಗುತ್ತದೆ. ಕೆಲವೊಮ್ಮೆ, ಅಲ್ಪ ಕಾಲೀನ ಜನಪ್ರಿಯತೆಯ ಬಗೆಗೆ

ತಲೆಕೆಡಿಸಿಕೊಳ್ಳಬೇಕಾದ ಅಗತ್ಯವಿಲ್ಲದಿರುವ ಜನರ ಸ್ವತಂತ್ರ ಮಂಡಳಿಯಿರುವುದು ಅನುಕೂಲಕರವಾಗಬಹುದು"[296]

ಸಾಂವಿಧಾನಿಕ ವ್ಯವಸ್ಥೆಯ ಬೆಳವಣಿಗೆಗೆ ಸಂವಿಧಾನಾತ್ಮಕ ನ್ಯಾಯಾಲಯಗಳ ಸಾಂಸ್ಥಿಕ ನಾಯಕತ್ವ ಮಾತ್ರವಲ್ಲದೇ, ನಾಗರಿಕರ ಪ್ರತಿಕ್ರಿಯಾತ್ಮಕ ಭಾಗವಹಿಸುವಿಕೆ ಸಹ ಅಗತ್ಯ. ಸಂವಿಧಾನಾತ್ಮಕ ನೈತಿಕತೆಯು ಈ ಪ್ರತಿಕ್ರಿಯಾತ್ಮಕ ಭಾಗವಹಿಸುವಿಕೆಯ ಹುಡುಕಾಟ[297]. ಸರ್ವೋಚ್ಚ ನ್ಯಾಯಾಲಯ ಸಂವಿಧಾನಾತ್ಮಕ ಮೌಲ್ಯಗಳನ್ನು ಎತ್ತಿಹಿಡಿಯುವ ಸಂಸ್ಥೆ ಎಂಬ ನಾಯಕತ್ವವನ್ನು ನಿರಾಕರಿಸುವ ಪರಿಸ್ಥಿತಿಯಲ್ಲಿಲ್ಲ. ಅದರ ಅಧಿಕಾರಕ್ಕೆ ಆಗುವ ಯಾವುದೇ ಬಗೆಯ ನಷ್ಟ ಪ್ರಜಾಪ್ರಭುತ್ವವನ್ನು ಅಪಾಯಕ್ಕೀಡು ಮಾಡುತ್ತದೆ.

145. ನೈತಿಕತೆಯ ಪ್ರಶ್ನೆಯು ಸಮಲೈಂಗಿಕತೆ ಮತ್ತು ಎಲ್.ಜಿ.ಬಿ.ಟಿ ವ್ಯಕ್ತಿಗಳ ಹಕ್ಕುಗಳಿಗೆ ಸಂಬಂಧಿಸಿದ ವಿಚಾರಗಳ ಕೇಂದ್ರಬಿಂದುವಾಗಿದೆ. ಸಮಲೈಂಗಿಕತೆಯ ಎದುರಾಳಿಗಳು - ವಿಚಾರಣೆಯ ಸಂದರ್ಭದಲ್ಲಿ ಟೀಕೆಗಳನ್ನು ಪ್ರಾರಂಭಿಸಿದ ಮಧ್ಯಸ್ಥಿಕೆದಾರರನ್ನೂ ಒಳಗೊಂಡಂತೆ - ಸಮಲೈಂಗಿಕತೆ ಜನಪ್ರಿಯ ಸಂಸ್ಕೃತಿಗೆ ವಿರುದ್ಧವಾಗಿರುವುದರಿಂದ ಅದು ಭಾರತೀಯ ಸಮಾಜದಲ್ಲಿ ಒಪ್ಪತಕ್ಕದ್ದಲ್ಲ ಎಂದು ಹೇಳಿಕೊಳ್ಳುತ್ತಾರೆ. ನಾಝ್ ಪ್ರತಿಷ್ಠಾನ ಪ್ರಕರಣದಲ್ಲಿ, ಭಾರತೀಯ ದಂಡ ಸಂಹಿತೆಯ 377ನೇ ಪರಿಚ್ಛೇದದ ಸಾಂವಿಧಾನಿಕತೆಯನ್ನು ನಿರ್ಧರಿಸುವಾಗ, ದೆಹಲಿ ಉಚ್ಚನ್ಯಾಯಾಲಯ ಹೀಗೆಂದಿತು:

" ಹೀಗಾಗಿ, ಜನಪ್ರಿಯ ನೈತಿಕತೆ ಅಥವಾ ಕೆಲ ಕೃತ್ಯಗಳೆಡೆಗಿನ ಸಾರ್ವಜನಿಕರ ವಿರೋಧವು, 21ನೇ ಕಲಮಿನಡಿಯ ಮೂಲಭೂತ ಹಕ್ಕುಗಳನ್ನು ನಿರ್ಬಂಧಿಸುವುದಕ್ಕೆ ಸೂಕ್ತವಾದ ಸಮರ್ಥನೆಯಾಗುವುದಿಲ್ಲ. ಸಾಂವಿಧಾನಿಕ ಮೌಲ್ಯಗಳ ಆಧಾರದಲ್ಲಿ ರೂಪಿಸಲಾಗಿರುವ ಸಾಂವಿಧಾನಿಕ ನೈತಿಕತೆಯಿಂದ ಭಿನ್ನವಾಗಿರುವ ಜನಪ್ರಿಯ ನೈತಿಕತೆ, ತಪ್ಪು ಮತ್ತು ಸರಿಗಳ ಕುರಿತಾದ, ವ್ಯಕ್ತಿ ಯಿಂದ ವ್ಯಕ್ತಿಗೆ ಭಿನ್ನವಾಗಿರುವ ಮತ್ತು ಬದಲಾಗುತ್ತಿರುವ ಪರಿಕಲ್ಪನೆಗಳನ್ನು ಅವಲಂಬಿಸಿದೆ. ತುರ್ತಾದ ಸರ್ಕಾರಿ

[296] Lord Neuberger, "UK Supreme Court decisions on private and commercial law: The role of public policy and public interest", Centre for Commercial Law Studies Conference (2015).

[297] Marc Galanter, "Fifty Years on", in BN Kirpal et al, Supreme but Not Infallible: Essays in Honour of the Supreme Court of India, Oxford University Press (2000), at page 57.

> ಹಿತಾಸಕ್ತಿಯ ಪರೀಕ್ಷೆಯಲ್ಲಿ ಸಫಲವಾಗಬಲ್ಲ ನೈತಿಕತೆ ಯಾವುದಾದರೂ ಇದ್ದರೆ, ಅದು "ಸಾಂವಿಧಾನಿಕ ನೈತಿಕತೆ" ಯಾಗಿರುತ್ತದೆಯೇ ಹೊರತು ಸಾರ್ವಜನಿಕ ನೈಕ್ತಿಕತೆಯಲ್ಲ… ನಾವಿರುವ ಪರಿಸ್ಥಿತಿಯಲ್ಲಿ, ಸಾಂವಿಧಾನಿಕ ನೈತಿಕತೆಯು, ಸಾರ್ವಜನಿಕ ನೈತಿಕತೆಯೊಂದಿಗಿನ, ಅದು ಬಹುಸಂಖ್ಯಾತರ ಅಭಿಪ್ರಾಯವಾಗಿದ್ದರೂ ಸರಿ, ವಾಗ್ವಾದದಲ್ಲಿ ಮೇಲುಗೈ ಸಾಧಿಸಲೇ ಬೇಕು"

ಸಾಂವಿಧಾನಿಕ ನೈತಿಕತೆಯ ಪ್ರತಿಪಾದನೆಯನ್ನು ಡಾ. ಅಂಬೇಡ್ಕರ್ ರವರು ರೂಪಿಸಿರುವ ಸಾಮಾಜಿಕ ಸುಧಾರಣೆ ಮತ್ತು ಸಂವಿಧಾನಾತ್ಮಕ ಪರಿವರ್ತನೆಯ ವಿಸ್ತರಣೆಯೆಂದು ಮನಗಾಣಬೇಕು. ಸಾಮಾಜಿಕ ಪರಿವರ್ತನೆಯ ಪ್ರಕ್ರಿಯೆಯಲ್ಲಿ ವೈಯಕ್ತಿಕ ಹಕ್ಕುಗಳ ಪ್ರಾಮುಖ್ಯತೆಯನ್ನು ಎತ್ತಿ ತೋರಿಸುತ್ತಾ ಅವರು ಹೀಗೆ ಗಮನಿಸುತ್ತಾರೆ:

> ವ್ಯಕ್ತಿಯೊಬ್ಬರು, ತನ್ನ ಸ್ವಂತ ಅಭಿಪ್ರಾಯ ಮತ್ತು ನಂಬಿಕೆಗಳು ತನ್ನ ಸ್ವಾತಂತ್ರ್ಯ ಮತ್ತು ಹಿತಾಸಕ್ತಿಯನ್ನು, ಗುಂಪಿನ ಮಾನದಂಡ, ಗುಂಪಿನ ಅಧಿಕಾರ, ಮತ್ತು ಗುಂಪಿನ ಹಿತಾಸಕ್ತಿಗಳನ್ನೂ ಮೀರಿ, ಅವುಗಳ ವಿರುದ್ಧ ಹೋಗಿ ಪ್ರತಿಪಾದಿಸುವುದು, ಎಲ್ಲಾ ಬಗೆಯ ಸುಧಾರಣೆಯ ಆರಂಭ. ಆದರೆ ಸುಧಾರಣೆ ಮುಂದುವರಿಯುತ್ತದೆಯೇ ಎಂಬುದು, ಅಂತಹ ವೈಯಕ್ತಿಕ ಸಮರ್ಥನೆಗೆ ಗುಂಪು ಯಾವ ರೀತಿಯ ಅವಕಾಶ ನೀಡುತ್ತದೆ ಎಂಬುದನ್ನು ಅವಲಂಬಿಸಿರುತ್ತದೆ.

ಸಂವಿಧಾನವನ್ನು ಜಾರಿಗೊಳಿಸಿದ ನಂತರ, ಪ್ರತಿಯೊಂದು ಹಕ್ಕನ್ನು ಸಂವಿಧಾನಾದ ತತ್ವಗಳ ಮೂಲಕ, ಅದರ ಪಠ್ಯ ಮತ್ತು ಸಾರಗಳ ದೇಖರೇಖಿಯಲ್ಲೀ ಪ್ರತಿಪಾದಿಸಬೇಕಿದೆ. ಸಂವಿಧಾನವು ಪ್ರತೀ ವ್ಯಕ್ತಿಗೆ ಘನತೆಯ ಜೀವನವನ್ನು ನಡೆಸುವ ಹಕ್ಕನ್ನು ನೀಡುತ್ತದೆ. ಆದು ಸಮಾಜದಲ್ಲಿ ತಾರತಮ್ಯವನ್ನು ನಿಷೇಧಿಸುತ್ತದೆ. ಇದೇ ಕಾರಣಕ್ಕಾಗಿ ಸಂವಿಧಾನಾತ್ಮಕ ನೈತಿಕತೆಯು, ಈ ನ್ಯಾಯಾಲಯವು ಘೋಷಣೆಯೊಂದನ್ನು ಮಾಡಬೇಕೆಂದು

ಬಯಸುತ್ತಿದೆ, - ಎಲ್.ಜಿ.ಬಿ.ಟಿ ವ್ಯಕ್ತಿಗಳು ಭಾರತದ ಸಮಾನ ನಾಗರಿಕರು, ಅವರ ವಿರುದ್ಧ ತಾರತಮ್ಯ ಎಸಗಬಾರದು ಮತ್ತು ಅವರು ತಮ್ಮ ಖಾಸಗೀ ಆಯ್ಕೆಗಳ ಮೂಲಕ ತಮ್ಮನ್ನು ತಾವು ವ್ಯಕ್ತಪಡಿಸುವ ಹಕ್ಕನ್ನು ಹೊಂದಿದ್ದಾರೆ ಎಂದು ನಾವು ಘೋಷಿಸುತ್ತಿದ್ದೇವೆ. ಸಾಂವಿಧಾನಿಕ ನೈತಿಕತೆಯನ್ನು ಎತ್ತಿಹಿಡಿಯುತಾ, ಎಲ್.ಜಿ.ಬಿ.ಟಿ ವ್ಯಕ್ತಿಗಳ ಹಕ್ಕುಗಳ ರಕ್ಷಣೆಯು ಅಲ್ಪಸಂಖ್ಯಾತ ಸಮುದಾಯವೊಂದಕ್ಕೆ ಸಾಂವಿಧಾನಿಕ ವ್ಯವಸ್ಥೆಯಲ್ಲಿ ಸಿಗಬೇಕಾದ ಸ್ಥಾನಮಾನವನ್ನು ಖಾತ್ರಿಪಡಿಸುವುದನ್ನಷ್ಟೇ ಅಲ್ಲದೇ, ನಾವು ವಾಸಿಸಬಯಸುವ ದೇಶದ ಬಗೆಗಿನ ದೃಷ್ಟಿಕೋನ ಮತ್ತು ಬಹುಸಂಖ್ಯಾತರ ಪಾಲಿಗೆ ಅದು ಎಷ್ಟು ಮಹತ್ವದ್ದಾಗಿದೆ ಎಂಬುದರ ಬಗ್ಗೆ ಕೂಡಾ ಮಾತನಾಡುತ್ತದೆ ಎಂಬುದನ್ನು ನಾವು ದೃಢೀಕರಿಸುತ್ತೇವೆ.

ಪುಟ್ಟಸ್ವಾಮಿ ಪ್ರಕರಣದಲ್ಲಿ ಈ ನ್ಯಾಯಾಲಯದ ಒಂಭತ್ತು ಮಂದಿ ನ್ಯಾಯಾಧೀಶರ ಪೀಠವು ಲೈಂಗಿಕ ನಿಲುವನ್ನು ಆಧರಿಸಿ ವ್ಯಕ್ತಿಯ ವಿರುದ್ಧ ತಾರತಮ್ಯ ಎಸಗುವುದು ವ್ಯಕ್ತಿಯ ಘನತೆ ಮತ್ತು ಸ್ವಯಂ-ಮೌಲ್ಯಗಳಿಗೆ ಮೇಲೆ ಆಳವಾದ ಘಾಸಿಮಾಡುತ್ತದೆ ಎಂದು ಸ್ಪಷ್ಟವಾದ ಪದಗಳಲ್ಲಿ ನುಡಿದೀದ್ದರು. ಈ ಪೀಠವು ಹೀಗೆ ಹೇಲಿದೆ:

> "ಕೆಲ ಹಕ್ಕುಗಳನ್ನು ಖಾತರೀ ಪಡಿಸಲಾಗಿರುವ ಮೂಲಭೂತ ಹಕ್ಕುಗಳ ಸ್ಥಾನಕ್ಕೆ ಏರಿಸುವುದರ ಹಿಂದೆ ಅವುಗಳ ಚಲಾವಣೆಯನ್ನು ಬಹುಸಂಖ್ಯಾತರ, ಶಾಸಕಾಂಗೀಯ ಅಥವಾ ಜನಪ್ರಿಯ ಅಸಡ್ಡೆಯಿಂದ ರಕ್ಷಿಸುವ ಉದ್ದೇಶವಿರುತ್ತದೆ, ಮತ್ತು ಸಾಂವಿಧಾನಿಕ ಹಕ್ಕುಗಳು, ತಮ್ಮ ಚಲಾವಣೆಗೆ ಬಹುಸಂಖ್ಯಾತ ಅಭಿಪ್ರಾಯದ ಕೃಪಾದೃಷ್ಟಿಯಿದೆಯೇ ಎಂಬುದನ್ನು ಅವಲಂಬಿಸಿರುವುದಿಲ್ಲ ಎಂದು ಕೂಡ ಗಮನಿಸಲಾಯಿತು. ಬಹುಸಂಖ್ಯಾತ ಅಭಿಪ್ರಾಯದ ಹಿನ್ನೆಲೆಯಲ್ಲಿ, ಜನಪ್ರಿಯ ಒಪ್ಪಿಗೆಯ ಪರೀಕ್ಷೆಯು, ಸಂವಿಧಾನಿಕ ರಕ್ಷಣೆಯ ಪಾವಿತ್ರ್ಯ ಒದಗಿಸಲಾಗಿರುವ ಹಕ್ಕುಗಳನ್ನು ಕಡೆಗಣಿಸುವುದಕ್ಕೆ ಸಮಂಜಸವಾದ ಆಧಾರವಗಿರಲಿಲ್ಲ. ಗೌಪ್ಯ ಮತ್ತು ಪ್ರತ್ಯೇಕಿಸಲ್ಪಟ್ಟಿರುವ ಅಲ್ಪಸಂಖ್ಯಾತರು, ಅವರ ಅಭಿಪ್ರಾಯಗಳು, ನಂಬಿಕೆಗಳು ಮತ್ತು ಬದುಕಿನ ವಿಧಾನ "ಮುಖ್ಯವಾಹಿನಿ"ಯೊಂದಿಗೆ ಹೊಂದಾಣಿಕೆಯಾಗುವುದಿಲ್ಲ ಎಂಬ ಸಣ್ಣ ಕಾರಣಕ್ಕೆ ತಾರತಮ್ಯದ ಘೋರ ಅಪಾಯವನ್ನು ಎದುರಿಸುತ್ತಾರೆ, ಆದರೆ

ಕಾನೂನಿನ ಆಳ್ವಿಕೆಯ ನೆಲೆಯಲಿ ಸ್ಥಾಪಿಸಲಾಗಿರುವ ಪ್ರಜಾತಾಂತ್ರಿಕ ಸಂವಿಧಾನದಲ್ಲಿ, ಅವರ ಹಕ್ಕುಗಳು ಇತರ ಪ್ರಜೆಗಳಿಗೆ ಕೊಡಮಾಡಲಾಗಿರುವ ಹಕ್ಕುಗಳಷ್ಟೇ ಪವಿತ್ರವಾದುವು.

ಸಂವಿಧಾನಾತ್ಮಕ ನೈತಿಕತೆಯು ಎಲ್.ಜಿ.ಬಿ.ಟಿ ವ್ಯಕ್ತಿಗಳಿಗಿರುವ ಸಂಪೂರ್ಣ ಮತ್ತು ಸಮಾನ ನಾಗರೀಕತೆಯ ಅರ್ಹತೆಯನ್ನು ಕಸಿದುಕೊಳ್ಳುವ ಯಾವುದೇ ಕಾನೂನಿನ ಮೇಲೆ ಪರಿಣಾಮ ಬೀರುತ್ತದೆ. ಸಂವಿಧಾನವು ಜಾರಿಗೆ ಬಂದ ನಂತರ, ಯಾವುದೇ ಕಾನೂನು ಸಾಂವಿಧಾನಿಕ ನೈತಿಕತೆಗೆ ವಿರುದ್ಧವಾಗಿರುವಂತಿಲ್ಲ. ಒಪ್ಪಿಗೆಯಿರುವ ವಯಸ್ಕರ ನಡುವಿನ ಲೈಂಗಿಕ ಅಭಿವ್ಯಕ್ತಿಯನ್ನು ಸಮಾಜ ನಿರ್ದೇಶಿಸುವಂತಿಲ್ಲ. ಅದು ಖಾಸಗೀ ವ್ಯವಹಾರವಾಗಿದೆ. ಸಾಂವಿಧಾನಿಕ ನೈತಿಕತೆ ಯಾವುದೇ ಸಂಸ್ಕೃತಿ ಅಥವಾ ಸಂಪ್ರದಾಯವನ್ನು ಪಕ್ಕಕ್ಕೆ ಸರಿಸುತ್ತದೆ. ನ್ಯಾಯಸಮ್ಮತಗೊಳಿಸುವಿಕೆ ಮತ್ತು ಅದನ್ನು ಮೀರಿದ ವಿಚಾರಗಳಲ್ಲಿ ಹಕ್ಕುಗಳ ವ್ಯಾಖ್ಯಾನವನ್ನು ಸಂವಿಧಾನದ ನಿಯಮಗಳ ನೆಲೆಯಲ್ಲಿ ನಿರ್ಧರಿಸಬೇಕು.

146. ಸಾಂಸ್ಕೃತಿಕ ನೈತಿಕತೆಯನ್ನು ಆಧರಿಸಿರುವ ಇತರರಿಗೆ ಅನುಗುಣವಾಗಿರಬೇಕೆನ್ನುವ ಬೆದರಿಕೆಗಳ ಅಡಿಯಲ್ಲಿ ಜೀವಿಸುತ್ತಿರುವ ಎಲ್.ಜಿ.ಬಿ.ಟಿ ವ್ಯಕ್ತಿಗಳ ಮೂಲಭೂತ ಮಾನವ ಅಸ್ತಿತ್ವವನ್ನು ನಿರಾಕರಿಸಲಾಗಿದೆ. ಅವರು ರೂಢಿಗತ ಪರಿಕಲ್ಪನೆ ಮತ್ತು ಪೂರ್ವಾಗ್ರಹಗಳಿಗೆ ಒಳಪಟ್ಟಿದ್ದಾರೆ. ಸಾಂವಿಧಾನಿಕ ನೈತಿಕತೆಯು ಈ ನ್ಯಾಯಾಲಯವು ಅವರಿಗೆ ಸಿಗಬೇಕಾದ ಸಮಾನ ನಾಗರಿಕ ಭಾಗವಹಿಸುವಿಕೆ ಮತ್ತು ಜೀವನವನ್ನು ಸಮಾನವಾಗಿ ಅನುಭವಿಸುವ ಹಕ್ಕನ್ನು ನಿರ್ಲಕ್ಷಿಸಬಾರದು ಎಂದು ಬಯಸುತ್ತದೆ. ಸಾಂವಿಧಾನಿಕ ನೈತಿಕತೆಯ ಪ್ರಕಾರ ಈ ನ್ಯಾಯಾಲಯವು, ಸಾಂವಿಧಾನಿಕವಾಗಿ ಕೊಡಮಾಡಲಾಗಿರುವ ಹಕ್ಕುಗಳನ್ನು, ಬಹುಸಂಖ್ಯಾತರ ನಂಬುಗೆ ಏನೇ ಆಗಿದ್ದರು, ರಕ್ಷಿಸುವ ಜವಾಬ್ದಾರಿಯನ್ನು ಹೊಂದಿರುವ, ಅಪರ-ಬಹುಸಂಖ್ಯಾತ ಸಂಸ್ಥೆಯಾಗಿ ಕಾರ್ಯನಿರ್ವಹಿಸಬೇಕಾದ ಅಗತ್ಯವಿದೆ, ಸಾಂವಿಧಾನಿಕ ನೈತಿಕತೆಯು ನಾಗರಿಕರಲ್ಲಿ ಅಭ್ಯಾಸದಂತೆ ಮೈಗೂಡಬೇಕು. ಎಲ್.ಜಿ.ಬಿ.ಟಿ ವ್ಯಕ್ತಿಗಳ ಘನತೆಯನ್ನು ಗೌರವಿಸುವ ಮೂಲಕ, ಈ ನ್ಯಾಯಾಲಯವು ನಮ್ಮ ಸಂವಿಧಾನದ ಮೂಲಭೂತ ಭರವಸೆಯನ್ನು ಈಡೇರಿಸುತ್ತಿದೆಯಷ್ಟೇ.

## M. ಸಾರಾಂಶ: ಪರಿವರ್ತನಾತ್ಮಕ ಸಾಂವಿಧಾನಿಕತೆ

147. ಈ ಪ್ರಕರಣದಲ್ಲಿ ಸಮಾನ ಲಿಂಗದ ವಯಸ್ಕರ ನಡುವಿನ ಒಪ್ಪಿಗೆಯ ಲೈಂಗಿಕ ನಡವಳಿಕೆಯನ್ನು ದಂಡಿಸುವ ದಂಡ ಸಂಹಿತೆಯ 377ನೇ ಪರಿಚ್ಛೇದವು ಸಂವಿಧಾನಾತ್ಮಕ ಮಾನದಂಡಗಳನ್ನು ಈಡೇರಿಸುತ್ತದೆಯೇ ಎಂಬ ತೀರ್ಮಾನವನ್ನು ಅಪೇಕ್ಷಿಸಲಾಗಿದೆ. ನಾವುಗಳು, ಅದು ಅಂತಹ ಲೈಂಗಿಕ ನಡವಳಿಕೆಯನ್ನು ದಂಡನೆಗೊಳಪಡಿಸುವ ಶಾಸನಬದ್ಧ ನಿಬಂಧನೆಯು ಸ್ವಾತಂತ್ರ್ಯ ಮತ್ತು ಸಮಾನತೆಯ ಸಾಂವಿಧಾನಿಕ ಖಾತರಿಗಳನ್ನು ಉಲ್ಲಂಘಿಸುತ್ತದೆ ಎಂದು ಅಭಿಪ್ರಾಯಪಟ್ಟು ಘೋಷಿಸುತ್ತೇವೆ. ಆದು ಎಲ್.ಜಿ.ಬಿ.ಟಿ ಸಮುದಾಯದ ಸದಸ್ಯರ ಪರಿಪೂರ್ಣವಾದ ಜೀವನವನ್ನು ನಡೆಸುವ ಸಂವಿಧಾನಾತ್ಮಕ ಹಕ್ಕನ್ನು ಕಸಿದುಕೊಳ್ಳುತ್ತದೆ. ಒಪ್ಪಿಗೆಯ ಲೈಂಗಿಕ ವರ್ತನೆಯಲ್ಲಿ ತೊಡಗೂವ ಒಂದೇ ಲಿಂಗದ ವಯಸ್ಕರಿಗೆ ಸದರಿ ಪರಿಚ್ಛೇದವನ್ನು ಅನ್ವಯಿಸುವ ಮೂಲಕ, ಬದುಕುವ ಮತ್ತು ಕಾನೂನಿನ ಸಮಾನ ರಕ್ಷಣೆಯ ಹಕ್ಕು ಎಂಬ ಸಾಂವಿಧಾನಿಕ ಖಾತರಿಯನ್ನು ಉಲ್ಲಂಘಿಸಿದಂತಾಗುತ್ತದೆ.

148. ಲೈಂಗಿಕ ನಿಲುವು ಎಲ್.ಜಿ.ಬಿ.ಟಿ ಸಮುದಾಯದ ಸದಸ್ಯರ ಗುರುತಿನ ಅವಿಭಾಜ್ಯ ಅಂಗವಾಗಿದೆ. ಅದು ಅವರ ಘನತೆಗೆ ಅನಿವಾರ್ಯದ, ಸ್ವಾಯತ್ತತೆಯಿಂದ ಬೇರ್ಪಡಿಸಲಾಗದ ಮತ್ತು ಖಾಸಗೀತನದ ಕೇಂದ್ರವಾಗಿರುವ ವಿಚಾರವಾಗಿದೆ. 377ನೇ ಪರಿಚ್ಛೇದವು ಸ್ವಾತಂತ್ರ್ಯದ ರೂಢಮಾದರಿಗಳನ್ನು ಆವರಿಸಿಕೊಂಡು ಮತ್ತು ಮುಖ್ಯವಾಹಿನಿಯ ಸಂಸ್ಕೃತಿಯ ಪರಿತ್ಪಾದನೆಯನ್ನು ಸೆದೆಬಡೆಯುವ ಸಂವಿಧಾನಾತ್ಮಕ ವ್ಯವಸ್ತೆಗೆ ವಿರುದ್ಧವಾಗಿರುವ ನೈತಿಕ ತತ್ವಗಳ ಮೇಲೆ ರೂಪುಗೊಂಡಿದೆ. ನಮ್ಮ ಸಂವಿಧಾನ, ಎಲ್ಲಕ್ಕಿಂತ ಹೆಚ್ಚಾಗಿ, ವೈವಿಧ್ಯತೆಯನ್ನು ಒಪ್ಪಿಕೊಳ್ಳುವ ಬಗೆಗೆನಿನ ಒಂದು ಪ್ರಬಂಧವಾಗಿದೆ. ಅದು ಬಹುಬಗೆಯ ಜೀವನ ವಿಧಾನಗಳಿಗೆ ಸ್ಥಾನ ನೀಡುವ ಒಳಗೊಳ್ಳುವಿಕೆಯ ಸಮಾಜದ ಪರಿಕಲ್ಪನೆಯ ಮೇಲೆ ರಚನೆಗೊಂಡಿದೆ.

149. 377ನೇ ಪರಿಚ್ಛೇದದ ಪ್ರಭಾವವು ಕೆಲವು ಕೃತ್ಯಗಳನ್ನು ಅಪರಾಧೀಕರಿಸುವುದನ್ನು ಮೀರಿ ಬಹುದೂರ ಸಾಗಿದೆ. ಶಾಸನ ಪುಸ್ತಕದಲ್ಲಿ ಈ ನಿಬಂಧನೆಯ ಇರುವಿಕೆಯು, ಲೈಂಗಿಕ ನಿಲುವಿನ ಬಗೆಗಿನ ರೂಢಮಾದರಿಗಳನ್ನು ಬಲಪಡಿಸಿದೆ. ಇದು ಸರ್ಕಾರಕ್ಕೆ ಅಸ್ಮಿತೆಗಳನ್ನು ನಿಗ್ರಹಿಸುವ ಅಧಿಕಾರ ನೀಡಿದೆ.

ಕಿರುಕುಳದ ಭಯ ಸಮಾನ ಲಿಂಗದವರ ನಡುವಿನ ಸಂಬಂಧಗಳನ್ನು ಮುಚ್ಚಿಡುವಂತೆ ಮಾಡಿದೆ. ದಂಡನೆಯ ಕಾಯ್ದೆಯೊಂದು ಸಾಮಾಜಿಕ ಅಸಹನೆಗೆ ಬಲತುಂಬಿದೆ.

150. ಲಿಂಗ ಮತ್ತು ಲಿಂಗಾಧಾರಿತ ಅಲ್ಪಸಂಖ್ಯಾತರ ಪಾಲಿಗೆ ಸಂವಿಧಾನ ಸಮಾನ ನೆಲೆಯಲ್ಲಿ ಅರ್ಥಪೂರ್ಣವೆನಿಸ್ಕೊಳ್ಳಬೇಕಿದ್ದರೆ, ಅವರು ಭಯದಿಂದ ಬದುಕುವಂತಹ ಪರಿಸ್ಥಿತಿ ಇರಬಾರದು. ಸಮಾನತೆ ಮತ್ತು ಕಾನೂನಿನ ಸಮಾನ ರಕ್ಷಣೆಗಾಗಿ ಅದರ ಅನ್ವೇಷಣೆಯಲ್ಲಿ, ಸಂವಿಧಾನವು ಅವರಿಗೆ ಸಮಾನ ಪೌರತ್ವವನ್ನು ಖಾತ್ರಿಪಡಿಸುತ್ತದೆ. ಅಂತಹ ನಡವಳಿಕೆಯನ್ನು ನಿರಪರಾಧೀಕರಿಸುವ ಪ್ರಕ್ರಿಯೆಯಲ್ಲಿ, ಸಂವಿಧಾನದ ಮೌಲ್ಯಗಳು ಎಲ್.ಜಿ.ಬಿ.ಟಿ ಸಮುದಾಯಕ್ಕೆ ಭಯದಿಂದ ಮುಕ್ತವಾದ ಜೀವನವನ್ನು ನಡೆಸುವ ಮತ್ತು ಖಾಸಗೀ ಆಯ್ಕೆಗಳಲ್ಲಿ ಪರಿಪೂರ್ಣತೆಯನ್ನು ಕಾಣುವ ಸಾಮರ್ಥ್ಯವನ್ನು ನೀಡುತ್ತದೆ.

151. ಸಂಗಾತಿಯ ಆಯ್ಕೆ, ವೈಯಕ್ತಿಕ ಅನ್ಯೋನ್ಯತೆಯ ಬಯಕೆ ಮತ್ತು ಮಾನವ ಸಂಬಂಧಗಳಲ್ಲಿ ಪ್ರೀತಿ ಮತ್ತು ಪರಿಪೂರ್ಣತೆಯನ್ನು ಹುಡುಕುವ ಹಂಬಲಗಳು ಎಲ್ಲರನ್ನೂ, ಕಾಲಘಟ್ಟ ಮತ್ತು ಸಮಯವದ ಮಿತಿಗಳನ್ನು ಮೀರಿ, ಸಾರ್ವತ್ರಿಕವಾಗಿ ಸೆಳೆಯುತ್ತದೆ. ಒಪ್ಪಿಗೆಯ ಅನ್ಯೋನ್ಯತೆಗಳನ್ನು ಸಂರಕ್ಷಿಸುವ ಪ್ರಕ್ರಿಯೆಯಲ್ಲಿ, ಸಂವಿಧಾನವು ಈ ವೈಯಕ್ತಿಕ ವಿಷಯಗಳಲ್ಲಿ ಮೂಗುತೂರಿಸುವುದು ಸರ್ಕಾರದ ಕೆಲಸವಲ್ಲ ಎಂಬ ಸರಳವಾದ ತತ್ತ್ವವೊಂದನ್ನು ಅಳವಡಿಸಿಕೊಳ್ಳುತ್ತದೆ. ಹಾಗೆಯೇ ಸಮಾಜದ ಭಿನ್ನಲೈಂಗಿಕ ಪರಿಕಲ್ಪನೆಗಳು ಕೂಡಾ, ಸಂವಿಧಾನಾತ್ಮಕ ಸ್ವಾತಂತ್ರ್ಯಗಳನ್ನು, ಲೈಂಗಿಕ ನಿಲುವಿನ ಆಧಾರದಲ್ಲಿ ನಿಯಂತ್ರಿಸುವ ಹಾಗಿಲ್ಲ.

152. ಸಾಂವಿಧಾನಿಕ ಪೀಠದೆದುರು ಮಂಡಿಸಲಾಗಿರುವ ಈ ಉಲ್ಲೇಖವು ಒಂದೇ ಲಿಂಗದ ವಯಸ್ಕರ ನಡುವಿನ ಒಪ್ಪಿಗೆಯ ಲೈಂಗಿಕ ನಡವಳಿಕೆಗೆ ಅನ್ವಯವಾಗುವ 377ನೇ ಪರಿಚ್ಛೇದದ ಮಾನ್ಯತೆಯ ಬಗೆಗಿನದಾಗಿದೆ. ಈ ಪ್ರಕರಣದ ತೀರ್ಪನ್ನು ನಿರ್ಧರಿಸುವ ಸಲುವಾಗಿ ನಾವು ಬಳಸಿರುವ ಸಾಂವಿಧಾನಿಕ ತತ್ವಗಳು, ಬಯಸಲಾಗಿರುವ ಹಕ್ಕುಗಳ ಮೂಲ ಮತ್ತು ಅವುಗಳ ರಕ್ಷಣೆಯ ಮೂಲದ ಬಗೆಗೆ ಮಾತನಾಡುತ್ತವೆ. ತಮ್ಮ ವ್ಯಾಪ್ತಿ ಮತ್ತು ವಿಷಯದ ಹಿನ್ನೆಲೆಯಲ್ಲಿ, ಆ ತತ್ವಗಳು, ಸದರಿ ಕಾನೂನು ದಂಡಿಸುವ ಕ್ರಿಯೆಗಳಿಗಿಂತ ದೊಡ್ಡ ವ್ಯಾಪ್ತಿಯನ್ನು ಹೊಂದಿರುವ ಸಮಸ್ಯೆಗಳನ್ನು

ಪರಿಹರಿಸುತ್ತವೆ. ಪ್ರತಿರೋಧಿಸುವ ಸ್ವಭಾವ ಹೊಂದಿರುವ ಮತ್ತು ಸಾರ್ವತ್ರಿಕವಾಗಿ ಅನ್ವಯವಾಗುವ ಈ ಸಾಂವಿಧಾನಿಕ ಮೌಲ್ಯಗಳು ಶಾಶ್ವತವಾದ ಗುರುತನ್ನು ಉಳಿಸುವತ್ತ ಶ್ರಮ ವಹಿಸಬೇಕು.

153. ಎಲ್ಲಕ್ಕಿಂತ ಹೆಚ್ಚಾಗಿ, ಈ ಪ್ರಕರಣವು ಸಂವಿಧಾನದ ಪರಿವರ್ತಕ ಶಕ್ತಿಯ ಬಗೆಗಿನ ಚರ್ಚೆಯ ಕುರಿತು ಬಹಳ ವಿಚಾರಗಳನ್ನು ಹೇಳಿತು. ಸಂವಿಧಾನವು ಎಲ್.ಜಿ.ಬಿ.ಟಿ ಹಕ್ಕುಗಳ ಬಗೆಗೆ ಮಾತನಾಡುವ ಪ್ರಕ್ರಿಯೆಯಲ್ಲಿ ಸಮಾಜದ ಉಳಿದ ಭಾಗಗನ್ನು ಉದ್ದೇಶಿಸಿ ಮಾತನಾಡಿತು. ಎಲ್.ಜಿ.ಬಿ.ಟಿ ಸಮುದಾಯದ ಹಕ್ಕುಗಳನ್ನು ಗುರುತಿಸುವಾಗ, ಸಂವಿಧಾನವು ತನ್ನನ್ನು ನೈಜವಾದ ಸಮಾನತೆಯನ್ನು ಪ್ರತಿಪಾದಿಸುವ ಆಳ್ವಿಕೆಯ ಬಗೆಗಿನ ಪಠ್ಯದ ರೂಪದಲ್ಲಿ ಬಿಂಬಿಸಿಕೊಳ್ಳುತ್ತದೆ. ಮೇಲಿನಂತೆ ಮಾಡಲು, ಸಂವಿಧಾನವು ಲಿಂಗ ಮತ್ತು ಲೈಂಗಿಕತೆಗಳ ಪ್ರಾಬಲ್ಯದ ಬಗ್ಗೆ ಚಾಲ್ತಿಯಲ್ಲಿರುವ ಕಲ್ಪನೆಗಳನ್ನು ಪ್ರಶ್ನಿಸುತ್ತದೆ. ತನ್ನ ಪರಿವರ್ತಕ ಪಾತ್ರದಲ್ಲಿ ಸಂವಿಧಾನವು, ಲಿಂಗ ಮತ್ತು ಇಬ್ಬಗೆ ಲಿಂಗಗಳ ಧ್ರುವೀಯತೆಯ ಸಮಸ್ಯೆಯನ್ನು ಬಗೆಹರಿಸುವತ್ತ ನಮ್ಮ ಗಮನವನ್ನು ತಿರುಗಿಸುತ್ತದೆ. ಈ ಸಮಸ್ಯೆಗಳನ್ನು ಪರಿಹರಿಸಲೆತ್ನಿಸುವಾಗ ನಾವು ನಮ್ಮ ಸಮಾಜವನ್ನು ಧ್ರುವೀಕರಿಸುವ ಹಲವು ವಿಚಾರಗಳನ್ನು ಎದುರಿಸುತ್ತೇವೆ. ಮುಕ್ತ ಸಮಾಜವಾಗಿ ಉಳಿಯುವ ನಮ್ಮ ಸಾಮರ್ಥ್ಯವು, ನಮ್ಮ ಸಾಂವಿಧಾನಿಕ ಮೌಲ್ಯಗಳು ಸಮಯದ ಪ್ರಚೋದನೆಗಳ ಮೇಲೆ ಗೆಲುವು ಸಾಧಿಬಲ್ಲವೇ ಎಂಬುದನ್ನು ಅವಲಂಬಿಸಿರುತ್ತದೆ.

154. ಎಲ್.ಜಿ.ಬಿ.ಟಿ ಸಮುದಾಯ ಅಸ್ತಿತ್ವದ ನಿರಾಕರಣೆಯ ಅವಮಾನವನ್ನು ಅನುಭವಿಸಿರುವ ನೂರಾ ಐವತ್ತು ವರ್ಷಗಳ ಅವಧಿ ಅತ್ಯಂತ ದೀರ್ಘವಾದುದು. ಇದನ್ನು ಸರಿಪಡಿಸಲು ಸಂವಿಧಾನ ರಚನೆಯಾದ ಮೇಲೆ ಅರವತ್ತೆಂಟು ವರ್ಷ ಹಿಡಿದಿವೆ ಎಂಬ ವಿಷಯವು ಮುಂದೆ ನಾವು ಪರಿಹರಿಸಬೇಕಿರುವ ಸಮಸ್ಯೆಗಳು ಸಾಕಷ್ಟಿವೆ ಎಂಬುದನ್ನು ನೆನಪಿಸುತ್ತದೆ. ಅಲ್ಲದೆ, ಸಂವಿಧಾನಕ್ಕಿರುವ ಬದಲಾವಣೆಯ ಶಕ್ತಿಯನ್ನು ಬಡಿದೆಬ್ಬಿಸುವ ಕಾಲ ಕೂಡಾ ಇದಾಗಿದೆ.

155. ಸಮಾಜವೊಂದು ತಾನು ಎಸಗಿರುವ ಅನ್ಯಾಯವನ್ನು ಒಪ್ಪಿಕೊಳ್ಳುವುದು, ಅದು ವಿಕಾಸ ಹೊಂದುತ್ತಿರುವುದನ್ನು ಸೂಚಿಸುತ್ತದೆ. ಸಾಂವಿಧಾನಿಕ ಪರಿಹಾರ ನೀಡುವ ಆಳ್ವಿಕೆಯಡಿಯಲ್ಲಿ ತಪ್ಪುಗಳನ್ನು ಸರಿಪಡಿಸಹೊರಟಾಗ, ದೋಷಾರೋಪಣೆ ಮಾಡುವ ಬದಲು ಸಮಸ್ಯೆಯಯನ್ನು ಪರಿಹಾರ ಮಾಡಲಾಗುತ್ತದೆ, ಟೀಕೆಯ ಬದಲು ಸಂವಾದಗಳು ನಡೆಯುತ್ತವೆ ಮತ್ತು ಸಮುದಾಯಗಳ ಮೇಲಿನ

ದ್ವೇಷ ತೊಲಗಿ ಆ ಸಮುದಾಯದ ದುಃಖಗಳ ಶಮನವಾಗುತ್ತದೆ. ಮಾನವೀಯ ಸ್ವಾತಂತ್ರ್ಯಕ್ಕೆ ಬದ್ಧವಾಗಿರುವ ಪ್ರಭುತ್ವದಲ್ಲಿ ಶೋಷಣೆಗೆ ಒಳಗಾದವರಿಗೆ ನ್ಯಾಯ ದೊರೆತಾಗ ಅವರುಗಳ ಬದುಕು ಪರಿವರ್ತನೆಗೊಳ್ಳುತ್ತದೆ. ಶೂಶಣೆ ಮತ್ತು ಅನ್ಯಾಯವನ್ನು ಸರಿಪಡಿಸಲು ಮುಂದಾಗುವ ಪ್ರತೀ ಸಮಾಜವು ತನ್ನನ್ನು ತಾನು ಬದಲಾಯಿಸಿಕೊಳ್ಳುತ್ತದೆ. ನಾವು ನಮ್ಮ ಕಾಲದ ಸಾಮಾಜಿಕ ಸಂಘರ್ಷವನ್ನು ಹೀಗೆ ನಿಭಾಯಿಸುತ್ತೇವೆ ಎಂಬುದು ಆ ಸಂಘರ್ಷ ನಡೆಯುವ ಕಿರಿದಾದ ಬೀದಿಗಳಾಚೆಗೂ ಪ್ರತಿಧ್ವನಿಸುತ್ತದೆ ಎಂಬುದನ್ನು ತಿಳಿಸಿಕೊಡುವುದೇ ಈ ಪ್ರಕರಣದ ಮಹತ್ವವಾಗಿದೆ.

156.ನಮ್ಮ ಅಭಿಪ್ರಾಯ ಮತ್ತು ತೀರ್ಪು ಈ ಕೆಳಗಿನಂತಿದೆ

i. ಸಮಾನ ಲಿಂಗದ ವಯಸ್ಕ ವ್ಯಕ್ತಿಗಳ ನಡುವಿನ ಒಪ್ಪಿಗೆಯ ಲೈಂಗಿಕ ಕ್ರಿಯೆಗಳನ್ನು ಅಪರಾಧೀಕರಿಸುವ ಭಾರತೀಯ ದಂಡ ಸಂಹಿತೆಯ 377ನೇ ಪರಿಚ್ಛೇದ ಸಂವಿಧಾನಬಾಹಿರವಾಗಿದೆ.

ii. ಇತರ ಎಲ್ಲ ನಾಗರೀಕರಂತೆ, ಎಲ್.ಜಿ.ಬಿ.ಟಿ ಸಮುದಾಯದ ಸದಸ್ಯರು ಕೂಡ, ಸಂವಿಧಾನಡಿಯಲ್ಲಿ ರಕ್ಷಿಸಲಾಗಿರುವ ಸ್ವಾತಂತ್ರ್ಯಗಳ ಜೊತೆಗೆ ಸಂವಿಧಾನದ ಎಲ್ಲಾ ಹಕ್ಕುಗಳನ್ನು ಪಡೆಯಲು ಅರ್ಹರು.

iii. ತಮ್ಮಿಚ್ಛೆಯ ಸಂಗಾತಿಯನ್ನು ಆಯ್ದುಕೊಳ್ಳುವ ಮತ್ತು ಲೈಂಗಿಕ ಅನ್ಯೋನ್ಯತೆಯಲ್ಲಿ ಸಾರ್ಥಕ್ಯ ಕಾಣುವ ಆಯ್ಕೆ ಅಲ್ಲದೇ ಯಾವುದೇ ತಾರತಮ್ಯಕ್ಕೆ ಈಡಾಗದಿರುವ ಹಕ್ಕುಗಳು ಸಂವಿಧಾನ ಲೈಂಗಿಕ ನಿಲುವಿಗೆ ನೀಡಿರುವ ಭದ್ರತೆಯೊಳಗೆ ಅಡಕವಾಗಿವೆ.

iv. ಎಲ್.ಜಿ.ಬಿ.ಟಿ ಸಮುದಾಯದ ಸದಸ್ಯರುರು ಯಾವುದೇ ಭೇದಭಾವವಿಲ್ಲದ ಸಮಾನವಾದ ನಾಗರಿಕತೆ ಮತ್ತು ಕಾನೂನಿನ ಸಮಾನ ರಕ್ಷಣೆಯ ಸೌಕರ್ಯ ಪಡೆಯಲು ಅರ್ಹರು

v. ಕೌಶಲ್ ಪ್ರಕರಣದ ತೀರ್ಪು ರದ್ದುಗೊಂಡಿದೆ

.......ನ್ಯಾ. [ಡಾ. ಧನಂಜಯ ಚಂದ್ರಚೂಡ್]

## ಕೃತಜ್ಞತೆಗಳು

ಮುಗಿಸುವ ಮುನ್ನ, ಈ ಪ್ರಕರಣದಲ್ಲಿ ಅರ್ಜಿದಾರರ ಮತ್ತು ಮಧ್ಯಸ್ಥಕೆದಾರರ ಪರವಾಗಿ ಹಾಜರಾದ ವಕೀಲರುಗಳ ಪ್ರಯತ್ನಗಳನ್ನು ನಾನು ಮೆಚ್ಚಿಕೊಳ್ಳುತ್ತೇನೆ - ಶ್ರೀ ಮುಕುಲ್ ರೋಹಾತ್ಗಿ, ಶ್ರೀ ಅರವಿಂದ್ ದಾತಾರ್, ಶ್ರೀ ಅಶೋಕ್ ದೇಸಾಯಿ, ಶ್ರೀ ಆನಂದ್ ಗ್ರೋವರ್, ಶ್ರೀ ಶ್ಯಾಮ್ ದಿವಾನ್, ಶ್ರೀ ಸಿ.ಯು. ಸಿಂಗ್ ಮತ್ತು ಶ್ರೀ ಕೃಷ್ಣನ್ ವೇಣುಗೋಪಾಲ್, ಹಿರಿಯ ವಕೀಲರು ; ಮತ್ತು ಶ್ರೀ ಸೌರಭ್ ಕಿರ್ಪಾಲ್, ಡಾ. ಮೇನಕಾ ಗುರುಸ್ವಾಮಿ ಮತ್ತು ಶ್ರೀ ಅರುಂಧತಿ ಕಟ್ಜು, ಮತ್ತು ಶ್ರೀ ಜಯ್ನಾ ಕೊಠಾರಿ, ಅರಿವುಳ್ಳ ವಕೀಲರು. ನಾವು ತೀರ್ಪನ್ನು ಆಲೋಚಿಸಿ ಬರೆಯುವ ಸಂದರ್ಭದಲ್ಲಿ, ಅವರ ಪಾಂಡಿತ್ಯವು, ವಿಚಾರಗಳನ್ನು ಗ್ರಹಿಸಿಕೊಳ್ಳಲು ನಮಗೆ ಸಹಾಯ ಮಾಡಿತು. ಶ್ರೀ ತುಷಾರ್ ಮೆಹ್ತಾ, ಅರಿವುಳ್ಳ ಹೆಚ್ಚುವರಿ ಸಾಲಿಸಿಟರ್ ಜನರಲ್ ಭಾರತ ಸರ್ಕಾರದ ಪರವಾಗಿ ಹಾಜರಾದರು. ಅರ್ಜಿದಾರರನ್ನು ವಿರೋಧಿಸಿದ ಮಧ್ಯಸ್ಥಿಕೆದಾರರಿಗೆ ವಕೀಲರು ಮಾಡಿದ ಸಹಾಯಕ್ಕೆ ನಮ್ಮ ಅಭಿನಂದನೆಗಳು.

**.................................. ... ಜೆ**

**[ಡಾ ಧನಂಜಯ ವೈ ಚಂದ್ರಚೂಡ್]**

**ನವ ದೆಹಲಿ;**

**ಸೆಪ್ಟೆಂಬರ್ 06, 2018.**

**ಭಾರತದ ಸರ್ವೋಚ್ಛ ನ್ಯಾಯಾಲಯದಲ್ಲಿ**

**ಕ್ರಿಮಿನಲ್/ಸಿವಿಲ್ ಮೂಲ ಅಧಿಕಾರ ವ್ಯಾಪ್ತಿ**

**ರಿಟ್ ಅರ್ಜಿ (ಕ್ರಿಮಿನಲ್) ಸಂಖ್ಯೆ .76, 2016**

**ನವತೇಜ್ ಸಿಂಘ್ ಜೋಹರ್ ಮತ್ತು ಇತರರು ....ಅರ್ಜಿದಾರರು**

**ಎದುರು**

**ಭಾರತ ಸರ್ಕಾರ, ಕಾರ್ಯದರ್ಶಿ,**

**ಕಾನೂನು ಮತ್ತು ನ್ಯಾಯ ಸಚಿವಾಲಯದ ಮುಖೇನ .... ಪ್ರತಿವಾದಿಗಳು**

**ಜೊತೆಗೆ**

**ರಿಟ್ ಅರ್ಜಿ (ಕ್ರಿಮಿನಲ್) ಸಂಖ್ಯೆ .572, 2016**

**ಜೊತೆಗೆ**

**ರಿಟ್ ಅರ್ಜಿ (ಕ್ರಿಮಿನಲ್) ಸಂಖ್ಯೆ .88, 2018**

**ಜೊತೆಗೆ**

**ರಿಟ್ ಅರ್ಜಿ (ಕ್ರಿಮಿನಲ್) ಸಂಖ್ಯೆ .100, 2018**

**ಜೊತೆಗೆ**

**ರಿಟ್ ಅರ್ಜಿ (ಕ್ರಿಮಿನಲ್) ಸಂಖ್ಯೆ .101, 2018**

**ಜೊತೆಗೆ**

**ರಿಟ್ ಅರ್ಜಿ (ಕ್ರಿಮಿನಲ್) ಸಂಖ್ಯೆ .121, 2018**

## ತೀರ್ಪು

### ಇಂದೂ ಮಲ್ಹೋತ್ರಾ

1. ಮಾನ್ಯ ಮುಖ್ಯ ನ್ಯಾಯಮೂರ್ತಿಗಳು ಮತ್ತು ನನ್ನ ಸಹೋದರ ನ್ಯಾಯಮೂರ್ತಿಗಳಾದ ಜಸ್ಟೀಸ್ ನಾರಿಮನ್ ಮತ್ತು ಜಸ್ಟೀಸ್ ಚಂದ್ರಚೂಡ್ ರ ಅಭಿಪ್ರಾಯಗಳನ್ನು ಓದುವ ಸುಯೋಗ ನನಗೊದಗಿತು. ಈ ತೀರ್ಪುಗಳು ಈ ಪ್ರಕರಣವನ್ನು ಪರಿಹರಿಸಲು ನ್ಯಾಯಪೀಠ ಗಮನಹರಿಸಬೇಕಾಗಿರುವ ಹಲವು ವಿಚಾರಗಳನ್ನು ಒಳಗೊಂಡಿವೆ.

2. ಸದರಿ ರಿಟ್ ಅರ್ಜಿಗಳ ಸರಣಿಯನ್ನು, ಒಂದೇ ಲಿಂಗದ ವಯಸ್ಕ ವ್ಯಕ್ತಿಗಳ ನಡುವೆ ಖಾಸಗೀಯಾಗಿ ನಡೆಯುವ ಒಪ್ಪಿಗೆಯ ಲೈಂಗಿಕ ಸಮಾಗಮವನ್ನು ಅಪರಾಧವೆಂದು ಬಗೆಯುತ್ತವೆ ಎಂಬ ಕಾರಣಕ್ಕೆ ಭಾರತೀಯ ದಂಡ ಸಂಹಿತೆಯ (ಐ.ಪಿ.ಸಿ) 377ನೇ ಪರಿಚ್ಛೇದದ ಸಾಂವಿಧಾನಿಕ ಮಾನ್ಯತೆಯನ್ನು ಪ್ರಶ್ನಿಸುವ ಸಲುವಾಗಿ ಸಲ್ಲಿಸಲಾಗಿದೆ.

3. **ಸುರೇಶ್ ಕೌಶಲ್ ಮತ್ತೊಬ್ಬರು v. ನಾಜ್** ಪ್ರತಿಷ್ಠಾನ ಮತ್ತು ಇತರರು ಪ್ರಕರಣದ ತೀರ್ಪನ್ನು ಮರುಪರಿಶೀಲಿಸುವ ಅಗತ್ಯವಿದೆಯೇ ಎಂಬ ವಿಚಾರವನ್ನು 8ನೇ ಜನವರಿ 2018ರ ಆದೇಶದನ್ವಯ ಸಾಂವಿಧಾನಿಕ ಪೀಠಕ್ಕೆ ವರ್ಗಾಯಿಸಲಾಯಿತು.

4. ಅರ್ಜಿದಾರರು ಮಾಡಿಕೊಂಡಿರುವ ಕೋರಿಕೆಗಳಲ್ಲಿ, ಲೈಂಗಿಕತೆಯು ಮನುಷ್ಯನ ಮೂಲಭೂತ ಆಸ್ತಿತ್ವದ ಭಾಗವಾಗಿರುವುದರಿಂದ ಲೈಂಗಿಕ ಅಭಿವ್ಯಕ್ತಿ ಮತ್ತು ಒಪ್ಪಿಗೆಯಿರುವ ಒಂದೇ ಲಿಂಗದ ಇಬ್ಬರು ವಯಸ್ಕರ ನಡುವಿನ ಅನ್ಯೋನ್ಯತೆಗಳಿಗೆ ಸಂವಿಧಾನದ 3ನೇ ಭಾಗದಡಿಯಲ್ಲಿ ರಕ್ಷಣೆ ದೊರೆಯಬೇಕು ಎಂಬುದೂ ಸೇರಿಕೊಂಡಿದೆ. ಸಮಾನ ಲಿಂಗದ ಜೋಡಿಗಳ ನಡುವಿನ ಒಪ್ಪಿಗೆಯ ಸಂಬಂಧಗಳನ್ನು ಅಪರಾಧೀಕರಿಸುವ 377ನೇ ಪರಿಚ್ಛೇದವು, ಸಂವಿಧಾನದ 3ನೇ ಭಾಗದಲ್ಲಿರುವ 21, 19 ಮತ್ತು 14ನೇ ಕಲಮುಗಳು ಖಾತ್ರಿಪಡಿಸುವ ಮುಲಭೂತ ಅಧಿಕಾರಗಳನ್ನು ಉಲ್ಲಂಘಿಸುತ್ತದೆ ಎಂದೂ ಬಿನ್ನಹಿಸಲಾಗಿದೆ.

ಈ ವಿಚಾರಣೆಯ ಸಂದರ್ಭದಲ್ಲಿ ಅರ್ಜಿದಾರು ಮುಖ್ಯವಾಗಿ ಕೆಳಕಂಡ ವಿಚಾರಗಳನ್ನು ಎತ್ತಿದ್ದಾರೆ:

i. ಎಲ್.ಜಿ.ಬಿ.ಟಿ ಸಮುದಾಯದವರು ಅಲ್ಪಸಂಖ್ಯಾತರಾಗಿದ್ದಾಗ್ಯೂ ಅವರುಗಳಿಗೆ ಮೂಲಭೂತ ಹಕ್ಕುಗಳು ಅನ್ವಯಿಸುತ್ತವೆ.

ii. ಎಲ್ಲ ಬಗೆಯಿಂದಲೂ ಅಸ್ಪಷ್ಟವಾಗಿರುವ ಮತ್ತು ನಿರ್ದಿಷ್ಟ ಗುರಿಯೇ ಇಲ್ಲದಿರುವ 377ನೇ ಪರಿಚ್ಛೇದವು 14ನೇ ಕಲಮನ್ನು ಉಲ್ಲಂಘಿಸುತ್ತದೆ.

iii. ವ್ಯಕ್ತಿಯೊಬ್ಬರನ್ನು ಅವರ ಲೈಂಗಿಕ ಪ್ರವೃತ್ತಿಗಾಗಿ ಶಿಕ್ಷೆಗೊಳಪಡಿಸುವ, 377ನೇ ಪರಿಚ್ಛೇದವು 15ನೇ ಕಲಮಿನಡಿಯಲ್ಲಿ ಭೇದಭಾವ ಎಸಗುತ್ತದೆ.

iv. ಮನುಷ್ಯರ ಅತ್ಯಂತ ಖಾಸಗೀ ನಿರ್ಧಾರಗಳಿಗೆ ಸಂಬಂಧಿಸಿದ, ಘನತೆಯಿಂದ ಬದುಕುವ ಹಕ್ಕು, ಖಾಸಗೀತನದ ಹಕ್ಕು, ಸ್ವಾಯುತ್ತೆಯ ಹಕ್ಕು ಮತ್ತು ಸ್ವಯಂ ಧೃಡೀಕರಣದ ಹಕ್ಕುಗಳನ್ನು ಒಳಗೊಂಡಿರುವ 21ನೇ ಕಲಮು ಕೊಡಮಾಡುವ ಬದುಕಿನ ಮತ್ತು ಸ್ವಾತಂತ್ರ್ಯದ ಹಕ್ಕನ್ನು 377ನೇ ಪರಿಚ್ಛೇದ ಉಲ್ಲಂಘಿಸುತ್ತದೆ.

5. ವಿಚಾರಣೆಯ ಸಂಧರ್ಭದಲ್ಲಿ ಭಾರತ ಸರ್ಕಾರ 11 ಜುಲೈ 2018ರಂದು ಸಲ್ಲಿಸಿದ ಅಫಿಡವಿಟ್ಟಿನಲ್ಲಿ, ವಯಸ್ಕರ ನಡುವೆ ಒಪ್ಪಿಗೆಯಿಂದ, ಖಾಸಗೀಯಾಗಿ ನಡೆಯುವ ಕ್ರಿಯೆಗಳಿಗೆ ಸಂಬಂಧಿಸಿದಂತೆ, 377ನೇ ಪರಿಚ್ಛೇದದ ಸಾಂವಿಧಾನಿಕ ಮಾನ್ಯತೆಯ ವಿಚಾರವನ್ನು ಘನ ನ್ಯಾಯಾಲಯದ ವಿವೇಚನೆಗೆ ಬಿಡುವುದಾಗಿ ತಿಳಿಸಲಾಗಿತ್ತು.

ಆದಾಗ್ಯೂ, ನ್ಯಾಯಾಲಯವು 377ನೇ ಪರಿಚ್ಛೇದದ ಸಾಂವಿಧಾನಿಕ ಮಾನ್ಯತೆಯ ಹೊರತಾಗಿ, ಇತರ ವಿಚಾರಗಳನ್ನು ಪರಾಮರ್ಶಿಸುವ, ನಿರ್ಧರಿಸುವ, ಅಥವಾ ಲೆ.ಜಿ.ಬಿ.ಟಿ. ಸಮುದಾಯಕ್ಕೆ ಇತರ ಹಕ್ಕುಗಳನ್ನು ನೀಡುವಹಾಗಿದ್ದಲ್ಲಿ, ಅಂತಹ ವಿಚಾರಗಳ ದೂರಗಾಮೀ ಪರಿಣಾಮ ಮತ್ತು ವಿಸ್ತಾರವಾದ ಪರಿಣಾಮಗಳ ಹಿನ್ನೆಲೆಯಲ್ಲಿ, ಭಾರತ ಸರ್ಕಾರವು ಮತ್ತೊಂದು ವಿವರವಾದ ಅಫಿಡವಿಟ್ಟನ್ನು ಸಲ್ಲಿಸಬಯಸುತ್ತದೆ ಎಂದೂ ತಿಳಿಸಲಾಗಿದ್ದು, ಅಂತಹ ವಿಚಾರಗಳನ್ನು ಈ ಪ್ರಕರಣದಲ್ಲಿ ಪರಿಗಣಿಸಲಾಗಿಲ್ಲ.

**6. <u>ಶಾಸನಾಂಗೀಯ ಹಿನ್ನೆಲೆ</u>**

6.1. ಕ್ರಮವಾಗಿ 1290 ಮತ್ತು 1300ರ ನ್ಯಾಯ ಟಿಪ್ಪಣಿಗಳಾದ ಫ್ಲೆಟ್ ಮತ್ತು ಬ್ರಿಟ್ಟನ್ ನಲ್ಲಿ ಆ ಕಾಲದ ಇಂಗ್ಲೆಂಡಿನಲ್ಲಿ ಚಾಲ್ತಿಯಲ್ಲಿದ್ದ ಕಾನೂನುಗಳನ್ನು ದಾಖಲು ಮಾಡಲಾಗಿತ್ತು. ಈ ಟಿಪ್ಪಣಿಗಳಲ್ಲಿ ಗುದ-ಸಂಭೋಗವನ್ನು ಅಪರಾಧ ಎಂದು ಉಲ್ಲೇಖಿಸಲಾಗಿತ್ತು[298].

6.2. ಗುದ ಸಂಭೋಗಕ್ಕೆ ಗಲ್ಲು ಶಿಕ್ಷೆ ವಿಧಿಸುತ್ತಿದ್ದ 1533ರ ಬಗ್ಗರಿ ಆಕ್ಟನ್ನು, ಒಂದನೇ ಎಲಿಜಬೆತ್ ರಾಣಿಯ ಆಳ್ವಿಕೆಯಿದ್ದ 1563ನೇ ಇಸವಿಯಲ್ಲಿ ಮರುಜಾರಿ ಮಾಡಲಾಯಿತು.

1861ನೇ ಇಸವಿಯಲ್ಲಿ ಗುದಸಂಭೋಗಕ್ಕಿದ್ದ ಗಲ್ಲು ಶಿಕ್ಷೆಯನ್ನು ಇಂಗ್ಲೆಂಡ್ ಮತ್ತು ವೇಲ್ಸ್ ನಲ್ಲಿ ರದ್ದುಮಾಡಲಾಯಿತಾದರೂ, ಅದು "ಕ್ರೈಸ್ತರು ಉಲ್ಲೇಖ ಮಾಡಬಾರದಂಥ" ಅಪರಾಧವಾಗಿ ಮುಂದುವರೆಯಿತು.

6.3. ಗ್ರೇಟ್ ಬ್ರಿಟನ್ ನ ವಸಾಹುತುಗಳಲ್ಲಿ ಜಾರಿಯಾಗುವ ಕಾನೂನುಗಳಿಗೆ ಈ 1861 ಆಕ್ಟ್ ಆಕರವಾಗಿ ಬಳಕೆಯಾಯಿತು.

6.4. 377ನೇ ಪರಿಚ್ಛೇದದ ಅಡಿಟಿಪ್ಪಣಿ "ಅನೈಸರ್ಗಿಕ ಅಪರಾಧ"ಗಳನ್ನು ಉಲ್ಲೇಖ ಮಾಡುತ್ತಾಮಾಡುತ್ತಾ, ಈ ರೀತಿ ಹೇಳುತ್ತದೆ

> "377, *ಅನೈಸರ್ಗಿಕ ಅಪರಾಧಗಳು. - ಯಾವುದೇ ಗಂಡು, ಹೆಣ್ಣು ಮತ್ತು ಪ್ರಾಣಿಯೊಂದಿಗೆ ನಿಸರ್ಗದ ನಿಯಮಕ್ಕೆ ವಿರುದ್ಧವಾಗಿ ಸ್ವ-ಇಚ್ಛೆಯಿಂದ ಶಾರೀರಿಕ ಸಂಭೋಗ ನಡೆಸುವವರಿಗೆ ಜೀವಾವಧಿ ಶಿಕ್ಷೆ ಅಥವಾ ಹತ್ತು ವರ್ಷಗಳವರೆಗಿನ ಜೈಲು ಶಿಕ್ಷೆ ಮತ್ತು ದಂಡ ವಿಧಿಸಲಾಗುತ್ತದೆ.*

[298] John Boswell, *Christianity, Social Tolerance, and Homosexuality: Gay People in Western Europe from the Beginning of the Christian Era to the Fourteenth Century* (University of Chicago Press, 1980), at p. 292

*ವಿವರಣೆ - ಈ ವಿಭಾಗದಲ್ಲಿ ವಿವರಿಸಿರುವ 'ಶಾರೀರಿಕ ಸಂಭೋಗದಡಿಯಲ್ಲಿ ಕ್ರಿಯೆಯೊಂದನ್ನು ಅಪರಾಧವೆಂದು ಪರಿಗಣಿಸಲು ಒಳ ತೂರಿಸುವಿಕೆಯಷ್ಟೇ ಸಾಕಾಗುತ್ತದೆ'*

(*ಒತ್ತು ಕೊಡಲಾಗಿದೆ*)

6.5. 377ನೇ ಪರಿಚ್ಛೇದವು "ನಿಸರ್ಗದ ನಿಯಮಕ್ಕೆ ವಿರುದ್ಧವಾದ ಶಾರೀರಿಕ ಸಂಭೋಗ"ದ ವ್ಯಾಖ್ಯಾನ ನೀಡುವುದಿಲ್ಲ. ಅರ್ಜಿದಾರರ ಪ್ರಕಾರ, ಸದರಿ ನಿಯಮವು ಮೇಲ್ನೋಟಕ್ಕೆ ತಟಸ್ಥವಾಗಿ ಕಂಡರೂ, ವಸಾಹತುಗಳ ಇತಿಹಾಸದಲ್ಲಿದ್ದ ಗುದಸಂಭೋಗ ವಿರೋಧೀ ಕಾನೂನುಗಳು ಮತ್ತು "ವಿಲಕ್ಷಣ' ಮತ್ತು "ವ್ಯತಿರಿಕ್ತ" ಎಂದು ಗ್ರಹಿಸಲ್ಪಡುವ ಎಲ್ಲ ಬಗೆಯ ಲೈಂಗಿಕ ನಡವಳಿಕೆಗಳನ್ನು ಶಿಕ್ಷೆಗೊಳಪಡಿಸುತ್ತಿದ್ದ ಹಿನ್ನೆಲೆಯಲ್ಲಿ, ಈ ಕಾಯ್ದೆಯ ಗುರಿ ಎಲ್.ಗಿ.ಬಿ.ಟಿ ಸಮುದಾಯವೇ ಆಗಿತ್ತು ಎಂದು ಅರ್ಜಿದಾರರು ತಿಳಿಸಿರುತ್ತಾರೆ.

7. 20ನೇ ಶತಮಾನದ ಹೊಸತರಲ್ಲಿ, ಸಮಲೈಂಗಿಕತೆಯನ್ನು (ಅಚ್ಚಕನ್ನಡದಲ್ಲಿ ತಂಗುರ್ತದೊಲುಮೆ) ಮನೋರೋಗ ಅಥವಾ ಕುಂಠಿತ ಬೆಳವಣಿಗೆ[299] ಎಂದು ಪರಿಗಣಿಸುತ್ತಿದ್ದ ಹಲವಾರು ಮನೋವೈಜ್ಞಾನಿಕ ಸಿದ್ಧಾಂತಗಳಿದ್ದವು. ನಹಜವಾದ ಬೆಳವಣಿಗೆಯಿಂದ ಮಕ್ಕಳು ಅನ್ಯಲಿಂಗಾಸಕ್ತರಾಗಿ (ಅಚ್ಚಕನ್ನಡದಲ್ಲಿ ಮರುಗುರ್ತದೊಲಿಗ) ಬೆಳೆಯುತ್ತಾರೆ ಹಾಗೂ ಸಮಲೈಂಗಿಕತೆ ಕುಂಠಿತಗೊಂಡ ಬೆಳವಣಿಗೆ ಎಂದು ತಿಳಿಯಲಾಗಿತ್ತು[300]. ಸಮಲೈಂಗಿಕತೆಯನ್ನು ಮಾನಸಿಕ ಖಾಯಿಲೆ ಅಥವಾ ವೈಕಲ್ಯವೆಂದು ಗ್ರಹಿಸಿ ಅದನ್ನು ಪರಕೀಯ ಮತ್ತು ಅಸಹ್ಯ ಭಾವದಿಂದ ನೋಡಲಾಗಿತ್ತಿತ್ತು.

8. 20ನೇ ಶತಮಾನದ ಕೊನೆಯ ಭಾಗದಲ್ಲಿ ಈ ಅಭಿಪ್ರಾಯ ಬದಲಾಗತೊಡಗಿ, ಹಳೆಯ ಸಿದ್ಧಾಂತಗಳ ಜಾಗವನ್ನು ಸಮಲೈಂಗಿಕತೆಯನ್ನು ಮಾನವ ಲೈಂಗಿಕತೆಯ ನೈಸರ್ಗಿಕ ಭಿನ್ನರೂಪವೆಂದು ಬಗೆಯುವ ಹೆಚ್ಚು

---

[299] *Report of the Committee on Homosexual Offences and Prostitution,* 1957, at para 30.

[300] Benjamin J. Sadock et al., Kaplan and Sadock's Comprehensive Textbook of Psychiatry (9th ed., 2009), at pp. 2060-89

ಪ್ರಭುದ್ದವಾದ ಗ್ರಹಿಕೆಗಳು ತುಂಬಿದುವು. ವೈಜ್ಞಾನಿಕ ಅಧ್ಯಯಯನಗಳು ಮಾನವ ಲೈಂಗಿಕತೆಯು ಸಂಕೀರ್ಣ ಮತ್ತು ಸ್ವಾಭಾವಿಕವಾದುದು ಎಂದು ತೋರಿಸಿಕೊಟ್ಟವು.

ಕರ್ಟ್ ಹಿಲ್ಲರ್ ಕೋಪನ್ಹಾಗೆನ್ ನಲ್ಲಿ ನಡೆದ ಎರಡನೇ ಲೈಂಗಿಕ ಸುಧಾರಣೆಯ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ತಾವು ಮಾಡಿದ ಭಾಷಣದಲ್ಲಿ ಹೀಗೆನ್ನುತ್ತಾರೆ.[301]

> "ಸಮಲಿಂಗ ಪ್ರೇಮವು ನಿಸರ್ಗದ ಲೇವಡಿಯಾಗಿರದೇ, ನಿಸರ್ಗದ ಕ್ರಿಯೆಯೇ ಆಗಿದೆ. 'ಡೇಬ್ರೇಕ್' ನಲ್ಲಿ ನೀಷೆ ಹೇಳುವಂತೆ, ಸಂತಾನೋತ್ಪತ್ತಿ ಎಂಬುದು ಲೈಂಗಿಕ ಬಯಕೆಗಳನ್ನು ಒಂದು ಬಗೆಯಲ್ಲಿ ತೀರಿಸಿಕೊಳ್ಳುವಾಗ ಪದೇ ಪದೇ ಸಡೆಯುವ ಆಕಸ್ಮಿಕವಷ್ಟೇ - ಅದು ಲೈಂಗಿಕ ಕ್ರಿಯೆಯ ಗುರಿಯೂ ಅಲ್ಲ, ಆ ಕ್ರಿಯೆಯಿಂದ ದೊರೆಯಲೇ ಬೇಕಾದ ಫಲಶೃತಿಯೂ ಅಲ್ಲ. ಸಂತಾನೋತ್ಪತ್ತಿಯನ್ನು ಲೈಂಗಿಕತೆಯ ಗುರಿಯೆಂದು ಬಗೆಯುವ ಸಿದ್ಧಾಂತವು ತರಾತುರಿಯಲ್ಲಿ ಹುಟ್ಟುಹಾಕಲಾದ ಹಗುರವಾದ ಸುಳ್ಳು ಎಂದು ಈಗಾಗಲೇ ರುಜುವಾತಾಗಿದೆ. ಮನುಷ್ಯ ಬುದ್ಧಿ ಹುಟ್ಟುಹಾಕಿರುವ ನಿಯಮಗಳಂತೆ, ನಿಸರ್ಗದ ನಿಯಮಗಳನ್ನು ಉಲ್ಲಂಘಿಸಲು ಬರುವುದಿಲ್ಲ. ನಿಸರ್ಗದ ವಿದ್ಯಮಾನವೊಂದು, ಅದು ಹೇಗೋ ನಿಸರ್ಗಕ್ಕೆ ವಿರುದ್ಧವಾದುದು ಎಂದು ವಾದಿಸುವುದು ಹುಚ್ಚುತನವಾಗುತ್ತದೆ. ಪ್ರಚಲಿತ ನಿಯಮಗಳಿಗೆ, ಮಾನ್ಯತೆಗಳಿಗೆ ಬದ್ಧರಾಗದೇ, ಭಿನ್ನತೆಯೊಂದಿಗೆ, ಹೊಸತರೊಂದಿಗೆ ಗುರುತಿಸಿಕೊಂಡು ಅಲ್ಪಸಂಖ್ಯಾತರಾಗಿರುವುದು ಖಾಯಿಲೆ ಅಥವಾ ವೈಕಲ್ಯದ ಲಕ್ಷಣಗಳಲ್ಲ"

9. 1957 ನೇ ಇಸವಿಯಲ್ಲಿ ಉನೈಟೆಡ್ ಕಿಂಗ್ಡಂ ಹೊರತಂದ ವೋಲ್ಫೆನ್ ಆಯೋಗದ ವರದಿಯಲ್ಲಿ, ಗುದ-ಸಂಭೋಗ ವಿರೋಧೀ ಕಾನೂನುಗಳು ಸಮಲೈಂಗಿಕರ (ಅಚ್ಚಕನ್ನಡದಲ್ಲಿ ತಂಗುರ್ತದೊಲಿಗರು) ವಿರುದ್ಧ ಬೆದರಿಕೆ ಮತ್ತು ಕಿರುಕುಳಗಳ ವಾತಾವರಣ ನಿರ್ಮಾಣ ಮಾಡಿದ್ದ ಬಗೆಯನ್ನು ಗುರುತಿಸಿತ್ತು. ಆ ಸಮಿತಿಗೆ ತಿಳಿದುಬಂದ ಕೆಲವಿಷಯಗಳು ಇಂತಿವೆ.

---

[301] Great Speeches on Gay Rights (James Daley ed.; Dover Publications, 2010), at pp. 24-30

"ಸಮಲೈಂಗಿಕರ ಬಗ್ಗೆ ಪೋಲೀಸರಿಗೆ ತಿಳಿಸಿ ಅವರನ್ನು ಕಾನೂನು ಸಮಸ್ಯೆಗೆ ಒಡ್ಡುವುದಾಗಿ ಬೆದರಿಸಲಾಗುತ್ತಿತ್ತೋ ಅಥವಾ ಆ ವಿಷಯವನ್ನು ಸಂತ್ರಸ್ತರ ನಂಟರಿಷ್ಟರಿಗೆ, ಉದ್ಯೋಗದಾತರಿಗೆ, ಸ್ನೇಹಿತರಿಗೆ ತಿಳಿಸಿದರೆ ಆಗುವ ಸಾಮಾಜಿಕ ತೊಂದರೆಗಳ ಬಗ್ಗೆ ಹೆದರಿಸಲಾಗುತ್ತಿತ್ತೋ ಎಂಬುದನ್ನು ನಿರ್ಧರಿಸಲು ನಮಗೆ ಕಷ್ಟವಾಗುತ್ತಿದೆ. ಬಹುತೇಕವಾಗಿ ಎರಡನೇ ಬಗೆಯ ಬೆದರಿಕೆಯು ಹೆಚ್ಚು ಪ್ರಭಾವಶಾಲಿಯಾದ ಬೆದರಿಕೆಯಾಗಿದ್ದಿರಬೇಕು. ಆದರೆ, ಸಮಲೈಂಗಿಕರಿಗೆ ಉಂಟಾಗುವ ಸಮಾಜಿಕ ತೊಂದರೆಗಳೊಂದಿಗೆ, ಈಗಿನ ಕಾನೂನಿನ ಪರಿಣಾಮಗಳೂ ತಳುಕು ಹಾಕಿಕೊಂಡಿರದೇ ಇದ್ದ ಪಕ್ಷದಲ್ಲಿ ಅಂತಹ ಬೆದರಿಕೆಗಳಿಗೆ ಹೆಚ್ಚಿನ ಬೆಲೆಯಿರುತ್ತಿರಲಿಲ್ಲ"

ಈ ವರದಿಯ ಹಿನ್ನೆಲೆಯಲ್ಲಿ ಇಂಗ್ಲೆಂಡಿನ "ಹೌಸ್ ಆಫ್ ಲಾರ್ಡ್ಸ್" ಖಾಸಗೀಯಾಗಿ ಒಪ್ಪಿಗೆಯಿರುವ ವ್ಯಕ್ತಿಗಳ ನಡುವೆ ನಡೆಯುವ ಸಮಲೈಂಗಿಕ ಕ್ರಿಯೆಗಳನ್ನು ನಿರಪರಾಧೀಕರಿಸುವ ಕಾನೂನು ಪ್ರಕ್ರಿಯೆಗಳಿಗೆ ನಾಂದಿ ಹಾಡಿತು. ಲೈಂಗಿಕ ಅಪರಾಧಗಳ ಕಾಯ್ದೆ (ದಿ ಸೆಕ್ಷುವಲ್ ಅಫೆನ್ಸಸ್ ಆಕ್ಟ್), 1967 ಜಾರಿಯಾಗುವುದರೊಂದಿಗೆ, 21ನೇ ವಯಸ್ಸನ್ನು ದಾಟಿದ ಒಪ್ಪಿಗೆಯಿರುವ ವ್ಯಕ್ತಿಗಳ ನಡುವೆ ನಡೆಯುವ ಸಮಲೈಂಗಿಕ ಕ್ರಿಯೆಗಳು ಅಪರಾಧಮುಕ್ತಗೊಂಡವು.

10. ಕಳೆದ ಕೆಲ ದಶಕಗಳಲ್ಲಿ ಜಗತ್ತಿನೆಲ್ಲೆಡೆ ಗುದಸಂಭೋಗ ವಿರೋಧೀ ಕಾನೂನುಗಳ ನಿರಪರಾಧೀಕರಣವು ಪ್ರಚಲಿತಗೊಂಡಿದ್ದು, ಇಂತಹ ಕಾಯ್ದೆಗಳು ಮಾನ ಹಕ್ಕುಗಳಿಗೆ ವಿರುದ್ಧವಾದುವು ಎಂಬುದನ್ನು ಗುರುತಿಸಲಾಗಿದೆ. ಅಂತಾರಾಷ್ಟ್ರಿಯ ಲೆಸ್ಬಿಯನ್, ಗೇ, ಬೈಸೆಕ್ಷುವಲ್, ಟ್ರ್ಯಾನ್ಸ್ ಮತ್ತು ಇಂಟರ್ಸೆಕ್ಸ್ (ಬದಲೀ-ಲಿಂಗದವರು) ಅಸೋಸಿಯೆಷನ್ 2017ರಲ್ಲಿ ಬಿಡುಗಡೆಮಾಡಿದ ""ವಾರ್ಷಿಕ ಸರ್ಕಾರ ಪ್ರಾಯೋಜಿತ ಸಮಲೈಂಗಿಕ ದ್ವೇಷದ ವರದಿ"[302] (ಆನುವಲ್ ಸ್ಟೇಟ್ ಸ್ಪಾಂನ್ಸರ್ಡ್ ಹೋಮೋಫೋಬಿಯಾ ರಿಪೋರ್ಟ್)ಯಲ್ಲಿ 124 ದೇಶಗಳಲ್ಲಿ ಸಮಲೈಂಗಿಕತೆಗೆ ಶಿಕ್ಷೆ ವಿಧಿಸುವುದಿಲ್ಲ ಎಂಬುದನ್ನು ಗಮನಿಸಲಾಗಿದೆ. ಈ ದೇಶಗಳ

[302] Aengus Carroll And Lucas Ramón Mendos, *Ilga Annual State Sponsored Homophobia Report 2017: A World Survey Of Sexual Orientation Laws: Criminalisation, Protection And Recognition* (12th Edition, 2017), at pp. 26-36

ಕಾನೂನಿನಲ್ಲಿ ಪರಿವರ್ತನೆ ತರಲು ಸರ್ಕಾರೀ ಕಾಯ್ದೆಗಳ ಮೂಲಕ ಶಾಸನವನ್ನು ಬದಲಿಸಲಾಗಿತ್ತು ಇಲ್ಲವೇ ನ್ಯಾಯಾಲಯದ ತೀರ್ಪುಗಳ ಮೊರೆಹೋಗಲಾಗಿತ್ತು.

ಒಂದೇ ಲಿಂಗದ ಜೋಡಿಗಳ ನಡುವಿನ ಸಂಬಂಧಗಳಿಗೆ ಜಗತ್ತಿನಾದ್ಯಂತ ಹಲವು ರಾಷ್ಟ್ರಗಳು ಹೆಚ್ಚಿನ ಭದ್ರತೆಯನ್ನು ಒದಗಿಸಿವೆ. ಮೇಲೆ ಹೇಳಿದ ವರದಿಯ ಪ್ರಕಾರ, ಒಟ್ಟು 24 ದೇಶಗಳಲ್ಲಿ ಸಮಲೈಂಗಿಕರಿಗೆ ಮದುವೆಯ ಹಕ್ಕಿದ್ದು, 28 ದೇಶಗಳು ಒಂದೇ ಲಿಂಗದ ಜೋಡಿಗಳ ಸಾಂಗತ್ಯವನ್ನು ಮಾನ್ಯಮಾಡುತ್ತವೆ. ಹಲವು ದೇಶಗಳಲ್ಲಿ ಸಮಲೈಂಗಿಕ ವ್ಯಕ್ತಿಗಳನ್ನು ಭೇದಭಾವದಿಂದ ಕಾಪಾಡುವ ಮತ್ತು ಮಕ್ಕಳನ್ನು ದತ್ತುಪಡೆಯಲು ನೆರವಾಗುವ ಕಾಯ್ದೆಗಳನ್ನು ಜಾರಿಗೊಳಿಸಲಾಗಿದೆ. ಉದಾಹರಣೆಗೆ, ಯುನೈಟೆಡ್ ಕಿಂಗ್ಡಂನಲ್ಲಿ ಉದ್ಯೋಗ, ವಿದ್ಯೆ, ಸಾಮಾಜಿಕ ಭದ್ರತೆ ಮತ್ತು ವಸತಿ ಕ್ಷೇತ್ರಗಳಲ್ಲಿ ಲೈಂಗಿಕ ನಿಲುವಿನ ಆಧಾರದ ಮೇಲುಕೀಳನ್ನು ಕಾನೂನುಬಾಹಿರವೆಂದು ಪರಿಗಣಿಸಲಾಗುತ್ತದೆ. ಇಂಗ್ಲೆಂಡ್ ಮತ್ತು ವೇಲ್ಸಿನಲ್ಲಿ ಒಂದೇ ಲಿಂಗದವರ ನಡುವಿನ ಮದುವೆಗೆ ಮಾನ್ಯತೆಯಿದೆ.

ಏಪ್ರಿಲ್ 17 2018 ರಂದು ಕಾಮನ್ವೆಲ್ತ್ ಜಂಟಿ ಅಧಿವೇಶನದಲ್ಲಿ ಬ್ರಿಟಿಷ್ ಪ್ರಧಾನ ಮಂತ್ರಿ ತೆರೆಸಾ ಮೇರವರು, ಕಾಮನ್ವೆಲ್ಥ್ ರಾಷ್ಟ್ರಗಳು ತಮ್ಮಲ್ಲಿರುವ ಅಡಗೂಲಜ್ಜಿ ಕಾಲದ ಸಮಲೈಂಗಿಕ ವಿರೋಧೀ ಕಾನೂನುಗಳನ್ನು ತೆಗೆದುಹಾಕಬೇಕೆಂದು ಆಗ್ರಹ ಪಡಿಸುತ್ತಾ, ಅಂತಹ ಕಾನೂನುಗಳನ್ನು ಜಾರಿಮಾಡುವಲ್ಲಿ ಬ್ರಿಟನ್ ವಹಿಸಿದ್ದ ಪಾತ್ರದ ಕುರಿತು ವಿಷಾದ ವ್ಯಕ್ತಪಡಿಸಿದರು[303]. ಅವರ ಭಾಷಣದ ಸೂಕ್ತವಾದ ಕೆಲ ಸಾಲುಗಳು ಕೆಲಕಂಡಂತಿವೆ:

> ಜಗತ್ತಿನಾದ್ಯಂತ, ಹಲವು ವರ್ಷಗಳ ಹಿಂದೆ ಜಾರಿಯಾದ ಸಮಲೈಂಗಿಕ ಸಂಬಂಧಗಳನ್ನು ಅಪರಾಧವೆಂದು ಬಗೆದು, ಮಹಿಳೆಯರು ಮತ್ತು ಹೆಣ್ಣುಮಕ್ಕನ್ನು ಕಾಪಾಡಲಾಗದ ತಾರತಮ್ಯದ ಕಾನೂನುಗಳು ಹಲವು ಜನರ ಬದುಕನ್ನು ಪ್ರಭಾವಿಸಿವೆ. ಹೆಚ್ಚಿನ ಸಂದರ್ಭಗಳಲ್ಲಿ ಅಂತಹ ಕಾನೂನುಗಳನ್ನು ಜಾರಿಗೊಳಿಸಿದ್ದು ನನ್ನ ದೇಶವೇ ಎಂಬುದು ಕೂಡಾ ನನಗೆ ಚೆನ್ನಾಗಿ ತಿಳಿದಿದೆ. ಆ ಕಾನೂನುಗಳು ಆಗಲೂ ತಪ್ಪಾಗಿದ್ದವು, ಈಗಲೂ

[303] Theresa May's Speech at the Commonwealth Joint Forum Plenary available at https://www.gov.uk/government/speeches/pm-speaks-at-the-commonwealth-joint-forum-plenary-17-april-2018

ತಪ್ಪಾಗಿಯೇ ಇವೆ. ಪ್ರಸ್ತುತ ಯು.ಕೆಯ ಪ್ರಧಾನಿಯಾಗಿರುವ ನಾನು ಅಂಥ ಕಾನೂನುಗಳನ್ನು ಹುಟ್ಟುಹಾಕಿದ್ದರ ಬಗ್ಗೆ ಮತ್ತು ಅವುಗಳಿಂದ ಮೊದಲುಗೊಂಡ ಭೇದಭಾವ, ಹಿಂಸೆ ಮತ್ತು ಸಾವನ್ನೂ ಒಳಗೊಂಡ ಪರಂಪರೆ ಇಂದಿಗೂ ಮುಂದುವರೆದಿರುವ ಬಗ್ಗೆ ಮನದಾಳದ ವಿಷಾದವನ್ನು ವ್ಯಕ್ತಪಡಿಸುತ್ತೇನೆ.

11. ಆದಾಗ್ಯೂ, 377 ಪರಿಚ್ಛೇದ ಇಂದಿಗೂ ತನ್ನ ಮೂಲರೂಪದಲ್ಲಿಯೇ ಐ.ಪಿ.ಸಿಯಲ್ಲಿ ಉಳಿದುಕೊಂಡಿದೆ.

12. <u>ನ್ಯಾಯಾಂಗೀಯ ವ್ಯಾಖ್ಯಾನ</u>

12.1. "ನಿಸರ್ಗದ ನಿಯಮಕ್ಕೆ ವಿರುದ್ಧವಾದ ಶಾರೀರಿಕ ಸಂಭೋಗ"ವು 377ನೇ ಪರಿಚ್ಛೇದದ ಅಡಿಯಲ್ಲಿ ಅಪರಾಧವೆಂದು ಪರಿಗಣಿಸಲು ಬೇಕಾದ ಬಹುಮುಖ್ಯವಾದ ಅಂಶವಾಗಿದ್ದು ಅದಕ್ಕೆ ಆಜೀವನ ಕಾರಾವಾಸ ಅಥವಾ ಜೀವಾವಧಿ ಎಂದು ಪರಿಗಣಿಸುವಂತಹ ಹತ್ತು ವರ್ಷಗಳ ವರೆಗಿನ ಸೆರೆವಾಸದ ಶಿಕ್ಷೆ ವಿಧಿಸಬಹುದಾಗಿದೆ. ಅಲ್ಲದೇ, 377ನೇ ಪರಿಚ್ಛೇದವು ಎಲ್ಲ ಲಿಂಗ ಮತ್ತು ವಯಸ್ಸಿನವರಿಗೂ ಅನ್ವಯಿಸುತ್ತದೆ ಹಾಗೂ ಅಂತಹ ಕ್ರಿಯೆಗಳಲ್ಲಿ ಪರಸ್ಪರ ಒಪ್ಪಿಗೆಯಿತ್ತೇ ಎಂಬುದನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ.

12.2. 377ನೇ ಪರಿಚ್ಛೇದದಲ್ಲಿ ಬಳಕೆಯಾಗುವ "ಶಾರೀರಿಕ ಸಂಭೋಗ" ಎಂಬ ಅಂಶವು, ಐ.ಪಿ.ಸಿ.ಯ 375 ಮತ್ತು 497ನೇ ಪರಿಚ್ಛೇದಗಳಲ್ಲಿ ಬಳಸಲಾಗುವ "ಲೈಂಗಿಕ ಸಂಭೋಗ" ಎಂಬ ಅಂಶದಿಂದ ಭಿನ್ನವಾಗಿದೆ. ಅಲ್ಲದೇ, "ಶಾರೀರಿಕ ಸಂಭೋಗ" ಎಂಬ ನುಡಿಗಟ್ಟನ್ನು 377 ಪರಿಚ್ಛೇದದಲ್ಲಾಗಲೀ, ಅಥವಾ ಸಂಹಿತೆಯಲ್ಲಾಗಲೀ ವ್ಯಾಖ್ಯಾನಿಸಲಾಗಿಲ್ಲ.

12.3. ಹಲವು ತೀರ್ಪುಗಳಲ್ಲಿ "ಶಾರೀರಿಕ/ ಕಾರ್ನಲ್" ಎಂಬ ಪದವು ನ್ಯಾಯಾಂಗವೇ ವ್ಯಾಖ್ಯಾನ ಮಾಡುವ ವಿಷಯವಾಗಿದೆ. ವೆಬ್ಸ್ಟರ್ ನ ಹೊಸ ಅಂತಾರಾಷ್ಟ್ರೀಯ ಸಮಗ್ರ ಇಂಗ್ಲೀಷ್ ನಿಘಂಟುವಿನ ಪ್ರಕಾರ, "ಕಾರ್ನಲ್" ಎಂದರೆ,

"1. ಮಾಂಸಕ್ಕೆ ಅಥವಾ ದೈಹಿಕ ಬಯಕೆಗಳಿಗೆ ಸಂಬಂಧಿಸಿದ

2. ಲೈಂಗಿಕ, ಇಂದ್ರಿಯ ಸುಖಕ್ಕೆ ಸಂಬಂಧಿಸಿದ

3. ದೇಹ ಅಥವಾ ಮಾಂಸಕ್ಕೆ ಸಂಬಂಧಿಸಿದ, ಆಧ್ಯಾತ್ಮಿಕವಲ್ಲದ ಕಾರಣ ಲೌಕಿಕವಾದ"

12.4. ಈ ಮೊದಲು, ನ್ಯಾಯಾಲಯಗಳು "ಕಾರ್ನಲ್/ ಶಾರೀರಿಕ" ಎಂಬುದನ್ನು ಶಿಶ್ನ-ಯೋನಿಗಳ ಸಮಾಗಮಕ್ಕೆ ಹೊರತಾದ, ಸಂತಾನೋತ್ಪತ್ತಿಯ ಉದ್ದೇಶ ಇಲ್ಲದಿರುವ ಕ್ರಿಯೆಗಳಿಗೆ ಅನ್ವಯಿಸುತ್ತಿತ್ತು.

ಖಾನು v. ಸಾಮ್ರಾಟ, ಪ್ರಕರಣದಲ್ಲಿ, ಸಿಂಧ್ ಉಚ್ಚನ್ಯಾಯಾಲಯವು ಆರೋಪಿಯು ಸಣ್ಣಮಗುವಿನೊಂದಿಗೆ ಮುಖಮೈಥುನ (Gomorrah *coitus per os)* ನಡೆಸಿರುವ ಪ್ರಕರಣದ ವಿಚಾರಣೆ ನಡೆಸಿ, 377 ಪರಿಚ್ಛೇದದಡಿಯಲ್ಲಿ ಸಜೆಯನ್ನೂ ಘೋಷಿಸಿತು. ಈ ಸಂದರ್ಭದಲ್ಲಿ ನ್ಯಾಯಾಲಯವು, ಮುಖಮೈಥುನ ಕ್ರಿಯೆಯಲ್ಲಿ ದೈಹಿಕ ಸಂಭೋಗಕ್ಕೆ ಇರುವ ನೈಸರ್ಗಿಕ ಉದ್ದೇಶವಾದ ಗರ್ಭಧಾರಣೆಗೆ ಆಸ್ಪದವಿಲ್ಲದಿರುವುದರಿಂದ ಅಂತಹ "ಶಾರೀರಿಕ ಸಂಭೋಗ"ವು ನಿಚ್ಚಳವಾಗಿ ನಿಸರ್ಗದ ನಿಯಮಕ್ಕೆ ವಿರುದ್ಧವಾಗಿದ್ದು ಎಂದು ಅಭಿಪ್ರಾಯ ವ್ಯಕ್ತಪಡಿಸಿತ್ತು.

ಎತ್ತಿನ ಮೂಗಿನ ಹೊಳ್ಳೆಯೊಳಗೆ ಆರೋಪಿಯು ತನ್ನ ಶಿಶ್ನವನ್ನು ತೂರಿಸಿದ ಖಂಡು v. ಸಾಮ್ರಾಟ[304] ಪ್ರಕರಣವನ್ನು ಆಲಿಸಿದ ಲಾಹೋರ್ ಉಚ್ಚನ್ಯಾಯಾಲಯವು, ಸಿಂಧ್ ಉಚ್ಚನ್ಯಾಯಲಯದ ಖಾನು v. ಸಾಮ್ರಾಟ, ಪ್ರಕರಣದ ತೀರ್ಪನ್ನು ಆಧಾರವಾಗಿಟ್ಟುಕೊಂಡು, ಆಯೋಪಿಯ ಕೃತ್ಯಗಳು *coitus per os* ಅನ್ನು ಒಳಗೊಂಡಿದ್ದು, ಅದನ್ನು 377ನೇ ಪರಿಚ್ಛೇದದಡಿಯಲ್ಲಿ ಶಿಕ್ಷಿಸಬಹುದು ಎಂದು ಅಭಿಪ್ರಾಯಪಟ್ಟಿತು.

ಲೊಹಾನಾ ವಸಂತಲಾಲ್ ದೇವಚಂದ್ ಮತ್ತು ಇತರರು v. ರಾಜ್ಯ ಸರ್ಕಾರ[305] ಪ್ರಕರಣದಲ್ಲಿ ಗುಜರಾತ್ ಉಚ್ಚನ್ಯಾಯಾಲಯವು ಚಿಕ್ಕ ಹುಡುಗನೊಂದಿಗೆ ಗುದದ್ವಾರದ ಮೂಲಕ ದೈಹಿಕ ಸಂಭೋಗ ನಡೆಸಿದ ಮತ್ತು ಅವನ ಬಾಯಿಯೊಳಗೆ ಶಿಶ್ನವನ್ನು ತೂರಿಸಿದ ಇಬ್ಬರು ಆರೋಪಿಗಳಿಗೆ ಐ.ಪಿ.ಸಿಯ 377ನೇ ಪರಿಚ್ಛೇದ ಮತ್ತು 511ನೇ ಪರಿಚ್ಛೇದಗಳ ಅಡಿಯಲ್ಲಿ ಸಜೆ ವಿಧಿಸಿತು. ನ್ಯಾಯಾಲಯದ ಪ್ರಕಾರ

> "... ಬಳಸಿರುವ ((377 ಪರಿಚ್ಛೇದದಲ್ಲಿ) ಪದಗಳು ಸಮಗ್ರವಾಗಿವೆ ಮತ್ತು ನನ್ನ ಅಭಿಪ್ರಾಯದಲ್ಲಿ ಲೈಂಗಿಕ ಸಂಭೋಗವನ್ನು ಹೋಲುವ ಈ ಕೃತ್ಯವನ್ನು (ಮುಖ ಮೈಥುನ)

---

[304] AIR 1934 Lah 261 : 1934 Cri LJ 1096

[305] AIR 1968 Guj 252

ಆರೋಪಿಯು ತನ್ನ ಲೈಂಗಿಕ ಬಯಕೆಯನ್ನು ತೀರಿಸಿಕೊಳ್ಳಲು ಬಳಸಿದ್ದು, ಅದನ್ನು ಭಾರತೀಯ ದಂಡ ಸಂಹಿತೆಯ 377ನೇ ಪರಿಚ್ಛೇದದ ಅಡಿಯಲ್ಲಿ ಶಿಕ್ಷಿಸಬಹುದು"

ಮುಂದೊಮ್ಮೆ ಇದೇ ನ್ಯಾಯಾಲಯವು ಫಜಲ್ ರಬ್ ಚೌಧರಿ v. ಬಿಹಾರ ರಾಜ್ಯ ಸರ್ಕಾರ[306] ಸರ್ಕಾರ ಪ್ರಕರಣದಲ್ಲಿ, ಸಣ್ಣ ಹುಡುಗನೊಂದಿಗೆ ಲೈಂಗಿಕ ಕೃತ್ಯವನ್ನೆಸಗಿ ಶಿಕ್ಷೆ ಪಡೆದಿದ್ದ ಆರೋಪಿಯ ಸಜೆಯನ್ನು ಕಡಿತಗೊಳಿಸುತ್ತಾ, ಹೀಗೆ ನುಡಿಯಿತು:

"ಈ ಕೃತ್ಯವು ಐ.ಪಿ.ಸಿಯ 377ನೇ ಪರಿಚ್ಛೇದದ ಅಡಿಯಲ್ಲಿನ ಅಪರಾಧಗಳಲ್ಲಿ ಒಂದಾಗಿದ್ದು, ಲೈಂಗಿಕ ಅಸಭ್ಯತೆಯನ್ನು ಸೂಚಿಸುತ್ತದೆ. ಇಲ್ಲಿ ಯಾವುದೇ ಬಗೆಯ ಒತ್ತಾಯ ನಡೆದಿಲ್ಲ ಎಂದು ಕಂಡುಬರುತ್ತದೆ. ಆದಾಗ್ಯೂ, ಇಂತಹ ಕೃತ್ಯಗಳನ್ನು ಒಪ್ಪುವ ಸಮಾಜವಾಗಲೀ, ಅಥವಾ ಕೆಲ ದೇಶಗಳಲ್ಲಿ ಸಮಲೈಂಗಿಕತೆ ಅಪರಾಧವಾಗಿ ಉಳಿದಿಲ್ಲ ಎಂಬ ವಿಷಯವಾಗಲೀ ನಮ್ಮ ಯೋಚನೆಗಳನ್ನು ಪ್ರಭಾವಿಸಿಲ್ಲ".

(ಒತ್ತು ನೀಡಲಾಗಿದೆ)

ವರ್ಷಾಂತರದಲ್ಲಿ 377ನೇ ಪರಿಚ್ಛೇದದ ಅಡಿಯಲ್ಲಿ ಸಜೆ ನೀಡುವುದಕ್ಕೆ ಬಳಕೆಯಾಗುವ ಮಾನದಂಡಗಳು ಬದಲಾಗುತ್ತಾ ಬಂದಿರುವುದನ್ನು ಗಮನಿಸಬಹುದು. ಖಾನು v. ಸಾಮ್ರಾಟ ಪ್ರಕರಣದಲ್ಲಿ, ಸಂತಾನೋತ್ಪತ್ತಿಯ ಉದ್ದೇಶವಿಲ್ಲದ ಲೈಂಗಿಕ ಕೃತ್ಯಗಳಿಗೆ ಶಿಕ್ಷೆ ದೊರೆತರೆ, ಲೊಹಾನಾ ವಸಂತಲಾಲ್ ದೇವಚಂದ್ ಮತ್ತು ಇತರರು v. ರಾಜ್ಯ ಸರ್ಕಾರ ಪ್ರಕರಣದಲ್ಲಿ ಲೈಂಗಿಕ ಕ್ರಿಯನ್ನು ಹೋಲುವ ಮುಖ ಮೈಥುನಕ್ಕೆ ಶಿಕ್ಷೆ ದೊರೆಯಿತು, ಹಾಗೆಯೇ, ಫಜಲ್ ರಬ್ ಚೌಧರಿ v. ಬಿಹಾರ ರಾಜ್ಯ ಸರ್ಕಾರ ಪ್ರಕರಣದಲ್ಲಿ ಲೈಂಗಿಕ ಅಸಭ್ಯತೆಗಾಗಿ ಸಜೆ ನೀಡಲಾಯಿತು.

**13. ಸಮಲೈಂಗಿಕತೆ - ವೈಕಲ್ಯವಲ್ಲ, ಲೈಂಗಿಕತೆಯ ಭಿನ್ನರೂಪ**

13.1. ಲೈಂಗಿಕ ನಿಲುವುಗಳ ಮೇಲೆ ಆಗಬಹುದಾದ ಜೈವಿಕ, ಬೆಳವಣಿಗೆಗೆ ಸಂಬಂಧಿಸಿದ, ಮಾನಸಿಕ, ಸಾಮಾಜಿಕ ಹಾಗು ಸಾಂಸ್ಕೃತಿಕ ಪ್ರಭಾವಗಳ ಬಗೆಗೆ ಬಹಳಷ್ಟು ವೈಜ್ಞಾನಿಕ ಸಂಶೋಧನೆಗಳು

[306] (1982) 3 SCC 9

ನಡೆದಿವೆಯಾದರೂ, ಲೈಂಗಿಕ ನಿಲುವನ್ನು ಇಂತಹುದೇ ಅಂಶಗಳೊಂದಿಗೆ ತಳುಕು ಹಾಕಲು ಸಾಧ್ಯವಾಗಿಲ್ಲ. ವ್ಯಕ್ತಿಯೊಬ್ಬರ ಲೈಂಗಿಕತೆಯು ನಿಸರ್ಗ ಮತ್ತು ಬೆಳವಣಿಗೆಯ ಸಂಕೀರ್ಣ ಸಹಯೋಗದ ಫಲವೆಂದು ಅರಿಯಲಾಗಿದೆ.

ಲೈಂಗಿಕ ನಿಲುವು ಎಂಬುದು ವ್ಯಕ್ತಿಯ ಅಸ್ಮಿತೆಯ ಆಂತರ್ಯದ ಭಾಗವಾಗಿದ್ದು, ಅದು ಆಯ್ಕೆ ಮಾಡಿಕೊಳ್ಳಬಹುದಾದ ವಿಷಯವೇ ಅಲ್ಲ. ಹರೆಯದ ಹೊಸತರಲ್ಲಿ ಪ್ರಕಟಗೊಳ್ಳುವ ಅದುವು, ಮಾನವ ಲೈಂಗಿಕತೆಯಲ್ಲಿನ ಪ್ರಾಕೃತಿಕ ಭಿನ್ನತೆಯಾಗಿದೆ.

ಲಾರೆನ್ಸ್ ಮತ್ತಿತರರು v. ಟೆಕ್ಸಸ್ ಪ್ರಕರಣದಲ್ಲಿ ಯು.ಎಸ್.ಎ. ಸರ್ವೋಚ್ಚ ನ್ಯಾಯಾಲಯವು ಆಧಾರವಾಗಿಟ್ಟುಕೊಂಡ ಅಮಿಕಿ ಕ್ಯೂರಿಯ[307] ವಿವರಣೆಯು ಹೀಗೆನ್ನುತ್ತದೆ:

> ಭಿನ್ನ ಮತ್ತು ಸಮಲೈಂಗಿಕ ನಡವಳಿಕೆಗಳೆರೆಡೂ ಮಾನವ ಲೈಂಗಿಕತೆಯ ಸಹಜವಾದ ಅಂಶಗಳಾಗಿವೆ. ಇವೆರೆಡನ್ನೂ ಹಲವು ಬಗೆಯ ಮಾನವ ಸಂಸ್ಕೃತಿಗಳು, ಚರಿತ್ರೆಯ ಯುಗಗಳು ಮತ್ತು ಬಹಳಷ್ಟು ಪ್ರಾಣಿ ಪ್ರಬೇಧಗಳಲ್ಲಿ ದಾಖಲಿಸಿಸಲಾಗಿದೆ. ವ್ಯಕ್ತಿಯೊಬ್ಬರಲ್ಲಿ ಆಗುವ ಭಿನ್ನ, ಉಭಯ ಮತ್ತು ಸಮಲೈಂಗಿಕ ನಿಲುವುಗಳ ಬೆಳವಣಿಗೆಯ ನಿಖರ ಕಾರಣಗಳ ಬಗ್ಗೆ ವಿಜ್ಞಾನಿಗಳಲ್ಲಿ ಒಮ್ಮತವಿಲ್ಲ. ಸದ್ಯದ ವೈಜ್ಞಾನಿಕ ಮತ್ತು ವೃತ್ತಿಪರ ವ್ಯಾಖ್ಯಾನದ ಪ್ರಕಾರ, ವಯಸ್ಕರಲ್ಲಿನ ಲೈಂಗಿಕ ನಿಲುವುಗಳಿಗೆ ಆಧಾರಾವಾದ ಮೂಲ ಭಾವನೆ ಮತ್ತು ಆಕರ್ಷಣೆಗಳು ನಡು ಬಾಲ್ಯದಿಂದ ಹರೆಯದ ಮೊದಲ ಹಂತದ ನಡುವಿನ ಅವಧಿಯಲ್ಲಿ ಜನ್ಮತಳೆಯುತ್ತವೆ. ಅಲ್ಲದೇ, ಈ ಬಗೆಯ ಲೈಂಗಿಕ ಸೆಳೆತಗಳು ಮೂಡಲು ಸಾಮಾನ್ಯವಾಗಿ ಯಾವುದೇ ಮುಂಚಿತವಾದ ಲೈಂಗಿಕ ಅನುಭವಗಳ ಅಗತ್ಯವಿರುವುದಿಲ್ಲ. ಬಹುತೇಕ ಅಥವಾ ಬಹಳ ಮಂದಿ ಸಮಲೈಂಗಿಕ ಸ್ತ್ರೀ ಪುರುಷರಿಗೆ ತಮ್ಮ ಲೈಂಗಿಕ

---

[307] Brief for the Amici Curiae American Psychological Association, American Psychiatric Association, National Association of Social Workers, and Texas Chapter of the National Association of Social Workers in *Lawrence et al.* v. *Texas* 539 U.S. 558(2003), available at http://www.apa.org/about/offices/ogc/amicus/lawrence.pdf

ನಿಲುವನ್ನು ಆಯ್ದುಕೊಳ್ಳುಲು ಸಿಗುವ ಅವಕಾಶಗಳು ಬಹಳ ಕಡಿಮೆ ಅಥವಾ ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆ.

( ಒತ್ತು ನೀಡಲಾಗಿದೆ)

13.2. ಕೆ.ಕೆ. ಗುಲಿಯ ಮತ್ತು ಎಚ್.ಎನ್. ಮಲಿಕ್ ರವರ ಲೇಖನವಾದ "ಹೋಮೋಸೆಕ್ಷುವಾಲಿಟೀ: ಎ ಡಿಲೆಮಾ ಇನ್ ಡಿಸ್ಕೋರ್ಸ್"[308] ಹೀಗೆನ್ನುತ್ತದೆ:

ಸಾಮಾನ್ಯವಾಗಿ, ಒಂದು ಲೈಂಗಿಕ ನಿಲುವಾಗಿ, ಸಮಲೈಂಗಿಕತೆಯೆಂಬುದು ವ್ಯಕ್ತಿಗಳು ಮುಖ್ಯವಾಗಿ ತಮ್ಮದೇ ಲಿಂಗದವರೆಡೆಗೆ ಲೈಂಗಿಕವಾದ, ಒಲವಿನ ಮತ್ತು ಪ್ರಣಯದ ಆಕರ್ಷಣೆಯನ್ನು ಅನುಭವಿಸುವ ದೀರ್ಘಕಾಲೀನ ಬಗೆ ಅಥವಾ ವ್ಯವಸ್ಥೆಯಾಗಿದೆ. ಅಲ್ಲದೇ, ಈ ಬಗೆಯ ಆಕರ್ಷಣೆ, ನಡವಳಿಕೆಗಳು, ಅವುಗಳ ಅಭಿವ್ಯಕ್ತಿ ಮತ್ತು ಅಂತಹವೇ ಭಾವನೆಗಳಿರುವ ಸಮುದಾಯದೊಂದಿಗಿನ ಒಡನಾಟಗಳ ಕಾರಣದಿಂದ ವ್ಯಕ್ತಿಗಳಲ್ಲಿ ಮೂಡುವ ವೈಯಕ್ತಿಕ ಇಲ್ಲವೇ ಸಾಮಜಿಕ ಅಸ್ಮಿತೆಯ ಭಾವವನ್ನೂ ಸೂಚಿಸುತ್ತದೆ. ಸಮಲೈಂಗಿಕತೆಯು ತಮ್ಮದೇ ಲಿಂಗದವರೆಡೆಗೆ ಸೆಳೆತಕ್ಕೊಳಗಾಗುವ ಸ್ಥಿತಿಯಾಗಿದ್ದು, ಇಲ್ಲಿ ವ್ಯಕ್ತಿಗಳು ತಮ್ಮದೇ ಲಿಂಗದ ಇತರ ವ್ಯಕ್ತಿಗಳೊಂದಿಗೆ, ಲೈಂಗಿಕ ಮತ್ತು ಭಾವನಾತ್ಮಕ ಸಂಬಂಧ ಹೊಂದಿರುತ್ತಾರೆ.

20ನೇ ಶತಮಾನದಲ್ಲಿ, ಸಮಲೈಂಗಿಕತೆಯು ಪಾಶ್ಚಿಮಾತ್ಯ ಸಮುದಾಯಗಳಲ್ಲಿ ಹಲವು ಸಂಶೋಧನೆಗಳು ಮತ್ತು ಚರ್ಚೆಯನ್ನು ಹುಟ್ಟುಹಾಕಿತು. ಬಹುತೇಕವಾಗಿ ಇದನ್ನು ವಿಕಲತೆ ಅಥವಾ ಮನೋರೋಗವಾಗಿ ನೊಡಲಾಯಿತು. ಆ ಸಮಯದಲ್ಲಿ ಸಮಲೈಂಗಿಕತೆಯ ಬಗ್ಗೆ ಎರಡು ಪ್ರಮುಖವಾದ ಹೊಸಬಗೆಯ ಅಧ್ಯಯನಗಳು ಆಲ್ಫ್ರೆಡ್ ಚಾರ್ಲ್ಸ್ ಕಿನ್ಸೆ ಮತ್ತು ಎವೆಲಿನ್ ಹೂಕರ್ ರವರ ನೇತೃತ್ವದಲ್ಲಿ ನಡೆದುವು. ಅಮೇರಿಕೆಯ ವಯಸ್ಕರ ಲೈಂಗಿಕ

[308] KK Gulia and HN Mallick, *Homosexuality: a dilemma in discourse*, 54 Indian Journal of Physiology and Pharmacology (2010), at pp. 5, 6 and 8

ನಡವಳಿಕೆಯ ಬಗೆಗಿನ ಈ ಅಧ್ಯಯನಗಳಲ್ಲಿ ಪಾಲ್ಗೊಂಡಿದ್ದ ಬಹಳ ಮಂದಿ ಸಮಲೈಂಗಿಕರೆಂದು ತಿಳಿದುಬಂದಿತು. ಅಧ್ಯಯನದಲ್ಲಿ ಪಾಲ್ಗೊಂಡಿದ್ದ ಅಭ್ಯರ್ತಿಗಳನ್ನು ಅವರು ಸಮಲೈಂಗಿಕ ಸಂಬಂಧ ಹೊಂದಿದ್ದರೇ ಎಂದು ಕೇಳಿದಾಗ ಬಂದ ಸಕಾರಾತ್ಮಕ ಉತ್ತರಗಳು ಇಲ್ಲವೆಂಬ ಉತ್ತರಕ್ಕಿಂತ ಹೆಚ್ಚುಕಡಿಮೆ ದುಪಟ್ಟಾಗಿದ್ದವು. ಈ ಅಧ್ಯಯನದ ಫಲಿತಾಂಶವೇ ಎಲ್ಲೆಡೆ ಪ್ರಚಲಿತವಾಗಿರುವ ಕಿನ್ಸೇ ಸ್ಕೇಲ್ ಆಫ್ ಸೆಕ್ಷುವಾಲಿಟಿ, 'ಕಿನ್ಸೇ ಲೈಂಗಿಕತಾ ಮಾಪಕ'. ಈ ಮಾಪಕದಲ್ಲಿ ವ್ಯಕ್ತಿಗಳನ್ನು ಲೈಂಗಿಕತೆಯ ಭಿನ್ನ ಬಗೆಗಳಿಗನುಸಾರವಾಗಿ, 100% ಸಮಲೈಂಗಿಕ ಮತ್ತು 100% ಭಿನ್ನಲೈಂಗಿಕ ಎಂದು ರೇಟ್ ಮಾಡಲಾಗುತ್ತದೆ...."

(ಒತ್ತು ಕೊಡಲಾಗಿದೆ)

13.3. ಅಮೇರಿಕೆಯ ಮಾನೋವಿಜ್ಞಾನ ಸಂಘವು, 1973ನೇ ಇಸವಿಯ ಡಿಸೆಂಬರಿನಲ್ಲಿ "ಸಮಲೈಂಗಿಕತೆ"ಯನ್ನು ಡಿಯಾಗ್ನಾಸ್ಟಿಕ ಅಂಡ್ ಸ್ಟಾಟಿಸ್ಟಿಕಲ್ ಮ್ಯಾನುವಲ್ ಆಫ್ ಸೈಕಾಲಾಜಿಕಲ್ ಡಿಸಾರ್ಡರ್ಸ್ (ಮಾನಸಿಕ ವೈಕಲ್ಯಗಳ ರೋಗಪತ್ತೆ ಹಾಗೂ ಸಾಂಖ್ಯಿಕ ಕೈಪಿಡಿ)ನಿಂದ ತೆಗೆದುಹಾಕಿ, ತಮ್ಮದೇ ಅಥವಾ ಬೇರೆಯ ಲಿಂಗದ ವ್ಯಕ್ತಿಗಳೆಡೆಗೆ ಮೂಡುವ ಲೈಂಗಿಕ ಸೆಳೆತವು ಸಹಜವಾದ ಅವಸ್ಥೆಯೆಂದು ಅಭಿಪ್ರಾಯಪಟ್ಟಿತು[309].

13.4. ವಿಶ್ವ ಅರೋಗ್ಯ ಸಂಸ್ಥೆಯು ತಾನು 1992ನೇ ಇಸವಿಯಲ್ಲಿ ಹೊರತಂದ ಐ.ಸಿ.ಡಿ-10 ರಲ್ಲಿರುವ ಅಂತಾರಾಷ್ಟ್ರೀಯ ರೋಗಗಳ ವಿಂಗಡಣೆಯಲ್ಲಿನ (ಇಂಟರ್ನ್ಯಾಶನಲ್ ಕ್ಲ್ಯಾಸಿಫಿಕೇಷನ್ ಆಫ್ ಡಿಸೀಸಸ್) ಖಾಯಿಲೆಗಳ ಪಟ್ಟಿಯಿಂದ ಸಮಲೈಂಗಿಕತೆಯನ್ನು ಕೈಬಿಟ್ಟಿತು.[310]

13.5. ಭಾರತದಲ್ಲಿ ಕೂಡ, ಭಾರತೀಯ ಮನೋವೈಜ್ಞಾನಿಕ ಸಂಸ್ಥೆ, ಲೈಂಗಿಕ ನಿಲುವು ಮನೋವೈಕಲ್ಯವಲ್ಲ ಎಂದು ಅಭಿಪ್ರಾಯಪಟ್ಟಿದ್ದು[311], ಕೆಳಕಂಡಂತೆ ನುಡಿದಿದೆ

> ಲೈಂಗಿಕ ನಿಲುವನ್ನು ಯಾವುದೇ ರೀತಿಯ ಚಿಕಿತ್ಸೆಯಿಂದ ಬದಲಾಯಿಸಬಹುದು ಎಂಬುದಕ್ಕೆ ಯಾವುದೇ ವೈಜ್ಞಾನಿಕ ಪುರಾವೆಗಳಿಲ್ಲ ಅಲ್ಲದೇ ಅಂತಹ ಪ್ರಯತ್ನಗಳು ವ್ಯಕ್ತಿಯಲ್ಲಿ ಆತ್ಮಗೌರವದ ಕೊರತೆಯನ್ನುಂಟುಮಾಡಿ ಅವರನ್ನು ಕಳಂಕಿತರನ್ನಗಿಸುವ ಸಂಭವವಿದೆ.

---

309 Jack Drescher, *Out of DSM: Depathologizing Homosexuality*, 5(4) Behavioral Sciences (2015), at p. 565

310 *The ICD-10 classification of mental and behavioural disorders*: *clinical descriptions and diagnostic guidelines*, World Health Organization, Geneva (1992) available at http://www.who.int/classifications/icd/en/bluebook.pdf

311 Indian Psychiatry Society: "Position statement on Homosexuality" IPS/Statement/02/07/2018 available at http://www.indianpsychiatricsociety.org/upload_images/imp_download_files/1531125054_1.pdf

13.6. ಈ ನಿಟ್ಟಿನಲ್ಲಿ ಮತ್ತೊಂದು ವಿಷಯವನ್ನು ಉಲ್ಲೇಖಮಾಡುವುದು ಸೂಕ್ತ. ಮಾನಸಿಕ ಆರೋಗ್ಯ ಕಾಯ್ದೆಯ 3ನೇ ಪರಿಚ್ಛೇದದ ಪ್ರಕಾರ, "ಮನೋರೋಗ"ವೆಂದು ಯಾವುದನ್ನು ಕರೆಯಬಹುದು ಎಂಬುದನ್ನು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯವಾಗಿ ಒಪ್ಪಿತವಾದ ವೈದ್ಯಕೀಯ ಮಾನದಂಡಗಳ ಮೇಲೆ ನಿರ್ಧರಿಸಬೇಕಾಗುತ್ತದೆ ಮತ್ತು ಈ ಮಾನದಂಡಗಳಲ್ಲಿ, ಇಂಟರ್ನ್ಯಾಶನಲ್ ಕ್ಲ್ಯಾಸಿಫಿಕೇಷನ್ ಆಫ್ ಡಿಸೀಸಸ್ ಕೂಡಾ ಸೇರಿದೆ.

14. <u>ಒಪ್ಪಿಗೆಯಿರುವ ವಯಸ್ಕರಿಗೆ 377ನೇ ಪರಿಚ್ಛೇದವನ್ನು ಅನ್ವಯಿಸಿದರೆ ಅದು ಸಂವಿಧಾನದ 14ನೇ ಕಲಮಿನ ಉಲ್ಲಂಘನೆಯಾಗುತ್ತದೆ.</u>

14.1. 377ನೇ ಪರಿಚ್ಛೇದದ ಸಾಂವಿಧಾನಿಕ ಮಾನ್ಯತೆಯ ವಿರುದ್ಧ ಅರ್ಜಿದಾರರು ಎತ್ತಿರುವ ಪ್ರಮುಖ ಪ್ರಶ್ನೆಗಳು, ಸಂವಿಧಾನದ 14ನೇ ಕಲಮನ್ನು ಆಧರಿಸಿರುತ್ತವೆ. 14ನೇ ಕಲಮು ಸಮಾನತೆಯ ಸಿದ್ಧಾಂತವನ್ನು ಮೂಲಭೂತವಾ ಹಕ್ಕಾಗಿ ಸ್ಥಾಪಿಸಿದ್ದು, ಸರ್ಕಾರವು ಭಾರತದ ಗಡಿಯೊಳಗೆ ಯಾವುದೇ ವ್ಯಕ್ತಿಗೆ (ಅವರು ಇತರರಿಗಿಂತ ಭಿನ್ನವಿದ್ದಾಗ್ಯೂ) ಕಾನೂನಿನಡಿಯಲ್ಲಿ ಸಮಾನತೆ ಅಥವಾ ಕಾನೂನಿನ ಸಮಾನ ರಕ್ಷಣೆಯನ್ನು ನಿರಾಕರಿಸುವ ಹಾಗಿಲ್ಲವೆಂದು ಕಡ್ಡಾಯಗೊಳಿಸುತ್ತದೆ. ಅಲ್ಲದೇ ಈ ಕಲಮು ದೇಶದ ಎಲ್ಲ ವ್ಯಕ್ತಿಗಳನ್ನು ಸಮಾನವಾಗಿ ನಡೆಸಿಕೊಳ್ಳುವಿಕೆಯ ಅಧಿಕಾರವನ್ನು ಗುರುತಿಸಿ ಖಾತ್ರಿಪಡಿಸುತ್ತದೆ.

ಅರ್ಜಿದಾರರು, 377ನೇ ಪರಿಚ್ಛೇದವು ಒಂದೇ ಲಿಂಗದ ವಯಸ್ಕರು ಖಾಸಗೀಯಾಗಿ ಒಪ್ಪಿಗೆಯ ಲೈಂಗಿಕ ಸಂಬಂಧ ಹೊಂದುವುದುದನ್ನು ತಡೆದು ಅವರ ವಿರುದ್ಧ ತಾರತಮ್ಯ ಎಸಗುವುದರಿಂದ ಅದು 14ನೇ ಕಲಮಿನ ಉಲ್ಲಂಘನೆಯಾಗಿದೆ ಎಂದು ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ.

14.2. ಕಾನೂನೊಂದು ವ್ಯಕ್ತಿ ಅಥವಾ ಸಮುದಾಯವೊಂದನ್ನು ಇತರರಿಗಿಂತ ಭಿನ್ನವಾಗಿ ನಡೆಸಿಕೊಳ್ಳಬಹುದು ಎಂದು 14ನೇ ಕಲಮಿನಡಿಯಲ್ಲಿ ವಿಂಗಡಿಸಲು ನಡೆಸುವ ಅವಳಿ-ಪರೀಕ್ಷೆಯ ಪ್ರಕಾರ:

i. ವ್ಯಕ್ತಿ ಅಥವಾ ಸಮುದಾಯಗಳ ಅರ್ಥವಾಗಬಲ್ಲ ಭಿನ್ನತೆ (ಇಂಟೆಲಿಜೆಬಲ್ ಡಿಫರೆಂಶಿಯಾ)ಯ ಅಧಾರದ ಮೇಲೆ ಕಾನೂನಿನ ತಾರ್ಕಿಕ ವಿಂಗಡಣೆ ನಡೆಯಬೇಕು

ii. ಈ ವಿಂಗಡಣೆಗೂ, ಸದರಿ ಕಾನೂನಿನಿಂದ ಸಾಧಿಸಬೇಕಿರುವ ಉದ್ದೇಶಕ್ಕೂ ನಡುವೆ ತರಕಬದ್ಧವಾದ ಸಂಬಂಧವಿರಬೇಕು

14.3. 377ನೇ ಪರಿಚ್ಛೇದವು ಭಿನ್ನವಾದ ಲೈಂಗಿಕ ನಿಲುವುಗಳುಳ್ಳ ಎರಡು ವರ್ಗದ, ಎಂದರೆ, ಎಲ್.ಜಿ.ಬಿ.ಟಿ. ವ್ಯಕ್ತಿಗಳು ಮತ್ತು ಭಿನ್ನಲಿಂಗಾಸಕ್ತ ವ್ಯಕ್ತಿಗಳನ್ನು, ಬೇರೆಬೇರೆಯಾಗಿಯೇ ನಡೆಸಿಕೊಳ್ಳುತ್ತದೆ. 377ನೇ ಪರಿಚ್ಛೇದವು ಶಿಶ್ನ-ಯೋನಿಗಳ ಸಮಾಗಮವನ್ನು ಒಳಗೊಳ್ಳದ ಎಲ್ಲಾ ಬಗೆಯ ಸಂಭೋಗವನ್ನೂ ಶಿಕ್ಷಿಸುವ ಕಾರಣ, ಎಲ್.ಜಿ.ಬಿ.ಟಿ. ವ್ಯಕ್ತಿಗಳ ನಡುವೆ ನಡೆಯುವ ಎಲ್ಲಾ ರೀತಿಯ ಸ್ವ-ಇಚ್ಛೆಯ ಮತ್ತು ಒಪ್ಪಿಗೆಯ ಸಂಬಂಧಗಳನ್ನು ಒಟ್ಟಾರೆಯಾಗಿ ಅಪರಾಧೀಕರಿಸಲಾಗುತ್ತದೆ.

377ನೇ ಪರಿಚ್ಛೇದದ ಕಾರಣದಿಂದ ಮತ್ತು ಅದರ ಫಲಶೃತಿಯಾಗಿ, ಒಂದೆಡೆ ಒಪ್ಪಿಗೆಯ ಭಿನ್ನಲೈಂಗಿಕ ಸಂಬಂಧಕ್ಕೆ ಕಾನೂನಿನ ಮಾನ್ಯತೆ ದೊರೆತರೆ, ಮತ್ತೊಂದೆಡೆ, ಎಲ್.ಜಿ.ಬಿ.ಟಿ. ವ್ಯಕ್ತಿಗಳ ನಡುವಿನ ಒಪ್ಪಿಗೆಯ ಸಂಬಂಧವನ್ನು "ಇಂದ್ರಿಯ ಸುಖಕ್ಕೆ ಸಂಬಂಧಿಸಿದುದು" ಮತ್ತು ನಿಸರ್ಗದ ನಿಯಮಕ್ಕೆ ವಿರುದ್ದವಾದುದೆಂದು ಪರಿಗಣಿಸಲಾಗುತ್ತದೆ. ಎಂದರೆ, 377ನೇ ಪರಿಚ್ಛೇದವು ಕೃತಕವಾದ ಇಬ್ಬಂದಿತನವನ್ನು ಉಂಟುಮಾಡುತ್ತದೆ. ವ್ಯಕ್ತಿಗಳ ನೈಸರ್ಗಿಕವಾದ ಅಥವಾ ಅಂತರ್ಗತವಾದ ಲೈಂಗಿಕ ನಿಲುವು ಅವರೆಡೆಗೆ ತಾರತಮ್ಯ ನಡೆಸಲು ಕಾರಣವಾಗಬಾರದು. ಒಂದು ಕಾನೂನು ವ್ಯಕ್ತಿಗಳ ಆಂತರ್ಯದ ಮುಖ್ಯ ಲಕ್ಷಣವೊಂದರ ಆಧಾರದ ಮೇಲೆ ಭೇದಭಾವ ಮಾಡುವ ಸಂದರ್ಭದಲ್ಲಿ, ಅದನ್ನು ಅರ್ಥವಾಗಬಲ್ಲ ಭಿನ್ನತೆಯ ಆಧಾರದಲ್ಲಿ ವ್ಯಕ್ತಿ ಅಥವಾ ಸಮುದಾಯವೊಂದನ್ನು ಇತರರಿಗಿಂತ ಭಿನ್ನವಾಗಿ ನಡೆಸಿಕೊಳ್ಳುವಂತೆ ವಿಂಗಡಿಸಲು ಬರುವುದಿಲ್ಲ.

14.4. ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ v. ಭಾರತ ಸರ್ಕಾರ (ನಾಲ್ಸಾ) ಮತ್ತು ಇತರರು ಪ್ರಕರಣದಲ್ಲಿ ಈ ನ್ಯಾಯಾಲಯವು ಲಿಂಗಪರಿವರ್ತಿತತಿಗೆ ಕಾನೂನುಗಳ ಸಮಾನ ರಕ್ಷಣೆ ನೀಡಿತು. ಹಾಗಾಗಿ, ಅದೇ ರಕ್ಷಣೆಯನ್ನು ಎಲ್.ಜಿ.ಬಿ.ಟಿ. ವ್ಯಕ್ತಿಗಳಿಗೆ ಕೊಡದೆ ಇರುವುದಕ್ಕೆ ಕಾರಣವಿಲ್ಲ.

14.5. ವ್ಯಕ್ತಿಯೊಬ್ಬರ ಲೈಂಗಿಕ ನಿಲುವು ಅವರ ಅಸ್ತಿತ್ವದ ಆಂತರಿಕ ಅಂಶವಾಗಿದ್ದು, ಅದು ಅವರ ವ್ಯಕ್ತಿತ್ವ ಮತ್ತು ಅಸ್ಮಿತೆಗೆ ಸಂಬಂಧಿಸಿದುದು. ವ್ಯಕ್ತಿಗಳ ನಡುವೆ ಅವರ ಆಂತರ್ಯದ ಸ್ವಭಾವದ ಆಧಾರದಲ್ಲಿ ತಾರತಮ್ಯ

ಮಾಡುವ ವರ್ಗೀಕರಣವು ಅವರ ಮೂಲಭೂತ ಹಕ್ಕುಗಳನ್ನು ಹತ್ತಿಕ್ಕುತ್ತದೆಯಲ್ಲದೆ, ಅದು ಸಾಂವಿಧಾನಿಕ ನೈತಿಕತೆಯ ಸವಾಲನ್ನು ಎದುರಿಸಲಾರದು.

14.6. ಸಮಕಾಲೀನ ನಾಗರಿಕ ನ್ಯಾಯಶಾಸ್ತ್ರದ ಪ್ರಕಾರ, ರಾಷ್ಟ್ರಗಳು ಹೆಚ್ಚಿನ ಸಂಖ್ಯೆಯಲ್ಲಿ ಸಮಲೈಂಗಿಕ ಸಂಬಂಧಗಳನ್ನು ಗುರುತಿಸುತ್ತಿರುವ ಹಿನ್ನೆಲೆಯಲ್ಲಿ, ಅಂತಹ ಸಂಬಂಧಗಳನ್ನು "ಅಸಭ್ಯ" "ವಕ್ರ" ಅಥವಾ "ಅನೈಸರ್ಗಿಕ" ಎಂದು ವ್ಯಾಖ್ಯಾನಿಸುವುದು ಪ್ರತಿಗಾಮಿಯಾದ ನಿಲುವಾಗುತ್ತದೆ.

14.7. ಅತ್ಯಾಚಾರದ ಅಪರಾಧವನ್ನು ವಿವರಿಸುವ 375ನೇ ಪರಿಚ್ಛೇದವುದ ಪ್ರಕಾರ ಗಂಡೊಬ್ಬ, ಹೆಣ್ಣಿನ ಇಚ್ಛೆಗೆ ವಿರುದ್ಧವಾಗಿ, ಅವಳ ಒಪ್ಪಿಗೆ ಪಡೆಯದೇ ಅಥವಾ ಬೆದರಿಕೆ ಹಾಕಿ ಒಪ್ಪಿಗೆ ಪಡೆದು ನಡೆಸುವ ಶಿಶ್ನ ಒಳತೂರಿಸುವಿಕೆಯ ಕೃತ್ಯವು ಅತ್ಯಾಚಾರವೆಂದು ಕರೆಯಲ್ಪಡುತ್ತದೆ. ಒಳತೂರಿಸುವಿಕೆಯ ಕೃತ್ಯಗಳಲ್ಲಿ (2013ರ ತಿದ್ದುಪಡಿಯ ನಂತರ) ಗುದಸಂಭೋಗ ಮತ್ತು ಮುಖಮೈಥುನಗಳೂ ಸೇರಿವೆ.

ತಿದ್ದುಪಡಿಗೊಂಡ ಈ ನಿಯಮದಿಂದಾಗಿ, ಹೆಣ್ಣಿನ ಒಪ್ಪಿಗೆ ಪಡೆದು ನಡೆಸುವ ಒಳತೂರಿಸುವಿಕೆಯ ಕ್ರಿಯೆಗಳು 375 ಪರಿಚ್ಛೇದಡಿಯಲ್ಲಿ ಶಿಕ್ಷಾರ್ಹವಲ್ಲ ಎಂದು ಮುಖ್ಯವಾಗಿ ತಿಳಿದುಕೊಳ್ಳಬಹುದಾಗಿದೆ. ಒಂದೆಡೆ 375ನೇ ಪರಿಚ್ಛೇದ ಒಪ್ಪಿಗೆಯ ಒಳತೂರಿಸುವಿಕೆಯ ಕ್ರಿಯೆಗಳಿಗೆ ಒಪ್ಪಿಗೆ ಸೂಚಿಸಿದರೆ (ಒಳತೂರಿಸುವಿಕೆಯ ವ್ಯಾಖ್ಯಾನವು ಮುಖ್ಯಮೈಥುನ ಮತ್ತು ಗುದಸಂಭೋಗಗಳನ್ನು ಒಳಗೊಂಡಿದೆ), ಮತ್ತೊಂದೆಡೆ 377ನೇ ಪರಿಚ್ಛೇದವು ಒಳತೂರಿಸುವಿಕೆಯ ಅವೇ ಕೃತ್ಯಗಳನ್ನು ಒಪ್ಪಿಗೆಯಿದ್ದಾಗ್ಯೂ ಶಿಕ್ಷಾರ್ಹವಾಗಿಸುತ್ತದೆ. ಇದು ಕಾನೂನಿನಲ್ಲಿ ಇಬ್ಬಂದಿತನಕ್ಕೆ ಎಡೆಮಾಡಿಕೊಡುತ್ತದೆ.

14.8. 377ನೇ ಪರಿಚ್ಛೇದಡಿಯಲ್ಲಿ ಒಪ್ಪಿಗೆಯ ಲೈಂಗಿಕ ಸಂಬಂಧಕ್ಕೆ ಇರುವ ನಿರ್ಬಂಧಕ್ಕೆ ಯಾವುದೇ ವೈಚಾರಿಕ ನೆಲೆಗಟ್ಟಿನ ಆಧಾರವಿಲ್ಲ. ವಯಸ್ಕರ ನಡುವೆ ಖಾಸಗೀಯಾಗಿ ನಡೆಯುವ ಒಪ್ಪಿಗೆಯ ಲೈಂಗಿಕ ಅಭಿವ್ಯಕ್ತಿ ಮತ್ತು ಅನ್ಯೋನ್ಯತೆಯನ್ನು "ನಿಸರ್ಗದ ನಿಯಮಕ್ಕೆ ವಿರುದ್ಧವಾದ ದೈಹಿಕ ಸಂಭೋಗ" ಎಂದು ಪರಿಗಣಿಸಲು ಸಾಧ್ಯವಿಲ್ಲ.

14.9. ಶಾಯರ ಬಾನೋ v. ಭಾರತ ಸರ್ಕಾರ ಮತ್ತು ಇತರರು ಪ್ರಕರಣದ ತಮ್ಮ ಸಹಮತದ ಅಭಿಪ್ರಾಯದಲ್ಲಿ, ಸರ್ಕಾರ ಎಲ್ಲರಿಗೂ ಸಮಾನವಾಗಿ ಕಾನೂನಿನ ರಕ್ಷಣೆ ಒದಗಿಸುವುದನ್ನು ಕಡ್ಡಾಯ ಮಾಡುವ

14ನೇ ಕಲಮಿನ ಎರಡನೇ ಭಾಗಕ್ಕೆ ಒತ್ತು ನೀಡಿದ ನ್ಯಾ. ನಾರಿಮನ್, 14ನೇ ಕಲಮಿನ ಒಂದು ಭಾಗವೇ ಆದ ಸ್ಪಷ್ಟ ನಿರಂಕುಶತೆಯ ಸಿದ್ಧಾಂತವನ್ನು ವಿವರಿಸಿರುತ್ತಾರೆ. ಹಿಂದಿನ ವಾಕ್ಯಗಳಲ್ಲಿ ಚರ್ಚಿಸಿದ, ಸಾಂಪ್ರದಾಯಿಕವಾಗಿ ಬಳಸುವ ವರ್ಗೀಕರಣದ ಅವಳಿ ಸವಾಲುಗಳ ಹೊರತಾಗಿ, ಒಂದು ಕಾಯ್ದೆ ಅಥವಾ ಕಾಯ್ದೆಯ ಭಾಗವೊಂದನ್ನು ಅದು ಸ್ಪಷ್ಟವಾಗಿ ನಿರಂಕುಷವಾಗಿದೆ ಎಂಬ ನೆಲೆಯಲ್ಲಿ ಕೂಡ ತೆಗೆದುಹಾಕಬಹುದು.

ಶಾಯರಾ ಬಾನೋ v. ಭಾರತ ಸರ್ಕಾರ (ಮೇಲ್ಕಂಡ) ಪ್ರಕರಣದ ತೀರ್ಪಿನ ಈ ಕೆಳಗಿನ ವಾಕ್ಯ ಉಪಯುಕ್ತವಾಗಿದೆ:

> 101..... ಹಾಗಾಗಿ, ಸ್ಪಷ್ಟ ನಿರಂಕುಶತ್ವ ಎಂಬುದು ಶಾಸಾಕಾಂಗವು ಅಕಾರಣವಾಗಿ, ಅತಾರ್ಕಿಕವಾಗಿ ಮತ್ತು ಸರಿಯಾದ ಸೈದ್ಧಾಂತಿಕ ಹಿನ್ನೆಲೆಯಿಲ್ಲದೆ ಪರಿಚಯಿಸಿರುವ ಅಂಶವಾಗಿದೆ. ಅಲ್ಲದೆ, ಶಾಸನವೊಂದು ಅಸಂಬದ್ಧವೂ ವಿಪರೀತವು ಆಗಿದೆಯೆಂದರೆ, ಅದನ್ನು ಸ್ಪಷ್ಟವಾಗಿ ನಿರಂಕುಶ ಎಂದು ಕರೆಯಬಹುದು.

ಹೀಗಾಗಿ, ವ್ಯಕ್ತಿಯ ಆಯ್ಕೆಗೆ “ಅವಕಾಶವೇ ಇಲ್ಲದಿರುವ ಅಥವಾ ಅತ್ಯಂತ ಕಡಿಮೆ ಅವಕಾಶ”ವಿರುವ ವಿಚಾರವಾದ ಲೈಂಗಿಕ ನಿಲುವನ್ನು ಅಪರಾಧಿಕಾರಣಕ್ಕೆ ಆಧಾರವಾಗಿ ಪರಿಗಣಿಸಿ, ವಯಸ್ಕರ ನಡುವಿನ ಒಪ್ಪಿಗೆಯ ಖಾಸಗೀ ಲೈಂಗಿಕ ಕ್ರಿಯೆಗಳನ್ನೂ ಅಪರಾಧೀಕರಿಸುವ 377ನೇ ಪರಿಚ್ಛೇದವು ಯಾವುದೇ ಗಟ್ಟಿಯಾದ ವೈಚಾರಿಕ ಸಿದ್ಧಾಂತದ ಮೇಲೆ ರೂಪುಗೊಂಡಿಲ್ಲ.

ಹೀಗಾಗಿ, 377ನೇ ಪರಿಚ್ಛೇದವು 14ನೇ ಕಲಮಿನಡಿಯ ಅವಳಿ-ಸವಾಲಿನಲ್ಲಿ ವಿಫಲವಾಗಿರುವುದರ ಜೊತೆಗೆ, ಸ್ಪಷ್ಟಾವಾಗಿ ನಿರಂಕುಶವೂ ಆಗಿರುವುದರಿಂದ, ಸಂವಿಧಾನದ 14ನೇ ಕಲಮಿಗೆ ಚ್ಯುತಿಯನ್ನುಂಟು ಮಾಡುತ್ತದೆ

ಹಾಗೆಯೇ, 377ನೇ ಪರಿಚ್ಛೇದದಲ್ಲಿ ದಂಡನಾ ನಿಯಮದ ನಿರ್ಣಾಯಕ ಸಿದ್ಧಾಂತವಾಗಿ ಬಳಕೆಯಾಗಿರುವ "ನಿಸರ್ಗದ ನಿಯಮಕ್ಕೆ ವಿರುದ್ಧವಾದ ಶಾರೀರಿಕ ಸಂಭೋಗ" ಎಂಬ ನುಡಿಗಟ್ಟು, ಅತ್ಯಂತ ಅಸ್ಪಷ್ಟ ಮತ್ತು

ವ್ಯಕ್ತಿನಿಷ್ಠವಾಗಿದ್ದು, ಕಾಯ್ದೆಯನ್ನು ಎಲ್.ಜಿ.ಬಿ.ಟಿ. ಸಮುದಾಯದ ಸದಸ್ಯರ ವಿರುದ್ಧ ಬೇಕಾದಂತೆ ಬಳಸುವುದಕ್ಕೆ ಎಡೆ ಮಾಡಿಕೊಡುತ್ತದೆ.

**15. <u>377ನೇ ಪರಿಚ್ಛೇದವು 15ನೇ ಕಲಮಿಗೆ ಚ್ಯುತಿಯನ್ನುಂಟು ಮಾಡುತ್ತದೆ</u>**

15ನೇ ಕಲಮು, ಸರ್ಕಾರ ಯಾವುದೇ ವ್ಯಕ್ತಿಯ ವಿರುದ್ಧ ಧರ್ಮ, ಜನಾಂಗ, ಜಾತಿ, ಲಿಂಗ ಮತ್ತು ಹುಟ್ಟಿದ ಸ್ಥಳದ ಆಧಾರದ ಮೇಲೆ ಭೇದಭಾವ ಮಾಡುವುದನ್ನು ನಿರ್ಬಂಧಿಸುತ್ತದೆ. ರಾಜನೈತಿಕವಾಗಿ, ಸಾಮಾಜಿಕವಾಗಿ ಅಥವಾ ಆರ್ಥಿಕವಾಗಿ ಚಾರಿತ್ರಿಕ ಅನಾನುಕೂಲವನ್ನು ಅನುಭವಿಸಿರುವಂತಹ ನಾಗರಿಕರಿಗೆ ರಕ್ಷಣೆಯನ್ನು ಖಾತ್ರಿ ಪಡಿಸುವುದು ಈ ಕಾಯ್ದೆಯ ಉದ್ದೇಶವಾಗಿರುತ್ತದೆ.

15.1. ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ v. ಭಾರತ ಸರ್ಕಾರ ಮತ್ತು ಇತರರು (ಮೇಲ್ಕಂಡ) ಪ್ರಕರಣದಲ್ಲಿ 15ನೇ ಕಲಮಿನಲ್ಲಿರುವ "ಲಿಂಗ" ಎಂಬ ಪದದ ವ್ಯಾಪ್ತಿಯಲ್ಲಿ, ಲೈಂಗಿಕ ಅಸ್ಮಿತೆಯನ್ನು ಒಳಗೊಳ್ಳುವಂತೆ ಈ ನ್ಯಾಯಾಲಯವು ವಿಸ್ತಾರವಾಗಿ ವ್ಯಾಖ್ಯಾನಿಸಿತ್ತು. ಆ ತೀರ್ಪಿನ 66ನೇ ವಾಕ್ಯ ಹೇಗೆ ಹೇಳುತ್ತದೆ.

> "66..ಲೈಂಗಿಕ ಮತ್ತು ಜೈವಿಕವಾದ ಅಂಶಗಳೆರೆಡೂ, ಲಿಂಗ ಎಂಬುದರ ವಿಶಿಷ್ಟ ಭಾಗಗಳು. ಜೈವಿಕವಾದ ಅಂಶಗಳು ಖಂಡಿತವಾಗಿ ಜನನೇಂದ್ರಿಯಗಳು, ವರ್ಣತಂತುಗಳು (), ಮತ್ತು ಲಿಂಗಕ್ಕೆ ಸಂಬಂಧಿಸಿದ ಇತರ ಲಕ್ಷಣಗಳನ್ನು ಒಳಗೊಂಡಿದ್ದರೆ, ಲೈಂಗಿಕ ಅಂಶಗಳು ವ್ಯಕ್ತಿಯೊಬ್ಬರಲ್ಲಿ ತಮ್ಮ ಬಗ್ಗೆ ಇರುವ ಪರಿಕಲ್ಪನೆ, ಮತ್ತು ತಮ್ಮ ಲೈಂಗಿಕ ಅಸ್ಮಿತೆ ಮತ್ತು ನಡತೆಗಳ ಬಗ್ಗೆ ವ್ಯಕ್ತಿಗೆ ಇರುವ ಆಳವಾದ ಮಾನಸಿಕ ಮತ್ತು ಭಾವನಾತ್ಮಕ ಅರಿವುಗಳು ಸೇರಿವೆ. ಹೀಗಾಗಿ, 15 ಮತ್ತು 16ನೆ ಕಲಮುಗಳಡಿಯಲ್ಲಿ ಬರುವ ಲಿಂಗಾಧಾರಿತ ತಾರತಮ್ಯದಲ್ಲಿ, ಲೈಂಗಿಕ ಅಸ್ಮಿತೆಯ ಆಧಾರದಲ್ಲಿ ನಡೆಯುವ ಮೆಲುಕೇಳನ್ನು ಕೂಡಾ ಸೇರಿದೆ. 15 ಮತ್ತು 16ನೆ ಕಲಮುಗಳಲ್ಲಿ ಬಳಕೆಯಾಗಿರುವ "ಲಿಂಗ" ಎಂಬ ಅಭಿವ್ಯಕ್ತಿಯು, ಗಂಡು ಮತ್ತು ಹೆಣನೆಂಬ ಜೈವಿಕವಾದ ಲಿಂಗ ಮಾತ್ರವಲ್ಲದೆ, ತಮ್ಮನ್ನು ಗಂಡು ಅಥವಾ

ಹೆಣ್ಣು ಎಂದು ಪರಿಗಣಿಸಿಕೊಳ್ಳದ ಜನರನ್ನು ಕೂಡ ಒಳಗೊಳ್ಳುವ ಉದ್ದೇಶ ಹೊಂದಿದೆ. (ಒಟ್ಟು ನೀಡಲಾಗಿದೆ ಮತ್ತು ಆಂತರಿಕ ಉಲ್ಲೇಖಗಳನ್ನು ಬೇಕೆಂದೇ ಕೈಬಿಡಲಾಗಿದೆ)

15ನೆ ಕಲಮಿನಲ್ಲಿ ಬಳಕೆಯಾಗಿರುವ "ಲಿಂಗ" ಎಂಬ ಎಂಬುದು ವ್ಯಕ್ತಿಯ ಜೈವಿಕ ಅಂಗಗಳಿಗೆ ಸೀಮಿತವಾಗಿರದೆ, ಅವರ ಲೈಂಗಿಕ ಅಸ್ಮಿತೆ ಮತ್ತು ನಡತೆಗಳನ್ನೂ ಒಳಗೊಳ್ಳುತ್ತದೆ.

ಜೆ.ಎಸ್. ವರ್ಮಾ ಆಯೋಗವು, 15ನೇ[312] ಕಲಮಿನಡಿಯಲ್ಲಿರುವ ಲಿಂಗ ಎಂಬುದು "ಲೈಂಗಿಕ ನಿಲುವನ್ನು' ಸಹ ಒಳಗೊಂಡಿರಬೇಕು ಎಂದು ಶಿಫಾರಸು ಮಾಡಿತ್ತು

> "ನಮ್ಮ ಸಮಾಜ ಹಲ ಬಗೆಯ ಲೈಂಗಿಕ ನಿಲುವುಗಳನ್ನು ಮಾನವೀಯ ವಾಸ್ತವ ಎಂದು ಗುರುತಿಸುವ ಅಗತ್ಯವಿದೆ ಎಂಬುದನ್ನು ನಾವು ಮನಗಾಣಬೇಕು. ಸಮಲೈಂಗಿಕತೆ, ಉಭಯಲೈಂಗಿಕತೆ ಮತ್ತು ಸ್ತ್ರೀಸಮಲೈಂಗಿಕತೆಯ ಜೊತೆಗೆ, ಲಿಂಗಪರಿವರ್ತಿತ ಸಮುದಾಯವೂ ಇದೆ. ಲೈಂಗಿಕ ನಿಲುವುಗಳ ಬಗೆಗಿನ ವೈಜ್ಞಾನಿಕ ಅರಿವಿನ ಕೊರತೆಯಿಂದ ಸಮಲೈಂಗಿಕತೆಯನ್ನು ಮನೋರೋಗವೆಂದು ತಿಳಿದಿದ್ದ ಮುಂದುವರೆದ ಸಮುದಾಯಗಳು ಕೂಡ ಅದನ್ನು ಮನೋವೈಕಲ್ಯದ ಪಟ್ಟಿಯಿಂದ ಕೈಬಿಡಬೇಕಾಯಿತು. ಈಗ ಸಮಲೈಂಗಿಕತೆಯು ಜೀವವಿಕಾಸ, ನರವೈಜ್ಞಾನಿಕ ಕಾರಣಗಳು ಮತ್ತು ಸ್ವಲ್ಪಮಟ್ಟಿಗೆ ವ್ಯಕ್ತಿಯ ಪರಿಸ್ಥಿತಿಗಳಿಂದಾಗಿ ಉಂಟಾಗುವ ಮೂರೂ ಆಯಾಮಗಳ ಬೆಳವಣಿಗೆ ಎಂದು ಅರಿತುಕೊಳ್ಳಲಾಗಿದೆ. ಹಾಗೆಯೇ, ಭಾರತೀಯ ಸಂವಿಧಾನದ 15(ಸಿ) ಕಲಮು, "ಲಿಂಗ" ಎಂಬ ಪದವನ್ನು ಲೈಂಗಿಕ ನಿಲುವನ್ನೂ ಒಳಗೊಂಡಂತೆ ಬಳಸುತ್ತದೆ ಎಂಬುದು ನಮಗೆ ಸ್ಪಷ್ಟವಾಗಿದೆ"

[312] Report of the Committee on Amendments to Criminal Law (2013)

ಹೀಗಾಗಿ, 15ನೆ ಕಲಮಿನಡಿಯಲ್ಲಿ ಲಿಂಗಾಧಾರಿತ ಭೇದಭಾವದ ವಿರುದ್ಧ ವಿಧಿಸಿರುವ ನಿರ್ಬಂಧವು, ವ್ಯಕ್ತಿಗಳ ಲೈಂಗಿಕ ನಿಲುವಿನ ಆಧಾರದ ಮೇಲೆ ನಡೆಯುವ ತಾರತಮ್ಯದ ನಿದರ್ಶನಗಳನ್ನೂ ಒಳಗೊಂಡಿದೆ.

ಈ ವಿಚಾರಕ್ಕೆ ಸಂಬಂಧಿಸಿದಂತೆ, ನಿಕೊಲಸ್ ಟೂನೆನ್ v. ಆಸ್ಟ್ರೇಲಿಯಾ ಪ್ರಕರಣದಲ್ಲಿ ಸಂಯುಕ್ತ ರಾಷ್ಟ್ರಗಳ ಮಾನವ ಹಕ್ಕುಗಳ ಆಯೋಗದ ನಿಲುವನ್ನು ಉಲ್ಲೇಖಿಸವುದು ಸೂಕ್ತ. ಸದರಿ ಆಯೋಗವು, ಅಂತಾರಾಷ್ಟ್ರೀಯ ನಾಗರಿಕ ಮತ್ತು ರಾಜನೈತಿಕ ಹಕ್ಕುಗಳ ಒಡಂಬಡಿಕೆಯ 2ನೆ ಕಲಮಿನ 1ನೆ ವಾಕ್ಯದಲ್ಲಿ ಮತ್ತು 26ನೆ ಕಲಮಿನಲ್ಲಿ ಉಲ್ಲೇಖಿಸಿರುವ 'ಲಿಂಗ' ಎಂಬ ಪದವು 'ಲೈಂಗಿಕ ನಿಲುವನ್ನೂ' ಒಳಗೊಳ್ಳುತ್ತದೆ ಎಂದು ಗಮನಿಸಿತ್ತು.

15.2. "ರೀಡಿಂಗ್ ಸ್ವರಾಜ್ ಇಂಟು ಆರ್ಟಿಕಲ್ 15: ಎ ನ್ಯೂ ಡೀಲ್ ಫಾರ್ ಆಲ್ ಮೈನಾರಿಟೀಸ್"[313] ಎಂಬ ಲೇಖನದಲ್ಲಿ ತರುಣಾಭ್ ಖೈತಾನ್ ರವರು, 15ನೇ ಕಲಮಿನಲ್ಲಿ ನಿಗದಿಪಡಿಸಲಾಗಿರುವ ನಿಯಮಗಳು, ಆಂತರ್ಯದಲ್ಲಿ ಮೂಲಭೂತ ಆಯ್ಕೆ ಮತ್ತು ಎಂದು ಬದಲಾಗದಿರುವಿಕೆ ಎಂಬ ಪರಿಕಲ್ಪನೆಗಳನ್ನು ಸಮಾನವಾಗಿ ಆಧರಿಸಿವೆ ಎಂದು ಗಮನಿಸುತ್ತಾರೆ. ಅವರು, ನಿಯಮಗಳ ನಡುವಿನ ಸಮಾನತೆಗೆ ಹಿನ್ನೆಲೆ ಒದಗಿಸಲು ಜಾನ್ ಗಾರ್ಡನರ್ ನ ಈ ಮಾತನ್ನು ಉಲ್ಲೇಖಿಸುತ್ತಾರೆ

> ನಮ್ಮಲ್ಲಿನ ಬದಲಿಸಲಾಗದ ಸ್ಥಿತಿಗಳ ಆಧಾರದಲ್ಲಿ ನಡೆಯುವ ಭೇದಭಾವವು ನಮ್ಮ ಪಾಲಿನ (ಸ್ವತಂತ್ರವಾದ) ಬದುಕನ್ನು ನಿರಾಕರಿಸುತ್ತದೆ. ಇದರ ಪರಿಣಾಮವಾಗಿ ನಾವು ಮುಂದೆ ಮಾಡುವ ಆಯ್ಕೆಗಳು ನಮ್ಮ ಇಚ್ಛೆಯಿಂದಲ್ಲದೇ, ಬೇರೆಯವರ ಆಯ್ಕೆಗನುಗುಣವಾಗಿ ನಿರ್ಬಂಧಗೊಳ್ಳುತ್ತವೆ. ನಮ್ಮ ಆಯ್ಕೆಗಳು ನಮ್ಮಲ್ಲಿನ ಬದಲಾಗದಿರುವ ಅಂಶಗಳನ್ನು ಅವಲಂಬಿಸಿರುವುದರಿಂದ, ನಾವು ಮಾಡುವ ಆಯ್ಕೆಗಳಿಂದ ಇತರರಿಗೆ ಯಾವ ವ್ಯತ್ಯಾಸವೂ ಆಗುವುದಿಲ್ಲ...... ಹಾಗೂ, ವ್ಯಕ್ತಿಯ ಮೂಲಭೂತ ಆಯ್ಕೆಗಳ ಆಧಾರದಲ್ಲಿ ನಡೆಯುವ ಭೇದಭಾವ ಇದೇ ಕಾರಣಕ್ಕೆ ತಪ್ಪಾಗಬಹುದು. ಸ್ವತಂತ್ರವಾಗಿ ಬದುಕಲು, ಆ ಬದುಕಿನುದ್ದಕ್ಕೂ ನಮಗೆ ಸಾಕಷ್ಟು ಉಪಯುಕ್ತ ಆಯ್ಕೆಗಳಿರಬೇಕು. ಕೆಲವು ನಿರ್ದಿಷ್ಟ ಬೆಲೆಬಾಳುವ ಆಯ್ಕೆಗಳು, ನಮ್ಮ ಇತರ ನಿರ್ಧಾರಗಳ ಹೊರತಾಗಿಯೂ, ನಮ್ಮಲ್ಲಿ

[313] Tarunabh Khaitan, *Reading Swaraj into Article 15: A New Deal For All Minorities*, 2 NUJS Law Review (2009), at p. 419

ಪ್ರತಿಯೊಬ್ಬರಿಗೂ ದೊರಕಬೇಕು. ವ್ಯಕ್ತಿಗಳ ಇತರ ಆಯ್ಕೆಗಳ ಹೊರತಾಗಿಯೂ ಅವರಿಗೆ ದೊರಕಲೇಬೇಕಾದ ಆಯ್ಕೆಗಳು ದೊರೆತು, ಅದರಲ್ಲಿ ಒಂದನ್ನು ಆಯ್ದುಕೊಳ್ಳುವುದನ್ನೇ ಮೂಲಭೂತ ಆಯ್ಕೆ ಎನ್ನುವುದು. ವ್ಯಕ್ತಿಗಳ ನಡುವೆ ಅವರ ಮೂಲಭೂತ ಆಯ್ಕೆಗಳ ಕಾರಣದಿಂದ ತಾರತಮ್ಯ ನಡೆದಾಗ, ವ್ಯಕ್ತಿಗಳು ಅವರ ಪಾಲಿಗೆ ಅತ್ಯಂತ ಅಗತ್ಯವಾಗಿರುವ ಆಯ್ಕೆಗಳನ್ನು ಮಾಡುವುದು  ಇತರರಿಗೆ ಹೋಲಿಸಿದರೆ ದುಃಖಕರವೂ ತ್ರಾಸದಾಯಕವೂ ಆಗುತ್ತದೆ.[314]

(ಒತ್ತು ಕೊಡಲಾಗಿದೆ)

ಜನಾಂಗ, ಜಾತಿ, ಲಿಂಗ ಮತ್ತು ಹುಟ್ಟಿನ ಸ್ಥಳಗಳು, ವ್ಯಕ್ತಿಯ ನಿಯಂತ್ರಣದಲ್ಲಿ ಇಲ್ಲದಿರುವ ವಿಚಾರಗಳು, ಆದುದರಿಂದ ಅವು ಬದಲಾಗದಂಥವು. ಅದೇ ವೇಳೆ, ಧರ್ಮವೆಂಬುದು ವ್ಯಕ್ತಿಯ ಮೂಲಭೂತ ಆಯ್ಕೆ.  ಈ ಯಾವುದೇ ವಿಚಾರಗಳ ಆಧಾರದಲ್ಲಿ ನಡೆಯುವ ಭೇದಭಾವವೂ, ವ್ಯಕ್ತಿಯ ವೈಯಕ್ತಿಕ ಸ್ವಾಯುತ್ತೆಯನ್ನು ಹತ್ತಿಕ್ಕುತ್ತದೆ.

ಕೆನಡಾದ ಸರ್ವೋಚ್ಚ ನ್ಯಾಯಾಲಯವು, ಈಗನ್ v. ಕೆನಡಾ ಮತ್ತು ವ್ರೈನ್ಡ್ v. ಆಲ್ಬರ್ಟಾ ಪ್ರಕರಣಗಳಲ್ಲಿ ಕೆನಡಾದ ಹಕ್ಕುಪತ್ರ (ಕೆನೆಡಿಯನ್ ಚಾರ್ಟರ್ ಆಫ್ ರೈಟ್ಸ್)ದ 15(1)30 ಪರಿಚ್ಛೇದವನ್ನು ವ್ಯಾಖ್ಯಾನಿಸಿದ್ದು, ಆ ಪರಿಚ್ಛೇದವು ಭಾರತೀಯ ಸಂವಿಧಾನದ 15ನೆ ಕಲಮನ್ನು ಹೋಲುತ್ತದೆ.

ನಮ್ಮ ಸಂವಿಧಾನದ 15ನೇ ಕಲಮಿನಂತೆ, ಕೆನೇಡಿಯನ್ ಚಾರ್ಟರ್ ಕೂಡಾ "ಲೈಂಗಿಕ ನಿಲುವು" ಎಂಬುದನ್ನು ಭೇದಭಾವ ನಿರ್ಬಂಧಿಸುವುದಕ್ಕೆ ಆಧಾರವಾಗಿ ಒಳಗೊಂಡಿಲ್ಲ. ಆದಾಗ್ಯೂ, ಕೆನಡಾದ ಸರ್ವೋಚ್ಚ ನ್ಯಾಯಾಲಯವು ಮೇಲಿನ ತೀರ್ಪುಗಳಲ್ಲಿ ಲೈಂಗಿಕ ನಿಲುವು ಎಂಬುದು 15(1)ರಲ್ಲಿ ಹೆಸರಿಸಿದ ಭೇದಭಾವ ಮಾಡಬಾರದಾದ ಇತರ ವಿಷಯಗಳಿಗೆ ಸಮಾನವಾದ ವಿಚಾರವಾಗಿದೆ ಎಂಬುದನ್ನು ಸ್ಪಷ್ಟ ಪಡಿಸಿತ್ತು. ಈ ಯಾವುದೇ ವಿಷಯಗಳ

[314] John Gardner, On the Ground of Her Sex (uality), 18(2) Oxford Journal of Legal Studies (1998), at p. 167

ಆಧಾರದಲ್ಲಿ ನಡೆಯುವ ತಾರತಮ್ಯವು ವ್ಯಕ್ತಿಗಳ ವೈಯಕ್ತಿಕ ಸ್ವಾಯುತ್ತೆಯ ಪಾಲಿಗೆ ಮಾರಕವಾಗಿ ಪರಿಣಮಿಸಿ, ಅವರ ವ್ಯಕ್ತಿತ್ವಕ್ಕೆ ಘಾಸಿಯುಂಟುಮಾಡುತ್ತದೆ.

ಮೇಲಿನ ವಿಚಾರದಲ್ಲಿ ಬದಲಾಗದಿರುವಿಕೆ ಮತ್ತು ಮೂಲಭೂತ ಆಯ್ಕೆಗಳು ಮುಖ್ಯ ಅಂಶಗಳಾಗಿರುವ ಹಿನ್ನೆಲೆಯಲ್ಲಿ, ಮೇಲಿನಂತಹುದೇ ನಿರ್ಧಾರವನ್ನು ಭಾರತದ ಸನ್ನಿವೇಶದಲ್ಲಿಯೂ ಮಾಡಬಹುದು.

ಎಲ್.ಜಿ.ಬಿ.ಟಿ ಸಮುದಾಯವು ಅಸಮರ್ಥನೀಯ ಮತ್ತು ಅನಧಿಕೃತವಾದ ಶತ್ರುತ್ವ ಮತ್ತು ತಾರತಮ್ಯಗಳನ್ನು ಅನುಭವಿಸಿರುವ ಲೈಂಗಿಕ ಅಲ್ಪಸಂಖ್ಯಾತ ಸಮುದಾಯವಾಗಿದ್ದು, 15ನೆ ಕಲಮು ಕೊಡಮಾಡುವ ರಕ್ಷಣೆಯನ್ನು ಪಡೆಯಲು ಇತರರಿಗೆ ಸಮನಾದ ಅರ್ಹತೆ ಈ ಸಮುದಾಯಕ್ಕಿದೆ.

16. **377ನೇ ಪರಿಚ್ಛೇದವು 21ನೇ ಕಲಮು ಖಾತ್ರಿಪಡಿಸುವ ಬದುಕುವ ಮತ್ತು ಸ್ವಾತಂತ್ರ್ಯದ ಹಕ್ಕನ್ನು ಉಲ್ಲಂಘಿಸುತ್ತದೆ**

ಸಂವಿಧಾನದ 21ನೇ ಕಲಮಿನ ಪ್ರಕಾರ, ಕಾನೂನು ಕ್ರಮಗಳು ಅನ್ವಯವಾಗದೇ ಇರುವ ಸಂದರ್ಭಗಳಲ್ಲಿ , ಯಾವ ವ್ಯಕ್ತಿಯೂ ತನ್ನ ಬದುಕು ಮತ್ತು ಖಾಸಗೀ ಸ್ವಾತಂತ್ರಗಳಿಂದ ವಂಚಿತರಾಗಬಾರದು. ಮತ್ತು ಅಂತಹ ಕಾನೂನು ಕ್ರಮಗಳು ಸಮಯೋಚಿತವೂ, ನ್ಯಾಯಯುತವೂ, ನಿಸ್ಪಕ್ಷಪಾತವಾಗಿರಬೇಕು.[315]

ಬದುಕುವ ಮತ್ತು ಸ್ವತಂತ್ರವಾಗಿರುವ ಹಕ್ಕು, ಭಾರತದ ಪ್ರಜೆ ಅಥವಾ ಪ್ರಜೆಯಲ್ಲದ ಪ್ರತಿ ವ್ಯಕ್ತಿ, ಅವರ ಅಸ್ಮಿತೆ, ಅವರ ನಿಲುವುಗಳು ಏನೇ ಇದ್ದರೂ, ಮೇಲುಕೀಳಿಲ್ಲದೆ ರಕ್ಷಣೆ ಒದಗಿಸುತ್ತದೆ.

16.1. ಘನತೆಯಿಂದ ಬದುಕುವ ಹಕ್ಕು

ಈ ನ್ಯಾಯಾಲಯವು ಸಂವಿಧಾನದ 21ನೇ ಕಲಮಿನಡಿಯಲ್ಲಿ ಹಲವಾರು ಹಕ್ಕುಗಳನ್ನು ಗುರುತಿಸುವ ಉದ್ದೇಶದಿಂದ ಮತ್ತು ಆ ಮೂಲಕ ಆ ಕಲಮಿನಡಿಯ  ಬದುಕುವ ಹಕ್ಕಿನ ನೈಜ ವ್ಯಾಪ್ತಿ ಮತ್ತು ವಿಸ್ತಾರ ಗಳನ್ನು ಅರ್ಥೈಸಿಕೊಳ್ಳುವ ಸಲುವಾಗಿ "ಬದುಕು" ಮತ್ತು "ಖಾಸಗೀ ಸ್ವಾತಂತ್ರ್ಯ" ಎಂಬ ಪದಗಳನ್ನು ಸವಿವರವಾಗಿ ವ್ಯಾಖ್ಯಾನಿಸಿದೆ. 21ನೇ ಕಲಮು, ""ಅತ್ಯಂತ ಅಮೂಲ್ಯವಾದ ಮಾನವಾಧಿಕಾರ ಮತ್ತು ಬೇರೆಲ್ಲ ಬೆಳಕುಗಳ

[315] Maneka Gandhi v. Union of India & Anr., (1978) 1 SCC 248, at paragraph 48

ಖಜಾನೆ" ಎಂದು ಪ್ರತಿಪಾದಿಸಲಾಗಿರುವ ಫ್ರಾನ್ಸಿಸ್ ಕೊರಾಲೀ ಮಲ್ಲಿನ್ v. ಆಡಳಿತಗಾರ, ದೆಹಲಿ ಕೇಂದ್ರಾಡಳಿತ ಪ್ರದೇಶ ಮತ್ತು ಇತರರು., ಪ್ರಕರಣದಲ್ಲಿ  ಬದುಕುವ ಹಕ್ಕು, ಕೇವಲ ಪ್ರಾಣಿಯಂತೆ ಬದುಕಿರುವುದಕ್ಕೆ ಸೀಮಿತವಾಗಬಾರದು ಮತ್ತು ಬರಿಯ ದೈಹಿಕವಾಗಿ ಬದುಕುಳಿಯುವುದಕ್ಕಿಂತ ಹೆಚ್ಚಿನದನ್ನು ಹೊಂದಿರಬೇಕು ಎನ್ನಲಾಗಿತ್ತು[316]. ಭಗವತಿ ಜೆ. ಈ ಕೆಳಗಿನಂತೆ ಗಮನಿಸುತ್ತಾರೆ

> ನಮ್ಮ ಪ್ರಕಾರ, ಬದುಕುವ ಹಕ್ಕು ಎಂಬುದು, ಮಾನವೀಯ ಘನತೆಯೊಂದಿಗೆ ಅದಕ್ಕೆ ಸಂಬಂಧಿಸಿದ ಬದುಕಿನ ಕನಿಷ್ಟ ಅಗತ್ಯಗಳಾದ ಸಾಕಷ್ಟು ಆಹಾರ, ಪೋಷಣೆ, ಉಡುಗೆ-ತೊಡುಗೆ, ವಸತಿ, ಬರೆಯುವ, ಒದುವ, ತಮ್ಮನ್ನು ತಾವು ವಿವಿಧ ಬಗೆಯಲ್ಲಿ ವ್ಯಕ್ತಪಡಿಸಿಕೊಳ್ಳುವ, ಮುಕ್ತವಾಗಿ ಓಡಾಡುವ ಮತ್ತು ಇತರ ಮನುಷ್ಯರೊಡನೆ ಕಲೆತು ಬೆರೆಯುವ ವ್ಯವಸ್ಥೆಗಳ ಸಮೇತ ಬದುಕುವುದನ್ನು ಒಳಗೊಂಡಿದೆ. ಯಾವುದೇ ರೀತಿಯಲ್ಲಿ ನೋಡಿದರೂ, ಬದುಕಿನ ಹಕ್ಕಿನಲ್ಲಿ ಜೀವನದ ಕನಿಷ್ಟ ಅಗತ್ಯಗಳ ಮೇಲಿನ ಹಕ್ಕು, ಮಾತ್ರವಲ್ಲದೇ, ಮನುಶ್ಯ ಅಸ್ತಿತ್ವವನ್ನು ಸ್ವಲ್ಪವಾದರೂ ವ್ಯಕ್ತಪಡಿಸಲು ನೆರವಾಗುವ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳನ್ನು ನಡೆಸುವ ಹಕ್ಕು ಸಹ ಸೇರಿರಬೇಕು. ಮಾನವರ ಘನತೆಗೆ ಧಕ್ಕೆಯುಂಟುಮಾಡುವ ಅಥವಾ ಅದನ್ನು ಘಾಸಿಗೊಳಿಸುವ ಪ್ರತಿಯೊಂದು ಕೃತ್ಯವೂ ಸದರಿ ಬದುಕಿನ ಹಕ್ಕಿನಿಂದ ವ್ಯಕ್ತಿಗಳನ್ನು ತಕ್ಕಮಟ್ಟಿಗೆ ದೂರವಿಡುತ್ತದೆ. ಬದುಕುವ ಹಕ್ಕಿನ ನಿರಾಕರಣೆಯು ಕಾನೂನಿನಡಿಯಲ್ಲಿ ರೂಪುಗೊಂಡ ಸಮಯೋಚಿತ, ನ್ಯಾಯಯುತ, ನಿಷ್ಪಕ್ಷಪಾತವಾದ, ಮತ್ತು ಇತರ ಮೂಲಭೂತ ಹಕ್ಕುಗಳನ್ನು ಪುರಸ್ಕರಿಸುವ ಕ್ರಿಯೆಯ ಮೂಲಕವೇ ನಡೆಯಬೇಕು.
>
> (ಒತ್ತು ನೀಡಲಾಗಿದೆ)

[316] (1981) 1 SCC 608 at paragraph 7

ಈ ವಿಚಾರವನ್ನು ಕೆ.ಎಸ್.ಪುಟ್ಟಸ್ವಾಮಿ ಮತ್ತೊಬ್ಬರು v. ಭಾರತ ಸರ್ಕಾರ ಮತ್ತು ಇತರರು ಹಾಗೂ ಕಾಮನ್ ಕಾಸ್ (ಎ ರಿಜಿಸ್ಟರ್ಡ್ ಸೊಸೈಟಿ) v. ಭಾರತ ಸರ್ಕಾರ ಮತ್ತು ಇತರರು ಪ್ರಕರಣಗಳಲ್ಲಿ ಸಂವಿಧಾನ ಪೀಠ ಪುನರುಚ್ಚರಿಸಿತು.

ಘನತೆ ಎಂಬುದು ವ್ಯಾಖ್ಯಾನಿಸಲು ಸಾಧ್ಯವಾಗದ ನಿರಾಕಾರ ಪರಿಕಲ್ಪನೆಯಾಗಿದ್ದರೂ, ಅದು ಪ್ರತಿ ಮನಷ್ಯರ ಒಡಲಾಳದ ಮೌಲ್ಯ. ಒಂದು ಅರ್ಥಪೂರ್ಣವಾದ ಅಸ್ತಿತ್ವಕ್ಕೆ ಘನತೆ ಅತ್ಯಗತ್ಯ ಎಂದು ಪರಿಗಣಿಸಲಾಗುತ್ತದೆ

ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ v. ಭಾರತ ಸರ್ಕಾರ ಮತ್ತು ಇತರರು (ಮೇಲಿನ) ಪ್ರಕರಣದಲ್ಲಿ ಲಿಂಗ ಪರಿವರ್ತಿತ ವ್ಯಕ್ತಿಗಳು ತಮ್ಮ ಸ್ವ-ನಿರ್ಧಾರಿತ ಲಿಂಗವನ್ನು ನಿರ್ಣಯಿಸುವ ಹಕ್ಕನ್ನು ಈ ನ್ಯಾಯಾಲಯ ಗುರುತಿಸಿತ್ತು. ಲಿಂಗಪರಿವರ್ತಿತ ವ್ಯಕ್ತಿಗಳ ಕಾನೂನು ಅಧಿಕಾರಗಳ ಬಗ್ಗೆ ಈ ನ್ಯಾಯಾಲಯವು ಲೈಂಗಿಕ ನಿಲುವು ಮತ್ತು ಲೈಂಗಿಕ ಅಸ್ಮಿತೆ ಎಂಬುದು ಅವರುಗಳ ವ್ಯಕ್ತಿತ್ವದ ಅವಿಭಾಜ್ಯ ಅಂಗವೆಂದು ಹೇಳಿತ್ತು.

ರಾಧಾಕೃಷ್ಣನ್ ಜೆ. ರವರ ಅಭಿಪ್ರಾಯದ ಆಯ್ದ ಭಾಗ ಕೆಳಗಿನಂತಿದೆ

> ಪ್ರತಿ ವ್ಯಕ್ತಿಯ ಸ್ವ-ವ್ಯಾಖ್ಯಾನಿತ ಲೈಂಗಿಕ ನಿಲುವು ಮಾತು ಲೈಂಗಿಕ ಅಸ್ಮಿತೆ ಅವರ ವ್ಯಕ್ತಿತ್ವಡಾ ಅವಿಭಾಜ್ಯ ಅಂಗವಾಗಿದ್ದು, ಅವರ ಸ್ವ-ನಿರ್ಧಾರ, ಘನತೆ ಹಾಗು ಸ್ವಾತಂತ್ರ್ಯದ ಮೂಲ ಅಂಶಗಳಲ್ಲೊಂದಾಗಿದೆ.'
>
> (ಒತ್ತು ನೀಡಲಾಗಿದೆ)

ಲೈಂಗಿಕ ನಿಲುವು ಎಂಬುದು ಮನುಷ್ಯರಲ್ಲಿನ ಸ್ವಾಭಾವಿಕ ಸಂಗತಿಯಾಗಿದೆ. ಅದು ಜನರ ವ್ಯಕ್ತಿತ್ವ ಮತ್ತು ಅಸ್ಮಿತೆಯ ಪ್ರಮುಖವಾದ ಅಂಶವಾಗಿದ್ದು, ಸಮಲೈಂಗಿಕತೆ ಮತ್ತು ಉಭಯಲೈಂಗಿಕತೆಗಳು ಮಾನವ ಲೈಂಗಿಕತೆಯ ಪ್ರಾಕೃತಿಕ ಭಿನ್ನರೂಪಗಳಾಗಿವೆ. ಎಲ್.ಜಿ.ಬಿ.ಟಿ. ವ್ಯಕ್ತಿಗಳಿಗೆ ತಮ್ಮ ಲೈಂಗಿಕತೆಯನ್ನು ಆರಿಸಿಕೊಳ್ಳುವ ಅವಕಾಶ ಇಲ್ಲವೇ ಇಲ್ಲ ಅಥವಾ ಅತ್ಯಂತ ಕಡಿಮೆ. ಇತರ ಭಿನ್ನಲಿಂಗೀಯ ವ್ಯಕ್ತಿಗಳಂತೆ, ಸಮಲೈಂಗಿಕ ವ್ಯಕ್ತಿಗಳೂ ಖಾಸಗೀತನದ ಮತ್ತು ಯಾವುದೇ ಬಗೆಯ ಹಿಂಸೆಯ ಭಯವಿಲ್ಲದೆ ಗೌರವಯುತವಾಗಿ ಬದುಕುವ ಹಕ್ಕು ಪಡೆಯಲು ಅರ್ಹರು. ತಮ್ಮ ಸಂಗಾತಿಯನ್ನು ಆರಿಸಿಕೊಳ್ಳುವ ಹಕ್ಕುನ್ನು ಒಳಗೊಂಡಂತೆ, ತಮ್ಮ

ಬದುಕಿನ ಅತ್ಯಂತ ಖಾಸಗೀ ನಿರ್ಧಾರಗಳನ್ನು ತೆಗೆದುಕೊಳ್ಳುವ ಹಕ್ಕು ಕೂಡಾ ಅವರಿಗಿದೆ. ಅಂತಹ ಹಕ್ಕುಗಳನ್ನು 21ನೇ ಕಲಮಿನಡಿಯಲ್ಲಿ ಕಾಪಾಡಬೇಕಿದ್ದು, ಬದುಕುವ ಮತ್ತು ಸ್ವಾತಂತ್ರ್ಯದ ಹಕ್ಕು, ಲೈಂಗಿಕ ಸ್ವಾತಂತ್ರ್ಯ ಮತ್ತು ಮುಕ್ತ ಅಭಿವ್ಯಕ್ತಿಯ ಹಕ್ಕನ್ನು ಒಳಗೊಂಡಿರುತ್ತದೆ.

ಕೊಎಲೀಷನ್ ಫಾರ್ ಗೇ ಅಂಡ್ ಲೆಸ್ಬಿಯನ್ ಈಕ್ವಾಲಿಟಿ ಮತ್ತೊಬ್ಬರು v. ಕಾನೂನು ಮಂತ್ರಿ ಮತ್ತು ಇತರರು ಪ್ರಕರಣದಲ್ಲಿ ದಕ್ಷಿಣ ಆಫ್ರಿಕಾದ ಸಾಂವಿಧಾನಿಕ ನ್ಯಾಯಾಲಯ ನೀಡಿದ ತೀರ್ಪಿನ ಈ ಆಯ್ದ ಸಾಲುಗಳು, ಈ ಸಂಧರ್ಭದಲ್ಲಿ ಉಪಯುಕ್ತವಾದಾವು.

> ಪ್ರತಿ ವ್ಯಕ್ತಿಯ ವಿಶಿಷ್ಟ ಮೌಲ್ಯವನ್ನು ಗುರುತಿಸುವಾಗ, ಹಕ್ಕನ್ನು ಹೊಂದಿರುವವರನ್ನು ದೇಹವಿರದ, ಸಮಾಜದಿಂದ ಬೇರ್ಪಟ್ಟ, ಒಬ್ಬಂಟಿ, ಅಮೂರ್ತವಾದ ಆಕೃತಿ ಎಂದು ಸಂವಿಧಾನ ಪರಿಗಣಿಸುವುದಿಲ್ಲ. ಬದಲಾಗಿ, ಜನರು ತಮ್ಮ ದೇಹದೊಳಗೆ, ತಮ್ಮ ಸಮುದಾಯಗಳಲ್ಲಿ, ತಮ್ಮ ಸಂಸ್ಕೃತಿಗಳಲ್ಲಿ, ತಮ್ಮ ಸ್ಥಳ ಮತ್ತು ಕಾಲದಲ್ಲಿ ಬದುಕುತ್ತಾರೆ ಎಂಬುದನ್ನು ಸಂವಿಧಾನ ಒಪ್ಪಿಕೊಳ್ಳುತ್ತದೆ. ಲೈಂಗಿಕತೆಯನ್ನು ವ್ಯಕ್ತ ಪಡಿಸಲು ನೈಜ ಅಥವಾ ಕಾಲ್ಪನಿಕ ಸಂಗಾತಿಯ ಅಗತ್ಯವಿರುತ್ತದೆ. ವ್ಯಕ್ತಿಗಳ ಸಂಗಾತಿಗಳನ್ನು ಆರಿಸುವುದು ಅಥವಾ ಆಯ್ಕೆ ಮಾಡುವ ವ್ಯವಸ್ಥೆ ಮಾಡುವುದು ಸರ್ಕಾರದ ಕೆಲಸವಲ್ಲ, ಅದು ವ್ಯಕ್ತಿಗಳು ಅವರಾಗಿಯೇ ಮಾಡುಬೇಕಿರುವಂಥದ್ದು.
>
> (ಒತ್ತು ನೀಡಲಾಗಿದೆ)

ಹಾಗಾಗಿ, ಎಲ್.ಜಿ.ಬಿ.ಟಿ. ವ್ಯಕ್ತಿಗಳು ತಮ್ಮ ಆಯ್ಕೆಯ ಸಂಗಾತಿಯೊಂದಿಗೆ ಸುರಕ್ಷಿತ ಮತ್ತು ಗೌರವಯುತ ಪರಿಸರದಲ್ಲಿ ಒಪ್ಪಿಗೆಯ ಲೈಂಗಿಕ ಸಂಬಂಧ ಹೊಂದುವ ವೈಯಕ್ತಿಕ ಸ್ವಾತಂತ್ರ್ಯವನ್ನು ಕಡಿತಗೊಳಿಸುವ 377ನೇ ಪರಿಚ್ಛೇದವು, 21ನೆ ಕಲಮಿಗೆ ಚ್ಯುತಿಯನ್ನುಂಟು ಮಾಡುತ್ತದೆ. ಅದು ಅವರು ದೀರ್ಘಕಾಲೀನ ಫಲಪ್ರದ ಸಂಬಂಧಗಳನ್ನು  ಮಾಡಿಕೊಳ್ಳುವುದನ್ನು ನಿರ್ಬಂಧಿಸುತ್ತದೆ. ಇದರ ಪರಿಣಾಮವಾಗಿ, ಎಲ್.ಜಿ.ಬಿ.ಟಿ ವ್ಯಕ್ತಿಗಳು ಸಂಗಾತಿಯಿಲ್ಲದೇ ಒಬ್ಬಂಟಿಯಾಗಿ ಬದುಕು ಸವೆಸುವ ಅಥವಾ "ಸೇರೆ ಹಿಡಿಯದೇ ಬಿಟ್ಟ ಪಾತಕಿ"ಗಳಾಗಿ ಮುಚ್ಚುಮರೆಯ ಜೀವನ ನಡೆಸುವ ಅನಿವಾರ್ಯಕ್ಕೊಳಗಾಗುತ್ತಾರೆ.[317].

ಎಲ್.ಜಿ.ಬಿ.ಟಿ ವ್ಯಕ್ತಿಗಳ ನಡುವಿನ ಲೈಂಗಿಕ ಸಮಾಗಮವನ್ನು ದೈಹಿಕ, ಮತ್ತು "ನಿಸರ್ಗದ ನಿಯಮಕ್ಕೆ ವಿರುದ್ಧವಾದು" ಎಂದು ಪರಿಗಣಿಸುವ 377ನೇ ಪರಿಚ್ಛೇದವು, ಅವರುಗಳ ಇಡೀ ವರ್ಗವನ್ನು ಅಪರಾಧಿಗಳನ್ನಾಗಿಸುತ್ತದೆ. 377 ನೇ ಪರಿಚ್ಛೇಧವು, ಎಲ್.ಜಿ.ಬಿ.ಟಿ ವ್ಯಕ್ತಿಗಳು ಖಾಸಗೀಯಾಗಿ ಅನ್ಯೋನ್ಯವಾದ ಲೈಂಗಿಕ ಸಂಬಂಧಗಳಲ್ಲಿ ತೊಡಗುವುದನ್ನು ನಿರ್ಬಂಧಿಸುತ್ತದೆ.

ಎಲ್.ಜಿ.ಬಿ.ಟಿ ವ್ಯಕ್ತಿಗಳು ಅನುಭಸಿವ ಸಾಮಾಜಿಕ ಬಹಿಷ್ಕಾರವು, ಅವರು  ಎಲ್ಲ ಚಟುವಟಿಕೆಗಳಲ್ಲಿ ಪರಿಪೂರ್ಣ ಪ್ರಜೆಗಳಂತೆ ಭಾಗವಹಿಸುವುದನ್ನು ತಡೆಯುತ್ತದೆ ಆಮೂಲಕ ಅವರು ತಮ್ಮಲ್ಲಿರುವ ಮಾನವ ಸಹಜ ಸಾಮರ್ಥ್ಯವನ್ನು ಸಂಪೂರ್ಣವಾಗಿ ಅರಿಯುವುದನ್ನು ತಡೆಯುತ್ತದೆ.

ಸಮಲೈಂಗಿಕತೆಯ ಅಪರಾಧಿಕರಣದ ಬಗ್ಗೆ, ಬಗ್ಗೆ ಬೊವರ್ಸ್ v. ಹಾರ್ಡ್ವಿಕ್ ಪ್ರಕರಣದಲ್ಲಿ ಅಮೇರಿಕೆಯ ಸರ್ವೋಚ್ಚ ನ್ಯಾಯಾಲಯದ ಬ್ಲಾಕ್ಮನ್ ಜೆ. ಮಂಡಿಸಿದ ಭಿನ್ನ ನಿಲುವಿನ ಅಭಿಪ್ರಾಯ ಉಪಯುಕ್ತವಾಗಿದೆ. ಪ್ಯಾರಿಸ್ ವಯಸ್ಕರ ಚಿತ್ರಮಂದಿರ v. ಸ್ಲೇಟನ್ ಪ್ರಕರಣದಲ್ಲಿ ಈ ಮೊದಲು ನೀಡಿದ ತೀರ್ಪನ್ನು ಉಲ್ಲೇಖಿಸುತ್ತಾ ಬ್ಲಾಕ್ಮನ್ ಹೀಗೆನ್ನುತ್ತಾರೆ.

> ಲೈಂಗಿಕ ಅನ್ಯೋನ್ಯತೆ ಎಂಬುದು ಮಾನವಿಯ ಅಸ್ತಿತ್ವದ ಸೂಕ್ಷ್ಮವಾದ, ,ಅತಿಮುಖ್ಯ ಬಾಂಧವ್ಯ ಅಲ್ಲದೇ ಕುಟುಂಬ ಜೀವನದ, ಸಮುದಾಯದ ಒಳಿತಿನ ಮತ್ತು ಮಾನವೀಯ

[317] Edwin Cameron, *Sexual Orientation and the Constitution: A Test Case for Human Rights*, 110 South African Law Journal (1993), at p. 450

> ವ್ಯಕ್ತಿತ್ವದ ಬೆಳವಣಿಗೆಯ ನಡುಗಂಬ ಎಂಬ ಸತ್ಯವನ್ನು ಮರೆಮಾಚಲು ಉದ್ದೇಶಪೂರ್ವಕವಾದ ಕುರುಡುತನದಿಂದ ಮಾತ್ರ ಸಾಧ್ಯ
>
> (ಒತ್ತು ನೀಡಲಾಗಿದೆ)

ಬೊವರ್ಸ್ v. ಹಾರ್ಡ್ವಿಕ್ (ಮೇಲ್ಕಂಡ) ಪ್ರಕರಣದ ತೀರ್ಪನ್ನು ಲಾರೆನ್ಸ್ ಮತ್ತಿತರರು v. ಟೆಕ್ಸಸ್ ಟೆಕ್ಸಸ್(ಮೇಲ್ಕಂಡ) ಪ್ರಕರಣದಲ್ಲಿ ತಳ್ಳಿಹಾಕಿದ ಅಮೇರಿಕೆಯ ಸರ್ವೋಚ್ಛ ನ್ಯಾಯಾಲಯವು, ಸಮಲೈಂಗಿಕರು ಖಾಸಗೀ ಲೈಂಗಿಕ ಕ್ರಿಯೆಗಳನ್ನು ನಡೆಸುವುದನ್ನು ತಡೆಯುವ ಕಾಯ್ದೆಯು ಅವರ ಖಾಸಗೀತನದ ಹಕ್ಕು ಮತ್ತು ಘನತೆಯನ್ನು ಘಾಸಿಗೊಳಿಸುತ್ತದೆ ಎಂಬ ಆಧಾರದಲ್ಲಿ ಅದನ್ನು ಅನೂರ್ಜಿತ ಎಂದು ಘೋಷಿಸಿತು. ತಮ್ಮ ಬಹುಮತದ ತೀರ್ಪಿನಲ್ಲಿ ಕೆನೆಡಿ ಜೆ. ಈ ಕೆಳಗಿನಂತೆ ಗಮನಿಸುತ್ತಾರೆ.

> ಬೋವರ್ಸ್ ಪ್ರಕರಣದ ವಿಷಯವು ಕೇವಲ ಲೈಂಗಿಕ ಕೃತ್ಯವೊಂದರಲ್ಲಿ ತೊಡಗುವ ಹಕ್ಕಿನದ್ದಾಗಿತ್ತೆಂದು ಹೇಳುವುದು, ಆ ವ್ಯಕ್ತಿ ಮಾಡಿದ್ದ ಬಿನ್ನಹಕ್ಕೆ ಅಪಮಾನ ಎಸಗಿದಂತಾಗುತ್ತದೆಯಲ್ಲದೇ, ಮದುವೆಯು ಲೈಂಗಿಕ ಸಂಭೋಗ ನಡೆಸುವ ಹಕ್ಕಿಗಷ್ಟೇ ಸಂಬಂಧಿಸಿದ್ದು ಎಂದು ಹೇಳಿ ಮದುವೆಯಾದ ಜೋಡಿಯನ್ನು ಅವಮಾನಿಸುವುದಕ್ಕೆ ಸಮ.
>
> ವಯಸ್ಕರು ತಮ್ಮ ಮನೆಯೊಳಗೆ ಖಾಸಗೀಯಾಗಿ ಒಂದು ಸಂಬಂಧವನ್ನು ಬೆಳೆಸಿಯೂ ಮುಕ್ತ ನಾಗರೀಕರಂತೆ ತಮ್ಮ ಘನತೆಯನ್ನು ಉಳಿಸಿಕೊಳ್ಳಬಹುದು ಎಂಬುದನ್ನು ನಾವುಗಳು ಒಪ್ಪಿಕೊಂಡರೆ ಸಾಕಾಗುತ್ತದೆ. ವ್ಯಕ್ತಿಯೊಬ್ಬರ ಲೈಂಗಿಕತೆಯು ಮತ್ತೊಬ್ಬ ವ್ಯಕ್ತಿಯೊಂದಿಗಿನ ಅನ್ಯೋನ್ಯ ಸಂಬಂಧದ ರೂಪದಲ್ಲಿ ಅತಿಯಾಗಿ ವ್ಯಕ್ತಗೊಳ್ಳುವುದು ವೈಯಕ್ತಿಕವಾದ ದೀರ್ಘಕಾಲೀನ ಸಂಬಂಧವೊಂದರ ಒಂದು ಭಾಗವಷ್ಟೆ. ಸಂವಿಧಾನದಡಿಯಲ್ಲಿ ಸುಭದ್ರವಾಗಿರುವ ಸ್ವಾತಂತ್ರ್ಯವು ಸಮಲೈಂಗಿಕ ವ್ಯಕ್ತಿಗಳಿಗೆ ಇಂತಹ ಆಯ್ಕೆಗಳನ್ನು ಮಾಡುವ ಹಕ್ಕನ್ನು ನೀಡುತ್ತದೆ. ಈ ಅಪರಾಧೀ ಕಾಯ್ದೆಯಿಂದ ಅವರುಗಳಿಗೆ ಅಂಟುವ ಕಳಂಕವು ಸಮಾನ್ಯವಾದುದಲ್ಲ. ಸರಿಯಾದ ಅರ್ಥದಲ್ಲಿ ಸದರಿ ಅಪರಾಧವು ಸಿ ದರ್ಜೆಯ ದುಷ್ಕೃತ್ಯವಾಗಿದ್ದು, ಟೆಕ್ಸಸ್ ನ್ಯಾಯ ವ್ಯವಸ್ಥೆಯ ಪ್ರಕಾರ ಅತಿಸಣ್ಣ ತಪ್ಪು. ಆದರೂ

ಇದನ್ನು ಪಾತಕವೆಂದು ಕರೆಯಲಾಗಿದ್ದು ಅದು ಆರೋಪಿಗಳ ಘನತೆಯ ಮೇಲೆ ಪ್ರಭಾವ ಬೀರಿದೆ. ಇದರಿಂದಾಗಿ ಅರ್ಜಿದಾರರ ದಾಖಲೆಗಳಲ್ಲಿ ಪಾತಕವೊಂದಕ್ಕೆ ಶಿಕ್ಷೆ ಅನುಭುವಿಸಿರುವುದು ನಮೂದಾಗಿರಲಿದೆ.

ಪ್ರಸ್ತುತ ಪ್ರಕರಣ ಅಪ್ರಾಪ್ತರನ್ನು ಒಳಗೊಂಡಿಲ್ಲ, ಹಾಗೆಯೇ ಗಾಯಗೊಂಡಡವರು ಅಥವಾ ಬಲವಂತಕ್ಕೆ ಓಳಗಾದವರು ಅಥವಾ ಸುಲಭವಾಗಿ ನಿರಾಕರಿಸುವುದು ಸಾಧ್ಯವಿಲ್ಲದಿರುವ ಸಂಬಂಧಗಳಲ್ಲಿ ಇರುವವರನ್ನೂ ಒಳಗೊಂಡಿಲ್ಲ. ಈ ಪ್ರಕರಣ ಸಾರ್ವಜನಿಕವಾಗಿ ನಡೆದಿಲ್ಲ, ವ್ಯಭಿಚಾರವನ್ನೂ ಒಳಗೊಂಡಿಲ್ಲ. ಅಲ್ಲದೇ ಈ ಪ್ರಕರಣ ಸಮಲೈಂಗಿಕರು ಹೊಂದ ಬಯಸುವ ಸಂಬಂಧಕ್ಕೆ ಸರ್ಕಾರ ಶಿಷ್ಟಾಚಾರದ ಮಾನ್ಯತೆಯನ್ನು ನೀಡಬೇಕಿರುವ ಸಂದರ್ಭವನ್ನೂ ಒಳಗೊಂಡಿಲ್ಲ. ಈ ಪ್ರಕರಣ ಖಂಡಿತವಾಗಿ ಪರಸ್ಪರರ ಸಂಪೂರ್ಣ ಒಪ್ಪಿಗೆಯಿಂದ, ಸಮಲೈಂಗಿಕ ಜೀವನ ಶೈಲಿಯಲ್ಲಿ ಸಾಮಾನ್ಯವಾದ ಲೈಂಗಿಕ ಕ್ರಿಯೆಗಳಲ್ಲಿ ತೊಡಗಿದ್ದ ಇಬ್ಬರು ವಯಸ್ಕರನ್ನು ಒಳಗೊಂಡಿದೆ. ತಮ್ಮ ಖಾಸಗೀ ಜೀವನದ ಗೌರವ ಕಾಪಾಡುವುದು ಅರ್ಜಿದಾರ ಹಕ್ಕು. ಅವರ ಖಾಸಗೀ ಲೈಂಗಿಕ ಕ್ರಿಯೆಗಳನ್ನು ಪಾತಕವೆಂದು ಕರೆದು ಅವರ ಅಸ್ತಿತ್ವವನ್ನು ಅವಮಾನಿಸುವ ಅಥವಾ ಅವರ ಭಾಗ್ಯವನ್ನು ನಿಯಂತ್ರಿಸುವ ಕೆಲಸವನ್ನು ಸರ್ಕಾರ ಮಾಡಬಾರದು. ಡ್ಯೂ ಪ್ರಾಸೆಸ್ ಕ್ಲಾಸ್ ನ ಅಡಿಯಲ್ಲಿರುವ ಸ್ವಾತಂತ್ರ್ಯದ ಹಕ್ಕು ಅವರಿಗೆ ಸರ್ಕಾರದ ಯಾವುದೇ ಹಸ್ತಕ್ಷೇಪವಿಲ್ಲದೇ, ತಮ್ಮ ಕ್ರಿಯೆಗಳಲ್ಲಿ ತೊಡಗುವ ಸಂಪೂರ್ಣ ಸ್ವಾತಂತ್ರ್ಯವನ್ನು ನೀಡುತ್ತದೆ. ಸರ್ಕಾರ ಪ್ರವೇಶಿಸುವಂತಿಲ್ಲದ ವೈಯಕ್ತಿಕ ಸ್ವಾತಂತ್ರ್ಯದ ಪರಿಧಿಯೊಂದನ್ನು ನಿರ್ಮಿಸುವುದಾಗಿ ಸಂವಿಧಾನ ವಚನವನ್ನಿತ್ತಿದೆ. ಮೇಲ್ಕಂಡ ಕ್ಯಾಸೀ ಪ್ರಕರಣ, ಸಂಖ್ಯೆ 847. ನಲ್ಲಿ ಟೆಕ್ಸಸ್ ಶಾಸನವು ವ್ಯಕ್ತಿಯೊಬ್ಬರ ವೈಯಕ್ತಿಕ ಮತ್ತು ಖಾಸಗೀ ಬದುಕಿನಲ್ಲಿ ಮೂಗುತೂರಿಸುವುದನ್ನು ಸಮರ್ಥಿಸಿಕೊಳ್ಳುವ ಯಾವುದೇ ಬಗೆಯ ನೈತಿಕವಾದ ಸರ್ಕಾರೀ ಉದ್ದೇಶವನ್ನೂ ಬೆಂಬಲಿಸುವುದಿಲ್ಲ ಎಂದು ತಿಳಿಸಲಾಗಿದೆ.

(ಒತ್ತು ನೀಡಲಾಗಿದೆ)

ಹೀಗಾಗಿ, 377ನೇ ಪರಿಚ್ಛೇದವು ಎಲ್.ಜಿ.ಬಿ.ಟಿ. ವ್ಯಕ್ತಿಗಳು 21ನೇ ಕಲಮು ಖಾತ್ರಿಪಡಿಸುವಂತೆ ಘನತೆಯ ಬದುಕನ್ನು ನಡೆಸುವುದಕ್ಕೆ ತಡೆಯೊಡ್ಡುತ್ತದೆ.

16.2. <u>ಖಾಸಗೀತನದ ಹಕ್ಕು</u>

ಖಾಸಗೀತನದ ಹಕ್ಕನ್ನು 21ನೇ ಕಲಮಿನಡಿಯಲ್ಲಿರುವ ಬದುಕುವ ಹಕ್ಕು ಮತ್ತು ವೈಯಕ್ತಿಕ ಸ್ವಾತಂತ್ರ್ಯದ ಹಕ್ಕುಗಳ ಅವಿಭಾಜ್ಯ ಅಂಗವೆಂದು ಈಗ ಗುರುತಿಸಲಾಗಿದೆ

ಲೈಂಗಿಕ ನಿಲುವು ಎಲ್.ಜಿ.ಬಿ.ಟಿ ವ್ಯಕ್ತಿಗಳ ಅಸ್ತಿತ್ವದ ಅವಿಭಾಜ್ಯ ಅಂಗವಷ್ಟೇ ಅಲ್ಲದೆ ವ್ಯಕ್ತಿಯ ಖಾಸಗೀತನದ ಪ್ರಮುಖ ಲಕ್ಷಣ. ಅದರ ರಕ್ಷಣೆ 14, 15 ಮತ್ತು 21ನೆ ಕಲಮುಗಳು ಖಾತ್ರಿ ಪಡಿಸುವ ಮೂಲಭೂತ ಹಕ್ಕುಗಳಲ್ಲಿ ಅಡಕವಾಗಿದೆ.

ಬಹು ವಿಸ್ತಾರವಾಗಿರುವ ಖಾಸಗೀತನದ ಹಕ್ಕು ನಮ್ಮ ಸಂವಿಧಾನದ ವಿನ್ಯಾಸವನ್ನು ಆವರಿಸಿಕೊಂಡಿದ್ದು, ನಿರ್ಧಾರ ತೆಗೆದುಕೊಳ್ಳುವ ಸ್ವಾಯತ್ತತೆಯು ಖಾಸಗೀ/ ವೈಯಕ್ತಿಕ ನಿರ್ಧಾರಗಳನ್ನು ಒಳಗೊಳ್ಳುವಂತೆ ಮಾಡಿ, ವ್ಯಕ್ತಿಯ ಖಾಸಗೀ ವಲಯದ ಪಾವಿತ್ರ್ಯವನ್ನು ಕಾಪಾಡುತ್ತದೆ.

ಖಾಸಗೀತನದ ಹಕ್ಕು, ಬರಿಯ "ತಮ್ಮ ಪಾಡಿಗೆ ತಾವಿರುವ" ಹಕ್ಕು ಎಂಬ ಆರಂಭಿಕ ಪರಿಕಲ್ಪನೆಯಿಂದ ಬಹು ದೂರ ಸಾಗಿದೆ. ಪ್ರಸ್ತುತ ಅದರೊಳಗೆ, ವಯ್ಯಕ್ತಿಕ ವಲಯಕ್ಕೆ ಸಂಬಂಧಿಸಿದ ಖಾಸಗೀತನ, ನಿರ್ಧಾರ ತೆಗೆದುಕೊಳ್ಳುವ ಖಾಸಗೀತನ ಮತ್ತು ಆಯ್ಕೆ ಮಾಡುವ ಖಾಸಗೀತನಗಳಂದ ಆಲೋಚನೆಗಳೂ ಸೇರಿಕೊಂಡಿವೆ. ಈ ಹಕ್ಕು, ಮೂಲಭೂತವಾದ ವೈಯಕ್ತಿಕ ಆಯ್ಕೆಗಳನ್ನು ಮಾಡುವ ಅಧಿಕಾರಕ್ಕೂ ವ್ಯಾಪಿಸಿದ್ದು, ಆ ಆಯ್ಕೆಗಳಲ್ಲಿ ಸರ್ಕಾರದ ಅನಗತ್ಯ ಹಸ್ತಕ್ಷೇಪದಿಂದ ಮುಕ್ತವಾಗಿ ಲೈಂಗಿಕ ಕ್ರಿಯೆಗಳನ್ನೂ ನಡೆಸುವ ಆಯ್ಕೆಯು ಸೇರಿದೆ.

377ನೇ ಪರಿಚ್ಛೇದವು ಎಲ್.ಜಿ.ಬಿ.ಟಿ ವ್ಯಕ್ತಿಗಳ ಬದುಕಿನ ಖಾಸಗೀ ವಲಯವನ್ನು ಬಾಧಿಸುತ್ತದೆ. ಅದು ಅವರುಗಳು ತಮ್ಮ ಲೈಂಗಿಕ ನಿಲುವಿಗೆ ಅನುಗುಣವಾದ ನಿರ್ಧಾರ ಕೈಗೊಳ್ಳುವ ಮತ್ತು ಆ ಆಮೂಲಕ ಘನತೆಯುಳ್ಳ ಅರ್ಥಪೂರ್ಣ ಬದುಕನ್ನು ನಡೆಸುವ ಸ್ವಾಯುತ್ತೆಯನ್ನು ಕಸಿದುಕೊಳ್ಳುತ್ತದೆ. 377ನೇ ಪರಿಚ್ಛೇದವು ಎಲ್.ಜಿ.ಬಿ. ಟಿ ವ್ಯಕ್ತಿಗಳು ತಮ್ಮ ಲೈಂಗಿಕ ನಿಲುವನ್ನು ವ್ಯಕ್ತಪಡಿಸುವುದನ್ನು ಮತ್ತು ಲೈಂಗಿಕ ಕ್ರಿಯೆಗಳಲ್ಲಿ ಪಾಲ್ಗೊಳ್ಳುವುದನ್ನು

ನಿಷೇಧಿಸುತ್ತದೆ, ಆ ಮೂಲಕ ವ್ಯಕ್ತಿಯೊಬ್ಬರು ತಮ್ಮ ಬದುಕಿನ ಅತಿ ವೈಯಕ್ತಿಕ ವಲಯಕ್ಕೆ ಸಂಬಂಧಿಸಿರುವ ನಿರ್ಧಾರವೊಂದನ್ನು ತೆಗೆದುಕೊಳ್ಳುವುದನ್ನೇ ನಿರ್ಬಂಧಿಸುತ್ತದೆ.

ನ್ಯಾಷನಲ್ ಕೊಯಲಿಷನ್ ಫಾರ್ ಗೆ ಅಂಡ್ ಲೆಸ್ಬಿಯನ್ ಎಕ್ವಯಾಲಿಟಿ ಮತ್ತೊಬ್ಬರು v. ಕಾನೂನು ಮಂತ್ರಿ ಮತ್ತು ಇತರರು (ಮೇಲ್ಕಂಡ) ಪ್ರಕರಣಲ್ಲಿ ದಕ್ಷಿಣ ಆಫ್ರಿಕಾದ ಸಾಂವಿಧಾನಿಕ ನ್ಯಾಯಾಲಯದ ಟಿಪ್ಪಣಿ ಈ ಕೆಳಗಿನಂತಿದೆ:

> ಹೊರಗಿನವರ ಹಸ್ತಕ್ಷೇಪವಿಲ್ಲದೇ, ಮಾನವೀಯ ಸಂಬಂಧಗಳನ್ನು ಬೆಸೆದು ಬೆಳೆಸಲು ಅನುವಾಗುವ ಖಾಸಗೀಯಾದ ಅನ್ಯೋನ್ಯತೆ ಮತ್ತು ಸ್ವಾತಂತ್ರ್ಯಗಳ ವಲಯವನ್ನು ಸೃಷ್ಟಿಸಿಕೊಳ್ಳಲು ನಮಗಿರುವ ಹಕ್ಕನ್ನು ಖಾಸಗೀತನ ಗುರುತಿಸುತ್ತದೆ. ನಾವು ನಮ್ಮ ಲೈಂಗಿಕತೆಯನ್ನು ಹೇಗೆ ವ್ಯಕ್ತಪಡಿಸುತ್ತೇವೆ ಎಂಬುದು ಖಾಸಗೀ ಅನ್ಯೋನ್ಯತೆ ಎಂಬ ವಿಷಯದ ಮೂಲ ಅಂಶ. ನಾವು ನಮ್ಮ ಲೈಂಗಿಕತೆಯನ್ನು ವ್ಯಕ್ತ ಪಡಿಸುವಾಗ ಅದಕ್ಕೆ ಪರಸ್ಪರ ಒಪ್ಪಿಗೆಯಿದ್ದು ಅದರಿಂದ ಯಾರಿಗೂ ಹಾನಿಯಾಗದಿರುವ ಹಾಗಿದ್ದರೆ, ಅದಕ್ಕೆ ತಡೆಯೊಡ್ಡುವುದು ನಮ್ಮ ಖಾಸಗೀತನದ ಉಲ್ಲಂಘನೆಯಾಗುತ್ತದೆ.

ಖಾಸಗೀತನದ ಹಕ್ಕಿನ ಮೇಲಿನ ಯಾವುದೇ ನಿರ್ಬಂಧವು ಕಾನೂನುಬದ್ಧವಾಗಿರುವುದು, ಅದಕ್ಕೆ ಪ್ರಭುತ್ವದ ನ್ಯಾಯಸಮ್ಮತ ಸದುದ್ದೇಶವಿರುವುದು ಮತ್ತು ಅದಕ್ಕೊಂದು ಪರಿಮಿತಿಯಿರುವುದು ಅವಶ್ಯಕ. ಮನುಷ್ಯರ ಆಂತರಿಕ ಗುಣಗಳ ಆಧಾರದಲ್ಲಿ ಎಲ್.ಜಿ.ಬಿ.ಟಿ ವ್ಯಕ್ತಿಗಳ ವಿರುದ್ಧ ತಾರತಮ್ಯ ಮಾಡುವ ಮತ್ತು ಅವರನ್ನು ಅಪರಾಧೀಕರಿಸುವ ಸಾರ್ವಜನಿಕ ಅಥವಾ ಸಾಮಾಜಿಕ ನೈತಿಕತೆ ಎಂಬ ವ್ಯಕ್ತಿನಿಷ್ಠ ಪರಿಕಲ್ಪನೆಯು ಸಾಂವಿಧಾನಿಕ ನೈತಿಕತೆಗೆ ವಿರುದ್ಧವಾಗಿದ್ದು, ಅದನ್ನು ಆಧರಿಸಿಕೊಂಡು ಪ್ರಭುತ್ವದ ನ್ಯಾಯಸಮ್ಮತ ಸದುದ್ದೇಶ ರೂಪುಗೊಳ್ಳಲಾರದು.

ಒಳಗೊಳ್ಳುವಿಕೆಯ ಆಶಯವು ಸಂವಿಧಾನದ 3ನೇ ಭಾಗವನ್ನು ಆವರಿಸಿಕೊಂಡಿದೆ. 14, 15(1), 16 ನೇ ಕಲಮುಗಳಲ್ಲಿ ಅಡಕವಾಗಿರುವ ಸಮಾನತೆಯ ಸಂಹಿತೆಯಲ್ಲದೆ, 17ನೆ ಕಲಮು (ಅಸ್ಪೃಶ್ಯತೆ ನಿಷೇಧ), 21ಎ ಕಲಮು (ಶಿಕ್ಷಣದ ಹಕ್ಕು), 25ನೇ ಕಲಮು (ಆತ್ಮಸಾಕ್ಷಿಯ ಸ್ವಾತಂತ್ರ್ಯ ಮತ್ತು ಧರ್ಮವನ್ನ ಮುಕ್ತವಾಗಿ ಒಪ್ಪಿಕೊಳ್ಳುವ, ಆಚರಿಸುವ ಮತ್ತು ಪ್ರಚಾರ ಪಡಿಸುವ ಸ್ವಾತಂತ್ರ್ಯ), 26ನೆ ಕಲಮು (ಧಾರ್ಮಿಕ ಕಾರ್ಯಗಳನ್ನು ನಿಭಾಯಿಸುವ ಸ್ವಾತಂತ್ರ್ಯ), 29ನೆ ಕಲಮು (ಅಲ್ಪಸಂಖ್ಯಾತರ ಹಿತಾಸಕ್ತಿಯ ರಕ್ಷಣೆ), 30ನೆ ಕಲಮು

(ಅಲ್ಪಸಂಖ್ಯಾತರು ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಿ ನಿರ್ವಹಿಸುವ ಹಕ್ಕು)ಗಳಲ್ಲಿರುವ ಕಾಯ್ದೆಗಳ ಗುರಿ, ವ್ಯಕ್ತಿಗಳು ಅಲ್ಪಸಂಖ್ಯಾತರಾಗಿದ್ದರೂ, ಅವರೆಲ್ಲರ ಹಕ್ಕುಗಳನ್ನು ಖಾತ್ರಿಪಡಿಸುವ, ಎಲ್ಲರನ್ನು ಒಳಗೊಳ್ಳುವ ಸಮಾಜದ ನಿರ್ಮಾಣವೇ ಆಗಿದೆ.

16.3. ಆರೋಗ್ಯದ ಹಕ್ಕು

ಆರೋಗ್ಯದ ಹಕ್ಕು ಮತ್ತು ಆರೋಗ್ಯ ಸೇವೆಗಳು ಕೈಗೆಟಕುವುದು, ಹಕ್ಕು ಸಂವಿಧಾನದ 21ನೇ ಕಲಮಿಡಿಯಲ್ಲಿ ಖಾತ್ರಿಯಾಗಿರುವ ಬದುಕಿನ ಹಕ್ಕಿನ ಬಹುಮುಖ್ಯ ಭಾಗಗಳು. [318]

ಲೈಂಗಿಕ ಅಲ್ಪಸಂಖ್ಯಾತರಾಗಿರುವ ಎಲ್.ಜಿ.ಬಿ.ಟಿ. ವ್ಯಕ್ತಿಗಳು ತಮ್ಮ ಲೈಂಗಿಕ ನಿಲುವಿನ ಕಾರಣದಿಂದ ಸಾಮಜಿಕ ಪೂರ್ವಾಗ್ರಹ, ಮೇಲುಕೀಳು, ಮತ್ತು ಹಿಂಸೆಯನ್ನು ಅನುಭವಿಸಿರುತ್ತಾರೆ. "ನಿಸರ್ಗದ ನಿಯಮಕ್ಕೆ ವಿರುದ್ಧವಾದ ಶಾರೀರಿಕ ಸಂಭೋಗವನ್ನು" ಅಪರಾಧವೆಂದು ಪರಿಗಣಿಸುವ 377ನೇ ಪರಿಚ್ಛೇದದಿಂದಾಗಿ, ಎಲ್.ಜಿ.ಬಿ.ಟಿ ವ್ಯಕ್ತಿಗಳು ಮುಚ್ಚುಮರೆಯ ಜೀವನವನ್ನು ನಡೆಸಬೇಕಾಗುತ್ತದೆ. ಇದರ ಪರಿಣಾಮವಾಗಿ, ಆರೋಗ್ಯ ಸೇವೆಗಳ ವಿಚಾರದಲ್ಲಿ ಎಲ್.ಜಿ.ಬಿ.ಟಿ. ವ್ಯಕ್ತಿಗಳು ಗಂಭೀರವಾದ ಅನಾನುಕೂಲ ಮತ್ತು ಪೂರ್ವಾಗ್ರಹಗಳನ್ನು ಅನುಭವಿಸುತ್ತಾರೆ. ಇದರಿಂದಾಗಿ, ಈ ಸಮುದಾಯದ ಸದಸ್ಯರಲ್ಲಿ ಖಿನ್ನತೆ ಮತ್ತು ಆತ್ಮಹತ್ಯಾ ಪ್ರವೃತ್ತಿಗಳೂ ಸೇರಿದಂತೆ ಅನೇಕ ಗಂಭೀರವಾದ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ[319].

ಎಲ್.ಜಿ.ಬಿಟಿ ವ್ಯಕ್ತಿಗಳು, ಅದರಲ್ಲಿ ವಿಶೇಷವಾಗಿ ಎಮ್.ಎಸ್.ಎಮ್. ಮತ್ತು ಲಿಂಗ ಪರಿವರ್ತಿತರು ಎಚ್.ಐ.ವಿ ಸೋಂಕಿಗೆ ಒಳಗಾಗುವ ಅಪಾಯ ತುಂಬಾ ಹೆಚ್ಚಾಗಿದ್ದು, ಇದಕ್ಕೆ ಕಾರಣ ಅವರುಗಳಿಗೆ ಸುರಕ್ಷಿತವಾದ ಲೈಂಗಿಕ ಕ್ರಿಯೆಗಳನ್ನು ನಡೆಸಲು ಸುರಕ್ಷಿತ ತಾಣಗಳಿಲ್ಲದಿರುವುದು. ತಮ್ಮ ಬಗ್ಗೆ ಇತರರಿಗೆ ತಿಳಿಯುವ ಮತ್ತು ಅದರಿಂದ ಶಿಕ್ಷೆಗೊಳಗಾಗುವ ಅಪಾಯ ಅವರು ವೈದ್ಯಕೀಯ ಪರೀಕ್ಷೆ, ಚಿಕಿತ್ಸೆ ಮತ್ತು ಇತರ ಸೇವೆಗಳನ್ನು ಪಡೆಯುವುದನ್ನು

---

318 Common Cause (A Registered Society) v. Union of India & Anr., (2018) 5 SCC 1, at paragraph 304; C.E.S.C. Limited & Ors. v. Subhash Chandra Bose & Ors., (1992) 1 SCC 441, at paragraph 32; Union of India v. Mool Chand Khairati Ram Trust, (2018) SCC OnLine SC 675, at paragraph 66; and, Centre for Public Interest Litigation v. Union of India & Ors., (2013) 16 SCC 279, at paragraph 25

319 M.V. Lee Badgett, *The Economic Cost of Stigma and the Exclusion of LGBT People: A Case Study of India*, World Bank Group (2014) available at http://documents.worldbank.org/curated/en/527261468035379692/The-economic-cost-of-stigma-and-the-exclusion-of-LGBT-people-a-case-study-of-India (Last accessed on August 11, 2018)

ನಿರ್ಬಂಧಿಸುತ್ತದೆ[320]. ವಿರುದ್ಧ ಲಿಂಗದ ವ್ಯಕ್ತಿಗಳನ್ನು ಮದುವೆಯಾಗಿರುವ ಎಮ್.ಎಸ್.ಎಮ್.ಗಳಲ್ಲಿ ಎಚ್.ಐ.ವಿ. ಸೋಂಕು ಹೆಚ್ಚಾಗಿರುವುದು, ಮತ್ತು ಅದರೊಂದಿಗೆ ರೋಗವನ್ನು ಪತ್ತೆ ಮಾಡಿ ಚಿಕಿತ್ಸೆ ನೀಡುವುದು ಕಷ್ಟವಾಗಿರುವುದರ ಹಿನ್ನೆಲೆಯಲ್ಲಿ, ಅವರುಗಳು ಈ ರೋಗಕ್ಕೊಳಗಾಗುವ ಮತ್ತು ರೋಗಾಣುವನ್ನು ಹರಡುವ ಸಾಧ್ಯತೆ ಬಹಳ ಹೆಚ್ಚಾಗಿದೆ.

ಸಂಯುಕ್ತ ರಾಷ್ಟ್ರ ಒಕ್ಕೂಟದ ಮಾನವ ಹಕ್ಕುಗಳ ಆಯೋಗ ನಿಕೋಲಸ್ ಟ್ಯೂನೆನ್ v. ಆ (ಮೇಲ್ಕಂಡ) ಪ್ರಕರಣದಲ್ಲಿ ಕಂಡುಕೊಂಡ ವಿಚಾರಗಳನ್ನು ಉಲ್ಲೇಖಿಸುವುದು ಉಪಯುಕ್ತ.

> ಟಾಸ್ಮೇನಿಯಾದ ಅಧಿಕಾರಿಗಳ ಸಾರ್ವಜನಿಕ ಆರೋಗ್ಯಕ್ಕೆ ಸಂಬಂಧಿಸಿದ ವಾದದ ವಿಚಾರದಲ್ಲಿ ಈ ಅಯೋಗವು ಗಮನಿಸುವುದೇನೆಂದರೆ, ಏಡ್ಸ್/ ಎಚ್.ಐ.ವಿ. ಹರಡುವುದನ್ನು ತಡೆಯುವ ಗುರಿಯನ್ನು ಸಾಧಿಸಲು, ಸಮಲೈಂಗಿಕ ಕ್ರಿಯೆಗಳನ್ನು ಅಪರಾಧೀಕರಿಸುವುದು ಸೂಕ್ತವಾದ ಕ್ರಮವೆಂದು ಪರಿಗಣಿಸಲು ಬರುವುದಿಲ್ಲ. ಆಸ್ಟ್ರೇಲಿಯಾ ಸರ್ಕಾರ ಗಮನಿಸುವ ಪ್ರಕಾರ, ಸಮಲೈಂಗಿಕ ಚಟುವಟಿಕೆಗಳನ್ನು ಅಪದಾಧೀಕರಿಸುವ ಕಾನೂನುಗಳು ಸೋಂಕು ತಗುಲುವ ಅಪಾಯದಲ್ಲಿರುವ ಹಲವು ಮಂದಿ ಭಯದಿಂದ ಅವಿತುಕೊಳ್ಳುವಂತೆ ಮಾಡಿ ಸಾರ್ವಜನಿಕ ಆರೋಗ್ಯ ಕಾರ್ಯಕ್ರಮಗಳಿಗೆ ಅಡ್ಡಿಯನ್ನುಂಟುಮಾಡುತ್ತವೆ. ಹಾಗಾಗಿ, ಸಮಲೈಂಗಿಕ ಚಟವಟಿಕೆಗಳ ಅಪರಾಧೀಕರಣವು ಎಚ್.ಐ.ವಿ/ ಏಡ್ಸ್ ಗೆ ಸಂಬಂಧಿಸಿದಂತೆ ಪರಿಣಾಮಕಾರಿಯಾದ ಶಿಕ್ಷಣ ಕಾರ್ಯಕ್ರಮಗಳ ಅನುಷ್ಠಾನದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಎರಡನೆಯದಾಗಿ, ಸಮಲೈಂಗಿಕ ಚಟುವಟಿಕೆಗಳ ಅಪರಾಧೀಕರಣದ ಮುಂದುವರಿಕೆಗೂ ಎಚ್.ಐ.ವಿ/ ಏಡ್ಸನ ಹರಡುವಿಕೆಯ ಪರಿಣಾಮಕಾರಿಯಾದ ನಿಯಂತ್ರಣಕ್ಕೂ ಯಾವುದೇ ಸಂಬಂಧ ಕಂಡು ಬಂದಿಲ್ಲವೆಂದು ಈ ಆಯೋಗವು ಗಮನಿಸಿರುತ್ತದೆ.

(ಒತ್ತು ನೀಡಲಾಗಿದೆ ಮತ್ತು ಆಂತರಿಕ ಅಡಿಟಿಪ್ಪಣಿಗಳನ್ನು ಕೈಬಿಡಲಾಗಿದೆ)

[320] Govindasamy Agoramoorthy and Minna J Hsu, *India's homosexual discrimination and health consequences*, 41(4) Rev Saude Publica (2007), at pp. 567-660 available at http://www.scielo.br/pdf/rsp/v41n4/6380.pdf

ಅಮೇರಿಕೆಯ ಮನಃಶಾಸ್ತ್ರೀಯ ಸಂಘಟನೆ, ಅಮೇರಿಕೆಯ ಮನೋವೈದ್ಯಕೀಯ ಸಂಘಟನೆ, ರಾಷ್ಟ್ರೀಯ ಸಮಾಜ ಸೇವಕರ ಸಂಘಟನೆ, ಮತ್ತು ರಾಷ್ಟ್ರೀಯ ಸಮಾಜ ಸೇವಕರ ಸಂಘಟನೆಯ ಟೆಕ್ಸಾಸ್ ಲಾರೆನ್ಸ್ ಮತ್ತಿತರರು v. ಟೆಕ್ಸಸ್ (ಮೇಲ್ಕಂಡ) ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಿದ ಸಲಹಾ ವರದಿ ಈ ಕೆಳಗಿನಂತೆ ನುಡಿಯುತ್ತದೆ.

> 111.....ಟೆಕ್ಸಸ್ ದಂಡ ಸಂಹಿತೆ ಎಸ್. 21.06 ಸಮಲೈಂಗಿಕ ಸ್ತ್ರೀ ಪುರುಷರ ವಿರುದ್ಧದ ಪುರ್ವಾಗ್ರಹ, ತಾರತಮ್ಯ ಮತ್ತು ಹಿಂಸೆಯನ್ನು ಬಲಪಡಿಸುತ್ತದೆ. ಹಲವು ಸಮಲೈಂಗಿಕ ಸ್ತ್ರೀ ಪುರುಷರು ಸಮಲೈಂಗಿಕತೆಗೆ ಅಂಟಿರುವ ಕಳಂಕವನ್ನು ಸಹಿಸಿ ನಿಭಾಯಿಸುವುದನ್ನು ಕಲಿಯುತ್ತಾರಾದರೂ, ಈ ಬಗೆಯ ಪುರ್ವಾಗ್ರಹ, ಸಮಲೈಂಗಿಕ ವ್ಯಕ್ತಿಗಳಲ್ಲಿ, ಅದರಲ್ಲೂ ತಮ್ಮ ಲೈಂಗಿಕ ನಿಲುವನ್ನು ನಿರಾಕರಿಸಲು ಅಥವಾ ಬಚ್ಚಿಡಲು ಯತ್ನಿಸುವವರಲ್ಲಿ, ಗಂಭೀರವಾದ ಮಾನಸಿಕ ಯಾತನೆಯನ್ನು ಉಂಟುಮಾಡುತ್ತದೆ.
>
> (ಒತ್ತು ನೀಡಲಾಗಿದೆ)

ಈ ಸಂದರ್ಭದಲ್ಲಿ, ಭಾರತೀಯ ಮಾನಸಿಕ ಆರೋಗ್ಯ ಸೇವಾ ಕಾಯ್ದೆಯು ಜುಲೈ 7, 2018 ರಂದು ಜಾರಿಗೆ ಬಂದಿತೆಂಬುದನ್ನು ಉಲ್ಲೇಖಿಸುವುದು ಅಗತ್ಯ. ಮಾನಸಿಕ ಆರೋಗ್ಯ ಸೇವಾ ಕಾಯ್ದೆಯ 18(1) ಮತ್ತು (2) ಕಲಮುಗಳು, 21(1)(ಎ) ಕಲಮಿನ ಜತೆಗೂಡಿ, ಮಾನಸಿಕ ಆರೋಗ್ಯ ಸೇವೆಯ ಲಭ್ಯತೆಯ ಹಕ್ಕನ್ನು ಒದಗಿಸಿ ದೈಹಿಕ ಮತ್ತು ಮಾನಸಿಕ ರೋಗಗಳಿರುವ ವ್ಯಕ್ತಿಗಳನ್ನು, ಮೇಲುಕೀಳಿಲ್ಲದೇ, ಸಮಾನವಾಗಿ ನಡೆಸಿಕೊಳ್ಳುವುದನ್ನು ಕಡ್ಡಾಯಗೊಳಿಸಿ, ಉಳಿದೆಲ್ಲ ಭೇದಭಾವಗಳ ಜತೆಯಲ್ಲಿ, ಲೈಂಗಿಕ ನಿಲುವಿನ ಆಧಾರದ ಮೇಲಿನ ತಾರತಮ್ಯವನ್ನೂ ನಿರ್ಬಂಧಿಸುತ್ತವೆ.

17. **377ನೇ ಪರಿಚ್ಛೇದವು ಎಲ್.ಜಿ.ಬಿ.ಟಿ ವ್ಯಕ್ತಿಗಳ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕನ್ನು ಘಾಸಿಗೊಳಿಸುತ್ತದೆ**

17.1. 19(1)(ಎ) ಕಲಮು ಎಲ್ಲಾ ಪ್ರಜೆಗಳಿಗೆ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಖಾತ್ರಿಪಡಿಸುತ್ತದೆ. ಆದಾಗ್ಯೂ, 19(2) ಕಲಮಿನಲ್ಲಿ ತಿಳಿಸಿರುವ ಕಾರಣಗಳ ಆಧಾರದಲ್ಲಿ, ಈ ಹಕ್ಕಿನ ಚಲಾವಣೆಯ ಮೇಲೆ ಸಮಂಜಸವಾದ ನಿರ್ಬಂಧವನ್ನು ಹೇರಬಹುದಾಗಿದೆ.

ಎಲ್.ಜಿ.ಬಿ.ಟಿ. ವ್ಯಕ್ತಿಗಳು ತಮ್ಮ ಲೈಂಗಿಕ ನಿಲುವನ್ನು ವಿವಿಧ ರೀತಿಗಳಲ್ಲಿ ವ್ಯಕ್ತಪಡಿಸುತ್ತಾರೆ. ಅವುಗಳಲ್ಲಿ, 377ನೇ ಪರಿಚ್ಛೇದದ ಅಡಿಯಲ್ಲಿ ನಿಷೇಧಿಸಲಾದ ಲೈಂಗಿಕ ಕ್ರಿಯೆಗಳಲ್ಲಿ ತೊಡಗುವುದು ಕೂಡಾ ಒಂದು ಬಗೆಯಾಗಿದೆ. ಕಾನೂನು ಪಾಲನಾ ಸಂಸ್ಥೆಗಳು ನೀಡುವ ಕಿರುಕುಳ ಮತ್ತು ಶಿಕ್ಷೆಯ ಹೆದರಿಕೆಯಿಂದ ಎಲ್.ಜಿ.ಬಿ.ಟಿ. ವ್ಯಕ್ತಿಗಳು "ಮುಚ್ಚಿದಬಾಗಿಲುಗಳ ಹಿಂದೆ" (ಕ್ಲಾಸೆಟ್)" ಇರಲು ಬಯಸುತ್ತಾರೆ. ಸಮಲೈಂಗಿಕತೆಯ ವಿಚಾರದಲ್ಲಿ ಸಮಾಜದ ಕಿರುಕುಳ ಮತ್ತು ಟೀಕೆಯಿಂದ ತಪ್ಪಿಸಿಕೊಳ್ಳಲು, ವೈಯಕ್ತಿಕ ಮತ್ತು ಔದ್ಯೋಗಿಕ ವಲಯಗಳಲ್ಲಿ ಎಲ್.ಜಿ.ಬಿ.ಟಿ. ವ್ಯಕ್ತಿಗಳು ತಮ್ಮ ವೈಯಕ್ತಿಕ ಅಸ್ತಿತ್ವದ ತಾಯಿಬೇರಿನಂತಹ ವಿಚಾರವಾದ ತಮ್ಮ ಲೈಂಗಿಕ ನಿಲುವನ್ನು ಬಹಿರಂಗ ಪಡಿಸದಿರುವಂತೆ ಒತ್ತಡ ಹೇರಲಾಗುತ್ತದೆ. ಅವರುಗಳು ಇತರ ಭಿನ್ನಲಿಂಗಾಸಕ್ತ ವ್ಯಕ್ತಿಗಳಂತೆ ಮುಕ್ತವಾಗಿ ತೃಪ್ತಿದಾಯಕ ಸಂಬಂಧಗಳನ್ನು ಬೆಸೆದು ಬೆಳೆಸುವುದಕ್ಕೆ ತಡೆಯೊಡ್ಡುವುದರ ಮೂಲಕ ಸಂಪೂರ್ಣ ವ್ಯಕ್ತಿತ್ವ ಮತ್ತು ಘನತೆಯ ಬದುಕಿನ ಹಕ್ಕುಗಳನ್ನು ನಿರ್ಬಂಧಿಸಲಾಗುತ್ತದೆ. ಇದು ಅವರ ಮಾನಸಿಕ ಆರೋಗ್ಯದ ಮೇಲೆ ಸಹ ಪರಿಣಾಮ ಬೀರುತ್ತದೆ.

17.2. ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ v. ಭಾರತ ಸರ್ಕಾರ ಮತ್ತು ಇತರರು ಪ್ರಕರಣದಲ್ಲಿ ನ್ಯಾಯಾಲಯವು ಲೈಂಗಿಕ ಅಸ್ಮಿತೆಯು ವ್ಯಕ್ತಿಗಳಲ್ಲಿ ಅಂತರ್ಗತವಾಗಿರುವ ವಿಷಯ ಮತ್ತು ಅವರ ವೈಯಕ್ತಿಕ ಅಸ್ಮಿತೆಯ ಮುಖ್ಯ ಅಂಶ ಎಂದು ಗಮನಿಸಿತು. ಅಲ್ಲದೇ, ಲಿಂಗ ಪರಿವರ್ತಿತ ವ್ಯಕ್ತಿಗಳು ತಾವಾಗಿಯೇ ಗುರುತಿಸಿಕೊಂಡ ತಮ್ಮ ಲೈಂಗಿಕತೆಯನ್ನು, ಮಾತು, ವರ್ತನೆ, ನಡವಳಿಕೆ, ಉಡುಪುಗಳ, ಇತ್ಯಾದಿಗಳ ಮೂಲಕ ವ್ಯಕ್ತಪಡಿಸುವ ಹಕ್ಕನ್ನು ಹೊಂದಿದಾರೆ ಎಂದು ನಿರ್ಧರಿಸಲಾಗಿತ್ತು.

ನ್ಯಾಯಾಲಯವು, ಲೈಂಗಿಕ ಅಸ್ಮಿತೆಯಂತೆಯೇ, ಲೈಂಗಿಕ ನಿಲುವು ಕೂಡಾ ವ್ಯಕ್ತಿಯೊಬ್ಬರ ವ್ಯಕ್ತಿತ್ವಕ್ಕೆ ಬಹುಮುಖ್ಯವೆಂದೂ, ಮತ್ತು ಸ್ವ-ಧೃಡೀಕರಣ, ಘನತೆ ಮತ್ತು ಸ್ವಾತಂತ್ರ್ಯಗಳ ಮೂಲ ಅಂಶವೆಂದೂ ಗುರುತಿಸಿತು. ಲೈಂಗಿಕ ನಿಲುವು ಒಬ್ಬರ ವ್ಯಕ್ತಿತ್ವ ಮತ್ತು ಅಸ್ಮಿತೆಗೆ ಬಹುಮುಖ್ಯವೆಂಬ ಪ್ರಸ್ತಾವನೆಯನ್ನು ಸಾಂವಿಧಾನಿಕ ಪೀಠವು ಕೆ.ಎಸ್. ಪುಟ್ಟಸ್ವಾಮಿ ಮತ್ತೊಬ್ಬರು v. ಭಾರತ ಸರ್ಕಾರ ಮತ್ತು ಇತರರು ಪರಕರಣದಲ್ಲಿ ಧೃಡೀಕರಿಸಿತು.

ಈ ಸಂಬಂಧವಾಗಿ, ಎಸ್. v. ಕಣ್ಣಿಯಮ್ಮಾಳ್ ಮತ್ತೊಬ್ಬರು ಪ್ರಕರಣದಲ್ಲಿ ಈ ನ್ಯಾಯಾಲಯ ನೀಡಿದ ತೀರ್ಪನ್ನು ಉಲ್ಲೇಖಿಸಿವುದು ಸೂಕ್ತ. ಈ ಪ್ರಕರಣದಲ್ಲಿ, 19(2)ನೇ ಕಲಮಿನಲ್ಲಿ ಬರುವ "ಸಭ್ಯತೆ ಮತ್ತು ನೈತಿಕತೆ" ಎಂಬ ನುಡಿಗಟ್ಟಿನ ಹಿನ್ನೆಲೆಯಲ್ಲಿ ಕೆಳಕಂಡಂತೆ ಗಮನಿಸಲಾಗಿತ್ತು:

> ಸಂವಿಧಾನ ಕೊಡಮಾಡುವ ಮಾತು ಮತ್ತು ಅಭಿವ್ಯಕ್ತಿಯ ಸ್ವಾತಂತ್ರ್ಯ ಸಂಪೂರ್ಣವಲ್ಲ ಮತ್ತು ಅವುಗಳ ಮೇಲೆ "ಸಭ್ಯತೆ ಮತ್ತು ನೈತಿಕತೆ" ಮತ್ತು ಇತರ ವಿಚಾರಗಳ ಆಧಾರದಲ್ಲಿ ನಿರ್ಬಂಧ ಹೇರಬಹುದು ಎಂಬುದು ನಿಜವಾದರೂ, ನಾವುಗಳು ಸಾಮಾಜಿಕ ಮತ್ತು ಸಾಂಸ್ಕೃತಿಕ ವಲಯದ ಜನಪ್ರಿಯವಲ್ಲದ ಅಭಿಪ್ರಾಯಗಳನ್ನು ಸಹಿಸಿಕೊಳ್ಳುವ ಆವಶ್ಯಕತೆಗೆ ಒತ್ತು ನೀಡಬೇಕು. ಅಭಿಪ್ರಾಯ ಮತ್ತು ಆಲೋಚನೆಗಳ ಮುಕ್ತವಾದ ಹರಿವು ನಾಗರೀಕರು ಕೂಡಿಬಾಳುವುದಕ್ಕೆ ಅಗತ್ಯವಾಗಿರುವುದರಿಂದ, ಮುಕ್ತ ಅಭಿವ್ಯಕ್ತಿಯ ಈ ಹಕ್ಕಿನ ರಕ್ಷಣೆಯ ಪ್ರಾಮುಖ್ಯವನ್ನು ನಮ್ಮ ಸಂವಿಧಾನದ ನಿರ್ಮಾತೃಗಳು ಮನಗಂಡಿದ್ದರು. ರಾಜನೈತಿಕ ನೆಲೆಯಲ್ಲಿ ಅರ್ಥಪೂರ್ಣ ಆಡಳಿತ ನೀಡಲು ತಿಳುವಳಿಕಸ್ಥ ನಾಗರೀಕರ ಅಗತ್ಯವಿದೆಯಾದರೂ, ಸಾಮಾಜಿಕ ನಿಲುವುಗಳ ವಿಷಯಕ್ಕೆ, ಮುಕ್ತವಾಗಿ ಮಾತುಕತೆ ನಡೆಸುವ ಸಂಸ್ಕೃತಿಯನ್ನು ಪೋಷಿಸುವುದು ಕೂಡ ಆವಶ್ಯಕ.
>
> ಸಾಮಾಜಿಕ ನೈತಿಕತೆಯ ಪರಿಕಲ್ಪನೆಗಳು ಮೂಲತಃ ವ್ಯಕ್ತಿನಿಷ್ಠವಾಗಿರುವಂಥವು ಮತ್ತು ಅಪರಾಧೀಕರಿಸುವ ಕಾನೂನನ್ನು ವೈಯಕ್ತಿಕ ಸ್ವಾಯತ್ತತೆಯ ಪರಿಧಿಯೊಳಗೆ ಅನಗತ್ಯವಾಗಿ ಮೂಗುತೂರಿಸುವ ಸಾಧನವಾಗಿ ಬಳಸಿಕೊಳ್ಳಬಾರದು. ನೈತಿಕತೆ ಮತ್ತು ಅಪರಾಧಗಳು ಒಟ್ಟಿಗೇ ಅನ್ವಯವಾಗುವಂಥವಲ್ಲ.
>
> (ಒತ್ತು ನೀಡಲಾಗಿದೆ)

ಹಾಗಾಗಿ, ಸಾರ್ವಜನಿಕ ಅಥವಾ ಸಾಮಾಜಿಕ ನೈತಿಕತೆ ಮೂಲತಃ ವ್ಯಕ್ತಿನಿಷ್ಠವಾಗಿರುವುದರಿಂದ, ಅದರ ಆಧಾರದ ಮೇಲೆ, 377ನೇ ಪರಿಚ್ಛೇದವನ್ನು 19(2)ನೇ ಕಲಮಿನಡಿಯ ಸಮಂಜಸವಾದ ನಿರ್ಬಂಧವೆಂದು ಸಮರ್ಥಿಸಿಕೊಳ್ಳಲು ಆಗುವುದಿಲ್ಲ.

18. <u>ಸುರೇಶ್ ಕುಮಾರ್ ಕೌಶಲ್ ತೀರ್ಪಿನ ರದ್ಧತಿ</u>

ಸುರೇಶ್ ಕುಮಾರ್ ಕೌಶಲ್ ಮತ್ತೊಬ್ಬರು v. ನಾಜ್ ಪ್ರತಿಷ್ಠಾನ ಮತ್ತು ಇತರರು (ಮೇಲ್ಕಂಡ) ಪ್ರಕರಣದಲ್ಲಿ ಈ ನ್ಯಾಯಾಲಯದ್ದ ದ್ವಿ-ಸದಸ್ಯ ಪೀಠವು ದೆಹಲಿ ಉಚ್ಚನ್ಯಾಯಾಲಯ ನಾಜ್ ಪ್ರತಿಷ್ಠಾನ v. ದೆಹಲಿ ಎನ್.ಸಿ.ಟಿ.

ಸರ್ಕಾರ ಮತ್ತು ಇತರರು[321] ಪ್ರಕರಣದಲ್ಲಿ ವಯಸ್ಕರ ನಡುವಿನ ಖಾಸಗೀಯಾದ ಒಪ್ಪಿಗೆಯ ಲೈಂಗಿಕ ಕೃತ್ಯಗಳನ್ನು ಅಪರಾಧೀಕರಿಸುವ 377ನೇ ಪರಿಚ್ಛೇದವು ಸಂವಿಧಾನದ 14, 15, ಮತ್ತು 21ನೇ ಕಲಮುಗಳನ್ನು ಉಲ್ಲಂಘಿಸುತ್ತದೆ ಎಂದು ಘೋಷಿಸಿಸಿ ನೀಡಿದ್ದ ತೀರ್ಪನ್ನು ತಳ್ಳಿಹಾಕಿತು,

ದ್ವಿಸದಸ್ಯ ಪೀಠವು ನಾಜ್ ಪ್ರತಿಷ್ಠಾನ v. ದೆಹಲಿ ಎ.ಸಿ.ಟಿ. ಸರ್ಕಾರ ಮತ್ತು ಇತರರು ಪ್ರಕರಣದ ತೀರ್ಪನ್ನು ತಳ್ಳಿಹಾಕಲು ನೀಡಿದ ಕಾರಣಗಳು ಈ ಕೆಳಕಂಡಂತಿವೆ.

i. 377ನೇ ಪರಿಚ್ಛೇದವು ನಿರ್ದಿಷ್ಟವಾದ ಜನರು, ಅಸ್ಮಿತೆ ಅಥವಾ ನಿಲುವನ್ನು ಅಪರಾಧೀಕರಿಸುವುದಿಲ್ಲ. ಅದು ನಡೆಸಿದರೆ ಅಪರಾಧವೆಂದು ಪರಿಗಣಿಸಲಾಗುವ ಕೆಲ ಕೃತ್ಯಗಳನ್ನು ಗುರುತಿಸುತ್ತದೆಯಷ್ಟೇ. ಅಂತಹ ನಿರ್ಬಂಧವು ಲೈಂಗಿಕ ಅಸ್ಮಿತೆ ಮತ್ತು ನಿಲುವುಗಳಾಚೆಗೆ, ಲೈಂಗಿಕ ನಡತೆಯನ್ನ ನಿಯಂತ್ರಿಸುತ್ತದೆ.

ಸಾಮಾನ್ಯವಾದ ರೀತಿಯಲ್ಲಿ ಶಾರೀರಿಕ ಸಂಭೋಗದಲ್ಲಿ ತೊಡಗುವವರು ಮತ್ತು ನಿಸರ್ಗದ ನಿಯಮಕ್ಕೆ ವಿರುದ್ಧವಾಗಿ ಶಾರೀರಿಕ ಸಂಭೋಗದಲ್ಲಿ ತೊಡಗುವವರು ಬೇರೆ ಬೇರೆ ವರ್ಗಕ್ಕೆ ಸೇರುತ್ತಾರೆ. ಎರಡನೇ ವರ್ಗಕ್ಕೆ ಸೇರುವವರು 377 ಪರಿಚ್ಛೇದವು ನಿರಂಕುಶತ್ವ ಮತ್ತು ಅತಾರ್ಕಿಕವಾದ ವರ್ಗೀಕರಣದ ಸಮಸ್ಯೆ ಹೊಂದಿದೆ ಎಂದು ಸಾಧಿಸಲು ಬರುವುದಿಲ್ಲ. 377ನೇ ಪರಿಚ್ಛೇದ ಒಂದು ಬಗೆಯ ಅಪರಾಧವನ್ನು ವ್ಯಾಖ್ಯಾನಿಸಿ ಅದಕ್ಕೆ ಸೂಚಿಸುತ್ತದೆಯಷ್ಟೇ.

ii. ಎಲ್.ಜಿ.ಬಿ.ಟಿ ವ್ಯಕ್ತಿಗಳು ಈ ದೇಶದ ಜನಸಂಖ್ಯೆಯ "ಅತಿಸಣ್ಣ ಭಾಗ"ವಾಗಿದ್ದಾರೆ ಅಲ್ಲದೇ, ಈ ಪರಿಚ್ಛೇದದ ಅಡಿಯಲ್ಲಿ ಶಿಕ್ಷೆಗಳನ್ನು ನೀಡಿರುವುದು ಕಡಿಮೆ. ಹಾಗಾಗಿ, ಅದರ ಆಧಾರದ 377ನೇ ಪರಿಚ್ಛೇದ 14, 15 ಮತ್ತು 21ನೇ ಕಲಮುಗಳಿಗೆ ವಿರುದ್ಧವಾಗಿದೆ ಎಂದು ಘೋಷಿಸಲು ಸಾಧ್ಯವಿಲ್ಲ.

iii. ಐ.ಪಿ.ಸಿ.ಯ 377ನೇ ಪರಿಚ್ಛೇದವನ್ನು ಎಲ್.ಜಿ.ಬಿ.ಟಿ ಸಮುದಾಯಕ್ಕೆ ಸೇರಿದ ವ್ಯಕ್ತಿಗಳನ್ನು ಕಿರುಕುಳ ಬೆದರಿಕೆ ಮತ್ತು ಹಿಂಸೆಗೆ ಒಳಪಡಿಸಲು ಬಳಸಲಾಗಿದೆ ಎಂಬುದು ಆ ಪರಿಚ್ಛೇದದ ಸತ್ವವನ್ನು ಪ್ರಶ್ನಿಸುವುದಕ್ಕೆ ಸರಿಯಾದ ಆಧಾರವಾಗಲಾರದು.

[321] (2009) 111 DRJ 1 (DB)

iv. 377ನೇ ಪರಿಚ್ಛೇದವು ಕಾನೂನಿನ ವ್ಯಾಪ್ತಿಯಲ್ಲಿ ಸಮಂಜಸವಾಗಿದೆ ಎಂಬುದನ್ನು ಗಮನಿಸಿದ ಈ ನ್ಯಾಯಾಲಯ, ಶಾಸಕಾಂಗವು 377ನೇ ಪರಿಚ್ಛೇದವನ್ನು ತೆಗೆದುಹಾಕಲು ಅಥವಾ ಅದಕ್ಕೆ ತಿದ್ದುಪಡಿ ಮಾಡಲು ಸ್ವತಂತ್ರವಾಗಿದೆ ಎಂದು ಅಭಿಪ್ರಾಯಪಟ್ಟಿತು.

19. ಸುರೇಶ್ ಕುಮಾರ್ ಕೌಶಲ್ ಮತ್ತೊಬ್ಬರು v. ನಾಜ್ ಪ್ರತಿಶ್ಠಾನ ಮತ್ತು ಇತರರು ಪ್ರಕರಣದ ತೀರ್ಪಿನಲ್ಲಿನ ತಪ್ಪುಗಳು ಇಂತಿವೆ:

i. 377ನೇ ಪರಿಚ್ಛೇದವು "ನಿಸರ್ಗದ ನಿಯಮಕ್ಕೆ ವಿರುದ್ಧವಾದ ಶಾರೀರಿಕ ಸಂಭೋಗ"ದ ಅಪರಾಧವನ್ನು ವ್ಯಾಖ್ಯಾನಿಸುವುದಿಲ್ಲ. ಈ ವಿಚಾರ ಬಹಳ ವಿಸ್ತಾರವೂ, ಅವರವರ ವ್ಯಾಖಾನಕ್ಕೆ ಬಿಟ್ಟಿರುವಂತಹುದೂ ಆಗಿದ್ದು, ಅದು ತನ್ನ ವ್ಯಾಪ್ತಿಯೊಳಗೆ ಒಪ್ಪಿಗೆಯಿರುವ ವಯಸ್ಕರು ಖಾಸಗೀಯಾಗಿ ನಡೆಸುವ ಲೈಂಗಿಕ ಕ್ರಿಯೆಗಳನ್ನೂ ತೆಗೆದುಗೊಂಡು ಅವುಗಳನ್ನು ಅಪರಾಧೀಕರಿಸುತ್ತದೆ.

ಈ ಸನ್ನಿವೇಶದಲ್ಲಿ, ಎ.ಕೆ. ರಾಯ್ v. ಭಾರತ ಸರ್ಕಾರ[322] ಪ್ರಕರಣದಲ್ಲಿ ಈ ನ್ಯಾಯಾಲಯದ ಸಾಂವಿಧಾನಿಕ ಪೀಠ ತೆಗೆದುಕೊಂಡ ನಿರ್ಧಾರದ ಕೆಳಕಂಡ ಭಾಗವನ್ನು ಉಲ್ಲೆಖಿಸುವುದು ಸೂಕ್ತ:

> 62. ಅಪರಾಧಗಳನ್ನು ಸಮಂಜಸವಾದ ಖಚಿತತೆಯೊಂದಿಗೆ ವ್ಯಾಖ್ಯಾನಿಸಬೇಕು ಎಂಬ ನಿಯಮವನ್ನು ಅಪರಾಧ ನ್ಯಾಯದ ಮೂಲಭೂತ ತತ್ವವೆಂದು ಪರಿಗಣಿಸಲಾಗುತ್ತಿದ್ದು, ಮನೇಕಾ ಗಾಂಧಿ ಪ್ರಕರಣದ ನಂತರ, ಅದನ್ನೀಗ ನಮ್ಮ ಸಂವಿಧಾನವನ್ನು ಆವರಿಸಿಕೊಂಡಿರುವ ವಿಷಯವಾಗಿ ನೋಡಬೇಕು. ಇದರ ಮೂಲ ಆದರ್ಶ, ಪ್ರತಿ ವ್ಯಕ್ತಿಯೂ, ಸರ್ಕಾರ ಯಾವುದನ್ನು ಒಪ್ಪುತ್ತದೆ ಮತ್ತು ಯಾವುದನ್ನು ನಿರ್ಬಂಧಿಸುತ್ತದೆ ಎಂಬುದನ್ನು ತಿಳಿದಿರಲು ಅರ್ಹರು, ಹಾಗೂ ಅಸ್ಪಷ್ಟತೆಯೊಂದರ ದೆಸೆಯಿಂದ ವ್ಯಕ್ತಿಯೊಬ್ಬರ ಬದುಕು ಮತ್ತು ಸ್ವಾತಂತ್ರ್ಯವನ್ನು ಅಪಾಯಕ್ಕೆ ಈಡುಮಾಡುವುದು ಸಾಧ್ಯವಿಲ್ಲ. ಆದರೆ, ಅಪರಾಧಕ್ಕೆ ಸಂಬಂಧಿಸಿದ ಕಾನುನಿನ ವ್ಯಾಪ್ತಿಯಲ್ಲಿನ ಕೆಲ ಕ್ರಮಗಳು ವ್ಯಕ್ತಿಗಳಿಂದ ಅವರ ಬದುಕನ್ನೇ ಕಸಿದುಕೊಳ್ಳುತ್ತವೆ ಎಂಬುದನ್ನು ಅನುಮಾನಕ್ಕೆ ಆಸ್ಪದವಿಲ್ಲದೆ ಒಪ್ಪಿಕೊಳ್ಳಬೇಕಾಗಿದೆ. ಕಾನೂನಿಗಾಗಲೀ, ಸಂವಿಧಾನಕ್ಕಾಗಲೀ ತೃಪ್ತಿಪಡಿಸಲಾಗದಂಥ ಮಾನದಂಡಗಳ

[322] (1982) 1 SCC 271

ಅಗತ್ಯವಿಲ್ಲ. ಕಾನೂನಿನ ಭಾಷೆಯಲ್ಲಿ ನಿಷೇಧಿಸಲ್ಪಟ್ಟಿರುವ ವಿಚಾರಗಳಲ್ಲಿ ತೊಡಗುವುದರ ಬಗೆಗೆ ಎಲ್ಲರಿಗೂ ಅರ್ಥವಾಗುವಂತಹ ಸೂಕ್ತವಾದ ಎಚ್ಚರಿಕೆಗಳನ್ನು ಸೇರಿಕೊಂಡಿರಬೇಕು ಎಂದು ಅಪೇಕ್ಷಿಸಲಾಗುತ್ತದೆ

(ಒತ್ತು ನೀಡಲಾಗಿದೆ)

ಸದರಿ ತೀರ್ಪು (ಸುರೇಶ್ ಕೌಶಲ್) ಒಪ್ಪಿಗೆಯಿರುವ ವಯಸ್ಕರು ನಡೆಸುವ ಲೈಂಗಿಕ ಕ್ರಿಯೆಗೂ, ಮತ್ತೊಬ್ಬ ವ್ಯಕ್ತಿಯ ಇಚ್ಛೆ ಮತ್ತು ಒಪ್ಪಿಗೆಯಿಲ್ಲದಿರುವ ಲೈಂಗಿಕ ಕ್ರಿಯೆಗೂ ನಡುವಿನ ವ್ಯತ್ಯಾಸವನ್ನು ಪ್ರಸ್ತಾಪಿಸುವುದೇ ಇಲ್ಲ. ಸಂಬಂಧಗಳು ಸಮಲೈಂಗಿಕವಾಗಿರಲಿ ಅಥವಾ ಭಿನ್ನಲೈಂಗಿಕವಾಗಿರಲಿ, ವಯಸ್ಕರ ಒಪ್ಪಿಗೆಯುರುವ ಖಾಸಗೀ ಸಂಬಂಧಗಳನ್ನು ವಿಶೇಷವಾಗಿ ಗಮನಿಸಬೇಕಾಗುತ್ತದೆ.

ಹಾಗೆಯೇ, ವಯಸ್ಕರ ನಡುವಿನ ಒಪ್ಪಿಗೆಯ ಸಂಬಂಧಗಳನ್ನು ಪ್ರಾಣಿಸಂಭೋಗ, ಗುದ-ಸಂಭೋಗ ಮತ್ತು ಬಲವಂತದ ಸಂಬಂಧಗಳ ಜೊತೆಯಲ್ಲಿ ವರ್ಗೀಕರಿಸಲು ಬರುವುದಿಲ್ಲ.

ಲೈಂಗಿಕ ನಿಲುವು ವ್ಯಕ್ತಿಯೊಬ್ಬರ ಅಸ್ಮಿತೆಯ ಅವಿಭಾಜ್ಯ ಅಂಗವಾಗಿರುವುದರಿಂದ ಅದು ಬದಲಾಯಿಸಲು ಸಾಧ್ಯವಿಲ್ಲದಿರುವಂಥದ್ದು ಮತ್ತು ಬೇಕಾದ ಹಾಗೆ ಬದಲಾಯಿಸಲು ಆಗುವುದಿಲ್ಲ. ಎಲ್.ಜಿಬಿ.ಟಿ ವ್ಯಕ್ತಿಗಳು ತಮ್ಮದೇ ಲಿಂಗದ ವ್ಯಕ್ತಿಗಳ ಜೊತೆಯಲ್ಲಿ ಅನ್ಯೋನ್ಯ ಲೈಂಗಿಕ ಸಂಬಂಧ ಬೆಳೆಸುವುದು, ಅವರ ಖಾಸಗೀ ಆಯ್ಕೆಯ ಚಲಾವಣೆ ಮತ್ತು ಅವರ ಸ್ವಾಯುತ್ತೆ ಮತ್ತು ಸ್ವಯಂನಿರ್ಧಾರಗಳ ಅಭಿವ್ಯಕ್ತಿಯಾಗಿದೆ.

ಒಂದೇ ಲಿಂಗದ ಎಲ್.ಜಿ.ಬಿ.ಟಿ ವ್ಯಕ್ತಿಗಳ ನಡುವಿನ ಖಾಸಗೀತನದ ಲೈಂಗಿಕ ಸಂಬಂಧಗಳನ್ನು ಅಪರಾಧೀಕರಿಸುವ 377ನೇ ಪರಿಚ್ಛೇದವು ಅವರ ವಿರುದ್ಧ ಅವರ ಲೈಂಗಿಕ ನಿಲುವಿನ ಆಧಾರದಲ್ಲಿ ತಾರತಮ್ಯ ಎಸಗುತ್ತದೆ, ಇದು ಸಂವಿಧಾನದ 14, 19, 21 ನೇ ಕಲಮುಗಳು ಖಾತ್ರಿಪಡಿಸುವ ಅವರ ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗಿದೆ.

ii. ಎಲ್.ಜಿ.ಬಿ.ಟಿ ವ್ಯಕ್ತಿಗಳು ಈ ದೇಶದ ಜನಸಂಖ್ಯೆಯ "ಅತಿಸಣ್ಣ ಭಾಗ" ಎಂಬ ಒಂದೇ ಸಂಗತಿಯ ಆಧಾರದ ಮೇಲೆ ಅವರುಗಳನ್ನು ಸಂವಿಧಾನದ 3ನೇ ಭಾಗ ಖಾತ್ರಿಪಡಿಸುವ ಅವರ ಮೂಲಭೂತ ಹಕ್ಕುಗಳಿಂದ ವಂಚಿತಗೊಳಿಸಲು ಸಾಧ್ಯವಿಲ್ಲ. ಎಲ್.ಜಿ.ಬಿ.ಟಿ ವ್ಯಕ್ತಿಗಳು ಲೈಂಗಿಕ ಅಲ್ಪಸಂಖ್ಯಾತರಾಗಿದ್ದರೂ, ಆ

ಸಮುದಾಯದ ಜನರು ಈ ದೇಶದ ನಾಗರೀಕರು ಮತ್ತು ಅವರಿಗೆ ಸಂವಿಧಾನದ 14, 15, 19 ಮತ್ತು 21ನೇ ಕಲಮುಗಳು ಕೊಡಮಾಡುವ ಮೂಲಭೂತ ಹಕ್ಕುಗಳ ಮೇಲೆ ಅಧಿಕಾರವಿದೆ.

ವ್ಯಕ್ತಿಗಳು ಅಲ್ಪಸಂಖ್ಯಾತರೋ ಅಲ್ಲವೋ ಎಂಬುದನ್ನು ಮೀರಿ, ಮೂಲಭೂತ ಹಕ್ಕುಗಳನ್ನು ಎಲ್ಲಾ ನಾಗರೀಕರಿಗೂ ಸಮನಾಗಿ ಖಾತ್ರಿಪಡಿಸಲಾಗಿದೆ. ಆಧುನಿಕ ಪ್ರಜಾತಂತ್ರಗಳೆಲ್ಲವೂ, ಬಹುಮತದ ಆಳ್ವಿಕೆ ಮತ್ತು ಸಂವಿಧಾನದ 3ನೇ ಬಾಗದಲ್ಲಿ ನಿಶ್ಚಿತಗೊಳಿಸಲಾದ ಮೂಲಭೂತ ಹಕ್ಕುಗಳ ರಕ್ಷಣೆ ಎಂಬ ಅವಳಿ ಸಿದ್ಧಾಂತಗಳ ಮೇಲೆ ಸ್ಥಾಪನೆಗೊಂಡಿವೆ. ಸಂವಿಧಾನದ ವಿನ್ಯಾಸದ ಪ್ರಕಾರ, ಒಂದೆಡೆ ಬಹುಮತವಿರುವವರಿಗೆ ಆಳುವ ಹಕ್ಕಿದ್ದರೆ, ಮತ್ತೊಂದೆಡೆ ಅಲ್ಪಸಂಖ್ಯಾತರಿಗೆ, ಇತರ ನಾಗರಿಕರಿಗಿರುವಂತೆ, ಸಂವಿಧಾನದ 3ನೇ ಭಾಗದಡಿಯಲ್ಲಿ ಖಂಡಿತವಾಗಿ ಸುನಿಶ್ಚಿತಗೊಳಿಸಲಾಗಿರುವ ಹಕ್ಕುಗಳು ಮತ್ತು ಸ್ವಾತಂತ್ರ್ಯಗಳ ಸಮಾನವಾದ ರಕ್ಷಣೆಯಿದೆ. ಈ ವಿಚಾರದಲ್ಲಿ ಜೆ.ಎಸ್ ವರ್ಮಾ ಆಯೋಗವು ತನ್ನ ವರದಿಯ 77ನೇ ವಾಕ್ಯದಲ್ಲಿ ಹೀಗೆ ಹೇಳಿದೆ.

> 77. ನಮ್ಮ ಸಂವಿಧಾನದ ನಿರ್ಮಾತೃಗಳು ಸಂವಿಧಾನವು "ಅಸಭ್ಯವಾದ ಸಾಮಾಜಿಕ ತಾರತಮ್ಯದ" ಕೈಗನ್ನಡಿಯಾಗಬೇಕೆಂದು ಬಯಸಿರಲಿಲ್ಲ ಎಂಬುದನ್ನು ನಾವುಗಳು ನೆನಪಿನಲ್ಲಿಡಬೇಕು. ಅಲ್ಲದೇ ಸಂವಿಧಾನವು ಸಮಾನತೆಯನ್ನು ಉಜ್ವಲವಾಗಿ ಪ್ರತಿಬಿಂಬಿಸುವ ಕನ್ನಡಿಯಾಗಿರುವ ವಚನವನ್ನಿತ್ತಿದೆ. ಹಾಗಾಗಿ, ಲೈಂಗಿಕ ಅಲ್ಪಸಂಖ್ಯಾತರು ಮತ್ತು ಲಿಂಗ ಪರಿವರ್ತಿತರನ್ನು ಒಳಗೊಂಡು ಎಲ್ಲಾ ಲೈಂಗಿಕ ಅಸ್ಮಿತೆಗಳು ಸಂವಿಧಾನದ ಸಂಪೂರ್ಣ ರಕ್ಷಣೆ ಪಡೆಯಲು ಅರ್ಹವಾಗಿವೆ. ಸಂವಿಧಾನವು ನಂಬುಗೆಗಳಲ್ಲಿನ ಬದಲಾವಣೆಗೆ ಮತ್ತು ಹೆಚ್ಚಿನ ತಿಳುವಳಿಕೆಗೆ ಅವಕಾಶ ನೀಡುವುದರ ಜೊತೆಗೆ, ಲೈಂಗಿಕವಾಗಿ ತಿರಸ್ಕರಿಸಲ್ಪಟ್ಟ ಅಲ್ಪಸಂಖ್ಯಾತರ ಹಕ್ಕುಗಳನ್ನು ಭದ್ರಪಡಿಸಿವ ಸಾಧನವಾಗಿಯೂ ಕಾರ್ಯನಿರ್ವಹಿಸುತ್ತದೆ.

(ಒತ್ತು ನೀಡಲಾಗಿದೆ)

iii. 377ನೇ ಪರಿಚ್ಛೇದವು ಮೇಲ್ನೋಟಕ್ಕೆ ತಟಸ್ಥವಾಗಿ ಕಂಡರೂ, ಅದರ ದುರ್ಬಳಕೆ ಮಾಡಿ ಎಲ್.ಜಿ.ಬಿಟಿ. ವ್ಯಕ್ತಿಗಳ ಮೇಲೆ ಪ್ರತಿಕೂಲವಾದ ತಾರತಮ್ಯ ಎಸಗಲಾಗಿದ್ದು, ಆ ಮೂಲಕ ಅವರನ್ನು ದುರ್ಬಲಗೊಳಿಸಿ

ಅವರು ಸದಾಕಾಲ ತಮ್ಮ ಲೈಂಗಿಕ ನಿಲುವಿನ ಕಾರಣಕ್ಕೆ ಶಿಕ್ಷೆಗೊಳಗಾಗುವ ಅಪಾಯದ ಭಯದಲ್ಲಿ ಬದುಕುವಂತೆ ಮಾಡಲಾಗಿದೆ.

ಸಧ್ಯದ ವ್ಯಾಖ್ಯಾನದ ಪ್ರಕಾರ, ಎಲ್.ಜಿ.ಬಿ.ಟಿ. ವ್ಯಕ್ತಿಗಳ ನಡುವೆ ನಡೆಯುವ ಯಾವುದೇ ರೀತಿಯ ಲೈಂಗಿಕ ಸಂಭೊಗ "ನಿಸರ್ಗದ ನಿಯಮ"ಕ್ಕೆ ವಿರುದ್ಧವೆಂದು ಪರಿಗಣಿಸಲ್ಪಡುತ್ತದೆ. ಆದುದರಿಂದ, "ನಿಸರ್ಗದ ನಿಯಮಕ್ಕೆ ವಿರುದ್ದವಾದ ಶಾರೀರಿಕ ಸಂಭೋಗ"ದ ಅಪರಾಧೀಕರಣದಿಂದಾಗಿ, ಎಲ್.ಜಿ.ಬಿ.ಟ್ ವ್ಯಕ್ತಿಗಳ ಒಂದಿಡೀ ವರ್ಗವನ್ನೇ ಅಪರಾಧಿಗಳೆಂದು ನೋಡಬೇಕಾಗಿ ಬಂದಿದೆ.

iv. ಸುರೇಶ್ ಕುಮಾರ್ ಕೌಶಲ್ ಮತ್ತೊಬ್ಬರು v. ನಾಜ್ ಪ್ರತಿಷ್ಠಾನ ಮತ್ತು ಇತರರು (ಮೇಲ್ಕಂಡ) ಪ್ರಕರಣದ ತೀರ್ಪಿನಲ್ಲಿ ಸೂಚಿಸಿರುವಂತೆ ಈ ಕಾಯ್ದೆಗೆ ಶಾಸಕಾಂಗದ ಮೂಲಕ ತಿದ್ದುಪಡಿಯಾಗುವುದನ್ನು ಕಾಯುತ್ತ ಕೂರುವ ಅಗತ್ಯ ಕಂಡುಬರುತ್ತಿಲ್ಲ. ಒಬ್ಬ ಪ್ರಜೆಯ ಅಥವಾ ಪ್ರಜೆಗಳ ಗುಂಪಿನ ಮೂಲಭೂತ ಹಕ್ಕುಗಳು ಯಾವುದೇ ರೀತಿಯಲ್ಲಿ ಉಲ್ಲಂಘನೆಯಾಗಿರುವುದು ಒಂದೊಮ್ಮೆ ಈ ನ್ಯಾಯಾಲಯದ ಗಮನಕ್ಕೆ ಬಂದಲ್ಲಿ, ನ್ಯಾಯಲಯವು ಮೂಕಪ್ರೇಕ್ಷಕನಂತೆ ಬಹುಸಂಖ್ಯಾತ ಸರ್ಕಾರ ಅಂತಹ ಪರಿಸ್ಥಿತಿಯನ್ನು ಬದಲಾಯಿಸಲಿ ಎಂದು ಕಾಯುವುದಿಲ್ಲ.

ಈ ನ್ಯಾಯಾಲಯವು ಒಬ್ಬ ಜಾಗರೂಕ ಕಾವಲುದಾರನ ಪಾತ್ರವನ್ನು ನಿರ್ವಹಿಸಬೇಕಿರುವ ಹಿನ್ನೆಲೆಯಲ್ಲಿ, ವಿವಾದಾತ್ಮಕ ಪರಿಚ್ಛೇದವನ್ನು ಮರುಪರಿಶೀಲಿಸಿ, ಅದರಲ್ಲಿನ ಸಂವಿಧಾನದೊಂದಿಗೆ ಹೊಂದಾಣಿಕೆಯಾಗದ ಭಾಗವನ್ನು ತೆಗೆದುಹಾಕಿ ಅದರ ವ್ಯಾಪ್ತಿಯನ್ನು ಕುಗ್ಗಿಸುವುದು ಈ ನ್ಯಾಯಾಲಯದ ಸಾಂವಿಧಾನಿಕ ಕರ್ತವ್ಯ
ಈ ಪ್ರಕರಣದಲ್ಲಿ, 377ನೇ ಪರಿಚ್ಛೇದದ ಅಸ್ಪಷ್ಟತೆಯನ್ನು ಹೋಗಲಾಡಿಸಿ ಅದು ಸಂವಿಧಾನದ 3ನೇ ಭಾಗದೊಂದಿಗೆ ಹೊಂದಾಣಿಕೆಯಾಗುವಂತೆ ಮಾಡಲು, ಅದರ ವಿಸ್ತಾರವನ್ನು ಕುಗ್ಗಿಸಿ ಅದರ ವ್ಯಾಪ್ತಿಯಿಂದ ಒಂದೇ ಲಿಂಗದ ಅಥವಾ ಇತರ ವಯಸ್ಕರ ನಡುವೆ ಖಾಸಗೀಯಾಗಿ ನಡೆಯುವ ಒಪ್ಪಿಗೆಯ ಲೈಂಗಿಕ ಸಂಬಂಧಗಳನ್ನು ಹೊರಗಿಡುವುದು ಅಗತ್ಯವಾಗಿದೆ.

20. ಈ ಸಮುದಾಯದ ವ್ಯಕ್ತಿಗಳು ಮತ್ತು ಅವರ ಕುಟುಂಬದವರು ಶತಮಾನಗಳಿಂದ ಅನುಭವಿಸಿದ ಸಾಮಾಜಿಕ ಬಹಿಷ್ಕಾರ ಮತ್ತು ಅವಮಾನಗಳಿಗೆ ಪರಿಹಾರ ಒದಗಿಸುವಲ್ಲಿ ಆದ ವಿಳಂಬಕ್ಕಾಗಿ, ಚರಿತ್ರೆಯು ಅವರ ಕ್ಷಮೆಯಾಚಿಸಬೇಕು. ಸಮಲೈಂಗಿಕತೆಯು ವಿಸ್ತಾರವಾದ ಮಾನವ ಲೈಂಗಿಕತೆಯ ಒಂದು ಭಾಗ ಮತ್ತು

ಸಂಪೂರ್ಣ ನೈಸರ್ಗಿಕ ಸ್ಥಿತಿ ಎಂಬುದನ್ನು ಗುರುತಿಸುವಲ್ಲಿ ಎಡವಿದ ಬಹುಸಂಖ್ಯಾತರ ಅಜ್ಞಾನದಿಂದಾಗಿ, ಈ ಸಮುದಾಯದ ಸದಸ್ಯರು ಸದಾಕಾಲ ಹಿಂಸೆ ಮತ್ತು ಕಿರುಕುಳಗಳ ಭಯದಲ್ಲಿ ಬದುಕಬೇಕಾಯಿತು. ಈ ಕಾನೂನಿನ ತಪ್ಪು ಬಳಕೆಯಿಂದಾಗಿ, ಸಂವಿಧಾನದ 14ನೇ ಕಲಮು ಖಾತ್ರಿಪಡಿಸುವ ಸಮಾನತೆಯ ಮೂಲಭೂತ ಹಕ್ಕಿನಿಂದ ಅವರು ವಂಚಿತರಾಗುವಂತಾಯಿತು. ಅಲ್ಲದೆ ಈ ಪರಿಚ್ಛೇದವು, 15ನೇ ಕಲಮಿನಡಿಯಲ್ಲಿ ನೀಡಿರುವ ಮೇಲುಕೀಳಿನ ವಿರುದ್ಧದ ಮೂಲಭೂತ ಹಕ್ಕು ಮತ್ತು 21ನೇ ಕಲಮಿನಡಿಯಲ್ಲಿ ಖಾತ್ರಿಪಡಿಸಲಾಗಿರುವ ಘನತೆ ಮತ್ತು ಖಾಸಗೀತನದೊಂದಿಗೆ ಬದುಕುವ ಮೂಲಭೂತ ಹಕ್ಕನ್ನು ಕೂಡ ಅತಿಕ್ರಮಿಸುತ್ತಿತ್ತು. ಎಲ್.ಜಿ.ಬಿ.ಟಿ ವ್ಯಕ್ತಿಗಳು "ಸೆರೆಹಿಡಿಯದೇ ಬಿಟ್ಟ ಪಾತಕಿಗಳು" ಎಂಬ ಕರಿನೆರಳಿನಿಂದ ಮುಕ್ತವಾದ ಬದುಕನ್ನು ನಡೆಸಲು ಅರ್ಹರು.

21. ಸಾರಾಂಶ

i. ಮೇಲ್ಕಂಡ ವಿಚಾರಣೆಗಳನ್ನು ಗಮನದಲ್ಲಿರಿಸಿಕೊಂಡು, ವಯಸ್ಕರ (ಎಂದರೆ 18 ವರ್ಷ ಮೇಲ್ಪಟ್ಟ, ಒಪ್ಪಿಗೆ ಸೂಚಿಸಲು ಅರ್ಹತೆಯಿರುವ ವ್ಯಕ್ತಿಗಳು) ನಡುವೆ ಖಾಸಗೀಯಾಗಿ ನಡೆಯುವ ಒಪ್ಪಿಗೆಯ ಲೈಂಗಿಕ ಕ್ರಿಯೆಗಳನ್ನು ಅಪರಾಧೀಕರಿಸುವ 377ನೇ ಪರಿಚ್ಛೇದವು ಸಂವಿಧಾನದ 14, 15, 19 ಮತ್ತು 21ನೇ ಕಲಮುಗಳನ್ನು ಉಲ್ಲಂಘಿಸುತ್ತದೆ ಎಂದು ಘೋಷಿಸಲಾಗುತ್ತಿದೆ

ಆದರೆ, ಅಂತಹ ಒಪ್ಪಿಗೆಯು ಸಂಪೂರ್ಣವಾಗಿ ಸ್ವಇಚ್ಛೆಯ, ಯಾವುದೇ ಆಮಿಷ, ಬಲವಂತಗಳಿಲ್ಲದ, ಮುಕ್ತವಾದ ಒಪ್ಪಿಗೆಯಾಗಿರಬೇಕು ಎಂಬುದನ್ನು ಸ್ಪಷ್ಟ ಪಡಿಸಲಾಗಿದೆ.

ii. ಆದಾಗ್ಯೂ, 377 ನೇ ಪರಿಚ್ಛೇದದ ವ್ಯಾಪ್ತಿಯನ್ನು ಕುಗ್ಗಿಸುವ ಈ ಘೋಷಣೆಯಿಂದಾಗಿ, ಮುಗಿದಿರುವ ಪ್ರಕರಣಗಳನ್ನು ಮತ್ತೆ ಆರಂಭಿಸಲು ಅವಕಾಶವಿರುವುದಿಲ್ಲ. ಆದರೆ, ವಿಚಾರಣೆ, ಮೇಲ್ಮನವಿ ಮತ್ತು ಪುನರ್ಪರಿಶೀಲನೆಯ ಹಂತದಲ್ಲಿರುವ ಎಲ್ಲ ಬಾಕೀ ಮೊಕದ್ದಮೆಗಳಿಗೆ ಈ ಘೋಷಣೆ ಅನ್ವಯಿಸುತ್ತದೆ.

iii. 377ನೇ ಪರಿಚ್ಛೇದದ ನಿಯಮಗಳು ಇನ್ನು ಮುಂದೆ ವಯಸ್ಕರ ನಡುವಿನ ಒಪ್ಪಿಗೆಯಿರದ ಕೃತ್ಯಗಳು, ಅಪ್ರಾಪ್ತರೊಂದಿಗಿನ ಶಾರೀರಿಕ ಸಂಭೋಗ ಮತ್ತು ಪ್ರಾಣಿಸಂಭೋಗದ ಕೃತ್ಯಗಳಿಗೆ ಅನ್ವಯವಾಗುತ್ತವೆ.

iv. 19 ನೇ ವಾಕ್ಯದಲ್ಲಿ ನೀಡಿರುವ ಕಾರಣಗಳ ಹಿನ್ನೆಲೆಯಲ್ಲಿ, ಸುರೇಶ್ ಕುಮಾರ್ ಕೌಶಲ್ ಮತ್ತೊಬ್ಬರು v. ನಾಜ್ ಪರಿಷ್ಠಾನ ಮತ್ತು ಇತರರು ಪ್ರಕರಣದ ತೀರ್ಪನ್ನು, ಈ ಮೂಲಕ ರದ್ದುಗೊಳಿಸಲಾಗುತ್ತಿದೆ.

ಸದರಿ ಉಲ್ಲೇಖವನ್ನು ಈ ಪ್ರಕಾರವಾಗಿ ಬಗೆಹರಿಸಲಾಗಿದೆ.

ಈ ಮೇಲಿನ ವಿಚಾರಣೆಯ ಫಲಿತಾಂಶಗಳ ಹಿನ್ನೆಲೆಯಲ್ಲಿ, ಸದರಿ ರಿಟ್ ಅರ್ಜಿಗಳನ್ನು ಅನುಮೋದಿಸಲಾಗುತ್ತಿದೆ.

**........................ ನ್ಯಾ.(ಇಂದೂ ಮಲ್ಹೋತ್ರಾ)**

**ಹೊಸದೆಹಲಿ**

**ಸೆಪ್ಟೆಂಬರ್ 6, 2018**

**ಒಂದೆಡೆ,**

ಕೇ/ಆ ಮಹಾಬೋಧಿ ಆರೋಗ್ಯ ಸೇವಾ ಕೇಂದ್ರ,
ಸಿದ್ದಾಪುರ ಮುಖ್ಯ ರಸ್ತೆ, ಜಯನಗರ 1ನೇ ಬ್ಲಾಕ್,
ಲಾಲ್ ಬಾಗ್ ಎದುರು, ಬೆಂಗಳೂರು 560 011
ಇಮೇಲ್: ondededvs@gmail.com
ಫೇಸ್ ಬುಕ್ : https://www.facebook.com/pages/Ondede-Dignity-Voice-Sexuality
ವೆಬ್ ಬ್ಲಾಗ್ : https://ondede.wordpress.com/